

ಮಭಾವಿ

ಶ್ರೀಮನ್ನಿರಂಜನ ಪ್ರಣವ ಸ್ವರೂಪ

ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು

ಸಂಸ್ಥಾನಮಠ, ಮುಂಡರಗಿ

ಶ್ರೀ. [illegible]

ಆ: ಪಿ.ಎ. ನಾರಾಯಣ ಶೆಟ್ಟಿ

[illegible] ದಿನಾಂಕ: ೨೭-೧-೬೬

ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆ-೯

ಅನುಭಾವಿ

ಪರಮ ಪೂಜ್ಯ ಮೃಡಗಿರಿಯ ಚಿಜ್ಜ್ಯೋತಿ
ಶ್ರೀಮನ್ನಿರಂಜನ ಪ್ರಣವ ಸ್ವರೂಪ ಜಗದ್ಗುರು
ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳವರು, ಸಂಸ್ಥಾನಮಠ
ಅವರ ಶೂನ್ಯ ಸಿಂಹಾಸನಾರೋಹಣ ರಜತೋತ್ಸವದ
ಶುಭ ಸಂದರ್ಭದಲ್ಲಿ ಭಕ್ತಿಯಿಂದ ಸಮರ್ಪಿಸಿದ

ಅಭಿನಂದನ ಗ್ರಂಥ

ಸಂಪಾದಕರು
ಶ್ರೀ ಆರ್. ಎಲ್. ಪೋಲಿಸಪಾಟೀಲ
ಶ್ರೀ ಬಿ. ಎಸ್. ಪಾಟೀಲ

೧೯೯೫

ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ
ಮುಂಡರಗಿ-೫೮೨ ೧೧೮ ಜಿ. ಧಾರವಾಡ

"ANUBHAVI"
A felicitation volume presented to His Holiness Sri Man Niranjan jagadguru Annadaneshwar swamiji samsthan math mundargi on the occasion of his 25 years of the "peetharohan"

First edition: 1995

Copies: 650

Edited by: Sri R. L. Policepatil and B. S. Patil

Published by: Peetharohan Rajatostava Committee, Mundargi

ಮೊದಲ ಮುದ್ರಣ ೧೯೯೫

ಬೆಲೆ: ೨೦೦-೦೦

ಮುಖಪುಟ ವಿನ್ಯಾಸ: ವಿಕ್ರಮ

ಮುದ್ರಣ:
ಫ. ಶಿ. ಭಾಂಡಗೆ, ತ್ವರಿತ ಮುದ್ರಣಾಲಯ
ಕುಂಬಾರಗರಡಿ ಹತ್ತಿರ, ಗಂಗಾಪೂರ ಓಣಿ,
ಗದಗ-೫೮೨ ೧೦೧ ದೂರವಾಣಿ-೮೬೧೭

ಮುದ್ರಣದ ಅವ
ನಲವತ್ತೈದು ದಿ

"ಅನುಭಾವಿ"ಗೆ ಶರಣಾರ್ಥಿ

ಭವ್ಯ ಭಾರತದ ದಿವ್ಯ ಸಂಸ್ಕೃತಿ–ಸಾಹಿತ್ಯ–ಕಲೆಗಳಿಗೆ, ಸುದೀರ್ಘ ಇತಿಹಾಸವಿದೆ. ಇತಿಹಾಸ ಪೂರ್ವದಲ್ಲಿ ಉಚ್ಛ್ರಾಯ ಸ್ಥಿತಿಗೇರಿ, ಮಾನವತ್ವದ ಘನತೆಯನ್ನು ಮೆರೆದ, ಗ್ರೀಸ್, ರೋಮ, ಮೆಸಪಟೋಮಿಯಾ ಮುಂತಾದ ಸಂಸ್ಕೃತಿಗಳು ಇಂದು ಇತಿಹಾಸವಾಗಿ ಮಾತ್ರ ಉಳಿದಿರುವಾಗ, ಭಾರತೀಯ ಸಂಸ್ಕೃತಿ ನಿತ್ಯ ಜೀವಂತಿಕೆಯ ಸ್ಪಂದನದಿಂದ, ಸಜೀವ ಸಂಸ್ಕೃತಿಯಾಗಿ ಇಂದಿಗೂ ಪ್ರಭಾವಶಾಲಿಯಾಗಿ ಬಾಳುತ್ತಿರುವುದು ಐತಿಹಾಸಿಕ ಸತ್ಯ! ಶತಮಾನಗಳಲ್ಲಿ ನಿತ್ಯ ವಿಕಾಸಶೀಲತೆ, ವೈವಿಧ್ಯತೆ, ಬೆಳವಣಿಗೆಯನ್ನು ಮೆರೆದ ಭಾರತೀಯ ಸಂಸ್ಕೃತಿ–ಸಾಹಿತ್ಯಕ್ಕೆ ಕನ್ನಡ ನಾಡಿನ ಶಿವಶರಣ ಪರಂಪರೆ ನೀಡಿದ ಕೊಡುಗೆ ಅಪಾರ. ಅವರ ವಚನ ವಾಙ್ಮಯ ವೇದ–ಉಪನಿಷತ್–ಆಗಮಗಳ ವೈಚಾರಿಕತೆ, ತಾತ್ವಿಕ ಚಿಂತನೆ, ಉಪಾಸನಾ ವಿಧಾನಗಳನ್ನು, ಅರಗಿಸಿಕೊಂಡು, ಅಳವಡಿಸಿಕೊಂಡು ಮುಂದೆ ನಡೆದು, ತಮ್ಮದೇ ಆದ ಕಾಣಿಕೆಗಳನ್ನು ನೀಡಿರುವುದು ಅವಿಚಾರಿತ ಸತ್ಯ. ಅಲ್ಲಿದೆ, ಭಾರತೀಯತೆಯ ಜೀವಂತಿಕೆಯ ರಹಸ್ಯ! ಶಿವಶರಣರ ವಚನಗಳು, ತತ್ವಕ್ಕೆ ತತ್ತ್ವ, ಶಾಸ್ತ್ರಕ್ಕೆ ಶಾಸ್ತ್ರ, ಸಾಹಿತ್ಯಕ್ಕೆ ಸಾಹಿತ್ಯ, ಇದು ಭಾರತೀಯ ತತ್ವಸಾಹಿತ್ಯದ 'ಅನೇಕತೆಯಲ್ಲಿ ಏಕತೆ'ಯ ಸಂಕೇತ.

'ವಚನ ಸಾಹಿತ್ಯ ಅಚ್ಚಕನ್ನಡ ಸಂಸ್ಕೃತಿ ಹೊಮ್ಮಿಸಿದ ವಟವೃಕ್ಷ. ಕನ್ನಡ ಜನತೆಯ ತತ್ವ–ದರ್ಶನ, ಪ್ರತಿಭೆ–ಪಾಂಡಿತ್ಯ, ಚಿಂತನ–ಮಂಥನ, ಸಾಧನೆ–ಸಿದ್ಧಿ ಈ ವಚನ ವಾಙ್ಮಯಕ್ಕೆ ವಿಶಿಷ್ಟತೆಯನ್ನು ತಂದುಕೊಟ್ಟಿದೆ. ವೀರಶೈವ ಧರ್ಮ–ತತ್ವ, ಜೀವನ ವಿವೇಕ, ಇಲ್ಲಿನ ನುಡಿಗಳಲ್ಲಿ ಮೂಡಿನಿಂತಿದೆ. (ಪು. ೩೩)....ಆಧ್ಯಾತ್ಮಿಕ ಹಂಬಲ, ವ್ಯಕ್ತಿತ್ವದ ಹುಡುಕಾಟ, ತತ್ವದ ಅಭಿವ್ಯಕ್ತಿ, ಸಮಕಾಲೀನ ಬದುಕಿಗೆ ತೋರಿದ ಪ್ರತಿಕ್ರಿಯೆ, ಖಂಡನೆ–ಮಂಡನೆ, ಬದುಕಿನ ಸಮಗ್ರ, ದೃಷ್ಟಿ, ಜೀವನದ ಪರಮಗಂತವ್ಯ ದರ್ಶನಾಕಾಂಕ್ಷಿ ಚೇತನದ ಆತ್ಮಾನುಭವದ ಅಭಿವ್ಯಕ್ತಿ....ಒಟ್ಟಿನಲ್ಲಿ 'ಆತ್ಮತತ್ವಾನುಭವ ಈ ವಚನಗಳ ಜೀವಾತ್ಮ.'[೧] ಶಿವಶರಣ ವಾಙ್ಮಯ–ವಿಶಾಲಾರ್ಥದಲ್ಲಿ ಅನುಭಾವ ಸಾಹಿತ್ಯ, ಶಿವಶರಣರೆಲ್ಲ ಸ್ವಾನುಭವ ದರ್ಶನ ಪಡೆದ ಅನುಭಾವಿಗಳು. ಅಲ್ಲಮಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ ಮುಂತಾದವರ ಪರಂಪರೆ ನಿರಂತರವಾಗಿ ಸಾಗಿಬಂದಿದೆ. ನಿರಂಜನ ತತ್ವದ ಮೂಲ ಪುರುಷನಾದ ಅಲ್ಲಮನ 'ನಿರಂಜನ'ತ್ವ ಹಾಗೂ ಚೆನ್ನಬಸವಣ್ಣ ನವರ 'ಜಂಗಮ' ತತ್ವದ ಅಭಿವ್ಯಕ್ತಿಯಾದ, ಕನ್ನಡ ನಾಡಿನ ಜಂಗಮ ಪುಂಗವ ಪರಂಪರೆ

---

೧ ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ–ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ ಪು. ೩೦೩

ಯಲ್ಲಿ ಶ್ರೀ ಮೃಡಗಿರಿಯ ಜಗದ್ಗುರು ಅನ್ನದಾನೀಶ್ವರ ಪರಂಪರೆಯ ಹತ್ತನೆಯ ಜಗದ್ಗುರುಗಳಾದ ಶ್ರೀ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, 'ದರ್ಶನ ಸಾಹಿತಿ', 'ಜಂಗಮ ಜ್ಯೋತಿ', 'ವೀರಶೈವ ತತ್ವಪುರುಷ (=ಪರುಷ!)', 'ಆಧ್ಯಾತ್ಮ ಕೃಷಿಯ ಒಕ್ಕಲಿಗ', 'ಸಮಾಜ ಸೇವಾಸಕ್ತ ಶ್ರೀ', 'ದಿವ್ಯ ಚೈತನ್ಯ ಮೂರುತಿ' ಮುಂತಾದ ಅನ್ವರ್ಥಕ ಅಭಿಧಾನಕ್ಕೆ ಪಾತ್ರರಾದವರು. ಅಷ್ಟೇ ಅಲ್ಲದೆ–ನಮ್ಮ ಕಾಲದ ಇತರ **ಕೆಲವೇ ಮಹಾಸ್ವಾಮಿಗಳಂತೆ,** 'ತತ್ವಾನುಷ್ಠಾನ'–'ಶಿವಶರಣರ ಅನುಭಾವ ಸಾಹಿತ್ಯ ವ್ಯಾಖ್ಯಾನ', 'ಸ್ವಯಂ ಅನುಭಾವ ವಚನ ಸೃಷ್ಟಿ'ಯಂಥ ಅನುಭಾವ ಕಾರ್ಯಗಳ ಜೊತೆ ಜೊತೆಯಲ್ಲಿ, ಅದ್ಭುತವಾದ ಶೈಕ್ಷಣಿಕ ಪ್ರಸಾರ, ಪ್ರಸಾದ ನಿಲಯಗಳ ಸ್ಥಾಪನೆ, ಕಲ್ಯಾಣ ಮಂಟಪಗಳ ರಚನೆ, ಜಾತ್ರೆಗಳ ವ್ಯವಸ್ಥೆ, ವೈದ್ಯಕೀಯ ಶಿಬಿರಗಳ ಏರ್ಪಾಟು, ರೈತೋಪಯೋಗಿ ಕಾರ್ಯಗಳ ಪುರಾತನ ಮಠ-ದೇವಾಲಯಗಳ ಜೀರ್ಣೋದ್ಧಾರ, ಸಾಹಿತ್ಯಕಮ್ಮಟ, ವಿಚಾರ ಸಂಕಿರಣಗಳ ಸಂಯೋಜನೆ ಮತ್ತು ಅನುಭಾವ ಸಾಹಿತ್ಯ ಪ್ರಕಟನೆ ಹಾಗೂ ಪ್ರಸಾರ ಮುಂತಾದ ಹಲವು ಹನ್ನೊಂದು ಕಾರ್ಯಗಳಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡು, **ನಿರಂಜನ ಪಟ್ಟಾಧಿಕಾರದ ಈ ಇಪ್ಪತ್ತೈದು ವರ್ಷಗಳ ಸಾಧನೆ, ಇನ್ನೂರೈವತ್ತು ವರ್ಷಗಳವರೆಗೆ ಬದುಕಬಲ್ಲಂಥ "ಜನಸೇವೆ"ಯ ಜೀವಂತ ಸಾಕ್ಷಿ. ಶ್ರೀಶ್ರೀಗಳು ನಿರ್ಮಿಸಿದ ಅನುಭಾವ ಸಾಹಿತ್ಯ ಶತಮಾನಗಳವರೆಗೆ ಬಾಳಿ–ಬದುಕುವ ಸಾಹಿತ್ಯ.** ಡಾ|| ಎಚ್. ತಿಪ್ಪೇರುದ್ರಸ್ವಾಮಿಗಳಂಥ ಅನುಭಾವ ಸಾಹಿತಿಗಳೆನ್ನುವಂತೆ 'ಶ್ರೀ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ ವ್ಯಕ್ತಿತ್ವವು ಬಹುಮುಖವಾದದ್ದು. ಧರ್ಮ, ಸಮಾಜ, ಸಂಸ್ಕೃತಿ, ಸಾಹಿತ್ಯಾದಿಗಳೇ ಆ ಮುಖಗಳು. ಯಾವ ಮುಖದ ದರ್ಶನ ಪಡೆದರೂ ಅಲ್ಲಿ ಶಿವದರ್ಶನ ಪಡೆದ ಶಿವಾನಂದವೇ ಆಗುತ್ತದೆ.' ಇಂಥ 'ಶಿವಾನಂದ'ವಾದ ಬದುಕು, ಶಿವಾನಂದವಾದ ಸಾಹಿತ್ಯ, ಶಿವಾನಂದಕರವಾದ ಸಮಾಜ-ಸಾಹಿತ್ಯ ಸೇವೆಯನ್ನು ಅತ್ಯಂತ ಕೃತಜ್ಞತಾಭಾವದಿಂದ ಸ್ಮರಿಸುವ, ಅಷ್ಟೇ ಅಲ್ಲ ಅದನ್ನು ಶಾಸನಸ್ಥಾಯಿಯಾಗಿಸುವ ಪ್ರಯತ್ನ, ಶ್ರೀಗಳ ಇಪ್ಪತ್ತೈದು ವರ್ಷಗಳ "ಸಾಧನೆ–ಸಿದ್ಧಿ" ಹಾಗೂ ಮಾರ್ಗದರ್ಶನಗಳ **'ಕನ್ನಡಿ ಕೈಪಿಡಿ'** ಈ "ಅನುಭಾವಿ" ಸ್ಮರಣ ಗ್ರಂಥ. **ಬದುಕೆಲ್ಲ ಅನುಭಾವವೇ ಆದ, ರಚನೆಯೆಲ್ಲ ಶಿವಾನುಭವವೇ ಆದ, ಚಿಂತನೆಯೆಲ್ಲ ಶಿವಾನುಭವವೇ ಆದ ಶ್ರೀಶ್ರೀಗಳ ಸಾಧನೆಗಳನ್ನು ದಾಖಲಿಸುವ ಪ್ರಮಾಣ ಸಂಪುಟಕ್ಕೆ "ಅನುಭಾವಿ" ಎಂಬ ಹೆಸರು, ಸಾರ್ಥಕ, ಅನ್ವರ್ಥಕ ಹಾಗೂ ತತ್ವಾರ್ಥಕ!** ಕನ್ನಡದ ಅನುಭಾವ ಸಾಹಿತ್ಯವೆಲ್ಲದರ ಸಮೀಕ್ಷೆ, ಶ್ರೀಶ್ರೀಗಳ 'ಅನುಭಾವ ಸಾಹಿತ್ಯ'ದ ಪರಿಚಯ, ಪರೀಕ್ಷೆ, ಪೂಜ್ಯ ಜಗದ್ಗುರುಗಳ ಜೀವಜಂಗಮ ಪ್ರೇಮ–ಸೇವೆಗಳ ದಾಖಲೆ, ಸರ್ವಧರ್ಮ ಸಮನ್ವಯ ಭಾವದ ಬಹುಜನ ಸಮಾಜ ಕ್ಷೇಮ ಕಾರ್ಯಗಳ ವಿವರಗಳು ಮುಂತಾದ ಶ್ರೀಗಳ ಸಮಗ್ರ ಬದುಕಿನ

'ಚಿದಾಕಾಶ'ವನ್ನೂ, ಚಿಂತಕರ **'ಭಾವ ಕನ್ನಡಿ'**ಯಲ್ಲಿ ಪ್ರತಿಬಿಂಬಿಸುವ ಸಾಹಸ–ಪ್ರಯತ್ನ ಇಲ್ಲಿನ ಲೇಖನಗಳಲ್ಲಿದೆ, ಪ್ರಾಮಾಣಿಕತೆ ಇವುಗಳ ಜೀವಾಳ. ಬಹುಜನ ಸಮಾಜ ಕ್ಷೇಮ ಕಾರ್ಯಗಳೇ 'ಕಾಯಕ'ವಾಗಿ ಬೆಳೆದು ಬಂದ, ಅನೇಕ ವೀರಶೈವ ಮಠಗಳ ಇತಿಹಾಸ.. (ಕೆಲವು ಪುರಾಣ ರೂಪದಲ್ಲಿ ಮಾತ್ರ ಕಾಣಿಸಿವೆ, ಅಷ್ಟೆ.) ನಮ್ಮ ಕೈಗೆ ದೊರೆಯದಾಗಿರುವಾಗ, ಇತ್ತೀಚೆಗೆ ಇಂಥ ಮಹತ್ವದ ಸನ್ನಿವೇಶಗಳ "ನೆನಪಿನ ಸಂಪುಟ"ಗಳಲ್ಲಿ ಇದು ದಾಖಲಾಗುತ್ತಿರುವುದು ಅಭಿಮಾನದ ಸಂಗತಿ. ಶ್ರೀ ಮೃಡಗಿರಿ ಸಂಸ್ಥಾನದ ಸಾಧನೆಗಳ ಈ ಸಂಪುಟಕ್ಕೆ ಕೊಟ್ಟ ಹೆಸರು ಅರ್ಥಪೂರ್ಣ. **ಶ್ರೀಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ಅನುಭಾವ ಸಾಹಿತ್ಯ ನಿರ್ಮಾತೃಗಳು, ಅನುಭಾವ ಗ್ರಂಥದ ವ್ಯಾಖ್ಯಾನಕಾರರು, ಅನುಭಾವ ಕುರಿತ ಚಿಂತನ-ಮಂಥನ ಕಾರ್ಯಗಳನ್ನು ಹಮ್ಮಿಕೊಂಡವರು ಸಮಗ್ರ ಐವತ್ತು ವರ್ಷಗಳ ಜೀವನವನೇ ಶಿವಾನುಭವ ಅನ್ವೇಷಣೆ, ಶಿವಸಾಧನೆ, ಶಿವ ಮಂಗಳ ಸಮಾಜ ನಿರ್ಮಾಣ, ಶಿವಸಾಹಿತ್ಯ ಸೃಷ್ಟಿಗಾಗಿ ಮೀಸಲಾಗಿಸಿರುವ ಶ್ರೀ ಶ್ರೀ ಜಗದ್ಗುರುಗಳು ನಮ್ಮ ಕಾಲದ 'ಡಾ ಜ.ಚ.ನಿ. ಪರಂಪರೆ'ಯು, ಶ್ರೀ ಹಾನಗಲ್ಲ ಶ್ರೀಗಳ ಪರಂಪರೆಯು' ಮಗಮಗಿಸುವ ಅನುಭಾವ ಮಂದಾರ!!** ಎಲ್ಲ ಅನುಭಾವಿಗಳ ನಿಲವಿನಲ್ಲಿ ನೆಲೆನಿಂತ "ಅನುಭಾವಿ"ಗಳು ಪೂಜ್ಯರು.

II

ಅನುಭವ–ಅನುಭೂತಿ–ಅನುಭಾವ

ವೇದ 'ಋಷಿ'ಗಳಂತೆ, ಉಪನಿಷತ್ತಿನ 'ದ್ರಷ್ಟಾರ'ರಂತೆ, ಆಗಮಗಳ 'ಜಿಜ್ಞಾಸು'ಗಳಂತೆ, ಕನ್ನಡ ವಚನ ವಾಙ್ಮಯ ನಿರ್ಮಿಸಿದ 'ಅನುಭಾವಿ'ಗಳು, ಭಾರತೀಯ ತತ್ತ್ವ ಪರಂಪರೆಯ, **ಅತ್ಯಾಧುನಿಕ ಚಿಂತಕರು-ತತ್ತ್ವವೇತ್ತರು-ಪರಿಷ್ಕರಣಕಾರರು,** ಶಿವಶರಣರು ಕಂಡು 'ಅನುಭಾವ'–ಇತರ ಆಚಾರ್ಯರ, ಸಂತರ, ಚಿಂತಕರ ಕೊಡುಗೆಗಳನ್ನು ಮೀರಿ ನಿಲ್ಲುವ ಅತ್ಯಂತ ಪ್ರಾಗತಿಕ ದೃಷ್ಟಿಯ "ಜೀವನ ಸಿದ್ಧಾಂತ". 'ಸಂನ್ಯಾಸ'ವನ್ನು ಜೀವನದ ಪರಮ ಸಾಧನೆಯೆಂದು ಎತ್ತಿ ಹಿಡಿದ ತ್ರಿಮತಾಚಾರ್ಯರ ಆದರ್ಶಗಳನ್ನು ದಾಟಿ, ಸಂಸಾರ–ಸಂನ್ಯಾಸಗಳ ಸುಂದರ ಸಮನ್ವಯದ ವ್ಯಾವಹಾರಿಕ ಹಾಗೂ ವೈಜ್ಞಾನಿಕ ಜೀವನದೃಷ್ಟಿ ವೀರಶೈವ ಪರಂಪರೆಯದು. ಇಹ–ಪರಗಳಿಗೆ ಏಣಿ ಹಾಕಿ, ಪರವು ಇಹದಲ್ಲಿ, ಇಹದಲ್ಲೂ ಪರವನ್ನೇ ನಿರ್ಮಿಸಿದ ಅನುಭಾವ ಪರಂಪರೆ–ಭಾರತೀಯ ಚಿಂತನೆಯಲ್ಲಿಯೇ ಒಂದು ಪ್ರಾಗತಿಕ ದೃಷ್ಟಿಯದು; ಕ್ರಾಂತಿಕಾರಿಯಾದುದು. ಸಮಗ್ರ ಬದುಕೇ ಭಗವದಾರಾಧನೆ. ಶಿವಬಾಳ, ಶಿವಚಿಂತನ, ಶಿವಕಾಯಕ, ಶಿವದಾಸೋಹ, ಶಿವಸತಿ–ಶಿವಪತಿ. ಶಿವಸಂತತಿ–ಶಿವಸಮಾಜದಂಥ "ಸಮಗ್ರ–ಸಮೀಚೀನ ಬದುಕಿನ ಜೀವನ ವೇದಾಂತ" ಶಿವಶರಣರ ಕೊಡುಗೆ. ಇದು ಅವರ ಸ್ವಾನುಭವ ಸಿದ್ಧಾಂತ, ಬರಿಯ ತಾತ್ವಿಕ ಜಿಜ್ಞಾಸೆಯದಲ್ಲ. 'The whole course of Hindu

Philosophy in a continuous Coffirmation of the TRUTH, that insight into reality does not come by analytical inetllect, though it is accessible to the human mind in its INTEGRALITY'○ ಎಂಬ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಮಾತು ಇಲ್ಲಿ ಯತಾರ್ಥಾನ್ವಯ. (ಸತ್ಯದ ಅಂತರ್‌ದರ್ಶನ, ತಾರ್ಕಿಕ ಜಿಜ್ಞಾಸೆ, ಬೌದ್ಧಿಕ ವಿಶ್ಲೇಷಣೆಯಿಂದ ಸಾಧ್ಯವಾಗದು. ಅದು ಮಾನವ ಬದುಕಿನ ಸಮಗ್ರತೆಯಲ್ಲಿ ಮಾತ್ರ ಸಾಧ್ಯವಾಗುತ್ತದೆ. ಇದು ಶತಮಾನಗಳ ಹಿಂದೂ ದರ್ಶನಕಾರರ ಮತ). ಶಿವಶರಣರ "ಅನುಭಾವ"–ಶಿವಯೋಗ–ಷಟ್‌ಸ್ಥಲ ಸಾಧನೆ, 'ಲಿಂಗಾಂಗ ಸಾಮರಸ್ಯ' 'ಭಕ್ತಿ ಪಂಚಮ ಪುರುಷಾರ್ಥ' ಮುಂತಾದ ಅನುಭಾವದ ಆಯಾಮಗಳನ್ನು ಸಮಗ್ರವಾಗಿ ಪರಿಶೀಲಿಸಲಾಗಿಲ್ಲ. ಶ್ರೀಮಲ್ಲಪ್ಪ, ಶ್ರೀ ಸಾಖರೆ, ಶ್ರೀ ಹುಣಸ್ಯಾಳ, ಡಾ. ಆರ್. ಸಿ. ಹಿರೇಮಠ, ಡಾ. ಶಿವ್ಪೇರುದ್ರಸ್ವಾಮಿ ಮುಂತಾದವರ ಪ್ರಯತ್ನ ಇನ್ನೂ ಪ್ರಾರಂಭದ ಹಂತದಲ್ಲಿದೆ. ಪ್ರೊ. ಎಸ್. ಎಸ್. ಭೂಸನೂರಮಠ ಅವರ "ಪರಾಮರ್ಶೆ" ಇನ್ನೂ ಮುಂದುವರಿದು, ಶರಣ ತತ್ವದರ್ಶನ ಸಮಗ್ರತ್ವದ ಕಡೆಗೆ ದಾರಿ ತೋರುತ್ತಿದೆ. ಶ್ರೀ ಅರವಿಂದರ 'integral yoga' ಜೆ. ಕೃಷ್ಣಮೂರ್ತಿಯವರ "ಸಮಗ್ರ ಜೀವನ ದೃಷ್ಟಿ" **ಶಿವಶರಣರ ವಿಚಾರಗಳಿಗೆ ನೀಡಿದ ಆಧುನಿಕ ವ್ಯಾಖ್ಯಾನವೆನ್ನಬಹುದು. ಈ ಸತ್ಯವನ್ನು ವಿಶಾಲ ಜಗತ್ತಿನ ಬುದ್ಧಿಜೀವಿಗಳ ಮುಂದೆ, ತಂದು ನಿಲ್ಲಿಸುವ ಪ್ರಯತ್ನ ಆಗಬೇಕಾಗಿದೆ.** ಡಾ. ಜ.ಚ.ನಿ. ಜ. ಅನ್ನದಾನೀಶ್ವರರು, ಶ್ರೀ ಸಿದ್ಧೇಶ್ವರ ಸ್ವಾಮಿಗಳು (ಬಿಜಾಪೂರ) ಮುಂತಾದ ಕೆಲವೇ ಪುಣ್ಯ ಚೇತನಗಳ ಪ್ರಯತ್ನದಲ್ಲಿ ಇದು ಮುಂದುವರಿದಿದೆ. ವೀರಶೈವ ತತ್ವಜ್ಞಾನ, ಶಿವಶರಣರ ಅನುಭಾವ ಚಿಂತನ ಇನ್ನೂ 'ಕನ್ನೆ ನೆಲ'ವಾಗಿದೆ.

ಅನುಭವ=ಇಂದ್ರಿಯಗಳ ಮೂಲಕ ಒದಗುವ ಅರಿವು, ತಿಳುವಳಿಕೆ, ಜ್ಞಾನ ಅಥವಾ ಅದೊಂದು ಮನಸ್ಥಿತಿ. ಅಂತೆಯೇ 'ಅನುಭಾವ' ಎಂದರೆ, ಅತೀಂದ್ರಿಯ ಜ್ಞಾನ, ಅಪರೋಕ್ಷ ಜ್ಞಾನ. ದೇವರನ್ನು ಕುರಿತ 'ಅರಿವು'–ಭಕ್ತಿಯನ್ನು ಮಾಡುವಾಗ ದೊರೆವ ಸುಖದ ಜ್ಞಾನ, ಅಂತೆಯೇ, ಶಿವಜ್ಞಾನಿಗಳೊಡನೆ ಮಾಡುವ ಸಂವಾದ, ಚರ್ಚೆ. 'ಕೂ. ಸಂ. ದೇವಾ ನಿಮ್ಮನುಭಾವ ಮಾತಿನ ಮಥನ ಎನ್ನಬಹುದೆ?' ಅದೊಂದು 'ಲಿಂಗಾಂಗ ಸಾಮರಸ್ಯ', ಚೆನ್ನಬಸವಣ್ಣನವರೆನ್ನುವಂತೆ 'ಅರಿಷಡ್ವರ್ಗಗಳ ಇಚ್ಛೆಗೆ ಹರಿಯದಿರಬಲ್ಲಡೆ ಅನುಭಾವ', ಒಟ್ಟಿನಲ್ಲಿ, ಲೌಕಿಕವನ್ನು ಮೀರಿದ, ಅಲೌಕಿಕ ಅಪರೋಕ್ಷ ಜ್ಞಾನ. ಅದು 'ಹೊಳೆ'ಯುತ್ತದೆ. ಸ್ಪಂದನಗೊಳ್ಳುತ್ತದೆ. ಕವಿಯ ಪ್ರತಿಭಾ ಚಕ್ಷುವಿಗೆ 'ಥಳಕ್'ನೆ ಹೊಳೆವ 'ದಿವ್ಯಭಾವ' ಅದನ್ನು, ಆತ, ಚಿಂತಿಸಿ, ಆ ಮನಸ್ಥಿತಿಯಿಂದ ಕೆಳ

○ Radhakrishnan Reader–An anthology Bharatiya Vidya Bhavan, Bombay 7 P. 11.

ಗಿಳಿದು, ಭಾಷೆಗೆ ಅಳವಡಿಸಿ, ಕಾವ್ಯ ಕಟ್ಟುತ್ತಾನೆ. ನಿಜ ಅನುಭಾವ ಸಾಹಿತ್ಯ ಸೃಷ್ಟಿಯದೂ ಇದೇ ಪರಿ. ಕವಿಯು 'ಕಾಣ್ಕೆ' ಮತ್ತು 'ಕಟ್ಟುವಿಕೆ', ಸಹೃದಯನಲ್ಲಿ 'ಪ್ರತಿಫಲಿಸು'ವಂತೆ, ಅನುಭಾವಿ ಶರಣನ, ಆನಂದ ಸೃಷ್ಟಿ ಅನುಭಾವಿ ವ್ಯಾಖ್ಯಾನಕಾರನ ಹೃದಯ ಕನ್ನಡಿಯಲ್ಲಿ 'ಪ್ರತಿಸ್ಪಂದನ'ಗೊಳ್ಳುತ್ತದೆ. ಡಾ.ತಿಪ್ಪೇರುದ್ರಸ್ವಾಮಿಯವರೆನ್ನುವಂತೆ 'ಅನುಭಾವ' ಮಾತಿಗೆ ಮೀರಿದುದು. 'ಮಾತು-ಮನಂಗಳಿಂದತ್ತತ್ತ ಮೀರಿದ' ಸಮರಸದ ಸುಖದಲ್ಲಿ, ಸಾಧಕ/ಲೀನನಾದಾಗ ಅಲ್ಲಿ ನುಡಿಯ ಹಂಗು ಹಿಂಗುತ್ತದೆ. 'ಶಬ್ದಮುಗ್ಧವಾಗಬೇಕಲ್ಲದೆ, ಶಬ್ದ ಸಂದಣಿಯ ಮಾತು ಸಯವಲ್ಲ' ಎಂದು ಪ್ರಭುವನ್ನು ಕುರಿತು ಮುಕ್ತಾಯಕ್ಕ ಹೇಳುವಳು. ಅವಳ ಸಂದೇಹಕ್ಕೆ ಅಲ್ಲಮಪ್ರಭು ಕೊಟ್ಟ ಉತ್ತರವೂ ಬಹಳ ಸುಂದರವಾಗಿದೆ. 'ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವ'....'ತನ್ನ ತಾನರಿದಡೆ ನುಡಿಯೆಲ್ಲ ತತ್ವ, ತನ್ನ ತಾನರಿದಡೆ ನುಡಿಯೆಲ್ಲ ಮಾಯೆ' ಎನ್ನುತ್ತಾನೆ ಅಲ್ಲಮಪ್ರಭು. ಅರಿತು ಆಡಿದ ಮಾತು ಮಾಯೆಯಲ್ಲ, ಜ್ಯೋತಿರ್ಲಿಂಗ, ಅಂತಹ ಮಾತಿನ ಒಂದೋದು ಸ್ವರವೂ ಪರತತ್ವ ಸ್ವರೂಪ. ಮಾತಿನ ಮಹತಿಯನ್ನು ಹೇಳಬಹುದಾದ ಅತ್ಯುನ್ನತವಾದ ಕೊನೆಯ ಮಾತು ಇದು....ಬಹುಶಃ ಶರಣರ ಅನುಭಾವ ಸಾಹಿತ್ಯಕ್ಕೆಲ್ಲ ಈ ಮಾತು ಅನ್ವಯಿಸುತ್ತದೆ. ತಾವು ಕಂಡ ಜ್ಯೋತಿರ್ಲಿಂಗದ ಸಮರಸ ಸುಖವು ಮಾತಿಗೆ ಅತೀತವಾದುದು. ತಮ್ಮ ಅಸಮ ಸಾಹಸದಿಂದ ಅದನ್ನು ಮಾತೆಂಬ ಜ್ಯೋತಿರ್ಲಿಂಗದಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ.[೧]–ಇದು 'ಅನುಭಾವ ಸಾಹಿತ್ಯ'ದ ಸಿದ್ಧಾಂತ ನುಡಿ.

ನಮ್ಮ ಕಾಲದಲ್ಲಿ ಡಾ. ಜ.ಚ.ನಿಯವರ ನಂತರ, ಅನುಭಾವ ಸಾಹಿತ್ಯದ ಅಧಿಕೃತ ವಕ್ತಾರರು ಶ್ರೀ ಮುಂಡರಗಿ ಜಗದ್ಗುರುಗಳು. ಅವರ 'ವಚನ ಸಂಪದ' ಮತ್ತು 'ವೀರಶೈವ ದಾರ್ಶನಿಕ ಸಿದ್ಧಾಂತ' ಮತ್ತು ಆರೈದು I, II, III, IV ರ ಸಂಶೋಧನಾತ್ಮಕ ಲೇಖನಗಳು ಇದಕ್ಕೆ ಜೀವಂತ ಸಾಕ್ಷಿ 'ಸಾಹಿತ್ಯ ಕ್ಷೇತ್ರದಲ್ಲಿ ದಣಿದರೂ, ತಮ್ಮದು ಮಣಿಯದ ಶರೀರ. ತಮ್ಮದು **"ಸಾವಿರದ"** ಸಾಹಿತ್ಯ....ಸ್ವತಃ ಸಾಹಿತಿಗಳೂ, ಅನುಭವಿಗಳೂ, ಅನುಭಾವಿಗಳೂ ಆದ ತಾವು ರಚಿಸಿದ ಕೃತಿಗಳು ರಸಋಷಿಗಳ ರಚನೆಗಳಾಗಿವೆ.'[೨] ಹೀಗೆ, ಜಗದ್ಗುರುಗಳ ಲೋಕಾನುಭವ, ಕೃತಿಲೋಕದ ಶಿವಾನುಭವಗಳ 'ಅನುಭೂತಿ' ಅವರ ಸಾಹಿತ್ಯಶ್ರೀ. "ಅನುಭಾವ" ಸಂಪುಟದ ಪ್ರತಿಪುಟ ಈ ಮಾತಿಗೆ ಸತ್ಯ ಸಾಕ್ಷಿ ಹಾಗೂ ಅಕ್ಷಿ.

III

ಪರಮಪೂಜ್ಯ ನಿರಂಜನ ಜಗದ್ಗುರು ಶ್ರೀ ಅನ್ನದಾನ ಮಹಾಸ್ವಾಮಿಗಳಿಗೆ

---

೧ ಶೂನ್ಯ ತತ್ವವಿಕಾಸ ಮತ್ತು ಶೂನ್ಯಸಂಪಾದನೆ–ಡಾ. ಎಚ್.ತಿಪ್ಪೇರುದ್ರಸ್ವಾಮಿ, ಪು. ೨೨೨, (೧೯೬೩).

೨ ಹಾಲಕೆರೆ ಸುಕ್ಷೇತ್ರದಲ್ಲಿ ಜ. ಕೊಟ್ಟೂರು, ಹಾಲಕೆರೆ ಶ್ರೀಗಳು ದಿ. ೨೪-೧೨-೯೪ರಲ್ಲಿ ಅರ್ಪಿಸಿದ ಸನ್ಮಾನ ಪತ್ರ.

"ಅರ್ಪಿತ"ವಾಗುವ ಈ 'ಅನುಭಾವಿ' ಸಂಪುಟ, ಅನ್ಯಾದೃಶವಾದುದು. ೧) ಅನುಭಾವಿಗಳು ೨) ಅನುಭಾವಿಯ ಸಾಹಿತ್ಯ ಸೌರಭ ೩) ಅನುಭಾವಿಯ 'ಶಿವಬದುಕು' ಎಂಬ ತ್ರಿದಲ ಬಿಲ್ವ, ಶ್ರೀ ರುದ್ರಮಂತ್ರದೊಡನೆ, ಅನುಭಾವಿ ಶರಣರ "ಅಡಿದಾವರೆಗಳಿಗೆ ಅರ್ಪಿತ, ಸಹೃದಯ ಭಕ್ತರ 'ಶಿರದಾವರೆ'ಗೆ ಒಪ್ಪಿತ. **ಇದೊಂದು ಅರಳಿದ ಅನುಭಾವ ಕಮಲ ಪುಷ್ಪ,** ಇಲ್ಲಿ ನಿರ್ಮಲ ಸಾಹಿತ್ಯ ಸೌರಭ ಚಿರಂತನವಾಗಿದೆ, ಜಗದ್ಗುರುಗಳ ಸಾಹಿತ್ಯ ಹಾಗೂ ಇತರ ಅನುಭಾವಿಗಳ ಸಾಹಿತ್ಯ-ಒಂದೇ ಮಾತಿನಲ್ಲಿ ನಮಗೆ "ನೀರ ಮೇಲಣ ತೆಪ್ಪ, ಸಮುದ್ರದೊಳಗಣ ಬೆಂಗುಂಡು" (ಅಮುಗೆ ರಾಯಮ್ಮ), ಈ 'ಅನುಭಾವ'.

> ಅರಿವೆಂಬ **ಗುರು**ವಿನಿಂದ **ಇಷ್ಟಲಿಂಗ** ಸಾಹಿತ್ಯ
> ಅನುಭಾವವೆಂಬ **ಲಿಂಗ**ದಿಂದ **ಪ್ರಾಣಲಿಂಗ** ಸಾಹಿತ್ಯ
> ಆನಂದವೆಂಬ **ಜಂಗಮ**ದಿಂದ **ತೃಪ್ತಿಲಿಂಗ** ಸಾಹಿತ್ಯ
> **ಅರಿವಿ**ನಿಂದ ಅನುಭಾವ, **ಅನುಭಾವ**ದಿಂದ ಅರಿವು
> **ಅರಿವು-ಅನುಭಾವ ಸಮರಸವಾದುದೇ ಆನಂದ**
> ಆನಂದಕ್ಕೆ ಅರಿವೇ ಸಾಧನ ಕೂಡಲ ಚೆನ್ನ ಸಂಗಮದೇವಾ॥

ಮಾನವ ಕಲ್ಯಾಣದ ಮೂಲಕ ವಿಶ್ವಕಲ್ಯಾಣ ಸಾಧಿಸಬಲ್ಲ **"ಲಿಂಗ ಸಾಹಿತ್ಯ" "ಜಂಗಮ ಸಾಹಿತ್ಯ" "ಗುರು ಸಾಹಿತ್ಯ"**-ಈ ಅನುಭಾವ ಸಂಪುಟ. ಸಂಸಾರ ಸಮುದ್ರದಲ್ಲಿ ತೇಲುವ ನಮಗೆಲ್ಲ, ಜೀವನ ಸಾರ್ಥಕತೆಯತ್ತ, 'ತೇಲಿಸುವ ಬೆಣ್ಣಿನ (ಬೆಂಡು) ಗುಂಡು' ಅಂತೆಯೇ, ಇಹ ಬಾಳುವೆಯ ಪ್ರವಾಹದಲ್ಲಿ ಕೊಚ್ಚಿಹೋಗುವ ನಮ್ಮನ್ನು ಆರಾಮವಾಗಿ "ತೇಲಿಸಿ....ಸಾಗಿಸಿ....ದಡ ಸೇರಿಸುವ "ದೇವ ತೆಪ್ಪ" ಈ ಅನುಭಾವ ಸಂಪುಟ. ಅವಸರದಲ್ಲಿ ಎಲ್ಲಿಗೋ ಓಡುತ್ತಿರುವ ಇಂದಿನ ಮಾನವನಿಗೆ ಒಂದೆಡೆ ನಿಂತು, ನಿಧಾನವಾಗಿ ಆರುನೂರು ಪುಟಗಳ ಪುಣ್ಯ ಸಾಹಿತ್ಯವನ್ನು ಪರಿಭಾವಿಸುವ ಸಮಾಧಾನವಿಲ್ಲವಾದರೂ, ಈ 'ಮುನ್ನುಡಿ'ಯ ಆರೆಂಟು-ಪುಟಗಳನ್ನಾದರೂ, "ಆರೈದು - ವಿಚಾರ ಮಾಡಿ, ಕುರಿತು, ಚಿಂತಿಸಿ" ಪರಿಶೀಲಿಸುವ ವ್ಯವಧಾನ ಪಡೆವ ಪುಣ್ಯ ಅವಕಾಶ ದೊರೆಯಲಿ. ತಿಂಗಳುಗಟ್ಟಲೆ "ಪುರಾಣ" ಕೇಳುವ ಕಾಲ ಇದಲ್ಲ, ಪುಟಗಟ್ಟಲೆ ಓದಲಾರದ "ಅವಸರದ" ಕಾಲ ಇದು. ಮತ್ತೆ ಆ ಚೆನ್ನಬಸವಣ್ಣನವರೇ ನುಡಿದಿದ್ದಾರೆ. 'ಅಂಗ ಲಿಂಗ ಸುಖ ಸಾರಾಯದನುಭಾವ **'ಲಿಂಗವಂತ'**ರಿಗಲ್ಲದೆ ಸಾಧ್ಯವಾಗದು ನೋಡಾ"-**'ಜ್ಞಾನದ ಹಸಿವೆಯ ಲಿಂಗಧಾರಿ'**ಗಳಿಗೆ ಇದು ಸಾಧ್ಯ, ಅಲ್ಲವೆ?

ಕನ್ನಡ ಅನುಭಾವ ಸಾಹಿತ್ಯ ಸಮೀಕ್ಷೆ

"ಅನುಭಾವಿ"ಯ ಪ್ರಥಮ ಭಾಗ-"ಅನುಭಾವಿಗಳು". ಪ್ರಥಮದಲ್ಲಿ ಪ್ರೊ. ಪೂಜಾರ ಅವರ 'ಕನ್ನಡ ತತ್ವಪದಗಳು ಮತ್ತು ಅನುಭಾವ' ಎಂಬ ಲೇಖನ

ವ್ಯಾಪಕವಾಗಿದೆ, ಮುಂದಿನ ಓದಿಗೆ ಮುನ್ನುಡಿಯಾಗಿದೆ. ನಂತರ, ವಿಜಯನಗರದ ವಿರಕ್ತ ಶ್ರೇಷ್ಠನಾದ ಸಪ್ತಕಾವ್ಯದ (ಈ ಹೇಳಿಕೆ-ಪರಂಪರೆಯಿಂದ ತಪ್ಪಾಗಿ ಬಳಕೆಯಾಗಿದೆ ಎನಿಸುತ್ತದೆ, ವಿಚಾರಮಾಡಬೇಕು.) ಗುರುಬಸವನ 'ಯೋಗಾಂಗ ವಿಭೂಷಣ', ಸದ್ಗುರು ರಹಸ್ಯ... ಮನೋವಿಜಯ ಮುಂತಾದ ಎಲ್ಲ ಅನುಭಾವ ಕೃತಿಗಳ "ಪರಿಚಯ" ಇಲ್ಲಿನ ಏಳು ಲೇಖನಗಳಲ್ಲಿದೆ. ಇಲ್ಲಿನವರೆಗೆ, 'ಅಲಕ್ಷಿತ'ನಾದ ಗುರುಬಸವನ ಅನುಭಾವ ವಿಚಾರಗಳು, ಯೋಗ, ಗುರುಮಹಿಮೆ, ಅವಧೂತತ್ವ, ಕಲ್ಯಾಣೇಶ್ವರ ಮತ್ತು ವೃಷಭ ಗೀತೆಗಳ "ವಿಶೇಷ"ಗಳನ್ನು ಎತ್ತಿ ತೋರಿಸುತ್ತವೆ. ಇಲ್ಲಿನ ಲೇಖನಗಳು. ಅನುಭಾವಿ ಗುರುಬಸವನೇ ಒಂದು ಪಿಎಚ್.ಡಿ. ಅಧ್ಯಯನದ ವಸ್ತು ಎಂಬುದನ್ನು ಇಲ್ಲಿನ ಅಭ್ಯಾಸಿ ಲೇಖಕರು ಬಿಂಬಿಸಿರುವರು.

ಮುಂದಿನ ಭಾಗ ಅನುಭಾವ ಸಾಹಿತ್ಯದಲ್ಲಿಯೇ ಅವಿರಳ ಜ್ಞಾನಿ, 'ಪವಾಡ ಸದೃಶ' ವ್ಯಕ್ತಿಯಾದ ಶ್ರೀ ನಿಜಗುಣ ಶಿವಯೋಗಿಗಳವರ "ಕೈವಲ್ಯ ಪದ್ಧತಿ, ಪರಮಾರ್ಥಗೀತೆ, ಅನುಭಾವಸಾರ, ಪರಮಾನುಭವ ಬೋಧೆ, ವಿವೇಕ ಚಿಂತಾಮಣಿ ಮುಂತಾದ ಕೃತಿಗಳ ಸಮೀಕ್ಷಾರೂಪದ ಲೇಖನಗಳು." **ನಿಜಗುಣರ 'ಜ್ಞಾನ ಗಂಗೋತ್ರಿ' 'ಅನುಭಾವ ಸಂಗಮು', 'ಯೋಗ ಶಂಭುಲಿಂಗಕ್ಷೇತ್ರ'**ದ ಆತ್ಮೀಯ ಪರಿಚಯ ನೀಡುತ್ತಿವೆ ಇವು. ಮುಖ್ಯವಾಗಿ, ಪರಮಾರ್ಥ ಪ್ರಕಾಶಿಕೆಯ ಮೊದಲ ಪರಿಚ್ಛೇದದ ವ್ಯಾಖ್ಯಾನ ಚೆನ್ನ ಸದಾಶಿವಯೋಗಿಯ ಸಂಸ್ಕೃತ ಶಿವಯೋಗ ಪ್ರದೀಪಿಕೆಯ ಹಿನ್ನೆಲೆಯಲ್ಲಿ ರೂಪಿತವಾಗಿರುವುದು ಅತ್ಯಂತ ಅಭ್ಯಾಸಪೂರ್ಣ ಲೇಖನ. ಅದೂ ಶ್ರೀ ಬೆಲ್ದಾಳ ಸಿದ್ಧರಾಮೇಶ್ವರ ಶರಣರ ರಚನೆ!

ಡಾ|| ಎಸ್. ಎಂ. ಹಿರೇಮಠರ 'ಮಹಲಿಂಗರಂಗನ ಅನುಭವಾಮೃತ' ಕುರಿತ ಅಭ್ಯಾಸಪೂರ್ಣ ಲೇಖನ,- 'ಅದ್ವೈತಿ'ಯೆಂದೇ ಬ್ರಾಂಡ್ ಆದ ಮಹಲಿಂಗರಂಗನ ಅನುಭಾವ ಮಹಾಲಿಂಗದರ್ಶನ ಮಾಡಿಸಿದ. ಇದೊಂದು ವಿಶೇಷ ಪ್ರಯತ್ನ.

ಮುಂದಿನ ಲೇಖನಗಳು ಕನ್ನಡ ಕೈವಲ್ಯ ಪದ ಸಾಹಿತ್ಯಕಾರರಾದ ಶ್ರೀ ಸರ್ಪಭೂಷಣರು, ಮೈಲಾರ ಬಸವಲಿಂಗ ಶರಣರು, ಬಾಲಲೀಲಾ ಮಹಾಂತರು, ಘನಮಠದಾರ್ಯರು ಶ್ರೀಮಡಿವಾಳಪ್ಪನವರು ಮತ್ತು ಸೋಮಕಟ್ಟಿ ಕರಿವೃಷಭೇಂದ್ರರ ಕೈವಲ್ಯ ಪದಗಳನ್ನು ಕುರಿತಾದುವು. ಇಲ್ಲಿ ಘನಲಿಂಗದೇವ, ಶ್ರೀ ಜಲಿಲ ಸಾಹೇಬ ಮುಂತಾದವರ ಬಗೆಗೂ ಲೇಖನಗಳಿದ್ದರೆ ಚೆನ್ನಾಗಿತ್ತು. ಶಿವಶರಣರ ಅನುಭಾವ ಪರಂಪರೆ 'ವಚನ'ಗಳಾಗಿ ಮೂಡಿದುದು, ಮುಂದುವರಿದು ಈ ಎಲ್ಲ ವಾಗ್ಗೇಯಕಾರರಿಂದ 'ಅನುಭಾವ ಅಥವಾ ಕೈವಲ್ಯ ಪದ'ಗಳಾಗಿ, ಜನಮನದ ಮೇಲೆ ಹರಿದಾಡಿ, ಜನತೆಯ ಭಾವಕೋಶದಲ್ಲಿ ಭಕ್ತಿ, ದಾಸೋಹ, ಅನುಭಾವಗಳನ್ನು ತುಂಬಿಸಿದ ಸಂಗತಿಗಳನ್ನು ವಿವರವಾಗಿ ನಿರೂಪಿಸಲಾಗಿದೆ. ಡಾ|| ತಿಪ್ಪೇರುದ್ರಸ್ವಾಮಿಗಳ 'ಕೈವಲ್ಯ ಸಾಹಿತ್ಯ'ವೆಂಬ ಗ್ರಂಥದ ಮುಂದುವರಿದ ಅಧ್ಯಯನ, ಹೊಳಹು, ಚಿಂತನೆ ಇಲ್ಲಿನ ಲೇಖನಗಳಲ್ಲಿ ಮೂಡಿ

ಬಂದಿವೆ. ಏಕರೂಪತೆ ಇಲ್ಲದಿದ್ದರೂ, ಅನುಭಾವ ಸಾಹಿತ್ಯದ ಆಳ–ವಿಸ್ತಾರ–ಅನನ್ಯತೆಯು ಪರಿಚಯ ನಮಗಾಗುತ್ತದೆ. ಪೂಜ್ಯ ಮೃಡಗಿರಿಯ ಜಗದ್ಗುರುಗಳು, ಮೈಲಾರ ಬಸವಲಿಂಗ ಶರಣರ ಹಾಗೂ ಅಕ್ಕಮಹಾದೇವಿಯು ಕೃತಿಗಳಿಗೆ ನೀಡಿರುವ "ವ್ಯಾಖ್ಯಾನ"ದ ಬೆಳಕಿನಲ್ಲಿ ಇಲ್ಲಿನ ಲೇಖನಗಳು ಪ್ರಭಾವಿತವಾಗಿವೆ. ಅಂತರ್ ದೃಷ್ಟಿ ಬಿಂಬಿತವಾಗಿವೆ ಎನ್ನಬಹುದು.

ಈ ಭಾಗದ ಇನ್ನೆರಡು ಮುಖ್ಯ ಲೇಖನಗಳು ಡಾ!! ಲಠ್ಠೆಯವರ ಅಭ್ಯಾಸಪೂರ್ಣ ಬರಹ 'ಶಿಶುನಾಳ ಶರೀಫ ಶಿವಯೋಗಿ' ಕುರಿತದ್ದು ಹಾಗೂ ಪರಮಪೂಜ್ಯ ಶ್ರೀ ಹಾನಗಲ್ಲ ಕುಮಾರ ಮಹಾಸ್ವಾಮಿಗಳ ಭಾವಗೀತೆಗಳನ್ನು ಕುರಿತ ಲೇಖನ ಈ "ಅನುಭಾವಿಗಳು" ವಿಭಾಗದ ಸೂಕ್ತಮುಕ್ತಾಯವಾಗಿ ಬಂದಿದೆ. ಅನುಭಾವಿಗಳ ಪರಂಪರೆಯು ಈ ಎಲ್ಲ ಮಹಾಚೇತನಗಳ ದಿವ್ಯಶಕ್ತಿ, ಚಿಂತನಪರತೆ, ಸ್ವಂತಿಕೆ ಹಾಗೂ ಸಮಾಜದ ಮೇಲಾದ ಪ್ರಭಾವಗಳು ಚಿಂತನೀಯವಾದುವು. ಇಷ್ಟೊಂದು ವ್ಯಾಪಕವಾದ, ತಲಸ್ಪರ್ಶಿಯಾದ ಚಿಂತನಪರ ಸಮೀಕ್ಷೆ ಇದೇ ಪ್ರಥಮ.

ಅನುಭಾವಿಯ ಸಾಹಿತ್ಯ ಸೌರಭ

"ಅನುಭಾವಿ"ಯ ಎರಡನೆಯ 'ದಳ'ದಲ್ಲಿ, ಪೂಜ್ಯ ಜಗದ್ಗುರುಗಳ ಎಲ್ಲ ಕೃತಿಗಳ ಅವಲೋಕನ, ವಿಚಾರಮಂಥನ, ಚರ್ಚೆ ಹಾಗೂ ಅಭಿನಂದನ ಬರಹಗಳು ಇವೆ. ಪೂಜ್ಯ ಜಗದ್ಗುರುಗಳು 'ತತ್ವ ಸಾಹಿತಿ'ಗಳೆಂದೂ 'ಅನುಭಾವಿ ವ್ಯಾಖ್ಯಾನಕಾರ'ರೆಂದೂ, ಜೀವನ ಚರಿತ್ರೆ, ನಾಟಕಕಾರರೆಂದು ಸುಪ್ರಸಿದ್ಧರಾಗಿರುವರು. ಈ ಇಪ್ಪತ್ತೈದು ವರ್ಷಗಳಲ್ಲಿ ಶ್ರೀಗಳ 'ಲಿಂಗನುಡಿ'ಯಾಗಿ ಹೊಮ್ಮಿದ ಸರ್ವ ಸಾಹಿತ್ಯ ಕೃತಿಗಳ ಅನುಭಾವಪೂರ್ಣ ಬರಹಗಳಿಲ್ಲಿವೆ. 'ಪೂಜ್ಯರ ತಪದ ಬದುಕು ಹಾಗೂ ಶಿವಜಪದ ಬದುಕಿನ' ಓಂಕಾರ ರೂಪದ, ಚಿಂತನಧಾರೆ, ಸಂಶೋಧನಾತ್ಮಕ ಧೀರ ನಿಲುಮೆಯ ಚಿಂತನ, ಅಂತರಂಗದ 'ರಹಸ್ಯ'ವನ್ನು ಎತ್ತಿತೋರುವ 'ಪಾತಾಳಗರುಡ ಪ್ರಜ್ಞೆ', ವಿವಿಧ ಭಾಷಾ-ಶಾಸ್ತ್ರ-ಸಾಹಿತ್ಯ ಪ್ರೌಢಿಮೆಯಿಂದ ಮೂಡಿದ ತೌಲನಿಕ ದೃಷ್ಟಿ ಮುಂತಾದ ವಿವಿಧ ಮುಖಗಳ ಸಾಹಿತ್ಯ ದರ್ಶನ ಈ ಭಾಗದಲ್ಲಿ ಆಗುತ್ತಿದೆ. ಮುಖ್ಯವಾಗಿ, 'ಗುರುಕರುಣ ತ್ರಿವಿಧಿ'ಯ ಆತ್ಮ ಶ್ರೀಯನ್ನು ಬಿಡಿಸಿ ತೋರುವ 'ವೀರಶೈವ ದಾರ್ಶನಿಕ ಸಿದ್ಧಾಂತ' ಕನ್ನಡ ತತ್ವ ಸಾಹಿತ್ಯಕ್ಕೆ ಒಂದು ಅಮೂಲ್ಯ ಕೊಡುಗೆ. ನಿಜಗುಣರ ಅರವತ್ತು ಮೂರು ಪುರಾತನರ ತ್ರಿವಿಧಿಗೆ ಬರೆದ ವಿವರಣೆಯ ಕೃತಿ "ನಿತ್ಯ ಪಾರಾಯಣಕ್ಕೆ" ಯೋಗ್ಯವಾದುದಾಗಿದೆ. ಈ ಎಲ್ಲ ಗ್ರಂಥಗಳ ಭಾಷೆ–ಶ್ರೀಗಳ ಪಾರದರ್ಶಕ ವ್ಯಕ್ತಿತ್ವದಂತೆ ಸರಳ–ಸುಂದರ–ನೇರ ಅವರ ಶೈಲಿ ಹೃದಯಗಮ್ಯ, ಅಂತಃಕರಣ ವೀಸಿ.... ಮುಂತಾದ ಅಭಿಪ್ರಾಯಗಳನ್ನು ಸ್ಥಾಪಿಸುವ ಇಲ್ಲಿನ ಲೇಖನಗಳು, ಚಿಂತನಶೀಲವಾಗಿವೆ, ಅಭ್ಯಾಸಪೂರ್ಣವಾಗಿವೆ, ಮುಂದಿನ ಓದಿಗೆ ಪ್ರೇರಕವಾಗಿವೆ. ಅವುಗಳ ಅಧ್ಯಯನವೇ ಒಂದು ಪಿಎಚ್.ಡಿ. ಸಂಶೋಧನೆಗೆ 'ವಸ್ತು'!

ವಿಶ್ವ ಸಾಹಿತ್ಯದಲ್ಲಿಯೇ ವಿಶಿಷ್ಟ ಸ್ಥಾನ ಪಡೆದ "ವಚನಪ್ರಕಾರ" ಕನ್ನಡದ ಹೆಮ್ಮೆಯ

ಆಸ್ತಿ. ಶಿವಶರಣರ ದಿವ್ಯ ದರ್ಶನದಲ್ಲಿ ಮೂಡಿದ ಈ "ವಚನ"–ಈ ಎಂಟು ಶತಮಾನಗಳುದ್ದಕ್ಕೂ ವಿಕಾಸವಾಗುತ್ತಾ ಬಂದಿರುವುದು ಅದರ ಅಂತಃಸತ್ವಕ್ಕೆ ಸಾಕ್ಷಿ, ಅದರ ಕೊನೆಯಿಲ್ಲದ 'ಕಡವರತ್ವ'ಕ್ಕೆ ನಿದರ್ಶನ. ನಮ್ಮ ಈ ಇಪ್ಪತ್ತನೆಯ ಶತಮಾನವೂ "ಲೌಕಿಕ ಹಾಗೂ ಅನುಭಾವಿಕ ವಚನ ಸೃಷ್ಟಿಯ ಸಂಪದ್ಭರಿತ ಯುಗ. ಡಾ॥ ಜ.ಚ.ನಿ. ಡಾ॥ ಮೂಜಗಂ, ಡಾ॥ ರಂಗಣ್ಣ, ಡಾ॥ ಸಿದ್ಧಯ್ಯ ಪುರಾಣಿಕ, ಡಾ॥ ಪರಮೇಶ್ವರಭಟ್ಟ ಮುಂತಾದವರ "ಶಿವಬೀದಿ"ಯಲ್ಲಿ ನಡೆದ, ನೂರಾರು ವಚನಕಾರರು, ವಚನಕಾರ್ತಿಯರು, ಕನ್ನಡ ಸಾಹಿತ್ಯ ಸಿರಿಸಂಪದವನ್ನು ಹೆಚ್ಚಿಸಿರುವರು. ಪ್ರಕೃತ 'ಶ್ರೀ ಮೃಡಗಿರಿ ಅನ್ನದಾನೀಶ' ಅಂಕಿತದ, ಪೂಜ್ಯ ಜಗದ್ಗುರುಗಳ 'ವಚನ ಸಂಪದ' ಈ ಕ್ಷೇತ್ರದ ಅತ್ಯಂತ ಗಮನಾರ್ಹ, ಗೌರವಾರ್ಹ ಕೃತಿ. ಡಾ॥ ಪಿ. ವಿ. ನಾರಾಯಣರೆನ್ನುವಂತೆ, 'ಶ್ರೀ ಅನ್ನದಾನೀಶ್ವರರ ಮಾತುಗಾರಿಕೆ ಹನ್ನೆರಡನೆಯ ಶತಮಾನದ ವಚನಕಾರರಿಂದ ರೂಪಿತವಾದುದು' ನಿಜ. ಈ ಶಿವಶರಣ ಧಾರ್ಮಿಕ, ಅನುಭಾವಿಕ, ಸಾಹಿತ್ಯಕ ಪರಂಪರೆಯೇ ಶ್ರೀ ಜಗದ್ಗುರುಗಳ 'ರಕ್ತ'ದಲ್ಲಿದೆ ಎಂಬುದನ್ನೂ ಗಮನಿಸಬೇಕು. ಪ್ರಭಾವವಿದ್ದರೂ, ಅನುಕರಣವಿಲ್ಲ, ಅನುರಣನವಿದೆ. ಸಮಕಾಲೀನ ಪ್ರಜ್ಞೆ, ವಿಶ್ವಮಾನವೀಯ ದೃಷ್ಟಿ, ವೈಜ್ಞಾನಿಕತೆಯ ಪ್ರಭಾವ, ಈ ವಚನಗಳ ಜೀವಾಳ. 'ಮೃಡಗಿರಿಯ ಅನ್ನದಾನೀಶ' ಎಂಬ ಅಂಕಿತವೂ, ಶಿವ ಸಾಹಿತ್ಯದ ಶಿವಗಿರಿ, ಅಲ್ಲಿಗೆ 'ಈಶ'ನಾಗಿರುವ 'ಜಂಗಮ'ಪ್ರಭು, ಆತನ ನಿತ್ಯ ಅನ್ನ ದಾಸೋಹ ಮತ್ತು ಜ್ಞಾನದಾಸೋಹ ನಿರಂತರವೆಂಬ 'ಧ್ವನಿಪೂರ್ಣ'ವಾಗಿ, "ಕೂಡಲಸಂಗಮ" ಅಂಕಿತದಷ್ಟೇ, ಅರ್ಥಪೂರ್ಣವಾಗಿದೆ ಎಂಬುದನ್ನು ಸಹೃದಯರು ಭಾವಿಸುವರು.

೧) ಸಾಗರ ಬತ್ತಿ ಹೋಗಲಿ, ನೀರಡಿಕೆ ಬತ್ತದಿರಲಿ
ಬಯಸಿದ ಜೀವನ ಸಿಗದಿರಲಿ,
ಬಾಳ್ವೆ ಛಲ ಬತ್ತದಿರಲಿ"

೨) ಕಾದ ಕಬ್ಬುನವ ಬಡಿಬಡಿದು ರೂಪುಗೊಳಿಸುವರಲ್ಲದೆ,
ಮುದ್ರಿಕ್ಕಿ ಸಂತೈಸಬಹುದೆ?

೩) ರಾಜಕಾರಣಿಯಾಗಿ ಫಲವೇನು? ಸ್ವಾರ್ಥ ಪ್ರತಿಷ್ಠೆ ಬಿಡದನ್ನಕ್ಕರ
ಧಾರ್ಮಿಕನೆನಿಸಿ ಫಲವೇನು, ಡಂಬಾಚಾರವ ತೊರೆಯದನ್ನಕ್ಕರ

ಮುಂತಾದ ನುಡಿಗಡಣದಲ್ಲಿ ಸಾಹಿತ್ಯ ಶಕ್ತಿ, ಸಮಕಾಲೀನ ಎಚ್ಚರ–ಚಚ್ಚರ ಹಾಗೂ ಸಾರ್ವಕಾಲೀನ ಮಾನವೀಯ ಅಂಶಗಳು ತುಂಬಿ ತುಳುಕುತ್ತಿವೆ.

ಹೀಗೆಯೇ, ಈ ಭಾಗದಲ್ಲಿ ಜಗದ್ಗುರುಗಳ ಇತರ ಕೃತಿಗಳ ಸಮೀಕ್ಷೆ ವ್ಯಕ್ತಿತ್ವದ ವಿವಕ್ಷೆ, ಸಾಹಿತ್ಯಾಂಶಗಳ ಪರೀಕ್ಷೆ ಮಾಡುವ ಹಲವು ಲೇಖನಗಳು ಅತ್ಯಂತ ಮೌಲಿಕವಾಗಿವೆ. **ಪೂಜ್ಯರ ಎಲ್ಲ ಸಾಹಿತ್ಯ ಕೃತಿಗಳು, ವ್ಯಾಖ್ಯಾನಗಳು, ಅನುಭಾವದ ಅನೇಕಾರ್ಥ ಪರಂಪರೆಗೆ ಹಚ್ಚಿದ ನೀಲಾಂಜನ ದೀಪಮಾಲೆ. ಅಲ್ಲಿ ಸ್ಪಂದಿಸುತ್ತಿದೆ.**

"ಶಿವಚೇತನ" ಅಲ್ಲಿ ಮಿಡಿಯುತ್ತಿದೆ "ಮಾನವಪ್ರೇಮ ಕ್ಷೇಮ ಚಿಂತನ" ಶ್ರೀ ಉಳವೀಶರೆನ್ನುವಂತೆ 'ವೀರಶೈವ ದಾರ್ಶನಿಕ ಸಿದ್ಧಾಂತ'ದಲ್ಲಿ ಗುರುಕರುಣ ತ್ರಿವಿಧಿಯೊಳಗಿನ ತ್ರಿಪದಿಗಳ ಅರ್ಥವಿವರಣೆ ಮಾತ್ರವಲ್ಲ, ಪೂಜ್ಯ ಶ್ರೀಗಳು ತಮ್ಮ ಪಾಂಡಿತ್ಯಪೂರ್ಣವಾದ ಚತುರೋಕ್ತಿಗಳಿಂದ, ಆನುಷಂಗಿಕವಾದ ದೃಷ್ಟಾಂತ, ದಾರ್ಷ್ಟಾಂತಗಳಿಂದ, ಸ್ವಾನುಭವದ ಅಮೃತ ಸಿಂಚನೆಯಿಂದ, ಶರಣರ, ಸಂತರ, ಶಿವಾನುಭವಿಗಳ ನುಡಿಗಳನ್ನು ಉದಾಹರಿಸಿ, ಆಳವಾದ ಸ್ವಾಧ್ಯಾಯನದ ಬೆಳಕನೂಡಿಸಿ ವೈಭವೀಕರಿಸಿದ್ದಾರೆ ಈ ಅರ್ಥಪೂರ್ಣವಾದ, ತೂಕಬದ್ಧವಾದ ಮಾತು, ಶ್ರೀಗಳ ಸಮಗ್ರ ಸಾಹಿತ್ಯ ಸಂಪದದ ದಿಗ್ದರ್ಶಿಕೆಯಾಗಿದೆ. ಅಭ್ಯಾಸಿಗಳಿಗೆ 'ದೀಪಶಿಖೆ' ಆಗಿದೆ. ಅಂಜನ ಸಿದ್ಧರಾದ ಓದುಗರು, ನೆಲದ ಮರೆಯ ಅನುಭಾವ ನಿಧಿಯನ್ನು, ಈ ದೀಪಶಿಖೆಯು ಬೆಳಕಿನಲ್ಲಿ ಕಂಡು ಅನುಭಾವ ಸೌಂದರ್ಯಾನುಭವ ಪಡೆದು ಅಮೃತ ಸ್ವರೂಪಿಗಳಾಗಬಲ್ಲರು, ಚಿನ್ಮಯ ಚೇತನರಾಗಬಲ್ಲರು.

IV

'ಅನುಭಾವಿಯ ಶಿವಬದುಕು' ಎಂಬ ಭಾಗ, ಅಂತ್ಯದಲ್ಲಿ ಅಳವಟ್ಟಿರುವುದು ವಿನಯ ಸೂಚಕವಾದರೂ, 'ಅಗ್ರಗಣ್ಯ'ವಾದ ದಾಖಲೆಯ ಭಾಗ. ಶಿವ ಬದುಕಿನ ಶ್ರೀಗಳು, ತಮ್ಮ ಸಮಕಾಲೀನ ಜನತೆಯ ಬದುಕನ್ನೇ ಶಿವರೂಪವಾಗಿಸಲು ಮಾಡಿದ ಸತತ ಪ್ರಯತ್ನದ ಚಿತ್ರಣ, ಇಲ್ಲಿನ ಲೇಖನಗಳಲ್ಲಿದೆ. **ಪೂಜ್ಯ ಜಗದ್ಗುರುಗಳ ಬದುಕು-ಪಂಚಮುಖ ಪರಮೇಶ್ವರ ಸ್ವರೂಪವಾದುದು, ಪಂಚಾಕ್ಷರೀ ಮಂತ್ರ ಮಹತ್ವದ್ದು.** ಕೂಡಲಸಂಗಮದ ನಾಡಾದ ಮುದ್ದೇಬಿಹಾಳ ತಾಲೂಕಿನ 'ಪೀರಾಪುರ' ಗ್ರಾಮದಲ್ಲಿ ೧೯೪೪ರಲ್ಲಿ 'ಮಹಾಲಿಂಗಯ್ಯ'ನಾಗಿ ಜನಿಸಿ, ಶಿವಯೋಗಮಂದಿರದಲ್ಲಿ 'ಚಂದ್ರಶೇಖರ ದೇವ'ರಾಗಿ ಬೆಳೆದು, ಬಾಳಿ, ಸಾಧನೆಗೈದು, ಮೃಡಗಿರಿಯ ಜಗದ್ಗುರು ಪೀಠವನ್ನು ಆರೋಹಿಸಿದ ಜೀವನೇತಿಹಾಸವೇ ಒಂದು ರೋಮಾಂಚನಕಾರಿಯಾದ ಭಾಗ. 'ಕಾಣದ ಕೈ'- ಮಾರ್ಜಾಲ ನ್ಯಾಯದಿಂದಲೋ, ಮರ್ಕಟ ನ್ಯಾಯದಿಂದಲೋ, ಈ 'ಶಿವಚೇತನ'ವನ್ನು ಗುರುತಿಸಿ, ರಕ್ಷಿಸಿ, ಪೋಷಿಸಿ, ಜ್ಞಾನಾಮೃತ ನೀಡಿ, 'ಶಿವಾನುಭವ ತತ್ವ ವಾಹಕ' ಹಾಗೂ 'ಶಿವಶಕ್ತಿ ವಾಹನ'ವನ್ನಾಗಿಸಿಕೊಂಡ ಘಟನಾವಳಿಗಳಿಗೆ ಇಂದು ಅರ್ಥ ಮೂಡಿದೆ. ತೀವ್ರ ಜ್ಞಾನಾಕಾಂಕ್ಷೆ, ತೀವ್ರ ವಿರಕ್ತಿ, ಧೀರ ಧೀಮಂತಿಕೆ, ಹೃದಯ ಶ್ರೀಮಂತಿಕೆ, ಲಿಂಗನಿಷ್ಠೆ, ಸಮಾಜಸೇವಾ ವ್ರತ, ಕುಗ್ಗದ ಚೇತನ- ಪ್ರಭು ಪರಂಪರೆಯ-ಚೆನ್ನಬಸವ ವಂಶ ಪರಂಪರೆಯ 'ಜಗದ್ಗುರು ಜ್ಯೋತಿ'ಯಾಗಿ ಬೆಳಗುತ್ತಿರುವುದು ಅತ್ಯಭಿಮಾನದ ಸಂಗತಿ, ಇದಕ್ಕೆ ಐತಿಹಾಸಿಕ ಮಹತ್ವವಿದೆ. ೧೯೭೦ ರಿಂದ, ೧೯೯೫ ರವರೆಗೆ, ಈ 'ರಜತ ವರ್ಷ'ಗಳ ಸಾಧನೆಯೇ, ಒಂದು ಮಹಾಗ್ರಂಥದ ವಸ್ತು. ಅದರ ಮುಖ್ಯಾಂಶಗಳನ್ನು ಈ ಭಾಗದ ಲೇಖನಗಳು ದಾಖಲಿಸಿವೆ, ಇತಿಹಾಸದ ಪುಟಗಳನ್ನಾಗಿಸಿವೆ.

'ಚಲಿಸುವ ಅನುಭವಮಂಟಪ'ದಂತಿರುವ ಪೂಜ್ಯ ಜಗದ್ಗುರುಗಳು **"ನೂತನತೆ"ಗೆ ಹೇಳಿಮಾಡಿಸಿದ ವ್ಯಕ್ತಿ ಅಥವಾ ಶಕ್ತಿ.** ಲಿಂಗಾನುಷ್ಠಾನದಿಂದ ಆತ್ಮಶಕ್ತಿ ಸಂಪನ್ನವಾದ 'ಶ್ರೀಚೇತನ', ಸಮಾಜ ನಿಷ್ಠೆಯಿಂದ ಕ್ರಿಯಾಶೀಲವಾದ ಅದಮ್ಯ ಉತ್ಸಾಹೀ 'ಚೇತನ ಧೀಶಕ್ತಿ'ಯಾಗಿ ಸಮಾಜವನ್ನು ಮುನ್ನಡೆಸಿರುವರು. ಶ್ರೀ ಶ್ರೀಗಳ ಶೈಕ್ಷಣಿಕ ಸೇವೆ, 'ಜಗದ್ಗುರು ಅನ್ನದಾನೀಶ್ವರ ವಿದ್ಯಾಸಮಿತಿ'ಯಿಂದ ಕೈಕೊಂಡ ಸಾಧನೆಗಳೊಂದೊಂದೂ, ಬರಗಾಲದ ಮುಂಡರಗಿ, ನಾಡಿನ ಒಂದೊಂದೂ ಸಾಹಸಗಳೇ! ಶಿಕ್ಷಣ ಸಂಸ್ಥೆಗಳೂ, ವಿದ್ಯಾರ್ಥಿ ದಾಸೋಹಗಳೂ, ಶ್ರೀಗಳು ಸಾಧನೆಗೆ ಜೀವಂತ ಉದಾಹರಣೆಗಳು. ಈ ಪರಶಿವದ ಇನ್ನೊಂದು ಮುಖ ಧರ್ಮಕ್ಷೇತ್ರ ಸಾಧನೆ, ಮಠಗಳ ಜೀರ್ಣೋದ್ಧಾರ, ದೇವಾಲಯುಗಳ ಪುನಾರಚನೆ, ಮಠಗಳಲ್ಲಿ ನಿತ್ಯ ಶಿವಾನುಭವ, ನಿರಂತರ ಪೂಜೆ, ಜಂಗಮ ದಾಸೋಹ, ಬಡಜನರ–ದೀನ–ದಲಿತರ ಉದ್ಧಾರಗಳಿಂದ 'ಶ್ರೀ ಶ್ರೀಗಳು ಎಲ್ಲರಿಗೆ ನಮ್ಮ ಅಜ್ಜನವರು' ಆಗಿರುವುದು ಅತ್ಯಂತ ಗೌರವಾನ್ವಿತ ವಿಚಾರ. ಧರ್ಮರತಿ–ಸಮಾಜಪ್ರಜ್ಞೆ ಬಲಹೀನವಾಗುತ್ತಿರುವ ಇಂದಿನ ದಿನಮಾನಗಳಲ್ಲಿ, ಮೃಡಗಿರಿಯ ಶ್ರೀಗಳ ಧಾರ್ಮಿಕ–ನೈತಿಕ–ಸಾಮಾಜಿಕ ಸೇವಾಕಾರ್ಯ, ಬಸವಾದಿ ಪ್ರಮಥರ ಕಾಯಕಸೇವೆಯ ಮುಂದುವರಿಕೆ. ಇದು ಇತರ ಅನೇಕ ಮಠ–ಪೀಠಗಳಿಗೆ ಮಾರ್ಗದರ್ಶಕ. ಗ್ರಾಮೀಣ ಅಭಿವೃದ್ಧಿ, ರೈತ ಬಂಧುಗಳ ಹಿತಾಸಕ್ತಿ, ಜಾತ್ರೆ, ಪ್ರದರ್ಶನ, ಶಿಬಿರಗಳ ಮೂಲಕ ರೂಪಿಸಿದ ಸಹೃದಯ ವಾತಾವರಣ ಅತ್ಯಂತ ಗಮನಾರ್ಹವಾದುದು. ನಿಷ್ಠೆಯಿಂದ ದುಡಿವ ತಮ್ಮ ಸಂಸ್ಥೆಗಳ ಅಧ್ಯಾಪಕ, ಶಿಕ್ಷಕ, ಸಿಬ್ಬಂದಿಯ 'ಸಹಕಾರ'ದಿಂದ ರಜತಮಹೋತ್ಸವ–ಇಪ್ಪತ್ತೈದು ಗ್ರಾಮ–ನಗರಗಳಲ್ಲಿ ನೆರವೇರಿದುದು ಅತ್ಯಂತ ಮಾದರಿಯದು. ಶ್ರೀಗಳ ಈ ಸಾಧನೆ ಅದೊಂದು 'ವಿರಾಮ ರಾಮಾಯಣ!'

ಪೂಜ್ಯ ಜಗದ್ಗುರುಗಳ 'ನಿರ್ಭೀತ ವ್ಯಕ್ತಿತ್ವ', 'ನಿರ್ದಿಷ್ಟ ಆದರ್ಶ', ಕಾರ್ಯ ಸಾಧನೆಯ ವ್ಯಾವಹಾರಿಕ ಚಾತುರ್ಯ ಅದಕ್ಕಿಂತ ಹೆಚ್ಚಾಗಿ "ಸತತ ಪರಿಶ್ರಮ", "ನಿರಂತರ ದುಡಿಮೆ", 'ಕ್ರಿಯಾಶೀಲ ಬದುಕು' ಅತ್ಯಂತ ಮಾನ್ಯವಾದುದು. ವೀರಶೈವ ಧರ್ಮದ ಪುರಾತನತೆ ಹಾಗೂ ಅದು ಬೆಳೆದು ಬಂದ ಬಗೆಗೆ, ಶ್ರೀಗಳು ಬರೆದ ಸಂಶೋಧನಾತ್ಮಕ ಲೇಖನಗಳು, ಹಲವರಲ್ಲಿ ವಿವಂಚನೆ ಮೂಡಿಸಿದರೂ, ಅವರ "ನಿರ್ಭೀತ ನಿಲವು" ಅತ್ಯಂತ ದಿಟ್ಟವಾದುದು. ವೀರಶೈವ ಸಮಾಜದ ಕೃತಕ ಪೀಡೆ ರೋಗವಾದ 'ಗುರು–ವಿರಕ್ತವಿರಸ' ಶ್ರೀಗಳಿಗೆ ಸಹಿಸಲಾರದ್ದು, ತಾತ್ವಿಕವಾಗಿ, ವ್ಯಾವಹಾರಿಕವಾಗಿ, ಅದು ಅರ್ಥಹೀನವೆಂಬ ಶ್ರೀಗಳು. ಶ್ರೀಶೈಲ ಜಗದ್ಗುರುಗಳು, ಶ್ರೀ ರಂಭಾಪುರಿ ಜಗದ್ಗುರುಗಳು, ಶ್ರೀ ಕಾಶಿ ಜಗದ್ಗುರುಗಳ 'ನಿಕಟ ಸಂಪರ್ಕ' ಹಾಗೂ 'ಸಮಾನ ಗೌರವ' ತತ್ವಗಳನ್ನು ಆಧರಿಸಿದ ಪೂಜ್ಯ ಜಗದ್ಗುರುಗಳ "ಧೀರ ನಿಲುಮೆ" ಆದರ್ಶಪ್ರಾಯ.

ಕಾಯಕನಿಷ್ಠರಾದ ಪೂಜ್ಯ ಜಗದ್ಗುರುಗಳು, ತಮ್ಮ ಜಂಗಮ ವೃತ್ತಿ, ಕಾಯಕ ಸೇವೆಗಳನ್ನು ನಿಷ್ಠೆಯಿಂದ ನೆರವೇರಿಸುವಂತೆ, ಸಮಾಜ ಕ್ಷೋಭೆಯಾದಾಗ, ಭಕ್ತರ ಮನೆಗಳಲ್ಲಿ ಸಂಘರ್ಷ ಮೂಡಿದಾಗ, ಶಿವಶರಣ ಸಾಹಿತ್ಯಕ್ಕೆ 'ಆಪೋಷ' ಬಂದಾಗ, ಕುಹಕಿಗಳು ಧರ್ಮ-ಸಮಾಜಘಾತುಕ ಅಸತ್ಯ ಸಂಗತಿಗಳನ್ನು, ಕುಬುದ್ಧಿ ಪ್ರೇರಿತರಾಗಿ, ಪ್ರಕಟಿಸಿದಾಗ, ಶ್ರೀಗಳ 'ಚಿನ್ಮಯ ಚೇತನ' ಸಿಡಿದೆದ್ದು, ಪ್ರತಿಭಟಿಸಿದ ಉದಾಹರಣೆಗಳು ಅನೇಕ. ವಾದಕ್ಕಿಳಿವುದು ಅನಿವಾರ್ಯವಾದಾಗ, 'ವಾದಿ ಭಯಂಕರ'ರೆಂಬಂತೆ ನಡೆದು ಕೊಂಡುದು ಐತಿಹಾಸಿಕ ದಾಖಲೆ.

ಅದೇ ರೀತಿ, ಎಲ್ಲ ಮಠ-ಮಂದಿರಗಳಲ್ಲಿ ನಡೆವ "ಜ್ಞಾನ ದಾಸೋಹ" "ವಿಚಾರ ಸಂಕಿರಣ"ಗಳ ನೇತೃತ್ವ ವಹಿಸುವ ಉದಾರ ಬುದ್ಧಿ ಶ್ರೀ ಶ್ರೀಗಳದು. ಉಳವಿ, ಬನವಾಸಿ, ಉಡುತಡಿ, ಸೊಲ್ಲಾಪುರಗಳಲ್ಲಿ ಸಂಘಟಿಸಿದ "ಶಿವಶರಣ ವಿಚಾರ ಸಂಕಿರಣ"ಗಳ ಭಾಷಣ-ಲೇಖನಗಳ ಸಂಗ್ರಹಗಳನ್ನು, ಪೂಜ್ಯರೇ ಸಂಪಾದಿಸಿ, ಅಧಿಕೃತ ಗ್ರಂಥಗಳನ್ನು ಸಮಾಜಕ್ಕೆ ನೀಡಿರುವುದು ಗಮನಾರ್ಹ. ರಜತ ಮಹೋತ್ಸವದ ಸಂಕೇತವಾಗಿ ಇಪ್ಪತ್ತೈದು ನಗರ-ಗ್ರಾಮ-ಮಠಗಳಲ್ಲಿ ವಿಶೇಷ ಧರ್ಮ-ಸಾಹಿತ್ಯ ಮಹೋತ್ಸವಗಳನ್ನು ಏರ್ಪಡಿಸಿದುದು ಶ್ರೀ ಶ್ರೀಗಳ 'ವಿನೂತನ ದೃಷ್ಟಿ'ಯ ಪ್ರತೀಕ. ಅಂತೆಯೇ, ಕವಿ-ಸಾಹಿತಿ-ಕಲಾವಿದ-ಸ್ವಾಮಿಗಳನ್ನು ಗೌರವಿಸುವ-ಪ್ರೇರೇಪಿಸುವ-ಆಶೀರ್ವದಿಸುವ ಪೂಜ್ಯರ ಉದಾರ ಹೃದಯದ 'ತನಿ ಬೆಳಕಿ'ನಲ್ಲಿ ಬೆಳೆದ ನನ್ನಂಥ ಚೇತನಗಳು ಅನೇಕ. ಈ "ಅನುಭಾವ" ಗ್ರಂಥ "ಲೇಖಕರ ಬಳಗ"ವೇ ಅದಕ್ಕೆ ಇನ್ನೊಂದು ನಿದರ್ಶನ. ಅಂತೆಯೇ "ಬಡವರ ಬಂಧು"ವೇ ಆದ ಶ್ರೀಗಳು ದಯಮಾಡಿಸದ ಹಳ್ಳಿಗಳಿಲ್ಲ. ಶ್ರೀಮಂತ ಹಾಗೂ ಬಡವರ ಮನೆಗಳಿಲ್ಲ, ಮಠ-ಮಂದಿರಗಳಿಲ್ಲ. ಹೀಗೆ **ಪೂಜ್ಯ ಜಗದ್ಗುರು ಅನ್ನದಾನ ಮಹಾಸ್ವಾಮಿಗಳ ಬದುಕು-ಬರಹ-ಕ್ರಿಯೆ-ಸಂಕಲ್ಪಗಳೆಲ್ಲ 'ಆಧುನಿಕ ಅನುಭಾವಿ'ಯೊಬ್ಬರ ದಿವ್ಯ ಜೀವನದ ರಜತ ಪುಟಗಳು. ಅವುಗಳ ಅಂಚೆಲ್ಲ ಸುವರ್ಣ ರೇಖೆಗಳಿಂದ ತುಂಬಿದೆ; ಅಮೃತ ಬೆಳಸು, ಅಮೃತ ಸೃಷ್ಟಿ, ಅಮೃತ ದೃಷ್ಟಿಯ ತ್ರಿಪುಟಿಯಿಂದ ಪುನೀತವಾಗಿದೆ, ಪುಣ್ಯ ಪ್ರಸಂಗವಾಗಿದೆ ಈ "ಅನುಭಾವಿ".**

ಭಕ್ತಿಕಂಪಿತ ಹೃದಯದಿಂದ, ಎರಡು ಕೈಗಳನ್ನು ಮೇಲಕ್ಕೆತ್ತಿ, ಹತ್ತು ಬೆರಳುಗಳನ್ನು ಜೋಡಿಸಿ, ಹಣೆಗೆ ಹಚ್ಚಿ ಶರಣು ಶರಣೆಂಬೆ ಅನುಭಾವಿ ಜಂಗಮಪುಂಗವಗೆ, ಅನುಭಾವ ಕೃತಿ ಸಂಪುಟಕ್ಕೆ, ಅನುಭಾವಿ ಸಹೃದಯ ಲೋಕಕ್ಕೆ ಶರಣು....ಶರಣು....ಶರಣಾರ್ಥಿ.

ಶಿವಪ್ರಸಾದ
ಕಲ್ಯಾಣನಗರ, ಧಾರವಾಡ-೭
ದಿ. ೨೨-೧-೯೮೫

—ಎಸ್. ಎಂ. ವೃಷಭೇಂದ್ರಸ್ವಾಮಿ
ನಿವೃತ್ತ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ-೩

ಸಂಪಾದಕೀಯ

ಆಧ್ಯಾತ್ಮದ ಆಗರವಾಗಿರುವ ಈ ನಾಡಿನಲ್ಲಿ ಧರ್ಮ ಪ್ರಚಾರ ಹಾಗೂ ರಕ್ಷಣೆಗಾಗಿ ಮಠ-ಮಾನ್ಯಗಳು ತಲೆ ಎತ್ತಿರುವದು ಸರ್ವವಿದಿತ ಸಂಗತಿಯಾಗಿದೆ. ಕಾಲ ಕಳೆದಂತೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡ ಮಠಗಳು, ಧರ್ಮ ರಕ್ಷಣೆಯ ಜೊತೆ ಜೊತೆಯಲ್ಲಿ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಚಟುವಟಿಕೆಗಳಿಗೆ ಸ್ಪಂದಿಸಿ ತಮ್ಮ ಕೀರ್ತಿಯ ದಿಗಂತವನ್ನು ವಿಸ್ತರಿಸಿಕೊಂಡಿವೆ. ಅದರಲ್ಲಿಯೂ ವಿರಕ್ತಮಠಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಅಗಾಧವಾದ ಹಾಗೂ ಅಪ್ರತಿಮವಾದ ಸೇವೆಯನ್ನು ಮಾಡಿವೆಯೆಂದ್ರು ಹೇಳಿದರೆ, ಅವುಗಳ ಬಗ್ಗೆ ಬಹಳ ಹೇಳಿದಂತೆ ಆಗುವದಿಲ್ಲ. ಗ್ರಾಮೀಣ ಭಾಗಗಳಲ್ಲಿ ಶಿಕ್ಷಣದಿಂದ ವಂಚಿತರಾದ ಬಡಮಕ್ಕಳಿಗೆ ಜ್ಞಾನದಾಸೋಹವನ್ನು ನೀಡುವವದಕ್ಕಾಗಿ ಅನೇಕ ಶಾಲೆ-ಕಾಲೇಜುಗಳನ್ನು ಆರಂಭಿಸಿ ಮಹದುಪಕಾರ ಮಾಡಿವೆ. ಪೂರಕವಾಗಿ ಶಾಲೆ-ಕಾಲೇಜುಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ ನಿಲಯ ಗಳನ್ನು ಪ್ರಾರಂಭಿಸಿ, ಬಡ ವಿದ್ಯಾರ್ಥಿಗಳ ಕಲ್ಯಾಣ ಬಯಸಿರುವದು ಹೆಗ್ಗಳಿಕೆಯಾಗಿದೆ. ಇಂಥ ಕೀರ್ತಿಗೆ ಪಾತ್ರವಾದ ಮಠಗಳೆಂದರೆ ಮೈಸೂರಿನ ಸುತ್ತೂರಮಠ, ತುಮಕೂರಿನ ಸಿದ್ಧಗಂಗಾಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಗದುಗಿನ ತೋಂಟದಾರ್ಯಮಠ ಮುಂತಾದವುಗಳ ಸಾಲಿನಲ್ಲಿ ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠವೂ ಒಂದಾಗಿದೆ.

"ಮಠದಿಂದ ಘಟವಲ್ಲ; ಘಟದಿಂದ ಮಠ" ಎಂಬ ಅಮೃತವಾಣಿಗೆ ಬೆಲೆಯನ್ನು ತಂದ ಶ್ರೇಯಸ್ಸು ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿ ಗಳವರಿಗೆ ಸಲ್ಲುತ್ತದೆ. ಕನ್ನಡ ನಾಡಿನ ಉದ್ದಗಲಕ್ಕೂ ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠದ ಹೆಸರು ಪಸರಿಸಿದ್ದರೆ, ಸರ್ವ ರೀತಿಯಿಂದ ಹಿಂದುಳಿದ ಈ ಮುಂಡರಗಿ ಭಾಗವು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಹಾಗೂ ಧಾರ್ಮಿಕವಾಗಿ ಪ್ರಗತಿ ಸಾಧಿಸಿದ್ದರೆ, ಅದಕ್ಕೆ ಕಾರಣೀಭೂತರು ಶ್ರೀ ಜಗದ್ಗುರು ಅನ್ನದಾನೇಶ್ವರ ಮಹಾಸ್ವಾಮಿಗಳವರು. ಪ್ರಸ್ತುತ ಸನ್ನಿಧಿಯವರು ಶ್ರೀಮಠದ ಇತಿಹಾಸದಲ್ಲಿ ಮರೆಯದ ಮೈಲುಗಲ್ಲು ಮಾತ್ರವಲ್ಲ, ಮುಂಡರಗಿಯ ಇತಿಹಾಸದಲ್ಲಿ ಸುವರ್ಣಯುಗದ ಹೆಬ್ಬಾಗಿಲು. ಲೌಕಿಕ ಮತ್ತು ಅಲೌಕಿಕ ದರ್ಶನಗಳ ಸುಂದರ ಸಮನ್ವಯವೇ ಈ ದಿವ್ಯಚೇತನ. ದಣಿವರಿಯದ ದುಡಿಮೆಯ ಜಗದ್ಗುರುಗಳು ಒಂದು ವ್ಯಕ್ತಿಯಲ್ಲ, ಮಹಾಶಕ್ತಿ. ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಜ್ಞಾನ, ಅಲ್ಲಮಪ್ರಭುವಿನ ವೈರಾಗ್ಯ, ಸಿದ್ಧರಾಮನ ಕರ್ಮಯೋಗ, ಅಕ್ಕನಾಗಮ್ಮನ ಅಂತಃಕರುಣೆ ಪೂಜ್ಯರಲ್ಲಿ ಸಮರ್ಪಕವಾಗಿ ಸಮರಸ ಗೊಂಡಿವೆ.

ಪೂಜ್ಯಪಾದರು ಶ್ರೀಮಠದ ಶೂನ್ಯಸಿಂಹಾಸನಾರೋಹಣ ಮಾಡಿ ಈಗ ಇಪ್ಪತ್ತೈದು ವರ್ಷಗಳು ಪೂರ್ಣಗೊಳ್ಳಲಿವೆ. ಮಹಾಸನ್ನಿಧಿಯವರು ತಮ್ಮ ಶಿವಮಯ ಕರ್ತೃತ್ವ ಶಕ್ತಿಯಿಂದ ಈ ಅವಧಿಯನ್ನು ಅರ್ಥಪೂರ್ಣವಾಗಿಸಿದ್ದಾರೆ; ಪಾವನಮಯವಾಗಿಸಿದ್ದಾರೆ. ಈ ಅವಧಿಯಲ್ಲಿ ಅವರು ಪೂರ್ಣಗೊಳಿಸಿದ ಸಾಧನೆಗಳಿಗೆ ಲೆಕ್ಕವಿಲ್ಲ, ಅವುಗಳ ಪಟ್ಟಿಯನ್ನು ಕೂಡಾ ಇಲ್ಲಿ ಕೊಡಲು ಸಾಧ್ಯವಿಲ್ಲ. ಜಗದ್ಗುರುಗಳ ಈ ಗಮನಾರ್ಹ ಸಾಧನೆಯನ್ನು ಗುರುತಿಸಿದ ಈ ಭಾಗದ ಭಕ್ತಸಮೂಹ ಅವರನ್ನು ಗೌರವಿಸಲು ಅವರ ಪಟ್ಟಾಭಿಷೇಕ ರಜತಮಹೋತ್ಸವವನ್ನು ಅರ್ಥಪೂರ್ಣವಾಗಿ ಹಾಗೂ ವೈಭವದಿಂದ ಆಚರಿಸಲು ನಿರ್ಧರಿಸಿತು.

ಈ ರಜತಮಹೋತ್ಸವವನ್ನು ಪೂಜ್ಯರು ತಮ್ಮ ಕೀರ್ತಿ-ವಾರ್ತೆಗಳ ಪ್ರಚಾರಕ್ಕಾಗಿ ಎಂದೂ ಬಳಸಿಕೊಂಡಿಲ್ಲ. ಇದರ ನೆಪದಲ್ಲಿ ಹಲವು ಹನ್ನೊಂದು ಜನಪರ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಪ್ರಾಮಾಣಿಕವಾಗಿ ಪೂರೈಸುವದರ ಮೂಲಕ ರಜತ ಮಹೋತ್ಸವದ ಉತ್ಸವಕ್ಕೆ ವಿಶೇಷ ಬೆಲೆಯನ್ನು ತಂದುಕೊಟ್ಟಿದ್ದಾರೆ. ಮಹಾಸನ್ನಿಧಿಯ ಘನತೆಗೆ ಒಪ್ಪುವಂತೆ, ಜಗದ್ಗುರುಗಳ ಸಂಕಲ್ಪದಂತೆ ಅನೇಕ ಮಹತ್ವದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಭಕ್ತರ ಬಯಕೆಯಂತೆ ಪೂಜ್ಯರ ರಜತಮಹೋತ್ಸವವನ್ನು ಈಗಾಗಲೆ ೨೫ಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಅರ್ಥಪೂರ್ಣವಾದ ರೀತಿಯಲ್ಲಿ ಮಾಡಿ ಮುಗಿಸಲಾಗಿದೆ. ಈ ಅವಧಿಯಲ್ಲಿ ಪೂಜ್ಯರ ಸದಾಶಯದಂತೆ ೨೫ ಗ್ರಂಥಗಳ ಪ್ರಕಟಣೆ. ಬಡ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ, ಪಂಡಿತರಿಗೆ ಹಾಗೂ ಸಾಹಿತಿಗಳಿಗೆ ಸನ್ಮಾನ, ಧರ್ಮಸಂಸ್ಕೃತಿ ಸಂವರ್ಧನ ಶಿಬಿರ, ಶಿವಾನುಭವ ತರಬೇತಿ ಶಿಬಿರ, ಆರೋಗ್ಯ ಶಿಬಿರ, ವಿಚಾರ ಸಂಕಿರಣಗಳು, ಗ್ರಂಥದಾನ, ಸಾಮೂಹಿಕ ವಿವಾಹಗಳು, ಜ್ಞಾನದೀಪೋತ್ಸವ ಮುಂತಾದ ಮಹತ್ತರವಾದ ಕಾರ್ಯಕ್ರಮಗಳು ಜನಪರವಾಗಿ ನಡೆದಿವೆ.

೧೯೯೫ರ ಫೆಬ್ರುವರಿಯಲ್ಲಿ ಮುಕ್ತಾಯಗೊಳ್ಳಲಿರುವ ಪೂಜ್ಯರ ರಜತೋತ್ಸವ ಸಂದರ್ಭದಲ್ಲಿ ಬರಗಾಲ ಪೀಡಿತವಾದ ಈ ಪ್ರದೇಶದಲ್ಲಿ ಅಲ್ಪಾವಧಿಯಲ್ಲಿ ಸುಮಾರು ೨೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣಗೊಂಡ ಕಲ್ಯಾಣಮಂಟಪದ ಉದ್ಘಾಟನೆ, ವಿದ್ಯಾಸಮಿತಿಯ ವಜ್ರಮಹೋತ್ಸವ ಸ್ಮರಣ ಸಂಚಿಕೆ ಬಿಡುಗಡೆ, ಗ್ರಂಥಮಾಲೆಯ ಶತಮಾನೋತ್ಸವ, ಸುಧಾರಿತ ಬೇಸಾಯಗೋಷ್ಠಿ, ಮಹಿಳಾಗೋಷ್ಠಿ, ಅನುಭಾವ ಗೋಷ್ಠಿ, ಸರ್ವಧರ್ಮಗೋಷ್ಠಿ, ಗಣ್ಯರಿಗೆ ಸನ್ಮಾನ, ಖಾಸಗಿ ಶಿಕ್ಷಣ ಸಂಸ್ಥೆಗಳ ವಿಚಾರಣ ಸಂಕಿರಣ, ವಿದ್ಯಾಸಮಿತಿಯ ಸಿಬ್ಬಂದಿಯವರಿಗೆ ಸಹಾಯಧನ ಯೋಜನೆ ಇಂತಹ ಹಲವಾರು ಹೆಮ್ಮೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇವುಗಳ ಸಾಲಿನಲ್ಲಿ ಪೂಜ್ಯರನ್ನು ಕುರಿತು ಒಂದು ಗೌರವ ಗ್ರಂಥ ಪ್ರಕಟಣೆಯು ಸೇರಿವೆ.

೧೯೬೭ರಲ್ಲಿ ಶ್ರೀಮಠದ ಉತ್ತರಾಧಿಕಾರಿಯಾಗಿ ವಟುಮಾಡಿಸಿದ ಪೂಜ್ಯರು ೧೯೭೦ರಲ್ಲಿ ಗುರುಗಳ ಅಗಲುವಿಕೆಯಲ್ಲಿಯೂ ಕರ್ತವ್ಯದಕ್ಷರಾಗಿ ನ್ಯಾಯುವ ವ್ಯಾಧಿಯಲ್ಲಿ

ಜರ್ಜರಿತವಾದ ಶ್ರೀಮಠದ ಜೀರ್ಣೋದ್ಧಾರವನ್ನು ಮಾಡಿದ್ದಾರೆ. ಅನೇಕ ಮಠಗಳ ನವೀಕರಣ ಮಾಡಿದ್ದಾರೆ: ಹಲವಾರು ನೂತನ ಮಠಗಳ ನಿರ್ಮಾಣ ಕೈಗೊಂಡಿದ್ದಾರೆ. ಸಿಂಗಟಾಲೂರಿನಲ್ಲಿ ಶಿವಾನುಭವಮಂಟಪ ರಚಿಸಿದ್ದಾರೆ. ಅನೇಕ ಪ್ರೌಢಶಾಲೆಗಳನ್ನು ಸ್ಥಾಪಿಸಿ, ಅವುಗಳಿಗೆ ಪೂರ್ಣ ಪ್ರಮಾಣದ ಕಟ್ಟಡಗಳನ್ನು ಒದಗಿಸಿದ್ದಾರೆ. ಒಂದು ಪದವಿ ಕಾಲೇಜು, ಒಂದು ತಾಂತ್ರಿಕ ಮಹಾವಿದ್ಯಾಲಯ, ಎರಡು ಪದವಿಪೂರ್ವ ಮಹಾ ವಿದ್ಯಾಲಯ, ಒಂದು ಆಂಗ್ಲ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿ, ಈ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿಯನ್ನು ಮಾಡಿದ್ದಾರೆ. ಬಡ ವಿದ್ಯಾರ್ಥಿಗಳಿಗೆ ಎಂಟು ಕಡೆಗೆ ಉಚಿತ ಪ್ರಸಾದ ನಿಲಯುಗಳನ್ನು ಆರಂಭಿಸಿ, ಬಡ ಮಕ್ಕಳ ಕಲ್ಪವೃಕ್ಷವಾಗಿದ್ದಾರೆ.

ಬೆರಳೆಣಿಕೆಯಲ್ಲಿರುವ ಸಾಹಿತಿ ಸ್ವಾಮಿಗಳಲ್ಲಿ ಅಗ್ರಸ್ಥಾನ ಪಡೆದ ಪೂಜ್ಯರು 'ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆ'ಯನ್ನು ಪ್ರಾರಂಭಿಸಿ ಆ ಮೂಲಕ ಗ್ರಂಥ ಗಳನ್ನು ಪ್ರಕಟಿಸಿ, ಅನೇಕ ಸಾಹಿತಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ ಪೂಜ್ಯರು ಸ್ವತಃ ಸಾಹಿತಿಗಳಾಗಿ ೩೫ ಕ್ಕಿಂತ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. "ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆ"ಯನ್ನು ಸ್ಥಾಪಿಸಿ, ಶರಣರ ತತ್ವಪ್ರಚಾರದಂತಹ ಪುಣ್ಯಪ್ರದ ಕಾರ್ಯಕ್ಕೆಗೊಂಡಿದ್ದಾರೆ. ಧರ್ಮವನ್ನೆ ನುಡಿಯುಬಲ್ಲ, ಧರ್ಮದಂತೆ ನಡೆಯುಬಲ್ಲ ಪೂಜ್ಯರು "ಧರ್ಮಭಾಸ್ಕರ" ಪ್ರಶಸ್ತಿ ಪಡೆದಿದ್ದಾರೆ. ಅಂತೆಯೇ ಅವರ ಭಕ್ತಸಮೂಹ ರಜತಮಹೋತ್ಸವವನ್ನು ಆಚರಿಸಿ, ಅದರ ಮುಕ್ತಾಯ ಸಮಾರಂಭದ ಸಂದರ್ಭದಲ್ಲಿ ಅವರ ಶಿವಮಯ ವ್ಯಕ್ತಿತ್ವ ಹಾಗೂ ಸಾಧನೆಗಳನ್ನು ಶಾಶ್ವತವಾಗಿ ಉಳಿಸಿಕೊಂಡು ಹೋಗಲು ಒಂದು ಬೃಹತ್ ಹಾಗೂ ಮಹತ್ ಕೃತಿಯನ್ನು ಹೊರತರಲು ನಿರ್ಧರಿಸಿತು. ಅದರ ಪ್ರತಿಫಲವೇ ಈ 'ಅನುಭಾವಿ' ಅಭಿನಂದನ ಗ್ರಂಥ.

ಜಗದ್ಗುರುಗಳ ಶಿವಮಯ ಜೀವನ ಹಾಗೂ ಸಾಧನೆಯನ್ನು ಪ್ರತಿಬಿಂಬಿಸುವ ಪೂಜ್ಯವಾದ ಗ್ರಂಥವೊಂದನ್ನು ಹೊರತರಲು ಭಕ್ತಮಂಡಳಿ ನಿರ್ಧರಿಸಿತಲ್ಲದೆ, ಅಭ್ಯಾಸಿ ಗಳಿಗೆ ಇದೊಂದು ಆಕರ ಗ್ರಂಥವಾಗಬೇಕೆಂಬ ಪೂಜ್ಯರ ಸದಿಚ್ಛೆಯಂತೆ ಸಂಪಾದಕ ಮಂಡಳಿ ಯೊಂದು ಕಾರ್ಯಪ್ರವೃತ್ತವಾಯಿತು. ಮಹಾಸನ್ನಿಧಿಯವರು ಸ್ವತಃ ಅನುಭಾವಿ ಗಳಾಗಿದ್ದು, ಅವರ ದಿವ್ಯತರವಾದ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತೆ ಅನುಭಾವಿ ಕೃತಿ ರೂಪಗೊಂಡಿದೆ. ಇದುವರೆಗೆ ರಚನೆಗೊಂಡಿರುವ ಗೌರವ ಗ್ರಂಥಗಳಿಗಿಂತ ಈ ಕೃತಿ ಭಿನ್ನವಾಗಿದೆ. ಪ್ರಾರಂಭದ ಭಾಗದಲ್ಲಿ ಮಹಾನುಭಾವಿಗಳ ದಿವ್ಯನಿಲವನ್ನು ದರ್ಶಿಸುವ ಪ್ರಯತ್ನ ಮಾಡಲಾಗಿದೆ. ಗುರುಬಸವಾರ್ಯರ 'ಸಪ್ತಕಾವ್ಯ'ಗಳ ವಿಶ್ಲೇಷಣೆ, ನಿಜಗುಣ ಶಿವಯೋಗಿಗಳ 'ಷಟ್‌ಶಾಸ್ತ್ರಗಳ ಪರಿಚಯ, 'ಮಹಲಿಂಗರಂಗರ' 'ಅನುಭವಾಮೃತ', ಚಿದಾನಂದವದೂತರ 'ಜ್ಞಾನಸಿಂಧು' ಸರ್ಪಭೂಷಣ ಶಿವಯೋಗಿಗಳ 'ಕೈವಲ್ಯಕಲ್ಪವಲ್ಲರಿ', ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯ 'ಶಿವಾನುಭವದರ್ಪಣ' ಬಾಲ ಲೀಲಾಮಹಾಂತರ ಕೈವಲ್ಯದರ್ಪಣ, ಮಡಿವಾಳಪ್ಪನವರ 'ಘನಮಠಾರ್ಯರ, ಶರೀಫರ,

ಹಾನಗಲ್ಲ ಪೂಜ್ಯರ, ತತ್ತ್ವಪದಗಳ ತಿರುಳನ್ನು ಒಂದೆಡೆಗೆ ಓದುಗರಿಗೆ ಪ್ರಾಪ್ತವಾಗುವಂತೆ ಸಂಗ್ರಹಿಸಿರುವದು ಈ ಕೃತಿಯ ವೈಶಿಷ್ಟ್ಯವಾಗಿದೆ. ಈ ಅನುಭಾವಿಗಳ ಸಾಲಿನಲ್ಲಿಯೇ ಸ್ವತಃ ಅನುಭಾವಿಗಳಾಗಿರುವ ಮೃಡಗಿರಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳ ಶಿವಮಯ ಸಾಹಿತ್ಯ ಹಾಗೂ ಬದುಕನ್ನು ವೈಗೂಡಿಸಿಕೊಂಡಿರುವ ಈ ಗ್ರಂಥ ಸಾಹಿತ್ಯ ಪ್ರಪಂಚದಲ್ಲಿ ಒಂದು ನೂತನ ದಾರಿಯನ್ನು ಆರಂಭಿಸಿತಲ್ಲದೆ, "ಅನುಭಾವಿ"-ಎಂಬ ತನ್ನ ಹೆಸರನ್ನು ಸಾರ್ಥಕಗೊಳಿಸಿಕೊಂಡಿವೆ.

ಭಕ್ತರ ಬಾಳಿಗೆ ಬೆಳಕನ್ನು ನೀಡುವ ಅನುಭಾವಿಗಳ ಅನುಭವಾಮೃತದ ತಿರುಳನ್ನು ಒಳಗೊಂಡಿರುವ ಪೂಜ್ಯನೀಯವಾದ ಈ ಗ್ರಂಥ ಜನಪರ ಗ್ರಂಥವಾಗುವಲ್ಲಿ ಯಾವ ಅನುಮಾನವೂ ಇಲ್ಲ. ಸಹೃದಯ ವಾಚಕರು ಈ ಗ್ರಂಥದ ಅಂತರಂಗದಲ್ಲಿರುವ ಅನುಭಾವಿಗಳ ಸಂದೇಶವನ್ನು ಅರಿತುಕೊಳ್ಳುವ ಜೊತೆಗೆ ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ತಮ್ಮ ಜೀವನವನ್ನು ಸುಖರೂಪಗೊಳಿಸಿಕೊಂಡರೆ ನಮ್ಮ ಶ್ರಮ ಸಾರ್ಥಕವಾಗುವದು. ನಮ್ಮ ವಿನಂತಿಯ ಮೇರೆಗೆ ಅನೇಕ ವಿದ್ವಾಂಸರು, ಖ್ಯಾತ ಲೇಖಕರು, ಸಾಹಿತಿ-ಸಂಶೋಧಕರು, ಕವಿಗಳು ಮುಂತಾದವರು ಪಾಂಡಿತ್ಯ ಪೂರ್ಣವಾದ ಲೇಖನಗಳನ್ನು ಕಳಿಸಿ ನಮ್ಮ ಗೌರವ ಗ್ರಂಥ ಕಳೆಯೇರುವಂತೆ ನೋಡಿಕೊಂಡಿದ್ದಾರೆ. ಅವರೆಲ್ಲರ ಸಹಕಾರ, ಪ್ರೋತ್ಸಾಹ, ಅವಿಸ್ಮರಣೀಯ ಹಾಗೂ ಅಭಿನಂದನೀಯ.

ಒಟ್ಟಿನಲ್ಲಿ ಈ ಗೌರವ ಗ್ರಂಥ ಮೃಡಗಿರಿಯ ಅನುಭಾವ ಶಿಖರ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳ ಶಿವಮಯ ಬದುಕು ಹಾಗೂ ಅನುಭಾವ ಸಾಹಿತ್ಯ, ಮತ್ತು ಇದುವರೆಗೆ ಅಪ್ರಕಟಿತ ಹಾಗೂ ಅಪ್ರಚಲಿತವಾದ ಅನುಭಾವ ಸಾಹಿತ್ಯವನ್ನು ಪ್ರತಿಬಿಂಬಿಸುವಲ್ಲಿ ಈ ಗ್ರಂಥ ಬಹುಮಟ್ಟಿಗೆ ಸಫಲವಾಗಿದೆ. ಮೃಡಗಿರಿಯ ಸರ್ವಾಂಗೀಣ ಅಭಿವೃದ್ಧಿಗೆ ಕಾರಣೀಭೂತರಾಗಿರುವ ಪರಮಪೂಜ್ಯ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳ ಪವಿತ್ರಚರಣಗಳಿಗೆ ಈ ಗೌರವ ಗ್ರಂಥವನ್ನು ಸಮರ್ಪಿಸಿ ಕೃತಕೃತ್ಯರಾಗೋಣ. ಪೂಜ್ಯ ಜಗದ್ಗುರುಗಳ ರಜತೋತ್ಸವ ಹಾಗೂ ವಿದ್ಯಾಸಮಿತಿಯ ವಜ್ರ ಮಹೋತ್ಸವದ ಸಂದರ್ಭದಲ್ಲಿ ಈ ಗ್ರಂಥ ಪ್ರಕಟಗೊಳ್ಳುವಲ್ಲಿ ಸೂಕ್ತ ಸಲಹೆ-ಸೂಚನೆಗಳನ್ನು ನೀಡಿದ ಸಮಸ್ತರಿಗೆ, ಲೇಖನಗಳನ್ನು ಬರೆದು ಕಳಿಸಿಕೊಟ್ಟು ಸಹಕರಿಸಿದ ಪಂಡಿತರಿಗೆ ಮಹಾಸನ್ನಿಧಿಯವರು ಕೃಪಾಶೀರ್ವಾದವನ್ನು ದಯಪಾಲಿಸಲೆಂದು ಹಾರೈಸಿ, ನಮ್ಮ ಈ ಸಂಪಾದಕೀಯ ಮಾತುಗಳಿಗೆ ಪೂರ್ಣವಿರಾಮ ಕೊಡುವೆವು.

—ಆರ್. ಎಲ್. ಪೋಲೀಸಪಾಟೀಲ

—ಬಿ. ಎಸ್. ಪಾಟೀಲ

ಅನುಭಾವಿಯ ಅಂತರಂಗ

ಅನುಬಂಧಗಳು

ಮೂಲ ಕರ್ತೃಗಳು



ಶ್ರೀ ಮ. ನಿ. ಪ್ರ. ಜಗದ್ಗುರು
ಶ್ರೀ ಅನ್ನದಾನೀಶ್ವರ ಮಹಾ ಶಿವಯೋಗಿಗಳು
ಸಂಸ್ಥಾನಮಠ, ಮುಂಡರಗಿ

ಸೊರಟೂರ ಅಜ್ಜನವರು



ಶ್ರೀ ಮ. ನಿ. ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು,
ಸಂಸ್ಥಾನಮಠ, ಮುಂಡರಗಿ (೮ನೇ ಪೀಠಾಧಿಪತಿಗಳು)



ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು,
ಸಂಸ್ಥಾನಮಠ, ಮುಂಡರಗಿ (೯ನೇ ಪೀಠಾಧ್ಯಕ್ಷರು)

ಅನುಭಾವಿಯ ಆರಾಧ್ಯದೈವ



ಶ್ರೀಮದ್ವೀರಶೈವ ಶಿವಯೋಗಮಂದಿರ ಹಾಗೂ ಅಖಿಲಭಾರತ
ವೀರಶೈವ ಮಹಾಸಭೆಯ ಸಂಸ್ಥಾಪಕರಾದ

ಶ್ರೀ ಮ. ನಿ. ಪ್ರ. ಹಾನಗಲ್ಲ ಕುಮಾರ ಸ್ವಾಮಿಗಳು

ಪೂಜ್ಯ ಗುರುವರ್ಯರಾದ



ಶ್ರೀ ಮ. ನಿ. ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು,
ಸಂಸ್ಥಾನಮಠ, ಮುಂಡರಗಿ (ದಶಮ ಪೀಠಾಧಿಪತಿಗಳು)



ಶ್ರೀಮಠದ ಕರ್ತೃ ಗದ್ದುಗೆಯ ನೋಟ

ಭಾಗ ಒಂದು

ಅನುಭಾವಿಗಳು

ಕನ್ನಡದಲ್ಲಿ ತತ್ವಪದಗಳು ಮತ್ತು ಅನುಭಾವ

—ಡಾ. ವ್ಹಿ. ಜಿ. ಪೂಜಾರ್

ಶರಣರ ವಚನಗಳಂತೆ, ಹರಿದಾಸರ ಕೀರ್ತನೆಗಳಂತೆ ಅನುಭಾವಿ ಕವಿಗಳ ತತ್ವ ಪದಗಳು ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿವೆ· ವಚನಗಳು, ಕೀರ್ತನೆಗಳು ನಿತ್ಯದ ಜನರಾಡುವ ಭಾಷೆಯಲ್ಲಿಯೇ ರಚನೆಗೊಂಡಂತೆ ಇವೂ ಸರಳವಾದ ಭಾಷೆಯಲ್ಲಿ ರಚನೆಗೊಂಡಂಥವು. ಈ ಮೂರು ಸಾಹಿತ್ಯ ಪ್ರಕಾರ ಗಳು ಜನ ಸಮ್ಮುಖ ಧೋರಣೆಯನ್ನು ಒಳಗೊಂಡರೂ ಇವುಗಳ ಒಳ ಹೂರಣ ಆಧ್ಯಾತ್ಮವೇ ಆಗಿದೆ. ತತ್ವಪದಗಳಂತೂ ಪರಮಾತ್ಮನ ಬಗೆಗೆ ಭಕ್ತತಾಳಿದ ಭಕ್ತಿ, ಶ್ರದ್ಧೆ, ಚಿಂತನ, ಧ್ಯಾನಾದಿ ಆಧ್ಯಾತ್ಮಿಕ, ಅನುಭಾವ ಬಗೆ ಬಗೆಯಾಗಿ ಜನಸಾಮಾನ್ಯರಿಗೆ ತಿಳಿಯುವಂತೆ ವರ್ಣಿತವಾಗಿರುವುದನ್ನು ಕಾಣುವೆವು. ಪರಮಾತ್ಮನ ಬಗೆಗಿನ ಅನುಭವ ಈ ಪದಗಳಲ್ಲಿ ವ್ಯಕ್ತಗೊಂಡುದರಿಂದ ಇವಕ್ಕೆ ಅನುಭಾವ ಪದಗಳೆಂದೂ, ಇವನ್ನು ಏಕದಾರಿಯಂತಹ ವಾದ್ಯದೊಂದಿಗೆ ಸ್ವರವೆತ್ತಿ ಹಾಡುವುದರಿಂದ ಇವಕ್ಕೆ ಸ್ವರವಚನ ಗಳೆಂದೂ, ಅಂತರಂಗದ ಅರಿವಿನ ಮೂಲಭೂತ ತತ್ವಗಳನ್ನು, ಆಧ್ಯಾತ್ಮಿಕ ತತ್ವಗಳನ್ನು ಇವು ಒಳಗೊಂಡುದರಿಂದ ಇವಕ್ಕೆ ತತ್ವಪದಗಳೆಂದೂ, ಇವನ್ನು ಜನಸಾಮಾನ್ಯರು ಭಜನಾ ಸಂದರ್ಭದಲ್ಲಿ ಹಾಡುವುದರಿಂದ ಇವಕ್ಕೆ ಭಜನೆಯ ಹಾಡುಗಳೆಂದೂ ಕರೆದು ದುಂಟು. ಒಟ್ಟಿನಲ್ಲಿ ಇವು ಪರಮಾತ್ಮನ ಸ್ವರೂಪವನ್ನು ಅರಿಯಲು ಸಹಾಯಕವಾಗು ವಂಥವು. ಭಕ್ತಿ ಸಾಧನೆಯಲ್ಲಿ ತೊಡಗಿದ ಜೀವಾತ್ಮನ ಅಂತರಂಗದ ಕರೆಯೇ ಇವುಗಳ ವಸ್ತು. ಭಕ್ತನ ಆತ್ಮಾನುಭವಕ್ಕೆ ಇವು ಸಂಬಂಧಿಸಿದುದರಿಂದ ಇವಕ್ಕೆ ಕೈವಲ್ಯಪದ ಗಳೆಂದೂ ಕರೆದಿದ್ದಾರೆ. ಇವನ್ನು ಕಟ್ಟಿ ಹಾಡಿದವರು ಶರಣ ಮಾರ್ಗಾವಲಂಬಿಗಳಾದ ಅನುಭಾವಿ ಕವಿಗಳು, ಮಠಾಧಿಪತಿಗಳು ಹಾಗೂ ಸಾಧು ಸಂತರು. ಕನ್ನಡದಲ್ಲಿ ಮೊಟ್ಟ ಮೊದಲು ಈ ಬಗೆಯ ಪದಗಳನ್ನು ಹನ್ನೆರಡನೆಯ ಶತಮಾನದ ಬಸವಾದಿ ಶರಣರೇ ಬರೆದವರಾದರೂ, ಅವರ ವಚನಗಳು ಪ್ರಚಾರಕ್ಕೆ ಬಂದಷ್ಟು ಇವು ಬರಲಿಲ್ಲ. ಬಹುಶಃ ಇದಕ್ಕೆ ಕಾರಣ ಇವು ತತ್ವ ಜಡತ್ವಗೊಂಡುದೂ ಹಾಗೂ ಗೇಯಾಂಶವನ್ನು ಒಳಗೊಳ್ಳದೆ ಇರುವುದೂ ಆದಂತಿವೆ. ಮುಂದೆ ನಿಜಗುಣ ಶಿವಯೋಗಿ ಈ ಬಗೆಯ ಪದಗಳನ್ನು ಬರೆದು, ಈ ಪದಗಳ ಪ್ರಕಾರಕ್ಕೆ ಆದ್ಯನೆನ್ನಿಸಿದ ಈತನ ತರುವಾಯ ೧೯ನೆಯ ಶತಮಾನದವರೆಗೂ ಅನೇಕ ಅನುಭಾವಿ ಕವಿಗಳು ಗಹನವಾದ ಆಧ್ಯಾತ್ಮ ತತ್ವಗಳು

ಜನತೆಗೆ ಸುಲಭವಾಗಿ ತಿಳಿಯುವಂತೆ ಅವರ ನಿತ್ಯದ ಅನುಭವಕ್ಕೆ ಬರುವ ವ್ಯಕ್ತಿ, ವಸ್ತು, ಪ್ರಾಣಿ ಹಾಗೂ ಪಕ್ಷಿಗಳ ಸಂಕೇತಗಳನ್ನು ಬಳಸಿ ಇವನ್ನು ರಚಿಸುತ್ತ ಬಂದುದನ್ನು ಅರಿಯುವೆವು. ಈ ಪದಗಳು ಜನತೆಯ ನಿತ್ಯದ ಜೀವನ ವಿವರಗಳನ್ನೇ ಮೇಲ್ನೋಟಕ್ಕೆ ಒಳಗೊಂಡಂತೆ ಕಂಡರೂ ಇವಕ್ಕೆ ಬೇರೊಂದು ಪಾರಮಾರ್ಥಿಕ ಅರ್ಥವೂ ಇರುತ್ತದೆ. ಇವನ್ನು ರಚಿಸಿದ ನಿಜಗುಣ ಶಿವಯೋಗಿಯ ತರುವಾಯದ ಪ್ರಮುಖ ಅನುಭಾವಿ ಕವಿಗಳೆಂದರೆ ಸಪ್ತಕಾವ್ಯದ ಗುರುಬಸವ (೧೪೩೦)ರು ನೂರೊಂದು ವಿರಕ್ತರಲ್ಲಿ ಒಬ್ಬರು. ನಿರ್ಲಕ್ಷಿಸಲ್ಪಟ್ಟ ಕವಿ ಮುಪ್ಪಿನ ಷಡಕ್ಷರಿ (೧೫೦೦), ಚಿದಾನಂದ ಅವಧೂತರು (೧೫೫೦), ರಾಂಪುರದ ಬಕ್ಕ ಪ್ರಭು (೧೭೫೦), ಸಾರವಾಡ ಚಿಕ್ಕಪ್ಪಯ್ಯ (೧೭೫೦), ಹಾಗಲವಾಡಿ ಮದ್ವೀರ ಸ್ವಾಮಿಗಳು (೧೭೫೦), ಶಂಕರಾನಂದರು (೧೭೮೦), ನೀರಲಕೇರಿ ಪಂಚಾಕ್ಷರಿ (೧೮೦೦), ಕೂಡಲೂರು ಬಸವಲಿಂಗ ಶರಣರು (೧೮೦೦), ಸರ್ಪಭೂಷಣ ಶಿವಯೋಗಿ (೧೮೨೫) ಮೈಲಾರ ಬಸವಲಿಂಗ ಶರಣರು (೧೮೨೫) ಬಾಲಲೀಲಾ ಮಹಾಂತ ಶಿವಯೋಗಿಗಳು (೧೮೫೦), ಕಡಕೋಳ ಮಡಿವಾಳಪ್ಪ (೧೮೫೦), ಶಿಶುನಾಳ ಶರೀಫ್ ಸಾಹೇಬ್ (೧೮೪೦) ಮುಂತಾದವರು. ಇವರೆಲ್ಲರ ತತ್ವಪದಗಳಲ್ಲಿ ಭಕ್ತಿ, ಜ್ಞಾನ, ವೈರಾಗ್ಯ, ಜೀವದ ಅನಿತ್ಯತೆ, ಮುಕ್ತಿಯ ಹಂಬಲ, ಅಧ್ಯಾತ್ಮ, ನೀತಿ, ಯೋಗವಿಚಾರ, ಸಮಾಜ ವಿಡಂಬನೆ ಬಂದಂತೆ ಅನುಭಾವವೂ ಪ್ರಮುಖವಾಗಿ ವ್ಯಕ್ತಗೊಂಡಿದೆ. ಇಲ್ಲಿ ಅನುಭಾವ ಎಂದರೇನು? ಎಂಬುದನ್ನು ಮೊದಲು ನೋಡಿ ಅನಂತರ ಇವರ ತತ್ವಪದಗಳಲ್ಲಿ ವ್ಯಕ್ತಗೊಂಡ ಅನುಭಾವದ ಸ್ವರೂಪ ಹಾಗೂ ಅದರ ಹಂತಗಳನ್ನು ಗುರುತಿಸಬಹುದು.

"ಅನುಭಾವವೆಂದರೆ ಜೀವಾತ್ಮ-ಪರಮಾತ್ಮರ ಏಕರಸತ್ವದ, ಶಿವ-ಜೀವರ ಐಕ್ಯದ ಲಿಂಗಾಂಗದ ಸಮರಸತ್ವದ ಅನುಭವ"[೧] ಅನುಭಾವವೆಂದರೆ ಇಂದ್ರಿಯ ಜನ್ಯವಾದಂಥದಲ್ಲ. ಲೋಕ ವಿಲಕ್ಷಣವಾದಂಥದು. ಮಾತು-ಮನಂಗಳಿಗೂ ನಿಲುಕದಂಥದು. ಅಂತರಂಗ ಸಂಬಂಧಿಯಾದ ಅದು ಕೇವಲ ಸಾಧಕರ ಅನುಭವಕ್ಕೆ ವೇದ್ಯವಾಗುವಂಥದು. ಅದರ ಸ್ವರೂಪವನ್ನು ಕೂಡಲೂರು ಬಸವಲಿಂಗ ಶರಣರು ತಮ್ಮ ತತ್ವಪದವೊಂದರಲ್ಲಿ ಹೀಗೆ ಬಣ್ಣಿಸಿದ್ದಾರೆ.

"ಕಾಣಬಾರದ ವಸ್ತು ಕಂಡೆನೊ ಗುರುರಾಯ
ಕಂಡ ಸುಖವ ಕೇಳಿದರೆ ಹೇಳಲಿಕ್ಕೆ ಬಾರದಯ್ಯ"[೨]

ಅದು

"ಕಾಲಿಲ್ಲದೆ ನಡೆವುದು ಕರವಿಲ್ಲದೆ ಹಿಡಿವುದು
ಗುಹ್ಯವಿಲ್ಲದೆ ಇಂದ್ರಿಯ ಸುಖಿಸುವುದು
ಮೈಯಲ್ಲಿ ಮುಸುಕಿತು ಮಲ ಮೂತ್ರ ಬಿಡಿಸಿತು
ಹುಯ್ಯಲಾಡುತ ಬಂದು ತಾನೆ ತಾನಾದದ್ದು"[೩]

ಅನುಭಾವ ಮೂಗ ಸಿಹಿ ತಿಂದಂತೆ. ತಿನ್ನುವಾಗ ಸಿಹಿಯ ಅನುಭವ ಆತನಿಗಾದರೂ ಅದನ್ನಾತನಿಗೆ ಬಿಡಿಸಿ ಹೇಳಲಿಕ್ಕೆಬಾರದು. ಬಾಹ್ಯ ಕುರುಹುಗಳಿಂದಲೂ ಆತ ತೋರಲಾರ. ಸಕ್ಕರೆ ಹೇಗಿದೆಯೆಂದರೆ ಸಿಹಿ ಇವೆಯೆಂದಷ್ಟೇ ಹೇಳಬಹುದು. ಸಿಹಿ ಹೇಗಿದೆಯೆಂಬು ದನ್ನು ತಿನ್ನದೇ ಹೇಳಲಿಕ್ಕೆಬಾರದು. ಅದನ್ನು ನಾಲಿಗೆಯ ಮೇಲಿಟ್ಟುಕೊಂಡಾಗಲೇ ನಮಗೆ ಸಿಹಿಯ ಅನುಭವವಾಗುವುದು. ಹೀಗೆಯೇ ಅನುಭಾವವೂ ಅನುಭವ ಜನ್ಯವೇ ಹೊರತು, ಬಾಯಿಯಿಂದ ಹೇಳುವಂಥದಲ್ಲ.

ಅನುಭಾವವು ಮಾನವನ ಬುದ್ಧಿಶಕ್ತಿ, ತರ್ಕ ಮತ್ತು ಪ್ರಯೋಗ ಪರೀಕ್ಷೆಗಳಿಗೆ ನಿಲುಕುವಂಥದಲ್ಲ. ಇವೆಲ್ಲಕ್ಕೆ ಒಂದು ಮಿತಿ ಇವೆ. ಇವು ಅಂತರಂಗದ ರಹಸ್ಯವನ್ನು ಬೇಧಿಸಲಾರವು. ಅಂತರಂಗದ ಅರಿವು ಆಗಬೇಕಾದರೆ ನಾವು ಸಾಧನೆಯಲ್ಲಿ ತೊಡಗ ಬೇಕು. ಆಗ ನಮ್ಮ ದೃಷ್ಟಿ ಅಂತರ್ಮುಖವಾಗುವುದು. ಅಂದರೆ ನಮ್ಮ ಒಳಗಣ್ಣು ತೆರೆಯುವುದು. ಆಗ ನಮಗೊಂದು ನೂತನ ಪ್ರಪಂಚ ಕಾಣಿಸುವುದು. ಪ್ರಯೋಗ, ಪರೀಕ್ಷೆ, ಬುದ್ಧಿ ಹಾಗೂ ತರ್ಕಗಳಿಗೆ ಹೊಳೆಯದ ಭಾವವೊಂದು ನಮ್ಮ ಹೃದಯವನ್ನು ಜಾಗ್ರತಗೊಳಿಸುವುದು. ಆ ಭಾವವೇ ಅನುಭಾವ "ಅದೊಂದು ಪ್ರತಿಭಾಶಕ್ತಿಯನ್ನು ಸೂಚಿಸುವ ಹಾಗೂ ಅದನ್ನು ಒಳಗೊಂಡ ಪರಮಾತ್ಮನ ಸಾಕ್ಷಾತ್ ದರ್ಶನವು"[೪] ಇದನ್ನು ಶರಣರು ನೆಲದ ಮರೆಯ ನಿಧಾನ, ಅಂತರಂಗದ ರತ್ನ, ಶಿಶು ಕಂಡ ಕನಸು,[೫] ಆತ್ಮ ವಿದ್ಯೆ[೬] ಆತ್ಮ–ಆತ್ಮಗಳ ಮಥನದಿಂದುದಿಸುವ ಜ್ಞಾನಾಗ್ನಿ[೭] ಎಂದೆಲ್ಲ ಕರೆದಿದ್ದಾರೆ. ಒಟ್ಟಿನಲ್ಲಿ ಅನುಭಾವವೆಂದರೆ ಅತೀಂದ್ರಿಯವೂ, ಅತಿಮಾನಸವೂ ಆದ ದಿವ್ಯಜ್ಞಾನವಾಗಿದೆ. ಇಂಥ ಜ್ಞಾನಿಗಳು ಹಾಡಿದ ಹಾಡುಗಳೇ ತತ್ವಪದಗಳು.

ಅನುಭಾವವು ಮೂಲತಃ ವ್ಯಕ್ತಿಯೊಬ್ಬನ ವೈಯಕ್ತಿಕ ಅನುಭವ ವಿಶೇಷವಾಗಿದೆ. ಆತ "ಬಾಹ್ಯ ಸೌಂದರ್ಯದ ಹಿಂದಿರುವ ಚಿರಂತನ ಸೌಂದರ್ಯವನ್ನು, ಈ ಜೀವನದ ಆಚೆಗಿರುವ ನಿರಂತರ ಎಚ್ಚರದ ಬೆಳಗನ್ನು ಎಲ್ಲೆಲ್ಲಿಯೂ ಕಂಡುಕೊಂಡು, ಅದರ ಕಂಪನಕ್ಕೆ ಅನುಗುಣವಾಗಿ ತನ್ನ ಹೃದಯದ ವೀಣೆಯನ್ನು ಮಿಡಿದಾಗ ಅದು ನಿಜವಾದ ಅರ್ಥದಲ್ಲಿ ಅನುಭಾವವಾಗುತ್ತದೆ. ಆ ನಿಲುವಿನಲ್ಲಿ ಹೊರ ಹೊಮ್ಮಿದ ಹೃದಯಗೀತೆ ಅನುಭಾವ ಸಾಹಿತ್ಯವಾಗಿ ಪರಿಣಮಿಸುತ್ತದೆ."[೮] ಈ ಬಗೆಯ ಸಾಹಿತ್ಯ ಕನ್ನಡದಲ್ಲಿ ವಿಪುಲವಾಗಿ ಬೆಳೆದು ಬಂದಿದೆ. ಅನುಭಾವಿ ಕವಿಗಳು ತಮಗಾದ ಅನುಭವವನ್ನು ಈ ಸಾಹಿತ್ಯ ರೂಪ ದಲ್ಲಿ, ತತ್ವಪದಗಳಲ್ಲಿ ಹಲವು ವಿಧದಲ್ಲಿ ವ್ಯಕ್ತಪಡಿಸಿದ್ದಾರೆ. ಅವರು ವ್ಯಕ್ತಪಡಿಸಿದ ಅನುಭಾವದ ಸ್ವರೂಪವನ್ನು ಇಲ್ಲಿ ೧) ಆತ್ಮನ ಮೊರೆ-ಪ್ರಾರ್ಥನೆ, ಸಾಧನೆ, ೨) ಸತಿ-ಪತಿ ಭಾವದ ಅನುಭಾವ ೩) ಜೀವಾತ್ಮ–ಪರಮಾತ್ಮರ ಐಕ್ಯ–ಎಂದು ಮೂರು ಹಂತಗಳಲ್ಲಿ ವಿಭಜಿಸಿ ಗುರುತಿಸಲು ಯತ್ನಿಸಲಾಗಿದೆ.

ಅನುಭಾವಿ ಸಾಧಕಾವಸ್ಥೆಯ ಪ್ರಾರಂಭದಲ್ಲಿ ಪರಮಾತ್ಮನ ಸರ್ವಾಂತರ್ಯಾಮಿ ವ್ಯಕ್ತಿತ್ವಕ್ಕೆ (omnipresence personality) ಮಾರು ಹೋಗಿ ಆತನ ಸ್ವರೂಪ

ಜ್ಞಾನವನ್ನು ಮಾಡಿಕೊಳ್ಳಲು ತವಕಪಡುವನು. ಆತನ ಸಾನ್ನಿಧ್ಯದ ಅನುಭವ ಪಡೆಯಲು ನಾನಾ ವಿಧವಾಗಿ ಆತನನ್ನು ಭಜಿಸುವನು, ಪ್ರಾರ್ಥಿಸುವನು, ಮೊರೆ ಇಡುವನು. ಇಂಥ ಸಾಧಕನ ಕರೆ-ಮೊರೆ ಜಗತ್ತಿನ ಎಲ್ಲಾ ಅನುಭಾವ ಸಾಹಿತ್ಯದಲ್ಲೂ ವ್ಯಕ್ತಗೊಂಡುದನ್ನು ಕಾಣುವೆವು. "ಅಸತೋಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ" ಎಂಬ ಉಪನಿಷತ್ತಿನ ನುಡಿಗಳಲ್ಲೂ ಸಾಧಕನ ಮೊರೆ ಇರುವುದನ್ನು ಗುರುತಿಸಬಹುದು. ಸಾಧಕನ ಮನೋಸ್ಥಿತಿ ಯನ್ನು ಬಿಂಬಿಸುವ ಇಂಥ ಪ್ರಾರ್ಥನಾರೂಪದ ಪದಗಳು ಅನುಭಾವದ ಮೊದಲ ಮೆಟ್ಟಿಲುಗಳಾಗಿವೆ. ಇದನ್ನೇರಿಕೊಂಡೇ ಸಾಧಕ ಅನುಭಾವ ಮಾರ್ಗದಲ್ಲಿ ಮುನ್ನಡೆಯ ಬೇಕು. ಅನುಭಾವ ಮಾರ್ಗದಲ್ಲಿ ನಡೆಯಲು ಮೊದಲು ಆತನ ಮನಸ್ಸು ದೃಢಗೊಳ್ಳ ಬೇಕು. ಮನಸ್ಸಿನ ದೃಢತೆಯೇ ಎಲ್ಲ ಸಾಧನೆಗಳಿಗೆ ಮೂಲ. ನಿಜಗುಣ ಶಿವಯೋಗಿ ತನ್ನ ತತ್ವಪದವೊಂದರಲ್ಲಿ ಮನಸ್ಸನ್ನು ಕೋಗಿಲೆಗೆ ಹೋಲಿಸಿದುದನ್ನಿಲ್ಲಿ ನೋಡ ಬಹುದು.

"ಕೋಗಿಲೆ ಚೆಲ್ವ ಕೋಗಿಲೆ ಮುದ್ದ
ಕೋಗಿಲೆ, ಜಾಣ ಕೋಗಿಲೆ ||ಪ||
ಹಿಂದೆ ತಪದೊಳೀಶನೊಂದಿರುತಿರುಲೆಚ್ಚು
ಬೆಂದ ಕಾಮನ ಬಿಟ್ಟು ಕೋಗಿಲೆ
ಬಂದು ಬೇಗದಿ ಬಾಲೇಂದುಧರನ ಕೂಡಿ
ಕುಂದದೆ ನೀ ಬಾಳು ಕೋಗಿಲೆ"[೯]

ಲೋಕದ ಕಷ್ಟಕಾರ್ಪಣ್ಯಗಳಿಗೆ ಮೂಲ ಕಾರಣವಾದ ಕಾಮನೆಗಳನ್ನು ತ್ಯಜಿಸಿ ಶಿವಭಾವ ವನ್ನು ಪಡೆಯುವಂತೆ ಮನವೆಂಬ ಕೋಗಿಲೆಗೆ ತಿಳಿಸುತ್ತದೆ—ಈ ತತ್ವಪದ. ಸರ್ಪಭೂಷಣ ಶಿವಯೋಗಿಗಳೂ ಇದೇ ಭಾವವನ್ನು ತಮ್ಮ ತತ್ವಪದವೊಂದರಲ್ಲಿ ವ್ಯಕ್ತಪಡಿಸಿದ್ದಾರೆ:

"ಮನವೆಂಬ ಮರ್ಕಟನ ತಡೆಯಲಾರೆನು ದೇವ
ಎನಿತಿದರ ಚಪಲ ಚೇಷ್ಟೆಗಳ ವರ್ಣಿಸಲಿ"[೧೦]

ಮನಸ್ಸು ಹಲವು ಕೊಂಬೆಗಳಿಗೆ ಹಾರುವ ಮರ್ಕಟವಾದರೆ ಸಾಧನೆ ಹೇಗೆ? ಎಂದು ಚಿಂತಿಸುವುದರ ಮೂಲಕ ಸರ್ಪಭೂಷಣರು ಮನಸ್ಸನ್ನು ಸ್ತಿಮಿತದಲ್ಲಿಟ್ಟುಕೊಳ್ಳಬೇಕೆಂದು ಪರೋಕ್ಷವಾಗಿ ಎಚ್ಚರಿಸಿದ್ದಾರೆ. ಅನುಭಾವ ಸಾಧನೆಗೆ ದೃಢ ಮನಸ್ಸು ಅಗತ್ಯವಾದಂತೆ ದೇಹದ ಪರಿಶುದ್ಧಿಯೂ ಅಗತ್ಯ. ದೇಹವು ಅನುಭಾವವೆಂಬ ಅಡಿಗೆಯನ್ನು ಸಿದ್ಧಪಡಿಸಲು ಗಡಿಗೆಯಾಗಬೇಕೆಂಬುದನ್ನು ಸರ್ಪಭೂಷಣರು ತಮ್ಮ ತತ್ವಪದವೊಂದರಲ್ಲಿ ಹೇಳಿದುದ ನ್ನಿಲ್ಲಿ ನೋಡಬಹುದು.

"ಅನುಭಾವದಡಿಗೆಯ ಮಾಡಿ ಅದ
ಕನುಭಾವಿಗಳು ಬಂದು ನೀವೆಲ್ಲ ಕೂಡಿ ||ಪ||

ತನುವೆಂಬ ಭಾಂಡವ ತೊಳೆದು। ಕೆಟ್ಟ
ಮನದ ಜಂಜಡವೆಂಬ ಮುಸುರೆಯು ಕಳೆದು
ಘನವೆಂಬ ಮನೆಯುನೆ ಬಳಿದು। ಅಲ್ಲಿ
ಬಿನುಗು ತ್ರಿಗುನವೆಂಬ ಒಳಗುಂಡು ತೊಳೆದು॥"೧೧

ಅನುಭಾವದಡಿಗೆಯನ್ನು ದೇಹವೆಂಬ ಗಡಿಗೆಯುಲ್ಲಿ ಮಾಡುವ ಕ್ರಿಯೆ ರೂಪಕಯುಕ್ತವಾದ ಈ ತತ್ವಪದದಲ್ಲಿ ಅರ್ಥಪೂರ್ಣವಾಗಿ ನಡೆದಿದೆ. ದೇಹವಿಡಿದೇ ಅದರ ಮೂಲಕವೇ ನಾವು ಅನುಭಾವವನ್ನು ಸಾಧಿಸಬೇಕು ಎಂಬುದನ್ನು ಈ ಪದ ಸಾಂಕೇತಿಕಾರ್ಥದಲ್ಲಿ ಹಿಡಿದಿಟ್ಟಿದೆ. ನಿಂಬರಗಿ ಮಹಾರಾಜರು ತಮ್ಮ ಪದವೊಂದರಲ್ಲಿ ನೆಲ್ಲನ್ನು ಕುಟ್ಟಿ ಅಡುಗೆ ಮಾಡುವ ಕ್ರಿಯೆಯನ್ನು ಆಧ್ಯಾತ್ಮ ಸಾಧನೆಯ ರೂಪಕವನ್ನಾಗಿ ಮಾಡಿಕೊಂಡುದನ್ನಿಲ್ಲಿ ನೋಡಬಹುದು.

"ನೆಲ್ಲು ಕುಟ್ಟೊಣ ಬಾರವ್ವಾ। ಇಬ್ಬರೂ ಕೂಡಿ ॥ಪ॥
ನೆಲ್ಲು ಕುಟ್ಟೊಣ ಬಾರೆ।
ತನುವೆಂಬ ಒಳ್ಳವ ಮಾಡಿ। ಪ್ರಾಣವೆಂಬ
ಒನಕಿಲೆ ಹೇರು ಹಾಕಿ।
ವಿವೇಕವೆಂಬ ಅಕ್ಕಿ ಹಸನ ಮಾಡಿ
ಹಳ್ಳ ತಗಿಯಮ್ಮ ಜ್ಞಾನ ದೃಷ್ಟಿಲೆ ನೋಡಿ ॥೧॥
ವಾಸನತ್ರಯುಗಳೆಂಬ। ಒಲೆಗುಂಡು ಮಾಡಿ
ಪ್ರಾರಬ್ಧ ಗಡಿಗೆ ಹೇರಿ॥
ಕಾಮಕ್ರೋಧವೆಂಬ ಕಟ್ಟಿಗೆ ಉರಿಮಾಡಿ
ಪ್ರಚಂಡ ಪಾರಮಾರ್ಥ ಒಳಹೊರಗೆ ನೋಡಿ ॥೨॥
ಕುದಿಯುವ ಸಮಯುದಲ್ಲಿ ಮದದ ಉಕ್ಕು
ಮೀರಿ ಬರುತದಲಮ್ಮ
ಸತ್ವಧೀರ ಎಂಬ ಹುಟ್ಟಿಲೆ ಹೊಡೆದು
ನೆಟ್ಟಗೆ ಅಡಿಗೆಯು ಧಿಟ್ಟಾಗಿ ಮಾಡಮ್ಮ"೧೨ ॥೩॥

ಅನುಭಾವದಡಿಗೆಯು ಮಾಡುವ ಕ್ರಿಯೆ ಇಲ್ಲಿ ಸೊಗಸಾಗಿ ಚಿತ್ರಣಗೊಂಡಿದೆ. ಈ ಪದ ಅಂತರಂಗ ಸಾಧನೆಗೆ ಕನ್ನಡಿ ಹಿಡಿಯುತ್ತದೆ. ಅಂತರಂಗದಲ್ಲಿ ನಡೆಯಬೇಕಾದ ಕ್ರಿಯೆಗಳನ್ನು ಬಹಿರಂಗಕ್ಕೆ ತಂದು ಲೌಕಿಕ ರೀತಿಯ ಸಾದೃಶ್ಯಗಳನ್ನೆಲ್ಲ ಕೊಟ್ಟುದು ಪರಿಣಾಮಕಾರಿಯಾಗಿದೆ. ಸಾಧಕನು ಅನುಭಾವ ಸಾಧನೆಯನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಇದು ತಿಳಿಸುತ್ತದೆ. ಕಡಕೋಳ ಮಡಿವಾಳಪ್ಪನು ಇಂಥದೇ ತತ್ವಪದವೊಂದನ್ನು ರಚಿಸಿದ್ದು, ಅದರಲ್ಲಿ ದೇಹವನ್ನು ಗಡಿಗಿಗೆ ಅನುಭಾವವನ್ನು ಅಡಿಗೆಗೆ ಹೋಲಿಸಿದ್ದಾನೆ. ಮುಂದುವರಿದು ಆತ ಅನುಭಾವದಡಿಗೆಯನ್ನು ಮಾಡಲು ಕರ್ಮವೆಂಬ

ಜೋಳ ಬೀಸಿ ಧರ್ಮವೆಂಬ ಜರಡಿಯಿಂದ ಹಿಟ್ಟು ಸಾಣಿಸಿ ಅದರಲ್ಲಿ ನಿರ್ಮಳಾತ್ಮ ನೀರು ಹಾಕಿ ನಾದಬೇಕು. ನಾದಿ ಸಂಚಿತ ಕರ್ಮದ ಹೆಂಚನ್ನು ತೊಳೆದು ಹಂಚಿನಿಂದ ಜ್ಞಾನದ ಅಗ್ನಿ ಉರಿಸಿ ಸಂಚಿನಿಂದ ಪರರೊಟ್ಟಿ ಬೇಯಿಸಬೇಕೆನ್ನುತ್ತಾನೆ[೧೨]

ಶಿಶುನಾಳ ಶರೀಫ್ ಸಾಹೇಬನ ತತ್ವ ಪದಗಳಲ್ಲಿ ಜೀವನ ಮತ್ತು ಆಧ್ಯಾತ್ಮ ಹಾಸುಹೊಕ್ಕಾಗಿ ಬೆರೆತಿವೆ. ದೈನಂದಿನ ಬದುಕಿನ ಎಲ್ಲ ಅನುಭವಗಳನ್ನು ಸಾಂಕೇತಿಕವಾಗಿ ಆಧ್ಯಾತ್ಮದ ನೆಲೆಗೆ ಏರಿಸಿದ ಸಾಧನೆ ಆತನ ಪದಗಳಲ್ಲಿದೆ. ಆತನೊಬ್ಬ ಜನಪ್ರಿಯ ಅನುಭಾವಿ ಕವಿ. ಆತ ತನ್ನ ಪದಗಳಲ್ಲಿ ಏನೇ ಹೇಳಿದರೂ ಅವುಗಳಲ್ಲಿ ಅನುಭಾವ ಅಡಕಗೊಂಡಿರುವುದನ್ನು ಗುರುತಿಸಬಹುದು.

"ಹಾವು ತುಳಿದೇನೆ ಮಾನಿನಿ। ಮಾನಿನಿ।
ಹಾವು ತುಳಿದೇನೆ"[೧೪] ||ಪ||

ಹಾವು ಇಲ್ಲಿ ಮಾಯೆಯ ಪ್ರತೀಕವೂ, ಸಂಸಾರದ ಸಂಕೇತವೂ ಆಗಿದೆ. ಆತ ಸಂಸಾರವೆಂಬ ಹಾವು ತುಳಿದೂ ಕಚ್ಚಿಸಿಕೊಳ್ಳದೆ ಪಾರಾದ ಅನುಭವವನ್ನು ಇಲ್ಲಿ ಅನುಭಾವದ ನೆಲೆಗೇರಿಸಿ ಹಾಡಿದ್ದಾನೆ. ಜೀವನದಲ್ಲಿ ಬರುವ, ಸಹಜವಾಗಿ ನಡೆದು ಹೋಗುವ ಪ್ರತಿಯೊಂದು ಘಟನೆಗಳೂ ಆತನ ಪದಗಳಿಗೆ ವಸ್ತುವಾಗಿ ಆಧ್ಯಾತ್ಮದ ವಿಶೇಷಾರ್ಥ ಪಡೆದಿವೆ. ಗಂಡನ ಮನೆಗೆ ಹೋಗಲು ಸಿದ್ಧಳಾಗಿ ನಿಂತ ಹೆಣ್ಣೊಬ್ಬಳ ಅಣ್ಣನ ಸ್ಥಾನದಲ್ಲಿ ನಿಂತು ಶರೀಫ್ ಹೀಗೆ ಹಾಡುತ್ತಾನೆ.

"ಅಳಬ್ಯಾಡ ತಂಗಿ ಅಳಬ್ಯಾಡ। ನಿನ್ನ
ಕಳುಹ ಬಂದವರೆಲ್ಲ ಉಳುಹಿ ಕೊಂಬುವರೇನೆ॥"[೧೫]

ಈ ಪದದಲ್ಲಿನ ಸಂಗತಿ ನಿತ್ಯ ನಡೆಯುವಂಥದೇ. ಈ ಪ್ರಪಂಚದಲ್ಲಿ ಯಾರು ಯಾರನ್ನು ಉಳಿಸಿಕೊಳ್ಳಲಾರರು ಎಂಬ ತನ್ನ ನಿಜ ನೆಲೆಯ ಅರಿವಿರುವ ಅನುಭಾವಿಯೊಬ್ಬನ ಅನುಭಾವವನ್ನು ಈ ಪದ ಒಳಗೊಂಡಿದೆ. "ವಿವಾಹವಾದ ಹೆಣ್ಣು ಮೊದಲ ಸಲ ಅತ್ತೆಯ ಮನೆಗೆ ಹೋಗುವ ಭಾವಮಯವಾದ ಸನ್ನಿವೇಶವನ್ನು ಬಳಸಿ ಬರೆದ ಈ ಪದ್ಯ ಬೇರೆ ಒಂದು ಅರ್ಥಕ್ಕೆ ಹಬ್ಬುವುದನ್ನೂ ಕಾಣಬಹುದು. ವಿಡಿಕ್ಯಾಡಿ ಮದಿವ್ಯಾದಿ ಹುಡುಕಾಡಿ ಮಾಯದ ಮರವೇರಿದಿ ಎಂಬೆಲ್ಲ ಮಾತುಗಳು ಜೀವ ತಾನಾಗಿ ಭೋಗಕ್ಕೆ, ಮಾಯೆಗೆ ಒಲಿದದ್ದನ್ನು ಸೂಚಿಸುತ್ತವೆ. ತವರುಮನೆ ಜೀವದ ನಿಜ ನೆಲೆಗೆ ರೂಪಕವಾಗುತ್ತದೆ"[೧೬] ಶರೀಫನ ಕೈಯಲ್ಲಿ ಎಂಥ ಸಾಮಾನ್ಯ ವಿಷಯಗಳೂ ಹಾಡಾಗಿವೆ. ವಿಶೇಷಾರ್ಥ ಪಡೆದು ನೂತನ ಆಯಾಮ ಪಡೆದುಕೊಂಡಿವೆ. ಮಳೆ ಬಂದಾಗ ಮನೆ ಸೋರುವುದೇನೂ ವಿಶೇಷವಲ್ಲ ಆದರೆ ಶರೀಫ್‌ನ ಹಾಡಿನಲ್ಲಿ ಅದು ವಿಶೇಷಾರ್ಥ ಪಡೆದುಕೊಂಡು ಸಾರವಿಲ್ಲದ ಈ ಬದುಕಿಗೆ ಪ್ರತೀಕವಾಗಿ ನಿಂತುದನ್ನಿಲ್ಲಿ ಕಾಣಬಹುದು.

ಸೋರುತಿಹುದು ಮನೆಯ ಮಾಳಿಗಿ। ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗಿ। ದಾರುಗಟ್ಟಿ ಮಾಳ್ಪರಿಲ್ಲ॥

ಮುರುಕು ತೊಲೆಯು ಹುಳುಕು ಜಂತಿ
ಕೊರೆದು ಸುರಿದು ಕೀಲ ಸಡಲಿ
ಹರಕು ಚಪ್ಪರ ಜೇರ ಗಿಂಡಿ
ಮೇಲಕೇರಿ ಮೆತ್ತಲಾರದೆ"೧೭

ಹುಳುಕು ತೊಲೆ ಮುರುಕು ಜಂತಿಗಳಂತಿರುವ ಇಂದ್ರಿಯಗಳನ್ನು ಹಿಡಿತದಲಿಟ್ಟು ಕೊಂಡಾಗಲೇ ದೇಹವೆಂಬ ಮನೆ ಭದ್ರವಾಗುತ್ತದೆ ಬದುಕು ಅರ್ಥಪೂರ್ಣವಾಗುತ್ತದೆ, ಎನ್ನುವ ಆತನ ಮಾತು ಅಲೌಕಿಕ ಅನುಭವದತ್ತ ಬೆರಳು ಮಾಡಿ ತೋರುವುದು. ಇಂಥ ಭಾವವನ್ನು ಸಾಮಾನ್ಯವಾಗಿ ಆತನ ಎಲ್ಲ ಹಾಡುಗಳಲ್ಲೂ ಕಾಣುವೆವು. ಆತ ನುಡಿದುದೆಲ್ಲ ಅನುಭಾವವೇ. ದೇಹವನ್ನು ತಂಬೂರಿಗೆ, ಗುಡಿಗೆ ಹೋಲಿಸಿ ರಚಿಸಿದ ಈತನ ತತ್ವಪದಗಳಲ್ಲಿ ಅನುಭಾವದ ಎತ್ತರವನ್ನು ಕಾಣುವೆವು. ಈತನಂತೆಯೇ ಊರೂರು ಅಲೆದು ತತ್ವಪದಗಳನ್ನು ರಚಿಸಿದವರೆಂದರೆ ಘನ ಮಠದ ನಾಗಭೂಷಣ ಶಿವಯೋಗಿಗಳು ಇವರ ತತ್ವಪದವೊಂದು ಹೀಗಿದೆ.

"ಹೊತ್ತಿರಲಿಕೆ ಊರಿಗೆ ಸೇರೋದಾರಿ
ಕತ್ತಲೆಯೊಳಗರುಪುವರಾರೋ ||ಪ||
ಮೂರು ಬೆಟ್ಟಗಳ ಯುಕ್ತಿಲಿ ದಾಟೊ ಅಲ್ಲಿ
ದಾರಿ ತಪ್ಪಿದರೆ ಪುಲಿಯ ಕಾಟೊ
ಆರು ಮಂದಿ ಕಳ್ಳರಿರುವ ಮಾಟೊ ಮಹಾ
ಧೀರತ್ವದಿಂದಲಾಚೆಗೆ ದಾಟೊ
ಉಡಬಲದಲಿ ವಿವರಿಸಿ ನೋಡೊ ನಟ್ಟ
ನಡುದಾರಿ ಹಿಡಿದು ಮುಂದಕ್ಕೆ ನೋಡೊ
ಅಡವಿ ಹಬ್ಬಗಳ ಬಯಕೆ ಬೇಡೊ ಗಡ
ಗಡ ಪೋಗಿ ಘನ ಮಠೇಶನ ಕೂಡೊ||೧೮

ಜೀವ ವಿಕಾಸಗೊಳ್ಳುತ್ತ ಮೇಲು-ಮೇಲಕೇರಲು ಹಿಡಿಯಬೇಕಾದ ಮಾರ್ಗ ವನ್ನು ಈ ಪದ ತಾತ್ವಿಕಾರ್ಥದಲ್ಲಿ ಸೂಚಿಸಿದೆ. ಜೀವಾತ್ಮನು ಸಾಧನಾ ಮಾರ್ಗದಲ್ಲಿ ಮುನ್ನಡೆದಾಗ ಎದುರಾಗುವ ಅಡ್ಡಿ ಆತಂಕಗಳನ್ನು ಧೈರ್ಯದಿಂದ ಎದುರಿಸಿ ಆತ ಪರಶಿವ ನಲ್ಲಿ ಬೆರೆಯುವ ಬಗೆಯನ್ನು ಈ ಪದ ಬೆಡಗಿನ ರೂಪದಲ್ಲಿ ಹಿಡಿದಿಟ್ಟಿದೆ. ಜೀವವನ್ನು ಉದ್ದೇಶಿಸಿ ಹೇಳಿದ ಅನುಭಾವ ಈ ಪದದಲ್ಲಿದೆ.

ಆಧ್ಯಾತ್ಮ ಸಾಧನೆಯಲ್ಲಿ ತೊಡಗಿದ ಅನುಭಾವಿ ಕವಿಗಳು ತಮ್ಮ ಅನೇಕ ತತ್ವಪದ ಗಳಲ್ಲಿ ತಾವು ಸತಿಯೆಂದು ಪರಮಾತ್ಮನು ಪತಿಯೆಂದು ಬಗೆದು ವರ್ಣಿಸಿದ್ದಾರೆ. ಲೌಕಿಕ ರೀತಿಯ ಪ್ರೀತಿ, ಪ್ರಣಯ, ಸತಿ-ಪತಿಗಳ ದಾಂಪತ್ಯ ಜೀವನದ ವಿವಿಧ ಕ್ರಿಯೆಗಳು ಅವರ

ಅನೇಕ ಪದಗಳಲ್ಲಿ ವರ್ಣನೆಗೊಂಡದ್ದುಂಟು. ಅನುಭಾವಿ ಕವಿಗಳು ಸದಾ ಪರಮಾತ್ಮನ ಧ್ಯಾನದಲ್ಲಿಯೇ ಇರುವಂಥವರು ಪ್ರಣಯಿಗಳ ಸರಸ, ಪ್ರೀತಿಯ ಒಡನಾಟಗಳು ಅವರ ಪದಗಳಲ್ಲಿ ಎಡೆ ಪಡೆದಿವೆ. ಮೇಲ್ನೋಟಕ್ಕೆ ರತಿ ಭಾವನೆಯನ್ನು ಉಕ್ಕಿಸುವ ಈ ಪದ ಗಳ ಅಂತರಾಳ ಸತಿ–ಪತಿ ಭಾವದ ಅನುಭಾವವೇ ಆಗಿದೆ. ನಿಜಗುಣ ಶಿವಯೋಗಿಗಳು ತಾವು ಶಂಭುಲಿಂಗನ ಪ್ರೇಯಸಿಯಾಗಿ ಹಾಡಿದ ತತ್ವಪದವೊಂದು ಹೀಗಿದೆ:

"ಸತಿ ಸಮತಿಯೊಳೊಲಿಸಿ ಮೆಚ್ಚಿಸಿದನೊಮ್ಮೆ
ತೊಲಗಿದಿನಿಯಳು ಧ್ಯಾನಿಸುವಂತೆ||
ನೆಲಸಿ ತತ್ವಾನುಭಾವನೆಯನ್ನು ಮನದೊಳು
ಚಲಿಸದೋಲಿಸು ಭಾವಜ ಭಂಗ
ವಿಲಸಿತ ವಿಮಲಾಂಗ| ಸುಲಭನೆ ಶಂಭುಲಿಂಗ
ಬೇಗ ಕರುಣಿಸು||"೧೯

ನಿಜಗುಣರು ಪ್ರೇಯಸಿಯಾಗಿ ಶಂಭುಲಿಂಗನಲ್ಲಿ ತತ್ವಾನುಭಾವನೆಯನ್ನು ತಮ್ಮಲ್ಲಿ ನೆಲೆ ಗೊಳಿಸಬೇಕೆಂದು ಪ್ರಾರ್ಥಿಸುವರು. ಅವರ ಈ ಕೆಳಗಿನ ತತ್ವಪದವೊಂದರ ಸಾಲುಗಳಲ್ಲಿ ಸತಿ–ಪತಿ ಭಾವದ ಭಕ್ತಿಯ ಉನ್ನತ ಸ್ತರವನ್ನು ಕಾಣುವವು.

"ಶರಣಸತಿಯ ಮದುವೆಯ ಸಂಭ್ರಮವನ್ನು। ನೋಡಿರಮ್ಮ।
ಪರಮಾನಂದ ಪಯೋನಿಧಿಯೊಳಗೋಲಾಡಿರಮ್ಮ||"೨೦

ನೀರಲಕೇರಿ ಪಂಚಾಕ್ಷರಿ ತನ್ನ ಗುರುವನ್ನೇ ಪತಿಯಾಗಿಸಿಕೊಂಡುದನ್ನು ಆತನ ಈ ಕೆಳಗಿನ ಪದದಿಂದ ತಿಳಿಯಬಹುದು.

ಎಂಥಾತ ಗುರುನಾಥನೋ ಬಹ
ಳಂತಃ ಕರಣುಳ್ಳಾತನೋ।
ಕಾಂತೆ ನೀ ಬಾರೆಂದು ಏಕಾಂತದೊಳು। ಕರೆದು
ಎಂಥ ಮಾತ್ಹೇಳಿದನೋ। ಸದ್ಗುರುರಾಯ
ಎಂಥ ಮಾತ್ಹೇಳಿದನೋ।೨೧

ಸತಿಪತಿ ಭಾವದನುಭಾವವು ಕೂಡಲೂರು ಬಸವಲಿಂಗ ಶರಣರ ತತ್ವಪದಗಳಲ್ಲಿ ಪರಿಣಾಮಕಾರಿಯಾಗಿ ಬರುವುದನ್ನು ಕಾಣುವೆವು. ಅವರು ತಮ್ಮೊಂದು ಪದದಲ್ಲಿ ಹೀಗೆ ಹೇಳಿದ್ದಾರೆ:

"ಎಂಥ ಶ್ರೀಮಂತನ ಮಾಡಿಕೊಂಡೆನವ್ವ
ಸಂತೋಷದಿಂದ ಸುಖ ಪಟ್ಟೆನವ್ವ
ಚಿಂತೆಯೆಲ್ಲ ಅಳಿದು ಬಿಟ್ಟನವ್ವ
ಇಂಥ ಪಂಥುಳ್ಳ ಪುರುಷ ಈತನವ್ವ"೨೨

ಭಕ್ತ ತಾನು ಸತಿಯಾಗಿ ಭಗವಂತನನ್ನು ಪತಿಯಾಗಿ ಭಾವಿಸಿ ನುಡಿಯುವ ನುಡಿ, ನಡೆಯುವ ನಡೆ ಲೋಕ ವಿಲಕ್ಷಣವಾಗಿರುತ್ತದೆ, ವಿಶಿಷ್ಟವಾಗಿರುತ್ತದೆ. ಇದೊಂದು ಬಗೆಯ ಮಧುರ ಭಕ್ತಿಯ ಪರಿಯಾಗಿದೆ. ಬಸವಲಿಂಗರು ಲೌಕಿಕದ ಮೋಹದ ಸರಸದ ಅನೇಕ ಉದಾಹರಣೆಗಳನ್ನು ಬಳಸಿ ಅಲೌಕಿಕ ಸೌಂದರ್ಯವನ್ನು ಆತ್ಮಿಕ ಚೆಲುವನ್ನು ತಮ್ಮ ಪದಗಳಲ್ಲಿ ಹೊರ ಹೊಮ್ಮಿಸಿದ್ದಾರೆ. ಪರಮಾತ್ಮ ಪತಿಯೊಡನೆ ಕೂಡುವ ಅಗಲುವ ಕ್ರಿಯೆಗಳು ಲೌಕಿಕರ ಕಣ್ಣಿಗೆ ಪ್ರೀತಿ-ಪ್ರಣಯ ವಿರಹಗಳಾಗಿ ಕಾಣುತ್ತವೆ. ಪರಮಾತ್ಮ ಪತಿಯ ಪ್ರೀತಿಯನ್ನು ಅತಿಯಾಗಿ ಹಚ್ಚಿಕೊಂಡ ಭಕ್ತ ಸತಿಗಳಾದ ಕೂಡಲೂರು ಬಸವಲಿಂಗರು ಅಲೌಕಿಕ ವಿರಹದ ದಳ್ಳುರಿಯಲ್ಲಿ ಬೇಯುವ ಪರಿಯಂತೂ ಅನ್ಯಾದೃಶವಾದ ರೀತಿಯಲ್ಲಿ ಚಿತ್ರಣಗೊಂಡುದನ್ನಿಲ್ಲಿ ಕಾಣಬಹುದು.

"ಮರೆಯಲಾರೆ ನಾನು ಅವನ
ಮರುಳು ಮಾಡಿ ಪೋದನಮ್ಮ
ಇರುಳು ಹಗಲು ನಿದ್ರೆ ಕಾಣೆ
ಕರೆದು ತಾರೆ ಮೋಹದ ಜಾಣೆ"೨೩

ಎಂದು ಆತನಿಗಾಗಿ ಹಂಬಲಿಸುವರು. ಆತ ಸಿಕ್ಕೊಡನೆ ಏನು ಮಾಡಿದ ಎಂಬುದನ್ನು ತಮ್ಮ ಪದವೊಂದರಲ್ಲಿ ಹೀಗೆ ವರ್ಣಿಸಿದ್ದಾರೆ.

"ಅರಿಯದಂಥ ಮೂಗುತಿಟ್ಟ
ಸೀರೆ ಸೆಳೆದು ಮುದ್ದು ಕೊಟ್ಟ
ಚೆಲುವ ಕೂಡಲೂರೇಶ ನಮ್ಮ
ಕುಲವ ಕೆಡಿಸಿ ಹೀಗೆ ಮಾಡಿ ಬಿಟ್ಟ"೨೪

ಲೌಕಿಕ ರೀತಿಯ ದಂಪತಿಗಳ ಪ್ರಣಯ ವ್ಯಾಪಾರದ ಚಿತ್ರವನ್ನಿಲ್ಲಿ ಬಸವಲಿಂಗರು ಚಿತ್ರವತ್ತಾಗಿ ಚಿತ್ರಿಸಿದ್ದಾರೆ. ಮೈಲಾರ ಬಸವಲಿಂಗ ಶರಣರ, ಹಾಗಲವಾಡಿ ಮುದ್ವೀರ ಸ್ವಾಮಿಗಳ ಹಾಗೂ ಕಡಕೋಳ ಮಡಿವಾಳಪ್ಪನ ಪದಗಳಲ್ಲೂ ಸತಿ–ಪತಿ ಭಾವದ ಅನುಭಾವವು ತೀವ್ರತರವಾಗಿ ಬರುವುದನ್ನು ಕಾಣುವೆವು. ಶಿಶುನಾಳ ಶರೀಫನ ಪದಗಳಲ್ಲಂತೂ ಈ ಬಗೆಯ ಅನುಭಾವ ಪರಾಕಾಷ್ಠೆ ತಲುಪಿದುದನ್ನು ಕಾಣುವೆವು. ಸತಿ–ಪತಿಗಳ ಶೃಂಗಾರ ಚೇಷ್ಟೆಗಳ ಚಿತ್ರಣ ಇವರೆಲ್ಲರ ಹಾಡುಗಳಲ್ಲಿ ಸೌಮ್ಯ ರೀತಿಯಲ್ಲಿ ಬಂದರೆ, ಶರೀಫ್‌ನ ಪದಗಳಲ್ಲಿ ಈತನಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಪತಿ–ಸತಿಯರನ್ನು ಅಂಕಿತದಲ್ಲಿರಿಸಿಕೊಂಡುವದನ್ನು ಭಕ್ತ ಸತಿಯಳ ಚಂಚಲತೆಯನ್ನು ಹೋಗಲಾಡಿಸಿ ಆಕೆಯನ್ನು ಆಧ್ಯಾತ್ಮ ಸಾಧನೆಯಲ್ಲಿ ತೊಡಗಿಸಿದುದನ್ನು ಸಾಮಾನ್ಯರಿಗೆ ಪರಿಣಾಮಕಾರಿಯಾಗಿ ತಿಳಿಯುವ ಹಾಗೆ ಹೇಳಿದುದನ್ನು ಕಾಣುವೆವು

"ಎಲ್ಲರಂಥವನಲ್ಲ ನನ ಗಂಡಾ
ಬಲ್ಲಿದನು ಪುಂಡ

ಎಲ್ಲರಂಥವನಲ್ಲ ನನಗಂಡಾ ಕೇಳೆ
ಸೊಲ್ಲು ಸೊಲ್ಲಿಗೆ ಬೈದು ನನ್ನ
ಎಲ್ಲಿಗ್ಹೋಗದ್ಹಾಂಗ ಮಾಡಿಟ್ಟಾ
ಕಾಲ್ಮುರಿದು ಬಿಟ್ಟ
ಎಲ್ಲರಂಥವನಲ್ಲ ನನ್ನ ಗಂಡ"೨೫

ಪತಿಯ ಪ್ರೀತಿಯನ್ನು ಸಂಪಾದಿಸಿದವಳೊಬ್ಬಳು ತನ್ನ ಗೆಳತಿಗೆ ಆತ್ಮೀಯವಾಗಿ ಹೇಳುವ ಪರಿ ಇಲ್ಲಿ ಮೇಲ್ನೋಟಕ್ಕೆ ಕಂಡರೂ ಒಳ ಅರ್ಥ ಬೇರೆಯೇ ಇದೆ. ಭಕ್ತ ಸತಿಯ ಲೌಕಿಕ ಬದುಕಿನ ಚಂಚಲತೆಯ ಕಾಲನ್ನು ಪರಮಾತ್ಮ ಪತಿ ಮುರಿದು ಆಧ್ಯಾತ್ಮ ಸಾಧನೆಯಲ್ಲಿ ತೊಡಗಿಸಿದ ಸಂಗತಿ ಇಲ್ಲಿ ಸಾಂಕೇತಿಕಾರ್ಥದಲ್ಲಿ ಸಮಾವೇಶಗೊಂಡಿದೆ. ಆಧ್ಯಾತ್ಮ ಸಾಧನೆಯಲ್ಲಿ ತೊಡಗಿಸಿದ ಲಿಂಗಪತಿಯ ಅನುಗ್ರಹ ತನಗಾಯಿತೆಂದು ಶರೀಫ್‌ರು ಇಲ್ಲಿ ಲೌಕಿಕತ ಮಾತಿನಲ್ಲಿ ಪರಿಣಾಮಕಾರಿಯಾಗಿ ಹೇಳಿದ್ದಾರೆ.

ಸತಿ–ಪತಿ ಭಾವದ ಮುಂದಿನ ಹಂತವೇ ಜೀವಾತ್ಮ–ಪರಮಾತ್ಮರ ಐಕ್ಯ ಅಥವಾ ಭಕ್ತ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದಾಗಿದೆ. ಅನುಭಾವಿ ಕವಿಗಳು ಪರಮಾತ್ಮನ ಸಾಕ್ಷಾತ್ಕಾರದ ಅನುಭವದಿಂದ ಆನಂದ ತುಂದಿಲರಾಗಿ ಹಾಡಿದ ತತ್ವ ಪದಗಳಂತೂ ಕನ್ನಡದಲ್ಲಿ ಹೇರಳವಾಗಿ ಸಿಗುತ್ತವೆ. "ಅನುಭಾವಿ ಕವಿಗಳು ಒಂದರ್ಥದಲ್ಲಿ ಧಾರ್ಮಿಕ ಸಾಧಕರು, ಮುಮುಕ್ಷುಗಳು. ಅನುಭಾವ ಮಾರ್ಗದಲ್ಲಿ ಮುನ್ನಡೆದವರು. ಅವರು ಪಡೆಯುವ ಅನುಭಾವ ಆನಂದದ ನಿಲುವು ಅನುಪಮವಾದುದು. ಮಾತು ಮನಂಗಳಿಗೆ ನಿಲುಕದಂಥದು. ನಾರದ ಭಕ್ತಿ ಸೂತ್ರ ಹೇಳುವಂತೆ 'ಮೂಕಂ ಸ್ವಾದನವತ್' ಮೂಕನು ರುಚಿ ನೋಡಿದಂತೆ"೨೬ ಪರಮಾತ್ಮ ಸಾಕ್ಷಾತ್ಕಾರದ ಇಂಥ ಅನುಭಾವವನ್ನು ಅನುಭಾವಿಗಳು ತಮ್ಮ ಪದಗಳಲ್ಲಿ ವಿಧವಿಧವಾಗಿ ಬಣ್ಣಿಸಿದ್ದಾರೆ. ನಿಜಗುಣರು ಅದನ್ನು 'ವಿಮಲ ಪರಂಜ್ಯೋತಿ' ಎಂದು ಕರೆದರೆ ಚಿದಾನಂದ ಅವಧೂತರು 'ಮುತ್ತು' ಎಂದು ಕರೆದಿದ್ದಾರೆ. ಅದಂಥ ಮುತ್ತು ಎಂಬುದನ್ನಿಲ್ಲಿ ನೋಡಬಹುದು.

"ಮುತ್ತು ಬಂದಿದೆ ಕೊಳ್ಳಿರಣ್ಣಾ । ಅದಕೆ
ಎಜ್ಜಿಲ್ಲಾ ಏನಿಲ್ಲಾ ಬೆಲೆಯಾಗದಣ್ಣಾ
ಥಳ ಥಳ ಹೊಳೆಯುತದಣ್ಣಾ । ಅದು
ಬಲ್ಲ ಜಾಣರಿಗೆ ಬಯಲೊಳಗಣ್ಣಾ ॥
ಅದು ಕೂದಲ ಎಳೆಗಿಂತ ಸಣ್ಣಾ ಅದು
ಬಣ್ಣ ಬಣ್ಣದ ಬ್ರಹ್ಮ ಲೋಕಣ್ಣಾ ॥"೨೭

ಅನುಭಾವಿಗಳ ದೃಷ್ಟಿಯಲ್ಲಿ ಅನುಭಾವವು ಬ್ರಹ್ಮವೇ ಆಗಿದೆ. ಪರಬ್ರಹ್ಮನ ಅನುಭವವಾದಾಗ ಅವರು ಅತಿಶಯವಾದ ಆನಂದವನ್ನು ಪಡೆಯುವರು. ಶಂಕರಾನಂದರು, ಹಾಗಲ್ವಾಡಿ ಮುದ್ವೀರಸ್ವಾಮಿಗಳು ಅನುಭಾವವನ್ನು ರತ್ನವೆಂದು ಕರೆದಿದ್ದಾರೆ.

ಆ ರತ್ನವನಾರೂ ಕದಿಯರು, ಅದು ಪೃಥ್ವಿಯಲ್ಲಿ ಅಧಿಕವಾದುದು. ಮದ್ವೀರಸ್ವಾಮಿಗಳು ತಮಗೆ ಎಲ್ಲೆಲ್ಲೂ ಅದೇ ಕಾಣುವುದೆನ್ನುವರು.

"ಸರಸಿಜಾನನೆ ಕೇಳೊಂದು ರತ್ನವನು ಕಂಡೆ
ಪರಿಕಿಸಲಸದಳವೆ
ಒಂದು ರೂಪಾಗಿ ಕಾಣುತಲಿಹುದು
ಮುಂದೆ ಮೂವಿಧವಾಗಿ ಶೋಭಿಸುತಿಹುದಿ
ರಂದವ ತಿಳಿದನುಗನಿಪ ಕೋವಿದರಾರು?
ಹಲವು ಬಣ್ಣಗಳಾಂತು ಸುಳಿದಾಡುತಿಹುದು
ಘಳಿಲನುಲಿವುತಿಹುದು
ಕಲವಲವಾಗಿಹುದಮಲ ಶ್ರೀಗುರು ಸಂಗ
ನೊಲುಮೆಯ ಶರಣ ಜನಕ್ಕೆ ಚೋದ್ಯತರವಲ್ಲ"।೨೮

ಅನುಭಾವ ಸುಖವನ್ನನುಭವಿಸಿದ ನಾಗಲಿಂಗಜ್ಜರು ತಮ್ಮ ತತ್ವಪದವೊಂದರಲ್ಲಿ ಅದನ್ನು ಹೀಗೆ ಬಣ್ಣಿಸಿರುವರು.

"ಆನಂದವಾದ ಚಿದ್ಘನ ವಸ್ತು ನಾ ಕಂಡೆ
ಭಾನುವಿಲ್ಲದ ಬಿಸಿಲೇನಮ್ಮಾ
ನಡು ನೀರ ಮಧ್ಯದಿ ವಟವೃಕ್ಷ ನಾ ಕಂಡೆ
ಹೂವಿಲ್ಲ ಮಿಡಿಗಾಡಿ ಹಣ್ಣಮ್ಮಾ
ಅಖಂಡ ವನದೊಳು ಅಮೃತ ಕೊಡ ಉಕ್ಕಿ
ಉಂಡುಂಡು ಸುಖಿಸಿ ಬಾಳುವೆನಮ್ಮ"೨೯

ಅನುಭಾವ ಸುಖವನ್ನು ಅನುಭವಿಸಿದ ಪರಿ ಇಲ್ಲಿ ಬೆಡಗಿನ ರೂಪದಲ್ಲಿದೆ. ನಿಂಬರಗಿ ಮಹಾರಾಜರು ಅನುಭಾವವು ಕಲ್ಲುಸಕ್ಕರೆಗಿಂತ ಸಿಹಿಯಾದುದೆನ್ನುವರು. "ಕೂಡಲೂರು ಬಸವಲಿಂಗ ಶರಣರ ಹಾಡುಗಳು ಅನುಭಾವ, ಸತ್ವ, ಸೌಂದರ್ಯಗಳ ದೃಷ್ಟಿಯಿಂದ ಬಹಳ ಮೇಲ್ಮಟ್ಟದವುಗಳಾಗಿವೆ. ಜನರ ಆಡುನುಡಿಯಲ್ಲಿ ಪರತತ್ವದ, ಆಧ್ಯಾತ್ಮದ, ಆತ್ಮಾನುಭೂತಿಯ ವಿವರಣೆ ಸಹಜ ಸುಂದರವಾಗಿದೆ. ಜನ ಜೀವನದಿಂದ ಅತಿ ಸಾಮಾನ್ಯ ವಿಷಯ, ಘಟನೆಗಳನ್ನು ಎತ್ತಿಕೊಂಡು ಅನುಭಾವವನ್ನು ಅಭಿವ್ಯಕ್ತಗೊಳಿಸುವಲ್ಲಿ ಅವರ ಕಾವ್ಯದ ಸತ್ವ ಸೌಂದರ್ಯಗಳ ದರ್ಶನವಾಗುತ್ತದೆ. ಸಾಮಾನ್ಯ ಜನರ ನಿತ್ಯ ಬಳಕೆಯ ವಿಷಯಗಳು, ವಸ್ತುಗಳು ಅವರ ಅಂತರಂಗದಲ್ಲಿ ಮಿಂದು ಕಾವ್ಯ ವಸನವನ್ನುಟ್ಟು ಅನುಭಾವದ ನಾಲಿಗೆ ಪಡೆಯುತ್ತವೆ"೩೦ ಯೆಂಬ ಶಾಂತರಸರ ನುಡಿ ದಿಟವಾದುದಾಗಿದೆ. ಅನುಭಾವವು ಒಂದು ವಿಧದ ಹುಚ್ಚೇ ಆಗಿದೆ. ಅನುಭಾವಿಯು ಅನುಭಾವ ಸುಖವನ್ನನುಭವಿಸುತ್ತ ಪರಾಕಾಷ್ಠೆ ತಲುಪಿದಾಗ ಲೌಕಿಕರ ದೃಷ್ಟಿಗೆ ಹುಚ್ಚನಂತೆಯೇ ಕಾಣುವನು. ಆತನ ಇರವನ್ನು ಬಸವಲಿಂಗ ಶರಣರು ತಮ್ಮೊಂದು ಪದವಲ್ಲಿ ಹೀಗೆ ವರ್ಣಿಸಿದ್ದಾರೆ.

"ಎಂಥ ಹುಚ್ಚು ಹಿಡಿದಿತ ಈತಗ
ಕಟ್ಟಿದ ಗ್ವಾಡೆಯು ಕೆಡವುತಾನ
ಉಟ್ಟ ಅರಿವಿ ಹರಿವುತಾನ
ಹೊಟ್ಟೆ ತುಂಬ ಉಂಡು ಇನ್ನು
ಹುಟ್ಟು ಮುರಿದು ಬಿಟ್ಟಾತನಮ್ಮ"[೩೧]

ಜೀವಾತ್ಮ-ಪರಮಾತ್ಮನಲ್ಲಿ ಐಕ್ಯವಾಗುವ ಸ್ಥಿತಿಯನ್ನು ತಲುಪಿದಾಗ ಹೀಗಾಗುವುದು, ಎಂಬರ್ಥ ಈ ಪದದ ಹಿನ್ನೆಲೆಗೆ ಇದೆ. ತನ್ನನ್ನು ತಾನು ಪೂರ್ಣ ಅರಿತಾಗ ತಾನೇ ದೇವನಾಗುವನು ಆಗ ಈ ಪ್ರಪ್ರಂಚಪೆಲ್ಲ ತಾನೇ ತಾನಾಗಿ ಬಿಡುವನು ಎಲ್ಲೆಲ್ಲೂ ತಾನೇ ವ್ಯಾಪಿಸಿ ಬಿಡುತ್ತಾನೆಂಬುದನ್ನು ಕಡಕೋಳ ಮಡಿವಾಳಪ್ಪನವರು ತಮ್ಮ ತತ್ವ ಪದವೊಂದಲ್ಲಿ ಹೀಗೆ ಹೇಳಿದ್ದಾರೆ.

"ತನ್ನ ತಾನು ತಿಳಿದ ಮೇಲೆ ಇನ್ನೇನಿನ್ನೇನೊ।
ತನ್ನಂತೆ ಸರ್ವರ ಜೀವ ಮನ್ನಿಸಿ ಮೂಕಾದ ಮೇಲೆ॥
ತಾನೇ ಪೃಥ್ವಿ ಅಪ್ಪು ತೇಜ ತಾನೆ ವಾಯು ಆಕಾಶಾತ್ಮ।
ತಾನೇ ಸೂರ್ಯ ಚಂದ್ರ ತಾರೆ ತಾನೆ ಬ್ರಹ್ಮಾಂಡಾದ ಮೇಲೆ॥
ತಾನೇ ಘ್ರಾಣ ಜಿಹ್ವೆ ನೇತ್ರ ತಾನೆ ತ್ವಕ್ಕು ಶ್ರೋತ ಹೃದಯ।
ತಾನೆ ಕಾಯ ಕರಣ ಹರಣ ತಾನೆ ಪಿಂಡಾಂಡಾದ ಮೇಲೆ॥

....

ತಾನೆ ನೀನು ನೀನು ತಾನು ತಾನೆ ಅಲ್ಲ ತಾನೆ ಇಲ್ಲ
ತಾನೆ ಮಹಾಂತ ತಾನೆ ತಾನು ಏನೊ ಏನೊಂದಾದ ಮೇಲೆ॥"[೩೨]

ಈವರೆಗೆ ಅನುಭಾವದ ಸ್ವರೂಪ ಹಾಗೂ ಅನುಭಾವಿಗಳ ತತ್ವಪದಗಳಲ್ಲಿ ವ್ಯಕ್ತಗೊಂಡ ಅನುಭಾವದ ವಿವಿಧ ಹಂತಗಳನ್ನು ಉದಾಹರಣೆಗಳೊಂದಿಗೆ ನೋಡಿದೆವು ಅನುಭಾವವು ಅಂತರಂಗಕ್ಕೆ ಸಂಬಂಧಿಸಿದುದಾಗಿದ್ದು, ಪರಮಾತ್ಮನನ್ನು ಅರಿಯುವ ಜ್ಞಾನವಾಗಿದೆ. ಆ ಅರಿವು, ಜ್ಞಾನ ಒಮ್ಮೆಲೇ ಎಲ್ಲರಿಗೂ ಸಾಧ್ಯವಾಗುವಂಥವಲ್ಲ. ಸಾಧನೆಯ ಮೂಲಕ ಕ್ರಮ ಕ್ರಮೇಣ ಸಿದ್ಧಿಸುವಂಥವು. ಅನುಭಾವದ ಸಿದ್ಧಿಗಾಗಿ ಸಾಧನೆಯಲ್ಲಿ ತೊಡಗಿದವರು ಹೆಚ್ಚಾಗಿ ಮಠಾಧಿಪತಿಗಳು, ಸಾಧು ಸತ್ಪುರುಷರು, ಸಂತರು ಹಾಗೂ ಅನುಭಾವಿ ಕವಿಗಳು. ಇವರೆಲ್ಲರೂ ಲೌಕಿಕ ಬದುಕಿನ ಹಂಗನ್ನು ಹರಿದುಕೊಂಡವರು; ಕೈವಲ್ಯಾನುಭವಕ್ಕೆ ತಮ್ಮನ್ನು ಮೀಸಲಾಗಿಟ್ಟುಕೊಂಡವರು. ಒಂದರ್ಥದಲ್ಲಿ ಇವರೆಲ್ಲ ಸನ್ಯಾಸಿಗಳೇ ಆದರೂ ಇವರ ಅನೇಕ ತತ್ವಪದಗಳು ಲೌಕಿಕರ ಬದುಕನ್ನು ಹಸನಗೊಳಿಸುವ ಉದ್ದೇಶವಿರಿಸಿಕೊಂಡುದನ್ನು ಗುರುತಿಸಬಹುದು. ಲೌಕಿಕ ಅಲೌಕಿಕ ಎರಡೂ ವಿಷಯಗಳನ್ನೂ ಈ ಪದಗಳು ಒಳಗೊಂಡರೂ ಅಲೌಕಿಕದತ್ತ ಇವುಗಳ ಒಲವು ಜಾಸ್ತಿ. ಅನುಭಾವವೇ ಇವುಗಳ ಜೀವಾಳವಾಗಿದೆಯೆನ್ನಬಹುದು.

ಅಡಿಟಿಪ್ಪಣಿಗಳು

೧. ದಿವಾಕರ ಆರ್. ಆರ್ : ಶರಣರ ಅನುಭವ–ಅನುಭಾವ–ಅನುಭೂತಿ, ಪುಟ ೨
೨. ರಾನಡೆ ಆರ್. ಡಿ (ಲೇ)
ದೇಶಪಾಂಡೆ: ಎಂ.ಎಸ್. (ಸಂ), ಕನ್ನಡ ಪರಮಾರ್ಥ ಸೋಪಾನ ಪುಟ: ೫೪
೩. ,, : ಅದೇ ಪುಟ: ೫೫
೪. ರಾನಡೆ. ಆರ್. ಡಿ. (ಲೇ).
೫. ಹಿರೇಮಠ. ಆರ್. ಸಿ. (ಸಂ): ಚೆನ್ನಬಸವಣ್ಣನವರ ವಚನಗಳು.
೬. ಮಲ್ಲೇ ದೇವರು ಎಚ್. ಪಿ.(ಸಂ): ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು ವಚನ : ೨೪೪
೭. ಹಿರೇಮಠ ಆರ್.ಸಿ. (ಸಂ): ಮಹಾದೇವಿಯಕ್ಕನ ವಚನಗಳು.
೮. ತಿಪ್ಪೇರುದ್ರಸ್ವಾಮಿ ಎಚ್: ಕನ್ನಡದಲ್ಲಿ ಅನುಭಾವ ಸಾಹಿತ್ಯ ಪುಟ : ೧೨
೯. ತಿಪ್ಪೇರುದ್ರಸ್ವಾಮಿ ಎಚ್ : ಕನ್ನಡದಲ್ಲಿ ಕೈವಲ್ಯ ಸಾಹಿತ್ಯ; ಪುಟ : ೧೫
೧೦. ,, : ಅದೇ ಪುಟ : ೫೨
೧೧. ,, : ಅದೇ ಪುಟ : ೭೦
೧೨. ಆರ್.ಡಿ. ರಾನಡೆ (ಲೇ)
ದೇಶಪಾಂಡೆ ಎಂ. ಎಸ್. (ಅನು) ಕನ್ನಡ ಪರಮಾರ್ಥ ಸೋಪಾನ, ಪುಟ : ೮೦-೮೧
೧೩. ಲಕ್ಕೇ ಎಂ. ಎಸ್. (ಸಂ) ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರ ವಚನಗಳು (ಪುಟ : ೧೯೨–೧೯೩)
೧೪. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ (ಸಂ) ಶರೀಫ್ ಸಾಹೇಬರ ಗೀತೆಗಳು
೧೫. ಲಕ್ಷ್ಮೀನಾರಾಯಣ ಭಟ್ಟ (ಸಂ) : ಶರೀಫ್ ಸಾಹೇಬರ ಗೀತೆಗಳು.
೧೬. ,, : ಅದೇ ಪುಟ : ೩೪
೧೭. ಲಕ್ಷ್ಮೀನಾರಾಯಣ ಭಟ್ಟ (ಸಂ.) : ಶರೀಫ್ ಸಾಹೇಬರ ಗೀತೆಗಳು
೧೮. ಸವದತ್ತಿಮಠ ಸಂಗಮೇಶ (ಸಂ) : "ಘನಶ್ರೀ" ಪುಟ : ೯೪
೧೯. ನಿಜಗುಣ ಶಿವಯೋಗಿಗಳ "ಕೈವಲ್ಯ ಪದ್ಧತಿ"
೨೦. ,, ಅದೇ
೨೧. ತಿಪ್ಪೇರುದ್ರಸ್ವಾಮಿ ಎಚ್. : ಕನ್ನಡದಲ್ಲಿ ಕೈವಲ್ಯ ಸಾಹಿತ್ಯ ಪುಟ : ೧೧೪ ೧೧೫.
೨೨. ಶಾಂತರಸ (ಸಂ) : ಕೂಡಲೂರು ಬಸವಲಿಂಗ ಶರಣರ ಸ್ವರ ವಚನಗಳು.
೨೩. ಶಾಂತರಸ (ಸಂ) : ಕೂಡಲೂರು ಬಸವಲಿಂಗ ಶರಣರ ಸ್ವರ ವಚನಗಳು.

೨೪. ಶಾಂತರಸ (ಸಂ) : ಕೂಡಲೂರು ಬಸವಲಿಂಗ ಶರಣರ ಸ್ವರ ವಚನಗಳು.
೨೫. ಲಕ್ಷ್ಮೀನಾರಾಯಣ ಭಟ್ಟ (ಸಂ) : ಶರೀಫ್ ಸಾಹೇಬರ ಗೀತೆಗಳು
೨೬. ಎಚ್. ತಿಪ್ಪೇರುದ್ರಸ್ವಾಮಿ : ಕನ್ನಡಗಲ್ಲಿ ಅನುಭಾವ ಸಾಹಿತ್ಯ. ಪುಟ : ೧೩
೨೭. ರಾನಡೆ. ಆರ್.ಡಿ. (ಲೇ)
ದೇಶಪಾಂಡೆ. ಎಂ.ಎಸ್. (ಅನು) : ಕನ್ನಡ ಪರಮಾರ್ಥ ಸೋಪಾನ, ಪುಟ: ೭೫
೨೮. ರಾಜೂರ ವೀರಣ್ಣ (ಸಂ) : ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರ ವಚನಗಳು.
೨೯. ರಾನಡೆ. ಆರ್. ಡಿ. (ಲೇ)
ದೇಶಪಾಂಡೆ, ಎಂ. ಎಸ್. (ಅನು) : ಕನ್ನಡ ಪರಮಾರ್ಥ ಸೋಪಾನ, ಪುಟ : ೮೨
೩೦. ಸುಂಕಾಪುರ ಎಂ.ಎಸ್. (ಸಂ) : ಜಾನಪದ ಸಾಹಿತ್ಯ ದರ್ಶನ, ಭಾಗ-೫, ಪುಟ ೧೦೭
೩೧. ಶಾಂತರಸ (ಸಂ) : ಕೂಡಲೂರು ಬಸವಲಿಂಗ ಶರಣರ ಸ್ವರ ವಚನಗಳು
೩೨. ಲಕ್ಷ್ಮಿ, ಎಂ. ಎಸ್. (ಸಂ) : ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರ ವಚನಗಳು

□ □

ಗುರುಬಸವ ಕೃತ "ಯೋಗಾಂಗವಿಭೂಷಣ" ಒಂದು ಸಮೀಕ್ಷೆ

—ಪ್ರೊ. ಮಹಾಂತೇಶ ಬೆಳವಟಗಿ

"ಇದು ಯೋಗಾಂಗವಿಭೂಷಣ ಪರಶಿವ
ಪದದೊಳು ಬೆರೆಸುವ ಸರ್ವ ವಿರಕ್ತಂ
ಗಿದು ಘನಲಿಂಗಾಂಗಿಗಳಿಗೆ ಪರತಃಪರವಹ ಭೂಷಣವು
ಅದು ಕಾರಣವತಿಗೋಪ್ಯದೆ ನಿಜಹೃ
ತ್ಸದನದೊಳಾರಾಧಿಸು ಸಂತತ ನಿನ
ಗಿದು ಪರಮೇಷ್ಟಿವಹೋ ಮರೆಯದಿರಿದನೆಂದನು ದೇಶಿಕನು" ೬/೨೯

ಗುರುಬಸವರ 'ಸಪ್ತ ಕಾವ್ಯಗಳು' ವೇದಾಂತ ಶಾಸ್ತ್ರವನ್ನು ಸಶಾಸ್ತ್ರೀಯವಾಗಿ ಬೋಧಿಸುತ್ತವೆ. ವೀರಶೈವ ಧರ್ಮದ ಮೂಲ ತಿರುಳಾದ 'ಲಿಂಗಾಂಗ ಸಾಮರಸ್ಯ'ದ ತಿರುಳನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಈ ಕಾವ್ಯಗಳು ತಿಳಿಸುತ್ತವೆ. ವೇದಾಂತದ ವಿಷಯವನ್ನು ಕನ್ನಡ ಛಂದಸ್ಸಿನ ವಿವಿಧ ಪ್ರಕಾರಗಳಲ್ಲಿ ಹಾಡಿ ಕನ್ನಡ ವೇದಾಂತ ಶಾಸ್ತ್ರಕ್ಕೆ ಅನುಪಮವಾದ ಸೇವೆಯನ್ನು 'ಗುರುಬಸವರು' ಸಲ್ಲಿಸಿದ್ದಾರೆ. ವಿಜಯನಗರ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯ ಕ್ಯಾಸನೂರು ಮಠಕ್ಕೆ ಅಧ್ಯಕ್ಷರಾಗಿದ್ದುಕೊಂಡೂ ಕನ್ನಡ ವೇದಾಂತ ಸಾಹಿತ್ಯಕ್ಕೆ ಅನುಪಮವಾದ ಸೇವೆ ಸಲ್ಲಿಸಿದ ಅಂದಿನ ಪೀಠಾಧೀಶರಲ್ಲಿ 'ಗುರುಬಸವರು' ಅಗ್ರ ಪಂಕ್ತಿಯಲ್ಲಿದ್ದಾರೆ.

'ಯೋಗಾಂಗವಿಭೂಷಣ' ಗುರುಬಸವರ ಚೊಚ್ಚಲ ಕೃತಿ. ಅವರ ವೇದಾಂತ ಸಾಹಿತ್ಯ ಪ್ರಾರಂಭವಾಗುವದು ಈ ಕೃತಿಯಿಂದಲೇ. 'ಯೋಗದ ಅಂಗಗಳಿಂದ ವಿಶೇಷ ವಾಗಿ ಭೂಷಣ ಪಡೆವುದೇ ಯೋಗಾಂಗ ವಿಭೂಷಣ', ಹುಟ್ಟು ಸಾವುಗಳ ಸುಳಿಯಲ್ಲಿ ಸಿಲುಕಿದ ಜೀವ ತನ್ನ ಸುಕೃತ ಪುಣ್ಯದಿಂದ "ನಿಜ"ದ ಕಡೆಗೆ ಹೊರಳುತ್ತದೆ. ಆಗ ಆತ್ಮನು (ಜೀವ) ತನಗೆ ಪಿಂಡಜ್ಞಾನವನ್ನು ನೀಡಿದ ಗುರುವನ್ನು ಅರಸತೊಡಗುವನು. ಗುರುವಾದವನು ಶಿಷ್ಯನಿಗೆ ಮೊದಲು ಪಿಂಡಜ್ಞಾನದ ಕಲ್ಪನೆಯನ್ನು ಮಾಡಿಕೊಡುವನು. ಪ್ರಸ್ತುತ ಗ್ರಂಥದಲ್ಲಿ ಒಟ್ಟು "ಷಷ್ಠೋಪದೇಶ"ಗಳಿದ್ದು ಇವು 'ದೇಹ' 'ದೇವಾಲಯ' ವಾಗುವ ಕ್ರಮವನ್ನು ವಿವರಿಸುತ್ತವೆ.

ಗುರುವೇ ಪರಾಪರಸಾಕ್ಷಕ ನಿರ್ಗುಣ
ನಿರುಪಮ ಕೇವಲನೆಂದು ನಿರಂತರ

ವರ ವೇದಾಂತರಹಸ್ಯಾಗಮವಚನಂಗಳು ವಿಧಿಸಿರಲು
ಪೊರೆದು ವಿನಾಶವಿಷಯವೃತ್ತಿಗಳಿಂ
ಚರಿಸುವ ಕರ್ಮವೇ ಹಂಗುಣಮೂರ್ತಿಗೆ
ದೊರಕಿತ್ತೆನಗಿದನಿರ್ವಚನೀಯ ನಿರೂಪಿಸಬೇಕೆಂದ ೧/೧೯

'ಗುರುಬಸವನು' ಸಂಸಾರ ಹೇಯಕ್ಕೆ ಮೂಲವೆನಿಸಿದ ಪಿಂಡೋತ್ಪತ್ತಿಯನ್ನು ಗುರು ತನ್ನ ಕರುಣೆಯಿಂದ ಮಾತ್ರ ನಿವಾರಿಸಬಲ್ಲ ಎಂಬುದನ್ನು ತಿಳಿಸಿ ಯೋಗಕ್ಕೆ ತಳಹದಿಯಾದ ಮನ, ಪವನ, ಬಿಂದು ಇವುಗಳ ಪರಸ್ಪರ ಸಂಬಂಧವನ್ನು ತಿಳಿಸುವರು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಎಂಟು ಯೋಗಾಂಗಗಳ ಅನುಷ್ಠಾನದಿಂದ ಚಿತ್ತ ಹಾಗೂ ಆತ್ಮ, ಪ್ರಕೃತಿ ಹಾಗೂ ಪುರುಷ ಇವುಗಳ ಯಥಾರ್ಥವಾದ ಜ್ಞಾನವುಂಟಾಗಿ ಆತ್ಮಜ್ಞಾನ ಸ್ಫುರಿಸುವದು, ಇದುವೇ ಆತ್ಮ ಪಡೆಯುವ ಕೈವಲ್ಯ, ಗುರುಬಸವರು ಇಲ್ಲಿ ಎಲ್ಲ ಯೋಗಗಳಿಗಿಂತ ಶಿವಯೋಗವೇ ಮೇಲೆಂದು ತಿಳಿಸುತ್ತಾರೆ. ಶಿವಯೋಗವು ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನವೆಂದು ಪಂಚಪ್ರಕಾರದ್ದಿದೆ. ಅಷ್ಟಾಂಗಗಳಿಂದ ಶಿವನನ್ನು ಪೂಜಿಸಿ ಬೇಕಾದಾಗ ಆ ಲಿಂಗಗಳೆಲ್ಲವೂ ಶಿವಪೂಜೆಯ ಅಂಗಗಳಾಗಿ ಮಾರ್ಪಡುವದು ಶಿವಯೋಗದ ವೈಶಿಷ್ಟ್ಯ ವಾಗಿದೆ. ಆದರೆ ಈ ಶಿವಯೋಗದಲ್ಲಿ ಧ್ಯಾನ, ಧಾರಣ, ಸಮಾಧಿ ಈ ಅಂಗಗಳಿಗಿರುವ ಪ್ರಾಮುಖ್ಯತೆಯು ಮಿಕ್ಕ ಯಮ, ನಿಯಮ, ಆಸನ, ಪ್ರಾಣಾಯಾಮ ಪ್ರತ್ಯಾಹಾರಗಳಿಗೆ ಇಲ್ಲವೆಂದು ಗುರುಬಸವರು ಅಭಿಪ್ರಾಯ ಪಡುತ್ತಾರೆ.

ಸದಾಚಾರ, ಸದ್ವರ್ತನೆ, ಸಜ್ಜನರ ಸಂಗ ಇವು ಶಿವಯೋಗಿಯಾಗುವವನಿಗೆ ಇರ ಬೇಕು. ಒಳಗೂ ಹೊರಗೂ ನಿರ್ಮಳವಾಗಿರುವ ಶಿವಯೋಗಮಂದಿರವು ಭಕ್ತನಿಗೆ ಮಠವಾಗಿರಬೇಕು. ಆಲಸಿ, ಮೂಢಮತಿ, ಪಠಮಾರಿ, ನಿಷ್ಠುರಿ, ನಿಂದಕ ಮೊದಲಾದವರು ಸದ್ಗುರುವಿನ ಪಥಕ್ಕೆ ಸಲ್ಲದು, ಅಂಥವರ ಸಹವಾಸದಿಂದ ದೂರವಿರಬೇಕು. 'ವಿಷಯ'ದ ಕಡೆಗೆ ಮನಸ್ಸನ್ನು ಹರಿಯಬಿಡಬಾರದು. ಸಾತ್ವಿಕ ಆಹಾರವನ್ನು ಮಾತ್ರ ಪ್ರಮಾಣಕ್ಕೆ ಅನುಗುಣವಾಗಿ ಲಿಂಗಕ್ಕರ್ಪಿಸಿ ಪ್ರಸಾದ ತೆಗೆದುಕೊಳ್ಳಬೇಕು ಎಂಬ ಗುರುಬಸವರ ಉಪದೇಶಗಳು ಸಂಪೂರ್ಣ ಮನಕುಲದ ಪಳ್ಗಿಗೆ ದಾರಿ ದೀವಿಗೆಗಳಾಗಿವೆ. ಇದರಲ್ಲಿ ಆರು ಉಪದೇಶಗಳಿದ್ದು ೨೮೧ ಪದಗಳಿವೆ. ಕೊನೆಗೆ ಮಾನವನ ಅಂತ್ಯವು ಏನೇ ಇರಲಿ, ಅಂತ್ಯ ಫಲವು ಯಾವುದೇ ಆಗಲಿ ಯೋಗಾಂಗವಿಭೂಷಣವನ್ನು ಮನನ ಮಾಡಿಕೊಂಡವನಿಗೆ ಪುನರ್ಜನ್ಮ ಇರಲಾರದು ಎಂಬುದು ಗುರುಬಸವರ ಅಭಿಪ್ರಾಯವಾಗಿದೆ. ಈ ಯೋಗಾಂಗದ ಸುಖವನರಿಯದವನ ಕೂಡಬಾರದು ಎಂದು ಕವಿವಾಣಿಯಾಗಿದೆ.

ಯೋಗಾಂಗದ ಸುಖವನರಿಯದ ಜನ್ಮದ
ರೋಗಿಗಳನು ಪರಮಾಯುವ ನೆವದಿಂ
ನೀಗುವ ನಿರ್ಭಾಗ್ಯರುಗಳ ತತ್ವರಹಸ್ಯಾರ್ಥವ ಸವಿವ

ಲಾಗರಿಯುದ ವಾದಿಗಳನು ಸಂಪದ
ದಾಗಿಂಗಳಲುವ ಜಡಮಾನವರನು
ವೇದಿಗಳಂ ಭೋಗಿಗಳಂ ಕೂಡದಿರೆಂದನು ದೇಶಿಕನು. ೩/೨೦

ಧಾರವಾಡದ ಮುರುಘಾಮಠದ ಶ್ರೀ ಮ. ನಿ. ಪ್ರ. ಮಹಾಂತಸ್ವಾಮಿಗಳು ಜಂಗಮ ಪ್ರೇಮಿಗಳು ಸಾಹಿತ್ಯಾಸಕ್ತರು ಅಲ್ಲಿಯ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯ ೪೫ನೇ ಗ್ರಂಥವಾಗಿ ಈ ಕೃತಿ ಅರಳಿದೆ. ಡಾ. ಎಮ್. ಎಸ್. ಸುಂಕಾಪೂರ ಹಾಗೂ ಪಂ. ನಾಗಭೂಷಣ ಶಾಸ್ತ್ರಿಗಳು ಈ ಗ್ರಂಥದ ಸಂಪಾದನೆಯನ್ನು ಅತ್ಯುತ್ತಮವಾಗಿ ಮಾಡಿದ್ದಾರಲ್ಲದೇ ಇದರ ಸಾರ ಸಂಗ್ರಹವನ್ನು ನೀಡಿ ಇದನ್ನು ಸಾಮಾನ್ಯ ಓದುಗನಿಗೂ ತಿಳಿಯುವಂತೆ ಮಾಡಿದ್ದಾರೆ. ಬದುಕುಗೆಟ್ಟ, ಅಧಃಪತನದ ಅಂಚಿನಲ್ಲಿರುವ ಇಂದಿನ ಜನತೆಗೆ ಇಂಥ ಕೃತಿಗಳು ಖಂಡಿತವಾಗಿ ಜ್ಞಾನಜ್ಯೋತಿಯಾಗ ಬಲ್ಲವು.

ಸಪ್ತಕಾವ್ಯದ ಗುರುಬಸವನ "ಸದ್ಗುರುರಹಸ್ಯ" ಒಂದು ಸಮೀಕ್ಷೆ

—ಡಾ. ಬಸವರಾಜ ಜಗಜಂಪಿ

ಕನ್ನಡ ವೇದಾಂತ ಸಾಹಿತ್ಯ ಕ್ಷೇತ್ರದಲ್ಲಿ ಸಪ್ತಕಾವ್ಯದ ಕವಿ ಗುರುಬಸವನಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಮಹಾವೈರಾಗ್ಯಶಾಲಿಯಾಗಿ, ವೀರವಿರಕ್ತನಾಗಿ, ಸಕಲಶಾಸ್ತ್ರ ಪಾರಂಗತನೆನಿಸಿಕೊಂಡು ಶಿವಯೋಗ ಪುಂಗವನಾಗಿ ಬಾಳಿದ ಗುರುಬಸವನು ತನ್ನೆಲ್ಲ ಶಾಸ್ತ್ರಾನುಭವವನ್ನು ಕನ್ನಡ ಛಂದಸ್ಸಿನ ವಿವಿಧ ಮಟ್ಟುಗಳ ಮೂಲಕ ಸಪ್ತಕಾವ್ಯಗಳಲ್ಲಿ ಬಿತ್ತರಿಸಿದ ಶಾಸ್ತ್ರಕವಿ. ಕನ್ನಡ ಸಾರಸ್ವತ ಪ್ರಪಂಚದಲ್ಲಿ ಸಪ್ತಕಾವ್ಯದ ಗುರುಬಸವನೆಂದೇ ಖ್ಯಾತಿವೆತ್ತ ಈತನನ್ನು ಷಟ್‌ಸ್ಥಲ ಚಕ್ರವರ್ತಿ ಎನ್ನಬೇಕು. ವೇದಾಂತ ವಿಷಯವನ್ನು ಸಶಾಸ್ತ್ರೀಯವಾಗಿ ಸಾಮಾನ್ಯರಿಗೂ ತಿಳಿಯುವಂತೆ ಅತ್ಯಂತ ಸರಳ ಶೈಲಿಯಲ್ಲಿ ಹೃದಯಂಗಮ ವಾಗಿ ನಿರೂಪಿಸಿರುವುದು ಗುರುಬಸವನ ಅಗ್ಗಳಿಕೆ. ಶಿವಾನುಭಾವಿಗಳಿಗೆ, ಸಾಹಿತ್ಯಪ್ರೇಮಿ ಗಳಿಗೆ ಪ್ರಯೋಜನಕಾರಿಯಾದ, ಸಾಹಿತ್ಯಕ್ಕೆ ಮಾದರಿಯಾದ, ಶಾಸ್ತ್ರಕ್ಕೆ ಒರೆಗಲ್ಲಾದ ಈತನ ಕೃತಿಗಳು ಈವರೆಗೂ ಸಮರ್ಪಕ ರೀತಿಯಲ್ಲಿ ಪ್ರಚಾರಗೊಂಡಿಲ್ಲವೆಂದೇ ಹೇಳಬೇಕು.

ಭಕ್ತಜನ ಮನೋಮಂದಿರ, ಶಿವಯೋಗ ಜನಸೇವಿತ ಚರಣಾರವಿಂದ, ಷಟ್‌ಸ್ಥಲ ಜ್ಞಾನಪ್ರಭಾ ಪುಂಜರಂಜಿತಾಂತರಂಗ, ವೀರಶೈವ ಮತಸ್ಥಾಪನಾಚಾರ್ಯ ಮೊದಲಾದ ಬಿರುದಾಂಕಿತ ವೀರವಿರಕ್ತ ಗುರುಬಸವಾರ್ಯನು ತನ್ನ ಬಗೆಗ ಹೆಚ್ಚೇನು ಹೇಳಿಕೊಂಡಿಲ್ಲ. ಸ್ವತಃ ವೀರಶೈವನಾಗಿದ್ದು, ವೀರಶೈವ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಗೆ ತುಂಬ ನೆರವಾದ ವಿಜಯನಗರ ಸಾಮ್ರಾಜ್ಯಾಧಿಪತಿ ಇಮ್ಮಡಿ ಪ್ರೌಢದೇವರಾಯನ ಕಾಲದಲ್ಲಿ ಆಗಿಹೋದ ನೂರೊಂದು ವಿರಕ್ತರಲ್ಲಿ ಗುರುಬಸವನು ಒಬ್ಬನೆಂಬುದು ನಿರ್ವಿವಾದ. ವಾದ ವಿವಾದ ಮಾಡುವುದರಲ್ಲಿ ಪ್ರವೀಣನಾದ ಗುರುಬಸವ, ಪ್ರೌಢದೇವರಾಯನ ಸಮ್ಮುಖ ದಲ್ಲಿ ಪರವಾದಿಗಳನ್ನು ಗೆದ್ದು, ಶಾರದೆಯ ಪೀಠವನ್ನು ಏರಿದಂತೆಯೂ ತಿಳಿದು ಬರುತ್ತದೆ. ವಿಜಯನಗರದ ಹಾಗೂ ಕೆಳದಿಯ ಅರಸರ ಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದ ಶಿವಮೊಗ್ಗ ಜಿಲ್ಲೆಯ ಕ್ಯಾಸನೂರಿನ ಮಠಕ್ಕೆ ಗುರುಬಸವನು ಪೀಠಾಧಿಪತಿಯಾಗಿದ್ದನೆಂದೂ ತಿಳಿಯು ತ್ತದೆ. ಶಿವಯೋಗದಲ್ಲಿ ಪರಿಪೂರ್ಣತೆ ಸಾಧಿಸಿದ್ದಲ್ಲದೆ ಅನೇಕ ಪವಾಡಗಳನ್ನು ಮೆರೆದು ಮಹಾ ಮಹಿಮಾಪುರುಷನೆನಿಸಿಕೊಂಡ ಗುರುಬಸವನು ಬಾಳಿದ್ದು ಕ್ರಿ. ಶ. ಸು. ೧೪೩೦ರಲ್ಲಿ ಗುರುಬಸವನು ರಾಜಗುರುವಾಗಿದ್ದುಕೊಂಡು ಅರಮನೆಯ ಆವರಣದಲ್ಲೇ ಭವ್ಯವಾದ

ಮತವನ್ನು ಪೊಂದಿರಬೇಕೆನಿಸುತ್ತದೆ. ಗುರುಬಸವನ 'ಮನೋವಿಜಯ'ದ ಪ್ರಾರಂಭದ ಪದ್ಯಗಳು ಇದಕ್ಕೆ ಆಧಾರವನ್ನು ಒದಗಿಸುತ್ತವೆ. ಗುರುಸ್ಥಾನದಲ್ಲಿದ್ದರೂ ಜಂಗಮರ ಬಗೆಗೆ ಸಮಾನ ಗೌರವ ಭಾವ ತಾಳಿದ್ದು ಅವನಿಗೆ ಇನ್ನೂ ಹೆಚ್ಚಿನ ಘನತೆಯನ್ನು ಒದಗಿಸಿತ್ತೆಂಬ ಸಂಗತಿ ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದಿಂದ ತಿಳಿದು ಬರುತ್ತದೆ.

ಶಿವಯೋಗಾಂಗಭೂಷಣ, ಸದ್ಗುರು ರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತಗೀತೆ ಮತ್ತು ಮನೋವಿಜಯ ಎಂಬ ಸಪ್ತಕಾವ್ಯಗಳನ್ನು ರಚಿಸಿರುವದರಿಂದ ಅವನನ್ನು 'ಸಪ್ತಕಾವ್ಯದ ಗುರುಬಸವ'ನೆಂದು ಕರೆದುದು ಅನ್ವರ್ಥಕ ವಾಗಿದೆ. ಈ ಸಪ್ತಕಾವ್ಯಗಳು ವೇದಾಂತವನ್ನು ಬೋಧಿಸುತ್ತ ಅಂತಿಮವಾಗಿ ಲಿಂಗಾಂಗ ಸಾಮರಸ್ಯದ ತಿರುಳನ್ನೇ ತಿಳಿಸುತ್ತವೆ. ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ ಮೊದಲಾದ ಷಟ್ಪದಿಗಳಲ್ಲಿ ಹೊರಹೊಮ್ಮಿದ ಅವನ ಕೃತಿಗಳು ಗುರುಶಿಷ್ಯರ ಸಂವಾದ ರೂಪದಲ್ಲಿವೆ.

ಸಪ್ತಕಾವ್ಯಗಳಲ್ಲೇ ಹೆಚ್ಚು ಸರಳ ಹಾಗೂ ಸುಂದರವಾದ ಸದ್ಗುರುರಹಸ್ಯ ಎಲ್ಲಂದ ದಿಂದಲೂ ಒಂದು ಉತ್ತಮ ಕೃತಿಯೆನಿಸಿದೆ. ಒಂಬತ್ತು ಸ್ವರ್ಗಗಳಲ್ಲಿ ಭಾಮಿನಿ ಷಟ್ಪದಿಯ ೨೩೮ ಪದ್ಯಗಳಿವೆ. ಬಯಲಿನಲ್ಲಿ ಬಯಲಾಗುವ ನಿಜತತ್ವವನ್ನು ತಿಳಿಸುವ ಇದು ಒಂಬತ್ತು ಉಪದೇಶಗಳನ್ನೊಳಗೊಂಡಿದೆ. ನಿಜತತ್ವ, ಹಿತಾಹಿತಮಾರ್ಗ, ದೇಹೇಂದ್ರಿಯಂಗಳ ಮಮತೆ, ಜೀವತ್ರಯಂಗಳು, ವಾಸನೋದ್ರೇಕ, ಮನೋನಿರಸನ, ವಸ್ತುನಿರ್ದೇಶ, ಸ್ವಾತ್ಮನಿರೂಪಣ, ಸಮರಸಬೋಧೆ–ಮೊದಲಾದ ಒಂಬತ್ತು ಅಧ್ಯಾಯ ಗಳಿಗೆ ಸಂಯೋಜಿಸಿದ ವಿವಿಧ ರಾಗಗಳು ಶಾಸ್ತ್ರಕ್ಕೆ ಕಾವ್ಯಗುಣವನ್ನು ಒದಗಿಸಿವೆ, ಗುರುಬಸವನ ಸಂಗೀತಜ್ಞಾನಕ್ಕೆ ಸಾಕ್ಷಿಯಾಗಿವೆ; ಲಲಿತ ಭಾಮಿನಿ ಷಟ್ಪದಿಯ ಪದ್ಯಗಳಿಗೆ ಸಂಗೀತದ ಜೋಡುಸಿಕ್ಕಿದ್ದು ಸಾಹಿತ್ಯದ ಹಾಲಿಗೆ ಸಕ್ಕರೆ ಸೇರಿದಂತಾಗಿದೆ.

ಭವಬಂಧನಕ್ಕೊಳಗಾಗಿ ಮುಂದಿನ ದಾರಿ ತಿಳಿಯದೆ ಕಗ್ಗತ್ತಲಲ್ಲಿ ತಡವರಿಸುತ್ತ ಸಾಗುವವನಿಗೆ ಸನ್ಮಾರ್ಗವನ್ನು ತೋರಿಸಿ ಮುಕ್ತಿಮಾರ್ಗವನ್ನು ತೋರಿಸುವವನೇ ಸದ್ಗುರು. ಅಂಥ ಸದ್ಗುರು ತನ್ನ ಶಿಷ್ಯನಿಗೆ ಪರತತ್ವದ ಪರಮರಹಸ್ಯವನ್ನು ತಿಳಿಸು ತ್ತಾನೆ. ಈ ಜಗತ್ತು ಮಿಥ್ಯ, ಪರಬ್ರಹ್ಮವೊಂದೇ ಸತ್ಯ. ಆ ಪರವಸ್ತುವನ್ನು ಕಾಣಲು ತವಕಿಸುವ ಆತ್ಮವೂ ಸತ್ಯ. ಕರ್ಮವನ್ನು ಅತಿಗಳೆದ ಆತ್ಮನೇ ನಿತ್ಯಸತ್ಯ ಪರಮಾತ್ಮನ ಸ್ವರೂಪ ಪಡೆಯಬಲ್ಲನು. ಸಾಧನೆಯ ಸ್ಥಿತಿಯಲ್ಲಿ ಮನದ ಪಾತ್ರ ಹಿರಿದು. ಚಂಚಲ ರಹಿತ ಮನಸ್ಸು ಆತ್ಮಸಾಕ್ಷಾತ್ಕಾರಕ್ಕೆ ತುಂಬ ಅಗತ್ಯ. ತಿಳಿಯಬಾರದ ಮನವನ್ನು ತಿಳಿವಿನಿಂದ ಅಳಿಯುವವನೇ ನಿಜಜ್ಞಾನಿ. ಮನವೆಂಬ ಮಾಯಾ ನಾಯಿಯನ್ನು ಹೊಡೆ ದೋಡಿಸಿದಾಗ ತಾನೇ ತಾನಾಗಿ ಜ್ಞಾನಪ್ರಕಾಶ ಅಳವಟ್ಟು, ತಾನೇ ಪರಮಾತ್ಮನೆಂಬುದು ಹೊಳೆಯುತ್ತದೆ. ಇದೇ ಸದ್ಗುರುರಹಸ್ಯದ ಒಳತಿರುಳು. ಶ್ರೀಗುರು ಶಿಷ್ಯನ ಅರಿವನ್ನು

ಜಾಗ್ರತಗೊಳಿಸಿ ಜೀವಶಿವರು ಬೇರೆ ಅಲ್ಲವೆಂಬುದನ್ನು ತೋರಿಸುತ್ತಾನೆ. ತನ್ನ ತಾನರಿತು ಪೂಜೆ ಅನುಷ್ಠಾನಗಳ ಮೂಲಕ ಪರಮಸುಖವೀಯುವ ನಿತ್ಯಸತ್ಯ ಪರವಸ್ತುವಿನಲ್ಲಿ ಬೆರೆತು ಬೇರಿಲ್ಲದಿಪ್ಪುದೇ ಲಿಂಗಾಂಗಸಾಮರಸ್ಯವೆಂಬುದನ್ನು ಗುರುಬಸವಾರ್ಯ ಈ ಕಾವ್ಯದಲ್ಲಿ ಅತ್ಯಂತ ಹೃದಯಂಗಮವಾಗಿ ನಿರೂಪಿಸಿದ್ದಾನೆ ಆಯ್ದುಕೊಂಡ ವಿಷಯ ಶುಷ್ಕವಾಗಿದ್ದರೂ ಪ್ರತಿಭಾವಂತ ಕವಿ ಗುರುಬಸವನ ಸರಳ ಹಾಗೂ ಮನೋಹರ ಶೈಲಿಯಿಂದ ನಿರೂಪಣೆ ಆತ್ಮೀಯವೆನಿಸುತ್ತದೆ.

ಧಾರವಾಡ ಶ್ರೀ ಮುರಘಾಮಠದ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯ ೫೫ನೆಯ ಪುಷ್ಪವಾಗಿ ಗುರುಬಸವ ವಿರಚಿತ ಸದ್ಗುರುರಹಸ್ಯವು ಪ್ರಕಟಗೊಂಡಿದೆ ಹಾಗೂ ಉಳಿದ ಕೃತಿಗಳೂ ಸಹ ಶ್ರೀಮಠದಿಂದ ಪ್ರಕಟವಾಗಿವೆ. ಡಾ. ಎಂ. ಎಸ್. ಸುಂಕಾಪುರ ಹಾಗೂ ಪಂಡಿತ ನಾಗಭೂಷಣ ಶಾಸ್ತ್ರಿಗಳು ಕೃತಿಯನ್ನು ತುಂಬ ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ. ಆರಂಭದ ಪ್ರಸ್ತಾವನೆ ಹಾಗೂ ಕೊನೆಯಲ್ಲಿ ಕೊಟ್ಟಿರುವ ಶಬ್ದಕೋಶ ಓದುಗರಿಗೆ ಪ್ರಯೋಜನಕಾರಿಯಾಗಿವೆ. ಶ್ರೀ ಕಲ್ಯಾಣಪ್ಪ ಬ್ಯಾಳಿಯವರು ಸದ್ಗುರುರಹಸ್ಯದ ಸಾರಸಂಗ್ರಹವನ್ನು ನೀಡಿದ್ದು ಕೃತಿಯ ಉಪಯುಕ್ತತೆಯನ್ನು ಹೆಚ್ಚಿಸಿದೆಯೆನ್ನಬೇಕು. ಎಲೆಮರೆಯ ಹೂವಿನಂತಿರುವ ಗುರುಬಸವನನ್ನು ಕುರಿತು ಇನ್ನು ಹೆಚ್ಚಿನ ಸಂಶೋಧನೆ-ಅಭ್ಯಾಸ ನಡೆಯುವುದು ಅತ್ಯಂತ ಅಗತ್ಯವೆಂದು ಒತ್ತಿ ಹೇಳಬೇಕು.

□ □

ಸಪ್ತಕಾವ್ಯದ ಗುರುಬಸವನ ಕಲ್ಯಾಣೇಶ್ವರ

—ಎಸ್. ಎಸ್. ಕೋತಿನ

ಗುರುಬಸವ ವಿಜಯನಗರದ ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರಲ್ಲಿ ಒಬ್ಬ. ಆತನ ಸಪ್ತಕಾವ್ಯಗಳಲ್ಲಿ ಒಂದಾದ 'ಕಲ್ಯಾಣೇಶ್ವರ' ಧಾರ್ಮಿಕ ಹಾಗೂ ಸಾಹಿತ್ಯಿಕ ನೆಲೆಯಲ್ಲಿ, ಅಂದಿನ ಯುಗದ ಅಗತ್ಯಗಳನ್ನು ಈಡೇರಿಸಿಕೊಡುವ ಮಹತ್ವಾಕಾಂಕ್ಷೆಯಿಂದ ಹುಟ್ಟಿಕೊಂಡ ಕಾವ್ಯ ಪ್ರಕ್ರಿಯೆಗೂ ಅನ್ವಯಿಸುವಂತಹದು. ಹಾಗೆಯೇ ಅಂದಿನ ನೂರೊಂದು ವಿರಕ್ತರು ನಡೆಸಿದ ಧಾರ್ಮಿಕ ಹಾಗೂ ಸಾಹಿತ್ಯಿಕ ಒಟ್ಟು ಚಟುವಟಿಕೆಗಳಿಗೂ ಅನ್ವಯಿಸುವಂತಹದು. ಮುಂದುವರೆದು ಹೇಳುವುದಾದರೆ, ಒಟ್ಟು ವೀರಶೈವ ಸಾಹಿತ್ಯ ಪರಂಪರೆಗೂ ಅನ್ವಯಿಸುವಂತಹದು. ಅಂದಂದಿನ ಯುಗದ ಧಾರ್ಮಿಕ ಹಾಗೂ ಸಾಹಿತ್ಯಿಕ ಅಗತ್ಯಗಳಿಗೆ, ಆ ಮೂಲಕವಾಗಿ ಸಾಮಾಜಿಕ ಅಭೀಪ್ಸೆಗಳಿಗೆ ಪ್ರತಿಕ್ರಯಿಸುವ ಪ್ರಯೋಗಶೀಲ ಮನೋಧರ್ಮದಲ್ಲಿಯೇ ವೀರಶೈವ ಸಾಹಿತ್ಯ ಪರಂಪರೆಯ ಸಾಹಿತ್ಯದ ಮತ್ತು ಅದರ ಜೀವಂತಿಕೆಯ ರಹಸ್ಯವಿದೆ. ಧರ್ಮಮೂಲವಾದ ಸಾಮಾಜಿಕ ಹೋರಾಟದ ಅಭಿವ್ಯಕ್ತಿಯ ಫಲಗಳಾದ ೧೨ನೆಯ ಶತಮಾನದ ವಚನ ಸಾಹಿತ್ಯ, ಅನಂತರದ ಶರಣರ ಜೀವನ ಮೌಲ್ಯಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುವ ಹರಿಹರಾದಿ ಕವಿಗಳ ಸೃಜನಶೀಲ ಸಾಹಿತ್ಯ ಮತ್ತು ಪ್ರೌಢದೇವರಾಯನ ಕಾಲದಲ್ಲಿ ನಡೆದ ವಚನಗಳ ಸಂಗ್ರಹ, ಸಂಕಲನ, ಸಂಪಾದನೆ, ಟೀಕೆ, ವಚನ ರಚನೆ ಇತ್ಯಾದಿ ಚಟುವಟಿಕೆ ಹಾಗೂ ಮುಂದೆ ತೋಂಟದಾರ್ಯ ಶಿಷ್ಯ ಪರಂಪರೆಯ ಸಾಹಿತ್ಯ– ಈ ಎಲ್ಲ ಘಟ್ಟಗಳ ಸಾಹಿತ್ಯಿಕ ಚಟುವಟಿಕೆಗಳನ್ನು, ಅವುಗಳ ಪರಿಣಾಮ ಹಾಗೂ ಪ್ರಯೋಜನಗಳನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಅದರಲ್ಲೂ ಒಂದು ಅರ್ಥಪೂರ್ಣ ಚಳುವಳಿಯಾಗಿ ಕಾಣಿಸಿಕೊಂಡ ನೂರೊಂದು ವಿರಕ್ತರ ಪ್ರಯತ್ನ–ಪರಿಶ್ರಮಗಳಿಂದ ಕೂಡಿದ ಚಲನಶೀಲ ಧೋರಣೆಯ ಚಟುವಟಿಕೆಯಂತೂ ವೀರಶೈವ ಧರ್ಮ ಹಾಗೂ ಸಾಹಿತ್ಯ ಪರಂಪರೆಯ ಅಳಿವು ಉಳಿವಿನ ಸಮಸ್ಯೆಗಳಿಗೆ ಒಂದು ಅರ್ಥಪೂರ್ಣ ಪರಿಹಾರವಾಗಿ, ಅಂದಿನ ಸಂದರ್ಭದ ಸವಾಲುಗಳಿಗೆ ಪರಿಣಾಮಕಾರಿಯಾದ ಉತ್ತರವಾಗಿ ಅಚ್ಚರಿಯನ್ನೂ ಮೂಡಿಸಿತು. ಅಂದಿನ ಆ ಸಾಹಿತ್ಯಿಕ ಚಟುವಟಿಕೆಯೂ ಅಂದಿನ ವಿರಕ್ತರ –ಮಠಾಧೀಶರ ಮೂಲಭೂತ ಧಾರ್ಮಿಕ ಕರ್ತವ್ಯದ ಸ್ವರೂಪವನ್ನು ಪಡೆಯಿತು. ಅದರ ಪರಿಣಾಮವಾಗಿ ಸಂಗ್ರಹ, ಸಂಪಾದನೆ ಇತ್ಯಾದಿಗಳೊಂದಿಗೆ ಗುರುಬಸವನ ಸಪ್ತಕಾವ್ಯಗಳಂತಹ ವೀರಶೈವ ತತ್ತ್ವದರ್ಶನ ಸಂಬಂಧಿಯಾದ ಶಾಸ್ತ್ರಜಿಜ್ಞಾಸೆ, ಯೋಗಾನುಭವ

ವೆಲ್ಲ ಕಾವ್ಯದ ವೇಷತೊಟ್ಟು ಆಕಾರ ತಾಳಿದವು. ಒಟ್ಟಿನಲ್ಲಿ ಸಪ್ತಕಾವ್ಯದ ಗುರುಬಸವನ ಕಾವ್ಯದ ಪ್ರೇರಣೆಯು ಮೂಲವನ್ನು ಅಂದಿನ ನೂರೊಂದು ವಿರಕ್ತರ ಸಾಹಿತ್ಯಿಕ ಚಳುವಳಿಯ ಹಿನ್ನೆಲೆಯಲ್ಲಿ ಗುರುತಿಸಿದರೆ, ಆತನ ಕಾವ್ಯಸ್ಫೂರ್ತಿಯನ್ನು ಆತನ ವ್ಯಕ್ತಿತ್ವ ಹಾಗೂ ಮನೋಧರ್ಮದ ನೆಲೆಯಲ್ಲಿ ಗುರುತಿಸಬಹುದಾಗಿದೆ.

ಸಪ್ತಕಾವ್ಯದ ಗುರುಬಸವ ಒಬ್ಬ ಶಿವಯೋಗಿಯಾಗಿ, ಹಠಯೋಗಿಯಾಗಿ, ವಿರಕ್ತ ಅವಧೂತನಾಗಿ, ವೇದಾಂತ ಪಾರಂಗತನಾಗಿ, ಮಠಾಧೀಶನಾಗಿ, ಸಂಗೀತ ಪರಿಣತನಾಗಿ ಸಾಲದನ್ನುವಂತೆ ಕವಿಯೂ ಆಗಿ ವೃಷಭಗೀತೆ, ಅವಧೂತಗೀತೆ, ಮನೋವಿಜಯದಂತಹ ರಾಗ-ತಾಳ ಸಮನ್ವಿತವಾದ ಛಂದೋವೈವಿಧ್ಯತೆಯಿಂದ ಕೂಡಿದ ಸಪ್ತ ಕಾವ್ಯಗಳನ್ನು ರಚಿಸಿದಂತೆ ಸ್ವರವಚನಗಳನ್ನು ರಚಿಸಿದ್ದುದಾಗಿಯೂ ತಿಳಿದು ಬರುತ್ತದೆ. ವಸ್ತು-ಆಶಯಗಳ ದೃಷ್ಟಿಯಿಂದ ನೋಡಿದಾಗ ಆ ಎಲ್ಲ ಕಾವ್ಯಗಳಲ್ಲಿ ಒಂದು ಬಗೆಯ ಏಕಸೂತ್ರತೆ ಎದ್ದು ಕಾಣುತ್ತದೆ. ಅದೇ ಕಾರಣಕ್ಕಾಗಿ ಅವೆಲ್ಲವುಗಳ ನಿರೂಪಣೆಯಲ್ಲೂ ಒಬ್ಬ ಕವಿಯಾಗಿ, ಒಬ್ಬ ತತ್ತ್ವಜಿಜ್ಞಾಸುವಾಗಿ ತೋರಿದ ಪ್ರಜ್ಞೆ ಮಾತ್ರ ಮೆಚ್ಚುವಂತಹದು. ಅವನು ಬಳಸಿಕೊಂಡ ಉಪಮೆ, ಛಂದಸ್ಸು ತಂತ್ರಗಳು ಒಂದು ಅರ್ಥದಲ್ಲಿ ಪೂರ್ವಸಿದ್ಧವಾದವುಗಳೆನಿಸಿದರೂ ಶಾಸ್ತ್ರವಿಷಯವನ್ನು ಸಂಗೀತದ ಆವರಣದಲ್ಲಿ ಅನಾವರಣಗೊಳಿಸುವ ಮೂಲಕ ಅದಕ್ಕೆ ಸಮ್ಮೋಹಕತೆಯನ್ನು ತರುವ ಒಂದು ಪ್ರಯತ್ನ ಆತನ ಪ್ರತಿಯೊಂದು ಕಾವ್ಯದಲ್ಲೂ ಎದ್ದು ಕಾಣುವ ಆಕರ್ಷಣೆಯಾಗಿದೆ. ಒಟ್ಟಿನಲ್ಲಿ ನೂರೊಂದು ವಿರಕ್ತರಲ್ಲಿ ಒಬ್ಬನಾಗಿ ಕಾಣಿಸಿಕೊಳ್ಳುವ ಗುರುಬಸವ ಕನ್ನಡ ಕಾವ್ಯ ಪರಂಪರೆಯಲ್ಲಿ ಒಬ್ಬ ಕವಿಯಾಗಿಯೂ, ಒಂದು ಮಿತಿಯಲ್ಲಾದರೂ ತನ್ನ ಹೆಸರನ್ನು ಉಳಿಸಿಕೊಳ್ಳುತ್ತಾನೆ. ಹೀಗೆ ಧರ್ಮಕ್ಷೇತ್ರ ಮತ್ತು ಕಾವ್ಯಕ್ಷೇತ್ರಗಳೆರಡರಲ್ಲೂ ಉಳಿದುಕೊಂಡು ಬಂದು ಹೆಸರು ಆತನದು.

ಇಷ್ಟಾಗಿಯೂ ಅಂದಿನ ವೀರಶೈವ ಸಮುದಾಯ ಆತನ ವ್ಯಕ್ತಿತ್ವ ಮತ್ತು ಯೋಗಸಿದ್ಧಿಗೆ ಮಾರುಹೋದಂತೆ ಆತನ ಕಾವ್ಯಶಕ್ತಿಗೆ ಮಾರು ಹೋಗಿದ್ದರೆಂದು ನಂಬುವಂತಿಲ್ಲ. ಕವಿಯಾಗಿ ಆತ ಪಡೆದ ಜನಪ್ರಿಯತೆಯ ಒಂದು ಮಿತಿಗೆ ಆತನ ಕೃತಿಗಳಲ್ಲಿಯ ವಸ್ತುವಿನ ಗಹನತೆಯೊಂದಿಗೆ ಅಲ್ಲಿಯ ವೇದಾಂತ ಮತ್ತು ವೀರಶೈವ ತತ್ತ್ವಜಿಜ್ಞಾಸೆಯ ಪ್ರಕ್ರಿಯೆ-ಪರಿಭಾಷೆಯಿಂದ ಕೂಡಿದ ಪ್ರೌಢ ಭಾಷೆಯೂ ಒಂದು ಕಾರಣವಾಗಿರಬಹುದು. ಕಾವ್ಯಕ್ಕೆ ಬಳಸಿಕೊಂಡ ವಿವಿಧ ಷಟ್ಪದಿಯ ಪ್ರಕಾರ ಹಾಗೂ ಚೌಪದಿ ಆತನ ವೈವಿಧ್ಯಮಯವಾದ ಅಭಿರುಚಿಗೆ, ಪ್ರಯೋಗಶೀಲತೆಗೆ ಸಾಕ್ಷಿಯೆಂದು ಸಮಾಧಾನಪಟ್ಟುಕೊಳ್ಳಬಹುದು. ಆದರೆ ಶಿವಯೋಗಾಂಗ ವಿಭೂಷಣ ಮತ್ತು ಪ್ರಸ್ತುತ 'ಕಲ್ಯಾಣೇಶ್ವರ'ದಂತಹ ಗಹನ ವಿಷಯವನ್ನೊಳಗೊಂಡ ಶಾಸ್ತ್ರಕೃತಿಗಳಿಗೆ ಪರಿವರ್ಧಿನಿಯ ಬಳಕೆಯ ಔಚಿತ್ಯ ಮಾತ್ರ ಪ್ರಶ್ನಾರ್ಹವಾಗಿಯೇ ಉಳಿಯುವಂತಹುದು. ಸಂಗೀತದ ಸಾಹಚರ್ಯವನ್ನು ಒದಗಿಸಿ ಒಂದು ಬಗೆಯ ಆಕರ್ಷಣೆಯನ್ನು ತರುವ ಹವಣಿಕೆ

ಕಂಡುಬರುವುದಾದರೂ ಅದೇ ಕಾರಣಕ್ಕಾಗಿ ಕಾವ್ಯ ಒಂದು ವಿಶಿಷ್ಟ ವರ್ಗಕ್ಕೆ ಮಾತ್ರ ಸೀಮಿತಗೊಳ್ಳುವ ಅಪಾಯವೂ ಕಂಡುಬರುತ್ತದೆ. ಅತಿಸಣ್ಣ ಕೃತಿಗಳಲ್ಲಿ ಇಡಿಕಿರಿದು ಬರುವ ಯೌಗಿಕ ವಿಷಯಗಳ ನಿರೂಪಣೆಯಲ್ಲಿ ವಿವರಣೆಗಿಂತ ಅತಿಸೂಚ್ಯತೆಯೇ ಕಂಡು ಬರುವುದರಿಂದ ಪಂಡಿತರ ಅಥವಾ ಟೀಕೆಗಳ ಸಹಾಯವಿಲ್ಲದೆ ಜನಸಾಮಾನ್ಯರಿಗೆ ಅರ್ಥೈಸಿ ಕೊಳ್ಳುವಲ್ಲಿಯೂ ತೊಡರು ಕಾಣಿಸಿಕೊಳ್ಳುತ್ತದೆ. ಮೇಲಾಗಿ ಇಂತಹ ವೇದಾಂತಿಕ ಮತ್ತು ಯೌಗಿಕ ವಿಷಯವನ್ನು, ವೀರಶೈವ ತತ್ತ್ವದರ್ಶನಗಳನ್ನು ಇನ್ನೂ ಹೆಚ್ಚು ಸರಳವಾಗಿ ಅನುಭವಕ್ಕೆ ದಕ್ಕಿಸಿಕೊಡುವ ಮೂಲಕವೇ ಜನಪದವಾದ ವಚನ ಸಾಹಿತ್ಯದಂತೆ ಈತನ ಕಾವ್ಯಗಳು ಜನಪರವಾಗಿ ಉಳಿದು ಬಂದಂತೆ ಕಂಡುಬರುವುದಿಲ್ಲ. ಈ ಮಾತಿಗೆ ವಿರುಪಾಕ್ಷಪಂಡಿತನಂತಹ ಮುಂದಿನ ವೀರಶೈವ ಪುರಾಣ ಕವಿಗಳೂ ಈತನ ಕಾವ್ಯಗಳನ್ನು ಹೆಸರಿಸುವ ಮಟ್ಟಿಗೂ ಆಸಕ್ತಿಯನ್ನು ತೋರದಿರುವುದು ಒಂದು ಸಣ್ಣ ನಿದರ್ಶನ. ಹೀಗಾಗಿ ಗುರುಬಸವನ ಯೌಗಿಕ ವ್ಯಕ್ತಿತ್ವದೆದುರಿಗೆ ಆತನ ವ್ಯಕ್ತಿತ್ವದ ಪ್ರಭಾವ ಜನಮನದಿಂದ ಮಸುಕುಗೊಳ್ಳುತ್ತ ಬಂದಿರುವ ಸಾಧ್ಯತೆಯೇನೂ ಸುಳ್ಳಲ್ಲ. ಹಾಗೆಂದೇ ಆತನ ಕೃತಿಗಳ ಪ್ರತಿಕಾರರು ಆತನ ಕೃತಿಗಳನ್ನು ನೆನಪಿಸಿ ಕೊಡಲೆಂಬಂತೆ ಉದ್ದೇಶಪೂರ್ವಕವಾಗಿಯೇ ಆತನನ್ನೂ 'ಸಪ್ತಕಾವ್ಯದ ಗುರುಬಸವ'ನೆಂದು ಕರೆದಹಾಗೆ ತೋರುತ್ತದೆ. ಹೀಗೆ ಕನ್ನಡ ಕಾವ್ಯ ಕೃತಿಗಳ ಸಂಖ್ಯೆಯ ಹಿನ್ನೆಲೆಯಲ್ಲಿ ಗುರುತಿಸಿದಂತೆ ಇಲ್ಲ. ಆದರೆ ಕನ್ನಡ ಕಾವ್ಯ ಪರಂಪರೆಯಲ್ಲಿ ಈತನ ಕೃತಿಗಳೆಲ್ಲ ತೀರ ಉಪೇಕ್ಷಣೀಯವೆಂದು ಹೇಳಲಿಕ್ಕಾಗದು. ವೀರಶೈವ ಕಾವ್ಯಗಳೆಂಬ ಕಾರಣಕ್ಕೆ ಮಾತ್ರವಲ್ಲ, ಕಾವ್ಯಗಳಲ್ಲಿಯ ಛಂದೋವೈವಿಧ್ಯತೆ, ವೃಷಭಗೀತೆ, ಅವಧೂತಗೀತೆ ಮತ್ತು ಕಲ್ಯಾಣೇಶ್ವರದಂತಹ ಕೃತಿಗಳು ಶತಕಗಳ ಸಾಲಿಗೆ ಸೇರಿಯೂ ದೇಶಿ ಛಂದಸ್ಸಿನಲ್ಲಿ ಮೈತಳೆದ ರೀತಿ, ಸಂಗೀತದ ಸಾಹಚರ್ಯ, ದರ್ಶನ ಹಾಗೂ ಯೌಗಿಕ ವಿಷಯದಲ್ಲಿಯ ಸಮನ್ವಯ ದೃಷ್ಟಿ–ಇಂತಹ ಗಮನಾರ್ಹ ವೈಶಿಷ್ಟ್ಯ ಗಳಿಂದಾಗಿ ಈ ಕೃತಿಗಳು ಇಂದಿಗೂ ತಮ್ಮ ಮಹತ್ವವನ್ನು ಉಳಿಸಿಕೊಂಡಿರುವುದನ್ನು ದಾರ್ಶನಿಕ ನೆಲೆಯಲ್ಲಿ ಇಂದಿಗೂ ಪ್ರಸ್ತುತವಾಗಬಲ್ಲ ಸಾಧ್ಯತೆಯನ್ನು ಉಪೇಕ್ಷಿಸುವಂತಿಲ್ಲ. ಪ್ರಸ್ತುತ ಕಲ್ಯಾಣೇಶ್ವರವೂ ಈ ಎಲ್ಲ ಗುಣದೋಷಗಳಿಂದ ಹೊರತಾದುದಲ್ಲ. ಆದರೂ ಈ ಕಾವ್ಯ ಆತನ ಇತರ ಕೃತಿಗಳಿಗಿಂತ ವಸ್ತು ಭಾಷೆ ನಿರೂಪಣೆಯ ದೃಷ್ಟಿಯಿಂದ ಹೆಚ್ಚು ಕ್ಲಿಷ್ಟವೆಂದು ಮತ್ತೇ ಮತ್ತೇ ಹೇಳಿದರೂ ತಪ್ಪಲ್ಲ.

"ಕಲ್ಯಾಣೇಶ್ವರ" ಎಂಬ ಕೃತಿಯ ಶಿರೋನಾಮವೇ ತುಂಬ ಕುತೂಹಲಕಾರಿ ಯಾದದ್ದು, ಅಸ್ಪಷ್ಟತೆಯಿಂದ ವಿದ್ವಾಂಸರನ್ನೂ ಗೊಂದಲಕ್ಕೆ ಕೆಡಹುವಂತಹದು. ಕಲ್ಯಾಣೇಶ್ವರ ಕಾವ್ಯದ ವಸ್ತು–ವಿಷಯ, ಆಶಯ ಧೋರಣೆಗೂ ಅದರ ತಲೆಬರಹಕ್ಕೂ ಯಾವ ತೃಪ್ತಿಕರವಾದ ಹೊಂದಾಣಿಕೆಯೂ ಕಂಡುಬಾರದು. 'ಕಲ್ಯಾಣೇಶ್ವರ' ಪದ ಪ್ರಯೋಗವೇ ತನ್ನ ಶ್ಲೇಷ ಚಮತ್ಕಾರದಿಂದ ಅರ್ಥವೈವಿಧ್ಯತೆ ಮತ್ತು ಸಂಕೀರ್ಣತೆ ಯನ್ನು ಪ್ರದರ್ಶಿಸುತ್ತ ಓದುಗರನ್ನು ಕಂಗೆಡಿಸುವಂತಹದು. ಈ ಮಾತಿಗೆ ಸಾಕ್ಷಿಯಾಗಿ

ಕಾವ್ಯದ ಕೊನೆಯಲ್ಲಿ ಅದರ ತಲೆಬರಹವನ್ನು ನಿರ್ದೇಶಿಸುವ ಒಂದು ಪದ್ಯವನ್ನು ಇಲ್ಲಿ ನೋಡಬಹುದು.

"ಕಲ್ಯಾಣೇಶ್ವರವೆಂಬಭಿದಾನದ
ಕಲ್ಯಾಣೇಶ್ವರಮಂ ನಿಶ್ಚಯದಿಂ
ಕಲ್ಯಾಣಾದ್ವಯರೆನೆ ಸುಘನಲಿಂಗಾಂಗಿಗಳನವರತ
ಕಲ್ಯಾಣೇಶ್ವರನೆಸಿಸುವ ಬಸವನೆ
ಕಲ್ಯಾಣಾಸ್ಪದವಹ ಕಾರುಣ್ಯದ
ಕಲ್ಯಾಣದ ಬಲದಿಂ ಭಾವಿಸುತಿರ್ಪೆನೆಂದನುದೇಶಿಕನು"೧

ಇಲ್ಲಿ ಪದ್ಯದುದ್ದಕ್ಕೂ ಪುನರುಕ್ತಿಗೊಂಡು ಬರುವ 'ಕಲ್ಯಾಣೇಶ್ವರ', 'ಕಲ್ಯಾಣ' ಎಂಬ ಪದಗಳು ಪ್ರಯೋಗವಕ್ರತೆಯಿಂದಾಗಿ ಮಧ್ಯ-ಮಧ್ಯದಲ್ಲಿಯೇ ತನ್ನ ಬಣ್ಣವನ್ನು, ಸ್ವರೂಪವನ್ನೂ, ಅರ್ಥವನ್ನೂ ಬದಲಿಸುತ್ತ ಹೋಗುವ ಚಮತ್ಕಾರವನ್ನು ನೋಡಬೇಕು.

'ಕಲ್ಯಾಣ' ಎಂಬ ಪದ ಶುಭ, ಮಂಗಳ, ಉದ್ಧಾರ, ಮೋಕ್ಷ, ಮುಕ್ತಿ ಇತ್ಯಾದಿ ಅರ್ಥಗಳಲ್ಲಿ ಪ್ರಯೋಗವಾಗುವಂತೆ ಬಸವಣ್ಣನವರ ಕಾರ್ಯ ಕ್ಷೇತ್ರವಾದ ಕಲ್ಯಾಣ ಎಂಬ ಸ್ಥಳನಾಮವಾಗಿಯೂ ಗ್ರಹಿತವಾಗುತ್ತದೆ. ಈ ಸ್ಥಳನಾಮವನ್ನು ಗಮನದಲ್ಲಿಟ್ಟು ಕೊಂಡಾಗ ಕಲ್ಯಾಣೇಶ್ವರ ಎಂಬುದು ಬಸವಣ್ಣನವರನ್ನು ನಿರ್ದೇಶಿಸುವ ಕವಿಯ ಆಶಯ ಸ್ಪಷ್ಟವಾಗುತ್ತದೆ. ಬಸವಣ್ಣನವರನ್ನು ಕವಿ ಗುರುಬಸವ ತನ್ನ ಗುರುಸ್ಥಾನದಲ್ಲಿಟ್ಟು ಸ್ಮರಿಸಿರುವುದು ಪ್ರಸ್ತುತ ಕಾವ್ಯದಲ್ಲಿ ಮಾತ್ರವಲ್ಲ, ಸದ್ಗುರು ರಹಸ್ಯದಂತಹ ಆತನ ಮಿಕ್ಕ ಕಾವ್ಯಗಳಲ್ಲೂ ನೋಡದೊರೆಯುತ್ತದೆ.

ಸದ್ಗುರುರಹಸ್ಯದ ಆರಂಭದ ಪದ್ಯಗಳಲ್ಲಿ 'ಗುರುಬಸವಂಗೆ ಶರಣೆಂಬೆ'-೨ ಎಂದು ಹೇಳಲಾಗಿದ್ದರೆ "ಕಲ್ಯಾಣೇಶ್ವರ"ದಲ್ಲಿ 'ಗುರುಬಸವನು ನೆಲಸಿರಲೆನ್ನೊಳಗೆ' ಎಂದೂ ಬೇಡಿಕೊಳ್ಳಲಾಗಿದೆ. 'ಗುರುಬಸವ' ಎಂಬುದು ಕವಿಯ ಹೆಸರೆಂಬುದು ನಿಜವಾದರೂ ಇಲ್ಲಿ ಅದು ನಿರ್ದೇಶಿಸುತ್ತಿರುವುದು ಕವಿ ಗುರುಬಸವನ ಹೆಸರನ್ನಾಗಿರದೆ ಕಲ್ಯಾಣ ಬಸವಣ್ಣನವರನ್ನು ಎಂಬುದು ಸ್ಪಷ್ಟ. ಹಾಗೆಯೇ ಮುಂದುವರೆದು ದೇಹ ಪ್ರಾಣ ಕರಣಗಳ ಭ್ರಮೆಯನ್ನು ಬಿಡಿಸಿ ಶಿವಯೋಗ ಕ್ರಮವನ್ನು ತಿಳಿದುಕೊಂಡು ಕೃತಾರ್ಥನಾಗಬೇಕೆಂದು ಬಯಸಿ ಬಂದ ಒಬ್ಬ ಶಿಷ್ಯನಿಗೆ 'ಗುರುಬಸವೇಶ್ವರ ಭರದಿಂದಲೈತಂದು ವರಾಭಯಕರದಿಂ ನಿಲೆ ಹೆಚ್ಚಿದನು ಮನಃಪೂರ್ವಕದಿಂ ಸಂಭ್ರಮಿಸಿ (೫), "ಹರಹರ ಗುರುಬಸವೇಶ್ವರ ಕರುಣಾಕರ ನಿಮ್ಮಡಿಗಳನಱಿಯದ ಮನದಿಂ ಮರುಳಾಗಿಯೇ ಬಹುವಿಧವಹ ಯೋನಿ ಗಳೊಳಗಿಡಿದುಚ್ಚಳಿಸಿ ನರನಾದೆನು...."(೬) ಎಂಬಲ್ಲಿ 'ಗುರುಬಸವೇಶ' ಎಂಬುದು ಒಂದೆಡೆ ಕಲ್ಯಾಣಬಸವಣ್ಣನವರನ್ನು ನಿರ್ದೇಶಿಸುವಂತೆ ಅದೇ ಉಸಿರಿನಲ್ಲಿ ಕವಿಯ ಹೆಸರನ್ನು ಸ್ಮರಣೆಗೆ ತರುತ್ತದೆ. ಗುರುಬಸವಣ್ಣ ಹಾಗೂ ಕವಿ ಗುರುಬಸವ- ಇವರಲ್ಲಿ ಅಭೇದವನ್ನು ಸಾಧಿಸುವ ಕವಿಯ ಇಂಗಿತವೂ ವ್ಯಕ್ತವಾಗುತ್ತದೆ.

ಪ್ರಸ್ತುತ ಕಾವ್ಯದಲ್ಲಿ ಕಲ್ಯಾಣಕಾರಿಯಾದ, ಲಿಂಗಾಂಗಸಾಮರಸ್ಯ ಶಿವಯೋಗದ ರಹಸ್ಯವನ್ನು ಒಳಗೊಂಡ, ಗುರೂಪದೇಶವೇ ಗರ್ಭೀಕೃತವಾಗಿರುವುದರಿಂದ, ಆ ಗುರೂಪದೇಶದ ಸತ್ವದ ಸಂಕೇತವಾಗಿ ಕವಿ ತನ್ನ ಈ ಕೃತಿಗೆ 'ಕಲ್ಯಾಣೇಶ್ವರ' ಎಂಬ ತಲೆಬರಹದ ಔಚಿತ್ಯವನ್ನು ಗುರುತಿಸಿದಂತೆ ಕಂಡುಬರುತ್ತದೆ. ಹೀಗೆ ಕಲ್ಯಾಣೇಶ್ವರ ಎಂಬುದು ಗುರುವಿನ, ಗುರೂಪದೇಶದ ಅಂದರೆ ಕಲ್ಯಾಣದ ಬಸವಣ್ಣನವರ ಮತ್ತು ಶಿವಯೋಗದ ರಹಸ್ಯದ ಸಂಕೇತವಾಗಿ 'ಕಲ್ಯಾಣೇಶ್ವರ' ಎಂಬ ಹೆಸರು ಸಾರ್ಥಕ ಗೊಳ್ಳುತ್ತದೆ.

ಒಟ್ಟಿನಲ್ಲಿ ಗುರುವು 'ಕಲ್ಯಾಣೇಶ್ವರ' ಎಂಬ ಅಭಿಧಾನದಿಂದ ಕಾವ್ಯಮುಖವಾಗಿ ಬಸವನ ಘನತೆಯನ್ನು ಕೊಂಡಾಡುತ್ತ, ಷಟ್‌ಸ್ಥಲ ಸಿದ್ಧಾಂತದ ಮರ್ಮವನ್ನು ತಿಳಿಯ ಪಡಿಸುತ್ತಾನೆ'....೩ ಎಂಬ ಮಾತೂ ಇದೇ ಅಭಿಪ್ರಾಯಕ್ಕೆ ಹತ್ತಿರವಾಗುತ್ತದೆ.

ಆಗಲೇ ಗುರುತಿಸಿದಂತೆ ಪ್ರಸ್ತುತ 'ಕಲ್ಯಾಣೇಶ್ವರ' ಕಾವ್ಯ ಸಾಹಿತ್ಯಿಕ ಹಾಗೂ ಧಾರ್ಮಿಕ ನೆಲೆಯಲ್ಲಿ ಹಲವು ವೈಶಿಷ್ಟ್ಯಗಳನ್ನೂ ಮೈಗೂಡಿಸಿಕೊಂಡ ಗುರುಬಸವನ ಒಂದು ಪ್ರಾತಿನಿಧಿಕ ಕೃತಿ. ೧೦೨ ಪರಿವರ್ಧಿನಿ ಷಟ್ಪದಿಗಳಲ್ಲಿ ಮೈ ಪಡೆದುಕೊಂಡ ಈ ಕೃತಿ ಕನ್ನಡ ಶತಕ ಸಾಹಿತ್ಯ ಪರಂಪರೆಯ ದೃಷ್ಟಿಯಿಂದಲೂ ಗಮನಾರ್ಹವಾದದ್ದು. ವಿಷಯ ಹಾಗೂ ನಿರೂಪಣೆಯ ದೃಷ್ಟಿಯಿಂದಾಗಿ ಅಂದರೆ 'ಶಿವಯೋಗ'ದ ಸ್ವರೂಪ-ಲಕ್ಷಣಗಳ ಪ್ರತಿಪಾದನೆಯ ದೃಷ್ಟಿಯಿಂದಾಗಿ ಗುರುಬಸವನ ಇನ್ನಿತರ ಶತಕಗಳಾದ ಅವಧೂತಗೀತೆ, ವೃಷಭಗೀತೆಗಳಿಗಿಂತ ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುತ್ತದೆ; ಕನ್ನಡ ಶತಕ ಸಾಹಿತ್ಯ ಪರಂಪರೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ. ಆದರೆ ಇಲ್ಲಿಯ ಪದ್ಯಗಳಿಗೆ ಶತಕಗಳಲ್ಲಿಯ ಪದ್ಯಗಳಂತೆ ಮುಕ್ತಕಗಳ ಸ್ವತಂತ್ರ ಗುಣವಾಗಲಿ, ಸ್ವತಂತ್ರ ಅಸ್ತಿತ್ವವಾಗಲಿ ಇಲ್ಲಾ. ಒಟ್ಟು ಪದ್ಯಗಳ ಸಮೂಹ ಒಂದು ಅಖಂಡ ವಿಷಯವನ್ನು ಪ್ರತಿಪಾದಿಸುವಲ್ಲಿ ನಿರತವಾಗುತ್ತದೆ.

ಶಿವಯೋಗದ ರಹಸ್ಯ, ಅದರ ಸಾಧನೆ, ಅದರ ಪರಿಣಾಮ ಹಾಗೂ ಅನುಭವ ದಂತಹ ಗಂಭೀರ ವಿಷಯವನ್ನು ಕುರಿತ ಸ್ಥೂಲ ವಿವರಗಳನ್ನೊಳಗೊಂಡ ಈ ಕಾವ್ಯ ಆಗಲೇ ಹೇಳಿದಂತೆ ಒಂದು ವಿಶೇಷ ಸಂಸ್ಕಾರವನ್ನುಳ್ಳ ಒಂದು ಸೀಮಿತ ವರ್ಗದ ಓದುಗರಿಗೆ ದಕ್ಕುವಂತಹದೇ ಹೊರತು ಸಾಮಾನ್ಯ ಓದುಗರ ಆಸಕ್ತಿಯನ್ನು ತಣಿಸು ವಂತಹದಲ್ಲ. ಗುರು ಮುಖದಿಂದ ಮತ್ತು ಸ್ವಾನುಭವದಿಂದಲ್ಲದೆ ಕೇವಲ ಓದಿ ತಿಳಿದು ಕೊಂಡು ಅನುಷ್ಠಾನಕ್ಕೆ ತರುವಂತಹದ್ದಲ್ಲ. ಈ ಅರಿವು ಸ್ವತಃ ಕವಿಗೂ ಕೂಡಾ ಇಲ್ಲದಿಲ್ಲ. "ಗುರುವಿಡಿದಜಿಯೆಂದನು" (೭೬) "ಗುರುವಂ ಬಿಟ್ಟಳುಪಿದವಂ ಕ್ಷಣದೊಳು ಕೆಡುವನು ಕೇಳೆಂದನು ದೇಶಿಕನು" (೭೭), "ಗುರುವಚನ ಶ್ರವಣದಿ ವಿಮಲಾಗದು ತತ್ವಾರ್ಥ ರಹಸ್ಯೋಕ್ತಿಗಳಿಂದ ಹವಣಿಸಿ ನಿರ್ಧರಿಸುವ ಕಥದಿಂ" (೬೭) ಎಂದು ಯೋಗ ಸಾಧನೆಯಲ್ಲಿ ಗುರುವಿನ ಸಾನ್ನಿಧ್ಯದ ಅಗತ್ಯವನ್ನು ಒತ್ತಾಗಿ ಬಿಂಬಿಸುತ್ತದೆ. ಅಂತೆಯೇ

ಅನುಷ್ಠಾನದ ವಿಧಾನ-ಕ್ರಮವನ್ನು ಹೇಳುವಾಗಲಂತೂ 'ನೀನದಾಜ್ಞೆಯಿಂದನು ದೇಶಿಕನು' (೨೭) 'ಸಿದ್ಧಪೊಂದದನುದೇಶಿಕನು' (೨೯), 'ಮಜ್ಜೆಯುದಿರೆಂದನು ದೇಶಿಕನು' (೩೪), 'ಸೋಹವೆನುತ್ತಿಹುದೆಂದನು ದೇಶಿಕನು' (೩೭) ಎಂದು ಗುರುವಿನ ಸಾನ್ನಿಧ್ಯದ ಅವಶ್ಯಕತೆಯನ್ನು ಉದ್ದೇಶಪೂರ್ವಕವಾಗಿ ಎತ್ತಿ ಹೇಳಿರುವುದನ್ನು ನೆನೆಯಬೇಕು. ಅದರೊಂದಿಗೆ ಕವಿ ಕೂಡಾ ನೇರವಾಗಿ ಪ್ರಸ್ತುತನಾಗುವುದನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬೇಕು.

ಹೀಗೆ ಗುರುಮುಖದಿಂದಲೇ ಕೇಳಿ ತಿಳಿದು ಗುರುವಿನ ಸಾನ್ನಿಧ್ಯದಲ್ಲಿಯೇ ಸಾಧನೆಗೆ ತೊಡಗಿ ಅನುಷ್ಠಾನಕ್ಕೆ ಇಳಿಯಬೇಕಾದ ರಹಸ್ಯಮಯವಾದ ವಿಷಯವನ್ನು ಕಾವ್ಯಕ್ಕೆ ರೂಪಾಂತರಿಸಿ ಕೊಡುವುದು ವ್ಯಾವಹಾರಿಕವಾಗಿ ಎಷ್ಟು ಪ್ರಯೋಜನಕಾರಿ ಎಂಬುದು ಮುಖ್ಯ ಪ್ರಶ್ನೆಯಾಗುತ್ತದೆ. ಅಲ್ಲದೆ ಹಾಗೆ ನೋಡಿದರೆ ಶಿವಯೋಗದ ವಿಷಯ ಹೊಸದೆಂದು ಹೇಳುವಂತೆಯೂ ಇಲ್ಲ. ಆದರೆ ಇಲ್ಲಿ ಕಾವ್ಯ ಪ್ರಕ್ರಿಯೆಯ ವ್ಯಾವಹಾರಿಕ ಪ್ರಯೋಜನೆಯಾಗಲಿ ಅಥವಾ ವಸ್ತುವಿನ ವಿನೂತನತೆಯಾಗಲಿ ಅಷ್ಟು ಪ್ರಸ್ತುತವೆನಿಸುವುದಿಲ್ಲ ಕವಿಯ ಹಾಗೂ ಅಂದಿನ ವೀರಶೈವ ಪರಿಸರದ ದೃಷ್ಟಿಯಲ್ಲಿ ಅದು ಅಷ್ಟು ಮುಖ್ಯ ಸಮಸ್ಯೆಯೂ ಅಲ್ಲ. ಆದರೆ ಅಂದಿನ ವೀರಶೈವ ಪರಿಸರದಲ್ಲಿ ಅದರ ಧಾರ್ಮಿಕ ಆವರಣವನ್ನು ದಾರ್ಶನಿಕ ಪ್ರಜ್ಞೆ ಹಾಗೂ ಪ್ರಕ್ರಿಯೆಯನ್ನು ಜೀವಂತವಾಗಿಡುವುದು ಹೆಚ್ಚು ಮುಖ್ಯವಾಗಿತ್ತು. ವೀರಶೈವ ವಿರಕ್ತ ಹಾಗೂ ಮಠಾಧೀಶನಾಗಿದ್ದ ಗುರುಬಸವನಂತಹ ಕವಿಗೆ ಅದುವೇ ಮೂಲಭೂತ ಕರ್ತವ್ಯಗಳಲ್ಲಿ ಒಂದಾಗಿತ್ತು. ಹಳೆಯ ಬೇರಿನ ಚಿರಂತನ ಸತ್ವವನ್ನು ವೈವಿಧ್ಯಮಯವಾದ ಹೊಸ ಹೊಸ ತಳಿರುಗಳಲ್ಲಿ ಅಭಿವ್ಯಕ್ತಪಡಿಸುವ ಮೂಲಕ ಅದರ ಜೀವಂತಿಕೆಯನ್ನು ಅದರ ಜೀವರಸವನ್ನು ಪ್ರಕಟಿಸಬೇಕಾದದ್ದು ಆ ಕಾಲದ ಸಾರ್ವಕಾಲಿಕವೆನ್ನಬಹುದಾದ ಅನಿವಾರ್ಯವಾಗಿತ್ತು. ಹಾಗಾಗಿ ವೀರಶೈವ ಧರ್ಮ-ದರ್ಶನ ತತ್ತ್ವಸಿದ್ಧಾಂತಗಳನ್ನು ಕುರಿತು ಕಾವ್ಯಗಳನ್ನೂ ರಚಿಸುವದು ಅಂದಿನ ಧರ್ಮ ಹಾಗೂ ಸಂಸ್ಕೃತಿಯ ಒಂದು ಅಂಗವಾಗಿತ್ತು. ಹಾಗೆಯೇ ಅದು ಎಷ್ಟರಮಟ್ಟಿಗೆ ಅರ್ಥವಾಗುತ್ತದೆ ಎಂಬ ಮಾತು ಬೇರೆ. ಆದರೆ ಅದನ್ನು ಶ್ರದ್ಧೆಯಿಂದ ಕೇಳುವದೂ ಧರ್ಮದ ಮತ್ತು ಸಂಸ್ಕೃತಿಯ ಅಂಗವಾಗಿ ಜೀವಂತವಾಗಿತ್ತು. ಅಂದಿನ ಮಠಾಧೀಶನಾಗಿದ್ದ ಗುರುಬಸವನಂತಹ ಯೋಗಿಗಂತೂ ಅದು ಮೂಲಭೂತ ಕರ್ತವ್ಯಗಳಲ್ಲಿ ಒಂದಾಗಿ ಕಂಡಿದ್ದರೆ ಅದು ಈ ಕಾರಣಕ್ಕಾಗಿ 'ಕಲ್ಯಾಣೇಶ್ವರ'ದಂತಹ ಶಾಸ್ತ್ರಕಾವ್ಯಗಳು ಹುಟ್ಟಿಕೊಂಡಿದ್ದರೆ ಅದು ಕೂಡಾ ಈ ಕಾರಣಕ್ಕಾಗಿಯೇ ಹೀಗೆ ಪೂರ್ವನಿರ್ಣಿತವಾದ ದರ್ಶನವೊಂದನ್ನು ವೈವಿಧ್ಯಮಯವಾದ ರೂಪ ವಿನ್ಯಾಸದಲ್ಲಿ ಮರು ಎರಕ ಹೊಯ್ಯುವಲ್ಲಿ ವೀರಶೈವ ಕವಿಗಳು ತೋರಿದ ಪ್ರಯೋಗಶೀಲತೆ ಗಮನಾರ್ಹವಾದದ್ದು ಇಂತಹ ಮಹತ್ವಾಕಾಂಕ್ಷೆ ಪ್ರಯೋಗಶೀಲತೆಯಿಂದಾಗಿಯೇ ವೀರಶೈವ ಸಾಹಿತ್ಯ ನಿರ್ಮಿತಿಗೆ, ಸಂಪ್ರದಾಯ ಸ್ಥಿತಿಗೆ ಇಳಿಯುವ ಅಪವೆಳೆ ಬರಲಿಲ್ಲ. ಈ ಹಿನ್ನೆಲೆಯಿಂದಾಗಿಯೂ 'ಕಲ್ಯಾಣೇಶ್ವರ' ಕಾವ್ಯ ಇಂದಿಗೂ ಗಮನಾರ್ಹವೆನಿಸುತ್ತದೆ.

'ಯೋಗ' ಎಂಬುದು ನಮ್ಮ ಭಾರತೀಯ ದರ್ಶನ ಪರಂಪರೆಗೆ ಹೊಸ ಪರಿಕಲ್ಪನೆಯೇನೂ ಅಲ್ಲ. ಆಗಲೇ ಹೇಳಿದಂತೆ ಅದು ನಮ್ಮ ವೇದಾಂತ ಪರಂಪರೆಯಷ್ಟೇ ಪ್ರಾಚೀನವಾದದ್ದು. ಆಧ್ಯಾತ್ಮಿಕ ವಿವಿಧ ವಿಷಯ ಪರಿಕಲ್ಪನೆಗಳನ್ನು ಕುರಿತು ಬೇರೆ ಬೇರೆ ದರ್ಶನಗಳು ಅನುಭವ-ಅಭಿಪ್ರಾಯಗಳು ಹುಟ್ಟಿ ಬೆಳೆದುಬಂದ ಹಾಗೆ 'ಯೋಗ'ದ ಸ್ವರೂಪ-ಲಕ್ಷಣ, ಪ್ರಕಾರ-ಪರಿಕಲ್ಪನೆ, ರೀತಿ-ವಿಧಾನಗಳು ವಿಪುಲವಾಗಿ ಬೆಳೆದುಕೊಂಡು ಬಂದಿವೆ. ಇದರ ಒಟ್ಟು ಪರಿಣಾಮವಾಗಿ ಮಂತ್ರಯೋಗ, ಹಠಯೋಗ, ಲಯಯೋಗ, ರಾಜಯೋಗ ಎಂಬ ನಾಲ್ಕುಪ್ರಕಾರದ ಯೋಗಗಳೇ ಅಲ್ಲದೇ ಅಷ್ಟಾಂಗಯೋಗ, ಪಂಚಯೋಗ, ಏಕಮುದ್ರೆ, ತ್ರಿಮುದ್ರೆಗಳೊಂದಿಗೆ ಅಂಬಿಕಾಯೋಗ, ಸಿದ್ಧಯೋಗ, ಪಿಶಾಚಯೋಗ ಇತ್ಯಾದಿಯಾಗಿ ಯೋಗಗಳ ಪ್ರಭೇದಗಳು ಹೆಚ್ಚುತ್ತಾ ಹೋಗಿವೆ. ಇವುಗಳಲ್ಲಿಯು ಒಂದೊಂದು ಯೋಗಕ್ಕೂ ತನ್ನದೇ ಆದ ರೂಪ-ಲಕ್ಷಣಗಳು, ಪ್ರಯೋಜನಗಳೂ ಇವೆ. ಒಂದೊಂದು ಯೋಗವೂ ಒಂದೊಂದು ವರ್ಗದ ಸಾಧಕರಿಗೆ ಸೀಮಿತವಾಗಿರುವುದಾದರೂ ಲಿಂಗಾಂಗಸಾಮರಸ್ಯದ ರಹಸ್ಯವನ್ನು ಒಳಗೊಂಡ ಶಿವಯೋಗವು ಮಾತ್ರ ಎಲ್ಲ ವರ್ಗದ ಸಾಧಕರಿಗೂ ಅತ್ಯಂತ ಸುಲಭವಾದದ್ದು, ಅನುಷ್ಠಾನಕ್ಕೆ ಸರಳವಾದದ್ದು. ಮುಖ್ಯವಾಗಿ ಅಪಾಯರಹಿತವಾದದ್ದು.

ಲಿಂಗಾಂಗಸಾಮರಸ್ಯವನ್ನು ಸಾಧಿಸಲು ಶರಣರು ತಮ್ಮ ಅನುಭಾವದ ಹಿನ್ನೆಲೆಯಲ್ಲಿ ಕಂಡುಕೊಂಡ ಒಂದು ವಿನೂತನ ಸಾಧನೋಪಾಯವೇ ಶಿವಯೋಗ. ಎಲ್ಲ ಯೋಗಗಳ ಸಾರವನ್ನು ಸಮನ್ವಯಗೊಳಿಸಿಕೊಂಡ ಕಾರಣ ಇದು ಮಹಾಯೋಗ, ಪೂರ್ಣಯೋಗ ಎಂಬ ಪ್ರಶಸ್ತಿಗೂ ಪಾತ್ರವಾಗಿದೆ.

ಲಿಂಗಾಂಗಸಾಮರಸ್ಯವನ್ನು ಸಾಧಿಸಿಕೊಡುವ ಈ ಶಿವಯೋಗವನ್ನು ವೀರಶೈವ ವೀರವಿರಕ್ತನಾದ ಗುರುಬಸವ 'ಶಿವಾತ್ಮರ ಯೋಗಕ್ರಮ'ವೆಂದು ಕಲ್ಯಾಣೇಶ್ವರದ ಆರಂಭದಲ್ಲಿಯೇ ಸ್ಪಷ್ಟಪಡಿಸಿದ್ದಾನೆ. ಯೋಗ ಎಂದರೆ ಕೂಡುವುದು ಹೊಂದುವುದು, ಪಡೆಯುವದು, ಸಾಮರಸ್ಯ ಮತ್ತು ಅವೆಲ್ಲವುಗಳ ಉಪಾಯವೆಂದೂ ಅರ್ಥ. ಇಲ್ಲಿ 'ಶಿವಾತ್ಮರ ಯೋಗ' ಎಂಬುದು ಶಿವ ಹಾಗೂ ಜೀವರ ಅಂದರೆ ಪರಮಾತ್ಮ ಮತ್ತು ಜೀವಾತ್ಮರ ಲಿಂಗ-ಅಂಗಗಳ ಸಾಮರಸ್ಯವೆಂದೂ ಮತ್ತು ಅದನ್ನು ಸಾಧಿಸುವ ಉಪಾಯ ಎಂದು ಅರ್ಥ. ಅಂದರೆ ಶರೀರ ಅಳಿದಮೇಲೆ ಜೀವಾತ್ಮಪರಮಾತ್ಮನನ್ನು ಕೂಡುವುದಲ್ಲ. ಕಾಯವಿರುವಾಗಲೇ ಜೀವಾತ್ಮಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಐಕ್ಯಾನುಭವವನ್ನು ಪಡೆಯುವುದು. ಮೋಕ್ಷವನ್ನು ಅನುಭವಿಸುವುದು ಶಿವಯೋಗ; ಅಳಿಯದೆ ಪಡೆಯುವ ಮೋಕ್ಷದ ಸುಖವೇ ಶಿವಯೋಗ, ಇದೇ ಅದರ ವಿಶೇಷ ಮತ್ತು ವೈಶಿಷ್ಟ್ಯ.

ಲಿಂಗಾಂಗಸಾಮರಸ್ಯವೇ 'ಶಿವಯೋಗ'ದ ಮೂಲಭೂತ ಪ್ರಯೋಜನವಾದದ್ದರಿಂದ ಲಿಂಗ-ಅಂಗಗಳ ಪ್ರಭೇದಗಳ ಅಂದರೆ ಷಟ್‌ಸ್ಥಲಗಳ ಜ್ಞಾನ ಸಾಧಕನಿಗೆ ತೀರಾ ಅನಿವಾರ್ಯ. ಶಿವಯೋಗ ಇಷ್ಟಲಿಂಗ ಕೇಂದ್ರಿತವಾದದ್ದರಿಂದ ಈ ಇಷ್ಟಲಿಂಗದ

ಲಕ್ಷಣ–ಸ್ವರೂಪ ಅವರ ಪೂರ್ಣ ಅರಿವು ಕೂಡ ಅಷ್ಟೇ ಅನಿವಾರ್ಯ. ಹಾಗೆಂದೇ 'ಇಷ್ಟಲಿಂಗೋಪಾಸನೆಯೇ ಶಿವಯೋಗ'ವೆಂದೂ ಹೇಳಲಾಗಿದೆ. ಅದುವೇ ವೀರಶೈವ ದರ್ಶನದ ಜೀವಜೀವಾಳವೂ ಕೂಡಾ. ಜಗತ್ತಿನ ಮೇಲಾಗುವ ಸದಾದಿಗಳ ಪರಿಣಾಮ ಲಿಂಗಾಂಗಳ ಸ್ವರೂಪ, ಅವುಗಳ ಆಂತರಿಕ ಸಂಬಂಧ, ನೀತಿಕ್ರಮ, ಚಕ್ರಗಳ ಪ್ರಕಾರ ಇತ್ಯಾದಿಗಳನ್ನು ಕುರಿತು ಸ್ಥೂಲ ಪರಿಚಯುವನ್ನು ಕೊಡಲಾಗಿದೆ. ಯೋಗದ ಸಾಧನೆ, ಅನುಷ್ಠಾನಗಳ ರೀತಿಕ್ರಮಗಳನ್ನು, ಆಸನ ಹಾಗೂ ನಾಡಿಕ್ರಿಯೆಗಳನ್ನು ವಿವರಿಸಲಾಗಿದೆ. ಯೋಗಾಂಗಗಳ ಎಲ್ಲ ಪ್ರಕ್ರಿಯೆಗಳನ್ನು ವಿವರಿಸುತ್ತಲೇ ಲಿಂಗಾಂಗಸಾಮರಸ್ಯದ ಅನುಭವಕ್ಕೆ ವಿಶೇಷ ಒತ್ತು ಕೊಡಲಾಗಿದೆ.

"ಸರ್ವವನೊಳಗೊಂಡಿಹ ಲಿಂಗವ ಭೇದಿಸಬೇಕೆಂದನು ದೇಶಿಕನು." ಇದನೋದಿದ ಮಾತ್ರದೊಳೆ ಲಿಂಗಾಂಗದ ಹಾದಿಯನಱಿಯಲುಬಹುದೆ ಗಿರೀಶನಿರೂಪಿಸಬೇಕೆಂದ" (೧೧) "ಲಿಂಗವನಱಿದಲ್ಲದೆಕೇಳ್ನಿನಗಾತ್ಮಾಂಗವನಱಿಯಲುಬಾರದು ದಿಟವಾತ್ಮಾಂಗವನಱಿದಲ್ಲದೆ ಮಾರುತ ಕರುಣೇಂದ್ರಿಯ ದರ್ಪವನು ಭಂಗಿಸಬಾರದು ಮೋಕ್ಷಾಂಗನೆ ಕೈವಿಡಿಯಳು ನೀನದನಱಿಯೆಂದನು ದೇಶಿಕನು" (೧೨) ಇತ್ಯಾದಿಯಾಗಿ ಗುರುಶಿಷ್ಯರ ಸಂವಾದದಲ್ಲಿ ಕಂಡುಬರುವ ಲಿಂಗ, ಮಹಾಲಿಂಗ, ಆತ್ಮಲಿಂಗದ ಸ್ವರೂಪಜ್ಞಾನದ ಅವಶ್ಯಕತೆಯನ್ನು ಈ ಸಂದರ್ಭದಲ್ಲಿ ಅಗತ್ಯವಾಗಿ ಗಮನಿಸಬಹುದಾಗಿದೆ ಮುಂದುವರಿದು ಷಟ್‌ಸ್ಥಲ ಕ್ರಮವನ್ನು ಷಟ್‌ಸದಾಂಖ್ಯಂಗಳ ಸ್ಥಲ ವಿವರಣೆಯ ನಂತರ

ಲಿಂಗವೆ ತನು ಲಿಂಗವೆ ಹೃಲ್ಲಿಂಗವೆ
ಕಂಗಳು ಕಿವಿನಾಸಿಕರಸನಂಗಳು
ಚರಮೇಂದ್ರಿಯಂಗಳು ಲಿಂಗವೆ ಪರಮಾತ್ಮ
ಲಿಂಗವೆ ಬಹಿರಭ್ಯಂತರ ನಿರೂಪಮ ಲಿಂಗವೆ ವಿಶ್ವೇಶ್ವರ
ವಿಶ್ವಾಲಯ ಲಿಂಗವೆ ಲಿಂಗಾಂಗೈಕ್ಯದ ಸುಖ ಕೇಳೆಂದನು ದೇಶಿಕನು (೨೦)

ಹೀಗೆಲ್ಲ ಷಟ್‌ಸ್ಥಲದ ಹಾಗೂ ಲಿಂಗದ ಸ್ವರೂಪವನ್ನು ಅವುಗಳ ಸ್ಥಾನವನ್ನು ನಿರ್ದೇಶಿಸಿದ ಗುರುಬಸವ ಕೊನೆಗೆ ಶಿವಯೋಗದ ಒಳತಿರುಳನ್ನು ಕುರಿತು ನಿರ್ಣಾಯಕವೆನ್ನುವಂತೆ 'ನಿಜಹಸ್ತಾಬ್ಜದೊಳಹ ಲಿಂಗದ ನೆಸಹೆ ಸುಸ್ಥಿರವಾದಡೆ ಸಾಲದೆ ದರ್ಪಣವಿಡಿದುನಿಜಾನನದ ವ್ಯಕ್ತಿಯ ಬೆಸಗೊಳಲೇತಕೆ (೨೧) ಎಂದು ದೃಷ್ಟಾಂತವನ್ನು ಮುಂದೆಮಾಡಿ ಕೇಳುವ ಮಾರ್ಮಿಕ ಪ್ರಶ್ನೆ ಶಿವಯೋಗದಲ್ಲಿ ಇಷ್ಟಲಿಂಗದ ಉಪಾಸನೆಯ ಮಹತ್ವವನ್ನು ಅರಿವಿಗೆ ತರುವಂತಿದೆ. ಈ ಇಷ್ಟಲಿಂಗದ ಉಪಾಸನೆ, ಲಿಂಗಾಂಗಸಾಮರಸ್ಯವೇ ಇತರ ಯೋಗಗಳಿಗಿಂತ ಶಿವಯೋಗವನ್ನು ಪ್ರತ್ಯೇಕಗೊಳಿಸುತ್ತಿದೆ, ವಿಶಿಷ್ಟಗೊಳಿಸುತ್ತದೆ.

ಅನು ಕಾರಣ ತನು ಮೂಱೊಳಾವಗಮಧಿಗತವಹ ಷಟ್‌ಸ್ಥಲ ಲಿಂಗಂಗಳ ಸವಸವೆನಿಪ ಶಿವತತ್ತ್ವರಹಸ್ಯಾಗಮ ತಂತ್ರೋತ್ತರದ ಮೊದಲಹನೆನಸವನೊಂದೆ

ಶಾಶ್ವತ (೨೩) ಹೀಗೆ ಶಿವಯೋಗ ಇಷ್ಟಲಿಂಗ ಕೇಂದ್ರಿತವೆಂಬುದನ್ನು ಮೇಲಿಂದ ಮೇಲೆ ಗುರುಬಸವ ಸಾಧಕನಿಗೆ ಎಚ್ಚರಿಕೆ ಕೊಡುತ್ತಾ ಹೋಗುತ್ತಾನೆ.

ಹೀಗೆ ಶಿವಯೋಗವೆಂಬುದು ಇಷ್ಟಲಿಂಗೋಪಾಸನಾ ಮೂಲವೆಂಬುದನ್ನು ಖಚಿತಗೊಳಿಸಿ, ಆ ಇಷ್ಟಲಿಂಗದಲ್ಲಿ ಲೀನವಾಗುವ ಬಗೆಯನ್ನೂ ಅದರ ವಿಧಿ-ವಿಧಾನವನ್ನೂ ಅತ್ಯಂತ ಸಂಯಮತೆಯಿಂದ ಮನವರಿಕೆ ಮಾಡಿಕೊಡಲಾಗಿದೆ. ಕಾಯವಿದ್ದಂತೆಯೇ ಬಯಲಾಗುವ ಉಪಾಯವನ್ನು ಅನುಸರಿಸುವ ಇಷ್ಟಲಿಂಗೋಪಾಸನೆಯ ಪ್ರತಿಯೊಂದು ಪ್ರಕ್ರಿಯೆಯೂ ಯೋಗವೆ. ಲಿಂಗಾಂಗಸಾಮರಸ್ಯವೇ ಶಿವಯೋಗದ ಚರಮಗುರಿಯಾದರೂ ಅದರ ಸಾಧನದ ಮಾರ್ಗ-ವಿಧಿ-ವಿಧಾನಗಳೂ ಆ ಯೋಗದ ಅಂಗಗಳೇ. ಆದ್ದರಿಂದ ಮಹಾಶಿವಯೋಗಿಯಾದ ಗುರುಬಸವ ಶಿವಯೋಗದ ನಿರೂಪಣೆಯ ಸಂದರ್ಭದಲ್ಲೂ ಅಷ್ಟಾಂಗಯೋಗದಂತಹ ಇತರ ಯೋಗದ ಸಾಧನೋಪಾಯಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಸಮಾಧಿಗಳನ್ನು ಕುರಿತ ನಿರೂಪಣೆಯಲ್ಲೂ ಅನಿವಾರ್ಯವಾದ ಅಷ್ಟೇ ಔಚಿತ್ಯಪೂರ್ಣವಾದ ಆಸಕ್ತಿಯನ್ನು ತೋರಿಸ್ತಾನೆ ಇವೆಲ್ಲ ಸಾಧಕನಾದವನು ತನ್ನ ಪರಮಗುರಿಯನ್ನು ಸಾಧಿಸಲು ಅನುಸರಿಸಬೇಕಾದ ಸಾಧನಮಾರ್ಗಗಳಾದರೂ ಈ ಅಷ್ಟಾಂಗಯೋಗವನ್ನು ಸೋಪಾನವಾಗಿ ಸ್ವೀಕರಿಸುವ ಶಿವಯೋಗದ ಗುರಿ ಮಾತ್ರ ಇತರ ಯೋಗಕ್ಕಿಂತ ಭಿನ್ನವಾದದ್ದು. ಆದ್ದರಿಂದ ಇಷ್ಟಲಿಂಗವನ್ನು ಕೇಂದ್ರವಾಗಿಟ್ಟುಕೊಂಡೇ ಈ ಅಷ್ಟಾಂಗಗಳು ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಎಲ್ಲ ಯೋಗಗಳಿಗೂ ಬಹುಶಃ ಸಾಧಾರಣವೆನಿಸುವ ಯಾಮನಿಯಮಾದಿಗಳ ನಿರೂಪಣೆಯೊಂದಿಗೇನೇ ಶಿವಯೋಗದ ಪಂಚಪ್ರಕಾರಗಳಾದ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನಗಳನ್ನು ಗಮನದಲ್ಲಿಟ್ಟುಕೊಂಡಿರುವದನ್ನು ಲಕ್ಷಿಸಬಹುದಾಗಿದೆ.

"ರಸನದ ದರ್ಪಮುಂ ಮಾತಾಡುವ
ವ್ಯಸನವ ಬಿಟ್ಟಂಗೋಪಾಂಗಗಳ
ವಸವಂ ಮಾಡಾಹಾರ ವ್ಯವಹಾರದ ಸಂಕೋಚತೆಯ
ಪಸರಿಸದಿರು ಜಾಗ್ರದೊಳತಿ ನಿದ್ರೆಯ
ನೆಸಗದಿರೀ ವಿಧವಂ ಲೌಕಿಕರೊಳು
ಬೆಸೆಸದಿರಲೆನಾಸಾಗ್ರವ ಮರೆಯದಿರೆಂದನು-ದೇಶಿಕನು" (೩೦)

"ಕುಂಭಕದಿಂ ಸಂಕೋಚಿತವಹ ಮೂ
ಲಾಂಬುಜದಿಂ ಸುಸ್ಥಿರ ಘನಲಕ್ಷ್ಯಾ
ಲಂಬನದಿಂ ದಾಹಾರ ವ್ಯವಹಾರಂಗಳ ಸಂಯಮದಿಂ
ಬೆಂಬಿಳಿವಿಡಿದೋಂಕಾರದ ನಿರುಪಮ

ಸಂಭ್ರಮದಿಂ ಲಿಂಗಾಂಗದ ಯೋಗಾ
ಡಂಬರನೆಸೆದನನನ್ಯ ಶಿವಜ್ಞಾನಾದ್ವಯ ಸಿದ್ಧಿಯೊಳು" (೪೦)

ಎಂಬಂಥ ಎಷ್ಟೋ ಪದ್ಯಗಳನ್ನು ಮೇಲಿನ ಮಾತಿಗೆ ಉದಾಹರಣೆಯಾಗಿ ಉದ್ಧರಿಸಬಹುದಾಗಿದೆ. ಮುಖ್ಯವಾಗಿ, ಇಂಥ ಯೌಗಿಕ ವಿಷಯ ಸಾಮಗ್ರಿಯನ್ನು, ಅದರ ರಹಸ್ಯವನ್ನು, ಅದರ ಒಳಸೂಕ್ಷ್ಮಗಳನ್ನು ಯಾಂತ್ರಿಕವಾಗಿ ಸೂತ್ರೀಕರಿಸಿ ಶಾಸ್ತ್ರದ ಶುಷ್ಕ ಆವರಣವನ್ನು ಉಂಟುಮಾಡದೆ ಕಾವ್ಯದ ಆವರಣವನ್ನು ಸೃಷ್ಟಿಸಿಕೊಡುವಲ್ಲಿ ಗುರುಬಸವನ ಹೆಚ್ಚುಗಾರಿಕೆ ಇದೆ. ಶಿವಯೋಗ ಸಿದ್ಧಿಯ ಚರಮಾನುಭವದ ಉಜ್ವಲ ಅಭಿವ್ಯಕ್ತಿಯಲ್ಲಿ ಪ್ರಕಟವಾದ ಗುರುಬಸವನ ಪ್ರತಿಭೆಗೆ ಈ ಒಂದು ಪದ್ಯ ನಿದರ್ಶನ.

ಪ್ರಳಯಾರ್ಕನ ದೀಪ್ತಿಯನೊಳಕೊಂಡು
ಜ್ವಲಿಸುವ ಲಿಂಗದ್ಯುತಿ ಸರ್ವಾಂಗವ
ಬಳಸಿ ಮಹಾತೇಜಃಪುಂಜೀಕೃತವಾಗಿ ಬಹಿಷ್ಕರಿಸಿ
ಮಲೆವುತೆ ದಳವೇರುತೆ ಥಳಥಳಿಸುತೆ
ಘುಳುಘುಳಿಸುತೆ ಘೂರ್ಮಿಸುತೆ ಸಮಸ್ತವ
ಸುಳಿಸುಳಿಗೊಳುತಿಹುದೀಗ ಮಹಾಸಿದ್ಧಿಗೆ ಕುರುಹಜಿ(?)ಯೆಂದ (೪೦)

ಇಲ್ಲಿ ಅದ್ಭುತವಾದ ಅಲೌಕಿಕ ಅನುಭವದ ಅಭಿವ್ಯಕ್ತಿಗೆ ಭಾಷೆಯನ್ನು ಅವೆಷ್ಟು ಶಕ್ತಿಯುತವಾಗಿ ಬಳಸಿಕೊಂಡಿದ್ದಾನೆಂಬುದನ್ನು ಗಮನಿಸಬೇಕು. ಸಂಯುಕ್ತಾಕ್ಷರ ಹಾಗೂ ಮಹಾಪ್ರಾಣಯುಕ್ತವಾದ ಶಬ್ದಪ್ರಯೋಗ ಹಾಗೂ ಅವುಗಳ ಸಾರ್ಥಕ ಸಂಯೋಜನೆ ಭಾಷೆಯ ಲಯಕ್ಕೆ ಒಟ್ಟು ಶೈಲಿಗೆ ಓಜಸ್ಸನ್ನು ಒದಗಿಸುತ್ತದೆ. ಪ್ರಳಯಾರ್ಕ, ಘೂರ್ಮಿಸು ಎಂಬಂಥ ಶಬ್ದಗಳಲ್ಲಿ ಏಕಕಾಲಕ್ಕೆ ಕಾಣಿಸಿಕೊಳ್ಳುವ ಮಹಾಪ್ರಾಣ ಹಾಗೂ ಸಂಯುಕ್ತಾಕ್ಷರಗಳು ಅನುಭವದ ಶಕ್ತಿಯುತವಾದ ಸುಳಿಗಳನ್ನು ನಿರ್ಮಿಸುತ್ತ ಹೋಗುತ್ತವೆ. ಜ್ವಾಲೆಯ ಕಿಡಿಗಳಂತೆ ಸಿಡಿಯುತ್ತ ಸಾಲುಗಟ್ಟಿ ಬರುವ ಶಬ್ದಗಳ ಮೇಳಗುಣಿತ ಹಾಗೂ ಅವುಗಳ ಪ್ರಖರತೆ ಅನುಭವವನ್ನು ಪರಿಣಾಮಸಹಿತವಾಗಿ ಸೆರೆಹಿಡಿದುಕೊಡುತ್ತವೆ. ಆದರೆ ಇಂತಹ ಓಜೋಗುಣದಿಂದ ಕೂಡಿದ ಭಾಷಾಪ್ರಯೋಗವಾಗಲಿ, ಶೈಲಿಯಾಗಲಿ ವೀರಶೈವ ಸಾಹಿತ್ಯ ಸಂದರ್ಭದಲ್ಲಿ ವಿನೂತನವಾದದ್ದೆಂದೇನೂ ಹೇಳುವಂತಿಲ್ಲ. ಹಾಗೆ ನೋಡಿದರೆ ಇದು ಕೂಡ ಒಂದು ಅನುಕರಣೆಯ ಮಟ್ಟದಲ್ಲೇ ನಿಂತುಕೊಳ್ಳುವಂತಹದು. ಆದರೂ ಔಚಿತ್ಯಪೂರ್ಣವಾದ ಅದರ ಸಾಂದರ್ಭಿಕ ಬಳಕೆಯಿಂದಾಗಿ ಅದು ಹೆಚ್ಚು ಸಾರ್ಥಕ. ಮೇಲಾಗಿ ಇಂಥ ಅನುಭವದ ಅಭಿವ್ಯಕ್ತಿ ಈ ಮಾರ್ಗದಲ್ಲಿಯೇ ಮೈದಾಳವೆ ಬೇರೆ ವಿಧಿ ಇಲ್ಲ. ಕವಿ ಬಳಸಿಕೊಳ್ಳುವ ಉಪಮೆ, ದೃಷ್ಟಾಂತಗಳು ಒಂದು ತತ್ವದರ್ಶನ ಸಿದ್ಧಾಂತವನ್ನು ಮನವರಿಕೆ ಮಾಡಿಕೊಡುವಲ್ಲಿ ಹೆಚ್ಚು ಅರ್ಥಪೂರ್ಣ. ಅವುಗಳ ಪ್ರಯೋಗದಲ್ಲಿ ಸೌಂದರ್ಯಪ್ರಜ್ಞೆಗಿಂತ ಶಾಸ್ತ್ರಪ್ರಜ್ಞೆ ಮುಂದಾಗಿರುವುದೂ ಅಷ್ಟೇ ಗಮನಾರ್ಹ. ಅವೆಲ್ಲವೂ ಕವಿನಿರ್ಮಿತವಾದವುಗಳಾಗಿರದೆ ಪರಂಪರೆಯ ಮೂಲದಿಂದಲೇ ಎತ್ತಿಕೊಂಡವುಗಳು ಕೆಲವಂತೂ ಆಗಲೇ ವಚನ ಸಾಹಿತ್ಯದಲ್ಲಿ ತುಂಬಾ

ಸಾರ್ಥಕವಾಗಿ ದುಡಿದಂತಹುಗಳು ಆದರೂ ಸವಕಳೆಯಾಗದೆ ಇನ್ನೂ ತಮ್ಮ ತಾಜಾತನ ವನ್ನು ಉಳಿಸಿಕೊಂಡವುಗಳು. ಜಗವು ಲಿಂಗಾತ್ಮಕವಾಗಿರುವ ಬಗೆಯುನ್ನು ನಮ್ಮ ಅರಿವಿಗೆ ತರುವಲ್ಲಿ....ಜಗನಿದುಲಿಂಗದೊಳು ಗಿರಿಯೊಳು ಶಿಲೆ, ಕನಕದೊಳು ಕಟಕ....(೯)'ಕರ್ಪೂರ ಪರಿಮಳದಂತೆ ಹಿರಣ್ಯದೊಳಿರ್ಪ ಸುವರ್ಣದ ಪರಿ ಪರಮಾತ್ಮನ ಸುಪ್ರಭೆ...(೪) ಎಂಬುದು, ಅದರಂತೆ ಮರುತನ ಅನಾತ್ಮಕತೆಯುನ್ನು ಬಿಂಬಿಸಿಕೊಡುವಾಗ "ಭಕ್ತಿಯ ತೆರಸಂತಲಸದೆ ಕಹಳೆಯನೊತ್ತುವ ಜೀವದ ಹೊಲೆಯುನ ಪರಿಯಂತೊತ್ತಿ ಸಮಸ್ತಾಂಗ ದೊಳಿಹ ಬಿಂಬದ ಸೂತ್ರದ ಪರಿಯಂತೆ" ಎಂಬಲ್ಲಿಯ ಉಪಮಾನಗಳು ತುಂಬ ಪ್ರಯೋನಕಾರಿಯಾದವುಗಳು.

ಇನ್ನು ಜೀವಾತ್ಮ ಪರಮಾತ್ಮನ ಲಿಂಗಾಂಶಕವಾಗಿರುವ ಸೂಕ್ಷ್ಮ ವಿಷಯುವನ್ನು ಅನುಭವಕ್ಕೆ ತಂದುಕೊಡುವ ದೃಷ್ಟಾಂತವನ್ನು ಇನ್ನೂ ಸ್ಮರಣಾರ್ಹ–

"ಕಿರಣೋದಯುದಿಂದವತರಿಸಿದ ಪು
ಷ್ಕರಕ್ಕೆ ವಿಚಾರಿಸಿ ನೋಡುತ್ತಿರಲಾಗಿ
ಕಿರಣವೆ ಮುಖ್ಯವಲಾ ಕಿರಣಕ್ಕಜರ್ಲಕ್ಷಣೆಯಿಂದೆ
ತರುಣಿಯೆ ಮುಖ್ಯ ವಹಂಗಾ ಪರಿ ನಿ
ರ್ಧರಿಸಾತ್ಮತ್ರಯವಂ ನೀನದಱಿಂ
ಪರಮಾತ್ಮನ ಲಿಂಗಾಂಶಕನೆಂದರಿಯೆಂದನು ದೇಶಿಕನು"

ಹೀಗೆ ಒಂದು ತತ್ತ್ವದರ್ಶನವನ್ನು ಅನುಭವಕ್ಕೆ ತಂದುಕೊಡುವಲ್ಲಿ ಬಳಸಿಕೊಂಡ ಉಪಮೆ ಮತ್ತು ದೃಷ್ಟಾಂತಗಳ ಸಾಮಗ್ರಿಯೂ ಮುಖ್ಯವೆನಿಸುತ್ತದೆ. ಕೆಲವು ಸಾಮಗ್ರಿ ಗಳು ಪ್ರಕೃತಿ ವ್ಯಾಪಾರದಿಂದ ಎತ್ತಿಕೊಂಡ ಸಾಮಗ್ರಿಗಳಾದರೆ ಇನ್ನು ಕೆಲವು ಮಾನವ ವ್ಯಾಪಾರದ ಸಾಮಗ್ರಿಗಳಾಗಿದ್ದು ವಿಷಯದ ನಿರೂಪಣೆಗೆ, ತರ್ಕ ಪ್ರತಿಪಾದನೆಗೆ ಶಾಸ್ತ್ರದ ದೃಷ್ಟಿಯಿಂದ ಹೆಚ್ಚು ಪ್ರಯೋಜನಕಾರಿಯೆನಿಸುತ್ತವೆ. ಇಲ್ಲಿಯ ಉಪಮೆಗಳಾಗಲಿ, ದೃಷ್ಟಾಂತಗಳಾಗಲಿ ಕವಿಯ ಸ್ವಂತ ಸೃಷ್ಟಿ ಎಂದು ಹೇಳಲಾಗದಿದ್ದರೂ ಕವಿಯ ಔಚಿತ್ಯ ಪ್ರಜ್ಞೆ ಅವೆಲ್ಲವುಗಳಿಗೆ ಹೊಸ ಲವಲವಿಕೆಯನ್ನು ತಾಜಾತನವನ್ನು ತಂದುಕೊಡುತ್ತವೆ.

ವಿಷಯ ನಿರೂಪಣೆಯಲ್ಲಿ ಗುರುಬಸವ ಬಳಸಿಕೊಂಡ ಸಂಭಾಷಣೆಯ ತಂತ್ರವೂ ಶಾಸ್ತ್ರ ಪ್ರತಿಪಾದನೆಯ ಸಂದರ್ಭದಲ್ಲಿ ಹೆಚ್ಚು ಗಮನಾರ್ಹವೆನಿಸುತ್ತದೆ. ಇನ್ನೂ ಗಮನ ಸೆಳೆಯುವ ಒಂದು ಅಂಶವೆಂದರೆ, ಯಾವುದೇ ದರ್ಶನದ ವಿಷಯ ಗಹನವಾಗಿರುವಂತೆ ಸಂಕೀರ್ಣವೂ, ಅಮೂರ್ತವೂ ಆಗಿರುವುದರಿಂದ ಅದರ ನಿರೂಪಣೆಯಲ್ಲೂ, ಒಂದು ಬಗೆ ಅಸ್ಪಷ್ಟತೆ, ಗೊಂದಲವೂ ಅಷ್ಟೇ ಅನಿವಾರ್ಯವೆನ್ನುವಂತೆ ಕಾಣಿಸಿಕೊಳ್ಳುತ್ತದೆ. ಅದ ರಿಂದಾಗಿ ವಿಷಯುವನ್ನು ಮನನ ಮಾಡಿಕೊಳ್ಳುವಲ್ಲಿ ಸಾಧಕನಿಗೆ ದ್ವಂದ್ವ ಹಾಗೂ ತೊಡಕು ಕಾಣಿಸಿಕೊಳ್ಳುವುದೂ ಸಹಜವಾಗುತ್ತದೆ. ಇಂತಹ ಸನ್ನಿವೇಶಗಳನ್ನು ಬಳಸಿಕೊಂಡು

ಸಮಸ್ಯೆಗಳನ್ನು ನಿವಾರಿಸಿಕೊಳ್ಳುವಲ್ಲಿ ಸಂಭಾಷಣೆಯು ತಂತ್ರ ಗುರುಬಸವನಲ್ಲಿ ಕಲಾತ್ಮಕವಾಗಿ ಸಫಲಗೊಂಡಿದೆ.

"ಅಸದೃಶವಹ ಲಿಂಗಾಂಗಗಳ ಸಮ
ರಸವೆ ಪರಮವೆಂದೆನಗೆ ನಿರೂಪವ ಬೆ
ಸಸಿದಿರೀಗ ತನುತ್ರಯ ನಿಶ್ಚಲದಿಂ ಪ್ರಸರಪಿ ಮೋಕ್ಷ!
ವಶವಹುದೆನಲೆರಡಜಿಗೊಳಾವುದ ಕೊಂ
ಡೆಸಗುವೆನಯ್ಯ ದಯಾಬ್ಧಿ ವೃಥಾ ಬಳ
ಲಿಸದೆ ಮದೀಯ ಮನಃ ಸಂಶಯವ ನಿವೃತ್ತಿಯ ಮಾಡೆಂದ(೨೫)

ಎಂಬ ಶಿಷ್ಯನ ಈ ಸಂದಿಗ್ಧತೆ ಭಗವದ್ಗೀತೆಯಲ್ಲಿಯ ಅರ್ಜುನನ ಸಂದಿಗ್ಧತೆಯನ್ನು ನೆನಪಿಗೆ ತಂದುಕೊಡುತ್ತದೆ.೪

ಹೀಗೆ ವಸ್ತು-ವಿಷಯ, ಭಾಷೆ, ತಂತ್ರ, ಶೈಲಿ ಅತ್ಯಂತ ಹೊಸದಲ್ಲವಾದರೂ ಅವುಗಳ ಔಚಿತ್ಯ ಆ ಎಲ್ಲವುಗಳಿಗೆ ಒಂದು ಮಹತ್ವವನ್ನು ತಂದಿರುವುದನ್ನು ಮರೆಯಲಾಗದು. ಅದೇನೇ ಇದ್ದರೂ ಸಪ್ತ ಕಾವ್ಯಗಳ ಗುರುಬಸವ ಮೊದಲು ಒಬ್ಬ ಯೋಗಿ, ದಾರ್ಶನಿಕ ಹಾಗೂ ಶಾಸ್ತ್ರಜ್ಞ ಅನಂತರ ಒಬ್ಬ ಮಧ್ಯಮ ವರ್ಗದ ಪ್ರಯತ್ನಶೀಲ, ಕಳಕಳಿಯ ಕವಿ.

ಅಡಿಟಿಪ್ಪಣಿಗಳು

೧ ಇಲ್ಲಿ ಸೂಚಿಸಿದ ಎಲ್ಲ ಪದ್ಯಗಳ ಸಂಖ್ಯೆ ಡಾ|| ಸುಂಕಾಪೂರ ಮತ್ತು ನಾಗಭೂಷಣಶಾಸ್ತ್ರಿಗಳು ಸಂಪಾದಿಸಿದ "ಕಲ್ಯಾಣೇಶ್ವರ" ಕೃತಿಯ ಪದ್ಯಗಳನ್ನು ಸೂಚಿಸುತ್ತವೆ.

೨ ನೋಡಿ. ಪ್ರಥಮೋಪದೇಶ; ಪದ್ಯ- ೧, ೨, ೩, ೪, ೫, ೬

೩ ಡಾ. ಶಿವಾನಂದ ವಿರಕ್ತಮಠ 'ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ' ಪ್ರ: ಕ. ವಿ. ವಿ. ಧಾರವಾಡ (೧೯೭೮) PP 156, 157

೪ "ಸಂನ್ಯಾಸ ಕರ್ಮಣಾಂ ಕೃಷ್ಣ ಪುನರ್ಯೋಗಂಚ ಶಂಸಶಿಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್" (v–1)
(ಎಲೆ ಕೃಷ್ಣ, ನೀನು ಕರ್ಮಗಳ ಸನ್ಯಾಸವನ್ನು ಮತ್ತೆ (ಕರ್ಮಗಳ) ಅನುಷ್ಠಾನವನ್ನು ಹೇಳುತ್ತಿದ್ದೀಯೆ; ಇವೆರಡರಲ್ಲಿ ಯಾವುದು ಶ್ರೇಯಸ್ಕರವೋ ಅದನ್ನು ನನಗೆ ನಿಶ್ಚಿತವಾಗಿ ಹೇಳು)

ಗುರುಬಸವ ಕೃತ ಸ್ವರೂಪಾಮೃತ

—ಪ್ರೊ. ಗುರುದೇವಿ ಹುಲೆಪ್ಪನವರಮಠ

ಷಟ್‌ಸ್ಥಲ ಚಕ್ರವರ್ತಿ ಗುರುಬಸವ ಕೃತ 'ಸ್ವರೂಪಾಮೃತ'ವು ಧಾರವಾಡದ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥ ಮಾಲೆಯಲ್ಲಿ ೫೧ನೆಯ ಪುಷ್ಪವಾಗಿ ಅರಳಿದೆ. 'ಸ್ವರೂಪಾಮೃತ' ಗುರುಬಸವ ಕವಿಯ ಭಾಮಿನಿಷಟ್ಪದಿಯಲ್ಲಿಯ ಚಿಕ್ಕ ಕಾವ್ಯ. ಈ ಕಾವ್ಯದಲ್ಲಿ ಮೂರು ಉಪದೇಶಗಳಿದ್ದು ಅವುಗಳಲ್ಲಿ ಒಟ್ಟು ೭೭ ಶ್ಲೋಕಗಳಿವೆ. ಕವಿಯು ಮಹಾನುಭಾವಿಯಾಗಿದ್ದು ಮುಮುಕ್ಷುಗಳಿಗೆ ತತ್ವ ಬೋಧೆ ಮಾಡಿದ್ದಾನೆ. ಪ್ರಥಮೋಪದೇಶದಲ್ಲಿ ಬಸವಾದಿ ಪ್ರಮಥರಂತೆ ಮನಸ್ಸಿನ ವಿಕಾರಗಳ ಬಗ್ಗೆಯೂ, ದ್ವಿತೀಯೋಪದೇಶದಲ್ಲಿ ಪರವಸ್ತುವಿನ ನಿಜಸ್ವರೂಪದ ಬಗ್ಗೆಯೂ ತೃತೀಯೋಪದೇಶದಲ್ಲಿ ತನುವಿನ ಗುಣಧರ್ಮಗಳ ಬಗ್ಗೆಯೂ ವರ್ಣನೆಯಿದೆ.

ಕವಿಯು ಮೊದಲ ಕೆಲ ಪದ್ಯಗಳಲ್ಲಿ ಮನಸ್ಸನ್ನು ಹಲವಾರು ಉಪಮೆಗಳಿಂದ ಸೊಗಸಾಗಿ ಚಿತ್ರಿಸಿ ಮನಸ್ಸನ್ನು ಕುಟಿಲಕುಹಕದ ಬೇತಾಳ, ಚಪಲಚೇಷ್ಟೆಯ ಮರ್ಕಟ, ಸಂಶಯ ಪಿಶಾಚಿ, ನುಂಗುವ ಮಾರಿ ಇತ್ಯಾದಿಯಾಗಿ ವರ್ಣಿಸಿದ್ದಾನೆ. ಸದ್ಗುರುವಿನ ಸಹಾಯದಿಂದ ಅಹಂಕಾರ ಮಮಕಾರಗಳನ್ನು ತೆಗೆದೊಗೆದು ಮನಶ್ಶಾಂತಿ ಗಳಿಸಲು ಸಾಧ್ಯ ಎಂದೂ ಸೂರ್ಯೋದಯವಾದ ಕೂಡಲೇ ಕತ್ತಲೆಯು ಹರಿಯುವಂತೆ 'ಅಹಂ ಬ್ರಹ್ಮಾಸ್ಮಿ' ಎಂಬ ಅರಿವು ಒಡಮೂಡಿದಾಕ್ಷಣ ನಮ್ಮಿಂದ ಅಜ್ಞಾನ ಮಾಯೆಗಳು ತೊಲಗುವವು. "ತನುವಿದನುಳಿದಿಂದ್ರಜಾಲವೊಂದುಂಟೆ?" ಎಂದು ನಿಜಗುಣರು ಹೇಳಿದಂತೆ ತನುವಿನ ಮೇಲೆ ಮೋಹವುಳ್ಳವರಿಗೆ ತನುವನ್ನು ಅಭಿಮಾನಿಸಿ ಐಹಿಕ ವಿಷಯಗಳ ಬೆನ್ನು ಹತ್ತಿ ನಡೆಯುವವರಿಗೆ ನಿಜಸುಖದೋರದು ಶರೀರವು ಜೀವನಿಗೆ ಅನೇಕ ಯಾತನೆಗಳನ್ನು ಕೊಡುವ ಯಮನಗರಿಯಂತಿದೆ. ಅದು ಸುಖ ದುಃಖಗಳ ನೆಲೆವೆನೆ ಎಂದು ಮುಂತಾಗಿ ಹೇಳುವ ಕವಿ ಶರಣರಂತೆ 'ತನುವಿದ್ದಲ್ಲಿ ಮನಭಾವ, ಆದುದರಿಂದ ತನುವಿಗೆ ಮಹತ್ವವುಂಟು; ಅದನ್ನು ಅಲ್ಲಗಳೆಯುವಂತಿಲ್ಲ; ತನುವಿಡಿದು ಮೋಕ್ಷಸಾಧನೆ ಮಾಡಬೇಕಾಗುತ್ತದೆ. ತನುವನ್ನು ಯಾರು ಸುಸಂಸ್ಕೃತಗೊಳಿಸಿ ಮಂತ್ರಪಿಂಡವನ್ನಾಗಿ ಮಾಡುವರೋ ಅವರಿಗೆ ಅದು ಸುಖ ಕೊಡುತ್ತದೆ. ಕೇವಲ ಶಿವಮಂತ್ರದಿಂದಲೇ ಅದರ ರಕ್ಷಣೆಯಾಗುವದು, ದೀಕ್ಷಾಹೀನರಾಗಿ ತನುವೇ ನಾವೆಂದು ಅಭಿಮಾನಿಸಿ ನಡೆಯುವವರ ದೇಹವನ್ನು ಯಾರೂ ಮುಟ್ಟರು ಎಂದೆಲ್ಲ ಕವಿ ಪ್ರತಿಪಾದಿಸಿದ್ದುಂಟು.

ಮನಸ್ಸು, ತನುವನ್ನು ಪರಿಶುದ್ಧಗೊಳಿಸಿಕೊಳ್ಳಲು ಬಸವಾದಿ ಪ್ರಮಥರಂತೆ ಗುರುಬಸವ ಕವಿ ಉಪಾಯಗಳನ್ನು ಸೂಚಿಸಿದ್ದಾನೆ. ತನ್ನ 'ಸ್ವರೂಪಾಮೃತ'ವನ್ನು ನುತಿಸುವವರಿಗೆ, ಅರ್ಥವನ್ನು ತಮ್ಮೊಳಗೆ ಮಥಿಸುವವರಿಗೆ ಕೈವಲ್ಯ ಪ್ರಾಪ್ತಿ ಎಂದು ಹೇಳಿದ್ದಾನೆ. ಗುರುಬಸವನ ಸ್ವರೂಪಾಮೃತದ ಮೂಲ ಪಾಠದೊಡನೆ ಅದರ ವಿಷಯ ಸಾರವನ್ನು, ಶೈಲಿ, ಭಾಷೆಯ ಕುರಿತಾದ ಕೆಲ ಮಾತುಗಳನ್ನು ಸಂಪಾದಕರು ಪ್ರಸ್ತಾಪಿಸಿ ಓದುಗರಿಗೆ ಕಾವ್ಯ ಹೆಚ್ಚು ಸ್ಫುಟವಾಗಿ ತಿಳಿಯುವಂತೆ ಮಾಡಿದ್ದಾರೆ.

□ □

ಗುರುಬಸವ ಕೃತ "ವೃಷಭಗೀತೆ"– ಒಂದು ವಿವೇಚನೆ

ಪ್ರೊ. ಆರ್. ಎಲ್. ಪೋಲೀಸಪಾಟೀಲ

ಗುರುಬಸವನು ಶಾಸ್ತ್ರ ಪರಿಣಿತಿಯನ್ನು ಪಡೆದು, ತನ್ನ ಶಾಸ್ತ್ರಾನುಭವವನ್ನು ಕಾವ್ಯಗಳಲ್ಲಿ ಸಶಕ್ತವಾಗಿ ತುಂಬಿ, ಶಾಸ್ತ್ರ ಕವಿಯೆಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ಈತನಿಗೆ ಭಕ್ತಜನೋಮನ ಮಂದಿರ, ಶಿವಯೋಗಿ ಜನಸೇವಿತ ಚರಣಾರವಿಂದ, ಷಟ್‌ಸ್ಥಲ ಜ್ಞಾನ ಪ್ರಭಾಪುಂಜ ರಂಜಿತಾಂತರಂಗ, ವೀರಶೈವ ಮತಸ್ಥಾಪನಾಚಾರ್ಯ ಬಿರುದು ಗಳಿದ್ದಂತೆ ತಿಳಿದು ಬರುತ್ತಿದೆ. ಇಷ್ಟೊಂದು ಪ್ರಸಿದ್ಧಿಯನ್ನು ಪಡೆದ ಗುರುಬಸವನು ನೂರೊಂದು ವಿರಕ್ತರಲ್ಲಿ ಒಬ್ಬನಾಗಿದ್ದನೆಂದು ಬಲ್ಲವರು ಅಭಿಪ್ರಾಯ ಪಟ್ಟಿದ್ದಾರೆ. ಹೀಗಾಗಿ ಕವಿ ಗುರುಬಸವನು ಕ್ರಿ.ಶ.ಸು. ೧೪೩೦ರಲ್ಲಿ ಜೀವಿಸಿರಬಹುದೆಂದು ಊಹಿಸ ಲಾಗಿದೆ.

ಕನ್ನಡದಲ್ಲಿ ವೇದಾಂತ ವಿಷಯವನ್ನು ಕುರಿತು ಬರೆದ ಕವಿಗಳ ಸಂಖ್ಯೆ ತೀರಾ ಕಡಿಮೆ ಪ್ರಮಾಣದಲ್ಲಿ ಕಂಡು ಬರುತ್ತಿವೆ. ಶ್ರೀ ನಿಜಗುಣ ಶಿವಯೋಗಿ, ಮಗ್ಗೆಯ ಮಾಯಿದೇವರು, ಮಹಾಲಿಂಗರಂಗ, ಕವಿ ಚಿದಾನಂದ, ಗುರುಬಸವಾರ್ಯ ಮೊದಲಾದವರು ಪ್ರಮುಖರೆನಿಸಿದ್ದಾರೆ. ಕವಿ ಗುರುಬಸವನಂತೆ ವೇದಾಂತ ವಿಷಯವನ್ನು ಸಶಾಸ್ತ್ರೀಯವಾಗಿ ನಿರೂಪಿಸಿದವರು ತುಂಬಾ ಕ್ವಚಿತ. ಸರಳವಾದ ಶೈಲಿಯಲ್ಲಿ ಕಠಿಣ ವಿಷಯವನ್ನು ಇವನಷ್ಟು ಸುಲಭವಾಗಿ ಹೇಳಿದವರು ಇನ್ನೊಬ್ಬರಿಲ್ಲ.

ಗುರುಬಸವನು ಸಪ್ತಕಾವ್ಯಗಳು ವೇದಾಂತ ವಿಷಯವನ್ನು ಬೋಧಿಸುವ ಹೊರತು ಕೊನೆಯಲ್ಲಿ ಲಿಂಗಾಂಗಸಾಮರಸ್ಯದ ತಿರುಳನ್ನೇ ಸ್ಪಷ್ಟವಾಗಿ ವಿಶದಪಡಿಸುತ್ತಿವೆ. ಅವನ ಕಾವ್ಯಗಳಿಗೆ ವಚನಾಗಮ, ಶಿವಾಗಮ, ವೇದೋಪನಿಷತ್ತುಗಳು ಪ್ರಮಾಣಗಳಾಗಿವೆ. ಕವಿ ಅವುಗಳ ಸಾರವನ್ನು ಹೀರಿ, ಅದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ನಿತ್ಯ ಸಾಧನೆಯನ್ನು ಬೋಧನೆಯ ರೂಪದಲ್ಲಿ ನೀಡಿದ್ದಾನೆ. ಗುರುಬಸವನ ಸಪ್ತಕಾವ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದೆರಡು ಮಹತ್ವದ ಅಂಶಗಳು ಅವನ ಸರ್ವಕೃತಿಗಳಲ್ಲಿ ಎದ್ದು ಕಂಡು ಬರುತ್ತಿವೆ. ಮೊದಲನೆಯದಾಗಿ ಈ ಕೃತಿಗಳಲ್ಲಿರುವ ವಿಷಯಗಳ ಗುರು–ಶಿಷ್ಯರ ಸಂವಾದ ರೂಪದಲ್ಲಿ ಮೂಡಿ ಬಂದಿವೆ. ಇವುಗಳಲ್ಲಿಯ ಇನ್ನೊಂದು ವೈಶಿಷ್ಟ್ಯ ವೆಂದರೆ ಗುರುಬಸವನ ಸಂಗೀತ ಜ್ಞಾನ. ಭೋಗ ಷಟ್ಪದಿಯಲ್ಲಿ ರಚನೆಗೊಂಡಿರುವ ಇಲ್ಲಿಯ ಪದ್ಯಗಳು ರಾಗ ಸಂಯೋಜನೆಯನ್ನು ಹೊಂದಿ, ಸಹೃದಯ ವಾಚಕ ಸಹೃದಯರನ್ನು ಸರಳವಾಗಿ ಸ್ಪರ್ಶಿಸುತ್ತವೆ.

'ವೃಷಭಗೀತೆ' ಗುರುಬಸವನ ಕೃತಿಗಳಲ್ಲಿಯೇ ಹೆಚ್ಚು ಪ್ರಸಿದ್ಧವಾಗಿದೆ. ಸಾಮಾನ್ಯರಿಗೂ ತಿಳಿಯುವ ಸುಲಭ ಶೈಲಿ ಈ ಕೃತಿಯ ವೈಶಿಷ್ಟ್ಯವಾಗಿದೆ. ಇದೊಂದು ಶತಕ ಕೃತಿಯಾಗಿದ್ದು, ತಾತ್ವಿಕ ದೃಷ್ಟಿಯಿಂದ ಪರಿಶೀಲಿಸಿದರೆ, ವೃಷಭಗೀತೆ ಭಗವದ್ಗೀತೆಗೆ ಸಮಾನವಾಗಿದೆ. ಕವಿ ಗುರುಬಸವನು ಇಂಥ ಪವಿತ್ರವಾದ ತನ್ನ ಈ ಕಾವ್ಯದಲ್ಲಿ ಮಾನವನು ಈ ಭೂಮಂಡಲದಲ್ಲಿ ಜನ್ಮವೆತ್ತಿ ಬರುವದೇ ದುರ್ಲಭ. ಈ ಭಾಗ್ಯ ಅವನಿಗೆ ಪ್ರಾಪ್ತವಾದಾಗ ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆದು ಪರಮ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಸಾಧಿಸಿಕೊಳ್ಳಬೇಕು. ಈ ಸಾಧನೆಯಲ್ಲಿ ಮಾನವನು ತನ್ನ ಇರುವಿಕೆಯನ್ನು ಗುರುತಿಸಿಕೊಂಡು, ಗುರುವಿನ ಹೇಳಿಕೆಯಂತೆ ಅಂತರಂಗ-ಬಹಿರಂಗಗಳಲ್ಲಿ ಶುದ್ಧನಾಗಿ ಅವನು ಬಾಳಬೇಕಾಗುತ್ತದೆ. ಸಾಧನೆಯ ಸ್ಥಿತಿಯಲ್ಲಿ ಹಲವಾರು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಒಟ್ಟಿನಲ್ಲಿ ಮಾನವ ಮಹಾಮಾನವನಾಗಬೇಕಾದರೆ ಯಾವ ರೀತಿಯಾಗಿ ವ್ಯಕ್ತಿಯು ಜೀವಿಸಬೇಕೆಂಬುವನ್ನು ಈ ಕೃತಿಯು ಬಹು ಮಾರ್ಮಿಕವಾಗಿ ಬೋಧಿಸುತ್ತಿದೆ.

ಗುರುಬಸವನು ಒಬ್ಬ ಶಾಸ್ತ್ರ ಕವಿಯಾಗಿ 'ಶಾಸ್ತ್ರ' ವಿಷಯವನ್ನು ಕಾವ್ಯಮಯವಾಗಿ ಹೇಳಲು ಹೊರಟಿರುವದು ಸಾಹಸವೇ ಸರಿ. ಕವಿಯಂತೆ ಕಥೆಯನ್ನು ಕಲ್ಪನೆಯನ್ನು ಬೆನ್ನೇರಿ ಬದಲಿಸಿಕೊಂಡು ಹೋಗುವ ಸ್ವಾತಂತ್ರ್ಯ ಶಾಸ್ತ್ರಕಾರನಿಗೆ ಇರುವದಿಲ್ಲ. ಮೇಲಾಗಿ ವ್ಯಾಕರಣ, ಛಂದಸ್ಸು ಮೊದಲಾದ ಕಾವ್ಯ ಶಾಸ್ತ್ರಗಳ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಬೇಕಾಗುತ್ತದೆ. ಕವಿಯಲ್ಲಿ ಶಾಸ್ತ್ರ ಸಂಗ್ರಹವಿದೆ, ಪ್ರತಿಭೆಯಿದೆ, ಲೋಕಾನುಭವವಿದೆ. ಕಾವ್ಯ ಪರಿಚಯವಿದೆ ಇಷ್ಟಿದ್ದರೂ ಕನ್ನಡ ಭಾಷೆಯ ಶುಭಗತ್ವವಾದ ಆದಿಪ್ರಾಸವನ್ನು ಬಳಸಿಕೊಂಡು ಹೋಗುವದು ಸಾಧ್ಯವಾಗಿಲ್ಲ. ಪ್ರಾಸವಿಲ್ಲದ ಪದ-ಪದ್ಯಗಳನ್ನು ಕುರಿತು ಈಶ್ವರ ಕವಿ ಹೇಳಿರುವ ಮಾತುಗಳು ಗಮನಾರ್ಹವಾಗಿವೆ.

ಉಸಿರಟಿದ ತನುವೊಲ್ ಭಾ
ವಿಸಲುಂ ಪ್ರಾಸಿಲ್ಲದಿರ್ಪ ಪದಪದ್ಯಂಗಳಂ
ಒಸೆದದನು ಪೇಟಿ ಕೇಳಿದ
ರಸಿಕಗ್ಗಾಯುಷ್ಯ ಮಾನಹಾನಿಗಳಕ್ಕುಂ

ಕವಿ ಇಂತಹ ವಿಚಾರಗಳನ್ನು ಮನದಂದು ಪ್ರಾಸಪೂರ್ಣವಾದ ಪದ್ಯಂಗಳನ್ನು ರಚಿಸಿದ್ದರೆ ಕಾವ್ಯದ ಮಹತಿ ಇನ್ನಷ್ಟು ಹೆಚ್ಚುಗೊಳ್ಳಬಹುದಿತ್ತು. ಪ್ರಾಸ ದೋಷಪೂರ್ಣವಾದ ಪದ್ಯಗಳು ಕಾವ್ಯದಲ್ಲಿ ಅಲ್ಲಲ್ಲಿ ಓದುಗನ ಗಮನಕ್ಕೆ ಬಾರದಿರವು.

ಗೆಲವ ಬಿಟ್ಟು ಲಿಂಗದೊಳಗೆ
ನೆನಹು ನಟ್ಟು ದುಷ್ಟ ಮನದ
ನಿಲವು ಸುತ್ತು ತನು ಮನೋವಿಕಾರ ಭೂತದ

ಬಲವನಿಟ್ಟು ಶಿವನ ಕರುಣಿ
ದೊಲವನುಟ್ಟು ವಾಗ್ವಿಲಾಸ
ದುಲುಪುಗಟ್ಟು ಪರಮ ಸುಖದಿ ಬಾಳ್ವನವ ಕೃತಾರ್ಥನು
(ಪುಟ ಸಂ. ೧೫ ಪದ್ಯ ಸಂ-೫೭)

ಗುರುಬಸವನ ಮೇಲೆ ವಚನಕಾರರ ಹಾಗೂ ವಚನ ಸಾಹಿತ್ಯದ ಪ್ರಭಾವ ಈತನ ಮೇಲೆ ಸಾಕಷ್ಟಾಗಿರುವದು ಕಾವ್ಯದ ಆರಂಭದ ಭಾಗದಲ್ಲಿ ಕಾಣಬಹುದು.

ಬಸವನೊಳಗೆ ಚೆನ್ನಬಸವ
ನಂ ವಿಶೇಷದಿಂದೆ ಮತ್ತೆ
ಬಸವನೊಳಗೆ ಸಿದ್ಧರಾಮನಂ ಭೋಗನಂ
ಬಸವನೊಳಗೆ ರುದ್ರ ಭಕ್ತ
ಗಣಕದಂಬವಂ ಪ್ರಪೂರ್ಣ
ಬಸವನೊಳಗೆ ಭಜಿಸಿ ಭಜಿಸಿ ಕಾಣ್ಬನವ ಕೃತಾರ್ಥನು
(ಪು. ಸಂ-೨, ಪ. ೪)

ಹೀಗಾಗಿ ವಚನಕಾರರ ಶೈಲಿ ಕವಿಯ ಬರವಣಿಗೆಯಲ್ಲಿ ಆತನಿಗೆ ಗೊತ್ತಿಲ್ಲದೆ ಬಂದು ಸೇರಿಕೊಂಡು ಬಿಡುತ್ತಿವೆ. ಬಸವಣ್ಣನವರ ವಚನ ಕಳಬೇಡ ಕೊಲಬೇಡ ಛಾಯೆಯನ್ನು ನಿಚ್ಚಳವಾಗಿ ಕಾಣಬಹುದು.

ಮೀರಬೇಡ ಪಥವ ಮತವ
ಹೇಱಬೇಡ ಗರ್ವಗಿರಿಯ
ನೇಱಬೇಡ ಕಪಟ ವಚನದಿಂದೆ ಸರ್ವರ
ದೂಱಬೇಡ ಕೆಡುವೆ
ಯೆಂದು ನುಡಿದು ತಾನೆ ತನ್ನ
ಸಾರಿಕೊಂಡು ಸಮತೆಯಿಂದ ನಡೆಯಲವ ಕೃತಾರ್ಥನು
(ಪುಟ ಸಂ-೧೭, ಪದ್ಯ ಸಂ. ೬೯)

ಗುರುಬಸವನ ಶೈಲಿ ಮೃದು ಮಧುರವಾದುದೆಂದು ತಿಳಿಸಲು ಇಂತಹ ಅನೇಕ ಪದ್ಯಗಳು ಆತನ ಕಾವ್ಯದಲ್ಲಿ ನಮಗೆ ಹೇರಳವಾಗಿ ದೊರೆಯುತ್ತಿವೆ.

ಕವಿಯು ಪ್ರಸಂಗಾನುಸಾರವಾಗಿ ಸಮರ್ಪಕವಾದ ಉಪಮೆ, ರೂಪಕ ಉತ್ಪ್ರೇಕ್ಷೆ, ಸ್ವಭಾವೋಕ್ತಿ ಅಲಂಕಾರಗಳನ್ನೂ ಬಳಸಿ ಕಾವ್ಯದೇವಿಯನ್ನು ಸಹೃದಯ ವಾಚಕರ ಮನಸ್ಸಿನಲ್ಲಿ ಸ್ಥಿರಗೊಳಿಸಿದ್ದಾನೆ. "ಸಂಸಾರದ ಬಲೆಯಲ್ಲಿ ಬಿದ್ದು ಹೊರಳಾಡುವ ಭವಿಯನ್ನು ಕೀಲಕಿತ್ತ ಕಪಿಗೆ" ಹೋಲಿಸಿದ್ದಾನೆ. ಇದೊಂದು ಸುಂದರವಾದ ಉಪಮಾನ ವೆಂದು ಬೇರೆ ಹೇಳಬೇಕಾಗಿಲ್ಲ. "ಕಾಯವಿದು ಕೃತಾಂತ ಭವನ ಬಾಯಿದೆಱೆಯ ಕಬಳ" "ಕಡಲದಾರತಿ ಬಂದು ಕೊರಡನೆಡಹಿ ಬಿದ್ದನಂತೆ" ಹೀಗೆ ಅನೇಕ ಸ್ವಾರಸ್ಯಮಯ ಅಲಂಕಾರಗಳನ್ನು, ನುಡಿಗಟ್ಟುಗಳನ್ನು, ನಾಡಗಾದೆಗಳನ್ನು ಬಳಸಿರುವದರಿಂದ ಕವಿಯು

ಶೈಲಿಗೆ ಒಂದು ವಿಶೇಷ ಮೆರಗು ಬಂದಿದೆಯೆಂದು ಹೇಳಬಹುದು.

ಪ್ರತಿ ಪದ್ಯದ ಕೊನೆಯಲ್ಲಿ ಕವಿ ಬಳಸಿರುವ ಅಂಕಿತ 'ಅವ ಕೃತಾರ್ಥನು' ಎಂಬುದು ಬಹಳ ಅರ್ಥಪೂರ್ಣವಾಗಿದೆ. ಮಾನವನ ಬದುಕು ಯಾವಾಗ ಮತ್ತು ಹೇಗೆ ಅರ್ಥ ಪೂರ್ಣವಾಗುತ್ತಿದೆ ಎಂಬುದನ್ನು ಅದು ಚೆನ್ನಾಗಿ ಸ್ಪಷ್ಟಪಡಿಸುತ್ತಿದೆ. ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವದರ ಮೂಲಕ ಮತ್ತು ಅವುಗಳನ್ನು ಅರ್ಥೈಸಿಕೊಂಡು ಆಚರಿಸುವದರ ಮೂಲಕ ಬದುಕನ್ನು ಕೃತಾರ್ಥಗೊಳಿಸಿಕೊಳ್ಳಬೇಕೆಂದು ಕವಿ ಸಂದೇಶವನ್ನು ಕೊಟ್ಟಿದ್ದಾನೆ. ಕಾವ್ಯದ ಒಂದು ಪದ್ಯ ಭಾಗವನ್ನು ಸಾಂದರ್ಭಿಕವಾಗಿ ಉದಾಹರಿಸಬಹುದು.

ಹಳಿಯದಿಹುದೆ ಧರ್ಮ ತನುವ
ಕಳಿಯದಿಹುದೆ ಸಿದ್ಧಿ ಚಿತ್ತ
ವಲುಗದಿಹುದೆ ಮುಕ್ತಿ ಮಱೆದು ನುಡಿದ ವಕ್ಕಣೆ
ಹೊಳೆಯದಿಹುದೆ ಸತ್ಯ ರೋಷ
ದಳೆಯದಿಹುದೆ ಶಾಂತಿ ಕಪಟ
ಮೊಳೆಯದಿಹುದೆ ಸೌಖ್ಯವಿದನು ತಿಳಿಯಲವ ಕೃತಾರ್ಥನು

ಗುರುಬಸವನು ಶಾಸ್ತ್ರ ಕವಿಯಾಗಿ ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯ ಪಡೆದಿದ್ದರೂ, ಕನ್ನಡವೆಂದರೆ ಕವಿಯು ಮೈ ಉಬ್ಬುತ್ತಿದೆ ಅದರಲ್ಲಿಯೂ ಕನ್ನಡ ಛಂದೋ ಮಟ್ಟಗಳನ್ನು ಹಾಡುವದೆಂದರೆ ಅವನಿಗೆ ಎಲ್ಲಿಲ್ಲದ ಉತ್ಸಾಹ. ಆತನ ಅನೇಕ ಕಾವ್ಯಗಳಿಗೆ ಷಟ್ಪದಿಯು ವಿವಿಧ ಪ್ರಕಾರಗಳಲ್ಲಿ ಶೃಂಗರಿಸುತ್ತಾ, ವಾಚಕರನ್ನು ಆನಂದಗೊಳಿಸುತ್ತಿದೆ. ಕವಿಯ ಈ ವೈವಿಧ್ಯತೆ, ಪ್ರಾಸಾದಿತವಾಣಿ, ಭಾಷೆಯ ಮೇಲಿನ ಪ್ರಭುತ್ವ ಓದುಗರಿಗೆ ಅಚ್ಚರಿಯನ್ನುಂಟು ಮಾಡುತ್ತಿವೆ. ಒಟ್ಟಿನಲ್ಲಿ ತತ್ವ ನಿರೂಪಣೆಯಲ್ಲ ಗುರುಬಸವನು ಬಳಸಿರುವ ನಿರ್ವಿಕಾರ ಮಾರ್ಗ, ತತ್ವ ಸಮನ್ವಯ ರೀತಿ, ಸಂಗೀತದ ಸೊಗಸು ಮುಪ್ಪರಿಗೊಂಡು ಕಾವ್ಯ ಕನ್ನೆಗೆ ವಿಶೇಷ ಸೌಂದರ್ಯವನ್ನುಂಟು ಮಾಡಿವೆ.

ಃ ಃ

ಗುರುಬಸವಕೃತ ಅವಧೂತಗೀತೆ

—**ಪ್ರೊ. ಗುರುದೇವಿ ಹುಲೆಪ್ಪನವರಮಠ**

ಮಹಾ ವೈರಾಗ್ಯಶಾಲಿಯಾಗಿ, ವೀರವಿರಕ್ತನಾಗಿ, ಸಕಲಶಾಸ್ತ್ರ ಪಾರಂಗತನೆನಿಸಿ ಕೊಂಡು ಶಿವಯೋಗ ಪುಂಗವನಾಗಿ ಬಾಳಿದ, ತನ್ನ ಶಾಸ್ತ್ರಾನುಭವವನ್ನು ಸಪ್ತಕಾವ್ಯ ಗಳಲ್ಲಿ ಬಿತ್ತರಿಸಿ ಶಾಸ್ತ್ರಕವಿ ಎಂದು ಖ್ಯಾತಿ ಪಡೆದ ಕವಿ ಗುರುಬಸವ ೧೫ನೇ ಶತಮಾನದ ಕವಿ. 'ಕವಿಗುರುಬಸವನಂತೆ ವೇದಾಂತ ವಿಷಯವನ್ನು ಸಶಾಸ್ತ್ರೀಯವಾಗಿ ನಿರೂಪಿಸಿ ದವರು ತೀರ ಕಡಿಮೆ. ಸುಲಭವಾದ ಶೈಲಿಯಲ್ಲಿ ಕಠಿಣ ವಿಷಯವನ್ನು ಇವನಷ್ಟು ಸುಲಭವಾಗಿ ಹೇಳಿದವರೂ ವಿರಳ. ಹೀಗಿದ್ದರೂ ಇವನ ಕೃತಿಗಳು ಇಂದಿಗೂ ಸರಿಯಾದ ರೀತಿಯಲ್ಲಿ ಪ್ರಕಟವಾಗದಿರುವದು ಸಖೇದಾಶ್ಚರ್ಯವನ್ನುಂಟು ಮಾಡದಿರದು' ಎಂದು ಪ್ರಕಾಶಕರು ಪುಸ್ತಕದ ಆದಿಯಲ್ಲಿ ನುಡಿದದ್ದು ಅಂತೆಯೇ ಆಧುನಿಕ ಸಂಸ್ಕರಣ, ಸಂಶೋಧನ ತತ್ವಗಳಿಗೆ ಅನುಗುಣವಾಗಿ ಗುರುಬಸವನ ಸಪ್ತಕಾವ್ಯಗಳನ್ನು ಪ್ರಕಟಿಸುವ ಹಂಬಲವನ್ನಿಟ್ಟುಕೊಂಡು ಪ್ರಸ್ತುತ 'ಅವಧೂತಗೀತೆ'ಯನ್ನು ಧಾರವಾಡದ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯಡಿ ಪ್ರಕಟಿಸಿದ್ದು ಸ್ತುತ್ಯ ಕಾರ್ಯವಾಗಿದೆ.

ಪ್ರಸ್ತಾವನೆಯಲ್ಲಿ ಕವಿ ಗುರುಬಸವನ ಜೀವನದ ಕುರಿತಾದ ದೊರಕುವ ವಿವರಗಳ ಪರಾಮರ್ಶೆ, ಆತನ ಕಾಲ ನಿರ್ಧಾರ, ಆತನ ಯೋಗ–ವಾದ–ವಿವಾದ ಸಾಮರ್ಥ್ಯ, ಮಹಿಮೆ, ಮುಂತಾದ ಅಂಶಗಳ ಕುರಿತು ಪ್ರಸ್ತಾಪಿಸಿ ಸಂಪಾದಕರು ಕವಿ ಗುರುಬಸವನು ಶಿವಮೊಗ್ಗಾ ಜಿಲ್ಲೆಯ ಕ್ಯಾಸನೂರು ಮಠಕ್ಕೆ ಅಧ್ಯಕ್ಷನಾಗಿದ್ದುಕೊಂಡು, ಶಿವಯೋಗ ದಲ್ಲಿ ಪರಿಪೂರ್ಣತೆ ಪಡೆದು, ಪ್ರೌಢದೇವರಾಯನ ಕಾಲದಲ್ಲಿ ಹಂಪೆಗೆ ಬಂದು, ನೂರೊಂದು ವಿರಕ್ತರ ಮಧ್ಯದಲ್ಲಿ ಮೆರೆದು, ಅಲ್ಲಿಯೇ ನಿರವಯನಾದನೆಂದು ಇವನು ಕ್ರಿ. ಶ. ೧೪೩೦ರ ಸುಮಾರಿಗೆ ಬಾಳಿದನೆಂಬುದನ್ನು ಸ್ಪಷ್ಟಪಡಿಸುವದುಂಟು.

ಕವಿಗುರುಬಸವನ ಸಪ್ತಕಾವ್ಯಗಳು ಶಾಸ್ತ್ರ ನಿರೂಪಣೆಗೆ ಮೀಸಲು. ವೇದಾಂತ ದಂತಹ ಕ್ಲಿಷ್ಟ ವಿಷಯವನ್ನು ಕನ್ನಡ ಛಂದದ ವಿವಿಧ ಮಟ್ಟುಗಳಲ್ಲಿ ಸುಲಭ ರೀತಿಯಲ್ಲಿ ಹೃದಯಂಗಮವಾಗಿ ಹಾಡಿದ ಶ್ರೇಯಸ್ಸು ಇವನದು. 'ಅವಧೂತಗೀತೆ' ನೂರೊಂದು ಚೌಪದಿಗಳಲ್ಲಿ ಮೂಡಿ ಬಂದ ಒಂದು ಶತಕ. ಇದು ಗುರುಬಸವನ ಸಪ್ತಕಾವ್ಯಗಳಲ್ಲಿ ತೀರ ಚಿಕ್ಕ ಕೃತಿ. ಇಲ್ಲಿರುವ ವಿಷಯ ಆಧ್ಯಾತ್ಮಿಕವಾದದ್ದು ಆದಿಪ್ರಾಸ ಅಂತ್ಯಪ್ರಾಸಗಳು ಪ್ರತಿಯೊಂದೂ ಪ್ರತಿಯೊಂದೂ ಪದ್ಯದಲ್ಲಿ ಬಂದಿರುವದು ವಿಶೇಷ. ಮನಸ್ಸಿನ ಸ್ಥಿತಿ–

ಗತಿ, ಅದನ್ನು ನಿಲ್ಲಿಸುವ ಬಗೆ, ನಿಲ್ಲಿಸಿದರೆ ಆಗುವ ಲಾಭ ಮುಂತಾದ ಮಾತುಗಳನ್ನು ಚಿಕ್ಕ ಚಿಕ್ಕ ಪದ್ಯಗಳಲ್ಲಿ ಕವಿ ವಿವರಿಸಿದ್ದುಂಟು.

ಸದ್ಗುರುವಿನ ಅವಶ್ಯಕತೆ, ಸಂಸಾರದ ಸ್ವರೂಪ, ಅದರ ಎಳೆತ ಸೆಳೆತಗಳಿಗೆ ಸೋಲುವ ಮಾನವನ ಸ್ವಭಾವ, ಅವನನ್ನು ಮೇಲೆತ್ತಲು ಸದ್ಗುರು ಅವಶ್ಯ ಎಂಬುದನ್ನು ಅನೇಕ ಪದ್ಯಗಳಲ್ಲಿ ವಿವರಿಸಿದ್ದುಂಟು.

ಸದ್ಗುರುವಿನ ಚಿಂತನೆಯಲ್ಲಿರುವವನೇ ಅವಧೂತ ಎಂದು ತಿಳಿಸಿ ಅವಧೂತ ತತ್ವವನ್ನು ಕವಿ

ಪ್ರಕಟಿಸಿ ವಿಧಿಲಿಖಿತವನೊಡೆದುಳಿದು
ಸಕುಟಿಲ ಸಂಸಾರವ ಸದೆಬಡಿದು
ಪ್ರಕೃತಿ ವಿಕಾರಂಗಳ ಕೊಡಹಿದುದು
ಸ್ವಕಳಿತವೆನಿಪವಧೂತ ತತ್ವವಿದು

ಎಂದೆಲ್ಲ ಬಣ್ಣಿಸಿದ್ದಾನೆ. ಶಿವಪೂಜೆ, ಶಿವಧ್ಯಾನ, ಲಿಂಗಾನಂದವೇ ಅವನಿಗೆ ಲೀಲೆ ಅವಧೂತನ ಇರವನ್ನು ಬಣ್ಣಿಸುವುದೇ ಕವಿಯ ಗುರಿಯಾಗಿದೆ.

ಸಂಸಾರ ಹೇಯ, ಅನಿತ್ಯ ಎಂದು ವಿವರಿಸಿ ಅನಿತ್ಯವಾದ ಸಂಸಾರದಲ್ಲಿ ಹೊರ ಳಾಡುವವರ ಚಿತ್ರಣವನ್ನು ಶಬ್ದರೂಪದಲ್ಲಿ ಕೊಡುವದುಂಟು. ಪ್ರಾಪಂಚಿಕರು ಸಂಸಾರದಲ್ಲಿದ್ದೂ ಬಸವಾದಿ ಪ್ರಮಥರಂತೆ ಭಕ್ತಜ್ಞಾನ ವಿವೇಕ ಸಂಪನ್ನರಾದರೆ ಈ ಸಂಸಾರವೇ ಪರಮಾರ್ಥವಾಗುವದು ಎಂದು ತಿಳಿಸಿದ ಕವಿ ನುಡಿ ಅರ್ಥಪೂರ್ಣ. ಗುರುಮತವನ್ನು ಅನುಸರಿಸಿ ನಡೆವ ಅಧಿಕರೊಳಧಿಕನಾದ ಅವಧೂತನ ಲಕ್ಷಣಗಳ ಸ್ಪಷ್ಟ ಪಟ್ಟಿ ಗಮನಾರ್ಹ.

ಅವಧೂತನ ಲಕ್ಷಣವನ್ನು ವಿವರಿಸುತ್ತ 'ಶಿರದಲ್ಲಿ ಶಿವಲಿಂಗವನ್ನು ಧರಿಸಿ ಹೃದಯ ದಲ್ಲಿ ಶಿವಮಂತ್ರವನ್ನಳವಡಿಸಿ, ಶರೀರಕ್ಕೆ ಭಸ್ಮವ ಬಳಿದುಕೊಂಡೊಪ್ಪುವವನೇ ಗುರು ಮತದ ಪರಿಶುದ್ಧ ದೇಹಿಯು. ಇದು ಶುದ್ಧ ವೀರಶೈವ ಮಾರ್ಗವು ಎಂದು ಕವಿ ವಿವರಿಸಿದ್ದುಂಟು. ಈ ಅವಧೂತರು ಬಾಹ್ಯ ಪೂಜೆಗಿಂತ ಮಾನಸ ಪೂಜೆಗೆ ಹೆಚ್ಚು ಒತ್ತು ಕೊಟ್ಟಿದ್ದವರು. ಜ್ಞಾನವಿಲ್ಲದ ಕೇವಲ ಭಾವಾವೇಶ ಭಕ್ತಿಯಿಂದ ಮಾಡುವ ಶಿವಪೂಜೆಯು ನಮಗೆ ಸದ್ಗತಿಯನ್ನೀಯಲಾರದು ಎಂಬುದು ಅವರ ಅಭಿಪ್ರಾಯ. ಅವಧೂತನು ಶಿವನನ್ನು ಎಂದಿಗೂ ಬಿಟ್ಟಿರಲಾರನು. ಕವಿ ಆತನ ಭಾವಚಿತ್ರವನ್ನು ಬಹಳ ಸೊಗಸಾಗಿ

'ಭಾಳದೊಳಮಳ ವಿಭೂತಿಯು ಭಾನ
ನಾಲಗೆಯೊಳು ನಾಮಾಮೃತ ಪಾನ
ಮೇಲು ಶಿಖರದೊಳಗಭವನ ಧ್ಯಾನ
ಮೂಲಾಧಾರಿ ಬಲಾಢ್ಯವ ಹೀನ'

ನೀಡಿದ್ದುಂಟು.

ಪ್ರಕಾಶಕರು ಹಾಗೂ ಸಂಪಾದಕರು ಗುರುಬಸವ ಕವಿಯ ಸಂಕ್ಷಿಪ್ತ ಆದರೆ ಅವಶ್ಯಕ ವಿವರಗಳನ್ನು, ಅವನ ಸಪ್ತಕಾವ್ಯಗಳಲ್ಲಿ ಒಂದಾದ 'ಅವಧೂತಗೀತೆ'ಯ ಮೂಲಪಾಠ ಹಾಗೂ ಅಲ್ಲಿ ವಿವರಿಸಲ್ಪಟ್ಟಿರುವ ವಿಷಯಸಾರದ ಪ್ರಮುಖ ಅಂಶಗಳನ್ನು ಹಿನ್ನೆಲೆಯಾಗಿ ಕೊಟ್ಟಿರುವದರಿಂದ ಓದುಗರಿಗೆ ಈ ಕೃತಿಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ತನ್ನ ಕಾವ್ಯಗಳಲ್ಲಿ ವೇದಾಂತ ವಿಷಯವನ್ನು ಬೋಧಿಸಿದರೂ ಕೊನೆಯಲ್ಲಿ ಲಿಂಗಾಂಗ ಸಾಮರಸ್ಯದ, ಸ್ವಾನುಭವದ ಮಹತಿ ಸಾರಿರುವ ಕವಿ ಗುರುಬಸವನ ವ್ಯಕ್ತಿತ್ವ ಹಾಗೂ ಆತನ ಕಾವ್ಯ 'ಅವಧೂತಗೀತೆ'ಯ ಸಂಪೂರ್ಣ ಪರಿಚಯ ಮಾಡಿಕೊಟ್ಟ ಪ್ರಕಾಶಕರು, ಸಂಪಾದಕರು ಇಲ್ಲಿ ಅಭಿನಂದನೀಯರು. ಕವಿ ತತ್ವ ನಿರೂಪಣೆಗಾಗಿ ಬಳಸಿರುವ ನಿರ್ವಿಕಾರ ಮಾರ್ಗ. ತತ್ವ ಸಮನ್ವಯ ರೀತಿ, ಸಂಗೀತದ ಸೊಗಸು ಅವನ ಕೃತಿಗಳಲ್ಲಿ ಅಪೂರ್ವವಾಗಿ ಮೂಡಿಬಂದಿರುವದನ್ನು ಕಾಣಬಹುದು.

□ □

ಮನೋವಿಜಯವು ವೇದಾಂತ ಪ್ರತಿಪಾದಿಸುವ ಅಮೂಲ್ಯ ಕೃತಿ

—ವಿದ್ವಾನ್ ಜಿ. ವಿ. ಶಿವಸ್ವಾಮಿ

ಕನ್ನಡ ಸಾಹಿತ್ಯದಲ್ಲಿ ವೇದಾಂತ ಪ್ರತಿಪಾದಿಸುವ ಕೆಲವೇ ಗ್ರಂಥಗಳಲ್ಲಿ ಗುರುಬಸವ ಕವಿಯ "ಮನೋವಿಜಯ"ವು ಒಂದು ಶ್ರೇಷ್ಠ ಕೃತಿಯಾಗಿದೆ. ಕನ್ನಡದಲ್ಲಿ ವೇದಾಂತ ವಿಷಯಗಳನ್ನು ಕುರಿತು ಬರೆದ ಕವಿಗಳು ತೀರ ವಿರಳವೆನ್ನಬಹುದು. ಶಿವಯೋಗಿ ಶಿವಾಚಾರ್ಯ ಮುಂತಾದವರು ಸಂಸ್ಕೃತದಲ್ಲಿ ವೇದಾಂತ ಪ್ರತಿಪಾದನೆ ಗ್ರಂಥಗಳನ್ನು ರಚಿಸಿದರು. ಶಾಸ್ತ್ರವಿಷಯ ತಿಳಿಯಲು ಸಂಸ್ಕೃತವೇ ಗತಿ, ಕನ್ನಡ ದೊಳಿನ್ನೇನು? ಎಂದು ಹೇಳುವವರ ಬಾಯಿ ಮುಚ್ಚುವ ಹಾಗೆ ಕನ್ನಡದಲ್ಲಿ ವೇದಾಂತ ವಿಷಯವನ್ನು ಕುರಿತು ಗ್ರಂಥ ರಚನೆ ಮಾಡಿದವರಲ್ಲಿ ಶ್ರೀ ನಿಜಗುಣ ಶಿವಯೋಗಿ, ಮೊಗ್ಗೆ ಮಾಯಿದೇವರು, ಮಹಾಲಿಂಗರಂಗ, ಕವಿ ಚಿದಾನಂದ, ಕವಿ ಗುರುಬಸವ ಮೊದಲಾದವರು ಮುಖ್ಯರೆನಿಸಿಕೊಂಡಿದ್ದಾರೆ. ಈ ಪಂಡಿತ ಕವಿಗಳು ವೇದಾಂತ ವಿಷಯ ಗಳನ್ನು ಜನರು ಮೆಚ್ಚುವಂತೆ ಕಾವ್ಯಮಯವಾಗಿ ಕನ್ನಡದಲ್ಲಿ ಪ್ರತಿಪಾದಿಸಿರುವುದು ಅತ್ಯಂತ ಗಮನಾರ್ಹವಾಗಿದೆ. ಕನ್ನಡದಲ್ಲಿ ವೇದಾಂತ ಗ್ರಂಥಗಳ ನಿರ್ಮಾಣಕ್ಕೆ ನಾಂದಿ ಹಾಡಿದ್ದಾರೆ ಎನ್ನಬಹುದು. ಗುರುಬಸವ ಕವಿಯ ಸಪ್ತಕಾವ್ಯಗಳೂ ಶಾಸ್ತ್ರ ನಿರೂಪಣೆ ಗಾಗಿಯೇ ಮೀಸಲಾದ ಕೃತಿಗಳಾಗಿವೆ. ವೇದಾಂತದಂತಹ ಕ್ಲಿಷ್ಟ ವಿಷಯವನ್ನು ಕನ್ನಡದಲ್ಲಿ ಛಂದೋಬದ್ಧವಾಗಿ ನಿರೂಪಿಸಿರುವ ವಿಷಯ ಹೃದಯಂಗಮವಾಗಿದೆ. ವಿವಿಧ ಮಟ್ಟಗಳಲ್ಲಿ ಸುಲಭವಾಗಿ ಹಾಡಿದ ಶ್ರೇಯಸ್ಸು ಕವಿ ಗುರುಬಸವನಿಗೆ ಸಲ್ಲುತ್ತದೆ. ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಸಪ್ತಕಾವ್ಯದ ಗುರುಬಸವನೆಂದೇ ಪ್ರಸಿದ್ಧ ನಾಗಿದ್ದಾನೆ. ಈತನ ಸಪ್ತಕಾವ್ಯಗಳಲ್ಲಿ "ಮನೋವಿಜಯ" ಮೇರುಕೃತಿಯಾಗಿದೆ.

ಈ ಗ್ರಂಥವು ಪಾರಮಾರ್ಥಿಕ ತತ್ವಗಳನ್ನು ಪ್ರತಿಪಾದಿಸುವುದಾಗಿಯೂ, ಮುಮುಕ್ಷುಗಳ ಕಲ್ಯಾಣಕ್ಕೆ ಮಾರ್ಗದರ್ಶಕವಾಗಿ, ಭಗವದ್ಗೀತೆಯಂತೆ ಜನಪ್ರಿಯವಾಗಿ ರುವುದು. ವ್ಯಾಸಮಹರ್ಷಿಗಳು ಶ್ರೀ ಕೃಷ್ಣಾರ್ಜುನರ ಸಂವಾದವನ್ನು ಸಂಗ್ರಹಿಸಿ "ಭಗವದ್ಗೀತಾ" ಎಂಬ ನಾಮವಿಟ್ಟಂತೆ, ಶ್ರೀ ಶಿವಯೋಗಿ ಶಿವಾಚಾರ್ಯರು ಶ್ರೀ ರೇಣುಕಾಗಸ್ತ್ಯರ ಸಂವಾದವನ್ನು ಸಂಗ್ರಹಿಸಿ "ಸಿದ್ಧಾಂತ ಶಿಖಾಮಣಿ" ಅಥವಾ "ರೇಣುಕ ಗೀತಾ" ಎಂಬ ಹೆಸರಿಟ್ಟಂತೆ, ಕೃಪಾಸಮುದ್ರನಾದ ಗುರುಬಸವನು ಕರುಣೆ ಯಿಂದ ಸುವಿವೇಕನೆಂಬ ಶಿಷ್ಯಂಗೆ ಸಕಲ ವೇದಾಂತಾರ್ಥ ರಹಸ್ಯವನ್ನು ಸಂಗ್ರಹ ರೂಪದಲ್ಲಿ ಬೋಧಿಸಿರುವುದೇ "ಮನೋವಿಜಯ"ವಾಗಿದೆ.

ಒಸೆದು ಗುರುಕರುಣಾಬ್ಧಿ। ಬಸವೇಶ ಮುದದೆ ಬೋ।
ಧಿಸಿದ ಸುವಿವೇಕಗೆ ಮನೋವಿಜಯಮುಮಂ॥

ಎಂದು ಮೊದಲನೇ ಪ್ರಕರಣದಲ್ಲಿ ಸೂಚಿಸಿರುವುದು ಕಂಡುಬರುತ್ತದೆ. ಕವಿ ಗುರುಬಸವನಿಗೆ ಭಕ್ತಜನ ಮನೋಮಂದಿರ, ಶಿವಯೋಗಿ ಜನಸೇವಿತ ಚರಣಾರವಿಂದ, ಷಟ್‌ಸ್ಥಲ ಜ್ಞಾನಪ್ರಭಾಪುಂಜ ರಂಜಿತಾಂತರಂಗ, ವೀರಶೈವ ಮತಸ್ಥಾಪನಾಚಾರ್ಯ ಮುಂತಾದ ಬಿರುದುಗಳಿದ್ದವೆಂಬುದನ್ನು ಮನೋವಿಜಯಕ್ಕೆ ತಾತ್ಪರ್ಯವನ್ನು ಬರೆದ ವಿರಕ್ತ ತೋಂಟದಾರ್ಯರು ತಿಳಿಸಿರುತ್ತಾರೆ. ಇಷ್ಟು ಪ್ರಸಿದ್ಧನಾದ ಕವಿಯು ತನ್ನ ವಿಷಯ ವಾಗಿ ಏನನ್ನೂ ಹೇಳಿಕೊಂಡಿರುವುದಿಲ್ಲ. ಅವನ ನಂತರ ಬಂದ ಕವಿಗಳು ಸಾಮಾನ್ಯವಾಗಿ ಹಿಂದಿನ ಕವಿಗಳನ್ನು ಅವರ ಕಾವ್ಯಗಳನ್ನು ಸ್ಮರಿಸುವುದುಂಟು. ಅಂತಹ ಭಾಗ್ಯವೂ ಕವಿ ಗುರುಬಸವನಿಗೆ ದೊರೆಯದೆ ಹೋಗಿದೆ. ಆದರೆ ಈ ಸಪ್ತಕಾವ್ಯಗಳ ಗುರುಬಸವ ನೆಂಬುದಕ್ಕೆ ಆಂತರಿಕ ಅನೇಕ ಉಲ್ಲೇಖಗಳು ಸಾಕಷ್ಟು ದೊರೆತಿವೆ.೧ ಈ ಕೃತಿಗಳು ಒಟ್ಟಾಗಿ ಸಿಗುವುದರಿಂದಲೂ, ಆಂತರಿಕ ಮತ್ತು ಬಾಹ್ಯ ಪ್ರಮಾಣಗಳು, ಸಾಕಷ್ಟು ಸಿಗುವುದರಿಂದಲೂ, ಈ ಸಪ್ತಕಾವ್ಯಗಳಲ್ಲಿ ಸಾಮಾನ್ಯವಾಗಿ 'ಗುರುಬಸವ' ಎನ್ನುವ ಅಂಕಿತ ದೊರೆಯುವುದರಿಂದಲೂ ಇವುಗಳನ್ನು ರಚಿಸಿದ ಕವಿ ಒಬ್ಬನೆ, ಅವನೇ ಸಪ್ತ ಕಾವ್ಯಗಳ ಗುರುಬಸವನೆಂದ೭ ಸ್ಪಷ್ಟವಾಗಿ ತಿಳಿದುಬರುತ್ತದೆ.

ಸಪ್ತಕಾವ್ಯದ ಗುರುಬಸವನೆಂದರೆ ಯಾರು? ಇವನ ಕಾಲ ದೇಶಗಳು ಯಾವವು? ಈತನ ಜೀವನದ ಬಗೆಗೆ ಏನಾದರೂ ಆಧಾರಗಳುಂಟೆ? ಮೊದಲಾದ ಪ್ರಶ್ನೆಗಳು ಉದ್ಭವವಾಗುವವು. ವೀರಶೈವ ಸಾಹಿತ್ಯದಲ್ಲಿ ಬಸವನೆಂಬ ಹೆಸರಿನವರು ಮೂರು-ನಾಲ್ಕು ಜನರು ಆಗಿ ಹೋಗಿದ್ದಾರೆ. ವಚನಕಾರನಾದ ಕಲ್ಯಾಣದ ಭಕ್ತಿ ಭಂಡಾರಿ ಬಸವಣ್ಣ(ಕ್ರಿ.ಶ. ೧೧೬೦), ಕಾಲಜ್ಞಾನವನ್ನು ಬರೆದ ಎಮ್ಮೆಯ ಬಸವ(ಕ್ರಿ.ಶ. ೧೫೪೦) ಸಾಂಗತ್ಯದ ಬಸವ (ಕ್ರಿ.ಶ. ೧೫೬೦) ಮುಂತಾದವರು. ಇವರಲ್ಲಿ ಯಾರಿಗೂ ಹೆಸರಿನ ಹಿಂದೆ "ಗುರು" ಬಸವನೆಂಬ ಅಭಿಧಾನವಿರುವದಿಲ್ಲ. ಈತನಿಗೆ ಮಾತ್ರ ಸಪ್ತಕಾವ್ಯದ "ಗುರುಬಸವ"ನೆಂಬ ಹೆಸರು ಅಭಿಧಾನವಾಗಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಬಸವನಲ್ಲಮ ಚೆನ್ನ
ಬಸವ ಮಡಿವಾಳ ಸಂ
ತಸ ಸಿದ್ಧರಾಮ ಸಹಿತೆಲ್ಲಾದ್ಯರು।
ಒಸೆದು ನಿಮ್ಮಯ ಕರುಣ
ದೆಸಕದಿಂದೊಲಿದು ರ
ಕ್ಷಿಸಬೇಹುದೆನ್ನ ನಿಮ್ಮಡಿಗನೆಂದು ॥೨॥

ಹೀಗೆ ತನ್ನ ಹಿರಿಯ ಶರಣರಾದ ಬಸವೇಶ್ವರ, ಚನ್ನಬಸವಣ್ಣ ಪ್ರಭುದೇವರು, ಮಡಿವಾಳ ಮಾಚಿದೇವ, ಸಿದ್ಧರಾಮೇಶ್ವರ ಮೊದಲಾದ ಪುರಾತನರ ಮೊರೆಹೊಕ್ಕಿರುವೆ

ಕೃಪೆ ಮಾಡಿ ಅವರು ನನ್ನನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿರುವುದು ಅವನ ಮನೋವಿಜಯದ ಮೊದಲನೇ ಪ್ರಕರಣದ ಎರಡನೇ ಪದ್ಯದಲ್ಲಿ ಸ್ಪಷ್ಟವಾಗುತ್ತದೆ. ಆದುದರಿಂದ ಈತನೇ ಬೇರೆ ಎಂಬುದು ವಿದಿತವಾಗುತ್ತದೆ.

ಗುರುಬಸವನು ಬಹುಶ್ರುತನು, ಆಧ್ಯಾತ್ಮಿಕ ಸಾಧಕನು ಆಗಿ ನೂರೊಂದು ವಿರಕ್ತರಲ್ಲಿ ಹೆಚ್ಚು ಪ್ರಸಿದ್ಧಿ ಪಡೆದವನೆಂದು ವೀರಶೈವ ಪುರಾಣದಲ್ಲಿ ವಿವರಿಸಲಾಗಿದೆ. ವಿಜಯನಗರ ಸಾಮ್ರಾಜ್ಯವನ್ನು ಸ್ಥಿರಗೊಳಿಸಿದ ಇಮ್ಮಡಿ ಪ್ರೌಢದೇವರಾಯನು (ಕ್ರಿ.ಶ.೧೪೨೯-೧೪೪೬) ವೀರಶೈವ ಸಾಹಿತ್ಯದಲ್ಲಿ ಪ್ರೌಢದೇವರಾಯನೆಂದು ಪ್ರಖ್ಯಾತನಾಗಿದ್ದಾನೆ. ಅವನು ಸ್ವತಃ ವೀರಶೈವನಾಗಿದ್ದು, ವೀರಶೈವ ಸಾಹಿತ್ಯ-ಸಂಸ್ಕೃತಿ ಬೆಳವಣಿಗೆಗೆ ತುಂಬಾ ಪ್ರೋತ್ಸಾಹ ನೀಡಿದನು. ಇವನ ಕಾಲದಲ್ಲಿಯೇ ನೂರೊಂದು ವಿರಕ್ತರು ನಾಡಿನಲ್ಲಿ ಉದಿಸಿ, ಹಂಪೆಯಲ್ಲಿ ನೆರೆದು, ವೀರಶೈವ ಧರ್ಮವನ್ನು ಪ್ರಚಾರಗೊಳಿಸಿದುದು ಸರ್ವವಿಧಿತವಾಗಿದೆ. ೧೨ನೇ ಶತಮಾನದಲ್ಲಿ ವೀರಶೈವ ಕ್ರಾಂತಿಗೆ ಬಸವಾದಿ ಶಿವಶರಣರು ಕಾರಣರಾದರೆ, ೧೫ನೇ ಶತಮಾನದಲ್ಲಿ ವೀರಶೈವ ಧರ್ಮದ ಪುನರುಜ್ಜೀವನಕ್ಕೆ ನೂರೊಂದು ವಿರಕ್ತರು ಶ್ರಮಿಸಿದುದು ಅವಿಸ್ಮರಣೀಯವಾದುದು. ಕಲ್ಯಾಣದ ಶಿವಶರಣರ ಆದರ್ಶವನ್ನು ಮೈಗೂಡಿಸಿಕೊಂಡು ವೀರಶೈವ ಧರ್ಮದ ಪ್ರಚಾರಕ್ಕಾಗಿ ಶ್ರಮಿಸಿದರು. ಇವರ ಪ್ರಭಾವ ನಾಡಿನಲ್ಲೆಲ್ಲಾ ಹಬ್ಬಿತು. ನುಡಿದಂತೆ ನಡೆದು ತೋರಿಸಿದ ಮಹಾತ್ಮರು ಇವರು. ನೂರೊಂದು ವಿರಕ್ತರಲ್ಲಿ ಕರಸ್ಥಳದ ನಾಗಿದೇವನಿಗೆ ಒಂದು ವಿಶಿಷ್ಟಸ್ಥಾನವಿದೆ. ಅವನು ಮಹಾಯೋಗಿಯಾಗಿ ಮೆರೆದನು. ಅವನಷ್ಟೇ ಪ್ರಭಾವಶಾಲಿಯಾದ ಇನ್ನೊಬ್ಬ ವ್ಯಕ್ತಿ "ಗುರುಬಸವ" ಇವರೀರ್ವರೂ ಒಂದುಗೂಡಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದರೆಂದು ಚನ್ನಬಸವ ಪುರಾಣದಿಂದ ತಿಳಿದುಬರುತ್ತದೆ.

ಕರಸ್ಥಲದ ವೀರಣ್ಣೊಡೆಯರು ಪ್ರೌಢದೇವರಾಯನ ಗುರು, ಅಷ್ಟೇ ಅಲ್ಲದೆ ಅವರು ಕರಸ್ಥಲದ ನಾಗಿದೇವನಿಗೂ ದೀಕ್ಷಾಗುರುಗಳಾಗಿದ್ದರು. ಒಮ್ಮೆ ವೀರಣ್ಣೊಡೆಯರ ಅಪ್ಪಣೆ ಪ್ರಕಾರ ನಾಗಿದೇವನು ಹಂಪೆಗೆ ಬಂದು ಪ್ರೌಢದೇವರಾಯನಿಗೆ ದರ್ಶನ ಕೊಡುವನು.

ಹರುಷದಿಂದವನೈದಿ ಪ್ರೌಢದೇವೇಂದ್ರಂಗೆ
ವಿರಚಿಸಿದೊಡೆಲ್ಲಮಂ ಕೇಳ್ದು ಬೇಗದೊಳವರ
ಕರೆಸಿ ಭಯಭಕ್ತಿಯಿಂದೆರಗಿ ಗುರುಬಸವೇಶರನರಮನೆಗೆ ಕಳುಹಲಾತ
ಪರಮಸಂತೋಷದಿಂ ಲಿಂಗಪೂಜೆಯ ಮಾಡು
ತಿರೆ ನೋಡುತುಪಕರಣಮಂ ಬಿಸುಟುದಂಡಿಗೆಯ
ನಿರವೆ ನೆಲಕಪ್ಪಳಿಸೆ ಗುರುಬಸವನಾನಾಗಿದೇವರೊಡನಿಂತೆಂಬನು.
ಏನ ಮಾಡಿತ್ತು ದಂಡಿಗೆ. ನಿಮ್ಮ ನೆನೆ ನಿನ್ನ
ಜಾನಮೆಲ್ಲಿತ್ತು ಲಿಂಗವ ಬಿಟ್ಟು ಬಯಲ ಸಂ

ಧಾನವಲ್ಲದಲರ್ಪಿತಾವಧಾನವನರಿಯೆ ಕೇಳೆನುತ್ತೈಕ್ಯಪದವ
ಸ್ವಾನುಭಾವದೊಳರಿಪೆ ಗುರುಬಸವದೇವರನು
ಮಾನವಿಲ್ಲದೆ ನಾಗಿದೇವಂಗೆ ನಮಿಸಿ ಸು
ಮ್ಮಾನದಿಂದಾ ವಿರಕ್ತರ ಕೂಡಿ ತೋಂಟಕ್ಕೆ ಪೊರಮಾಡುವರುತ್ಸವದೊಳು॰

ವಿರೂಪಾಕ್ಷ ಪಂಡಿತನ ಹೇಳಿಕೆಯಂತೆ ಮೇಲಿನ ಒಂದೆರಡು ವಿಷಯಗಳು ಸ್ಪಷ್ಟವಾಗಿ ತಿಳಿದುಬರುತ್ತವೆ. ಗುರುಬಸವನ ಅರಮನೆ (ಮಠ) ವಿಜಯನಗರದಲ್ಲಿತ್ತು. ಕರಸ್ಥಲದ ನಾಗಿದೇವನು ಮಠಕ್ಕೆ ಬಂದಾಗ ಗುರುಬಸವನು ಶಿವಪೂಜಾತತ್ಪರನಾಗಿದ್ದನು. ಶಿವಪೂಜೆ ನಡೆದಿದ್ದರೂ ಗುರುಬಸವನ ಮನಸ್ಸು ಲಿಂಗದಲ್ಲಿ ಲೀನವಾಗಿಲ್ಲವೆಂಬುದನ್ನು ನಾಗಿದೇವನು ಸಮ್ಯಕ್‌ಜ್ಞಾನದಿಂದ ಅರಿತನು. ನಿಜಾನುಭವದ ಅರಿವನ್ನು ಆತನು ಮಾಡಿಕೊಟ್ಟಾಗ ಗುರುಬಸವನು ಅನುಮಾನವಿಲ್ಲದೆ ನಾಗಿದೇವನಿಗೆ ನಮಿಸುತ್ತಾನೆ. ಇದರಿಂದ ಗುರುಬಸವನು ಗುರುಸ್ಥಾನದಲ್ಲಿದ್ದರೂ ಜಂಗಮರೆಲ್ಲರೂ ಸನ್ಮಾನ್ಯರು ಎಂಬ ಭಾವನೆಯನ್ನು ಇಟ್ಟುಕೊಂಡಿದ್ದರಿಂದ ಗುರುಬಸವನ ಘನತೆ ಹೆಚ್ಚಿದೆ. ಗುರುಬಸವನ ಮಠವನ್ನು ಅರಮನೆಯೆಂದು ವಿರೂಪಾಕ್ಷ ಪಂಡಿತನು ಕರೆದಿದ್ದಾನೆ. ಈ ಮಾತು ನಿಜವಾಗಿದ್ದಲ್ಲಿ ಗುರುಬಸವನು ರಾಜತೇಜೋವಿರಾಜಿತನಾಗಿ ರಾಜರ ಮೇಲೆ ಪ್ರಭಾವ ಬೀರಿ ರಾಜರ ಅರಮನೆ ಸದೃಶ ಮಠವನ್ನು ಪಡೆದಿರಬಹುದೆಂದು ಅವನ ಕೃತಿ ಮನೋವಿಜಯದಿಂದ ತಿಳಿದುಬರುತ್ತದೆ.

ತಳವಾಸುಗೆಯೆ ಪಚ್ಚೆ
ಪಳಿಕೆಸೆವ ಪಾಗರಂ
ಹೊಳೆವ ವಜ್ರಸ್ತಂಭ ವೈಡೂರ್ಯದಿಂ
ತಳೆದ ಬೋದಿಗೆಯ ಮೇ
ಲೆಳೆಯ ಮಾಣಿಕದ ತೊಲೆ
ಗಳವಟ್ಟ ಹೇಮಮುಚ್ಚಳವಲಗೆಯಿಂ॥
....
....
ವಾದ್ಯರವ
ದಿಂದೆ ಮಂಗಳಮಯದೆ ಕಂಗೊಳಿಸಿತು॰

ತನ್ನ ನಿವಾಸಕ್ಕೆ ಪಚ್ಚೆಯ ತಳವಾಸುಗೆ. ವಜ್ರದ ಕಂಬ, ವೈಡೂರ್ಯದ ಬೋದುಗೆ, ಎಳೆಯ ಮಾಣಿಕ್ಯದ ತೊಲೆ, ಸುವರ್ಣದ ಹಲಗೆ ಮುಚ್ಚಳ, ರತ್ನದ ಗೋಪುರಗಳಿದ್ದ ವೆಂದು ಕವಿ ಗುರುಬಸವನೇ ವರ್ಣಿಸಿದ್ದಾನೆ. ಈ ವರ್ಣನೆಯಿಂದ ಕವಿ ರಾಜಗುರುವಾಗಿದ್ದು ಕೊಂಡು ಅರಮನೆಯ ಆವರಣದಲ್ಲಿಯೇ ಮಠವನ್ನು ಪಡೆದಿರಬೇಕೆನಿಸುತ್ತದೆ.

'ಶಿವಯೋಗಿ' ಗುರುಬಸವಾರ್ಯ: ಈತನು ವೇದ ವೇದಾಂತಗಳನ್ನು ಬಲ್ಲವನಾಗಿದ್ದು, ಯೋಗಸಾಧನೆಯಿಂದ ಶಿವಯೋಗ ಸಿದ್ಧಿಯನ್ನು ಪಡೆದುಕೊಂಡು ತನ್ಮೂಲಕ ಅನೇಕ ಪವಾಡಗಳನ್ನು ಮಾಡಿ ಮಹಾಮಹಿಮ ಪುರುಷನೆನಿಸಿಕೊಂಡನು. ಇವನನ್ನು ಶಿವಯೋಗದ ಗುರುಬಸವನೆಂದು ಸಮಕಾಲೀನರು ಕರೆದಿರುವುದು ವಾಡಿಕೆಯಾಗಿತ್ತು. ಅಲ್ಲದೆ ಈತನು "ಖೇಚರಶಕ್ತಿ"ಯಯನ್ನು ಪಡೆದುಕೊಂಡಿದ್ದನು. ಈ ಶಕ್ತಿಯಿಂದ ಆಕಾಶದಲ್ಲಿ ಸಂಚರಿಸುವ ಶಕ್ತಿಯನ್ನು ಪಡೆದು, ಒಮ್ಮೆ ಪ್ರೌಢದೇವರಾಯನೆದುರು ತನ್ನ ಖೇಚರಶಕ್ತಿಯನ್ನು ಪ್ರದರ್ಶಿಸಿ ವಾದದಲ್ಲಿ ಗೆದ್ದು ಶಾರದಾಪೀಠವನ್ನು ಏರಿದನು. ಗುರುಬಸವನು "ಏರಿದ ಶಾರದಾ ಪೀಠ"ವು ಶಂಕರಾಚಾರ್ಯರ ಶಿಷ್ಯ ಪರಂಪರೆಯಲ್ಲಿ ನಡೆದುಬಂದ ಒಂದು ಮಠವು ಹಂಪೆಯಲ್ಲಿ ಇದ್ದಿರಬಹುದೆಂದು ವಿದ್ವಾಂಸರು ಊಹಿಸಿರುತ್ತಾರೆ. ಈ ಪೀಠವು ಬ್ರಾಹ್ಮಣರ ಒಂದು ಮಠವಿರಬಹುದೆಂದು ಶ್ರೀ ಎಂ.ಎ. ನಾರಾಯಣ ಶಾಸ್ತ್ರಿಗಳು ಮನೋವಿಜಯಕ್ಕೆ ಬರೆದ ಆಂಗ್ಲಭಾಷಾ ಪೀಠಿಕೆಯಲ್ಲಿ ಊಹಿಸಿರುವರು. (ಪು.೪) ಈ ಎಲ್ಲಾ ಕಾರಣಗಳಿಂದಲೂ ಈತನು ಮಹಾ ಸಿದ್ಧಿಪುರುಷನು. ವೇದಾಂತ ವಿದ್ವಾಂಸನು ಆಗಿ ಅಪೂರ್ವವಾದ ನಿಪುಣನಾಗಿದ್ದಂತೆ ತಿಳಿದುಬರುತ್ತದೆ. ಗುರುಬಸವನು ವಾದದಲ್ಲಿ ಗೆದ್ದು ಶಾರದಾ ಪೀಠವನ್ನೇರಿ ಪ್ರೌಢದೇವರಾಯನ ಅರಮನೆಯಲ್ಲಿ ಇರಲು, ಒಬ್ಬ ಯೋಗಿಯು ಬಂದು ಖೇಚರ ಪವನದಲ್ಲಿದ್ದುದನ್ನು ರಾಜನು ಕುತೂಹಲದಿಂದ ನೋಡುತ್ತಿರಲು ಆಗ ಗುರುಬಸವನು ಆ ಯೋಗಿಗಿಂತ ಮೇಲೆ ಹೋಗಿ "ಖೇಚರದಲ್ಲಿ ಸಕಲ ರಾಗಗಳನ್ನು ಹಾಡಿ" ನಿರವಯಲಾಗುವದು ಮಹತ್ವಪೂರ್ಣ ಸಂಗತಿಯಾಗಿದೆ. ಬಯಲೊಳಗೆ ಬಯಲಾಗುವುದೇ ವೀರಶೈವ ಸಿದ್ಧಾಂತದ ಗುರಿಯಾಗಿದೆ. ಇದರಿಂದ ಅವನ ಸಿದ್ಧಿಸಾಧನೆಯ ಮಹತ್ವ ತಿಳಿದುಬರುತ್ತದೆ. ಸಿದ್ಧೇಶ್ವರ ಪುರಾಣವು ಈ ವಿವರಣೆಯನ್ನು ಉದ್ಧರಿಸಿರುವುದನ್ನು ಇಲ್ಲಿ ಅವಲೋಕಿಸಬಹುದು:

ಮತ್ತೆ ಕೇಳ್ ಗುರುಬಸವನೆಂಬ ಯೋಗಿಯ ಕೂಡೆ
ಮತ್ತನೆನಿಸುವ ಚಂದ್ರಜೋಗಿ ವಾದಿಪೆನೆಂದು
ಹತ್ತೆ ಸಾರ್ದಾಕಾಶಕಡರಿ ತಾಳಪ್ರಮಾಣವೊಳೆ ಕುಳ್ಳಿರೆ ಕಾಣುತೆ
ಉತ್ತಮೋತ್ತಮನಾತ್ಮಪಾದುಕೆಯ ನಿಡೆಯವನ
ನೆತ್ತಿಯಿಂ ಮೇಲೆ ಮೊಳದೊಂದರಳತೆಯೊಳಿರಲ್
ಚಿತ್ತದೊಳ್ ನಾಣ್ಚಿ ಧರೆಗಿಳಿದು ಕರುಣಂಬಡೆದುದಂ ಕೇಳ್ದರಿದುದಿಲ್ಲವೆ[3]

ಆತ್ಮಜ್ಞಾನಿಯಾದ ಗುರುಬಸವನೊಡನೆ ವಾದಿಸಿ ಸೋತ ವ್ಯಕ್ತಿ 'ಚಂದ್ರಯೋಗಿ' ಯೆಂಬುದು ತಿಳಿದುಬರುತ್ತದೆ. ಚನ್ನಬಸವ ಪುರಾಣ, ಸಿದ್ದೇಶ್ವರ ಪುರಾಣ ಮುಂತಾದವು ಉಲ್ಲೇಖಿಸಿರುವುದರಿಂದ ಈತನ ವ್ಯಕ್ತಿತ್ವ ಯೋಗ್ಯತೆ, ಸಾಧನೆ-ಸಿದ್ಧಿಗಳು ಅರಿವಾಗುತ್ತದೆ. ಒಟ್ಟಿನಲ್ಲಿ ಹಂಪೆಯಲ್ಲಿ ಇದ್ದು ಶಾರದಾ ಪೀಠವನ್ನು ಏರಿ ಪ್ರೌಢದೇವರಾಯನ ಗುರುವಾಗಿ

ಇದ್ದವನು ಗುರುಬಸವನೆಂದು ತಿಳಿದು ಬರುತ್ತದೆ. ಈತನು ಸಾಮಾನ್ಯ ವ್ಯಕ್ತಿಯಲ್ಲ ಮಹಾನ್ ಶಕ್ತಿವಂತನು ಆಗಿ ಅಂದಿನ ಸಮಾಜದ ಮೇಲೆ ಪ್ರಭಾವ ಬೀರಿರುತ್ತಾನೆ.

ಗುರುಬಸವನ ವಿಷಯವಾಗಿ "ಪದ್ಮಶ್ರೀ" ಬಿ. ಶಿವಮೂರ್ತಿ ಶಾಸ್ತ್ರಿಗಳು ಹೀಗೆ ಅಭಿಪ್ರಾಯಪಟ್ಟಿರುವರು. "ಕವಿ ಗುರುಬಸವನು ಶಿವಮೊಗ್ಗ ಜಿಲ್ಲೆ ಕ್ಯಾಸನೂರ ಮಠಾಧ್ಯಕ್ಷನಾಗಿದ್ದು, ವಿಜಯನಗರದ ಅರಸರ ಮತ್ತು ಕೆಳದಿಯ ರಾಜರ ಕಾಲದಲ್ಲಿ ಕ್ಯಾಸನೂರು ಮಠವು ಅತ್ಯಂತ ಪ್ರಸಿದ್ಧಿಯನ್ನು ಪಡೆದಿದ್ದಿತೆಂದೂ ಕ್ಯಾಸನೂರು ಎಂಬುದಕ್ಕೆ ಸಂಸ್ಕೃತದಲ್ಲಿ 'ಖೇಚರಪುರಿ' ಎಂದು ಹೇಳುವರೆಂದೂ ಶಿವಯೋಗಿಯಾದ ಗುರುಬಸವನು ತನ್ನ ಯೋಗ ಸಾಮರ್ಥ್ಯದಿಂದ ಆಕಾಶದಲ್ಲಿ ಸಂಚರಿಸುತ್ತಿದ್ದುದರಿಂದ ಆ ಊರಿಗೆ 'ಖೇಚರಿಪುರಿ' ಎಂಬ ಹೆಸರಾಯಿತೆಂದು ಐತಿಹ್ಯವುಂಟು. ಖೇಚರಿಪುರಿ ಎಂಬುದು ಅಪಭ್ರಂಶವೇ ಕ್ಯಾಸನೂರು" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಗುರುಬಸವಾರ್ಯನು ಒಟ್ಟಿನಲ್ಲಿ ಶಿವಮೊಗ್ಗ ಜಿಲ್ಲೆಯ ಕ್ಯಾಸನೂರು ಮಠಾಧ್ಯಕ್ಷನಾಗಿದು ಕೊಂಡು ಸಾಧಕನಾಗಿ, ಪ್ರೌಢದೇವರಾಯನ ಕಾಲಕ್ಕೆ ಹಂಪೆಗೆ ಬಂದು ನೂರೊಂದು ವಿರಕ್ತರ ಮಧ್ಯದಲ್ಲಿ ಮಹಾಮಹಿಮನಾಗಿ ಪ್ರಜ್ವಲಿಸಿ ಬಯಲಿನಲ್ಲಿ ಬಯಲಾದನೆಂದು ತಿಳಿದು ಬರುತ್ತದೆ. ಈ ಕವಿ ಕ್ರಿ. ಶ. ೧೪೩೦ ಸುಮಾರಿಗೆ ಇದ್ದನೆಂಬುದು ಖಚಿತ ಅಭಿಪ್ರಾಯವಾಗಿದೆ.

ಗುರುಬಸವನು ವೀರಶೈವನಾಗಿದ್ದರೂ ತಾನು ಅವಧೂತನೆಂದುಕೊಂಡಿರುವುದು ಗಮನಾರ್ಹವಾದ ವಿಷಯ. ಅವನ ಅವಧೂತಗೀತೆಯಿಂದಲೆ ತಿಳಿದುಬರುತ್ತದೆ.

ಪ್ರೀತಿಯೊಳನುಕಂಪದಿನವಧೂತ। ಗೀತೆಯನನು ನಯದಿಂ ಕೇಳ್ದಾತ।
ರೇತದೊಳವತರಿಸಿದ ನಿಜಾತ। ಜ್ಯೋತಿಯೊಳವತರಿಸಿದ ಗತಬೀತ॥ ॥೧೦೦॥
ಸ್ವಾನುಭವದನ್ವಯ ದಿಂ ಗುರುಬಸವ। ತಾನವಧೂತನೆನಿಸಿ ಕೇಳ್ದಿರವ।
ಜ್ಞಾನೋತ್ತರ ಮಾರ್ಗದ ಬಹುವಿಧವ। ಸಾನಂದದಿ ಪೇಳ್ದನು ನಿಜಮತವ॥
॥೧೦೧॥

ಈ ರೀತಿ ಅವನೇ ಹೇಳಿಕೊಂಡಿರುವದರಿಂದ ಅವನು ಅವಧೂತ ಹೌದು, ಆಧ್ಯಾತ್ಮಿಕ ಚಿಂತನೆಯ ಮಾರ್ಗದಿಂದ ಅವನೊಬ್ಬ ಅವಧೂತ, ಸ್ವಾನುಭವದನ್ವಯದಿಂದ ಅವನು ಅವಧೂತನೆನಿಸಿಕೊಳ್ಳುತ್ತಾನೆ. ಅವನು ಶಿವಜ್ಞಾನೋತ್ತರ ಮಾರ್ಗದ ವಿವಿಧ ವಿಷಯಗಳನ್ನು ಅನುಭವಕ್ಕೆ ತಂದುಕೊಂಡವನಾದ್ದರಿಂದ ಅವಧೂತನೆಂದುಕೊಂಡಿದ್ದಾನೆ. ಈತನು ಬಳಸಿರುವ ನಿರ್ವಿಕಾರ ಮಾರ್ಗದ ಸಮನ್ವಯ ವಿಧಾನ ಅಪೂರ್ಣವಾದುದು, ಶಂಭು ಲಿಂಗಾಂಕಿತದ (ಎರಡನೆ) ನಿಜಗುಣ ಶಿವಯೋಗಿಯ ಮೇಲೆ ಈ ಕವಿಯ ಪ್ರಭಾವ ವನ್ನು ಗುರುತಿಸಬಹುದು. ಇವರಿಬ್ಬರು ಹುಬ್ಬಳ್ಳಿಯ ಸಿದ್ಧಾರೂಢರು ಇದೆ ಅವಧೂತ

ಪಂಥದವರಾಗಿದ್ದರು ಎಂದು ಡಾ|| ಎಲ್. ಬಸವರಾಜು ಅವರು ಅಭಿಪ್ರಾಯ ಪಟ್ಟಿರುತ್ತಾರೆ.೬

ಮನೋವಿಜಯ : ಈ ಗ್ರಂಥಕ್ಕೆ ಕವಿ ಮನೋವಿಜಯವೆಂದು ಹೆಸರಿಟ್ಟಿರುವುದು ಅರ್ಥಪೂರ್ಣವಾಗಿದೆ. "ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂಬ ಉಕ್ತಿಯನ್ನು ಅನುಸರಿಸಿ ಪರಬ್ರಹ್ಮಧ್ಯಾನಾಸಕ್ತವಾದ ಮನವು ಮೋಕ್ಷಕ್ಕೆ ಪ್ರತಿಬಂಧಕವಾದುದರಿಂದಲೂ ಇದರ ನಿಗ್ರಹವೇ ಮೋಕ್ಷಕ್ಕೆ ಸಾಧನವಾದುದರಿಂದ ತನ್ನ ಗ್ರಂಥದಲ್ಲಿ ಸಾಧನದ ಸ್ವರೂಪವನ್ನು ವಿವರಿಸಿರುವುದರಿಂದ ಇದಕ್ಕೆ 'ಮನೋವಿಜಯ'ವೆಂದು ಹೆಸರಿಟ್ಟಂತೆ ಕಂಡು ಬರುತ್ತದೆ. ಕುಸುಮ ಷಟ್ಪದಿ ಶೈಲಿಯಲ್ಲಿ ಸುಂದರವಾಗಿ ರಚಿತವಾಗಿದೆ. ಇದರಲ್ಲಿ ೯ ಪ್ರಕರಣಗಳಿದ್ದು ೩೫೫ ಪದ್ಯಗಳಿಂದ ಕೂಡಿದೆ. ಗುರು–ಶಿಷ್ಯರ ಪ್ರಶ್ನೋತ್ತರ ರೂಪವಾಗಿ ಇರುವುದರಿಂದ ಈ ಗ್ರಂಥದ ಸ್ವಾರಸ್ಯ ಹೆಚ್ಚಿದೆ. ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಕೆಲವು ಗ್ರಂಥಗಳು ಗುರುಶಿಷ್ಯ ಸಂವಾದ ರೂಪದಲ್ಲಿಯೇ ಇರುವುದರಿಂದ ತನ್ನ ಗ್ರಂಥಕ್ಕೂ ಈ ಕವಿ ಇವೇ ಕೌಶಲ್ಯವನ್ನು ಬಳಸಿಕೊಂಡಂತೆ ಕಂಡು ಬರುತ್ತದೆ. ಇವನಿಗೆ ಸಂಸ್ಕೃತ ವೇದ–ವೇದಾಂತ ಉಪನಿಷತ್ತು ಸ್ಮೃತಿ ಶೃತಿಗಳ ಜ್ಞಾನ ಅಪಾರವಾಗಿದ್ದಂತೆ ಅವನ ಕಾವ್ಯಗಳನ್ನು ಅಭ್ಯಾಸ ಮಾಡುವವರಿಗೆ ತಿಳಿದು ಬರುತ್ತದೆ. ಮಾನವ, ಮನಸ್ಸು ಹೇಳಿದಂತೆ ಕೇಳಬಾರದು. ನಾವು ಹೇಳಿದಂತೆ ಮನಸ್ಸು ಕೇಳಬೇಕು. ಮನಸ್ಸು, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಗೆಲ್ಲುವ ವಿಧಾನವನ್ನು ಬಹಳ ಸ್ವಾರಸ್ಯಪೂರ್ಣವಾಗಿ ವಿವರಿಸಿರುವನು.

ವೇದಾಂತ ವಿಷಯಗಳನ್ನು ಹೇಳುವುದು ಸುಲಭವಲ್ಲ, ಉಕ್ಕಿನ ಕಡಲೆಯಂತೆ ಮೆಲ್ಲಲೂ ಕಷ್ಟ, ಬಿಡಲೂ ತೊಂದರೆ, ಮಾತು ಮನಸ್ಸಿಗೆ ವರ್ಣನೆಗೆ ನಿಲುಕದ ವಿಷಯ. ಜೀವ–ಶಿವರ ವಿಚಾರ ವಿವರಿಸುವಾಗ ಗೇರು ಹಣ್ಣಿನ ಉದಾಹರಣೆಯಿಂದ ವಿವರಿಸಿರುವುದು ಸುಲಭವಾಗಿದೆ. ಸೂರ್ಯ ಮರೀಚಿ, ಸಮುದ್ರದ ನೆರೆತೊರೆ, ರಾತ್ರಿ–ಹಗಲು, ಇಂದ್ರಜಾಲ ಮುಂತಾದ ದೃಷ್ಟಾಂತಗಳನ್ನು ಸಂದರ್ಭಕ್ಕೆ ಅನುಗುಣವಾಗಿ ವಿವರಿಸಿರುವುದನ್ನು ಓದುಗರು ಅರಿಯಬಹುದಾಗಿದೆ. ಅಲ್ಲಲ್ಲಿ ಕನ್ನಡ ಪದಗಳ ಮಧ್ಯದಲ್ಲಿ ಸಂಸ್ಕೃತ ಪದಗಳನ್ನೂ, "ಕರಿಮಣಿ ಸರದಲ್ಲಿ ಕೆಂಪು ಹವಳವನ್ನು ಪೋದಂತೆ" ಬಳಸಿರುವುದು ಕಾವ್ಯಕ್ಕೆ ಶೋಭೆಯನ್ನು ತಂದು ಕೊಟ್ಟಿದೆ. ಇಷ್ಟೇ ಅಲ್ಲದೆ ಕವಿಯು ಉಪಮಾನಾದಿ ಅಲಂಕಾರಗಳನ್ನೂ ಕೃತಿಯಲ್ಲಿ ಅಲ್ಲಲ್ಲಿ ಪ್ರಯೋಗಿಸಿರುವನು.

ರಸಭಾವಲಂಕಾರ
ದೆಸೆಕವಿಲ್ಗೆಂದು ಭಾ
ವಿಸಬೇಡ ಭಾವುಕರ್ ಭಾವಿಸುವೊಡೆ।
ರಸವೆ ಚಿದ್ರಸಭಾವ

080-88229 45

ದೆಸೆಪೂರ್ಣ ನಿಜಭಾವ
ವೆಸೆವಲಂಕಾರವಾನಂದದಿರವು ‖ ಪ್ರ. ೯ ಪ ೨೭ ‖

ಎಂದು ಹೇಳಿರುವುದು ಗಮನೀಯವಾಗಿದೆ. ನವರಸಗಳು, ಸಾತ್ವಿಕಾದಿ ಭಾವಗಳು, ಉಪಮಾದಿ ಅಲಂಕಾರಗಳನ್ನು ಇವನ ಈ ಕೃತಿಯಲ್ಲಿ ವರ್ಣಿಸಿದ್ದಾನೆ. "ಮನೋವಿಜಯ"ವು ವೇದಾಂತ ಪ್ರತಿಪಾದಿಸುವ ಮಹಾನ್ ಕೃತಿಯಾಗಿದೆ. ಆಧ್ಯಾತ್ಮಿಕ, ಧಾರ್ಮಿಕ, ಸಾಹಿತ್ಯಾಸಕ್ತರ ಮನ್ನಣೆಗೆ ಪಾತ್ರವಾಗಿದೆ. ಆಧ್ಯಾತ್ಮಿಕ ವಿದ್ಯೆಯನ್ನು ಪ್ರಚಾರಪಡಿಸುವಲ್ಲಿ ಶಿವಯೋಗಿ ಶಿವಾಚಾರ್ಯ, ನಿಜಗುಣ ಶಿವಯೋಗಿ; ಗುರುಬಸವ ಕವಿ, ಮಹಾಲಿಂಗರಂಗ ಮತ್ತು ಸರ್ಪಭೂಷಣ ಶಿವಯೋಗಿ ಮುಂತಾದವರು ಪ್ರಸಿದ್ಧರಾಗಿದ್ದಾರೆ.

ಮೂಲ ಕೃತಿಯ ವಿಷಯವು ವೇದಾಂತ ವಿಷಯವೆಂದ ಮೇಲೆ ವಿವರಣೆಯ ಮೇಲೆ ವಿವರಣೆ ಕೊಡುವುದು ಅವಶ್ಯಕ. ಅನೇಕ ಶಾಸ್ತ್ರಗಳ ಆಧಾರ ಕೊಡುವುದು ಉಚಿತವಾದದ್ದು ಒಮ್ಮೊಮ್ಮೆ ಮೂಲ ಕೃತಿಯಲ್ಲಿ ಹೇಳುವುದು ಸಾಧ್ಯವಾಗದಾಗ ಆ ಕೃತಿಗೆ ವ್ಯಾಖ್ಯಾನ ಬರೆಯುವುದು ಅವಶ್ಯಕತೆ ಕಂಡು ಬರುತ್ತದೆ. 'ಮನೋವಿಜಯ'ಕ್ಕೂ ಅಂತಹದೊಂದು ವ್ಯಾಖ್ಯಾನ ಬೇಕೆನ್ನಿಸಿರಬಹುದು. ಆ ಕೆಲಸವನ್ನು ಪೂರೈಸಲು ಶ್ರೀ ವಿರಕ್ತ ತೋಂಟದಾರ್ಯರು ಮುಂದೆ ಬಂದು "ತಾತ್ಪರ್ಯ ಚಂದ್ರಿಕೆ"ಯನ್ನು ಬರೆದು ಮೂಲ ಕೃತಿಗೆ ಮೆರಗು ತಂದಿದ್ದಾರೆ. ಈತನು ತುಮಕೂರು ಪಕ್ಕದ ಗುಳೂರು ಅಥವಾ ನಂದಿಪುರದ ಸಿಂಹಾಸನಾಧಿಪತಿಯೆಂದೂ ಮಧುಗಿರಿ ಪಕ್ಕದಲ್ಲಿದ್ದ ಬಿಜ್ಜವರ ರಾಜ್ಯದ ಅಧಿಪತಿಯಾಗಿದ್ದ ತೋಂಟದ ಸಿದ್ಧಲಿಂಗ ಭೂಪಾಲನ ಗುರುವೆಂದೂ ತಿಳಿದು ಬಂದಿದೆ. ಈತನ ವ್ಯಾಖ್ಯಾನ ಮೂಲ ಕೃತಿಯಷ್ಟೇ ಮಹತ್ವದ್ದಾಗಿದೆ.

ಒಟ್ಟಿನಲ್ಲಿ "ಮನೋವಿಜಯವು" ವೇದಾಂತ ವಿಷಯ ಪ್ರತಿಪಾದಿಸುವ ಅಮೂಲ್ಯ ಕೃತಿ ರತ್ನವಾಗಿದೆ.

ಗ್ರಂಥಋಣ

೧. ಮನೋವಿಜಯ : ಸಂ. ಎಂ. ವಿ. ನಾರಾಯಣಶಾಸ್ತ್ರಿ
೨. ಮನೋವಿಜಯ : ಸಂ. ಡಾ॥ ಎಂ. ಎಸ್. ಸುಂಕಾಪುರ ಮತ್ತು ಪಂ॥ ನಾಗಭೂಷಣಶಾಸ್ತ್ರಿ
೩. ವೀರಶೈವ ಸಾಹಿತ್ಯ ಚರಿತ್ರೆ : ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿ
೪. ಶಿವದಾಸ ಗೀತಾಂಜಲಿ : ಡಾ॥ ಎಲ್. ಬಸವರಾಜು
೫. ಕನ್ನಡ-ಕನ್ನಡ ನಿಘಂಟು [ಸಂ. ೨] ಕನ್ನಡ ಸಾಹಿತ್ಯ ಪರಿಷತ್ತು.

ಅಡಿಟಿಪ್ಪಣಿಗಳು

೧. ಅವಧೂತಗೀತೆ, ವೃಷಭಗೀತೆ, ಸ್ವರೂಪಾಮೃತ, ಸದ್ಗುರು ರಹಸ್ಯ, ಕಲ್ಯಾಣೇಶ್ವರ ಮುಂತಾದವುಗಳಲ್ಲಿ.

೨. ಚ. ಬ. ಪು. ಸಂ. ೬೩ ಪ. ೧೫–೧೬

೩. ಮನೋವಿಜಯ ಪ. ೧, ೨೩–೨೫

೪. ಖೇಚರ (ನಾ) ಆಕಾಶದಲ್ಲಿ ಸಂಚರಿಸುವವನು.

೫. ಸಿದ್ಧೇಶ್ವರ ಪುರಾಣ ಸಂ. ೫. ಪ. ೩೫.

೬. ಶಿವದಾಸ ಗೀತಾಂಜಲಿ (ಪು. ೧೧೨).

□ □

ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ

—ಡಾ|| ಎಚ್. ತಿಪ್ಪೇರುದ್ರಸ್ವಾಮಿ

ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವನ್ನು 'ತತ್ವಪದಗಳು' ಅಥವಾ 'ಕೈವಲ್ಯ ಸಾಹಿತ್ಯ' ಎಂಬ ಹೆಸರಿನಿಂದ ಗುರುತಿಸಬಹುದೆಂದು ತೋರುತ್ತದೆ. ವಿವಿಧ ಪ್ರಕಾರಗಳಲ್ಲಿ ಸೃಷ್ಟಿಯಾಗುತ್ತಾ ಬಂದ ಕನ್ನಡ ಸಾಹಿತ್ಯ, ತನ್ನ ಕಾವ್ಯಗಳ ಕಮನೀಯತೆಯ ಜೊತೆಗೆ, ವಿಶಿಷ್ಟವಾದ ಕೆಲವು ಘಟ್ಟಗಳನ್ನು ನಿರ್ಮಿಸಿಕೊಂಡಿದೆ. ವಚನ ಸಾಹಿತ್ಯ, ದಾಸ ಸಾಹಿತ್ಯ–ಇವುಗಳನ್ನು ಪ್ರಮುಖವಾಗಿ ಎತ್ತಿ ತೋರಿಸಬಹುದು. ಇವುಗಳಂತೆ ಜನಜೀವನವನ್ನು ಮುಟ್ಟಿ ಹಸನುಗೊಳಿಸಲು ಕಾರಣವಾದ ಇನ್ನೊಂದು ಬಗೆಯ ಹಾಡುಗಳು ಕನ್ನಡ ಸಾಹಿತ್ಯದಲ್ಲಿವೆ. ಇವುಗಳನ್ನು ರಚಿಸಿದವರು ಶರಣ ಮಾರ್ಗಾವಲಂಬಿಗಳಾದ ಅನುಭಾವಿಗಳು. ಈ ಹಾಡುಗಳನ್ನು ಸಾಮಾನ್ಯವಾಗಿ 'ತತ್ವಪದ'ಗಳೆಂದು ಕರೆಯುವುದುಂಟು. ಅಂತರಂಗದ ಅರಿವಿನ ಮೂಲಭೂತ ತತ್ವವನ್ನು ಅವು ಕುರಿತಿರುವುದರಿಂದ 'ತತ್ವಪದ'ಗಳೆಂದು ಕರೆದಿರಬಹುದೆಂದು ತೋರುತ್ತದೆ.

ಒಂದು ದೃಷ್ಟಿಯಿಂದ ನಿಜಗುಣ ಶಿವಯೋಗಿಗಳು ಈ ಮಾರ್ಗದ ಆದ್ಯಪ್ರವರ್ತಕರೆನ್ನಬಹುದು. ೧೨ನೇ ಶತಮಾನದ ಶರಣರು ಹಾಡುಗಳನ್ನು ಬರೆದಿರುವಂತೆ ತಿಳಿದು ಬರುತ್ತದೆ. ಆದರೆ ಅವರ ವಚನಗಳಂತೆ ಹಾಡುಗಳು ಜನಜೀವನದಲ್ಲಿ ಬೆರೆಯಲಿಲ್ಲ. ಇದಕ್ಕೆ ಕಾರಣ ಬಹುಶಃ ಅವುಗಳಲ್ಲಿ ಪ್ರತಿಪಾದಿತವಾದ ತತ್ವ ಗಹನವಾಗಿದ್ದು ಸಾಮಾನ್ಯರಿಗೆ ಸುಲಭವಾಗಿ ಎಟುಕುವಂತಿರಲಿಲ್ಲದುದೆ ಎನ್ನಬಹುದು. ಆದರೆ ನಿಜಗುಣರು ಗಹನವಾದ ಮತ್ತು ಉದಾತ್ತವಾದ ತತ್ವಗಳನ್ನು ಜನಪ್ರಿಯವಾಗಬಲ್ಲ ಸರಳವಾದ ಮತ್ತು ಸುಂದರವಾದ ರೀತಿಯಲ್ಲಿ ಹಾಡಿದರು. ಈ ಅರ್ಥದಲ್ಲಿ ಅವರು ತತ್ವಪದಗಳ ಆದ್ಯ ಪ್ರವರ್ತಕರಾದರು.

ತಮ್ಮ ತತ್ವಪದಗಳ ಸಂಕಲನವನ್ನು ಅವರು 'ಕೈವಲ್ಯ ಪದ್ಧತಿ' ಎಂದು ಅರ್ಥವತ್ತಾಗಿ ಕರೆದರು. ಇದೇ ಮಾರ್ಗದಲ್ಲಿ ನಡೆದ ಸರ್ಪಭೂಷಣ ಶಿವಯೋಗಿಗಳು ತಮ್ಮ ಹಾಡುಗಳ ಸಂಕಲನವನ್ನು 'ಕೈವಲ್ಯ ಕಲ್ಪವಲ್ಲರಿ' ಎಂದರು. ಬಾಲಲೀಲಾ ಮಹಾಂತ ಶಿವಯೋಗಿಗಳು 'ಕೈವಲ್ಯದರ್ಪಣ' ಎಂದು ಹೆಸರಿಸಿದರು. ಇಂತಹ ಪದಗಳ ರಚನೆ ೧೮–೧೯ನೇ ಶತಮಾನದಲ್ಲಿ ವಿಪುಲವಾಗಿ ಬೆಳೆಯಿತು. ತತ್ವಪದಗಳ ಸಮೃದ್ಧವಾದ ಯುಗ ಎಂದು ಇದನ್ನು ಕರೆಯಬಹುದು. ಎಲ್ಲರೂ 'ಕೈವಲ್ಯ' ಎನ್ನುವ ಮಾತಿನಿಂದಲೇ ಇವುಗಳ ಸಂಕಲನವನ್ನು ಹೆಸರಿಸಲಿಲ್ಲ. 'ಕೈವಲ್ಯ ನವನೀತ' ಎಂದು ಮುಂತಾಗಿ ಆ ಮಾತು ಕೆಲವೆಡೆ ಮುಂದುವರಿದರೂ ಅನೇಕರಲ್ಲಿ ಅವು ಹಾಡುಗಳು ತತ್ವಪದಗಳೆಂದೇ ಪ್ರಚಲಿತ

ವಾದುವು. ರೂಪದ ದೃಷ್ಟಿಯಿಂದ ಅವುಗಳನ್ನು ಹಾಡುಗಳೆಂದೂ, ವಸ್ತುವಿನ ದೃಷ್ಟಿಯಿಂದ ತತ್ತ್ವಪದಗಳೆಂದೂ ಕರೆದರೆ, ಅವು ಉದ್ದೇಶಿಸಿದ ಆತ್ಯಂತಿಕ ಗುರಿಯ ದೃಷ್ಟಿಯಿಂದ 'ಕೈವಲ್ಯಪದ'ಗಳೆಂದು ಕರೆಯಬಹುದು. ಇದೇ ದೃಷ್ಟಿಯನ್ನು ಮುಖ್ಯವಾಗಿಟ್ಟುಕೊಂಡು ಈ ಪ್ರಕಾರವನ್ನು 'ಕೈವಲ್ಯಸಾಹಿತ್ಯ' ಎಂದು ಕರೆಯುವುದು ಸೂಕ್ತ.

'ಕೈವಲ್ಯ' ಎಂಬ ಮಾತಿನ ಹಿಂದೆ 'ಕೇವಲ' ಎಂಬುದರ ಧ್ವನಿ ಇದೆ. ಕೇವಲ ಎಂಬುದಕ್ಕೆ ವಿಚಿತ್ರ, ಅಸಾಮಾನ್ಯ. ಏಕಾಂಗಿ ಈ ಮೊದಲಾದ ಅರ್ಥಗಳ ಜೊತೆಗೆ 'ಪೂರ್ಣ' 'ಶುದ್ಧ' 'ಅಖಂಡ' ಈ ಅರ್ಥಗಳೂ ಇವೆ. ಆಧ್ಯಾತ್ಮಿಕ ಸಂದರ್ಭದಲ್ಲಿ ಈ ಎರಡನೇ ಅರ್ಥಗಳೇ ಇಲ್ಲಿ ಉದ್ದೇಶಿತ. ಜೈನರಲ್ಲಿ ಬರುವ 'ಕೇವಲಜ್ಞಾನ' ಎಂಬ ಮಾತನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನಃಪರ್ಯಾಯಜ್ಞಾನ ಇವುಗಳನ್ನು ಮೀರಿದ್ದು ಕೇವಲಜ್ಞಾನ, ಲೋಕಾಲೋಕಗಳ, ತ್ರಿಕಾಲಗಳ ಮತ್ತು ಸರ್ವವಸ್ತುಗಳ ಸಮಗ್ರಜ್ಞಾನವಾಗುವುದೇ ಕೇವಲ ಜ್ಞಾನ ಎಂದು ಜೈನಧರ್ಮ ಹೇಳುತ್ತದೆ. ಆತ್ಮನ ಮೇಲಿನ ಕರ್ಮದ ಆವರಣ ಅನಾವರಣಗೊಂಡಾಗ ಅದು ಅನಂತವಸ್ತು ಸಮುದಾಯವನ್ನು ಕಾಣುವ ತನ್ನ ಗುಣವನ್ನು ಮತ್ತೆ ಪಡೆಯುತ್ತದೆ. ಇದೇ ಕೇವಲ ಜ್ಞಾನಕ್ಕೆ ಕಾರಣವಾಗುತ್ತದೆಂಬ ಈ ಜೈನ ಧರ್ಮದೃಷ್ಟಿ ಅರ್ಥವತ್ತಾಗಿದೆ. ಇದಕ್ಕೆ ಸಂವಾದಿಯಾಗಿಯೇ ನಮ್ಮಲ್ಲಿ ಪರಿಪೂರ್ಣ ಪರಿಶುದ್ಧ, ಅಖಂಡ ಎಂಬ ಮಾತುಗಳು ಬರುತ್ತವೆ.

ಈ ಅರ್ಥವನ್ನು 'ಕೈವಲ್ಯ' ಎಂಬ ಮಾತು ಇನ್ನೂ ಮುಂದುವರಿಸುತ್ತದೆ. ಲೌಕಿಕ ಸಂಗದಿಂದ ದೂರನಿಲ್ಲುವ 'ನಿರ್ಲಿಪ್ತಸ್ಥಿತಿ' ಎನ್ನುವುದರಿಂದ ಹಿಡಿದು, ಆತ್ಮಪರಮಾತ್ಮರುಗಳ ಸಮರಸದಿಂದ ಲಭಿಸುವ 'ನಿರ್ವಿಕಲ್ಪಸ್ಥಿತಿ' ಎನ್ನುವವರೆಗೂ ಇದರ ಅರ್ಥ ಬೆಳೆದಿದೆ. ಲಿಂಗಾಂಗಸಾಮರಸ್ಯದಿಂದ ಬರುವ ಆತ್ಯಂತಿಕ ಆನಂದ ಎಂದು ವೀರಶೈವ ಪರಿಭಾಷೆಯಲ್ಲಿ ಇದನ್ನು ಹೇಳಬಹುದು. ವಿಶಾಲವಾದ ಅರ್ಥದಲ್ಲಿ ಇದು ಆತ್ಮಾನುಭವ, ಈ ಅನುಭವಕ್ಕೆ ಕಾರಣವಾದ ಆತ್ಮಸಂಗಾತಿಯಾದ ಸಾಹಿತ್ಯ, ಕೈವಲ್ಯ ಸಾಹಿತ್ಯ. ಈ ಅರ್ಥದಲ್ಲಿ ವಚನ ಸಾಹಿತ್ಯ, ದಾಸ ಸಾಹಿತ್ಯ, ಅಷ್ಟೇ ಏಕೆ, ಆಧ್ಯಾತ್ಮಿಕ ಸಾಧನೆಯ ಅಥವಾ ಅಂತರಂಗ ಪರಿಭಾವನೆಯ ಮತ್ತು ಪರಿವೀಕ್ಷಣೆಯ ಎಲ್ಲ ಸಾಹಿತ್ಯವನ್ನೂ ಈ ಹೆಸರಿನಡಿಯಲ್ಲಿ ಸಮಾವೇಶಗೊಳಿಸಬಹುದು.

ಆದರೆ ಇಲ್ಲಿ ಅದರ ಅರ್ಥ ಹಂತಹಂತವಾಗಿ ಪರಿಮಿತಗೊಳ್ಳುತ್ತಾ, ಒಂದು ವಿಶಿಷ್ಟವಾದ ಪರಿಧಿಯಲ್ಲಿ ಬಂದು ನಿಲ್ಲಬೇಕಾಗುತ್ತದೆ. ಶಿವ ಜೀವರ ಅವಿನಾಸಂಬಂಧದಿಂದ ಮೂಡಿದ ಕೇವಲ ಅನುಭವವನ್ನು 'ಕೈವಲ್ಯ'ವೆಂದು ಕರೆಯುವುದು, ಶಿವಾನುಭವದ ವಲಯಕ್ಕೆ ಅದನ್ನು ಸೀಮಿತಗೊಳಿಸುತ್ತದೆ. ವೀರಶೈವ ಪರಿಭಾಷೆಯಲ್ಲಿ ಕೈವಲ್ಯವೆನ್ನುವುದು ಬಹಳ ಮಹತ್ವಪೂರ್ಣವಾದ ಅನುಭವದ ಸಂಕೇತವಾಗಿದೆ. ಇದನ್ನು ಇಷ್ಟು ವ್ಯಾಪಕವಾಗಿ ಇಟ್ಟುಕೊಳ್ಳುವುದಾದರೆ ವಚನಸಾಹಿತ್ಯವನ್ನೂ 'ಕೈವಲ್ಯಸಾಹಿತ್ಯ' ಎನ್ನ

ಬೇಕಾಗುತ್ತದೆ. ಇಲ್ಲಿ ಆ ವ್ಯಾಪ್ತಿಯನ್ನು ಅದು ಪಡೆಯದೆ, ಹಾಡಿನ ರೂಪದಲ್ಲಿ ಅಭಿವ್ಯಕ್ತಗೊಂಡ ಅನುಭವವನ್ನು ಮಾತ್ರ ತನ್ನ ವಲಯದೊಳಗೆ ಅದು ಸೇರಿಸಿಕೊಂಡಿತು. ಈ ಅರ್ಥದಲ್ಲಿಯೇ ನಿಜಗುಣ ಶಿವಯೋಗಿಗಳು ಕೈವಲ್ಯದ ಅನುಭವಕ್ಕೆ ಕಾರಣವಾದ ಪದ್ಧತಿ, 'ಕೈವಲ್ಯ ಪದ್ಧತಿ' ಎಂದು ತಮ್ಮ ಹಾಡುಗಳನ್ನು ಕರೆದರು.

"ಕೈವಲ್ಯ" ಎಂಬ ಮಾತಿನಿಂದಲೇ ಒಂದು ಕೃತಿಯನ್ನು ಕರೆದಿರುವವರಲ್ಲಿ ಈಗ ತಿಳಿದಿರುವ ಮಟ್ಟಿಗೆ ನಿಜಗುಣ ಶಿವಯೋಗಿಗಳೇ ಕನ್ನಡದಲ್ಲಿ ಮೊದಲಿಗರು. ಹಾಡುಗಳ ರಚನೆ ಅವರಿಗಿಂತಲೂ ಹಿಂದೆಯೇ ಕನ್ನಡದಲ್ಲಿ ಬೆಳೆದುಬಂದಿತ್ತು. ಶರಣರೇ ಹಾಡುಗಳನ್ನು ಬರೆದಿದ್ದರು. ದಾಸ ಸಾಹಿತ್ಯವಂತೂ ಪುರಂದರದಾಸರಿಗಿಂತ ಹಿಂದಿನಿಂದಲೂ ಪ್ರಚಲಿತವಾಗಿತ್ತು. ೧೫ನೇ ಶತಮಾನದಲ್ಲಂತೂ ಪುರಂದರ, ಕನಕ ಮೊದಲಾದ ದಾಸರಿಂದ ಕೀರ್ತನಸಾಹಿತ್ಯ ಸಮೃದ್ಧವಾಗಿ ಸೃಷ್ಟಿಯಾಯಿತು. ಅವರ ಕೀರ್ತನೆಗಳು ಪಲ್ಲವಿ ಮತ್ತು ಕೆಲವು ವೇಳೆ ಅನುಪಲ್ಲವಿಗಳಿಂದ ಕೂಡಿ ರಾಗಸಮನ್ವಿತವಾಗಿ ರಚಿತವಾದ ಹಾಡುಗಳು ನಿಜಗುಣರ ಹಾಡುಗಳೂ ಇದೇ ಬಗೆಯುವು. ಇವುಗಳ ಹೊರರೂಪ ಒಂದೇಯಾದರೂ ಅಂತರಂಗದ ಹೂರಣ ಬೇರೆ. ಅದಕ್ಕನುಗುಣವಾಗಿ ದಾಸರ ಕೃತಿಗಳನ್ನು ಕೀರ್ತನೆಗಳೆಂದೂ, ಇವರ ಹಾಡುಗಳನ್ನು ತತ್ವಪದಗಳೆಂದೂ ಕರೆದುದು ಸರಿಯಾಗಿಯೇ ಇದೆ.

ದಾಸರ ಮಾರ್ಗವೂ ಆಧ್ಯಾತ್ಮಿಕ ಶೋಧನೆಯ ಆಂತರಿಕ ಸಾಧನೆಯೇ ಆದರೂ ಅದು ನಾರಾಯಣನ ವಿವಿಧ ರೂಪಗಳನ್ನು ಕೀರ್ತಿಸುವ ಮತ್ತು ಮಾನವ ಜೀವನದ ವಿವಿಧ ನೆಲೆಗಳನ್ನು ನೈತಿಕ ನೆಲೆಗಟ್ಟಿನ ಮೇಲೆ ವಿವೇಚಿಸುತ್ತಾ ಮುನ್ನೆಡೆಗಾಗಿ ನಾರಾಯಣನನ್ನೇ ಪ್ರಾರ್ಥಿಸುವ ಆರ್ತಭಾವವನ್ನು ಪ್ರಧಾನವಾಗಿ ಉಳ್ಳದ್ದು, 'ದಾಸ' ಎನ್ನುವ ಮಾತೂ ಅಲ್ಲಿ ಅನ್ವರ್ಥವಾಗುತ್ತದೆ. ಆದರೆ ತತ್ವಪದಗಳ ದೃಷ್ಟಿ ಬೇರೆ. ಇಲ್ಲಿಯೂ ಶಿವಸಂಕೀರ್ತನೆ, ನೈತಿಕ ವಿವೇಚನೆ ಇಲ್ಲವೆಂದಲ್ಲ. ಆದರೆ ಅವು ಸಮಗ್ರ ಜೀವನದ ತಾತ್ವಿಕವಿವೇಚನೆಯ ಒಂದು ಅಂಗವಾಗಿ ಬರುತ್ತವೆ. ಶಿವಕಾರುಣ್ಯವನ್ನು ಪ್ರಾರ್ಥಿಸುವ ಆತನ ಭಾವವಾಗಲೀ ನೈತಿಕ ಜೀವನ ನಿಷ್ಠೆಯ ಹಂಬಲವಾಗಲೀ ಇಲ್ಲಿ ಸಾಧನೆಯ ಪ್ರಾರಂಭದ ಮೆಟ್ಟಿಲುಗಳಾಗಿ, ಅವು ಸಮರಸ ಸುಖದ ಕೇವಲ ಜ್ಞಾನದ ಕಡೆಗೆ ಏರುತ್ತವೆ. ಆ ಜ್ಞಾನದಿಂದ ಪಡೆಯುವ 'ಕೈವಲ್ಯ'ದ ಅನುಭವ, "ಮಾತು ಮನಂಗಳಿಂದತ್ತತ್ತ" ಮೀರಿದ್ದು. ಅದನ್ನು ಪಡೆಯುವ ಮಾರ್ಗವನ್ನೇ ಈ ಹಾಡುಗಳು ಮುಖ್ಯವಾಗಿ ಉದ್ದೇಶಿಸಿರುವುದರಿಂದ "ಕೈವಲ್ಯ ಪದ್ಧತಿ" ಎಂದು ಅವುಗಳ ಸಂಕಲನವನ್ನು ನಿಜಗುಣರು ಕರೆದದ್ದು ತುಂಬಾ ಅರ್ಥವತ್ತಾಗಿ ಕಾಣುತ್ತದೆ.

ಕೈವಲ್ಯ ಸಾಹಿತ್ಯ, ಕೇವಲ ಭಾವುಕ ಭಕ್ತಿಪ್ರಧಾನವಾದ ಆವೇಗವಾಗಲೀ, ಸಾಮಾಜಿಕ ನೀತಿ ಪ್ರತಿಪಾದಕವಾದ ಉಪದೇಶವಾಗಲೀ ಅಲ್ಲ; ಇವುಗಳನ್ನು ಅರಗಿಸಿಕೊಂಡು ಅಂತರಂಗದೊಳಗೆ ಇಳಿಯುತ್ತಾ ಆ ಮೂಲಕ ಶಿವಯೋಗ ಸಾಧನೆಯ ಶಿಖರವನ್ನು ಏರುತ್ತಾ ಹೋಗುವ ಅನುಭಾವಿಗಳ ಆಧ್ಯಾತ್ಮ ಗೀತೆಗಳು. ಇಲ್ಲಿನ ಅನುಭಾವಿಗಳ

+ ತಿಪ್ಪೇರುದ್ರಸ್ವಾಮಿ

ಭಕ್ತಿ, ಬೌದ್ಧಿಕವಾದ ವಿವೇಚನೆಯಿಂದ ಪರಿಣತಗೊಂಡದ್ದು. ಇಲ್ಲಿನ ಅನುಭಾವಿ, ಬುದ್ಧಿ ಭಾವ ಹೃದಯಗಳ ಸಂಪೂರ್ಣ ಸಾಮರಸ್ಯವನ್ನು ಸಾಧಿಸುತ್ತಾನೆ. ಆಂತರಿಕ ಶಕ್ತಿಗಳೆಲ್ಲದರ ಸಮಗ್ರ ವಿಕಾಸ ಇಲ್ಲಿ ಕಾಣುತ್ತದೆ. ಭಾವನೆ ಬೇಕು. ಆದರೆ ಭಾವನೆಗಳ ಆವೇಗವೇ ಪ್ರಧಾನವಾದರೆ ಹಗುರವಾಗುತ್ತದೆ. ಹಾಗೆಂದು ಬುದ್ಧಿಯ ಜಿಜ್ಞಾಸೆಯೇ ಪ್ರಧಾನವಾದರೆ ಶುಷ್ಕವಾಗುತ್ತದೆ. ಬುದ್ಧಿ ಭಾವಗಳೆರಡೂ ಸೇರಿ ಹೃದಯವಂತಿಕೆಯ ಅಂತರ್ ದರ್ಶನದಿಂದ ಶ್ರೀಮಂತವಾಗಬೇಕು. ಅನುಭಾವಿಗಳ ಲಕ್ಷಣಗಳನ್ನು ಕುರಿತು ಚರ್ಚಿಸುತ್ತಾ ಶ್ರೀ ಆರ್. ಡಿ. ರಾನಡೇ ಅವರು ಕೆಲವು ಮುಖ್ಯ ಅಂಶಗಳನ್ನು ಗಮನಿಸಿದ್ದಾರೆ. ಅನುಭಾವಿಯ ಮೊದಲನೆಯ ಅವಶ್ಯಕತೆಯನ್ನು ಅವರು ಹೀಗೆ ಹೇಳಿದ್ದಾರೆ:

"Hence intelleclual power and absolute clarity of thought seem to be the first criterion of mystical experience."[೧]

ಬೌದ್ಧಿಕ ವಿವೇಚನೆ ಮತ್ತು ಆಲೋಚನಾ ಸ್ಪಷ್ಟತೆ ಇವು ಅನುಭಾವದ ಮೂಲ ಆವಶ್ಯಕತೆಗಳು. ಇದರ ಜೊತೆಗೆ ಭಾವನಾಸಂಪತ್ತು ಅನುಭಾವಿಗೆ ಆವಶ್ಯಕ ಆದರೆ ಅದು ಸಾಂಪ್ರದಾಯಿಕವಾದ ಆವೇಗವಾಗಲೀ ಉದ್ರೇಕವಾಗಲೀ ಅಲ್ಲ; ಬುದ್ಧಿಯ ಬೆಳಕನ್ನು ಪಡೆಯುವ ಉದಾತ್ತ ಭಾವನೆ. ರಾನಡೆ ಅವರು ಹೀಗೆ ಹೇಳಿದ್ದಾರೆ:

"A mystical life so far from being unemotional, is, we must say, supremely emotional; only the emotions ought to be exercised and kept under control by intellect"[೨]

ಎನ್ನುವ ಮಾತು ಗಮನಾರ್ಹವಾದದ್ದು. ಇದರ ಜೊತೆಗೆ ಇನ್ನೂ ಒಂದು ಅಂಶವನ್ನು ರಾನಡೆಯವರು ಗಮನಿಸಿದ್ದಾರೆ. ಅದೆಂದರೆ ನೈತಿಕ ಮತ್ತು ಸಾಮಾಜಿಕ ಜೀವನವನ್ನು ಕುರಿತದ್ದು. ಅನುಭಾವಿ ಇವುಗಳಿಗೆ ಹೊರತಾದ ತೀರಾ ವೈಯಕ್ತಿಕ ಜೀವನವನ್ನು ಬಾಳುವಂತಿಲ್ಲ. ವ್ಯಕ್ತಿಯಾಗಿ ಆತ ನೈತಿಕ ನಿಷ್ಠೆಯಿಂದ ಕೂಡಿದ ಮತ್ತು ಸಾಮಾಜಿಕ ಹಿತಕ್ಕೆ ಸಹಾಯಕವಾದ ಜೀವನವನ್ನುಳ್ಳವನಾಗಬೇಕು.

"On the other hand, we find that a true life of mysticism teaches a full-fledged morality in the individual and a life of absolute good to the society"[೩]

ಎಂಬುದು ರಾನಡೆಯವರ ಮಾತು. ಅನುಭಾವದ ಈ ಎಲ್ಲ ನಿಲವುಗಳನ್ನೂ ಕೈವಲ್ಯ ಸಾಹಿತ್ಯದ ವಿವಿಧ ಹಂತಗಳಲ್ಲಿ ಗುರುತಿಸಬಹುದು.

ಇದರ ಆದ್ಯಪ್ರವರ್ತಕರಾದ ನಿಜಗುಣಶಿವಯೋಗಿಗಳು ಈ ಎಲ್ಲವನ್ನೂ ಪೂರ್ಣ ಪ್ರಮಾಣದಲ್ಲಿ ಪಡೆದ ಮಹಾ ಅನುಭಾವಿಗಳು. ಅವರಿಂದ ಮೂಡಿಬಂದ ಈ ಸಾಹಿತ್ಯ ತನ್ನ ಪ್ರಾರಂಭದ ದೆಸೆಯಲ್ಲಿಯೇ ಔನ್ನತ್ಯದ ಶಿಖರಕ್ಕೇರಿರುವುದು ಕಾಣುತ್ತದೆ. ಇದು ಎಲ್ಲಿಯೋ ಹುಟ್ಟಿ ಕ್ರಮೇಣ ಬೆಳೆಯುತ್ತಾ ಬಂದಂತೆ ತೋರುವುದಕ್ಕೆ ಬದಲಾಗಿ, ಎತ್ತಿಕೊಳ್ಳುತ್ತಲೇ ಗೌರೀಶಂಕರದ ತುದಿಯಲ್ಲಿ ಸೆಲೆಯೊಡೆದು ಆ ಮಟ್ಟದಲ್ಲೇ ಭೋರ್ಗರೆದು ಹರಿಯುತ್ತಾ ಕೆಳಗೆ ಬಂದಂತೆ ಅನಿಸುತ್ತದೆ.

ನಿಜಗುಣರ ವ್ಯಕ್ತಿತ್ವವೇ ಅಂತಹದು. ಕರ್ಣಾಟಕದ ಒಂದು ಸಣ್ಣ ಭಾಗಕ್ಕೆ ಬಹುಶಃ ರಾಜರು ಅಥವಾ ಪಾಳೆಯಗಾರರಾಗಿದ್ದ ನಿಜಗುಣರು ಅದನ್ನು ತ್ಯಜಿಸಿ ತೀವ್ರ ವೈರಾಗ್ಯಪರರಾಗಿ ಆಧ್ಯಾತ್ಮಿಕ ಮಹಾಸಾಮ್ರಾಜ್ಯದ ಚಕ್ರವರ್ತಿಗಳಾಗಿ ಪರಿಣಮಿಸಿದರು. ಇವರ ಕಾಲವನ್ನು ಇದುವರೆಗಿನ ಎಲ್ಲ ಚರ್ಚೆಯನಂತರ ಸು. ೧೫ನೇ ಶತಮಾನವೆಂದಿಟ್ಟು ಕೊಳ್ಳಬಹುದು. ಕರ್ಣಾಟಕ ಆಧ್ಯಾತ್ಮಿಕ ಪರಂಪರೆಯಲ್ಲಿ ನಿಜಗುಣರ ಸಾಧನೆ ಮತ್ತು ಸಿದ್ಧಿಗಳು ಒಂದು ವಿಶಿಷ್ಟವಾದ ಘಟ್ಟ. ಷಟ್‌ಶಾಸ್ತ್ರಗಳೆಂದು ಪ್ರಸಿದ್ಧವಾದ ಆರು ಗ್ರಂಥಗಳನ್ನು ಅವರು ಕನ್ನಡದಲ್ಲಿ ಬರೆದಿದ್ದಾರೆ. ‘ಅನುಭವಸಾರ’, ‘ಪರಮಾರ್ಥಗೀತೆ’, ‘ಪರಮಾನುಭವ ಬೋಧೆ’, ‘ಕೈವಲ್ಯಪದ್ಧತಿ’, ‘ಪಾರಮಾರ್ಥಪ್ರಕಾಶಿಕೆ’ ಮತ್ತು ‘ವಿವೇಕ ಚಿಂತಾಮಣಿ’–ಇವು ಆ ಆರು ಗ್ರಂಥಗಳು. ಇವುಗಳಲ್ಲಿ ಕೊನೆಯ ಎರಡು ಗದ್ಯ ಕೃತಿಗಳು, ಅದರಲ್ಲಿ ‘ವಿವೇಕಚಿಂತಾಮಣಿ’ಯಂತೂ ಅವರ ಅದ್ವಿತೀಯ ಸಾಹಸದ ದ್ಯೋತಕ ವಾಗಿದೆ. ಕನ್ನಡಕ್ಕೆ ಮೊಟ್ಟಮೊದಲನೆಯ ವಿಶ್ವಕೋಶವನ್ನು ಕೊಡುವ ಪ್ರಯತ್ನವನ್ನು ಈ ಸನ್ಯಾಸಿ ಈ ಗ್ರಂಥದಲ್ಲಿ ಮಾಡಿದ್ದಾನೆ. ಸುಮಾರು ೯೬೦೦ ಗ್ರಂಥಗಳನ್ನು ನೋಡಿ ಅವುಗಳಿಂದ ವಿಷಯವನ್ನು ನೋಡಿ ಅವುಗಳಿಂದ ವಿಷಯವನ್ನು ಸಂಗ್ರಹಿಸಿ ಇದನ್ನು ರಚಿಸಿರುವುದಾಗಿ ಗ್ರಂಥದ ಕೊನೆಯಲ್ಲಿ ಹೇಳಿಕೊಂಡಿದ್ದಾರೆ. ಇನ್ನು ‘ಪರಮಾನುಭವ ಬೋಧೆ’ ಸಾಂಗತ್ಯದಲ್ಲಿ ರಚಿತವಾದ ಗ್ರಂಥ; ಯಾಜ್ಞವಲ್ಕ್ಯ ಮತ್ತು ಮೈತ್ರೇಯಿಯರ ಸಂಭಾಷಣೆಯ ರೂಪದಲ್ಲಿದೆ. ‘ಪರಮಾರ್ಥಗೀತೆ’ಯನ್ನು ರಗಳೆಯಲ್ಲಿ, ಗುರುಶಿಷ್ಯರ ಸಂವಾದರೂಪದಲ್ಲಿ ಬರೆದಿದ್ದಾರೆ. ‘ಅನುಭವಸಾರ’ ತ್ರಿಪದಿಗಳಲ್ಲಿ ರಚಿತವಾಗಿದೆ. ‘ಪಾರಮಾರ್ಥಪ್ರಕಾಶಿಕೆ’ ಚನ್ನಸದಾಶಿವಯೋಗಿಗಳ ‘ಶಿವಯೋಗಪ್ರದೀಪಿಕೆ’ಯ ಆಧಾರದ ಮೇಲೆ ರಚಿತವಾದ ಗದ್ಯಗ್ರಂಥ. ಇವುಗಳಲ್ಲದೆ ಒಂದೊಂದು ತ್ರಿಪದಿಯಲ್ಲಿ ಒಬ್ಬೊಬ್ಬ ಪುರಾತನರನ್ನು ಸ್ತುತಿಸಿರುವ “ಅರವತ್ತುಮೂವರು ಪುರಾತನರ ಸ್ತೋತ್ರ”–ಎಂಬ ಚಿಕ್ಕ ಕೃತಿಯೊಂದುಂಟು. ಅವರ ಈ ಗ್ರಂಥಗಳು ಕನ್ನಡದ ಆಧ್ಯಾತ್ಮಿಕ ಸಂಪತ್ತನ್ನು ಹೆಚ್ಚಿಸಿದುವು.

ಈ ಗ್ರಂಥಸಮುದಾಯದಲ್ಲಿ ತತ್ವಪದಗಳ ದೃಷ್ಟಿಯಿಂದ ಗಮನಿಸಬೇಕಾದುದೆಂದರೆ “ಕೈವಲ್ಯ ಪದ್ಧತಿ.” ಇದು ಅವರ ಅನುಭಾವ ಗೀತೆಗಳ ಸಂಕಲನ ಕಾಲಕಾಲಕ್ಕೆ ಹೊರಹೊಮ್ಮಿದ ತಮ್ಮ ಅಂತರಂಗದ ಅನುಭವರೂಪವಾದ ಗೀತೆಗಳನ್ನು ಇಲ್ಲಿ ಅನುವರಿತು ಅಳವಡಿಸಿದ್ದಾರೆ. ಭಾವಗಳಿಗೆ ಅನುಗುಣವಾದ ಬಗೆಬಗೆಯ ರಾಗಗಳಲ್ಲಿ ಇಲ್ಲಿನ ಹಾಡುಗಳು ಮೂಡಿಬಂದಿವೆ. ಈ ದೃಷ್ಟಿಯಿಂದ ಇದು ಕರ್ಣಾಟಕ ಸಂಗೀತ ಶಾಸ್ತ್ರಜ್ಞರಿಗೂ ಬಹಳ ಮುಖ್ಯವಾದ ಗ್ರಂಥ. ಅವರ ಅನುಭಾವದ ಎತ್ತರ ಬಿತ್ತರಗಳ ಅಪೂರ್ವಸಿದ್ಧಿಯನ್ನು ಅನುಭವವೇದ್ಯವಾಗಿಸುವ ಈ ಕೃತಿ ಕನ್ನಡ ಸಾಹಿತ್ಯದ ಹೊಸ ಪ್ರಕಾರವೊಂದಕ್ಕೆ ನಾಂದಿಯಾಯಿತು. ಹಿಂದೆ ಹೇಳಿದಂತೆ ದಾಸರ ಪದಗಳಿಗಿಂತ, ಶರಣರ ವಚನ ಮತ್ತು ಸ್ವರವಚನಗಳಿಗಿಂತ ಭಿನ್ನವಾದ ಈ ಹಾಡುಗಳನ್ನು, ಈ ಕೃತಿಗೆ ಅವರು

ಕೊಟ್ಟ ಹೆಸರಿನ ಸಾರ್ಥಕತೆಯನ್ನು ಗಮನಿಸಿ, 'ಕೈವಲ್ಯ ಸಾಹಿತ್ಯ' ಎಂದು ಕರೆಯ ಬಹುದಾಗಿದೆ.

ಈ ತತ್ವಪದಗಳ ಪರಂಪರೆ ನಿಜಗುಣರ ಅನಂತರವೂ ಬೆಳೆದು ಬಂದಿತು. ಸ್ವಲ್ಪ ಹೆಚ್ಚು ಕಡಮೆ ಇವರ ಸಮಕಾಲೀನರೆಂದು ಹೇಳಬಹುದಾದ ಮುಪ್ಪಿನ ಷಡಕ್ಷರಿಗಳು, ಅನಂತರ ಚಿದಾನಂದ ಅವಧೂತರು (ಸು. ೧೭೦೦). ಸರ್ಪಭೂಷಣ ಶಿವಯೋಗಿಗಳು, (೧೭೯೫–೧೮೩೮) ಮತ್ತು ಇನ್ನೂ ಈಚಿನ ಬಾಲಲೀಲಾ ಮಹಾಂತ ಶಿವಯೋಗಿಗಳು, ಮೈಲಾರ ಬಸವಲಿಂಗ ಶರಣರು, ಕಡಕೊಳದ ಮಡಿವಾಳಯೋಗಿ, ಕೂಡಲೂರೇಶ, ನಿಂಬರಗಿ ಮಹಾರಾಜ್, ಶಂಕರಾನಂದ, ಶಿಶುನಾಳ ಶರೀಫ್ ಮೊದಲಾದವರಿಂದ ತತ್ವಪದಗಳು ವಿಪುಲವಾಗಿ ಬೆಳೆದುವು. ಇವರೆಲ್ಲರ ಸಾಧನೆಗಳಿಂದ 'ಕೈವಲ್ಯಸಾಹಿತ್ಯ,' ಸ್ವತಂತ್ರವಾಗಿ ಪರಿಶೀಲಿಸಬಲ್ಲ ಒಂದು ವಿಶಿಷ್ಟವಾದ ಸಾಹಿತ್ಯಪ್ರಕಾರವಾಗಿ ಬೆಳೆಯುವಂತಾಯಿತು.

ನಿಜಗುಣರ 'ಕೈವಲ್ಯಪದ್ಧತಿ' ವಿವಿಧ ರಾಗಗಳಲ್ಲಿ ರಚಿತವಾದ ಹಾಡುಗಳ ಸಂಕಲನ. ಈ ಹಾಡುಗಳ ವಿನ್ಯಾಸಕ್ರಮದಲ್ಲಿ ಒಂದು ವ್ಯವಸ್ಥೆ ಕಂಡುಬರುತ್ತದೆ. ಜೀವವು ಕೈಕೊಳ್ಳುವ ಮೋಕ್ಷಮಾರ್ಗದ ಯಾತ್ರೆಯ ವಿಕಾಸದ ವಿವಿಧ ಹೆಜ್ಜೆಗಳನ್ನು ಕ್ರಮವಾಗಿ ಇಲ್ಲಿ ಗುರುತಿಸುತ್ತಾ ಹೋಗಬಹುದು. ಶರಣರ ಷಟ್ಸ್ಥಲಗಳು ಇದನ್ನು ಒಂದು ರೀತಿಯಲ್ಲಿ ರೂಪಿಸಿದ್ದರೆ, ಇಲ್ಲಿ ನಿಜಗುಣರು ವಿಶಿಷ್ಟವಾದ ಐದು ಸ್ಥಲಗಳನ್ನು ನಿರ್ಮಿಸಿದ್ದಾರೆ; ಶಿವಕಾರುಣ್ಯಸ್ಥಲ, ನೀತಿಕ್ರಿಯಾಚರ್ಯಸ್ಥಲ, ಯೋಗಪ್ರತಿಪಾದನಾಸ್ಥಲ ಮತ್ತು ಜ್ಞಾನಪ್ರತಿಪಾದನಾಸ್ಥಲ. ಇಲ್ಲಿ 'ಸ್ಥಲ' ಎನ್ನುವ ಮಾತನ್ನೇ ಇಟ್ಟುಕೊಂಡಿದ್ದರೂ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ. ಈ ಆರು ಸ್ಥಲಗಳಿಗಿಂತ ಭಿನ್ನವಾಗಿದೆ. ಆದರೆ ಅಲ್ಲಿನಂತೆಯೇ ಸಾಧಕನ ವಿಕಾಸದ ವಿವಿಧ ಹಂತಗಳನ್ನು ಮತ್ತು ಆಯಾ ಹಂತದ ಅಗತ್ಯಗಳನ್ನು ಇಲ್ಲಿಯೂ ಅಳವಡಿಸಲಾಗಿದೆ. ಅವುಗಳ ಕ್ರಮದಲ್ಲಿ ಅಂತೆಯೇ ಅವುಗಳಿಗೆ ಕೊಟ್ಟಿರುವ ಒತ್ತಿನಲ್ಲಿ (Stress) ಅಂತರ ಕಂಡುಬರುತ್ತದೆ.

ಐದು ಸ್ಥಲದ ಈ ವಿಭಾಗ ತನ್ನದೇ ಆದ ರೀತಿಯಲ್ಲಿ ಅರ್ಥವತ್ತಾಗಿದೆ. ಮುಂದೆ ಕೃತಿವಿವೇಚನೆಯಲ್ಲಿ ಅದನ್ನು ಕಂಡುಕೊಳ್ಳಬಹುದಾದರೂ ಇಲ್ಲಿ ಅವುಗಳ ಒಟ್ಟು ನೋಟವನ್ನು ಒಂದು ಮಾತಿನಲ್ಲಿ ನೋಡಬಹುದು. ಮೊದಲನೆಯದು 'ಶಿವಕಾರುಣ್ಯ ಸ್ಥಲ'. ಈ ಲೋಕದ ದ್ವಂದ್ವಗಳನ್ನೂ ವಿಷಮತೆಗಳನ್ನೂ ಇದರ ಪ್ರತಿಕೂಲಗಳನ್ನೂ ಪರಿಮಿತಿಗಳನ್ನೂ ಕಂಡು ನೊಂದ ಜೀವ, ಇದರಾಚೆಯ ಅನುಭವವನ್ನು ಪಡೆಯುವ ಹಂಬಲದಿಂದ ಕೊರಲೆತ್ತುತ್ತದೆ. ಅಂತರಂಗದ ತಳಮಳದಿಂದ ಪಾಕಗೊಳ್ಳುವ ಈ ಸ್ಥಿತಿಯನ್ನು ಜಗತ್ತಿನ ಎಲ್ಲ ಸಾಧಕರಲ್ಲೂ ಒಂದಲ್ಲ ಒಂದು ಹಂತದಲ್ಲಿ ಕಾಣಬಹುದು. ಈ ತಳಮಳದ ಸ್ಥಿತಿಯನ್ನು, "Dark Night of the Soul" ಅಂದರೆ ಸಾಧನೆಯ ಕಾಳರಾತ್ರಿ–ಎಂದು ಪಾಶ್ಚಾತ್ಯ ವಿದ್ವಾಂಸರು ಕರೆದಿದ್ದಾರೆ ಮತ್ತು ಈ ಸ್ಥಿತಿಯನ್ನು ಪಡೆಯದೆ ಮುನ್ನಡೆಯುವವರನ್ನು ಅನುಭಾವಿಗಳೆಂದು ಕರೆಯುವುದೇ ಅಸಂಭವವೆನ್ನು

ವವರೆಗೂ ಹೋಗಿದ್ದಾರೆ. ಕೆಲವರಲ್ಲಿ ಇದು ಸ್ಪಷ್ಟವಾಗಿ ವ್ಯಕ್ತವಾಬಗಹುದು; ಇನ್ನು ಕೆಲವರಲ್ಲಿ ಅವ್ಯಕ್ತಸಾಧನೆಯು ನಿರಂತರ ಜಾಗ್ರತಿಯಿಂದ ಅಂತರಂಗದಲ್ಲಿಯೇ ಪರಿವರ್ತನೆಗೊಳ್ಳಬಹುದು. ಏನೇ ಆಗಲಿ ಅಂತಹ ಒಂದು ಆಂತರಿಕ ಸ್ಥಿತಿಯಲ್ಲಿ ದೈವಕೃಪೆಯು ಹಾರೈಕೆ ಅನಿವಾರ್ಯ. "ಅಕಟಕಟ ಶಿವ, ನಿನಗಿನಿತು ಕರುಣೆಯಿಲ್ಲ; ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಪರಲೋಕ ದೂರನ?" ಎಂಬಂತಹ ತಳಮಳದಿಂದ ಸಾಧಕ ಶಿವಕಾರುಣ್ಯಕ್ಕಾಗಿ ಕೈಯೆತ್ತುತ್ತಾನೆ. ತನ್ನ ಅದಮ್ಯ ಅಭೀಪ್ಸೆಯಿಂದ ಆತ ಮೇಲೇರಲು ಸಾಹಸಪಟ್ಟಾಗ ದೈವಕೃಪೆಯೂ ತನ್ನ ಕೈಯನ್ನೂ ಚಾಚಿ ಆತನನ್ನು ಮೇಲೆತ್ತುತ್ತದೆ. ಈ ದೃಷ್ಟಿಯಿಂದ ಸಾಧನೆಯ ಮೊದಲನೆಯ ಸ್ಥಲವನ್ನು ಕೈವಲ್ಯಪದ್ಧತಿ, "ಶಿವಕಾರುಣ್ಯಸ್ಥಲ" ಎಂದು ಕರೆದಿರುವುದು ಅರ್ಥವತ್ತಾಗಿದೆ.

ಆ 'ಶಿವಕಾರುಣ್ಯ'ವನ್ನು ಅವಲಂಬಿಸಿ ಮೇಲೇರುವ ಮೊದಲನೆಯ ಹಂತ ಜೀವ-ಜಾಗ್ರತಿ. ಅಂದರೆ ಸಾಧಕ ನಿರಂತರ ಜಾಗ್ರತಿಯಿಂದ ಇಲ್ಲಿನ ಪ್ರಲೋಭನೆಗಳನ್ನು ದಾಟಿ ಮುನ್ನಡೆಯಬೇಕು. ಕಂಡುದನ್ನು ತಿರಸ್ಕರಿಸಿ ಮೇಲೇರಬೇಕಾದರೆ ಕಾಣದುದರ ಬಗೆಗೆ ಶ್ರದ್ಧೆ ಬೆಳೆಯಬೇಕು. ಇದೇ ಭಕ್ತಿಯ ಬೇರು. ಇದು ಮಹಾವೃಕ್ಷವಾಗಿ ಬೆಳೆದು ಫಲ ನೀಡುವಂತಹ ಕೃಷಿಯನ್ನು ಕೈಗೊಳ್ಳುವುದು ಅಗತ್ಯ. ಆದರತ್ತ ಜೀವವನ್ನು ತೊಡಗಿಸುವುದೇ "ಜೀವ ಬೋಧನಸ್ಥಲ."

ಇದರ ಮುಂದಿನ ಹಂತವನ್ನು "ನೀತಿಕ್ರಿಯಾಚರ್ಯ ಸ್ಥಲ" ಎಂದು ಕರೆದಿದ್ದಾರೆ. ಎಲ್ಲ ಸಾಧನೆಯ ತಳಹದಿ ನೈತಿಕನಿಷ್ಠೆ. ಯಾವುದೇ ಸಾಮಾಜಿಕ ಸಾಧನೆಯಾಗಲೀ ಅಂತೆಯೇ ವ್ಯಕ್ತಿಯ ಆಂತರಂಗಿಕ ವಿಕಾಸವಾಗಲೀ ನೈತಿಕ ನೆಲಗಟ್ಟಿನ ಮೇಲೆ ಬೆಳೆಯಬೇಕಾಗುತ್ತದೆ. ಆದ್ದರಿಂದ ಯಾವುದೇ ಧರ್ಮದಲ್ಲಾಗಲೀ ನೈತಿಕ ಮುಖ (**Ethical Aspect**)-ಒಂದು ಪ್ರಧಾನವಾದ ಅಂಶ. ವೀರಶೈವಧರ್ಮ ಅದರ ತುತ್ತತುದಿಯಲ್ಲಿ ಅನುಭಾವಧರ್ಮ (**Mystical Religion**) ಆಗಿರುವಂತೆ ತಳದಲ್ಲಿ ಅದು ನೈತಿಕಧರ್ಮ (**Ethical Religion**)ವೂ ಆಗಿದೆ. ಈ ಎರಡರ ಜೀವಂತ ವಿಕಾಸವನ್ನು ಷಟ್ಸ್ಥಲ ಮಾರ್ಗ ಪರಿಪೂರ್ಣಸ್ಥಿತಿಯಲ್ಲಿ ಅಳವಡಿಸಿಕೊಂಡಿದೆ. ನಿಜಗುಣರ ಈ ಪಂಚಸ್ಥಲ ವಿವೇಚನೆಯಲ್ಲಿ ಅದೇ ತತ್ವವನ್ನು ಇನ್ನೊಂದು ರೀತಿಯಲ್ಲಿ ಕಾಣಬಹುದು. "ನೀತಿ ಕ್ರಿಯಾಚರ್ಯ ಸ್ಥಲ" ಅದರ ಅಡಿಗಲ್ಲಾಗಿ ಪರಿಣಮಿಸಿದೆ.

ಮುಂದಿನ 'ಯೋಗಪ್ರತಿಪಾದನಸ್ಥಲ' ಮತ್ತು 'ಜ್ಞಾನಪ್ರತಿಪಾದನಸ್ಥಲ'—ಈ ಎರಡು ಸ್ಥಲಗಳು, ಮೊದಲನೆಯ ಮೂರು ಸ್ಥಲಗಳ ಅಡಿಪಾಯದ ಮೇಲೆ ನಿರ್ಮಿತವಾಗುವ ಸಾಧನೆಯ ಸೌಧವನ್ನು ಕಟ್ಟಿತೋರಿಸುತ್ತದೆ. ಯೋಗಸಾಧನೆಯ ಹಂತಹಂತವಾದ ವಿಕಾಸದ ಪೂರ್ಣಚಿತ್ರವನ್ನು, 'ಮಂತ್ರ' 'ಲಯ' 'ಹಠ' 'ರಾಜ'— ಈ ಎಲ್ಲ ಯೋಗಗಳಲ್ಲಿ ಮೇಲೇರಿ ಶಿವಯೋಗದ ತುತ್ತತುದಿಗೇರುವ ಅದರ ನಿಲವಿನಲ್ಲಿ ಕಾಣುತ್ತೇವೆ.ಆ ಅನುಭವದ ಪರಿಭಾವನೆಯಿಂದ ಉಂಟಾಗುವ ಅರಿವಿನಲ್ಲಿ ಅಂತರಂಗವನ್ನು

ತೊಳಗಿ ಬೆಳಗಿಸುತ್ತದೆ. "ಜ್ಞಾನಪ್ರತಿಪಾದನಸ್ಥಲ" ಸಾಧನೆಯ ಸಿದ್ಧಸ್ಥಿತಿಯನ್ನೂ ಅದರಿಂದ ಅನುಭವೈಕ್ಯವೇದ್ಯವಾಗುವ ಎರಡಿಲ್ಲದ ಅವಿರಳ ಆನಂದಾನುಭವವನ್ನೂ ಮಾತುಗಳಲ್ಲಿ ಹಿಡಿದಿಡುವ ಸಾಹಸ ಇಲ್ಲಿ ಕಾಣುತ್ತದೆ. ಈ ಕೇವಲ ಸ್ಥಿತಿಯನ್ನು ಪಡೆಯುವ ಈ ಎಲ್ಲಾ ಒಟ್ಟು ಮಾರ್ಗವನ್ನು ನಿಜಗುಣರು ಅರ್ಥವತ್ತಾಗಿ 'ಕೈವಲ್ಯ ಪದ್ಧತಿ' ಎಂದು ಕರೆದಿದ್ದಾರೆ. ಆಯಾ ಮೆಟ್ಟಲಿನಲ್ಲಿ ನಿಂತು ಮನಮುಟ್ಟುವಂತಹ ಹಾಡುಗಳಿಂದ ಆ ಮಾರ್ಗದ ಮೇಲೆ ಬೆಳಕನ್ನು ಬೀರಿದ್ದಾರೆ.

ಒಟ್ಟು ಅಂತಹ ೧೭೪ ಹಾಡುಗಳ ಸಂಗ್ರಹ "ಕೈವಲ್ಯ ಪದ್ಧತಿ", ಸ್ಥಲ ಕಟ್ಟುಗಳ ದೃಷ್ಟಿಯಿಂದ ಹೇಳಬಹುದಾದರೆ ಕ್ರಮವಾಗಿ ಶಿವಕಾರುಣ್ಯಸ್ಥಲದಲ್ಲಿ ೨೮, ಜೀವಸಂಬೋಧನ ಸ್ಥಲದಲ್ಲಿ ೨೨, ನೀತಿಕ್ರಿಯಾಚರ್ಯಸ್ಥಲದಲ್ಲಿ ೨೬, ಯೋಗಪ್ರತಿಪಾದನಸ್ಥಲದಲ್ಲಿ ೪೯, ಜ್ಞಾನಪ್ರತಿಪಾದನಸ್ಥಲದಲ್ಲಿ ೪೯-ಹೀಗೆ ಹಾಡುಗಳು ಇಲ್ಲಿ ಸಂಗತಗೊಂಡಿವೆ. ಇವುಗಳಲ್ಲಿ ಮೊದಲನೆಯ ಮೂರು ಸ್ಥಲಗಳು ಹಿಂದೆ ಹೇಳಿದ ಹಾಗೆ ಕೈವಲ್ಯಮಾರ್ಗದ ತಳಹದಿಯ ಮೂರು ಸೋಪಾನಗಳಾದರೆ, ಅನಂತರದ ಎರಡು ಸ್ಥಲಗಳು ಅವುಗಳನ್ನೇರಿದ ಮೇಲೆ ಕಾಣುವ ಕೈವಲ್ಯ ಸೌಧಗಳು, ಅದಕ್ಕನುಗುಣವಾಗಿಯೇ ಬಹುಶಃ ಹಾಡುಗಳ ಸಂಖ್ಯೆಯೂ ವ್ಯವಸ್ಥಿತವಾಗಿರುವಂತೆ ತೋರುತ್ತದೆ.

ಸಂಖ್ಯೆಯಲ್ಲಿ ಮಾತ್ರವಲ್ಲ; ಇದರ ಪ್ರಾರಂಭ ಮತ್ತು ಮುಂದೆ ಅದು ಬೆಳೆಯುತ್ತಾ ಹೋಗುವ ವಿನ್ಯಾಸ ಮತ್ತು ಮುಕ್ತಾಯಗಳಲ್ಲಿ ಅಚ್ಚುಕಟ್ಟಾದ ಒಂದು ವ್ಯವಸ್ಥೆ, ಅನುಭವ ನಿಯಂತ್ರಿತವಾಗಿ ಮೂಡಿಬಂದಿದೆ. ಈ 'ಕೈವಲ್ಯಪದ್ಧತಿ'ಯ ಸಮಗ್ರ ವಿವೇಚನೆ ಇಲ್ಲಿ ಉದ್ದೇಶಿತವಲ್ಲ, ಇಲ್ಲಿನ ಆಶಯ ಸೀಮಿತವಾದುದು. ಕೆಲವು ಹಾಡುಗಳನ್ನು ಮಾತ್ರ ಮುಖ್ಯವಾಗಿಟ್ಟುಕೊಂಡು, ಅವುಗಳ ಹಿನ್ನೆಲೆಯಲ್ಲಿ ನಿಜಗುಣರು ರೂಢಿಸಿದ ಮತ್ತು ನಡೆದು ತೋರಿಸಿದ ಕೈವಲ್ಯಮಾರ್ಗವನ್ನು ಗುರುತಿಸುವ ಪ್ರಯತ್ನವನ್ನು ಮಾತ್ರ ಇಲ್ಲಿ ಮಾಡಲಾಗಿದೆ.

ಇಲ್ಲಿ ಬರುವ ಮೊಟ್ಟಮೊದಲನೆಯ ಹಾಡು, ಇಡೀ ಗ್ರಂಥದ ಸಮಗ್ರ ದರ್ಶನಕ್ಕೆ ನಾಂದಿಯಾಗಿದೆ; ಕಿಟಕಿಯಾಗಿದೆ ಅಥವಾ ಅದನ್ನು ಪ್ರತಿಬಿಂಬಿಸಿ ತೋರಿಸುವ ವಾಕ್ಪರುಷ ಪ್ರತಿಫಲನದ ಕನ್ನಡಿಯಾಗಿದೆ.

ಶ್ರೀಗುರು ವಚನೋಪದೇಶವನಾಲಿಸಿ
ದಾಗಳಹುದು ನರರಿಗೆ ಮುಕುತಿ ||ಪ||

ಎಂದು ಪ್ರಾರಂಭವಾಗುವ ಗುರುಸ್ತುತಿರೂಪವಾದ ಅದರ ಪಲ್ಲವಿಯೇ ಅರ್ಥವತ್ತಾಗಿದೆ. ಆಧ್ಯಾತ್ಮಮಾರ್ಗದಲ್ಲಿ ಗುರುವಿನ ಮಹತ್ವವನ್ನು ಎತ್ತಿಹಿಡಿಯುವುದರ ಜೊತೆಗೆ, ಆ ಗುರುವಿನ ಮನೋಧರ್ಮವನ್ನೂ ಆಂತರಿಕ ನಿಲವನ್ನೂ ನಿರೂಪಿಸುತ್ತದೆ. ಆಲಿಸಿದಾಗಲೇ ಮುಕ್ತಿಯನ್ನೀಯುವಂತಹ ಆ ಮಾತುಗಳಲ್ಲಿ ಗುರು ಹೇಳುವುದಾದರೂ ಏನನ್ನು? ಅದನ್ನು

ಮುಂದಿನ ಐದು ನುಡಿಗಳು ಹೇಳುತ್ತವೆ ಸಾಧನೆಯ ಉನ್ಮುಖ ಸ್ಥಿತಿಗೆ ಅಗತ್ಯವಾದ ಹಲವು ಅಂಶಗಳು ಅಲ್ಲಿ ಹಂತಹಂತವಾಗಿ ಅರಳುತ್ತಾ ಹೋಗುತ್ತವೆ.

"ದುರಿತ ಕರ್ಮವನೊಲ್ಲದಿರು ಪುಣ್ಯವನೆ ಮಾಡು
ಹರನಡಿವಿಡಿ ಶಾಂತರೊಡನಾಡು।
ಕರುಣವಿರಲಿ ಜೀವರೊಳು ನೀತಿವಿದನಾಗು
ಪೊರೆಪೊರ್ದಿದರನೆಂದು ಬೆಸಸುವ ||೧||

ನಿಂದಿಸಿ ನುಡಿಯದಿರಾರನು ಮನಸಿಗೆ
ಬಂದಂತೆ ನಡೆಯದಿರಿಹದಲ್ಲಿ
ಕುಂದುವಡೆಯದಿರು ಕಾಮಾದಿಗಳನು ಜಯಿ-
ಸೆಂದು ಕೈವಿಡಿದನುಗ್ರಹಿಸುವ ||೨||

ಭವಮಾಲೆಗಲಸು ಪುಸಿಯದಿರೆಡರು ಬಂದು
ಕವಿಯಲಂಜದಿರು ಸಂಪದದೊಳು।
ತವೆಮುದವಳಿದಿರು ತತ್ವಸಂತತಿಯನು
ವಿವರಿಸಿನೋಡೆಂದು ತಿಳುಪುವ ||೩||

ಈ ಮೂರು ನುಡಿಗಳಲ್ಲಿ ಮೊದಲ ಮೂರು ಸ್ಥಲಗಳ ಎಲ್ಲ ಅಂಶಗಳನ್ನು ಅಡಕಗೊಳಿಸಿದ್ದಾನೆ. ಶಿವಕಾರುಣ್ಯಕ್ಕಾಗಿ 'ಹರನಡಿವಿಡಿ'ವ ಸಮರ್ಪಣೆಯ ಭಕ್ತಿಭಾವ, ಮನಸಿಗೆ ಬಂದಂತೆ ನಡೆಯದಿರುವ ಸದಾಜಾಗ್ರತಿಯ ಜೀವಸಂಬೋಧನೆ, ನೀತಿವಿದನಾಗಿ ಕಾಮಾದಿಗಳನ್ನು ಜಯಿಸುವ ಆಂತರಿಕ ನಿಷ್ಠೆ–ಈ ಮೊದಲಾದುವುಗಳನ್ನು ನೇರವಾಗಿ ಮನ ಮುಟ್ಟುವ ಮಾತುಗಳಲ್ಲಿ ಹೇಳಿದ್ದಾರೆ. ಈ ಹಿನ್ನೆಲೆಯನ್ನು ಗಟ್ಟಿಗೊಳಿಸಿದ ನಂತರ ಆ ತತ್ವಭಿತ್ತಿಯ ಮೇಲೆ ಸಾಧನೆಯ ಚಿತ್ತಾರವನ್ನು ನಿರ್ಮಿಸುವ ಅರ್ಥವತ್ತಾದ ಮಾತುಗಳು ಮುಂದಿನ ಎರಡು ನುಡಿಗಳಲ್ಲಿ ಬರುತ್ತವೆ:

ಬಳಸದಿರದ್ವೈತವನು ಬಾಹ್ಯದೊಳು ನಿ-
ನ್ನೊಳಗೇಕೋ ಭಾವನೆಯೊಡಗೂಡು
ತಿಳಿದು ಸಮಯನಿಷ್ಠೆಗಲಿ ವೇದವಿಧ ಭಕ್ತಿ
ಗಳನಗಲದಿರೆಂದುಸುರುವ ||೪||

ಆರುನಾನೆಂದು ವಿಚಾರಿಸು ವಿಷಮ ಸಂ
ಸಾರವಿದನು ಕನಸೆಂದರಿ!
ಮಾರಮರ್ದನ ಶಂಭುಲಿಂಗವನೊಲಿಸಿ ಗಂ-
ಭೀರಸುಖದೊಳಿರೆಂದರುಪುವ ||೫||

ಈ ಮಾತುಗಳನ್ನು ಬಹಳ ಎಚ್ಚರಿಕೆಯಿಂದ ಗಮನಿಸಬೇಕು. ನಿಜಗುಣರ 'ಪರಮಾನುಭವಬೋಧೆ' ಮೊದಲಾದ ಗ್ರಂಥಗಳಲ್ಲಿ ಬರುವ ಪ್ರತಿಪಾದನೆಯನ್ನು ಗಮನಿಸಿ ಅವರನ್ನು ಅದ್ವೈತ ಸಿದ್ಧಾಂತ ಪ್ರತಿಪಾದಕರೆಂದು ಹೇಳುವುದುಂಟು. ಉಪನಿಷತ್ತುಗಳ ಪ್ರಭಾವ ವಿಶೇಷವಾಗಿದ್ದು ಆ ಹಿನ್ನೆಲೆಯಲ್ಲಿ ಅದ್ವೈತದ ಕಡೆಗೆ ಅವರು ಒಲಿದಿರುದನ್ನು ಅಲ್ಲಗಳೆಯುವಂತಿಲ್ಲವೆಂಬುದೇನೋ ನಿಜ. ಶರಣರ ತಾತ್ವಿಕ ಜಿಜ್ಞಾಸೆಯ ಪ್ರಭಾವ ಅವರ ಮೇಲೆ ಅಷ್ಟಾಗಿ ಆಗಿಲ್ಲವೆಂಬುದನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ 'ಕೈವಲ್ಯ ಪದ್ಧತಿ'ಯಲ್ಲಿಯೇ ಯೋಗಪ್ರತಿಪಾದನ ಸ್ಥಲದಲ್ಲಿ ಬರುವ 'ಶಿವಯೋಗ'ದ ವಿವೇಚನೆ ಮೊದಲಾದವುಗಳನ್ನು ನೋಡಿದಾಗ ಶುದ್ಧ ಅದ್ವೈತಕ್ಕಿಂತ ಬೇರೆಯಾದ ಅವರ ನಿಲವು ಮನದಟ್ಟಾಗುತ್ತದೆ. ಶಿವಾಗಮಗಳಲ್ಲಿ ಉಕ್ತವಾದ ಲಿಂಗಾಂಗಸಾಮರಸ್ಯದ ದೃಷ್ಟಿಯನ್ನು ಅಲ್ಲಿ ಗುರುತಿಸಬಹುದಾಗಿದೆ. ಆ ಹಿನ್ನೆಲೆಯಲ್ಲಿ ಮೇಲಿನ ಎರಡು ನುಡಿಗಳ ಅರ್ಥವನ್ನು ಕಂಡುಕೊಳ್ಳಬೇಕಾಗುತ್ತದೆ. 'ಬಳಸದಿರ ದ್ವೈತವನು ಬಾಹ್ಯದೊಳು' ಎನ್ನುವುದು ಬಹಳ ಮುಖ್ಯವಾದ ಮಾತು. ಅದ್ವೈತ ಅಡ್ಡಹಾದಿಯನ್ನು ಹಿಡಿದದ್ದು, ಅದರ ಆಂತರಿಕ ಅನುಭವವನ್ನು ಅರಿಯದೆ ಬಾಹ್ಯದಲ್ಲಿ ಅದನ್ನು ಬಳಸಿದಾಗ, "ಸರ್ವಂ ಖಲ್ವಿದಂ ಬ್ರಹ್ಮ" ಎನ್ನುವುದು, ವ್ಯಾವಹಾರಿಕ ಜಗತ್ತಿನ ಸತ್ಯತೆಯನ್ನು ಅರಿಯದೆ ವರ್ತಿಸಿದಾಗ ಅಪಾಯಕಾರಿಯಾದ ಆಯುಧವಾಗಬಹುದು. ಅದನ್ನು ನಿಜಗುಣರು ಇಲ್ಲಿ ಸ್ಪಷ್ಟವಾಗಿ ಹೇಳಿ "ನಿನ್ನೊಳಗೇಕೋಭಾವನೆಯೊಡಗೂಡು" ಎಂದು ಎಚ್ಚರಿಸಿದ್ದಾರೆ ಮತ್ತು ಅದೇ ನುಡಿಯಲ್ಲಿ 'ಸಮಯನಿಷ್ಠೆ' ಮತ್ತು 'ವೇದವಿಧಭಕ್ತಿ'ಗಳ ಮಾತು ಬರುತ್ತದೆ. ಇದನ್ನು ತಪ್ಪಾಗಿ ತಿಳಿಯುವ ಸಂಭವವಿದೆ. 'ತಿಳಿದು ಸಮಯನಿಷೆಗಲಿ' ಎಂಬುದನ್ನು ಎಲ್ಲ ಸಾಧಕರಿಗೂ ಅಗತ್ಯವಾದ ಏಕೈಕ ನಿಷ್ಠೆ ಎಂಬ ವ್ಯಾಪಕವಾದ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಹಾಗೆಯೇ 'ವೇದವಿಧಭಕ್ತಿ' ಎನ್ನುವುದು ವೇದೋಕ್ತವಾದ ಕರ್ಮಠಭಕ್ತಿಯಲ್ಲ. 'ವೇದ' ಎನ್ನುವುದನ್ನು ಅದರ ನಿಜವಾದ ಅರ್ಥದಲ್ಲಿ ತೆಗೆದುಕೊಂಡು 'ತಿಳಿವು' ಅಥವಾ 'ಜ್ಞಾನಸಮನ್ವಿತವಾದ ಭಕ್ತಿ' ಎಂದು ಇದನ್ನು ಭಾವಿಸಬೇಕು.

ಮುಂದಿನ ಮಾತು ಬಹಳ ಅರ್ಥವತ್ತಾದದ್ದು. "ಆರು ನಾನೆಂದು ವಿಚಾರಿಸು". ಬಹುಶಃ ಮಾನವ ಜೀವನದ ಎಲ್ಲ ಪ್ರಯತ್ನಗಳ ಪರಮಗಂತ್ಯವನ್ನು ಈ ಒಂದು ಮಾತಿನಲ್ಲಿ ಅಡಗಿಸಬಹುದೆಂದು ತೋರುತ್ತದೆ. 'ನಾನು ಯಾರು?' ಎಂಬುದೇ ಮೂಲಭೂತ ವಿಚಾರ. ಅದೊಂದನ್ನು ಬಿಟ್ಟು ಉಳಿದೆಲ್ಲವನ್ನೂ ಮಾಡಹೊರಡುತ್ತೇವೆ. "ತನ್ನ ವಿಚಾರಿಸಲೊಲ್ಲದು, ಇದಿರ ವಿಚಾರಿಸಹೋಹುದೀಮನವು" ಎಂಬ ಬಸವಣ್ಣನವರ ಮಾತು ಇದನ್ನು ಸೂಚಿಸುತ್ತದೆ. ನಿಜಗುಣರು ಸೂತ್ರರೂಪವಾಗಿ ಇದನ್ನು ಹಿಡಿದಿಟ್ಟಿದ್ದಾರೆ. ಇದರ ಮುಂದಿನ ಮಾತನ್ನು ಅಷ್ಟೇ ಎಚ್ಚರಿಕೆಯಿಂದ ತೆಗೆದುಕೊಳ್ಳಬೇಕು. 'ಜಗನ್ಮಿಥ್ಯಾ'ವಾದವನ್ನು ಅದು ಪ್ರತಿಪಾದಿಸುತ್ತದೆಂದು ಸುಲಭವಾಗಿ ಹೇಳಿ

ಬಿಡಲು ಅವಕಾಶವಿದೆ. ಆದರೆ ನಿಜಗುಣರ ಒಟ್ಟು ಮನೋಧರ್ಮವನ್ನು ನೋಡಿದಾಗ ಅವರು ಮಿಥ್ಯಾವಾದಿಗಳಲ್ಲವೆಂಬುದು ಸ್ಪಷ್ಟ. ಸಂಸಾರವನ್ನು ಒಂದು ಕನಸು ಎಂದು ದಾಗಿ ಭಾವಿಸು ಎಂದು ಅವರು ಹೇಳಿದಾಗ ಅದನ್ನು ಸರಿಯಾದ ಅರ್ಥದಲ್ಲಿ ತೆಗೆದು ಕೊಳ್ಳಬೇಕು. ಈ ಸೃಷ್ಟಿಯೆಲ್ಲಾ ಸುಳ್ಳೆಂದು ಅದರ ಅರ್ಥವಲ್ಲ. ಈ ಹೊರಗಿನ ನಾಮರೂಪಗಳನ್ನು ತಳೆದು ಈ ಸೃಷ್ಟಿಯಲ್ಲಿ ಕಾಣುವ ವಿಷಮತೆ, ಕೊನೆಯ ಸತ್ಯವಲ್ಲ ವೆಂಬುದಷ್ಟೇ ಅದರ ಅರ್ಥ. ಆದ್ದರಿಂದಲೇ ಅವರು ಹೇಳಿರುವುದು 'ವಿಷಮ ಸಂಸಾರ ವಿದನು ಕನಸೆಂದರಿ' ಎಂಬುದಾಗಿ, ಸಂಸಾರವೇ ಕನಸಲ್ಲ; ಸಂಸಾರದ ವಿಷಮತೆ ಕನಸು– ಎಂಬುದನ್ನು ಪರಿಭಾವಿಸಿದರೆ ವಿಷಮತೆಯಲ್ಲಿ ಸಮತೆಯನ್ನು ಕಾಣುವ ಸಮದೃಷ್ಟಿ ಸಾಧ್ಯವಾಗುತ್ತದೆ. ಮಾರಮರ್ದನನಾದ, ಅಂದರೆ ಕಾಮನೆಗಳಿಗೆ ಅತೀತನಾದ, ಶಂಭು ಲಿಂಗನನ್ನು ಒಲಿಸಿ ಗಂಭೀರ ಸುಖದೊಳಿರುವ ಸಾಧನೆಗೆ ಅದು ಕಾರಣವಾಗುತ್ತದೆ.

ಹೀಗೆ ಈ ಮೊದಲನೆಯ ಹಾಡು ಕೈವಲ್ಯಪದ್ಧತಿಯ ಪೂರ್ಣಸ್ವರೂಪವನ್ನೇ ಸೂಕ್ಷ್ಮ ರೂಪದಲ್ಲಿ ಹಿಡಿದಿಡಲು ಸಮರ್ಥವಾಗಿದೆ. ಸಾಧನೆಯ ವಿವಿಧ ಹಂತಗಳನ್ನು ಅದರ ಆತ್ಯಂತಿಕ ನಿಲವನ್ನು ತನ್ನದೇ ಆದ ರೀತಿಯಲ್ಲಿ ನಿರೂಪಿಸುತ್ತದೆ. ಇದು ಗುರೂಪದೇಶದ ರೂಪದಲ್ಲಿರುವುದೂ ಸಹ ಅತ್ಯಂತ ಸೂಕ್ತವಾಗಿದೆ. ಆಧ್ಯಾತ್ಮಿಕ ಮಾರ್ಗದಲ್ಲಿ ಗುರುವಿನ ಮಹತ್ವವನ್ನು ಇದು ಎತ್ತಿ ಹಿಡಿಯುತ್ತದೆ. ಮುಂದೆ ಕೈವಲ್ಯ ಸಾಹಿತ್ಯದಲ್ಲಿ 'ಗುರು' ಕೇಂದ್ರ ಶಕ್ತಿಯಾಗಿ ಪರಿಣಮಿಸಿರುವುದಕ್ಕೂ ಇದು ನಾಂದಿ ಯಾಗಿದೆ.

ಶಿವಕಾರುಣ್ಯಸ್ಥಲದಲ್ಲಿ ಮುಖ್ಯವಾಗಿ ಕಾಣುವುದು ಶಿವಸ್ತುತಿ, ಶಿವತ್ವದ ಪರಿ ಭಾವನೆ ಮತ್ತು ಆ ಶಕ್ತಿಯ ಕಾರುಣ್ಯದ ಆಗಮನವನ್ನು ಹಾರೈಸಿ ಅದಕ್ಕಾಗಿ ತನ್ನನ್ನು ಅರ್ಪಿಸಿಕೊಳ್ಳುವ ಸರ್ವಾರ್ಪಣೆ. ಮೊದಲನೆಯ ಕೆಲವು ಹಾಡುಗಳು ಶಿವ ಮತ್ತು ಶಕ್ತಿ–ಇವರ ಸ್ತುತಿಗೆ ಮೀಸಲಾಗಿವೆ: "ಶರಣ ಜನರ ಸದುಹೃದಯ ನಳಿನದೊಳು! ಪರಿಶೋಭಿಸುತ್ತಿಹುದು ನಿನ್ನ ಪಾದ"–ಎಂಬ ಹಾಡು ಶಿವಲೀಲೆಯನ್ನು ನಿರೂಪಿಸುವುದರ ಮೂಲಕ ಶಿವಭಾವನೆ ಮನಸ್ಸಿನಲ್ಲಿ ಮೂಡುವಂತೆ ಮಾಡುತ್ತದೆ.

"ಹರನಾಮವನು ಬಿಡದೆ ಜಪಿಸಬಲ್ಲವರು ಭವ
ಮರಣ ಮಾಯಾಕರ್ಮ ಮಲಪಾಶಬಂಧ ಬಹು
ದುರಿತ ಸಂಸಾರ ಸಂತಾಪ ಸಂಚಯವಳಿದು
ವರಭೋಗ ಮೋಕ್ಷವಹುದು॥"

ಎಂದು ಪ್ರಾರಂಭವಾಗುವ ಹಾಡು "ಉದಯಾಸ್ತಮಾನದೊಳು ನೂರೆಂಟು ನಾಮವನು ಪದುಳದಿಂದೋದಿ ಕೇಳು"ವುದಕ್ಕೆ ಹಿತಕರವಾಗುವಂತೆ ತನ್ನದೇ ಆದ ರೀತಿಯಲ್ಲಿ ನಿರೂಪಿಸಿದೆ. ಅಂತೆಯೇ "ಪರಮೇಶ್ವರಿಯ ಪುಣ್ಯನಾಮ" ಕೀರ್ತನವೂ ಬರುತ್ತದೆ. ಶಿವಪಾರ್ವತಿಯರ ಸ್ತುತಿ ಬೇರೆ ಬೇರೆ ಹಾಡುಗಳಲ್ಲಿ ಮುಂದುವರಿಯುತ್ತದೆ.

ಪರಮಪಾವನ ಪಂಚಮುಖ ದಯಾಸಿಂಧುವೆ! ಶಂಭುಲಿಂಗ||
ವರದ ವಾಸವನತ ಲೋಕೈಕ ಬಂಧುವೆ! ಶಂಭುಲಿಂಗ ||ಪ||
ಅನುಪಮಾಚಲ ಭಕ್ತಿಭಾವಾನುಕೂಲನೆ! ಶಂಭುಲಿಂಗ
ಮನುಮುನಿಜನರ ತಪೋನಿಧಿ ಲೋಲನೆ! ಶಂಭುಲಿಂಗ||
ಜನನ ಮರಣ ಭಯಹರ ಜಿತಕಾಲನೆ! ಶಂಭುಲಿಂಗ
ವನಜ ಭವಾಂಡ ಮಂಡಲ ಪರಿಪಾಲನೆ! ಶಂಭುಲಿಂಗ ||೧||

ಎಂದು ಪ್ರಾರಂಭವಾಗಿ ಮೂರು ನುಡಿಗಳಲ್ಲಿ ಮುಕ್ತಾಯವಾಗುವ ಈ ಹಾಡು, ತನ್ನ ನಾದವಿನ್ಯಾಸದ ಹಿನ್ನೆಲೆಯಲ್ಲಿ ಒಂದು ವಿಶಿಷ್ಟವಾದ ಪರಿಣಾಮವನ್ನುಂಟು ಮಾಡುತ್ತದೆ.

ಶಿವನಾಮಸ್ಮರಣೆ ಶಿವಸ್ತುತಿಗಳಿಂದ ಮುಂದುವರಿದ ಸಾಧಕ, ಶಿವನ ಕರುಣೆಗಾಗಿ ಹಾರೈಸಿ ಹಂಬಲಿಸುತ್ತಾನೆ. ಆತನ ದೃಷ್ಟಿ ತನ್ನ ಮೇಲೆ ಬೀಳಬೇಕೆಂಬ ಆರ್ತಭಾವದಿಂದ ಪ್ರಾರ್ಥಿಸುತ್ತಾನೆ. ಅಂತಹ ಅನೇಕ ಸುಂದರವಾದ ಪ್ರಾರ್ಥನಾಗೀತಗಳು ಇಲ್ಲಿವೆ. ಮನಸ್ಸಿನ ತಳಮಳದ ಜೊತೆಗೆ ಅತೀತವಾದುದರ ಅಭೀಪ್ಸೆಯೂ ಸೇರಿ ಸುಂದರವಾದ ಭಾವಗೀತೆಗಳಂತೆ ಮೂಡಿಬಂದ ಒಂದೆರಡು ಹಾಡುಗಳನ್ನು ಇಲ್ಲಿ ನೋಡಬಹುದು.

"ನೋಡಲಾಗದೆ ದೇವ, ನೋಡಲಾಗದೆ,
ಕೂಡೆ ನಿನ್ನ ದಿಟ್ಟಿಮೂರು ನಾಡೆ ಲೇಸು ಮಾಡಲೆನ್ನ
ನೋಡಲಾಗದೆ, ದೇವಾ ನೋಡಲಾಗದೆ"

ಎಂಬ ಈ ಗೀತೆ ಶಿವನ ಮೂರು ಕಣ್ಣುಗಳ ಕಲ್ಪನೆಯನ್ನು ತುಂಬಾ ಅರ್ಥವತ್ತಾಗಿ ಬಳಸಿಕೊಂಡಿದೆ. ಅವನ ಹಣೆಗಣ್ಣಿನಲ್ಲಿ ಬೆಂಕಿ, ಬಲಗಣ್ಣಿನಲ್ಲಿ ಸೂರ್ಯ, ಎಡಗಣ್ಣಿನಲ್ಲಿ ಚಂದ್ರ-ಈ ಮೂರು ದೃಷ್ಟಿಗಳನ್ನು ಸಾಧಕನನ್ನು ಹೇಗೆ ಉದ್ಧರಿಸುತ್ತವೆಂಬುದನ್ನು ಮೂರು ನುಡಿಗಳಲ್ಲಿ ಬಹಳ ಸುಂದರವಾಗಿ ಹೇಳಿದ್ದಾರೆ.

"ಮಿಸುಕಲೀಯದೆನ್ನ ಮೋಹ
ವಿಸರವೆಂಬ ವನವನುರುಹಿ!
ಭಸಿತವೆನಿಸಿ ರುದ್ರ ನಿನ್ನ
ನೊಸಲ ವಹ್ನಿ ನೇತ್ರದಿಂದೆ! ನೋಡಲಾಗದೆ" ||೧||

ಮೋಹವಿಸರವೆಂಬ ದಟ್ಟವಾದ ಕಾಡು ಅತ್ತಿತ್ತ ಮಿಸುಗದಂತೆ ನನ್ನನ್ನು ಆವರಿಸಿದೆ. ಆ ವನವನ್ನು ಸುಟ್ಟು ಭಸ್ಮ ಮಾಡಲಿ, ಎಲೈ ರುದ್ರನೇ, ನಿನ್ನ ನೊಸಲಿನ ವಹ್ನಿನೇತ್ರ- ಎಂದು ಇಲ್ಲಿ ಪ್ರಾರ್ಥಿಸುತ್ತಾರೆ. ಮುಂದಿನ ನುಡಿಬಲದ ಭಾನು ನಯನದ ಕಿರಣವನ್ನು ಬೇಡುತ್ತದೆ.

"ಕಲುಷ ತಿಮಿರ ಮುಸುಗಿ ಮುಗಿದು
ನಲಿಯದೆನ್ನ ಹೃದಯನಳಿನ
ವಲರೆ ದಿವ್ಯರೂಪ ನಿನ್ನ
ಬಲದ ಭಾನು ನಯನದಿಂದೆ! ನೋಡಲಾಗದೆ ||೨||

ಮನಸ್ಸಿನ ಕಲುಷಕ್ಕೆ ಕಾರಣವಾಗುವ ರಾಗದ್ವೇಷಾದಿಗಳೆಂಬ ಕತ್ತಲೆ ಕವಿದು ನನ್ನ ಹೃದಯವೆಂಬ ಕಮಲ ಅರಳಿ ನಳನಳಿಸದಂತಾಗಿದೆ. ಎಲೈ ದಿವ್ಯರೂಪನಾದ ಶಿವನೇ ನಿನ್ನ ಬಲದ ಸೂರ್ಯನೇತ್ರದಿಂದ ಆ ಕತ್ತಲು ಚದುರಿ ಹೋಗುವಂತೆ ಮಾಡು-ಎಂದು ಬೇಡುತ್ತಾರೆ ಮತ್ತು ಕೊನೆಯಲ್ಲಿ,

"ಕರಣಕುಲ ಚಕೋರ ತಣಿಯೆ
ಹರುಷ ಶರಧಿ ಮೀರಲೆನ್ನ।
ವರದ ಶಂಭುಲಿಂಗ ವಾಮ
ದುರುಸುಧಾಕರಾಕ್ಷಿಯಿಂದೆ। ನೋಡಲಾಗದೆ ||೩||

ನನ್ನ ಇಂದ್ರಿಯ ಸಮೂಹಗಳೆಂಬ ಚಕೋರಗಳು ದಿವ್ಯತೃಪ್ತಿಯಿಂದ ತಣಿಯುವಂತೆ, ಅದರಿಂದುಂಟಾದ ಸಂತೋಷದ ಸಾಗರ ಉಕ್ಕೇರುವಂತೆ, ನಿನ್ನ ಎಡಗಣ್ಣಿನ ಸುಧಾಕರ ಕಿರಣಗಳನ್ನು ನನ್ನ ಮೇಲೆ ಹರಿಸು-ಎಂದು ಹಂಬಲಿಸುತ್ತಾರೆ. ಹೀಗೆ ಶಿವದೃಷ್ಟಿಯಿಂದ ನನ್ನ ಒಳ ಹೊರಗುಗಳ ಕೊಳೆಸುಟ್ಟು, ಕತ್ತಲು ಹರಿದು, ಮಂಗಳಮಯವಾದ ತಂಪು ಬೆಳಗು ಮೂಡಲಿ-ಎಂಬ ಈ ಪ್ರಾರ್ಥನೆ. ಪೌರಾಣಿಕ ನಂಬಿಕೆಗೆ, ಸಾಂಕೇತಿಕವಾದ ಕಾವ್ಯಪ್ರತಿಮೆಯ ವ್ಯಾಪ್ತಿಯನ್ನು ತಂದುಕೊಟ್ಟಿದೆ; ಆ ಮೂಲಕ ಅಪಾರವಾದ ಅರ್ಥವನ್ನು ಧ್ವನಿಸಲು ಸಮರ್ಥವಾಗಿದೆ.

ಮುಂದಿನ ಕೆಲವು ಹಾಡುಗಳು, ಉದಾಹರಣೆಗೆ: "ನೋಡಿ ಸಲಹಯ್ಯ ನಿನ್ನಡಿ ವಿಡಿದೆನಭವ...." "ಎನ್ನ ನೋಲವಿಂದ ಪಾಲಿಸು ಪಾರ್ವತೀಶ" ಅಥವಾ "ಯಾಕೆನ್ನನೀತು ಸಂಸೃತಿಯೊಡಗೂಡಿದೆಲೆದೇವರೆಲೆದೇವರೇ" ಈ ಮೊದಲಾದವು ನೇರವಾದ ಅವರ ಮೊರೆಯನ್ನು ವಿವಿಧ ಛಾಯೆಗಳಲ್ಲಿ ಹಿಡಿದಿಟ್ಟಿವೆ.

ನೋಡು ನೀನೆನ್ನ ಪರಿಭವದ ಬಾಧೆಯನು ಕೃಪೆ।
ಮಾಡು ಬೇಗದೊಳಭಯವಿತ್ತು। ಶಂಕರಾ ||ಪ||

ಎಂದು ಪ್ರಾರಂಭವಾಗುವ ಗೀತೆಯಂತೂ ಲೌಕಿಕ ಜೀವನದ ಪರಿಮಿತಿಯಲ್ಲಿ ಬೆಂದ ಜೀವದ ಸಂಕಟ ಸಂಘರ್ಷಗಳನ್ನು, ಪರಿಣಾಮಕಾರಿಯಾದ ರೀತಿಯಲ್ಲಿ ಪ್ರತಿಬಿಂಬಿಸಿದೆ. ಸುತ್ತಲೂ ಆವರಿಸಿರುವ "ಮಾಯಕರ್ಮದ ಬಾಧೆ, ಕಾಯಕರಣದ ಬಾಧೆ, ವಾಯು ವಿಷಯೇಂದ್ರಿಯದ ಬಾಧೆ"ಗಳನ್ನು ಒಂದೊಂದಾಗಿ ಹೇಳುತ್ತಾ ಕೊನೆಯಲ್ಲಿ:

"ಬೇರೆಬೇರಿನ್ನು ಮೈದೋರಿಕಾಡುವ ಬಾಧೆ।
ನೂರು ಸಾಸಿರಕೋಟಿಯುಂಟು ||ಶಂಕರಾ||
ಮೀರಲರಿದಿವನೆನಗ ನೀನೆ ತೊಲಗಿಸಿ ಸುಖದ।
ಸೂರೆಗೊಡು ಗುರುಶಂಭುಲಿಂಗ||"

ಎಂದು ಈ ಲೋಕಬಾಧೆಗಳ ಸಂಖ್ಯೆ ಹೇಳಿಮುಗಿಸಲಾರದುವೆಂಬುದನ್ನೂ ಗುರುಶಂಭು ಲಿಂಗನ ಕರುಣೆಯಿಂದ ಮಾತ್ರ ಅವುಗಳನ್ನು ಮೀರಿ ಸುಖವನ್ನು ಸೂರೆಗೊಳ್ಳಬಹು ದೆಂಬುದನ್ನೂ ಸೂಚಿಸುತ್ತಾರೆ. ಇಂತಹ ಆರ್ತಭಾವ, ಸಾಧಕನ ಪ್ರಾರಂಭದ ಒಂದು ಸ್ಥಿತಿಯೆಂಬುದನ್ನು ಒಂದಲ್ಲ ಒಂದು ರೂಪದಲ್ಲಿ ಜಗತ್ತಿನ ಎಲ್ಲ ಸಾಧಕರ ಜೀವನ ದಲ್ಲಿಯೂ ಕಾಣಬಹುದಾಗಿದೆ. ಹಿಂದೆ ನೋಡಿದಂತೆ ಪಾಶ್ಚಾತ್ಯರು ಹೇಳಿದ Dark Night of the Soul–'ಸಾಧಕನ ಜೀವನದ ಕಾಳರಾತ್ರಿ' ಎಂಬುದು ಇದೆ. ಬಸವಣ್ಣನವರ "ಅಯ್ಯಾ ಅಯ್ಯಾ ಎಂದು ಕರೆಯುತ್ತಲಿದ್ದೇನೆ, ಓ ಎನ್ನಲಾಗದೆ ಅಯ್ಯಾ". "ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ ಪರಲೋಕ ದೂರನ?" "ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ"– ಎಂಬಿವೇ ಮೊದಲಾದ ಅನೇಕ ಮಾತುಗಳಲ್ಲಿ ಕಾಣುವುದು ಈ ಮನಸ್ಥಿತಿಯನ್ನೇ. ಇದರ ಒಂದು ಹಂತವನ್ನು 'ಸಂಸಾರಹೇಯಸ್ಥಲ' ಎಂದು ಕರೆದಿದ್ದಾರೆ ಶರಣರು. ಇದು ಕೇವಲ ತಿರಸ್ಕಾರದ ಮಾರ್ಗವಲ್ಲ; ಹೇಯವಾದ ಸಂಸಾರವನ್ನು ಉಪಾದೇಯ ವಾಗಿಸಬಹುದಾದ ಜೀವನದ ಕೌಶಲ್ಯವನ್ನು ಕಂಡುಕೊಳ್ಳುವ ಮಾರ್ಗವೂ ಹೌದು. ಶಿವಭಾವವನ್ನು ಆಹ್ವಾನಿಸುತ್ತಾ ಮನಸ್ಸನ್ನು ಆ ನಿಲವಿಗೆ ತಂದುಕೊಳ್ಳಬೇಕೆಂಬುದನ್ನು ಇದು ಹೇಳುತ್ತದೆ. ಮನಸ್ಸನ್ನು ಕೋಗಿಲೆಗೆ ಹೋಲಿಸಿ ಅದಕ್ಕೆ ಹೇಳುವ ಮಾತುಗಳನ್ನು ನಿಜಗುಣರ ಈ ಗೀತೆಯಲ್ಲಿ ಕಾಣಬಹುದು.

'ಕೋಗಿಲೆ, ಚೆಲ್ವ ಕೋಗಿಲೆ ಮುದ್ದು
ಕೋಗಿಲೆ, ಜಾಣ ಕೋಗಿಲೆ ||ಪ||

ಹಿಂದೆ ತಪದೊಳೀಶನೊಂದಿರುತಿರಲೆಚ್ಚು
ಬೆಂದ ಕಾಮನ ಬಿಟ್ಟು ಕೋಗಿಲೆ!
ಬಂದು ಬೇಗದಿ ಬಾಲೇಂದುಧರನ ಕೂಡಿ
ಕುಂದದೆ ನೀ ಬಾಳು ಕೋಗಿಲೆ ||೧||

ಎಂಬುದಾಗಿ ಈ ಗೀತೆ, ಇದೇ ಭಾವನೆಗಳನ್ನು ಬೇರೆ ಬೇರೆ ಮಾತುಗಳಲ್ಲಿ ಮುಂದು ವರಿಸುತ್ತದೆ. ಈ ಲೋಕದುಃಖಗಳಿಗೆಲ್ಲಾ ಮೂಲಕಾರಣವಾದ ಕಾಮನೆಗಳನ್ನು ಬಿಟ್ಟು ಶಿವಭಾವವನ್ನು ಪಡೆಯುವಂತೆ ಮನವೆಂಬ ಕೋಗಿಲೆಗೆ ಎಚ್ಚರಿಸುತ್ತದೆ. ಇದೇ ಇನ್ನೂ ಸ್ಪಷ್ಟವಾಗಿ ಮುಂದುವರಿದಾಗ ಜೀವಜಾಗ್ರತಿಗೆ ಕಾರಣವಾದ ಜೀವಸಂಬೋಧನೆಯ ಕಡೆಗೆ ತಿರುಗುತ್ತದೆ.

ಶಿವಕಾರುಣ್ಯಕ್ಕಾಗಿ ಹಂಬಲಿಸಿ ಹಾರೈಸಿದ ಜೀವ ಆ ಕಾರುಣ್ಯವನ್ನು ಪಡೆಯುವ ಮಾರ್ಗದಲ್ಲಿ ಮುನ್ನಡೆಯುವಾಗ 'ಆತ್ಮವೀಕ್ಷಣೆ' ಅದರ ಮೊದಲ ಮೆಟ್ಟಿಲು. ಲೋಕದ ಆಕರ್ಷಣೆಗಳಿಂದ ವಿಮುಖವಾಗಿ ಅಂತರ್ ನಿರೀಕ್ಷಣೆಯ ನಿಷ್ಠೆಯನ್ನು ಕೈಕೊಳ್ಳಬೇಕಾ ಗುತ್ತದೆ. ನಶ್ವರವಾದ ಮೌಲ್ಯಗಳ ತಾತ್ಕಾಲಿಕ ದೃಷ್ಟಿಯಿಂದ ಪರಿಮಿತಗೊಳ್ಳದೆ

ಶಾಶ್ವತಮೌಲ್ಯಗಳ ಅದಮ್ಯ ಅಭೀಪ್ಸೆಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಪ್ರೇರಕವಾದದ್ದು ಈ ಲೌಕಿಕ ಸುಖವನ್ನು ಕುರಿತ ಅತೃಪ್ತಿ. ಇಲ್ಲಿನ ಸುಖ ಸಾಧನಗಳ ವಿಚಾರದಲ್ಲಿ ಅತೃಪ್ತಿಮೂಡದ ಹೊರತು ಇವುಗಳಾಚೆಯ ಸುಖದ ಅಭೀಪ್ಸೆ ತೀವ್ರವಾಗುವುದಿಲ್ಲ. ಆದುದರಿಂದ ಇವುಗಳ ವಿಚಾರದಲ್ಲಿ ಅತೃಪ್ತಿಯನ್ನು ಕಂಡುಕೊಳ್ಳುವಂತಹ ಆತ್ಮಜಾಗ್ರತಿಯನ್ನು ಜೀವಕ್ಕೆ ಬೋಧಿಸಬೇಕಾಗುತ್ತದೆ. ಅದನ್ನು ಜೀವ ಸಂಬೋಧನೆಯ ಅನೇಕ ಗೀತೆಗಳಲ್ಲಿ ನಿಜಗುಣರು ತುಂಬಾ ಪರಿಣಾಮಕಾರಿಯಾಗಿ ಸಾಧಿಸಿದ್ದಾರೆ.

ಸುಮ್ಮನೆ ಕಾಲವನು ಕಳೆದು ಸಾವುದುಚಿತವೆ!
ನೆಮ್ಮಿ ನಿಜವನು ಮುಕ್ತಿವಡೆಯದೆ ಮನುಜ ನೀ ||ಪ||

ಎಂದು ಪ್ರಾರಂಭವಾಗುವ ಗೀತೆ ಅಸಂಖ್ಯಾತ "ಜೀವದ ಬಸುರೊಳು ಬಂದು", "ಜನನ ಮರಣ ರುಜೆ ಭಯ ಶೋಕ ಜರೆ ಬಡತನ ಪರಸೇವೆ ಯಾಚನೆಹಾನಿ ಹಳಿವು"ಗಳಲ್ಲಿ ನೊಂದು ಅನವರತ ದುಃಖಭಾಜನನಾಗಿರುವ ಜೀವದ ಜೀವಂತ ಸಂಕಟವನ್ನು ವರ್ಣಿಸುತ್ತದೆ.

ಈ ಸಂಕಟದ ಪರಿಭಾವನೆಯಿಂದ ತಲ್ಲಣಗೊಂಡ ಜೀವಕ್ಕೆ ನೆಮ್ಮದಿ ಎಲ್ಲಿಯದು? "ನಿದ್ರೆಬಾರದಿದೆನ್ನ ಪರಿಭವ ದುಃಖ ಸ| ಮುದ್ರವೆನಿಸುವ ಸಾಯಸವ ನೆನೆನೆನೆದು" ಎಂದು ಆ ಸ್ಥಿತಿಯನ್ನು ತೋಡಿಕೊಳ್ಳುತ್ತಾರೆ. ಮೇಲೆ ಹೇಳಿದ ಗೀತೆಯ ಭಾವವೇ ಇಲ್ಲಿ ಬೇರೊಂದು ರೀತಿಯಲ್ಲಿ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಬಂದಿದೆ. ಭವ ಸಾಗರದಲ್ಲಿ ಸುತ್ತುತ್ತಿರುವ ಜೀವದ ಈ ಪರಿಭ್ರಮಣೆಯನ್ನು ಕುರಿತ ಇನ್ನೂ ಅನೇಕ ಹಾಡುಗಳು ಇಲ್ಲಿವೆ, ಸಂಸಾರಹೇಯಸ್ಥಲದ ಇನ್ನೊಂದು ಹಂತವನ್ನು ಇಲ್ಲಿ ಕಾಣುತ್ತೇವೆ.

ಈ ಸಂಸಾರದ ನಶ್ವರತೆಯಲ್ಲಿಯೇ ಶಾಶ್ವತವಾದುದನ್ನು ಕಂಡುಕೊಳ್ಳುವ ಸಾಧಕ ಜೀವನದ ಎಚ್ಚರಿಕೆಯ ಕಡೆಗೆ ಇದು ತಿರುಗುತ್ತದೆ. "ಪಡೆವೆನೆಂದಿಗೆ ಪರಮುಕ್ತಿ ಸುಖವನು| ಕೆಡುವ ಕಾಯದ ಮೋಹವನು ಮಾಣೆ ಮನುಜ||"–ಎಂಬಂತಹ ಹಾಡುಗಳಲ್ಲಿ ಈ ಭಾವ ಮುಂದುವರಿಯುತ್ತದೆ. ಈ 'ಭೂಮಂಡಲದ ಭೋಗ ಪೂಗವನತಿಗಳೆದು' ಸಾಧನೆಯಲ್ಲಿ ಮುನ್ನಡೆಯಬೇಕೆಂಬುದನ್ನು ಪರಿಪರಿಯಲ್ಲಿ ಹೇಳಿದ್ದಾರೆ.

"ಮಾಡಲುಚಿತವೇ ಮನುಜಾ| ಮಾಡಲುಚಿತವೇ||
ಕೂಡೆ ಬಾಧೆ ಬಹಳವಿಹುದು| ನೋಡಿ ಧನದ ಲೋಭವಿದನು||"

ಎಂಬ ಗೀತೆ ಧನಲೋಭದ ಹಾವಳಿಯನ್ನು ವರ್ಣಿಸಿದರೆ "ಮನುಜ, ನೀನೆಡೆವಿಡದನು ದಿನವೆಳಸುವ| ವನಿತೆ ಯೊಳೆಣಿಸಲೊಂದಿನಿಸು ಲೇಸಿಹುದೆ?" ಎಂದು ಕಾಮಿನಿಯರ ವ್ಯರ್ಥ ಆಕರ್ಷಣೆಯ ಉಪಟಳವನ್ನು ಬಯಲಿಗೆಳೆಯುತ್ತದೆ.

"ಬಿಡಬೇಕು ಬಲುಹಿಂದೆ ಬರಿದೆ ತನ್ನಿರವನು
ಬಿಡಿಸುವ ಕಾಮವಿದನು ಕಂಡ ಯೋಗಿ"
ಸುಗುಣ ಸಂತತಿಯುನು, ನಿಗಮಾದಿ ವಿಧಿಯನು

ಮಿಗೆ ತಪವನು ತನಗಹ ಸಿದ್ಧಿಗಳು॥
ಜಗದ ಪೂಜ್ಯತೆಯನು ಸೊಗಸುಪೀ ತನುವನು।
ಬಗೆಯೆ ಕಾಮವೆ ಬಣ್ಣವಳಿವುದರಿಂದ ॥೧॥

ಎಂದು ಮುಂತಾಗಿ ಯೋಗಸಾಧನೆಯ ಸರ್ವಸ್ವವನ್ನೂ ಕಾಮ ಹೇಗೆ ನಿರ್ನಾಮಗೊಳಿಸುತ್ತದೆಂಬುದನ್ನು ಮನಮುಟ್ಟುವಂತೆ ಹೇಳಿದ್ದಾರೆ. ಇನ್ನೊಂದು ಗೀತೆಯಲ್ಲಿ ಅವರು ಕೇಳುವ "ಯಾಕೆ ವಿರತಿಯನೊಲಿದು ಹೀನ ವಿಷಯವನೊಲಿವೆ। ಕಾಕು ಮಾನಸವೆ ನಿನಗದರೊಳೇನುಂಟು?"–ಎಂಬ ಪ್ರಶ್ನೆ ಮತ್ತು ಅದಕ್ಕೆ ಸೂಚಿಸುತ್ತಾ ಹೋಗು ಉತ್ತರ, ಎಂತಹ ಲೌಕಿಕ ಲಂಪಟನನ್ನೂ ಅಂತರ್ಮುಖಿಗೊಳಿಸುವಂತಿದೆ. "ಬೇಡ ಬೇಡೆಲೆ ಮನವೆ ವಿಷಯದಾಸೆ। ಮಾಡಿಕೆಡದಿರು ಸಾರಿದ" ಎಂದು ಮನಸ್ಸಿಗೆ ಸಾರಿ ಹೇಳುವ ಬೋಧೆಯಾಗಲೀ, "ಬೇಡ ಬೇಡ ಭೋಗದೊಡನಾಟ! ನೋಡು ನಂಜುವೆ ರಸಿದ ಸವಿಯೂಟ।" ಎಂಬ ಎಚ್ಚರಿಕೆಯಾಗಲೀ ವಿಷಯದತ್ತ ಹರಿಯುವ ಮನಸ್ಸನ್ನು ಕ್ಷಣಕಾಲವಾದರೂ ತಡೆದು ನಿಲ್ಲಿಸುವಂತಿವೆ

ಇಲ್ಲಿ ಮುಖ್ಯವಾಗಿ ಕಾಣುವುದು ವೈರಾಗ್ಯದತ್ತ ತೀವ್ರವಾದ ಒಲವು. ಸಾಧನೆಯ ಒಂದು ಹಂತದಲ್ಲಿ ಇದು ಆವಶ್ಯಕ. "ತ್ಯಾಗಭೋಗ ಸಮನ್ವಯ" ಅಥವಾ "ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ"–ಎಂಬ ಘೋಷಣೆಗಳು ದೇಹದಂಡನೆಯ ಕಠಿಣ ಸಾಧನೆಯನ್ನು ಅಲ್ಲಗಳೆಯಲಾರವು. ಸಾಧನೆಯ ಪ್ರಾರಂಭದ ಸ್ಥಿತಿಯಲ್ಲಿ ತೀವ್ರವಾದ ಸಂಯಮ. ನಿಯಮ ನಿಷ್ಠೆಗಳು ಅಗತ್ಯ. "ದಂಡಿಸದೆ ದೇಹವನು ಖಂಡಿಸದೆ ಕರಣವನು. ಉಂಡುಂಡು ಸ್ವರ್ಗಕ್ಕೈದಲ್ಕೆ ಅದನೇನು ರಂಡೆಯಾಳುವಳೆ?" ಎಂದು ಸರ್ವಜ್ಞ ಕೇಳಿದುದು ಈ ಅರ್ಥದಲ್ಲಿಯೇ. ಶರಣರ ತ್ಯಾಗಭೋಗ ಸಮನ್ವಯ, ಸಂಯಮ ರಹಿತವಾದುದಲ್ಲ. ಆದರೆ, ಆ ಸಂಯಮ ಕೃತಕವಾಗದೆ ಅಂತರಂಗದ ಅರಿವಿನಿಂದ ಉಂಟಾದ ಚಿತ್ತಶುದ್ಧಿಯಿಂದ ಬಂದದ್ದು. ಇಲ್ಲಿ ನಿಜಗುಣರು ಹೇಳುವ ವೈರಾಗ್ಯವೂ ಜೀವವನ್ನು ಅರಿವಿನತ್ತ ತಿರುಗಿಸುವ ಎಚ್ಚರಿಕೆಯಿಂದ ಕೂಡಿದ್ದು. ಇಡೀ ಸೃಷ್ಟಿವಿನ್ಯಾಸವನ್ನೇ ದೂರನಿಂತು ನೋಡುವ ಸಾಕ್ಷೀಪ್ರಜ್ಞೆ ಇಲ್ಲಿ ಕಂಡುಬರುತ್ತದೆ.

ಆಡುತೈದಳೆ ಮಾಯೆಯೆಂಬ ಕಾಮಿನಿ ಬಿಡದೆ।
ನೋಡಿ ಬಲ್ಲವರು ಸಂಸಾರ ನಾಟಕವ ॥೫॥

ಎಂದು ವಿವಿಧ ನಾಮರೂಪಕ್ರಿಯಾತ್ಮಕವಾದ ಈ ಲೋಕರಂಗದ ಅರ್ಥವತ್ತಾದ ಚಿತ್ರವನ್ನು ಕೊಡುತ್ತಾರೆ; ಅನೇಕ ರೀತಿಯಲ್ಲಿ ಅದರ ವಿಫಲತೆಯನ್ನು ಸೂಚಿಸುತ್ತಾರೆ. ಇದು ನಿರಾಶೆಯಿಂದ ಪ್ರೇರಿತವಾದ ನಿರಸನವಲ್ಲ; ಮಹದಾಶೆಯಿಂದ ಕೂಡಿದ ಆತ್ಮ ಜಾಗ್ರತಿ.

ಇದು ಸಾಧನೆಯ ಮುಂದಿನ ಹಂತಕ್ಕೆ ಕಾರಣವಾಗುತ್ತದೆ. 'ನೀತಿಕ್ರಿಯಾಚರ್ಯ ಸ್ಥಲ'ದಲ್ಲಿ ಅದನ್ನು ಕಾಣುತ್ತೇವೆ. ಇಲ್ಲಿ ಸಾಧನೆ, ಗಟ್ಟಿಯಾದ ಒಂದು ನೈತಿಕ ನೆಲೆಗಟ್ಟಿನ ಮೇಲೆ ನಿಂತು ಬೆಳೆಯತೊಡಗುತ್ತದೆ. ಸಾಧನೆಯ ಮಾರ್ಗವನ್ನು ಒಟ್ಟು

ದೃಷ್ಟಿಯಿಂದ ನಿಜಗುಣರು ಇಲ್ಲಿ ನೋಡುತ್ತಾರೆ. ಲೌಕಿಕದ ಇತಿಮಿತಿಗಳನ್ನು ಇಲ್ಲಿ ಗುರುತಿಸಿದರೂ ಅದಕ್ಕಾಗಿ ಅಂಜದೆ ನಿಷ್ಠೆಯಿಂದ ಮುನ್ನಡೆಯಬೇಕಾದ ದಿಟ್ಟತನವನ್ನು ಎತ್ತಿಹಿಡಿಯುತ್ತಾರೆ. ಹಿಂದಿನ ಎರಡು ಸ್ಥಲಗಳಲ್ಲಿ ಕಾಣುವ ತಳಮಳ, ಹಂಬಲ, ಹಾರೈಕೆಗಳನ್ನು ದಾಟಿ. ಗುರಿಯತ್ತ ಮುನ್ನಡೆಯುವ ನೈತಿಕನಿಷ್ಠೆ ಇಲ್ಲಿ ಕಾಣುತ್ತದೆ. ಈ ಜೀವನದಲ್ಲಿದ್ದು ಚೆನ್ನಾಗಿ ಬದುಕಬೇಕು. ವೈರಾಗ್ಯವೆನ್ನುವುದು ಹೇಗೋ ಜೀವನ ವನ್ನು ಸಾಗಿಸುವ ಹೇಡಿಗಳ ಮುಖವಾಡವಾಗಬಾರದೆನ್ನುವುದನ್ನು ಅನೇಕ ಹಾಡುಗಳಲ್ಲಿ ಹೇಳಿದ್ದಾರೆ. ಸಕ್ರಿಯಾತ್ಮಕವಾಗಿದ್ದು ಅವುಗಳಿಗೆ ಅಂಟದ ಪ್ರವೃತ್ತಿ ಮಾರ್ಗವನ್ನು ಬೋಧಿಸುವ ಧೀರ ಸನ್ಯಾಸಿಯಾಗಿ ನಿಜಗುಣರು ಇಲ್ಲಿ ಗೋಚರಿಸುತ್ತಾರೆ.

ಎಲ್ಲರೊಡನೆ ವೈರವಿಲ್ಲದೆ ಕೂರ್ಪುದೆ। ಚಂದಮಾಮ।
ತಲ್ಲಣಿಸದ ನೀತಿಯಲ್ಲಿರಲಾರ್ಪುದೆ। ಚಂದಮಾಮ ||ಪ||

ಎಂಬ ಅವರ ಗೀತೆ, ಈ ಜಗತ್ತಿನಲ್ಲಿದ್ದೂ ಇಲ್ಲದಂತೆ ಬಾಳುವ ನೈತಿಕ ಜೀವನದ ರಹಸ್ಯ ವನ್ನು ಬೆಳಿಸಿಕೊಂಡು ಹೋಗಿದೆ. ಇನ್ನೊಂದು ಅರ್ಥವತ್ತಾದ ಹಾಡಿನಲ್ಲಿ ಇಹ-ಪರಗಳ ಸಮನ್ವಯ ಸಾಧನೆಯನ್ನು ಬಹಳ ಸುಂದರವಾಗಿ ಹೀಗೆ ಹೇಳಿದ್ದಾರೆ:

ಜಾಣನು ಲೌಕಿಕ ಪರಮಾರ್ಥವೆರಡನು।
ಮಾಣದೆ ಕೂಡಿ ನಡೆಸುತಿಹನಿಂತು ||ಪ||
ತರುಣಿಯ ಮೊಲೆಯೊಂದನುಣುತಲಣುಗನನ್ಯ।
ಕರದೊಳುಳಿದ ಕುಚಾಗ್ರವನೋವುವಂತೆ||
ನರಜನ್ಮವಿಡಿದಿಹ ಭೋಗಾನುಭವದೊಳು।
ಪರಲೋಕಗತಿಯ ಸಾಧನದೊಳೊಂದಿಹನು ||೧||

ತಾಯಿಯ ಮೊಲೆಯೊಂದನ್ನುಣ್ಣುವಾಗ ಶಿಶು ಇನ್ನೊಂದು ಕೈಯಿಂದ ಉಳಿದ ಕುಚಾಗ್ರ ವನ್ನು ಹಿಡಿದಿರುವಂತೆ, ಜಾಣ ಸಾಧಕ ಈ ಭೋಗಾನುಭವದಲ್ಲಿದ್ದರೂ ಪರಲೋಕ ಗತಿಯತ್ತಲೂ ಕರವೆತ್ತಿರುತ್ತಾನೆಂಬ ಈ ಸಾದೃಶ್ಯ, ಲೌಕಿಕ ಪಾರಮಾರ್ಥಗಳೆರಡನ್ನೂ ಸಮನ್ವಯಗೊಳಿಸುವ ರಹಸ್ಯವನ್ನು ಹಿಡಿದಿಟ್ಟಿದೆ. ಮುಂದಿನ ನುಡಿಯಲ್ಲಿ ಇನ್ನೊಂದು ಸಾದೃಶ್ಯ ಕೊಡುತ್ತಾರೆ:

ಕೊಳನ ಹೊಕ್ಕರೆ ಒಡಲಿನ ತಂಪು ಬಿಸಿಲಿನ।
ಜಳವನು ಮಿಕ್ಕ ಮೈಯೊಳು ಕಾಣ್ಬನಂತೆ||
ತಿಳಿವಿನ ಸುಖವನು ವಿಷಯ ಬಾಧೆಯನು ಸಂ।
ಗೊಳಿಸುತೆ ಸಮಯವೊಂದರೊಳೈದುತಿಹನು ||೨||

ಕೊಳದ ನೀರಿನ ತಂಪು ಮತ್ತು ಮೇಲೆ ಬಿಸಿಲಿನ ಝಳ....ಈ ಎರಡನ್ನೂ ಏಕಕಾಲದಲ್ಲಿ ಪಡೆಯುವಂತೆ, ತಿಳಿವಿನ ಸುಖ ಮತ್ತು ವಿಷಯ ಬಾಧೆಗಳೆರಡೂ ಅನುಭವಗತವಾಗುತ್ತಾ

ಆ ಎರಡನ್ನೂ ಮೀರಬೇಕೆಂಬ ದೃಷ್ಟಿ ಇಲ್ಲಿದೆ. ಜಾರನನ್ನು ನೆನೆಯುತ್ತಾ ನಿಜಪುರುಷ ನನ್ನು ಕೂಡುವ ಜಾರಿಣಿಯ ಉದಾಹರಣೆಯನ್ನು ಇನ್ನೊಂದರಲ್ಲಿ ಕೊಟ್ಟು ಇದನ್ನು ಸ್ಪಷ್ಟಪಡಿಸುತ್ತಾರೆ. 'ಅದನ್ನು' ಬಿಡದೆ 'ಇದ'ರಲ್ಲಿ ಬಾಳುವ ರಹಸ್ಯವನ್ನು ಹೇಳ ಬೇಕೆಂಬುದು ಈ ಗೀತೆಯ ಮುಖ್ಯ ಆಶಯವಾಗಿದೆ. ಅದನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದ್ದಾರೆ: ಸಾಧಕನ ಪರಿಪೂರ್ಣ ದೃಷ್ಟಿಯ ಪರಿಭಾವನೆಯನ್ನು ಪ್ರಚೋದಿಸಿದ್ದಾರೆ.

ಇಂತಹ ಸ್ಥಿತಿ ಸುಲಭವಾಗಿ ಬರುವುದಿಲ್ಲ. ಇದನ್ನು ಪಡೆಯುವಂತಹ ಜೀವನ ಶ್ರದ್ಧೆ, ನೈತಿಕ ನಿಷ್ಠೆಗಳನ್ನು ಸಾಧಿಸುವುದೇ "ನೀತಿ ಕ್ರಿಯಾಚರ್ಯಸ್ಥಲ"ದ ನಿಲುಮೆಯಾಗಿದೆ. ಈ ದೃಷ್ಟಿಯಿಂದ ಮನನೀಯವಾದ ಕೆಲವು ಗೀತೆಗಳು ಇಲ್ಲಿ ಬರುತ್ತವೆ:

ಶ್ರೀಗುರುವಚನದಿಂದಧಿಕ ಸುಧೆಯುಂಟೆ?
ರಾಗದಿಂ ಬೇರಿನ್ನು ಭವಬೀಜಮುಂಟೆ?

ಎಂಬ ಮೊದಲನೆಯ ಗೀತೆಯೇ ನಿಜಗುಣರ ಜೀವನದೃಷ್ಟಿಯನ್ನು ಪ್ರತಿಬಿಂಬಿಸುತ್ತಿದೆ:

ನರಜನ್ಮದಿಂದಿಹದೊಳು ಮಿಗಿಲುಂಟೆ?
ಕರಣ ವಿಜಯದಿಂದೆ ಕಲಿತನಮುಂಟೆ?
ಧರೆಗೆ ಯಾಚನೆಯಿಂದ ಲಘುತರಮುಂಟೆ?
ಪರಬೊಮ್ಮದರಿವಿನಿಂದುರೆ ಜಾಣ್ಮೆಯುಂಟೆ?

ಎಂಬ ಈ ಮಾತುಗಳಲ್ಲಿ ಒಂದೊಂದೂ ಮತ್ತೆ ಮತ್ತೆ ಮೆಲುಕು ಹಾಕಬೇಕಾದಂತಹವು ಗಳು. ಈ ಗೀತೆಯಲ್ಲಿ ಉದ್ದಕ್ಕೂ ಇಂತಹ ಮಾತುಗಳು ಸೂತ್ರಪ್ರಾಯವಾಗಿ ಮಿಂಚು ತ್ತವೆ. "ಕಡುಲೋಭದಿಂದ ದುರ್ಗುಣವನ್ಯಮುಂಟೆ? ಶಮೆಯಿಂದೆ ಮುಕುತಿ ಸಾಧನ ಪೆರತುಂಟೆ? ವಿಮಲ ಮಾನಸದಿಂದ ಶುಭತೀರ್ಥಮುಂಟೆ?" "ಕರುಣದಿಂದತಿಶಯವಹ ಧರ್ಮಮುಂಟೆ?" "ವರಭಕ್ತಿಯಿಂದ ಸಚ್ಚರಿತವೊಂದುಂಟೆ?"–ಹೀಗೆ ಅಗೆದಷ್ಟು ಅರ್ಥ ವನ್ನು ಕೊಡುವ ಈ ಮಾತುಗಳ ಸಂಖ್ಯೆಯನ್ನು ಬೆಳೆಸುತ್ತಾ ಹೋಗಬಹುದು.

ನಿರಂತರವಾದ ನೀತಿ ನಿಷ್ಠೆಯಿಂದ ಸದಾ ಜಾಗ್ರತವಾಗಿದ್ದು ಮುನ್ನಡೆಯುವ ಸಾಧಕ ಚೇತನದ ಪ್ರಾರ್ಥನೆಯೆನೆಂಬುದನ್ನು, ತಮಗೇ ಅನ್ವಯಿಸಿಕೊಂಡು ಒಂದು ಗೀತೆಯಲ್ಲಿ ಹಾಡಿದ್ದಾರೆ ನಿಜಗುಣರು. ಅದು ಅವರ ಜೀವನ ದರ್ಶನದ ಪೂರ್ಣ ಪ್ರತಿಬಿಂಬವಾಗಿದೆ. ಅದನ್ನು ಸಂಪೂರ್ಣವಾಗಿ ಇಲ್ಲಿ ಗಮನಿಸಬಹುದು:

ಬೇಡುವೆನಭವ ನಿಮ್ಮನು ಭವಭವದೊಳು
ಮಾಡೆನಗೊಲಿದು ಸುಗುಣ ಸಂತತಿಯನಿಂತು ||ಪ||

–ಇಂತಹ ಸುಗುಣ ಸಂತತಿಗಳನ್ನು ನನಗೆ ಕೊಡು ಎಂದು ಭವಭವದಲ್ಲಿಯೂ, ನಿಮ್ಮನ್ನು ಪ್ರಾರ್ಥಿಸುತ್ತೇನೆ ಎಂದು ಅಭವನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಆ ಸುಗುಣ ಸಂತತಿಗಳಾವುವು?–

ಎಡರಡಸಿದ ವೇಳೆಯೊಳು ಧೈರ‍್ಯವನು ಸಿರಿ।
ಪಡೆದು ಜೀವಿಸುವೆಡೆಯೊಳು ವಿನಯುವನು॥
ಕಡು ಜವ್ವನದೊಳು ವಿಕೃತಿವೋರದಿಹುದನು।
ಪಿಡಿದನೇಮವನೆಡೆವಿಡದತಿ ಛಲವನು ॥೧॥

ಎಡರನ್ನು ಕೊಡು, ಆದರೆ ಅದರ ಜೊತೆಗೆ ಅದನ್ನು ಎದುರಿಸುವ ಧೈರ‍್ಯವನ್ನು ಕೊಡು, ಸಂಪತ್ತಿನೊಡನೆ ಸದುವಿನಯು ಸಂಗತವಾಗಿರಲಿ; ಉದಮದದ ಯೌವನದಲ್ಲಿ ವಿಕೃತಿ ತಲೆದೋರದಿರಲಿ; ಹಿಡಿದ ನೇಮವನ್ನು ನಡೆಸುವ ಛಲ, ಅಚಲವಾಗಿರಲಿ–ಎಂಬ ಈ ಪ್ರಾರ್ಥನೆಯೊಡನೆ ಅದು ಮುಂದುವರಿಯುತ್ತದೆ;

ಅಸುವಳಿಯಲು ದೇಹಿ ಎನಲೊಲ್ಲದಧಟನು।
ಪುಸಿಯನೆಲ್ಲಿಯು ನುಡಿಯದ ಸತ್ಯಪಿದನು॥
ಮಸುಳಿಸದಿಹ ಪುಣ್ಯಮಯು ಕೀರ್ತಿಯನು, ಶಾಂತ।
ರೊಸೆದಹುದೆಂದು ಬಣ್ಣಿಸುವ ವರ್ತನವನು ॥೨॥

ಸಾಧಕನಿಗೆ ಅಸುವಳಿದರೂ "ದೇಹಿ" ಎನ್ನಲಾಗದ ಆತ್ಮಾಭಿಮಾನಬೇಕು. ಇನ್ನೊಬ್ಬರ ಮುಂದೆ ಕೈಯೊಡ್ಡಿ ಹೇಗೋ ನಿರಭಿಮಾನದಿಂದ ಬದುಕುವುದನ್ನು ನಿಜಗುಣರು ನಿರಾಕರಿಸಿದ್ದಾರೆ. ಅವರ ಹಾಡುಗಳಲ್ಲಿ ಹಲವು ಕಡೆ ಈ ಮಾತು ಬರುತ್ತದೆ. ಇದು ದುರಭಿಮಾನವಲ್ಲ; ಶಿವತ್ವದಿಂದ ಪ್ರೇರಿತವಾದ ಸಾತ್ವಿಕ ಅಭಿಮಾನ. ಹಾಗೆ ಮುಂದಿನ ಮಾತುಗಳಲ್ಲಿ ಸತ್ಯನಿಷ್ಠೆ, ಪುಣ್ಯಮಯಕೀರ್ತಿ ಮತ್ತು ಶಾಂತ ವರ್ತನೆಗಳನ್ನು ಎತ್ತಿ ಹೇಳಿದ್ದಾರೆ. ಮುಂದಿನ ಮಾತು ಇದು:

ವಿತರಣದೊಡನೆ ಭೋಗಿಸುವರ್ಥದೊದವನು।
ಹಿತವಚನವೆ ತೊಡವೆನಿಪ ದಾನವನು॥
ಶ್ರುತಿಬೋಧನೆಯೊಳುಪರತಿ ಇಲ್ಲದಿಹುದನು।
ನುತಿವೆತ್ತ ಕೈಸಾರುತಿಹ ಮನೋರಥವನು ॥೩॥

ಹಣಬೇಕು, ಲೌಕಿಕ ಭೋಗವೂ ತಿರಸ್ಕರಣೀಯುವಲ್ಲ; ಆದರೆ ಅದರಲ್ಲಿ ಒಂದು ವಿವೇಚನೆ ಇರಬೇಕು. "ವಿತರಣದೊಡನೆ ಭೋಗಿಸುವ ಅರ್ಥದೊದವನು" ನಿಜಗುಣರು ಕೇಳಿಕೊಳ್ಳುವುದು ಅವರ ಜೀವನ ಶ್ರದ್ಧೆಗೆ ಸಾಕ್ಷಿ, ಅಂತೆಯೇ ದಾನಕ್ಕೆ ನಿರಹಂಕಾರದ ಹಿತವಚನವೇ ಭೂಷಣವಾಗಿರಬೇಕೆಂಬ ಮಾತೂ ಅರ್ಥವತ್ತಾದದ್ದು, ಅನಂತರ ಧರ್ಮಮಾರ್ಗದಲ್ಲಿರಬೇಕಾದ ನೇರ ನಡೆನುಡಿಗಳನ್ನು ಹೇಳಿದ್ದಾರೆ. ಅದು ಹೀಗೆ ಬೆಳೆಯುತ್ತದೆ:

ಕೋಪವಂಟದ ತಪವನು, ಪರವಧುವಿನ।
ರೂಪುಗಂಡೆಳಸದ ಕರಣ ವಿಜಯುವನು॥
ತಾಪವಡರಿ ಕೆಡಿಸದ ಸಾರ ಸುಖವನು।
ಕಾಪಟ್ಯವಿಲ್ಲದಾಶ್ರಮ ಧರ್ಮರತಿಯನು ॥೪॥

ತಪಸ್ಸಿನಲ್ಲಿ ಕೆಲವು ವೇಳೆ 'ಅಹಂ'ಕಾರ ತಲೆಯೆತ್ತಿ ಅದರ ಫಲವಾಗಿ ಕೋಪಾದಿಗಳು ಅಂಟಿಕೊಳ್ಳುವುದುಂಟು. ಅದನ್ನು ಎಚ್ಚರಿಕೆಯಿಂದ ನಿರಾಕರಿಸುತ್ತಾರೆ. ಕೋಪ ಅಂಟಬಾರದು. ತಾಪವಡರಿ ಕೆಡಿಸಬಾರದು. ಇಂದ್ರಿಯ ಜಯ ಸಾಧಿಸಬೇಕು. ಕಾಪಟ್ಯಕ್ಕೆ ಎಡೆಯಿಲ್ಲದಿರಬೇಕು. ಕೊನೆಯಲ್ಲಿ:

ಧರೆಯೊಳತ್ಯಧಿಕವೆನಿಪ ಶಾಂತಿಮತವನು।
ಕರುಣವಿದ್ಯೆಗಳುಳ್ಳ ಗುರುಭಜನೆಯನು॥
ಪರತರ ಮುಕುತಿಪೋರುವ ಶಾಸ್ತ್ರವನು, ಕಂತು।
ಹರ ಶಂಭುಲಿಂಗ ನಿಮ್ಮಡಿಯ ಭಕ್ತಿಯನು ॥೫॥

ಇಲ್ಲಿ ಶಾಂತಿ ಕರುಣೆಗಳನ್ನು ಹೇಳಿ ಅನಂತರ ಗುರುಭಜನೆ ಮತ್ತು ಭಕ್ತಿಗಳನ್ನು ಕೊನೆಯಲ್ಲಿ ಸೂಚಿಸುತ್ತಾರೆ. ನೈತಿಕ ಜೀವನ ತನಗೆ ತಾನೇ ಇಲ್ಲ. ಅದು ಆಧ್ಯಾತ್ಮಿಕ ಜೀವನದ ಅಡಿಗಲ್ಲು ಎಂಬುದನ್ನು ಇದು ಸೂಚಿಸುತ್ತದೆ. ನೀತಿ ನಿಷ್ಠೆಯ ಪ್ರಾರ್ಥನೆಗೆ ಅತ್ಯಂತ ಸೂಕ್ತವಾದ ಮುಕ್ತಾಯವನ್ನು ತರುತ್ತದೆ. ಅವರು ಅಭವನನ್ನು ಬೇಡುವ ಈ ಪ್ರಾರ್ಥನೆಯಲ್ಲಿ ಉದ್ದಕ್ಕೂ ನಾವು ಕಾಣುವುದು ಯಾಂತ್ರಿಕವಾದ ನೈತಿಕ ನಿಯಮಗಳ ಪಟ್ಟಿಯನ್ನಲ್ಲ; ಅಂತರ್ಮುಖಿ ಸಾಧಕನ ಅನುಭಾವದ ಸ್ಪರ್ಶವನ್ನು ಪಡೆದ ತ್ರಿಕಾಲಾಬಾಧಿತ ಜೀವನಮೌಲ್ಯಗಳ ಉಜ್ವಲ ದೀಪ್ತಿಯನ್ನು, ಆದ್ದರಿಂದಲೇ ಇದು ಸಾಧಕನ ಕೈದೀವಿಗೆಯಾಗಿ ಪರಿಣಮಿಸುವಂತಹ ಸತ್ವವನ್ನು ಪಡೆದಿದೆ.

ಇದರ ಮುಂದಿನ ಹಾಡು ಭಕ್ತಿ ಹೃದಯದಿಂದ ತುಂಬಿ ಹರಿಯುತ್ತಾ, ನೀತಿನಿಚ್ಚಣಿಗೆಯಲ್ಲಿ ಮೇಲೇರುತ್ತಿರುವ ಸಾಧಕನ ಚೇತನಕ್ಕೆ ಹೊಸ ಚೈತನ್ಯವನ್ನೀಯುವ ಚಿಲುಮೆಯಂತಿದೆ ಹದವಾದ ನಾದವಿನ್ಯಾಸವನ್ನು ಸಂಗತಗೊಳಿಸಿದಾಗ ಇದರ ಪ್ರಭಾವ ಇನ್ನೂ ಅಧಿಕಗೊಳ್ಳುತ್ತದೆ; ಮಾತಿನ ಅರ್ಥವನ್ನೂ ಮೀರಿನಿಲ್ಲುತ್ತದೆ. ಸಂಗೀತದ ಆ ಸಂಗತಿಗೆ ಇಲ್ಲಿ ಹೋಗದೆ ವಾಗರ್ಥಗಳ ಹಿಂದಿರುವ ಅನುಭವಗಮ್ಯ ಧ್ವನಿಯನ್ನು ಮಾತ್ರ ಗಮನಿಸಿ ಅದನ್ನೀಗ ಪೂರ್ಣವಾಗಿ ಕೇಳಬಹುದು:

ಕರುಣಿಸು ನೀನೆನ್ನ ಕರಣ ನಿಕರದೊಳು।
ವರಪುಣ್ಯವಗಲದಂತೆಲೆ ದೇವ।
ಶರಣ ಸಹಜ ಭಾವ। ಗಿರಿಜೆಯ ಸುಖಜೀವ।
ಬೇಗ ಕರುಣಿಸು ॥ಪ॥

ಸತಿ ಮೊದಲಾದ ಸಂಪದವನೆಳಸಿ, ಮಂದ।
ಮತಿ ಕಂಡ ಕೆಲಸವನಲಸದೆ॥
ಕ್ಷಿತಿಯೊಳೆಸಗುವಂತೆ ಗುರುಸೇವೆಯೊಳಗಭಿ।
ರತಿಯನೆನ್ನೊಡಲಿಗೀಯಖಿಳೇಶ॥

ನುತಗುಣ ನಿಧಿಕೋಶ। ಜಿತ ಪಂಚವಿಧ ಪಾಶ।
ಬೇಗ ಕರುಣಿಸು ||೧||

ಜನರೊಲಿವಭಿಮಾನದೊಳು ವಾದಿ ಬಹುತರ್ಕ।
ವನೆ ಬಿಡದೋದಿ ಬಳಲುವಂತೆ
ಮನುಗಳ ಜಪವೆನ್ನ ಮೇಲ್ನುಡಿಯೊಳಗನು।
ದಿನವಿರೆ ಮಾಡು ಪಾವನ ಶೀಲ॥
ಮುನಿಕುಲ ನುತಿಲೋಲ। ವಿನಮಿತ ಸುರಜಾಲ॥
ಬೇಗ ಕರುಣಿಸು ||೨||

ಸಲೆಸಮರತಿಯೊಳೊಲಿಸಿ ಮೆಚ್ಚಿಸಿದನೊಮ್ಮೆ।
ತೊಲಗಿದಿನಿಯಳು ಧ್ಯಾನಿಸುವಂತೆ॥
ನೆಲಸಿ ತತ್ವಾನುಭಾವನೆಯೆನ್ನ ಮನದೊಳು।
ಚಲಿಸದೊಲಿರಿಸು ಭಾವಜ ಭಂಗ।
ವಿಲಸಿತ ವಿಮಲಾಂಗ। ಸುಲಭನೆ ಶಂಭುಲಿಂಗ॥
ಬೇಗ ಕರುಣಿಸು ||೩||

ಮೂರು ಸಾದೃಶ್ಯಗಳನ್ನು ಇಲ್ಲಿ ಕೊಟ್ಟಿದ್ದಾರೆ. ಮೊದಲನೆಯ ನುಡಿಯಲ್ಲಿ ಸತಿ ಮೊದಲಾದ ಸಂಪತ್ತನ್ನು ಬಯಸಿದ ಲೌಕಿಕರು, ಕಂಡ ಕೆಲಸವನ್ನೆಲ್ಲಾ ಮಾಡುವಂತೆ ಗುರುಸೇವೆಯಲ್ಲಿ ಆಸಕ್ತಿಯನ್ನು ಕೊಡು ಎಂದು ಪ್ರಾರ್ಥಿಸುತ್ತಾರೆ. ಮುಂದಿನದು ಬಹಳ ಅರ್ಥವತ್ತಾದ ಸಾದೃಶ್ಯ. ಜನರನ್ನು ಒಲಿಸಬೇಕೆಂಬ ಅಭಿಮಾನದಿಂದ ಪಂಡಿತ ಅನೇಕ ತರ್ಕಶಾಸ್ತ್ರಾದಿಗಳನ್ನು ಎಡೆಬಿಡದೆ ಓದಿ ಬಳಲುವಂತೆ ಮಹಾಪುರುಷರ ಜಪ ನನ್ನ ನಾಲಗೆಯ ಮೇಲಿರಲಿ–ಎನ್ನುತ್ತಾರೆ. ಕೇವಲ ವಾದಕ್ಕಾಗಿ ಓದುವ ಓದು, ವ್ಯರ್ಥ ಓಳಲಿಕೆ ಎಂಬ ಧ್ವನಿ ಇಲ್ಲಿದೆ. ಸಮರತಿಯಲ್ಲಿ ಮೆಚ್ಚಿಸಿದ ಇನಿಯನನ್ನು ಪ್ರೇಯಸಿ ನೆನೆಯುವಂತೆ ತತ್ವಾನುಭಾವನೆಯನ್ನು ನನ್ನ ಮನದಲ್ಲಿ ಅಚಲವಾಗಿರಿಸು–ಎಂಬ ಪ್ರಾರ್ಥನೆ ಕೊನೆಯಲ್ಲಿದೆ. ಭಕ್ತಿ ಕೇವಲ ಭಾವುಕವಾಗದೆ ಹೇಗೆ ಊರ್ಧ್ವಗಾಮಿಯಾಗಬಲ್ಲುದೆಂಬುದಕ್ಕೆ ಇದು ಒಳ್ಳೆಯ ಉದಾಹರಣೆಯಾಗಿದೆ.

ಭಕ್ತಿ, ಪರಮಪ್ರೇಮ ರೂಪವಾದ ತುಂಬುಹೃದಯದ ಪ್ರಾರ್ಥನೆಯಂತೆಯೇ, ತತ್ವಚಿಂತನೆಯ ಅಂತರ್ ದೃಷ್ಟಿಯಿಂದ ದೀಪ್ತವಾದ ದರ್ಶನದವರೆಗೂ ಬೆಳೆಯಬೇಕೆಂಬ ಪೂರ್ಣ ವಿಕಾಸದೃಷ್ಟಿಯನ್ನು ಇಲ್ಲಿ ಕಾಣುತ್ತೇವೆ. ಭಕ್ತಿಯ ಬೇರೆ ಬೇರೆ ಛಾಯೆಗಳಲ್ಲಿ ಇದು ವ್ಯಕ್ತವಾಗುತ್ತದೆ. ಅಂತಹ ಒಂದೆರಡು ಗೀತೆಗಳನ್ನು ಇಲ್ಲಿ ಹೇಳಬಹುದು:

ಶರಣ ಸತಿಯ ಮದುವೆಯ ಸಂಭ್ರಮವನು। ನೋಡಿರಮ್ಮ।
ಪರಮಾನಂದ ಪಯೋನಿಧಿಯೊಳಗೋ। ಲಾಡಿರಮ್ಮ ||ಪ||

ಎಂಬ ಹಾಡಿನಲ್ಲಿ ಕಾಣುವುದು ಸತಿಪತಿಭಾವದ ಭಕ್ತಿಯ ಉನ್ನತ ಸ್ತರವನ್ನು. ಇಲ್ಲಿ ಬರುವ ಮದುವೆಯ ಹಂದರ, ಹಸೆಯ ಜಗುಲಿ, ಕಲಶೋಧಕ, ಕರ್ಮದ ತೆರೆ–ಈ ಮೊದಲಾದುವುಗಳೆಲ್ಲಾ ಆಧ್ಯಾತ್ಮದ ಸಾಂಕೇತಿಕ ನಿರೂಪಣೆಯ ರೂಪಕಗಳಾಗಿ ಬರುತ್ತವೆ. "ಆವ ಪುಣ್ಯವೋ ಲಿಂಗಪೂಜಾವಿಧಿಯನುಭಾವವಹುದು ನರಜನ್ಮದೊಳು"–ಎಂದು ಇನ್ನೊಂದು ಕಡೆ ಅನುಭಾವ ಭಕ್ತಿಯ ಉದ್ಗಾರ ತೆಗೆಯುತ್ತಾರೆ. ಷಟ್‌ಸ್ಥಲಮಾರ್ಗ ನಿರೂಪಣೆಯಲ್ಲಿ ಕಾಣುವ ಶ್ರದ್ಧಾ, ನೈಷ್ಠಿಕಾ, ಅವಧಾನ, ಅನುಭಾವ, ಆನಂದ, ಸಮರಸ ಈ ಭಕ್ತಿಗಳ ಸ್ಪಷ್ಟ ಉಲ್ಲೇಖವನ್ನು ಇಲ್ಲಿ ಕಾಣದಿದ್ದರೂ ಭಕ್ತಿವಿಕಾಸದೃಷ್ಟಿ, ಇಲ್ಲಿ ಅಡಕಗೊಂಡಿರುವುದನ್ನು ಗುರುತಿಸಬಹುದು. ಯೋಗ ಮತ್ತು ಜ್ಞಾನಪ್ರತಿಪಾದನಸ್ಥಲಗಳಲ್ಲಿ ಇದು ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ. ತನು, ವಚನ, ಮನಗಳಲ್ಲಿ ನಡೆಯುವ ತ್ರಿವಿಧ ತಪವನ್ನು ವರ್ಣಿಸುವ ಈ ಮುಂದಿನ ಗೀತೆಯಲ್ಲಿ ಅದನ್ನು ನೋಡಿ:

> ಮಾಡಲಿಲ್ಲವೆ ತಪವನು ಮಾಡಲಿಲ್ಲವೆ।
> ಕೂಡೆ ಸುಗುಣದೊಡನೆ ತಿಳಿದು।
> ನೋಡಿ ತ್ರಿವಿಧಕರಣದಲ್ಲಿ। ಮಾಡಲಿಲ್ಲವೆ ||ಪ||

ಎಂಬ ಹಾಡು ಭಕ್ತಿಯ ಅಂತರ್ಮುಖ ಬೆಳವಣಿಗೆಯನ್ನು ಹಂತಹಂತವಾಗಿ ಚಿತ್ರಿಸುತ್ತಾ ಹೋಗುತ್ತದೆ. ಭಕ್ತಿಯ ಅಭಿವ್ಯಕ್ತಿ ಮೊದಲು ತನುವಿನಲ್ಲಿ, ಅನಂತರ ವಚನದಲ್ಲಿ, ಈ ಎರಡಕ್ಕೂ ಹಿನ್ನೆಲೆಯಾಗಿದ್ದ ಮನದಲ್ಲಿಯೇ ಅದು ಗಟ್ಟಿಕೊಂಡು ಬೆಳೆಯುವುದು ಮುಂದಿನ ಪರಿಪಕ್ವಸ್ಥಿತಿ:

> ಗುರುಭಜನೆ ಸುಕರ್ಮವೃತ್ತಿ।
> ಹರನ ಪೂಜೆ ಶರಣ ಸೇವೆ॥
> ಪರಮ ಸಾತ್ವಿಕಂಗಳೆಂಟು।
> ನೆರೆದು ನೆಲೆಸಿ ತನುವಿನಲ್ಲಿ ||೧||
>
> ವಿನಯವನ್ಯ ಹಿತವತರ್ಕ॥
> ವನಪಶಬ್ದ ವಚಲಿತಾರ್ಥ॥
> ವನಘಮಂತ್ರವಾಗಮಂಗ।
> ಳಿನಿತುವಿಡಿದು ವಚನದಲ್ಲಿ ||೨||
>
> ಶಮೆ ವಿವೇಕವಾತ್ಮವಿದೆ।
> ದಮೆ ದಯಾರವಿಕ್ತಿಯೋಗ॥
> ವಮಳರೂಪ ಶಂಭುಲಿಂಗ।
> ವಮರ್ದು ತೋರೆ ಸುಮನದಲ್ಲಿ ||೩||

ಹೀಗೆ ಮೊದಲು ಭಜನೆ ಪೂಜೆ ಸೇವೆಗಳಲ್ಲಿದ್ದು, ಮುಂದೆ ವಿನಯಾದಿಗಳಿಂದ ಆಗಮಂಗಳನ್ನು ಹಿಡಿದು, ಕೊನೆಯಲ್ಲಿ ಶಮೆ ವಿವೇಕ ದಮೆ ದಯಾವಿರಕ್ತಿಗಳಿಂದ ಆತ್ಮ

ವಿದ್ಯೆಯನ್ನು ಸಾಧಿಸಿ, ಶಂಭುಲಿಂಗನ ಅಮಳರೂಪವೇ ಮನದಲ್ಲಿ ಮೂಡಿ ನಿಲ್ಲುವವರೆಗೂ ಅದು ಬೆಳೆಯುತ್ತದೆ. ಅದಕ್ಕಾಗಿಯೇ ಸಾಧಕ ನೀತಿಕ್ರಿಯಾಚರ್ಯೆಯಲ್ಲಿ ನಿಲ್ಲದೆ ಯೋಗ ಸಾಧನೆಯ ಕಡೆಗೆ ತಿರುಗಬೇಕಾಗುತ್ತದೆ. ಅದೇ ಮುಂದಿನ ಯೋಗಪ್ರತಿಪಾದನಸ್ಥಲ.

ಶಿವಕಾರುಣ್ಯವನ್ನು ಪಡೆದು ನಿರಂತರ ಜಾಗ್ರತಿಯ ನೈತಿಕ ಸಾಧನೆಯಿಂದ ಹದ ಗೊಂಡ ಜೀವ, ಸಹಜವಾಗಿಯೇ ಅಂತರ್ಮುಖಯೋಗ ಸಾಧನೆಯಲ್ಲಿ ತೊಡಗುತ್ತದೆ. ಈ ಯೋಗಸಾಧನೆಯ ಒಟ್ಟು ದೃಷ್ಟಿಯನ್ನು ನಿಜಗುಣರು ಇಲ್ಲಿ ಬಹಳ ವ್ಯಾಪಕವಾಗಿ ಮತ್ತು ಮುಖ್ಯವಾಗಿ ಅನುಭಾವಿಕವಾದ ರೀತಿಯಲ್ಲಿ ಹಿಡಿದಿಟ್ಟಿದ್ದಾರೆ. ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗಗಳ ವಿವಿಧ ಸೋಪಾನಗಳನ್ನೇರಿ ಶಿವಯೋಗದ ತುತ್ತ ತುದಿಯಲ್ಲಿ ಲಿಂಗಾಂಗಸಾಮರಸ್ಯದ ಕೇವಲ ಅನುಭವವನ್ನು ಆಯಾ ಹಂತಗಳಲ್ಲಿ ನಿಂತು ಸುರುಳಿ ಬಿಚ್ಚುತ್ತಾ ಹೋಗುತ್ತದೆ. 'ಕೈವಲ್ಯ ಪದ್ಧತಿ', ಒಂದೊಂದು ಯೋಗದ ಸ್ವರೂಪವನ್ನು ಹಾಡುಗಳಲ್ಲಿ ಅಡಕಗೊಳಿಸಿರುವ ರೀತಿ ಮತ್ತು ಒಂದೊಂದು ಯೋಗದಿಂದ ಮುಂದಕ್ಕೆ ಹೋಗುವ ದೃಷ್ಟಿ–ಇದನ್ನು ಒಂದು ಬಗೆಯ ಯೋಗ ಕೈಪಿಡಿಯನ್ನಾಗಿಸಿದೆ ಯೆಂದು ಹೇಳಬಹುದು.

ಯೋಗ ಸಾಧಕರಲ್ಲಿ ಮೃದು, ಮಧ್ಯಮ, ಅತಿಮಾತ್ರ ಮತ್ತು ಅತಿಮಾತ್ರತರ– ಎಂದು ನಾಲ್ಕು ಬಗೆಗಳನ್ನು ನಿಜಗುಣರು ಹೇಳಿರುವ ರೀತಿ ವಿಶಿಷ್ಟವಾಗಿದೆ. ಅನಂತರ ಒಂದು ಹಾಡಿನಲ್ಲಿ ಮೇಲೆ ಹೇಳಿದ ಯೋಗಗಳ ಲಕ್ಷಣಗಳನ್ನು ಒಂದೊಂದು ನುಡಿಯಲ್ಲಿ ಸಾರವತ್ತಾಗಿ ನಿರೂಪಿಸಿದ್ದಾರೆ. ಮುಂದೆ ಮಂತ್ರಯೋಗದ ವಿವರಣೆ ಬರುತ್ತದೆ. ಮೂಲಮಂತ್ರ ಜಪದಿಂದ ಆಂತರಿಕ ಶಕ್ತಿಯನ್ನು ಜಾಗ್ರತಗೊಳಿಸುವ ಕ್ರಮ ಇಲ್ಲಿ ನಿರೂಪಿತವಾಗಿದೆ. ಅದರ ಹೆಚ್ಚು ವಿವರಗಳಿಗೆ ಹೋಗದೆ ಲಯಯೋಗಕ್ಕೆ ಬರುತ್ತಾರೆ. ಇದು ಮಂತ್ರಯೋಗದ ಮುಂದಿನ ಹೆಜ್ಜೆ. ಮಂತ್ರಜಪದಿಂದ 'ಮನೋಲಯ'ವಾಗು ವುದೇ ಇದರ ಗುರಿ. "ಪಡೆದು ಜಪಿಸಿ ನೋಡಿ ಕೇಳಿ ನೆನೆದು ನಿಜದೊಡಗೂಡಿ ಸುಖಿಸ ಬಲ್ಲೊಡೆ ಮುಕ್ತನಹನು"–ಎಂಬ ಮಾತು ಇದರ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ಮನಸ್ಸಿನ ಸಂಕಲ್ಪ ವಿಕಲ್ಪಗಳನ್ನು ಕಳೆದು, ಅಲ್ಲಿ "ನಿಮಿಷವಾಗಲಿ ನಿಮ್ಮ ನೆನವು ನಿಂದೊಡೆ ಮುಕ್ತಿ| ಸಮನಿಸದಿಹುದೆ ಶಂಕರಯೋಗಿ ಜನ ವಂದ್ಯ" ಎಂಬುದು ಇದರ ಮುಖ್ಯ ಸೂತ್ರ. ಆದರೆ ಮನಸ್ಸಿಗೆ ಈ ಶಕ್ತಿಯನ್ನು ತಂದುಕೊಡುವುದು ಹೇಗೆ? ಮನಸ್ಸನ್ನು ಯೋಗ ಸಾಧನೆಯ ಕೈದುವನ್ನಾಗಿ ಮಾಡಿಕೊಳ್ಳುವುದು ಹೇಗೆ?–ಇದನ್ನು ನಿಜಗುಣರು ಅತ್ಯಂತ ಮನೋಜ್ಞವಾದ ಹಾಡಿನಲ್ಲಿ ಹೀಗೆ ಹೇಳಿದ್ದಾರೆ:

> ಮನವೆಂಬ ಗಿಳಿಯನೊಯ್ಯಾರದೊಳೋವಿ ಮ–|
> ಲ್ಲನೆ ಮುದ್ದು ನುಡಿಗಲಿಸೆಲೆಮಾನಿನಿ ||ಪ||

ಎನ್ನುವ ಈ ಹಾಡಿನ ಪ್ರಾರಂಭವೇ ತುಂಬಾ ಅರ್ಥವತ್ತಾಗಿದೆ. ಮನಸ್ಸು ಒಂದು ಗಿಳಿ, ಅದಕ್ಕೆ ಬಹಳ ಪ್ರೀತಿಯಿಂದ ಮೈದಡವಿ ಮುದ್ದು ನುಡಿಯನ್ನು ಕಲಿಸಬೇಕು. ಅದರ

ಮೇಲೆ ಬಲಾತ್ಕಾರ ಸಲ್ಲದು. ಅದರ ರಹಸ್ಯವನ್ನರಿಯುವ ಬುದ್ಧಿವಂತಿಕೆಬೇಕು–ಎಂಬ ಮಾತಿನಲ್ಲಿ ಮನಸ್ಸಿನ ಸಹಜ ಸ್ವರೂಪವನ್ನೇ ಬಯಲಿಗೆಳೆದಿದ್ದಾರೆ. ಮನಸ್ಸನ್ನು ಅಸಹಜ ವಾಗಿ ಒತ್ತಾಯದಿಂದ ನಿಗ್ರಹಿಸುವುದು ಸಾಧ್ಯವಿಲ್ಲ. ಅದನ್ನು ಮೇಲಿನಿಂದ ಒತ್ತಿದರೆ ಅದು ಕೆಳಗಿನಿಂದ ಅಷ್ಟೇ ಪ್ರಮಾಣದಲ್ಲಿ ಪುಟಿಯುತ್ತದೆ. 'Action and reaction are equal and opposite' ಎನ್ನುವ ಮಾತಿನ ಸತ್ಯವನ್ನು ಇಲ್ಲಿ ಮನಗಾಣ ಬಹುದು. ಈ ಮೇಜನ್ನು ನಾನು ಗುದ್ದಿದರೆ ಈ ಮೇಜೂ ನನ್ನ ಕೈಯನ್ನು ಗುದ್ದುತ್ತದೆ. ಜೋರಾಗಿ ಗುದ್ದಿದರೆ ಅದೂ ಅಷ್ಟೇ ಜೋರಾಗಿ ಹಿಂದಿರುಗಿಸುತ್ತದೆ. ಈ ಮಾತು ಮನಸ್ಸಿಗೂ ಅನ್ವಯಿಸುತ್ತದೆ. ನೀವೀಗ ಸುಮ್ಮನಿದ್ದೀರಿ. ನಾನು ನಿಮ್ಮ ಮೇಲೆ ಒತ್ತಡ ವನ್ನು ತಂದು 'ನೀವಾರೂ ಆ ಕಡೆ ನೋಡಕೂಡದು'–ಎಂದು ಹೇಳಿದೆನೆಂದಿಟ್ಟುಕೊಳ್ಳಿ. ಆಗ ನೀವೆಲ್ಲಾ ಆ ಕಡೆ ನೋಡದೇ ಬಿಡುತ್ತೀರಿ. ನಾನು ಬಲಾತ್ಕಾರ ತಂದಷ್ಟು ನಿಮ್ಮ ಹಠ ಹೆಚ್ಚಾಗುತ್ತದೆ. ಮನಸ್ಸನ್ನು ನಿಗ್ರಹಿಸುವ ಪ್ರಯತ್ನ ಇಂತಹ ಬಲಾತ್ಕಾರದಿಂದ ವ್ಯರ್ಥವಾಗುತ್ತದೆ. ಅದಕ್ಕೆ ಬದಲು ಬುದ್ಧಿ ಅಹಂಕಾರಗಳಿಂದ ಕೆಳಕ್ಕೆ ಇಳಿದು ಚಿತ್ತಶುದ್ಧಿಗೆ ಕಾರಣವಾದರೆ ಮೇಲಿನ ಮನಸ್ಸು ತಾನಾಗಿಯೇ ಹೊಯ್ದಾಟವನ್ನು ನಿಲ್ಲಿಸುತ್ತದೆ. ಇದನ್ನೇ ನಿಜಗುಣರು ಮೇಲಿನ ಮಾತಿನಲ್ಲಿ ಅರ್ಥವತ್ತಾಗಿ ಹೇಳಿದ್ದಾರೆ. ಅನಂತರ ಆ ಗೀತೆ ಸಾಂಕೇತಿಕವಾದ ಆಂತರಿಕ ರೂಪಕದಿಂದ ಮುಂದುವರಿಯುತ್ತದೆ. ಯೋಗ ಪರಿಭಾಷೆಯಲ್ಲಿ ಅದನ್ನು ಕೊನೆಯವರೆಗೂ ನಿರ್ವಹಿಸಿ ಅಪೂರ್ವವಾದ ಪ್ರತಿಮೆ ಯೊಂದನ್ನು ನಿರ್ಮಿಸಿದೆ. ಅದರ ವಿವರಗಳು ಇಲ್ಲಿ ಅಪ್ರಸ್ತುತ.

ಇಂತಹ ಮನೋಲಯ ಯೋಗದ ಇನ್ನೂ ಕೆಲವು ಹಾಡುಗಳು ಇಲ್ಲಿ ಬರುತ್ತವೆ. ಒಂದು ಹಾಡಿನ ಈ ಕೊನೆಯ ನುಡಿಯನ್ನು ನೋಡಬಹುದು.

ಬಚ್ಚಬರಿಯ ಚಿತ್ಸುಧಾರಸಾಂಬು ನಿಧಿಯೊಳು। ಮುಳುಗಿ।
ಎಚ್ಚರಿಲ್ಲದಮಳ ಸುಖದ ಸುಗ್ಗಿ ವಡೆವುತ॥
ಬಿಚ್ಚಿ ಬೇರೆದೋರದಂತೆ ಶಂಭುಲಿಂಗವನಪ್ಪಿ।
ಎಚ್ಚರಡಗಿದಚ್ಚ ಪರವಶದೊಳು ನಿಂದನು॥

ಧ್ಯಾನದಲ್ಲಿ ಲೀನವಾಗಿ ಕ್ರಮೇಣ ಅಂತರಂಗದಲ್ಲಿ ಇಳಿಯುತ್ತಾ ಕೊನೆಯಲ್ಲಿ ಪಡೆಯುವ ಅನಿರ್ವಚನೀಯ ಅನುಭಾವದ ನಿಲವನ್ನು ಇಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. 'ಚಿತ್ಸುಧಾರಸಾಂಬುನಿಧಿಯೊಳು ಮುಳುಗಿ' ಶಂಭುಲಿಂಗವನ್ನು ಬಿಚ್ಚಿ ಬೇರಾಗದಂತೆ ಅಪ್ಪಿ, ಎಚ್ಚರ ಅಡಗಿದ ಅಚ್ಚಪರವಶದೊಳು ನಿಂತ ಬಚ್ಚಬರಿಯ ಬೆಳಗಿನ ಸ್ವರೂಪವನ್ನು ಹೇಳಿರುವ ಈ ರೀತಿ ಮಾತನ್ನು ಜ್ಯೋತಿರ್ಲಿಂಗವನ್ನಾಗಿಸಿದ ಅಲ್ಲಮನ ನೆನಪನ್ನು ತರುತ್ತದೆ.

ಯೋಗಿ ನಿಜಾನಂದದೊಳು ನುಡಿಸುವ ವೀಣೆ
ರಾಗ ರಸದ ತರಂಗಿಣಿ ನೋಡು, ರಮಣಿ

ಎಂಬ ಗೀತ, ದೇಹವನ್ನೇ ವೀಣೆಯನ್ನಾಗಿ, ಕರಣವೆಂಬ ಅಂಗುಲಿಯಿಂದ ವರ ಶಂಕರಾಭರಣವನ್ನು ಮೇಳೈಸುವ ನಾದಯೋಗದ ರೂಪಕದಲ್ಲಿ 'ಲಯಯೋಗ'ವನ್ನು ಲೀನಗೊಳಿಸಿದೆ.

ಇಲ್ಲಿಂದ ಮುಂದೆ ಹಠಯೋಗಕ್ಕೆ ಬರುತ್ತಾರೆ. ಅಷ್ಟಾಂಗಗಳು, ಆಸನಗಳು, ಬಂಧಗಳು–ಈ ಮೊದಲಾದವುಗಳ ರಹಸ್ಯವನ್ನು ಒಂದೊಂದು ಹಾಡಿನಲ್ಲಿ ಹೇಳುತ್ತಾ, ಇದರ ಹಿಂದಿರುವ ಆಂತರಿಕ ಸತ್ವಕ್ಕೆ ಹೆಚ್ಚು ಮಹತ್ವಕೊಟ್ಟಿರುವುದು ಕಾಣುತ್ತದೆ. ಆದ್ದರಿಂದಲೇ ಇದರ ಬಹಿರಂಗದ ದೈಹಿಕ ಸಾಧನೆ ಮತ್ತು ಅದರಿಂದ ದೊರೆಯುವ ಸಿದ್ಧಿಗಳು ಇಲ್ಲಿ ಪ್ರಮುಖವಾಗಿಲ್ಲ. ಇದರ ಸಾರಸರ್ವಸ್ವವನ್ನು ಒಂದೆರಡು ಹಾಡುಗಳಲ್ಲಿ ಅವರು ಹಿಡಿದಿಟ್ಟಿರುವ ರೀತಿ ಮಹಾಯೋಗಿಯಾದ ನಿಜಗುಣರ ಸಾಕ್ಷಾತ್ ಅನುಭವಕ್ಕೆ ಸಾಕ್ಷಿಯಾಗಿದೆ.

ಯೋಗಿಯೆಂದೆನಿಸೆನ್ನನು। ವಿಷಯ ಸುಖ।
ಭೋಗಿಯೆನಿಸದ ಜಗದೊಳು। ಶಿವನೆ॥

ಎಂಬ ಹಾಡಿನಲ್ಲಿ ವಿಷಯಸುಖದಿಂದ ವಿಮುಖವಾಗಿ ಯೋಗಸಾಧನೆಯಲ್ಲಿ ಮುನ್ನಡೆವ ರಹಸ್ಯಮಾರ್ಗವನ್ನು ನಿರೂಪಿಸುತ್ತಾರೆ. ಹೀಗೆ ಮುನ್ನಡೆದು ಹೋದಂತೆಲ್ಲಾ ಉಂಟಾಗುವ ಯೌಗಿಕಾನುಭವಗಳನ್ನು ಇನ್ನೊಂದು ಹಾಡಿನಲ್ಲಿ ಬೆಳೆಸಿಕೊಂಡು ಹೋಗಿದ್ದಾರೆ. "ದೇವ ನೀನುಪ್ಪವಡಿಸಾ" ಎಂಬ ಪಲ್ಲವಿಯಿಂದ ಕೂಡಿದ ಆ ಹಾಡಿನ ಮೊದಲನೆಯ ನುಡಿ ಹೀಗಿದೆ:

ಪರನಾದವೆಂಬ ಮುಂಗೋಳಿ ಮಿಗೆ ಕೂಗುತಿದೆ।
ಪರಬಿಂದುವೆಂಬ ಮೂಡಣಗೆಂಪು ಮಸಗುತಿದೆ।
ಚಿರಕಾಲದಿಂದಡಸಿದಜ್ಞಾನವೆಂಬ ತಮವಿರದಂಜಿ ಪರೆವುತಿದೆ॥
ಭರದಿ ಕುಂಡಲಿಯೆಂಬ ತರಣಿ ತಲೆದೋರುತಿದೆ।
ನೆರೆದುಲಿವುತಿದೆ ವಿಧಿಗಳೆಂಬ ಖಗರಾಶಿ ಬಹು।
ತರಹೃದಯವೆಂಬ ವಾರಿಜವಲರುತಿದೆ ತಳುವದನಘ ನೀನುಪ್ಪವಡಿಸಾ॥

ಹೀಗೆ ಯೋಗಾನುಭವ ವಿವಿಧ ಹಂತಗಳನ್ನು ಸಾಂಕೇತಿಕವಾಗಿ ನಿರೂಪಿಸುತ್ತ ಐದು ನುಡಿಗಳವರೆಗೂ ಇದು ಬೆಳೆಯುತ್ತದೆ.

ಹಠಯೋಗದ ಮುಂದುವರಿದ ಪೂರ್ಣರೂಪವೇ ರಾಜಯೋಗ. ಇದು ದೇಹ ಮನಗಳನ್ನು ದಾಟಿ ಇನ್ನೂ ಹೆಚ್ಚಿನ ಅಂತರನುಭವದ ಆಳಕ್ಕಿಳಿಯುತ್ತದೆ. ಅದನ್ನು ಈ ಚಿಕ್ಕ ಹಾಡಿನಲ್ಲಿ ಹೀಗೆ ಒಡಮೂಡಿಸಿದ್ದಾರೆ:

ಯೋಗಿಗಲ್ಲದೆ ದೊರೆವುದೆ ಪರತರ ಮುಕ್ತಿ ॥ಪ॥
ಬಿರಸುಖಾಸನತೆ ಶರೀರದ ಸಸಿನತೆ।
ಕರಣನಿಕರದ ನಿಶ್ಚಲತೆ॥

ಮರುತ ಮನ ದಿಟ್ಟಿಗಳೊಂದುಗೂಡುತೆ।
ವರ ಹೃದಯಾನು ಸಂಧಾನತೆ ॥೧॥

ದೇಹ ಇಂದ್ರಿಯಗಳ ನಿಶ್ಚಲತೆಯಿಂದ ವಾಯು ಮನ ದಿಟ್ಟಿಗಳು ಒಂದುಗೂಡಿ ಹೃದಯ ಸಂಧಾನತೆಯುತ್ತ ಇಲ್ಲಿ ತಿರುಗುತ್ತವೆ. ಈ ದೃಷ್ಟಿಯಿಂದಲೇ ಇದು ಹಿಂದಿನ ಎಲ್ಲ ಯೋಗಗಳಿಗಿಂತ ಮುಂದುವರಿದುದು ಮತ್ತು ಮಾನವನ ಎಲ್ಲ ಶಕ್ತಿಗಳ ಸಮನ್ವಯ ರೂಪವಾದದ್ದು. ಆ ಅನುಭವ ಹೀಗೆ ಮುಂದುವರಿಯುತ್ತದೆ:

ಮಂಡಲತ್ರಯದ ತಾರಾಗ್ರದ ನಭದೊಳು।
ಖಂಡ ಚಂದ್ರೋದಯವಾಗಲು॥
ಕಂಡು ತದೀಯ ಸುಧೆಯನು ದಣ್ಣನೆದಣಿ।
ದುಂಡು ನಿಜಾನಂದಲೀಯತೆ ॥೨॥

ಇದು ಕುಂಡಲೀನೀಯೋಗವೂ ಹೌದು. ಆ ಶಕ್ತಿ, ಸುಷುಮ್ನೆಯಿಂದ ಮೇಲೇರಿ ಸಹಾಸ್ರಾರಕ್ಕೇರಿದಂತೆಲ್ಲಾ ಉಂಟಾಗುವ ಯೌಗಿಕಾನುಭವದ ಒಂದು ರೂಪ ಇಲ್ಲಿದೆ. ಅದೇ ಇನ್ನೊಂದು ರೀತಿಯಲ್ಲಿ ಹೀಗೆ ಮುಂದುವರಿಯುತ್ತದೆ.

ಮೂರುವೊಳೆಯ ನಡುವಣ ನಾದವನು ಕೇಳಿ।
ಮೀರುತದನು ವಾಗೀಶ್ವರಿಯೊಳು॥
ಬೇರಾಗದೊಂದೆನಿಸಿದ ಚಿತ್ತಿನೊಡನೊಂದಿ।
ತೋರುವ ಶಂಭುಲಿಂಗೈಕ್ಯತೆ ॥೩॥

ಎಂದು ಈ ಹಾಡನ್ನು ಮುಕ್ತಾಯಗೊಳಿಸಿದ್ದಾರೆ. ರಾಜಯೋಗದ ವಿವರಗಳಿಗೆ ಇಲ್ಲಿ ಹೋಗದಿದ್ದರೂ ಅದರ ಕೇಂದ್ರ ಸತ್ವವನ್ನು ಅಡಕವಾದ ಮಾತುಗಳಲ್ಲಿ ಇಲ್ಲಿ ಹಿಡಿದಿಟ್ಟಿದ್ದಾರೆ.

ಇದು ಅವರ ಯೋಗಪ್ರತಿಪಾದನಾಸ್ಥಲದಲ್ಲಿ ಕಾಣುವ ಒಂದು ವೈಶಿಷ್ಟ್ಯ. ಯೋಗಗಳ ಪಾರಿಭಾಷಿಕ ವಿವರಗಳ ನಿರೂಪಣೆಗೆ ಇಲ್ಲಿ ಹೋಗುವುದಿಲ್ಲ. ಅವೆಲ್ಲವುಗಳ ಸತ್ವವನ್ನು ಅರಗಿಸಿಕೊಂಡು ಅದನ್ನು ಅನುಭವಪೂರ್ವಕವಾಗಿ ನಿರೂಪಿಸುತ್ತಾರೆ. ಯೋಗಗಳ ಬೌದ್ಧಿಕವಾದ ವಿವರಣೆ ವಿವೇಚನೆಗಳು ಯೋಗಶಾಸ್ತ್ರಗಳಲ್ಲಿ ನಮಗೆ ಸಿಕ್ಕುತ್ತದೆ. ಇಲ್ಲಿ ನಿಜಗುಣರು ಹೇಳಬೇಕೆಂದು ಉದ್ದೇಶಿಸಿರುವುದೂ ಆಶಿಸಿರುವುದೂ ಅದನ್ನಲ್ಲ; ಮಹಾದಾರ್ಶನಿಕ ಯೋಗಿಗೆ ಮಾತ್ರ ಸಾಧ್ಯವಾಗಬಹುದಾದ ಅನುಭಾವಿಕ ನಿಲವನ್ನು, ಆದ್ದರಿಂದಲೇ ಕೈವಲ್ಯಪದ್ಧತಿ ಶಾಸ್ತ್ರಗ್ರಂಥವಾಗದೆ, ಅನುಭಾವಗ್ರಂಥವಾಗಿದೆ. ದಾರ್ಶನಿಕರಾಗಿ ಯೋಗಾನುಭವವನ್ನು ಕಣ್ಣ ಮುಂದೆ ಕಂಡಿದ್ದಾರೆ:

ಕಣ್ಣ ಮುಂದೆ ಕಾಣಿಸುತಿದೆ ಪರವಸ್ತುವಿದ—।
ನಣ್ಣಗಳರಸಿ ಬೇರೆ ಬಳಲುವರವೇಕೆ ॥೪॥

ಎಂಬ ಗೀತೆಯಲ್ಲಿ ಸಾಕ್ಷಾತ್ತಾಗಿ ಅವರು ಕಾಣುತ್ತಿರುವ ಯೋಗವೈಭವದ ಚಿತ್ರ ಮೂಡಿ ನಿಂತಿದೆ. ಹಾಗೇ ರಾಜಯೋಗವನ್ನು ಕುರಿತ ಇನ್ನೂ ನಾಲ್ಕಾರು ಹಾಡುಗಳು ಅದರ ಸ್ವರೂಪವನ್ನು ಇನ್ನಷ್ಟು ಖಚಿತಪಡಿಸುತ್ತವೆ.

ಈ ರಾಜಯೋಗದನಂತರ ಯೋಗಾನುಭವದ ತುತ್ತತುದಿಯಲ್ಲಿ ಶಿವಯೋಗವನ್ನು ಹೇಳುವುದು ಅರ್ಥವತ್ತಾಗಿದೆ. ಇದುವರೆಗಿನ ಎಲ್ಲ ಯೋಗಗಳ ಸತ್ವವನ್ನೂ ಇಷ್ಟಲಿಂಗವನ್ನೂ ಕೇಂದ್ರವಾಗುಳ್ಳ ಉಪಾಸನೆಯ ವಿಧಾನವನ್ನು ಹೇಗೆ ಸಹಜವಾಗಿ ಅಳವಡಿಸಿಕೊಳ್ಳಬಹುದೆಂಬುದನ್ನು ಇಲ್ಲಿ ಮುಖ್ಯವಾಗಿ ಗುರುತಿಸಬೇಕು.

ಪರತರ ಶಿವಲಿಂಗವೆಳಸಿ ನಿನಗಾಗಿ
ಕರಕಂಜದೊಳು ಕಾಣಿಸಿತು। ಯೋಗಿ ಯಜಿಸು ॥ಪ॥

ಎಂಬ ಹಾಡಿನಲ್ಲಿ ಇಡೀ ಬ್ರಹ್ಮಾಂಡದ ಶಕ್ತಿಯೇ ಇಷ್ಟಲಿಂಗರೂಪವಾಗಿ ಕರಸ್ಥಲಕ್ಕೆ ಬಂದಿರುವುದರ ರಹಸ್ಯವನ್ನು ಹೇಳುತ್ತಾರೆ. ಅದು ಆಂತರಿಕ ಉಪಾಸನೆಯ ಕಡೆಗೆ ತಿರುಗಿ ಪ್ರಾಣಲಿಂಗವಾಗುತ್ತದೆ. "ಪ್ರಾಣಲಿಂಗವಿದನು ಗುರುವಿನಾಣತಿಯೊಳು ಕೇಳಿ ನೋಡಿ। ಮಾಣದೇಕಚಿತ್ತದಿಂದ ಜಪನಿಪನೆ ಕೃತಾರ್ಥನು" ಎಂಬ ಹಾಡಿನಲ್ಲಿ ಪ್ರಾಣವೇ ಲಿಂಗವಾಗುವುದರ ಪರಿವರ್ತನೆಯ ಪೂಜೆ ಧ್ವನಿತವಾಗಿದೆ. ಅನಂತರ ಭಾವಲಿಂಗದ ಪೂಜೆ. ಹೀಗೆ ಶರಣರ ಷಟ್‌ಸ್ಥಲ ವ್ಯವಸ್ಥೆಯಲ್ಲಿ ಕಾಣುವ ಇಷ್ಟ, ಪ್ರಾಣ ಮತ್ತು ಭಾವಲಿಂಗಗಳ ಮಾತು ಇಲ್ಲಿ ಬರುತ್ತದೆ. ಅವುಗಳ ವಿವೇಚನೆಯಲ್ಲಿ ತಮ್ಮದೇ ಆದ ಮಾರ್ಗವನ್ನು ನಿಜಗುಣರು ಅವಲಂಬಿಸಿದ್ದರೂ ಶಿವತತ್ವದ ಹಿನ್ನೆಲೆ ಎರಡಕ್ಕೂ ಸಮಾನವಾಗಿದ್ದು ಬಹುಶಃ ಶೈವಾಗಮಗಳ ಮೂಲಪ್ರೇರಣೆಯನ್ನು ಪಡೆದಿರಬೇಕೆನ್ನಿಸುತ್ತದೆ. ಶರಣರ ಪೂರ್ಣಯೋಗದ ಸಕ್ರಿಯಾತ್ಮಕವಾದ ಬಹುಮುಖ ಪ್ರತಿಪಾದನೆಯನ್ನು ಇಲ್ಲಿ ಕಾಣಲಾಗದಿದ್ದರೂ ಮಹಾಶಿವಯೋಗಿಯೊಬ್ಬನ ಅಂತರ್‌ದರ್ಶನದ ಅನಂತ ಅನುಭವ ಇಲ್ಲಿ ಹೊರಹೊಮ್ಮಿದೆ:

ಮಾಡು ಶಿವಲಿಂಗಪೂಜೆಯನಂತರಂಗದೊಳು।
ನೋಡಿ ಸುಖಮಯ ಸಾಧನಂಗಳಿಂದೊಲಿದು ॥ಪ॥

ಎಂಬ ಹಾಡಿನಲ್ಲಿ ಆಹ್ವಾನ, ಅರ್ಘ್ಯ ಪಾದ್ಯ ಅಭಿಷೇಕಾದಿ ಪೂಜಾಪರಿಕರಗಳೆಲ್ಲಾ ಪರಿವರ್ತಿತವಾಗಿ ಸಾಂಕೇತಿಕ ಶಕ್ತಿ ಸಾಧನಗಳಾಗಿವೆ. "ಲೇಸೆನಿಸುವ ಶಿವಯೋಗವಿವೈಧನಭ್ಯಾಸಮಂ ಮಾಡಲು। ಮೋಸವಳಿದು ತನಗಚಲಿತ ಸುಖವೆ ನಿವಾಸವಾಗಿಹುದು" ಎಂದು ಇನ್ನೊಂದು ಹಾಡಿನಲ್ಲಿ ಶಿವಶಕ್ತಿ ಕೇಂದ್ರವಾದ ಯೋಗವಿಕಾಸದ ಐದು ಹಂತಗಳನ್ನು ಅರ್ಥವತ್ತಾಗಿ ಸೂಚಿಸುತ್ತಾರೆ. ಶರಣಸತಿ, ಲಿಂಗಪತಿ ಭಾವನೆಯ ಅಲೌಕಿಕ ಮಧುರ ಭಕ್ತಿಯನ್ನು ಪ್ರತಿ ಬಿಂಬಿಸುವ:

ಸತಿಪತಿಗಳಿವರ ಸಮರತಿಸುಖದ ಬಾಳುವೆಗೆ।
ಪ್ರತಿಯುಂಟೆ ಲೋಕದೊಳ ನೋಡು ಲಲಿತಾಂಗಿ।

ಎಂಬ ಹಾಡು ಶರಣಸ್ಥಲದ ಆನಂದಭಕ್ತಿಯು ಸಾಕಾರರೂಪವಾಗಿ ನಿಂತಂತಿದೆ. ಅನಂತರ "ಯೋಗಿಗೆ ಪಂಚಾವಸ್ಥೆಗಳುಂಟು" ಎಂದು ಅವುಗಳನ್ನು ಮೀರಿನಿಲ್ಲುವ ಯೌಗಿಕ ಶಕ್ತಿಯ ರಹಸ್ಯವನ್ನು ಹೇಳಿ ಯೋಗಪ್ರತಿಪಾದನಸ್ಥಲವನ್ನು ಮುಕ್ತಾಯಗೊಳಿಸುತ್ತಾರೆ. ಯೋಗಸಾಧನೆಯ ಶಾಸ್ತ್ರೀಯ ವಿವರಗಳ ದೃಷ್ಟಿಯಿಂದಲ್ಲದಿದ್ದರೂ ಯೋಗಸತ್ವವನ್ನು ಕರಗತಗೊಳಿಸಿಕೊಳ್ಳುವ ಅನುಭವದ ದೃಷ್ಟಿಯಿಂದ ಇದು ಯೋಗಕ್ಕೆಹಿಡಿಯುಂತಿದೆ.

ಮುಂದಿನದು ಜ್ಞಾನಪ್ರತಿಪಾದನಸ್ಥಲದಿಂದ ಶಿವಕಾರುಣ್ಯಸ್ಥಲದಿಂದ ಬೆಳೆದು ಬಂದ ಸಾಧಕನ ಈ ಹಂತದಲ್ಲಿ, ಇದುವರೆಗಿನ ಭಕ್ತಿ ಕರ್ಮಗಳೆಲ್ಲಾ ಕೇವಲಜ್ಞಾನ ದಲ್ಲಿ ಪರ್ಯವಸಾನವಾಗುತ್ತವೆ. ನಿಜಗುಣರು ಈ ಜ್ಞಾನಮಾರ್ಗಕ್ಕೆ ವಿಶೇಷ ಮಹತ್ವ ಕೊಟ್ಟಿದ್ದಾರೆ. ಅವರ ಇತರ ಕೃತಿಗಳಾದ 'ಪರಮಾನುಭವಬೋಧೆ' 'ಅನುಭವಸಾರ' 'ಪಾರಮಾರ್ಥ ಪ್ರಕಾಶಿಕೆ' 'ಪರಮಾರ್ಥಗೀತೆ'–ಈ ಮೊದಲಾದುವುಗಳಲ್ಲಿಯೂ ಅವರ ಈ ಮನೋಧರ್ಮವನ್ನು ಕಾಣಬಹುದು.

ನಂಬು ಜ್ಞಾನವನೆ ಕರ್ಮವೆಂಬ ಜಾಲದೊಳು ಸಿಲ್ಕಿ
ಹಂಬಲಿಸದಿರು ಮುಕ್ತಿಯಂ ಬಯಸಿ ಮನುಜ||

ಎಂಬ ಈ ಹಾಡಿನಲ್ಲಿ ಅದನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಿದ್ದಾರೆ. "ಆರು ನಾನೆಂದು ವಿಚಾರಿಸು" ಎಂದು ಪ್ರಾರಂಭದಲ್ಲಿಯೇ ಹೇಳಿದ ಮಾತು ಇದಕ್ಕೆ ತಳಹದಿ. ಈ ಜಿಜ್ಞಾಸೆ ಯಿಂದ ತಾನು ಶಿವಸ್ವರೂಪನೆಂಬುದನ್ನು ಶಿವಕಾರುಣ್ಯ ಸ್ಥಲದಲ್ಲಿಯೇ ಸಾಧಕ ಕಂಡು ಕೊಳ್ಳುತ್ತಾನೆ. ಆದರೆ ಅಲ್ಲಿ ತಾನು ಶಿವನೆನ್ನುವುದು ಕೇವಲ ನಂಬಿಕೆಯ ಮಾತು; ಅಥವಾ ಬೌದ್ಧಿಕ ಅರಿವು ಅದೇ ಜ್ಞಾನದ ಕೊನೆಯಲ್ಲ, ಅದು ಮೊದಲನೆಯ ಹಂತ, ಯಾವುದನ್ನು ತಾನು ಬೌದ್ಧಿಕವಾಗಿ ಕಂಡುಕೊಳ್ಳುತ್ತಾನೆಯೋ ಕೊನೆಗೆ ತಾನೇ ಅದು ಆಗಿ ಪರಿಣಮಿಸುವುದು ಜ್ಞಾನದ ಕೊನೆಯ ನಿಲವು. ಅದನ್ನು ಪಡೆಯುವುದಕ್ಕೆ ಭಕ್ತಿ ಕರ್ಮಗಳು ಸಹಾಯಕವಾಗಬೇಕು. ಜ್ಞಾನದ ಪ್ರಭೆ ಇಲ್ಲದೆ ಹೋದರೆ ಅವು ಜಡ ವಾಗುತ್ತವೆ; ಬಂಧಕವಾಗುತ್ತವೆ. ಅದನ್ನೇ ಈ ಹಾಡಿನಲ್ಲಿ ಬಹಳ ಖಚಿತವಾಗಿ ಹೇಳಿದ್ದಾರೆ:

ಆಗಮ ಪುರಾಣ ವೇದಪೂಗದೊಳು ವಿಧಿಸಿದ|
ಯಾಗ ದಾನ ಜಪ ನೀತಿ ಯೋಗ ಪೂಜಾದಿಗಳು||
ಈಗ ಜ್ಞಾನೋದಯ ಮಾತ್ರವಾಗಲದರೊಳು ಕೋಟಿ|
ಭಾಗಯೊಳೊಂದಕ್ಕೆ ಸಮವಾಗುತಿರುವುದರಿಂದ ||೧||

ಜ್ಞಾನಸೂರ್ಯನ ಮುಂದೆ ಆಗಮ ಪುರಾಣಾದಿಗಳಲ್ಲಿ ಹೇಳಿದ ಕರ್ಮಗಳೆಲ್ಲಾ ಶರಣರು ಹೇಳುವಂತೆ "ನುಚ್ಚು ತೌಡು ಕಾಣಿಭೋ"; ಅವು ಚಿತ್ರದ ರೂಪು, ಚಿತ್ರದ ಕಬ್ಬು, ಅಪ್ಪಿದಡೆ ಸುಖವಿಲ್ಲ, ಮೆಲಿದರೆ ರುಚಿಯಿಲ್ಲ. ಜ್ಞಾನವೊಂದೇ ಸಾರ್ಥಕತೆಯನ್ನು ತಂದು ಕೊಡುವ ಚೈತನ್ಯಶಕ್ತಿ:

ತನುವ ದಂಡಿಸಬೇಡ। ಮನವ ನಿಲ್ಲಿಸಬೇಡ।
ಧನವ ನೀಗಿರಬೇಡ ಮನೆಮಾರು ತೊರೆದು॥
ವನವಾಸಬೇಡ ತನಗಿನಿತು ತತ್ವಜ್ಞಾನ ಸಂ।
ಜನಿಸಲದಘವೆಲ್ಲವನು ಕೆಡಿಪುದದರಿಂದ ॥೨॥

ಎಂಬುದನ್ನು ಈ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಈ ಎಲ್ಲ ಸಾಧನೆ ಬೇಡವೆಂದಲ್ಲ. ಆದರೆ ಅವೆಲ್ಲಾ ತಮಗೆ ತಾವೇ ಇಲ್ಲ. ಕೇವಲ ಯಾಂತ್ರಿಕವಾಗಿ ಜಡವಾಗಬಹುದಾದ ಅವುಗಳಿಗೆ ಜೀವಂತಿಕೆಯನ್ನು ತಂದುಕೊಡುತ್ತದೆ-ಜ್ಞಾನ. ಅದನ್ನು ಹೀಗೆ ಹೇಳುತ್ತಾರೆ:

ಜ್ಞಾನವೇ ಮುಕ್ತಿಗೆ ಮಾರ್ಗವೇನು ಬೇರೊಂದಿಲ್ಲವೇದು।
ಮಾನನಿಧಿಯಾದ ಶ್ರುತಿ ನಾನ್ಯಃಪಂಥಾಯನಲು॥
ನೀನಿದನು ಬಿಡದಿರನೂನ ಶಂಭುಲಿಂಗದ ಸು।
ಜ್ಞಾನ ದೃಢಮಾಗೆ ಪರಮಾನಂದವಹುದದರಿಂದ ॥೩॥

ಇದು ಈ ಸ್ಥಲದಲ್ಲಿ ಉದ್ದಕ್ಕೂ ಕಾಣುವ ಮತ್ತು ಸಾಧನೆಗೆ ಶಿಖರಪ್ರಾಯವಾಗಿರುವ ಜ್ಞಾನಾಧಿಕ್ಯದೃಷ್ಟಿ ಇದನ್ನು ಎಷ್ಟು ಪರಿಯಲ್ಲಿ ಹೇಳಿದರೂ ನಿಜಗುಣರಿಗೆ ತೃಪ್ತಿಯಿಲ್ಲ.

ನನ್ನ ಸ್ವರೂಪವೇನೆಂಬುದನ್ನು ಅರಿಯುವುದಕ್ಕೆ ನಾನು ಅಲ್ಲಲ್ಲಿ ಅಲೆಯಬಾರದು, ನನ್ನ ಅಂತರಂಗದೊಳಕ್ಕೆ ಇಳಿಯಬೇಕು. ಅರಿವು ನನ್ನಲ್ಲಿಯೇ ತದ್ಗತವಾಗಿದೆ.

ನಿನ್ನೊಳಿಹುದು ಸತ್ಯಪದವದನನುಭವ।
ದಿಂ ನೋಡು ಮನುಜ ನೀನಹೆ ಮುಕ್ತನು॥

ಎಂದು ಮುಂತಾದ ಅನೇಕ ಮಾತುಗಳಿಂದ ಅದನ್ನು ಮನದಟ್ಟು ಮಾಡಿಕೊಡುತ್ತಾರೆ. "ನೋಡು ನೋಡು ನೀನೇ ಪರವೆಂದು" "ಭವಮಾಲೆಗೊಳಗಾದನೆಂಬುದೆ ಪುಸಿ ನಿನ್ನ ವಿವರಿಸಿ ನೋಡು ನೋಡೆಲೆ ಜೀವನೆ"-ಈ ಮುಂತಾದ ಮಾತುಗಳನ್ನು ಗಮನಿಸಬಹುದು. ಈ ತೋರಿಕೆಯ ಬಂಧನದಿಂದ ಬೇರಾಗಿ ಅಂತರಂಗದಲ್ಲಿ ಇಳಿದು ನೋಡಿದರೆ ಅಲ್ಲಿ ನೀನೇ ಪರತತ್ವಸ್ವರೂಪವಾಗಿ ಪ್ರಕಾಶಿಸುತ್ತೀಯೆ. ಆ ಅರಿವೇ ಅಲ್ಲಮಪ್ರಭು ಹೇಳುವಂತೆ "ಬಚ್ಚಬರಿಯ ಬೆಳಗು". ಹಿಂದೆ ಹೇಳಿದ ಯೋಗ ಸಾಧನೆಯೆಲ್ಲಾ ಈ ಅರಿವಿನಿಂದಲೇ ಪೂರ್ಣಗೊಳ್ಳುವುದು. ಈ ಅರಿವಿನ ಸರ್ವವ್ಯಾಪಕ ಸ್ವರೂಪವನ್ನು ಸುಂದರವಾದ ಈ ಹಾಡಿನಲ್ಲಿ ನಿರೂಪಿಸಿದ್ದಾರೆ:

ಅರಿವು ನೀನೆಂದು ಸದ್ಗುರು ಪೇಳೆ ತಿಳಿವನೆ। ಜಾಣರದೇವ
ಅರಿವಿನೊಳನ್ಯ ಕಲ್ಪನೆಗಳನುಳಿವನೆ। ಜಾಣರದೇವ ॥ಪ॥
ಅರಿವೆ ಪರಬ್ರಹ್ಮವೆಂದು ಭಾವಿಸುವನೆ। ಜಾಣರದೇವ।
ಅರಿವ ನಿತ್ಯನಿರ್ಮಳವೆಂದು ನೆನೆವನೆ। ಜಾಣರದೇವ॥

ಅರಿವೆ ನಿರ್ಗುಣ ನಿರ್ವಿಕೃತಿಯೆಂದು ಬಗೆವನೆ! ಜಾಣರದೇವ!
ಅರಿವಿಲ್ಲದುದೆ ಜಡವಹುದೆಂದು ಬಿಡುವನೆ! ಜಾಣರದೇವ ||೧||

ಹೀಗೆ ಬೆಳೆಯುತ್ತಾ ಹೋಗುತ್ತದೆ ಈ ಹಾಡು. 'ಅರಿವೆ ಸದಾನಂದ' 'ಅರಿವೆ ಸ್ವಯಂಜ್ಯೋತಿ' 'ಅರಿವೆ ವಿಶ್ವಾಶ್ರಯ' 'ಅರಿವೆ ವಿದ್ಯಾದೈವಗುರು'–ಇಂತಹ ಇನ್ನೂ ಅನೇಕ ಮಾತುಗಳು ಇಲ್ಲಿ ಬರುತ್ತವೆ: 'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ' ಎಂಬ ಮಾತಿನ ಮಹತ್ವವನ್ನು ಮನಗಾಣಿಸಿಕೊಡುತ್ತವೆ.

ಹೀಗೆ ಜ್ಞಾನವನ್ನು ಅನೇಕ ವಿಶೇಷಣಗಳಿಂದ ಹೊಗಳುವುದು ದೊಡ್ಡದಲ್ಲ. ಅದರ ಆಂತರ್ಯವನ್ನೂ ಎತ್ತರ ಬಿತ್ತರಗಳನ್ನೂ ಕಂಡುಕೊಳ್ಳುವ ಸೂಕ್ಷ್ಮಗ್ರಾಹಿಯಾದ ಸಾಧನೆ ಅತ್ಯಂತ ಅವಶ್ಯಕ. ಅವರ ಅನೇಕ ಹಾಡುಗಳಲ್ಲಿ ಜ್ಞಾನಪರಿಧಿಯ ಈ ವಿವಿಧ ಪದರಗಳು ಸುರುಳಿ ಬಿಚ್ಚುತ್ತಾ ಹೋಗುತ್ತವೆ: "ಆವ ಪುಣ್ಯದ ಫಲವಿದೆಂದು ಕುರುಹಿಡಬಹುದು| ಜೀವಭಾವವನುಳಿದ ನಿಜನಿಷ್ಠೆಯ"–ಎಂಬ ಮಾತಿನಲ್ಲಿ ಜೀವಭಾವವನ್ನು ಬಿಟ್ಟು ಶಿವಭಾವವನ್ನು ಅಳವಡಿಸಿಕೊಳ್ಳುವ ನಿಷ್ಠೆಯನ್ನು "ಜನನಾದಿ ವಿಕೃತಿ ಜೀವರಿಗೆ ತೋರಿದೊಡೆ ಅದನು ತನಗೆ ನಿಜವಲ್ಲವೆಂದರಿಂದ ಪರಿಣಾಮ"ವನ್ನು ಬೇರೆ ಬೇರೆ ಹಂತಗಳಲ್ಲಿ ಹೇಳುತ್ತಾರೆ "ಮೂರು ಗುಣ ವೃತ್ತಿಗೊಳಗಾದ ಜೀವತ್ರಯದ" ಸ್ವರೂಪ, ಜೀವನ ಏಳವಸ್ಥೆಗಳು, ತತ್ತ್ವಮಸಿ ವಾಕ್ಯಾರ್ಥ, ಸಗುಣ ನಿರ್ಗುಣ, ನಿಜಸುಖದ ನಿಲವು–ಈ ಮೊದಲಾದವುಗಳ ವಿವೇಚನೆ ಬೇರೆ ಬೇರೆ ಹಾಡುಗಳಲ್ಲಿ ಬೆಳೆದುಬಂದಿದೆ.

ತೋರದಯ್ಯೋ, ಸುಖ ತೋರದಯ್ಯೋ!
ಬೇರೆ ಬೇರೆ ಭಾವಿಸಿ ಬ್ರಹ್ಮಜ್ಞಾನವೊಂದಿಲ್ಲದವಗ ||ಪ||

ಎಂಬ ಗೀತೆ, ಜ್ಞಾನದಿಂದ ಲಭಿಸುವ ಪರಮಸುಖವನ್ನು ಅನುಭವಕ್ಕೆ ತಂದುಕೊಡುತ್ತದೆ.

ಈ ಪರಮಾನಂದದ ಅನುಭೂತಿಯಿಂದ ಉಂಟಾಗುವ ಆಂತರಿಕ ಪರಿವರ್ತನೆ, ಅದೇ ಶಿವಯೋಗದ ತುತ್ತತುದಿ. ಆ ನಿಲವಿನಲ್ಲಿ ಇಡೀ ಬ್ರಹ್ಮಾಂಡದ ಮತ್ತು ಅದರ ಒಂದು ಘಟಕವಾದ ಈ ಪಿಂಡಾಂಡದ ರಹಸ್ಯ ಅನುಭವಗೋಚರವಾಗುತ್ತದೆ. ತನ್ನ ದೇಹದಿಂದಲೇ ತಾನು ದೂರನಿಂತು ಅದರ ನಶ್ವರತೆಯನ್ನು ಕಾಣುವ ಸಾಕ್ಷೀ ಪ್ರಜ್ಞೆಯನ್ನು ಪಡೆಯುತ್ತಾನೆ.

ಘಟನೆ ಪುಸಿ ಘಟನೆ ನೀನು!
ದಿಟದಂತೆ ತೋರಿ ಮೋಹಿಪುದನೇನೆಂಬೆ ||ಪ||

ಎಂಬ ಹಾಡಿನಲ್ಲಿ ಅದು ಪ್ರತಿಬಿಂಬಿತವಾಗಿದೆ. "ಮೊದಲು ಮೃತ್ತಿಕೆಯ ಪಿಂಡದೊಳು ನೀನಿಲ್ಲ, ಪುಟ್ಟದ ಬಳಿಕೊಡೆದು ಧೂಳಾಗೆ ನೀನಿಲ್ಲ" ಹೀಗೆ ಆದಿಯಲ್ಲಿಯೂ ನೀನಿಲ್ಲ, ಅಂತ್ಯದಲ್ಲಿಯೂ ನೀನಿಲ್ಲ, "ಮಧ್ಯದೊಳಾವ ರೂಪು ನಿನಗೆ ನಿಜವಹುದು?" ಎಂದು ಕೇಳುವ ಪ್ರಶ್ನೆ ಮನೋಜ್ಞವಾಗಿದೆ. ಹಾಗೇ ಮುಂದುವರಿದ ಗೀತೆ "ಉಳ್ಳ ಮೃತ್ತಿಕೆಯಂತೆ

ಶಂಭುಲಿಂಗವೆ, ಜಗವೆಲ್ಲವು ನಿನ್ನಂದವಾದುದಿಂತರಿಯೆ" ಎಂದು ಸರ್ವಶಿವಭಾವ ಪರಿಭಾವನೆಯಲ್ಲಿ ಮುಕ್ತಾಯವಾಗುತ್ತದೆ.

ಇನ್ನೊಂದು ಕಡೆ ಈ ದೇಹವನ್ನೂ ಅದರಲ್ಲಿ ಸಾಕ್ಷಿಕನಾಗಿರುವ ತನ್ನನ್ನೂ ಅಕ್ಕಪಕ್ಕದಲ್ಲಿ ನಿಲ್ಲಿಸಿಕೊಂಡು ತುಲನೆ ಮಾಡುತ್ತಾರೆ ಆ ಗೀತೆಯ ರಚನೆಯೇ ವಿಶಿಷ್ಟವಾಗಿದ್ದು ಪರಿಣಾಮಕಾರಿಯಾಗಿದೆ. ಇಲ್ಲಿ ಆತ್ಮ, ದೇಹವನ್ನು ಸಂಬೋಧಿಸಿ ನುಡಿಯುತ್ತಾನೆ. ಇದುವರೆಗೂ ದೇಹದಲ್ಲಿಯೇ ಆತ ಇದ್ದವನು; ಈಗ ಅದರ ಮಿತಿಯನ್ನೂ ತನ್ನ ಸಹಜಸ್ವರೂಪವನ್ನೂ ಅರಿತು ಹೀಗೆ ಹೇಳುತ್ತಾನೆ:

ಎನ್ನೊಡನೆ ಸಮರಸವಿನ್ನು ಬೇಡೆಲೆ।
ಮುನ್ನಿನಂತೆ ತನುವೆ ನೀನನ್ಯವೆನಗೆ ॥ಪ॥
ಪುಸಿ ನೀನು, ನಿಜವಾನು, ಮಲವೆರಡರ
ಬೆಸುಗೆ ನೀನತಿ ಶುದ್ಧನಾನು ಕರ್ಮ
ವಿಸರದೇಳಿಗೆ ನೀನು, ಸಾಕ್ಷಿಯಾನು ಭಾ-।
ವಿಸೆ ಬಂಧವದು ನೀನು, ಮೋಕ್ಷವಾನು ॥೧॥

ಹೀಗೆ ಮುಂದುವರಿಯುತ್ತಾ ದೇಹಾತ್ಮಭೇದಗಳನ್ನು ಪದರಪದರವಾಗಿ ಬಿಡಿಸುತ್ತದೆ. ನೀನು ಜಡ, ನಾನು ಅಜಡ; ಬಹುರೂಪು ಪಡೆದಿಹೆ ನೀನು, ಏಕರೂಪ ನಾನು; ಕೆಡುವೆ ನೀನು, ನಿತ್ಯ ನಾನು; ಕಡೆಗೆ ನೀನಹೆ ಮಣ್ಣು, ನಾನೆ ವಸ್ತು-ಎಂದು ಮುಂತಾಗಿ ಹೇಳುವ ಮಾತುಗಳು ಮನನೀಯವಾಗಿವೆ. ಕೊನೆಯಲ್ಲಿ ಕೇಳುತ್ತಾರೆ-ನೀನು ಮಾಯೆ, ಮಾಯಾರಹಿತ ಶಂಭುಲಿಂಗ ನಾನು; "ಕಾಯವೇ ನೀನಾರು; ನಾನದಾರು?"-ಈ ಪ್ರಶ್ನೆ ನಮ್ಮನ್ನು ಅಂತರ್ಮುಖಗೊಳಿಸಿ ಮೌನದ ಆಳಕ್ಕೆ ಇಳಿಯುವಂತೆ ಮಾಡುತ್ತದೆ. ದೇಹಭಾವವಳಿದು ಜೀವಭಾವವನ್ನು ದಾಟಿ ಶಿವಭಾವದ ಪರಿಭಾವನೆಯಲ್ಲಿ ಮುನ್ನಡೆದ ಜ್ಞಾನಿಯ ನಿರ್ಲಿಪ್ತ ನಿಲವನ್ನು ಇಲ್ಲಿ ಕಾಣುತ್ತೇವೆ.

ಈ ನಿಲವನ್ನು ಪಡೆಯುವುದು ಸುಲಭವೇನೂ ಅಲ್ಲ. ಬಹುಜನ್ಮದ ಸುಕೃತದಿಂದ ಸಾಧಕ ಆ ಸಾಧನೆಯ ಮಾರ್ಗದಲ್ಲಿ ತೊಡಗಿ ಮೇಲೇರುತ್ತಾ ಬರುತ್ತಾನೆ. ನಿಜಗುಣರು ಇವರಲ್ಲಿ ಐದು ಬಗೆಗಳನ್ನು ಗುರುತಿಸಿರುವುದು ವಿಶಿಷ್ಟವಾಗಿದೆ. ಕರ್ಮಿ, ಮುಮುಕ್ಷು, ಅಭ್ಯಾಸಿ, ಅನುಭವಿ ಮತ್ತು ಆರೂಢ-ಎಂಬುದಾಗಿ ಅವರನ್ನು ಕರೆದಿದ್ದಾರೆ ಮತ್ತು ಅವರ ಲಕ್ಷಣವನ್ನು ಹೇಳಿದ್ದಾರೆ. ಹಿತ ಅಹಿತಗಳನ್ನರಿಯದೆ, ಭೋಗಾಭಿಲಾಷೆಯನ್ನು ಬಿಡದೆ, ಲೌಕಿಕಯುತನಾಗಿ ವರ್ತಿಸುತ್ತಾ "ಜನ್ಮಶತದಿಂದೆ ಮುಕ್ತನಹನೆ ಕರ್ಮಿಯಹನು." 'ಮುಮುಕ್ಷು'ವೆಂದರೆ ಸುಗತಿಯನೆಳಸುತ್ತಾ ಧಾರ್ಮಿಕವಾದ ಬಾಹ್ಯಕರ್ಮಗಳಲ್ಲಿ ನಿರತನಾಗಿ "ಮೂರು ಜನ್ಮದೊಳಗೆ ಮುಕ್ತಿ" ಪಡೆವವನು. ಆತ್ಮವೇ ನಿತ್ಯವೆಂದು ನಂಬಿ ಸದ್ಗುರು ನಿಯೋಜಿತ ಮಾರ್ಗದಲ್ಲಿ ನಡೆದು, ಆಂತರಂಗಿಕ ಸಾಧನೆಯನ್ನು ಕೈಕೊಂಡು "ಎರಡು ಜನ್ಮದೊಳು ಮುಕ್ತನಹನು" ಅಭ್ಯಾಸಿ. ಅನಂತರ ಅನುಭವಿ:

ಲೋಕವೆಲ್ಲವನು ಮರೆದು, ಪರತತ್ತ್ವವ–।
ಲೋಕನದಿಂದೊಳ ಹೊರಗಣ ಕೃತ್ಯಾ–॥
ನೀಕವಿಲ್ಲದವನೆಯನುಭವಿ ಎನಿಸುವ–।
ನೇಕ ಜನ್ಮದೊಳು ಭಾವಿಸೆ ಮುಕ್ತನಹನು॥

ಎಂದು ಅನುಭವಿಯ ಲಕ್ಷಣವನ್ನು ಹೇಳಿದ್ದಾರೆ. ಇದಕ್ಕೂ ಮೇಲಿನ ಸ್ಥಿತಿಯನ್ನು ಪಡೆದವನು ಆರೂಢ ಆತನನ್ನು ಕುರಿತು ಹೀಗೆ ಹೇಳಿದ್ದಾರೆ:

ಗುರುಶಂಭುಲಿಂಗವೆ ತಾನಾಗಿ ಮಿಕ್ಕಿನ।
ಪರಿಕಲ್ಪನೆಗಳು ತೋರದೆ ನಿತ್ಯಸುಖದ॥
ಶರನಿಧಿಯೆನಿಸಿದನಿಹದೊಳು ಮುಕ್ತನಾ–।
ಗಿರುತಿರ್ಪನಾರೂಢನೆನಿಸುವನವನು॥

ಹೀಗೆ 'ಕರ್ಮಿ'ಯಾಗಿದ್ದ ಜೀವ, ಮೇಲೇರಿ ಆರೂಢ ಸ್ಥಿತಿಗೆ ಬರುತ್ತದೆ. "ನೂರು ಜನ್ಮ" "ಮೂರು ಜನ್ಮ" "ಎರಡು ಜನ್ಮ"–ಮುಂತಾಗಿ ಅವರಿಗೆ ವಿಧಿಸಿದ ಜನ್ಮಗಳ ಸಂಖ್ಯೆಯನ್ನು ನಿರ್ಲಕ್ಷಿಸಿ. ಅವರು ಆಯಾ ಹಂತದಲ್ಲಿ ತಳೆದ ಮಾನಸಿಕ ನಿಲವನ್ನು ಗಮನಿಸಿದಾಗ ಇದು ಅರ್ಥವತ್ತಾಗಿ ಪರಿಣಮಿಸುತ್ತದೆ. 'ಕರ್ಮಿ'ಯಾಗಿದ್ದವನು ಶಿವಕಾರುಣ್ಯದ ಬಯಕೆಯಿಂದ ಮುಮುಕ್ಷುವಾಗಿ, ಸಾಧನೆಯಲ್ಲಿ ತೊಡಗುವುದರಿಂದ 'ಅಭ್ಯಾಸಿ'ಯಾಗಿ, ತತ್ತ್ವವ ಲೋಕನದಿಂದ ಯೋಗಮಾರ್ಗದಲ್ಲಿ ನಡೆದು, 'ಅನುಭವಿ'ಯಾಗಿ, ಕೊನೆಗೆ ಗುರುಶಂಭುಲಿಂಗವೆ ತಾನಾಗಿ ಆರೂಢ ಸ್ಥಿತಿಯನ್ನು ತಲುಪುತ್ತಾನೆ. ಜೀವ ತನ್ನ ಆಧ್ಯಾತ್ಮಿಕ ಯಾತ್ರೆಯಲ್ಲಿ ಏರುವ ವಿವಿಧ ಹಂತಗಳನ್ನು ಇದು ಅರ್ಥವತ್ತಾಗಿ ಸೂಚಿಸುತ್ತದೆ.

ಈ ಕೊನೆಯ ನಿಲವೇ "ಸಚ್ಚಿದಾನಂದರೂಪಶ್ಶಿವೋಹಂ ಶಿವೋಹಂ" ಎಂಬ ಅದ್ವೈತಸ್ಥಿತಿ ನಿಜಗುಣರು ಬೋಧಿಸುವ ಈ ಅದ್ವೈತ, ಸಾಧನೆಯ ಎಲ್ಲ ಹಂತಗಳನ್ನು ಸತ್ಯವೆಂದು ಒಪ್ಪಿಕೊಳ್ಳುತ್ತಾ ವಿಕಾಸಮಾರ್ಗದಲ್ಲಿ ನಡೆದು ಬಂದ ಶಿವಾದ್ವೈತ. ಅವರ ಯೋಗಪ್ರತಿಪಾದನಸ್ಥಲದಲ್ಲಿ ಕಂಡಂತೆ, ಅದು ಕರಕಂಜದಲ್ಲಿ ಕಾಣಿಸಿದ ಇಷ್ಟಲಿಂಗಸಮನ್ವಿತವಾದ ಶಿವಯೋಗ. ಆ ಶಿವಯೋಗದ ತುತ್ತತುದಿಯೇ ಆರೂಢಸ್ಥಿತಿ. ಅನೇಕ ವೇಳೆ ಇದು ಬಾಹ್ಯದಲ್ಲಿ ಬಳಸುವ ಅದ್ವೈತವಾಗಿ ಅಡ್ಡಹಾದಿಯನ್ನು ಹಿಡಿದಿರುವುದನ್ನು ಕಾಣಬಹುದು. ಆದರೆ ನಿಜಗುಣರಲ್ಲಿ ಅದಕ್ಕೆ ಎಡೆಯಿಲ್ಲ. ಅದ್ವೈತವನ್ನು ಬಾಹ್ಯದಲ್ಲಿ ಬಳಸದೆ 'ನಿನ್ನೊಳಗೇಕೋಭಾವನೆಯೊಡಗೂಡು' ಎಂದು ಸಾಧನೆಯ ಮೊದಲಲ್ಲೇ ಗುರುವಾಣಿಯ ಮೂಲಕ ಎಚ್ಚರಿಸಿ, ಅದನ್ನು ಉದ್ದಕ್ಕೂ ನೆನಪಿಸುತ್ತಲೇ ಬಂದ ಲೋಕನಿಷ್ಠೆ ಅವರದು.

ಹೀಗೆ ಅವರ ಕೈವಲ್ಯಪದ್ಧತಿ ಇಹಲೋಕವನ್ನು ತಿರಸ್ಕರಿಸದ ವೈರಾಗ್ಯದಿಂದ ಕೂಡಿ, ಪ್ರವೃತ್ತಿಮುಖವಾದ, ಆದರೂ ನಿರ್ಲಿಪ್ತ ನಿಲುವಿನ, ನಿಲುಗಡೆಯನ್ನುಳ್ಳ ಒಂದು

ವಿಶಿಷ್ಟವಾದ ಆಧ್ಯಾತ್ಮಿಕ ಮಾರ್ಗವನ್ನು ರೂಪಿಸಿತು. ಆಂತರಿಕ ತಳವುಳದ ಭಕ್ತಸ್ಥಲ ದಿಂದ ಹಿಡಿದು, ಲಿಂಗಾಂಗಸಾಮರಸ್ಯದ ಐಕ್ಯಸ್ಥಲದವರೆಗೂ ಇರುವ ಷಟ್‌ಸ್ಥಲಗಳಲ್ಲಿ ಮೇಲೇರುವ ಸಾಧಕ ಚೇತನದ ವಿವಿಧ ಹಂತಗಳನ್ನು, ತನ್ನದೇ ಆದ ರೀತಿಯ ಪಂಚಸ್ಥಲ ಗಳಲ್ಲಿ ಪರಿಭಾವಿಸಿ ಪ್ರತಿಬಿಂಬಿಸಿದ ವಿಶಿಷ್ಟಕೃತಿ ಕೈವಲ್ಯಪದ್ಧತಿ-ಎಂಬುದನ್ನು ಇದುವರೆಗೂ ನೋಡಿದ್ದೇವೆ. ಬಿಡಿಬಿಡಿಯಾದ ಅನುಭಾವ ಗೀತೆಗಳಲ್ಲಿ ಇಡಿಯಾಗಿ ರೂಪುಗೊಳ್ಳುವ ಆಧ್ಯಾತ್ಮಿಕ ಮಾರ್ಗವೊಂದನ್ನು ಆವಿಷ್ಕರಿಸಿದ, ಆತ್ಮವಿಜ್ಞಾನಿಯಾಗಿದ್ದಾರೆ ಇಲ್ಲಿ ನಿಜಗುಣರು. ಕೇವಲವಾದ ಆ ಅನುಭವದತ್ತ ನಡೆಯುವ ಒಂದು ವಿಶಿಷ್ಟ ಪದ್ಧತಿಯೇ ಇದರಿಂದ ಬೆಳೆದುಬಂದಿತು: 'ಕೈವಲ್ಯಪದ್ಧತಿ' ಎಂಬ ಕೃತಿಯ ಹೆಸರು ಅನ್ವರ್ಥಕ ವಾಯಿತು, ಸಾರ್ಥಕವಾಯಿತು. ಅದರ ಸ್ಥೂಲವಾದ ಒಂದು ಪರಿಚಯವನ್ನು ಮಾತ್ರ ಇದುವರೆಗೆ ತಾವು ಕೇಳಿದ್ದೀರಿ.

ಇದನ್ನು ಇನ್ನೂ ಅನೇಕ ದೃಷ್ಟಿಗಳಿಂದ ವಿವೇಚಿಸುವುದು ಸಾಧ್ಯ. ಭಾರತೀಯ ತತ್ವಜ್ಞಾನದ ಹಿನ್ನೆಲೆಯಲ್ಲಿ ತೌಲನಿಕವಾಗಿಯೂ ಇದನ್ನು ವಿಮರ್ಶಿಸಬಹುದು. ಸಂಗೀತದ ಹಿನ್ನೆಲೆಯಲ್ಲಿ ನೋಡಿದಾಗ ಇದು ಐತಿಹಾಸಿಕ ಪ್ರಾಮುಖ್ಯವನ್ನುಳ್ಳ ಅತ್ಯಂತ ಮಹತ್ವದ ಕೃತಿಯಾಗುತ್ತದೆ. ಆಧ್ಯಾತ್ಮಶಾಸ್ತ್ರದಂತೆಯೇ ಕರ್ನಾಟಕ ಸಂಗೀತದ ಬೆಳವಣಿಗೆಯಲ್ಲಿಯೂ ನಿಜಗುಣರದು ಬಹುದೊಡ್ಡ ಹೆಸರು. ಅವರ 'ವಿವೇಕಚಿಂತಾಮಣಿ'ಯಲ್ಲಿ ಸಂಗೀತ ಶಾಸ್ತ್ರದ ಪ್ರಭುತ್ವವನ್ನು ಕಂಡರೆ, ಇಲ್ಲಿ ವಾಗ್ಗೇಯಕಾರರಾಗಿ ಸಾಹಿತ್ಯಕ್ಕೆ ಸಂಗತವಾದ ನಾದವಿನ್ಯಾಸವನ್ನು ಬಳಸಿಕೊಳ್ಳುವ ಪರಿಣತಿಯನ್ನು ಕಾಣುತ್ತೇವೆ. ಸಂಗೀತಶಾಸ್ತ್ರಕಾರ ರಿಗೂ ಮತ್ತು ಸಂಗೀತಗಾರರಿಗೂ ಇದು ಅಧ್ಯಯನ ಮತ್ತು ಅಭ್ಯಾಸಗಳಿಗೆ ಸಮೃದ್ಧ ವಾದ ಅವಕಾಶವನ್ನು ಒದಗಿಸಬಲ್ಲ ಕೃತಿ. ಇಲ್ಲಿ ಆ ಯಾವ ವಿವರಗಳಿಗೂ ಹೋಗದೆ ಆಧ್ಯಾತ್ಮ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರಕ್ಕೆ ಆಚಾರ್ಯಕೃತಿಯಾಗಿ ಪರಿಣಮಿಸಿದುದನ್ನು ಗಮನಿಸಿ ಒಂದೆರಡು ಮಾತುಗಳನ್ನು ಹೇಳಬಹುದು.

'ಕೈವಲ್ಯಪದ್ಧತಿ' ಹಿಂದೆ ಹೇಳಿದಂತೆ ಕನ್ನಡದಲ್ಲಿ 'ತತ್ವಪದಗಳು' ಎಂಬ ಒಂದು ವಿಶಿಷ್ಟಪ್ರಕಾರಕ್ಕೆ ನಾಂದಿಯನ್ನು ಹಾಡಿತು. ಗಹನವಾದ ಆಧ್ಯಾತ್ಮಿಕ ತತ್ವಗಳನ್ನು ಭಾವಪೂರ್ಣವಾದ ಸಾಹಿತ್ಯರೂಪದಲ್ಲಿ, ಹದವಾದ ನಾದವಿನ್ಯಾಸದ ಹಿನ್ನೆಲೆಯಲ್ಲಿ ತಂದು ಹೊಸ ಮಾರ್ಗವನ್ನು ಹಾಕಿಕೊಟ್ಟಿತು. ತತ್ವ-ಸಾಹಿತ್ಯ-ಸಂಗೀತಗಳು ಮುಪ್ಪುರಿ ಗೊಂಡ ಈ ಕೃತಿಯಿಂದ ಪ್ರೇರಣೆಯನ್ನೂ ಪ್ರಚೋದನೆಯನ್ನೂ ಪಡೆದು ಅನೇಕ ಅನುಭಾವಿಗಳು ಈ ಮಾರ್ಗದಲ್ಲಿ ನಡೆದು ಇದಕ್ಕೊಂದು ಜನಪ್ರಿಯತೆಯನ್ನು ತಂದು ಕೊಟ್ಟರು. ಸಂಗೀತವನ್ನು ಅತಿಯಾಗಿ ಬೆಳೆಸದೆ, ಏಕನಾದವೊಂದರ ಶ್ರುತಿಯ ಹಿನ್ನೆಲೆ ಯಲ್ಲಿ, ಪರಿಣಾಮಕಾರಿಯಾಗಿ ಹಾಡುವ ಒಂದು ವಿಶಿಷ್ಟ ಮಾರ್ಗವೇ ಬೆಳೆಯಿತು. ಆಧ್ಯಾತ್ಮ, ಜನಸಾಮಾನ್ಯರನ್ನು ಮುಟ್ಟಿ, ಸಮಷ್ಟಿ ಮನಸ್ಸನ್ನು ಸುಸಂಸ್ಕೃತಗೊಳಿಸುವ

ಒಂದು ಪ್ರಬಲ ಮಾಧ್ಯಮವಾಗಿ ಇದು ಬೆಳೆಯಿತು. ಹಳ್ಳಿ ಹಳ್ಳಿಗಳಲ್ಲಿ ನಡೆಯುವ ಬಜನಾಗೋಷ್ಠಿಗಳಲ್ಲಿ ಇದು ಕೇಂದ್ರಶಕ್ತಿಯಾಯಿತು.

ಸ್ವಲ್ಪ ಹೆಚ್ಚುಕಡಮೆ ನಿಜಗುಣರು ಹಾಕಿಕೊಟ್ಟ ಮಾರ್ಗದಲ್ಲಿಯೇ ಈ ತತ್ವಪದಗಳ ಮಾಧ್ಯಮ ಬೆಳೆಯುತ್ತಾ ಬಂದದ್ದು ಗಮನಾರ್ಹ. ಮುಂದಿನವರ ಹಾಡುಗಳಲ್ಲಿ ಆ ಪ್ರೌಢಿಮೆ, ತತ್ವಜಿಜ್ಞಾಸೆಯ ಪರಿಣತಿ, ಇಲ್ಲದಿದ್ದರೂ ಮನಸ್ಸನ್ನು ಅಂತರ್ಮುಖಿ ಗೊಳಿಸುವ ಆಧ್ಯಾತ್ಮವಾಣಿ ಪ್ರತಿಧ್ವನಿಸಿತು ಗುರುವಾಣಿಯಿಂದ ಪ್ರಾರಂಭವಾದ ಕೈವಲ್ಯ ಪದ್ಧತಿ, ಮುಂದೆ ಕೈವಲ್ಯಸಾಹಿತ್ಯದಲ್ಲಿ ಗುರುವನ್ನೇ ಕೇಂದ್ರಶಕ್ತಿಯನ್ನಾಗಿ ಮಾಡಿತು. ಗುರುಸ್ತುತಿ, ಗುರೂಪದೇಶಗಳು ಕೈವಲ್ಯಮಾರ್ಗದಲ್ಲಿ ನಡೆಯುವ ಸಾಧಕನಿಗೆ, ಊರು ಗೋಲುಗಳು ಮತ್ತು ಮಾರ್ಗದರ್ಶಕ ಶಕ್ತಿಗಳೂ ಆದುವು. ನಿಜಗುಣರು "ಶ್ರೀಗುರು ವಚನೋಪದೇಶ"ದಿಂದ ತಮ್ಮ ಕೃತಿಯನ್ನು ಪ್ರಾರಂಭಿಸಿದುದಲ್ಲದೆ ಕೃತಿಯ ಕೊನೆಯಲ್ಲಿ ಗುರುವನ್ನು ಕುರಿತ ಒಂದೆರಡು ಒಳ್ಳೆಯ ಗೀತೆಗಳನ್ನು ರಚಿಸಿ ಬಹುಶಃ ಇದಕ್ಕೆ ಪ್ರೇರಕರಾದರು.

ಶ್ರೀ ಗುರುವೆ ಶರಣು ಶಿವಯೋಗ ಸಂಪದವನೆನ|
ಗಾಗುಮಾಡಿದ ನಿಜವಿರಾಗಿ ಜನ ವಂದ್ಯ ||ಪ||

ಎಂಬುದನ್ನು ನೋಡಬಹುದು. ಗುರು ಏನನ್ನು ಹೇಳಿದನೆಂಬುದನ್ನು ಮುಂದಿನ ನುಡಿ ಗಳಲ್ಲಿ ಕಾಣುತ್ತೇವೆ. ಆಧ್ಯಾತ್ಮಿಕ ಉನ್ನತ ತತ್ವಗಳನ್ನೂ ಸಾಧನೆಯ ರಹಸ್ಯವನ್ನೂ ಮಾರ್ಗದ ಮುನ್ನಡೆಯನ್ನೂ ಗುರೂಪದೇಶದ ಮೂಲಕ ಹೇಳಿಸುತ್ತಾರೆ.

ಪೊರಗಣ ಘಟಾದಿ ವಿಷಯವನು ಪಲರೂಪದಿಂ|
ದರಿವುತಾಶ್ರೈಸಿದ ಚಿದಾಭಾಸದ||
ಕುರುಹುವಿಡಿದಂತಲ್ಲಿ ಸತ್ಯಸಂವಿತ್ತೆನಿಸಿ|
ಮೆರೆವ ಪರತತ್ವವದು ನೀನೆಂದು ಪೇಳ್ದ ||೧||

ಹೀಗೇ ಮುಂದುವರಿದು ಪಂಚಕೋಶವನ್ನೂ ಬೇರಿಟ್ಟು ವಿಶ್ವಸಾಕ್ಷಿಯಾಗುಳಿದಿಹ ಪರ ಬ್ರಹ್ಮವೇ ನೀನೆಂದು ಬೋಧಿಸಿದವನು ಗುರು: ಉಪಾಧಿಗಳನ್ನಳಿದು ವಾದಕ್ಕೆ ಮೀರಿದ ಅಖಂಡ ರಸರೂಪೆನಿಸಿದ ಶಂಭುಲಿಂಗವಾಗಿಹ ಮುಕ್ತಿ ನಿನ್ನದೆಂದು ಬೋಧಿಸಿದವನು ಗುರು–ಎಂದು ಕೈವಲ್ಯಾನುಭವವನ್ನು ಗುರುವಿನ ಮೂಲಕ ಹೇಳಿಸುವುದು ಒಂದು ವಿಶಿಷ್ಟ ವಾದ ಮಾದರಿಯಾಗಿದೆ. ಇನ್ನೊಂದು ಕಡೆಯಲ್ಲಿ ಬರುವ ಗುರುಸ್ತುತಿ ಹೀಗಿದೆ:

ಗುರುವೆ ನಿಮ್ಮಯ ಕರುಣದೊಳೆನ್ನ |ತತ್ವ|
ದಿರವನರಿದು ನಿತ್ಯ ಸುಖಿಯಾದೆ ||ಪ||
ನಾಮರೂಪವನಭಿಮಾನಿಸಿ| ಕೊಂಡು|
ತಾಮಸ ಮತಿಗೊಳಗಾಗಿರೆ||

ಪ್ರೇಮಾಸ್ತಿಭಾತಿಯೆಂಬಿವೆ ನಿನ್ನ। ನಿಜ।
ಧಾಮವೆಂದೊಸೆದೆಚ್ಚರಿಸಲಾಗಿ ॥೧॥

ದೇಹದಲ್ಲಿದ್ದೂ ದೇಹಗುಣಗಳಿಂದ ಬಂಧಿತನಾಗದ ರಹಸ್ಯವನ್ನು ಮುಂದೆ ಗುರು ಹೇಳುತ್ತಾನೆ. ಇಂತಹ ಮಾತುಗಳನ್ನು ಗುರುವಿನ ರಹಸ್ಯವಾಣಿಯನ್ನಾಗಿ ಹೇಳಿಸಿರುವ ಉದ್ದೇಶ. ಆಧ್ಯಾತ್ಮದಲ್ಲಿ ಮಾತಿಗಿಂತ ಮಾತಿನ ಹಿಂದಿರುವ ಸಾಧನೆಯ ಶಕ್ತಿ ಮುಖ್ಯವೆಂಬುದನ್ನು ಸೂಚಿಸುವುದೇ ಆಗಿದೆ. ಸಾಧನೆಯ ಶ್ರೀಮಂತಿಕೆಯಿಂದ ಶಕ್ತನಾದ ಗುರು, ಆತನ ಉಪದೇಶವನ್ನು ಗ್ರಹಿಸಿ ಸಾಧನೆಯಲ್ಲಿ ತೊಡಗುವ ನಿಜವಾದ ಶಿಷ್ಯ–ಈ ಎರಡೂ ಸೇರಿದಾಗ ಕೈವಲ್ಯಮಾರ್ಗದ ಮುನ್ನಡೆ ಪೂರ್ಣಗೊಳ್ಳುತ್ತದೆ. "ಬಲ್ಲಡುಸಿರಿರಿಭಾವಕರು। ನೀವೆಲ್ಲ। ರಿಲ್ಲಿ ಗುರುಶಿಷ್ಯರೊಳು ಮೊದಲಾವುದರಿವೆ॥" ಎಂಬ ಹಾಡಿನಲ್ಲಿ ಅರ್ಥಪೂರ್ಣವಾಗಿ ಪ್ರಶ್ನಿಸುತ್ತಾರೆ. ಈ ಇಬ್ಬರಲ್ಲಿ ಮೊದಲಾವುದು ಎಂಬುದನ್ನು, ಮೊದಲು ಕೊನೆ ಎಂಬುದನ್ನು ಆಳಿದ ಕೈವಲ್ಯಾನುಭವದ ಪರಸ್ಪರ ಪೂರಕ ಶಕ್ತಿಗಳಾಗಿ ಈ ಇಬ್ಬರೂ ನಿಲ್ಲುತ್ತಾರೆ. ಸರ್ಪಭೂಷಣಶಿವಯೋಗಿ ಮೊದಲಾದವರ ತತ್ವಪದಗಳಲ್ಲಿ ಈ ಭಾವ ಇನ್ನೊಂದು ರೀತಿಯಲ್ಲಿ ಮುಂದುವರಿದಿದೆ.

ನಿಜಗುಣರ 'ಕೈವಲ್ಯಪದ್ಧತಿ' ಸಾಧಿಸಿ ತೋರಿಸಿದ ಮತ್ತು ಮುಂದಿನ ಕೈವಲ್ಯ ಸಾಹಿತ್ಯಕ್ಕೆ ಹಾಕಿಕೊಟ್ಟ ಇನ್ನೊಂದು ಮುಖ್ಯವಾದ ಸಾಧನೆಯೆಂದರೆ, ಗಹನವಾದ ಆಧ್ಯಾತ್ಮಿಕ ತತ್ವಗಳನ್ನು ಅಂತರಂಗದ ಪರಿಪಾಕದಿಂದ ಪರಿವರ್ತಿಸಿ ಸಾಹಿತ್ಯಕೃತಿಗಳನ್ನಾಗಿಸಿರುವುದು. ತತ್ವಭಾವದಿಂದ ಅವು ಬಾಗುತ್ತಿದ್ದರೂ ಶುಷ್ಕವಾಗದೆ ಅನುಭವದಿಂದ ಆರ್ದ್ರವಾಗಿ ಆ ಸಂಸ್ಕಾರವನ್ನುಳ್ಳ ಸಹೃದಯರಿಗೆ ಆಸ್ವಾದ್ಯವಾಗುವ ರಸನುಡಿಗಳಾಗಿವೆ. ಕೆಲವಂತೂ ಅತ್ಯುತ್ಕೃಷ್ಟ ಭಾವಗೀತೆಗಳಂತೆ ಭಾವದುಂಬಿ ಮಿಡಿಯುತ್ತಿವೆ. ಹಿಂದಾಗಲೇ ಹೇಳಿದ "ನೋಡಲಾಗದೆ ದೇವ ನೋಡಲಾಗದೆ", "ಶಂಕರಾ ನೋಡು ನೀನೆನ್ನ ಪರಿಭವದ ಬಾಧೆಯನು", "ಕೋಗಿಲೆ ಚೆಲ್ವ ಕೋಗಿಲೆ", "ಕರುಣಿಸು ನೀನೆನ್ನ", "ಮನವೆಂಬ ಗಿಳಿಯು", "ಮಾಡಲಿಲ್ಲವೇ ತಪವನು"–ಈ ಮೊದಲಾದುವನ್ನು ಸ್ಮರಿಸಿಕೊಳ್ಳಬಹುದು. ಇನ್ನೂ ಒಂದೆರಡು ಗೀತೆಗಳನ್ನು ಉದಾಹರಿಸಬಹುದಾದರೆ ಸಂಸೃತಿ ಬಂಧಕ್ಕೆ ಸಿಕ್ಕ ಜೀವ, ಅಂತರ್‌ನಿರೀಕ್ಷಣೆಯಿಂದ ಹೀಗೆ ತಳಮಳಗೊಳ್ಳುವುದನ್ನು ಕೇಳಬಹುದು.

ಯಾಕೆನ್ನ ನಿಂತು ಸಂಸೃತಿಯೊಡಗೂಡಿ। ದೆಲೆದೇವರೆಲೆದೇವರೇ॥
ಸಾಕಿನ್ನು ನಿಜವನೀಯದೆ ತಳುಮಾಳ್ಪರೆ। ಎಲೆದೇವರೆಲೆದೇವರೆ ॥ಪ॥

ಮೊದಲು ನೀನೆನ್ನನಜ್ಞಾನಶಕ್ತಿಗೆ ಮಾರಿ। ದೆಲೆ....।
ಒದವಿ ಮತ್ತದನೆ ಕೆಡಿಸಲೆಂಬ ಬಗೆದೋರಿ। ದೆಲೆ....॥
ಪುದಿದ ಕರ್ಮದ ಪಾಕದನುಗುಣದೊಳು ಮೀರಿ। ದೆಲೆ....।
ವಿಧಿಸಿ ಬಳಿಕ ಮಾಯಾಮಲಪಾಶವನು ಬೀರಿ। ದೆಲೆ.... ॥೧॥

ಚಿತ್ರರವೆನಿಪ ಭುವನದೇಹವನು ಮಾಡಿ। ದೆಲೆ।
ಮತ್ತೆನ್ನ ನವರವರಭಿಮಾನದೊಡಗೂಡಿ। ದೆಲೆ।
ಮುತ್ತಿ ಮೋಹಿಸುವ ಸುಖಾದಿ ಭೋಗವನೂಡಿ। ದೆಲೆ।
ಸುತ್ತಿ ಬಗಿಸಿ ಬಹು ಜನನ ಮಾರ್ಗದೊಳಾಡಿ। ದೆಲೆ ॥೨॥
ಮರಳಿ ವಿನಯ ವಿವೇಕವನೆನ್ನೊಳಿಂಬಿಟ್ಟೆ। ಎಲೆ।
ಪರಬೋಧವರುಹಿ ಬಂಧದ ಬಲುಹನು ಸುಟ್ಟೆ ।ಎಲೆ।
ಪರವಾಗಿ ನಿನ್ನ ಸಮಾನ ಪದವಿಗೊಟ್ಟೆ। ಎಲೆ।
ಗುರುಶಂಭುಲಿಂಗ ನೀನೆನಗಾಗಿ ಕೃಪೆವಟ್ಟೆ॥ ಎಲೆ ದೇವರೆಲೆದೇವರೆ ॥೩॥

ಈ ಹಾಡಿನಲ್ಲಿ ತರ್ಕಕ್ಕೆ ಮೀರಿದ ಯಾವುದೋ ದೈವಶಕ್ತಿಯೊಂದರ ಸಂಕಲ್ಪದ ಹಿನ್ನೆಲೆಯಲ್ಲಿ ಬಂಧಮೋಕ್ಷಗಳ, ನೆರಳು ಬೆಳಕಿನ, ಆಟ ನಿರಂತರವಾಗಿ ಹೇಗೆ ನಡೆದು ಬರುತ್ತಿದೆ–ಎಂಬುದನ್ನು ಕಣ್ಣುಮುಂದೆ ನಿಲ್ಲುವಂತಹ ಸಾಕಾರ ಅನುಭವವನ್ನಾಗಿ ಕಡೆದು ನಿಲ್ಲಿಸಿದ್ದಾರೆ.

ಈ ಶಕ್ತಿಯನ್ನು ಒಲಿಸಿಕೊಳ್ಳುವ ಭಕ್ತಿಯ ವಿನ್ಯಾಸದಲ್ಲಿ, ಅದನ್ನು ಸಾಂಕೇತಿಕವಾಗಿ ತಿರಸ್ಕರಿಸಿ ನುಡಿಯುವ ವ್ಯಾಜನಿಂದ, ಸಾಹಿತ್ಯಾಭಿವ್ಯಕ್ತಿಯು ಒಂದು ಬಗೆ. ಅಂತಹ ಕೆಲವು ಗೀತೆಗಳನ್ನು ನಿಜಗುಣರು ರಚಿಸಿದ್ದಾರೆ:

ನಿನ್ನೊಳಾವ ಸುಗುಣವಿಹುದು ವಿಚಾರಿಸಿ ನೋಡ।
ದೆನ್ನೊಳರಸುವೆ ಲೇಸುಗಳನೇಕೆ ದೇವ ॥ಪ॥

ಎಂದು ಪ್ರಾರಂಭವಾಗುವ ಹಾಡು ಇದಕ್ಕೆ ಒಳ್ಳೆಯ ಉದಾಹರಣೆ. ನನ್ನಲ್ಲಿ ಒಳ್ಳೆಯದನ್ನು ಹುಡುಕುವುದಕ್ಕೆ ಮೊದಲು ನಿನ್ನಲ್ಲಿ ಯಾವ ಸುಗುಣವಿದೆಯೆಂಬುದನ್ನು ಮೊದಲು ವಿಚಾರಿಸಿ ನೋಡು–ಎಂದು ಶಿವನಿಗೆ ಹೇಳುತ್ತಾರೆ.

ಕರ ಚೆಲುವಿನ ರತಿಪತಿಯ೦ನುರುಹಿದೆ, ಮುಪ್ಪುರದ।
ವರೆಲ್ಲರೊಕ್ಕಲನೆ ಕೆಡಿಸಿದೆ॥
ವರವೇದವಿದನ ತಲೆಯನೆಚ್ಚುಗೆಡಹಿದೆ।
ಪುರುಷೋತ್ತಮನ ಕಣ್ಣನೊಪ್ಪಿತೆಗೆಸಿದೆ ॥೧॥

ಸುಂದರ ಮನ್ಮಥನನ್ನು ಸುಟ್ಟೆ, ತ್ರಿಪುರಸಂಹಾರ ಮಾಡಿದೆ; ಬ್ರಹ್ಮನ ತಲೆ ತೆಗೆದೆ; ವಿಷ್ಣುವಿನ ಕಣ್ಣನ್ನು ತೆಗೆಸಿದೆ. ಇವುಗಳನ್ನೆಲ್ಲಾ ಮಾಡಿದ ನಿನ್ನಲ್ಲಿ, ಯಾವ ಸುಗುಣವಿದೆ?–ಎಂಬ ಈ ಮಾತುಗಳಲ್ಲಿರುವುದು ನಿಂದಾರೂಪವಾದ ಸ್ತುತಿಯೇ. ಇದು ಹೀಗೇ ಮುಂದುವರಿದು ಆತನ ಲೀಲೆಗಳಲ್ಲಿ ಇನ್ನೂ ಕೆಲವನ್ನು ಬಯಲಿಗೆಳೆಯುತ್ತಿದೆ.

ಇನ್ನೊಂದು ಗೀತೆಯಲ್ಲಿ ಶಿವನ ರೂಪವನ್ನು ಕುರಿತು ವಿಡಂಬನೆಯಾಡುತ್ತಾರೆ. "ಸಾರವಸ್ತುವಲ್ಲದನ್ಯವ ನೊಲಿವೆ ಸುವಿ । ಚಾರವಿಲ್ಲವೇಕೆ ನಿನ್ನೊಳು ದೇವರೇ॥" ಎಂದು ಪ್ರಾರಂಭವಾಗುವ ಈ ಗೀತೆ, ಸುವಾಸನೆಯನ್ನು ಬಿಟ್ಟು ಸುಡುಗಾಡ ಬೂದಿ ಬಳಿಯು

ವುದನ್ನೂ, ಅಲಂಕಾರವನ್ನೊಲ್ಲದೆ ಹಾವುಗಳನ್ನು ಧರಿಸುವುದನ್ನೂ, ಹಾರವನ್ನು ಬಿಟ್ಟು ರುಂಡಮಾಲಾಧರನಾಗಿರುವುದನ್ನೂ, ಹಾಗೇ ಚರ್ಮಾಂಬರನಾದುದು, ತಿರಿದುಂಡುದು, ಎತ್ತನೇರಿದುದು-ಈ ಮೊದಲಾದುವನ್ನು ಎತ್ತಿ ಆಡಿ ವಿಡಂಬಿಸುತ್ತದೆ. ಬಹುಶಃ ಇದರಿಂದಲೇ ಪ್ರೇರಿತರಾಗಿ ಸರ್ಪಭೂಷಣರು ಅತಿ ಸುಂದರವಾದ ಶಿವವಿಡಂಬನೆಯನ್ನು ಸೃಷ್ಟಿಸಿದ್ದಾರೆ. ದ್ವಂದ್ವಮಯವಾದ ಈ ಜಗತ್ತಿನ ವಿಷಮತೆಯನ್ನು ಲಕ್ಷಿಸಿಕೊಡ ನೇಮಿಸಿದೆ ಹಿತವದಹಿತವೆಂಬೆರಡನು। ನೋಡು ನಿನ್ನೊಳಾವ ಬಲ್ಲತನವಿಹುದಭವ"- ಎಂಬ ವಿಡಂಬನೆಯ ಹಾಡೂ ಅರ್ಥಪೂರ್ಣವಾಗಿದೆ. ಅನುಭವದ ಬೇರೆ ಬೇರೆ ಸ್ತರಗಳನ್ನುಳ್ಳ ಮತ್ತು ಅಭಿವ್ಯಕ್ತಿಯ ವೈವಿಧ್ಯವನ್ನುಳ್ಳ ಇಂತಹ ಅನೇಕ ಹಾಡುಗಳನ್ನು ಉದಾಹರಿಸುತ್ತಾ ಹೋಗಬಹುದು. ಮುಂದಿನ ತತ್ವಸಾಹಿತ್ಯದ ಬೆಳವಣಿಗೆಗೆ ಇವು ಪ್ರಚೋದಕವಾಗಿ, ಅಷ್ಟೇ ಅಲ್ಲದ ಮಾರ್ಗದರ್ಶಕ ಶಕ್ತಿಯಾಗಿ, ಪರಿಣಮಿಸಿದುವು.

ಈ ಕೃತಿಯ ಪ್ರಾರಂಭದಂತೆಯೇ ಮುಕ್ತಾಯವೂ ವಿಶಿಷ್ಟವಾಗಿದ್ದು ಆನಂತರದ ಅನುಕರಣೆಗೂ ಕಾರಣವಾಗಿದೆ. ಗುರೂಪದೇಶದಿಂದ ಪ್ರಾರಂಭವಾಗಿ ಕೈವಲ್ಯ ಪದ್ಧತಿ, ಜ್ಯೋತಿಯನ್ನು ಬೆಳಗುವ ಮಂಗಳಾರತಿಯ ಗೀತೆಯೊಡನೆ ಕೊನೆಗೊಳ್ಳುತ್ತದೆ. ಈ ಮಂಗಳಾರತಿಯ ರಚನೆ ಕೈವಲ್ಯ ಸಾಹಿತ್ಯದಲ್ಲಿ ಮುಂದೆ ಒಂದು ಪ್ರಮುಖವಾದ ಅಂಗವೇ ಆಗಿ ಪರಿಣಮಿಸಿದುದನ್ನು ಕಾಣುತ್ತೇವೆ. ಆದರೆ ಈ ಎಲ್ಲ ಮಂಗಳಗೀತೆಗಳ ಸಮುದಾಯ ದಲ್ಲಿ ನಿಜಗುಣರ "ಜ್ಯೋತಿ ಬೆಳಗುತಿದೆ" ಗೀತೆ ಅದ್ವಿತೀಯವಾಗಿ ಪರಿಣಮಿಸಿದೆ. ಕೇವಲ ಜ್ಞಾನದ ಮಹಾಸೌದಕ್ಕೆ ಹೊಂಗಳಶದಂತೆ ಕಂಗೊಳಿಸುತ್ತಿದೆ.

ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ ।
ಮಾತು ಮನಂಗಳಿಂದತ್ತತ್ತ ಮೀರಿದ ।
ಸಾತಿಶಯದ ನಿರುಪಾಧಿಕ ನಿರ್ಮಲ । ಜ್ಯೋತಿ ಬೆಳಗುತಿದೆ ॥ಪ॥

ಮಾತು ಮನಂಗಳಿಂದ ಅತ್ತತ್ತ ಮೀರಿ ನಿರಂತರವಾಗಿ ಬೆಳಗುತ್ತಿರುವ ಈ ನಿರ್ಮಲ ಜ್ಯೋತಿ ಯಾವುದು? ಅದರ ಬೆಳಗಿನ ಪರಿಣಾಮವೇನು? ಆದರ ಆತ್ಯಂತಿಕ ನಿಲುಗಡೆ ಎಲ್ಲಿ-ಎಂಬುದನ್ನು ಅಂತರನುಭವದ ದೀಪ್ತಿಯ ಬೆಳಕಿನಿಂದ ಹೊಳೆಯಿಸಿ ತೋರಿಸಿದ್ದಾರೆ.

ಶಿವಧರ್ಮನಾಳವೆಂತೆಂಬ ಕಂಭದ ಮೇಲೆ ।
ಸುವಿವೇಕ ಹೃದಯಾಬ್ಜ ಪಣತೆಯೊಳು ॥
ಸವೆಯದ ಸದ್ಭಕ್ತಿರಸತೈಲ ತೀವಿದ ।
ಪ್ರವಿಮಲ ಕಳೆಯೆಂಬ ಬತ್ತಿವಿಡಿದು ದಿವ್ಯ ॥೧॥

ಇದು ಸಾಧಕ ಚೇತನದಲ್ಲಿ ಬೆಳಗುತ್ತಿರುವ ಅಂತರಂಗದ ದೀಪವೆಂಬುದನ್ನು ಈ ಮಾತು ಗಳು ಅರ್ಥವತ್ತಾಗಿ ಸೂಚಿಸುತ್ತವೆ. ಶಿವಧರ್ಮನಾಳವೆಂಬ ಕಂಭ, ಅದರ ಮೇಲೆ ಸುವಿವೇಕದಿಂದ ಕೂಡಿದ ಹೃದಯ ಕಮಲವೇ ಹಣತೆ; ಅದಕ್ಕೆ ಎಂದೆಂದೂ ತೀರದಿರುವ ಸದ್ಭಕ್ತಿರಸವೆಂಬ ತೈಲ, ಪ್ರವಿಲಮವಾದ ಕಳಾಶಕ್ತಿಯೇ ಈ ಬೆಳಗುತ್ತಿರುವ

ದಿವ್ಯಜ್ಯೋತಿಯ ಬತ್ತಿ. ಇದರಿಂದ ಹೊರಹೊಮ್ಮುವ ಬೆಳಕು ಎಂತಹುದೆಂಬುದನ್ನು ಮುಂದೆ ಹೇಳುತ್ತಾರೆ:

ಮುಸುಕಿದ ವಿಷಯ ಪತಂಗ ಬಿದ್ದುರುಳಿ, ತಾ ।
ಮಸಬುದ್ಧಿಯೆಂಬ ಕತ್ತಲೆಯಳಿಯೆ ॥
ಮಸಗಿ ಸುಜ್ಞಾನವೆಂತೆಂಬ ಮಹಾಪ್ರಭೆ ।
ಪಸರಿಸಿ, ಮಾಯಾಕಾಳಿಕೆ ಪೊರ್ದದನುಪಮ ॥೨॥

ಇದು ಈ ಬೆಳಕಿನ ಪರಿಣಾಮ. ಮನಸ್ಸನ್ನು ಮುಸುಕಿದ ವಿಷಯವೆಂಬ ಪತಂಗ. ಈ ಬೆಳಕಿನ ಜ್ವಾಲೆಗೆ ಸಿಕ್ಕು ಬಿದ್ದುರುಳುತ್ತದೆ. ತಾಮಸಬುದ್ಧಿ ಎಂಬ ಕತ್ತಲೆಯನ್ನು ಈ ಬೆಳಕು ಕಳೆಯುತ್ತದೆ; ಸುಜ್ಞಾನವೆಂಬ ಮಹಾಪ್ರಭೆ ದಟ್ಟವಾಗಿ ಪಸರಿಸುತ್ತದೆ; ಮಾಯಾ ಕಾಳಿಕೆಯನ್ನು ಅಂಟಿಸಿಕೊಳ್ಳದೆ ಅನುಪಮ ಪರಿಣಾಮವನ್ನು ಅದು ಬೀರುತ್ತದೆ. ಕೈವಲ್ಯ ಮಾರ್ಗದ ಆದ್ಯಂತವೂ ಅದು ವ್ಯಾಪಿಸುತ್ತದೆ. ಮುಂದಿನದು ಇದರ ಆಚೆಯ ನಿಲವು, ತಾನೇ ತಾನಾದ ಅಖಂಡ ಜ್ಯೋತಿ:

ಪ್ರಣವಾಕಾರದ, ಗುಣ ಮೂರು ಮುಟ್ಟದ ।
ಗಣನೆಗತೀತಾರ್ಥವೆನೆ ತೋರುವ ॥
ಅಣುಮಾತ್ರ ಚಲನೆಯಿಲ್ಲದ ಮೋಕ್ಷಚಿಂತಾ ।
ಮಣಿಯೆನಿಸುವ ಶಂಭುಲಿಂಗವೆ ತಾನಾದ ॥೩॥

ಅದು ಪ್ರಣವಾಕಾರದ ಜ್ಯೋತಿ ಎಂಬ ಮಾತು ನಮ್ಮ ಇಡೀ ಆಧ್ಯಾತ್ಮಿಕ ಅನುಭವದ ತಾತ್ವಿಕ ಹಿನ್ನೆಲೆಯನ್ನು ಸಾಂಕೇತಿಕವಾಗಿ ಸೂಚಿಸುತ್ತದೆ. 'ಓಂಕಾರ' ರೂಪವಾದ ಅದು, ನಾದಬ್ರಹ್ಮಸ್ವರೂಪವೂ ಅದನ್ನು ಒಳಗೊಂಡ ಸೃಷ್ಟಿಯ ಚರಾಚರಾತ್ಮಕ ಚೇತನದ ಚಿದ್ರೂಪವೂ ಆಗಿದೆ. ಅದು ಮೂರು ಗುಣಗಳು ಮುಟ್ಟದಿರುವ, ಅಂತೆಯೇ ಲೌಕಿಕ ಪರಿಗಣನೆಗೆ ಅತೀತವಾದ ಅರ್ಥವನ್ನು ಹೊಳೆಯಿಸಿ ತೋರುವ ಅಂತರಂಗದ ಬೆಳಕು. ನಿರಂತರ ಚಲನಶೀಲತೆಯ ಹಿನ್ನೆಲೆಯಲ್ಲಿ ಅಣುಮಾತ್ರವೂ ಚಲನೆಯಿಲ್ಲದ ಸ್ವಯಂ ಪ್ರಭಾವಲಯ. ಶಂಭುಲಿಂಗವೇ ತಾನಾಗಿ ಪರಿಣಮಿಸಿರುವ ಮೋಕ್ಷಚಿಂತಾಮಣಿ ಎಂದು ಕೊನೆಯಲ್ಲಿ ಹೇಳುತ್ತಾರೆ.

ಈ ಗೀತೆಯಲ್ಲಿ ಬರುವ ಈ ಮೂರು ನುಡಿಗಳು. ಕೈವಲ್ಯ ಮಾರ್ಗದಲ್ಲಿ ಮೇಲೇರುವ ಆಂತರಿಕ ಚೇತನದ ಚಿದಾನಂದಪ್ರಭೆಯ ಆವಿಷ್ಕಾರವನ್ನು, ಅನುಭಾವದ ಬೆಳಕಿನಲ್ಲಿ ಗುರುತಿಸುತ್ತಾ ಬೆಳೆಯುತ್ತವೆ. ಮೊದಲನೆಯದರಲ್ಲಿ ಆ ನಂದಾದೀಪದ ಕಂಭ, ಅದರ ಮೇಲಿರುವ ಹಣತೆ, ಅದರಲ್ಲಿರುವ ಎಣ್ಣೆ ಬತ್ತಿಗಳನ್ನು ಹೇಳುತ್ತಾರೆ. ಅಂದರೆ ಇದು ಆ ಜ್ಯೋತಿಯ 'ಪರಿಕರ'ಗಳನ್ನು ನಿರೂಪಿಸುತ್ತಿದೆ. ಎರಡನೆಯದರಲ್ಲಿ ಅದು ಜ್ಯೋತಿಯಾಗಿ ಬೆಳಗುವ ಬೆಳಕಿನ 'ಪರಿಣಾಮ'ವನ್ನು ಸೂಚಿಸಿದ್ದಾರೆ. ವಿಷಯಪತಂಗ ಬಿದ್ದುರುಳಿ, ತಾಮಸವೆಂಬ ಕತ್ತಲೆ ಹರಿದು ಸುಜ್ಞಾನದ ಮಹಾಪ್ರಭೆಯಾಗಿ ಅದು ಇಲ್ಲಿ

ಪರಿಣಮಿಸುತ್ತದೆ. ಕೊನೆಯಲ್ಲಿ ಅದು ಈ ಎರಡನ್ನೂ ಮೀರಿ ಮೋಕ್ಷ ಚಿಂತಾಮಣಿಯಾಗಿ ತಾನೇ ಪರಂಜ್ಯೋತಿಯಾಗುತ್ತದೆ. ಹೀಗೆ 'ಪರಿಕರ' 'ಪರಿಣಾಮ' ಮತ್ತು 'ಪರಂಜ್ಯೋತಿ'–ಈ ಮೂರು ಹಂತಗಳಲ್ಲಿ ಗುರುತಿಸಬಹುದಾದ ಈ ಮಂಗಳಗೀತೆ ಅತ್ಯಂತ ಧ್ವನಿಪೂರ್ಣವಾಗಿದೆ.

ಈ ಗೀತೆ ಕೇವಲ ಭಾವುಕರು ಹಾಡುವ ಮಂಗಳಾರತಿ ಮಾತ್ರವಾಗಿಲ್ಲ. ಅದು ಒಂದು ಕಡೆಯಲ್ಲಿ, ಸಮಗ್ರ ಆಧ್ಯಾತ್ಮಿಕ ಸಾಧನೆಯ ವೈಚಾರಿಕ ನಿಲವನ್ನೂ, ಇನ್ನೊಂದು ಕಡೆಯಲ್ಲಿ ಮಾತಿಗೆ ಮೀರಿದ ಅನುಭವವನ್ನು ಮಾತುಗಳಲ್ಲಿ ಹಿಡಿದಿಡುವ ಸಾಹಸದ ಸಾಹಿತ್ಯಪ್ರತಿಭೆಯನ್ನೂ ಏಕಕಾಲದಲ್ಲಿ ಅಳವಡಿಸಿಕೊಂಡಿದೆ. 'ಮಾತೆಂಬುದು ಜ್ಯೋತಿರ್ಲಿಂಗ' ಎಂದು ಅಲ್ಲಮಪ್ರಭು ಹೇಳಿದ ಮಾತಿನ ಸಾರ್ಥಕತೆಯನ್ನು ಇಂತಹ ಕಡೆಗಳಲ್ಲಿ ಕಂಡುಕೊಳ್ಳಬಹುದು. ಇಲ್ಲಿ ನೇರವಾದ, ಸರಳವಾದ, ಮಾತುಗಳ ಹಿಂದೆ ತಾತ್ವಿಕ ಅನುಭವ ಅನುರಣಿತವಾಗುತ್ತಿದೆ: ಆಧ್ಯಾತ್ಮಿಕ ದರ್ಶನಧ್ವನಿ ಮಿಡಿಯುತ್ತಿದೆ. 'ಕೈವಲ್ಯಪದ್ಧತಿ'ಯಲ್ಲಿ ಇದುವರೆಗೂ ನೋಡಿದಂತೆ ಅನುಭವವನ್ನು ಸಾಹಿತ್ಯವನ್ನಾಗಿಸುವ ಇನ್ನೂ ಅನೇಕ ಹಾಡುಗಳು ಮೂಡಿ ಬಂದಿವೆ. ಅದಕ್ಕೆ ಕಳಶಪ್ರಾಯವಾಗಿ ಮೂಡಿ ಬಂದಿದೆ ಈ 'ಜ್ಯೋತಿ ಬೆಳಗುತಿದೆ' ಮಂಗಳಗೀತೆ.

ಈ ಗೀತೆಯೊಂದೇ ಅಲ್ಲ, ಇಡೀ 'ಕೈವಲ್ಯಪದ್ಧತಿ'ಯೇ ಕೈವಲ್ಯ ಸಾಹಿತ್ಯಕ್ಕೆ ಕಳಶಪ್ರಾಯವಾಗಿದೆ. ಒಂದು ದೃಷ್ಟಿಯಿಂದ ಈ ಸಾಹಿತ್ಯಪ್ರಕಾರಕ್ಕೆ ನಿಜಗುಣರೇ ಆದ್ಯ ಆಚಾರ್ಯರು, 'ಕೈವಲ್ಯಪದ್ಧತಿ'ಯೇ ಆದ್ಯ ಕೃತಿ. ಹಾಗೆಂದು ಪ್ರಾರಂಭದ ಕೃತಿಯಲ್ಲಿ ಕಾಣುವ ಪ್ರಾಯೋಗಿಕ ಸ್ಥಿತಿ ಅಲ್ಲಿ ಕಂಡುಬರುವುದಿಲ್ಲ. ಮೊದಲನೆಯ ಕೃತಿಯೇ ಮಹೋತ್ತುಂಗ ಕೃತಿಯಾಗಿ ಇಲ್ಲಿ ಪರಿಣಮಿಸಿದೆ. ನಿಜಗುಣರ ಪರಿಪೂರ್ಣಸಾಧನೆಯ ಪರಿಪಕ್ವಸ್ಥಿತಿ ಇಲ್ಲಿ ಕಾಣುತ್ತದೆ. ಈ ಮಾರ್ಗದಲ್ಲಿ ನಡೆದ ಮುಂದಿನ ಕೈವಲ್ಯಸಾಹಿತ್ಯಕಾರರು ಬೇರೆ ಬೇರೆ ರೀತಿಯಲ್ಲಿ ಇದನ್ನು ಪ್ರತಿಬಿಂಬಿಸುತ್ತಾ ಬೆಳಸಿಕೊಂಡು ಬಂದಿದ್ದಾರೆ.

ಅಡಿ ಟಿಪ್ಪಣಿಗಳು

1. R. D. Ranade: Pathway to God in Marathi Literature. (preface)
೨. ಅಲ್ಲೇ.
೩. ಅಲ್ಲೇ.

ಪರಮಾರ್ಥಗೀತೆ-ಜ್ಞಾನದ ಸಪ್ತ ಭೂಮಿಕೆಗಳು

—ಬಸವರಾಜ ಯ. ಯಡ್ರಾವಿ

ಪರಮಾರ್ಥಗೀತೆಯು ಒಟ್ಟು ಹನ್ನೊಂದು ಗತಿ (ಅಧ್ಯಾಯ)ಗಳಾಗಿ ಲಲಿತ ರಗಳೆಯಲ್ಲಿ ಗುರು-ಶಿಷ್ಯ ಸಂವಾದ ರೂಪದಿಂದ ಓತಪ್ರೋತವಾಗಿ ಹರಿದು ಬಂದ ಪವಿತ್ರಪಾವನ ಗಂಗೆಯಾಗಿದೆ. ಗ್ರಂಥದ ಪ್ರಾರಂಭದಲ್ಲಿ ಒಂಭತ್ತು ಕಂದ ಪದ್ಯಗಳು "ಗುರುಗಳಿಂದ ಶಿಷ್ಯನಿಗೆ ಕನ್ನಡದಲ್ಲಿ ಮೋಕ್ಷಮಾರ್ಗ ಕಥನದ ಪ್ರತಿಜ್ಞೆ, ಅಧಿಕಾರಿ, ಕಥನ, ಪ್ರತಿಪಾದ್ಯ-ಪ್ರತಿಪಾದಕ ಸಂಬಂಧ, ಪ್ರಯೋಜನ-ಗ್ರಂಥ ವಿಷಯ ಕಥನಗಳನ್ನು ಹೇಳುತ್ತವೆ. ಒಂದೊಂದು ಗತಿಯ ಪ್ರಾರಂಭ-ಮುಕ್ತಾಯಗಳು ಕಂದಪದ್ಯಗಳಿಂದಾಗಿವೆ. ಗ್ರಂಥದ ಕೊನೆಯಲ್ಲಿ ಗ್ರಂಥಮಹಿಮೆಯನ್ನು ಮನಗಾಣಿಸುವ ಮತ್ತೆರಡು ಕಂದ ಪದ್ಯಗಳಿವೆ." "ತನ್ನ ನಿಜ ಸ್ಥಿತಿ ತಾನೇನೆಂದು| ಮುನ್ನಿನ ಪರಿಭವವೆಂತಾಯ್ತೆಂದು||" ಎಂದು ತಾನಾರು, ಈ ಸೃಷ್ಟಿ ಹೇಗಾಯ್ತೆಂದು ಶಿಷ್ಯನು ಕೇಳಿದ ಎರಡು ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಮೊದಲಿನ ಆರು ಗತಿಗಳು ಬಂದಿವೆ. "ಇನ್ನಿದು ಪರಿವುಪಾಯ ಮಿದೆಂದು|" ಅಂದರೆ ಜನನ-ಮರಣ ಭವಚಕ್ರವು ನಿವೃತ್ತಿಯಾಗಲು ಯಾವ ಸಾಧನೋಪಾಯಗಳನ್ನು ಅನುಸರಿಸಬೇಕು? ಎಂಬ ಪ್ರಶ್ನೆಗೆ ಪರಿಹಾರವಾಗಿ ೭ರಿಂದ ೧೦ರ ವರೆಗಿನ ಗತಿಗಳು ಪ್ರತಿಪಾದಿತವಾಗಿವೆ. ೧೧ನೆಯದರಲ್ಲಿ ಯೋಗಿವರನ ಜೀವನ್ಮುಕ್ತನ ಚಾರಿತ್ರವು ನಿರೂಪಿಸಲ್ಪಟ್ಟಿದೆ.

ಈಗ ಜೀವನ್ಮುಕ್ತಿಗೆ ಹೋಗಲು ಆತ್ಮಜ್ಞಾನವೇ ಸಾಕ್ಷಾತ್ ಸಾಧನವೆಂಬುದು ಖಚಿತವಾದವನು ಯಾವ ಸಾಧನ ಸೋಪಾನಗಳನ್ನೇರಬೇಕಾಗಿದೆ ಎಂಬುದನ್ನು ನಿಜಗುಣರು ಪರಮಾರ್ಥಗೀತೆಯಲ್ಲಿ ಬೋಧಿಸಿದ ವಿಷಯವನ್ನು ಸಂಕ್ಷೇಪವಾಗಿ ತಿಳಿಯುವ ಪ್ರಯತ್ನ ಮಾಡೋಣ. ಅವರು ೬ನೆಯ ಗತಿಯ ಕೊನೆಯಲ್ಲಿ ಜೀವನ್ಮುಕ್ತಿ ಸ್ಥಿತಿಯನ್ನು ನಿರೂಪಿಸಿ "ಮುಕ್ತಂಗಾದರಿವಿನ-ಭೂಮಿಗಳು| ಮುಕ್ತಿಪಥದೊಳುಂಟವ ನೆರೆಕೇಳು" ಎಂದಿದ್ದಾರೆ. ಅವು ಯಾವುವು? "ವಿರತನು ಮೋಕ್ಷವ ಬಯಸುವದೊಂದು| ಗುರುಗಳನ್ನೈದಿ ವಿಚಾರಿಪುದೊಂದು|| ನಿಸ್ಸಂಗತೆಯಂ ಪಡೆಯುವದೊಂದು| ನಿಸ್ಸಂಶಯ ಸುಖವಿಡಿದಿಹುದೊಂದು|| ವಾಸನೆ ವಿಲಯವನ್ನೈದುವುದೊಂದು| ಭಾಸುರವೆನಿಸುವ ತುರ್ಯವದೊಂದು|| ಮೇಲಣ ತುರ್ಯಾತೀತವದೊಂದು| ಕೇಳಿಂತಿವೆ. ಸುತ ಭೂಮಿಗಳೆಂದು||" ಎಂದು ಒಂದೊಂದು ವಾಕ್ಯದಲ್ಲಿ ಅವುಗಳನ್ನು ತಿಳಿಸಿದ್ದಾರೆ. ಸುಖೇಚ್ಛೆ, ಸುವಿಚಾರಣ, ನಿಸ್ಸಂಗತ್ವ, ವಿಲಾಯಿನಿ, ಆನಂದಿನಿ, ತುರ್ಯ ಹಾಗೂ ತುರ್ಯಾತೀತ

ಎಂದು ಆ ಭೂಮಿಕೆಗಳಿಗೆ ಹೆಸರಿಸಿದ್ದಾರೆ. "ಕೇಳೆಲೆ ವಾಸಿಷ್ಠಾದಿಗಳಲ್ಲಿ! ಪೇಳಿದ ತತ್ವಾರ್ಥವನಿಂದಿಲ್ಲಿ! ನಿನಗರುಪ್ರವೆ ನಾನೀ ಗೀತೆಯೊಳು" ಎಂದು ಹೇಳಿದ್ದರೂ, ನಿಜಗುಣರು ತನುಮಾನಸಕ್ಕೆ ನಿಸ್ಸಂಗತ್ವ, ಸತ್ತ್ವಾಪತ್ತಿಗೆ ವಿಲಾಯಿನಿ, ಅಸಂಸಕ್ತಿಗೆ ಆನಂದಿನಿ, ಪದಾರ್ಥಾಭಾವಿನಿಗೆ ತುರ್ಯ ಹಾಗೂ ತುರ್ಯಗಾಕ್ಕೆ ತುರ್ಯಾತೀತ ಎಂದು ನಾಮಗಳನ್ನು ಪ್ರಯೋಗಿಸಿದ್ದಾರೆ. ಆ ಭೂಮಿಕೆಗಳ ಸ್ವರೂಪ ಲಕ್ಷಣಗಳನ್ನು ಯೋಗವಾಸಿಷ್ಠಾದಿಗಳನ್ನನುಸರಿಸಿಯೇ ಕಾವ್ಯಮಯವಾಗಿ ಹೃದಯಂಗಮವಾಗಿ ನಿರೂಪಿಸಿದ್ದಾರೆ. ಇವೇ ಅಂದರೆ ನಿಜಗುಣರಿಟ್ಟುಕೊಂಡ ಹೆಸರುಗಳನ್ನೇ ಮುಂದೆ ಬಂದ ಶ್ರೀ ಮಹಾಲಿಂಗರಂಗರು, ತಮ್ಮ "ಅನುಭವಾಮೃತ" ಹಾಗೂ ಶ್ರೀ ಚಿದಾನಂದಾವಧೂತರು ತಮ್ಮ "ಜ್ಞಾನಸಿಂಧು" ಎಂಬ ಕನ್ನಡ ಗ್ರಂಥಗಳಲ್ಲಿ ಬಳಸಿಕೊಂಡಿದ್ದಾರೆ. ನಿಜಗುಣರ 'ವಿಲಾಯಿನಿ'ಗೆ ಇವರು 'ವಾಸನಾಕ್ಷಯ'ವೆಂದು ಪ್ರಯೋಗಿಸಿದ್ದುಂಟು. ಸುಖೇಚ್ಛೆ (ಶುಭೇಚ್ಛೆ), ಸುವಿಚಾರಣ-ಇವೆರಡು ಹೆಸರುಗಳನ್ನು ಸಾಮಾನ್ಯವಾಗಿ ಉಪಯೋಗಿಸಿದ್ದಾರೆ.

ಮುಕ್ತಿಯೆಂದರೆ ಅತ್ಯಂತ ದುಃಖ ನಿವೃತ್ತಿಪೂರ್ವಕ ಪರಮಾನಂದ ಪ್ರಾಪ್ತಿ, ಹುಟ್ಟು-ಸಾವುಗಳಿಂದ ಬಿಡುಗಡೆ. ಇದು ಮಾನವನ ಚರಮಗುರಿಯಾಗಿದೆ. ಈ ಗುರಿ ತಲುಪಲು ಮಾನವನು ಅನೇಕ ರೀತಿಗಳಿಂದ ಹೆಣಗಾಡುತ್ತಿದ್ದಾನೆ. ಆದರೆ ಗುರಿಯೊಂದು ಕಡೆ, ಇವನ ನಡೆ ಇನ್ನೊಂದು ಕಡೆ. ಗುರಿ ತಲುಪುವೆಂತು? "ಸಾರೆ ಚೆಲ್ಲ್ಯದ ಮುಕುತಿ, ಗುರು ತೋರಿದೊಡಲ್ಲದೆ ಕಾಣಿಸದಣ್ಣ" ಎಂದು ಅಲ್ಲಮಪ್ರಭುಗಳು ಹೇಳಿದ್ದು ಎಷ್ಟು ಸತ್ಯ! ಗುರಿ ತಲುಪಲು ಗುರು ಈ ಜ್ಞಾನಪರ ಅಂದರೆ ವಿಚಾರ ಪ್ರಧಾನ ಏಳು ಭೂಮಿಕೆಗಳನ್ನು ಬೋಧಿಸುತ್ತಾನೆ. ಇವು "ನಿಜ ಮುಕ್ತಿ ಸ್ಥಾನಕ್ಕೆ ಸೋಪನಂಗಳಿವು." "ಸುಲಭವಲ್ಲವು ಸಾಧಿಸುಪೊಡೀ ಭೂಮಿಕೆಗಳಿರವು." ಅದಕ್ಕಾಗಿ ಗುರುಕೃಪೆ-ಮಾರ್ಗದರ್ಶನಗಳು ಅತ್ಯಾವಶ್ಯ. ಸ್ವಪ್ರಯತ್ನದಿಂದಲೇ ಸಾಧಿಸುವೆನೆಂಬ ಹಟಮಾರಿತನವು ಇಲ್ಲಿ ಸಲ್ಲ. ಪ್ರಯತ್ನವು ಗುರುಪ್ರಸಾದ ಸಹಿತವಾಗಿದ್ದರೆ ಮಾತ್ರ ಫಲಪ್ರದ. ಈ ಭೂಮಿಕೆಗಳ ಸ್ವರೂಪ ಲಕ್ಷಣಗಳನ್ನು ಒಂದೊಂದಾಗಿ ತಿಳಿಯುವಾ.

೧. **ಸುಖೇಚ್ಛೆ**: ಪದವೇ ಸೂಚಿಸುವಂತೆ ಸುಖಕ್ಕಾಗಿ ಇಚ್ಛೆ-ಆನಂದಕ್ಕಾಗಿ ಆಸೆ ಎಂದು ಅರ್ಥವಾಗುತ್ತದೆ. ಸುಖಕ್ಕಾಗಿ ಇಚ್ಛಿಸದವರಾರು? ಇದು ಎಲ್ಲರಿಗೂ ಇದ್ದೇ ಇರುತ್ತದೆ. ಇದು ಮುಕ್ತಿಗೆ ಮೆಟ್ಟಿಲಾಗುವ ಯಾವ ವೈಶಿಷ್ಟ್ಯವನ್ನು ಹೊಂದಿದೆ? ಎಂದು ಪ್ರಶ್ನೆಯೇಳುತ್ತದೆ. ಆದರೆ ಸುಖವು ಕ್ಷಣಿಕ ಹಾಗೂ ಶಾಶ್ವತವೆಂದು ಎರಡು ತೆರನಾಗಿದೆ. ಕ್ಷಣಿಕ ಅನಿತ್ಯ ಇಹಲೋಕ-ಪರಲೋಕ ಸುಖವನ್ನು ಬಯಸುವದಲ್ಲ. ನಿತ್ಯ ನಿರತಿಶಯ ಸುಖವನ್ನು ಬಯಸುವದು ಸುಖೇಚ್ಛಾ ಭೂಮಿಕೆಯಾಗಿದೆ. 'ರಾಗಿ' 'ವಿರಾಗಿ'ಗಳೆಂದು ಈ ಲೋಕದ ಜನರೆಲ್ಲರನ್ನೂ ವರ್ಗೀಕರಿಸಿದರೆ, ರಾಗಿಗಳು "ಇಹ-ಪರವೇ ಸಾಕು, ಎನಗದರಿಂ ಸತ್ಕರ್ಮವೇ ಬೇಕು" ಎನ್ನುತ್ತಾರೆ. ಇವರು ಜ್ಞಾನ

ಭೂಮಿಕೆಗಳಿಗೆ ಅನರ್ಹರು. ಈ ಲೋಕದ ಹಾಗೂ ಆ ಲೋಕದ ಸ್ಥೂಲ ಸೂಕ್ಷ್ಮ, ಭೋಗ ವಿಲಾಸಗಳ ಅನಿತ್ಯತಾ ದೋಷವನ್ನರಿತು, ಅವುಗಳನ್ನು ಪ್ರತ್ಯಕ್ಷವಾಗಿಯಾಗಲಿ ಅಥವಾ ಮಾನಸಿಕವಾಗಲಿ ತೊರೆದು, ಮನಸ್ಸು ವಾಸನೆಗಳಿಂದ ಪ್ರೇರಿತವಾಗಿ ಭೋಗಗಳೆಡೆ ಎರಗಿದಾಗ ಛಲದಿಂದ ಅದನ್ನು ಹಿಂದೆಗೆದುಕೊಳ್ಳುವ ವಿವೇಕ-ಶಮಾದಿ ಸಂಪನ್ನ, ಸುಕೃತಿಯಾದ ಧೀರ ವಿರಾಗಿ ಮಾತ್ರ ಮೋಕ್ಷರೂಪ ನಿತ್ಯ ಸುಖವನ್ನು ಪಡೆಯ ಬಯಸುವದು ಸುಖೇಚ್ಛಾಭೂಮಿಕೆಯಾಗಿದೆ. "ವಿಷಯದೊಳು ಎರಕವನುಳ್ಳವನಂದ। ಭಕ್ಷಕ (ನಾಯಿ) ನೆಲುವಿನೊಳು ರಮಿಯಿಪ್ಪಂದ॥" ಎಂದು ಇಡೀ ವಿಶ್ವದಲ್ಲಿ ವಿಷಯ ಗಳೆಡೆ "ಉದಾಸೀನ" ಭಾವ ತಾಳಿ ಅಂತರ್ಮುಖನಾಗಿ ಸದಾಚಾರ ಪರನಾಗಿ 'ಭೋಗ ವಿರಾಗಿ'ಯು 'ಸುಖದಿಚ್ಛೆಯ ಯೋಗಿ'. ಈ ಭೋಗವು ನೂತನವಾಗಿ ಕಾಣದು; ಪಿಷ್ಟವಿಪೇಷಣವಿಧಿಯಂತೆ ಮಾಡಿದ್ದನ್ನೇ ಮಾಡುವ ಹಳಸಲಾದ ವಸ್ತು-ಎಂದು ಎಲ್ಲವನ್ನು ತ್ಯಜಿಸಿದ್ದಾನೆ. ಗುರಿ ತಲುಪುವವರೆಗೆ ಸೊಗಸಿಲ್ಲ, ಸಮಾಧಾನವಿಲ್ಲ. 'ಸದುಗತಿಯೊಳು ಉರಿಯುವ ಆಸೆ', "ಲೇಸಲ್ಲಿಯದಕಟಾ ತನಗೆಂದು। ಲೇಸಂ ಕೊಡುವವರಾರ್ತನಗೆಂದು। ಚಿರತರವಹ ಯೋಚನೆವಿಡಿದವನು। ವಿರತಿ ಪರಿಪಾಕಂ ಬಡೆದವನು॥" ಈ ಪ್ರಥಮ ಸೋಪಾನವೇರಲು ಅರ್ಹನಾಗಿದ್ದಾನೆ. ವಿಕ್ರಮಾದಿತ್ಯನ ನ್ಯಾಯಪೀಠವೇರಲು ಇಪ್ಪತ್ತುನಾಲ್ಕು ಮೆಟ್ಟಲುಗಳನ್ನೇರಬೇಕಾಗಿದ್ದವನು ಹಸುಗೂಸಿನ ಹೃದಯದಂತಹ ಶುದ್ಧ ನಿಷ್ಕಪಟ ಹೃದಯವನ್ನು ಹೊಂದಿದ್ದರೆ ಮಾತ್ರ ಯೋಗ್ಯನಾಗು ತ್ತಿದ್ದನಂತೆ. ಅದರಂತೆಯೇ ಈ ಮುಕ್ತಿ ಸೋಪಾನಗಳನ್ನೇರಲು ವಿರತಿಯೇ ಅರ್ಹತೆ ಯಾಗಿದೆ. ಸುಖೇಚ್ಛಾ ಭೂಮಿಕೆಯಳವಟ್ಟವನು ಇರುವ ರೀತಿ ಇಂತಿದೆ. "ತಡೆಯದೆ ಸುಕೃತವನಾಚರಿಪವನು। ಬಿಡುವಂ ದುಷ್ಕೃತವೆಲ್ಲವನು॥ ಧರ್ಮಂಗಳ ನೆಡೆವಿಡದಾಚರಿಪ। ಧರ್ಮಫಲಂಗಳ ನುರೆ ಧಿಕ್ಕರಿಪ॥ ಪರರ ಸಿರಿಗೆ ಮತ್ಸರವಂ ಮಾಡ। ಪರಪೀಡೆಯ ನೆನಹಿನೊಳೊಡಗೂಡ॥ ದೇಶೋಚಿತ ಕಾಲೋಚಿತಮಾಗಿ। ಆಸುರಗತಿಯುಳಿದನುಗುಣ ಮಾಗಿ॥ ಒಂದೆರಡಿನಿವಾತುಗಳಂ ನುಡಿವ ಕುಂದದಿಳೆಗೆ ಸೊಗಸಾಗಿರೆ ನಡೆವ॥ ಇಂತೆಸಗುವ ಯೋಗವನುಳ್ಳವನು। ಇಂತಾದಿಯ ಭೂಮಿಕೆಯುಳ್ಳವನು."

ಇಂಥವನಲ್ಲಿ ಆತ್ಮವಿಚಾರ ಇಂಬುಗೊಳ್ಳುತ್ತದೆ. ಅನಾತ್ಮ ವಿಚಾರವು ಹುರುಳಿಲ್ಲದ್ದು, ದುಃಖದಾಯಕವೆಂಬುದು ದೃಢವಾಗಿರುತ್ತದೆ. ಇಂಥವನ ವಿರತಿಯು ಬೀಜ, ರೂಪ, ಕಾರ್ಯಗಳನ್ನು ಹೊಂದಿದೆ. ವಿರತಿಗೆ "ವಿಷಯ ದೋಷವನೂಹಿಪ್ಪುದು" ಬೀಜ: "ಆ ವಿಷಯವನುರೆ ತೊರೆದಿಹುದು" ರೂಪ: "ಬಳಿಕ ಅವರ ಆಯಾ ವಾಸನೆಯಿಂದ ಘಳಿಲನೆ ಮನವಲ್ಲೆರಗಿಮೊಡೆ, ಛಲವಂ ಬಲಿದು ಒಲ್ಲದೆ ಬಿಟ್ಟಿಹುದು" ಕಾರ್ಯವಾಗಿದೆ. ಇದರಂತೆಯೇ ಸಗುಣ ನಿರ್ಗುಣಾಷ್ಟಾಂಗಯೋಗವು ಯಮಾದಿಗಳನ್ನು ಬೀಜ, "ಚಲಿಸುವ ಮನವದು ಸುಸ್ಥಿರದಿಂದ ನಿಲಲು ಅದು ರೂಪ", "ಮಗುಳೆ ಬಹಿರ್ವ್ಯಾಪಾರಂಗಳನು। ಮಿಗೆ ದುಃಖಪ್ರದ ಕರ್ಮಂಗಳನು॥ ಒಲ್ಲದೆ ಬಿಡುವುದೇ ಕಾರ್ಯಮದಾಗಿ" ಇದೆ.

ಸುಖೇಚ್ಛೆ ಹಾಗೂ ವಿಚಾರಣ ಭೂಮಿಕೆಗಳ ನಡುವೆ ಈ ಸಾಧನಕ್ರಮಗಳನ್ನು ನಿಜಗುಣರೇ ಏಕೆ ಹೇಳಿದರು? ಎಂಬ ಜಿಜ್ಞಾಸೆಯುಂಟಾಗುತ್ತದೆ. ವೈರಾಗ್ಯದಿಂದ ಅಂತರ್ಮುಖ ಗೊಂಡ ಮನಸ್ಸು ಶುದ್ಧವಾಗಿದ್ದರೂ ಚಂಚಲತೆಯನ್ನು ಹೊಂದಿರುವ ಸಾಧ್ಯತೆಯಿದೆ. ಅದನ್ನು ಸ್ಥಿರೀಕರಿಸುವದಕ್ಕಾಗಿ ಈ ಯೋಗ ಕ್ರಮವನ್ನು ಸಂಕ್ಷಿಪ್ತವಾಗಿಯಾದರೂ ಸ್ಪಷ್ಟವಾಗಿ ಬೋಧಿಸಿದ್ದಾರೆ. ಮುಂದಿನ ಆತ್ಮವಿಚಾರ ಭೂಮಿಕೆಗೆ ಸ್ಥಿರ ಮನಸ್ಸು ಅತ್ಯಾವಶ್ಯಕವಾಗಿದೆ. ಈ ಸಪ್ತಭೂಮಿಗಳನ್ನು ಹೇಳುವಾಗ ವೈರಾಗ್ಯಪ್ರಧಾನ ಸಾಧನ ವೊಂದನ್ನೇ ಉಳಿದವರು ಹೇಳಿದ್ದಾರೆ.

೨) **ವಿಚಾರಣ:** ಸುಖೇಚ್ಛೆಯುಳ್ಳವನು ವೈರಾಗ್ಯಶಾಲಿಯಿದ್ದಾನೆ. ಯೋಗ ದಿಂದ ಚಿತ್ತಸ್ಥೈರ್ಯವುಳ್ಳವನಾಗಿದ್ದಾನೆ ತಾನಾರು? ತನಗೆ ಮುಕ್ತಿಯಂತು? ಅದಕ್ಕೆ ಸಾಧನವೇನು? ಎಂಬ ಜಿಜ್ಞಾಸೆಯನ್ನು ಹೊಂದಿ ಆಧ್ಯಾತ್ಮ ವಿಚಾರಕ್ಕೆ ಅಣಿಯಾಗಿದ್ದಾನೆ.

"ವೈರಾಗ್ಯದ ನಿಜಸುಖಮಂ ಬಲ್ಲ| ಸಾರ ಶೃತಿ ಪಥಮಂ ನೆರೆಬಲ್ಲ|| ದೇಹಾದಿ ಗಳಾತ್ಮತೆಯಂ ಕಳೆವ| ಊಹಿಸಲಾತ್ಮವಿಚಾರದೊಳುಳಿವ|| ಗುರುಗಳನೈದಿ ಬಿಡದೆ ಸೇವಿಸುತ| ನಿರುತಂ ಮನಮುಟ್ಟಿ ವಿಚಾರಿಸುತ|| ಸಾರತರದ ಶಾಸ್ತ್ರವ ಕೇಳುತ್ತ| ಘೋರ ಭವದ ಕೇಡಂ ಕಾಣುತ್ತ|| ಇರಲೆರಡನೆಯ ಪದಸ್ಥಿತನವನು| ಪರಮ ವಿಚಾರದ ಭೂಮಿಕೆಯವನು."

ಇಲ್ಲಿ ಭೂಮಿಕೆಗೆ 'ಪದ' ಎಂಬ ಶಬ್ದವನ್ನು ಬಳಸಿದ್ದಾರೆ. ಈ ಸಾಧಕನು ಶ್ರೋತ್ರಿಯ ಬ್ರಹ್ಮನಿಷ್ಠ ಗುರುವನ್ನೇ ಆಶ್ರಯಿಸುತ್ತಾನೆ. ಸರ್ವಲೌಕಿಕ ಭೋಗಸುಖವಿದು ವಿಚಾರದಿಂದ ನೀರಸವೆನಿಸಿದೆ. ಅವುಗಳ ತ್ಯಾಗದಲ್ಲಿಯೇ ನಿಜಸುಖವಿದೆಯೆಂದರಿತಿದ್ದಾನೆ. ಉಪನಿಷದ್ರಹಸ್ಯವನ್ನು ತಿಳಿದಾಗಲೇ ನಿಜಸುಖ ಸಾಧ್ಯವೆಂಬುದು ನಿಶ್ಚಿತವಾಗಿದೆ. ಗುರುವಿನಲ್ಲಿ 'ನಿರಹಮ್ಮು'ದಳೆದು ದೇಹಾದಿಗಳು ಅನಾತ್ಮವೆಂದು ನೇತಿಗಳೆಯುತ್ತಾನೆ. ಆಪ್ತ, ಅಂಗ, ಸ್ಥಾನ, ಸದ್ಭಾವಗಳೆಂಬ ಚತುರ್ವಿಧ ಸೇವಾ ಕೈಕೊಂಡಿದ್ದಾನೆ. ಈಶ– ಜೀವರ ಲಕ್ಷ್ಯಾರ್ಥವನ್ನು ಗುರುವಿನಿಂದ ಷಡ್ಲಿಂಗ ಪೂರ್ವಕವಾಗಿ ಅದು ಬೋಧಿಸ ಲ್ಪಟ್ಟಾಗ ಅಧ್ಯಾಸವನ್ನು ಬಹುವಿಧ ಭ್ರಾಂತಿಯನ್ನು ಕಳೆದು ಅರಿಯುತ್ತಾನೆ. "ಜೀವೇಶ್ವರರೇಕತ್ವದ ನಿಲವ| ಭಾವಿಸುತಾ ಸಹಜಾತ್ಮನ ನಿಜವ||" ತಿಳಿಯುವವರೆಗೂ ಆರೈವುತ್ತಿರುತ್ತಾನೆ. "ಶುತಾರ್ಥಸ್ಯ ಚಿಂತನಂ ಮನನಂ" ಎನ್ನುವಂತೆ, ಅರಿವ ಅಂಶವನೆಲ್ಲ ಅರಿಯುತ್ತಾನೆ. ಅರಿದ ಅಭೇದ ಜ್ಞಾನದಲ್ಲಿ ಅನನ್ಯ ಪ್ರೀತಿಯುಳ್ಳವನಾಗುತ್ತಾನೆ. ಸರ್ವಭ್ರಾಂತಿಗಳನ್ನು ಬಿಟ್ಟು ಶಾಂತಿ ಸುಖವನ್ನಳವಡಿಸಿಕೊಂಡಿರುತ್ತಾನೆ. ಪರೆಯಿಂದ ಹೊರಬಂದ ಹಾವು ತೀವ್ರ ತೀಕ್ಷ್ಣ ಚಲನವಲನಗಳನ್ನು ಹೊಂದುವಂತೆ ಈ ಭೂಮಿಕೆಯ ಸಾಧಕನು ಜನ್ಮಾಂತರದ ವಾಸನೆಗಳನ್ನು ದೂರೀಕರಿಸಿ ಆತ್ಮವಿಚಾರದ ವಿಘ್ನಗಳನ್ನು ಜಯಿಸುತ್ತಾನೆ. ತತ್ವಮಸಿ ಮಹಾವಾಕ್ಯದ ಗುಟ್ಟನ್ನು ಗುರು ಕೃಪೆಯಿಂದ ತಿಳಿಯುತ್ತಾನೆ. ತತ್‌ಪದ ವಾಚ್ಯ ಈಶ್ವರ, ತ್ವಂಪದವಾಚ್ಯ ಜೀವ, ತತ್‌ಪದ ಲಕ್ಷ್ಯ ಪರತರಬೊಮ್ಮ,

ತುರ್ಯ ನಿಜಾತ್ಮನೆ ತ್ವಂಪದ ಲಕ್ಷ್ಯ, ವಾಚ್ಯಾರ್ಥ ಬಿಟ್ಟು ಲಕ್ಷ್ಯಾರ್ಥ ನೋಡಿದರೆ ಅಸಿಪದಕ್ಕೆ ಚಿದಖಂಡೈಕರಸವೇ ಅರ್ಥವಾಗಿದೆ. ಈ ರೀತಿ ಸದ್ಗುರುವಿನಿಂದ ಶ್ರವಣಗೈದು ಚಿಂತನ ಮಾಡುತ್ತಿರುವುದೇ ವಿಚಾರಣವೆನಿಸಿದೆ.

ಜೀವೇಶ್ವರರೇಕತ್ವವನು ತಿಳಿಯಲು ಅನೇಕ ದೃಷ್ಟಾಂತಗಳನ್ನು ಚಿಂತಿಸುತ್ತಾನೆ. ಘಟ-ಮಠದೊಳಗಿನ ಆಕಾಶವು ಒಂದೇ. ಪರಶುರಾಮ-ರಾಮರಲ್ಲಿಯ ವಿಷ್ಣುತ್ವವೊಂದೇ. ದಶ-ಶತ-ಸಂಖ್ಯೆಗಳ ಮುಂದಿನ ಬಿಂದುಗಳನ್ನು ತೆಗೆದಾಗ ಉಳಿಯುವದು ಒಂದೇ. ಅಂದುಗೆ-ಮಕುಟಗಳ ನಾಮರೂಪಗಳನ್ನು ಬಾಧಪಡಿಸಿ ನೋಡಿದಾಗ ಬಂಗಾರದ ಘಟ್ಟಿಯೊಂದೇ, ಹೀಗೆ ಜೀವ-ಶಿವರೆಂದು ಕರೆಯಿಸಿಕೊಳ್ಳುವ ಚೈತನ್ಯವಸ್ತು, ಜೀವನದಲ್ಲಿ 'ಕಿಂಚಿಜ್ಞ ತ್ವಾದಿಕ'ವ, ಶಿವನಲ್ಲಿಯ 'ಸರ್ವಜ್ಞ ತ್ವಾದಿಕ'ವ ತೊಡೆದು ಹಾಕಿದಾಗ, ಒಂದೇ ಒಂದು. ಬೇರೊಂದಿಲ್ಲ. ಬೇರೊಂದಿದೆಯೆಂಬ ವಿಕಲ್ಪ ಮಾಡುವದು ಸಲ್ಲದು.

೩. **ನಿಸ್ಸಂಗತ್ವ**: ನಿಸ್ಸಂಗನೆಂದರೆ ಸಂಗವಿಲ್ಲದೆ ಇರುವದು. ದೇಹಾದಿಗಳ ಸಂಗವು ತನಗೆಂದೂ ಇಲ್ಲ. ತಾನು ಸರ್ವಕ್ಕೂ ಸಾಕ್ಷಿ ಚಿನ್ಮಾತ್ರ ಸ್ವರೂಪವೆಂಬ ಜ್ಞಾನವು ಆತ್ಮಾಕಾರ ವೃತ್ತಿಯಿಂದಲೂ ಸದ್ಗುರು ತಿಳಿಸಿದ ಯುಕ್ತಿ ದೃಷ್ಟಾಂತಗಳ ಸಹಾಯದಿಂದಲೂ ಸಾಧಕನಿಗೆ ಅಳವಡುತ್ತ ಹೋಗುತ್ತದೆ. ದಶಮ ಪುರುಷನು ಹತ್ತನೆಯವನಿಲ್ಲ. ತಾನೇ ಹತ್ತನೆಯವನಹುದೋ ಅಲ್ಲವೋ ಎಂಬ ಅಜ್ಞಾನ, ಅಸಂಭಾವನೆಗಳಿಂದ, ಹತ್ತನೆಯವನು ಕಳೆದೇ ಹೋಗಿದ್ದಾನೆಂಬ ವಿಪರೀತ ಭಾವನೆಯಿಂದ ಅನೇಕ ಪ್ರಕಾರವಾಗಿ ದುಃಖವನ್ನನುಭವಿಸುತ್ತಾನೆ. ಒಬ್ಬ ಆಪ್ತ ಪುರುಷನು ಪ್ರಾಪ್ತನಾಗಿ ದಶಮ ಅಂದರೆ ಹತ್ತನೆಯವನೆಂದೂ ಕಳೆದು, ಹೋಗಿಲ್ಲವೆಂಬ ಜ್ಞಾನವನ್ನು ಮಾಡಿಕೊಟ್ಟಾಗ ಆ ದಶಮನಿಗೆ ದುಃಖವು ಮಾಯವಾಗಿ ಹರ್ಷವುಕ್ಕುತ್ತದೆ. ಇದರಂತೆಯೇ ಒಬ್ಬ ಅಜ್ಞಾನಿಯು ಬ್ರಹ್ಮನಿಲ್ಲವೆಂಬ ಅಸತ್ವಾಪಾದಕಾವರಣವು, ತಾನು ಬ್ರಹ್ಮನೆಂಬುದು ಗೋಚರವಿಲ್ಲವೆಂಬ ಅಭಾನಾಪಾದಕಾವರಣವು, ಕರ್ತೃ-ಭೋಕ್ತಾ, ಸುಖಿ ದುಃಖಿಯೆಂಬ ವಿಪರೀತಭಾವನೆ ಅಥವಾ ವಿಪೇಕ್ಷವು, ಸದ್ಗುರುವಿನ ಮಹಾವಾಕ್ಯದುಪದೇಶದಿಂದ ಪರೋಕ್ಷಜ್ಞಾನ, ಅಪರೋಕ್ಷಜ್ಞಾನಗಳು ಸಾಧಕನ ಹೃದಯದಲ್ಲಿ ಮೂಡುತ್ತವೆ. ಅದರ ಫಲವಾಗಿ ಶೋಕ ನಿವೃತ್ತಿ, ನಿರಂಕುಶ ತೃಪ್ತಿಗಳು ಪ್ರಾಪ್ತವಾಗುತ್ತವೆ. ಯಾಕೆಂದರೆ "ಎನುತಂ ಜ್ಞಾನಾಭ್ಯಾಸಂ ನೆಲಿಸಿ। ತನಗಾ ಜ್ಞಾತೃತ್ವಾದಿಕಮೆನಿಸಿ॥ ಇರ್ದಿರವಂ ಸುವಿಚಾರದಿ ನೋಡಿ। ಪೊರ್ದಿದ ಬಗೆಗಳನುಳಿ ದೀಡಾಡಿ॥ ನಿಸ್ಸಂಗತ್ವವೆ ತನಗಳವಟ್ಟು ನಿಸ್ಸಂಶಯದೊಳಿಹನು ಮನತಿಟ್ಟು॥ ಅನಾತ್ಮಾಕಾರ ವೃತ್ತಿಗಳ ತ್ಯಾಗಪೂರ್ವಕ ಆತ್ಮಾಕಾರವೃತ್ತಿ ಪ್ರವಾಹವೇ ನಿದಿಧ್ಯಾಸನ. ಈ ನಿದಿಧ್ಯಾಸನದಿಂದ ವೃತ್ತಿ (ಮನಸ್ಸು) ಅಂತರ್ಮುಖವಾಗಿ ಅತಿ ಸೂಕ್ಷ್ಮತೆಯನ್ನು ಹೊಂದುತ್ತಲಿರುತ್ತದೆ. ಸದಾ ತನ್ನ ಅಸಂಗ ಅದ್ವಯ ನಿರುಪಮ ಲಕ್ಷಣಾತ್ಮಕವಾದ ತನ್ನ ಸ್ವರೂಪವನ್ನು ನೋಡುತ್ತಿರುತ್ತಾನೆ. ಆದ್ದರಿಂದ ಅಸಂಗನೇ ತಾನೆಂಬ ನಿಶ್ಚಯವಾಗುತ್ತದೆ.

ಇಲ್ಲಿ ಜ್ಞಾನಕ್ಕೆ ಬೀಜ, ರೂಪ ಕಾರ್ಯಗಳನ್ನು ಹೇಳಿ, ಇಂಥ ಜ್ಞಾನವುಳ್ಳಾತನೇ

ನಿಸ್ಸಂಗತ್ವಭೂಮಿಕೆಯಲ್ಲಿದ್ದವನೆಂದು ನಿರೂಪಿಸುತ್ತಾರೆ. ಜ್ಞಾನಕ್ಕೆ ಬೀಜರೂಪಂ ಕಾರ್ಯ| ತಾನುಂಟವನರಿವುದು ಸುವಿಚಾರ್ಯ ಶ್ರವಣಾದಿಕವೇ ಬೀಜವಿದೀಗ| ಅವು ಶ್ರುತಿಗೇಳ್ಪುದು ಯುಕ್ತ್ಯನುಯೋಗ|| ಅಹಮಾತ್ಮರನು ಪೃಥಕ್ಕರಿಸುವದು| ಸಹಜವದಕೆ ರೂಪೆಂದೆನಿಸುವದು|| ಮತ್ತಾತಹಮ್ಮಿನೊಳಿಹ ಸಂಸಾರ| ಪೊತ್ತಂಬರಿಸುವ ದುಃಖವಿಚಾರ|| ತೋರಿದೊಡವಕಾತ್ಮನು ಸಾಕ್ಷಿತನು| ಬೇರದರಿಂದವೆ ಸುಖಚಿನ್ಮಯನು|| ಎಂಬುದೇ ಕಾರ್ಯವಿದನು ಬಲ್ಲವನು| ನಂಬಾ ನಿಸ್ಸಂಗತೆಯುಳ್ಳವನು||" ಶ್ರವಣ, ಮನನ, ನಿದಿಧ್ಯಾಸನಗಳೇ ಆತ್ಮಜ್ಞಾನಕ್ಕೆ ಹೇತುವಾಗಿವೆ. ಮಹಾವಾಕ್ಯವನ್ನು ಸದ್ಗುರುವಿನಿಂದ ಷಡ್ಲಿಂಗಪೂರ್ವಕವಾಗಿ ಕೇಳುವದು ಶ್ರವಣ ಇದು ಅಂಗಿಯೆನಿಸಿದೆ. ಕೇಳಿದ ಅಧ್ಯಾತ್ಮ ವಿಷಯವು ನಿಶ್ಚಯವಾಗುವದು ಯುಕ್ತಿ ಅಂದರೆ ಅಭೇದಸಾಧಕ ಭೇದಬಾಧಕಯುಕ್ತಿ ಅನುಮಾನಸಹಿತ ಚಿಂತನದಿಂದ ಮನನದಿಂದ. ಅಲ್ಲಿ ಬ್ರಹ್ಮಾತ್ಮರ ಏಕತ್ವದ ನಿಶ್ಚಯದಲ್ಲಿಯೇ ಏಕಾಗ್ರತೆಯೇ ನಿದಿಧ್ಯಾಸನವಾಗಿದೆ. ಆದ್ದರಿಂದ ಅಂಗಿಯಾದ ಶ್ರವಣಕ್ಕೆ ಮನನನಿಧಿಧ್ಯಾಸನಗಳು ಅಂಗಗಳಾಗಿವೆ. ಈ ಮೂರರಿಂದ ಆತ್ಮಜ್ಞಾನವು ಮೂಡುತ್ತದೆ. ಅಹಂಕಾರ–ಆತ್ಮರನ್ನು ಪ್ರತ್ಯೇಕಿಸಿ ತಿಳಿಯುವುದೇ ಆ ಜ್ಞಾನದ ಸ್ವರೂಪ. ಅಹಂಕಾರದಲ್ಲಡಗಿದ ಸಂಸಾರ ದುಃಖಸಮೂಹವು ತೋರಿದರೆ ಅದಕ್ಕೆ ಆತ್ಮನಾದ ತಾನು ಸಾಕ್ಷೀಸುಖಚಿನ್ಮಯನೆಂಬ ಸತತವಾದ ನಿಸ್ಸಂಶಯ ನಿಸ್ಸಂಗತ್ವವೇ ಕಾರ್ಯ ಅಥವಾ ಪರಿಣಾಮವಾಗಿದೆ. ಇಂಥ ಶುದ್ಧ ಆತ್ಮಾಕಾರ ವೃತ್ತಿರೂಪದರ್ಪಣದಲ್ಲಿ 'ಬಚ್ಚಬರಿಯ ಸಮಸುಖ'ವು "ನಿಜವೇ ತೋರುವದು ಇದಿರಿಟ್ಟಂತೆ, ಕರಗತ ಮಾಣಿಕ್ಯದಂತೆ" ಉತ್ಪಾದ್ಯ, ವಿಕಾರ್ಯ, ಸಂಸ್ಕಾರ್ಯ ಹಾಗೂ ಪ್ರಾಪ್ಯಕರ್ಮಫಲ ಆತ್ಮನಾದ ತಾನಲ್ಲ. ಸಚ್ಚಿದಾನಂದ ನಿತ್ಯಪೂರ್ಣನಾದ ತಾನು "ನಾನಾಕರ್ಮದ ಸೋಂಕಲ್ಲದವನು" ಕರ್ಮಗಳ ಕರ್ತಾ, ಕರ್ಮಫಲಭೋಕ್ತಾ ಆಗಿರುವದು ಅಹಂಕಾರವೇ ಹೊರತು ಇವುಗಳ ಲೇಪವಿಲ್ಲದ ಅಸಂಗತನಾದ ತಾನಲ್ಲವೆಂಬರಿವು ನೆಲೆಯೂರಿರುತ್ತದೆ.

ನಿಸ್ಸಂಗತ್ವವು ೧) ಸಾಮಾನ್ಯಸಂಗ ೨) ವಿಶೇಷಾಸಂಗವೆಂದು ಎರಡು ಪ್ರಕಾರದಿಂದ ಇದೆಯೆಂದು ನಿಜಗುಣರೊಬ್ಬರೇ ಹೇಳಿದ್ದಾರೆ. ಯೋಗವಾಶಿಷ್ಠದಲ್ಲಿ ಈ ಪ್ರಭೇದಗಳಿಲ್ಲ. ಮುಂದೆ ಬಂದ ಶ್ರೀ ಮಹಲಿಂಗಗುರು ಹಾಗೂ ಚಿದಾನಂದಾವಧೂತರೂ ಸಹ ಹೇಳಿಲ್ಲ. ವಿಚಾರ ಚಂದ್ರೋದಯದಲ್ಲಿಯೂ ಇಲ್ಲ. ನಿರವಯವಾದ ಆಕಾಶಕ್ಕೆ ಹಕ್ಕಿಗಳ ಹಿಂಡು ಹಾರಾಡಲು ಅವಕಾಶತೆಯನ್ನು ಹೇಳಬಹುದೇ ಹೊರತು ಅವುಗಳ ಹಾರಾಟ–ತೂರಾಟದ ವಿಕಾರ ತರಂಗಗಳ ಸಂಬಂಧ ಅಥವಾ ಲೇಪವನ್ನು ಹೇಳಲಿಕ್ಕೆ ಬರುವದಿಲ್ಲ. ಅದು ನಿತ್ಯ ಅಸಂಗತವಾಗಿರುತ್ತದೆ. ಆದರಂತೆಯೇ ನಿರಂಗ ನಿಷ್ಕಳ ನಿಜಾತ್ಮನಲ್ಲಿ ಅಹಂಕಾರದಲ್ಲಡಗಿದ ಸಂಸಾರದ ದುಃಖವು ತೋರಿದರೂ, ಅದರ ಲೇಪವು ಇಲ್ಲ. ಇಂಥ ಸ್ಥಿತಿ ತನ್ನದು. ಇದು ಸಾಮಾನ್ಯಾಸಂಗ, ಜಗತ್ತಿಗೆ, ಬ್ರಹ್ಮ, ಮಾಯೆ, ಈಶ್ವರ,

ಪ್ರಕೃತಿ ಮುಂತಾದವುಗಳು ಕಾರಣವಾಗಿವೆಯೆಂದು ಅನೇಕ ಮತವಾದಿಗಳು ಹೇಳುತ್ತಾರೆ. ಆದರೆ ಅಸಂಗನಾದ ತನ್ನ ಹೊರ್ತಾಗಿ 'ಇನ್ನೊಂದೇನೂ ಇಲ್ಲ; ಏಕಮೇವಾದ್ವಿತೀಯ ನಾದ ಆತ್ಮನನ್ನು ನೋಡಿ ಇದು ಜಗತ್ತು, ಇವು ನಾಮರೂಪವೆಂದು ತಪ್ಪುತಿಳುವಳಿಕೆ ಯಾಗಿದೆ. "ಆದರಿಂ ವಿಪರೀತಾಕೃತಿಯೆಲ್ಲ| ವಿದಿತಂ ಬಗೆಯಲು ದಿಟವದಕಿಲ್ಲ|| ಬಗೆಯದು ಮಾಯಾಮಾಯ ಸಂಬಂಧ| ಮಿಗೆ ಮಾಯೆಯೇ ಅವಿಚಾರಿತ ಬಂಧ||" ಜಗತ್ತಿಗೆ ಅಂದರೆ ಅದರ ಉತ್ಪತ್ತಿಗೆ ಯಾವುದೇ ಕಾರಣವಿಲ್ಲವೆಂಬ ಅಜಾತವಾದವು ಇಲ್ಲಿ ಹೇಳಲ್ಪಟ್ಟಿದೆ. ಜಗತ್ತು ಅವಿದ್ಯಾದೃಷ್ಟಿಗೆ ತೋರುವ ಪ್ರತೀತಿ ಮಾತ್ರ. ಈ ದೃಷ್ಟಿ ಸೃಷ್ಟಿವಾದವನ್ನು ಹೀಗೆ ಹೇಳಲಾಗಿದೆ: "ಪುಸಿಯಾರೋಪಿತ ಜೀವಾಭಾಸ| ಎಸೆವುದು ಬಗೆಯಂದದರ ವಿಲಾಸ|| ಇನಿತು ಪದಾರ್ಥಂಗಳ ರೂಪಾಗಿ| ಕನಸಿನವೊಲು ಜಗತ್ರಯಮಾಗಿ|| ತೋರುವು ದಾಯಾರೂಪಿಂ ದೃಷ್ಟಿ| ಬೇರೆನಿಸುತ್ತಿಂತಾಯ್ತೀ ಸೃಷ್ಟಿ|| ಸ್ಥಿರವಲ್ಲಿದು ದಿಟವೆಂಬೀ ಬುದ್ಧಿ| ನಿರುತಂ ಪ್ರಸಿಯೆಂಬುದೆ ಸಿದ್ಧಿ|| ಆದರಿಂ ನಿತ್ಯಾಸಂಗಂತಾನು| ಸದಮಲಸುಖಪೂರ್ಣವೆ ಯಾಗಿಹನು|| ಅಂತು ವಿಶೇಷಾಸಂಗದ ಭೂಮಿ| ಇಂತರಿದಾತನೇ ಸುಕ್ಷೇಮಿ||"

ಸಾಮಾನ್ಯಾಸಂಗವು ಅಹಮಾದಿ ಸಂಸಾರ ದುಃಖದ ಮೊತ್ತದ ಸಂಗವಿಲ್ಲದಿಹು ದಾಗಿದೆ, ವಿಶೇಷಾಂಗವು ಜಗದ್ರೂಪ ವಿಚಾರ ಸಮೂಹದ ಸಂಬಂಧವು ಆತ್ಮನಾದ ತನಗಿಲ್ಲದಿಹುದಾಗಿದೆ. ಈ ರೀತಿಯಿಂದ ನಿಸ್ಸಂಗತ್ವವನ್ನು ಬಹುವಿಶೇಷವಾಗಿ ನಿಜಗುಣರು ಪ್ರತಿಪಾದಿಸಿ ಆಧ್ಯಾತ್ಮಿಕ ಮನೋವಿಜ್ಞಾನದ ಸೂಕ್ಷ್ಮ ಹರಹು–ಹೊಳಹುಗಳನ್ನು ತೆರೆದು ತೋರಿಸಿದ್ದಾರೆನ್ನುವದು ಸುಸ್ಪಷ್ಟ. ಜಿಜ್ಞಾಸುಗಳಿಗೆ ಅಭ್ಯಾಸ ಪ್ರವೃತ್ತಿಯನ್ನು ಉದ್ದೀಪನಗೊಳಿಸುವಂಥದಾಗಿದೆ. ಸುಖೇಚ್ಛೆ, ಆತ್ಮವಿಚಾರ, ನಿಸ್ಸಂಗತಿಯೆಂಬ ಸಾಧನ ಭೂಮಿಗಳು ಪರಿಪಕ್ವತೆ ಪಡೆದಿರುವದು ವಿಶೇಷಾಸಂಗ–ಸಾಮಾನ್ಯಾಸಂಗಗಳಲ್ಲಿ. "ಆ ನಿಸ್ಸಂಗತೆ ಪಡೆದವನಿರವು| ಸೂನು| ತಿಳಿಯೆ ಕಲ್ಪನೆಗದು ಪರವು||" ಎಂದು ಪ್ರಾರಂಭಿಸಿ ದೃಷ್ಟಾಂತಗಳ ಸುರಿಮಳೆಯನ್ನೇ ಸುರಿದಿದ್ದಾರೆ. "ಅದು ತೆರೆಯುಡಗಿದ ಸಾಗರದಂತೆ| ಅದು ಮೇಘಂತೊಲಗಿದ ನಭದಂತೆ|| ಪೊರೆಗಳೆದಲೆವಾಳೆಯ ಸುಳಿಯಂತೆ| ಮರುತ ನಡಗಿದೆಡೆಯಣ ಸೊಡರಂತೆ|| ಎಲೆಯುದುರಿದ ತರುವಿನ ಪರಿಯಂತೆ| ನೆಲಸಿದ ಸುಖ ನಿದ್ರಿತನಂತೆ|| ಮಂಜುದೊಲಗಿ ಮಿರುಗುವ ರವಿಯಂತೆ| ಮಂಜೀರಾದಿಯಳಿದ ಪೊನ್ನಂತೆ|| ಎಸೆವುದು ಸಚಿನ್ಮಾತ್ರವೆಯಾಗಿ| ಮಸಗಿಹುದೊಂದರ ಸೋಂಕಿಲ್ಲಾಗಿ||" ಒಂದೊಂದು ದೃಷ್ಟಾಂತವನ್ನು ತೊಳೆತೊಳೆಯಾಗಿ ಮನಸ್ಸಿನಲ್ಲಿ ಬಿಡಿಸಿಕೊಳ್ಳುತ್ತ ಹೋದರೆ ನಿಸ್ಸಂಗದ ನಿಲುವಿನಲ್ಲಿ ನಿಂತವನ ಆ ದಿವ್ಯ ಸ್ಥಿತಿ, ಮುಂದೆ ಹೇಳಲ್ಪಡುವ ಚತುರ್ವಿಧ ಮುಕ್ತರ ಸ್ಥಿತಿಗಿಂತ ಯಾವುದರಲ್ಲಿ ಕಡಿಮೆಯಾಗಿದೆ! ಎಂದೆನಿಸದಿರಲಾರದು.

ಈ ವರೆಗಿನ ಮೂರು ಭೂಮಿಕೆಗಳು ಸಕ್ರಿಯಾಶೀಲ ಸಬಲ ಸುವಿವೇಕದಿಂದೊಡ ಗೂಡಿದ ಸಾಧನ ಭೂಮಿಕೆಗಳು. ಆದ್ದರಿಂದ ಯೋಗಿಯ ಜಾಗ್ರದವಸ್ಥೆಯೆಂದು ಈ ಭೂಮಿತ್ರಯ ಕರೆಯಿಸಿಕೊಂಡಿದೆ.

ಮುಂದಿನ ಭೂಮಿಕೆಯನ್ನು ವರ್ಣಿಸುವದಕ್ಕಿಂತ ಮೊದಲು ಯೋಗಿಯು ಯೋಗ ಸಿದ್ಧಿಸದೆ ಮೃತನಾದರೆ ಅವನು ಏನಾಗುವನು? ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾರೆ. ಆ ಯೋಗಿಯು ಪಾಪವನ್ನೆಲ್ಲ ಕಳೆದುಕೊಂಡು ಪುಣ್ಯವಂತನಾಗಿರುತ್ತಾನೆ. ಪ್ರಾರಬ್ಧದಿಂದ ಆಯುಷ್ಯವು ಅವನ ಅಭ್ಯಾಸ ಕಾಲದಲ್ಲಿಯೇ ಶರೀರವು ನಷ್ಟವಾದರೆ, ಅವನು ದುಃಖವನ್ನು ಹೊಂದದೆ ಊರ್ಧ್ವ ಲೋಕಗಳಲ್ಲಿ ಸುಖ ಪಡೆಯುತ್ತಾನೆ. ಪುಣ್ಯದ ಫಲ ತೀರಿದ ಬಳಿಕ ಈ ಭೂಲೋಕಕ್ಕೆ ಬರುತ್ತಾನೆ. ಸಿರಿವಂತರ ಇಲ್ಲವೆ ಯೋಗಿಗಳ ಕುಲದಲ್ಲಿ ಹುಟ್ಟಿ ತನ್ನ ಪೂರ್ವಾಭ್ಯಾಸದ ವಾಸನೆಯಿಂದ ನಿಸ್ಸಂಗತವರೆಗಿನ ಭೂಮಿಕೆಗಳನ್ನು "ಘಳಿಲನೆ ಪಡೆದವನು" ಮೊದಲಿನಂತೆ ಸದಾಚಾರ ಸದ್ಗೋಷ್ಠಿ ಸದ್ಗುಣಗಳನ್ನು ಬಿಡದೆ ಇರುತ್ತಾನೆ. ಇದೊಂದು ರೀತಿ. ಇನ್ನೊಂದು ರೀತಿಯ ಉತ್ತರವೇನೆಂದರೆ ಯೋಗಿಯು ಮೃತನಾದರೆ, ವಾಸನಾನುಸಾರ ಮೇಲಿನ ಲೋಕಗಳಿಗೆ ಹೋಗಿ ಎಲ್ಲ ದಿವ್ಯ ಪದವಿಗಳು ಪ್ರಾಪ್ತವಾಗಿ ಸುಖಭೋಗಿಗಳನ್ನುಂಡು ಅಲ್ಲಿಯೇ ಮುಕ್ತನಾಗುತ್ತಾನೆ. ಆ ಯೋಗೀಶ್ವರನಿಗೆ ಸರಿಯಾದವರಿಲ್ಲ. ಅವನಿಗೆ ಅಣಿಮಾದ್ಯಷ್ಟೈಶ್ವರ್ಯಗಳು ಪ್ರಾಪ್ತವಾಗಿರುತ್ತವೆ. ಅವುಗಳನ್ನು ನಿಜಗುಣರು ಸಾರಭೂತವಾಗಿ ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾರೆ.

೪. **ವಿಲಾಯಿನಿ (ವಾಸನಾಕ್ಷಯ)** : ಮೂರು ಭೂಮಿಕೆಗಳ ಅಭ್ಯಾಸವು ದೃಢವಾಗಿ ನಾಲ್ಕನೆಯ ಭೂಮಿಕೆಗೇರುತ್ತಾನೆ ಯೋಗಿಯು. ಆತ್ಮಜ್ಞಾನದಿಂದ ಅಜ್ಞಾನ ಹಾಗೂ ಅದರಿಂದುಂಟಾದ ಸಂಶಯುಗಳು, ವಿಪರೀತ ಭಾವನಾಮಯ ಭ್ರಾಂತಿಗಳು ನಿವೃತ್ತಿಯಾಗಿ, ಸುಖಾನುಭವದೊಳು ನಲಿದಾಡುತ್ತಿರುತ್ತಾನೆ. "ಸಯೋಹವೈತತ್ ಪರಮಂ ಬ್ರಹ್ಮವೇದ ಬ್ರಹ್ಮೈವ ಭವತಿ" (ಮುಂಡಕೋಪನಿಷತ್), ಇಲ್ಲಿ ಯೋಗಿಯು ಸಾಧಕನಾಗಿದ್ದವನು ಸಿದ್ಧನಾಗಿದ್ದಾನೆ, ಜ್ಞಾನಿಯಾಗಿದ್ದಾನೆ. ನೇತ್ರಾದಿ ಇಂದ್ರಿಯಗಳು ವಿಷಯುಗಳತ್ತ ಹರಿಯುವ ಅವುಗಳ ಆಸಕ್ತಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾನೆ. ವಿಷಯಬುದ್ಧಿಯನ್ನು ಅಂದರೆ ಶಬ್ದ–ಸ್ಪರ್ಶ–ರೂಪ-ರಸ–ಗಂಧಗಳು ಸತ್ಯವೆಂಬ ಬುದ್ಧಿಯನ್ನು ಮರೆತು ಈ ಜಗತ್ತೆಲ್ಲವೂ ಆಭಾಸವಾಗಿ ತೋರುತ್ತದೆ. ಸ್ವಪ್ನವಾಗಿ ಕಾಣುತ್ತದೆ. "ನೆಗಳಿದ ವಾಸನೆ ಲಯಿಸುತ್ತಿಹುದು। ಅದರಿಂದದನು ವಿಲಾಯಿನಿಯೆಂದು।" ಇಲ್ಲಿ 'ನೆಗಳಿದ ವಾಸನೆ'ಯೆಂದರೆ ಲೋಕವಾಸನೆ, ಶಾಸ್ತ್ರವಾಸನೆ ಹಾಗೂ ದೇಹವಾಸನೆಗಳು ಲಯುಗೊಳ್ಳುತ್ತವೆ. 'ವಿಲಾಯಿನಿ' ಎಂಬ ಶಬ್ದವನ್ನು ಕನ್ನಡ ವೇದಾಂತಗ್ರಂಥಗಳಲ್ಲಿ ನಿಜಗುಣರೊಬ್ಬರೇ ಉಪಯೋಗಿಸಿದ್ದಾರೆ. 'ಅನುಭವಾಮೃತ' ಹಾಗೂ 'ಜ್ಞಾನಸಿಂಧು' ಗಳಲ್ಲಿ ವಾಸನಾಕ್ಷಯ ಅಥವಾ ನಿರ್ವಾಸನಾ ಎಂಬ ಪದಗಳು ಪ್ರಯೋಗವಾಗಿವೆ. ಈ ಭೂಮಿಕೆಯ ಜ್ಞಾನಿಯು ಬ್ರಹ್ಮವಿತ್ ಎಂದು ಕರೆಯಿಸಿಕೊಳ್ಳುತ್ತಾನೆ. ಇದು ಯೋಗಿಯ ಸ್ವಪ್ನಾವಸ್ಥೆಯಾಗಿದೆ. ಕನಸಿನಲ್ಲಾದ ದುಃಖ ದುಮ್ಮಾನಗಳನ್ನು ಎಚ್ಚರವಾದೊಡನೆಯೇ ಮಿಥ್ಯೆಯೆಂದು ತಿಳಿದಾಗ ಸಾಮಾನ್ಯ ಮಾನವನಿಗೆ ಸಂತೋಷವಾಗುವಂತೆ, ಜ್ಞಾನಿಗೂ ಈ

ಜಗತ್ರಯವೆಲ್ಲವೂ ಮಿಥ್ಯೆಯಾಗಿ ತೋರುವದರಿಂದ ಅವನ ವಾಸನಾರಹಿತ ಬುದ್ಧಿವೃತ್ತಿ, ಸ್ವರೂಪ ಸುಖವನ್ನನುಭವಿಸುತ್ತಿರುತ್ತದೆ.

೫. **ಆನಂದಿನಿ** : ಅಕೃತೋಪಾಸ್ತಿಯಲ್ಲಿ ಒಂದೆರಡು ಸಾಧನಗಳು ಮಾತ್ರ ಪ್ರಕಟವಾಗಿದ್ದು ಉಳಿದ ಸಾಧನಗಳು ಪ್ರಕಟವಾಗಿರುವದಿಲ್ಲವಾದ್ದರಿಂದ ಅವನು ಬುದ್ಧಿವಂತನಾಗಿದ್ದರೆ ೪ನೆಯ ಭೂಮಿಕೆಯಲ್ಲಿಯ ತತ್ವ ಜ್ಞಾನವನ್ನು ಪಡೆಯುತ್ತಾನೆ. ಆದರೆ ಬಹುಕಾಲದ ಅಭ್ಯಾಸದಿಂದ ಅವನು ೫ ರಿಂದ ೭ನೆಯ ಭೂಮಿಕೆಯವರೆಗೆ ಆರೂಢನಾಗುತ್ತ ಹೋಗುತ್ತಾನೆ. ಅಂದರೆ ಅಕೃತೋಪಾಸ್ತಿಗಾಗಿ ೫, ೬, ೭ ಭೂಮಿಕೆಗಳು ಹೇಳಲ್ಪಟ್ಟಿವೆ. ಇದು ಶ್ರೀ ಪೀತಾಂಬರಜಿಯವರು ತಮ್ಮ ವಿಚಾರ ಚಂದ್ರೋದಯವೆಂಬ ಗ್ರಂಥದಲ್ಲಿ ಬರೆದಿರುವದರ ಅಭಿಪ್ರಾಯವಾಗಿದೆ.

ಆನಂದಿನಿಯಲ್ಲಿ ಯಾವ ಭೇದ ಭ್ರಾಂತಿಯುಳಿದಿಲ್ಲ. ವಿಷಯಸಂಗ, ದೇಹಸಂಗಗಳು ಸಂಪೂರ್ಣವಾಗಿ ಕಳಚಿಹೋಗುತ್ತವೆ. ಆಗ ದೇಶ ಕಾಲ ವಸ್ತುಕೃತ ಪರಿಚ್ಛಿನ್ನತ್ವಗಳು ದೂರವಾಗಿ ಪೂರ್ಣ ಪರಬ್ರಹ್ಮವೇ ತಾನೆಂಬ ಭಾವವೇ ನೆಲೆಯೂರಿದೆ. ಸರ್ವ ವ್ಯವಹಾರಗಳು ಜ್ಞಾತೃ-ಜ್ಞಾನ-ಜ್ಞೇಯಗಳೆಂಬ ತ್ರಿಪುಟಿಯಿಂದ ನಡೆಯುತ್ತವೆ. ಈಗ ತ್ರಿಪುಟಿರಹಿತ ಸ್ಥಿತಿಯೇ ಇದ್ದಾಗ ಯಾವ ವ್ಯಾಪಾರವೂ ಇಲ್ಲ. "ನಿರ್ವ್ಯಾಪಾರವೇ ಮೈಯಾಗಿರ್ದ" ಸಂಸಾರ ವಾಸನೆಯು ಪೋಗಿ ಅಚಲವಾದ ನಿಜ ಸುಖ ತಾನಾಗಿದ್ದಾನೆ. ನಿರಂತರವಾಗಿ ತನ್ನ ಸ್ವರೂಪಾನಂದವ ಸವಿಯುಲ್ಲಿ ಮಗ್ನರಾಗಿರುವದರಿಂದ ಅಂತರ್ಮುಖನಾಗಿರುತ್ತಾನೆ; ಸುಖದ ಮೂರ್ಛೆಯಲ್ಲಿರುತ್ತಾನೆ ಒಮ್ಮೊಮ್ಮೆ ಸ್ವಯಂ ಬಹಿರ್ಮುಖನಾದಾಗ ಆತ್ಮಸುಖದ ಸಂಸ್ಕಾರವನ್ನೇ ಅವನ ವೃತ್ತಿಯು ಹೊತ್ತುತಂದಿರುತ್ತದೆ. ಪರವಶನಂತೆ ಸಂಚರಿಸುತ್ತಾನೆ. ಇದಕ್ಕೆ ಯೋಗಿಯ ಸುಪ್ತಾವಸ್ಥೆಯೆಂದು ಕರೆಯಿಸಿಕೊಂಡಿದೆ. ಇವನು ಬ್ರಹ್ಮವಿದ್ವರನೆಂದೆನಿಸಿದ್ದಾನೆ. ಇವನ ನಿರ್ವ್ಯಾಪಾರಸ್ಥಿತಿಯನ್ನು ಭಗವದ್ಗೀತೆಯ ಒಂದು ಶ್ಲೋಕವು ಹೀಗೆ ಹೇಳಿವೆ: "ನೈವ ತಸ್ಯಕೃತೇನಾರ್ಥೋ ನಾಕೃತೇನೇಹ ಕಶ್ಚನ! ನಚಾಸ್ಯಸರ್ವಭೂತೇಷು ಕಶ್ಚಿದರ್ಥವ್ಯ ಪ್ರಾಶ್ರಯಃ॥"— ಮಹಾತ್ಮನಿಗೆ ಈ ವಿಶ್ವದಲ್ಲಿ ಕರ್ಮ ಮಾಡುವದರಿಂದ ಯಾವ ಪ್ರಯೋಜನವೂ ಇಲ್ಲ. ಕರ್ಮ ಮಾಡದಿರುವುದರಿಂದಲೂ ಏನೂ ಪ್ರಯೋಜನವಿಲ್ಲ. ಸಮಗ್ರ ಪ್ರಾಣಿಗಳಲ್ಲಿಯೂ ಅವನಿಗೆ ಕಿಂಚಿನ್ಮಾತ್ರ ಸಂಬಂಧವೂ ಇಲ್ಲ.

೬. **ತುರ್ಯ**: ಬ್ರಹ್ಮವಿದನು ತಾನು ಸನ್ಮಾತ್ರ ಶುದ್ಧಬ್ರಹ್ಮವೆಂದು ದೃಢವಾಗಿ ಅನುಭವಿಸಿದಾಗ ದೇಹದಲ್ಲಿಯ ಅಹಂಕಾರ ಮಮಕಾರಗಳಿಲ್ಲವಾಗಿ ದೇಹದ ಮೇಲಿನ ಪ್ರೀತಿಯು ಅತ್ಯಂತ ಅಭಾವವಾಗುತ್ತದೆ. ಅಸಂಗ ಚಿನ್ಮಾತ್ರ ತಾನೆಂಬುದು ಗಟ್ಟಿಗೊಳ್ಳುತ್ತದೆ. ಆಗ ಬ್ರಹ್ಮವಿದ್ವರನಾಗಿ ಆನಂದಾವಿರ್ಭಾವವನ್ನು ಸದಾ ಅನುಭವಿಸುತ್ತಿರುತ್ತಾನೆ. ಆ ಶುದ್ಧ ಆನಂದ ಸಾಗರದಲ್ಲಿ ಅವನ ವೃತ್ತಿಯು ಅಡಗುತ್ತದೆ. ಅವನ ಚಿತ್ತವು ನಿರ್ವಾಸನೆಯುಳ್ಳದ್ದಾಗುತ್ತದೆ. ದ್ವೈತವಾಸನೆಯೂ ಇಲ್ಲ. ಅದ್ವೈತ ವಾಸನೆಯೂ ಇಲ್ಲ.

ಆನಂದಿನಿಯಲ್ಲಿಯೇ ಪರವಶನಂತೆ, ಸುಪ್ತನಂತೆ ಆನಂದ ಮೂರ್ಚ್ಛೆಯಲ್ಲಿ ಓಲಾಡುತ್ತಿದ್ದವನು ಓಲಾಡುವ ಮನವೇ ಸ್ವರೂಪದಲ್ಲಿ ಮುಳುಗಿದಾಗ ಭೇದಾಭೇದಗಳು ಪ್ರತ್ಯೇಕ ಪದಾರ್ಥಗಳಾಗಿ ತೋರದೆ "ಬರಿ ಬಯಲಾಗಿ ಆನಂದದ ಪೂರ್ಣವೇ ತಾನಾಗಿ"ರುತ್ತಾನೆ. "ವರಚಿತ್ರದ ದೀಪದ ತೆರನಕ್ಕು" ಅಂದರೆ ಸುಂದರ ಕಲಾಪೂರ್ಣ ಚಿತ್ರದ ದೀಪವೂ ಕೇವಲ ಬೆಳ್ಳಂಬೆಳಗನ್ನೇ ಸೂಸುವದು ಕಾಣುತ್ತದೆ. ಅಲ್ಲಿ ಯಾವುದೇ ಚಲನೆಯಿಲ್ಲ, ಉಷ್ಣತೆಯಿಲ್ಲ, ಕಾಡಿಗೆಯಿಲ್ಲ. ಅದಕ್ಕೆ ಹೊರ–ಒಳ ಭಾಗಗಳಿಲ್ಲ. ಅದರಂತೆ ಮೂರವಸ್ಥೆಯ ಮೀರಿದ 'ಉನ್ಮನ್ಯವಸ್ಥೆ'ತುರ್ಯ. "ಯತ್ರ ಯತ್ರ ಮನೋಯಾತಿ ತತ್ರ ಬ್ರಹ್ಮ ದರ್ಶನಂ", ಎಂಬ ಶ್ರುತಿ, "ಮನವೆತ್ತಲೆರಗಲಾ ಯೋಗವೈಸೆ" ಎಂಬ ನಿಜಗುಣರ ವಾಣಿ ಈ ಭೂಮಿಕೆಯನ್ನು ಸುಂದರವಾಗಿ ಚಿತ್ರಿಸುತ್ತವೆ. ಬ್ರಹ್ಮವಿದನು ಬ್ರಹ್ಮವಿದ್ವರನಾಗಿ ಇಲ್ಲಿ ಬ್ರಹ್ಮವಿದ್ವರೀಯಾನ್ ಎನಿಸಿಕೊಳ್ಳುತ್ತಾನೆ. "ಆತಂ ಪರಪದವಾಗಿರುತಿಹನು। ಆತನ ಖಂಡ್ಯ ಕರಸಂ ತಾನು" ಅವನ ಪರಬ್ರಹ್ಮ ಸ್ವರೂಪವೇ ಆಗಿದ್ದಾನೆ. ಅವನು ಸ್ವಗತಾದಿ ಭೇದರಹಿತನಾಗಿರುತ್ತಾನೆ. "ಷಷ್ಠೀ ಗಾಢ ಸುಷುಪ್ತಾಖ್ಯಾಂ ಕ್ರಮಾತ್ಪತತಿ ಭೂಮಿಕಾತ್" ಜೀವನ್ಮುಕ್ತಿ ವಿವೇಕದಲ್ಲಿ ಈ ತುರ್ಯವು ಯೋಗೀಶ್ವರನ "ಗಾಢಸುಷುಪ್ತಿ" ಯೆಂದು ಹೇಳಿದೆ. ಅದೇ ಗ್ರಂಥದಲ್ಲಿ "ಪಂಚಮ ಭೂಮೌ ನಿರ್ವಿಕಲ್ಪಾತ್ ಸ್ವಯ ಮೇವವ್ಯುತ್ತಿಷ್ಠತೆ। ಷಷ್ಠ ಭೂಮೌ ಪಾರ್ಶ್ವಸ್ಥೈಃ ಬೋಧಿತೇ ವ್ಯುತ್ತಿಷ್ಠತೆ"ಯೆಂದು ಹೇಳಿದೆ. ಪಂಚಮ ಭೂಮಿಯಲ್ಲಿದ್ದವನು ತಾನೇ ನಿರ್ವಿಕಲ್ಪ ಸಮಾಧಿರೂಪ ಸ್ಥಿತಿಯಿಂದ ಎಚ್ಚರವಾದರೆ, ಆರನೆಯ ಭೂಮಿಯಲ್ಲಿದ್ದವನು ಬೇರೊಬ್ಬರಿಂದ ಉತ್ಥಾನ ಹೊಂದುತ್ತಾನೆ. ನಿಜಗುಣರು ಪರಮಾನುಭವಬೋಧೆಯಲ್ಲಿ ಜೀವನ್ಮುಕ್ತಿಸ್ಥಿತಿ ನಿರೂಪಣೆ ಮಾಡುವಾಗ "ನೆನಸು ಕನಸು ನಿದ್ರೆಯೆನಿಪವಸ್ಥೆಗಳು ಚೇತನ ಭಾವಭೇದಂಗಳಿವು ತಾವು॥ ಜನಿತಮಾಗಿಯೆ ಪುಸಿ ತಾನೆ ನಿತ್ಯಾತ್ಮನೆಂದನೆ ತುರ್ಯವಂತರ ಮುಖದೊಳಗದು" ಎಂದಿದ್ದಾರೆ. ವರಜಾಗ್ರ, ವರಸ್ವಪ್ನ, ವರಸುಪ್ತಿಗಳು 'ಅಹಂಬ್ರಹ್ಮಾಸ್ಮಿ'ಯೆಂದು ಅರಿದ ತುರ್ಯದೊಳಗಿನ ತುರ್ಯದಲ್ಲಿ ತೋರಿದ ಚೈತನ್ಯಾತ್ಮಕ ಭಾವಭೇದಗಳು. ಅವು ನಿತ್ಯಾತ್ಮನಲ್ಲಿಲ್ಲವೆಂಬುದೇ ವರತುರ್ಯ.

೭. **ತುರ್ಯಾತೀತ:** ನಿಜಗುಣರ ಶಬ್ದಗಳಲ್ಲಿ ಈ ಸ್ಥಿತಿಯ ವರ್ಣನೆಯನ್ನು ಅರಿತು ಸ್ವಾದಿಸಬೇಕೆನಿಸುತ್ತದೆ.

"ಆಗಳೆ ಪರಮಾತ್ಮನು ತಾನಾಗಿ। ಯೋಗಿ ಮಗುಳೆ ವರ್ತಿಪನಂತಾಗಿ॥ ತಾನೇ ತನ್ನೊಳು ವ್ಯವಹರಿಪಂತೆ। ಜಾನಿಸೆ ತೆರೆ ಜಲದೊಳು ಸುಳಿವಂತೆ॥" ತುರ್ಯಾತೀತ ಭೂಮಿಯ ಯೋಗೀಶ್ವರನ ಸ್ಥಿತಿ ಸಚ್ಚಿದಾನಂದ ನಿತ್ಯಪೂರ್ಣವಾಗಿದೆ. ಅವನ ಶರೀರವು ಸಂಪಿಗೆಯ ಮಕರಂದ ಉಂಡ ಭ್ರಮರವು ಉರುಳುವಂತೆ, ಪ್ರಾರಬ್ಧ ಕರ್ಮವು ಸವೆದಂತೆ ಉರುಳುವದು. "ವಿದೇಹ ಮುಕ್ತಿಯ ಸಾರವೆಂದೇ ಹೇಳುವರು" ಎಂದಿದ್ದಾರೆ ಮಹಾಲಿಂಗರಂಗರು. ನಾನು ಸದ್ರೂಪ, ಅಸದ್ರೂಪ; ಚಿದ್ರೂಪ ಅಚಿದ್ರೂಪವೆಂದು

ಹೇಳಲು ಬಾರದಸ್ಥಿತಿ. ಅದು “ವಾಙ್ಮನಸಾತೀತ” ಮಾತು ಮನಂಗಳಿಂದತ್ತತ್ತ ಮೀರಿದ ಪರಂಜ್ಯೋತಿ, ಭಾವಾತೀತ, ಅಂತಿಂತೆಂದೆನ್ನಲು ಬಾರದುದು. “ತಾನೆಂಬುದಿಲ್ಲವನ್ನತೆಗಾಣಲಿಲ್ಲ ಪಿನ್ನೇನೊಂದನುಸುರಲಿಕ್ಕೆಡೆಯಿಲ್ಲ|| ಮಾನ ಮೇಯಾದಿಗಳಿಲ್ಲವಂತಿಂತೆಂಬುದೇನುಮಿಲ್ಲೆಂದೆಂದೂ ಪರಿಪೂರ್ಣ| ಕಡೆಯಿಲ್ಲ ಮೊದಲಿಲ್ಲ, ತಡೆ ಬಿಡುಗಡೆಯಿಲ್ಲ| ಪಡಿಯಿಲ್ಲ ಪಟ್ಟಾಂತರವೆಯಿಲ್ಲ|| ನುಡಿಯಿಲ್ಲ ನೆಸಹಿಲ್ಲವರಿವಿನೆಚ್ಚರುದೋರ| ಲಿಡೆಯಿಲ್ಲವೆಂದೆಂದೂ ಪರಿಪೂರ್ಣ|| ಅರಿವಿಲ್ಲ ಮರವೆಯಿಲ್ಲರಿವುಮರವೆಯಿಲ್ಲ| ಹರಿಮುರಿಯಿಲ್ಲೊಂದು ಕುರುಹಿಲ್ಲ|| ಕರೆಮರೆಯಿಲ್ಲ| ವಾಸನೆಯೆಲ್ಲವರಿಬಚ್ಚ| ಬರಿಯರಿವೆಂದೆಂದೂ ಪರಿಪೂರ್ಣ||”– ಪರಮಾನುಭವ ಬೋಧೆಯಲ್ಲಿ ಬರುವ ಈ ನುಡಿಗಳು ಎಷ್ಟೊಂದು ರಸಪೂರ್ಣ| ರಹಸ್ಯಪೂರ್ಣ||

“ತುರಿಯಾಭಿದಾಂ ಸಪ್ತಮೀಂ ಭೂಮಿಂ ಪ್ರಾಪ್ತಸ್ಯಯೋಗಿನಃ ಸ್ವತಃ ಪರತೋವಾ ವ್ಯುತ್ಥಾನಮೇವ ನಾಸ್ತಿ” ಎಂದಿದ್ದಾರೆ ವಿದ್ಯಾರಣ್ಯರು ತಮ್ಮ ಜೀವನ್ಮುಕ್ತಿವಿವೇಕದಲ್ಲಿ· ತನ್ನಿಂದಾಗಲಿ ಪರರಿಂದಾಗಲಿ ಈ ಯೋಗೀಶ್ವರನು ಬಹುರ್ಮುಖಿನಾಗಲಾರನು. ಇವನು ಬ್ರಹ್ಮವಿದ್ವರಿಷ್ಠನೆನಿಸುವನು:

ಯೋಗವಾಶಿಷ್ಠದಲ್ಲಿ ೪ನೆಯ ಭೂಮಿಕೆಯಿಂದ ೭ನೆಯದರವರೆಗೆ ಹೇಳಿದ ಆ ಭೇದಗಳು ಬ್ರಹ್ಮಪ್ರಾಪ್ತ ಪುರುಷನ ಭೇದಗಳೆಂದು ತಿಳಿಯದೆ ಅವನ ಅಂತಃಕರಣದ ಭೇದಗಳೆಂದು ತಿಳಿಯಬೇಕು. ೪ನೆಯ ಭೂಮಿಕೆ–ಸತ್ವಾಪತ್ತಿಯನ್ನು ಶ್ರೀ ಯಾಜ್ಞವಲ್ಕ್ಯರು, ರಾಜಾ ಅಶ್ವಪತಿಯು, ಜನಕಾದಿಗಳು ತಲುಪಿದವರೆಂದು ತಿಳಿಯಲ್ಪಟ್ಟಿರುವರು. ಜಡಭರತನನ್ನು ೫ನೆಯ ಭೂಮಿಕೆಯಲ್ಲಿ ಸ್ಥಿತನಾದವನೆಂದು ಮನ್ನಿಸಲಾಗಿದೆ: ಶ್ರೀ ಋಷಭದೇವನು ೬ನೆಯ ಭೂಮಿಕೆಯಲ್ಲಿದ್ದವನೆಂದು ಹೇಳಿಸಿಕೊಳ್ಳುವನು. ೭ನೆಯ ಭೂಮಿಕೆಯಲ್ಲಿ ಹುಬ್ಬಳ್ಳಿಯ ಜಗದ್ಗುರು ಸಿದ್ಧಾರೂಢರ ಉತ್ತರಾಧಿಕಾರಿಗಳಾದ ಶ್ರೀ ಗುರುನಾಥಾರೂಢರು ಸ್ಥಿತರಾಗಿದ್ದರೆಂದು ಅನುಭವಿಗಳ ಅಭಿಪ್ರಾಯವಿದೆ. ಕೆಲವರು ಒಂದೇ ಜನ್ಮದಲ್ಲಿ ಏಳೂ ಭೂಮಿಕೆಗಳನ್ನು ಹೊಂದುವರು. ಕೆಲ ಕೆಲವರು ಅವುಗಳಲ್ಲಿ ಕೆಲವನ್ನು ಹೊಂದಿ ಸ್ಥಿತರಾಗಿರುತ್ತಾರೆ. ಅವರು ಮಹಾತ್ಮರು, ವಂದನೀಯರು, ಪರಮಪದವಿಯನ್ನು ಹೊಂದುವರು.

ಅನುಭವಸಾರದಲ್ಲಿ ಅದ್ವೈತಸಿದ್ಧಿ

—**ಶಂಭುಲಿಂಗಶಾಸ್ತ್ರಿ**

ಅದ್ವೈತವೆಂದರೆ:

'ದ್ವಯೋರ್ಭಾವೋ ದ್ವಾಭ್ಯಾಮಿತಂ ಸಾದ್ವಿತಾ ದ್ವೀತಂ ವಾ ಸೈವ ತದೇವ ವಾ ದ್ವೈತಮ್, ನ ವಿದ್ಯತೇ ದ್ವೈತಂ ದ್ವಿತೀಯೇಶ್ವರಭಾವೋ ಯಸ್ಮಿಸ್ತದದ್ವೈತಮ್' ಅರ್ಥಾತ್ 'ಸಜಾತೀಯ ವಿಜಾತೀಯ ಸ್ವಗತ ಭೇದ ಶೂನ್ಯಂ ಬ್ರಹ್ಮ।'

ಎರಡರ ಇರುವಿಕೆ ಅಥವಾ ಎರಡರಿಂದ ಕೂಡಿರುವುದು ದ್ವೀತಾ ಅಥವಾ ದ್ವೀತ ಅಥವಾ ದ್ವೈತ: ಇದರಿಂದ ರಹಿತವಾದುದು ಅದ್ವೈತ. ಒಬ್ಬ ಮನುಷ್ಯ ಇನ್ನೊಬ್ಬನಿಗೆ ಸಜಾತೀಯನೆನಿಸುತ್ತಾನೆ; ಅವನಿಗೆ ವೃಕ್ಷ ಪಾಷಾಣಾದಿಗಳು ವಿಜಾತೀಯಗಳು; ಅವನ ಹಸ್ತಪಾದಾದಿಗಳು ಸ್ವಗತ ಭೇದಗಳೆನಿಸುವವು. ಈ ಸರ್ವಭೇದರಹಿತನಾದ್ದರಿಂದ ಪರಮಾತ್ಮನಿಗೆ ಅದ್ವೈತನೆಂಬ ಹೆಸರು ಸಲ್ಲುತ್ತದೆ. ಇದು ವಿದ್ವಾಂಸರು ಸಂಸ್ಕೃತದಲ್ಲಿ ಮಾಡಿದ ದ್ವೈತಾದ್ವೈತ ವಿವೇಚನೆಯು.

ತಾನಿದಿರೆಂಬ ಭಾವನೆ ದ್ವೈತಮು। ದಾನಿದಿರೆಂಬೆರಡಳಿದಿರ್ದ॥
ನ್ಯೂನವೆಳ್ಳನಿತಿಲ್ಲದೆಸೆವ ನೈರ್ಮಲ್ಯ ವಿ। ಜ್ಞಾನವದ್ವೈತವೆಂದೆನಿಪುದು॥

ತಾನು ಎಂಬ ಮಾತಿಗೆ ಎರಡರ್ಥ: ನಿಜಸ್ವರೂಪವೇ ಲಕ್ಷಾರ್ಥ; ಅಹಂಕಾರವು ವಾಚ್ಯಾರ್ಥ. ಈ ಅಹಂಕಾರವು ಸಕಲದರೊಡನೆ ವ್ಯವಹರಿಸುವಾಗ ಇದಮಾಕಾರ ವಾಗುತ್ತದೆ. 'ಅಹಮೆಂಬೀ ಬಗೆ ದೇಹದೊಳಿರ್ಕು। ಇದಮೆಂಬುದು ಬಹಿರಂಗದಿ ತೋರ್ಕು॥' ವಿಸ್ತರಿಸಿದ ಹಮ್ಮೇ ಇದಮ್. ಅಹಮ್ ಮತ್ತು ಇದಮ್ ಈ ಭಾವನೆಗಳೇ ದ್ವೈತರೂಪಗಳಾಗಿವೆ. ಆ ಭಾವನೆಗಳಿಂದ ರಹಿತವಾದ ಅಪರಿಚ್ಛಿನ್ ವಿಜ್ಞಾನ ಸ್ವರೂಪವು ಅದ್ವೈತವಾಗಿದೆ. ಇದು ಶ್ರೀಮನ್ನಿಜಗುಣರು ಮಾಡಿದ ಸರಳ, ಸಂಕ್ಷಿಪ್ತ ಹಾಗೂ ಶಾಸ್ತ್ರೀಯ ದೃಷ್ಟಿಯಿಂದ ನಿರ್ದೋಷವಾದ ದ್ವೈತಾದ್ವೈತಗಳ ವಿವೇಚನೆಯು. ಇವುಗಳ ಮರ್ಮ ಮನವರಿಕೆಯಾಗಲು ಮೂರವಸ್ಥೆಗಳ ಅನುಭವವನ್ನು ಸೂಕ್ಷ್ಮವಾಗಿ ಅವಲೋಕಿಸುವದುಚಿತ. ಎಚ್ಚರು, ಕನಸುಗಳಲ್ಲಿ 'ತಾನಿದಿರು' ಗೋಚರಿಸುತ್ತದೆ. ಗಾಢನಿದ್ರೆಯಲ್ಲಿ ಇವುಗಳ ಸುಳಿವೂ ಇಲ್ಲ. ಲಕ್ಷ್ಯಾರ್ಥರೂಪ ತಾನಿದ್ದುದು ಸರ್ವಾನುಭವ ಸಮ್ಮತ.

ಅದ್ವೈತಸಿದ್ಧಿ:

ಇದು ಕುಂಬಾರನು ಸಾಧನಗಳಿಂದ ಘಟಸಿದ್ಧಿ ಮಾಡಿದಂತಲ್ಲ; ವಾಹನಗಳಿಂದ ಮೊದಲೇ ಸಿದ್ಧವಿರುವ ಊರನ್ನು ತಲುಪಿದಂತೆಯೂ ಅಲ್ಲ. ಅದ್ವೈತವು ಸ್ವಯಂಸಿದ್ಧ

ಹಾಗೂ ನಿತ್ಯ ಪ್ರಾಪ್ತವಾಗಿದೆ. ಒಬ್ಬ ಸ್ತ್ರೀಯು ತನ್ನ ಹತ್ತಿರವಿರುವ ಆಭರಣ ಕಾಣ ದಂತಾಗಲು ಕಳೆದುಕೊಂಡೆನೆಂದು ಭ್ರಮಿಸಿ ಅನ್ಯರಿಂದ ಅರಿತು, ಮೊದಲೇ ತನ್ನ ಬಳಿ ಯಲ್ಲಿರುವ ಆಭರಣ ದೊರಕಿತೆಂಬಂತೆ ಅದ್ವೈತಪ್ರಾಪ್ತಿಯಾಗಿದೆ. ಇದು ನಿತ್ಯ ಪ್ರಾಪ್ತಿಯ ಪ್ರಾಪ್ತಿ, "ನಿಜನ ಅಭಿವ್ಯಕ್ತಿ!!" "Manifestation of perfection which is already in man"–ಮೊದಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿ ಎಂದಿದ್ದಾರೆ– ಸ್ವಾಮಿ ವಿವೇಕಾನಂದರು. ಇವರೇ 'We are It already. How to know It?' ಮೊದಲೇ ಅದಾಗಿರುವುದರಿಂದ ಅರಿಯುವದಾದರೂ ಹೇಗೆ? ಎಂದಿದ್ದಾರೆ. ಅದಕ್ಕಾಗಿ ಮಾಡಬೇಕಾದದ್ದಾದರೂ ಏನು?

'To know the self is to be the self and to be the self is to cease the identification with the non-self'–Shree Raman Maharshi. ಆತ್ಮನನ್ನು ತಿಳಿಯುವವೆಂದರೂ ಆತ್ಮನಾಗಿ ಉಳಿಯುವದೆಂದರೂ ಅನಾತ್ಮದೊಡನಿದ್ದ ತಾದಾತ್ಮ್ಯ ಬಿಡಿಸಿಕೊಳ್ಳುವುದು. ಈ ತಾದಾತ್ಮ್ಯ ಸತ್ಯವಾಗಿದ್ದರೆ ಬಿಡಲಾರದು. ಬಿಡುವುದಾದರೆ ಸತ್ಯವಿರಲಾರದು; ಬಿಡಿಸಿಕೊಳ್ಳುವ ಪ್ರಸಂಗವಾದರೂ ಬಂದುದೇಕೆ? ತಪ್ಪು ತಿಳುವಳಿಕೆಯಿಂದ. ಇದಕ್ಕೇ ಭ್ರಮೆ ಇಲ್ಲವೆ ಅಧ್ಯಾಸವೆನ್ನುತ್ತಾರೆ. ಅದನು ತತ್ತಲ್ಲದಿರ್ಪ್ಪದರಲ್ಲಿ ತದ್ಬುದ್ಧಿಯುದಯವೆಂದರಿವುದೆಲೆ ಶುಕ್ತಿ ರಜತವೆಂಬುದರ ದೃಷ್ಟಾಂತ ಮುಖದಿಂದ' ಯಾವಾಗಲೂ ಇರುವ ಶುಕ್ತಿಯಲ್ಲ ಎಂದೂ ಇಲ್ಲದ (ತೋರು ವಾಗಲೂ ವಾಸ್ತವವಾಗಿ ಇಲ್ಲದ) ಬೆಳ್ಳಿ ಹಾಗೂ ಅದರ ಜ್ಞಾನಗಳೆರಡೂ ಗೋಚರಿಸು ತ್ತವೆ. ತಾನೆಂಬ ಮಾತಿಗೆ ಲಕ್ಷ್ಯಾರ್ಥನಾದ ಅದ್ವೈತರೂಪನಾಗಿ, ಶುಕ್ತಿಯಂತೆ ಯಾವಾಗಲೂ ಇರುವ, ತನ್ನಲ್ಲಿ ವಾಚಾರ್ಥಗಳಾದ ಅಹಂಕಾರ ಮೊದಲ್ಗೊಂಡು ಅನಾತ್ಮ ವರ್ಗ(ದ್ವೈತ)ವು ಬೆಳ್ಳಿಯಂತೆ ಗೋಚರಿಸಿವೆ. ಅದರಲ್ಲಿ ಅಹಂಕಾರವು ಮೊದಲನೆಯದು 'ಅದನೆ ಪ್ರಥಮಾಧ್ಯಾಸವದನ ಕಲ್ಪಿತಪುರುಷವದನೆ ವ್ಯವಹಾರಿಜೀವ' ಎಂದಿದ್ದಾರೆ. 'ಅಹಮಿಂಗೆ ಸಂಸಾರವಹುದು', 'ಬಳಿಕಲಂತಾ ಹಮ್ಮಿನೊಳಗುಳ್ಳ ಧರ್ಮವೆಂದುಳಿಯ ದಂತಾತ್ಮನೊಳು ಮಾರ್ಪೊಳೆಯಧ್ಯಾಸವೆನಿಸುವುದು', ಶ್ರೀ ಶಂಕರಾಚಾರ್ಯರ ಅಧ್ಯಾಸ ಭಾಷ್ಯವೇ ಈ ಚರಣಗಳಲ್ಲಿ ಅಡಗಿದೆ. ಇದು ಶ್ರೀಮನ್ನಿಜಗುಣರು ಅಧ್ಯಾಸಕ್ಕೂ ಕವನ ಕಲಿಸಿದ ಕೌಶಲ್ಯ. ಅವರೇ 'ವೇದಾಂತ ಗುರುಶಿಕ್ಷೆಯಿಂದ ಅಹಮಳಿಯೆ' ಎಂದಿರುವ ರಿಂದ ಅಹಂಕಾರದೊಡನಿದ್ದ ತಾದಾತ್ಮ್ಯ ಬಿಡಿಸಿಕೊಳ್ಳುವುದೇ ತಿಳಿಯುವ ಮಾತಿನ ತಾತ್ಪರ್ಯ. ಅಹಮಿನೊಡನೆ ಇದಮ್ ನಿವೃತ್ತಿಯಾಗಿ ಉಳಿದುದೇ ಅದ್ವೈತ. ಅಹಮ್ ನಿದ್ರೆಯಲ್ಲಿ ನಮ್ಮನ್ನು ಅನುಸರಿಸಿ ಬಂದಿಲ್ಲ. ಆದ್ದರಿಂದ ನಮ್ಮ ನಿಜಸ್ವರೂಪವೂ ಇಲ್ಲ. ಇದರ ನಿವೃತ್ತಿಯು ಬೆಳ್ಳಿಯ ನಿವೃತ್ತಿಯಂತೆ ನಿತ್ಯ ನಿವೃತ್ತಿಯ ನಿವೃತ್ತಿ ಯಾಗಿದೆ.

ಯಾವ ಅದ್ವೈತ?

ಕೇವಲಾದ್ವೈತ, ಶಿವಾದ್ವೈತ, ಶುದ್ಧಾದ್ವೈತ, ವಿಶಿಷ್ಟಾದ್ವೈತ ಮುಂತಾದ ಅದ್ವೈತಗಳಿರುತ್ತವೆ. ಶ್ರೀಮನ್ನಿಜಗುಣರ ಸಾಹಿತ್ಯಕ್ಕೆ ಅಳವಟ್ಟ ಅದ್ವೈತ ಯಾವುದು? ಬಿಡಿ ಲೇಖನಗಳಲ್ಲಿ, ಪುಟ್ಟ ಪುಸ್ತಕಗಳಲ್ಲಿ ಬೃಹದ್ಗ್ರಂಥಗಳಲ್ಲಿ ಅಲ್ಲದೆ ಪ್ರವಚನ ವೇದಿಕೆಗಳಲ್ಲಿಯೂ ಶ್ರೀಮನ್ನಿಜಗುಣರು ಶುದ್ಧಾದ್ವೈತಿಗಳೆಂದು ಪ್ರತಿಪಾದಿಸಿದ್ದುಂಟು. ಈ ನಿರ್ಣಯಕ್ಕೆ ತಲುಪಲು ಶುದ್ಧಾದ್ವೈತ ಈ ಪದದ ಶುದ್ಧ ಈ ಅವಯವಾರ್ಥದ ಮೋಡಿಯೆ ಕಾರಣವಾದಂತೆ ಕಂಡುಬರುತ್ತದೆ. 'ಶುಂಧ, ಶುದ್ಧಾ' ಇದರಿಂದ ಶುದ್ಧ ಶಬ್ದವು ಸಿದ್ಧವಾಗುತ್ತದೆ. ಇದು ದೋಷರಹಿತ, ಅಕಲಂಕ ಎಂಬರ್ಥ ಕೊಡುತ್ತದೆ. ಅಲ್ಲದೆ 'ಯಃ ಶುಂಧತಿ ಸರ್ವಾತ್ ಶೋಧಯತಿ ವಾಸ ಶುದ್ಧ ಈಶ್ವರಃ' ಸ್ವಯಂ ಶುದ್ಧನಾಗಿ ಎಲ್ಲ ಅಶುದ್ಧಿಗಳಿಂದ ದೂರವಾಗಿ ಎಲ್ಲರನ್ನು ಶುದ್ಧಗೊಳಿಸುವನಾದ್ದರಿಂದ ಪರಮಾತ್ಮನಿಗೂ ಶುದ್ಧನೆಂಬ ಹೆಸರುಂಟು, 'ಅಕಲಂಕಮೆನಿಸುವಾದ್ವೈತ ತತ್ವವನಿಲ್ಲಿ ಪ್ರಕಟಿಸುವೆನು' ಎಂಬ ಪ್ರಯೋಗವೂ ಇದೆ.

ಪದಗಳ ಅರ್ಥ ನಿರ್ಧರಿಸುವಲ್ಲಿ ಯೋಗ ಅಂದರೆ ಅವಯವಶಕ್ತಿಯನ್ನೂ; ರೂಢವೆಂದರೆ ಪರಿಭಾಷಾಶಕ್ತಿಯನ್ನೂ; ಕೆಲವು ಸಲ ಯೋಗ ಮತ್ತು ರೂಢ ಶಕ್ತಿಗಳೆರಡನ್ನೂ ಬಳಸಬೇಕಾಗುತ್ತದೆ. ಉದಾ-ಪಂಕಜ ಪಂಕವೆಂದರೆ ಕೆಸರು ಜ ಎಂದರೆ ಹುಟ್ಟಿದ್ದು. ಈ ಅವಯವಾರ್ಥಗಳಿಂದ ಕಮಲ ಹಾಗೂ ಜಲಜಂತುಗಳೆರಡೂ ಅರ್ಥವಾಗುತ್ತವೆ. ಪಂಕಜವೆಂದೊಡನೆ ಕಮಲವೆಂದೇ ಅರ್ಥ ಮಾಡುವುದು ರೂಢಿ. ಇಲ್ಲಿ ಯೋಗ, ರೂಢ ಶಕ್ತಿಗಳೆರಡರ ಉಪಯೋಗವಾಗಿದೆ. ಶುದ್ಧಾದ್ವೈತವೆಂದರೆ ಅವಯವ ಶಕ್ತಿಯಿಂದ ನಿರ್ದೋಷ ಅಥವಾ ಅಕಲಂಕ ಅದ್ವೈತವೆಂದು ಅರ್ಥವಾದರೂ ದರ್ಶನಶಾಸ್ತ್ರಗಳ ಇತಿಹಾಸದ ಹಿನ್ನೆಲೆಯಿಂದ ಈ ಕೆಳಗಿನ ಕಾರಣವನ್ನು ನೋಡಿದಾಗ ಸಮಂಜಸವೆನಿಸದು.

ಭಾರತೀಯ ತತ್ವಶಾಸ್ತ್ರ ಸಂಗ್ರಹವು ೭೯೬. ಲೇ|| ವಿದ್ವಾನ್ ಎಚ್. ಎಸ್. ರಾಘವೇಂದ್ರಾಚಾರ್ಯರು:

ದರ್ಶನ ಶಾಸ್ತ್ರಗಳ ಇತಿಹಾಸದಲ್ಲಿ ಶ್ರೀ ವಲ್ಲಭಾಚಾರ್ಯರು (ಕ್ರಿ.ಶ. ೧೪೭೩ರಿಂದ ೧೫೩೧) ಶುದ್ಧಾದ್ವೈತಿಗಳೆಂದು ಪ್ರಸಿದ್ಧರಾಗಿದ್ದಾರೆ. ಶಂಕರಾಚಾರ್ಯರಿಂದ ತಪ್ಪಾಗಿ ವ್ಯಾಖ್ಯಾನ ಮಾಡಲ್ಪಟ್ಟ ಉಪನಿಷತ್ತು ಮತ್ತು ಬ್ರಹ್ಮಸೂತ್ರ ಇವುಗಳ ಸರಿಯಾದ ವ್ಯಾಖ್ಯಾನವೇ ಗೋಪಾಲ ಕೃಷ್ಣನ ಅಜ್ಞಾನುಸಾರ ತಮ್ಮ ಕಾರ್ಯವೆಂದು ಇವರು ಸ್ಪಷ್ಟಪಡಿಸುತ್ತಿದ್ದರು. ಇವರದು ಮಾಯೆಯ ಸಂಬಂಧವಿಲ್ಲದ ಶುದ್ಧವಾದ ಅದ್ವೈತ, ಶಂಕರಾಚಾರ್ಯರು ಮಾಯಾ ಎಂಬುದನ್ನು ಅಂಗೀಕರಿಸಿ ಅದ್ವೈತವನ್ನು ಅಶುದ್ಧ ಮಾಡಿದರೆಂದು ಇವರ ಅಭಿಪ್ರಾಯ.

(ಶ್ರೀಮನ್ನಿಜಗುಣರಾದರೂ ಅನುಭವಸಾರ (೧-೪-೫).

'ಆಧಾರವಾಬ್ರಹ್ಮವಾಧೇಯಮೀಮಾಯೆ। ಯಾಧಾರದಲ್ಲಿ-ಬೆರಸಿ ಬೇರಿಲ್ಲವಂತಾ ಧೇಯ ಮಿರ್ಪುದೆಲೆಪುತ್ರ'.

ಸತ್, ಅಸತ್ತಾದಿಗಳಿಂದ ಯಾವುದನ್ನು ವಂಚಿಸಲಿಕ್ಕೆ ಬರದೋ ಅದಕ್ಕೆ ಅನಿರ್ವಾಚ್ಯವೆನ್ನುತ್ತಾರೆ. ಸದಿಸದ್ವಿಲಕ್ಷಣವಾದುದಕ್ಕೆ ಅನಿರ್ವಚನೀಯವೆನ್ನುತ್ತಾರೆ. ಸದಿಸದ್ವಿಲಕ್ಷಣವೆಂದರೆ ಅಸತ್ತಾದ ವಂಧ್ಯಾಪುತ್ರಾದಿಗಳು. ಆಸದ್ವಿಲಕ್ಷಣವೆಂದರೆ ಶುಕ್ತಿ ಮೊದಲಾದವುಗಳುಂಟು. ಶುಕ್ತಿಯಂತೆ ಸತ್ತಲ್ಲದ್ದರಿಂದ ಸದ್ವಿಲಕ್ಷಣ, ವಂಧ್ಯಾ ಪುತ್ರನಂತೆ ಅಸತ್ತಲ್ಲದ್ದರಿಂದ ಅಸದ್ವಿಲಕ್ಷಣ; ಸದಸದ್ವಿಲಕ್ಷಣ ಅರ್ಥಾತ್ ಬಾಧಾಯೋಗ್ಯರೂಪ ಉಳ್ಳದ್ದರಿಂದ ಅನಿರ್ವಚನೀಯ. ಉದಾಶುಕ್ತಿಯಲ್ಲಿ ತೋರುವ ರಜತ. ಈ ಲಕ್ಷಣ ವುಳ್ಳದ್ದೇ ಮಾಯೆ. ಇದು ಬ್ರಹ್ಮದಂತೆ ಸತ್, ಅಲ್ಲ; ವಂಧ್ಯಾಪುತ್ರನಂತೆ ಅಸತ್ ಅಲ್ಲ. ಇದಕ್ಕೆ ಪ್ರಕೃತಿ, ಪ್ರಧಾನ, ತಮ, ಅವಿದ್ಯ, ಶಕ್ತಿಮುಂತಾದ ಹೆಸರುಗಳುಂಟು, ಮಿಥ್ಯತ್ವ ನಿಶ್ಚಯಕ್ಕೆ ಬಾಧವೆನ್ನುತ್ತಾರೆ. ಅನುಮಾನ ಪ್ರಮಾಣದ ವ್ಯಾಪ್ತಿ ನಿರೂಪಣ ದಲ್ಲಿ ಬೆಂಕಿಯ ಹೊರತು ಹೊಗೆ ಇರಲಾರದು ಆದ್ದರಿಂದ ಬೆಂಕಿಯ ಅವಿನಾಭಾವ ಸಂಬಂಧ ಹೊಗೆಯಲ್ಲಿದೆ ತಪ್ತಲೋಹದಲ್ಲಿ ಹೊಗೆಯ ಹೊರತು ಹೊಗೆ ಇರಬಲ್ಲದು. ಆದ್ದರಿಂದ ಹೊಗೆಯ ಅವಿನಾಭಾವ ಸಂಬಂಧ ಬೆಂಕಿಯಲ್ಲಿ ಇಲ್ಲ. ಬ್ರಹ್ಮದ ಹೊರತು ಮಾಯೆ ಇರಲಾರದು. ಮಾಯೆಯ ಹೊರತು ಬ್ರಹ್ಮ ಇರಬಲ್ಲ. ಬ್ರಹ್ಮದ ಅವಿನಾಭಾವ ಸಂಬಂಧ ಮಾಯೆಯಲ್ಲಿದೆ. ಅಧ್ಯಾರೋಪ ಅಪವಾದಕ್ಕಾಗಿ ಇಲ್ಲಿ ಮಾಯೆ ಯನ್ನು ಒಪ್ಪಲಾಗಿದೆ.

ಅಪ್ರೇಯವೂ ನಿರ್ವಿಶೇಷವೂ ಅದ್ವಿತೀಯವೂ ಆದ ಪರಮಾರ್ಥ ಸತ್ಯವನ್ನು ತಿಳಿಸುವದಕ್ಕಾಗಿ ಶ್ರುತಿಯು ಅನೇಕ ಪ್ರಕ್ರಿಯೆಗಳನ್ನು ಪರ್ಯಾಯವಾಗಿ ಉಪಯೋಗಿಸಿದೆ. ಎಲ್ಲಾ ಪ್ರಕ್ರಿಯೆಗಳಲ್ಲಿಯೂ ಅಧ್ಯಾರೋಪ ಅಪವಾದ ಪ್ರಕ್ರಿಯೆಯೇ (**The method of super imposition and rescission**) ಮೂಲಭೂತವಾಗಿಯೂ ಹಾಸು ಹೊಕ್ಕಾಗಿಯೂ ಸರ್ವಗ್ರಾಹಿ (**Hold-all**) ಆಗಿಯೂ ಇರುವುದನ್ನು ಕಾಣ ಬಹುದು. ಇದುವೆ ಉಪನಿಷತ್ತುಗಳ ರಹಸ್ಯಾರ್ಥವೆಂಬ ರತ್ನ ಮಂಜೂಷದ ಕವಾಟನ್ನು ತೆರೆಯುವ ನಾಯಕ ಬೀಗದ ಕೈ (ಗುರು-ಕುಂಚಿಕಾ, **Master-key**) ಎಂದು ಬಲ್ಲವರು ಈ ಪ್ರಕ್ರಿಯೆ ಹೊಗಳಿದ್ದಾರೆ.

ಸಿನೇಮಾ ತೋರಲು ಬೆಳಕು ಕತ್ತಲೆಗಳೆರಡರ ಅವಶ್ಯಕತೆಯೂ ಇದೆ. ಜಗದ್ರೂಪ ಸಿನೇಮಾಕ್ಕೂ ಬ್ರಹ್ಮ-ಮಾಯೆಗಳೆರಡೂ ಬೇಕು. ಆದಾಗ್ಯೂ ಮಾಯೆ ಸ್ವತಂತ್ರವಲ್ಲ.

'....ನಿಜ ನಿರತಿಶಯ ನಿರ್ವಿಕಲ್ಪ ನಿರುಪಾಧಿ....' ಎಂಬ ಬ್ರಹ್ಮದ ವರ್ಣನೆಯಲ್ಲಿ ಅದ್ವೈತ; ಆಧಾರವಾದ ಬ್ರಹ್ಮ ಅಧೇಯ ಈ ಮಾಯೆ' ಎಂಬಲ್ಲಿ ವಿಶಿಷ್ಟಾದ್ವೈತ; ಅನಿರ್ವಾಚ್ಯ ಮಾಯೋಪಾದನಾದ ಪರಮಾತ್ಮ ಜಗಜ್ಜೀವೇಶ ಕುಳವಾದ'ನೆಂಬಲ್ಲಿ ದ್ವೈತವನ್ನು ಶ್ರೀಮನ್ನಿಜಗುಣರು ಪ್ರತಿಪಾದಿಸಿರುವರೆಂದು ಒಬ್ಬ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಅದೇ ಭಾರತೀಯ ತತ್ವಶಾಸ್ತ್ರ ಸಂಗ್ರಹ. ಪು. ೭೮೭.:

"ಮಧ್ವಾಚಾರ್ಯರದು ಮುಖ್ಯವಾಗಿ ಬ್ರಹ್ಮವಾದ. ಅವರ ಸರ್ವಗ್ರಂಥಗಳಿಗೂ ಬ್ರಹ್ಮ ಒಂದೇ ಅರ್ಥ. ಅವರ ಪ್ರಕ್ರಿಯೆಯಲ್ಲಿ ಬ್ರಹ್ಮನಾದರೋ ಶ್ರುತ್ಯುಕ್ತ ಬ್ರಹ್ಮ. ಸ್ವತಂತ್ರನೆಂಬುದೇ ಶ್ರುತ್ಯುಕ್ತ ಬ್ರಹ್ಮನ ಅಸಾಧಾರಣ ಸ್ವತಂತ್ರ ಬ್ರಹ್ಮನೇ ಸರ್ವಕ್ಕೂ ಮೂಲ ಎಂದು ಅವರ ಸಿದ್ಧಾಂತ. ಈ ಕಾರಣದಿಂದ ಅವರದು ಜಗತ್ತಿಗೆ ಒಂದೇ ಮೂಲವೆಂದು ಹೇಳುವ ವಾದ. ಈ ಜಾತಿಯ ವಾದವನ್ನು ಇಂಗ್ಲೀಷ ಪಾರಿಭಾಷಿಕ ಭಾಷೆಯಲ್ಲಿ ಮೊನಿಸಂ 'Monism' ಎಂದು ಕರೆಯುವ ಪದ್ಧತಿ. ಆದರೆ ಇದಕ್ಕೆ ವಿರುದ್ಧವಾಗಿ ಮಧ್ವಾಚಾರ್ಯರದು ದ್ವಿತತ್ವವಾದ ಎಂದರೆ ದ್ವೈತವಾದ (Dualism) ಅಥವಾ ಬಹುತತ್ವವಾದ (Pluralism) ಎಂದು ಕೆಲವಡೆ ಪ್ರಸಿದ್ಧಿ ಇರುವುದು. ಮಧ್ವಾಚಾರ್ಯರದು ದ್ವಿತತ್ವವಾದ ದ್ವೈತವಾದ ಎಂಬೀ ಮುಂತಾದ ನಿರೂಪಣವು ಅವರ 'ಸ್ವತಂತ್ರಮ ಸ್ವತಂತ್ರಂಚ ದ್ವಿವಿಧಂ ತತ್ವ ಮಿಷ್ಯತೆ' ಎಂಬೀ ಮುಂತಾದ ವಾಕ್ಯಕ್ಕೆ ಅವಿಮರ್ಶೆಯಿಂದ ಮಾಡಿದ ಭಾಷಾಂತರ ದ್ವಿತತ್ವವಾದವೆಂಬಲ್ಲಿ ಸ್ವತಂತ್ರವಾದ ಎರಡು ತತ್ವಗಳು ವಿವಕ್ಷಿತ. 'ಸ್ವತಂತ್ವಮಸ್ವತಂತ್ರ' ಎಂಬಲ್ಲಿಯಾದರೊ ಅಸ್ವತಂತ್ರವೆನ್ನಲು ಅವಕಾಶವಿಲ್ಲ. ಈ ಕಾರಣದಿಂದ ಸಾಮಾನ್ಯ ಪ್ರಸಿದ್ಧಿಯನ್ನು ಹೊಂದಿರುವ ಭಾಷಾಂತರವು ಮಧ್ವಸಿದ್ಧಾಂತಕ್ಕೆ ಸಂಗತವಲ್ಲ." ಮಧ್ವಾಚಾರ್ಯರು ಏಕಮೂಲವಾದಿಗಳೆಂಬುದು ಅಪೂರ್ವ ನಿರೂಪಣೆ, ಆಶ್ಚರ್ಯಕರ ಸತ್ಯ. ಶ್ರೀ ಶಂಕರಾಚಾರ್ಯರೇ ಆಗಲಿ ಶ್ರೀಮನ್ನಿಜಗುಣರಾಗಲಿ ಮಾಯೆಯನ್ನು ಅಂಗೀಕರಿಸಿದರೂ ಅದು ಸ್ವತಂತ್ರವೆಂದು ಒಪ್ಪದ್ದರಿಂದ ಶಬ್ದದ ಶುದ್ಧ ಸ್ವರೂಪಕ್ಕೆ ಯಾವ ಹಾನಿಯೂ ಇಲ್ಲ.

ಬ್ರಹ್ಮ ಮಾಯೆಗಳಿಂದಾದ ಜಗತ್ತು ಮಾಯೆಯ ಪರಿಣಾಮವಾಗಿಯೂ ಮತ್ತು ಚೇತನದ ವಿವರ್ತವಾಗಿಯೂ ಉಂಟು. ಚೇತನದ ಸಮಾನ ಸತ್ತಾವುಳ್ಳುದಾಗಿ ಅನ್ಯಥಾ ಸ್ವರೂಪಕ್ಕೆ ಪರಿಣಾಮವೆನ್ನುತ್ತಾರೆ. ಅಧಿಷ್ಠಾನಕ್ಕಿಂತಲೂ ವಿಪರೀತ ಸ್ವಭಾವವುಳ್ಳುದಾಗಿ ಅನ್ಯಥಾ ಸ್ವರೂಪಕ್ಕೆ ವಿವರ್ತವೆನ್ನುತ್ತಾರೆ. ಮೂರು ಕಾಲದಲ್ಲಿ ಯಾವುದರ ಬಾಧೆ (ಮಿಥ್ಯತ್ವ ನಿಶ್ಚಯ)ಯಾಗಲಾರದೋ (ಈ ಕಾಲತ್ರಯಗಳು ಯಾವುದರಲ್ಲಿ ಕಲ್ಪಿತವೋ ಅದು ಪಾರಮಾರ್ಥಿಕ ಸತ್ತೆ; ಅದು ಚೇತನರೂಪ ಬ್ರಹ್ಮ. ಬ್ರಹ್ಮಜ್ಞಾನ ಮಾತ್ರದಿಂದ ಬಾಧೆಯಾಗಲು ಯೋಗ್ಯವಾದುದೇ ವ್ಯವಹಾರಿಕ ಸತ್ತೆ; ಅದು ಸ್ತ್ರಿ, ಪುತ್ರ, ಧನ, ಕನಕಾದಿರೂಪ ಈಶ ಸೃಷ್ಟಿ. ಬ್ರಹ್ಮಜ್ಞಾನ ಹೊರತಾಗಿ ಆಯಾಯ ಅಧಿಷ್ಠಾನ (ಯಾವುದು ಭ್ರಮಕಾಲದಲ್ಲಿ ತೋರದು, ಯಾವುದು ತೋರಿದರೆ ಭ್ರಮ ಉಳಿಯದು ಅದು ಅಧಿಷ್ಠಾನ) ಜ್ಞಾನದಿಂದ ನಿವೃತ್ತಿಯಾಗಲು ಯೋಗ್ಯವಾದವುಗಳೇ ಪ್ರಾತಿಭಾಷಿಕ ಸತ್ತೆ; ರಜ್ಜು-ಸರ್ಪ, ಶುಕ್ತಿ-ರಜತ, ಸ್ಥಾಣ-ಚೋರ ಮುಂತಾದವುಗಳು. ಮಾಯೆಗೂ ಜಗತ್ತಿಗೂ ಸಮಾನ ವ್ಯವಹಾರಿಕ ಸತ್ತೆ ಇದೆ; ಮಾಯೆಯೂ ಜಗದಾಕಾರವಾಗಿ ತೋರಿದ್ದರಿಂದ ಅನ್ಯಥಾಸ್ವರೂಪ. ಆದ್ದರಿಂದ ಮಾಯೆಯ ಪರಿಣಾಮವೂ ಜಗತ್ತಾಗಿದೆ.

ಚೇತನವು ಪಾರಮಾರ್ಥಿಕ, ಜಗತ್ತು ವ್ಯವಹಾರಿಕ; ಚೇತನಕ್ಕಿಂತಲೂ ವಿಪರೀತ ಸ್ವಭಾವದ್ದಾಗಿ ಜಗತ್ತು ತೋರಿದೆ ಆದ್ದರಿಂದ ಚೇತನದ ವಿವರ್ತ, ಇದನ್ನೇ ಶ್ರೀಮನ್ನಿಜಗುಣರು:

'ಅದುತಾಂ ವಿವರ್ತವಹುದಿದು ಸರ್ವಮಾತ್ಮೇತಿ ವಿದಿತ ವೇದಾರ್ಥವರಿ ರಜ್ಜು ಸರ್ಪನೆಂಬುದರ ದೃಷ್ಟಾಂತ ಮುಖದಿಂದ'.

ಈ ದೃಷ್ಟಾಂತದಲ್ಲಿ ರಜ್ಜು ವ್ಯವಹಾರಿಕ ಸರ್ಪ ಪ್ರಾತಿಭಾಷಿಕ. ರಜ್ಜು ರಜ್ಜು ರೂಪದಿಂದ ತೋರದೆ ವಿಪರೀತ ಸ್ವಭಾವದ ಸರ್ಪದಂತೆ ತೋರಿದೆ. ಸರ್ಪವು ರಜ್ಜುವಿಗಿಂತ ಭಿನ್ನ ಸತ್ತೆಯುಳ್ಳದ್ದಾತ ಅನ್ಯಥಾರೂಪದಿಂದ ತೋರಿರುವದರಿಂದ ವಿವರ್ತವೆನಿಸುವುದು. ನೇರ ಮಾತಿನಲ್ಲಿ ಹಗ್ಗ ಕೆಡದೆ (ವಿಕಾರವಾಗದ) ಹಾವಾಗಿ ತೋರಿದ್ದೇ ವಿವರ್ತ. ಆದರಂತೆ ಚೇತನವು ವಿಕಾರವಾಗದೆ ಜಗವಾಗಿ ತೋರಿದ್ದೇ ವಿವರ್ತ.

ತತ್ವಜ್ಞಾನದ ಉನ್ನತ ಮಟ್ಟಕ್ಕೇರಿದಾಗ; 'ಬೇರೊಂದು ಸತ್ತಾಗಿ ತೋರಂತಿಹುದೆನೆ ವೇದ। ಸಾರುವಾದ್ವೈತ ಸಂಪಾದನಕ್ಕೆ ಬಲು ದೂರಪ್ಪುದಾಗಿ ಪೆರತಿಲ್ಲ' ಅಂತಿಮ ನಿರ್ಣಯದಲ್ಲಿ ಸತ್ತು ಒಂದೇ. ಅದಕ್ಕೆ ಭಿನ್ನ ಇನ್ನೇನನ್ನಾದರೂ ಒಪ್ಪಿದರೆ ದ್ವೈತಾಪತ್ತಿಯಿಂದಾಗಿ ವೇದಸಮ್ಮತವಾಗಲಾರದು. ಒಪ್ಪಲು ಬಿಡಲು 'ಶ್ರುತಿಯೇ ಪ್ರಮಾಣವಖಿಳರ್ಗೆ', ಇದ್ದೊಂದ ಚೈತನ್ಯವೇ ಜಗವಾಗಿದೆ. ಇಲ್ಲದ್ದರಿಂದ (ಮಾಯೆ ವಿಚಾರಿಸೆ ಪುಸಿರೂಪಿನದು.) ಏನೂ ಸಂಭವಿಸದು.

ಒಂದಾದ ಚೇತನವು ನಿರ್ವಿಕಲ್ಪ; ಸವಿಕಲ್ಪ ಜ್ಞಾನ ಯಾರಿಗೆ? ಈ ಶಂಕೆಗೆ–

ಯತಿಯು ತನ್ನಲ್ಲಿ ತೋರಿದ ಸ್ವಪ್ನದ ದೃಷ್ಟಾ ಹಾಗೂ ಅಧಿಷ್ಠಾನನೂ ತಾನೇ ಆಗಿರುವನು. ಸತಿ ಪತಿ ರತಿಗಳು ಏಕಕಾಲದಲ್ಲಿ ತೋರಿದರೂ ಆ ಯತಿಗೆ ಆ ಮೋಹದ ಸಂಬಂಧವೇ ಇಲ್ಲ. ಯಾವನಲ್ಲಿ ಆ ಗೃಹಸ್ಥಧರ್ಮಗಳು ತೋರಿವೆಯೋ ಅವನೇ ಅದಕ್ಕೆ ದೃಷ್ಟಾ ಆಗಿರುವನು. ವರ್ಣಾಶ್ರಮಗಳು ಸ್ಥೂಲ ತನುವಿಗೆ ವ್ಯವಹಾರಿಕ ಸತ್ತೆಯಿಂದ ಸಂಬಂಧಗಳಾಗಿವೆ. ಸ್ವಪ್ನವು ಪ್ರಾತಿಭಾಷಿಕ, ಸೂಕ್ಷ್ಮತನುವಾದ ಮನೋನಿರ್ಮಿತ. ಆದ್ದರಿಂದ ವ್ಯವಹಾರಿಕ ಯತಿಯ ಧರ್ಮಕ್ಕೆ ಹಾನಿಯಿಲ್ಲ. ಪಾರಮಾರ್ಥಿಕ ಸತ್ತೆಯು ಚೇತನದಲ್ಲಿ ಜ್ಞಾತೃ, ಜ್ಞಾನ ಮತ್ತು ಜ್ಞೇಯಗಳೆಂಬ ಕಲ್ಪನೆಗಳು ತೋರಿದರೂ ವಿಷಮ ಸತ್ತೆಯಲ್ಲಿ ತೋರಿದ ಇವುಗಳ ಲೇಪವಿಲ್ಲ. 'ಜ್ಞಾತೃ, ಜ್ಞಾನ, ವಿಜ್ಞೇಯ ಸುವಿಹೀನಃ' ಎಂಬ ಶ್ರುತಿಯೂ ಉಂಟು.

ಸುದೀರ್ಘಕಾಲ ಗೋಚರಿಸುವದಲ್ಲ? ಎಂಬ ಈ ಶಂಕೆಗೂ–

'ನಿಮಿಷವಹ ಕನಸಿನೊಳಗೆ ಯುಗವಿರ್ಪ ಸಂಭ್ರಮವೆಂತು ತೋರುತಿಹುದಂತೆ ಜಗವಿದಾವಿಮಲಾತ್ಮನಲ್ಲಿ ಚಿರಮಿರ್ಕು.' ಈ ನುಡಿಗೆ ವಿವರಣೆಯಂತಿದೆ ಸ್ವಾಮಿ ಶ್ರೀ ರಾಮತೀರ್ಥರ ಮುಂದಿನ ಹೇಳಿಕೆ: In dreams even though the objects are produced instantaneously, they appeer to have a

long past of their own. Similarly in the wakeful state objects of the world together with their past history make their appearance simultaneously with the percipient subject. And when you say that this world is real, the is the solid rigid world, the statment is entirely founded on the evidence of the perciving senses or subject which is equivalent to the dreaming ego calling the objects of the dream real or to the man calling his dog in picture on convas real where as in reality both are unreal."

ಕನಸುಗಳಲ್ಲಿ ವಿಷಯಗಳು (ಅಥವಾ ವಸ್ತುಗಳು) ಕ್ಷಣಮಾತ್ರದಲ್ಲಿ ಉತ್ಪತ್ತಿಯಾದರೂ ನೋಡುತ್ತಿರುವಾಗಲೇ ಕಾಣುವುದಕ್ಕೆ ತೊಡಗಿದರೂ ಅವು ಬಹಳ ಹಿಂದಿನ ಕಾಲದಿಂದಲೂ ಸ್ವತಃ ಇದ್ದಂತೆ ತೋರುತ್ತವೆ. ಹೀಗೆಯೇ ಜಾಗ್ರದವಸ್ಥೆಯಲ್ಲಿ ಜ್ಞೇಯವಾದ (ಅರಿಯಲ್ಪಡುವ) ಪ್ರಾಪಂಚಿಕ ವಸ್ತುಗಳು, ತಮ್ಮ ಹಿಂದಿನ ಚರಿತ್ರೆಯೊಡನೆ ಜ್ಞಾತೃವಾದ (ಅರಿಯುವ) ವಿಷಯಿಯ ಜೊತೆಗೆ ಒಂದೇ ಸಮಯದಲ್ಲಿ ತೋರಿಕೊಳ್ಳುತ್ತವೆ. ಈ ಪ್ರಪಂಚವು ಘನವಾಗಿಯೂ, ಕಠಿಣವಾಗಿಯೂ, ಎಲ್ಲರ ಕಣ್ಣಿಗೂ ಕಾಣಿಸುತ್ತಾ, ಎಲ್ಲರ ಕೈಗೂ ಸಿಕ್ಕುತ್ತಾ ಇರುವುದರಿಂದ ಇದು ಸತ್ಯ-ಸತ್ಯವಾದುದು ಎಂದು ಹೇಳುವುದಾದರೆ ಆ ಮಾತು ಪೂರ್ಣವಾಗಿ ಗ್ರಾಹಕವಾದ ಇಂದ್ರಿಯಗಳ ಅಥವಾ ಜ್ಞಾತೃವಿನ ಅನುಭವವನ್ನು ಅವಲಂಬಿಸಿರುವದಾಗಿದೆ. ಕನಸನ್ನು ಕಾಣುತ್ತಿರುವ ಜೀವನು ತನಗೆ ಕಾಣುವ ಕನಸಿನ ವಸ್ತುಗಳನ್ನೆಲ್ಲಾ ಸತ್ಯವೆಂದು ಹೇಳಿದಂತೆಯೇ ಎಚ್ಚರದ ಆ ಮಾತೂ ಆಗುತ್ತದೆ ಮತ್ತು ಬಟ್ಟೆಯ ಮೇಲೆ ಬರೆದಿರುವ ಚಿತ್ರವೂ ನಾಯಿಯೂ ಸುಳ್ಳಾಗಿರುವಾಗ ಚಿತ್ರದಲ್ಲಿರುವ ನಾಯಿಯನ್ನು ನಿಜವೆಂದು ಹೇಳಿದಂತಾಗುತ್ತದೆ.

ದೇಶ, ಕಾಲ ಮತ್ತು ಕಾರ್ಯಕಾರಣ ಭಾವ ಏಕಕಾಲದಲ್ಲಿ ತೋರುವುದೇ 'ಕೇಳಿದಂ ದೃಷ್ಟಿ ಸೃಷ್ಟಿಯೊಳು ಪೇಳ್ವೆ' ಎಂಬ ಮಾತಿನ ಮರ್ಮ.

ಜಗವು ಜಡವಾಗಿದೆ, ಪರಮಾತ್ಮನು ಚೇತನನಾಗಿದ್ದಾನೆ; ಕಾರ್ಯಕಾರಣ ಭಾವ ಹೇಗೆ? ದೃಷ್ಟಿ-ಸೃಷ್ಟಿವಾದವು ಮನವರಿಕೆಯಾದರೆ ಕಾರ್ಯಕಾರಣ ಏಕಕಾಲದಲ್ಲಿ ತೋರುವುದರಿಂದಾಗಿ ಈ ಶಂಕೆಯೇ ಉದ್ಭವಿಸದು ಆದರೂ ಜಿಜ್ಞಾಸುವಿನ ಮಟ್ಟಕ್ಕನುಸರಿಸಿ-

ಕಾರ್ಯ-ಕಾರಣಗಳು ಅತ್ಯಂತ ಸಾರೂಪ್ಯಗಳಾಗಿದ್ದರೆ ಕಾರ್ಯ-ಕಾರಣಭಾವವೇ ಅಸಂಭವವಾಗುವದು. ಕಾರಣದೊಳಗಿದ್ದ-ಗುಣ ಕಾರ್ಯದಲ್ಲಿರಬೇಕೆಂಬ ನಿಯಮವೂ ಇಲ್ಲ. ಉದಾ: ಹಾಲಿನಲ್ಲಿದ್ದ ಮಾಧುರ್ಯ ಮೊಸರಿನಲ್ಲಿ ಇಲ್ಲ ಮತ್ತು ಹೂವಿನಲ್ಲಿದ್ದು ಒಗರುತನ ಸಿಹಿಯಾದ ಹಣ್ಣಿನಲ್ಲಿಲ್ಲ. ವಾಸ್ತವವಾಗಿ ಚೇತನವಾಗಿದ್ದರೂ ಅವಿವೇಕತನದಿಂದ ಜಗವು ಜಡವಾಗಿ ತೋರುತ್ತದೆ. ಅರಳಿದ ವರ ವಿವೇಕದ ಕಣ್ಣಿನಿಂದ ನೋಡಿದರೆ ಚೇತನ ರೂಪವೇ ಇರುವುದು.

ಜಳ ಹತ್ತಿ ಬರಲು ಮನೆಯೊಳಗುಳ್ಳ ಬೆಳಗು ಕತ್ತಲೆಯೆನಿಸಿ ವಿಶೇಷ ಪ್ರಕಾಶದಲ್ಲಿ ಕಣ್ಮಣಿಯು ಆಕುಂಚನಗೊಂಡಿರುತ್ತದೆ. ಅದು ಸಾಮಾನ್ಯ ಪ್ರಕಾಶವನ್ನು ಗ್ರಹಿಸದು. ಸ್ವಲ್ಪ ಸಮಯತಡೆದು ನೋಡಿದರೆ ಕಣ್ಮಣಿಯು ವಿಕಸನಗೊಂಡು ಇದ್ದ ಸಾಮಾನ್ಯ ಪ್ರಕಾಶವನ್ನು ಗ್ರಹಿಸುವುದು ಇದು ವಿಜ್ಞಾನದ ವಿವರಣೆ. ಹಾಗೆಯೇ ಸಂಕುಚಿತ ತಿಳುವಳಿಕೆಯ ಮೂಲಕ ನೋಡಿದಾಗ ಜಗವು ಜಡವಾಗಿ ತೋರುತ್ತದೆ. ಉನ್ಮಿಲನಗೊಂಡ ಪ್ರತಿಭಾ ಚಕ್ಷುವಿನ ಮೂಲಕ ನೋಡಿದಾಗ ಚೇತನರೂಪವಾಗಿ ತೋರುವುದು.

"Matter is merely the way in which a fundamentally mental universe appears to our finite intelligence"—James Jeans.

ಮೂಲತಃ ಚಿತ್ಸ್ವರೂಪಿಯಾದ ವಿಶ್ವವೇ ನಮ್ಮ ಪರಿಚ್ಛಿನ್ನವಾದ ತಿಳುವಳಿಕೆಯಲ್ಲಿ ಭೌತಿಕ ಪದಾರ್ಥದಂತೆ ತೋರುತ್ತದೆ. ವೈಜ್ಞಾನಿಕ ಹಿನ್ನೆಲೆಯಿಂದ ಬಂದ ಜೇಮ್ಸ ಜೀನ್ಸರ ಈ ಅಭಿಪ್ರಾಯ ಮೇಲಿನ ನಿರ್ಣಯಕ್ಕೆ ವಿಸ್ಮಯುವನ್ನುಂಟುಮಾಡುವಷ್ಟು ಸಂವಾದಿ ಯಾಗಿದೆ. ಇದು ದೃಷ್ಟಿದೋಷವಶಾತ್ ಆಗಿರಬಹುದೆಂದರೆ—

ಬಾಲಕನು ಕಟ್ಟಿಗೆಯ ಆನೆಯನ್ನು ನಿಜವಾದ ಆನೆಯೆಂದು ಭಾವಿಸಿ ಅದರೊಡನೆ ಕ್ರೀಡಿಸುತ್ತಾನೆ. ಆ ಭಾವಕ್ಕೆ ಬಾಲಕನ ಅಜ್ಞಾನವೇ ಕಾರಣವಾಗಿರಬಹುದು. ನಾವು ಎಷ್ಟು ವಿಚಾರಿಸಿದರೂ ಜಗವು ಚೇತನಕ್ಕೆ ಭಿನ್ನವಾಗಿಯೇ ತೋರುವುದೆಂದರೆ—

ಸಮುದ್ರದಲ್ಲಿ ಬೃಹದಾಕಾರ ತೆರೆಗಳು ಗೋಚರಿಸುತ್ತವೆ. ಜಲಕ್ಕಿಂತಲೂ ವ್ಯವ ಹರಿಸಲು ಭಿನ್ನವಾಗಿ ತೋರಿದರೂ ಜಲರೂಪಗಳೇ ಆಗಿವೆ, ಜಲದಿಂದ ತೆರೆಯನ್ನು ಬೇರ್ಪಡಿಸಲಸಾಧ್ಯ. ತೆರೆಯೆಂಬುದು ಕಲ್ಪನೆ ಮಾತ್ರ, ಅದೆಲ್ಲವೂ ಜಲರಾಶಿಯೇ ಆಗಿದೆ. ಅದು ಜಲಕ್ಕೆ ಅನನ್ಯ. ಹಾಗೆಯೇ ಜಗತ್ತೆಂಬ ತೆರೆಯು ಚೈತನ್ಯ ಸಮುದ್ರದಲ್ಲಿ ತೋರಿ ಅಡಗಿದರೂ ಅದು ಚೈತನ್ಯಕ್ಕೆ ಅನ್ಯವಲ್ಲ.

"ಬೆಳಗ್ಗೆ ಕತ್ತಲೆಯೆನಿಸಿ....'ತರಳಂಗೆ ಮರದಾನೆ,' 'ಜಗವೆಂಬ ತೆರೆ' ಈ ಮೂರು ಉಪಮಾನದ ಯುಕ್ತಿಗಳಿಂದ ಇವೆಲ್ಲವೂ ಅದ್ವೈತರೂಪ ಆತ್ಮವೇ ಆಗಿದೆ ಎಂಬುದನ್ನು ತಿಳಿಸಿ ವಿವೇಕದ ಕಣ್ಣು ವಿಕಸನಗೊಳ್ಳುವಂತೆ ಮಾಡಿದ್ದಾರೆ.

ಅನುಮಾನ ಪ್ರಮಾಣರೂಪ ಯುಕ್ತಿಯಿಂದಲೂ ಇದೆಲ್ಲವೂ ಅದ್ವೈತ ರೂಪ ಆತ್ಮವೇ ಆಗಿದೆ ಎಂಬುದನ್ನು ಸಾಧಿಸಿ ತೋರಿಸುತ್ತಾರೆ.

ಆರಿಸಿಕೊಳ್ಳುವದರಿಂದಲೇ ಜಗವು ಆತ್ಮನಿಗೆ ಅನ್ಯವಾಗಿರಲು ಅನನ್ಯ ಹೇಗೆ ?

ಪ್ರತಿಜ್ಞೆ : ಜಗವು ಆತ್ಮನಿಗೆ ಅನ್ಯವಲ್ಲ.

ಹೇತು : ತೋರುವದರಿಂದ.

ದೃಷ್ಟಾಂತ : ಕನಸಿನಂತೆ.

ಸ್ವಪ್ನದಲ್ಲಿ ಮನಸ್ಸೇ ವಿಷಯ-ವಿಷಯಿ ಭಾವವನ್ನು ಧರಿಸಿರುತ್ತದೆ ಅಥವಾ ಅವಿದ್ಯಾವೃತ್ತಿಯೇ ವಿಷಯ-ವಿಷಯಿಯಾಗಿರುತ್ತವೆ. ಸ್ವಪ್ನದ 'ದೃಷ್ಟಿ ಸೃಷ್ಟಿ'ಗಳೆರಡೂ

ಒಂದರಿಂದಲೇ ನಿರ್ಮಿತ. ಆದ್ದರಿಂದ ಅವುಗಳಲ್ಲಿ ಭೇದವಿಲ್ಲ, ಸ್ವಪ್ನ ಸೃಷ್ಟಿ ಭಿನ್ನವಾಗಿ ಗೋಚರಿಸಿದರೂ ಸ್ವಪ್ನ ದೃಷ್ಟಿಗೆ ಅನ್ಯವಲ್ಲ. ಹಾಗೆಯೇ ಎಚ್ಚರ ಸೃಷ್ಟಿಯು ದೃಷ್ಟಾನಿಗೆ ಅನ್ಯವಾಗಿ ತೋರಿದಾದರೂ ವಾಸ್ತವವಲ್ಲ.

ಆರಿಸಿಕೊಳ್ಳಲಾರದೆಯೂ ಜಡವಾದ ಜಗತ್ತು ಆತ್ಮನಿಗೆ ಭಿನ್ನವಾಗಿರಬಹುದಲ್ಲ ಎಂಬ ಶಂಕೆಗೆ—

ಪ್ರತಿಜ್ಞೆ : ಆತ್ಮನಿಗೆ ಭಿನ್ನವಾದದ್ದು ಏನೂ ಇಲ್ಲ.

ಹೇತು : ಅದರ ಸಂಬಂಧಿ ಜ್ಞಾನವಿಲ್ಲದಿದ್ದರಿಂದ.

ದೃಷ್ಟಾಂತ : ಗಗನ ಕುಸುಮದಂತೆ.

ಅದು ಗಗನ ಕುಸುಮದಂತೆ ಅಸತ್(ತುಚ್ಛ)ವಾಗಿರದೆ ಭಾವರೂಪವಾಗರಬಹುದು ಎಂದು ಶಂಕಿಸಿದರೆ—

ಪ್ರತಿಜ್ಞೆ : ಜಗತ್ತು ಸದ್ರೂಪಾತ್ಮನಿಗೆ ಭಿನ್ನವಲ್ಲ.

ಹೇತು : ಅದರ ಸ್ವರೂಪವಾಗಿ ಕಾಣಿಸುವದರಿಂದ.

ದೃಷ್ಟಾಂತ : ಮೃತ್ತಿಕೆಯೊಡನೆ ಅನನ್ಯವಾಗಿರುವ ಘಟದಂತೆ.

ವಿಧಿಮುಖ ಪ್ರತೀತಿ ಎಂದರೆ 'ಅಸ್ತಿ' ಎಂಬ ವ್ಯವಹಾರಕ್ಕೆ ವಿಷಯುವಾದದ್ದು ಭಾವರೂಪವಾಗಿರುತ್ತದೆ. ಅದು ಪರೋಕ್ಷ ಇಲ್ಲವೆ ಅಪರೋಕ್ಷವಾಗಿಯೂ ಇರಬಹುದು. 'ನಾಸ್ತಿ' ಪ್ರತೀತಿಗೆ ವಿಷಯುವಾದ ಅಭಾವವು ಪರೋಕ್ಷ. ಈ ಅಭಾವಕ್ಕೂ ಒಂದು ಅಸ್ತಿತ್ವವಿದೆ. ಗಗನ ಕುಸುಮ, ವಂಧ್ಯಾಪುತ್ರ ಇವುಗಳಿಗೆ ಮಾತ್ರ ಅಸ್ತಿತ್ವವಿಲ್ಲ. ಭಾವಾಭಾವರೂಪವಾದ ಈ ಜಗತ್ತು ಅಸ್ತಿತ್ವವುಳ್ಳದ್ದಾಗಿದೆ. ಈ ಅಸ್ತಿತ್ವವೇ ಸದ್ರೂಪ, ಘಟವೆಂಬುದು ಮಣ್ಣಿಗೆ ಅತಿರಿಕ್ತವಾಗಿರದಂತೆ ಜಗತ್ತು ಸದ್ರೂಪಾತ್ಮನಿಗೆ ಭಿನ್ನವಲ್ಲ.

ಸಚ್ಚಿದ್ರೂಪಾತ್ಮನಿಗೆ ಜಗತ್ತು ಅನ್ಯವಾಗಿ ಇಲ್ಲ. ಇದ್ದಂತೆ ಗೋಚರಿಸಿದರೆ ಅದು ಕಲ್ಪನಾ ಮಾತ್ರ.

ಪ್ರತಿಜ್ಞೆ : ಕಲ್ಪನೆಗೆ ಜಗತ್ತು ಬೇರಲ್ಲ.

ಹೇತು : ಆತ್ಮನಲ್ಲಿ ಬೇರೆ ಕಾರಣವಿಲ್ಲದೆ ತೋರುವದರಿಂದ.

ದೃಷ್ಟಾಂತ : ಕನಸಿನಂತೆ.

ಉಪಮಾನ, ಅನುಮಾನ ಮುಂತಾದ ಪ್ರಮಾಣಗಳು ಅದ್ವೈತಸಿದ್ಧಿಗೆ (ಪ್ರಕಟತೆಗೆ) ಸಹಕಾರಿಗಳು; ಇವು ಸ್ವತಂತ್ರವಾಗಿ ಪ್ರವೃತ್ತಿಸಲಾರವು. ಅಂತಿಮ ನಿರ್ಣಯ ಶೃತಿಗೆ ಮೀಸಲು. ಅಂತೆಯೇ ಶ್ರೀಮನ್ನಿಜಗುಣರು; 'ಸದೇವ ಸೋಮ್ಯೇತಿ' 'ಆತ್ಮೈವ ವೇದಮಿತಿ', 'ಸರ್ವಾಯಮಾತ್ಮೇತಿ' ಮುಂತಾದ ಶೃತಿಗಳನ್ನು ಉದ್ಧರಣ ಮಾಡಿ ಇವೆಲ್ಲವೂ ಭೂತ, ವರ್ತಮಾನ ಮತ್ತು ಭಾವಿ ಎಂಬ ಕಾಲತ್ರಯಗಳಲ್ಲಿ ಆತ್ಮರೂಪವೇ ಆಗಿದೆ ಎಂದು ಸಾಕಿದ್ದಾರೆ. ಹೀಗೆ ಶೃತಿ, ಯುಕ್ತಿ ಮತ್ತು ಸ್ವಾನುಭವವೆಂಬ ಬಂಧುರವಾದ ಮುಪ್ಪುರಿಯ ವಿಚಾರದಿಂದ ನಿಖರವಾದ ಅದ್ವೈತ ಸಿದ್ಧಿಯನ್ನು ಸಾಧಿಸಿ ತೋರಿಸಿದ್ದಾರೆ.

'ಆತ್ಮ ತರ್ಕಚಿಂತಾಮಣಿ' ಕೃತಿ ಲಭ್ಯವಿಲ್ಲ. ಆದರೂ ಅದರ ಮಾದರಿ (sample) ಭೇದ ನಿರಾಕರಣ ಸೂತ್ರದಲ್ಲಿ ದೊರೆಯುತ್ತದೆ. ಈ ಉಕ್ಕಿನ ಕಡಲೆಗೆ ವಜ್ರದ ಹಲ್ಲುಗಳು ಬೇಕು. ಅನಿಷ್ಟ ಆಪಾದನೆ ಅಂದರೆ ಸಂಪಾದನೆಗೆ ತರ್ಕವೆನ್ನುತ್ತಾರೆ. ಬೇಡಾದುದನ್ನು ಪ್ರತಿವಾದಿಯು ಪದರಿಗೆ ತಂದು ಕೊಡುವುದೇ ತರ್ಕ. ತರ್ಕದ ಆಧಾರದಿಂದ ಭೇದವು ನಿರಾಕರಿಸಲ್ಪಡುವುದು.

ಒಬ್ಬನಿಗೆ ಉಣ್ಣುವ ಇಚ್ಛೆ, ಸಾಕೆಂಬ ಇಚ್ಛೆ ಮತ್ತೊಬ್ಬನಿಗೆ, ಒಬ್ಬನಿಗೆ ಜನನ, ಇನ್ನೊಬ್ಬನಿಗೆ ಮರಣ ಹೀಗೆ ಭೋಗಗಳ ಭಿನ್ನತೆಯಿಂದ ಆತ್ಮರು ಅನೇಕರೆಂದು ಕಂಡು ಬರುತ್ತದೆ. ಭೋಗದ ವ್ಯವಸ್ಥೆಗಾಗಿಯೇ ನ್ಯಾಯ, ವೈಶೇಷಿಕ, ಪೂರ್ವಮೀಮಾಂಸಕ, ಪಾತಂಜಲಿ ಮತದವರು ಅನೇಕಾತ್ಮರನ್ನು ಒಪ್ಪುತ್ತಾರೆ. ಒಬ್ಬಾತ್ಮನಿದ್ದರೆ, ಹರಿಯು ಏಕಕಾಲದಲ್ಲಿ ಎಲ್ಲ ಗೋಪಿಯರ ಮನೆಯಲ್ಲಿದ್ದಂತೆ ಸರ್ವರಿಗೂ ಸಮಾನ ಸುಖ ದುಃಖಗಳಾಗುತ್ತಿರಬೇಕು, ಹಾಗಿಲ್ಲ ಇದು ಎಲ್ಲರ ಅನುಭವ ಆದ್ದರಿಂದ ಆತ್ಮರು ಅನೇಕರು.

ಅನೇಕಾತ್ಮರನ್ನು ಒಪ್ಪಿದರೆ ಅವರನ್ನು ನಿತ್ಯರೆನಬೇಕು. ಇಲ್ಲವಾದರೆ ಅಕೃತಾಭ್ಯಾಗವು-ಕೃತಪ್ರಣಾಶ ದೋಷಗಳು ಬರುತ್ತವೆ. ತಾನು ಮಾಡದೇ ಇದ್ದುದರ ಫಲ ಅನುಭವಿಸುವ ಪ್ರಸಂಗಕ್ಕೆ ಅಕೃತಾಭ್ಯಾಗವೆನ್ನುತ್ತಾರೆ. ಮಾಡಿದ ಕರ್ಮಫಲ ಉಣ್ಣದೇ ನಾಶವಾಗುವುದಕ್ಕೆ ಕೃತಪ್ರಣಾಶವೆಂಬ ಹೆಸರು. ದೋಷ ನಿವಾರಣೆಗಾಗಿ ಆತ್ಮನು ನಿತ್ಯನೆಂದು ಒಪ್ಪಬೇಕು. ನಿತ್ಯವಾದುದು ಪೂರ್ಣವಿರಲೇಬೇಕು. ಎಲ್ಲ ಆತ್ಮರು ಎಲ್ಲ ಶರೀರಗಳಲ್ಲಿರುವುದರಿಂದ ಯಾವ ಪ್ರತ್ಯೇಕವಾದ ಆತ್ಮನಿಗೆ ಯಾವ ಪ್ರತ್ಯೇಕ ತನುವು ಭೋಗಸಾಧನವಾಯಿತೆಂದು ನಿರ್ದಿಷ್ಟಪಡಿಸುವದು ಅಸಾಧ್ಯ. ಯಾವ ಆತ್ಮ ಸುಕೃತದಿಂದ ಆ ತನು ನಿರ್ಮಿತವಾಗಿರುವುದೇ ಅವನಿಗೆ ಮಾತ್ರ ಸಾಧನವೆನ್ನಬಹುದು. ಆ ಸುಕೃತವನ್ನೆಸಗುವಾಗ ಎಲ್ಲಾ ಆತ್ಮರು ಯಾವಾಗಲೂ ಇರುವುದರಿಂದ ಯಾವ ಪ್ರತ್ಯೇಕ ಆತ್ಮನಿಗೆ ಸುಕೃತದ ಸಂಬಂಧ ಹೇಳಬೇಕು? ಕೊನೆಗೆ ಈಶ್ವರನ ನಿಯತಿಯನ್ನಾಶ್ರಯಿಸಬಹುದು. ದೀಪದಂತೆ ಬೆಳಗುವ ಸ್ವಭಾವವುಳ್ಳ ಆ ನಿಯತಿ ಸರ್ವಾತ್ಮರು ಸರ್ವದೇಹಗಳಲ್ಲಿ ಸಮಾನವಾಗಿರುವುದರಿಂದ ಭೋಗಸಮಾನವಾಗುವ ಪ್ರಸಂಗ ಪ್ರಾಪ್ತವಾಗುತ್ತದೆ. ಅನೇಕಾತ್ಮರನ್ನೊಪ್ಪಿದರೆ, ಭೋಗದ ವ್ಯವಸ್ಥೆಯಾಗಬಾರದೆಂದು ಶ್ರೀಮನ್ನಿಜಗುಣರು ಚಾತುರ್ಯದಿಂದ ತೋರಿಸಿ.

ಸೂತ್ರ। ಏಕಾತ್ಮನೆ ಬುದೇ ಸಹಜವೀ ಕಾಣಿಸುವ!
ನೇಕಾತ್ಮರೆಂಬುದೆಲ್ಲಾ ಕಲ್ಪನೆ ॥

ಉಪಾಧಿ ಬಹುತ್ವ ಮೂಲಕ ಬಹುಭೋಗ ವ್ಯವಹಾರದ ವ್ಯವಸ್ಥೆ ಮಾಡಿ ತೋರಿಸುತ್ತಾರೆ.

ಒಬ್ಬ ಸೂರ್ಯನ ಪ್ರತಿಬಿಂಬ, ಮಲಿನ ಜಲದಲ್ಲಿ ಎದ್ದು ಕಾಣುವುದೇ ಇಲ್ಲ; ತೆರೆಗಳುಳ್ಳ ಜಲದಲ್ಲಿ ಚಂಚಲವಾಗಿ ತೋರುತ್ತದೆ: ನಿರ್ಮಲವೂ ನಿಶ್ಚಲವೂ ಆದ

ಜಲದಲ್ಲಿ ಪ್ರತಿಬಿಂಬವು ಸ್ಪಷ್ಟವಾಗಿ ನಿಶ್ಚಲವಾಗಿ ತೋರುತ್ತದೆ. ತನುತುಂಬಿ ಅಹಮಂಬು ಘನ ಅದರಲ್ಲಿ ಮಿನಗುವ ಛಾಯ ಜೀವ'. ಆತ್ಮನ ಪ್ರತಿಬಿಂಬವು ನಿದ್ರಾಆಲಸ್ಯಾದಿತ ಮೋಗುಣದಿಂದ ಕೂಡಿದ ಅಂತಃಕರಣದಲ್ಲಿ ಮೂಢವಾಗಿಯೂ, ಕಾಮಕ್ರೋಧಾದಿ ರಜೋಗುಣದಿಂದ ಕೂಡಿದ ಅಂತಃಕರಣದಲ್ಲಿ ದುಃಖಿಯಾಗಿ ಶಮದಮಾದಿ ಸತ್ವಗುಣ ದಿಂದ ಕೂಡಿದ ಅಂತಃಕರಣದಲ್ಲಿ ಶಾಂತ ಸುಖಮಯವಾಗಿ ತೋರುತ್ತದೆ. ಹೀಗೆ ಪ್ರತಿಬಿಂಬ ಅಥವಾ ಛಾಯರೂಪನಾದ ಜೀವನ ಭೋಗ ಭಿನ್ನವಾಗದೆ, ಬಿಂಬ ಒಂದೇ ತೆರನಾಗಿದೆ. ಆಕಾಶದ ಗುಣವಾದ ಶಬ್ದವು ಮೂಲದಲ್ಲಿ ಒಂದೇ ಆಗಿದ್ದರೂ ವಾದ್ಯ ಗಳಲ್ಲಿ ಧ್ವನ್ಯಾತ್ಮಕ ಮಾತಿನಲ್ಲಿ ವರ್ಣಾತ್ಮಕ, ಗಾಯಕನಲ್ಲಿ ಧ್ವನ್ಯಾತ್ಮಕ ವರ್ಣಾತ್ಮಕವಾಗಿ ಅನೇಕ ವಿಧವಾಗಿ ತೋರುತ್ತದೆ. ರಾಮಾಯಣ ನಾಟಕದಲ್ಲಿ ಬೆಳಗುವ ಪ್ರಕಾಶ ಒಂದೇ, ಸೀತಾ, ಹನುಮಂತ, ರಾವಣ ಮುಂತಾದವರ ಪಾತ್ರಗಳು ಬರಲು ಆಯಾಯ ಪಾತ್ರಗಳಾ ಕಾರವಾಗಿ ತೋರುವುದು ಪ್ರಕಾಶವೇ. **What we know is phenomenon; not noumenon** ಎಂದು ಕಾಂಟ ತತ್ವಜ್ಞಾನಿ ಹೇಳುವಂತೆ ನಮಗೆ ಕಂಡದ್ದು ದೃಶ್ಯಜಾಲ ಪರಿಸ್ಥಿತಿಯಲ್ಲ. ಒಂದೇ ನೀರು ಉಪ್ಪು, ಹುಳಿ, ಸಿಹಿ, ಕಹಿ, ಒಗರಾಗಿ ತೋರುವಂತೆ, ಸಾಮಾನ್ಯವಾದ ನಿರ್ವಿಕಲ್ಪ ಜ್ಞಾನ ಒಂದೇ ತೆರನಾದರೂ ಸವಿಕಲ್ಪ ಜ್ಞಾನವು ಪರೋಕ್ಷ, ಸ್ಮೃತಿ, ನಿಶ್ಚಯ, ಸಂಶಯ ಮುಂತಾಗಿ ಅನೇಕ ವಿಧವಾಗಿ ತೋರುವುದು.

ಅನೇಕ ಘಟಗಳಲ್ಲಿ ಬಯಲು ಒಂದೇ ಇದ್ದರೂ; ಒಂದು ಘಟವು ಸ್ಮಶಾನ ಯಾತ್ರೆಗೆ ಬೆಂಕಿಯನ್ನು ಒಯ್ಯುತ್ತಿರಬಹುದು. ಒಂದರಲ್ಲಿ ಅಭಿಷೇಕಕ್ಕೆ ಬೇಕಾಗುವ ಹಾಲು ತುಪ್ಪಾದಿಗಳಿರಬಹುದು. ಹೀಗೆ ಘಟದ ಭೋಗವು ಭಿನ್ನವಾದರೂ ಈ ಬಯಲು ಒಂದೇ ಅಥವಾ ಒಂದು ತನುವಿನಲ್ಲಿ ಒಬ್ಬಾತ್ಮನಿದ್ದರೂ ಭಿನ್ನ ಭಿನ್ನ ಇಂದ್ರಿಯಲ್ಲಿ ಶಬ್ದ ಸ್ಪರ್ಶಾದಿ ಭಿನ್ನ ಭಿನ್ನ ಭೋಗವಾದರೂ, ಒಂದು ಇಂದ್ರಿಯದ ಅನುಭವ ಇನ್ನೊಂದಕ್ಕೆ ಇಲ್ಲದಿದ್ದರೂ ಆತ್ಮನೊಬ್ಬನೇ ಇರುವಂತೆ; ಭಿನ್ನತನುಗಳ ಭೋಗಗಳು ಭಿನ್ನಗಳಾದರೂ ಆತ್ಮನೊಬ್ಬನೇ.

ಸರ್ವರಲ್ಲಿ ಒಬ್ಬಾತ್ಮನಿದ್ದರೆ ಸರ್ವರೂ ಸರ್ವರನ್ನೂ ದ್ವೇಷಿಸಬಾರದೆಂದರೆ ತೆರೆ ಗಳು ಒಂದಕ್ಕೊಂದು ಕೂಡಿ ದೊಡ್ಡವಾಗಬಹುದು ಇಲ್ಲವೇ ತಾಕಲಾಡಿ ನಾಶವಾಗ ಬಹುದು. ಆದಾಗ್ಯೂ ಅದೆಲ್ಲವೂ ಒಂದೇ ಜಲದ ಕ್ರೀಡೆ.

ಭೇದರೂಪ ವೃಕ್ಷವನ್ನು ತರ್ಕರೂಪ ಚಂಡಮಾರುತವು ಸಮೂಲ ಉಚ್ಚಾಟನೆ ಮಾಡಿದ್ದನ್ನು ಇನ್ನು ಮುಂದೆ ನೋಡಬಹುದು. ಅಭೇದವನ್ನು ನಿಷೇಧಮಾಡತಕ್ಕ ಅಭಾವವೇ ಅನ್ಯೋನ್ಯ ಅಭಾವವು. 'ಘಟಃ ಪಟೋನ' ಹೀಗೆ ನಿರೂಪಿಸುವಲ್ಲಿ ಘಟದಲ್ಲಿ ಪಟದ ಅಭೇದದ ನಿಷೇಧವಾಗಿದೆ. ಘಟದಲ್ಲಿ ಪಟದ ಅಭೇದದ ನಿಷೇಧವು ಘಟದಲ್ಲಿ ಪಟದ ಅನ್ಯೋನ್ಯ ಅಭಾವವಾಗಿದೆ. ಯಾಕೆಂದರೆ, 'ನ' ಪದದ ಹೊರತು ಯಾವುದರಲ್ಲಿ ಯಾವುದರ ಪ್ರತೀತಿಯಾಗಿದೆಯೋ, 'ನ' ಶಬ್ದದಿಂದ ಅದರಲ್ಲಿ ಅದರ ನಿಷೇಧವಾಗುತ್ತದೆ.

ಹೇಗೆಂದರೆ, ಘಟಃ ಪಟಃ ಈ ವಾಕ್ಯದಲ್ಲಿ 'ನ' ಶಬ್ದದ ಹೊರತು 'ನಿಲೋಘಟಃ' ಇತ್ಯಾದಿ ವಾಕ್ಯಗಳಂತೆ ಘಟದಲ್ಲಿ ಘಟದ ಅಥವಾ ಘಟದಲ್ಲಿ ಘಟದ ಅಭೇದ (ತಾದಾತ್ಮ್ಯ) ಪ್ರತೀತಿಯಾಗುತ್ತದೆ. ಸಮಾನ ವಿಭಕ್ತಿಯುಳ್ಳ ಪದಗಳು ಸಮೀಪವಿದ್ದರೆ ಸಾಮಾನ್ಯಾಧಿಕರಣ್ಯದಿಂದ ಅಭೇದವೇ ಸಿದ್ಧಿಸುತ್ತದೆ. 'ನ' ಶಬ್ದದಿಂದ ಆ ತಾದಾತ್ಮ್ಯದ ನಿಷೇಧವಾಗುತ್ತದೆ. ಈ ಅನ್ಯೋನ್ಯ ಅಭಾವಕ್ಕೆ ಭೇದ, ಭಿನ್ನತಾ, ಅತಿರಿಕ್ತತಾ ಅಥವಾ ಬೇರೆತನ ಮುಂತಾದ ಹೆಸರುಗಳಿರುತ್ತವೆ. 'ಯಸ್ಯ ಅಭಾವಃ ತಸ್ಯ ಸ ಹಿವ (ಪ್ರತಿಯೋಗೀತೆ)': ಯಾವುದ'ರ' ಭೇದವೋ ಅದಕ್ಕೆ ಅದುವೇ ಪ್ರತಿಯೋಗಿ ಅಥವಾ ಷಷ್ಠೀ ವಿಭಕ್ತ್ಯಂತ 'ಅ' ಪದವು ಪ್ರತಿಯೋಗಿಯನ್ನು ನಿರ್ದೇಶಿಸುತ್ತದೆ. ಪ್ರತಿಯೋಗಿಯು ವಿಶೇಷಣವಾಗಿದೆ. ಯಾವುದರಲ್ಲಿ ಅಭೇದ ನಿಷೇಧವಾಗಿದೆಯೋ ಅದುವೇ (ಸಪ್ತಮೀ ವಿಭಕ್ತ್ಯಂತ) ಅಧಿಕರಣ. ಇದಕ್ಕೆ ವಿಶೇಷ್ಯ, ಅನುಯೋಗಿ ಮತ್ತು ಧರ್ಮೀ ಎಂಬ ನಾಮಾಂತರಗಳು ಆಶ್ರಯಕೊಟ್ಟುದ್ದೇ ಧರ್ಮಿ; ಆಶ್ರಯು ಪಡೆದುಕೊಂಡುದೇ ಧರ್ಮ. ಧರ್ಮಿಗ್ರಹಣ ಪ್ರತಿಯೋಗಿ 'ಸ್ಮರಣಂ ವಿನಾ ಅಭಾವಸ್ಯ ಅನುಭವಿತುಮ್ ಅಶಕ್ಯತ್ವಾತ್' ಧರ್ಮೀಯ ಜ್ಞಾನ ಮತ್ತು ಪ್ರತಿಯೋಗಿಯ ಸ್ಮರಣವಾಗದ ಹೊರತು ಅಭಾವದ ಅನುಭವವಾಗಲಾರದು. ಅನ್ಯೋನ್ಯ ಅಭಾವ ಲಕ್ಷಣಾತ್ಮಕವಾದ ಭೇದದ ಜ್ಞಾನವು ಧರ್ಮೀ (ಅನುಯೋಗಿ ಅಥವಾ ವಿಶೇಷ್ಯ), ಪ್ರತಿಯೋಗಿ ವಿಶೇಷಣಗಳ ಜ್ಞಾನಕ್ಕಿಂತಲೂ ಮೊದಲಾಗಲಿ, ಜ್ಞಾನಸಮಕಾಲವಾಗಲೀ ಆಗದೆ, ಅವುಗಳ ವಿಶಿಷ್ಟ ಜ್ಞಾನಾಧೀನವಾಗಿ ಭೇದದ ಜ್ಞಾನವಾಗುವದು. ಆದ್ದರಿಂದ ನಿಜವಲ್ಲ; ನಿಜವಾಗಿದ್ದರೆ ಮೊದಲೇ ಗೋಚರಿಸಬೇಕಿತ್ತು. ಭೇದ ನಿರಾಕರಣ ಚಿಂತನವು ಮನ ಮುಟ್ಟಲು ಈ ಪೂರ್ವ ಪೀಠಿಕೆ ಅನಿವಾರ್ಯ.

'ಭೇದವೆಂಬುದು ಘಟಪಟಾದಿ ಭೇದ್ಯಂಗಳೊಳ| ಭೇದ ಸ್ವರೂಪ ದಿಂದಿರ್ಪುದೋ ಧರ್ಮವಾದುದೋ ಪೇಳುದಿಟವೊಂದ||'

'ಬೋಧನೆ ಮಾಡುವವ ಬೋಧಕ; ಬೋಧನೆ ಮಾಡಿಸಿಕೊಳ್ಳುವವ ಬೋಧ್ಯ, ಹಾಗೆಯೇ ಭೇದ ಮಾಡುವುದೇ ಭೇದಕ, ಭೇದ ಮಾಡಿಸಿಕೊಳ್ಳುವವೇ ಭೇದ್ಯಗಳು. ಘಟಃ ಪಟೇನ' ಎನ್ನುವಲ್ಲಿ ಪೂರ್ವದಲ್ಲಿ ಪರಿಚಯಿಸಿಕೊಂಡಂತೆ ಘಟಪಟಗಳೆರಡೂ ಭೇದ್ಯಗಳಾದವು. ಘಟ, ಪಟಗಳನ್ನು ಬೇರ್ಪಡಿಸಿದ ಭೇದವು ಅವುಗಳ ಸ್ವರೂಪವೇ ಆಗಿರುವದೋ? ಅಥವಾ ಅವೆರಡನ್ನೂ ಆಶ್ರಯಿಸಿಕೊಂಡಿರುವ ಧರ್ಮವಾಗಿದೆಯೋ? ಒಂದು ವೇಳೆ ಆ ಭೇದವು ಧರ್ಮರೂಪವಾಗಿರುವುದೆಂದು ಒಪ್ಪಿದರೆ; ಧರ್ಮರೂಪವಾದ ಅಂದರೆ ಆಶ್ರಯ ಪಡೆದುಕೊಂಡಿರುವ ಭೇದಕ್ಕೂ, ಆಶ್ರಯಕೊಟ್ಟಿರುವ ಧರ್ಮೀರೂಪವಾಗಿರುವ ಘಟಪಟಗಳಿಗೂ ಭೇದವೋ? ಅಭೇದವೋ ಭೇದವೆಂದು ಅಂಗೀಕರಿಸಿದರೆ–ಧರ್ಮಿಯಾದ ಘಟ ಅಥವಾ ಪಟದಿಂದ ಭಿನ್ನವಾದ ಧರ್ಮರೂಪ ಭೇದವನ್ನು ಬೇರ್ಪಡಿಸಿದ್ದು ಯಾವುದು? ತಾನೇ, ಧರ್ಮಿಯಿಂದ ಬೇರ್ಪಡಿಸಿಕೊಂಡಿತೆಂದರೆ–

ಬೇರ್ಪಡಿಸುವುದು (ಕರ್ತೃ) ತಾನೇ, ಬೇರ್ಪಡಿಸಿಕೊಳ್ಳುವುದು (ಕರ್ಮವು) ತಾನೇ ಆದ್ದರಿಂದ ತಾನೇ ಕರ್ತೃ, ತಾನೇ ಕರ್ಮವಾಗಿ ಕಾರ್ಯ ವಿರೋಧಿ; ತಾನು ('ಉ'ಕರ್ತೃ) ತನ್ನನ್ನು ('ಅನ್ನು'ಕರ್ಮ) ಹತ್ತಿಕೊಂಡು ಹೋದ ಎಂಬಂತೆ; ಆತ್ಮಾಶ್ರಯದೋಷ ಬರುವದು. ಈ ದೋಷ ಪರಿಹಾರಕ್ಕೆ ಎರಡನೆಯ ಧರ್ಮಭೇದವನ್ನು ಆಶ್ರಯಿಸ ಬೇಕಾಗುವದು. ಎರಡನೆಯ ಧರ್ಮಭೇದವು ಮೊದಲನೆಯ ಧರ್ಮಭೇದವನ್ನು ಧರ್ಮಿಯಿಂದ ಬೇರ್ಪಡಿಸಿತೆಂದರೆ ಆತ್ಮಾಶ್ರಯ ದೋಷಬರಲಾರದು. ಆದರೆ ಎರಡನೆಯ ಧರ್ಮಭೇದವು ಧರ್ಮಿಯಿಂದ ತಾನು ಹೇಗೆ ಬೇರ್ಪಡಿಸಿಕೊಂಡಿತು? ತಾನೇ ಬೇರ್ಪಡಿಸಿಕೊಂಡಿತೆಂದರೆ ಮೊದಲಿನಂತೆ ಆತ್ಮಾಶ್ರಯ. ಮೊದಲನೆಯದು ಎರಡನೆಯ ದನ್ನೂ, ಎರಡನೆಯದು ಮೊದಲನೆಯದನ್ನೂ ಹೀಗೆ ಒಂದಕ್ಕೊಂದು ಸಹಕಾರಿಗಳಾಗಿ ಬೇರ್ಪಡಿಸಿಕೊಂಡವೆಂದರೆ (ರಾಮನು ಭೀಮನನ್ನೂ ಭೀಮನು ರಾಮನನ್ನು ಹತ್ತಿಕೊಂಡು ಹೋದರೆಂಬಂತೆ) ಅನ್ಯೋನ್ಯಾಶ್ರಯದೋಷ ಬರುತ್ತದೆ. ಪರಿಹಾರಕ್ಕೆ ಮೂರನೆಯ ಧರ್ಮಭೇದದ ಬಳಿ ಸಾರಿದರೆ ಈ ಪೂರ್ವ ರೀತಿಯಂತೆ ಅದು ಧರ್ಮಿಯಿಂದ ಹೇಗೆ ಬೇರ್ಪಟ್ಟಿತು? ತಾನೇ ಬೇರ್ಪಡಿಸಿಕೊಂಡಿತೆಂದರೆ ಆತ್ಮಾಶ್ರಯ. ಎರಡನೆಯದು ಒಂದನೆಯದನ್ನೂ, ಮೂರನೆಯದು ಎರಡನೆಯದನ್ನೂ, ಒಂದನೆಯದು ಮೂರನೆಯ ದನ್ನೂ ಬೇರ್ಪಡಿಸಿದವೆಂದರೆ ಚಕ್ರಿತಾವತ್ತಿ ದೋಷವು. ಸಹಾಯಕ್ಕೆ ನಾಲ್ಕನೆಯದನ್ನೂ ಅಪೇಕ್ಷಿಸಿದರೆ ಅನವಸ್ಥೆ. ಧರ್ಮಭೇದವನ್ನೊಪ್ಪಿದರೆ ಈ ದೋಷರೂಪ ಅನಿಷ್ಟಗಳು ಪರರಿಗೆ ಬರುತ್ತವೆ. ಆದ್ದರಿಂದ ಧರ್ಮಭೇದವನ್ನೊಪ್ಪುವದು ಸರಿಯಲ್ಲ.

ಭೇದವು ಘಟಪಟಾದಿ ಧರ್ಮಿಗಳ ಸ್ವರೂಪವಾಗಿದೆ ಎಂದು ಅಂಗೀಕರಿಸಿದರೆ, 'ಪ್ರತಿಯೋಗಿಯಾದುದು ಪಾರದಿರಪೇಳ್ಕುಂ': ಪ್ರತಿಯೋಗಿಯನ್ನು ಅಪೇಕ್ಷಿಸದೆ ಭೇದವು ಗೋಚರಿಸಬೇಕಿತ್ತು. ಭೇದ ಎಂದಾಗ ಯಾವುದರ? ಅಥವಾ ಭಿನ್ನ ಎಂದಾಗ ಯಾವುದ ಕ್ಕಿಂತ ಎಂಬ ಮಾತುಗಳೇ ಬರುವ ಸಂಭವವಿರುತ್ತದೆ. ಆದ್ದರಿಂದ ಸ್ವರೂಪ ಭೇದ ಸರಿಯಲ್ಲ. ಭೇದವು ಭೇದವಾಗಿರುವದೇ ಅದರ ಸ್ವರೂಪವೆಂದರೂ ಭೇದಮಾಡುವದೇ ಅದರ ಸ್ವಭಾವವಾದ್ದರಿಂದ ತನ್ನನ್ನು ತಾನೇ ಭೇದಿಸಿಕೊಂಡು ತನ್ನ ನಾಶ ತಾನೇ ತಾನೇ ಮಾಡಿಕೊಂಡ ದೋಷವು ಪ್ರಾಪ್ತಿಯಾಗುವದು. ಹೀಗೆ ಪ್ರಬಲವಾದ ತರ್ಕಮಾತ್ರ ದಿಂದಲೇ ಭೇದ ನಿರಾಕರಣ ಮಾಡಲ್ಪಟ್ಟಿದೆ. ಭೇದವನ್ನೊಪ್ಪುವದರಿಂದಾಗುವ ಅನರ್ಥ ವನ್ನು ಅನುಮಾನ ಹಾಗೂ ಶ್ರುತಿ ಪ್ರಮಾಣಗಳಿಂದ ನಿರೂಪಿಸುತ್ತಾರೆ.

ಅನುಮಾನ– ಪ್ರತಿಜ್ಞೆ: ತನಗನ್ಯಮಂ ಪೇತ್ತೊಡೆ ಬಾಧೆಪಡಿಸುತ್ತಿರ್ಕು.
ಹೇತು: ಭೇದವಾಗಿ,
ದೃಷ್ಟಾಂತ: ತಲೆಹೊರೆಯ ಬುತ್ತಿಯಂತೆ.

ತಲೆಯ ಮೇಲೆ ಇರುವವರೆಗೆ ಬುತ್ತಿಯ ಭಾರ ಹಾಗೂ ಅದರ ರಕ್ಷಣೆಯ ಭಾರಗಳಿರುವವು, ಬುತ್ತಿಯನ್ನು ಬಿಚ್ಚಿ ಊಟಮಾಡಿದಾಗ ಅಭಿನ್ನವಾಗಿ ಹಸಿವಿನ

ನಿವೃತ್ತಿ ತೃಪ್ತಿಯ ಪ್ರಾಪ್ತಿಯಾಗುವದರ ಜೊತೆಗೆ ರಕ್ಷಣೆಯ ಭಾರವೂ ತಪ್ಪುವುದು. 'ಶ್ರುತಿ ಮತಸ್ತರ್ಕೋನು ಸಂಧೀಯತಾಮ್'' ಎಂಬಂತೆ ಶ್ರುತ್ಯಾನುಸಾರಿಯಾದ ತರ್ಕವೇ ಶುದ್ಧವೆನಿಸುವದು. ಇಲ್ಲವಾದರೆ ಶುಷ್ಕವೆನಿಸುತ್ತದೆ. ಆದ್ದರಿಂದ 'ದ್ವಿತೀಯಾ ದ್ವೈಭಯಂಭವತಿ', 'ನೇಹನಾನಾಸ್ತಿಕಿಂಚನ', 'ಮೃತ್ಯೋಃ ಸಮೃತ್ಯುಂಗಚ್ಛಯ ಇಹನಾನೇವಪಶ್ಯತಿ', ಈ ಮೊದಲಾದ ಶ್ರುತಿಗಳ ಉದ್ಧರಣ ಮಾಡಿದ್ದಾರೆ.

ಸೂತ್ರ।। ಭೇದವೆಂಬುದು ಘಟಪಟಾದಿಗಕ್ಕುಂ ನೈಜ।
ವಾದುದಲ್ಲಂ ದೋಷ ಮುಳ್ಳುದಾಗಿ।।

ಈ ಪೂರ್ವ ಪ್ರತಿಪಾದನೆಯಂತೆ ಅನೇಕ ದೋಷಗಳು ಬರುವದರಿಂದ, ದುಃಖ ಮೂಲವಾದುದರಿಂದ ಹಾಗೂ ಶ್ರುತಿ ವಿರೋಧವಾಗುವದರಿಂದ ಭೇದವು ಮಿಥ್ಯೆಯಾಗಿರುವದು. ದೇಶ, ಕಾಲ, ವಸ್ತು ಪರಿಚ್ಛೇದತ್ರಯ ರಹಿತವಾದ ಅದ್ವೈತದಲ್ಲಿ ಎಲ್ಲಿಯ ಭೇದ? ಅದ್ವೈತ ತತ್ವಜ್ಞಾನವನ್ನು ಸೂತ್ರರೂಪವಾಗಿ ಕನ್ನಡದಲ್ಲಿ ಪ್ರತಿಪಾದಿಸಿದ ಶ್ರೇಯಸ್ಸು ದಾರ್ಶನಿಕ ಸಾಹಿತಿಗಳಾದ ಶ್ರೀಮನ್ನಿಜಗುಣರಿಗೆ ಸಲ್ಲುತ್ತದೆ.

ಭೇದವು ಇಲ್ಲವೇ ಇಲ್ಲ, ಎಲ್ಲವೂ ಆತ್ಮ ಸ್ವರೂಪವಾದರೆ ದೇಹಾದಿಗಳೂ ಆತ್ಮ ರೂಪವಾಗಬೇಕಾಯಿತು. ಚಾರ್ವಾಕ ಮತವನ್ನೊಪ್ಪಿ ಆ ಸಿದ್ಧಾಂತಕ್ಕೆ ಗುರಿಯಾಗಬೇಕಾಯಿತು. ದೇಹಾದಿಗಳು ಆತ್ಮರೂಪವಲ್ಲವೆಂದರೆ ಭೇದವನ್ನು ಒಪ್ಪಿದಂತಾಯಿತು. ಈ ಉಭಯ ಪಾಶರಜ್ಜು ನ್ಯಾಯಕ್ಕೆ ಪರಿಹಾರ:

'ಸರ್ಪಾದಿಭಾವದಿಂ ತೋರ್ಪುದೇ ರಜ್ಜುವನೆ। ಸರ್ಪಾದಿ ಭಾವದಲ್ಲಿ ಯಾ ರಜ್ಜುತ್ವಮಿರ್ಪುದೇ ಲೋಕದೊಳು।।',

ಹಗ್ಗವು ಸರ್ಪರೂಪದಿಂದ ತೋರಿದರೂ ಆ ಸರ್ಪಕ್ಕೆ ಹಗ್ಗದ ವ್ಯವಹಾರಿಕ ಸತ್ಯತ್ವ ಬರಲಾರದು. ಹಾವಾಗಿ ತೋರಿದ್ದು ಹಗ್ಗವೇ ಎಂದಾಗ್ಯೂ ಆ ಹಾವಿನ ನಾಮರೂಪಗಳನ್ನು ಬಾಧಿಸಿ ಹಗ್ಗವೆಂದು ತಿಳಿಯುತ್ತೇವೆ. ಪರಮಾತ್ಮನೇ ಜಗತ್ತಾಗಿರುವನೆಂದರೂ ಜಗತ್ತಿಗೆ ಪಾರಮಾರ್ಥಿಕ ಸತ್ಯತ್ವ ಬರಲಾರದು. ಜಗವು ಆತ್ಮಸ್ವರೂಪವೆಂಬುದಕ್ಕೂ ಆ 'ನಾಮರೂಪದ ತೋರ್ಕೆ ಪುಸಿ ಎಂಬುದೇ ನಿಶ್ಚಿತಾರ್ಥ'ವು. ಅನುಮಾನ ಪ್ರಮಾಣದಿಂದ ದೃಢಪಡಿಸುತ್ತಾರೆ.

ಪ್ರತಿಜ್ಞೆ: ನಾಮರೂಪ ಜಗತ್ತು ಮಿಥ್ಯ,
ಹೇತು: ದೃಶ್ಯವಾಗಿ ತೋರುವದರಿಂದ.
ದೃಷ್ಟಾಂತ: ಸ್ವಪ್ನದಂತೆ.
ಪ್ರತಿಜ್ಞೆ: ಯಾವುದಿರುವದೋ ಅದು ಮಿಥ್ಯ ಅಲ್ಲ.
ಹೇತು: ಅನನ್ಯವಾದ್ದರಿಂದ.
ದೃಷ್ಟಾಂತ: ತನ್ನಂತೆ.

ಬ್ರಹ್ಮ ಸತ್ಯ, ಜಗತ್ತು ಮಿಥ್ಯವಾದರೆ–ಮಿಥ್ಯೆಯಾದ ಶರೀರಾದಿ ಸಾಧನಗಳ ಮೂಲಕ ಸತ್ಯವಾದ ಅದ್ವೈತರೂಪ ಪರಮಾತ್ಮ ಪ್ರಾಪ್ತಿ ಹೇಗೆ?

ಕಲ್ಲಿನ ಭೈರವಮೂರ್ತಿ ಭೈರವನಲ್ಲದಿದ್ದರೂ ಶ್ರದ್ಧಾಮೂಲಕ ಧ್ಯಾನಪೂಜಾದಿಗಳನ್ನು ಮಾಡುವದರಿಂದ ಅದರಲ್ಲಿ ಸಿದ್ಧಿಗಳು ಪ್ರಾಪ್ತವಾಗುತ್ತವೆ. ಭೈರವ ಸುಳ್ಳು-ಫಲವು ನಿಜವಾಗಿದೆ.

ಫಲವು ಶ್ರದ್ಧೆಯನ್ನವಲಂಬಿಸಿದೆ. ಕೆಲವರಿಗೆ ಫಲದೊರೆಯಬಹುದು ಕೆಲವರಿಗೆ ದೊರೆಯಲಿಕ್ಕಿಲ್ಲ

ಸ್ವಪ್ನ ಸ್ತ್ರೀಪ್ರಸಂಗ ಮಿಥ್ಯೆಯಾದರೂ ರೇತಃಪತನ ಸತ್ಯ. ಇಂಥ ಸ್ವಪ್ನಗಳು ಆಹಾರ, ನಿದ್ರಾ, ವಾಸನಾಪ್ರಾಬಲ್ಯ ಈ ದೋಷಗಳಿಂದ ಕ್ವಚಿತ್ ಯಾರಾದರೊಬ್ಬರಲ್ಲಿ ಒಂದು ಸಮಯದಲ್ಲಿ ತೋರಬಹುದು.

ಕನ್ನಡಿಯಲ್ಲಿ ತೋರುವ ತನ್ನ ಪ್ರತಿಬಿಂಬವು ಮಿಥ್ಯೆಯಾಗಿದೆ. ಆದರೂ ಸತ್ಯವಾದ ಮುಖದ ಸೌಂದರ್ಯವನ್ನು ತೋರಿಸುತ್ತದೆ. ಈ ದೃಷ್ಟಾಂತವು ಲಿಂಗ, ವಯಸ್ಸಾದಿಗಳ ಭೇದವಿಲ್ಲದೆ ಸರ್ವಾನುಭವ ಸಮ್ಮತ, ಆದ್ದರಿಂದ ಮಿಥ್ಯಸಾಧನದಿಂದಾದರೂ ಸತ್ಯದ ಪ್ರಾಪ್ತಿಯಾಗುತ್ತವೆ. ಹೀಗೆ ನಾಮರೂಪಗಳನ್ನು ಬಾಧಿಸಿ ಎಲ್ಲವೂ ತನ್ನಾತ್ಮವೆಂದು ತಿಳಿಯುವವನೇ ಉತ್ತಮಾಧಿಕಾರಿಯೆಂದು ಹೇಳಿದ್ದಾರೆ:

'ಜಗವೆಂದೊಡಂ ತಾನೆ ಜಗದೀಶನುಂ ತಾನೆ| ಜಗದಾತ್ಮರೆಲ್ಲರುಂ ತಾನೆ ನಿಜವೆಂದು| ಬಗೆವಾತನುತ್ತಮನು ನೋಡ||'

ದೇಹಾದಿಗಳಲ್ಲಿ ಬಂದ ಆತ್ಮತ್ವಬುದ್ಧಿಯನ್ನು ೪ ಮತ್ತು ೫ ಸಂಧಿಗಳಲ್ಲಿ ಮಾಡಿದ್ದಾರೆ. ೫ನೇ ಸಂಧಿಯಲ್ಲಿ ನಿದ್ರಾಮೀಮಾಂಸೆಯು ಅಪ್ರತಿಮವಾಗಿದೆ. ಫ್ರಾಯಿಡನ ಮನೋ ವಿಶ್ಲೇಷಣೆ ಮನೋರೋಗ ನಿವೃತ್ತಿಗೆ ಸ್ವಲ್ಪ ಸಹಾಯ ಮಾಡಿ ಪ್ರಖ್ಯಾತಿ ಗಳಿಸಿದೆ. ಶ್ರೀಮನ್ನಿಜಗುಣರ ನಿದ್ರಾಮೀಮಾಂಸೆ ಭವರೋಗ ನಿವೃತ್ತಿಗೆ ಕಾರಣವಾಗಿ ಲೋಕ ಕಲ್ಯಾಣಕ್ಕೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ.

ಶ್ರೀ ವಲ್ಲಭಾಚಾರ್ಯರು ಜಗತ್ತು ಸತ್ಯ, ಜೀವಾತ್ಮ ಅಂಶರೂಪ. ಅದರಲ್ಲಿಯೂ ಅಣುಪರಿಮಾಣವೆಂದಿದ್ದಾರೆ ಆದಾಗ್ಯೂ ಅವರು ಶುದ್ಧಾದ್ವೈತಿಗಳೆಂಬ ಹೆಸರು ಇತಿಹಾಸ ಪುಟಗಳನ್ನು ಸೇರಿದೆ.

ಶ್ರೀಮನ್ನಿಜಗುಣರಾದರೂ ಜಗತ್ತು ಮಿಥ್ಯ, ಜೀವಾತ್ಮ ಪರಮಾತ್ಮನ ಸ್ವರೂಪವೆಂದು ಹೇಳಿ–'ನೀನೆ ಸದಮಲ ಬ್ರಹ್ಮವೆಂಬುದರಲ್ಲಿ ವಿಮತಿಗಳ ಬಾಧೆಯಿಲ್ಲಾಗಿ| ಪದುಳದಿಂ ನಿಜದೊಳಿರು ಪುತ್ರ' ಎಂದು ವಾಕ್ಯಾರ್ಥ ಪ್ರತಿಪತ್ತಿ ನಿರಾಕರಣೆಯಲ್ಲಿ (೮-೩-೧೧) ಅಪ್ಪಣೆಕೊಡಿಸಿರುವದರಿಂದ, ೭ನೇ ಸಂಧಿಯಲ್ಲಿ ಬಂಧವು ಆಧ್ಯಾಸಿಕವೆಂದೂ, ೭ನೇ ಸಂಧಿಯಲ್ಲಿ 'ಕರ್ಮದಿಂದಹಮಾದಿಶುದ್ಧಿ ಐಸೆ' ಎಂದು ಕ್ರಮ ಸಮುಚ್ಚಯ

ಪ್ರತಿಪಾದನೆ ಮಾಡಿದ್ದರಿಂದ ಹಾಗೂ 'ಶ್ಲೋಕಾರ್ಧೇನ ಪ್ರವಕ್ಷಾಮಿ ಯದುಕ್ತಂ ಗ್ರಂಥಕೋಟಿಭಿಃ|'

'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವನಾಪರಃ||' ಎಂಬ ನಿರ್ಣಯಕ್ಕೆ ಸರ್ವಾಂಶದಲ್ಲಿ ಸಂವಾದಿಯಾಗಿರುವದರಿಂದ ಶ್ರೀ ಮನ್ನಿಜಗುಣರು ಶ್ರೀ ಶಂಕರಾಚಾರ್ಯರ ಕೇವಲಾದ್ವೈತವನ್ನೇ ಕನ್ನಡದಲ್ಲಿ ಕಾವ್ಯಮಯವಾಗಿ ಪ್ರತಿಪಾದಿಸಿದ್ದಾರೆಂದು ಹೇಳಬಹುದು. ಕನ್ನಡ ಜನತೆಗೂ ಕನ್ನಡ ಸಾಹಿತ್ಯಕ್ಕೂ ಕೊಟ್ಟಕೊಡುಗೆ ಅಪೂರ್ವ ಅನುಪಮವಾದುದು. ಅವರು ನಮ್ಮೆಲ್ಲರ ಅನಿಮಿತ್ಯ ಬಾಂಧವರೆಂಬಲ್ಲಿ ಎರಡು ಮಾತಿಲ್ಲ.

ಅನುಭವ ಸಾರವೆಂದರೆ ಅದ್ವೈತಾನುಭವ

ಸರ್ವತಂತ್ರ ಸಿದ್ಧಾಂತಾರ್ಥ ಲಕ್ಷಣ ಸಂಗ್ರಹದಲ್ಲಿ ಅನುಭವವೆಂದರೆ 'ಸ್ಮೃತಿ ಭಿನ್ನಂ ಜ್ಞಾನವಮ್' ಎಂದು ಲಕ್ಷಣ ಮಾಡಿದ್ದಾರೆ. ಪ್ರಮಾಜ್ಞಾನದಲ್ಲಿ ಯಾವ ಅನುಭವವತ್ವವಿರುವದೋ ಅದು ಸ್ಮೃತಿಯಲ್ಲಿ ಇಲ್ಲ. ಅನುಭವವತ್ವದ ಸತ್ವಾಸತ್ವದಿಂದ ಪ್ರಮಾ ಮತ್ತು ಸ್ಮೃತಿಗಳು ಭಿನ್ನವಿರುತ್ತವೆ. ಸ್ಮೃತಿ ಎಂದರೆ ನೆನಪು. ನೆನಪಿನ ಪದಾರ್ಥ ಸಮ್ಮುಖದಲ್ಲಿ ಇರುವುದಿಲ್ಲ. ರಜ್ಜು ಸರ್ಪ ದೃಷ್ಟಾಂತದಲ್ಲಿ ರಜ್ಜು ಸರ್ಪಗಳೆರಡೂ ಸಮ್ಮುಖದಲ್ಲಿವೆ. ಹಾವಿನಂತೆ ತೋರಿತೆಂದು ಭಾಸವಾಗುವುದೆ ಹೊರತು ಹಗ್ಗದಲ್ಲಿ ಹಾವನ್ನು ಸ್ಮರಿಸಿದೆ ಎಂದಲ್ಲ. ಹಗ್ಗ ಹಾವುಗಳೆರಡೂ ಸ್ಮೃತಿ ಭಿನ್ನ ಜ್ಞಾನಕ್ಕೆ ವಿಷಯಗಳಾದ್ದರಿಂದ ಅನುಭವದ ವಿಷಯಗಳು. ಹಗ್ಗದ ಅನುಭವವೇ ಸತ್ಯಾನುಭವ; ಹಾವಿನ ಅನುಭವವೇ ಮಿಥ್ಯಾನುಭವ. ಅಂತೆಯೇ ಶ್ರೀಮನ್ನಿಜಗುಣರು 'ದ್ವೈತವೇ ಮಿಥ್ಯಾನುಭೂತಿಯೆಂದು ಒಲವಿನ ದ್ವೈತವೇ ಸತ್ಯಾನುಭವವೆಂದು' ಅನುಭವದಲ್ಲಿ ಎರಡೇ ಪ್ರಕಾರ ಮಾಡಿದ್ದಾರೆ. ಅದರಲ್ಲಿ ಶ್ರೇಷ್ಠವಾದುದೇ ಸತ್ಯಾನುಭವ ಆದ್ದರಿಂದ ಗ್ರಂಥದ ಹೆಸರು ಅನುಭವಸಾರವೆಂಬುದು ಅದ್ವೈತಾನುಭವದಲ್ಲಿ ಸಾರ್ಥಕಗೊಂಡಿದೆ. ಅನುಭವ ಪದದಲ್ಲಿ ಎರಡು ಅವಯುವಗಳಿವೆ. ಅನು ಎಂದರೆ ಅನುಸರಿಸಿ ಭವ ಎಂದರೆ ಉಂಟಾಗುವದು. ಹುಟ್ಟುವದು, ಉದಿಸುವದು. ಇಂದ್ರಿಯ ವಿಷಯಗಳ ಸಂಬಂಧವನ್ನನುಸರಿಸಿ, ಅಂತಃಕರಣದಲ್ಲಿ (ಭವ) ಉಂಟಾಗುವ ಸಂವೇದನೆಯೇ 'ಪ್ರತ್ಯಾನುಭವ; ಬಾಹ್ಯ ವಿಷಯ ಸಂಬಂಧವಿಲ್ಲದೆ, ಅಂತಃಕರಣದಲ್ಲಿ ಹುಟ್ಟುವ ಪ್ರೀತಿ ಭಕ್ತಿ, ವಿರಕ್ತಿ, ದ್ವೇಷ, ಭಯಲೋಭಾದಿಗಳೇ 'ವೇದನಾನುಭವ', ಉಪಾಸನೆಯಿಂದಾಗುವ 'ದಿವ್ಯಾನುಭವ', ಇವೆಲ್ಲವುಗಳಿಗೆ ಮಿಗಿಲಾಗಿ ಶ್ರೀಮನ್ನಿಜಗುಣರ ಅಪ್ಪಣೆಯ ಮೇರೆಗೆ ತತ್ವಜ್ಞಾನ ಪಡೆದು ತದಾಕಾರ ವೃತ್ತಿಯಾದರೆ ಅದುವೇ ಅದ್ವೈತಾನುಭವ.

ಪರಮಾನುಭವಬೋಧೆಯ ಬೋಧನಾ ವೈಖರಿ

—ಷಣ್ಮುಖಯ್ಯ ಅಕ್ಕೂರಮಠ

ನಿಜಗುಣರ ಕೃತಿಗಳಲ್ಲಿ ಒಂದಾದ ಪರಮಾನುಭವ ಬೋಧೆಯ ವೈಖರಿಯನ್ನು ಕುರಿತು ಈ ಲೇಖನದಲ್ಲಿ ಸ್ಥೂಲವಾಗಿ ಸಮೀಕ್ಷಿಸುವುದಾಗಿದೆ. ನಿಜಗುಣರು ರಚಿಸಿದ ಷಟ್‌ಶಾಸ್ತ್ರಗಳೆಂದು ಪ್ರಸಿದ್ಧವಾದ ಕೃತಿಗಳಲ್ಲಿ 'ಪರಮಾನುಭವಬೋಧೆ' ಮಹತ್ವದ್ದೆಂದು ವಿದ್ವಾಂಸರ ಮತ. ಈ ಗ್ರಂಥದಲ್ಲಿ ೬ ಸಂಧಿಗಳು ೧೨೨ ಸೂತ್ರಗಳು, ೯೮೫ ಪದಳಿಗವೆ. ಸಾಂಗತ್ಯರೂಪದ ಛಂದೋಬಂಧದಲ್ಲಿ ಈ ಕೃತಿ ಯಾಜ್ಞವಲ್ಕ್ಯಮೈತ್ರೇಯಿ-ಸಂವಾದ ರೂಪದಲ್ಲಿದೆ. ಕಳಂಕರಹಿತವೆನಿಸುವ ಅದ್ವೈತವನ್ನು ಈ ಗ್ರಂಥದಲ್ಲಿ ಬೋಧಾಗತಿಯಿಂದ ಪ್ರಕಟಿಸುವೆನು ಎಂದು ಹೇಳಿ, ಅವರಿವರೆನ್ನದೆ ನಿಜವರಿದವರೆಲ್ಲರ ಪಾದಗಳಿಗೆ ನಮಿಸಿ, ಬಹಳ ರಮ್ಯವಾಗುವಂತೆ ಈ ಆಧ್ಯಾತ್ಮದ ಸುವಿಚಾರವನ್ನು ಕ್ರಮವಾಗಿ ಹೇಳುತ್ತೇನೆ ಎಂದು ತಮ್ಮ ವಿನಯಶ್ರೀಯನ್ನು ಮೆರೆದಿದ್ದಾರೆ.

ಈ ಕೃತಿರಚನೆಯ ಉದ್ದೇಶವನ್ನು ಅವರು ತಿಳಿಸುತ್ತಾ-ನಾನು ಯಾಜ್ಞವಲ್ಕ್ಯ ಮತ್ತು ಮೈತ್ರೇಯಿಯ ನಡುವೆ ನಡೆದ ಸಂವಾದವನ್ನೇ, ಸಾಧಕರಿಗೆ ಪರಮಾರ್ಥವಿದು, ಪರತರವಿದು ಎಂದು ಮೆಚ್ಚುವಂತೆ ವಿಸ್ತಾರವಾಗಿ ಕನ್ನಡದಲ್ಲಿ ರಚಿಸುವೆನು. ಮುಮುಕ್ಷುಗಳು ಇದನ್ನು ಅತ್ಯಂತ ಗೋಪ್ಯವೆಂದು ಸ್ವೀಕರಿಸಲಿ. ಉಪನಿಷತ್ತುಗಳ ಅಭಿಪ್ರಾಯವನ್ನು ಅನುಸರಿಸಿ, ಕೇಳುವವರ ಕಿವಿಗಳಿಗೆ, ಅಮೃತದ ಸವಿ ಸುರಿವಂತೆ ಮತ್ತು ಪರಮ ವಿವೇಕಿಗಳೆನಿಸಿದವರೂ ಒಡಂಬಡುವಂತೆ ಈ ಗ್ರಂಥದಲ್ಲಿ ಪರತತ್ವ ಬೋಧೆಯನ್ನು ಮುಂಡಿಸುತ್ತೇನೆ ಎಂದು ಗ್ರಂಥದ ಆರಂಭದಲ್ಲಿ ಸ್ಪಷ್ಟಪಡಿಸುತ್ತಾರೆ (ಲೋಕ ಹಿತಾರ್ಥವೆನಲು ಪೇಳ್ವೆಂ).

ಹಾಗಾದರೆ, ಈ ಪರತತ್ವವನ್ನು ಯಾರಿಗೆ ಬೋಧಿಸಬೇಕು? ಎನ್ನುವ ಪ್ರಶ್ನೆಗೆ ಅವರೇ ಉತ್ತರ ಹೇಳುತ್ತಾರೆ-ಇಂಥ ಶ್ರೇಷ್ಠ ಕೃತಿಯನ್ನು ಪರಮ ವಿರಕ್ತರಿಗೆ, ಪರತರ ಶಿಷ್ಯರಿಗೆ ಮತ್ತು ಪರಮಾರ್ಥವನ್ನು ತಿಳಿಯಬೇಕೆಂಬ ಮುದ್ದುಮಗನಿಗೆ, ರಹಸ್ಯವಾಗಿ ಹೇಳಬೇಕೆಂದು ತಿಳಿಸುತ್ತಾರೆ ಮತ್ತು ಕರ್ಮತತ್ಪರರಿಗೆ (ವ್ಯವಹಾರ ತತ್ಪರರಿಗೆ) ಎಂದೂ ಹೇಳಬಾರದು ಎನ್ನುವ ಎಚ್ಚರಿಕೆ ನೀಡಿದ್ದಾರೆ. ಈ ಪ್ರಕರಣಕ್ಕೆ 'ಪರಮಾನುಭವ ಬೋಧೆ' ಎಂಬ ಹೆಸರಿಟ್ಟು ಕೇಳುವ ಸಜ್ಜನರಿಗೆ ಸುಖಕರವಾಗಲೆಂದು, ಮೃದುಮಧುರಾರ್ಥ ಲಕ್ಷಣ ಸಹಿತವಾಗಿ ನಿರೂಪಿಸುವೆನು ಎಂದು ಹೇಳುತ್ತಾ ಈ ಕೃತಿಯ ಪದಬಂಧದಲ್ಲಿ ಪ್ರಾಸ ಮೊದಲಾದ ಲಕ್ಷಣವಿಲ್ಲದಿದ್ದರೇನು? ಸುಂದರಿಯಾದವಳು, ಸಂಭೋಗಸಮಯದಲ್ಲಿ

ಆಭರಣಗಳನ್ನು ಬಿಚ್ಚಿಟ್ಟಳೆಂದರೆ ಇನ್ನೂ ಸೊಗಸಲ್ಲವೆ? ಎಂದು ತಮ್ಮನ್ನು ತಾವು ಸಮರ್ಥಿಸಿಕೊಳ್ಳುತ್ತಾರೆ. ಅಂದರೆ, ಆಧ್ಯಾತ್ಮದ ಕಾವ್ಯರಚನೆಯಲ್ಲಿ ಛಂದಶ್ಶಾಸ್ತ್ರದ ನಿಯಮ ತೀರಾ ಗೌಣವೆಂದು ಅವರ ತೀರ್ಮಾನ.

ಇನ್ನು ನಮ್ಮ ನಮ್ಮ ಮತಧರ್ಮಗಳ ಗ್ರಂಥಗಳಿರುವಾಗ ಈ ಅದ್ವೈತಪರವಾದ ಗ್ರಂಥವನ್ನೇ ಏಕೆ ಓದಬೇಕು? ಎನ್ನುವ ಮತಾಂಧರಿಗೆ ವಿವೇಕದ ಮಾತುಗಳನ್ನು ಹೇಳುತ್ತಾರೆ: ನಮಗೆ ನಮ್ಮ ಮತವೇ ಸಾಕು ಎಂದು ಈ ಕೃತಿಯನ್ನು ಅಧ್ಯಯನ ಮಾಡದಿರುವುದು ಸರಿಯಲ್ಲ; ಲೋಕದ ಸುದ್ದಿ ನಮಗೇಕೆಂದು ಕವಿ ಮುಚ್ಚಿಕೊಂಡ ಸನ್ಯಾಸಿಯ ಗತಿಯಂತಾಗುತ್ತದೆ. ಆದರೆ ಈ ಕೃತಿ ಅವರಿವರೆನ್ನದೆ ಸರ್ವರಿಗೂ ಸೇವ್ಯವಾಗಿದೆ ಎಂದು ಗ್ರಂಥದ ಮಹತ್ವವನ್ನು ಸಾರುತ್ತಾರೆ. ಕೃತಿಯ ಫಲಸಿದ್ಧಿ ಯಾವುದು? ಎನ್ನುವವರಿಗೆ ಸ್ಪಷ್ಟವಾಗಿ ಹೇಳುತ್ತಾರೆ. ಇದನ್ನು ಒಮ್ಮೆ ಕೇಳಿದರೆ ಸಾಕು ಸೃಷ್ಟಿಯಾದಂದಿನಿಂದ ಇದುವರೆಗೆ ತಾನು ಮಾಡಿದ ಪುಣ್ಯವೆಲ್ಲಾ ಫಲಕೊಟ್ಟಂತೆನಿಸುವುದು. ಇಂಥ ಪ್ರಕರಣ ಇನ್ನೊಂದಿಲ್ಲ ಎನ್ನುವಂತೆ ಹೇಳುತ್ತೇನೆ. ಕಿವಿಗೊಟ್ಟು ಕೇಳಿ ಎಂದು ಆಜ್ಞಾಪಿಸುತ್ತಾರೆ.

ನಿಜಗುಣರೇ ತಿಳಿಸುವಂತೆ ಯಾಜ್ಞವಲ್ಕ್ಯ-ಮೈತ್ರೇಯಿಯರ ಸಂವಾದದ ಪರಮಾರ್ಥವೇ ಈ ಕೃತಿಗೆ ಮೂಲ ವಿಷಯ (Subject). ಈ ವಿಷಯಕ್ಕೆ ಮೂಲಾಧಾರ-ಬೃಹದಾರಣ್ಯಕ ಉಪನಿಷತ್ತು. ಭಾರತೀಯ ಉಪನಿಷತ್ ತತ್ವಗಳಿಗೆ ಇದು ಪ್ರಾಚೀನ ಆಕರವೆಂದು ವಿದ್ವಾಂಸರ ಮತ. ಈ ಉಪನಿಷತ್ತು ಶುಕ್ಲ ಯಜುರ್‌ವೇದದ, ಶತಪಥ ಬ್ರಾಹ್ಮಣಕ್ಕೆ ಸೇರಿದೆ. ಈ ಉಪನಿಷತ್ತಿನಲ್ಲಿ ಆರು ಅಧ್ಯಾಯಗಳು ನಲವತ್ತೇಳು ಕಾಂಡಗಳು. ಈ ಕಾಂಡಗಳನ್ನೇ ಬ್ರಾಹ್ಮಣಗಳೆಂದು ಕರೆಯುತ್ತಾರೆ. ಈ ಉಪನಿಷತ್ತನ್ನು ಬೇರೊಂದು ವಿಧದಲ್ಲೂ ವಿಂಗಡಿಸುವುದುಂಟು. ಮಧುಕಾಂಡ-ಯಾಜ್ಞವಲ್ಕ್ಯಕಾಂಡ ಅಥವಾ ಮುನಿಕಾಂಡ ಮತ್ತು ಖಿಲಕಾಂಡ, ಪ್ರತಿಯೊಂದು ಕಾಂಡದಲ್ಲೂ ಎರಡೆರಡು ಅಧ್ಯಾಯಗಳಿವೆ. ಈ ಮೂರು ಕಾಂಡಗಳಲ್ಲಿ ಉಪದೇಶ-ಉಪಪತ್ತಿ-ಉಪಾಸನೆಗಳನ್ನು ನಿರೂಪಿಸುತ್ತವೆ ಎಂದು ಶ್ರೀ ವಿದ್ಯಾರಣ್ಯರು ತಮ್ಮ ವಾರ್ತಿಕಸಾರದಲ್ಲಿ ತಿಳಿಸುತ್ತಾರೆ. ಮೊದಲನೆಯ ಎರಡು ಅಧ್ಯಾಯಗಳಲ್ಲಿ ಬಹುದೇವೋಪಾಸನೆಯನ್ನು ಮೀರಿದ ಆತ್ಮತತ್ವ ಪ್ರತಿಪಾದಿತವಾಗಿದೆ. ೩-೪ನೆಯ ಅಧ್ಯಾಯಗಳಲ್ಲಿ ಯಾಜ್ಞವಲ್ಕ್ಯರು ಆತ್ಮ ಹಾಗೂ ಬ್ರಹ್ಮ-ತತ್ವವನ್ನು ವಿಸ್ತಾರವಾಗಿ ಪ್ರತಿಪಾದಿಸುತ್ತಾರೆ. ಕೊನೆಯ ಎರಡು ಅಧ್ಯಾಯಗಳಲ್ಲಿ ಕೆಲವು ಉಪಾಸನೆಯ ವಿಧಾನವನ್ನು ತಿಳಿಸಲಾಗಿದೆ. ಇದು ಬೃಹದಾರಣ್ಯಕೋಪನಿಷತ್ತಿನ ರಚನಾ ವಿಧಾನ. ಈ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯರು ಆತ್ಮ-ಜಗತ್ತು ಬ್ರಹ್ಮ-ಮಾಯೆಯ ವಿಚಾರವನ್ನು ಪ್ರತಿಪಾದಿಸುವ ರೀತಿಯನ್ನು ಕಂಡಾಗ ಯಾಜ್ಞವಲ್ಕ್ಯರು ಬಹುದೊಡ್ಡ ದಾರ್ಶನಿಕರಾಗಿ ನಮಗೆ ಕಾಣುತ್ತಾರೆ. ಯಾರಿವರು ಯಾಜ್ಞವಲ್ಕ್ಯರು?

ಯಾಜ್ಞವಲ್ಕ್ಯರು ದೇವರಾತ ಮಹರ್ಷಿಗಳ ಪುತ್ರ. ಬಾಲ್ಯದಲ್ಲಿ ತಂದೆಯ ಬಳಿ

ನಂತರ ವೈಶಂಪಾಯನರಲ್ಲಿ ಅಧ್ಯಯನ ಮಾಡಿದರು. ಶುಕ್ಲಯಜುರ್ವೇದ, ಶತಪಥ ಬ್ರಾಹ್ಮಣ. ಈಶಾವಾಸ್ಯವೆಂಬ ಉಪನಿಷತ್ತುಗಳನ್ನು ರಚಿಸಿದರು ಎಂದು ಹೇಳುತ್ತಾರೆ. ಮಿಥಿಲಾ ನಗರದ ಜನಕ ಮಹಾರಾಜನಿಂದ ವ್ಯವಸ್ಥಿತವಾಗಿದ್ದ ವಿದ್ವತ್ ಸಭೆಯಲ್ಲಿ ವಿಖ್ಯಾತ ಬ್ರಹ್ಮಜ್ಞರೊಡನೆ ವಾದ ಮಾಡಿದ ಫಲವಾಗಿ ಭಗವಾನ್ ಯಾಜ್ಞವಲ್ಕ್ಯರೇ ಸರ್ವಶ್ರೇಷ್ಠ ಬ್ರಹ್ಮವೇತ್ತರೆಂದು ನಿರ್ಣಯವಾಗುತ್ತದೆ. ಜನಕರಾಜನು ಯಾಜ್ಞವಲ್ಕ್ಯರನ್ನು ಸರ್ವಜ್ಞ ಪೀಠದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿ ತನ್ನ ಗುರುಗಳನ್ನಾಗಿ ಸ್ವೀಕರಿಸುತ್ತಾನೆ. ಪಾಶ್ಚಾತ್ಯ ಪಂಡಿತನಾದ ಗೆಡನ್ (A. S. Geden) ಇವರ ಪ್ರತಿಭೆಯನ್ನು ಕೊಂಡಾಡಿದ್ದಾನೆ.

"If the name represents a real individuality and is not merely a litre under whose shelter many convergent thoughts and reasonings have found expression Yajnavalky may claim a place with the greatest thinkers of the world of any age."

(Encyclopaedia of Religion and Ethics. Vol. XII, p. 542)

ಭಾರತೀಯ ತತ್ವಶಾಸ್ತ್ರದ ವಿದ್ಯಾನಿಧಿ, ವಿಭೂತಿಪುರುಷರಾದ ಶ್ರೀ ನಿಜಗುಣರಿಗೆ ಈ ಯಾಜ್ಞವಲ್ಕ್ಯ ಬ್ರಹ್ಮಜ್ಞಾನಿಗಳಲ್ಲಿ ಎಲ್ಲಿಲ್ಲದ ಗೌರವ. ಇವರಿಗೆ ಅವರು ಸಾಕ್ಷಾತ್ ಅಧಿಗತ ಪರಮಾತ್ಮ!

ಶ್ರೀಪರಮಾನಂದೈಕ ನಿಧಿ ಯಾಜ್ಞವಲ್ಕ್ಯದ
ಯಾಪೂರ್ಣನಧಿಗತ ಪರಮಾತ್ಮ
ಕಾಪಟ್ಯದೂರನೂರ್ಜಿತನಾಗವೋದಯಾ
ಲಾಪನುನ್ನತ ಚಿತ್ರದೀಪನು||

ಶ್ರೀಮದನಂತ ವಿದುಮೂರ್ತಿ ಭಕ್ತ ಚಿಂ
ತಾಮಣಿ ಸುಜ್ಞಾನ ಶರನಿಧಿ
ತಾಮಸದೂರನುತ್ತಮ ಯಾಜ್ಞವಲ್ಕ್ಯ ಮ
ಹಾಮುನಿಪತಿ ದಯಾಪೂರ್ಣ ೧೨

ಹೀಗೆ ಅವರ ಬಗ್ಗೆ ತಮ್ಮ ಗೌರವವನ್ನು ವ್ಯಕ್ತಪಡಿಸಿದ್ದಾರೆ.

ಬೃಹದಾರಣ್ಯಕ ಉಪನಿಷತ್ತು ಆತ್ಮಜ್ಞಾನಕ್ಕೆ ಅಂಗವಾಗಿ ಸನ್ಯಾಸವನ್ನು ವಿಧಿಸಲು ೭ನೆಯ ಅಧ್ಯಾಯ ನಾಲ್ಕನೆಯ ಬ್ರಾಹ್ಮಣವು ಒಂದು ಆಖ್ಯಾಯಿಕೆ (ಕಥೆ)ಯನ್ನು ಹೇಳುತ್ತದೆ. ಬ್ರಹ್ಮಜ್ಞರಾದ ಯಾಜ್ಞವಲ್ಕ್ಯರಿಗೆ ಮೈತ್ರೇಯಿ–ಕಾತ್ಯಾಯಿನಿ ಎಂಬ ಇಬ್ಬರು ಪತ್ನಿಯರು. ವಿದ್ವತ್ ಸನ್ಯಾಸವನ್ನು ಸ್ವೀಕರಿಸಲು ಸಿದ್ಧರಾದ ಯಾಜ್ಞವಲ್ಕ್ಯರು ತಮ್ಮ ಆಸ್ತಿಪಾಸ್ತಿಯನ್ನು ತಮ್ಮ ಇಬ್ಬರು ಪತ್ನಿಯರಿಗೆ ಹಂಚಲು ಸಿದ್ಧರಾಗುತ್ತಾರೆ. ಆ ಸಂದರ್ಭದಲ್ಲಿ ಮೈತ್ರೇಯಿ ಯಾಜ್ಞವಲ್ಕ್ಯರಿಗೆ ಪ್ರಶ್ನಿಸುತ್ತಾಳೆ;

"ಯನ್ನು ಮ ಇಯಂ ಭಗೋಃ ಸರ್ವಾ ಪೃಥಿವೀ
ವಿತ್ತೇನ ಪೂರ್ಣಸ್ಯಾತ್ ಕಥಂ ತೇನಾಮೃತಾಸ್ಯಾಮಿತಿಃ"

(ಸಂಪತ್ ಭರಿತವಾದ ಈ ಜಗತ್ತೆಲ್ಲ ನನ್ನ ಪಾಲಿಗೆ ಬಂದರೆ ನಾನು ಅಮೃತಳಾಗುವೆನೆ?) ಎಂದು. ಅದಕ್ಕೆ ಯಾಜ್ಞವಲ್ಕ್ಯರ ಉತ್ತರ–

"ಅಮೃತತ್ವಸ್ಯತು ನಾಶಾಸ್ತಿವಿತ್ತೇನೇತಿ" (ಸಂಪತ್ತಿನಿಂದ ಅಮರತ್ವ ದೊರಕುವುದಿಲ್ಲ; ಬದಲಾಗಿ ನಾಶವಾಗುತ್ತದೆ) ಎಂದು. ಆಗ ಮೈತ್ರೇಯಿ "ಯೇನಾಹಂ ನಾಮೃತಾಸ್ಯಾಂ ಕಿಮಹಂ ತೇನ ಕುರ್ಯಾಂ". ನನಗೆ ಬೇಕಾದದ್ದು ಸಂಪತ್ತಲ್ಲ, ದುಃಖವಿಲ್ಲದ ಅಚ್ಚಳಿಯದ ಸುಖ. ಅದು ಯಾವ ಸಾಧನೆಯಿಂದ ನನಗೆ ದೊರೆಯುವುದೋ ಅದನ್ನೇ ನನಗೆ ತಿಳಿಸಿ ಹೇಳಿ ಎಂದು ಪ್ರಾರ್ಥಿಸುತ್ತಾಳೆ.

ಅದಕ್ಕೆ ಸಂತೋಷದಿಂದ ಒಪ್ಪಿಕೊಂಡ ಯಾಜ್ಞವಲ್ಕ್ಯರು ತಮ್ಮ ಸತಿಗೆ ಅಮೃತತ್ವಪ್ರಾಪ್ತಿಗೆ 'ಆತ್ಮಜ್ಞಾನವೊಂದೇ ಮುಖ್ಯ ಸಾಧನ'ವೆಂದು 'ಆತ್ಮ'ನ ವೈಭವವನ್ನೇ ವಿಸ್ತಾರವಾಗಿ ಪ್ರತಿಪಾದಿಸುತ್ತಾರೆ.

ಆತ್ಮದರ್ಶನವನ್ನು ಕುರಿತ ಕೆಲವು ವಾಕ್ಯಗಳು ಇಂತಿವೆ: "ಆತ್ಮನಿಖಲು....ವಿಜ್ಞಾತ ಇದಂ ಸರ್ವಂ ವಿದಿತಂ ವಿಜ್ಞಾತಂ ಭವತಿ" (ಆತ್ಮವನ್ನೇ ಅರಿತರೆ ಸಕಲವನ್ನೂ ಅರಿತಂತೆ) "ಇತಿಹೋವಾಚ ಉಕ್ತವಾನ್ ಕಿಂ ಪರಮಾರ್ಥ ದರ್ಶನಂ" ಮೈತ್ರೇಯ್ಯೈ ಭಾರ್ಯಾಯ್ಯೈ ಯಾಜ್ಞವಲ್ಕ್ಯಃ" (ಯಾಜ್ಞವಲ್ಕ್ಯರು ಪತ್ನಿಗೆ ಬೋಧಿಸಿದ್ದು ಪರಮಾರ್ಥ ದರ್ಶನ) ಮತ್ತೆ ಮತ್ತೆ ಹೇಳುತ್ತಾರೆ– "ಆತ್ಮನೋವಾ ಅತಿದರ್ಶನೇನ....! ಇದಹಂ ಸರ್ವಂ ವಿದಿತಂ" (ಆತ್ಮದರ್ಶನವಾದರೆ ಎಲ್ಲವೂ ತಿಳಿದಂತೆ) ಇತ್ಯಾದಿ.

ಭಾರತೀಯ ದಾರ್ಶನಿಕರು ಆತ್ಮಜ್ಞಾನವೇ ನಿಜಸುಖದ ಸಾಧನೆ ಎಂಬುದನ್ನು ಬಹಳ ಹಿಂದೆಯೇ ಕಂಡುಕೊಂಡಿದ್ದಾರೆ. ಆತ್ಮತತ್ವದ ಮಹತ್ವವನ್ನು ಸಾರುವ ಅನೇಕ ಶೃತಿವಾಕ್ಯಗಳು ನಮಗೆ ದೊರಕುತ್ತವೆ.

"ತರತಿ ಶೋಕಮಾತ್ಮವಿತ್" (=ಆತ್ಮವನ್ನು ಅರಿತವನೇ ಶೋಕದಿಂದ ಪಾರಾಗುತ್ತಾನೆ.) "ತಮೇವ ವಿದಿತ್ವಾತಿಮೃತ್ಯುಮೇತಿ" (ಆತ್ಮವನ್ನು ತಿಳಿದವನು ಮೃತ್ಯುವಿನಿಂದ ಪಾರಾಗುತ್ತಾನೆ.) "ತಮೇವ ವಿದ್ವಾನ್ ನಭಿಯಾಮ ಮೃತ್ಯುಃ" (=ಆತ್ಮಜ್ಞಾನಿಗೆ ಮೃತ್ಯುಭಯವಿಲ್ಲ), ಇಂತಹ ನೂರಾರು ವಾಕ್ಯಮಾಣಿಕ್ಯಗಳು ಆತ್ಮಜ್ಞಾನದ ಮಹತ್ವವನ್ನು ಒತ್ತಿ ಹೇಳುತ್ತವೆ. ನಿಜಗುಣರು ಬೃಹದಾರಣ್ಯಕೋಪನಿಷತ್ತಿನ ಯಾಜ್ಞವಲ್ಕ್ಯ– ಮೈತ್ರೇಯಿಯರ ಆಖ್ಯಾಯಿಕೆ (ಕಥೆ)ಯನ್ನೇ ಆಧರಿಸಿ 'ಪರಮಾನುಭವ ಬೋಧೆ'ಯನ್ನು ಕನ್ನಡದ ಸಾಂಗತ್ಯದಲ್ಲಿ ರಚಿಸಿದ್ದಾರೆ. ಉಪನಿಷತ್ತಿನ ಪರಮಾರ್ಥ ದರ್ಶನವೇ ಕನ್ನಡದ ಪರಮಾನುಭವ ರೂಪವನ್ನು ತಾಳಿವೆ. ಇದು ನಿಜಗುಣರು ತಮ್ಮ ಕೃತಿಗೆ ಇಟ್ಟ ಅನ್ವರ್ಥಕ ನಾಮ. ಪರಮ ಎಂದರೆ ಶ್ರೇಷ್ಠ, ಅದೇ ಬ್ರಹ್ಮ; ಅದೇ ಆತ್ಮತತ್ವ, ಬ್ರಹ್ಮ ಬೇರೆ ಅಲ್ಲ; ಆತ್ಮ ಬೇರೆ ಅಲ್ಲ (ಜೀವೋ ಬ್ರಹ್ಮವನಪರಃ) ಎರಡೂ

ಒಂದೇ. ಅದರ ಅನುಭವದಿಂದ ನಿಜಸುಖ ಸಾಧ್ಯ. ವಿಷಯಸುಖ–ಲೌಕಿಕ ಸುಖ ಅದು ಅಲ್ಪವಾದುದು. ಆದರೆ ಅನುಭವದಲ್ಲಿ ಸುಖವಿಲ್ಲ. "ಯೋವೈ ಭೂಮಾತತ್ ಸುಖಂ ನಾಲ್ಪೇ ಸುಖಮಸ್ತಿ" ಎಂದು ಛಾಂದೋಗ್ಯೋಪನಿಷತ್ತು ಸಾರುತ್ತದೆ. ಆದ್ದರಿಂದ ವಿವೇಕಿಗಳು ಅಲ್ಪಸುಖಕ್ಕಾಗಿ ಹಾತೊರೆಯುವುದಿಲ್ಲ. ಪರಮ ಸುಖ ಪರಮಾನುಭವ ದಿಂದಲೇ ಸಾಧ್ಯ. ಇಂತಹ ಪರಮಾನುಭವ ಬೋಧನೆಯನ್ನು ನಿಜಗುಣರು–

"ಪರತತ್ವದ ಮನದೊಲವಿಂದೆ ಪೇಳುವೆನಾತ್ಮಕೋವಿದರನುಮಾನಿಸದೆ ಮೆಚ್ಚಿ ತಲೆದೂಗೆ"

"ಪರತತ್ವ ಬೋಧೆಯನು ಯೋಗಿಜನರೊಪ್ಪೆ ವಿರಚಿಸುವೆನು ಸಾರತರಮಾಗಿ"

"ವರಮುಕ್ತಿ ಸಾಧಕರಿಂದದನೆ ನೋಡಿ ಹರುಷದಿಂದರಿವುದು ನಿಜವನು"

"ಶ್ರೀಕೃಪಾಕರನೆನಿಸುವ ನಿಜಗುಣ ಶಿವಯೋಗಿ ಲೋಕಹಿತಾರ್ಥವೆನಲು ಪೇಳ್ದಂ" ಎಂದು ಗ್ರಂಥದ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ.

ಅನೇಕರು ತಪ್ಪಾಗಿ ಭಾವಿಸಿರುವಂತೆ ನಿಜಗುಣರು ಪರಮಾನುಭವ ಬೋಧೆಯಲ್ಲಿ ಬೃಹದಾರಣ್ಯಕ ಉಪನಿಷತ್ತಿನ ಯಾಜ್ಞವಲ್ಕ್ಯ ಮೈತ್ರೇಯಿಯರ ಸಂವಾದವನ್ನು ಭಾಷಾಂತರಿಸಲಿಲ್ಲ. ಉಪನಿಷತ್ತುಗಳ ಆತ್ಮದರ್ಶನ (ಬ್ರಹ್ಮವಿದ್ಯೆ)ಯನ್ನು ಸಂಗ್ರಹಿಸಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಕನ್ನಡದ ಸಾಂಗತ್ಯ ಛಂದೋಬಂಧದಲ್ಲಿ ಸುಂದರವಾಗಿ ರಚಿಸಿದ್ದಾರೆ. ಉಪನಿಷತ್ತಿಗಿಂತಲೂ ವಿಭಿನ್ನವಾದ, ವೈಶಿಷ್ಟ್ಯಪೂರ್ಣವಾದ, ಅತ್ಯಂತ ಆಕರ್ಷಕವಾದ ಬೋಧನಾವಿಧಾನವನ್ನು ನಾವು ಇಲ್ಲಿ ಗುರುತಿಸಬಹುದಾಗಿದೆ. ಇದು ಆತ್ಮತತ್ವದ ಒಂದು ಸ್ವತಂತ್ರ ಕೃತಿಯಾಗಿದೆ. ಇಲ್ಲಿ ಯತಾವತ್ ಸ್ವೀಕರಣೆ ಅನುಕರಣೆ ಗಳಿಲ್ಲ; ಉಪನಿಷತ್ತಿನ ಮೂಲಧಾತುವನ್ನು ತಮ್ಮ ಉಜ್ವಲ ಪ್ರತಿಭೆಯ ಮೂಸೆಯಲ್ಲಿ ಕರಗಿಸಿ, ಕನ್ನಡದ ಸಾಂಗತ್ಯವೆಂಬ ಎರಕ ಹೊಯ್ದು ಸುಂದರವಾದ 'ಆತ್ಮದರ್ಶನ'ವೆಂಬ ಒಡವೆಯನ್ನು ರಚಿಸಿದ್ದಾರೆ. ಇದೊಂದು ಸ್ವತಂತ್ರ ಕೃತಿ; ಕನ್ನಡದ ಉಪನಿಷತ್ತು.

"ನಿಜಗುಣರಿಗೆ ಭಾರತೀಯ ವಿವಿಧ ತತ್ವಶಾಸ್ತ್ರ ಹಾಗೂ ದರ್ಶನಗಳ ಪ್ರಕಾಂಡ ಪಾಂಡಿತ್ಯವಿತ್ತು. ನಿಜಗುಣರ ದರ್ಶನ ಉಪನಿಷತ್ತುಗಳ ಅಸ್ತಿವಾರದ ಮೇಲೆ ಕಟ್ಟಿದ ಆತ್ಮದರ್ಶನ" ಎಂದು ನಮ್ಮ ನಾಡಿನ ಖ್ಯಾತ ವಿದ್ವಾಂಸರಾದ ಡಾ|| ಎಲ್. ಬಸವರಾಜು ಅವರ ಅಭಿಪ್ರಾಯ ವಾಸ್ತವಿಕವಾಗಿದೆ.

ಪ್ರಾಚೀನ ವೈದಿಕವಾಙ್ಮಯವನ್ನು ವಿದ್ವಾಂಸರು ಸಂಹಿತೆ–ಬ್ರಾಹ್ಮಣ–ಅರಣ್ಯಕ–ಉಪನಿಷತ್ತುಗಳೆಂದು ನಾಲ್ಕು ವಿಧವಾಗಿ ವಿಂಗಡಿಸುತ್ತಾರೆ. ಉಪನಿಷತ್ತು ವೇದದ ಕೊನೆಯ ಭಾಗ.ಮೊದಲಿನ ಮೂರು ಭಾಗಗಳು ಕರ್ಮಕಾಂಡಕ್ಕೆ ಸಂಬಂಧಿಸಿದರೆ, ವೇದದಸಾರಸರ್ವಸ್ವ ಜ್ಞಾನ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿದೆ. ಭಾರತೀಯ ವೇದಾಂತವು ಪ್ರಸ್ಥಾನ ಕ್ರಮವನ್ನು ಅವಲಂಬಿಸಿದೆ (The three great paths) ಶ್ರುತಿ–ಸ್ಮೃತಿ–ಮತ್ತು ನ್ಯಾಯಗಳಿಗೆ ಪ್ರಸ್ತಾನತ್ರಯವೆಂದು ಕರೆಯುತ್ತಾರೆ.

ವೇದೋಪನಿಷತ್ತುಗಳು ಶ್ರುತಿಪ್ರಸ್ಥಾನಕ್ಕೂ, ಮನ್ವಾದಿಸ್ಮೃತಿಗಳು ಮತ್ತು ಇತಿಹಾಸ ಪುರಾಣಗಳು ಸ್ಮೃತಿ ಪ್ರಸ್ಥಾನಕ್ಕೂ, ಬಾದರಾಯಣ ರಚಿತ ಬ್ರಹ್ಮಸೂತ್ರಗಳು ನ್ಯಾಯಪ್ರಸ್ಥಾನಕ್ಕೂ ಸೇರುತ್ತವೆ. ಈ ಪ್ರಸ್ಥಾನಗಳನ್ನು ಆಧರಿಸಿ, ದ್ವೈತ-ಅದ್ವೈತ-ವಿಶಿಷ್ಟಾದ್ವೈತ-ಶಿವಾದ್ವೈತ ಇತ್ಯಾದಿ ಸಿದ್ಧಾಂತಗಳನ್ನು ಪ್ರತಿಪಾದಿಸಲಾಗಿದೆ. ಆಯಾ ಸಿದ್ಧಾಂತ ಪ್ರತಿಪಾದಕವಾದ ಪರಿಭಾಷಾಗ್ರಂಥಗಳೂ, ಪ್ರಕರಣ ಗ್ರಂಥಗಳೂ ಉಪನಿಷತ್ತು ಮತ್ತು ಬ್ರಹ್ಮಸೂತ್ರಾದಿಗಳ ಮೇಲೆ ರಚಿತವಾಗಿರುವ ಭಾಷ್ಯಗಳೂ, ವ್ಯಾಖ್ಯಾನಗಳೂ ವಿಪುಲವಾಗಿವೆ. ನಿಜಗುಣರ ಪರಮಾನುಭವಬೋಧೆ; ಅದ್ವೈತ ಸಂಪ್ರದಾಯವನ್ನೇ ವಿಶೇಷವಾಗಿ ಅವಲಂಬಿಸಿದೆ. ಇದನ್ನು ಗಮನಿಸಿದಾಗ ಉಪನಿಷತ್ತು, ಶಾಂಕರಭಾಷ್ಯ ವ್ಯಾಖ್ಯಾನಗಳು ಹಾಗೂ ವಿದ್ಯಾರಣ್ಯರೇ ಮುಂತಾದವರು ರಚಿಸಿದ ಅದ್ವೈತಪರವಾದ ಅನೇಕ ಗ್ರಂಥಗಳನ್ನು ಹಾಗೂ ವೇದಾಂತದ ಪಲವಾರು ಪ್ರಭೇದ ಗಳನ್ನು ನಿಜಗುಣರು ಸಾಂಗೋಪಸಾಂಗವಾಗಿ ಅಭ್ಯಾಸ ಮಾಡಿದ್ದರು ಎನ್ನುವ ಅಂಶವನ್ನು ಅವರ ಎಲ್ಲ ಕೃತಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ನಿಜಗುಣರ ಶಾಸ್ತ್ರಗ್ರಂಥ ಗಳನ್ನು ಅರ್ಥ ಮಾಡಿಕೊಳ್ಳಲು, ಅದ್ವೈತ ಸಿದ್ಧಾಂತದ ಪ್ರಮುಖ ಪರಿಕಲ್ಪನೆಗಳನ್ನು ತಿಳಿದುಕೊಳ್ಳುವುದು ಅನಿವಾರ್ಯವಾಗುತ್ತದೆ. ಅದ್ವೈತದ ಪ್ರಮುಖ ಪ್ರಮೇಯ ಗಳನ್ನು ಸ್ಥೂಲವಾಗಿ ಇಲ್ಲಿ ಅವಲೋಕಿಸಬಹುದಾಗಿದೆ.

ಬ್ರಹ್ಮವೊಂದೇ ಸತ್ಯ; ಜಗತ್ತು ಮಿಥ್ಯ: ಜೀವನು ಸ್ವಯಂಬ್ರಹ್ಮ, (ಬ್ರಹ್ಮಸತ್ಯಂ-ಜಗನ್ಮಿಥ್ಯಾ-ಜೀವೋ ಬ್ರಹ್ಮೈವನಾಪರಃ) ಇಲ್ಲಿ ಬ್ರಹ್ಮತತ್ವವೇ 'ಪರಮಾನುಭವ', ಪರಬ್ರಹ್ಮದಲ್ಲಿ ಮಿಥ್ಯೆಯು ಅವಿನಾಭಾವ ಸಂಬಂಧದಿಂದ ಇದೆ. ಇದನ್ನೇ ಅವಿದ್ಯೆ-ಮಾಯೆ-ಪ್ರಕೃತಿ ಎಂದು ಕರೆಯುತ್ತಾರೆ. ಮಾಯೆಗೆ ಬ್ರಹ್ಮನೇ ಆಧಾರ (ಅಧಿಷ್ಠಾನ) ಮಾಯೆ ಆಧೇಯು, ಬ್ರಹ್ಮ ಮತ್ತು ಮಾಯೆಯಿಂದ ಈ ಜಗತ್ತು ಆಗಿದೆ. ಯಾವುದು ನಿಜವಾಗಿ ಇಲ್ಲವೋ ಅದು ಇದೆ ಎಂದು ತಿಳಿಯುವುದು ಅಧ್ಯಾಸ ಅಥವಾ ಆರೋಪ (ವಸ್ತುನಿಅವಸ್ತ್ವಾರೋಪಃ), ಹಾವಲ್ಲದ ಹಗ್ಗದಲ್ಲಿ ಇದು ಹಾವು ಎಂದು ಆರೋಪಿಸುವುದು ಆತ್ಮ-ಅನಾತ್ಮರ ಅನ್ಯೋನ್ಯಾಧ್ಯಾಸವೇ ಅವಿದ್ಯೆ. ಈ ಅವಿದ್ಯೆಯಿಂದ ಆತ್ಮನಿಗೆ ಕರ್ತೃತ್ವ, ಭೋಕ್ತೃತ್ವಗಳ ಸಂಬಂಧ ಬಂದಿದೆ. ಆತ್ಮ ದೇಹವಲ್ಲ; ಜಗತ್ತು ಬ್ರಹ್ಮವಲ್ಲ. ಅಧ್ಯಾಸ-ಅಧ್ಯಾರೋಪ-ಭ್ರಾಂತಿ-ಮಿಥ್ಯಾಜ್ಞಾನ ಈ ಪರಿಭಾಷೆಗಳಿಂದ ವ್ಯವಹರಿಸುವ ಅಧ್ಯಾಸ (Super imposition) ಅದ್ವೈತ ವೇದಾಂತದ ಮೂಲ ಬೀಜ. ನಾಲ್ಕು ವೇದಕ್ಕೆ ಸೇರಿದ ನಾಲ್ಕು ಉಪನಿಷತ್ತುಗಳಲ್ಲಿ ಬ್ರಹ್ಮತತ್ವವನ್ನು ಪ್ರತಿಪಾದಿಸುವ ವಾಕ್ಯಗಳಿವೆ. ಶಾಸ್ತ್ರದಲ್ಲಿ ಇವುಗಳಿಗೆ ಮಹಾವಾಕ್ಯಗಳೆಂದು ಕರೆಯುತ್ತಾರೆ. (great sentences) "ಪ್ರಜ್ಞಾನಂ ಬ್ರಹ್ಮ" (Consciousness in Brahma) "ಅಹಂ ಬ್ರಹ್ಮಾಸ್ಮಿ" (I am Brahma) "ತತ್ವಮಸಿ" (you are that) "ಅಯಮಾತ್ಮಾ ಬ್ರಹ್ಮ" (This Athman is Brahma)

ಪರಂಪರಾಗತವಾಗಿ ಬಂದ ಈ ಬ್ರಹ್ಮವಿದ್ಯೆಯನ್ನು ನಿಜಗುಣರು ನಮ್ಮ ಎಲ್ಲ ಕೃತಿಗಳಲ್ಲೂ ಪ್ರತಿಪಾದಿಸಿದ್ದಾರೆ. ನಿಜಗುಣರ ಕೃತಿಗಳನ್ನು ಕುರಿತು ಕನ್ನಡ ನಾಡಿನ ಖ್ಯಾತ ವಿದ್ವಾಂಸರಾದ ಡಾ. ಎಲ್. ಬಸವರಾಜು ಅವರ ಅಭಿಪ್ರಾಯ ಅತ್ಯಂತ ಸಮಂಜಸವಾಗಿದೆ. ಅವರು ಹೇಳುತ್ತಾರೆ:

"ಇಲ್ಲಿ (ನಿಜಗುಣರ ಕೃತಿಗಳಲ್ಲಿ) ಮಿಕ್ಕ ಧಾರ್ಮಿಕ ಕೃತಿಗಳಲ್ಲಿನ ಜಾತೀಯತೆ ಕ್ರುದ್ಧರೂಪದಲ್ಲಂತೂ ಇಲ್ಲವೇ-ಇಲ್ಲ. ಕೇವಲ ಶುದ್ಧಆತ್ಮದ ನೆಲೆಯಲ್ಲಿ ಮಾನವನಿಗೆ ಕೊಡಬೇಕಾದ ಉತ್ತಮದರ್ಶನವೊಂದನ್ನು ಇಲ್ಲಿ ಕೊಡಲಾಗಿದೆ", "ವೈದ್ಯಶಾಸ್ತ್ರದಲ್ಲಿ ದೇಹದ ರೋಗಲಕ್ಷಣಗಳನ್ನು ಅವಕ್ಕೆ ಚಿಕಿತ್ಸೆಯನ್ನು ಹೇಳಿದ್ದರೆ, ಈ ನಿಜಗುಣರ ಶಾಸ್ತ್ರದಲ್ಲಿ-ಮಾನವನ ಅತ್ಯಂತ ಆಂತರ್ಯದವರೆಗೆ ಅಂಟಿರುವ ಭವರೋಗದ ನಿಗೂಢ ವನ್ನು ಪರಿಚಯಿಸಿಕೊಟ್ಟು ಆಮೇಲೆ ಅದನ್ನು ಪರಿಹರಿಸಿಕೊಂಡು ಸಚ್ಚಿದಾನಂದವನ್ನು ಸಾಧಿಸುವ ವಿಧಾನವನ್ನು ಬೋಧಿಸಲಾಗಿದೆ" ಮತ್ತೆ ಹೇಳುತ್ತಾರೆ-ನಿಜಗುಣರ ಅದ್ವೈತ ವನ್ನು ಸ್ವತಂತ್ರವಾಗಿಯಾಗಲಿ, ಪರಂಪರೆಯಿಂದಾಗಲೀ, ಶಂಕರಾದ್ವೈತದೊಡನೆ ಹೋಲಿಸಿದಾಗ, ಹಲವು ಸಾದೃಶ್ಯ ಕಂಡುಬರುವುದಾದರೂ, ಹಲವು ತಾತ್ವಿಕ ಮತ್ತಿತರ ಸೂಕ್ಷ್ಮ ವಿಚಾರಗಳಲ್ಲಿ ಅದು ಶಂಕರಾದ್ವೈತಕ್ಕಿಂತ ವಿಶಿಷ್ಟವಾಗಿರುವುದನ್ನು ಒತ್ತಿ ಹೇಳಬೇಕಾಗಿದೆ.

ಇಲ್ಲಿಯವರೆಗೆ ಅದ್ವೈತದ ಪರಂಪರೆ ಅದರ ಆಯಾಮ ಪರಿಕಲ್ಪನೆಗಳನ್ನು ಅವಲೋಕಿಸಲಾಯಿತು. ಈಗ ನಿಜಗುಣರ ಪರಮಾನುಭವಬೋಧೆಯಲ್ಲಿ ಉಕ್ತವಾಗಿರುವ ಅದ್ವೈತತತ್ವ ಪ್ರತಿಪಾದನೆಯನ್ನು ಯಾಜ್ಞವಲ್ಕ್ಯ-ಮೈತ್ರೇಯಿಯರ ಸಂವಾದರೂಪದಲ್ಲಿ ಹೇಗೆ ಪ್ರತಿಪಾದಿಸಿದ್ದಾರೆ ಎನ್ನುವುದನ್ನು ಸ್ಥೂಲವಾಗಿ ಅವರ ಮಾತುಗಳಲ್ಲಿಯೇ ಸಮೀಕ್ಷಿಸಬಹುದಾಗಿದೆ.

ಅಂದು ಒಂದು ದಿನ ವರಮುನಿಯಾದ ಯಾಜ್ಞವಲ್ಕ್ಯರನ್ನು ಮೈತ್ರೇಯಿ ಪರತತ್ವದ ಬಗ್ಗೆ ಅತ್ಯಂತ ಭಕ್ತಿಭಾವದಿಂದ-ಪ್ರಶ್ನೆ ಮಾಡುತ್ತಾಳೆ.

ಶ್ರೀಮದಾಚಾರ್ಯ ಶಿಖಾಮಣಿಯೂ, ಪರಮಾತ್ಮಾರಾಮನೂ, ಎಲ್ಲವನ್ನು ತಿಳಿ ದವನೂ, ಪುಣ್ಯಧಾಮನೂ, ಸುಖನಿಧಿಯೂ, ಮೇಲಾಗಿ ದಯಾಮೂರ್ತಿಯೂ ಆದ ಯಾಜ್ಞವಲ್ಕ್ಯರು ತನ್ನ ಇನಿಯಳಾದ ಮೈತ್ರೇಯಿಯೊಡನೆ ಅನ್ಯೋನ್ಯ ಪ್ರೀತಿಯಿಂದ ಇರುತ್ತಾರೆ. ಅವರ ದಾಂಪತ್ಯಜೀವನ ದೇವನಿಗೂ ಹಿತವಾಗಿತ್ತು. ಮೈತ್ರೇಯಿಯ ಪ್ರಶ್ನೆ ಇದು:

ದುಃಖದ ಲವಲೇಶವೂ ಸೋಂಕದೆ ಪರಿಪೂರ್ಣಾನಂದರೂಪಿಯಾಗಲು ಉಪಾಯ ವೇನು?

"ಒಂದು ದುಃಖದೊಳು ತಾನೊಂದಾದ ಪರಿಪೂರ್ಣಾ
ನಂದ ರೂಪಿಂದ ಸಂತಸಮಿರ್ಪ|

ಅಂದುಕುಪಾಯ ಮಿಂದೆಂದೊಲವಿಂದೆ ನೀ।
ವಿಂದೆನಗರುವು ಸಮ್ಮುನಿ ಮುಖ್ಯಾ" ||೬||

ಮತ್ತೆ ಕೇಳುತ್ತಾಳೆ—

ನಿನ್ನ ಪಾದವೇ ಶರಣೆಂಬುದಲ್ಲದೆ ನನಗೆ ಅನ್ಯಭಾವವಿಲ್ಲವಾಗಿ ಕರುಣೆದೋರು. ನನಗೆ ಏನೆಲ್ಲ ತತ್ತ್ವ ವಿಚಾರಗಳನ್ನು ಬೋಧಿಸಬೇಕಾಗಿದೆಯೋ ಅವುಗಳನ್ನು ಸಂಶಯಕ್ಕೆ ಎಡೆ ಇಲ್ಲದಂತೆ ಸವಿಸ್ತಾರವಾಗಿ ಹೇಳಿ ಎಂದು ಪತಿದೇವರನ್ನು ಬೇಡಿಕೊಳ್ಳುತ್ತಾಳೆ. ಅದಕ್ಕೆ ಮುನಿಗಳಿಗೆ ಮುಖ್ಯರಾದ ಯಾಜ್ಞವಲ್ಕ್ಯರು ಸಂತೋಷದಿಂದ ಹೇಳುತ್ತಾರೆ–

ಮತಿ ಮುಂಚೆ ಜಡಗದ್ವೈತವನರಿಯಲ್ಕೆ
ಸತಿ ನೀನೇ ಸುಕೃತಿ ಪೇಳ್ವೆನು ಕೇಳು॥

ಜಡರಿಗೆ ಅದ್ವೈತವನ್ನು ತಿಳಿಯುವ ಬುದ್ಧಿ ಹೇಗೆ ಬಂದೀತು? ನೀನು ಪುಣ್ಯವಂತಳು ಎಂದು ಉಪದೇಶಕ್ಕೆ ಮೊದಲು ಹೆಂಡತಿಯನ್ನು ಪ್ರೋತ್ಸಾಹಿಸುತ್ತಾರೆ. ಮತ್ತೆ ಹೇಳುತ್ತಾರೆ–

ಸುದತೀ ಕೇಳೀ ವಿಶ್ವದೊಳಗಿಂತು ನಿನ್ನಂತೆ।
ಪದಪಿಂದ ಕೇಳ್ವರಾರುಂಟು॥
ಸದಮಳಾತ್ಮದ ಪದ ಮುಕ್ತಿಯ ಪುಣ್ಯ ವಿ।
ಲ್ಲದವರ್ಗದೆಂತು ಪೇಳ್ವುದು ಕೇಳು ||೭||

ಮೈತ್ರೇಯಿ! (ಸುಂದರ ದಂತಪಂಕ್ತಿವುಳ್ಳವಳೆ) ಈ ಪ್ರಪಂಚದಲ್ಲಿ ನಿನ್ನಂತೆ ಯಾರೂ ಪ್ರಶ್ನೆ ಕೇಳಿದವರಿಲ್ಲ. ಸದಮಲಾನಂದಾತ್ಮಪದ ಮುಕ್ತಿಪ್ರಣ್ಯವಿಲ್ಲದವರು ನಿನ್ನಂತೆ ಪ್ರಶ್ನಿಸಲು ಹೇಗೆ ತಾನೆ ಸಾಧ್ಯ? ಆದ್ದರಿಂದ ನಿನಗೆ ಈಗ ಅದ್ವೈತವನ್ನು ಹೇಳುತ್ತೇನೆ ಕೇಳು ಎನ್ನುತ್ತಾರೆ.

ನೆರೆ ಕೇಳು ಕೇಳ್ದುದನರಿದುದರಿದನೊಮ್ಮೆ
ಮರೆಯದೆ ಗುಣರು ಪೇಳ್ವ ತೆರ ತೆರದೊಳು
ತೊರೆದು ವಿಷಯವನ್ನು ತೊರೆದು ನಿರ್ವಿಷಯದೊಳ
ಕರಗೊಂಡು ನಿಲೆ ನೀನೆ ಸುಖಿಯಪ್ಪೆ |೮||

ಮೈತ್ರೇಯಿ ಮೊದಲು ಲಕ್ಷ್ಯಗೊಟ್ಟು ಕೇಳು, ಕೇಳಿದ್ದನ್ನು ಅರಿತುಕೋ, ಅರಿತದ್ದನ್ನು ಎಂದಿಗೂ ಮರೆಯಬೇಡ. ಗುರುವಿನ ಉಪದೇಶದಂತೆ ವಿಷಯ ಸುಖವನ್ನು ಬಿಟ್ಟೇಬಿಡು. ನಿರ್ವಿಷಯದಲ್ಲಿ ನೆಲೆ ನಿಲ್ಲು, ನೀನು ಸುಖಿಯಾಗುವೆ ಎಂದು ಯಾಜ್ಞವಲ್ಕ್ಯರು ಗುರುಸ್ಥಾನದಲ್ಲಿ ನಿಂತು, ಶಿಷ್ಯಸ್ಥಾನದಲ್ಲಿರುವ ಪತ್ನಿ ಮೈತ್ರೇಯಿಗೆ ಸಲಹೆ–ಸೂಚನೆಗಳನ್ನು ನೀಡಿ, ಎಚ್ಚರಿಕೆಯ ಮಾತುಗಳನ್ನು ಹೇಳಿ ತಮ್ಮ ಉಪದೇಶವನ್ನು ಪ್ರಾರಂಭಿಸುತ್ತಾರೆ.

ಕಲ್ಪಿತಪುರುಷ (ಜೀವ)

ಮೈತ್ರೇಯಿ ಕೇಳು! ನಿತ್ಯಪರಿಪೂರ್ಣನಾದ ಪರಬ್ರಹ್ಮದ, ಸುಖನಿದ್ರೆಯಲ್ಲಿ, ಕನಸಿನ ಜೀವ ಜನಿಸುವಂತೆ, ಕಲ್ಪಿತಪುರುಷ ಜನಿಸಿದ. ಕನಸು ಕಂಡವನು ಅನೇಕ ವಿಕಾರಗಳಿಗೆ ಒಳಗಾಗುವಂತೆ ಈ ಕಲ್ಪಿತಪುರುಷನು (ಜೀವ) ಅನೇಕ ವಿಕಾರಗಳಿಗೆ ವಶನಾಗುತ್ತಾನೆ.

ಜೀವ ಭೇದವಿಲ್ಲದ ಪರಬ್ರಹ್ಮದಲ್ಲಿ ಹುಟ್ಟಿ, ಭೇದಭಾವನೆಗೆ ಈಡಾಗುತ್ತಾನೆ. ಕಲ್ಪಿತ ಪುರುಷನಲ್ಲಿರುವ ಭೇದಭಾವನೆಯನ್ನು ಕುರಿತು ಈಗ ನಿನಗೆ ಹೇಳುತ್ತೇನೆ ಕೇಳು. ಎಲೆ, ಪ್ರಿಯಳೆ, ಕಲ್ಪಿತ ಪುರುಷನಿಗೆ ಹತ್ತು ಭಾವಗಳು ಅಂಟಿಕೊಂಡಿವೆ. ಭೇದವೇ ಇಲ್ಲದ ಬ್ರಹ್ಮದಲ್ಲಿ ಹುಟ್ಟಿ, ಭೇದಭಾವ ಕಳೆದಿದ್ದಾನೆ. ಅದು ಹೇಗೆಂದರೆ ಒಬ್ಬ ರಾಜನು ಬೇಟೆಗಾರನ ಪಾತ್ರ ಮಾಡುವಾಗ ತನ್ನ ಸ್ವರೂಪವನ್ನು ಮರೆತರೆ ಅವನು ಖಂಡಿತವಾಗಿಯೂ ಬೇಟೆಗಾರನೇ ಆಗುತ್ತಾನೆ. ಪಾತ್ರಧಾರಿಯಾದಾಗ ತನ್ನತನದ ನೆನಪಿದ್ದರೆ, ಪಾತ್ರ ಮುಗಿದನಂತರ ಅವನು ಯಥಾಪ್ರಕಾರ ರಾಜನೇ ಆಗುತ್ತಾನೆ. ಇದೇ ರೀತಿಯಲ್ಲಿ ಕಲ್ಪಿತ ಪುರುಷ ಮಿಥ್ಯೆಯಾಗಿದ್ದಾನೆ. ಇವನ ಮಿಥ್ಯೆ ಕಲ್ಪನೆಗಳಿಂದಲೇ ಈ ವಿಕಲ್ಪರೂಪದ ಜಗತ್ತಿನ ಕಲ್ಪನೆ ಉಂಟಾಗಿದೆ. ಜೀವ ತನ್ನ ಅಹಂಭಾವದಿಂದ ನಿಜ ಜ್ಞಾನವನ್ನು ಮರೆತು ಅಜ್ಞಾನಿಯಾಗಿದ್ದಾನೆ. ಹೆಂಗಳರಸೆ ಕೇಳು! ನಾನು–ತನ್ನದು ಎಂದು ಭಾವಿಸುವುದೇ ಅವಿದ್ಯೆ. ಈ ಅವಿದ್ಯೆಯಲ್ಲೂ ಐದು ವಿಧಗಳು. ತಮೋರೂಪ, ಮಾಯಾರೂಪ, ಮೋಹರೂಪ, ಅಜ್ಞಾನರೂಪ ಹಾಗೂ ಅನ್ಯತರೂಪಗಳೆಂದು. ಈ ಅವಿದ್ಯೆಗಳಲ್ಲಿ ಜೀವನಿಗೆ ಅಹಂಭ್ರಮೆ. ಅಜ್ಞ ನಾನೆಂಬ ಭ್ರಮೆ, ಜಗದ್ಭ್ರಮೆ ಈ ಭ್ರಮೆಗಳು ತಮಸ್ಸಿನಂತೆ ಆವರಿಸುತ್ತವೆ. ಇದನ್ನೇ ತಮೋರೂಪವೆನ್ನುತ್ತಾರೆ. ಇಲ್ಲದ್ದನ್ನು ಇದೆಯೆಂದು ತೋರುತ್ತಾ, ಬಲ್ಲವರನ್ನು ಬೆರಗುಗೊಳಿಸುವುದೇ ಮಾಯಾರೂಪ. ಆತ್ಮ ವಿಚಾರವನ್ನೆ ಬಿಟ್ಟು, ಅನ್ಯ ವಿಷಯದಲ್ಲಿ ಆಸಕ್ತಿಯನ್ನು ಹುಟ್ಟಿಸಿ ಕಾಡುವುದೇ ಮೋಹ ರೂಪ. ತಾನು ಯಾರು? ಈ ಜಗತ್ತು ಏನು? ಇದು ಹೇಗಾಯಿತು? ಈ ದೇಹವೆಂದರೇನು? ಇತ್ಯಾದಿ ವಿಷಯಗಳನ್ನು ತಿಳಿಯಲು ಅಡ್ಡಿಯಾಗಿರುವುದೇ ಅಜ್ಞಾನರೂಪ. ಅರಿವಿನಿಂದ ನೋಡಿದಾಗ ಇದು ಹುಸಿ ಎಂದು ನಿರ್ಣಯವಾಗುವುದೇ ಅನ್ಯತರೂಪ.

ದೇಹವೇ ನಾನೆಂಬ ಭ್ರಮೆ

ಮೈತ್ರೇಯಿ ಕೇಳು! ಪಂಚಭೂತಗಳು ಐದು; ಇಂದ್ರಿಯಗಳು ಹತ್ತು; ಪ್ರಾಣ ವಾಯುಗಳು ಐದು; ಅಂತಃಕರಣಗಳು ಐದು; ಒಟ್ಟಾಗಿ ಈ ಪಂಚವಿಂಶತಿ ತತ್ತ್ವರಾಶಿಯೇ ಈ ದೇಹ, ಈ ಕಲ್ಪಿತಪುರುಷನಿಗೆ (ಜೀವ) ದೇಹ ತನ್ನದು ಎಂಬ ಅಹಂಕಾರವಷ್ಟೇ ಅಲ್ಲ; ಈ ದೇಹವೇ ತಾನು ಎನ್ನುವ ಅಹಂಕಾರವೂ ಇದೆ. ಈ ಎರಡು ವಿಧದ ಅಹಂಕಾರಗಳು ಅಜ್ಞಭ್ರಮೆಯಿಂದ ಉಂಟಾಗಿವೆ.

ಬೀಜವೋ ವೃಕ್ಷವಾ ಬೀಜನುಮಾದವೋ
ಲೀ ಜಗಜ್ಜೀವರೂಪಿತನಾಗಿ

ರಾಜಿಸುತಿರ್ಪನಂತಾ ಕಲ್ಪಿತನು ಜಗ
ದ್ಬೀಜ ಭಾವಾನ್ವಿತನದರಿಂದೆ॥

ಬೀಜವು ವೃಕ್ಷಕ್ಕೆ ಮರಳಿ, ಬೀಜವಾಗುವಂತೆ. ಈ ಕಲ್ಪಿತಪುರುಷ ಜಗಜ್ಜೀವನೂ, ಜಗದ್ಬೀಜನೂ ಆಗಿರುತ್ತಾನೆ ಎಂದು ಹೇಳುತ್ತಾ ಅನ್ನರಸವೇ ಸಪ್ತಧಾತುವಾಗಿ ಗರ್ಭದಿಂದ ಈ ದೇಹ ಹೇಗೆ ಹುಟ್ಟಿಬರುತ್ತದೆ ಎಂಬುದನ್ನು ಯಾಜ್ಞವಲ್ಕ್ಯರು ಮೈತ್ರೇಯಿಗೆ ವೈಜ್ಞಾನಿಕವಾಗಿ ನಿರೂಪಿಸುತ್ತಾರೆ.

ಎಲೆ ಮಡದಿ ಕೇಳು! ಜನನಿ–ಜನಕರ ಮೇಳದಿಂದ ಈ ದೇಹದ ಸೃಷ್ಟಿಯಾಯಿತು. ಹಿಂದಿನ ಕರ್ಮ ಪರಿಪಾಕ ವಿಶೇಷದಿಂದ ಪುರುಷನಲ್ಲಿ ಜೀವ ಪಿಂಡವು ಹುಟ್ಟಿ ಅದು ರೇತದೊಳಗೆ ಸೇರಿ ರತಿಕ್ರೀಡೆಯ ಸಂದರ್ಭದಲ್ಲಿ ಸ್ತ್ರೀಯಳ ಗರ್ಭದಲ್ಲಿ ನಿಲ್ಲುತ್ತದೆ ಸ್ತ್ರೀಯಳ ರಕ್ತದ ಅಂಶ ಅಧಿಕವಾದರೆ ಹೆಣ್ಣುಮಗು, ಪುರುಷನ ರೇತಸ್ಸಿನ ಅಂಶ ಅಧಿಕವಾದರೆ ಗಂಡುಮಗು, ಈ ಎರಡೂ ಸಮವಾದರೆ ಷಂಡ ಮಗು ಹುಟ್ಟುತ್ತದೆ.

ಮೊದಲು ದಿನ ಕಲಲ; ಐದನೆಯ ದಿವಸಕ್ಕೆ ಬೊಬ್ಬುಳಿಕೆ, ಏಳನೆಯ ರಾತ್ರಿಗೆ ಪೇಶಿ, ಹತ್ತನೆಯ ರಾತ್ರಿಗೆ ಪಿಂಡದಾಕಾರ(ಇದು ವೇದದ ಅಭಿಪ್ರಾಯ) ಮುಂದೆ ೧೫ನೆಯ ದಿವಸಕ್ಕೆ ದಂಡ, ಒಂದೂವರೆ ತಿಂಗಳಿಗೆ ತವೆ, ೨ ತಿಂಗಳಿಗೆ ೨ ಬಾಹುಗಳು; ಮೂರು ತಿಂಗಳಿಗೆ ಹೊಟ್ಟೆ; ನಾಲ್ಕು ತಿಂಗಳಿಗೆ ಸರ್ವಾಂಗ; ಐದು ತಿಂಗಳಿಗೆ ರೋಮ; ೬ನೆಯ ತಿಂಗಳು ಮೂಳೆ; ಏಳನೆಯ ತಿಂಗಳಿಗೆ ಉಸಿರಾಟ; ಎಂಟನೆಯ ತಿಂಗಳಿಗೆ ಭ್ರೂಣವು! ಇಲ್ಲಿಂದ ಹೊರಟು ಹೋಗುವ ಮಾರ್ಗಯಾವುದು? ಎಂದು ದುಃಖಪಡುತ್ತದೆ; ಒಂಬತ್ತನೆಯ ತಿಂಗಳಿಗೆ ಪಿಂಡಸ್ಥ ಜೀವನಿಗೆ ಕಾಲತ್ರಯ ಜ್ಞಾನ ಉಂಟಾಗುತ್ತದೆ. ಆಗ ಜೀವನು ಸಕಲವನ್ನೂ ವಿವೇಚಿಸಿ ಎಲ್ಲ ವಿಷಗಳೂ ದುಃಖಕರವೆಂದು ತೀರ್ಮಾನಕ್ಕೆ ಬರುತ್ತಾನೆ.

ದೇಹತನ್ನದಲ್ಲ; ದೇಹವೇ ತಾನಲ್ಲ

ಮೈತ್ರೇಯಿ ಕೇಳು ! ಈ ಜೀವನಿಗೆ ಐದು ಅವಸ್ಥೆಗಳಿವೆ. ಅವು ಭೂತಾತ್ಮ ಇಂದ್ರಿಯಾತ್ಮ, ಅಹಂಕರಣಾತ್ಮ, ವಿಜ್ಞಾನಾತ್ಮ ಹಾಗೂ ಅಂತರಾತ್ಮ ಎಂದು. ಇವು ಹುಸಿ ಎಂದು ಮನವರಿಕೆಯಾದರೆ ತಾನೇ ಪರಮಾತ್ಮನಾಗುತ್ತಾನೆ. ಈ ದೇಹ ತನ್ನದು. ದೇಹವೇ ತಾನು ಎನ್ನುವ ಭ್ರಮೆಗೆ ಒಳಗಾಗಿದ್ದಾನೆ. ಈ ಜೀವಾತ್ಮನಿಗೆ ಅವಸ್ಥಾತ್ರಯಗಳುಂಟು: ಜ್ಞಾನದಿಂದ ಜಾಗ್ರದಾವಸ್ಥೆ: ಅಜ್ಞಾನದಿಂದ ಸುಪ್ತಾವಸ್ಥೆ; ಜ್ಞಾನಾಜ್ಞಾನಗಳ ಮಿಶ್ರಣದಿಂದ ಕನಸು ಸ್ವಪ್ನಗಳಲ್ಲಿ, ಜೀವನು ಅಹಂಭ್ರಮೆಯಿಂದ ಮೂರು ದೇಹದಲ್ಲಿ ಮೂರು ಬಗೆಯಾಗಿರುತ್ತಾನೆ ಮತ್ತು ಕ್ರಮವಾಗಿ ಸ್ಥೂಲ– ಸೂಕ್ಷ್ಮ–ಕಾರಣಗಳೆಂಬ ಶರೀರತ್ರಯದಲ್ಲಿ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಅವಸ್ಥೆಗಳಿಗೆ ಒಳಗಾಗಿ ಅಲ್ಲಲ್ಲಿ ಕ್ರಮವಾಗಿ ವಿಶ್ವ–ತೈಜಸ್–ಪ್ರಜ್ಞ ಎಂದು ಹೆಸರನ್ನು ಪಡೆಯುತ್ತಾನೆ. ಜೀವನಿಗೆ ಅವಿದ್ಯಾ–ಅತ್ಮಿತಾ,

ರಾಗ-ದ್ವೇಷ, ಅಭಿನಿವೇಶ ಎಂಬ ಪಂಚಕ್ಲೇಶಗಳೂ ಇವೆ. ಇವು ಪಂಚಪಾಶಗಳಾಗಿ ಜೀವನವನ್ನು ಬಾಧಿಸಿರುತ್ತದೆ. ಈ ದೇಹ 'ನಾನು' ಎನ್ನುವ ಅಹಂಕಾರದಿಂದಾಗಿ ಆಧ್ಯಾತ್ಮಿಕ ಆದಿಭೌತಿಕ, ಆದಿದೈವಿಕವೆಂಬ ತಾಪತ್ರಯಗಳೂ ಉಂಟಾಗುತ್ತವೆ. ಆದ್ದರಿಂದ ಸತಿಯೇ ಕೇಳು! ಈ ದೇಹ ನಶ್ವರವೆಂದು ತಿಳಿ: ಈ ದೇಹ ರೋಗಗಳ ಆವಾಸಸ್ಥಾನ ದುಃಖದ ಸಾಗರ, ತಾಪಕ್ಲೇಶಾದಿಗಳ ತವರುಮನೆ; ಆದ್ದರಿಂದ ಎಲ್ಲ ವಿಧವಾದ ದುಃಖಗಳಿಗೆ ಈ ದೇಹವೇ ಮೂಲ, ಇಂತಹ ನಶ್ವರ ದೇಹಕ್ಕೆ 'ನಾನು' ಎನ್ನುವ ಭಾವನೆ ಹೋದರೆ ದುಃಖವೂ ನಿವಾರಣೆಯಾಗುತ್ತದೆ.

ಇದಿರ ತೋರುವ ದೇಹವಿದು ತಾನು ತನ್ನದ ।
ಲ್ಲದ ಕರದಿಂದ ನೋಡು—

ಈ ತೋರುವ ದೇಹ ನೀನಲ್ಲ ಮತ್ತು ಇದು ನಿನ್ನದೂ ಅಲ್ಲ ಎಂಬುದನ್ನೂ ನಿಶ್ಚಯವಾಗಿ ತಿಳಿ.

ಇದುವರೆಗೂ ಶಾಂತಚಿತ್ತದಿಂದ ಕೇಳುತ್ತಿದ್ದ ಮೈತ್ರೇಯಿ ದೇಹದ ನಶ್ವರತೆ ಹಾಗೂ ಜೀವನ ಅವಸ್ಥೆಯನ್ನು ತಿಳಿದು, ಆಕೆಯು ಮನಸ್ಸಿಗೆ ತೀವ್ರ ಪರಿಣಾಮವಾಗಿ ತನ್ನ ಪತಿಗೆ ನಮಸ್ಕರಿಸಿ, ಮುನಿಶ್ರೇಷ್ಠ ! ನನಗೆ ದೇಹ ಧರ್ಮಾಧಿಗಳು ಇಲ್ಲವಾಗುವ ರಹಸ್ಯವನ್ನು ಕೃಪೆಮಾಡಿ ತಿಳಿಸಬೇಕೆಂದು ಬಿನ್ನೈಸಿಕೊಳ್ಳುತ್ತಾಳೆ. ಆಗ ಯಾಜ್ಞವಲ್ಕ್ಯರು ಪ್ರೀತಿಯಿಂದ ಮೈತ್ರೇಯಿಗೆ ಆತ್ಮನ ಸ್ವರೂಪವನ್ನು ಬೋಧಿಸುತ್ತಾರೆ—

ಆತ್ಮಸ್ವರೂಪ

ಮೈತ್ರೇಯಿ ! ಆತ್ಮಸ್ವರೂಪವನ್ನು ತಿಳಿ. ಆತ್ಮನಿಗೆ ಪಂಚಭೂತಗಳಿಲ್ಲ, ಪ್ರಾಣ ಮೊದಲಾದ ಪಂಚವಾಯುಗಳಿಲ್ಲ. ಕರ್ಮೇಂದ್ರಿಯಗಳೂ, ಜ್ಞಾನೇಂದ್ರಿಯಗಳೂ ಅಂತಃ ಕರಣಗಳೂ, ಸುಖದುಃಖಗಳೂ ಇಲ್ಲ: ಷಡೂರ್ಮಿಗಳು(ಜನನ-ಮರಣ-ಕ್ಷುತ್ತ-ಪಿಪಾಸೆ-ಶೋಕ-ಮೋಹ) ಹೀಗೆ ಆತ್ಮನಿಗೆ ಯಾವ ಬಾಧೆಯೂ ಇಲ್ಲ.

ಜಗತ್ತು ಮಿಥ್ಯೆ ; ಬ್ರಹ್ಮಸೃಷ್ಟಿ ಅಲ್ಲ-ಹುಸಿ

ಮೈತ್ರೇಯಿ (ಮೃಗಮದಗಂಧಿ) ಕೇಳು, ಈ ಜಗತ್ತು ದಿಟವೆಂಬ ಅವಸ್ಥೆಯೇ-ಜಾಗೃತ್:

ಹುಸಿ ಎನ್ನುವ ಅವಸ್ಥೆಯೇ-ಸ್ವಪ್ನ: ಏನೆಂದು ಕಾಣದಿರುವ ಅವಸ್ಥೆಯೇ-ಸುಷುಪ್ತಿ. ಈ ಜಗತ್ತು ಕಲ್ಪಿತ ಪುರುಷನ ಭ್ರಾಂತಿಯಿಂದ, ಆತ್ಮ ಸ್ಥಾನದಲ್ಲಿ ತೋರಿದ ದೃಶ್ಯವೇ ಆಗಿದೆ.

ಮೈತ್ರೇಯಿ (ಮದಗಜಗಮನೆ) ಇನ್ನೂ ಕೇಳು. ಪರಮಾತ್ಮನು ಅಕ್ರಿಯಾತ್ಮಕ. ಜಗತ್ತು ಸೃಷ್ಟಿಸಿದವನು ಅವನಲ್ಲ; ಈ ಕಲ್ಪಿತಪುರುಷ (ಜೀವ) ತಾನೆ ಮಿಥ್ಯೆಯಾಗಿರುವುದರಿಂದ ಅವನಿಂದ ಈ ಜಗತ್ತು ಸೃಷ್ಟಿ ಆಯಿತೆಂದು ತಿಳಿಯುವುದು ಸರಿ ಅಲ್ಲ. ಈ ಜಗತ್ತು ಕೇವಲ ಹುಸಿ ತೋರಿಕೆ ಎಂದು ತಿಳಿ.

ಮೈತ್ರೇಯಿ (ಶಶಿಮುಖಿ) ಹಗ್ಗವನ್ನು ನೋಡಿ ಹಾವೆಂದು ಭಾವಿಸಿ ಹೆದರಿಕೊಂಡು, ಅರಿವು ಮೂಡಿದ ಬಳಿಕ ಇದು ಸರ್ಪವಲ್ಲ; ಖಂಡಿತವಾಗಿಯೂ, ಹಗ್ಗವೆನ್ನುವ ಅರಿವು ಬಂದಾಗ ಸಂತೋಷಪಡುವ ಮನುಷ್ಯನಂತೆ ಈ ಕಲ್ಪಿತಪುರುಷ (ಜೀವ) ತನ್ನಲ್ಲಿ ಅನೇಕ ತಪ್ಪು ಕಲ್ಪನೆಗಳನ್ನು ತುಂಬಿಕೊಂಡು ಭ್ರಮೆಯಲ್ಲಿ ಸಿಲುಕಿದ್ದಾನೆ. ಅವನು ಭ್ರಾಂತಿಯಿಂದ ಬಿಡುಗಡೆ ಹೊಂದಿದಾಗ ಮಾತ್ರ ನಿತ್ಯ ಸುಖಿಯಾಗುತ್ತಾನೆ. ಆದರೆ ಆತ್ಮನಲ್ಲಿ ಜಗತ್ತೆಂಬುದು ಹುಸಿ ಎಂಬುದನ್ನು ಎಂದೂ ಮರೆಯಬೇಡ. "ನೋಡ ನಿಮಿತ್ತವಾಯ್ತು ವಿಶ್ವಭ್ರಾಂತಿ" ಎಂದು ಹೇಳುತ್ತಾರೆ.

ಮೈತ್ರೇಯಿ ಈವರೆಗೂ ಗಂಭೀರವಾಗಿ ಆತ್ಮನ ಸ್ವರೂಪ ಜಗತ್ತು ಹುಸಿತೋರಿಕೆ, ಈ ಜಗತ್ತು ಬ್ರಹ್ಮಸೃಷ್ಟಿಯಲ್ಲ ಎಂಬುವನ್ನು ಅರಿತುಕೊಂಡು ಒಂದು ಅರ್ಥಪೂರ್ಣವಾದ ಪ್ರಶ್ನೆ ಕೇಳುತ್ತಾಳೆ.

ಸಕಲ ಸಮ್ಮಾನಿ ವಂದ್ಯರೇ! ತಾವು ಮಾಡಿದ ಉಪದೇಶದಲ್ಲಿ ಕಲ್ಪಿತ ಪುರುಷನೂ ಇಲ್ಲ; ಇಂದ್ರಿಯಗಳೂ ಇಲ್ಲ ಎಂದು ತಿಳಿಸಿದಿರಿ. ಹಾಗಾದರೆ ಕ್ರಿಯೆ ನಡೆಯುವುದು ಹೇಗೆ? ದಯವಿಟ್ಟು ತಿಳಿಸಿ ಎಂದು ಬೇಡಿಕೊಳ್ಳುತ್ತಾಳೆ.

ಅದಕ್ಕೆ ಯಾಜ್ಞವಲ್ಕ್ಯರು ಸಂತೋಷದಿಂದ ಪತ್ನಿಯನ್ನು ಮೈದಡವಿ ಉತ್ತರಿಸುತ್ತಾರೆ.

ಬ್ರಹ್ಮನ ಸ್ವರೂಪ

ಮೈತ್ರೇಯಿ (ತೋರುಮುಡಿಯುವಳೇ) ಮನಸ್ಸುಗೊಟ್ಟುಕೇಳು — ಅರಿವೇ ಬ್ರಹ್ಮ; ಮರೆವೆ ಜೀವ, ಈ ಅರಿವಿನಲ್ಲಿ ಮರೆವೆ ಎಂದಿಗೂ ಸೇರದು. ಸೂರ್ಯನೊಡನೆ ಕತ್ತಲೆ ಎಂದಾದರೂ ಸೇರುತ್ತದೆಯೆ? ಬ್ರಹ್ಮ ಪರಿಪೂರ್ಣ. ಅವನಿಗೆ ಸನ್ನಿಧಿ ಎನ್ನುವ ಮಾತು ಅನ್ವಯಿಸುವುದಿಲ್ಲ. ಅದು ಜೀವನಿಗೆ ಮಾತ್ರ ಅನ್ವಯಿಸುತ್ತದೆ. ಪುರುಷನಿಗೆ ಕನಸಿನಲ್ಲಿ ಕಾಣುವ ಹೆಣ್ಣಿನಿಂದ ಸುಖ, ಕನಸಿನಲ್ಲಿ ಕಾಣುವ ಹುಲಿಯಿಂದ ದುಃಖ ಆಗುವಂತೆ ಈ ಲೋಕ ವ್ಯವಹಾರದ ಅನುಭವವಾಗುವುದು ಈ ಜೀವನಿಂದಲೇ. ಕನಸಿನಲ್ಲಿ ಕಂಡದ್ದು, ಎಚ್ಚರವಾದಾಗ ಸುಳ್ಳಾಗುವಂತೆ; ಕನಸಿನ ವಿಷಯ ಕಲ್ಪಿತಪುರುಷ (ಜೀವ) ಎಲ್ಲವೂ ಮಿಥ್ಯೆ; ಇರುವುದೊಂದೇ ಬ್ರಹ್ಮ, ಇರುವ ಸಮುದ್ರವು, ಇಲ್ಲದ ತೊರೆ, ನೊರೆಗಲ್ಲಕ್ಕೆ ಮೂಲವಾಗುವಂತೆ ಇಲ್ಲದ ಸಕಲ ಜೀವರ ತೋರಿಕೆಗೆ ಪರಮಾತ್ಮನೇ ಮೂಲ ಎಂದು ತಿಳಿ. ಕರ್ಮವಿಲ್ಲದ, ಬಂಧನವಿಲ್ಲದ, ನಿರ್ಗುಣ ನಿರ್ವಿಕಲ್ಪವಾದ ಸುಖಾದ್ವಯಪೂರ್ಣವಾದ **ಚಿತ್** ಎಂಬುದೇ ಬ್ರಹ್ಮ ಎಂದು ಯಾಜ್ಞವಲ್ಕ್ಯರು ತಮ್ಮ ನಿರ್ಣಯಾತ್ಮಕ ಉಪದೇಶವನ್ನು ನೀಡುತ್ತಾರೆ.

ಈವರೆಗೆ ಬ್ರಹ್ಮನ ಸ್ವರೂಪ. ಜಗತ್ತಿನ ಮಿಥ್ಯಾಸ್ವರೂಪವನ್ನು ಚೆನ್ನಾಗಿ ಅರ್ಥ ಮಾಡಿಕೊಂಡ ಮೈತ್ರೇಯಿ, ಯಾಜ್ಞವಲ್ಕ್ಯರನ್ನು ಪ್ರಶ್ನಿಸುತ್ತಾಳೆ—

"ಸ್ವಾಮಿ! ಪರಮಾತ್ಮನೇ ಆದ ಆತ್ಮನಲ್ಲಿ ಭ್ರಾಂತಿ ಹೇಗೆ ಜನಿಸಿತು? ಮತ್ತು ಭ್ರಾಂತಿ ಎಂದು ಕಾಣುವ ಸುಖ-ದುಃಖ, ಬಂಧನ-ಮೋಕ್ಷಗಳು ಆತ್ಮನಿಗೆ ಹೇಗೆ ಉಂಟಾಗುತ್ತವೆ? ಇದು ನನಗೆ ಆಶ್ಚರ್ಯವಾಗಿ ಕಾಣುತ್ತದೆ. ದಯವಿಟ್ಟು ನನ್ನ ಸಂದೇಹ ನಿವಾರಿಸಬೇಕು" ಎಂದು ಬಿನ್ನೈಸಿಕೊಳ್ಳುತ್ತಾಳೆ.

ದೇಹ-ಆತ್ಮ (ತನುಮಿಥ್ಯೆ ಆತ್ಮಸತ್ಯ)

ಮಡದಿಯೆ! ನಿನ್ನ ಪ್ರಶ್ನೆ ಅರ್ಥಪೂರ್ಣವಾಗಿದೆ. ಅದಕ್ಕೆ ವಿಚಾರ ಹೀಗಿದೆ. ಲಕ್ಷ್ಯವಿಟ್ಟು ಕೇಳು ಎಂದು ಯಾಜ್ಞವಲ್ಕ್ಯರು ಉತ್ತರರೂಪದ ಉಪದೇಶ ಮಾಡುತ್ತಾರೆ.

ಭ್ರಾಂತಿ ಎಂಬುದು ಬೇರೆ ಏನೂ ಅಲ್ಲ; ಅದು ಸುಜ್ಞಾನಾಭಾವ. ಈ ಭ್ರಾಂತಿ ಆತ್ಮನಿಗೆ ಆರೋಪಿತವಾದುದು ಈ ದೇಹ ತಾನು ಮತ್ತು ದೇಹ-ಜಗತ್ತುಗಳು ನಿಜ ವೆಂದು ನಂಬುವ ವಿವೇಕರಹಿತವಾದ ಅಚೇತನಗಳ ಭಾವವೇ ಭ್ರಾಂತಿಯೆಂದು ತಿಳಿ. ಮೈತ್ರೇಯಿ (ಗುಣಶೀಲಳೇ) ಕೇಳು ಗುಣವಿಲ್ಲದ ಆತ್ಮನಿಗೆ 'ತಾನು' ಎನ್ನುವ ಯಾವ ಗುಣವಿದೆಯೋ 'ಅವೇ ಭ್ರಮೆ'. ಭ್ರಾಂತಿಗೆ ಲಕ್ಷಣವೆಂಬುದಿಲ್ಲ. 'ನಹಿ ಬ್ರಾಂತಿರ್ಲಕ್ಷಣಂ' ಎಂಬುದನ್ನು ಮರೆಯಬೇಡ, ತನು ರಹಿತನಾದ ಆತ್ಮನಿಗೆ, ಜನನ-ಮರಣಗಳಲ್ಲಿ ಸುಖ ದುಃಖಗಳಲ್ಲಿ ಬಂಧನವಿಲ್ಲ, ಬೆಳಕು ಕತ್ತಲೆಯಂತೆ ದೇಹಕ್ಕೂ ಆತ್ಮನಿಗೂ, ಎಂದೆಂದಿಗೂ ಸಂಬಂಧವಿಲ್ಲ. ಇದನ್ನು ನೀನು ಚನ್ನಾಗಿ ತಿಳಿ. ಮೈತ್ರೇಯಿ; (ಬಡನಡುವಿನಬಾಲೆ) ದೇಹ ಜಡ; ಆತ್ಮ ಅಜಡ ದೇಹ ಲಯ; ಆತ್ಮ ಲಯರಹಿತ. ತನು ಮಿಥ್ಯ ಆದರೆ ಆತ್ಮ ಸತ್ಯ. ಆತ್ಮನಿಗೆ ಕುಲ-ಗೋತ್ರಗಳಿಲ್ಲವೆಂಬುದನ್ನು ನೆನಪಿಡು. ಆತ್ಮಸ್ವರೂಪಿಣಿಯಾದ ನಿನಗೆ ಬಂಧ-ಮೋಕ್ಷ. ಇಂತಹ ಮಾತುಗಳೆಲ್ಲ ಮಿಥ್ಯ. ಆತ್ಮನಿಗೆ ಭವಬಂಧನವೆಂಬುದು ಹುಸಿ; ಮೋಕ್ಷವೆಂಬುದೂ ಹುಸಿಯೇ. ಕನಸಿನಲ್ಲಿ ಬಂಧನವಾಗುವುದು, ಬಿಡುಗಡೆ ಯಾಗುವುದು ಹೇಗೆ ಹುಸಿಯೇ ಜೀವನಿಗೆ ಬಂಧಮೋಕ್ಷಗಳು ಶುದ್ಧ ಹುಸಿ ಅದ್ವೈತಕ್ಕೆ ಬಂಧ ಮೋಕ್ಷವೆಂಬ ಭೇದವೆಲ್ಲಿದೆ? ನೀನೇ ಆಲೋಚಿಸಿ ನೋಡು, ದೇಹ ತಾನು ಎಂಬ ಅಧ್ಯಾಸಬಲದಿಂದಲೇ ಈ ಜಗತ್ತು ತೋರುತ್ತಿರುವುದು ಸತ್ತೆಂದಾಗಲೀ, ಅಸತ್ತೆಂದಾಗಲೀ ಹೇಳಲು ಬಾರದ ಈ ಜಗತ್ತು, ಹಗ್ಗದಲ್ಲಿ ತೋರುವ ಹಾವಿನಂತೆ ಮಿಥ್ಯೆಯಾಗಿದೆ. ಈ ಜಗತ್ತು ಸತ್ತೆಂದಾಗಲೀ, ಅಸತ್ತೆಂದಾಗಲೀ ಇದಮಿತ್ಥಂ ಎಂದು ತೋರುವುದೇ ಬಂಧ. ಇದು ಹೀಗಲ್ಲ-ಎಂದು ತಿಳಿಯುವುದೇ ಮೋಕ್ಷ ಇದೇ ಎಲ್ಲ ವಿವೇಕಗಳ ಮಾತು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೋ.

ತತ್‌ತ್ವಂ ಅಸಿ (ಅದು ನೀನೇ ಆಗಿದ್ದೀಯಾ)

ಮೈತ್ರೇಯಿ ಕೇಳು! "ನಿಜವಾಗಿಯೂ ನೀನೇ ಪರಮಾತ್ಮ". ಯಾವುದೇ ವಿಷಯವು ಮಾತಿಗೆ ನಿಲುಕುವಂತಿದ್ದರೆ ತರ್ಕಮಾಡಬೇಕು. ಮಾತಿಗೆ ನಿಲುಕದ ವಿಷಯ ವನ್ನು ಕುರಿತು ತರ್ಕ ಮಾಡುವುದು ಅತರ್ಕವಾಗುತ್ತವೆ. ಹಾಗೆ ಮಾಡುವವರು ಮೂಢರು.

ಸುಮ್ಮನೆ ಅದ್ವೈತವನ್ನು ಕುರಿತು ವಾದ-ವಿವಾದ ಮಾಡುವವರು ಮೂರ್ಖರು. ಅದ್ವೈತದ ವಿಚಾರವನ್ನು ಇನ್ನು ಕೇಳು. ನಾನು ನೀನೆಂಬ ಭಿನ್ನಭಾವವೇ ದ್ವೈತ; ಈ ಎರಡಳಿದ ಪರಿಪೂರ್ಣ ನಿರ್ಮಲ ವಿಜ್ಞಾನವೇ ಅದ್ವೈತ. ಈ ಅದ್ವೈತದಲ್ಲಿ ನಾನು ಜೀವಾತ್ಮನೆಂಬ ಭ್ರಮೆ ಮಿಥ್ಯೆ. ನಾನು ಅಂತರಾತ್ಮ ಎಂಬ ಭ್ರಮೆಯೂ ಮಿಥ್ಯೆ ಎಂದು ತಿಳಿದು ತಾನು ಪರಮಾತ್ಮನಲ್ಲವೆ ಬೇರೆಯಲ್ಲ ಎಂದು ತಿಳಿಯಬೇಕು ಅದ್ವೈತವು ಮಾತೃ-ಮಾನ-ಮೇಯ ಎಂಬ ತ್ರಿಪುಟಿಗೂ ಮೀರಿದ್ದಾಗಿ ಅದರ ಸಿದ್ಧಿಗೆ ಯಾವ ಪ್ರಮಾಣವೂ ಬೇಕಾಗಿಲ್ಲ.

ಮೈತ್ರೇಯಿ ಲಕ್ಷ್ಯವಿಟ್ಟು ಕೇಳು! ಅಹಂಭಾವವಿಲ್ಲದೆ ಅನುಭವವಿಲ್ಲ. ಅದ್ವೈತಕ್ಕೆ ಅಹಂ ಮೂಲವಾದ ಅನುಭವ ಎಂದಿಗೂ ಪ್ರಮಾಣವಾಗಲಾರದು. ಅನುಭವವನ್ನು ತೊರೆದ ಅದ್ವೈತ ತತ್ವ ಸಿದ್ಧಿಯಾಗದು. ಇದೇ ಸುಜ್ಞಾನ, ನಿರ್ಯೋಗ! ಇಂತಹ ಸದಮಲಜ್ಞಾನ ಪಡೆಯಲು ಸದ್ಗುರುಗಳು ಶಿಷ್ಯನಿಗೆ ನಿರ್ಗುಣಾಭ್ಯಾಸವನ್ನೇ ಬೋಧಿಸಬೇಕು ಎಂದು ಯಾಜ್ಞವಲ್ಕ್ಯರು ಹೇಳುತ್ತಿರುವಂತೆ ಮೈತ್ರೇಯಿ ವಿನಯದಿಂದ ನಿಜಪತಿಗೆರಗಿ ನಿರ್ಗುಣಯೋಗದ ವಿಧಾನವನ್ನು ಹೇಳಬೇಕೆಂದು ಬೇಡಿಕೊಳ್ಳುತ್ತಾಳೆ. ಅದಕ್ಕೆ ಯಾಜ್ಞವಲ್ಕ್ಯರು ಮೈತ್ರೇಯಿ! ಇಲ್ಲಿಯವರೆಗೆ ನಿನಗೆ ಸಾಧ್ಯನ ಲಕ್ಷಣವನ್ನು ತಿಳಿಸಿದ್ದೇನೆ. ಇನ್ನು 'ಸಾಧನ' ಲಕ್ಷಣವನ್ನು ವಿವರವಾಗಿ ತಿಳಿಸುತ್ತೇನೆ ಗಮನವಿಟ್ಟು ಆಲಿಸು ಎಂದು ತಮ್ಮ ಉಪದೇಶವನ್ನು ಆರಂಭಿಸುತ್ತಾರೆ. ನಿರ್ಗುಣಯೋಗವನ್ನು ಅರಿಯಲು ಯೋಗ್ಯ ಗುರುವಿನ ಉಪದೇಶಬೇಕು. ಗುರುವಚನವೇ ಶ್ರುತಿ, ಗುರುವಾಕ್ಯವಿಲ್ಲದೆ ಮೂರು ಲೋಕದಲ್ಲಿ ಯಾವ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ.

ಮೈತ್ರೇಯಿ (ಸುಂದರಗಾತ್ರೆ) ಪರತತ್ವವನ್ನು ದೋಷರಹಿತವಾಗಿ ನಿರಹಂಕಾರದಿಂದ ತಿಳಿಸುವವನೇ ಶ್ರೇಷ್ಠಗುರು ಹಾಗೂ ಗುರುವಿನ ಉಪದೇಶವನ್ನು ಶ್ರವಣದೋಷವಿಲ್ಲದೆ, ವಿಚಾರಪೂರ್ವಕ ಗ್ರಹಿಸುವವನೇ ಶ್ರೇಷ್ಠ ಶಿಷ್ಯನಾಗುತ್ತಾನೆ. ಗುರುವು ವಿರತನಾದ ಶಿಷ್ಯನಿಗೆ ನಾಲ್ಕು ರೀತಿಯಿಂದ ಬೋಧನೆ ನೀಡುತ್ತಾನೆ. ನೀನು ಆತ್ಮರೂಪಿ ಎಂದು ಬೋಧಿಸುವುದು ಮುಖಾಂತರ ಬೋಧೆ. ನೀನು ಪರಮನು ಎಂದು ವಿರಕ್ತಿಯನ್ನು ಬೋಧಿಸುವದು, ದಶಾಂತರಬೋಧೆ. ನೀನು, ಪರಮನೇ ಆಗಿದ್ದೀಯ ಎಂದು ಬೋಧಿಸುವುದು ಭಾವಾಂತರ ಬೋಧೆ. ಅನ್ಯವೆಂಬುದು ಹುಸಿ ಎಂದು ಬೋಧಿಸುವುದು ಅನ್ಯೋಪದೇಶ ಬೋಧೆ. ಇವುಗಳಿಗೆ ಬೋಧನಾ ಚತುಷ್ಟಯಗಳೆಂದು ಕರೆಯುತ್ತಾರೆ ಎಂದು ಯಾಜ್ಞವಲ್ಕ್ಯರು ಶ್ರೇಷ್ಠ ಗುರು ಶ್ರೇಷ್ಠ ಶಿಷ್ಯ ಹಾಗೂ ಬೋಧನಾ ವಿಧಾನಗಳನ್ನು ಉಪದೇಶಿಸುತ್ತಾರೆ. ಆಗ ಮೈತ್ರೇಯಿ ಯೋಗಿವರನಿಗೆ ಶರೀರ ವ್ಯವಹಾರ ಹೇಗೆ? ಅವನು ಪರಿಪೂರ್ಣನಲ್ಲವೇ? ಎಂದು ಕುತೂಹಲದಿಂದ ಪ್ರಶ್ನೆ ಮಾಡುತ್ತಾಳೆ ಅದಕ್ಕೆ ಯಾಜ್ಞವಲ್ಕ್ಯರು ಸಮಂಜಸವಾದ ಉತ್ತರ ನೀಡುತ್ತಾರೆ-ಯೋಗಿಗೆ ಬಾಹ್ಯಾಚರಣೆಗಳ ಅಗತ್ಯವಿಲ್ಲ. ಮೈತ್ರೇಯಿ ಕೇಳು! ನಿರ್ಲೇಪವೆನಿಸುವ ಯೋಗಿಯೂ ಸಹ ಪ್ರಾರಬ್ಧ ಭೋಗದಿಂದ ಅಜ್ಞಾನ ಪೀಡಿತನಾಗಿ ಮಿಥ್ಯಾ ವ್ಯವಹಾರದಲ್ಲಿ ತೊಡಗುತ್ತಾನೆ.

ಪ್ರಾರಬ್ಧವೆಂದರೆ ಬೇರೆ ಏನೂ ಅಲ್ಲ ಅದು ಅಹಂಕಾರ. ಇದು ಆತ್ಮನಿಗೆ ಇಲ್ಲ. ಆದ್ದರಿಂದ ಅವನಿಗೆ ಪ್ರಾರಬ್ಧ ಭೋಗವೂ ಇಲ್ಲ. ಆತ್ಮನಿಗೆ ಶ್ರೌತಕರ್ಮಗಳು ಗಗನಕುಸುಮದಂತೆ ವ್ಯವಹಾರಿಕ ಕರ್ಮಗಳು; ಶುಕ್ತಿರಜದಂತೆ ಇಂದ್ರಜಾಲದಂತೆ, ಎಲ್ಲ ಭ್ರಾಂತಿಗಳು ಆತ್ಮನಿಗೆ ಯಾವ ಕರ್ಮಗಳ ಅಗತ್ಯವಿಲ್ಲ. ಮೈತ್ರೇಯಿ! (ಮಡದಿ) ಕೇಳು. ಸಮುದ್ರದಲ್ಲಿ ತೋರಿ ಅಡಗುವ ಅಲೆಯ ಆಟ ಹೇಗೆ ಸುಳ್ಳೋ ಅಂತೆಯೇ ನಿನ್ನಲ್ಲಿ ತೋರುವ ವ್ಯವಹಾರವೂ ಸುಳ್ಳು ಜಗತ್ತಿದು ಹುಸಿ ಎಂದು ತಿಳಿದ ಆರೂಢನಿಗೆ ಸುಖ-ದುಃಖಗಳ ದ್ವಂದ್ವವಿಲ್ಲ; ಕರ್ಮ-ದ್ವೈತ-ಜ್ಞಾನಗಳನ್ನು ನೀನು ಸರಿಯಾಗಿ ಅರ್ಥಮಾಡಿಕೊಂಡರೆ ನೀನೇ ಬ್ರಹ್ಮ, ಕರ್ಮಮಾಡುವವನು ನಿರ್ಮಲ ಮನಸ್ಸಿನಿಂದ ತನ್ನ ಕರ್ಮಗಳನ್ನು ಬ್ರಹ್ಮದಲ್ಲಿ ಅರ್ಪಿಸಬೇಕು.

ಅಹಂಬ್ರಹ್ಮಾಸ್ಮಿ (ನಾನೇ ಬ್ರಹ್ಮ)

ಆತ್ಮಸುಖ ಸಾಗರಳಾದ ಮೈತ್ರೇಯಿ ಕೇಳು! ನಾನೇ ದೇವನೆಂಬುದು ಶೃತಿ ಸಿದ್ಧ ಅರಿವಿನಿಂದ ನೋಡಿದಾಗ ತನ್ನ ಬಿಟ್ಟು ಅನ್ಯದೈವವಿಲ್ಲ, ಇದನ್ನು ತಿಳಿಯುವುದೇ ನಿಜವಾದ ಜ್ಞಾನ. ನೀನು ಆತ್ಮಸ್ವರೂಪಿಣಿ. ಕರ್ಮದಿಂದ ಖಂಡಿತ ಮುಕ್ತಿ ಸಾಧ್ಯವಿಲ್ಲ, ಅದು-ನಿರ್ಮಲಜ್ಞಾನದಿಂದ ಮಾತ್ರ ಸಾಧ್ಯ. ಅರಿತರೆ ಮುಕ್ತಿ ಮರೆತರೆ ಬಂಧನ. ಜಗತ್ತು ಸುಳ್ಳು ಎಂದು ತಿಳಿದೂ, ತಿಳಿದೂ, ಕರ್ಮ ಮಾಡಿದರೆ ಅದು ಕನಸಿನಲ್ಲಿ ಜನಿಸಿದ ಮಗುವಿಗೆ, ಎಚ್ಚರವಾದಾಗ ನಾಮಕರಣ ಮಾಡಿದಂತೆ ಆಭಾಸವಾಗುತ್ತದೆ! ಮೈತ್ರೇಯಿ ಚಿತ್ತಗೊಟ್ಟು ಇನ್ನೂ ಕೇಳು!

ಕರ್ಮಫಲದಲ್ಲಿ-ಉತ್ಪಾದ್ಯ-ಪ್ರತ್ಯ-ವೈರಾಗ್ಯ-ಸಂಸ್ಕಾರ ಇದೊಂದೂ ಮುಕ್ತಿಯಲ್ಲ. ಕತ್ತಲೆಯ ಪರಿಹಾರ ದೀಪದಿಂದ, ಕೋಟಿ-ಕೋಟಿ ಕರ್ಮ ಮಾಡಿದರೇನು? ಬಂಧನದ ಬಿಡುಗಡೆ ತನ್ನನ್ನ ತಾನು ಅರಿತರೆ ಮಾತ್ರ. ಕಟ್ಟಿಗೆಯ ಕೊರಡನ್ನೆ ಕಳ್ಳನೆಂದು ತಿಳಿದು ಭಯಪಟ್ಟರೆ, ಆ ಭಯ ಮದ್ದು ಕುಡಿಯುವುದರಿಂದ ಖಂಡಿತ ಹೋಗುವುದಿಲ್ಲ. ಅದು ಕಳ್ಳನಲ್ಲ; ಕೊರಡು, ನನ್ನದು ತಪ್ಪು ತಿಳುವಳಿಕೆ ಎಂದು ಅರಿತಾಗ ಮಾತ್ರ ಭಯ ನಿವಾರಣೆಯಾಗುತ್ತದೆ

ಯಾವುದೇ ಕರ್ಮ ತನಗೆ ಸಂಬಂಧವಿಲ್ಲವೆಂದು ತಿಳಿದವನೇ ಯೋಗಿ. ಯೋಗಿ ಸಾಧಿಸಬೇಕಾದ ನಿರ್ಗುಣಸಾಷ್ಟಾಂಗವೆಂಬುದೇ ಮೋಕ್ಷವೆಂದು ತಿಳಿ ಎಂದು ಹೇಳುತ್ತಾರೆ. ಕೂಡಲೇ ಮೈತ್ರೇಯಿ ಮೋಕ್ಷ ಸಾಧನೆಗೆ ಅಗತ್ಯವಾದ ನಿರ್ಗುಣಸಾಷ್ಟಾಂಗ ಯೋಗದ ವಿಧಾನವನ್ನು ಕೃಪೆ ಮಾಡಿ ತಿಳಿಸಿಕೊಡಬೇಕೆಂದು ಪ್ರಾರ್ಥಿಸುತ್ತಾಳೆ. ಆಗ ಯಾಜ್ಞವಲ್ಕ್ಯರು ಮೈತ್ರೇಯಿ (ಮನದನ್ನೆ) ಕೇಳು, ನಿರ್ಗುಣಸಾಷ್ಟಾಂಗಯೋಗವೆಂದರೆ ಚೈತನ್ಯ ಜ್ಞಾನಯೋಗ. ಅಚೇತನವಾದ ಜಡಕರ್ಮಗಳನ್ನು ಬಿಟ್ಟುದೇ ಬ್ರಹ್ಮವೆಂದು ತಿಳಿ. ಮೈತ್ರೇಯಿ! (ಘನವಾದ ನಿತಂಬ ಉಳ್ಳವಳೆ) ಈ ಯೋಗದ ಬಗ್ಗೆ ವಿವರವಾಗಿ ತಿಳಿಸುತ್ತೇನೆ ಕೇಳು. ಇದರಲ್ಲಿ ಎಂಟು ಅಂಗಗಳಿವೆ: ಯಮ-ನಿಯಮ-ಆಸನ-

ಪ್ರಾಣಾಯಾಮ-ಪ್ರತ್ಯಾಹಾರ-ಧಾರಣ-ಧ್ಯಾನ ಸಮಾಧಿ ಎಂದು. ಎಲ್ಲಾ ವಿಷಯ ಗಳಲ್ಲಿ ವಿರತಿ ಹುಟ್ಟಿದರೆ ಅದು ಯಮ, ವೈರಾಗ್ಯ ಮನಸ್ಸಿನಲ್ಲಿ ನಿಂತರೆ ಅದು ನಿಯಮ. ಬುದ್ಧಿಯಲ್ಲಿ ಉದಾಸೀನ ಸ್ಥಿತಿ ಆಸನ. ಹೊರಗಿನ ತೋರಿಕೆ ಹುಸಿ ಎಂದು ಅರಿವಾಗಿ ಎಲ್ಲ ಕ್ರಿಯೆಗಳೂ ಲಯವಾದರೆ ಅದು ಪ್ರಾಣಾಯಾಮ ಎಲ್ಲವೂ ಹುಸಿ ಎನ್ನುವ ದೃಷ್ಟಿಯನ್ನು ಅಂತರ್ಮುಖವಾಗಿ ತಿರುಗಿಸಿದರೆ ಅದೇ ಪ್ರತ್ಯಾಹಾರ. ಜ್ಞಾನ ಅರಿವಿನಲ್ಲಿ ಅಡಗಿ ನೆಲೆ ನಿಂತರೆ ಅದು ಧಾರಣ ಪೂರ್ಣ ಚೈತನ್ಯವೇ ತಾನು ಎಂದು ಭಾವಿಸುವುದೇ ಧ್ಯಾನ ಈ ನಿಜಾನಂದವನ್ನು ಅರಿಯುವ ಭಾವನೆಯೇ ಸಮಾಧಿ. ಮೈತ್ರೇಯಿ (ಅಂಬುಜಾನನೆ) ಇನ್ನು ಕೇಳು-ಅರಿವು ತಾನು ಎಂದು ಅರಿತರೆ ಅದು ಜಾಗರಣ. ನಾನಾರೆಂಬುದನ್ನು ನಾ ಅರಿಯೆ ಎನ್ನುವುದೇ ಸ್ವಪ್ನ, ಅರಿಯದಿರುವಿಕೆ ಸುಪ್ತಿ. ಅರಿವು ನಾನು ಎಂಬ ತಿಳಿವು ದೃಢವಾಗಲು ಅದು ತೂರ್ಯ, ಈ ತೂರ್ಯ ಸ್ಥಿತಿಯನ್ನು ಮೀರಿ ನಿಲ್ಲುವುದೇ ತುರ್ಯಾತೀತ, ಈ ಸ್ಥಿತಿಯೇ ಪರಮಾತ್ಮ. ಈ ಜಗತ್ತು ಹುಸಿ ಎಂದು ತಿಳಿದು, ಪರಮಾತ್ಮನೇ ತಾನೆಂದು ತಿಳಿದು, ಪರಮಾನುಭವದಲ್ಲಿ ನಿಲ್ಲುವುದೇ ನಿರಾವರಣ ಸಮಾಧಿ. ಈ ಸಮಾಧಿ ಸ್ಥಿತಿಯೇ ಪರಬ್ರಹ್ಮ ಅದನ್ನು ಸತ್ಯವೆಂದು ನಿಶ್ಚಲವಾಗಿ ತಿಳಿಯುವುದೇ ನಿಸ್ಸಮಾಧಿ.

"ಬೇರೇನೂ ಅರಿಯದಂತಡಗಿ ತಾನಿರಲು ಅದೇ
ಮರೆಯದರಿಯುದವಿರಳ ಪರಬ್ರಹ್ಮ" (೪-೨೧-೫)

ಇದನ್ನರಿತು ನಂಬಿದವನೇ ನಿರ್ಗುಣಯೋಗಿ, ತನ್ನ ಹೊರತು ಅನ್ಯವಿಲ್ಲವೆಂದಾಗ ಈ ಧ್ಯಾನ-ಸಮಾಧಿಗಳ ಅಗತ್ಯವೇನು? ಧ್ಯಾನ ಭ್ರಾಂತಿ ದ್ವೈತದಲ್ಲಿಯೇ ಹೊರತು, ಅದ್ವೈತಕ್ಕಿಲ್ಲ. ಭೇದಭಾವವಿದ್ದಲ್ಲಿ ಧ್ಯಾನಕ್ಕೆ ಸ್ಥಾನವಿದೆ. ಎರಡಳಿದ ಅದ್ವೈತ ನಿಜಪದವಿಯಲ್ಲಿ ಧ್ಯಾನಕ್ಕೆ ಸ್ಥಾನವಿಲ್ಲ ಎಂಬುದನ್ನು ಚನ್ನಾಗಿ ಜ್ಞಾಪಕದಲ್ಲಿಟ್ಟುಕೋ ಎಂದು ಯಾಜ್ಞವಲ್ಕ್ಯ ಹೇಳುತ್ತ—ಈ ನಿರ್ಗುಣಾಭ್ಯಾಸ ನಿಲುಕದವರಿಗೆ (ಶ್ರೀ ಸಾಮಾನ್ಯ ರಿಗೆ ಸಗುಣಯೋಗವೂ ಉಂಟು ಎಂದು ತಿಳಿಸುತ್ತಾರೆ. ಹಾಗಾದರೆ ಆ ಸಗುಣಯೋಗದ ಸಾಧನೆ ಹೇಗೆ? ದಯವಿಟ್ಟು ತಿಳಿಸಿ ಎಂದು ಕುತೂಹಲದಿಂದ ಪ್ರಶ್ನಿಸುತ್ತಾಳೆ. ಆಗ ಯಾಜ್ಞವಲ್ಕ್ಯರು, ಆಲಿಸು ನೀರೇ—ಸಗುಣಯೋಗದಲ್ಲೂ, ನಿರ್ಗುಣಾಷ್ಟಾಂಗಯೋಗದ ಎಂಟು ಅಂಗಗಳು. ಈ ಎಂಟೂ ಅಂಗಗಳನ್ನು ಸಾಧನ ಮಾಡುವವರು ಅಧಮರು. ಆಸನಾದಿ ೬ ಅಂಗಗಳನ್ನು ಸಾಧನೆ ಮಾಡುವವರು ಮಧ್ಯಮರು: ಪ್ರತ್ಯಾಹಾರಾದಿ ನಾಲ್ಕು ಅಂಗಗಳನ್ನು ಸಾಧನೆ ಮಾಡುವವರು ಉತ್ತಮರು; ಧ್ಯಾನ-ಸಮಾಧಿಗಳೆಂಬ ಎರಡನ್ನೇ ಮಾತ್ರ ಸಾಧನೆ ಮಾಡುವವರು ಉತ್ತಮೋತ್ತಮರು ಮತ್ತು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಕ್ಷಮೆ, ಧೃತಿ, ದಯೆ, ಆರ್ಜವ, ಮಿತಾಹಾರ, ಶೌಚ ಎಂಬ ಯೋಗದ ಅಂಗಗಳೂ ಉಂಟು. ಇವುಗಳಿಗೆ ಯಮಾಂಗದಶಕ ಎಂದು ಕರೆಯು ತ್ತಾರೆ. ಇವುಗಳ ಸಾಧನೆ ಇಲ್ಲದವನಿಗೆ ನಿಜವಾದ ಮುಕ್ತಿಯು ದೊರಕಲಾರದೆಂದು ತಿಳಿ.

ಇವುಗಳ ಬಗ್ಗೆ ಸ್ವಲ್ಪ ವಿವರವಾಗಿ ತಿಳಿಸುತ್ತೇನೆ ಕೇಳು—(ಎಲೇ ಗುಣಮಣಿಭೂಷಣೆ!) ಪರರಿಗೆ ನೋವನ್ನುಂಟುಮಾಡದೆ ವಿನಯದಿಂದಿರುವುದು ಅಹಿಂಸೆ. ಪರರಿಗೆ ಹಿತವೆಂದು ತಿಳಿದು ಮಾಡುವುದು ಸತ್ಯ. ಪರಧನಕ್ಕಾಶಿಸುವುದೇ ಅಸ್ತೇಯ. ಸ್ತ್ರೀಸಂಗ ಬಯಸದಿರುವುದೇ ಬ್ರಹ್ಮಚರ್ಯ. ಹೊಗಳಿಕೆ–ತೆಗಳಿಕೆಗಳಲ್ಲಿ ಸಮಸ್ಥಿತಿಯಿಂದಿರುವುದೇ ಕ್ಷಮೆ. ಲೌಕಿಕ ವ್ಯವಹಾರಗಳಲ್ಲಿ ಭಿಕ್ಷು ಉಂಟಾಗದೇ ಇರುವುದೇ ಧೃತಿ. ಹೆಂಡತಿ–ಮಕ್ಕಳುಗಳಿಂದ ಕಡುವಿರೋಧ ಬಂದರೂ, ಅವರನ್ನು ರಕ್ಷಿಸಬೇಕೆಂಬಾಸೆ ಹುಟ್ಟಿದರೆ ಅದು ದಯೆ. ಎಲ್ಲ ವಿಷಯಗಳಲ್ಲೂ ಸಮಬುದ್ಧಿಯಿಂದಿರುವುದೇ ಆರ್ಜವ. ಆಕಾರದಲ್ಲಿ ನಿಯಮದಿಂದಿರುವುದು ಮಿತಾಹಾರ. ಸಕಲರಿಗೂ ಲೇಸ ಬಯಸುವುದು ಶೌಚ. ಮೈತ್ರೇಯಿ (ಮಡದಿ) ಕೇಳು! ಅಂತರಂಗದಲ್ಲಿ ಶಿವಪೂಜೆ ಮಾಡಬೇಕು. ಶಿವನೇ ತಾನೆಂದು ಮಾನಸಪೂಜೆ ಮಾಡಿದರೆ ಭವಬಂಧನವಿಲ್ಲ. ಶುದ್ಧಭಾವದಿಂದ ಕಾಯಾ–ವಾಚಾ–ಮನಸ್ಸಿನಿಂದ ಸಗುಣೋಪಾಸನೆ ಮಾಡಬೇಕು. ಅದು ಹೇಗೆ? ಶಿವನು ಸರ್ವಾಧಾರನೆಂಬುದೇ ಆಸನ. ಅವನು ಪರಿಪೂರ್ಣ ಎಂದು ತಿಳಿಯುವನು ಆಹ್ವಾನ. ಅವನು ಆನಂದಸಾಗರನೆಂದು ಭಾವಿಸುವುದು ಅರ್ಘ್ಯ. ಈ ಜಗತ್ತು ಶಿವನ ಪಾದವೆನ್ನುವುದೇ ಪಾದ್ಯ. ಜ್ಞಾನ ಪಾವನ ರೂಪ ಎನ್ನುವುದೇ ಆಚಮನೀಯ. ಅಜ್ಞಾನ ನಿರ್ಮಲವೆಂಬುದೇ ಅಭಿಷೇಕ. ಜ್ಞಾನ ವಿಶ್ವಾತೀತವೆಂಬುದು ಆಚ್ಛಾದನ. ಜ್ಞಾನ ನಿರ್ಗುಣವೆಂಬುದೇ ಉಪವೀತ, ಚಿತ್‌ಶೋಭನವೇ ಅಲಂಕೃತಿ. ತಾನು ಆ ಚಿತ್ತೆಂಬುದು ಅನುಲೇಪ. ಚಿತ್ತ ಅನಾದಿ ಎಂದರೆ ಪುಷ್ಪ. ಆ ಚಿತ್ತೇ ಕೀರ್ತಿವೆತ್ತದೆಂದರೆ ಧೂಪ. ಪುರುಷತ್ವಯಂ ಜ್ಯೋತಿಯೆಂದರೆ ದೀಪ. ಆ ಪುರುಷನಿತ್ಯ ಕೃತ್ರನೆಂದರೆ ನೈವೇದ್ಯ. ಪುರುಷಗುಣದೂರನೆಂದರೆ ವೀಳ್ಯ. ತಾನು ಈಶ; ಈಶ ತಾನು ಎಂಬುದೇ ಪ್ರದಕ್ಷಿಣೆ (ಆವೃತ್ತಿ). ತಾನು ಶಿವನೆಂಬುದೇ ವಂದನೆ. ತಾನಲ್ಲದೆ ಬೇರೆ ಏನೂ ಇಲ್ಲವೆಂಬುದೇ ವಿಸರ್ಜನ. ಈ ಪ್ರಕಾರ ಇಷ್ಟದೇವತೆಯನ್ನು ಹೃದಯಪೀಠದಲ್ಲಿ ಅನ್ಯಭಾವನೆ ಅಳಿದು ಉಪಚರಿಸಬೇಕು. ಇದನ್ನೆಲ್ಲ ಶಾಂತಚಿತ್ತದಿಂದ ಆಲಿಸಿದ ಮೈತ್ರೇಯಿಯು ಇಂತಹ ಸಗುಣಯೋಗದ ಮಾರ್ಗರಹಸ್ಯವನ್ನು ಬೋಧಿಸುವ ಗುರುವಿನ ಲಕ್ಷಣವನ್ನು ತಿಳಿಸಬೇಕೆಂದು ಬಿನ್ನೈಸಿಕೊಳ್ಳುತ್ತಾಳೆ. ಆಗ ಯಾಜ್ಞವಲ್ಕ್ಯನು ಮೈತ್ರೇಯಿ (ಕಾಮಿನಿ)! ಕೇಳು–ಸಗುಣಯೋಗದ ರಹಸ್ಯವನ್ನು ತಿಳಿಸುವ ಗುರುಗಳಲ್ಲೂ ಹಲವು ಉಂಟು. ಇಹ ಮತ್ತು ಪರದಲ್ಲಿ ಅಹಿತವನ್ನುಂಟುಮಾಡುವ ನಿಯಮಬೋಧಕ ತಾಮಸಗುರು. ಎಲ್ಲದಕ್ಕೂ ತಾನೇ ಮುಖ್ಯನೆಂದು ಬೋಧಿಸುವ ಗುರು ರಾಜಸಗುರು. ಮುಕ್ತಿದಾಯಕವಾದ ತತ್ತ್ವವನ್ನು ಬೋಧಿಸುವವನು ಸಾತ್ವಿಕಗುರು. ನಿರ್ಗುಣಯೋಗವನ್ನು ಬೋಧಿಸಿ ಮುಕ್ತಿಮಾರ್ಗವನ್ನು ತೋರುವವನು ಪರಮಗುರು ನಿರಭಿಮಾನಿ, ಕರುಣಾನಿಧಿ, ಅಭಿವಾಂಛೆ ಇಲ್ಲದವನು ಸದ್ಗುರು. ಮೈತ್ರೇಯಿ ಕೇಳು—ಗುರೂಪದೇಶದಲ್ಲೂ ಮೂರು ವಿಧವಿದೆ. ನೀಚವಾದ ವಿಷಯಾಲ್ಯವನ್ನು ಬಿಡಿಸಿ ಆತ್ಮವಿಚಾರ

ಬೋಧಿಸುವವನು ಸೂಚಕಗುರು. ಬ್ರಹ್ಮಚರ್ಯ ಅಗತ್ಯವೆಂದು ಹಿತವಾಗಿ ಬೋಧಿಸುವವನು ವಾಚಕಗುರು. ಬ್ರಹ್ಮವೇ ನೀನೆಂದು ಬೋಧಿಸುವವನು ತಾರಕಗುರು. ಸಕಲ ಶಾಸ್ತ್ರರಹಸ್ಯ ವನ್ನು ತಿಳಿದು ಕರುಣೆಯಿಂದ ಬೋಧಿಸುವವನು ಪರಮಗುರು ಎಂದ ಯಾಜ್ಞವಲ್ಕ್ಯರು ಗುರುಗಳಲ್ಲಿ ಹಲವು ವಿಧರನ್ನು ತಿಳಿಸಲು, ಆಗ ಮೈತ್ರೇಯಿ ಸದ್ಗುರುಗಳನ್ನು ಆಶ್ರಯಿಸಲು ಯೋಗ್ಯನಾದ ಶಿಷ್ಯನ ಇರುವನ್ನು ಕೃಪೆಮಾಡಿ ತಿಳಿಸಬೇಕೆಂದು ಬೇಡಿಕೊಳ್ಳುತ್ತಾಳೆ.

ಆಗ ಯಾಜ್ಞವಲ್ಕ್ಯರು ಆದರ್ಶ ಶಿಷ್ಯನ ಲಕ್ಷಣಗಳನ್ನು ಕುರಿತು ಉಪದೇಶಿಸುತ್ತಾರೆ. ಮೈತ್ರೇಯಿ (ಇಂದುವದನೆ) ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಶಿವನು, ಗುರುವೇ ಪರತತ್ವ, ಸರ್ವವೂ ಗುರುವೇ ಎಂದು ನಂಬಿದವನು ಆದರ್ಶ ಶಿಷ್ಯನಾಗುತ್ತಾನೆ. ಗುರುಕೃಪೆ ಯಿಲ್ಲದವನಿಗೆ ಏನನ್ನು ಓದಿದರೂ ಅವನಿಗೆ ಸಮ್ಯಕ್ ಜ್ಞಾನ ದೊರೆಯುವುದಿಲ್ಲ. ಗುರುವಿನ ಸಾನ್ನಿಧ್ಯದಲ್ಲಿ ಮುಚ್ಚುಮರೆ, ಮಿಥ್ಯ ತರ್ಕ, ಹುಸಿ, ನಿಂದೆಮಾಡಿದ ಶಿಷ್ಯನಿಗೆ ನರಕ ತಪ್ಪದು. ಇದು ವೇದ ಶಾಸ್ತ್ರಾನುಮತ. ಗುರುದೂಷಕ–ಲೋಭಿ–ಧೂರ್ತ–ನಿಷ್ಠೂರವಾದ ಮಾತು. ತುಡುಕು ಸ್ವಭಾವದವನು, ಎಂದಿಗೂ ಒಳ್ಳೆಯ ಶಿಷ್ಯನಾಗಲಾರನು. ಮೈತ್ರೇಯಿ (ಮಡದಿ) ಇನ್ನೂ ಕೇಳು ಶಿಷ್ಯನು ಆಧ್ಯಾತ್ಮವನ್ನು ಗುರುಮುಖದಿಂದ ಕೇಳುವುದು ಶ್ರವಣ. ಶ್ರವಣ ಮಾಡಿದ್ದನ್ನು ಮತ್ತೆ ಮತ್ತೆ ಚಿಂತಿಸುವುದು ಮನನ. ಅದು ಮನಸ್ಸಿನಲ್ಲಿ ನಿಂತರೆ, ಅದು ನಿಧಿಧ್ಯಾಸ. ಸದ್ಗುರುವನ್ನು ಆಶ್ರಯಿಸಿ, ಆ ಗುರುವಿಗೆ ಪರಿಚಯುಗಳನ್ನು ಆಲಸ್ಯವಿಲ್ಲದೆ ಮಾಡುವವನು ಮುಮುಕ್ಷು. ಅಂದರೆ ನಂಜು ಕೊಲ್ಲುವುದು. ಆದರೆ ಹೆಣ್ಣೆಂಬನಂಜು ನೆನೆದರೂ ಸಾಕು, ಕೊಲ್ಲುವುದು, ಅದನ್ನು ತ್ಯಜಿಸಿದವನೇ ಮೋಕ್ಷಾರ್ಥಿ ನಿರ್ವಿಷಯಿಯೇ ಮುಮುಕ್ಷು.

ಸತಿಯೇ ಕೇಳು ಇದುವರೆಗೆ ಆದರ್ಶ ಶಿಷ್ಯನ ವಿಷಯವನ್ನು ತಿಳಿಸಿದೆ. ಇನ್ನು ಅನುಭವಿ ಹಾಗೂ ಆರೂಢರ ಲಕ್ಷಣಗಳನ್ನು ತಿಳಿಸುತ್ತೇನೆ ಚಿತ್ತವಿಟ್ಟು ಕೇಳು— ದ್ವೈತಾದ್ವೈತವಿಲ್ಲದವನು ಅನುಭವಿ: ಕರ್ಮಕಾಂಡವಿಲ್ಲದವನು ಆರೂಢನು ಮತಿ ಚಾಂಚಲ್ಯ ತೊಲಗಿ, ಉದಾರತೆ–ಸಮತೆಗಳು ಚಿತ್ತದಲ್ಲಿ ನೆಲೆನಿಂತರೆ ಅವನೇ ಅನುಭವಿ. ತನು–ಮನ–ಧನ–ಧಾನ, ವನಿತೆ, ಪುತ್ರ ಇವುಗಳಲ್ಲಿ ರತಿಭಾವವಾಗಲಿ, ವಿರತಿಭಾವವಾಗಲಿ, ತಲೆದೋರದೇ ನೈಜಭಾವದಿಂದಿರುವವನು ಆರೂಢ. ಯೋಗಿಗೆ (ಅನುಭಾವಿ) ವಿಧಿನಿಷೇಧಗಳಿಲ್ಲ. ಯೋಗೀಶ್ವರನ ವರ್ತನೆಯನ್ನು ಒಂದು ಬಾಲಲೀಲೆಯಂತೆ ಭಾವಿಸು. ಘಟ ಒಡೆದಾಗ ಆಘಟಾಕಾಶವು ನಿಜಾಕಾಶದಲ್ಲಿ ಒಂದಾಗುವಂತೆ ಯೋಗಿಯ ದೇಹ ಬಿದ್ದುಹೋದಾಗ ಅವನ ಚೈತನ್ಯಬ್ರಹ್ಮದಲ್ಲಿ ಒಂದಾಗುತ್ತದೆ. ಈ ದೇಹ ನಾನಲ್ಲ, ನನ್ನದಲ್ಲ ಎಂದಾಗ ದೇಹತ್ಯಾಗವಾಗುವುದು.

ಸತಿಯೇ ಕೇಳು! ಉಪಾಸನೆಯಲ್ಲಿ ಎರಡು ವಿಧ. ಸಗುಣೋಪಾಸನೆ, ನಿರ್ಗುಣೋ ಪಾಸನೆ ಎಂದು. ಇವುಗಳಲ್ಲಿ ಸಗುಣ ಭಕ್ತಿಯೋಗ ಶ್ರೇಷ್ಠವಾದುದು. ಭಕ್ತಿಮಾಡಿದರೆ ಸಾಕು ಈಶನು ಮುಕ್ತಿಯನ್ನು ಕೊಡುತ್ತಾನೆ. ಇದು ನಿಜವೆಂದು ನಿಗಮ ಮುಂತಾದುವೆಲ್ಲ ಘೋಷಿಸುತ್ತವೆ.

ಮೈತ್ರೇಯಿ ಲಕ್ಷ್ಯಗೊಟ್ಟು ಕೇಳು! ಚನ್ನಾಗಿ ಜ್ಞಾಪಕದಲ್ಲಿಟ್ಟುಕೊ-ಸಾಯುವಾಗ ಒಮ್ಮೆಯಾದರೂ, ನೆನೆದರೆ ಸಾಕು ಅಂಥ ಭಕ್ತರಿಗೆ ನಾನು ಮರೆಯದೆ ಮುಕ್ತಿಯನ್ನು ಕೊಡುತ್ತೇನೆ ಎನ್ನುವ ಶಿವನ ಮಾತು ಸುಳ್ಳಲ್ಲ. ಇಲ್ಲಿಯುವರೆಗೆ ಪರಮ ಅದ್ವೈತಿಗಳಾದ ಯಾಜ್ಞವಲ್ಕ್ಯರು ವೇದ-ಉಪನಿಷತ್-ಆಗಮಗಳ ಆಧಾರಗಳಿಂದಲೂ ತಮ್ಮ ಸ್ವಾನುಭವದಿಂದಲೂ ಹಲವಾರು ಉಪಮಾನ ದೃಷ್ಟಾಂತ, ರೂಪಕಗಳ ಮೂಲಕವೂ ವಿಷಯ ಸ್ಪಷ್ಟವಾಗಿ ತಿಳಿಯುವಂತೆ ಈ ಉಪದೇಶದಿಂದ ಮೈತ್ರೇಯಿ ತಾನು ಅದ್ವಯಾತ್ಮವೆಂಬ ನಿಲುವನ್ನು ತಳೆಯುವಂತೆ ಬೋಧಿಸುತ್ತಾರೆ.

ಕೃತಜ್ಞತೆ

ಅದ್ವೈತ ತತ್ವದ, ಪರಮಾನುಭವವನ್ನು ಕೇಳಿ, ತಿಳಿದುಕೊಂಡು ನಿಸ್ಸಂಶಯ ಉಳ್ಳವಳಾಗಿ, ಮೈತ್ರೇಯಿ ಪತಿದೇವರಿಗೆ ತನ್ನ ಕೃತಜ್ಞತೆ ಅರ್ಪಿಸುತ್ತಾಳೆ. ಹೇಳುತ್ತಾಳೆ "ಮುನಿವರೇಣ್ಯ ನನಗೆ ದಯತೋರಿ ಬೋಧಿಸಿದ್ದರಿಂದ ಕಮಲಚಿತ್ಸುಖದಲ್ಲಿ ಮತಿ ನಿಂದುದೆನಗೆ ನಿಶ್ಚಲವಾಗಿ ನಾನೀಗ ಕೃತ ಕೃತ್ಯಳು" ಎಂದು, ಅತ್ಯಂತ ಕೃತಾರ್ಥ ಭಾವದಿಂದ ಮತ್ತೆ ಹೇಳುತ್ತಾಳೆ. "ನಿನ್ನ ಕೃಪೆಯಿಂದ ಜನನ-ಮರಣ ಬಾಧೆಗಳಿಲ್ಲವಾದವು, ಅನುಪಮಾನಂದ ಚಿದ್ಘನಪೂರ್ಣ ಪದವಾದೆನುಂ" ಎಂದು ಹೇಳುತ್ತಾ, ಮತಿಗೆ ಗೋಚರವಾದದ್ದು: ಸ್ತುತಿಗೆ ಗೋಚರವಾಗುತ್ತದೆ. ಆದರೆ ನಿಮ್ಮ ಮಹಿಮೆ ಮತಿಗೆ ಅಗೋಚರವಾಗಿದೆ. ಆದ್ದರಿಂದ ನಿಮ್ಮನ್ನು ಸ್ತುತಿಸಲು ಸಾಧ್ಯವಾಗುವುದಿಲ್ಲ ಮೌನವೇ ಮಹಾಸ್ತುತಿ ನಿಮಗೆ ಎಂದು ಪತಿದೇವರಿಗೆ ದೀರ್ಘದಂಡ ಪ್ರಣಾಮ ಮಾಡುತ್ತಾಳೆ. ನಿಜಗುಣರು ತಮ್ಮ ಪರಮಾನುಭವದ ಉದ್ದಕ್ಕೂ ಚಿತ್ರಿಸಿದಂತೆ ಯಾಜ್ಞವಲ್ಕ್ಯರು ಆದರ್ಶಗುರು ಮೈತ್ರೇಯಿ ಆದರ್ಶ ಶಿಷ್ಯರಾಗಿ ಕಾಣುತ್ತಾರೆ. ಮೈತ್ರೇಯಿ ರೂಪವಂತಳು. ಗುಣಶೀಲೆ, ಆದರ್ಶ ಶ್ರದ್ಧೆ ಅನುಪಮ ಗುರುಭಕ್ತಿಯುಳ್ಳವಳು, ಜಿಜ್ಞಾಸು ಆಧ್ಯಾತ್ಮದಲ್ಲಿ ಅದಮ್ಯ ಭಕ್ತಿಯುಳ್ಳವಳು ಮತ್ತು ವಿರಾಗಿಣಿಯೂ ಹೌದು.

ಇಲ್ಲಿಯವರೆಗೆ ಪರಮಾನುಭವದಲ್ಲಿ ಪ್ರತಿಪಾದಿತವಾದ ಅದ್ವೈತ ತತ್ವದ ಪ್ರಮುಖ ಪರಿಕಲ್ಪನೆಗಳನ್ನು ಸ್ಥೂಲವಾಗಿ ನಿಜಗುಣರ ಮಾತಿನಲ್ಲಿಯೇ ಸಮೀಕ್ಷಿಸಲಾಯಿತು. ಗ್ರಂಥದ ಪರಿಸಮಾಪ್ತಿಯಲ್ಲಿ ನಿಜಗುಣರ ಕೃತಿಯ ಫಲಶೃತಿಯನ್ನು ಕುರಿತು ಹೀಗೆ ಹೇಳುತ್ತಾರೆ-ಈ ಪರಮಾನುಭವ ಬೋಧೆ ವೇದ-ವೇದಾಂತದ ಗೋಪ್ಯವಾದ ಅರ್ಥ ಪುರಾಣಗಳ ಮಾತ್ರ ಶ್ರುತಿಗಳ ಸಾರ, ಪರಮಾರ್ಥದ ತಿರುಳು, ತತ್ವರಹಸ್ಯ, ಈ ಗ್ರಂಥ ಸಂಸ್ಕೃತವಲ್ಲ; ಪ್ರಕೃತ (ಕನ್ನಡ). ಆದರೂ ಈ ಕೃತಿಯಲ್ಲ ಸಕಲವೇದ-ವೇದಾಂತ-ಪುರಾಣಾಗಮ ಪ್ರತಿಪಾದಿತ. ಬ್ರಹ್ಮವಿದ್ಯೆಯ, ವಿಜ್ಞಾನವಿರುವುದರಿಂದ, ಇದನ್ನು ಅನುರಾಗದಿಂದ, ಓದುವ ಜನರಿಗೆ (ಆಸಕ್ತಿಯಿಂದ ಕೇಳುವ ಸಾಧಕರಿಗೆ ಮುದದಿಂದ ಬೋಧಿಸುವ ಬುಧರಿಗೆ ಶಂಭುಕೃಪೆಯಿಂದ) ಮುಕ್ತಿಪದ ಸಿದ್ಧಿಸುವುದು. ಈ ಕೃತಿಯಲ್ಲಿ ೭ ಸಂಧಿ-೧೨೨ ಸೂತ್ರ-೮೮೫ ಪದಗಳಿವೆ.

ಬೋಧನಾ ವೈಖರಿ

ಪರಮಾನುಭವ ಬೋಧೆಯ ಅಧ್ಯಯನದಿಂದ ಈ ಕೃತಿಯ ಒಳ ನೋಟಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಸಾವಿರಾರು ವರ್ಷಗಳಿಂದ ಹರಿದು ಬಂದ ಅದ್ವೈತದ ವಿಚಾರಧಾರೆ ನಿಜಗುಣರಲ್ಲಿ ತುಸು ಭಿನ್ನತೆಯನ್ನು ಪಡೆದು ವೈಶಿಷ್ಟ್ಯಪೂರ್ಣವಾಗಿದೆ. ದೇಶಿ ನುಡಿ, ಭಾಷೆಯ ಪ್ರದೇಶಿಕರೂಪ, ಉಪಮಾನ, ರೂಪಕ, ಶ್ಲೇಷ, ದೃಷ್ಟಾಂತಗಳು ತತ್ವಕ್ಕೆ ಕಾವ್ಯದ ಬಗ್ಗೆ ಲೇಪಿಸಿ, ಚಿತ್ತಾಕರ್ಷಕವಾಗುವಂತೆ. ಜನರ ಮನಸ್ಸಿಗೆ ಆಧ್ಯಾತ್ಮನಾಟುವಂತೆ, ಕಾಂತಾಸಂಹಿತದ ಧಾಟಿಯಲ್ಲ, ಪ್ರತಿಪದ್ಯದಲ್ಲೂ ಪತ್ನಿಯನ್ನು ಪತಿಯು ಬಗೆ ಬಗೆಯ ವಿಶೇಷಣಗಳಿಂದ. ಸಂಬೋಧಿಸುತ್ತಾ ಹೇಳುವ ಕತೆ ನಿಜಕ್ಕೂ ವೈಶಿಷ್ಟ್ಯಪೂರ್ಣವಾಗಿದೆ. ನಿಜಗುಣರು ಬಳಸುವ ಮಾತು, ಪರಿಭಾಷೆ, ಧಾಟಿ, ನಮಗೆ ಆತ್ಮೀಯವಾಗುತ್ತಾ ಎಲ್ಲೋ ದೂರದ ಆಧ್ಯಾತ್ಮ ಹತ್ತಿರ ಬಂದಂತೆ ಭಾಸವಾಗುತ್ತದೆ. ಮೈತ್ರೇಯಿ ಇಲ್ಲಿ ಕೇಂದ್ರ ವ್ಯಕ್ತಿಯಾಗಿ, ನಿಮಿತ್ತ ಮಾತ್ರವಾಗಿ, ಇಡಿ ಮಾನವ ಜನಾಂಗಕ್ಕೆ ಆಧ್ಯಾತ್ಮ ಬೋಧನೆ ಮಾಡಿದಂತೆ ಭಾಸವಾಗುತ್ತದೆ. ಪದ್ಯಗಳ ಮಾತುಗಾರಿಕೆ, ಉಪದೇಶದ ವಿಧಾನ ಪತಿ ಪತ್ನಿಯರ ನಾಟಕೀಯ ಸಂಭಾಷಣೆ ಹೇಳುವ ಕೇಳುವ ವಿಷಯವನ್ನು ಆಕರ್ಷಕವಾಗಿಸುತ್ತದೆ.

ಆಧ್ಯಾತ್ಮದಂತಹ ನೀರಸ ಹಾಗೂ ಕ್ಲಿಷ್ಟವಾದ ವಿಷಯವನ್ನು ಸರಳವಾಗಿ ಸರಸವಾಗಿ ಮನೋಜ್ಞವಾಗಿ ವಿದ್ಯಾರ್ಥಿಗಳಿಗೆ ಬೋಧಿಸುವ ಅನುಭವಿ ಪರಿಣತ ಅಧ್ಯಾಪಕನ ಬೋಧನಾ ಕಲೆ ನಿಜಗುಣರಿಗೆ ಸಿದ್ಧಿಸಿದೆ. ಗಂಭೀರವಾದ ತತ್ವ ಚಿಂತನೆಯಿಂದ ಗಹನ ಸಿದ್ಧಾಂತವನ್ನು ಪ್ರತಿಪಾದಿಸುವ ಅವರ ವಿಚಾರಸರಣಿ ಪ್ರತಿಭಾವೈಖರಿ, ನಮ್ಮನ್ನು ಕ್ಷಣಕಾಲ ದಿಗ್ಭ್ರಾಂತರನ್ನಾಗಿ ಮಾಡುತ್ತಾರೆ. ಅವರ ತತ್ವ ಪ್ರತಿಪಾದನಾ ಶೈಲಿ, ಬಲ್ಲವರನ್ನು ತಲೆದೂಗಿಸಿ, ಗಾವಿಲರನ್ನು ಸಂತೈಸುತ್ತದೆ. ಸಂವಾದ ರೂಪದಲ್ಲಿ ವೇದಾಂತವನ್ನು ಸಕ್ರಮವಾಗಿ ಶಾಸ್ತ್ರೀಯವಾಗಿ ಕಾವ್ಯರೂಪದಲ್ಲಿ ನಿವೇದಿಸುವ ಪ್ರಕ್ರಿಯೆ ನಿಜಗುಣರಿಗೆ ಸಿದ್ಧಿಸಿದೆ. ಪ್ರಶ್ನೋತ್ತರ ರೂಪದ ಅನುಭವಸಾರ, ಗುರು ಶಿಷ್ಯ ಸಂವಾದ ರೂಪದ ಪರಮಾರ್ಥ ಗೀತೆ ಪತಿ-ಪತ್ನಿಯರ ಸಂವಾದ ರೂಪದ ಪರಮಾನುಭವ ಬೋಧೆಗಳು ಈ ಮಾತಿಗೆ ಉಜ್ವಲ ಉದಾಹರಣೆಗಳು.

ಬೋಧ ಪ್ರಕಾರಗಳಲ್ಲಿ ಪ್ರಭು ಸಂಮಿತ ಮಿತ್ರ ಸಂಮಿತ ಕಾಂತ ಸಂಮಿತಗಳೆಂದು ಮೂರು ವಿಧ. ವೈದಿಕ ಸಾಹಿತ್ಯ ಪ್ರಭು ಸಂಮಿತ, ಪುರಾಣ ಸಾಹಿತ್ಯ, ಮಿತ್ರ ಸಂಮಿತ, ಕಾವ್ಯವು ಕಾಂತ ಸಂಮಿತವೆಂದು ಕಾವ್ಯ ಮೀಮಾಂಸಕರ ಮಾತು. ಕಾಂತಾ ಸಂಮಿತ ಕಾವ್ಯಶಕ್ತಿ ನಿಜಗುಣರ ಆಧ್ಯಾತ್ಮ ಕೃತಿಗಳಿಗೆ ತುಂಬಾ ಸೌಂದರ್ಯವನ್ನು ತಂದಿದೆ, ನೀರಸವಾದದ್ದನ್ನು ರಸವತ್ತಾಗಿ ತಿಳಿಸುವ ಕಲೆ ನಿಜಗುಣರಲ್ಲಿ ಅನನ್ಯವಾಗಿದೆ.

ಬೋಧನಾ ಪದ್ಧತಿಯಲ್ಲಿ ಹಲವು ವಿಧಗಳಿವೆ. ಪ್ರಾಚೀನಕಾಲದಿಂದ ಸಿದ್ಧಾಂತವನ್ನು ಪ್ರತಿಪಾದಿಸಲು ಆರಂಭದಿಂದ ಹಂತ ಹಂತವಾಗಿ ಕೊನೆಯವರೆಗೂ ಹೇಳುವುದು

ಒಂದು ವಿಧಾನ. ನಮ್ಮಲ್ಲಿ ಕೆಲವು ಪ್ರಕರಣ ಗ್ರಂಥಗಳು, ಸಿದ್ಧಾಂತ ಗ್ರಂಥಗಳು ಈ ಪದ್ಧತಿಯನ್ನು ಅನುಸರಿಸಿವೆ. ಪಾಶ್ಚಾತ್ಯ ತತ್ತ್ವಜ್ಞರಾದ ಕಾಂಟ್ ಸ್ಪಿನೋಜಾ-ಮತ್ತು ಹೆಗೆಲ್ ಮುಂತಾದವರು ಇದೇ ಕ್ರಮವನ್ನು ಅನುಸರಿಸಿದ್ದಾರೆ.

ಕಥಾ ರೂಪದಲ್ಲಿ ತತ್ತ್ವ ಬೋಧನೆ ಮಾಡುವುದು ಇನ್ನೊಂದು ಕ್ರಮ, ಆಧ್ಯಾತ್ಮ ಜನಸಾಮಾನ್ಯರಿಗೆ ನೀರಸ ಕಹಿಮಾತ್ರೆ ಇದ್ದಂತೆ, ನುಂಗಲು ಯಾರಿಗೂ ಇಷ್ಟವಿಲ್ಲ. ಇದನ್ನು ಸಿಹಿ ಮೂಲಕ ಸೇವಿಸಿದರೆ ಹಿತಕರ. ತತ್ತ್ವವನ್ನು ಕಥೆಯಲ್ಲಿಟ್ಟು ಹೇಳಿದಾಗ ಎಲ್ಲರೂ ಸ್ವೀಕರಿಸುತ್ತಾರೆ. ಸುಲಭ ಗ್ರಾಹ್ಯ ಜನ ಕಥೆಗೆ ಮಾರು ಹೋದಂತೆ ಕಂಡರೂ, ಪರೋಕ್ಷವಾಗಿ, ತತ್ವ ಅವರ ಮನಸ್ಸಿನಲ್ಲುಳಿದು ಪರಿಣಾಮವನ್ನುಂಟುಮಾಡುತ್ತದೆ. ಭಾರತದಲ್ಲಿ ಶ್ರೀಸಾಮಾನ್ಯರಲ್ಲಿ ತತ್ವ ಪ್ರಚಾರವಾದದ್ದು ಹೀಗೆ.

ಇನ್ನು ಪ್ರಶ್ನೋತ್ತರ ಮೂಲಕ ತತ್ತ್ವಬೋಧನೆ ಮಾಡುವುದು ಮತ್ತೊಂದು ವಿಧಾನ. ಈ ವಿಧಾನದ ತಂತ್ರ ಅತ್ಯಂತ ಆಕರ್ಷಕವಾದದ್ದು. ಇಲ್ಲಿ ಶಿಷ್ಯ ಪ್ರಶ್ನಿಸುತ್ತಾನೆ; ಗುರು ಉತ್ತರ ಹೇಳುತ್ತಾನೆ ಮತ್ತು ಶಿಷ್ಯನ ಸಂದೇಹ ಪರಿಹರಿಸುತ್ತಾನೆ. ಇದು ಮುಖಾಮುಖಿ ಸಂಬಂಧ. ಇಲ್ಲಿ ನಡೆಯುವುದು ಬರೀ ತತ್ತ್ವದ ಪ್ರಶ್ನೋತ್ತರವಲ್ಲ; ಒಂದು ರೀತಿಯ ಸಂವಾದ, ಸಿದ್ಧಾಂತ ಶಿಖಾಮಣಿ-ಭಗವದ್ಗೀತೆ-ಯೋಗವಾಶಿಷ್ಟ ಮುಂತಾದ ಪ್ರಸಿದ್ಧ ಧಾರ್ಮಿಕ ಗ್ರಂಥಗಳಲ್ಲಿ ಈ ವಿಧಾನವಿದೆ. ಇದು ತತ್ವಪ್ರತಿಪಾದನೆಗೆ ಅತ್ಯಂತ ಸೂಕ್ತವಾದ ಮಾರ್ಗ. ಗುರು-ಶಿಷ್ಯ ಸಂವಾದದಲ್ಲಿ ಜಿಜ್ಞಾಸುವಿಗೆ ಮಾತ್ರ ಪ್ರವೇಶವಿರುತ್ತದೆ. ಅಲ್ಲಿ ಗುರುಶಿಷ್ಯರ ಅನ್ಯೋನ್ಯ ಸಂಬಂಧವೂ ಇರುತ್ತದೆ. ಆಧ್ಯಾತ್ಮಿಕ ಜೀವನದಲ್ಲಿ ಈ ಪ್ರತ್ಯಕ್ಷ ಸಂಬಂಧ ಅತೀ ಮುಖ್ಯವಾಗುತ್ತದೆ. ಇಲ್ಲಿ ಗುರು-ಶಿಷ್ಯರ ಮಧ್ಯೆ ಭಾಷಾ ಮಾಧ್ಯಮವಿದ್ದರೂ, ಅಕ್ಷರರೂಪದ ಭಾಷೆಯನ್ನು ಮೀರಿ, ಮೌನರೂಪದ ಗುರುವಿನ ವ್ಯಕ್ತಿತ್ವ ಶಿಷ್ಯನ ಮೇಲೆ ತನ್ನ ಪ್ರಭಾವದ ಮುದ್ರೆಯನ್ನು ಒತ್ತಿ, ಅವನ ಸಂದೇಹಗಳನ್ನು ಪರಿಹರಿಸುತ್ತದೆ. ತಾತ್ವಿಕ ವಿಷಯದ ಬೋಧನೆಗಂತೂ ಪ್ರಶಾಂತ ವಾತಾವರಣ ಅಗತ್ಯ. ನಿರ್ಜನ ಪ್ರದೇಶ ಅತ್ಯಂತ ಸೂಕ್ತ. ಶಿಷ್ಯ ಗುರುವಿನ ಸಮೀಪದಲ್ಲಿ ಕುಳಿತು ಕೇಳುವುದೇ ಪರಿಣಾಮಕಾರಿಯಾದದ್ದು. ಹೀಗೆ ಕೇಳಿದ್ದೇ ಉಪನಿಷತ್ತು. ಉಪ ಹತ್ತಿರ ನಿಷತ್ ಕುಳಿತು ಎಂದೇ ಆ ಪದದ ನಿರ್ವಚನ. ಆಧ್ಯಾತ್ಮ ಉಪದೇಶದಲ್ಲಿ ಗುರು-ಶಿಷ್ಯ ಸಂಬಂಧ ಪವಿತ್ರ ಸಂಬಂಧ. ಇಲ್ಲಿ ಗುರು ಶಿಷ್ಯನಿಗೆ ಕೇವಲ ತತ್ವೋಪದೇಶ ಮಾಡುವುದಿಲ್ಲ; ತನ್ನ ಸಾಕ್ಷಾತ್ಕಾರದ ಶಕ್ತಿಯನ್ನೇ ಪ್ರಧಾನ ಮಾಡುತ್ತಾನೆ. ಇದು ಭಾರತೀಯರ ಪವಿತ್ರ ಪ್ರಾಚೀನ ಗುರು-ಶಿಷ್ಯ ಪರಂಪರೆಯ ವಿಧಾನ. ಪರಮಾನುಭವಬೋಧೆಯಲ್ಲಿ ನಿಜಗುಣರು ಉಪನಿಷತ್ತಿನ ತಂತ್ರವನ್ನೇ ಮಾದರಿಯಾಗಿಟ್ಟುಕೊಂಡಿದ್ದಾರೆ. ಇಲ್ಲಿ ಏಕಾಂತ ಸ್ಥಳದಲ್ಲಿ, ಪ್ರಶಾಂತ ಪರಿಸರದಲ್ಲಿ ಗುರುರೂಪದಲ್ಲಿ ಆಧ್ಯಾತ್ಮ ಶಿರೋಮಣಿ ಯಾಜ್ಞವಲ್ಕ್ಯರು ಕುಳಿತು, ಶಿಷ್ಯರೂಪದಲ್ಲಿ ಪರಮಪ್ರಿಯ ಸತಿ, ಆಧ್ಯಾತ್ಮ ಅನುರಾಗಿಣಿ, ಮೈತ್ರೇಯಿಗೆ ಅದ್ವೈತ ತತ್ವವನ್ನು

ಬೋಧಿಸುತ್ತಾರೆ. ಪ್ರತಿ ಪದ್ಯದಲ್ಲೂ ವಿದ್ವದ್ರಸಿಕರಾದ ಯಾಜ್ಞವಲ್ಕ್ಯರು ಪತ್ನಿಯನ್ನು ವಿಧ–ವಿಧವಾದ ವಿಶೇಷಣಗಳಿಂದ ಸಂಬೋಧಿಸಿ ಬೋಧಿಸುವ ವೈಖರಿಯನ್ನು ಕಂಡಾಗ, ನಿಜಗುಣರು ಚಿತ್ರಿಸಿದ ಈ ಗುರು–ಶಿಷ್ಯ ಸಂವಾದದಲ್ಲಿ ಆಧ್ಯಾತ್ಮಿಕ ಶೃಂಗಾರ ಭಾವವನ್ನೇ ಕಾಣುತ್ತೇವೆ. ನಿಜಗುಣರ ರಸಿಕತೆ ಸ್ಪಷ್ಟವಾಗಿ ಕಂಡುಬರುತ್ತದೆ. ಉದಾಹರಣೆಗೆ ಯಾಜ್ಞವಲ್ಕ್ಯರ ಬಾಯಿಯಿಂದ ಪತ್ನಿಗೆ ಸಂಬೋಧಿಸುವ ಪದಗಳು ಹೀಗಿವೆ. ಸರಸಿಜದಳ ನೇತ್ರೆ ಇನಿಯಳೆ, ಮಾನಿನಿ, ರಾಜೀವದಳನೇತ್ರೇ, ಸುನೀರೇ, ಕಲ್ಪಭೂರುಹೆ, ಪಲ್ಲವಾಧರೆ, ಕಮಲಾಸ್ಯೆ, ಹೆಂಗಳರನ್ನೆ, ಅಂಚೆನಡೆಯುಳೆ, ತಳಿರಡಿಯುಳೆ, ತೋರುಮುಡಿ ಯಳೇ, ಹೆಂಗರಸಿ, ಗಜಿಯಾನೆ, ಘಟಕುಚೆ, ಘನನಿತಂಬಿನಿ, ತನು ಮಧ್ಯೆ, ಇಂತಹ ದೇಸೀಯ ಭಾಷಾ ಸೊಗಸಿನಿಂದ ತತ್ವಬೋಧನೆ ಮಾಡುವ ಪರಿ, ಓದುಗರಲ್ಲಿ ಹಾಗೂ ಕೇಳುಗರಲ್ಲಿ ಅತ್ಯಂತ ಕುತೂಹಲವನ್ನುಂಟುಮಾಡುತ್ತದೆ. ಇಲ್ಲಿ ಪ್ರಯೋಗಿಸುವ 'ಹೆಂಗಳರನ್ನೆ' 'ಅಂಚೆನಡೆಯುಳೆ' ತಳಿರಡಿಯುಳೆ, ತೋರುಮುಡಿಯುಳೆ, ಹೆಂಗರಸಿ, ನಿರಿಗುರುಳಬಲೆ, ಸೋಮನಡಿಯುಳೆ, ಈ ಪದಗಳು ಶುದ್ಧ ಕನ್ನಡ ದೇಸಿ ಪದಗಳು. ಇವು ನಿಜಗುಣರ ಟಂಕಸಾಲೆಯಲ್ಲಿ ತಯಾರಿಸಿದ ಶಬ್ದನಾಣ್ಯಗಳು. ನಿಜಗುಣರು ಇಂತಹ ಕಡೆ ನಮಗೆ ಭಾಷಾಜನಕರಾಗಿ ಕಾಣುತ್ತಾರೆ. ಕನ್ನಡ ಭಾಷೆಯ ಬೆಳವಣಿಗೆಯ ನಿಟ್ಟಿನಲ್ಲಿ ನಿಜಗುಣರ ಪಾತ್ರವೂ ವಿಶಿಷ್ಟವಾಗಿದೆ. ಆಧ್ಯಾತ್ಮದಂತಹ ಶುಷ್ಕ ವಿಚಾರವನ್ನು ಹೇಳು ವಾಗಲೂ ನಿಜಗುಣರು ತಮ್ಮ ರಸಿಕತೆಯನ್ನು ಮರೆದಿದ್ದಾರೆ. ಗಂಭೀರವಾದ ಅದ್ವೈತ ವನ್ನು ಪ್ರತಿಪಾದಿಸುತ್ತ ವೈರಾಗ್ಯದ ಪಥದತ್ತ ನಿಜಗುಣರ ಬದುಕು ಸಾಗಿದ್ದರೂ, ತಮ್ಮ ಹಿಂದಿನ ಗೃಹಸ್ಥಾಶ್ರಮದ ಪತ್ನಿಯೊಂದಿಗೆ ಕಳೆದ ಅನುರಾಗ–ಶೃಂಗಾರ ಭಾವಗಳು ಎಲ್ಲೋ ಮನದಾಳದಲ್ಲಿ ಅವಿತುಗೊಂಡಿದ್ದವೆಂದು ತೋರುತ್ತದೆ. ಸಂಭಾಷಣಾರೂಪದ ಪತಿ–ಪತ್ನಿ ಸಂವಾದ ರಚನೆಯ, ನಾಟಕೀಯ ಶೈಲಿಯ ಈ ಆಧ್ಯಾತ್ಮದ ಕೃತಿ, ಉದ್ದಕ್ಕೂ ಓದುಗನನ್ನು ಎಚ್ಚರಿಸುತ್ತಾ ಹೋಗುತ್ತದೆ. ಬೇಸರವನ್ನುಂಟುಮಾಡುವುದಿಲ್ಲ. ಅಂತಹ ಬೋಧನಾ ವೈಖರಿಯ ವೈಶಿಷ್ಟ್ಯವನ್ನು ನಾವು ಇಲ್ಲಿ ಕಾಣುತ್ತೇವೆ. ಮೈತ್ರೇಯಿ ಇಲ್ಲಿ ನಿಮಿತ್ತ ಮಾತ್ರ. ಆಕೆ ಮಾನವ ಜನಾಂಗದ ಪ್ರತಿನಿಧಿಯಾಗಿ ಪ್ರಶ್ನಿಸುತ್ತಿದ್ದಾಳೆ ಎಂದು ಭಾವಿಸಿದರೆ ಇಲ್ಲಿಯ ಉಪದೇಶ ಮೈತ್ರೇಯಿಗೆ ಮಾತ್ರವಲ್ಲ; ಇಡೀ ಮಾನವ ಜನಾಂಗಕ್ಕೆ ಅನ್ವಯಿಸುತ್ತದೆ. ತಮ್ಮ ಬದುಕಿನ ಸಮಸ್ಯೆಗಳನ್ನು ಕುರಿತು ಇಂದಿಗೂ ನಾವು ಸಂದೇಹ ದಿಂದ ಕುತೂಹಲದಿಂದ ಪ್ರಶ್ನಿಸಬೇಕಾದ ಪ್ರಶ್ನೆಗಳಿಗೆ ಈ ಗ್ರಂಥದಲ್ಲಿ ಕುತೂಹಲಭರಿತ ವಾದ ಸಮುಚಿತವಾದ ಉತ್ತರಗಳು ದೊರೆಯುತ್ತವೆ. ಆದ್ದರಿಂದ ಕನ್ನಡದ ಈ 'ಪರ ಮಾನುಭವಬೋಧೆ' ಹಿಂದೆ–ಇಂದು ಹಾಗೂ ಮುಂದೆ ಎಂದೆಂದಿಗೂ ಪ್ರಸ್ತುತವಾಗಬಲ್ಲ ಆಧ್ಯಾತ್ಮ ಕೃತಿ ಎಂದರೆ ಅತಿಶಯದ ಮಾತಲ್ಲ.

ವಿವೇಕ ಚಿಂತಾಮಣಿ-ಒಂದು ಅವಲೋಕನ

—ಶತಾವಧಾನಿ ಆರ್. ಗಣೇಶ್

೧

ವಿಶ್ವಕೋಶಗಳು ಈ ಕಾಲಕ್ಕೆ ಮಾತ್ರವಲ್ಲ, ಬಹುಪೂರ್ವಕ್ಕೇ ತಮ್ಮ ಅಂತಃ ಸ್ವರೂಪವನ್ನೂ, ಸದುದ್ದೇಶಗಳನ್ನೂ ಸ್ಪಷ್ಟಪಡಿಸಿಕೊಂಡು ರೂಪಿತವಾಗಿದ್ದವು. ಪಾಶ್ಚಾತ್ಯ ಪ್ರಪಂಚದಲ್ಲಿ ಸುಮಾರು ಎರಡುಸಾವಿರ ವರ್ಷಗಳಷ್ಟು ಹಿಂದೆಯೇ ರೋಮಿನ ಇತಿಹಾಸಕಾರ ಪ್ಲಿನಿಯು ಮೂವತ್ತೇಳು ಸಂಪುಟಗಳಲ್ಲಿ ಸುಮಾರು ೨೦,೦೦೦ ವಿಷಯ ಗಳನ್ನು ನಿರೂಪಿಸುವ 'ನೈಸರ್ಗಿಕ ಇತಿಹಾಸ'ವೆಂಬ ವಿಶ್ವಕೋಶಾತ್ಮಕ ಕೃತಿಯನ್ನು ರಚಿಸಿದ್ದನೆಂದು ತಿಳಿದುಬರುತ್ತದೆ. ಈ ಗ್ರಂಥಕ್ಕಾಗಿ ಸುಮಾರು ೪೫೦ ಸುಪ್ರಸಿದ್ಧ ಶಾಸ್ತ್ರಜ್ಞರ ಕೃತಿಗಳನ್ನು ಆಧರಿಸಲಾಗಿತ್ತೆಂದೂ ವಿದಿತವಾಗಿದೆ. ಕ್ರಿ. ಶ. ಹದಿನಾರನೆಯ ಶತಾಬ್ದಿಯಿಂದ ಮೊದಲ್ಗೊಂಡು ಪಾಶ್ಚಾತ್ಯರಲ್ಲಿ ವಿಶ್ವಕೋಶಗಳ ಪರಂಪರೆಯೇ ವಿಸ್ತೃತ ವಾಗಿ ಬೆಳೆದುಬಂದಿದೆ. ಚೀನಾದೇಶದಲ್ಲಿಯೂ ಸಹ ಕ್ರಿ. ಶ. ೧೭೨೧ರ ಹೊತ್ತಿಗೆ ಸುಮಾರು ೫೦೨೦ ಸಂಪುಟಗಳಲ್ಲಿ ಸಿದ್ಧವಾದ ಅತಿಬೃಹದ್ವಿಶ್ವಕೋಶವು ವಿಸ್ಮಯಾವಹ ವಾಗಿ ನೆಲೆಗೊಂಡಿತ್ತು. ಈಚೆಗೆ ಪ್ರತಿಯೊಂದು ವಿಶಿಷ್ಟ ಕ್ಷೇತ್ರಗಳಲ್ಲಿಯೂ ಬೃಹದ್ಗಾತ್ರದ ವಿಶ್ವಕೋಶಗಳು ನಾನಾದೃಕ್ಕೋನಗಳಿಂದ ರೂಪಿತವಾಗಿ ಬರುತ್ತಲೇ ಇವೆ. ವಸ್ತುಕೋಶ, ವಿಷಯಕೋಶ, ತಾಂತ್ರಿಕಕೋಶ, ಪರಿಭಾಷಾಕೋಶ ಮೊದಲಾದ ಹಲವು ಪ್ರಧಾನ ವಿಭಾಗಗಳಾಗಿ ಮಾತ್ರವಲ್ಲದೆ ಪ್ರತಿಯೊಂದು ಶಾಸ್ತ್ರವನ್ನೂ, ಕಲೆಯನ್ನೂ, ಬಗೆಬಗೆಯ ಚಿಕಿತ್ಸದೃಷ್ಟಿಯಿಂದ ಪರಾಮರ್ಶಿಸಿ ಅಭಿಜ್ಞರಿಂದ ವಿಶ್ವಕೋಶಗಳು, ಬೆಳೆದು ಬಂದಿವೆ. ಈ ಮೊದಲು ಏಕವ್ಯಕ್ತಿರಚನೆಗಳೇ ಆಗಿದ್ದರೂ ಬಹುತೇಕ ವಿಶ್ವಕೋಶಗಳು ಈಚೀಚೆಗೆ ಸಾಂಸ್ಥಿಕ ಹಾಗೂ ಸಾಮೂಹಿಕ ನಿರ್ಮಿತಿಗಳಾಗಿವೆ. ಇದಕ್ಕೆ ಮುಖ್ಯಕಾರಣ ವಿಶ್ವಕೋಶ ಗಳ ವಸ್ತುವ್ಯಾಪ್ತಿಯ ಅಸೀಮತೆಯೇ ಆಗಿದೆ. ಆದರೆ ಇಂದಿಗೂ ಸಹ ವಿವಿಧಸ್ತರಗಳ ಇತಿ-ಮಿತಿಗಳೊಂದಿಗೆ ಏಕವ್ಯಕ್ತಿರಚಿತ ವಿಶ್ವಕೋಶಗಳು ಕ್ವಾಚಿತ್ಯವಾಗಿಯೇ ಆಗಲಿ ಬರುತ್ತಿರುವುದು ಸ್ಮರಣೀಯ.

ಪ್ರಸ್ತುತ ನಾವಿರುವ ಮಾಹಿತಿಯ ಪ್ರಪಂಚದಲ್ಲಿ (World of information) ಪ್ರಾಚೀನ ಕೋಶಗಳ ವಿಷಯಸಂಪತ್ತಿ ತೀರ ಕಡಿಮೆ ಎನ್ನಿಸಬಹುದಾದರೂ ಹಿಂದಿನವರ ಸಮಾಜ ಹಾಗೂ ಜ್ಞಾನಸಾಧನಗಳ ವ್ಯಾಪ್ತಿ-ಅವಶ್ಯಕತೆಗಳನ್ನು ಗಮನಿಸಿದರೆ, ಅವರ ಎಡರು-ತೊಡರುಗಳ ಸಂಕೀರ್ಣತೆಯನ್ನು ಪರಿಭಾವಿಸಿದರೆ ನಮಗೆ ಆ ಸಮುದಾಯದ

ಪ್ರಯತ್ನಗಳ ಮಹತ್ತ್ವ-ಸಾಫಲ್ಯಗಳ ಅರಿವಾಗದಿರದು. ಐತಿಹಾಸಿಕವಾಗಿ ಕೇವಲ ದಾಖಲೆಯ ದೃಷ್ಟಿಯಿಂದ ಮಾತ್ರವಲ್ಲದೆ ಪ್ರಾಯೋಗಿಕವಾಗಿಯೂ ಸಹ ಪ್ರಯೋಜನಾತ್ಮಕವೂ, ಸ್ಫೂರ್ತಿಕಾರಿಯೂ ಆದ ಚಿರಂತನ ಪ್ರಯತ್ನ ನಮಗೆ ಅನೇಕ ಅಧ್ಯಯನಗಳಲ್ಲಿ ಮಾರ್ಗದರ್ಶಿಯಾಗದಿರದು.

೨

ಭಾರತೀಯರಿಗೆ ವಿಶ್ವಕೋಶಗಳು ಹೊಸತೇನಲ್ಲ. ಪ್ರತ್ಯೇಕವಾಗಿ ವಿಶ್ವಕೋಶಗಳು ಮಾತ್ರವಲ್ಲದೆ ಪ್ರತಿಯೊಂದು ಜನಪ್ರಿಯ ಹಾಗೂ ಶಾಶ್ವತಮೌಲ್ಯಗಳ ಕೃತಿಯೂ ವಿಶ್ವಕೋಶದ ಆಯಾಮವನ್ನು ಹೊಂದಿ ಬಳಕೆಗೆ ಬಂದಿರುವುದು ಈ ನೆಲದ ವಿಶೇಷತೆ. ಮಹಾಭಾರತ, ಭಾಗವತ, ಅಗ್ನಿಪುರಾಣ ಮೊದಲಾದ ಯಾವುದೇ ತತ್ಸದೃಶಕೃತಿಯನ್ನು ಗಮನಿಸಿದರೂ ಈ ಸತ್ಯ ಸ್ಪಷ್ಟವಾಗದಿರದು. ಇದಕ್ಕೆ ಕಾರಣ ಜನತೆಯು ಯಾವುದೇ ಬಗೆಯ ಪ್ರಮತ್ತತೆಯಿಂದಾಗಲಿ ಮೂಲಭೂತವೂ, ಸರ್ವಗ್ರಾಹಿಯೂ ಆದ ಜ್ಞಾನರಾಶಿಯನ್ನು ಶಾಸ್ತ್ರೀಯವೆಂಬ ಅಳುಕಿನಿಂದಾಗಿ ಹೊಂದದಿರುವ ಹಾನಿಗೆ ಪಾತ್ರವಾಗದಿರಲೆಂದು ಪ್ರಾಚೀನರಾದ ವಿಶಾಲಬುದ್ಧಿಯ ಸೂರಿಗಳು ಸಂಕಲ್ಪಿಸಿದ್ದ ಆಗಿದೆ. ಆದುದರಿಂದಲೇ ಇಂದು ನವೀನ-ಚಿಕಿತ್ಸಕ-ಪಾರ್ಥಕ್ಯಪ್ರಣಯಿ ಸಂಶೋಧಕರಿಗೆ ಒಗಟಿನಂತೆಯೂ, ಅಸಂಬದ್ಧಕಗ್ಗಗಳಂತೆಯೂ ಕಾಣುವ ನಮ್ಮ ಪುರಾಣೇತಿಹಾಸಗಳು; ಪರಿಶುದ್ಧವಾದ ಶ್ರದ್ಧಾಪರಿಶಿಷ್ಮಿತ ಜಿಜ್ಞಾಸುವಿಗೆ ತಿಳಿಯಾಗಿ, ರಂಜಕವಾಗಿ, ಜ್ಞಾನ-ವಿಜ್ಞಾನ ಬೋಧಪ್ರದವಾಗಿ, ಆಹಾಮುತ್ರ ಸೇತುವಾಗಿ ಕಂಡಿವೆ.

ವೇದಸಂಹಿತೆಗಳಿಗೆ ಉಪಷ್ಟಂಭಕವಾದ ಬ್ರಾಹ್ಮಣಗಳಲ್ಲಿಯೇ ವಿಶ್ವಕೋಶಗಳ ಸೆಲೆಯುಂಟು. ವೇದವ್ಯಾಸರು ರೂಪಿಸಿದರೆನ್ನಲಾದ ಆದಿಮ 'ಪುರಾಣಸಂಹಿತೆ'ಯು ಈಗ ನಷ್ಟವಾಗಿದ್ದರೂ ಪ್ರಸ್ತುತ ಅಷ್ಟಾದಶ ಮಹಾಪುರಾಣ-ಉಪಪುರಾಣಗಳಿಗೆ ಮೂಲ ಮಾತೃಕೆಯೆನ್ನಲಾಗಿದೆ. ಈ ಕೃತಿ ಪ್ರಾಯಶಃ ಮಹಾವಿಶ್ವಕೋಶವೇ ಸರಿ. ವಿಸ್ತಾರವಾಗಿ ನಾನಾ ಶಾಖೋಪಶಾಖೆಗಳ ಮುಖಾಂತರ ಚದುರಿಹೋಗುತ್ತಿರುವ ವೈಷಯಿಕ ಜ್ಞಾನವನ್ನು ಮತ್ತೆ ಮತ್ತೆ ಮುಷ್ಟಿಗ್ರಾಹ್ಯವಾಗಿಸಿಕೊಂಡು, ಆವರೆಗಿನ ಅಧ್ಯಯನಗಳಿಗೆ ನೆಲೆ-ಬೆಲೆಗಳನ್ನು ಕಲ್ಪಿಸಿ, ತತ್ಕಾಲಪರ್ಯಂತದ ಸಮಸ್ತವಿಚಾರಗಳನ್ನು ಸಾರಾಸಾರ ವಿವೇಕದಿಂದ ಸಂಗ್ರಹಿಸಿ ಭಾವಿವೃದ್ಧಿಗೆ ದೋಹದವನ್ನೀಯುವುದೇ ವಿಶ್ವಕೋಶಗಳ ಜನನ ಹೇತುವಾಗಿರುವಾಗ; ವೇದವಾಙ್ಮಯದ ಮಹಾರಾಶಿಯ ಬಳಿಕ, ಸೂತ್ರಾಕೃತಿಯಲ್ಲಿ ಬಂದ ವೇದಾಂಗಗಳ ಬಳಿಕ ಪ್ರಾಯಶಃ ಹಲವು ಹತ್ತು ಕ್ರೋಡೀಕರಣ ಕೋಶಗಳು ಬಂದಿದ್ದಿರಬೇಕು. ಆದರೆ ಬಹುಶಃ ಅವೆಲ್ಲ ಕಾಲಗರ್ಭದಲ್ಲಿ ಕರಗಿ ಹೋದವೇನೋ ಕ್ರಿ.ಪೂ. ೩-೪ನೆಯ ಶತಮಾನಗಳ ನಡುವೆ ಇದ್ದ ಕೌಟಿಲ್ಯನ ಅರ್ಥಶಾಸ್ತ್ರವು ಅತ್ಯದ್ಭುತವಾದ ಕೃತಿ. ಹದಿನೆಂಟು ಅಧಿಕರಣಗಳ ಈ ಮಹಾಗ್ರಂಥದಲ್ಲಿ ಆನುಷಂಗಿಕವಾಗಿ ಆ ಕಾಲದ ಎಲ್ಲ ಲೌಕಿಕವಿದ್ಯೆಗಳ ವಿಚಾರವೂ ವೈಜ್ಞಾನಿಕವಾಗಿ ಬಂದಿದೆ. ರಾಜನೀತಿ-ಅರ್ಥಶಾಸ್ತ್ರಗಳ

ಹಿನ್ನೆಲೆಯಲ್ಲಿ ರೂಪಿತವಾದ ಸರ್ವಶಾಸ್ತ್ರರಸಾಯನವೆಂದು ಇದನ್ನು ಪರಿಗಣಿಸಬಹುದು. ಬಳಿಕ ಬೌದ್ಧ-ಜೈನಮತಗಳ ತತ್ತ್ವಕೋಡೀಕರಣ-ವೈಶದ್ಯ-ಪ್ರಸಾರಗಳಿಗಾಗಿ ಹಲವು ಕೋಶಗಳು ಬಂದಿದ್ದಿರಬಹುದು. ಜಾತಕಕಥೆಗಳನ್ನು ಅದೊಂದು ಬಗೆಯ ಸಾಂಸ್ಕೃತಿಕ-ಧಾರ್ಮಿಕ ವಿಶ್ವಕೋಶಗಳೆಂದರೆ ತಪ್ಪಲ್ಲ. ಅರ್ಧಮಾಗಧಿ ಹಾಗೂ ಪಾಲಿಭಾಷೆಗಳಲ್ಲಿಯೂ ಹೀಗೆ ಬೆಳೆದ ಬಳಿಕ ವೈದಿಕ ಮತ ಪುನರುಜ್ಜೀವನಕ್ಕಾಗಿ ವಿಕಸಿತವಾದ ಶ್ರೀಮದ್ರಾಮಾಯಣ ಮಹಾಭಾರತಗಳು ತಮ್ಮ ಮೂಲಕಥಾಸ್ರೋತಸ್ಸಿಗೆ ನಾನಾ ಶಾಸ್ತ್ರಗಳ, ಪುರಾಣಗಳ, ಅನುಭಾವಿಕಾಂಶಗಳ ಉಪನದಿಗಳನ್ನು ಸೇರಿಸಿಕೊಂಡು ವಿಶಾಲವಾಗಿ ಹರಿದು ಭಾರತೀಯ ಜನಜೀವನಕ್ಕೆ ಸಂಜೀವನವಾದವು.

ಈ ರೀತಿ ಅನ್ಯಾಪದೇಶಸ್ವರೂಪದಿಂದ ನಿಬದ್ಧವಾದ ವಿಶ್ವಕೋಶದ ಚಹರೆಗಳು ಮುಂದೆ ಅಭಿಜಾತ ಸಂಸ್ಕೃತಸಾಹಿತ್ಯದಲ್ಲಿ ಮತ್ತಷ್ಟು ಶ್ರೀಮಂತವಾದವು. ಗುಪ್ತರ ಸುವರ್ಣಯುಗದ ಹೊತ್ತಿಗೆ ಭಾರತವು ನಾನಾ ಕ್ಷೇತ್ರಗಳಲ್ಲಿ ಸಾಧಿಸಿದ ಮಹತ್ತೆ ಮೊದಲ ಬಾರಿಗೆ ವರಾಹಮಿಹಿರಾಚಾರ್ಯನ ಬೃಹತ್ಸಂಹಿತೆಯ ಮೂಲಕ ಪ್ರಕಟಿತವಾಯಿತು. ನೂರಆರು ಅಧ್ಯಾಯಗಳ ಈ ವಿಶ್ವಕೋಶವು ವಿಷಯವೈವಿಧ್ಯ-ವಿಸ್ತಾರಗಳಿಗಾಗಿ ಮಾತ್ರವಲ್ಲದೆ ಸಾಹಿತ್ಯ ಹಾಗೂ ಸೌಂದರ್ಯಗಳಿಗಾಗಿಯೂ ಹೆಸರಾಗಿದೆ. ಇದೇ ಗುಪ್ತ ಯುಗದಲ್ಲಿ ಪರಿಷ್ಕೃತವಾಗಿ ವಿಸ್ತೃತಿ-ವ್ಯಾಪ್ತಿಗಳನ್ನು ಹೊಂದಿದ ಪುರಾಣರಾಶಿಯಲ್ಲಿ ವಿಶ್ವಕೋಶಾತ್ಮಕವಾದವುಗಳಲ್ಲಿ ಅಗ್ನಿ-ಗರುಡ-ಮತ್ಸ್ಯ-ವಾಯು-ನಾರದ-ವಿಷ್ಣುಧರ್ಮೋತ್ತರಗಳು ಉಲ್ಲೇಖನೀಯ. ಸ್ಕಾಂದವಂತೂ ತೀರ್ಥ-ಕ್ಷೇತ್ರಮಹಾಕೋಶ. ಜೈನಪುರಾಣಗಳೂ ಸಹ ತಮ್ಮದೇ ಆದ ಭುವನಕೋಶಾದಿಗಳಿಂದಾಗಿ, ನಾನಾ ಶಾಸ್ತ್ರಪ್ರಸ್ತಾವದಿಂದಾಗಿ ವಿಶ್ವಕೋಶಸದೃಶಗಳಾಗಿವೆ. ಬೌದ್ಧರ ಲಲಿತವಿಸ್ತರವೇ ಮೊದಲಾದ ಗ್ರಂಥಗಳೂ ಸಹ ವಿಶ್ವಕೋಶತುಲ್ಯಗಳೇ. ಕಲೆಗಳ ಮಟ್ಟಿಗೆ ಹೇಳುವುದಾದರೆ ನಾಟ್ಯಶಾಸ್ತ್ರವೂ ವಿಶ್ವಕೋಶವೆನಿಸಿಕೊಳ್ಳುತ್ತದೆ. (ಇದರ ಕಾಲದ ಬಗೆಗೆ ಸಂದೇಹಗಳಿದ್ದರೂ ಗುಪ್ತಯುಗದ ಮೊದಲಿಗೆ ಭರತನ ಈ ಕೃತಿಗೆ ಇಂದಿನ ರೂಪ ಬಂದಿತ್ತೆಂಬುದರಲ್ಲಿ ಸಂದೇಹವಿಲ್ಲ.)

ಮುಂದೆ ಬಂದ ವಿಶ್ವಕೋಶ ಸದೃಶ ಕೃತಿಗಳಲ್ಲಿ ಜಿನಸೇನಾಚಾರ್ಯರ ಮತ್ತು ಗುಣಭದ್ರಾಚಾರ್ಯರ ಮಹಾಪುರಾಣವೂ, ಸೋಮದೇವನ ಯಶಸ್ತಿಲಕಚಂಪುವೂ ಗಣನೀಯವಾಗಿವೆ. ಇವುಗಳ ಬಳಿಕ ಬಂದ ಚಾಲುಕ್ಯ ಸೋಮೇಶ್ವರ ನಿರ್ಮಿತವಾದ ಅಭಿಲಷಿತಾರ್ಥಚಿಂತಾಮಣಿ ಅಥವಾ ರಾಜಮಾನಸೋಲ್ಲಾಸವೆಂಬ ನಾಮಾಂತರಗಳಿದ್ದು 'ಮಾನಸೋಲ್ಲಾಸ'ವೆಂದೇ ಪ್ರಸಿದ್ಧವಾದ ವಿಶದ ವಿಶ್ವಕೋಶವು ಶೈಲಿಯ ದೃಷ್ಟಿಯಿಂದ ಆಕರ್ಷಕವಲ್ಲದಿದ್ದರೂ ವಿಷಯ ವ್ಯಾಪ್ತಿ ಹಾಗೂ ಸ್ಪಷ್ಟತೆಗಳಿಂದಾಗಿ ತುಂಬ ಉಪಾದೇಯವೆನಿಸಿದೆ. ಸುಮಾರು ಎಂಟುಸಾವಿರ ಶ್ಲೋಕಗಳುಳ್ಳ ನೂರುಪ್ರಕರಣಗಳ ಈ ಕೃತಿ. ನಾನಾ ಲೌಕಿಕ ಶಾಸ್ತ್ರನಿಧಿಯೆನಿಸಿದೆ. ಈ ಯುಗದಲ್ಲಿಯೇ, ಸ್ವಲ್ಪ ಮುಂಚೆ ಜೀವಿಸಿದ್ದ (ಸುಮಾರು ಕ್ರಿ. ಶ. ೯೬೩) ಭಟ್ಟೋತ್ಪಲನು ಮಲ್ಲಿನಾಥನಂತೆಯೇ ಮಹಾವ್ಯಾಖ್ಯಾತೃ

ಈತನ ಬೃಹತ್ಸಂಹಿತಾವ್ಯಾಖ್ಯೆಯು ಕೇವಲ ಟಿಪ್ಪಣಿಯಂಥ ಉಪಷ್ಟಂಭಕ ಕೃತಿಯಾಗದೆ ಸ್ವತಂತ್ರವೂ, ಸುವಿಸ್ತಾರವೂ ಆದ ವಿಶ್ವಕೋಶವೇ ಆಗಿದೆ. ಮೂಲವನ್ನು ಅದ್ಭುತವಾಗಿ ಉಪಬೃಂಹಿಸಿ ನಾನಾ ಗ್ರಂಥಾಂತರಗಳಿಂದ ವಿಪುಲ ವಿಷಯಗಳನ್ನು ಕೂಡಿಸಿ ವಿವರಿಸಿದ ಭಟ್ಟೋತ್ಪಲನು ಸ್ವತಂತ್ರ ವಿಶ್ವಕೋಶದಂಥ ಮಹೋದ್ಯೋಗವನ್ನೇ ಮಾಡಿದ್ದಾನೆ.

ವಿಜಯನಗರ ಸಾಮ್ರಾಜ್ಯಾವಧಿಯಲ್ಲಿ ರೂಪಿತವಾಯ್ತೆನ್ನಲಾದ 'ಸೂತಸಂಹಿತೆ'ಯೂ ಒಂದು ಬಗೆಯ ವಿಶ್ವಕೋಶವೇ. ಇದರ ಕರ್ತೃ ಮಾಧವಾಚಾರ್ಯರೆಂಬುದು ಸಂದೇಹಾಸ್ಪದ. ಈ ಕೃತಿ ಹೆಚ್ಚಾಗಿ ಧಾರ್ಮಿಕ ಸ್ವರೂಪದ್ದಾಗಿದೆ. ವಿಜಯನಗರದ ಶ್ರೀ ಸಾಯಣಾಚಾರ್ಯರಿಂದ ಸಂಕಲನಗೊಂಡ ಅಲಂಕಾರ ಸುಧಾನಿಧಿ, ಆಯುರ್ವೇದ ಸುಧಾನಿಧಿ, ಯಜ್ಞತತ್ತ್ವಸುಧಾನಿಧಿ, ಪ್ರಾಯಶ್ಚಿತ್ತಸುಧಾನಿಧಿ ಮತ್ತು ಸುಭಾಷಿತ ಸುಧಾನಿಧಿಗಳು ವಿಶ್ವಕೋಶ ಭಾಗಗಳೆಂದೇ ಸ್ವೀಕಾರ್ಯ. ಇವುಗಳ ವಸ್ತು ಸಂಪತ್ತಿ ಹಾಗೂ ವಿಷಯ ನಿರೂಪಣೆ ಹೃದ್ಯವೂ, ಅನವದ್ಯವೂ ಆಗಿವೆ.

ಹದಿನಾರನೆಯ ಶತಾಬ್ದಿಯಲ್ಲಿ ತೋದರಾನಂದ (ಟೋಡರಾನಂದ ಎಂದೂ ನಾಮಾಂತರ) ಹೆಸರಾದ ತೋದರಮಲ್ಲ ಸಂಗ್ರಹಿತ ವಿಶ್ವಕೋಶವು ಎಪ್ಪತ್ತೈದುಸಾವಿರ ಶ್ಲೋಕಗಳಷ್ಟು ವಿಸ್ತಾರವಾಗಿದೆ. ಇದು ಹೆಚ್ಚಾಗಿ ಧರ್ಮಶಾಸ್ತ್ರ ಸಂಬಂಧಿತವಾಗಿದೆ. ಇದರಂತೆಯೇ ಧರ್ಮಶಾಸ್ತ್ರ ವಿಶ್ವಕೋಶಗಳಲ್ಲೆಲ್ಲಾ ಮೇರು ಕಲ್ಪವಾದದ್ದು ಹೇಮಾದ್ರಿಯ ಚತುರ್ವರ್ಗಚಿಂತಾಮಣಿ. ಇದಲ್ಲದೆ ಧರ್ಮಶಾಸ್ತ್ರವೊಂದನ್ನೇ ಅಧಿಕರಿಸಿ ರಚಿತವಾದ ಹತ್ತಾರು ವಿಶ್ವಕೋಶಾತ್ಮಕ ಕೃತಿಗಳಿವೆ. ನಿರ್ಣಯಸಿಂಧು, ಧರ್ಮಸಿಂಧು, ಸರಸ್ವತೀ ವಿಲಾಸ, ಸ್ಮೃತಿಚಂದ್ರಿಕಾ ಮೊದಲಾದವು ಸ್ಮರಣೀಯ.

ಹದಿನೇಳನೆಯ ಶತಮಾನದಲ್ಲಿ ಮತ್ತೆ ಕನ್ನಡನಾಡಿನಿಂದಲೇ ಮಾನಸೋಲ್ಲಾಸಕ್ಕೆ ಹೆಗಲೆಣೆಯಾಗುವಂಥ ಮತ್ತೊಂದು ವಿಶ್ವಕೋಶ ಹೊರಟಿತು. ಅದೇ ಕೆಳದಿಯ ಬಸವ ಭೂಪಾಲ ನಿರ್ಮಿತ 'ಶಿವತತ್ತ್ವರತ್ನಾಕರ'. ಸುಮಾರು ಮೂವತ್ತುಸಾವಿರ ಶ್ಲೋಕ ಗಳುಳ್ಳ ಈ ಮಹಾಗ್ರಂಥವು ಒಂಬತ್ತು ಕಲ್ಲೋಲಗಳಲ್ಲಿ ವಿಭಕ್ತವಾಗಿದ್ದು ೧೦೮ ತರಂಗ ಗಳ ಉಪವಿಭಾಗಗಳಲ್ಲಿ ನಾನಾ ವಿಚಾರಗಳನ್ನೊಳಗೊಂಡಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ ನೇತೃತ್ವದಲ್ಲಿ ಸಂಕಲಿತವಾದ ಶ್ರೀತತ್ತ್ವನಿಧಿಯು ಅತ್ಯಪೂರ್ವ ಚಿತ್ರಮಯ ವಿಶ್ವಕೋಶ. ಇದೇ ಕಾಲದ ಹಾಸನದ ರಾಮಕೃಷ್ಣಶಾಸ್ತ್ರಿಗಳ 'ಭುವನಪ್ರದೀಪಿಕೆ'ಯೂ ವಿಶ್ವಕೋಶಾತ್ಮಕವೇ. ಈ ರೀತಿ ಮತ್ತೂ ಹಲವು ಹತ್ತು ವಿಶ್ವಕೋಶಸದೃಶಕೃತಿಗಳು ಸಂಸ್ಕೃತದಲ್ಲಿ ಕಾಲಾನುಕಾಲಕ್ಕೆ ದೇಶಾನುಗುಣವಾಗಿ, ಶಾಸ್ತ್ರಾನುಸಾರಿಯೆನಿಸಿ ಬೆಳೆದಿವೆ.

ಕನ್ನಡದಲ್ಲಿಯೂ ಸಹ ವಿಶ್ವಕೋಶಗಳ ರಚನೆ ಬಹುಕಾಲದಿಂದ ಸಾಗಿಬಂದಿದೆ. ವಿಶೇಷವೇನೆಂದರೆ (ಈ ಲೇಖಕನು ತಿಳಿದ ಮಟ್ಟಿಗೆ ಹೇಳುವುದಾದರೆ) ಸಂಸ್ಕೃತ-ಪ್ರಾಕೃತ ಗಳನ್ನುಳಿದ ಇತರ ಭಾಷೆಗಳಲ್ಲಿ ವಿಶ್ವಕೋಶಾತ್ಮಕ ಮತ್ತು ನಾನಾ ಲೌಕಿಕ-ಧಾರ್ಮಿಕಶಾಸ್ತ್ರ ಸಾರಾತ್ಮಕವಾದ ಕೃತಿಗಳ ರಚನೆಯ ಕಾಲಾನುಪೂರ್ವಿಯನ್ನು ಕಂಡಾಗ ಕನ್ನಡವೇ

ಮೊದಲಿಗವೆಂದು ತಿಳಿದು ಬರುವ ಅಂಶವಾಗಿದೆ. ತಮಿಳು ತನ್ನ ಸಂಸ್ಕೃತ ವೈಮುಖ್ಯ ದಿಂದಾಗಿ ಶಾಸ್ತ್ರವ್ಯಾಪ್ತಿಯನ್ನು ಕುಗ್ಗಿಸಿಕೊಂಡಿತು. ತೆಲುಗಿನಲ್ಲಿಯು ಸಾಹಿತ್ಯವೇ ಕನ್ನಡ ಕ್ಕಿಂತ ಅರ್ವಾಚೀನವಾದುದರಿಂದ ಪ್ರಾಚೀನತೆ ಕೈಗೂಡಲಿಲ್ಲ, (ಆದರೂ ಅಲ್ಲಿ ತರ್ಕಮಟ್ಟಿಗೆ ಆದಿಯಿಂದಲೂ ಕೆಲಸವಾಗಿದೆ) ತಮಿಳು ಮಧ್ಯಕಾಲೀನಾವಧಿಯಿಂದ ಶಾಸ್ತ್ರ ಸಂಪತ್ತಿಗೆ ಒಗ್ಗಿ ಮೈಗೂಡಿಸಿಕೊಂಡಿತು. ಔತ್ತರೇಯ ಭಾಷೆಗಳು (ಬಂಗಾಳಿ, ಗುಜರಾತಿ, ಹಿಂದೀ ಇತ್ಯಾದಿ) ತೀರ ಆಧುನಿಕವೇ ಆದುದರಿಂದ (ದಾಕ್ಷಿಣಾತ್ಯ ಭಾಷೆಗಳಿಗೆ ಹೋಲಿಸಿದರೆ ಅವುಗಳು ತತ್ತ್ವದ್ದೇಶೀಯ ಪ್ರಾಕೃತಗಳಿಂದ ಬೇರೆಯಾಗಿ ರೂಪುತಾಳಿದ್ದು ಅರ್ವಾಚೀನ ಸಂಗತಿ) ದಾಕ್ಷಿಣಾತ್ಯ ಭಾಷೆಗಳಲ್ಲಿ ಪ್ರಧಾನವಾದ ಕನ್ನಡಕ್ಕೆ ವಿಶ್ವಕೋಶ ಸೃಷ್ಟಿಯ ಗೌರವಾದ್ಯತೆ ಸಂದಿದೆ.

ಕನ್ನಡದಲ್ಲಿ ಮೊತ್ತಮೊದಲ ವಿಶ್ವಕೋಶವೆನ್ನಬಹುದಾದ ಹಿರಿಮೆ ಎರಡನೆಯ ಚಾವುಂಡರಾಯನ 'ಲೋಕೋಪಕಾರ'ಕ್ಕೆ (ಸುಮಾರು ಕ್ರಿ. ಶ. ೧೦೨೫) ಸಲ್ಲುತ್ತದೆ. ಪಂಚಾಂಗದ ಅಂಶಗಳು, ಖಗೋಲಶಾಸ್ತ್ರ ವಿಚಾರ, ಶಕುನಶಾಸ್ತ್ರ, ಧರ್ಮಶಾಸ್ತ್ರ, ವಿಚಾರ, ಗಂಧಯುಕ್ತಿ, ವೃಕ್ಷಾಯುರ್ವೇದ, ಗೃಹನಿರ್ಮಿತಿ, ವಾಸ್ತು ಪ್ರತಿಷ್ಠೆ. ನಾನಾ ರೀತಿಯ ವೈದ್ಯ, ಚೈಕಿತ್ಸಿಕಾಂಶ, ವಿಷ ವೈದ್ಯವೇ ಮೊದಲಾದ ಅನೇಕ ವಿಚಾರಗಳ ಕೈಪಿಡಿಯಾಗಿ ಲೋಕೋಪಕಾರವು ಅನ್ವರ್ಥವಾಗಿವೆ. ಲಕ್ಕಣದಂಡೇಶನ ಶಿವತತ್ತ್ವ ಚಿಂತಾಮಣಿ (ಸುಮಾರು ಕ್ರಿ. ಶ. ೧೪೨೪) ಮತ್ತು ಗುಬ್ಬಿಮಲ್ಲಣಾರ್ಯನ ವೀರಶೈವಾಮೃತಪುರಾಣ (ಸುಮಾರು ಕ್ರಿ. ಶ. ೧೫೧೩) ಗಳೆರಡೂ ಪ್ರಧಾನವಾಗಿ ವೀರಶೈವ ಸಿದ್ಧಾಂತದ ಆಚಾರ-ವ್ಯವಹಾರಗಳ ಭೂಮಿಕೆಯನ್ನು ಸಂಗ್ರಹಿಸಿ ಪೌರಾಣಿಕ ಪದ್ಧತಿಯಲ್ಲಿ ಸಾಗಿರುವ ಗ್ರಂಥಗಳು. ಇಂಥ ಕೃತಿಗಳಲ್ಲದೆ ಮಂಗರಸನ 'ಖಗೇಂದ್ರಮಣಿದರ್ಪಣ', ಎರಡನೆಯ ಮಂಗರಸನ 'ಸೂಪಶಾಸ್ತ್ರ' ವೀರರಾಜನ 'ಸಕಲ ವೈದ್ಯ ಸಿಂಹಿತಾಸಾರಾರ್ಣವ', ಕೀರ್ತಿವರ್ಮನ 'ಗೋವೈದ್ಯ' ಅಭಿನವಚಂದ್ರನ 'ಅಶ್ವಶಾಸ್ತ್ರ', ಪದ್ಮಪಂಡಿತನ 'ಹಯಸಾರ ಸಮುಚ್ಚಯ', ವೀರಭದ್ರರಾಜನ 'ಪಾಲಕಾವ್ಯ ಹಸ್ತ್ಯಾಯುರ್ವೇದ ವ್ಯಾಖ್ಯೆ' ಶ್ರೀಧರಾಚಾರ್ಯನ 'ಜಾತಕತಿಲಕ', ರಟ್ಟಕವಿಯ 'ರಟ್ಟಮತ' ಮೊದಲಾದ ಅನೇಕ ಏಕಶಾಸ್ತ್ರೀಯ ಗ್ರಂಥಗಳೂ ಆನುಷಂಗಿಕವಾಗಿ ಅನ್ಯಸಂಬಂಧಿತ ಶಾಸ್ತ್ರಗಳನ್ನು ಸ್ಪರ್ಶಿಸುತ್ತವೆ. ಸಾಮಾನ್ಯವಾಗಿ ಹನ್ನೊಂದನೆಯ ಶತಾಬ್ದಿಯಿಂದ ಹದಿನೇಳನೆಯ ಶತಾಬ್ದಿಯ ವರೆಗೆ ಹಬ್ಬಿರುವ ಈ ಬಗೆಯ ಕೃತಿನಿರ್ಮಿತಿಯ ಕಾಲದ ಹರಹು ಇಂಥ ಕೃಷಿಯ ಸತ್ತ್ವ-ಸಿದ್ಧಿಗಳನ್ನು ಬಿಂಬಿಸುತ್ತದೆ. ಕನ್ನಡದಂಥ ದೇಶಭಾಷೆಗಳಲ್ಲಿ ರಚಿತವಾದ ಈ ರೀತಿಯ ಶಾಸ್ತ್ರಗ್ರಂಥ-ವಿಶ್ವಕೋಶಗಳು ಬಹುತೇಕ ಸಂಸ್ಕೃತದ ತತ್ಸದೃಶತತ್ಸಂಬಂಧಿತ ಶಾಸ್ತ್ರಗಳ ಎರವಲು-ಅನುವಾದ, ಸಂಗ್ರಹಗಳಾದರೂ; ಪ್ರಾದೇಶಿಕವಾದ ನಾನಾ ವಿಚಾರಗಳೂ, ಸಸ್ಯ-ಪ್ರಾಣಿವಾಚಕಗಳೂ, ಆಹಾರ-ವಿಹಾರಗಳೂ, ಜಾನಪದೀಯಾಂಶಗಳೂ ಬರುವ

ಸಂಭವವಿರುವುದರಿಂದ ಇವುಗಳ ಅಧ್ಯಯನವು ಸಂಸ್ಕೃತ ಗ್ರಂಥಗಳಿಗೂ ಪೂರಕವಾಗ ಬಹುದು. ಈ ನಿಟ್ಟಿನಲ್ಲಿ ಸಂಶೋಧನೆಯು ರಾಷ್ಟ್ರೀಯಶಾಸ್ತ್ರ ದೃಷ್ಟಿಗೆ ಮೌಲಿಕವಾದ ಕೊಡುಗೆಯಾಗುತ್ತದೆ.

೪

ಪ್ರಕೃತ 'ವಿವೇಕ ಚಿಂತಾಮಣಿ'ಯನ್ನು ಈ ಮೊದಲು ನಿರೂಪಿಸಿದ ಹಿನ್ನೆಲೆಯಲ್ಲಿ ಕಂಡಾಗ ಹೆಚ್ಚಿನ ಲಾಭವಾದೀತು.

'ವಿವೇಕ ಚಿಂತಾಮಣಿ'ಯು ಶ್ರೀಮನ್ನಿಜಗುಣ ಶಿವಯೋಗಿಗಳ ಪ್ರಮುಖ ಕೃತಿ. ಹತ್ತು ಪರಿಚ್ಛೇದಗಳಲ್ಲಿ ೫೩೫ ವಿವಿಧ ವಿಷಯಗಳಲ್ಲಿ ಪರಾಮೃಷ್ಟವಾಗಿವೆ. ವಸ್ತು ಬಾಹುಲ್ಯ ದೃಷ್ಟಿಯಿಂದ ಇದು ವಿಸ್ತ್ರಯಾವಪವಾಗಿದ್ದರೂ ವಿಷಯ ವೈಪುಲ್ಯದೃಷ್ಟಿಯಿಂದ ವ್ಯಾಪಕವಾಗಿಲ್ಲ. ಸಣ್ಣ ಆಕಾರದಲ್ಲಿ ಅನೇಕ ವಿಚಾರಗಳನ್ನು ಉಪನಿವೇಶ ಗೊಳಿಸುವ ಲೇಖಕರ ಮಹತ್ವಾಕಾಂಕ್ಷೆಯೇ ಇದಕ್ಕೆ ಕಾರಣ. ಹೀಗಾಗಿ ಮೊದಲಿಗೆ ವೈದಿಕ ಮತ್ತು ಶೈವ ಸಮಯಗಳ ನಿರೂಪಣೆ ನಡೆದಷ್ಟು ವಿಶದವಾಗಿ ಉಳಿದ ವಿಚಾರಗಳ ನಿರೂಪಣೆ ಸಾಗಿಲ್ಲ. ಅಲ್ಲದೆ ಗ್ರಂಥಕರ್ತರ ಉದ್ದೇಶವೂ ಸಹ ಆಧ್ಯಾತ್ಮ ಹಾಗೂ ತತ್ತ್ವಸಂಗತಿಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡುವುದೇ ಆಗಿದೆ. ಆದುದರಿಂದ ಉಳಿದಂತೆ ಅನೇಕ ವಿಚಾರಗಳಿಲ್ಲಿ ನೈಘಂಟುಕಪ್ರಾಯವಾಗಿ ಸಂಕೇತಪದಕೋಶ ಸದೃಶವಾಗಿ ನಾಮೋಲ್ಲೇಖ ಮಾತ್ರವಾಗಿ ಬಂದಿವೆ.

ಸ್ಥೂಲವಾಗಿ ಗ್ರಂಥದ ವಿಷಯ ವಿಸ್ತರವನ್ನು ಪರಿಚಯಿಸುವುದಾದರೆ ಮೊದಲಿಗೆ ಈಶ್ವರ ತತ್ತ್ವ, ವೇದ ವೇದಾಂಗಗಳು, ಉಪನಿಷತ್ಪ್ರಸ್ಥಾನ, ಷಡ್ದರ್ಶನಗಳು ಸ್ಮೃತೀತಿಹಾಸ ಗಳು, ವಿವಿಧ ಶಾಸ್ತ್ರಪರಿಭಾಷಾ ನಿರೂಪಣೆಯೇ ಮುಂತಾಗಿ ತೊಡಗಿ ಆಗಮಭೇದಗಳು, ಆಗಮಸಂಖ್ಯೆ, ಆಗಮಸಾರ, ಶೈವಾಗಮಪ್ರಭೇದಗಳು, ವಿಭೂತಿ–ರುದ್ರಾಕ್ಷಿ ಮಂತ್ರ–ಲಿಂಗ ಇತ್ಯಾದಿ ಮೀಮಾಂಸೆ, ಪಂಚೀಕರಣ ವಿಧಾನ ಭುವನಕೋಶ, ಸೃಷ್ಟಿ–ಸ್ಥಿತಿ–ಲಯ ನಿರೂಪಣ, ಅಲಂಕಾರ ಶಾಸ್ತ್ರ, ಸಂಗೀತಶಾಸ್ತ್ರ, ತ್ರೈಲೋಕ್ಯವಿಚಾರ ಕಾಲಕ್ರಮವರ್ಣನೆಯೇ ಮೊದಲಾದ ವಿಚಾರಗಳಿಂದ ಮುಗಿಯುತ್ತದೆ.

ಇಂಥ ವಿಷಯಗಳ ಮಾಹಿತಿ ಇದ್ದುದರಿಂದಲೇ ಈ ಗ್ರಂಥವು ಬಹುಕಾಲದ ಮುನ್ನವೇ ಅನ್ಯಭಾಷೆಗಳಿಗೆ ಅನೂದಿತವಾಯಿತು. ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಸಿಂಘಣಾಪುರವಾಸಿ ಕಾಂತೇಶ್ವರನು (ಕ್ರಿ. ಶ. ೧೬ನೆಯ ಶತಾಬ್ದಿ) ಮರಾಠಿಗೂ, ತಮಿಳುನಾಡಿನ ಶಿವಪ್ರಕಾಶನು (ಕ್ರಿ. ಶ. ೧೭ನೆಯ ಶತಾಬ್ದಿ) ತಮಿಳಿಗೂ, ಮೈಸೂರಿನ ಹರಪುರವಾಸಿ ಲಿಂಗರಾಜನು (ಕ್ರಿ. ಶ. ೧೮ನೆಯ ಶತಾಬ್ದಿ) ಸಂಸ್ಕೃತಕ್ಕೂ ವಿವೇಕ ಚಿಂತಾಮಣಿಯನ್ನು ಭಾಷಾಂತರಿಸಿದ ಸಂಗತಿ ತುಂಬ ಮುಖ್ಯವಾಗಿದೆ. ಇದು ಪ್ರಕೃತ ಕೃತಿಯ ಸತ್ತ್ವ ಹಾಗೂ ಜನಪ್ರಿಯತೆಗೆ ನಿದರ್ಶನವೆನಿಸಿದೆ.

೫

'ವಿವೇಕ ಚಿಂತಾಮಣಿ'ಯು ತಾತ್ತ್ವಿಕ ನೇಪಥ್ಯವನ್ನು ನೋಡುವುದಾದರೆ ಅದು ಅದ್ವೈತವೇ ಆಗಿದೆ. ಇದು ಬಹುಮಟ್ಟಿಗೆ ಶ್ರೀ ಶಂಕರಾಚಾರ್ಯಸಂಮತವಾದ ಕೇವಲಾದ್ವೈತವೇ ಸರಿ. ಆದರೆ ಇದನ್ನು ವೀರಶೈವ ಮತ ತತ್ತ್ವಗಳ ಭೂಮಿಕೆಯಲ್ಲಿ ಸ್ವೀಕರಿಸಲಾಗಿದೆ. ಆದಾಗ್ಯೂ ವಿವೇಕ ಚಿಂತಾಮಣಿಯು ಮೊದಲ ಪರಿಚ್ಛೇದದಲ್ಲಿ ಶೈವಾದ್ಯಾಗಮ ಸಂಸ್ಪರ್ಶವಿಲ್ಲದ, ಚಿದಚಿದ್ವಿಶೇಷಮುಕ್ತವಾದ, ನಿರ್ವಿಶೇಷವೆನಿಸಿದ, ವೇದಾಂತ ತತ್ತ್ವ ಸಮುದ್ಭಾಸಿತವಾದ ಅದ್ವೈತವೇ ವಿವೃತವಾಗಿದೆ. ದ್ವಿತೀಯ ಪರಿಚ್ಛೇದ ದಲ್ಲಿ ವಿಶದವಾಗಿ ಶೈವಾಗಮ ಹಾಗೂ ಶೈವತತ್ತ್ವಗಳ ನಿರೂಪಣೆಯುಂಟು. ಶ್ರೀಮನ್ನಿಜಗುಣರ ಇತರ ಕೃತಿಗಳಲ್ಲಿಯೂ ಉತ್ಕಟವಾದ ಕೇವಲಾದ್ವೈತ ಭಾವವನ್ನು ಕಾಣಬಹುದಾದುದರಿಂದ 'ವಿವೇಕ ಚಿಂತಾಮಣಿ'ಯು ಈ ರೂಪ ಕೃತಿಕಾರರ ಅಂತರಂಗಕ್ಕೆ ಸಹಜವೇ ಆಗಿದೆ.

'ವಿವೇಕ ಚಿಂತಾಮಣಿ'ಯ ಆಕರಗಳನ್ನು ಹೀಗೆಂದು ಖಚಿತವಾಗಿ ನಿರ್ಧರಿಸ ಲಾಗದು. ಅನೇಕ ಪ್ರಸಿದ್ಧಾ ಪ್ರಸಿದ್ಧ ಸಂಸ್ಕೃತ-ಕನ್ನಡ ಗ್ರಂಥಗಳಲ್ಲದೆ ತೆಲಗು ಗ್ರಂಥ ಗಳೂ, ಕೆಲಮಟ್ಟಿಗೆ ತಮಿಳಿನ ಕೃತಿಗಳೂ ಆಧಾರವಾಗಿದ್ದಿರಬೇಕೆಂದು ಸಮುಚಿತವಾಗಿಯೇ ಊಹಿಸಬಹುದು.

ಅದ್ವೈತ ವೇದಾಂತವನ್ನು ಆಧರಿಸಿದಂತೆ ತೋರುತ್ತದೆ. ಆದುದರಿಂದಲೇ ಪದ್ಮಪಾದ ಪಂಚಪಾದಿಕಾ, ಪ್ರಕಾಶಾತ್ಮರ ವಿವರಣ ಹಾಗೂ ವಿದ್ಯಾರಣ್ಯರ ಪಂಚದಶಿಯೇ ಮೊದಲಾದ ಗ್ರಂಥಗಳನ್ನು ಅವಲೋಕಿಸಿದ್ದಿರಬಹುದೆಂದು ತಿಳಿಯುತ್ತದೆ. ಅಂತೆಯೇ ಆ ವೇಳೆಗೇ ಸುಪ್ರಸಿದ್ಧವಾಗಿದ್ದ ಮಾಧವೀಯ ಸರ್ವದರ್ಶನ ಸಂಗ್ರಹವನ್ನೂ ಶ್ರೀಮನ್ನಿಜಗುಣರು ಕಂಡಿದ್ದಿರಬಹುದು. ಆದರೂ ದ್ವೈತ–ವಿಶಿಷ್ಟಾದ್ವೈತಗಳ ಉಲ್ಲೇಖ– ವಿವರಣೆಗಳನ್ನು ನೀಡದಿರಲು ಕಾರಣ ಅವರ ಅದ್ವೈತ ನಿಷ್ಠೆಯೇ ಆಗಿದ್ದಿರಬೇಕು. ಹೀಗಿದ್ದರೂ 'ಸ್ಥೂಣಾನಿಖನನ ನ್ಯಾಯ'ದಂತೆ ಅದ್ವೈತವನ್ನೂ, ಆ ತತ್ತ್ವದ ಸತ್ತ್ವಸಿದ್ಧಿಗಳನ್ನೂ ವಿಮರ್ಶನಪೂರ್ವಕವಾಗಿ ತಿಳಿದು ಪ್ರತಿಪಕ್ಷಾಕ್ಷೇಪಗಳ ಸಾರಾಸಾರ ವನ್ನು ಗ್ರಹಿಸಿ ತತ್ತ್ವದಾರ್ಢ್ಯವನ್ನು ಹೊಂದಲು ಅವರು ದ್ವೈತ–ವಿಶಿಷ್ಟಾದ್ವೈತಗಳ ಗ್ರಂಥಗಳನ್ನೂ ಕಂಡು ಮನನಿಸಿರಬೇಕೆಂದು ಭಾವಿಸಿದರೆ ತಪ್ಪಾಗದು. ಹೀಗಾಗಿ ಬಹುತೇಕ ವೇದಾಂತದರ್ಶನ ಪ್ರಭೇದಗಳ ಅರಿವು ಅವರಿಗೆ ಚೆನ್ನಾಗಿದ್ದು, ತತ್ಫಲಿತವು ಪ್ರಕೃತ ಕೃತಿ ಯಲ್ಲಿ ಕಂಡಿರುವುದು ಸುಸ್ಪಷ್ಟ. ಪುರಾಣಗಳಲ್ಲಿ ಸ್ಕಾಂದ, ಭಾಗವತ, ಅಗ್ನಿ ಹಾಗೂ ಗರುಡ ಗಳ ಆಧಾರವನ್ನು ಇಲ್ಲಿ ಕಾಣಬಹುದಾಗಿದೆ. ವಿಶೇಷತಃ ಭುವನಕೋಶಾತ್ಮಕವಾದ ಚತುರ್ಥ, ಪಂಚಮ ಮತ್ತು ಷಷ್ಠ ಪರಿಚ್ಛೇದಗಳಲ್ಲಿ ಈ ಬಗೆಯ ಪ್ರಭಾವಗಳನ್ನು ಕಾಣಬಹುದು.

ಧರ್ಮಶಾಸ್ತ್ರಗಳತ್ತ ಹೊರಳಿದರೆ ಸುಪ್ರಸಿದ್ಧರೂ ಅತ್ಯಂತ ಪ್ರಾಚೀನವೂ ಎನಿಸಿದ

ಗೌತಮಧರ್ಮ ಸೂತ್ರ, ಆಪಸ್ತಂಭ ಧರ್ಮಸೂತ್ರ, ಬೋಧಾಯನ ಧರ್ಮಸೂತ್ರಗಳೇ ಮೊದಲಾದ ಕಲ್ಪ ಸೂತ್ರಗಳಲ್ಲದೆ ಮನು, ಪರಾಶರ ಅತ್ರಿ, ಬೃಹಸ್ಪತಿ ಮೊದಲಾದವರ ಸ್ಮೃತಿಗಳೂ, ಸರಸ್ವತೀವಿಲಾಸ, ಪರಾಶರಮಾಧವೀಯವೇ ಮೊದಲಾದ ನಿಬಂಧ–ವ್ಯಾಖ್ಯೆಗಳೂ ತಮ್ಮ ತಮ್ಮ ಪ್ರಭಾವಗಳನ್ನು ಧ್ವನಿಸುತ್ತವೆ.

ವೇದಾಂತಕ್ಕೆ ಆಧರಿಸಿಯೇ ಇದ್ದ ವಿಖ್ಯಾತದಶೋಪನಿಷತ್ತುಗಳಲ್ಲದೆ ಜೀವನ್ಮುಕ್ತರ ಯತಿಗಳ ವರ್ಣನೆಗಾಗಿ, ಪಿಂಡೋತ್ಪತ್ತಿ ನಿರೂಪಣೆಗಾಗಿ ಅಷ್ಟೋತ್ತರ ಶತೋಪನಿಷತ್ತುಗಳಲ್ಲಿ ಬರುವ ಆಶ್ರಮೋಪನಿಷತ್, ಸಂನ್ಯಾಸೋಪನಿಷತ್, ಅವಧೂತೋಪನಿಷತ್, ಜಾಬಾಲೋಪನಿಷತ್, ಮೈತ್ರೇಯ್ಯುಪನಿಷತ್ ಮೊದಲಾದುವುಗಳು ತಮ್ಮ ಪ್ರಭಾವಗಳನ್ನು ಅಕ್ಷರಶಃ ತೋರಿವೆ.

ನೂರಾರು ಗ್ರಂಥಗಳಲ್ಲಿ ವ್ಯಾಪಕವಾಗಿ ಹರಡಿ ಹೋದ ಆಗಮಸಾಹಿತ್ಯಕ್ಕೆ ಬರುವುದಾದರೆ ವಿವೇಕ ಚಿಂತಾಮಣಿಯ ಪ್ರಮುಖಾಕರಗಳಾಗಿ ಇವುಗಳನ್ನೇ ಗುರುತಿಸಬಹುದು. ಏಕೆಂದರೆ ಶೈವಾಗಮಗಳಿರಲಿ, ಶಾಕ್ತ ವೈಷ್ಣವಾದ್ಯನ್ಯಸಮಯಾಗಮಗಳೇ ಆಗಲಿ, ಈ ಎಲ್ಲವೂ ವೈದಿಕ ಮತ್ತು ತಾಂತ್ರಿಕ ತತ್ತ್ವಗಳ ಸಮನ್ವಯಕ್ಕಾಗಿಯೂ, ಪೌರಾಣಿಕ ಮತ್ತು ಶಾಸ್ತ್ರೀಯ ಅಂಶಗಳ ಸಾಮರಸ್ಯಕ್ಕಾಗಿಯೂ ಸೃಷ್ಟವಾದ ಕೃತಿಗಳು. ಅಂತೆಯೇ ಇವುಗಳ ಸ್ವರೂಪವೂ ವಿಶ್ವಕೋಶಸದೃಶ. ಮೂಲತಃ ಹೇಳುವುದಾದರೆ 'ವಿವೇಕ ಚಿಂತಾಮಣಿ'ಯ ಸ್ಫೂರ್ತಿ ಕೇಂದ್ರವು ಇಂಥ ಆಗಮಗಳೇ ಆಗಿವೆ. ಕಾಶ್ಯಪಸಂಹಿತೆ, ಅಹಿರ್ಬುಧ್ನ್ಯಸಂಹಿತೆ, ಜಯಾಖ್ಯಸಂಹಿತೆಯೇ ಮೊದಲಾದ ವೈಷ್ಣವಾಗಮ ಗ್ರಂಥಗಳು ನಾನಾಶಾಸ್ತ್ರ, ವಿಚಾರಗಳನ್ನೊಳಗೊಂಡಂತೆಯೇ ಕಾಮಿಕಾದಿಕ, ಸಾಹಸ್ರಕ ದೀಪ್ತವೇ ಮೊದಲಾದ ಶೈವಾಗಮ ಗ್ರಂಥಗಳೂ ಬಹುವಿಷಯ ನಿಕ್ಷೇಪ ಕುಕ್ಷಿಗಳಾಗಿವೆ. ಹೀಗಾಗಿ ಹಲವು ಹತ್ತು ಶೈವಾಗಮಗಳ ಪ್ರಭಾವವನ್ನು 'ವಿವೇಕ ಚಿಂತಾಮಣಿ'ಯಲ್ಲಿ ಕಾಣಬಹುದಾಗಿದೆ. ವಿಶೇಷತಃ ಸೂಕ್ಷ್ಮಾಗಮವು ಗಣ್ಯವೆನಿಸಿದೆ. ಇದಲ್ಲದೆ ವಿಜಯಾಗಮ, ಸುಪ್ರಭಾಗಮಾದಿಗಳೂ ತಕ್ಕಮಟ್ಟಿಗೆ ಒತ್ತಾಸೆಯಾಗಿವೆ. ಆಗಮಗಳ ವ್ಯಾಪ್ತಿಯೊಳಗೇ ಬರುವ ಮಂತ್ರ–ತಂತ್ರ ಶಾಸ್ತ್ರ ಗ್ರಂಥಗಳ ಪೈಕಿ ಗ್ರಂಥವೇ ಹೆಸರಿಸುವ ವಾತುಲಾಗಮ, ಶಾರದಾತಿಲಕ, ಪ್ರಪಂಚಸಾರ, ಮಂತ್ರದೇವತಾ ಪ್ರಕಾಶಿಕೆಯೇ ಮೊದಲಾದವು ಗಣನೀಯವಾಗಿವೆ. ಅರ್ವಾಚೀನ ಸಂಕಲನವಾದ ಸೂತಸಂಹಿತೆಯೇ ಮುಂತಾದ ಗ್ರಂಥಗಳಿಂದಲೂ ವಿಶೇಷ ಸಹಾಯವಾಗಿದೆ.

ಉಳಿದಂತೆ ಭರತನ ನಾಟ್ಯಶಾಸ್ತ್ರ, ವಾತ್ಸ್ಯಾಯನನ ಕಾಮಸೂತ್ರ, ಮಮ್ಮಟನ ಕಾವ್ಯಪ್ರಕಾಶ, ಮಂಗಲನ ಛಂದಃಶಾಸ್ತ್ರ, ಧನಂಜಯನ ದಶರೂಪಕ, ಕಾಮಂದಕನ ನೀತಿಸಾರ, ಶಾರ್ಙ್ಗದೇವನ ಸಂಗೀತ ರತ್ನಾಕರ, ವರಾಹಮಿಹಿರನ ಬೃಹಜ್ಜಾತಕವೇ ಮೊದಲಾದ ಹತ್ತಾರು ವಿವಿಧ ಶಾಸ್ತ್ರಗ್ರಂಥಗಳ ಆಲಂಬನವೂ ವಿವೇಕ ಚಿಂತಾಮಣಿಗೆ ಉಂಟು. ಅಲ್ಲದೆ ಮಾನಸೋಲ್ಲಾಸಾದಿ ವಿಶ್ವಕೋಶಗಳ ಸಹಾಯವೂ ಸೇರಿದೆ.

ಕನ್ನಡದ ಕೃತಿಗಳನ್ನು ಹೇಳುವುದಾದರೆ ಲಕ್ಕಣದಂಡೇಶನ ಶಿವತತ್ತ್ವಚಿಂತಾಮಣಿ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಷಟ್ಸ್ಥಲ ಜ್ಞಾನಸಾರಾಮೃತ ಹಾಗೂ ಅನೇಕ ವಚನಕಾರರ ಅನುಭಾವಿಕ ಸೂಕ್ತಿಗಳ ಆಧಾರವನ್ನು ವಿವೇಕ ಚಿಂತಾಮಣಿ ಹೊಂದಿದೆಯೆನ್ನ ಬಹುದು. ಇಷ್ಟಾದರೂ ಕನ್ನಡದ ಆಧಾರಗ್ರಂಥಗಳ ಸಂಖ್ಯೆ ನಗಣ್ಯವೆಂದೇ ಹೇಳಬೇಕು. ಆದುದರಿಂದ ತಾತ್ಪರ್ಯರೂಪದಲ್ಲಿ ಹೇಳುವುದಾದಲ್ಲಿ ಪ್ರಕೃತಗ್ರಂಥವು ಬಹುಮಟ್ಟಿಗೆ ಸಂಸ್ಕೃತದ ನಾನಾ ಶಾಸ್ತ್ರಗಳನ್ನಾಧರಿಸಿ ತಿಳಿಗನ್ನಡಗದ್ಯದಲ್ಲಿ ರೂಪುಗೊಂಡದ್ದಾಗಿದೆ.

ಶೈಲಿಯ ದೃಷ್ಟಿಯಿಂದ ಪರಿಶೀಲಿಸಿದಲ್ಲಿ ವಿವೇಕಚಿಂತಾಮಣಿಯದು ಪ್ರಸನ್ನ ಗಂಭೀರ ವಾದ ರೀತಿ, ಕನ್ನಡದಲ್ಲಿ ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯ ಕಾಲದಿಂದಲೂ ಬೆಳೆದುಬಂದ ಗದ್ಯಶಿಲ್ಪಗಳಲ್ಲಿ ಇದರ ಧಾಟಿ ಗಣ್ಯವಾದದ್ದು. ಹಳೆಗನ್ನಡವು ನಡುಗನ್ನಡಕ್ಕೆ ತಿರುಗುತ್ತಿರುವ ಸಂಧಿಕಾಲದಲ್ಲಿ ರೂಪುಗೊಂಡ ಈ ಗದ್ಯಕ್ಕೆ ದಾರ್ಢ್ಯ–ಲಾಲಿತ್ಯಗಳೆರಡೂ ಇವೆ. ಇಡಿಯ ಕೃತಿಯ ಆದ್ಯಂತಗಳಲ್ಲಿರುವ ಎರಡು ಉತ್ಪಲಮಾಲಾವೃತ್ತಗಳನ್ನೂ ಮತ್ತು ಪ್ರತಿಯೊಂದು ಪರಿಚ್ಛೇದಕ್ಕೂ ಮೊದಲಿಗೆ ಬರುವ–ಒಂದೊಂದರಂತೆ–ಒಂಬತ್ತು ಕಂದಗಳನ್ನೂ ಬಿಟ್ಟರೆ ಉಳಿದಂತೆ ಇರುವುದೆಲ್ಲ ಪ್ರಾಸಾದಿಕವಾದ, ತಿಳಿಯಾದ ವಚನವೇ. ಸಮಾನ ಜಾಟಿಲ್ಯವಿಲ್ಲದೆ, ಶ್ಲೇಷಕ್ಲೇಶಗಳಿಲ್ಲದೆ, ಉದಾರ ಸುಂದರವಾಗಿ, ಗಂಗಾತರಂಗಿಣಿ ಯಂತೆ ಅನವದ್ಯ ಹೃದ್ಯ ರೀತಿಯಲ್ಲಿ ನಿರೂಪಿತವಾಗುವ ಈ ಗದ್ಯದ ಬಗೆ ಚಿತ್ತ ವಿಸ್ಮಯಕಾರಿ. ಇಂಥ ಶೈಲಿ ಯಾವುದೇ ಶಾಸ್ತ್ರನಿರೂಪಣೆಗಾಗಲಿ ಆದರ್ಶಪ್ರಾಯವೆನಿಸಿದೆ. ಸಂಸ್ಕೃತದ ಉತ್ತಮಶಾಸ್ತ್ರ ಗದ್ಯಕಾರರಾದ ಭಗವಾನ್ ಪತಂಜಲಿ, ಶಂಕರಾಚಾರ್ಯ, ಶಾಬರಸ್ವಾಮಿ, ಜಯಂತಭಟ್ಟ ರಾಜಾನಕ ಕುಂತಕಾದಿಗಳ ಮಾರ್ಗವೂ ಇಂಥದ್ದೇ ಆಗಿದೆ.

ಈಗ ವಿವೇಕಚಿಂತಾಮಣಿಯ ಕೆಲವು ಪ್ರಕರಣಗಳನ್ನು ಯಾದೃಚ್ಛಿಕವಾಗಿ ಉದ್ಧರಿಸಿ ಪರಿಶೀಲಿಸಿ ನೋಡಬಹುದು.

"ಪ್ರಥಮದಲ್ಲಿ ಚಕ್ಷುರಾದಿ ಬಾಹೇಂದ್ರಿಯಗೋಚರಮಾಗಿ ತೋರುವೀ ಜಗತ್ತೆಲ್ಲಂ ಪೃಥು ಬುಧ್ನೋದರಾಕಾರದಿಂ ಸಾವಯವುಮಪ್ಪುದರಿಂ ಘಟದಂತೆ ಕಾರ್ಯವಹುದಾಗಿ ಕುಲಾಲನಂತೆ ನಿಮಿತ್ತಕಾರಣನಾದೀಶ್ವರನಿಂ ಚಕ್ರದಂಡಾದಿಕದಂತೆ ಪುಣ್ಯಾಪುಣ್ಯರೂಪ ಕರ್ಮವೆಂಬ ಸಹಕಾರಿಕಾರಣದಿಂ ಮೃತ್ತಿಕೆಯಂತೆ ಬಿಂದು ಮಾಯೆಯೆಂಬ ಶುದ್ಧಾಶುದ್ಧ ಮಾದುಪಾದಾನಕಾರಣದಿಂ...." (ಪು. ೨)

ಈ ಉದ್ಧರಣದಲ್ಲಿ ಜಗತ್ತಿನ ಕಾರ್ಯ–ಕಾರಣ ವಿಚಾರಗಳನ್ನು ಅತ್ಯಂತ ಮನೋಹರವಾಗಿ ಉದಾಹರಣಾವೇಷ್ಟಿತವಾದ ವಿವರಣೆಯಿಂದ ನಿರೂಪಿಸಿರುವುದೇ ಅತಿ ಹೃದ್ಯವಾಗಿದೆ. ನಿಮಿತ್ತ–ಉಪಾದಾನ–ಸಹಕಾರಿಗಳೆಂಬ ಕಾರಣತ್ರಯವನ್ನು ತರ್ಕ ಶಾಸ್ತ್ರಕ್ಕಿಂತ ಬೇರೆಯಾಗಿ, (ತಾರ್ಕಿಕರು ಕಾರಣವು ಸಮವಾಯಿ–ಅಸಮವಾಯಿ–ನಿಮಿತ್ತ ಎಂದು ತ್ರಿವಿಧವಾಗಿ ರೂಪಿಸುತ್ತಾರೆ) ಅಂದರೆ ವೇದಾಂತಕ್ಕೆ ಸಂವಾದಿಯಾಗಿ ಪ್ರತಿ

ಪಾದಿಸಲಾಗಿದೆ. ಹೀಗಾಗಿ ಗ್ರಂಥಾದಿಯಲ್ಲಿಯೇ ಅದರ ವೇದಾಂತಪರವಾದ ದೃಷ್ಟಿಯನ್ನು ಮನಗಾಣಬಹುದಾಗಿದೆ.

ಬಳಿಕ ಈಶ್ವರನಿಗಿರುವ ನಿತ್ಯತ್ವ, ವ್ಯಾಪಕತ್ವ, ಸರ್ವಜ್ಞತ್ವ, ಸರ್ವಶಕ್ತಿತ್ವ, ನಿಷ್ಕಲತ್ವ, ಸರ್ವಪ್ರೇರಕತ್ವ ಸರ್ವಾತ್ಮಕತ್ವ. ಸ್ವತಂತ್ರತ್ವ, ರಾಗದ್ವೇಷರಹಿತತ್ವ ಹಾಗೂ ಸರ್ವೇಶ್ವರತ್ವಗಳೆಂಬ ದಶವಿಧ ಗುಣನಿರೂಪಣೆಯು ವೇದಾಂತಶಾಸ್ತ್ರ ಸಂಮತವಾಗಿ ಶ್ವೇತಾಶ್ವತರೋಪನಿಷತ್ತಿನ ಈ ಕೆಳಗಿನ ಮಂತ್ರವನ್ನು ಸ್ಮರಣೆಗೆ ತರುತ್ತದೆ.

ಏಕೋದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾಂತರಾತ್ಮಾ।
ಕರ್ಮಾಧ್ಯಕ್ಷಃ ಸರ್ವಭೂತಾದಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ
(vi-11)

ಉಪವೇದಗಳನ್ನು ವಿವರಿಸುವಾಗ ಋಗ್ಯಜುಸ್ಸಾಮಾಥರ್ವಗಳಿಗೆ ಕ್ರಮವಾಗಿ ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥವೇದಗಳೆಂದು ತಿಳಿಸುವುದು ಔತ್ತರೇಯರು ಹೇಳುವ ಅಥರ್ವೋಪ ವೇದ ಸ್ಥಾಪತ್ಯವೆಂಬುದಕ್ಕಿಂತ ಭಿನ್ನವಾಗಿದ್ದು ಪ್ರಾಚೀನವೆನಿಸಿದ ದಾಕ್ಷಿಣಾತ್ಯ ಸಂಪ್ರದಾಯವನ್ನೇ ಪುಷ್ಟಿಗೊಳಿಸಿದೆ.

ಉಪನಿಷದ್ವಿಭಾಗದಲ್ಲಿ ದಶೋಪನಿಷತ್ತುಗಳಿಗೆ ಪ್ರಾಧಾನ್ಯವನ್ನು ಮೊದಲಿಗೆ ಕೊಡದಿರುವುದು ವಿಸ್ಮಯಾವಹ. ಈಶ, ಕೇನ, ಕಠವೇ ಮೊದಲಾದ ಆನುಪೂರ್ವಿ ಇಲ್ಲದೆ ಸೇಶ್ವರತತ್ತ್ವೋಪನಿಷತ್ತುಗಳೂ, ಯತ್ಯಾಶ್ರಮಕೀರ್ತನದ ಉಪನಿಷತ್ತುಗಳೂ ಮೇಲಣಸ್ಥಾನಪಡೆದಿವೆ. ಪ್ರಧಾನವಾದ ದಶೋಪನಿಷತ್ತುಗಳಲ್ಲಿ ಕೇವಲ ನಾಲ್ಕು ಮಾತ್ರ ಬೃಹದಾರಣ್ಯಕ, ಕಠ, ವಾಜಸನೇಯೀ (ಇದೇ ಈಶವಿರಬೇಕು), ಮುಂಡಕ ಹೆಸರಿಸ ಲ್ಪಟ್ಟಿವೆ. ಈ ವಿಚಾರವು ಹೆಚ್ಚಿನ ಗಮನವನ್ನಪೇಕ್ಷಿಸುತ್ತದೆ.

ಸಾಮಾನ್ಯವಾಗಿ ಸ್ಮೃತಿಗಳಲ್ಲಿ ಹದಿನೆಂಟು ಬಹು ವಿಖ್ಯಾತ. ಆದರೆ ಪ್ರಕೃತ ಗ್ರಂಥದಲ್ಲಿ ಹತ್ತೊಂಬತ್ತು ಸ್ಮೃತಿಗಳ ಉಲ್ಲೇಖವುಂಟು. ಆದರೆ ಪರಾಶರಸ್ಮೃತಿಯ ಸಂಪ್ರದಾಯವೆನಿಸಿದ,

ಕೃತೇ ತುಮಾನವಾ ಧರ್ಮಾಸ್ತ್ರೇತಾಯಾಂ ಗೌತಮಾಃ ಸ್ಮೃತಾಃ।
ದ್ವಾಪರೇ ಶಂಖಲಿಖಿತಾಃ ಕಠೌ ಪಾರಾಶರಾಃ ಸ್ಮೃತಾಃ॥ (I-24)

ಎಂಬ ವ್ಯವಸ್ಥೆಯನ್ನು ವಿವೇಕಚಿಂತಾಮಣಿ ಒಪ್ಪಿದೆ.

ಮುಂದೆ ಚಾತುರ್ವರ್ಣ್ಯವನ್ನು ನಿರೂಪಿಸುವ ಈ ಕೃತಿ ಅತ್ಯಂತ ವಸ್ತುನಿಷ್ಠ ವೆಂಬಂತೆ ವರ್ತಿಸಿದೆ. ಏಕೆಂದರೆ ವೀರಶೈವ ಮತಾನುಸಾರಿಯಾಗಿ ರಚಿತವಾದ ಬಸವ ಭೂಪಾಲನ ಶಿವತತ್ತ್ವರತ್ನಾಕರವು ಸಂಸ್ಕೃತ ಭಾಷೆಯಲ್ಲಿದ್ದು ಅಖಿಲಭಾರತ ವ್ಯಾಪ್ತಿಗೆ ಅನುಕೂಲವೆನಿಸಿದ್ದರೂ ವರ್ಣಪದ್ಧತಿಯನ್ನು ವಿವರಿಸದೆ ಕೇವಲ ವರ್ಣಾತೀತವಾದ ವೀರಶೈವ ತತ್ತ್ವ ಸಂಪ್ರದಾಯಗಳನ್ನೇ ನಿರೂಪಿಸುತ್ತದೆ. ಆದರೆ ವಿವೇಕ ಚಿಂತಾಮಣಿಯು ವೀರಶೈವ ಮತಕ್ಕೆ ಪ್ರಾಧಾನ್ಯವಿತ್ತಿದ್ದೂ ಸಹ ವಸ್ತು ವಿಷಯ ಪರಿಷ್ಕಾರಕ್ಕಾಗಿ

ಚಾತುರ್ವರ್ಣ್ಯಾದಿ ವೀರಶೈವೇತರ ವಿಚಾರಗಳನ್ನೂ ಸಲಕ್ಷಣವಾಗಿ ವಿವರಿಸಿದೆ ಹಾಗೆಯೇ ಷೋಡಶ ಸಂಸ್ಕಾರಗಳ ನಿರೂಪಣೆಯೂ ಸಕ್ರಮವಾಗಿದೆ.

ಗಣಿತ ಸಂಜ್ಞೆಗಳನ್ನು ಕೊಡುವಾಗ ಸಾಮಾನ್ಯವಾಗಿ ಅನುಸರಿಸುವ

ಏಕಂ ದಶಶತಮಸ್ಮಾತ್ ಸಹಸ್ರಮಯುತಂ ತತಃ ಪರಂ ಲಕ್ಷಮ್।
ಪ್ರಯುತಂ ಕೋಟಿಮಥಾಬುದವೃಂದೇ ಖರ್ವಂ ನಿಖರ್ವಂ ಚ॥
ತಸ್ಮಾನ್ಮಹಾಸರೋಜಂ ಶಂಕುಂ ಸರಿತಾ ಪತಿಂ ತ್ವಂತಮ್।
ಮಧ್ಯಂ ಪರಾರ್ಧಮಾಹುರ್ಯಥೋತ್ತರಂ ದಶಗುಣಂ ತಥಾ ಜ್ಞೇಯಮ್॥

ಎಂಬ ಕ್ರಮಕ್ಕಿಂತಲೂ ಕಿಂಚಿದ್ವಿಸ್ತಾರವಾಗಿ, "ಏಕ್ಕಂ, ದಹಂ, ಶತಂ, ಸಾವಿರ, ದಹ ಸಾವಿರ, ಲಕ್ಷ, ದಹಂಲಕ್ಷ. ಕೋಟಿ, ದಹಂಕೋಟಿ, ಶತಂಕೋಟಿ, ಅರ್ಬುದ, ನಿರ್ಬುದ, ಖರ್ವ, ಮಹಾಖರ್ವ, ಪದ್ಮ, ಮಹಾಪದ್ಮ, ಕ್ಷೋಣಿ, ಮಹಾಕ್ಷೋಣಿ, ಶಂಖ, ಮಹಾಶಂಖ. ಕ್ಷಿತಿ, ಮಹಾಕ್ಷಿತಿ, ಕ್ಷೋಭ ಮಹಾಕ್ಷೋಭ ನಿಧಿ, ಮಹಾನಿಧಿ, ಸಾಗರ, ಮಹಾಸಾಗರ, ಹರಿ, ಮಹಾಹರಿ, ಶಂಖೆ, ಮಹಾಶಂಖೆ, ಫಣಿ, ಮಹಾಫಣಿ, ಕ್ರತು, ಮಹಾಕ್ರತು" (ಪು. ೭) ಎಂದು ವಿವರಿಸಿರುವುದಲ್ಲದೆ ಕಿಂಚಿದ್ವಿನೂತನವಾಗಿಯೂ ಇದೆ.

ಇದಲ್ಲದೆ ಸಾಮಾನ್ಯವಾಗಿ ಜೌತಿಷ್ಯದಲ್ಲಿ ಬರುವ, ಛಂದಃಶಾಸ್ತ್ರದಲ್ಲಿ ಬರುವ ಸಂಜ್ಞಾವಾಚಕಗಳನ್ನೂ ಕೊಡಲಾಗಿದೆ. ಅಲ್ಲದೆ ತೂಕದ ಪ್ರಮಾಣವು ಕೌಟಿಲ್ಯನೇ ಮೊದಲಾದ ಅರ್ಥಶಾಸ್ತ್ರಿಗಳಿಗಿಂತ ಭಿನ್ನವಾಗಿ ದೇಶೀಯವಾದ ಬಿಸಿಗೆ, ತೊಲೆ, ಭಾರ ಮೊದಲಾದ ಅಂಶಗಳನ್ನೊಳಗೊಂಡಿದೆ. ಅಳತೆಯಲ್ಲಿಯೂ ಸೊಲ್ಲಗೆ, ಕುಡಬ ಮೊದಲಾದುವು ದೇಶೀಯ. ಇವೆಲ್ಲ ಗಣಿತೀಯ ವಿಚಾರಗಳೂ ವೈಶ್ಯವರ್ಗದಲ್ಲಿ ಬಂದಿರುವುದು ಔಚಿತ್ಯಪೂರ್ಣ.

ಬಳಿಕ ಪುರಾಣ ವಿವರಗಳೆಲ್ಲ ಸಂಪ್ರದಾಯಾನುಸಾರಿಯಾಗಿದೆ. ಇಲ್ಲಿ ಭಾಗವತವನ್ನು ಸ್ವೀಕರಿಸಿ ದೇವಿ ಭಾಗವತವನ್ನು ಬಿಟ್ಟಿರುವುದು ಗಮನಾರ್ಹ.

ಅವೈದಿಕ ಶಾಸ್ತ್ರಗಳ ವಿವರದಲ್ಲಿ ಸೌಗತವೆಂಬೊಂದು ಬೌದ್ಧ ಸಮಯಭೇದವು ಸೌಶ್ರುತವಾಗಿರುವುದು ಪರಿಶೀಲನೀಯ. ಬೌದ್ಧ-ಚಾರ್ವಾಕಗಳು ಜೈನಕ್ಕಿಂತ ಸಂಕ್ಷೇಪವಾಗಿ ವಿವೃತವಾಗಿರುವುದಕ್ಕೆ ಕಾರಣ ಬಹುಶಃ ಆ ಹೊತ್ತಿಗೆ ಅವುಗಳ ಪೂರ್ಣ ಅಸ್ತಂಗತಿಯೇ ಆಗಿರಬಹುದು.

ಉತ್ತರಮೀಮಾಂಸೆಯೆನಿಸಿದ ವೇದಾಂತವರ್ಣನಾವಸರದಲ್ಲಿ "ಪ್ರಪಂಚಕ್ಕೆ ಮಿಥ್ಯಾತ್ವಮಂ ಸಾಧಿಪುದರಿಂ ಬ್ರಹ್ಮಾತ್ಮೈಕ್ಯಮಂ ವರ್ಣಿಸುತ್ತಂ" (ಪು. ೧೩) ಎಂಬ ವಿವರಣೆಯು "ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋಬ್ರಹ್ಮೈವ" ಎಂಬ ಪ್ರಸಿದ್ಧ ವಾಕ್ಯದ ಅನುವಾದದಂತಿದೆ.

ಆತ್ಮ ಪ್ರತಿಪಾದನೆ, ಮೋಕ್ಷ ಪ್ರತಿಪಾದನೆ ಮೊದಲಾದವುಗಳನ್ನು ಮಾಡುವಾಗ ಚಾರ್ವಾಕರಿಂದ ಆರಂಭಿಸಿ ಕಡೆಗೆ ಸಿದ್ಧಾಂತರೂಪವಾಗಿ ವೀರಶೈವತತ್ತ್ವಾನುಸಾರಿಯಾದ

ತತ್ತ್ವದ್ವಿವರಣೆಯಿಂದ ಮುಗಿತಾಯಕ್ಕೆ ಬರುತ್ತದೆ. ಇಲ್ಲಿ ಗಮನೀಯ ವಿಚಾರವೇನೆಂದರೆ ಚಾರ್ವಾಕರಿಂದ ವೇದಾಂತಿಗಳವರೆಗೂ ಒಂದು ಪ್ರಸ್ಥಾನವಾಗಿ ಸೋಪಾನಕ್ರಮವೂ, ಆ ಬಳಿಕ ಆಗಮಗಳಲ್ಲಿ ಕೇವಲ ಶೈವಾಗಮದಪಾಶುಪತರಿಂದ ಆರಂಭಿಸಿ ಸಿದ್ಧಾಂತಿಗಳ ವರೆಗೂ ಮತ್ತೊಂದು ಸ್ತರವೂ ನಿರೂಪಿತವಾಗಿರುವುದೇ.

ಚತುರ್ದಶವಿದ್ಯಾಸ್ಥಾನಗಳನ್ನು "ಸಕಲ ಶಾಸ್ತ್ರಂಗಳೊಳಗೆ ವೇದ ನಾಲ್ಕು. ವೇದಾಂಗವಾರು, ಮೀಮಾಂಸಾನ್ಯಾಯುಪಂಬೆರಡು. ಸ್ಮೃತಿಪುರಾಣವೆಂಬೆರಡು ಕೂಡಿ ಹದಿನಾಲ್ಕು ವಿದ್ಯೆಗಳೆನಿಸಿಕೊಳುತಿರ್ಕುಂ" ಎಂಬ ವಿವರಣೆಯು ಸಾಂಪ್ರದಾಯಿಕವಾಗಿದ್ದು ಆಗಮಗಳನ್ನೊಳಗೊಂಡಿಲ್ಲದ್ದು ಗಮನಾರ್ಹ. (ಪು. ೧೫)

ಪ್ರಮಾಣ ನಿರೂಪಣಾವಸರದಲ್ಲಿ ಪ್ರತ್ಯಕ್ಷ, ಅನುಮಾನ, ಆಗಮ (ಶಬ್ದ). ಅರ್ಥಾಪತ್ತಿ, ಉಪಮಾನ, ಅಭಾವ, ಸಂಭವ ಮತ್ತು ಐತಿಹ್ಯಗಳೆಂಬ ಎಂಟನ್ನು ನಿರೂಪಿಸಿರುವುದು ಸ್ವಾರಸ್ಯವಾಗಿದೆ. ಸಾಮಾನ್ಯವಾಗಿ ಮೀಮಾಂಸಕರು ಆರು ಪ್ರಮಾಣಗಳನ್ನೂ ಅದ್ವೈತವೇದಾಂತಿಗಳು ಆರು ಅಥವಾ ಐದು (ಅಭಾವ ಅಥವಾ ಅನುಪಲಬ್ಧಿ ಎಂಬುದು ಅದ್ವೈತವಾದದ ಪ್ರಮಾಣವೆಂದು ಕೆಲವರೂ, ಅಲ್ಲವೆಂದು ಹಲವರೂ ವಿವರಿಸುತ್ತಾರೆ. ಶ್ರೀ ಶಂಕರೋತ್ತರ ಅದ್ವೈತಿಗಳೆಲ್ಲ ಹೆಚ್ಚಾಗಿ ಅನುಪಲಬ್ಧಿ ಯನ್ನೊಪ್ಪಿದ್ದಾರೆ. ಆದರೆ ಆಚಾರ್ಯರಲ್ಲಿ ಇರುವುದು ಐದೇ ಪ್ರಮಾಣಗಳು) ಪ್ರಮಾಣಗಳನ್ನೂ ಲೆಕ್ಕಿಸುವಾಗ ಶೈವಾದ್ಯಾಗಮವಾದಿಗಳು ಎಂಟು ಪ್ರಮಾಣಗಳನ್ನೂ ಗ್ರಹಿಸಿರುವುದಿಲ್ಲ ಸ್ಮರಣೀಯ.

ಆದರೆ ಮುಂದೆ ಬರುವ ಅನೇಕ ವಿಚಾರಗಳು ಪರಿಶುದ್ಧವಾದ ಅದ್ವೈತವೇದಾಂತ ಸಂಮತ ಸಂಗತಿಗಳಾಗಿವೆ. ಈ ಸಂದರ್ಭದಲ್ಲಿ ಬಂದಿರುವ ವಿವರಣೆಗಳೊಂದೊಂದೂ ರಮಣೀಯವಾಗಿವೆ, ಕೇವಲ ದಿಗ್ದರ್ಶನಕ್ಕಾಗಿ ಮತ್ತು ಗ್ರಂಥಕರ್ತರ ವಿಜ್ಞತಾಸೌಲಭ್ಯ ಪ್ರದರ್ಶನಕ್ಕಾಗಿ ಅತ್ಯಂತ ಗಹನವಾದ ಮಿಥ್ಯಾತ್ವ ನಿರುಕ್ತಿಯನ್ನು ಅದೆಷ್ಟು ತಿಳಿಯಾಗಿ ವಿವರಿಸಲಾಗಿದೆಯೆಂಬುದನ್ನಿಲ್ಲಿ ಉದ್ಧರಿಸಿ ಮನದಟ್ಟಾಗಿಸಬಹುದು.

"ಮಿಥ್ಯೆಯೆಂದೊಡೆ ಗಗನಕುಸುಮದಂತೆ ಸರ್ವಥಾ ಶೂನ್ಯವೆಂಬುದಲ್ತು. ಮತ್ತೇನೆನೆ, ಸ್ವಪ್ನಗಜಾದಿಕದಂತೆ ತೋರುತ್ತಿರ್ದು ವಿಚಾರಬಾಧಿತಮಪ್ಪುದೇ ಮಿಥ್ಯೆಯಕ್ಕುಂ" (ಪು. ೩೧) ಇಲ್ಲಿ 'ವಿಚಾರಬಾಧಿತ' ಎಂಬ ಮಾತೂ, 'ತೋರುತಿರ್ದು' ಎಂಬ ನುಡಿಯೂ ಬಹುಮುಖ್ಯ. ಮಿಥ್ಯೆಯೆಂಬುದು 'ವಿಕಲ್ಪಜ್ಞಾನ'ದಂಥ ಗಗನ ಕುಸುಮಾದಿಗಳಲ್ಲ. ಅದು ಭಾಸಮಾನವಾದರೂ ವಿಚಾರಾಸಹವೆನಿಸಿದ ಒಂದು ಸ್ತರದ ಸತ್ಯ; ಪರಮಸತ್ಯವಲ್ಲ. ಈ ಸೂಕ್ಷ್ಮದ ಅರಿವಿಲ್ಲದಿದ್ದರೆ ಇಡಿಯ ವೇದಾಂತವೇ ಅಸಂಗತವಾಗುತ್ತದೆ. ವೇದಾಂತವಿರೋಧಿಗಳೂ ಅವಿಚಾರಿತ ರಮಣೀಯವಾಗಿ ಮಿಥ್ಯಾತ್ವ ವನ್ನು ಅನೃತತ್ವದೊಡನೆಯೂ, ಆತ್ಮತತ್ತ್ವವನ್ನು ದೇಹತತ್ತ್ವದೊಡನೆಯೂ ಸಮೀಕರಿಸಿ ಪೂರ್ವಪಕ್ಷ ಮಾಡುತ್ತಿರುವ ದೌಷ್ಟ್ಯವನ್ನು ಗ್ರಹಿಸಿಯೇ ಶ್ರೀಮನ್ನಿಜಗುಣರಿಲ್ಲಿ

ಸಮೀಚೀನವಾಗಿ ಪ್ರಪಂಚಿಸಿದ್ದಾರೆ. ಇಂಥ ನಿಶಿತ ಬುದ್ಧಿಯ ಸರ್ವಗ್ರಾಹ್ಯವಿಚಾರಗಳಿಗೆ ಈ ಕೃತಿ ತವನಿಧಿ.

"ಅಲ್ಲದುದರಲ್ಲಿ ಅಹುದೆಂಬ ಬುದ್ಧಿಯೇ....ಅಧ್ಯಾಸ" (ಪು. ೩೮) ಎಂಬ ಸೂತ್ರ ಪ್ರಾಯ ವಾಕ್ಯವಂತೂ "ಅಧ್ಯಾಸೋ ನಾಮ ಅತಸ್ಮಿಂಸ್ತದ್ಬುದ್ಧಿರಿತಿ" ಎಂಬ ಶ್ರೀ ಶಂಕರಾಚಾರ್ಯರ ಅಧ್ಯಾಸಭಾಷ್ಯದ ವಾಕ್ಯದ ಅನುಪಮಾನುವಾದವೇ ಆಗಿದೆ. ಇಂಥ ಸೂತ್ರಪ್ರಾಯವಾದ ಅಸ್ತೋಭವೂ, ಅನವದ್ಯವೂ, ಅಲ್ಪಾಕ್ಷರ ಸಂಘಟಿತ ನಿರಲ್ಪಾರ್ಥಕಲ್ಪಶಿಲ್ಪವೂ ಆದ ವಾಕ್ಯಗಳದೆಷ್ಟೋ, 'ವಿವೇಕ ಚಿಂತಾಮಣಿ'ಯಲ್ಲಿವೆ.

ಮುಂದೆ ಔಪನಿಷದಮತಾನುಸಾರವಾಗಿ ವಿಶದವಾಗಿ "ತತ್ತ್ವಮಸಿ" ವಾಕ್ಯದ ಅರ್ಥವನ್ನು ನಡೆಸಲಾಗಿದೆ. ಸಿದ್ಧಾಂತವು "ಶಿವ-ಜೀವತದುಭಯೈಕ್ಯಮೆಂಬುದೇ ಕ್ರಮ ದಿಂದರ್ಥತ್ರಯಂಗಳಕ್ಕುಂ" (ಪು. ೪೪) ಎಂದಾಗಿದೆ. ನಾನಾ ವಿಧವಾದ ಸಾಧನಗಳ, ಶ್ರವಣ-ಮನನಾದಿಗಳ ನಿರೂಪಣೆಯ ಬಳಿಕ ಜೀವನ್ಮುಕ್ತಿಯನ್ನು ವಿವರಿಸಲಾಗಿದೆ. ಭಗವದ್ಗೀತೆಯಲ್ಲಿ ಹೇಳಲಾದ ಜ್ಞಾನಾಗ್ನಿದಗ್ಧಕರ್ಮತ್ವವನ್ನೇ ಕಡೆಗೆ ಜೀವನ್ಮುಕ್ತನ ಲಕ್ಷಣವೆಂದು ಅಂಗೀಕೃತಿ ಉಂಟು. ಬಳಿಕ ವಿಶದವಾಗಿ ಬರುವ ಜೀವನ್ಮುಕ್ತಪ್ರಶಂಸೆ ಯಂತೂ ತುಂಬ ಸುಂದರವಾಗಿ ಶ್ರೀ ಶಂಕರಾಚಾರ್ಯರ 'ವಿವೇಕ ಚೂಡಾಮಣಿ'ಯನ್ನು ನೆನಪಿಸುತ್ತದೆ. ಅಲ್ಲದೆ ವಿರೋಧಾಭಾಸಾಲಂಕಾರದಿಂದ ಕಮನೀಯವಾಗಿದೆ. (ಪುಟ ೫೯-೬೦ ನೋಡಿರಿ).

ಅತ್ಯಂತ ವಿಸ್ತಾರವಾದ ದ್ವಿತೀಯ ಪರಿಚ್ಛೇದದಲ್ಲಿ 'ಶಿವಸಿದ್ಧಾಂತ ಪದ್ಧತಿ' ಬಂದಿದೆ. ಇಪ್ಪತ್ತೆಂಟು ಆಗಮಗಳ ಭೇದಗಳು, ತದುತ್ಪತ್ತಿ-ವಿಶೇಷತೆಗಳೂ ವಿವಿಧ ಶೈವ ಪ್ರಸ್ಥಾನಗಳೂ ನಿರೂಪಿತವಾಗಿವೆ. ಅಲ್ಲದೆ ಆಗಮಗಳಿಗೇ ವಿಶಿಷ್ಟವೆನಿಸಿದ ಸುದೀರ್ಘವೂ ನಾನಾ ವಿಭಾಗಾತ್ಮಕವೂ ಆದ ವಿವರಣೆಗಳಿಲ್ಲಿವೆ. ಶೈವಲಾಂಛನಗಳಲ್ಲಿ ಅತಿಗಣ್ಯವೆನಿಸಿದ ವಿಭೂತಿ-ರುದ್ರಾಕ್ಷಗಳ ವಿಚಾರ ಬಂದಿದೆ. ಇಲ್ಲಿ ವಿಭೂತಿಯನ್ನು ಭಸ್ಮವೆಂದೇ ವಿವರಿಸಿರು ವುದು ಸ್ಮರಣೀಯ. ಅಲ್ಲದೆ ವರ್ಣಾಶ್ರಮಾನುಸಾರವಾಗಿ ಲೌಕಿಕ-ವೈದಿಕಾದಿ ವಿವಿಧಾಗ್ನಿ ಗಳಲ್ಲಿ ದಗ್ಧವಾದಗೋಮಯ-ಸಮಿತ್ಕಾಷ್ಠಾದಿಗಳ ಭಸ್ಮಗಳ ಧಾರಣವನ್ನು ವಿಧಿಸಿರುವುದು ವೈದಿಕ ಶೈವವಿಚಾರೋಚಿತವಾಗಿದೆ. ಬಳಿಕ ಮಂತ್ರವಿಚಾರ ಬಂದಿದೆ. ಅನಂತರ ಮಂತ್ರಗಳಿಗೆ ಬೀಜ-ಶಕ್ತಿ-ಕೀಲಕಗಳೂ, ಅಂಗನ್ಯಾಸ-ಕರನ್ಯಾಸಾದಿಗಳೂ ವಿಧಿವತ್ತಾಗಿ ನಿವೃತವಾಗಿವೆ. ಶಿವಪಂಚಾಕ್ಷರಕ್ಕೂ ಮುನ್ನ ಸೋಹಂ ತತ್ತ್ವಬೋಧಕವಾದ ಸವಿತೃದೇವತಾಕವೆನಿಸಿದ ಹಂಸಮಂತ್ರ ವಿವರಗಳು ಬಂದಿರುವುದು ಗಮನಾರ್ಹ. ಜಪವಿಚಾರವಂತೂ ಅತಿವಿಸ್ತಾರ ವಾಗಿಯೇ ಬಂದಿದೆ. ಷಡಕ್ಷರ ಮಂತ್ರದ ವಿವರಗಳಿಲ್ಲಿ ಬಾರದಿರುವುದು ಮುಖ್ಯವಾಗಿ ಚಿಂತ್ಯಸಂಗತಿ. ಬಳಿಕ ಶಿವಪೂಜಾ ವಿವರಗಳಿವೆ. ಅನಂತರ ವೀರಶೈವ ಲಕ್ಷಣಗಳು ಬಂದಿವೆ. ಇಲ್ಲಿಯ ದೀಕ್ಷಾವಿಧಿ ವಿವರಗಳೂ ಅನವದ್ಯವಾಗಿವೆ. ಷಟ್ಸ್ಥಲಗಳ ನಿರೂಪಣೆಯೂ ಹದವರಿತು ಬಂದಿದೆ.

ಈ ಬಗೆಯಲ್ಲಿ ಶುದ್ಧಶೈವ-ವೀರಶೈವಗಳ ವಿವರಗಳ ಬಳಿಕ ಪುರಾಣಾಗಮ ರೀತಿಯಿಂದ ಆಶ್ರಮ ಲಕ್ಷಣಗಳು ನಿರೂಪಿತವಾಗಿವೆ. ಇಲ್ಲಿ ಪ್ರಾಚೀನ ಸಂಪ್ರದಾಯದಂತೆ ದ್ವೈಕಾಲಿಕ ಸಂಧ್ಯೆಯೇ ವಿಹಿತವಾಗಿರುವುದು ವಿಶೇಷತಃ ಸ್ಮರಣೀಯ. ('ಉದಯಾಸ್ತಮಯ ಸಂಧ್ಯಾವಂದನೆ' ಪು. ೧೧೭) ಆದರೆ ಗಾಯತ್ರೀನಿರೂಪಣ ಕಾಲದಲ್ಲಿ ಗಾಯತ್ರೀ-ಸಾವಿತ್ರೀ-ಸರಸ್ವತಿಯೆಂಬ ತ್ರಿಕಾಲಾವಸ್ಥೆಯನ್ನು ವಿವರಿಸಲಾಗಿವೆ. ಅನಂತರ ಗೃಹಸ್ಥರ ಪಂಚಮಹಾಯಜ್ಞಗಳ ವಿವರಗಳು ಬಂದಿವೆ. ಮನ್ವಾದಿ ಸ್ಮೃತಿಗಳಿಗೆ ಅನುಗುಣವಾಗಿಯೇ ಆಶ್ರಮಗಳ ವಿಧಿ-ನಿಷೇಧಗಳಿದ್ದು ಸಂನ್ಯಾಸಾಶ್ರಮ (ಯತ್ಯಾಶ್ರಮ)ಕ್ಕೆ ವಿಶೇಷ ಪ್ರಾಮುಖ್ಯ ಸಂದಿದೆ. ಪ್ರಾಚೀನವಾದ ಕಟೀಚಕ-ಬಹೂದಕ-ಹಂಸ-ಪರಮಹಂಸರೆಂಬ ಕ್ರಮದಿಂದ ಮೊದಲಿಗೆ ಶಿಖಾ-ಸೂತ್ರ-ತ್ರಿದಂಡಗಳನ್ನೂ, ಅನಂತರ ಇವುಗಳ ತ್ಯಾಗವನ್ನೂ ಮಾಡುವ ಪದ್ಧತಿಯನ್ನೇ ವಿವರಿಸಲಾಗಿವೆ. ಅತ್ಯಾಶ್ರಮಿಯ ವಿವರಗಳಂತೂ ಅತಿಮನೋಹರವಾಗಿವೆ. ಇಲ್ಲಿಯೇ 'ಬ್ರಾಹ್ಮಣ' ಲಕ್ಷಣವೂ ಬಂದಿವೆ.

ಬಳಿಕ ಅಷ್ಟಾಂಗಯೋಗ ವಿಚಾರಗಳು ಬರುತ್ತವೆ. ಇವೆಲ್ಲವೂ ಶಾಸ್ತ್ರಸಂಗತವೆನಿಸಿವೆ. ಅನಂತರ ಜ್ಞಾನಪದದಲ್ಲಿ ಪಶು-ಪತಿ-ಪಾಶಗಳ, ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳ ವಿವರಗಳಿವೆ. ಅಂತೆಯೇ ಇಚ್ಛಾ-ಜ್ಞಾನ-ಕ್ರಿಯಾಶಕ್ತಿಗಳ ವಿಕಾಸಕ್ಕೆ ಬಂಧಕವಾದ ಆಣವ, ಮಾಯಿಕ ಹಾಗೂ ಕಾರ್ಮಣಗಳೆಂಬ ಮಲತ್ರಯಗಳ ನಿರೂಪಣೆ ಬಂದಿವೆ. ಬಳಿಕ ಪರಾದಿ ನಾದಚತುಷ್ಟಯದ ವಿವರಣೆಯುಂಟು. ಅಂತ್ಯದಲ್ಲಿ ಶುದ್ಧ ಶೈವಾಗಮಾನುಸಾರವಾದ 'ಶಿವಸಾಮ್ಯ'ರೂಪದ ಮೋಕ್ಷ ಲಕ್ಷಣವುಂಟು.

ತೃತೀಯ ಪರಿಚ್ಛೇದದಲ್ಲಿ ಅಜಾಂಡಾದಿಕ ವಿವರಗಳಿವೆ. ಇಲ್ಲಿ ಪಂಚೀಕರಣದಂಥ ಕ್ಲಿಷ್ಟ ವೈಜ್ಞಾನಿಕ ವಿಚಾರವಿದೆ. ಅಷ್ಟದಿಗ್ಗಜ-ಅಷ್ಟನಾಗ-ಆದಿಕೂರ್ಮವೇ ಮೊದಲಾದ ಪ್ರತಿಮಾತ್ಮಕ ಪೃಥಿವ್ಯಾಧಾರ ತತ್ತ್ವಗಳ ಪೌರಾಣಿಕ ವಿವರಣೆಯಿದೆ. ನರಕದ ವಿಸ್ತೃತ ವರ್ಣನೆಯೂ, ಪಾತಕ-ಮರಣಾದಿಗಳ ವ್ಯಾಖ್ಯಾನವೂ ಬಂದಿದೆ. ಒಟ್ಟಾರೆ ಇದು ಹೆಚ್ಚಾಗಿ ಪೌರಾಣಿಕ ವಿವರ. ಆದರೆ ಇದರ ಹಿಂದಣ ತತ್ತ್ವ ಮತ್ತು ಕಲ್ಪಕಶಕ್ತಿ ನಮ್ಮ ಆದ್ಯರ ದೂರದರ್ಶಿತ್ವದ ಸಂಕೇತವಾಗಿದೆ.

ಚತುರ್ಥಪರಿಚ್ಛೇದದಲ್ಲಿ ಮನ್ವಾದಿವಿವರ, ಲೋಕಪಾಲಕಾದಿ ದೇವತಾವಿಚಾರ, ಭಾರತಾದಿ ನಾನಾ ವರ್ಷಗಳೇ ಮುಂತಾದ ಅದ್ಭುತರಮ್ಯ ಸಂಗತಿಗಳಿವೆ. ಇವುಗಳು ಒಂದು ಬಗೆಯ 'ಪುರಾಣ ಸಮಯ'ಗಳೆನ್ನಬಹುದು. ಇವುಗಳ ಬಳಿಕ ಕೇವಲ ನಾಮೋಲ್ಲೇಖ ಮಾತ್ರವಾಗಿ ನಾನಾ ಲೌಕಿಕ ಶಾಸ್ತ್ರಸಂಗತಿಗಳು ಪ್ರಸ್ತಾವಗೊಂಡಿವೆ. ರಾಜಲಕ್ಷಣ, ಛಂದಸ್ಸು, ಅಲಂಕಾರ, ರೀತಿ ಕಾವ್ಯದ ಗುಣದೋಷ, ರಸ-ಭಾವವಿಚಾರ, ನಾಯಿಕಾ-ನಾಯಕ ಲಕ್ಷಣ-ಕಾಮಶಾಸ್ತ್ರಾದ್ಯಂಶಗಳು ಯಾವುದೇ ವಿವರಣೆಗಳಿಲ್ಲದೆ ಕೇವಲ ನಿಘಂಟು ಪ್ರಾಯವಾಗಿ ಬಂದಿವೆ. ಇಲ್ಲಿ ಕೃತಿಕಾರರಿಂದ ಹೆಚ್ಚು ವಿಶದೀಕರಣವಿದ್ದಪಕ್ಷದಲ್ಲಿ ತುಂಬ ಉಪಕಾರವಾಗುತ್ತಿತ್ತು. ಬಳಿಕ ಸ್ವಲ್ಪ ದೀರ್ಘವಾಗಿಯೇ ಸಂಗೀತಶಾಸ್ತ್ರದ ಪಿಂಡೋತ್ಪತ್ತಿ

ಪ್ರಕರಣ. ಸ್ವರ-ಲಯೋತ್ಪತ್ತಿ. ರಾಗಲಕ್ಷಣ-ತಾಳ ಪ್ರಕ್ರಿಯೆಗಳು ಬಂದಿವೆ. ಈ ಭಾಗವು ತತ್ತಚ್ಛಾಸ್ತ್ರಜ್ಞರಿಗೆ ತುಂಬ ಬೋಧಪ್ರದವಾಗಬಲ್ಲುದು. ವೃತ್ತಭೇದವನ್ನು ಕುರಿತಂತೆಯೂ ಕೆಲವು ಅಂಶಗಳಿವೆ. ಅನಂತರ ಭರತವರ್ಷದ ನದನದೀ-ನಗ-ದೇಶ-ತೀರ್ಥಾದಿಗಳ ವಿವರಗಳುಂಟು. ಆ ಬಳಿಕ ಸಂಕೇತ ಪದಕೋಶದ ರೀತಿಯಲ್ಲಿ ಸಂಖ್ಯಾತ್ಮಕವಾಗಿ ಕ್ಲೇಶಪಂಚಕದಿಂದ ಆರಂಭಗೊಂಡು ಹಲವು ಸಂಗತಿಗಳ ನಾಮೋಲ್ಲೇಖವುಂಟು. ಇಂಥ ವಿವರಣೆ ಸಾಮಾನ್ಯವಾಗಿ ಅನ್ಯವಿಶ್ವಕೋಶಗಳಲ್ಲೆಲ್ಲಿಯೂ ಬಂದಿಲ್ಲ.

ಪಂಚಮ ಪರಿಚ್ಛೇದವು ಶಾಕ-ಕುಶ-ಶಾಲ್ಮಲ್ಯಾದಿ ಸಪ್ತದ್ವೀಪಗಳ ಸಂಗತಿಗಳನ್ನು ಹೇಳುವ ಪೌರಾಣಿಕ ಭುವನಕೋಶ.

ಷಷ್ಠಪರಿಚ್ಛೇದವು ವರಾಹಮಿಹಿರನ ಬೃಹತ್ಸಂಹಿತೆಯನ್ನು ಆಧರಿಸಿ ವಾಯುಗತಿ-ವೃಷ್ಟಿಲಕ್ಷಣ-ಗ್ರಹಗತಿಯೇ ಮೊದಲಾದ ಉಪಯೋಗಾರ್ಹ ಅಂಶಗಳನ್ನು ಹ್ರಸ್ವವಾಗಿ ನಿರೂಪಿಸುತ್ತದೆ, ದೇವತೆಗಳ ಸ್ವರೂಪ, ಖೇಚರರ ವಿವರಣೆಯೇ ಮೊದಲಾದ ಪೌರಾಣಿಕಾಂಶಗಳೂ ಬೆರೆತುಬಂದಿವೆ. ಊರ್ಧ್ವವಾಗಿರುವ ಸಪ್ತಲೋಕಗಳ ಪ್ರಸ್ತಾವವೂ ಸೇರಿದಂತೆ ನಾನಾ ದೇವತೆಗಳ ಲೋಕಗಳ ವರ್ಣನೆಯುಂಟು. ಇವುಗಳಿಗಿಂತ ಸ್ವಾರಸ್ಯ ಪೂರ್ಣವಾದದ್ದು ಋಷಿವಂಶ-ದೇವವಂಶ-ರಾಜವಂಶಗಳ ಪ್ರಸ್ತಾವ. ವಿಶೇಷತಃ ಪ್ರಜಾಪತಿಗಳ ಸಂತಾನ ಸ್ವರೂಪ ನಿರೂಪಣೆಯು ನಮ್ಮ ಪುರಾಣಗಳ ಪ್ರತೀಕಾತ್ಮಕ ಅದ್ಭುತ ದರ್ಶನಕ್ಕೆ ಸಾಕ್ಷಿ. ಇಲ್ಲಿಯೇ ಬರುವ ಸುಖ ತಾರತಮ್ಯ ಕೋಷ್ಟಕವು ತೈತ್ತರೀಯೋಪನಿಷತ್ತಿನ ಆನಂದ ಮೀಮಾಂಸೆಯ ಅವತರಣಿಕೆ. ಕಡೆಗೆ ಬರುವ ವಿವಿಧ ಪ್ರಮಾಣದ ಉದ್ದಗಲಗಳ ಅಳತೆಯ ಕೋಷ್ಟಕವು ತುಂಬ ಉಪಯೋಗಕಾರಿ. ಇದು ಪ್ರಾಚ್ಯಭಾರತೀಯ ಕೋಷ್ಟಕಗಳಿಗೊಂದು ಮಾದರಿ. ಪರಮಾಣುವಿನಿಂದ ಆರಂಭಿಸಿ ಯೋಜನದವರೆಗೆ ಸಾಗುವ ಈ ಉದ್ದದ ಪರಿಭಾಷೆ ಆ ಕಾಲದ ಜನರ ಅದ್ಭುತಮಾಪನ ಶಕ್ತಿಗೂ ನಿಖರತೆಗೂ ಸಾಕ್ಷಿ.

ಸಪ್ತಮ ಪರಿಚ್ಛೇದವು ಶತರುದ್ರ ಸಂಬಂಧಿತವಾದ ಅನೇಕ ವಿವರಗಳನ್ನು ಒಳಗೊಂಡಿದೆ. ಇಲ್ಲಿಯ ಸಾಮಗ್ರಿ ಹೆಚ್ಚಾಗಿ ಆಗಮಿಕ.

ಅಷ್ಟಮ ಪರಿಚ್ಛೇದವೂ ಇದರ ಮುಂದುವರಿಕೆಯಾಗಿದ್ದು ಶಿವ-ಶಕ್ತಿತತ್ತ್ವನಿರೂಪಣೆಯನ್ನೂ ಮಾಡುತ್ತದೆ.

ನವಮ ಪರಿಚ್ಛೇದವು ಕೇವಲ ದೇಹಾತ್ಮವಾದಿಗಳೂ, ಪ್ರತ್ಯಕ್ಷೈಕ ಪ್ರಾಮಾಣ್ಯರೂ ಆದ ಚಾರ್ವಾಕರ ಖಂಡನೆಯನ್ನು ಮೊದಲಿಗೆ ಸಂಗ್ರಹಿಸುತ್ತದೆ. ಬಳಿಕ ದೇವಯಾನ-ಪಿತೃಯಾಣಗಳೆಂಬ ಶುಕ್ಲ-ಕೃಷ್ಣ ಗತಿಗಳನ್ನು ಛಾಂದೋಗ್ಯೋಪನಿಷತ್ತು ಹಾಗೂ ಬ್ರಹ್ಮಸೂತ್ರಗಳಿಗೆ ಸಂಮತವಾಗಿ ಸಂಗ್ರಹಿಸಿ ಅನಂತರ ಪಂಚಾಗ್ನಿ ಹೋತ್ರರೂಪವಾದ ಪುನರಾವೃತ್ತಿಕ್ರಮವನ್ನೂ ಔಪನಿಷದ ಮಾರ್ಗದಲ್ಲಿ ರೂಪಿಸುತ್ತದೆ. ಇಲ್ಲಿಯ ಪಿಂಡೋತ್ಪತ್ತಿ ವಿಚಾರವು ತುಂಬ ಶಾಸ್ತ್ರೀಯವಾಗಿ ಗರುಡಾದಿ ಪುರಾಣಗಳ ಹಾದಿಯಲ್ಲಿ

ಸಾಗಿದೆ. ಅನಂತರ ವಿವಿಧ ಪಕ್ವಾಪಕ್ವಜೀವರ ಗತಿ ನಿರೂಪಣದೊಂದಿಗೆ ಈ ಪ್ರಕರಣ ಮುಗಿಯುತ್ತದೆ.

ಕಡೆಯದಾದ ದಶಮಪರಿಚ್ಛೇದವು ಕಾಲವಿಚಾರವನ್ನೊಳಗೊಂಡಿದೆ.ಇದರಲ್ಲಿ ಮೊದಲಿಗೆ ತ್ರುಟಿಯಿಂದ ಆರಂಭವಾಗಿ ಮಹಾಕಲ್ಪದವರೆಗಿನ ಕಾಲಾವಧಿಗಳ ವಿವರಣೆಯುಂಟು. ಈ ಕಾಲಕೋಷ್ಟಕವೂ ಪ್ರಾಚೀನ ಭಾರತೀಯರ ಕಾಲವಿಷಯಕ ಜ್ಞಾನಕ್ಕೆ ಸಾಕ್ಷಿ. ದಿನ-ವಾರ-ಪಕ್ಷ-ಮಾಸ-ಋತು-ಅಯನ-ಸಂವತ್ಸರ-ಯುಗ ಧರ್ಮಾದಿ ವಿವರಗಳನ್ನು ನಿರೂಪಿಸಿ ಅನಂತರ ಶ್ರೀ ಶಂಭುಲಿಂಗನ ನಿರಂಜನಸ್ತವನದೊಡನೆ ಕೃತಿ ಮುಗಿದು ಫಲಶ್ರುತಿಯೂ ಮಾಂಗಲಿಕವಾಗಿ ಪರ್ಯವಸಿಸುತ್ತದೆ.

ಬಹುತೇಕ ಪೌರಾಣಿಕ-ಆಗಮಿಕ-ವೈದಿಕ ವಿಚಾರಗಳುಳ್ಳ ಈ ವಿಶ್ವಕೋಶಾತ್ಮಕ ಕೃತಿಯು ಸಾಮಾನ್ಯವಾಗಿ ಸಂಸ್ಕೃತ-ಕನ್ನಡಗಳ ವಿಶ್ವಕೋಶಗಳಂತೆ ಕೃಷಿ-ಗೋರಕ್ಷೆ-ರಾಜತಂತ್ರ-ಸೂಪಶಾಸ್ತ್ರ-ಅಶ್ವಶಾಸ್ತ್ರ-ಗಜಶಾಸ್ತ್ರ-ರತ್ನವಿದ್ಯೆ-ರಸವಾದ-ತಾಂಬೂಲಾದ್ಯುಪಭೋಗ-ಕ್ರೀಡೆ-ವಿನೋದ-ಮೃಗಯಾಶಿಲ್ಪ-ಸ್ಥಾಪತ್ಯ-ವೈದ್ಯವೇ ಮೊದಲಾದ ಅನೇಕ ಲೌಕಿಕ ಶಾಸ್ತ್ರಗಳನ್ನು ಒಳಗೊಳ್ಳದೆ ಪ್ರತ್ಯೇಕವಾಗಿ ನಿಲ್ಲುತ್ತದೆ ಹೀಗಾಗಿ ಇದನ್ನು ಸರ್ವಗ್ರಾಸಿಯಾದ ಸಾಮಾನೋಪಯೋಗಿ—**general use** ವಿಶ್ವಕೋಶವೆನ್ನಲಾಗದೆ ವಿಶೇಷವಾದ **special use**-ವಿಶ್ವಕೋಶವೆನ್ನಬಹುದು. ಇಂಥ ಚಿಕ್ಕದಾದರೂ ಚೊಕ್ಕವಾದ ಕೈಪಿಡಿಯನ್ನು ನಮಗಾಗಿ ಅನುಗ್ರಹಿಸಿದ ಶ್ರೀಮನ್ನಿಜಗುಣರು ಸದಾ ವಂದ್ಯರು. ತಮ್ಮ ಸ್ವಭಾವ ಸಿದ್ಧಿಗಳಿಗನುಗುಣವಾಗಿ ಅಲೌಕಿಕ ವಿಷಯಗಳನ್ನೇ ಹೆಚ್ಚಾಗಿ ಸಂಗ್ರಹಿಸಿರುವ ವಿವೇಕ ಚಿಂತಾಮಣಿಯನ್ನು 'ಲೋಕೋತ್ತರಕೋಶ'ವೆಂದು ಪಾರಿಭಾಷಿಕವಾಗಿ ಹೇಳಬಹುದಾಗಿದೆ.

ಅಡಿ ಟಿಪ್ಪಣಿಗಳು

'ವಿವೇಕಚಿಂತಾಮಣಿ'ಯ ಆಕರಗ್ರಂಥ ಸಮೀಕ್ಷೆಯ ದಿಗ್ದರ್ಶನಕ್ಕಾಗಿ ಕೇವಲ ಒಂದೆರಡು ಉದಾಹರಣೆಗಳನ್ನು ತತ್ತನ್ಮೂಲಗ್ರಂಥ ಸಂವಾದಿ ವಾಕ್ಯಗಳೊಡನೆ ಇಲ್ಲಿ ಕೊಡಲಾಗಿದೆ. ಈ ಬಗೆಗೆ ವ್ಯಾಪಕಾಧ್ಯಯನದ ಅಗತ್ಯವಿದೆ.

೧. ಭುವನಕೋಶ ವಿವರಣೆಯಲ್ಲಿ 'ಸಮರಾಂಗಣ ಸೂತ್ರಧಾರ'ವೆಂಬ ಭೋಜರಾಜನ ಗ್ರಂಥದ ಆಧಾರ:(ಹೋಲಿಸಿನೋಡಿ: ಸಮರಾಂಗಣ ಸೂತ್ರಧಾರ: ಅಧ್ಯಾಯ ೫, ಹಾಗೂ ವಿವೇಕ ಚಿಂತಾಮಣಿ; ಪು. ೧೬೪. ೧೭೭)

೨. ಸಂಗೀತ ವಿಚಾರದಲ್ಲಿ ನಾಟ್ಯಶಾಸ್ತ್ರ: (ಭರತಪ್ರಣೀತ)ದ ಆಧಾರ; (ನೋಡಿ; ನಾಟ್ಯಶಾಸ್ತ್ರ; ಅಧ್ಯಾಯ ೨೮, ವಿವೇಕ ಚಿಂತಾಮಣಿ, ೧೮೭)

೩. ಬ್ರಾಹ್ಮಣಾದಿ ವಿವಿಧವರ್ಣ ಧರ್ಮಾನುಷ್ಠಾನ ವಿವರಣೆಯಲ್ಲಿ ಮನ್ವಾದಿಸ್ಮೃತಿ-ಸೂತ್ರ ಗ್ರಂಥಗಳ ಆಧಾರ. (ನೋಡಿ: ಮನುಸ್ಮೃತಿ, ಅಧ್ಯಾಯ ೧: ಯಾಜ್ಞವಲ್ಕ್ಯಸ್ಮೃತಿ, ಅಧ್ಯಾಯ ೧: ಗೌತಮಧರ್ಮಸೂತ್ರ, ಅಧ್ಯಾಯ ೯: ಆಪಸ್ತಂಬಧರ್ಮಸೂತ್ರ ಅಧ್ಯಾಯ, ೨ ಹಾಗೂ ವಿವೇಕಚಿಂತಾಮಣಿ. ಪು. ೬–೭)

೪. ಪಿಂಡೋತ್ಪತ್ತಿಪ್ರಕರಣದಲ್ಲಿ ಗರ್ಭೋಪನಿಷತ್ತಿನ ಆಧಾರ (ನೋಡಿ: ಅಷ್ಟೋತ್ತರ ಶತೋಪನಿಷದಃ ಪು. ೫೮೨; ವಿವೇಕಚಿಂತಾಮಣಿ ಪು. ೨೫೫–೨೫೭):

೫. ಯತ್ಯಾಶ್ರಮ ವಿವರಣೆಯಲ್ಲಿ ಸಂನ್ಯಾಸೋಪನಿಷತ್, ಜಾಬಾಲೋಪನಿಷತ್, ಅವಧೂತೋಪನಿಷತ್ ಮೊದಲಾದವುಗಳ ಆಧಾರ. (ನೋಡಿ: ಅಷ್ಟೋತ್ತರ ಶತೋಪನಿಷದಃ, ಪು. ೪೭೧, ೫೬೮, ೫೯೩ ಇತ್ಯಾದಿ ಹಾಗೂ ವಿವೇಕ ಚಿಂತಾಮಣಿ. ಪು. ೧೨೯,೧೨೭–೧೨೮, ೧೨೮ ಇತ್ಯಾದಿ)

೬. ವೀರಶೈವಮತ ವಿಚಾರದಲ್ಲಿ ಸೂಕ್ಷ್ಮಾಗಮದ ಆಧಾರ. (ನೋಡಿ: ಸೂಕ್ಷ್ಮಾಗಮ. ೭ನೆಯ ಪಟಲ: ವಿವೇಕಚಿಂತಾಮಣಿ ಪು. ೯೮)

೭. ಮಂತ್ರ–ತಂತ್ರ ವಿವರಣಾವಸರದಲ್ಲಿ ಶಾರದಾತಿಲಕದ ಆಧಾರ. (ನೋಡಿ: ಶಾರದಾತಿಲಕ, ಮಂತ್ರವಿಚಾರ, ಶ್ಲೋ ೧೧೮–೧೨೨ ವಿವೇಕ-ಚಿಂತಾಮಣಿ ಪು. ೭೬)

೮. ಶಿವಪೂಜಾದಿ ವಿಚಾರದಲ್ಲಿ ಸೂತಸಂಹಿತೆಯ ಆಧಾರ. (ಹೋಲಿಸಿ ನೋಡಿ: ಸೂತಸಂಹಿತೆ ೧–೫, ವಿವೇಕಚಿಂತಾಮಣಿ ಪು. ೮೦–೯೦)

೯. ಅಧ್ಯಾರೋಪ- ಅಪವೃಥ ವಿವೇಕ ವಿಚಾರದಲ್ಲಿ ಶಾಂಕರಭಾಷ್ಯದ ಆಧಾರ. (ನೋಡಿ: ಬ್ರಹ್ಮಸೂತ್ರ, ಭಾಷ್ಯಭೂಮಿಕೆ: ವಿವೇಕಚಿಂತಾಮಣಿ ಪು. ೨೨)

೧೦. ಜೀವನ್ಮುಕ್ತಿ ವಿವೇಚನಾವಸರದಲ್ಲಿ ವಿದ್ಯಾರಣ್ಯಕೃತ ಜೀವನ್ಮುಕ್ತಿ ವಿವೇಕ ಗ್ರಂಥದ ಆಧಾರ. (ಹೋಲಿಸಿ ನೋಡಿ) ಜೀವನ್ಮುಕ್ತಿ ವಿವೇಕ (ಹಾಗೂ ಶ್ರೀ ಶಂಕರಾಚಾರ್ಯರ ವಿವೇಕಚೂಡಾಮಣಿ ಮತ್ತು ವಿವೇಕಚಿಂತಾಮಣಿ ಪು. ೫೬–೬೧)

೧೧. ಯೋಗಾಪಾದ ಸಂದರ್ಭದಲ್ಲಿ ಪಾತಂಜಲ ಸೂತ್ರದ ಆಧಾರ. (ನೋಡಿ: ವ್ಯಾಸಭಾಷ್ಯ ಸಮೇತ ಪಾತಂಜಲಯೋಗ ಸೂತ್ರ ೧–೧–೧೦ ಹಾಗೂ ವಿವೇಕಚಿಂತಾಮಣಿ ಪು. ೧೨೯–೧೩೧)

೧೨. ಅಲಂಕಾರಗಳ ಸಂಖ್ಯಾನಿರ್ಣಯದಲ್ಲಿ ಮಮ್ಮಟ ಹಾಗೂ ರುಯ್ಯಕರ ಗ್ರಂಥಗಳ ಆಧಾರ. (ನೋಡಿ: ಕಾವ್ಯಪ್ರಕಾಶ ಉಲ್ಲಾಸ ೧೦, ಕಾವ್ಯಾಲಂಕಾರ ಸರ್ವಸ್ವ: ವಿವೇಕಚಿಂತಾಮಣಿ ಪು. ೧೭೯)

೧೩. ರಸ–ಭಾವ ಸಂಬಂಧಿತ ವಿಚಾರಗಳಲ್ಲಿ ದಶರೂಪಕದ ಆಧಾರ.

(ನೋಡಿ: ದಶರೂಪಕ II. IV ಪ್ರಕಾಶಗಳು. ವಿವೇಕಚಿಂತಾಮಣಿ ಪು. ೧೮೦-೧೮೩)

೧೪. ನವಬ್ರಾಹ್ಮರ ಸಂತತಿ ವಿವರಗಳಲ್ಲಿ ವಾಯುಪುರಾಣದ ಆಧಾರ.
(ನೋಡಿ: ವಾಯುಪುರಾಣ, ಅಧ್ಯಾಯ ೬೬; ವಿವೇಕಚಿಂತಾಮಣಿ ಪು. ೨೨೫-೨೨೯)

ಈ ರೀತಿ ಮತ್ತು ವಿಸ್ತೃತವಾಗಿ ಆಧಾರಗಳ ಪಟ್ಟಿಮಾಡಬಹುದಾದರೂ ಪ್ರಕೃತಾವಲೋಕನದ ಮಿತಿಯಿಂದಾಗಿ ಸಾಕುಮಾಡಬಹುದು.

ಪಾರಮಾರ್ಥ ಪ್ರಕಾಶಿಕೆಯ ಪ್ರಥಮ ಪರಿಚ್ಛೇದ

—ಸಿದ್ಧರಾಮೇಶ್ವರ ಶರಣರು ಬೆಲ್ದಾಳ

ಪ್ರಸ್ತುತ ಕೃತಿ ಪ್ರಥಮ ಪರಿಚ್ಛೇದವು ಶ್ರೀಮನ್ನಿಜಗುಣರು ಈ ರೀತಿಯಾಗಿ ಪ್ರಾರಂಭಿಸುತ್ತಾರೆ.

ಶ್ರೀಮದನಂತಕೋಟಿ ಬ್ರಹ್ಮಾಂಡ, ಪಿಂಡಾಂಡ ತತ್ವತಾತ್ವಿಕ ಮಾಯಾಬಿಂದು ಮುಖ್ಯ ಚೇತನಾಚೇತನಾತ್ಮಕ ವಿಶ್ವ ಪ್ರಪಂಚ ದೂರ ಹೊರಗೆಲ್ಲಿಯೂ ಪರಿಪೂರ್ಣವಾಗಿ, ಸರ್ವಾಧಾರಕತ್ವ, ಸರ್ವಸಾಕ್ಷಿತ್ವ, ಸರ್ವಾನುಗ್ರಹಕತ್ವಾದಿಗಳುಳ್ಳ, ಸರ್ವಕಾಲಕ್ರಮಾರ್ಥಂಗಳೆಲ್ಲವನೇಕ ಕಾಲದಲ್ಲಿ ನಿರ್ವಿಕಾರತ್ವದಿಂದರಿವ ನಿತ್ಯ ನಿರ್ಮಳ ನಿರ್ವಿಕಲ್ಪ ನಿರಾವರಣ, ನಿರತಿಶಯಾದ್ವಿತೀಯಮಪ್ಪ ಸತ್ಯಸ್ವಯಂಜ್ಞಾನ, ಸಂಪನ್ನನೆನಿಪ್ಪ ನಿಜಗುಣ ಶಿವಯೋಗಿಯ ನಿಮಿತ್ತ ಬಂಧುತ್ವದಿಂ ನೆನೆದು ನೋಡಿ, ಸಂಸ್ಕೃತ ಶಬ್ದ–ವ್ಯಾಕರಣ–ಪ್ರಮಾಣಾದಿಗಳ ಲಕ್ಷಣ ಶಿಕ್ಷೆಗಳಿಲ್ಲದ ಮೋಕ್ಷ ಮಾತ್ರಾಪೇಕ್ಷಿತರಾದ ಸಾಧು ಜನಂಗಳಯಾಸೆಮಿನಿತಿಲ್ಲದೋದಿ ಕೇಳಿ ತಿಳಿದು ಕೃತಾರ್ಥರಾಗಬೇಕೆಂದು "ಶಿವಯೋಗ ಪ್ರದೀಪಿಕೆ"ಯೆಂಬ ವಿಶಿಷ್ಟ ಯೋಗಶಾಸ್ತ್ರದ ಗ್ರಂಥಗಳನ್ವಯ ತಾತ್ಪರ್ಯವನೆ ಸೂಪಶಾಸ್ತ್ರಸಮ್ಮತದಿಂ ನೆರೆದೊಪ್ಪಮಾಗಿ, ಪೊಡವಣಿಗೆಗೊಟ್ಟು ಮಹಾಸ್ವಾದುಗೊಳಿಸುವಂತೆ, ಲಾಲಿತ್ಯಮಾದ ಮಾಲಾಟಿಕಾನು ರೂಪದಿಂ ನೇರಿತ್ತಾಗಿ ಸೇರುವೆಗೆಯ್ದು, ಸಕಲಯೋಗೀಶ್ವರರೊಡಂಬಡುವಂತೆ ಕರ್ನಾಟಕ ವಚನ ರಚನೆಗಳಿಂ "ಪಾರಮಾರ್ಥ ಪ್ರಕಾಶಿಕೆ"ಯೆಂಬ ಹೆಸರಿಟ್ಟು ಬೇರೊಂದು ಪ್ರಕರಣಮಾಗಿ ಮಾಡಿದನೆಂತೊಡೆ ಎಂದು ತಿಳಿಸುತ್ತಾರೆ.

ಇಲ್ಲಿ ಸಂಸ್ಕೃತದಲ್ಲಿರುವ "ಶಿವಯೋಗ ಪ್ರದೀಪಿಕೆ"ಯನ್ನೂ ಸಂಸ್ಕೃತವರಿಯದ ಸಾಧಕ ಸಾಧು ಜನಾಂಗವು ಓದಿ ಕೇಳಿ ಕೃತಾರ್ಥರಾಗಲೆಂದು ಶಂಭುಲಿಂಗದನುಮತದಿಂ ಸಕಲ ಯೋಗಿಗಳೊಪ್ಪುವಂತೆ ಕನ್ನಡ ಭಾಷೆಯ ವಚನ ರೂಪದಲ್ಲಿ "ಪಾರಮಾರ್ಥ ಪ್ರಕಾಶಿಕೆ"ಯೆಂಬ ಬೇರೊಂದು ಹೆಸರಿಟ್ಟು ರಚಿಸಲಾಗಿದೆಯೆಂದು ತಿಳಿಸುತ್ತಾರೆ. ಈ ರೀತಿ ಸೂತ್ರರೂಪದಲ್ಲಿದ್ದ "ಶಿವಯೋಗ ಪ್ರದೀಪಿಕೆ"ಯನ್ನು ನಿಜಗುಣರು ವಿಸ್ತಾರವಾಗಿ ವಿವರಿಸುತ್ತಾರೆ.

"ಶಿವಯೋಗ ಪ್ರದೀಪಿಕೆ"ಯ ಕರ್ತೃವಾದ ಚನ್ನಸದಾಶಿವಯೋಗಿಯೂ ಕಾಮಿಕಾದಿ ವಾತುಲಾಂತ್ಯವಾದ ಸಕಲ ಶಿವಾಗಮಗಳಲ್ಲಿಯೂ ಪಾರಂಗತನಾಗಿದ್ದು, ಜ್ಞಾನ ಕ್ರಿಯಾ ಚರ್ಯಾ ಯೋಗ ಪ್ರತಿಪಾದಕರೂ ಸಕಲ ವೇದ, ವೇದಾಂತ, ಸಾಂಖ್ಯ, ಪಾತಂಜಲಾದಿ ಸಕಲ ಯೋಗಶಾಸ್ತ್ರ ಬಲ್ಲರೂ ಸ್ವಾನುಭವಸಿದ್ಧರೂ ಆಗಿದ್ದು, ರಹಸ್ಯವಾದ ಬ್ರಹ್ಮೋಪದೇಶವನ್ನು ಮುಮುಕ್ಷುಗಳ ಮನಬೆಳಗಲೆಂದು "ಶಿವಯೋಗ ಪ್ರದೀಪಿಕೆ"

ಯೆಂಬ "ಶಿವಯೋಗ" ಶಾಸ್ತ್ರವನ್ನು ಬೋಧಿಸಿದನೆಂದು ಈ ರೀತಿಯಾಗಿ ತಿಳಿಸಲಾಗಿದೆ.

ಶ್ರೀಮನ್ನಿಜ ಮೋಕ್ಷೈಕ ಸಾಧನಗಳಾ ಕಾಮಿಕಾದಿ ವಾತುಲಾಗಮಾಂತಮಾದ ಶಿವಾಗಮಗಳಲ್ಲಿಯೂ, ಜ್ಞಾನ ಕ್ರಿಯಾ ಚರ್ಯ ಯೋಗ ಪ್ರವೀಣನಾದ ವೇದವೇದಾಂತಾ ವೇದನ ವಿಚಕ್ಷಣನಾದ, ಸಾಂಖ್ಯ, ಪಾತಂಜಲಾದ್ಯನೇಕ ಯೋಗಶಾಸ್ತ್ರ ಸಂಭ್ರಮಕ್ಕೆ ಗೋಚರವಲ್ಲದ, ನಿಜಯೋಗಸಿದ್ಧನಾದ, ಬಿಂದುನಾದಾದ್ಯನೇಕ ವಸ್ತು ವಿಚಾರಮಂ ಪಿಂಡಮಧ್ಯದಲ್ಲಿ ಕಾಣಿಸುವ ಕುಶಲನಾದ, ಮಂತ್ರಾದಿ ಯೋಗ ಪರಿಚಿತನಾದ ಸ್ವಾನುಭವ ಸಿದ್ಧನಾದ, ತಾರಕ ಬ್ರಹ್ಮೋಪದೇಶಾದ್ಯಖಿಳ ರಹಸ್ಯೋಪದೇಶ ದೇಶಿಕನಾದ ಚನ್ನಸದಾಶಿವಯೋಗೀಶ್ವರನೆನಿಸುವಾಚಾರ್ಯನು ಮುಮುಕ್ಷುಗಳ ಗುಣಾಂತರಾಳಮಂ ಬೆಳಗಲೆಂದು"ಶ್ರೀ ಶಿವಯೋಗ ಪ್ರದೀಪಿಕೆ"ಯೆಂಬ ಯೋಗಶಾಸ್ತ್ರಮಂ ಮಾಡಲುದ್ಯೋಗಿಸಿ ನಿರ್ವಿಘ್ನದಿಂದದು ಪರಿಸಮಾಪ್ತಿಯಾಗಲೋಸ್ಕರವಾಗಿ, ಶ್ರೀಗುರು ನಮಸ್ಕಾರ ಲಕ್ಷಣ ಮಂಗಲಾಚರಣಂಗೆಯ್ದನದೆಂತೆಂದಡೆ—ಎಂದು ಗುರು ನಮಸ್ಕಾರದಿಂದ ಶಿವ ಯೋಗೋಪದೇಶವನ್ನು ಪ್ರಾರಂಭಿಸುತ್ತಾರೆ.

ಗುರು-ಶಿಷ್ಯ ಸಂಬೋಧೆ

ಶ್ರೀಸದ್‌ಗುರುದೇವನು ಸತ್ ಶಿಷ್ಯನಿಗೆ ಶಿವಯೋಗವನ್ನುಪದೇಶಿಸಲು ಪ್ರಾರಂಭಿಸುತ್ತಾನೆ. ಆ ಶಿಷ್ಯನಾದರೂ ಶಿವಸದ್ಗುಣಗಳಾದ ವಿಷಯದಲ್ಲಿ ವಿರಕ್ತನೂ, ನಿಜಮುಕ್ತಿಯಭಿಲಾಷಿಯೂ, ಶಿವನಲ್ಲಿ ಭಕ್ತಿರತನೂ, ಶಿವಾಗಮಾದಿ ಜ್ಞಾನ ಬೋಧಿಸುವ ಶಾಸ್ತ್ರಗಳಲ್ಲಿ ದೃಢ ವಿಶ್ವಾಸಿಯೂ, ಸಕಲ ಸದ್ಗುಣ ಸಂಪನ್ನನೂ ಆಗಿರುತ್ತಾನೆ. ಶುದ್ಧ ಚರಿತನಾದ ಸತ್ ಶಿಷ್ಯನು ಸದ್ಗುರು ಸನ್ನಿಧಿಯಲ್ಲಿ ಬಂದು, ಭಯಭಕ್ತಿಯಿಂದ ಸಾಷ್ಟಾಂಗ ಪ್ರಣಾಮವ ಮಾಡಿ, ಕರಕಮಲ ಮುಗಿದು, ಯೋಗ ರಹಸ್ಯವನುಪದೇಶಿಸುವ ಕೃಪೆ ಯಾಗಲಿ ಗುರುವೇ ಎಂದು ಬಿನ್ನವಿಸುವನು. ನಿಜಶಿಷ್ಯನನ್ನು ಕರುಣಾಕಟಾಕ್ಷದಿಂದ ಕಂಡ ಸದ್ಗುರುವು, ಮಗನೇ ನೀನು ಜನಜನ್ಮಭೂಮಿಯಾದ ನಿತ್ಯ ಪರಿಪೂರ್ಣ ನಿಷ್ಕಲ ನೆನಿಸುವ ಶಿವತತ್ವವ ಬಲ್ಲವರೊಳಗೆ ಶ್ರೇಷ್ಠನಾಗಿರುವಿ, ಆದ್ದರಿಂದ ನಿನಗೆ ನಿನ್ನ ಶಕ್ತಿಯ ವಿಶೇಷತೆಯಿಂದ ಅತಿ ರಹಸ್ಯವಾದ, ಶಿವ ಜೀವ ಸಾಮರಸ್ಯವೆನಿಸುವ ಶಿವಯೋಗವನುಪ ದೇಶಿಸುವೆನು. ಏಕಾಗ್ರಚಿತ್ತದಿಂದ ಕೇಳೆಂದು ಹೇಳುತ್ತಾನೆ.

ಮಂತ್ರಾದಿ ಯೋಗಗಳು

ಪುರಾತನ ಋಷಿಮುನಿಗಳಿಂದ ಹೇಳಲ್ಪಟ್ಟ ಯೋಗಗಳು ಮಂತ್ರಯೋಗ, ಲಯಯೋಗ, ಹಠಯೋಗವೆಂದು ನಾಲ್ಕು ತೆರನಾಗಿವೆ. ಈ ಯೋಗಗಳು ಶಿವಜೀವರ ಸಾಮರಸ್ಯದ ಪರಮಶ್ರೇಷ್ಠವೆನಿಸುವ "ಶಿವಯೋಗ"ಕ್ಕೆ ಸಾಧನವಾಗಿದೆಯೆಂದು ಪಾರಮಾರ್ಥ ಪ್ರಕಾಶಿಕೆ ತಿಳಿಸುತ್ತದೆ ಮತ್ತು ಪ್ರಥಮ ಪರಿಚ್ಛೇದದಲ್ಲಿ ಐದೂ ಯೋಗದ ಲಕ್ಷಣವನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ.

ಓಂಕಾರ ಪ್ರಣವ ಮಂತ್ರವನ್ನುಳ್ಳ "ಓಂ ನಮಃಶಿವಾಯ" ಎಂಬ ಶಿವ ಷಡಕ್ಷರಿ ಮಂತ್ರವು ಸಪ್ತಕೋಟಿ ಮಹಾಮಂತ್ರಗಳಿಗೆ ಮುಖ್ಯವೆನಿಸಿದೆ. ಈ ಮಂತ್ರವಾಗಲಿ, ಶಿವ ತತ್ವಾಭಿಧಾನವನ್ನುಳ್ಳ "ಸೋಹಂ" ಮಾದಿ ಇತರ ಮಂತ್ರಗಳಾಗಲಿ, ಗುರೂಪದೇಶದಿಂದ ಪಡೆದು ಮೋಕ್ಷಾರ್ಥಕ್ಕಾಗಿ ವಿಧಿಯುಕ್ತವಾಗಿ ನಿಷ್ಠೆಯಿಂದ ಜಪಿಸುವುದೇ ಮಂತ್ರಯೋಗ ವೆನಿಸುವುದು.

ಗುರುಕಾರುಣ್ಯದಿಂದ ಮಂತ್ರೋಪದೇಶವನ್ನು ಪಡೆದ ಮಂತ್ರಯೋಗ ಸಾಧಕನು ಬ್ರಾಹ್ಮಿ ಮುಹೂರ್ತದಲ್ಲಿ ಮಂಗಲಮಯ ಶಿವನನ್ನು ಸ್ಮರಿಸುತ್ತ ಏಳಬೇಕು. ಶೌಚ, ದಂತಧಾವನಾನಂತರ ಜಲಸ್ನಾನ ಭಸ್ಮಸ್ನಾನವ ಗೈದು, ತನುಮನದಿಂದ ಪರಿಶುದ್ಧನಾಗಿರ ಬೇಕು. ನಂತರ ಭಕ್ತಿಕ್ರಿಯೆಯಿಂದ ಇಷ್ಟಲಿಂಗಾರ್ಚನೆಯ ಮನಮುಟ್ಟಿ ಮಾಡಬೇಕು. ದರ್ಭೆ, ವಸ್ತ್ರ, ಕಂಬಳಿ ಮುಂತಾದ ಬಂಧಾಸನದಲ್ಲಿ ಪೂರ್ವಮುಖವಾಗಿ ತನಗಿಷ್ಟವಾದಾ ಸನದಲ್ಲಿ ಮಂಡಿಸಬೇಕು. ನಿಯಮಿತವಾಗಿ ಪೂರಕ, ಕುಂಭಕ, ರೇಚಕವೆಂಬ ಪ್ರಾಣಾಯಾ ಮವನ್ನು ಮಾಡಬೇಕು. ಬಳಿಕ ಋಷಿ, ಛಂದ, ಅಧಿದೇವತೆ, ಶಕ್ತಿ, ಬೀಜ, ಕೀಲಕಗಳಿಂದ ಶಿರ, ಕರ, ದೇಹ, ಷಡಂಗನ್ಯಾಸಗಳನ್ನು ಮಾಡಬೇಕು. (ಈ ನ್ಯಾಸಗಳ ವಿಧಾನವನ್ನು ಪ್ರಸ್ತುತ ಗ್ರಂಥದಲ್ಲಿ ವಿವರವಾಗಿ ವಿವರಿಸಲಾಗಿದೆ) ನಂತರ ರುದ್ರಾಕ್ಷಿ ನೂರೆಂಟರಿಂದಾಗಲಿ ಅಂಗುಲಿಯಿಂದಾಲಿ ವಿಧಿಯುಕ್ತವಾಗಿ ಶಿವಧ್ಯಾನಪೂರ್ವಕ ಜಪವನ್ನು ಮಾಡುವುದೇ ಮಂತ್ರಯೋಗವೆಂದು ವಿಧಾನಸಹಿತ ತಿಳಿಸಲಾಗಿದೆ.

ಈ ಮಂತ್ರಯೋಗದಲ್ಲಿ ಸಗುಣ ಅಥವಾ ನಿರ್ಗುಣ ಮೂರ್ತಿಯನ್ನು ಧ್ಯಾನಿಸ ತಕ್ಕುದ್ದು. ತನ್ನ ಮೂಲಾಧಾರ ಚಕ್ರದಿಂದ ಎಲ್ಲ ಚಕ್ರಗಳ ಮಧ್ಯದ ನಡುನಾಡಿಯೆನಿಸುವ ಸುಷುಮ್ನೆಯ ಮಧ್ಯದಲ್ಲಿ ಪರಮ ಪ್ರಭಾವಮಯವಾದ ದಿವ್ಯಬಿಂದು ಚಿಂತನೆಗೈವುದೇ ನಿರ್ಗುಣ ಮೂರ್ತಿಧ್ಯಾನವೆನಿಸುವುದು ಮತ್ತು ತನ್ನ ಹೃತ್‌ಕಮಲದಾಗ್ರದ ಚಂದ್ರ ಸೂರ್ಯ ಮತ್ತು ಅಗ್ನಿಯೆಂಬ ಮಂಡಲತ್ರಯದ ಮಧ್ಯದಲ್ಲಿ ಏಕಮುಖ, ತ್ರಿನೇತ್ರ, ಚಂದ್ರಕಳೆ, ಪನ್ನಗಭೂಷಣನಾಗಿ ಕರುಣಾಕಟಾಕ್ಷವ ಬೀರುತ್ತ, ವರದ ಹಸ್ತದಿಂದ, ಗಜ ಚರ್ಮಾಂಬರನಾಗಿ, ಜಟಾಧಾರಿಯಾಗಿ ವಾಮಭಾಗದಲ್ಲಿ ಉಮಾದೇವಿ ಸಹಿತನಾಗಿರುವ ಸಗುಣಶಿವನ ಮೂರ್ತಿಯನ್ನು ಧ್ಯಾನಿಸುತ್ತ ಜಪವಗೈವುದೇ ಸಗುಣ ಮಂತ್ರಯೋಗವೆನಿ ಸುವುದೆಂದು ಸ್ಪಷ್ಟಪಡಿಸಲಾಗಿದೆ.

ನಂತರ ಆತ್ಮ ಚೈತನ್ಯದೊಡಗೂಡಿದ ಪರಮಾತ್ಮಕರಣವೆನಿಸುವ ಮನಬುದ್ಧಿ ಚಿತ್ತ ಹಂಕಾರವೆನಿಸುವ ವಿಧ್ಯಾಕರಣಗಳನ್ನು ಮಂತ್ರಯೋಗದಲ್ಲಿ ಹೇಳುವ ಧ್ಯಾನಮೂರ್ತಿ ಯಲ್ಲಾಗಲಿ ಅಥವಾ ವೈಕೃತ್ ಪ್ರಾಣಾಯಾಮದ ಪರಿಣಾಮದಿಂದುಂಟಾದ ದಶವಿಧ ಪ್ರಣವನಾದದಲ್ಲಾಗಲಿ ಮನ ಮೂರುತಿಗಳನ್ನು ಕೂಡಿ ಲಯಿಸುವುದೇ ಲಯಯೋಗ ವೆಂದರುಹಿಸಲಾಗಿದೆ.

ಆ ಬಳಿಕ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ,

ಧಾರಣ, ಸಮಾಧಿಗಳೆಂಬ ಅಷ್ಟಾಂಗ ಮಾರ್ಗದಿಂದಾಗಲಿ ಅಥವಾ ಮಹಾಮುದ್ರೆ, ಮಹಾಬಂಧ, ಮಹಾವೇಧ, ಖೇಚರಿ, ಮೂಲಬಂಧ, ಉಡ್ಯಾಣಬಂಧ, ಜಾಲಂದರಬಂಧ, ವಿಪರೀತಕರಣಿ, ವಜ್ರೋಳಿ, ಶಕ್ತಿಚಾಲನವೆಂಬ ದಶವಿಧ.

ಮುದ್ರಾಬಂಧಗಳಿಂದಾಗಲಿ, ಧೌತಿ, ಬಸ್ತಿ, ನೇತಿ, ತ್ರಾಟಕ, ನೌಲಿ, ಕಪಾಲಭಾತಿ ಗಳೆಂಬ ಷಟ್ ಕರ್ಮಗಳಿಂದಾಗಲಿ ಇಡಾ ಪಿಂಗಳಾ ದ್ವಾರಗಳ ಮೂಲಕ ಹರಿವ ಪ್ರಾಣಾ ಯಾಮವನು ರೇಚಕ ಪೂರಕ ಕುಂಭಕ ಕ್ರಿಯೆಗಳಿಲ್ಲದೆ ಕೇವಲ ಕುಂಭಕದಿಂದ ವಾಯುವನು ತನ್ನಧೀನ ಮಾಡಿಕೊಳ್ಳುವುದೇ ಹಠಯೋಗ ಲಕ್ಷಣವೆನಿಸುವುದು.

ಈ ರೀತಿ ಮಂತ್ರ, ಲಯ, ಹಠಯೋಗಗಳ ಲಕ್ಷಣವ ತಿಳಿಸಿದ ಬಳಿಕ ಇವುಗಳಿಗೆ ಮಿಗಿಲಾದ ರಾಜಯೋಗದ ಲಕ್ಷಣವನ್ನು ತಿಳಿಸುತ್ತಾರೆ.

ರಾಜಯೋಗವು ಬಾಹ್ಯ, ಮಧ್ಯ, ಅಂತರ್ಲಕ್ಷಗಳಿಂದಲೂ ಸಾಧಿಸಿ ಮನೋವ್ಯಾಪಾ ರವಿಲ್ಲದೆ ಬ್ರಹ್ಮಸ್ವರೂಪ ಸಾಕ್ಷಾತ್ಕರಿಸಿಕೊಳ್ಳುವುದಾಗಿದೆ. ಇದರಲ್ಲಿ ಸಾಂಖ್ಯ, ತಾರಕ, ವಿಮನಸಕವೆಂದು ಮೂರು ಅವಾಂತರ ಭೇದಗಳುಂಟು. ಅವು ನಿಜಗುಣರ ಮಾತಿನಲ್ಲಿ ಈ ತೆರವಾಗಿವೆ.

ಸಾಂಖ್ಯಯೋಗ: "ಪೃಥ್ವಿ ಮೊದಲು ಪ್ರಕೃತಿ ಕಡೆಯಾದಿಪ್ಪತ್ತೈದು ತತ್ವಗಳಂ ವಿವೇಕದಿಂ ವಿಲಕ್ಷಿಸಿದ ಜ್ಞಾನವೇ ಸಾಂಖ್ಯಯೋಗವೆನಿಸುವುದು."

ಇಲ್ಲಿ ಸ್ಥೂಲ ಶರೀರದ ಇಪ್ಪತ್ತೈದು ತತ್ವಗಳು ನಾನಲ್ಲ. ಅವುಗಳಿಗೆ ಮೀರಿದ ಸಚ್ಚಿದಾನಂದ ನಿತ್ಯ ಪರಿಪೂರ್ಣ ಪರವಸ್ತುವೇ ತಾನೆಂದರಿದ ಜ್ಞಾನವೇ ಸಾಂಖ್ಯಯೋಗ ವೆಂಬುದು ನಿಶ್ಚಯವಾಗಿದೆ

ತಾರಕ: "ಮನೋವಾಯು ದೃಷ್ಟಿಗಳಂ ಬಹಿರ್ಮುಖವಾಗದಂತೆ ಮುದ್ರಿಸಿ, ಲಕ್ಷವನರಿವುದೇ ತಾರಕ ಯೋಗವೆನಿಸುವುದು."

ಅಂದರೆ ಚಂಚಲವಾದ ಮನಸ್ಸು ಮತ್ತು ಆ ಮನವ ಚಂಚಲತೆಗೆ ಕಾರಣವಾದ ಇಡಾ, ಪಿಂಗಳಗಳಲ್ಲಿ ಹರಿದಾಡುವ ಪ್ರಾಣವಾಯು, ಇವೆರಡರ ಚಲನೆಯಂತೆ ಚಲಿಸುವ ದೃಷ್ಟಿ, ಇವು ಮೂರು ಒಂದಾಗಿ ಭ್ರೂಮಧ್ಯದಲ್ಲಿ ನೆಲೆನಿಂತು ಬಹಿರ್ಮುಖವಾಗದಂತೆ ಮುದ್ರಿಸಿ ನಿಶ್ಚಲತೆಯಿಂದ ಪರಬ್ರಹ್ಮದತ್ತ ಲಕ್ಷಿಪುವೇ ತಾರಕಯೋಗವೆನಿಸುವುದು.

ಅಮನಸ್ಕ: "ಅಂತರಂಗದ ಮನವಂ ನೆನೆಯದಂತೆ ಮುದ್ರಿಸಿ, ನಿರ್ಲಕ್ಷದೊಳ್ ನಿಲುವುದೇ ಅಮನಸ್ಕಯೋಗವೆನಿಸುವುದು." ಅಂದರೆ ಅಂತರಂಗದ ಭ್ರೂಮಧ್ಯದಲ್ಲಿ ದೃಷ್ಟಿವಾಯುಗಳೊಂದಿಗೆ ನೆಲೆನಿಂತ ಮನವನ್ನು ಹೊರಗೆ ಮತ್ತೊಂದು ನೆನೆಯದಂತೆ ನಿರ್ಲಕ್ಷದೊಳಗೆ ನಿಲಿಸುವುದನು ಅಮನಸ್ಕಯೋಗವೆಂದು ತಿಳಿಯತಕ್ಕದ್ದು. ಈ ಮೂರರಲ್ಲಿ ಇಪ್ಪತ್ತೈದು ತತ್ವಗಳ ವಿವರವ ವಿವೇಚಿಸಿ ಸ್ವಸ್ವರೂಪ ಜ್ಞಾನದಿಂದಾದ ಸಾಂಖ್ಯಯೋಗ ಕ್ಕಿಂತಲೂ ನಾದಬಿಂದು ಸಾಕ್ಷಾತ್ಕಾರವೆನಿಸುವ ತಾರಕಯೋಗವೇ ಶ್ರೇಷ್ಠವಾದುದು. ತಾರಕಯೋಗಕ್ಕಿಂತಲೂ ನಿಜವಸ್ತು ಸಾಕ್ಷಾತ್ಕಾರದ ಅಮನಸ್ಕಯೋಗವೇ ಶ್ರೇಷ್ಠವೆಂದು

ರುಹಲಾಗಿದೆ. ಆದರೂ ಈ ಮೂರು ಒಂದನ್ನೊಂದು ಅವಲಂಬಿಸುತ್ತವೆಂಬುದು ಸತ್ಯ.

ಮಂತ್ರ, ಲಯ, ಹಠ ರಾಜಯೋಗಗಳಿಗೂ ಪರಮಶ್ರೇಷ್ಠವೆನಿಸುವ ಪರಿಪೂರ್ಣವೆನಿಸುವ "ಶಿವಯೋಗ" ಲಕ್ಷಣವನ್ನರುಹುದಕ್ಕೆ ಮೊದಲು ಈ ಕೃತಿಯು ಯೋಗಸಾಧನಗೈಯ್ಯಲು ತಕ್ಕ ಸಾಧಕನ ಅಧಿಕಾರಿ ಲಕ್ಷಣವನ್ನು ಬಹು ಮಾರ್ಮಿಕವಾಗಿ ತಿಳಿಸುತ್ತದೆ. ಯೋಗಾಧಿಕಾರಿಗಳಲ್ಲಿ ಮೃದು, ಮಧ್ಯಮ, ಅತಿಮಾತ್ರ, ಅತಿಮಾತ್ರತರವೆಂದು ನಾಲ್ಕು ಬಗೆಯೆಂದು ತಿಳಿಸುತ್ತದೆ.

ಮೃದು: ಬಲಹೀನನು, ಬಹುಕುಟುಂಬಾಧಾರಿಯೂ, ಅಲ್ಪಜ್ಞಾನಿಯೂ, ರೋಗಶೀಲನು, ಭೋಗಾಸಕ್ತನು, ಬಾಹ್ಯ ವ್ಯವಹಾರದಲ್ಲಿ ಮಗ್ನನು, ಆಗಿದ್ದು ಅಲ್ಪ ಸ್ವಲ್ಪ ಯೋಗಾಭ್ಯಾಸದತ್ತ ಆಸಕ್ತಿಯುಳ್ಳಾತನೇ ಮೃದುವೆನಿಸುವನು. ಇಂತಹ ಸಾಧಕನಿಗೆ ಮಂತ್ರಯೋಗ ಸಾಧನವೇ ಯೋಗ್ಯವೆಂದಿದೆ.

ಮಧ್ಯಮ: ಸುಖದುಃಖಗಳಲ್ಲಿ ಹಿಗ್ಗದೆ ಕುಗ್ಗದೆ ಸಮಭಾವಿಯಾಗಿ, ಸತ್ಯಶರಣರ ಸಂಗದಲ್ಲಿ ಸುಖಸಂತೋಷಿಯಾಗಿ, ಎಲ್ಲ ಕಾರ್ಯಗಳ ಪರಿಣಾಮದಲ್ಲಿ ಸಾಕ್ಷಿಕನಾಗಿ, ಪರಿಶುದ್ಧವಾದ ಅಂತಃಕರಣ ಉಳ್ಳಾತನಾಗಿ, ಸತ್ವದೇಹಿಯಾಗಿ, ಯೋಗಾಭ್ಯಾಸದಲ್ಲಿ ಪ್ರೀತಿಯುಕ್ತನಾಗಿರುವಾತನೇ ಮಧ್ಯಮನೆನಿಸುವನು. ಈ ಸಾಧಕನಿಗೆ ಲಯಯೋಗವೇ ಯೋಗ್ಯವೆಂದಿದೆ.

ಅತಿಮಾತ್ರ: ಶಮದಮಾದಿ ಸದ್ಗುಣ ಸಂಪನ್ನನಾಗಿ, ಧೈರ್ಯ, ಶೌರ್ಯ, ಸತ್ಯ, ಶೌಚಾದಿ ಸಿದ್ಧನಾಗಿ, ನಿರಾಶೆ, ನಿಶ್ಚಲಚಿತ್ತನಾಗಿ, ಯೋಗಾಭ್ಯಾಸದೊಳತಿಪ್ರೀತನಾಗಿರ್ಪಾತನೆ ಅತಿಮಾತ್ರನೆನಿಸುವನು. ಆತಂಗೆ ಹಠಯೋಗವೇ ಯೋಗವೆಂದರುಹಿದೆ.

ಅತಿಮಾತ್ರತರ: ಸಕಲಶಾಸ್ತ್ರ ಪ್ರವೀಣನಾಗಿ, ಸಕಲ ಭೋಗವಿರಹಿತನಾಗಿ, ಸಕಲ ಬಾಹ್ಯವ್ಯಾಪಾರವಿಲ್ಲದಾತನಾಗಿ, ವಿಕಾರರಹಿತನಾಗಿ, ವಿಚಾರಪರನಾಗಿ, ಯೋಗಾಭ್ಯಾಸದೊಳು ಪರಮ ಪ್ರೀತನಾಗಿರ್ಪಾತನೇ ಅತಿಮಾತ್ರನೆನಿಸುವನಾತಂಗೆ ರಾಜಯೋಗವೇ ಯೋಗ್ಯವೆಂದಿದೆ. ಈ ತೆರನಾಗಿ ಸಾಧಕನ ಯೋಗಾಧಿಕಾರ ಲಕ್ಷಣವನ್ನು ಸಮಂಜಸವಾಗಿ ತಿಳಿಸಿದೆ.

ಬಳಿಕ ಮೇಲೆ ವಿವರಿಸಿದ ನಾಲ್ಕು ಯೋಗಗಳಲ್ಲಿ ರಾಜಯೋಗವೇ ಮಿಗಿಲಾಗಿದೆ. ಆ "ರಾಜಯೋಗ"ಕ್ಕೂ ಮಿಗಿಲಾದ "ಶಿವಯೋಗ" ಉಂಟೆಂದು ಅದರ ಸಂಕ್ಷಿಪ್ತ ಲಕ್ಷಣವನೀಪರಿಯಾಗಿ ಅರುಹಿದೆ.

ಶಿವಯೋಗ

"ಶಿವಯೋಗ"ವ ಪ್ರತಿಪಾದಿಸುವ ಪೂರ್ವದಲ್ಲಿ ಶ್ರೀಮನ್ನಿಜಗುಣರು "ರಾಜಯೋಗ"ಕ್ಕೂ "ಶಿವಯೋಗ"ಕ್ಕೂ ಪಾರಮಾರ್ಥದಿಂ ಭೇದವಿಲ್ಲವಾದರೂ ನಿಜಮೋಕ್ಷ ಬಯಸುವ ಸಾಧಕರ ಬುದ್ಧಿ ಸೌಕರ್ಯಕ್ಕೋಸುಗಮುಪಚಾರ ಭೇದಮುಂಟೆಂದು ತಿಳಿಸುತ್ತಾರೆ.

ಪುರುಷ ಸಾಕ್ಷಾತ್ಕಾರವೇ ರಾಜಯೋಗವೆಂದು ಪೇಳ್ವುದರಿಂದ ರಾಜಯೋಗಂ ಶಿವಯೋಗವೆನಿಸಲರಿಯುದೆಂದು ಸ್ಪಷ್ಟಪಡಿಸಿದ್ದಾರೆ.

"ಶಿವಯೋಗ"ವು ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನೆ ಯುಂಗೈದು ಭೇದಗಳಿಂದ ಕೂಡಿದೆ.

ಶಿವಜ್ಞಾನ: ಪರಶಿವತತ್ವದಿಂದಲೇ ತಾನುದಿಸಿ ಬಂದದ್ದರಿಂದ ಆ ಶಿವಸ್ವರೂಪವೇ ನಾನೆಂಬ ನಿಜದರಿವೆ ಶಿವಜ್ಞಾನವು.

ಶಿವಭಕ್ತಿ: ತಾನುದಿಸಿ ಬಂದ ಶಿವತತ್ವದಲ್ಲಿ ಪುನಃ ಬೇರಿಲ್ಲದೆ ಬೆರೆದು ಸಾಮರಸ್ಯ ವಾಗಲು, ಶ್ರದ್ಧಾನಿಷ್ಠಾ, ಅವಧಾನ, ಅನುಭವ, ಆನಂದ, ಸಾಮರಸ್ಯವೆಂಬ ಷಡ್ವಿಧ ವಾದ ಅಭಿನ್ನಭಕ್ತಿಯಿಂದ "ಷಟ್‌ಸ್ಥಲ" ಪಥವಿಡಿದು ಶಿವಸಾಮರಸ್ಯದತ್ತ ಮುನ್ನಡೆವುದೇ ಶಿವಭಕ್ತಿಯು.

ಶಿವಧ್ಯಾನ: ವಿಶ್ವವನ್ನೊಳಗೊಂಡ ಪರವಸ್ತುವು ತನ್ನಂತರಂಗದಲ್ಲಿ ಬೀಜದಲ್ಲಿ ವೃಕ್ಷವಡಗಿರುವಂತೆ ಅವ್ಯಕ್ತವಾಗಿ ಅಡಗಿರುವ ಭೇದವನರಿದು, ಅಂತರ್ಮುಖಿಯಾಗಿ, ನವಚಕ್ರಗಳಲ್ಲಿ ಧ್ಯಾನಗೈವುದೆ ಶಿವಧ್ಯಾನವು.

ಶಿವವ್ರತ: ತನುಮನ ಭಾವಗಳ ಅವಗುಣಗಳನ್ನೆಲ್ಲ ಅರಿವು ಆಚಾರ ಅನುಭಾವ ದಗ್ನಿಯಲ್ಲಿ ದಹಿಸಿ, ಶುದ್ಧಸುಜ್ಞಾನ, ಸತ್‌ಕ್ರಿಯೆ, ಸದ್‌ಭಾವ ಸಂಪನ್ನನಾಗಿ ಸರ್ವಾಂಗದಲ್ಲಿ ತ್ರಿಭಸಿತವ ಧರಿಸುವುದೇ ಶಿವವ್ರತವು.

ಶಿವಾರ್ಚನೆ: ಈ ತೆರನಾಗಿ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತಗಳಿಂದ ಕೂಡಿ ಮಾಡುವ ಲಿಂಗಪೂಜೆಯೇ ಶಿವಾರ್ಚನೆಯು. ಇಂತಹ ಶಿವಾರ್ಚೆಯೇ ಶಿವ ಯೋಗವು. ಈ ಶಿವಯೋಗದಲ್ಲಿ ಸಗುಣ ನಿರ್ಗುಣಯೋಗಗಳು ಸಮನ್ವಯಗೊಳ್ಳು ತ್ತವೆ. ಅದರ ಸೂಕ್ಷ್ಮ ಭೇದವು "ಪಾರಮಾರ್ಥಪ್ರಕಾಶಿಕೆ"ಯು ಮುಂದೆ ಅರುಪುತ್ತದೆ.

ಶಿವಾರ್ಚನೆಯೆನಿಸುವ ಶಿವಯೋಗವಿಲ್ಲದೆ ಶಿವಸಾಮರಸ್ಯವು ಸಾಧ್ಯವಿಲ್ಲ. ಆ ಶಿವ ಯೋಗವು ಶಿವಜ್ಞಾನವಿಲ್ಲದಾತನಿಗೆ ಸಾಧ್ಯವಿಲ್ಲ. ಆದ್ದರಿಂದ ಸಮಸ್ತ ಚರಾಚರ ಜಗತ್ತಿ ನುತ್ಪತ್ತಿಗೆ ಕಾರಣವಾದ ನಿಷ್ಕಲ ನಿರಂಜನನೆನಿಸುವ, ಸರ್ವಜ್ಞನೆನಿಸುವ ಮಹಾದೇವ ನುಂಟೆಂದು ಭಾವಿಸಿ ಆ ಮಹಾದೇವನೇ ಪರವಸ್ತುವು, ಆ ಪರವಸ್ತುವಿನಿಂದ ಚಿತ್ ಶಕ್ತಿಯು ಹೊರಹೊಮ್ಮಿತು. ಆ ಚಿತ್ ಶಕ್ತಿಯು ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿಕ್ರಿಯಾಶಕ್ತಿಗಳೆಂದು ಪರ್ಯಾಯ ನಾಮವುಳ್ಳದ್ದಾಗಿದೆ. ಶಿವಶಕ್ತಿಯಿಂದುದಿಸಿದ ಈ ಶಕ್ತಿಗಳೇ ಕ್ರಮವಾಗಿ ಶಾಂತ್ಯಾತೀತೋತ್ತರ, ಶಾಂತ್ಯಾತೀತ, ಶಾಂತಿ ವಿದ್ಯೆ, ಪ್ರತಿಷ್ಠೆ ನಿವೃತ್ತಿ ಕಲೆಗಳೆಂಬಭಿಧಾನದಿಂದಲೂ ಕರೆಯಲ್ಪಡುತ್ತವೆ. ಈ ಕಲೆಗಳಿಂದಲೆ ಆಕಾಶ, ವಾಯು, ಅಗ್ನಿ, ಅಪ್ಪು, ಪೃಥ್ವಿಗಳೆಂಬ ಪಂಚಭೂತಗಳುದಿಸಿದವು. ಆ ಪಂಚಭೂತ ಗಳಿಂದಲೇ ಸಕಲ ಚರಾಚರವಾದ ದೃಶ್ಯರೂಪ ಜಗತ್ತಿನುತ್ಪತ್ತಿಯಾಯಿತು. ಆದ್ದರಿಂದ ಸಮಸ್ತ ವಿಶ್ವವೆಲ್ಲವೂ ಶಿವತತ್ವದಿಂದುದಯವಾಗಿ ಶಿವಸ್ವರೂಪವೇ ಆಗಿದೆ. ತಾನೂ

ಶಿವಾಂಶಿಕನಾಗಿದ್ದು ಶಿವ ಸಾಮರಸ್ಯಗೈಯುವುದೆ ಬಾಳಿನ ಪರಮ ಗುರಿಯೆಂದು ದೃಢವಾಗಿ ಅರಿವುದೇ ಶಿವಜ್ಞಾನವಾಗಿದೆ. ಈ ಶಿವಜ್ಞಾನವನರಿಯಲು ಶಿವಯೋಗ ಸಂಪನ್ನನಾದ ಸಮರ್ಥ ಸದ್ಗುರುವಿನ ಅವಶ್ಯಕತೆಯನ್ನು ಪಾರಮಾರ್ಥ ಪ್ರಕಾಶಿಕೆಯು ಒತ್ತಿ ಹೇಳುತ್ತದೆ. ಸಮರ್ಥ ಸದ್‌ಗುರುವಿನಿಂದ ಅಸಾಧ್ಯವೂ ಸಾಧ್ಯವಹುದು. ಕಾರಣ ಸದ್ಗುರುವನು ಪ್ರತ್ಯಕ್ಷ ಶಿವನ ಸಾಕಾರ ಸ್ವರೂಪವೆಂದೆ ಭಾವಿಸಿ ಪೂಜೆ, ಸ್ತೋತ್ರ, ಧ್ಯಾನಗಳಿಂದ ಒಲಿಸಿ ಕೊಳ್ಳಬೇಕೆಂದರುಹಿದೆ.

ಸದ್ಗುರುವಿನ ಕರ್ತವ್ಯ

ಶಿವಸ್ವರೂಪನಾದ ಸದ್ಗುರುವು ಶರಣಾಗತನಾದ ಶಿಷ್ಯನ ಭಾವ ಮನ ತನುಗಳಲ್ಲಿ ಮುಸುಕಿದ ಆಣವ, ಮಾಯಾ, ಕಾರ್ಮಿಕವೆಂಬ ಮಲತ್ರಯಗಳನ್ನು ಕಳೆದು ಶುದ್ಧಗೊಳಿಸಿ ಅಲ್ಲಿ ಭಾವ, ಪ್ರಾಣ, ಇಷ್ಟಲಿಂಗಗಳನ್ನು ಪ್ರತಿಷ್ಠಾಪಿಸುವನ್ನು ಸದ್ಗುರುವು ಕರುಣಿಸುವ ದೀಕ್ಷೆಗಳಲ್ಲಿ ನಿರಧಿಕರಣ ದೀಕ್ಷೆ ಸಾಧಿಕರಣ ದೀಕ್ಷೆಗಳೆಂದೆರಡು ತೆರನಾಗಿ ವಿಂಗಡಿಸಲಾಗಿದೆ. ಅವುಗಳ ಲಕ್ಷಣವನ್ನು ವಿವರವಾಗಿ ಅರುಹಲಾಗಿದೆ.

ಸಾಧಿಕರಣ ದೀಕ್ಷೆಯಲ್ಲಿ ಸಬೀಜ ದೀಕ್ಷೆ, ನಿರ್ಬೀಜ ದೀಕ್ಷೆಗಳೆಂದೆರಡು ತೆರನಾಗಿ ವಿಂಗಡಿಸಿ ಬಹು ಮಾರ್ಮಿಕವಾಗಿ ಅರುಹಲಾಗಿದೆ. ಸಬೀಜ ದೀಕ್ಷೆಯಲ್ಲಿ ಲೋಕಧರ್ಮಿಣಿ ಮತ್ತು ಶಿವಧರ್ಮಿಣಿಯೆಂದು ಶಿವಧರ್ಮಿಣಿ ದೀಕ್ಷೆಯಲ್ಲಿ ಮತ್ತೆ ಭೌತಿಕ ದೀಕ್ಷೆ, ನೈಷ್ಠಿಕ ದೀಕ್ಷೆಗಳೆಂದೆರಡು ತೆರನಾಗಿ ಅವುಗಳ ಲಕ್ಷಣಸಹಿತ ವಿವರಿಸಲಾಗಿದೆ. ಆ ವಿವರಣೆಗೆ ನಾನಿಲ್ಲಿ ಹೋಗಲಾರೆ.

ಇನ್ನು ನಿರ್ಬೀಜ ದೀಕ್ಷೆಯಲ್ಲಿ ಸದ್ಯೋನಿರ್ವಾಣದೀಕ್ಷೆ, ಅಸದ್ಯೋನಿರ್ವಾಣ ದೀಕ್ಷೆಗಳೆಂದು ವಿಭಾಗಿಸಲಾಗಿದೆ. ಅಸದ್ಯೋನಿರ್ವಾಣ ದೀಕ್ಷೆಯಲ್ಲಿ ಚಾಕ್ಷುಕಿ, ಸ್ಪರ್ಶ, ವಾಚಿಕ, ಮಾನಸ, ಶಾಸ್ತ್ರ ಮತ್ತು ಯೋಗದೀಕ್ಷೆಗಳೆಂದು ಆರು ತೆರನಾಗಿದೆ ಮತ್ತು ಇದೇ ಅಸದ್ಯೋದೀಕ್ಷೆಯಲ್ಲಿ ಆಜ್ಞಾ, ಉಪಮಾ, ಸ್ವಸ್ತಿಕಾರೋಹಣ, ಕಲಶಾಭಿಷೇಕ, ಭಸ್ಮ, ಆಯುತ, ಸ್ವಾಯತವೆಂದು ಸಪ್ತವಿಧವಾಗಿ ಸಮಂಜಸವಾಗಿ ಅರುಹಲಾಗಿದೆ. ಅಲ್ಲದೆ ಜ್ಞಾನವತಿ, ವೇಧಾ, ಮಂತ್ರ, ಕ್ರಿಯಾದೀಕ್ಷೆಯೆಂದು ಅಸದ್ಯೋ ನಿರ್ವಾಣ ದೀಕ್ಷೆಯು ಪ್ರಸಿದ್ಧವಿದೆ. ಮತ್ತೆ ಜ್ಞಾನೋಪದೇಶ ಮಾಡುವ ಚಿನ್ಮಯ ದೀಕ್ಷೆಯಲ್ಲಿ ಸಮಯದೀಕ್ಷೆ, ಸಾಧಕದೀಕ್ಷೆ, ಆಚಾರ್ಯಾಭಿಷೇಕ ದೀಕ್ಷೆಗಳೆಂದು ಮೂರು ತೆರನಾಗಿ ದೀಕ್ಷಾಭೇದಗಳನ್ನರುಹಲಾಗಿದೆ. ಅವುಗಳ ವಿವರವಿಲ್ಲಿ ಅಸಾಧ್ಯ. ಈ ರೀತಿಯಾಗಿ ಶಿವಯೋಗಕ್ಕೆ ಸಮರ್ಥನಾಗಲು ಶಿಷ್ಯನನ್ನು ಸದ್ಗುರುವು ತನ್ನ ಕಾರುಣ್ಯ ದೀಕ್ಷೆಯಿಂದ ಶುದ್ಧಗೊಳಿಸುವನು.

ಶಿವಪೂಜಾ ವಿಧಾನ

ಶಿವಯೋಗ ಸಂಪನ್ನನಾದ ಸಮರ್ಥ ಸದ್ಗುರುವಿನಿಂದ ಶಿವದೀಕ್ಷೆಯನ್ನು ಪಡೆದ

ಸತ್ ಶಿಷ್ಯನು ತನ್ನಿಷ್ಟ ಲಿಂಗಾರ್ಚನೆಯನ್ನು ಪ್ರತಿದಿನ ಉದಯ, ಮಧ್ಯಾಹ್ನ, ಅಸ್ತಮಾನ ವೆಂಬ ತ್ರಿಕಾಲದಲ್ಲಿಯೂ ಅಥವಾ ತ್ರಿಕಾಲದೊಳಗೆ ತನಗನುಕೂಲವಾದೊಂದು ಕಾಲ ದಲ್ಲಾಗಲಿ ವಿಷಯಭೋಗದಲ್ಲಿ ವಿರಕ್ತನಾಗಿ, ಲಿಂಗಪೂಜೆಯಲ್ಲಿ ಪ್ರೀತನಾಗಿ, ಭಕ್ತಿನಿಷ್ಠೆ ಗಳಿಂದ ಸದ್ಗುರುಪದೇಶ ಮಾರ್ಗದಂತೆ ಜ್ಞಾನ ಕ್ರಿಯಾ ಯುಕ್ತಿ ಸ್ವರೂಪನಾದ ಶಿವನನ್ನು ಅರ್ಚಿಸತಕ್ಕದ್ದೆಂದರುಹಲಾಗಿದೆ.

ಬಾಹ್ಯ ಪೂಜೆ

ಶಿವಪೂಜೆಯು ಬಾಹ್ಯ ಪೂಜೆ ಅಂತ ಪೂಜೆಯುಂದೆರಡು ತೆರನಾಗಿದೆ. ಇವುಗಳಲ್ಲಿ ಅಂತಪೂಜೆಯೇ ಶ್ರೇಷ್ಠವಾಗಿದೆಯಾದರೂ ಬಾಹ್ಯದಲ್ಲಿ ಲಿಂಗಪೂಜೆಯನ್ನು ಭಕ್ತಿ ನಿಷ್ಠೆಗಳಿಂದ ಮಾಡಿದ ನಂತರವೇ ಅಂತಪೂಜೆಯನ್ನು ಮಾಡುವ ಯೋಗ್ಯತೆ ಬರುವು ದೆಂದು ಪಾರಮಾರ್ಥ ಪ್ರಕಾಶಿಕೆ ಅರುಹಿದೆ.

ಅಂತಪೂಜೆ

ಬಳಿಕ ಸತ್ ಪುರುಷರೆಲ್ಲರೂ ಆ ದಿವ್ಯ ತೇಜೋಮಯನಾದ ಪರಶಿವನನು ಜನನ, ಮರಣ, ಜಾತಿ ಮೊದಲಾದ ಸೂತಕಗಳ ಉದಯ, ಮಧ್ಯಾಹ್ನ, ಅಸ್ತಮಾನವೆಂಬ ಕಾಲಗಳ, ಜಾಗ್ರ ಸ್ವಪ್ನ ಸುಷುಪ್ತಿಗಳೆಂಬ ಅವಸ್ಥೆಗಳ ನಿಯಮವಿಲ್ಲದೆ ಎಲ್ಲಿ ಬೇಕಾದಲ್ಲಿ ಸದಾಕಾಲ ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯಗಳಲ್ಲಿ ಭಿನ್ನವಿಲ್ಲವಾಗಿ ಅಗಲ ದಂತೆ ಅರ್ಚಿಸುವರು. ಇದೇ ಅಂತಪೂಜೆಯೆನಿಸುವುದು.

ಮಂದಮತಿಗಳ ಪೂಜೆ

ಮಂದಮತಿಗಳು ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯದಲ್ಲಾಗಲಿ ಅಥವಾ ಬಾಹ್ಯ ಪೀಠಸ್ಥವಾದ ಮೂರ್ತಿಯಲ್ಲಾಗಲಿ ಆಹ್ವಾನ ವಿಸರ್ಜನಾದಿ ಬಾಹ್ಯ ಕ್ರಿಯೆಗಳಿಂದ ಪೂಜಿಸುವರು.

ಅಂತಪೂಜೆಗೆ ಹೃತ್ ಕಮಲವೇ ಆಶ್ರಯ

ಬಾಹ್ಯ ಪೂಜೆಗೆ ಪ್ರತಿಮಾದಿಗಳು ಆಶ್ರಯವಾದರೆ ಅಭ್ಯಾಂತರ ಅರ್ಚನೆಗೆ ವಿಪುಲ ವಾದ ಹೃದಯ ಕಮಲವೇ ಆಶ್ರಯವಾಗಿರುತ್ತದೆ. ಆ ಹೃದಯವು ಪೂರ್ವಹೃದಯ, ಮಧ್ಯಹೃದಯ, ಊರ್ಧ್ವ ಹೃದಯಗಳೆಂದು ತ್ರಿವಿಧವಾಗಿವೆ. ಅವುಗಳಲ್ಲಿ ಪೂರ್ವ ಹೃದಯವು ಕಂಠದಿಂದ ಒಂಬತ್ತು ಅಂಗುಲ ಕೆಳಗೆ ಮತ್ತು ನಾಭಿಯಿಂದ ಹನ್ನೆರಡಂಗುಲ ದಿಂದ ಮೇಲಿನ ಸ್ಥಾನದಲ್ಲಿದೆ. ಈ ಪೂರ್ವಹೃದಯವು ಶುದ್ಧ ಸಾತ್ವಿಕವಾಗಿದ್ದು ಚಂದ್ರನಿಗೆ ಸಮನಾದ ಪ್ರಭೆಯುಳ್ಳದ್ದಾಗಿದೆ. ಅಣಿಮಾದಿ ಅಷ್ಟಮಹಾಸಿದ್ಧಿಗಳೆಂಬ ಎಂಟೆಸಳಿನಿಂದಲೂ, ಭಕ್ತಿಜ್ಞಾನ ವೈರಾಗ್ಯ ಧರ್ಮವೆಂಬ ನಾಲ್ಕೆಸಳಿನಿಂದಲೂ ಸುಶೋಭಿ

ಸುತ್ತಿದೆ. ಅಂತಹ ಹೃದಯ ಕಮಲ ಕಣಿಕೆಯಲ್ಲಿ ಅಕಾರ ಉಕಾರ ಮಕಾರವೆಂಬ ಸೂರ್ಯ ಚಂದ್ರ, ಅಗ್ನಿ ಮಂಡತ್ರಯ ಮಧ್ಯದಲ್ಲಿ ಶುದ್ಧ ಜ್ಞಾನ ಸ್ವರೂಪನಾದ ಪರ ಶಿವನನ್ನು ಧ್ಯಾನಿಸುವುದೇ ಯೋಗ್ಯವೆಂದರುಹಿದೆ

ಸಗುಣ ನಿರ್ಗುಣ ಮೂರ್ತಿ ಕುರಿತು

ಮೇಲೆ ವಿವರಿಸಿದ ಹೃದಯ ಕಮಲ ಮಧ್ಯದಲ್ಲಿ ಧ್ಯಾನಿಸಲು ತಕ್ಕ ಶಿವನ ಸಗುಣ ನಿರ್ಗುಣಮೂರ್ತಿಯ ವಿಷಯವನ್ನು ಕ್ರಮವಾಗಿ ಇಲ್ಲಿ ವಿವರಿಸಲಾಗಿದೆ.

ಸಗುಣ ಮೂರ್ತಿ ವಿಚಾರ

ನಳನಳಿಸುವ ದಳಕುಸುಮ ವಿಕಸಿತ ಕುಸುಮಗಳಿಂದಲೂ, ಫಲಪುಷ್ಪ ಭರಿತ ವಾಗಿಯೂ ಶೋಭಿಸುವ ಕಲ್ಪವೃಕ್ಷದಡಿಯ ವೇದಿಕೆಯಲ್ಲಿ ವಜ್ರ ವೈಡೂರ್ಯಾದಿ ನವ ರತ್ನಮಯವಾದ ಶುದ್ಧ ಸಿಂಹಾಸನದ ಮೇಲೆ ಆನಂದಸ್ವರೂಪನಾಗಿ ಕುಳಿತಿರುವ ಅನಂತ ಕೋಟಿ ಮನ್ಮಥರ ಲಾವಣ್ಯಕ್ಕೆ ಸಮನಾದ ಶರೀರ ಉಳ್ಳಾತನಾಗಿ, ಶೃಂಗಾರ ಮೂರ್ತಿ ಯಾದ ಹದಿಹರೆಯದವನು, ಚಂದ್ರಕಳೆಯ ಶಿರದವನು, ತ್ರಿನೇತ್ರನು, ಪ್ರಸನ್ನ ಮುಖ ವುಳ್ಳಂಥವನು, ವರದ ಹಸ್ತವುಳ್ಳ, ದಿವ್ಯಾಂಬರಧಾರಿಯಾದ ಸರ್ವಮಂಗಳೆಯಾದ ಉಮಾದೇವಿಯಿಂದಲಂಕೃತವಾದ ವಾಮಾಂಗ ಉಳ್ಳ, ಅಣವಾದಿ ಮಲತ್ರಯ ನಾಶಕ ನಾದ, ಸಗುಣಸ್ವರೂಪನಾದ ಶಿವಧ್ಯಾನಿಸಿ, ಪೂಜಿಸಬೇಕೆಂದು ಕೈಲಾಸ ಶಿವನ ಸಗುಣ ಮೂರ್ತಿಯನ್ನರ್ಚಿಸಲು ತಿಳಿಸಿದೆ. ಈ ಸಗುಣ ಮೂರ್ತಿ ಧ್ಯಾನದಿಂದ ನಿರ್ಗುಣ ತತ್ವಮೂರ್ತಿಯ ಧ್ಯಾನ ಮಾಡುವ ಯೋಗ್ಯತೆ ಗಳಿಸಬೇಕೆಂದು ತಿಳಿಸಿದ್ದಾರೆ.

ನಿರ್ಗುಣ ತತ್ವ ವಿಚಾರ

ನಿರ್ಗುಣ ಯೋಗದಲ್ಲಿ ತನ್ನಿಂದನ್ಯವಾದ ವಸ್ತುವಲ್ಲದ, ಎಂದೆಂದೂ ಕೇಡಿಲ್ಲದ, ವ್ಯಾಪಕನಾದ. ಸಕಲ ಮುಕ್ತಿಗೆ ವೇದ್ಯನಾದ, ಸಗುಣ ಮೂರ್ತಿಗೆ ಗೋಚರನಲ್ಲದ, ಜನ್ಮಾದಿ ರಹಿತನಾದ, ನಿಕಲ ಸ್ವರೂಪನಾದ, ಸೃಷ್ಟಿ, ಸ್ಥಿತಿ, ಲಯಗಳಿಲ್ಲದ, ತನಗೊಂದಾ ಲಂಬನವಿಲ್ಲದ ನಿರಾಲಂಬನಾದ, ಶಿವನನ್ನು ಈ ಹಿಂದೆ ಹೇಳಿದ ಹೃದಯ ಕಮಲ ಮಧ್ಯದಲ್ಲಿ ಮುದ್ರಾಬಂಧಗಳಿಂದ ನಿಶ್ಚಲವಾದ ಮನಸ್ಸುಳ್ಳಾತನಾಗಿ ಧ್ಯಾನಿಸುವುದೇ ನಿರ್ಗುಣ ಯೋಗವೆನಿಸುವುದು.

ಇಂಥಹ ನಿರ್ಗುಣ ಪೂಜೆಗೆ ಅವಶ್ಯವಾದ ಪೂಜಾ ಸಾಮಗ್ರಿಗಳು ಕೂಡ ಆ ಪೂಜೆಗೆ ತಕ್ಕಂತಿವೆ. ಶಾಂತಿಯೆಂಬ ಜಲದಿಂದ ದೇವನಿಗೆ ಸ್ನಾನವ ಮಾಡಿ, ಅಣವಾದಿ ಆವರಣವಿಲ್ಲದ ನಿರ್ಮಲವಾದ ವಿಶ್ವವ್ಯಾಪಕವೆಂಬ ವಸ್ತ್ರವನುಡಿಸಬೇಕು. ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳೆಂಬ ಯಜ್ಞಸೂತ್ರವನು, ತನ್ನ ಸಮ್ಯಗ್ ಜ್ಞಾನವೆಂಬ ಗಂಧಾನುಲೇಪನವನು, ಭೂತದಯ ಎಂಬಕ್ಷತೆಯನು, ಮಹಾಭಕ್ತಿಯೆಂಬ ಪುಷ್ಪವನು,

ಅರ್ಪಿಸಬೇಕು. ಬಳಿಕ ಮನ ಬುದ್ಧಿ ಚಿತ್ತ ಅಹಂಕಾರಗಳೆಂಬ ಅಂತಃಕರಣಾದಿಗಳೆ ಧೂಪವಾಗಿ ಜ್ಞಾನಾಗ್ನಿಗೆ ಸಮರ್ಪಿಸಬೇಕು. ಇಂದ್ರಿಯಗಳಿಗೆ ಮುಖ್ಯವಾದ ನೇತ್ರೇಂದ್ರಿಯದ ದೃಷ್ಟಿ ಸ್ಥಿರಗೊಂಡಾಗ ತೋರುವ ನಾನಾತರದ ಶಿವಪ್ರಭೆಯೆಂಬ ದೀಪವನು ಬೆಳಗಿಸಬೇಕು. ಸುಖದುಃಖರಹಿತವಾಗಿ ಆತ್ಮಾರ್ಪಣವೆಂಬ ನೈವೇದ್ಯವನು, ಸತ್ವರಜತಮೋಗುಣತ್ರಯವೆಂಬ ತಾಂಬೂಲವನು ಸಮರ್ಪಿಸಬೇಕು ಮತ್ತು ಪ್ರಾಕೃತ ಪ್ರಾಣಾಯಾಮದಿಂದ "ಹಂಸ" ರೂಪದಲ್ಲಿ ಚಲಿಸುವ ಪ್ರಾಣವನಳಿಸಿ ಸೋಹಂಭಾವ ದಿಂದೋಲೈಸುವ ನಮಸ್ಕಾರವು, ಈ ನಿರ್ಗುಣ ಯೋಗ ಪೂಜೆಗೆ ತಕ್ಕ ಸಾಮಗ್ರಿ ಗಳನ್ನು ಮಹಾಘನಲಿಂಗಕ್ಕೆ ಸಮರ್ಪಿಸಬೇಕೆಂದು ನಿರ್ಗುಣ ಪೂಜಾವಿಧಾನವನರುಹ ಲಾಗಿದೆ.

ಇಂಥಹ ನಿರ್ಗುಣ ಪೂಜೆಗೆ ಸಮರ್ಥನಲ್ಲದ ಮಂದಮತಿಯ ಸಾಧಕರಿಗೆ ಈ ಹಿಂದೆ ಹೇಳಿದ ಸಗುಣ ಶಿವನ ಮೂರ್ತಿಸ್ವರೂಪವನೆ ತನ್ನ ಹೃತ್ ಕಮಲದಲ್ಲಿ ಸಗುಣ ಸಾಮಗ್ರಿಗಳಿಂದರ್ಚಿಸಿ ಧ್ಯಾನಿಸಲು ತಿಳಿಸಲಾಗಿದೆ. ಈ ತೆರನಾದ ಸಗುಣ ನಿರ್ಗುಣ ಪೂಜೆಗೈದಾತನಿಗೆ ಶಿವಯೋಗಜ್ಞಾನವು ಲಭಿಸುವುದೆಂದು ಶ್ರೀಮನ್ನಿಜಗುಣ ಶಿವ ಯೋಗಿಗಳು "ಪಾರಮಾರ್ಥ ಪ್ರಕಾಶಿಕೆ"ಯ ಪ್ರಥಮ ಪರಿಚ್ಛೇದದಲ್ಲಿ ಸಂಕ್ಷಿಪ್ತವಾಗಿ ತಿಳಿಸಿರುತ್ತಾರೆ. ಮುಂದೆ ದ್ವಿತೀಯಾ ಪರಿಚ್ಛೇದದಲ್ಲಿ ಹಠಯೋಗ ಸಾಧನದಿಂದ "ಶಿವಯೋಗ" ಶಿವಾರ್ಚನೆಗೈಯಲು ಬೋಧಿಸುತ್ತಾರೆ.

ದ್ವಿತೀಯ ಪರಿಚ್ಛೇದ

ಮೊದಲ ಪರಿಚ್ಛೇದದಲ್ಲಿ ಹಠಯೋಗ ಸಾಧನೆಯಿಲ್ಲದೆ ಪೂಜಾವಿಧಾನದಿಂದ ಮನಕ್ಕೆ ಚಂಚಲತ್ವ ಉಂಟಾಗುವ ಸಂಭವವುಂಟು. ಆದ್ದರಿಂದ ಆ ಮನ ಚಂಚಲತ್ವವ ನಳಿಸಲು ಬೇರೊಂದು ತರದ ಪೂಜಾವಿಧಾನವ ಪೇಳುವೆನೆಂದು ಶ್ರೀಗುರು ಶಿಷ್ಯನಿಗೆ ನಿರೂಪಿಸುವುದರೊಂದಿಗೆ ದ್ವಿತೀಯಾ ಪರಿಚ್ಛೇದವು ಪ್ರಾರಂಭಗೊಳ್ಳುತ್ತದೆ. ಆ ಬೇರೊಂದು ಪೂಜಾ ವಿಧಾನವೇ ಹಠಯೋಗ. ಆದರಿಂದ ಸಮ್ಯಗ್ ಜ್ಞಾನೋದಯ ವಾಗುತ್ತದೆ. ಸಮ್ಯಗ್ ಜ್ಞಾನದಿಂದ ಶಿವತತ್ವನರಿದಲ್ಲಿ ನಿಜ ಶಿವಯೋಗವೆನಿಸುತ್ತದೆ. ಯೋಗಸಾಧನೆಗೆ ಶರೀರವು ನಿರೋಗಿಯೂ, ನಿರ್ವಿಕಾರವೂ ಸಶಕ್ತವೂ ಆಗಿರಬೇಕು. ಅದಕ್ಕೆ ಪರಿಚ್ಛೇದದಲ್ಲಿ ಮೊದಲರುಹಲಾಗಿದೆ. ಇದುವೇ ಸೂಕ್ತ ಸಲಹೆಯಾಗಿದೆ.

ಅಷ್ಟಾಂಗಯೋಗ ಪೂಜಾವಿಧಿ

ಶಿವ ಸಾಮರಸ್ಯವ ಬಯಸುವ ಸಾಧಕರಿಗೆ ದೇಹರಕ್ಷಣೆಯವಶ್ಯವು. ದೇಹವು ರೋಗಾದಿಗಳಿಂದಲೂ, ವಿಕಾರಾದಿಗಳಿಂದಲೂ ರಕ್ಷಿಸಲು ಹಠಯೋಗವು ಸಾಧನವಾಗಿದೆ. ಹಠಯೋಗವು ಶಿವಯೋಗಕ್ಕೆ ಸಾಧನವಾಗಿದೆ. ಕಾರಣ ಮೊದಲಲ್ಲಿ ಸಾಧಕರಿಗೆ ಹಠಯೋಗ ಸಾಧನೆಯವಶ್ಯವೆಂದಿಲ್ಲಿ ಸ್ಪಷ್ಟಪಡಿಸಲಾಗಿದೆ.

ಆ ಹಠಯೋಗಕ್ಕೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗಗಳುಂಟು. ಮೊದಲ ನಾಲ್ಕಂಗಗಳು ಬಾಹ್ಯ ಪೂಜಾಸಾಧನವೆನಿಸಿದರೆ, ಮುಂದಿನ ನಾಲ್ಕಂಗಗಳು ಅಭ್ಯಾಂತರ ಪೂಜಾ ಸಾಧನವೆನಿಸಿವೆ. ಆದ್ದರಿಂದ ಈ ಹಠಯೋಗದ ಅಷ್ಟಾಂಗಗಳಿಂದ ಶಿವಪೂಜೆಯನ್ನು ಸುಜ್ಞಾನಪೂರಿತ ಗೈಯ್ಯಲು ಮೊದಲು ತಿಳಿಸಲಾಗಿದೆ. ಸಾಧಕರಿಗಿದು ಸೂಕ್ತವಾಗಿದೆ.

ಶುದ್ಧನಲ್ಲದಾತನಿಗೆ ಶಿವಪೂಜೆ ಘಟಿಸದು. ಆ ಆತ್ಮಶುದ್ಧಿಯು ಯಮನಿಯಮಗಳ ಇಪ್ಪತ್ತು ಗುಣಗಳಿಂದ ಸಾಧ್ಯವಾಗುತ್ತದೆ. ತರುವಾಯ ತನಗೆ ವಶವಾದ ಪದ್ಮಾಸನಾದಿ ಆಸನಗಳಲ್ಲಿ ಸುಸ್ಥಿರ ದೇಹ ಮನುಸ್ಸುಳ್ಳವನಾಗಿ ಕುಳಿತು, ಪ್ರಣಾಯಾಮವೆಂಬ ಜಲ ದಿಂದ ಜ್ಯೋತಿರ್ಮಯ ಲಿಂಗಕ್ಕೆ ಮಜ್ಜನಗೈಯ್ಯಬೇಕು. ಈ ನಾಲ್ಕು ತೆರನಾದುದೆ ಬಾಹ್ಯಪೂಜೆಯೆನಿಸುವುದು.

ಬಳಿಕ ಆ ಲಿಂಗಕ್ಕೆ ನೇತ್ರ ಶ್ರೋತಾದಿ ಇಂದ್ರಿಯಗಳ ವಿಷಯಗಳಲ್ಲಿ ವಿಮುಖನಾಗಿ ಮಾಡುವ ಪ್ರತ್ಯಾಹಾರವೇ ಗಂಧವು. ಈ ಇಂದ್ರಿಯ ನಿವರ್ತಿಯಿಂದ ಮನವಂತರ್ಮುಖಿ ಯಾಗಿ ಗೈವ ಧ್ಯಾನವೇ ಪುಷ್ಪಸಮೂಹವು. ದೃಢವಾದ ಧಾರಣವೇ ಧೂಪವು. ಜ್ಞಾತಾಜ್ಞಾತ ಸಮಾಧಿಯೇ ನೈವೇದ್ಯವು. ಇವು ನಾಲ್ಕು ಅಭ್ಯಾಂತರ ಪೂಜಾ ವಿಧಾನ ಗಳೆಂದು ತಿಳಿಸಲಾಗಿದೆ.

ಯಮ ದಶವಿಧ ಗುಣ

ಬಾಹ್ಯಪೂಜೆ ನಾಲ್ಕು ಸಾಧನಗಳಲ್ಲಿ ಮೊದಲ ಯಮ ದಶವಿಧ ಗುಣಗಳಿಂತಿವೆ. ಪರಸ್ತ್ರೀ ಸಂಗರಹಿತನಾಗಿ, ಸ್ವಸ್ತ್ರೀಯಲ್ಲೂ ಶುದ್ಧ ಪರಿತುಷ್ಟನಾಗಿರುವ ಉಭಯ ತರದ ಬ್ರಹ್ಮಚರ್ಯವುಳ್ಳಾತ ಆಗಿರಬೇಕು. ಯೋಗಸಾಧನೆಗೆ ತಕ್ಕ ಸಾತ್ವಿಕವಾದ ಅಲ್ಪಾಹಾರಿ ಯಾಗಿರಬೇಕು. ವ್ಯಾವಹಾರ ಜಗತ್ತಿನಲ್ಲುಂಟಾಗುವ ಶೋಕ ಮೋಹ ಭೀತಗಳಿಂದ ಹೊಯ್ದಾಟವಿಲ್ಲದ ನಿಶ್ಚಲ ಮನಸ್ಸುಳ್ಳಾತನಾಗಿರಬೇಕು. ಯಾವಾಗಲೂ ಸತ್ಯ ವಚನವನ್ನೇ ನುಡಿಯಬೇಕು. ಎಳ್ಳಷ್ಟೂ ಕುಟಿಲತೆಯಿಲ್ಲದಂತಿರಬೇಕು. ಜಲಸ್ನಾನ ಭಸ್ಮಸ್ನಾನಗಳಿಂದ ಬಾಹ್ಯ ಶುಚಿತ್ವನಾಗಿ ಅನ್ಯ ಚಿಂತನೆಯಿಲ್ಲದಂತೆ ಅಂತರಂಗ ಶುಚಿತ್ವವುಳ್ಳಾತನಾಗಿರಬೇಕು. ಪರರ ದ್ರವ್ಯವನಪಹರಿಸದ ನಿರಾಶಾಭಾವವಿರಬೇಕು. ಉದಾರಿಯೂ, ಅಹಿಂಸಾವಾದಿಯೂ ಆಗಿರಬೇಕು. ಇವು ಹತ್ತು ಯಮಾಂಗಗಳು.

ನಿಯಮ ದಶವಿಧ ಗುಣ

ಭೋಗವಸ್ತುಗಳು ಲಭ್ಯವಾಗಲಿ, ನಾಶವಾಗಲಿ ಇವೆರಡರಲ್ಲಿಯೂ ಸಮಾನ ಗುಣ ವುಳ್ಳವನಾಗಿರುವ ಸಂತೋಷಚಿತ್ತವು, ಶಿವಾಗಮ ಜ್ಞಾನಗಳ ಬೋಧೆಯಂತೆ ಪುಣ್ಯ ಪಾಪ ಗಳಾಗುತ್ತವೆಂಬ ವಿಶ್ವಾಸವು, ತನಗೆ ಸದ್ಗುರು ಉಪದೇಶಿಸಿದ ಆಚಾರ ಸತ್ಕೃತ್ಯಗಳಲ್ಲಿ

ಮಗ್ನತೆಯು, ನಾನಾರು ನನಗೆ ಮೋಕ್ಷವೆಂತಾಗುತ್ತದೆಂಬಿವೆ ಮೊದಲಾದ ವಿವೇಕಾಲೋಚನೆಯ ರೂಪತಪವು, ಅರಿವಿನಗ್ನಿಯಲ್ಲಿ ಅಂಗಗುಣಗಳನುರುಹಿದ ಭಸ್ಮನಿಷ್ಠಾದಿವ್ರತವು, ಧ್ಯಾನಸ್ತೋತ್ರಾಭಿಷೇಕಗಳಿಂದ ಪ್ರಣವ ಪಂಚಾಕ್ಷರ ಜಪವು, ಲೋಕವಿರುದ್ಧ ಮತ್ತು ಸುಜ್ಞಾನ ಬೋಧಿಸುವ ಶಾಸ್ತ್ರ ವಿರುದ್ಧವಾದ ಮಾರ್ಗದಲ್ಲಿ ಮನ ಹರಿಯದಂತಿಹುದು, ಯೋಗ ಶಾಸ್ತ್ರಗಳನ್ನು ಸತತ ಕೇಳುವುದು, ಸತ್ ಪಾತ್ರ ದಾನವು ಎಂಬೀ ಹತ್ತು ನಿಯಮ ಭೇದಾಂಗಗಳು. ಹೀಗೆ ಸಗುಣ ಪೂಜಾ ವಿಧಾನಕ್ಕೆ ಯಮ ನಿಯಮಗಳ ಇಪ್ಪತ್ತು ಗುಣಗಳಿಂದ ಶುದ್ಧನಾಗಿ ಸ್ಥಿರಚಿತ್ತನಾಗಿ, ಜಿತೇಂದ್ರಿಯನಾಗಿ ಜ್ಞಾನಮಾರ್ಗದಿಂದ ತನ್ನಾತ್ಮ ಶುದ್ಧಿಯನ್ನೂ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ.

ಆಸನಭೇದ

ಯಮ ನಿಯಮಾದಿಗಳಿಂದ ಪರಿಶುದ್ಧನಾದ ಸಾಧಕನು ಮುಂದೆ ಸುಸ್ಥಿರವಾದ ಆಸನವನ್ನು ಸಾಧಿಸಬೇಕಾಗುತ್ತದೆ ಆಸನಗಳಲ್ಲಿ ಮುಖ್ಯವಾದ ದಶವಿಧಾಸನಗಳನ್ನಿಲ್ಲಿ ನಿರೂಪಿಸಲಾಗಿದೆ. ಅವು ಇಂತಿವೆ:

ಆಸನಗಳಲ್ಲಿ ಸರ್ವಶ್ರೇಷ್ಠವಾದುದು ಸಿದ್ಧಾಸನವು. ಇದು ಬ್ರಹ್ಮಚರ್ಯ ಜೀವನಕ್ಕೆ ಸಹಕಾರಿಯಾಗಿದೆ. ಪದ್ಮಾಸನವು ಚಿತ್ತಚಂಚಲತೆಯನ್ನಳಿಸಿ ಸ್ಥಿರಕಾಯ ಮನಗಳನ್ನು ರುಜುಗೊಳಿಸುವುದು. ಧ್ಯಾನಕ್ಕದು ಬಹುಮುಖ್ಯವಾದುದು. ಸ್ವಸ್ತಿಕಾಸನ, ಮುಕ್ತಾಸನ, ವೀರಾಸನ, ಭದ್ರಾಸನ, ಮಯೂರಾಸನ, ಸಿಂಹಾಸನ, ಗೋಮುಖಾಸನ, ಸುಖಾಸನಗಳೆಂಬ ಹತ್ತು ಮುಖ್ಯವಾದಾಸನಗಳಲ್ಲಿ ಲಕ್ಷಣ ವಿವರಣೆಗಳಿಂದ ತಿಳಿಸಲಾಗಿದೆ. ಈ ಕಿರುಲೇಖನದಲ್ಲಿ ವಿವರಿಸಲು ಸಾಧ್ಯವಿಲ್ಲ. ಪ್ರಸ್ತುತ ಕೃತಿಯಿಂದರಿವುದುತ್ತಮ.

ಈ ರೀತಿಯಾಗಿ ಸಿದ್ಧಾಸನ, ಪದ್ಮಾಸನಗಳಿಂದ ಸುಸ್ಥಿರಚಿತ್ತನಾಗಿ ಯೋಗಸಾಧನೆಗೆ ಸಮರ್ಥನಾದ ಸಾಧಕನ ಸಾಧನೆಗೆ ತಕ್ಕ ಯೋಗಮಂಟಪವನ್ನು ರಚಿಸಿಕೊಳ್ಳುವುದವಶ್ಯ. ಆ ಯೋಗಮಂಟಪದ ಲಕ್ಷಣವೀಪರಿಯಾಗಿ ವಿವರಿಸಲಾಗಿದೆ.

ಯೋಗಮಂಟಪ ಲಕ್ಷಣ

ಎಂಬತ್ನಾಲ್ಕು ಆಸನಗಳಲ್ಲಿ ಮುಖ್ಯವಾದ ದಶವಿಧಾಸನಗಳಲ್ಲಿ ಸಾಧಕನು ತನಗಿಷ್ಟವಾದಾಸನವನ್ನು ಆಯ್ಕೆ ಮಾಡಿಕೊಳ್ಳಬೇಕು. ಪ್ರಾಣಾಯಾಮಾಭ್ಯಾಸಕ್ಕಾಗಿ ಏಕಾಂತ ಸ್ಥಳದಲ್ಲಿ ಯೋಗಮಂಟಪ ರಚಿಸಿಕೊಳ್ಳಬೇಕು. ಯೋಗ ಮಂಟಪದ ವಿವರವನ್ನು "ಪಾರಮಾರ್ಥ ಪ್ರಕಾಶಿಕೆ" ಈ ತೆರನಾಗಿ ವಿವರಿಸುತ್ತದೆ.

"ಅತ್ಯುಚ್ಚವತಿ ನೀಚವಲ್ಲದ ಚಿಕ್ಕ ಬಾಗಿಲವುಳ್ಳ ಕುಳಿ ತೆವರು ರಂಧ್ರಾದಿ ದೋಷಗಳಿಲ್ಲದ ವೃಶ್ಚಿಕಾದಿ ಪ್ರಾಣಿಗಳ ಬಾಧೆಯಿಲ್ಲದ, ಸುತ್ತ ಬಳಸಿದ ಪೌಳಿ ಪಂಟಪ, ಕೈಸಾಲೆ, ಬಾವಿಗಳುಳ್ಳ ಶುದ್ಧ ಗೋಮಯಾನುಲೇಪನಮಾದ, ಪರಿಮಳದಲರಿಂ ಸಿಂಗರಿಸಲ್ಪಟ್ಟ

ಮೇಲುಕಟ್ಟು, ಮೃದುವಾದಹಾಸಿಕೆ, ತಲೆಮುತ್ತೆ, ಗದ್ದುಗೆ, ಯೋಗವಟ್ಟ, ಯೋಗ, ದಂಡಾದಿಗಳುಳ್ಳ, ಎಲ್ಲಾಗವು ಸುಧೂಪಧೂಮದಿಂ ಪೊರೆಯಲ್ಪಟ್ಟ ಪತ್ರ, ಪುಷ್ಪ, ಕಂದಮೂಲ, ಕಟ್ಟಿಗೆ ತ್ರಿಕಟಕಾದಿ ಸಮಸ್ತೌಷಧಿ, ಸಮಗ್ರ ವಿಭೂತಿ, ರುದ್ರಾಕ್ಷಿ, ದರ್ಭೆ, ಕೃಷ್ಣಾಜಿನ, ವ್ಯಾಘ್ರ ಚರ್ಮಾದಿಗಳಿಂದಲಂಕೃತಮಾದ, ಯೋಗೀಶ್ವರರಿಗೆ ಸ್ವೀಕರಿಸಲು ಯೋಗ್ಯಮಾದ, ಗೋಧವೆ, ಶಾಲಿ, ಜವೆ, ಹೆಸರು, ಹಾಲು, ತುಪ್ಪ, ಜೇನುತುಪ್ಪ ಮುಂತಾದ ಪವಿತ್ರಾನ್ನ ಪಾನ ಸಮೃದ್ಧಿಯುಳ್ಳ ಮನೋಹರವಾದ ಯೋಗಗೃಹವಂ ಮಾಡಲ್ವೇಳ್ಕುಂ" ಎಂದು ಯೋಗ್ಯವಾದ ಯೋಗಮಂಟಪ ರಚನೆಯ ವಿಧಾನವನ್ನು ವಿವರಿಸಲಾಗಿದೆ. ಈ ವಿವರಣೆಯು ಯಥಾರೀತಿ "ಶಿವಯೋಗ ಪ್ರದೀಪಿಕೆ"ಯಲ್ಲಿದೆ.

ಒಂದು ವೇಳೆ ಇಂಥಹ ಯೋಗಮಂಟಪ ರಚಿಸಲು ಅಸಾಧ್ಯವಾದಲ್ಲಿ ಮನಕ್ಕೆ ರಮ್ಯವಾದ ವನದಲ್ಲಿಯು ಗುಹ್ಯಾದಿಗಳಲ್ಲಿ ನಿಯತವಾದ ಸ್ಥಾನವನ್ನಾಯ್ಕೆ ಮಾಡಿಕೊಂಡು, ಹೃತ್‌ಕಮಲ ಮಧ್ಯದಲ್ಲಿ ಸಕಲ ನಿಷ್ಕಲಾತ್ಮಕನಾದ ಶಂಭುಲಿಂಗನನ್ನು ಏಕಾಗ್ರಚಿತ್ತದಿಂದ ಪೂಜಿಸಬೇಕು. ಆ ಪೂಜೆಗೆ ತಕ್ಕ ಮಜ್ಜನವು ಮುಂದೆ ಅರುಹಲಾಗಿದೆ.

ಪ್ರಾಣಾಯಾಮ ಲಕ್ಷಣ

ಬಾಹ್ಯ ಚತುರಂಗ ಪೂಜೆಯಲ್ಲಿ ನಾಲ್ಕನೆಯದಾದ ಪ್ರಾಣಾಯಾಮವು ಜ್ಞಾನ ಸ್ವರೂಪನಾದ ಶಂಭುಲಿಂಗನಿಗೆ ಮಂತ್ರೋದಕದಿಂದ ಮಾಡುವ ಮಜ್ಜನವೆಂದು ತಿಳಿಸಲಾಗಿದೆ. ಆ ಪ್ರಾಣಾಯಾಮವು ಪ್ರಾಕೃತ ಪ್ರಾಣಾಯಾಮ ಮತ್ತು ವೈಕೃತ ಪ್ರಾಣಾಯಾಮವೆಂದು, ಇವೆರಡರಿಂದ ವೊದಲಾದ ಕೇವಲ ಕುಂಭಕವೆಂದು ಮೂರು ತೆರನಾಗಿದೆ. ಪ್ರಾಣಾಯಾಮ ವಿಧಾನ ವಿವರಿಸುವ ಮುಂಚೆ ನಾಡಿಸ್ವರೂಪವನ್ನು ವಿವರಿಸಲಾಗಿದೆ.

ನಾಡಿಸ್ವರೂಪ ವಿವರ

ಪ್ರಾಣವಾಯುವಿನ ವ್ಯಾಪಾರಾತ್ಮಕವಾದ ಪ್ರಾಣಾಯಾಮಕ್ಕೆ ಇಡಾ, ಪಿಂಗಳಾವೆಂಬ ಚಂದ್ರ, ಸೂರ್ಯ ನಾಡಿಗಳೇ ಆಧಾರವಾಗಿವೆ. ಆ ನಾಡಿಗಳು ವಾಮ ಹಾಗೂ ದಕ್ಷಿಣ ನಾಖಾಪುಟಗಳ ಭಾಗದಲ್ಲಿವೆ. ಆ ನಾಡಿಗಳ ಮೂಲ ಸ್ವರೂಪವಿಂತಿದೆ.

ತೊಂಬತ್ತಾರಂಗುಲ ಪ್ರಮಾಣವಾದ ದೇಹದೊಳಗೆ, ಗುಹ್ಯ ಸ್ಥಾನದಿಂದೆರಡಂಗುಲ ಕೆಳಗೆ ಮಧ್ಯದೇಹಾಂಗುಲ ಪ್ರಮಾಣವೇ ದೇಹದ ಮಧ್ಯಭಾಗವೆನಿಸುವುದು.ಅದಕ್ಕೆ ಮೂಲಾಧಾರ, ಶಿವನಿ, ಯೋನಿ, ಕಚ್ಛಗಳೆಂಬ ಪರಿಯಾಯ ನಾಮಗಳುಂಟು. ಅದು ಗುದ ಗುಹ್ಯಗಳ ಮಧ್ಯಭಾಗವೆನಿಸಿದೆ. ಅಲ್ಲಿ ನಾಲ್ಕಂಗುಲ ಅಗಲವಾಗಿ ನಾಲ್ಕಂಗುಲ ಉದ್ದವಾಗಿರುವ ಅಸ್ಥಿ ಚರ್ಮಗಳಿಂದ ಕೂಡಿದ ತತ್ತಿಯಾಕಾರದ ನಾಡಿಕಂದವಿರುತ್ತದೆ. ಆ ನಾಡಿಕಂದದ ಮಧ್ಯವೆ ನಾಭಿಯೆನಿಸುವುದು. ಆ ಕಂದದಿಂದ ಹನ್ನೆರಡಂಗುಲದುದ್ದ ನಾಳದಲ್ಲಿ ಹನ್ನೆರಡೆಸಳುಗಳಿಂದ ಕೂಡಿದ ಚಕ್ರಾಕಾರವಾದ ಹೃದಯಕಮಲ ಉಂಟು. ಆ ಹೃದಯಕಮಲದ ಎಂಟೆಸಳಿನಲ್ಲಿ

ಜೀವಾತ್ಮನು ತನ್ನ ಪ್ರಾರಬ್ಧ ಕರ್ಮಾನುಸಾರವಾಗಿ ಸುತ್ತುತ್ತಾನೆ. ಅದರಿಂದ ಸುಖ ದುಃಖಾದಿ ವಿಕಾರಗಳಾಗುತ್ತವೆ.

ಕುಂಡಲಿನಿ ಶಕ್ತಿ

ಕುಂಡಲಿನಿ ಸರ್ಪ ಮೂಲಾಧಾರದಲ್ಲಿರುವ ನಾಡಿ ಕಂದವನ್ನು ಮೂರೂವರೆ ಸುತ್ತಿನಿಂದ ಸುತ್ತಿ ಅಧೋಮುಖಿಯಾಗಿ ಇಂದ್ರಿಯಗಳಿಂದ ವಿಷಯ ಭೋಗಾಸಕ್ತವಾಗಿದೆ. ಮೂಲಾಧಾರದಿಂದ ಸಹಸ್ರಾರದವರೆಗೆ ಹಬ್ಬಿದ ಸುಷುಮ್ನ ನಾಡಿಯು ಮಧ್ಯರಂಧ್ರ ಅಧೋಭಾಗದಲ್ಲಿ ಸುಪ್ತಕುಂಡಲಿನಿ ಶಕ್ತಿಯು ತನ್ನ ಬಾಲವನಿಟ್ಟು, ಶಿವಯೋಗ ಪಥವೆನಿಸುವ ಬ್ರಹ್ಮರಂಧ್ರದ ಪಶ್ಚಿಮದ್ವಾರವನ್ನು ಮುಚ್ಚಿದೆ. ಸುಷುಮ್ನನಾಡಿಯು ಬೆನ್ನುಲುವಿನ ಮಧ್ಯಭಾಗದಲ್ಲಿದ್ದು ಎಡಕ್ಕೆ ಇಡಾ ಒಲಕ್ಕೆ ಪಿಂಗಳಾ ನಾಡಿಗಳಿವೆ. ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳ ಚಲನೆಗೆ ಕಾರಣವಾದ ದಶವಿಧ ನಾಡಿಗಳು ಈ ಸುಷುಮ್ನೆಯನ್ನವಲಂಬಿಸಿರುತ್ತವೆ.

ಇಡಾ ಪಿಂಗಳ ನಾಡಿಗಳಿಂದ ಪ್ರಾಣವಾಯುವನ್ನು ಪ್ರಾಣಾಯಾಮ ಸಾಧನದಿಂದ ಜಯಿಸಿ ಕೇವಲ ಕುಂಭಕಗೊಳಿಸಿದಲ್ಲಿ ಮೂಲಾಧಾರದಲ್ಲಿ ಪ್ರಾಣಾಪಾನಗಳೊಂದಾದಲ್ಲಿ ಅಗ್ನಿ ಪ್ರಕಟವಾಗಿ ಅಧೋಮುಖ ಕುಂಡಲಿಯ ಮುಖವನ್ನು ಸ್ಪರ್ಶಿಸಲು ಆ ಕುಂಡಲಿನಿ ಶಕ್ತಿಯು ಊರ್ಧ್ವಮುಖವಾಗುವುದು. ಸುಷುಮ್ನದ್ವಾರ ತೆರವಾಗುವುದು. ಬ್ರಹ್ಮರಂಧ್ರದ್ವಾರದ ಮೂಲಕವಾಗಿ ಉರಿಯು ಊರ್ಧ್ವಕ್ಕೇರುವುದು. ಪ್ರಾಣವು ಬ್ರಹ್ಮರಂಧ್ರದ ಮೂಲಕ ಚಕ್ರಗಳ ಭೇದಿಸುತ್ತ ಸಹಸ್ರಾರದಲ್ಲಿ ಬೆರೆಯುವುದು. ಅಲ್ಲಿನ ಚಿದಮೃತ ಸವಿದ ಶಿವಸುಖವು ಶಿವಯೋಗಿಯೇ ಬಲ್ಲನು. ಅಂಥಹ ಪರಮ ಶಿವಸುಖ ಸಮನಿಸಲು ಪ್ರಾಣಾಯಾಮವು ಅವಶ್ಯವಾಗಿದೆ. ಅಂತೆಯೇ ಅದು ಲಿಂಗಮಜ್ಜನವೆನಿಸಿದೆ.

ಪ್ರಾಣಾಯಾಮವು ಪ್ರಾಕೃತ ಮತ್ತು ವೈಕೃತ ಪ್ರಾಣಾಯಾಮವೆಂದು ಎರಡು ವಿಧವಾಗಿರುತ್ತವೆ. ಹೃದಯಸ್ಥಾನದ ಪ್ರಾಣವಾಯುವು ಉಚ್ಛ್ವಾಸ ನಿಶ್ವಾಸಗಳಿಂದ ಸಹಜವಾಗಿ ಪ್ರತಿನಿತ್ಯ ಇಪ್ಪತ್ತೊಂದು ಸಾವಿರ ಆರುನೂರು "ಹಂಸ" ಮಂತ್ರವಾಗಿ ನಡೆವುದೇ ಪ್ರಾಕೃತ ಪ್ರಾಣಾಯಾಮವೆನಿಸುವುದು. ಯೋಗಶಾಸ್ತ್ರ ಹಾಗೂ ಸಮರ್ಥ ಸದ್ಗುರುಗಳ ಮಾರ್ಗದರ್ಶನದಂತೆ ಪೂರಕ, ಕುಂಭಕ, ರೇಚಕಗಳಿಂದ ಪ್ರಾಣವ ನಿರೋಧಿಸುತ್ತ ಅಭ್ಯಾಸಗೈವುದೇ ವೈಕೃತ ಪ್ರಾಣಾಯಾಮವೆನಿಸುವುದು. ಇದು ಯೋಗಕ್ಕೆ ಸಾಧನವೆನಿಸುವುದು.

ದೇಹದೊಳಗಿನ ವಾಯು ನಾಸಿಕದ್ವಾರದಿಂದ ಹೊರಗೆ ಬಿಡುವುದೇ ರೇಚಕ. ದೇಹದ ಹೊರಗಿನ ವಾಯುವನು ಉದರದೊಳಗೆ ಪೂರಿಸುವುದೇ ಪೂರಕ. ಉಚ್ಛ್ವಾಸ ನಿಶ್ವಾಸಗಳಿಲ್ಲದೆ ವಾಯುವನು ನಿಶ್ಚಲವಾಗಿ ಪೂರ್ಣ ಕುಂಭದಂತೆ ತಡೆವುದೇ ಕುಂಭಕವು. ಕುಂಭಕ ಬಲಿಸುವುದೇ ಪ್ರಾಣಾಯಾಮದ ಮೂಲ ಗುರಿಯಾಗಿದೆ. ಅದರಿಂದ ಚಿತ್ತ ಚಂಚಲವಳಿದು ಮನವು ಧ್ಯಾನದಲ್ಲಿ ಏಕಾಗ್ರವಾಗುವುದು.

ಪ್ರಾಣಾಯಾಮ ಸಾಧಕನು ತನುಮನಗಳಲ್ಲಿ ಶುಚಿರ್ಭೂತನಾಗಿ ಏಕಾಂತಸ್ಥಾನದಲ್ಲಿ ಪೂರ್ವ ಅಥವಾ ಉತ್ತರ ಮುಖವಾಗಿ ಸಿದ್ಧಾಸನ ಅಥವಾ ಪದ್ಮಾಸನದಲ್ಲಿ ಸ್ವಸ್ಥವಾಗಿ ನೇರವಾಗಿ ಕುಳಿತುಕೊಳ್ಳಬೇಕು. ಬೆನ್ನು ತಲೆ ಎದೆಗಳು ಒಂದೇ ರೇಖೆಯಲ್ಲಿರಬೇಕು. ದಂತಗಳು ದಂತಗಳ ಮುಟ್ಟದಂತೆ ಜಿಹ್ವಾಬಂಧನವ ಮಾಡಿ, ನಾಸಾಗ್ರದಲ್ಲಿ ದೃಷ್ಟಿಯುಳ್ಳಾತ ನಾಗಿ, ಶ್ರೀಗುರು ಹಾಗೂ ದೇವನನ್ನು ಯೋಗಿಗಳನ್ನೂ ಅಭಿವಂದಿಸಬೇಕು. ಶಿವಮಂತ್ರ ಸ್ಮರಣ ಶಿವಧ್ಯಾನ ಸಹಿತ ಪ್ರಾಣಾಯಾಮಾಭ್ಯಾಸವನ್ನು ಪ್ರಾರಂಭಿಸಬೇಕು. ಕನಿಷ್ಠ, ಅನಾಮಿಕಾಂಗುಲಿಯಿಂದ ಇಡಾ ನಾಡಿಯ ಬಲಿದು, ಪಿಂಗಳ ನಾಡಿಯಿಂದ ದೇಹದೊಳ ಗಿರುವ ಪ್ರಾಣವಾಯುವನ್ನು ಹನ್ನೆರಡು ಮಾತ್ರೆ ಅಕಾರೋಚ್ಚರಣದಿಂದ ರೇಚಿಸಿ, ಮತ್ತೆ ಪಿಂಗಳ ನಾಡಿಯನ್ನು ಅಂಗುಷ್ಠದಿಂದ ಬಲಿದು ಇಡಾ ನಾಡಿಯಿಂದ ಹನ್ನೆರಡು ಮಾತ್ರೆ ಉಕಾರೋಚ್ಚರಣದಿಂದ ಪೂರಿಸಿ,ನಾಭಿ, ಹೃದಯ,ಕಂಠವೆಂಬ ಮೂರುಸ್ಥಾನದಲ್ಲಿನ ಒಂದು ಸ್ಥಾನದಲ್ಲಿ ಹನ್ನೆರಡು ಮಾತ್ರೆ ಮಕಾರೋಚ್ಚರಣದಿಂದ ವಾಯುವನು ಕುಂಭಿಸುವುದೇ ಕನಿಷ್ಠ ಪ್ರಾಣಾಯಾಮವು. ಈ ಹನ್ನೆರಡು ಮಾತ್ರೆಯೇ ಒಂದು ಉದ್ಘಾತವೆನಿಸುವುದು. ಇಂತಹ ಉದ್ಘಾತವೆರಡಾದರೆ ಮಧ್ಯಮ ಪ್ರಾಣಾಯಾಮ. ಅದು ಇಪ್ಪತ್ನಾಲ್ಕು ಮಾತ್ರೆಯುಳ್ಳದು. ಆ ಉದ್ಘಾತಮೂರಾಗಲು ಮೂವತ್ತಾರು ಮಾತ್ರೆಯ ಉತ್ತಮ ಪ್ರಾಣಾಯಾಮವೆನಿಸು ವುದು. ಈ ರೀತಿಯಾಗಿ ಮತ್ತೆ ಪಿಂಗಳ ನಾಡಿಯಿಂದ ಪೂರಿಸಿ ಕುಂಭಿಸಿ ಇಡೆಯಿಂದ ರೇಚಿಸ ತಕ್ಕದ್ದು. ಧ್ಯಾನರಹಿತವಾಗಿ ಮಾಡುವುದು ಕನಿಷ್ಠ ಧ್ಯಾನಸಹಿತ ಮಾಡುವುದೇ ಉತ್ತಮ ಪ್ರಾಣಾಯಾಮವೆನಿಸುವುದು ಪ್ರಾಣಾಯಾಮಾಭ್ಯಾಸದಲ್ಲಿ ಶರೀರದಲ್ಲಿ ಸ್ವೇದ ಹುಟ್ಟಲು ಕನಿಷ್ಠವು, ಕಂಪನ, ಹುಟ್ಟಲು ಮಧ್ಯಮ, ಶರೀರವು ಉತ್ಥಾನವಾಗಲು ಉತ್ತಮ ವೆನಿಸುವುದು. ತಾಳ್ಮೆಯಿಂದ ಸತತವಾಗಿ ಮಾಡುವ ಪ್ರಾಣಾಯಾಮದಿಂದ ನಾಡಿಶುದ್ಧಿ ಸಿದ್ಧಿಸುವುದು. ಆಗ ತನು ಮನ ಕರಣೇಂದ್ರಿಯಗಳಲ್ಲಿ ಯಾವ ವಿಕಾರವಿಲ್ಲದೆ ಸುಷುಮ್ನ ಮಾರ್ಗವು ಸುಗಮವಾಗುವುದರಲ್ಲಿ ಸಂದೇಹವಿಲ್ಲ.

ಈ ರೀತಿಯಾಗಿ ಚತುರ್ಮಾಸ ಪರಿಯಂತ ಚತುರ್ಕಾಲದಲ್ಲಿಯೂ ಪ್ರಾಣಾಯಾಮ ವನ್ನು ನಿರಾಯಾಸದಿಂದ ಮಾಡಬೇಕು. ಅಜೀರ್ಣ, ಉದ್ಗಾರ, ಮೂತ್ರದೋಷ, ಶೀತ, ಅತಿಸಾರ, ಅತಿಭೋಜನ, ಅತಿಹಸಿವು, ತೃಷೆಗಳಿದ್ದ ಸಮಯದಲ್ಲಿ ಹಾಗೂ ಗುರುಸೇವಾ ಸಮಯದಲ್ಲಿ ಮಾಡಕೂಡದು. ತಪ್ಪಿ ಮಾಡಿದಲ್ಲಿ ಶ್ವಾಸಕೋಶಗಳಲ್ಲಿ ದೋಷಗಳುಂಟಾಗು ತ್ತವೆಂದು ಎಚ್ಚರಿಸಲಾಗಿದೆ.

ಪ್ರಾಣಾಯಾಮವು ಉತ್ಕರ್ಷ, ಅಪಕರ್ಷ, ಶೂನ್ಯ, ಉತ್ಕ್ರಾಂತಿಯೆಂದು ನಾಲ್ಕು ವಿಧವಾಗಿ ಸಾಧನೆ ಮಾಡಲು ತಿಳಿಸುತ್ತಾರೆ. ಪ್ರಾಣವಾಯುವನ್ನು ಮೂಲಾಧಾರದಲ್ಲಿ ಅಗ್ನಿಸಹಿತವಾಗಿ ಮೇಲಕ್ಕೆ ಕುಂಭಿಸಿ ಕುಂಡಲಿನಿ ಸರ್ಪಜಾಗ್ರತಗೊಳಿಸಿ ಬ್ರಹ್ಮರಂಧ್ರವ ತೆರವು ಮಾಡಿ ಒಳಗೆ ಪ್ರವೇಶಿಸುವಂತೆ ಮಾಡುವುದೇ ಉತ್ಕರ್ಷವು. ನಂತರ ಅದೇ ಮಾರ್ಗದಿಂದಲೇ ಮೂಲಾಧಾರ ಪರಿಯಂತವಾಗಿ ಶಕ್ತಿಯ ನಿಲುಸುವುದೇ ಅಪಕರ್ಷವು. ತದನಂತರ ಪರಕಾಯ ಪ್ರವೇಶ ಮೊದಲಾದ ಲೋಕ ವ್ಯಾವಹಾರಾರ್ಥವಾಗಿ ಮೂಲಾಗ್ನಿ

ಸಮೇತವಾಗಿ ವಾಯುವನು ಸುಷುಮ್ನ ಮಾರ್ಗದೊಳೆಯ್ದಿಸಿ, ಶಿರೋರಂಧ್ರವ ತೆರೆದು ಮೇಲೆ ಹೋಗುವುದೇ ಉತ್ಕ್ರಾಂತಿಯೆನಿಸುವುದು. ಈ ರೀತಿಯಾಗಿ ಮಾಡುವುದೇ ವೈಕೃತ ಪ್ರಾಣಾಯಾಮವೆನಿಸುವುದು.

ಮೇಲೆ ವಿವರಿಸಿದ ವೈಕೃತ ಪ್ರಾಣಾಯಾಮದ ಸತತಾಭ್ಯಾಸದಿಂದ ನಾಡಿಶುದ್ಧಿಯಾಗಿ ರೇಚಪೂರಕವಿಲ್ಲದ ಕೇವಲ ಕುಂಭವು ಸಿದ್ಧಿಸುವುದು. ಮುಂದೆ ರಾಜಯೋಗ, ಶಿವಯೋಗ ಸಿದ್ಧಿಯು ಸುಗಮವಾಗುವುದು. "ಹಂಸ" ರೂಪಾಗಿ ಚಲಿಸುವ ಪ್ರಾಕೃತ ಪ್ರಾಣಾಯಾಮವೇ ಮಂತ್ರಯೋಗವು. ಆ "ಹಂಸ" ರೂಪಾಗಿ ಚಲಿಸುವ ಪ್ರಾಣಾಯಾಮವನು ವೈಕೃತ ಪ್ರಾಣಾಯಾಮದಿಂದ ಲಯಗೊಳಿಸಿ "ಸೋಹಂ" ಎಂದುಚ್ಚರಿಸುವ ವೈಕೃತ ಪ್ರಾಣಾಯಾಮವೇ ಲಯಯೋಗವು. ಕೇವಲ ಕುಂಭಕವೆಂಬ ಪ್ರಾಣಾಯಾಮ ಸಿದ್ಧಿಯೇ ಹಠಯೋಗವು. ಆ ಹಠಯೋಗದಿಂದ ಸಂಕಲ್ಪ ವಿಕಲ್ಪರಹಿತವಾದ ಅಮನಸ್ಕ ಸ್ಥಿತಿಯೇ ರಾಜಯೋಗವು. ಈ ರೀತಿಯಾಗಿ ಸಗುಣ ನಿರ್ಗುಣ ಯೋಗವು ಪ್ರಾಣಾಯಾಮದಲ್ಲಿ ಸಮನ್ವಯಗೊಳ್ಳುತ್ತವೆಂದು ತಿಳಿಸಲಾಗಿದೆ.

ಪ್ರಥಮ ಯೋಗ

ವೈಕೃತ ಪ್ರಾಣಾಯಾಮದಿಂದ ಸಿದ್ಧಿಸಿದ ಕೇವಲ ಕುಂಭಕದಿಂದ ಹಠಯೋಗವು ತ್ರಿವಿಧವಾದ ಯೋಗವೆನಿಸುವುದು. ಹೇಗೆಂದರೆ ಕೇವಲ ಕುಂಭಕದಿಂದ "ಹಂಸ"ವೆಂಬೆರಡಕ್ಷರಗಳು ಲಯವಾದಲ್ಲಿ ಲಯಯೋಗವೆನಿಸುವುದು. ಆ ಕಾಲಗೊಳುದಿಸಿದ ಜ್ಞಾನಾತ್ಮಕವಾದ "ಸೋಹಂ" ಮಂತ್ರವು ಶಬ್ದವಳಿದು ದಶವಿಧವಾದಾತ್ಮಕವಾದ "ಓಂ" ಪ್ರಣವ ಮಹಾಮಂತ್ರವೆನಿಸಿ ಭ್ರೂಮಧ್ಯವೆಂಬ ತ್ರಿಕೂಟದಲ್ಲಿ ದಶವಿಧನಾದವಾಗಿ ಘೋಷಿಸುವುದು. ಇದೇ ನಾದಾತ್ಮ ಪ್ರಣವವು.

ತ್ರಿಕೂಟ ವಿವರ

"ಹಂಸ" ವರ್ಣವಳಿದು ಓಂ ಪ್ರಣವಸ್ವರೂಪವಾಗುವ ಮಧ್ಯ ಹೃದಯವೇ ಭ್ರೂಮಧ್ಯವೆಂದು ತ್ರಿವೇಣಿಯೆಂದು ಕರೆಯಲ್ಪಡುವುದು. ಇಡಾ ನಾಡಿಯೇ ಚಂದ್ರನಾಡಿಯೆಂದೂ ಯಮುನಾನದಿಯೆಂದೂ ಕರೆಯಲ್ಪಡುವುದು. ಪಿಂಗಳ ನಾಡಿಯೆ ಸೂರ್ಯನಾಡಿಯೆಂದೂ ಗಂಗಾನದಿಯೆಂದೂ ಕರೆಯಲ್ಪಡುವುದು. ಸುಷುಮ್ನೆಯೆಂಬ ಮಧ್ಯನಾಡಿಯೇ ಅಗ್ನಿನಾಡಿಯೆಂದೂ ಸರಸ್ವತಿ ನದಿಯೆಂದು ಕರೆಯಲ್ಪಡುವುದು. ಆದ್ದರಿಂದ ಈ ನದಿಗಳ ಸಂಗಮಸ್ಥಲಕ್ಕೆ ತ್ರಿವೇಣಿ ಸಂಗಮ ತ್ರಿಕೂಟ ಸಂಗಮ, ಗೌಪ್ಯವಾದ ಯೋಗಸ್ಥಲವೆಂದು ಯೋಗಿಗಳು ಕರೆದಿದ್ದಾರೆ. ಆ ತ್ರಿಕೂಟಸ್ಥಾನವೇ ಶಿವಧ್ಯಾನಕ್ಕೆ ರಹಸ್ಯವಾದ ಸ್ಥಾನವಾಗಿದೆ. ಇಲ್ಲಿ ಕರ್ಣದ್ವಯಗಳ ನೇತ್ರದ್ವಯಗಳ ರಂಧ್ರಗಳು ಕೂಡಲ್ಪಡುತ್ತವೆ. ಆದ್ದರಿಂದಲಿದು ಚತುಃಪೀಠವೆಂದು, ಮಧ್ಯ ಹೃದಯವೆಂದು, ಭ್ರೂಮಧ್ಯವೆಂದು, ಆಜ್ಞಾಚಕ್ರವೆಂದ ಯೋಗಿಗಳಿಂದ ಕರೆಯಲ್ಪಟ್ಟಿವೆ. ಈ ತ್ರಿಕೂಟ ಸ್ಥಾನದಲ್ಲಿಯೇ ಮನ, ವಾಯು,

ದೃಷ್ಟಿಗಳು ಸಮರಸವಾಗಿ ಲಿಂಗದಲ್ಲಿ ಲಯವಾಗುತ್ತವೆ. ಅಲ್ಲಿಯೇ ವಿಷಯ ವಿಮುಖವಾದ ಮನಸ್ಸಿನೊಡನೆ ಕೂಡಿ ಸುಷುಮ್ನೆಯಲ್ಲಿ ಸುಸ್ಥಿರನಾಗಿ ಧ್ಯಾನಯೋಗ ಮಾಡುವುದುಚಿತ ವೆಂದು ಹೇಳಲ್ಪಟ್ಟಿದೆ.

ತ್ರಿವಿಧ ಕುಂಡಲಿ ಜಾಗ್ರತಿ

ಮನಮಾರುತಗಳು ಸಮರಸವಾದಲ್ಲಿ ನಿಜಯೋಗ ಸಾಧ್ಯವಾಗುವುದು. ಆ ಮನವಾಯುಗಳು ಸಮರಸವಾಗಿ ತ್ರಿವೇಣಿಯಲ್ಲಿ ನಿಲ್ಲಲು ಇನ್ನೊಂದು ಸಾಧನವಿಲ್ಲುಂಟು. ಪ್ರಾಣವಾಯು ಹೊರಸೂಸುವಲ್ಲಿ ಮನ ಚಂಚಲಗೊಳ್ಳುವುದು. ಆ ಪ್ರಾಣವಾಯುವನು ಜಾಲಂಧರಬಂಧದಿಂದ ತಡೆಯಲು ಅತಿಸೂಕ್ಷ್ಮವಾದ ಊರ್ಧ್ವಕುಂಡಲಿನಿ ಶಕ್ತಿಯು ಅಧೋಮುಖವಾಗಿ ಧ್ಯಾನಕ್ಕಭಿಮುಖವಾಗುವುದು. ಆ ಪ್ರಾಣವಾಯುವು ತಿರುಗಿ ತನ್ನ ಸ್ಥಾನವ ಸೇರಲು ಮಧ್ಯ ಕುಂಡಲಿ ಶಕ್ತಿಯು ತನ್ನ ಕುಟಿಲತೆಯನ್ನು ಬಿಟ್ಟು ನೇರವಾಗಿ ನಿಲ್ಲುವುದು. ಆ ಪ್ರಾಣವಾಯು ಮೂಲಾಧಾರಾಭಿಮುಖವಾಗಲು ಆಗ ಮೂಲಾಧಾರ ದಲ್ಲಿರುವ ಅಧಿಕುಂಡಲಿ ಶಕ್ತಿಯು ಜಾಗ್ರತವಾಗುವುದು. ಆದ್ದರಿಂದ ಯೋಗಿಗಳಿಗೆ ಈ ಮೂರು ಸ್ಥಾನದಲ್ಲಿರುವ ಊರ್ಧ್ವ ಕುಂಡಲಿ, ಮಧ್ಯ ಕುಂಡಲಿ, ಅಧಕುಂದಲಿಯೆಂಬ ಮೂರು ಶಕ್ತಿಗಳು ತ್ರಿಕೂಟ ಸ್ಥಾನದಲ್ಲಿ ನೆಲೆನಿಲ್ಲಿಸಿ, ಪರಮ ಪದವನನುಭವಿಸಲು ಸಹಕರಿಸುತ್ತವೆ. ಈ ತ್ರಿವಿಧ ಶಕ್ತಿಗಳ ವ್ಯಾಪಾರವನ್ನು ಸಾಧಕನು ಚೆನ್ನಾಗಿ ತಿಳಿದು ಪ್ರಣವನಾದದೊಡನೆ ಕೂಡಿ ಬೆರೆತು, ವಿಶುದ್ಧಿ, ಮಣಿಪುರ, ಆಧಾರವೆಂಬ ಚಕ್ರಗಳಲ್ಲಿನ ಚಂದ್ರ, ಸೂರ್ಯ, ಅಗ್ನಿಗಳ ಆಶ್ರಯದಲ್ಲಿ ಜಾಲಂಧರ, ಉಡ್ಯಾಣ ಮೂಲಬಂಧತ್ರಯ ಗಳನ್ನು ಸದಾಕಾಲದೊಳು ಮಾಡುವುದೇ ಯೋಗೀಶ್ವರರಿಗೆ ಯೋಗ್ಯ ಸಾಧನವಾಗಿದೆ.

ದ್ವಿತೀಯ ಯೋಗ

ಹಠಯೋಗದ ದ್ವಿತೀಯ ಯೋಗವು ಓಂಕಾರ ಪ್ರಣವ ಮಂತ್ರದ ಸಿದ್ಧಿಯಾಗಿದೆ. ಓಂ ಪ್ರಣವವು ಮೂಲಬಂಧ, ಉಡ್ಯಾಣಬಂಧ, ಜಾಲಂಧರಬಂಧವೆಂಬ ಬಂಧತ್ರಯ ಗಳಿಂದಲೇ ಸಾಧ್ಯವಾಗುತ್ತದೆ. ಬಂಧತ್ರಯಗಳಿಂದಾದ ಕೇವಲ ಕುಂಭದಿಂದ "ಸೋ"ದಲ್ಲಿನ 'ಸ'ಕಾರವಳಿದು "ಓ" ಎಂಬ ಸ್ವರ ಉಳಿಯುತ್ತದೆ. "ಹಂ"ದಲ್ಲಿನ ಹಕಾರವಳಿದು ಶೂನ್ಯ ಉಳಿಯುತ್ತದೆ. ಇದರಿಂದ ಓಂಕಾರವೆಂಬ ಪ್ರಣವವು ಭ್ರೂಮಧ್ಯದಲ್ಲಿ ನೆಲೆಗೊಂಡು ದಶವಿಧ ನಾದವಾಗಿ ಘೋಷಿಸುತ್ತದೆ. ಇದೇ ಹಠಯೋಗದಲ್ಲಿನ ದ್ವಿತೀಯಾ ಯೋಗವು.

ತೃತೀಯಾ ಯೋಗ

ಹಠಯೋಗದ ತೃತೀಯ ಯೋಗವು ರೇಚಕ ಪೂರಕವಿಲ್ಲದ ಕೇವಲ ಕುಂಭಕ ವಾಗಿದೆ ಈ ಹಿಂದೆ ಹೇಳಲ್ಪಟ್ಟ ಲಯಯೋಗದಿಂದಾದ "ಓಂ" ಪ್ರಣವನಾದದೊಡನೆ ವಾಯುವಿನ ಲಯವೇ ಕೇವಲ ಕುಂಭಕವೆನಿಸುವುದು ಇದು ಹಠಯೋಗದೊಳಗತೀ ರಹಸ್ಯ ವಾದುದಾಗಿದೆ. ಈ ಕೇವಲ ಕುಂಭಕದಿಂದ ಪ್ರಾಣವಾಯುವನು ನಿಲಿಸಿದಾತನಿಗೆ ಜನನ ಮರಣಗಳಿಲ್ಲವೆಂದು "ಪಾರಮಾರ್ಥ ಪ್ರಕಾಶಿಕೆ" ತಿಳಿಸುತ್ತದೆ.

ಈ ಕೇವಲ ಕುಂಭಕವು ಅತಿ ರಹಸ್ಯವಾದುದು ಇದನ್ನು ಮಂದಮತಿಗಳರಿಯರು. ಯಾವನೇ ಬುದ್ಧಿವಂತ ಸಾಧಕನು ಶ್ರೀ ಗುರುಕಾರುಣ್ಯದಿಂದ ಕೇವಲ ಕುಂಭಕ ಸಿದ್ಧಿ ಪಡೆದನಾದರೆ ಆತನಿಗೆ ಮಿಕ್ಕ ಪ್ರಾಣಾಯಾಮ, ಷಟ್‌ಕರ್ಮ, ಮುದ್ರಾಬಂಧಗಳೆಂಬ ಪೂರ್ವಯೋಗಗಳ ಅವಶ್ಯಕತೆ ಇರುವದಿಲ್ಲ. ಕೇವಲ ಕುಂಭಕವೇ ಮೋಕ್ಷಕ್ಕೆ ಸಾಧನ ವೆಂದು ತಿಳಿಸಲಾಗಿದೆ.

ಬಂಧತ್ರಯಗಳು

ಹಠಯೋಗದ ಪರಮಗುರಿಯೇ ಕೇವಲ ಕುಂಭಕ. ಅದಕ್ಕಾಗಿಯೇ ಹಲವು ಪ್ರಾಣಾಯಾಮಾದಿ ಸಾಧನಗಳು ಮಾಡಲ್ಪಡುತ್ತವೆ. ಈ ಶ್ರೇಷ್ಠವಾದ ಕೇವಲ ಕುಂಭಕವು ಮೂಲಬಂಧ, ಉಡ್ಯಾಣಬಂಧ, ಜಾಲಂಧರಬಂಧವೆಂಬ ಬಂಧತ್ರಯಗಳಿಂದಲೇ ಸಾಧ್ಯವಾಗುತ್ತವೆ.

ಮೂಲಬಂಧ: ಮೂಲಾಧಾರವನು ಊರ್ಧ್ವಕ್ಕೆ ಕುಂಚನ ಮಾಡಿ ಅಪಾನವಾಯು ವೆಂಬ ಸೂರ್ಯನನು ಊರ್ಧ್ವಕ್ಕೇರಿಸಿ ಹೃದಯಸ್ಥಾನದ ಪ್ರಾಣವಾಯುವೆಂಬ ಚಂದ್ರ ನೊಡನೆ ಬೆರೆಸಿ, ಸುಷುಮ್ನ ನಾಡಿಯ ಮಧ್ಯಪ್ರವೇಶಿಸಿದರೆ ಶಿವ ಸಾಮರಸ್ಯ ಸಿದ್ಧಿಯು ಸಾಧ್ಯವಾಗುತ್ತದೆ. ಅಂತಹ ಬಂಧವನು ಮೂಲಬಂಧವೆಂದು ಕರೆಯಲಾಗಿದೆ.

ಉಡ್ಯಾಣಬಂಧ: ನಾಭಿಯ ಅಧೋಭಾಗವನ್ನು ಮತ್ತು ಊರ್ಧ್ವಭಾಗವನ್ನು ಬೆನ್ನಿನತ್ತ ಜಗ್ಗಿ ಜಗ್ಗಿಸಲು ಬಂಧಿಸಲು ಪ್ರಾಣಾಪಾನಗಳು ಸುಷುಮ್ನ ಮಾರ್ಗವೆಂಬ ಬ್ರಹ್ಮರಂಧ್ರದ ಮಧ್ಯನಾಡಿಯಲ್ಲಿ ಪ್ರವೇಶಿಸುವುದು. ಅದರಿಂದ ಶಿವಯೋಗ ಸಿದ್ಧಿಯಾಗಿ, ಮುಪ್ಪು, ಮರಣ ರುಜಿನಗಳು ನಷ್ಟವಾಗುವವು. ಅಂಥ ಬಂಧವನು ಉಡ್ಯಾಣ ಬಂಧ ವೆಂದು ಕರೆಯಲಾಗಿದೆ.

ಜಾಲಂಧರಬಂಧ: ಕಂಠವನು ಸಂಕೋಚಗೊಳಿಸಿ ಗದ್ದವನು ಹೃದಯಸ್ಥಾನದಲ್ಲಿ ದೃಢವಾಗಿರಿಸಲು, ಸಹಸ್ರಾರದಿಂದೊಸರುವ ಚಿದಮೃತ ಬಿಂದುವು ಸುರಿಯುವುದು. ಅದರಿಂದ ಮುಪ್ಪು ಮರಣವಳಿವುದು. ಜಾಲಂಧರಬಂಧದಿಂದ ಪ್ರಾಣವಾಯು ಅಪಾನ ವಾಯುವಿನೊಡನೆ ಬೆರೆವುದು. ಅಂಥಹ ಬಂಧವೇ ಜಾಲಂಧರಬಂಧವೆನಿಸುವುದು. ಈ ಬಂಧತ್ರಯಗಳು ಅತಿ ಗೌಪ್ಯವಾದವುಗಳು.

ಈ ಪ್ರಕಾರವಾದ ಪ್ರಾಣಾಯಾಮ ಪೂಜೆಯನು ಮೂರು ಮಾಸದವರೆಗೆ ನಿಯಮ ದಿಂದ ಮಾಡಲು, ದೇಹಕ್ಕೆ ಲಘುತ್ವ, ಉದರಾಗ್ನಿ ಪಟುತ್ವ, ಸಕಲನಾಡಿಗಳ ಶುದ್ಧಿ, ಉನ್ಮನಿ ಜ್ಯೋತಿಯ ಸಿದ್ಧಿಯಾದಾವು. ಆದ್ದರಿಂದ ಕೇವಲ ಕುಂಭಕವು ನಾಡಿಶುದ್ಧಿ ಪರಿಯಂತ ಮಾಡಲು ತಿಳಿಸಲಾಗಿದೆ. ಈ ರೀತಿಯಾದ ಕೇವಲ ಕುಂಭಕವನು ಸಾಧಕನು ನಿರ್ಜನ ಸ್ಥಾನದಲ್ಲಿ ಕುಳಿತು, ಕಾಮಾದಿ ಅರಿಗಳನ್ನು ಗೆಲಿದು, ಗುರುಭಕ್ತಿ ದೇವಪೂಜೆ ಯಿಂದ ಸತತವಾಗಿ ಸಿದ್ಧಿಯಾಗುವ ಪರಿಯಂತ ಮಾಡಬೇಕು. ಆತನಿಗೆ ಯೋಗಸಿದ್ಧಿಯು ಸಾಧ್ಯವಾಗುವುದು.

ಈ ತೆರನಾದ ಯಮದಶವಿಧ, ನಿಯಮ ದಶವಿಧಗುಣಗಳಿಂದ ಶುದ್ಧನಾಗಿ, ಸಿದ್ಧಾಸನ ಪದ್ಮಾಸನಗಳಲ್ಲಿ ಕುಳಿತು, ಪ್ರಾಣಾಯಾಮವೆಂಬ ಉದಕದಿಂದ ಲಿಂಗ ಮಜ್ಜನಗೈವುದೆ ಬಾಹ್ಯ ಚದುರಂಗ ಪೂಜೆಯೆಂದು, ಸಗುಣಯೋಗವೆಂದು ಪಾರಮಾರ್ಥ ಪ್ರಕಾಶಿಕೆಯಲ್ಲಿ ಬೋಧಿಸಲಾಗಿದೆ.

ತೃತೀಯ ಪರಿಚ್ಛೇದ

ದ್ವಿತೀಯ ಪರಿಚ್ಛೇದದಲ್ಲಿ ಹಠಯೋಗದ ಅಷ್ಟಾಂಗಗಳಲ್ಲಿನ ಮೊದಲ ನಾಲ್ಕಂಗ ಗಳಾದ ಯಮನಿಯಮ, ಆಸನ ಪ್ರಾಣಾಯಾಮಗಳು ಬಾಹ್ಯಪೂಜೆ (ಸಗುಣಯೋಗ) ವಿಧಾನವಾಗಿ ಯಾವ ತೆರನಾಗಿ ಮಾಡಬೇಕೆಂಬುದನರುಹಲಾಗಿದೆ ನಂತರ ಮುಂದಿನ ನಾಲ್ಕಂಗಗಳೆನಿಸುವ ಪ್ರತ್ಯಾಹಾರ, ಧ್ಯಾನ, ಧಾರಣ ಸಮಾಧಿಗಳು ಅಂತರಂಗ ಪೂಜೆಯ ವಿಧಾನವಾಗಿ ಯಾವ ತರಹ ಬಳಸಿದರೆಂಬುದನ್ನು ಈ ತೃತೀಯ ಪರಿಚ್ಛೇದದಲ್ಲಿ ತಿಳಿಸಲಾಗಿದೆ.

ಪ್ರತ್ಯಾಹಾರ ಗಂಧಾನುಲೇಪನ

ಈ ಮೊದಲು ಶಿವಯೋಗೀಶ್ವರನು ತ್ರಿಕೂಟಸ್ಥಾನದ ಮಹಾಲಿಂಗಕ್ಕೆ ಪ್ರಾಣಾಯಾಮದಿಂದ ಮಜ್ಜನಗೈದಿದ್ದಾನೆ. ಈಗ ಆ ಲಿಂಗಕ್ಕೆ ಪ್ರತ್ಯಾಹಾರವೆಂಬ ಗಂಧ ವನ್ನು ಲೇಪಿಸುವಂತೆ ತಿಳಿಸಲಾಗಿದೆ. ಪ್ರತ್ಯಾಹಾರವೆಂದರೆ ಪಂಚಜ್ಞಾನೇಂದ್ರಿಯಗಳನ್ನು ಪಂಚ ವಿಷಯಗಳಿಂದ ವಿಮುಖಗೊಳಿಸುವುದು. ತ್ರಿಕೂಟ ಸ್ಥಾನದಲ್ಲಿ, ಉನ್ಮನ್ಯವಸ್ಥೆ ಯಲ್ಲಿ ದೃಢವಾಗಿ ನಿಂತ ಮನವೇ ಸಾಣೆಕಲ್ಲು ಪ್ರತ್ಯಾಹಾರದಿಂದ ವಿಷಯವಾಸನೆಯನ್ನು ವೈರಾಗ್ಯದಿಂದ ತೆಯ್ದು, ಪಂಚ ವಿಷಯವಳಿದ ನಿರ್ಮಲವಾದ ಸದ್‌ವಾಸನೆಯೇ ಆ ಶಂಭುಲಿಂಗಕ್ಕೆ ಗಂಧಾನುಲೇಪನವು.

ಪ್ರತ್ಯಾಹಾರವನ್ನು ಇನ್ನು ಮೂರು ಬಗೆಯಾಗಿ ತಿಳಿಸಲಾಗಿದೆ. ಬಾಹ್ಯ ವಿಷಯ ಗಳತ್ತ ಹರಿವ ಚಿತ್ತವನ್ನು ಹೃದಯಾಕಾಶದ ಮಹಾದೇವನಲ್ಲಿ ನಿಲ್ಲಿಸುವುದು ಮತ್ತು ಆ ಹೃದಯಾಕಾಶದಿಂದ ಬಾಹ್ಯಕ್ಕೆ ಹರಿದಾಡುವ ಮನವನ್ನು ಮತ್ತೆ ಮತ್ತೆ ಪ್ರಯತ್ನದಿಂದ ಅಲ್ಲಿಯೇ ಸ್ಥಾಪಿಸುವುದು ಹಾಗೂ ಅನಾತ್ಮವೆನಿಸುವ ಜಡದೇಹ ಇಂದ್ರಿಯಾದಿಗಳೇ ನಾನೆಂಬ ದೇಹಭಾವವಳಿಸಿ, ಸ್ವಸ್ವರೂಪ ಸಾಕ್ಷಾತ್ಕಾರ ಮಾಡುವುದೇ ಪ್ರತ್ಯಾಹಾರವೆನಿಸು ವುದು. ಒಟ್ಟಿನಲ್ಲಿ ಬಾಹ್ಯ ವಿಷಯಗಳತ್ತ ಹರಿವ ಮನ ಚಿತ್ತು ಕರಣೇಂದ್ರಿಯಗಳನ್ನು ಸೆಳೆದು ತನ್ನಧೀನಗೊಳಿಸಿಕೊಂಡು ಶಿವಲಿಂಗಕ್ಕೆ ಸಮರ್ಪಿಸುವುದೇ ಪ್ರತ್ಯಾಹಾರವೆನಿಸು ವುದು. ಇಂಥಹ ಪ್ರತ್ಯಾಹಾರವೇ ಅಂತರಂಗದ ಶಿವಲಿಂಗಾರ್ಚನೆಗೆ ಗಂಧವೆನಿಸುವುದು.

ಧ್ಯಾನ ಪೂಜೆಯ ವಿಧಾನ

ಪ್ರತ್ಯಾಹಾರದಿಂದ ಸದ್ ವಾಸನೆಯೆಂಬ ಗಂಧವನ್ನು ಶಿವಲಿಂಗಕ್ಕೆ ಲೇಪನವಾದ

ಬಳಿಕ ಆ ಮಹಾಲಿಂಗವನು ಧ್ಯಾನವೆಂಬ ಪುಷ್ಪದಿಂದ ಅರ್ಚನೆಗೈಯ್ಯಲು ತಿಳಿಸಲಾಗಿದೆ. ಅಂತರಂಗದ ಧ್ಯಾನವೆಂಬರ್ಚನೆಯು ಅತಿ ಮಹತ್ವದ್ದಾಗಿದೆ ಬಾಹ್ಯ ಜಗತ್ತಿನ ಯಾವುದೇ ವಸ್ತು, ಸ್ಥಾನ, ಸಂಪತ್ತುಗಳಲ್ಲಿ ಅಳವಡದ ಪರಮ ಶಾಂತಿಯನಿಲ್ಲಿ ಶಿವಯೋಗಿ ಪಡೆಯುವನು. ಅದಕ್ಕಾಗಿಯೇ "ಸಾಕು ಸಾಕಿನ್ನಿದಕೆ ಬೇರೊಂದು ಸುಖಮುಂಟೇನೇ ಕರಿಯಬಾರದಾತ್ಮಾನುಭವ ರತಿಯು" ಎಂದು ಶಿವಯೋಗಿಗಳು ಹಾಡಿಕೊಂಡಿದ್ದಾರೆ.

ಅಂತರಂಗದ ಶಿವಲಿಂಗಕ್ಕೆ ಧ್ಯಾನವೇ ಪುಷ್ಪವಾಗಿ ಸಮರ್ಪಿಸಬೇಕು. ಬಾಹ್ಯ ಪುಷ್ಪಗಳಿಗದು ಸಿಲುಕದು. ಆ ಧ್ಯಾನವೆಂಬ ಪುಷ್ಪಕ್ಕೆ ಮೂಲಾಧಾರದಿಂದ ಆಜ್ಞಾಚಕ್ರ ವೆಂಬಾರು ಚಕ್ರದವರೆಗಿರುವ ದಳಗಳ "ಅ"ಕಾರಾದಿ "ಕ್ಷ"ಕಾರಾಂತವಾದ ಮಾತೃಕೆಗಳೆ ಕಮಲ ದಳಗಳೆನಿಸುತ್ತವೆ. ಆಧಾರದಲ್ಲಿ ನಾಲ್ಕು ದಳ, ಸ್ವಾಧಿಷ್ಠಾನದಲ್ಲಿ ಆರು ದಳ, ಮಣಿಪೂರಕದಲ್ಲಿ ಹತ್ತು ದಳ, ಅನಾಹತದಲ್ಲಿ ಹನ್ನೆರಡು ದಳ, ವಿಶುದ್ಧಿಯಲ್ಲಿ ಹದಿನಾರು ದಳ, ಆಜ್ಞೆಯಲ್ಲಿ ಎರಡು ದಳದ ಕಮಲಗಳುಂಟು. ಆ ಕಮಲಗಳ ಕರ್ಣಿಕಾ ಮಧ್ಯದಲ್ಲಿ ಬಾಲರವಿ, ವಿದ್ಯುತ್, ಮಣಿ, ಸ್ವರ್ಣ, ಜ್ಯೋತಿ, ಮಿಂಚಿನ ಬಳ್ಳಿಗಳ ಪ್ರಭೆಯಿಂದ ಹೊಳೆಯುತ್ತಿರುವ ನಕಾರ, ಮಕಾರ, ಶಕಾರ, ವಾಕಾರ, ಯಕಾರ, ಓಂಕಾರ, ಅಕಾರ, ಉಕಾರ ಮಕಾರಗಳೆಂಬ ಪುಷ್ಪಗಳು ವರ್ಣ ಕಳೆಗಳಿಂದ ಸುಶೋಭಿಸುತ್ತಿರುವವು. ಇಂಥಹ ಪ್ರಭಾಮಯುವಾದ,ಸುಮಧುರ ಪರಿಮಳವನ್ನು ಬೀರುವ ಪುಷ್ಪಗಳ ಸಹಿತವಾಗಿರುವ ಧ್ಯಾನ ವೆಂಬ ಪೂಜೆಯನ್ನು ಹೃದಯ ಮಧ್ಯದೊಳು ಅನವರತವೂ ಎಡೆಬಿಡದೆ ಮಾಡುತ್ತಿರಬೇಕು.

ಧ್ಯಾನಯೋಗಕ್ಕೆ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ, ಬ್ರಹ್ಮ, ಶಿಖಾ, ಪಶ್ಚಿಮಗಳೆಂಬ ನವಚಕ್ರಗಳು ಯೋಗಿಗಳಿಗೆ ಯೋಗ್ಯಸ್ಥಾನ ಗಳಾಗಿವೆ. ಅದರಿಂದ ಪರಮಾನಂದ ಪ್ರಾಪ್ತಿ, ಶಿವಯೋಗ ಸಿದ್ಧಿ ಲಭಿಸುವುದರಲ್ಲಿ ಸಂದೇಹವಿಲ್ಲ.

ಧ್ಯಾನಮುದ್ರೆಯ ಲಕ್ಷಣ

ಧ್ಯಾನಯೋಗಕ್ಕೆ ತಕ್ಕ ಮುದ್ರೆಯ ಸ್ವರೂಪವನ್ನು ಮಾರ್ಮಿಕವಾಗಿಲ್ಲಿ ತಿಳಿಸಲಾಗಿದೆ.

ಶುದ್ಧ ಪದ್ಮಾಸನದಲ್ಲಿ ಅಥವಾ ತನಗಿಷ್ಟವಾದಾಸನದಲ್ಲಿ ಬೆನ್ನೆಲುವು ಬಾಗದಂತೆ ನೇರವಾಗಿರಬೇಕು. ತಲೆ ಎದೆಗಳು ನೇರವಾಗಿ ಸಮ ರೇಖೆಯಲ್ಲಿರಬೇಕು. ದೃಷ್ಟಿಯು ಭ್ರೂಮಧ್ಯ ಅಥವಾ ಹೃದಯಾದಿಗಳಲ್ಲಿ ಅಂತರ್ಮುಖಿಯಾಗಿರಬೇಕು. ಚಿತ್ತವು ನಿಶ್ಚಲ ವಾಗಿ ಮತ್ತೊಂದು ನೆನೆಯದಂತೆ ಸ್ಥಿರವಾಗಿರಬೇಕು. ತನುಮನಗಳಲ್ಲಿ ಕಾವು, ನೋವು, ವಿಚಲತೆ ಇಲ್ಲದಂತೆ ನಿರ್ಮಲ, ನಿಶ್ಚಲವಾಗಿ ಮಹಾಲಿಂಗವನಪ್ಪಿ ಅಗಲದಂತಿರಬೇಕು. ಇದೇ ಧ್ಯಾನ ಮುದ್ರೆಯೆನಿಸುವುದು. ಈ ಇದೇ ತೆರನಾದ ಧ್ಯಾನ ಮುದ್ರೆಯಲ್ಲಿ ಎರಡಳಿದು ನಿಂತಯೋಗಿಗೆ ನಿತ್ಯ ಸುಖವು ನಿಶ್ಚಿತ.

"ಪಾರಮಾರ್ಥ ಪ್ರಕಾಶಿಕೆ"ಯಲ್ಲಿ ಧ್ಯಾನ ಪೂಜೆಗೆ ತಕ್ಕ ಸ್ಥಾನಗಳಾದ ನವಚಕ್ರಗಳೂ, ಷೋಡಶಾಧಿಕಾರಗಳೂ, ಅಷ್ಟಾದಶ ಮರ್ಮಸ್ಥಾನಗಳೂ, ಅಷ್ಟಾವಧಾನಗಳು ಮತ್ತು

ಅವುಗಳಲ್ಲಿ ಧ್ಯಾನಗೈವುದರಿಂದಾಗುವ ಲಾಭಗಳ ವಿವರವನ್ನು ವಿವರವಾಗಿ ತಿಳಿಸಲಾಗಿದೆ. ಪ್ರಸ್ತುತ ಕೃತಿಯನ್ನೋದಿಯೇ ಅದನರಿಯತಕ್ಕದ್ದು.

ಅಷ್ಟಾವಧಾನಗಳಲ್ಲಿ ಮಂತ್ರ, ಲಯ, ಹಠ, ರಾಜಯೋಗಗಳು ಸಿದ್ಧಿಸುವುದಲ್ಲದೆ, ಮೂಲ, ಉಡ್ಯಾಣ, ಜಾಲಂಧರ ಬಂಧಗಳಿಂದಲೂ ಸಿದ್ಧಾಸನ, ಪದ್ಮಾಸನಗಳಿಂದಲೂ ದೇಹ ಮನವನ್ನು ಬಂಧಿಸುವುದರಿಂದ ಮೂಲಾಧಾರದಲ್ಲಿರುವ ಅಧಶಕ್ತಿ, ನಾಭಿಯಲ್ಲಿರುವ ಮಧ್ಯಶಕ್ತಿ ಕಂಠದಲ್ಲಿರುವ ಊರ್ಧ್ವಶಕ್ತಿಗಳು ಜಾಗ್ರತವಾಗುತ್ತವೆ. ಆ ಪರಿಣಾಮದಿಂದ ಸರ್ವಾಂಗದಲ್ಲಿಯೂ ಶಿವಪ್ರಭೆಯು ಬೆಳಗುತ್ತದೆ. ಈ ತೆರನಾಗಿ ಅಂತರಂಗದ ಶಿವಲಿಂಗ ಪೂಜೆಗೆ ಧ್ಯಾನವೆಂಬ ಪುಷ್ಪವು ಯೋಗೀಶ್ವರರು ಸಮರ್ಪಿಸುವರೆಂದು ತಿಳಿಸಲಾಗಿದೆ.

ಧಾರಣವೇ ಧೂಪ

ಬಳಿಕ ಅಂತರಂಗದಲ್ಲಿ ಮಾಡುವ ಶಿವಲಿಂಗ ಪೂಜೆಗೆ ಧ್ಯಾನವೆಂಬ ಪುಷ್ಪವರ್ಪಿತವಾದ ನಂತರ ಧಾರಣಾಯೋಗವೆಂಬ ಧೂಪವನ್ನು ಸಮರ್ಪಿಸಬೇಕು. ಈ ಮೊದಲು ಯಮ ನಿಯಮಗಳಿಂದ ಶುದ್ಧವಾದ ದೇಹವೆಂಬ ಪಾತ್ರೆಯಲ್ಲಿ ಪ್ರಾಣಾಯಾಮ, ಪ್ರತ್ಯಾಹಾರಗಳಿಂದ ಚಂಚಲತೆ, ಚಲನವಲನವಿಲ್ಲದ ಮನ ಮಾರುತಗಳು ಶುಷ್ಕವಾಗುತ್ತವೆ. ಆ ಶುಷ್ಕವಾದ ಮನಮಾರುತಗಳೆಂಬ ಕಾಷ್ಠಗಳಿಂದ ಧ್ಯಾನವೆಂಬ ಅಗ್ನಿಯು ಪ್ರಜ್ವಲಿಸುವುದು. ಧ್ಯಾನವೆಂಬಗ್ನಿಯಲ್ಲಿ ಇಪ್ಪತ್ತೈದು ಅಂಗತತ್ವಗಳಿಗೆ ಮೂಲವಾದ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಗಳೆಂಬ ಪಂಚಮಹಾಭೂತಗಳೈದು ಮತ್ತು ಆ ತನುವಿನ ವ್ಯಾಪಾರದಲ್ಲೊದಗುವ ಸಂಗ್ರಹಣ, ಪಾಕ, ವ್ಯೂಹನ, ಅವಕಾಶ, ದಾನಗಳೆಂಬೈದು ಕೂಡಿದ ಹತ್ತು ಗುಣಗಳೇ ದಶಾಂಗ ಧೂಪವಾಗಿ ಹಾಕಬೇಕು. ತದನಂತರ ಸುಜ್ಞಾನಿಯಾದ ಸಾಧಕನು ಸರ್ವಾಂಗದಲ್ಲಿಯೂ ಶಿವಲಿಂಗವನ್ನು ಧರಿಸುವ ಸದ್ ವಾಸನೆಯ ಪರಿಮಳದಲ್ಲಿ ಮುಳುಗುವನು. ಅದರಿಂದ ಜಾತಿ ವರ್ಣಾದಿಗಳಳಿದು, ಮನದ ಸಂಕಲ್ಪ ವಿಕಲ್ಪಗಳು ನಷ್ಟವಾಗಿ, ಆ ಮನವನು ಮುದ್ರಾಕರಣ, ಬಂಧಗಳಿಂದ ಅಂತರ್ಮುಖ ಮಾಡಬೇಕು. ಅಂತರ್ಮುಖವಾದ ಮನವನು ತೈಲಧಾರೆಯಂತೆ ಶಿವಧ್ಯಾನದಲ್ಲಿ ನಿಶ್ಚಲವಾಗಿ ಧಾರಣೆಗೈದು ಶಿವನಿಗೆ ಸಮರ್ಪಿಸಬೇಕು. ಇಂತಹ ಧಾರಣೆಯೇ ಅಂತ ಪೂಜೆಗೆ ಧೂಪಾರ್ಪಣವೆನಿಸುವುದು.

ಸಮಾಧಿಯೋಗ ನೈವೇದ್ಯ

ಧಾರಣಾಯೋಗದಲ್ಲಿ ತನುಮನ ಪ್ರಾಣಾದಿಗಳನ್ನು ಧೂಪಧೂಮವಾಗಿ ಶಿವಲಿಂಗಕ್ಕೆ ಸಮರ್ಪಿಸಲಾಯಿತು. ಶಿವನಿಗೆ ತನುಮನ ಪ್ರಾಣಗಳು ಸಮರ್ಪಿತವಾದವು. ನಂತರ ಉಳಿದುದು ತಾನೆಂಬ ಆತ್ಮವು. ಈ ಆತ್ಮವು ಈಗ ತನುಮನ ಪ್ರಾಣಾದಿಗಳ ಭಾವವಳಿದು ತಾನೊಂದೇ ಉಳಿದಿದೆ. ಉಳಿದ ತಾನು ತಾನುದಿಸಿಬಂದ ತನ್ನ ಮೂಲ ಸ್ಥಾನವೆನಿಸುವ ಪರಮಾತ್ಮನಲ್ಲಿ ನೈವೇದ್ಯವಾಗಿ ಸಮರ್ಪಿತವಾಗಿ ಅಲ್ಲಿಯೆ ಸಮರಸವಾಗುವುದೇ ಸಮಾಧಿ

ಯೋಗವೆನಿಸುವುದು. ಉದಕದಿಂದಾದ ಉಪ್ಪು ಉದಕವ ಬೆರೆದು ಬಿಡಿ ಬೇರಾಗದಂತೆ ಕ್ಷೀರವು ಕ್ಷೀರದಲ್ಲಿ ಬೆರೆದು ಬೇರಾಗದಂತೆ, ಜೀವನು ಶಿವನಲ್ಲಿ ಬೆರೆದು ಸಮರಸವಾಗುವುದೇ ಸಮಾಧಿಯೋಗವೆನಿಸುವುದು. ಅಂತರಂಗದ ಅರ್ಚನೆಗೆ ಆತ್ಮನು ಪರಮಾತ್ಮನಲ್ಲಿ ಸಮರಸ ವಾಗುವುದೇ ನೈವೇದ್ಯವೆನಿಸುವುದು. ಇದೇ ಮಾನವ ಬಾಳಿನ ಪರಮಗುರಿಯಾಗಿದೆ· ಇದೇ ತಾನೇ ತಾನಾಗುವ ಶಿವಯೋಗ ಸಿದ್ಧಿ.

ಸಮಾಧಿಯಲ್ಲಿ ಎರಡು ವಿಧ

ಜೀವಾತ್ಮ ಪರಮಾತ್ಮರ ಸಾಮರಸ್ಯವೇ ಸಮಾಧಿಯೆನಿಸುವುದು, ಆ ಸಮಾಧಿಯು ಅಜ್ಞಾತ ಸಮಾಧಿ, ಜ್ಞಾತ ಸಮಾಧಿ ಎಂಬೆರಡು ತೆರನಾಗಿರುವುದು.

ಅಜ್ಞಾತ ಸಮಾಧಿ: ಶ್ರೋತ್ರಾದಿ ಪಂಚಜ್ಞಾನೇಂದ್ರಿಯಗಳು, ವಾಗಾದಿ ಪಂಚ ಕರ್ಮೇಂದ್ರಿಯಗಳು, ಶಬ್ದಾದಿ ಪಂಚ ವಿಷಯಗಳು, ಮನಬುಧ್ಯಾಧಿ ಅಂತಕರಣಗಳು, ಕ್ಷಣಿಕವಾಗಿ ತೋರುವ ಸುಖದುಃಖಗಳು, ಪೂಜ್ಯತೆ ಅಪೂಜ್ಯತೆಗಳು, ಪುಣ್ಯಪಾಪಗಳು, ಮಾಡಬೇಕು ಕಳೆಯಬೇಕೆಂಬ ಸಂಕಲ್ಪಗಳು, ಇವಾವುವೂ ತೋರದೆ ಅಹಂಭಾವವಳಿದು, ಪರಶಿವನಲ್ಲಿ ಸಾಮರಸ್ಯವಾಗುವುದೇ ಅಜ್ಞಾತ ಸಮಾಧಿಯನಿಸುವುದು.

ಜ್ಞಾತ ಸಮಾಧಿ: ಯೋಗಿಯು ಆಹಾರವನುಂಡರೂ ಅಥವಾ ಉಪವಾಸ ವಿದ್ದರೂ, ನಿದ್ರೆಗೈದರೂ, ನಿದ್ರಾರಹಿತನಾಗಿದ್ದರೂ, ವಿರತಿಯಿಂದ ಗುಹೆಯಲ್ಲಿ ಕುಳಿತರೂ, ಭೂತಲದಲ್ಲಿ ಚಲಿಸುತ್ತಿದ್ದರೂ, ನಾನಾ ತರದ ಚಮತ್ಕಾರಿಕ ವ್ಯಾಪಾರಗೈದರೂ, ಆ ವ್ಯಾಪಾರರಹಿತನಾಗಿದ್ದರೂ, ಈ ಸಕಲ ಕರ್ತೃ, ಅಕರ್ತೃಗಳಲ್ಲಿ ತಾನು ಬೆರೆಯದೆ ಸಾಕ್ಷಿ ಭೂತನಾಗಿ, ನಿರ್ಲೇಪನಾಗಿರುವುದೇ ಜ್ಞಾತ ಸಮಾಧಿಯನಿಸುವುದು.

ಯೋಗಾಭ್ಯಾಸದಲ್ಲಿ ಸಿದ್ಧಿಗಳು

ಯೋಗಾಭ್ಯಾಸಿಗಳಿಗೆ ಸಿದ್ಧಿಗಳಾಗುವವೆಂದು ತಿಳಿಸಲಾಗಿದೆ. ಪಾರಮಾರ್ಥ ಪ್ರಕಾಶಿಕೆಯಲ್ಲಿ ವಿವರವಾಗಿ ತಿಳಿಸಲಾಗಿದೆ. ದ್ವಾದಶ ವರ್ಷಪರ್ಯಂತ ಮಾಡುವ ಹಠಯೋಗಾದಿ ಸಾಧನೆಯಿಂದ ಅದ್ಭುತ ಸಿದ್ಧಿಗಳು ದೊರೆಯುವವೆಂದು ತಿಳಿಸಿದರೂ ಬಲ್ಲವರು ಅವುಗಳಿಗೆ ಮಹತ್ವವೀಯಬಾರದೆಂದು ಎಚ್ಚರಿಸಲಾಗಿದೆ. ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಕಾಮ್ಯ, ಈಶತ್ವ, ವಶಿತ್ವಗಳೆಂಬ ಅಷ್ಟಸಿದ್ಧಿಗಳುಂಟು.

ಯೋಗವಿಘ್ನಗಳು

ಯೋಗ ಸಾಧನಾ ಪಥದಲ್ಲಿ ಬರುವ ವಿಘ್ನಗಳನ್ನು ಸಾಧಕನು ಸುಜ್ಞಾನದಿಂದರಿದು ಗೆಲ್ಲಬೇಕಾಗುತ್ತದೆ. ಆ ಯೋಗ ವಿಘ್ನಗಳಿವು.

ಅತೀ ಉಷ್ಣ, ಅತೀ ಆಮ್ಲ, ಅತೀ ಲವಣ, ಅತೀ ಕಟು, ಅಪವಿತ್ರವಾದ ಹಳಸಲು ಅನ್ನ, ತೈಲ, ತಿಂಡಿ, ಸಾಸಿವೆ, ಬೆಳ್ಳೊಳ್ಳಿ, ಮೂಲಂಗಿ, ಬೋರೆಯ ಫಲಗಳ ಸೇವನೆಯು ಆಹಾರವು ವರ್ಜ್ಯವು ಮತ್ತು ದುರ್ಜನರ–ಸಂಗ, ಸ್ತ್ರೀಸಂಗ, ಅಗ್ನಿಸಂಗ, ಸ್ನಾನ,

ಉಪವಾಸ, ದೇಶಸಂಚಾರಾದಿಗಳೆಂಬ ವಿಹಾರವು, ಬಹುಭಾಷೆ, ಅತ್ಯಾಹಾರ, ಅತೀ ನಿದ್ರಾದಿಗಳು ಯೋಗಕ್ಕೆ ವಿಘ್ನಗಳಾಗಿರುವುದರಿಂದ ಇವುಗಳನ್ನೂ ಸಾಧಕನು ತ್ಯಜಿಸ ಬೇಕೆಂದು ತಿಳಿಸಿದೆ.

ಇನ್ನು ತನು ಮನಾದಿಗಳಲ್ಲಿ ತೋರುವ ವಿಘ್ನಗಳಂತಿವೆ. ದೇಹ ಮನಗಳಲ್ಲಿ ಹುಟ್ಟುವಾಲಸ್ಯವು, ವಾತ, ಪಿತ್ತ, ಕಫಾದಿ ದೋಷ ಜನ್ಯವಾದ ರೋಗಗಳು ಯೋಗ ಸಾಧನೆ ಗೈವಲ್ಲಿ ಪ್ರಮಾದವು ನನಗೀ ಯೋಗ ಸಾಧ್ಯವಹುದೋ ಇಲ್ಲವೋ ಎಂಬ ಸಂಶಯವು, ಮನಸ್ಸಿಗೆ ದೃಢತ್ವವಿಲ್ಲದ ಅನವಸ್ಥಿತಿಯು, ಯೋಗ ಮಾರ್ಗದಲ್ಲಿ ವಿಶ್ವಾಸ ವಿಲ್ಲದಂತಹ ಅಶ್ರದ್ಧೆಯು, ಮತ್ತೊಂದು ತೆರನಾದ ಯೋಗ ಲಕ್ಷಣವನರಿವನೆಂಬ ಭ್ರಾಂತಿದರ್ಶನವು, ಆಧ್ಯಾತ್ಮಿಕ, ಆದಿ ಭೌತಿಕ, ಆದಿ ದೈವಿಕವೆಂಬ ತಾಪತ್ರಯ ರೂಪಾದ ದುಃಖವು, ಇಷ್ಟಾರ್ಥ ಸಿದ್ಧಿಸದ ಮನದ ನಿಶ್ಚಲತೆಯ ಕದಡಿಕೆಯು, ವನಿತೆ ವಿಷಯಾದಿ ಭೋಗದಲ್ಲಿ ಲೋಲುಪ್ತತೆಯು ಇವುಗಳು ಸಹ ಯೋಗ ವಿಘ್ನಗಳೆನಿಸುವುವು. ಸಾಧಕನು ಇವುಗಳನ್ನು ಜಯಿಸಬೇಕು.

ವಿಘ್ನ ಜಯಕ್ಕೆ ಉಪಾಯಗಳು

ಶ್ರೀ ಗುರುಭಕ್ತಿ, ಶಿವಸ್ಮರಣೆ, ಶಿವಮಂತ್ರೋಚ್ಚಾರಣ, ದೃಢ ವೈರಾಗ್ಯಗಳಿಂದ ವಿಘ್ನಗಳನ್ನು ಜಯಿಸಿ, ಉತ್ಸಾಹ, ಸಾಹಸ, ಧೈರ್ಯ ನಿಶ್ಚಯಾದಿ ಸದ್ಗುಣ ಸಂಪನ್ನನಾಗಿ, ಅಚಲವಾಗಿ ಅಭ್ಯಾಸ ಮಾಡತಕ್ಕದ್ದು. ಆತನಿಗೆ ಸಮಸ್ತ ಯೋಗಸಿದ್ಧಿಯು ಲಭಿಸುವುದು ನಿಶ್ಚಯವೆಂದು ತಿಳಿಸಲಾಗಿದೆ.

ಚತುರ್ಥ ಪರಿಚ್ಛೇದದಲ್ಲಿ ದಿವ್ಯಲಿಂಗಾನು ಸಂಧಾನ

ಪಾರಮಾರ್ಥ ಪ್ರಕಾಶಿಕೆಯಲ್ಲಿ ಈ ಹಿಂದೆ ಹೇಳಿದ ಮೂರು ಪರಿಚ್ಛೇದಗಳಲ್ಲಿ ಮಂತ್ರಯೋಗ, ಲಯಯೋಗ, ಹಠಯೋಗಗಳ ಸ್ವರೂಪವು ತಿಳಿಸಲಾಗಿದೆ. ಇನ್ನೀ ಚತುರ್ಥ ಪರಿಚ್ಛೇದದಲ್ಲಿ ಉನ್ನತವಾದ ರಾಜಯೋಗ ಲಕ್ಷಣವನ್ನು ಬೋಧಿಸುವರು. ರಾಜಯೋಗಾನುಭವ ಪಡೆದಾತನೆ ಮುಂದೆ ಶಿವಯೋಗ ಸಿದ್ಧಿಗೆ ಯೋಗ್ಯನಾಗುವನೆಂಬುದೆ ನಿಶ್ಚಯವು.

ಮಂತ್ರ, ಲಯ, ಹಠಯೋಗಗಳಿಂದಲೂ ರಾಜಯೋಗವು ವಿಶಿಷ್ಟವೆನಿಸಿದೆ. ನಾಲ್ಕು ಯೋಗಗಳಲ್ಲಿ ಶ್ರೇಷ್ಠವಾದ್ದರಿಂದಲೇ ಇದು ರಾಜಯೋಗವೆನಿಸಿದೆ. ರಾಜಯೋಗಕ್ಕೆ ಹಠಯೋಗದಲ್ಲಿ ಹೇಳಿದ ಅಷ್ಟಾಂಗಯೋಗಗಳಲ್ಲಿ ಜ್ಞಾನಾಷ್ಟಾಂಗ ಯೋಗವಾಗಿ ಸೂಕ್ಷ್ಮ ಗೊಳ್ಳುತ್ತವೆ. ಅವುಗಳನ್ನರಿವುದವಶ್ಯವಾಗಿದೆ.

ಜ್ಞಾನಾತ್ಮಕ ಅಷ್ಟಾಂಗಗಳು

ಯಮ: ರಸನೇಂದ್ರಿಯ ದಾಸನಾಗದೆ ತಮೋಗುಣಾತ್ಮಕ ನಿದ್ರೆಯ ವಶನಾಗದೆ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ವ್ಯಾಪಾರಗಳ ವಶನಾಗದೆ, ಶೀತೋಷ್ಣಾದಿಗಳ,

ರಾಗದ್ವೇಷಾದಿಗಳ ವಶನಾಗದೆ ಶುದ್ಧ ಸ್ವತಂತ್ರನಾಗಿರುವುದೇ ಯಮವೆನಿಸುವುದು. ಇದನ್ನು ನಿಧಾನವಾಗಿ ಅಭ್ಯಾಸ ಗೈಯ್ಯತಕ್ಕದ್ದು.

ನಿಯಮ: ಶ್ರೀಗುರುವಿನಲ್ಲಿ ಭಕ್ತಿಯು, ಪರಮಪದದಲ್ಲಿ ಪ್ರೀತಿಯು, ಜಗದ ಜನಸಂಗದಿಂದ ದೂರವಿರುವ ತನವು, ಇಚ್ಛಿಸದೆ ತಾನಾಗಿ ಬಂದ ಪದಾರ್ಥದಲ್ಲಿ ಸಂತೋಷವು, ಬಾಧೆರಹಿತವಾದ, ಮನೋರಮ್ಯವಾದ ಏಕಾಂತಸ್ಥಾನದಲ್ಲಿ ವಾಸವು, ವಿಷಯಗಳಲ್ಲಿ ವಿರತಿಗಳೆಂಬವು ನಿಯಮಗಳೆನಿಸುವವು.

ಆಸನ ಅತ್ತಿತ್ತ ಚಲಿಸದೆ ತನ್ನ ಸ್ವಸ್ವರೂಪದಲ್ಲಿ ನಿಶ್ಚಲವಾಗಿ ನಿಲ್ಲುವುದು. ಸಮಸ್ತ ವಿಷಯ ಭೋಗವಸ್ತುವಿನಲ್ಲಿ ಹೇಯತೆಯಿಂದುದಾಸೀನನಾಗಿರುವುದೇ ಆಸನ ವೆನಿಸುವುದು.

ಪ್ರಾಣಾಯಾಮ: ರೇಚನ ಪೂರಕ ಕುಂಭಕಗಳಿಂದ ಕೂಡಿದ ಪ್ರಾಣವಾಯುವಿನ ಸಂಚಾರವಿಲ್ಲದೆ, ಪ್ರಯತ್ನವಿಲ್ಲದೆ ಅಳವಟ್ಟ ಕೇವಲ ಕುಂಭಕದಿಂದಲೇ ಪ್ರಾಣ ಸುಸ್ಥಿರತ್ವವು. ತನು ಮನ ಧನ, ಕರಣ, ಭುವನ, ಭೋಗಾದಿಗಳೇ ನಾನು ನನ್ನವೆಂಬ ಬುದ್ಧಿಯು ಭ್ರಾಂತಿಯೆಂದರಿದು ಬಿಡುವುದೇ ಪ್ರಾಣಾಯಾಮವೆನಿಸುವುದು.

ಪ್ರತ್ಯಾಹಾರ: ಬಾಹ್ಯವಾದಿಂದ್ರಿಯಗಳು ಗೃಹದ ಶಬ್ದಾದಿ ವಿಷಯಗಳನ್ನು ಶುದ್ಧ ಬುದ್ಧಿಯೆಂದರಿದು ಗ್ರಹಿಸಿ ಮನವು ಒಹಿರ್ಮುಖವಾಗದಂತೆ ನಿಲ್ಲಿಸತಕ್ಕದ್ದು. ಅದರಿಂದ ಆತ್ಮಶಕ್ತಿಯು ಸವಿಕಲ್ಪ ಜ್ಞಾನದಲ್ಲಡಗಿ ನಿಸ್ತರಂಗವಾದ ಸಾಗರದಂತೆ ನಿಜಾನಂದ ದಲ್ಲಿ ವಿರಮಿಸುವುದು. ಹೀಗೆ ಇಂದ್ರಿಯ, ಮನ, ಆತ್ಮಗಳನ್ನು ನಿಶ್ಚಲಗೊಳಿಸಿರುವುದೇ ಪ್ರತ್ಯಾಹಾರವೆನಿಸುವುದು.

ಧ್ಯಾನ: ಪ್ರಾಕೃತ ಪ್ರಾಣಾಯಾಮದ "ಹಂಸ" ಮಂತ್ರವನೆ ವೈಕೃತ ಪ್ರಾಣಾಯಾಮದಿಂದ "ಸೋಹಂ"ವೆಂದೆನಿಸಿ, ಆ ಸೋಹಂ ಮಂತ್ರದ ಜ್ಞಾತೃ ಜ್ಞೇಯ ರೂಪಗಳಾದ ಸ, ಹ ವೆಂಬ ವರ್ಣಗಳನ್ನು ಕೇವಲ ಕುಂಭಕದಿಂದ ಲೋಪಗೊಳಿಸಬೇಕು. ಅದರಿಂದ ಓಂಕಾರವೆಂಬ ಪ್ರಣವವು ಭ್ರೂಮಧ್ಯದಲ್ಲುದಿಸಿ ದಶವಧ ನಾದವಾಗಿ ಘೋಷಿಸುವುದು. ಆ ಓಂಕಾರದ ಒಳವಿಭಾಗವಾದ ಅಕಾರವನ್ನು ಉಕಾರದಲ್ಲಡಗಿಸಿ, ಉಕಾರವನ್ನು ಬಿಂದು (ಮಕಾರ) ವಿನಲ್ಲಡಗಿಸಿದಲ್ಲಿ ಆ ಬಿಂದುವು ಶೂನ್ಯವೆಂದೆನಿಸುವುದು. ಆ ಪರಮಶೂನ್ಯದಲ್ಲಿ ಜೀವ ಶಿವರ ಸಾಮರಸ್ಯವಾಗಿ ಪರಮಪದ ಪಡೆದು ತಾನು ತನ್ನಲ್ಲಿ ನಿಲ್ಲುವುದೇ ಧ್ಯಾನವೆನಿಸುವುದು.

ಧಾರಣ: ನಾದಾತ್ಮಕವಾದ ಪರತತ್ವವು ತನ್ನ ಬಾಹ್ಯ, ಅಭ್ಯಾಂತರದಲ್ಲೆಲ್ಲವೂ ಸ್ಫುರಿಸುತ್ತಿರುವುದು. ಅದನ್ನು ಅಥರ್ವ ಮೊದಲಾದ ದುರ್ವಾಸನಾ ರಹಿತನಾಗಿ ಶುದ್ಧ ಬುದ್ಧಿಯಿಂದ ನಿಶ್ಚಲವಾಗಿ ತನ್ನಲ್ಲಿ ಧರಿಸುವುದೇ ಸಾಲಂಬ ಧಾರಣವೆನಿಸುವುದು. ನಾದವಳಿದು ನಿಜವಸ್ತುವನು ತನ್ನಲ್ಲಿ ಧರಿಸುವುದೇ ನಿರಾಲಂಬ ಧಾರಣೆಯೆನಿಸುವುದು.

ಸಮಾಧಿ: ನಂತರ ವಿಶ್ವದಲ್ಲಿನ ಪಿಂಡಾಂಡ ರೂಪವಾದ ಸಕಲ ವಸ್ತು ಜೀವ ಜಂತುಗಳಿಗೆ ತಾನು ಸಾಕ್ಷಿಯಾಗಿರುವೆನೆಂದರಿಯುವುದು. ಆ ಅರಿವನ್ನು ಮರಳಿ ಸವಿಕಲ್ಪಕ್ಕೆ ತರದೆ ನಿರ್ವಿಕಲ್ಪ ಸ್ಥಿತಿಯಲ್ಲಿ ಅಖಂಡ ಪರಿಪೂರ್ಣ ವಸ್ತುವಿನಲ್ಲಿ ಬೆರೆದು ಬೇರಿಲ್ಲದೆ ಅಭಿನ್ನವಾಗಿ, ಸಮರಸವಾಗಿರುವುದೇ ಸಮಾಧಿಯೆನಿಸುವುದು. ಇಲ್ಲಿ ತಾನು ಇದಿರೆಂಬುದಿಲ್ಲ. ದೇವಭಕ್ತನಿಲ್ಲ. ಎಲ್ಲವೂ ತಾನೇ ತಾನಾಗಿರುವನು.

ಈ ತೆರನಾದ ಜ್ಞಾನಾಷ್ಟಾಂಗ ಯೋಗದಿಂದ ಸಮರ್ಥನಾದ ನಿರ್ಮಲ ಯೋಗಿಯು ಮುಂದೆ ಉನ್ನತವಾದ ರಾಜಯೋಗವನ್ನು ಪಡೆವನು. ಈ ರಾಜಯೋಗ ಪಡೆದಾತನಿಗೆ ಬಹು ಪ್ರಯಾಸದಾಯಕವಾದ, ಮಂಡಲಶಕ್ಯವಾದ ಹಠಯೋಗದಿಂದ ಪ್ರಯೋಜನವಿಲ್ಲ. ಆತನಲ್ಲಿ ಮಹಾಲಿಂಗವೆಂಬ ತಾರಕಬ್ರಹ್ಮವು ಪಿಂಡಾಂಡದೊಳ ಹೊರಗೆನ್ನದೆ ಸ್ಫುರಿಸುವುದು. ಈ ರೀತಿಯಾಗಿ ಜ್ಞಾನಾಷ್ಟಾಂಗಗಳು ರಾಜಯೋಗಕ್ಕೆ ಸಾಧನವಾಗಿರುವುವು.

ರಾಜಯೋಗದ ಅವಾಂತರ ಭೇದಗಳು

ರಾಜಯೋಗವು ಸಾಂಖ್ಯ, ತಾರಕ, ಅಮನಸ್ಕವೆಂದು ಮೂರು ತೆರನಾಗಿದೆ. ಸಾಂಖ್ಯ ಯೋಗವು ತತ್ವಜ್ಞಾನ ರೂಪವಾಗಿದ್ದು ಕಾಮದ ಜಡಭಾವವಳಿಸಿ ಸ್ವಸ್ವರೂಪ ಜ್ಞಾನವ ನೀಡುವುದು.

ಸಾಂಖ್ಯಯೋಗದಲ್ಲಿ ತತ್ವಜ್ಞಾನದಿಂದ ತನ್ನ ಸ್ವಸ್ವರೂಪವನರಿದು ಆ ನಿಜ ಸ್ವರೂಪ ವನನುಭವಿಸಲು ಭ್ರೂಮಧ್ಯದಲ್ಲಿ ತಾರಕ (ಮಹಾಲಿಂಗ) ಬ್ರಹ್ಮದಲ್ಲಿ ದೃಷ್ಟಿ ಮನ ಮಾರುತಗಳನ್ನು ಬೆರೆದೇಕವಾಗಿ ಅಚಲವಾಗಿ ನಿಲ್ಲುವುದೇ ತಾರಕ ಯೋಗವೆನಿಸುವುದು.

ಆ ತಾರಕ ಬ್ರಹ್ಮದಲ್ಲಿ ನಿಶ್ಚಲವಾದ ಧ್ಯಾನದಿಂದ ಮನವು ಉನ್ಮನವಾಗಬೇಕು. ತಾರಕ ಬ್ರಹ್ಮದಲ್ಲಿ ಮನವಳಿದು ಬೆರೆದೇಕವಾಗಿ ಅಮನಸ್ಕವಾಗಿರುವುದೇ ಅಮನಸ್ಕ ಯೋಗವೆನಿಸುವುದು. ಇವು ರಾಜಯೋಗದ ಅವಾಂತರ ಭೇದವೆನಿಸುವುವು.

ಸೂರ್ಯನೆನಿಸುವ ದಕ್ಷಿಣ ನೇತ್ರ ಜ್ಯೋತಿಮಧ್ಯದಲ್ಲಿ ಪ್ರತ್ಯಕ್ಷವಾಗಿ ಬೆಳಗುತ್ತಿರುವ ಪರಮಾತ್ಮನೆ ಪತಿಯು–ಚಂದ್ರನೆನಿಸುವ ವಾಮನೇತ್ರ ಜ್ಯೋತಿ ಮಧ್ಯದಲ್ಲಿ ಪ್ರತ್ಯಕ್ಷನಾಗಿ ಬೆಳಗುತ್ತಿರುವ ಜೀವಾತ್ಮನೆ ಸತಿಯು. ಈ ಉಭಯ ತಾರಾಮಂಡಲಗಳ ಯೋಗವೇ "ತತ್ವಮಸಿ" ಮಹಾವಾಕ್ಯಾರ್ಥವಾದ ಜೀವ ಶಿವರ ಐಕ್ಯವು. ಅದೇ ಲಿಂಗಾಂಗ ಸಾಮರಸ್ಯವು. ಅದೇ ಶಿವಾತ್ಮ ಸಾಮರಸ್ಯವೆನಿಸುವ ಶಿವಯೋಗವು.

ಲಕ್ಷತ್ರಯುಗಳು

ರಾಜಯೋಗದಲ್ಲಿ ಅಂತರ್ಲಕ್ಷ, ಮಧ್ಯಲಕ್ಷ, ಬಾಹ್ಯಲಕ್ಷವೆಂಬ ಲಕ್ಷತ್ರಯುಗಳುಂಟು. ಬಾಹ್ಯಲಕ್ಷವು ದೃಷ್ಟಸ್ವರೂಪು, ಅಂತರ್ಲಕ್ಷ ಅದೃಷ್ಟಸ್ವರೂಪು. ಮಧ್ಯಲಕ್ಷವು ದೃಷ್ಟಾ ದೃಷ್ಟಸ್ವರೂಪು, ಮೂಲಾಧಾರದ ಕಂದ ಸ್ಥಾನದಿಂದ ಮೇಲೆ ಪಶ್ಚಿಮಭಾಗದ ಅಸ್ಥಿವಂತ ದಲ್ಲಿನ ಚಂದ್ರ ಪ್ರಭಾವಮಯವಾದ ಸುಷುಮ್ನ ನಾಡಿಯನ್ನು ಅಲ್ಲಿ ಕೋಟಿ ಮಿಂಚುಗಳಿಗೆ

ಸಮನಾದ, ತಾವರೆಯ ನೂಲಿಗೆ ಸಮವಾದಾಕೃತಿಯ, ಬ್ರಹ್ಮರಂಧ್ರರೊಡನಿರುವ ಸಕಲ ಸಿದ್ಧಿಗಳನ್ನು ಕೊಡುವ ಬಿಂದು ಶಕ್ತಿಯನ್ನು ಮನದಲ್ಲಿ ಲಕ್ಷಿಸುವುದೇ ಅಂತರ್ಲಕ್ಷ್ಯ ವೆನಿಸುವುದು.

ನಾಸಾಗ್ರದ ಮುಂದೆ ನಾಲ್ಕಂಗುಲ ಪ್ರಮಾಣದಲ್ಲಿ ತೋರುವ ನೀಲವರ್ಣದಾಕಾಶ ವಾಗಲಿ ಅಥವಾ ಆವುದಾನೊಂದು ಶುದ್ಧವಾದ ವಸ್ತುವನ್ನಾಗಲಿ ಅನಿಮಿಷ ದೃಷ್ಟಿಯಿಂದ ಎಡಬಿಡದೆ ಲಕ್ಷಿಸುವುದೆ ಬಾಹ್ಯಲಕ್ಷವೆನಿಸುವುದು.

ಸತ್ವ ರಜ ತಮಗಳೆಂಬ ತ್ರಿಗುಣಾತ್ಮಕ ಮಾಯೆಯನೊಳಗೊಂಡ ಕೋಟಿ ಸೂರ್ಯ ಪ್ರಕಾಶವೆನಿಸುವುದು ಬಿಂದ್ವಾಕಾಶವೆನಿಸುವುದು. ಇಂಥಹ ಕಣ್ಣ ಮುಂದೆ ಕಾಣುವ ಬಿಂದುಪ್ರಭೆಯ ಲಕ್ಷಿಸುವುದೇ ಮಧ್ಯ ಲಕ್ಷವೆನಿಸುವುದು. ಈ ರೀತಿಯಾಗಿ ರಾಜಯೋಗದ ಲಕ್ಷತ್ರಯುವನರಿವುದು.

ಈ ತೆರನಾಗಿ ಚತುರ್ಥ ಪರಿಚ್ಛೇದದಲ್ಲಿ ರಾಜಯೋಗವನುಪದೇಶಿಸಲಾಗಿದೆ.

ಪಂಚಮ ಪರಿಚ್ಛೇದ ಶಿವಯೋಗ

ಪಾರಮಾರ್ಥ ಪ್ರಕಾಶಿಕೆಯ ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ಪರಿಚ್ಛೇದ ಗಳಲ್ಲಿ ಮಂತ್ರ, ಲಯ, ಹಠ, ರಾಜಯೋಗಗಳನ್ನು ಬಹು ಮಾರ್ಮಿಕವಾಗಿ, ತಾತ್ವಿಕವಾಗಿ ಅರುಹಲಾಗಿದೆ. ಈಗ ಪಂಚಮ ಪರಿಚ್ಛೇದದಲ್ಲಿ ರಾಜಯೋಗಕ್ಕೂ ಮಿಗಿಲಾದ ಸರ್ವ ಯೋಗಗಳನ್ನೊಳಗೊಂಡ, ಸಗುಣ ನಿರ್ಗುಣ ಯೋಗ ಸಮನ್ವಯುವೆನಿಸುವ ಶಿವಯೋಗ ವನ್ನರುಹಲಾಗಿದೆ.

ಶಿವಯೋಗದಲ್ಲಿ ಜ್ಞಾನಕ್ರಿಯಾ ಸಮನ್ವಯುವಾಗಿವೆ. ಈ ಹಿಂದೆ ತಿಳಿಸಿದಂತೆ ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತಗಳಿಂದ ಕೂಡಿದ ಶಿವಾರ್ಚನೆಯೇ "ಶಿವಯೋಗ"ವೆನಿಸುತ್ತದೆ. ಇದೇ ಸಗುಣ ನಿರ್ಗುಣ ಯೋಗ ಸಮನ್ವಯುವೆನಿಸುವುದು. ಜಾಗ್ರ, ಸ್ವಪ್ನ, ಸುಷುಪ್ತಿಯನ್ನೂ ಮೀರಿ ಅನಿಮಿಷ ದೃಷ್ಟಿಯುಳ್ಳಾತನಾಗಿ, ಕರಸ್ಥಲ ಇಷ್ಟಲಿಂಗದಲ್ಲಿ ಅಂತರ್ಲಕ್ಷ ಬಾಹ್ಯಲಕ್ಷಗಳೆಲ್ಲವ ಮೀರಿ ಒಳಹೊರಗೊಂದಾಗಿ, ಬಯಲೇ ಬಯಲಾಗಿ ನೋಟ ಕೂಟದಿಂದ ನೆರೆವುದೇ ಶಿವಯೋಗವೆನಿಸುವುದು. ಈ ಶಿವಯೋಗ ದಿಂದ ಕಾಮದ ಕ್ರಿಯಾಶಕ್ತಿ, ಮನಸ್ಸಿನ ಜ್ಞಾನಶಕ್ತಿ, ಪ್ರಾಣದ ಧಾರಣಾಶಕ್ತಿ, ಭಾವನಾ ಶಕ್ತಿಗಳೆಲ್ಲವೂ ವಿಕಾಸವಾಗಿ ಲಿಂಗಸ್ವರೂಪವಾಗುತ್ತವೆ. ಆದ್ದರಿಂದಲೇ ಜ್ಞಾನಾತ್ಮಕವಾದ ರಾಜಯೋಗದಿಂದಲೂ ಉತ್ತಮವಾದುದು ಶಿವಯೋಗವೆನಿಸಿದ.

ಈ ಶಿವಯೋಗದಲ್ಲಿ ಖೇಚರಿ ಮತ್ತು ಶಾಂಭವಿ ಮುದ್ರೆಗಳನ್ನು ಸಹ ಸಮನ್ವಯ ಗೊಳ್ಳುತ್ತಿರುವುದನ್ನೂ ಪಾರಮಾರ್ಥ ಪ್ರಕಾಶಿಕೆಯು ತಿಳಿಸುತ್ತದೆ.

"ದಿವ್ಯಲಿಂಗವಂತರ್ಲಕ್ಷದಲ್ಲಿ ಮುಳುಗಿದ ಮನದಿಂದಲೂ, ಆ ಮನದೊಡನೆ ಕೂಡಿ ನಿಂದ ವಾಯುವಿನಿಂದಲೂ, ಆ ಮನೋಮಾರುತಂಗಳ ನಿಶ್ಚಲತ್ವದಿಂ ಚರಿಸದ ತಾರಾಮುಡಲದಿಂದವು ವರ್ತಿಸುತ್ತಿದ್ದಿತ್ತು. ಅದೇ ಖೇಚರಿ ಮುದ್ರೆಯೆನಿಸುವುದೂ

ಖೇಚರಿ ಮುದ್ರೆಯೇ ಶಾಂಭವಿ ಮುದ್ರೆಯೆನಿಸುವುದು" ಎಂದು ಖೇಚರಿ ಶಾಂಭವಿ ಮುದ್ರೆಯು ಸಮನ್ವಯತೆಯನ್ನಿಲ್ಲಿ ತಿಳಿಸಲಾಗಿದೆ.

ಅರೆಮುಗಿದ ದೃಷ್ಟಿಯಿಂದ ಅನಿಮಿಷ ನೋಟವುಳ್ಳಾತನಾಗಿ ಮನಮಾರುತಗಳು ಅಚಲವಾಗಿ ಬಾಹ್ಯಲಿಂಗದಲ್ಲಿ ಅಥವಾ ಹೃದಯ ಕಮಲದಲ್ಲಿ ನಿಶ್ಚಲವಾಗಿರುವುದೇ ಶಾಂಭವಿ ಮುದ್ರೆಯೆನಿಸುವುದು. ಇದು ಶಿವಯೋಗಕ್ಕೆ ಸಾಧನವಾಗಿದೆ.

ಪ್ರಾಣಲಿಂಗ ಪೂಜೆ

ಪ್ರಾಣಲಿಂಗವು ಸೂರ್ಯ ಚಂದ್ರ ಅಗ್ನಿಗಳೆಂಬ ಮಂಡಲತ್ರಯದಲ್ಲಿ ಬೆಳಗುತ್ತಿರುವುದು. ಅದೇ ಉಭಯ ದೃಷ್ಟಿಯ ಮಧ್ಯವೆನಿಸುವ ಭ್ರೂಮಧ್ಯ ಸ್ಥಾನವೆನಿಸುವುದು. ಆ ಲಿಂಗದಲ್ಲಿ ತನ್ನ ತಾ ಮರೆದು ಬಯಲ ಬಯಲಾಗಿರುವುದೇ ಪ್ರಾಣಲಿಂಗಾರ್ಚನೆಯೆನಿಸುವ ಶಿವಯೋಗವು ಆ ಶಿವಯೋಗಕ್ಕೆ ಮನ ಹಸ್ತದಿಂದ ತಕ್ಕ ಪುಷ್ಪಗಳನ್ನರ್ಪಿಸಬೇಕು. ಆ ಪುಷ್ಪಗಳೆಂದರೆ ಸಕಲ ಪ್ರಾಣಿಗಳಲ್ಲಿ ದುಃಖವ ಮಾಡದಂತಿರುವ ಅಹಿಂಸೆಯು, ತಾನಿದ್ದಲ್ಲಿ ಒಲಿದು ಬಂದ ಸ್ತ್ರೀಯನ್ನು ಮಾತೃಭಾವದಿಂದರಿವ ಇಂದ್ರಿಯ ನಿಗ್ರಹವು, ಶತ್ರುವಾಗಲಿ ಮಿತ್ರನಾಗಲಿ ಅವರ ರಕ್ಷಿಸುವ ಬುದ್ಧಿಯೆಂಬ ದಯೆಯು, ತಾನು ಸಮರ್ಥನಾಗಿದ್ದರೂ ಅಪರಾಧವನ್ನು ಸೈರಿಸುವ ಕ್ಷಮೆಯು, ನಿತ್ಯಾನಿತ್ಯ ವಿವೇಕವು, ಸದಾ ಪರಮಾತ್ಮ ಚಿಂತನೆಯು, ಧರ್ಮಾರ್ಥವಾಗಿ ದೇಹಶೋಷಣೆಯು, ಅಸತ್ಯ ನುಡಿಯದ ಸತ್ಯವು, ಇವು ಪ್ರಾಣಲಿಂಗಾರ್ಚನೆಗೆ ಅಷ್ಟಪುಷ್ಪಗಳೆನಿಸುವುವು. ಈ ಪುಷ್ಪಗಳಿಂದ ಹೃದಯ ಪೀಠದಲ್ಲಿರುವ ಪ್ರಾಣಲಿಂಗವನ್ನು ಕರಸ್ಥಲದ ಇಷ್ಟಲಿಂಗದ ಗೊತ್ತಿನಲ್ಲಿ ದೃಷ್ಟಿಮನಭಾವಗಳ ಬೆರೆಸಿ ಅರ್ಚಿಸಬೇಕು. ಇದೇ ಪರಮವೆನಿಪ ಶಿವಯೋಗವು.

ರಾಜಯೋಗ ಶಿವಯೋಗ ಸಮನ್ವಯ

ಸಗುಣ ನಿರ್ಗುಣ ಸಮನ್ವಯ ಯೋಗವೆನಿಸುವ "ಶಿವಯೋಗ"ದಲ್ಲಿ ರಾಜಯೋಗವು ಸಮನ್ವಯಗೊಳ್ಳುತ್ತದೆ.

"ಮನವನಾ ಸುಷುಪ್ತಿಯಲ್ಲಿ ಮರೆಯದಂತೆ, ಜಾಗ್ರದಲ್ಲಿ ಕೆದರದಂತೆ ನಿಶ್ಚಲವಂ ಮಾಡಿ ಭ್ರೂಮಧ್ಯ ಲಕ್ಷದಲ್ಲಿರುವುದ ಉನ್ಮನಿಯ ಸ್ವರೂಪವದೆ ಪರಮಪದವದೆ ಜ್ಞಾನವದೇ ಮೋಕ್ಷವಿದರಿಂದನ್ಯಮಾದರ್ಥಮಂ ಪೇಳ್ವ ಗ್ರಂಥ ವಿಸ್ತಾರಂ ವ್ಯರ್ಥವಪ್ಪುದಾಗಿ ಈ ಉನ್ಮನಿಯ ಸಾಧಿಸುವುದ ಪರರಹಸ್ಯವಾದ ಶಿವಯೋಗವು ಅದೇ ರಾಜಯೋಗವೆಂದು ರಾಜಯೋಗ ಶಿವಯೋಗ ಸಮನ್ವಯಗೊಂಡಿವೆ. ಆದ್ದರಿಂದ ಶಿವಯೋಗವು ಸಗುಣ ನಿರ್ಗುಣ ಸಮನ್ವಯಯೋಗವೆನಿಸುವುದು. ಈ ಶಿವಯೋಗವನರಿಯಲು ಶ್ರೀಮನ್ನಿಜಗುಣ ಶಿವಯೋಗಿ ವಿರಚಿತವಾದ "ಪಾರಮಾರ್ಥ ಪ್ರಕಾಶಿಕೆ"ಯು ಅತ್ಯುತ್ತಮ ಕೃತಿಯಾಗಿದೆ. ಕನ್ನಡ ಭಾಷೆಯಲ್ಲಿ ಯೋಗಗಳ ಸಮನ್ವಯವನ್ನು

ಬೋಧಿಸುವ ಅಮೂಲ್ಯ ಕೃತಿರತ್ನವಿದಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಅದು ಕನ್ನಡಿಗರ ಭಾಗ್ಯವೇ ಸರಿ.

"ಇತಿ ಶ್ರೀನಿಜಗುಣ ಶಿವಯೋಗಿ ಶಂಭುಲಿಂಗವೊಲವಿನಿಂದಖಿಲ ವೇದವೇದಾಂತಾಗಮಸ್ಮೃತಿ ಪುರಾಣೇತಿಹಾಸ ಪುರಾತನ ಗೀತಾದಿಗಳ ಯೋಗಪಾದ ಪರಮ ರಹಸ್ಯಾರ್ಥಂಗಳ ಪ್ರಸ್ತುತಮನೆ ವಿಸ್ತರಿಸಿರ್ದ 'ಶಿವಯೋಗ ಪ್ರದೀಪಿಕೆ' ಎಂಬ ಸಮ್ಯಗ್ ಅನುಭವ ಗ್ರಂಥಾನ್ವಯ ತಾತ್ಪರ್ಯಂಗಳನೆ ಕನ್ನಡಿಸಿ ಕರತಲಾಮಲಕವಾಗಿ ಪೇಳ್ದ "ಪಾರಮಾರ್ಥ ಪ್ರಕಾಶಿಕೆ" ಎಂಬ ಪ್ರಕರಣವಿದು ಪದುಳದಿಂದೊಮ್ಮೆ ಬರೆವೋದಿ ಕೇಳಿದವರ್ಗಾಕ್ಷಣದಲ್ಲಿಯೇ ಪಾಪಕ್ಷಯ, ಸಮಸ್ತ ದುಃಖ ನಿವೃತ್ತಿ, ಸದ್ಧರ್ಮವಭಿವೃದ್ಧಿ. ಸಂಶಯ ನಿವಾರಣ, ಶುದ್ಧಬುದ್ಧಿ, ವಿರಕ್ತಿ, ವಿವೇಕ, "ಶಿವಯೋಗ" ಸಂಪತ್ತಿ, ಸಮುನ್ನತಸಿದ್ಧಿ, ಮುಕ್ತಿಗಳಂ ಮಾಳ್ಪುದು ಸತ್ಯವದಾಗಿ ಸಾಧುಜನಗಳನ್ಯ ಶಾಸ್ತ್ರಂಗಳಲ್ಲಾಯಾಸಂಗೊಳ್ಳದಿದನೆ ಶ್ರದ್ಧಾಭಕ್ತಿ ಪೂರ್ವಕವಾಗಿ ಶ್ರೀಗುರುಮುಖದಿಂದ ತಿಳಿದು, ಕೃತಾರ್ಥರಾಗಲೆಂದಾಶೀರ್ವಾದ ಲಕ್ಷಣ ಮಂಗಲಾಚರಣದಿಂ ಪರಿಸಮಾಪ್ತಂ" ಎಂದು ಈ ಸಗುಣ ನಿರ್ಗುಣಯೋಗ ಸಮನ್ವಯವನಿಸುವ "ಶಿವಯೋಗ" ಬೋಧಾಮೃತ ಕೃತಿಯನ್ನು ಮಂಗಲಗೊಳಿಸಿದ್ದಾರೆ.

ಮಹಾಲಿಂಗರಂಗನ ಅನುಭವಾಮೃತ

—ಡಾ. ಎಸ್. ಎಂ. ಹಿರೇಮಠ
ಕಲಾತಪಸ್ವಿ, ಕಲಬುರ್ಗಿ

ಪ್ರಾಸ್ತಾವಿಕ:

ಕನ್ನಡ ಸಾಹಿತ್ಯದಲ್ಲಿ ಅನುಭಾವಸಾಹಿತ್ಯ ಪ್ರಕಾರಕ್ಕೆ ಮಹತ್ವದ ಮತ್ತು ಅತ್ಯಂತ ವಿಶಿಷ್ಟವಾದ ಸ್ಥಾನವಿದೆ. ಹನ್ನೆರಡನೆಯ ಶತಮಾನದಿಂದಲೇ ಈ ಸಾಹಿತ್ಯದ ಸ್ಪಷ್ಟವಾದ ಉಗಮವನ್ನು ಗುರುತಿಸಬಹುದಾಗಿದೆ. "ಅಂದು ಹುಟ್ಟಿದ ಕೂಸಿಂಗೆ ಅಂದೇ ಜವ್ವನವಾಯಿತ್ತು" ಎಂದು ಚನ್ನಬಸವಣ್ಣನವರ ಬಗೆಗೆ ಆಡಿದ ಶರಣರ ನುಡಿಯು ಈ ಅನುಭಾವ ಸಾಹಿತ್ಯಕ್ಕೂ ಅನ್ವಯವಾಗುತ್ತಿದೆ. ಉಗಮದೊಂದಿಗೆ ಈ ಸಾಹಿತ್ಯವು ಮಹೋನ್ನತಿಯೊಂದಿಗೆ ಬೃಹತ್‌ವಿಸ್ತಾರ ಪಡೆದುಕೊಂಡು ಬಂದಿರುವದೊಂದು ಹೆಗ್ಗಳಿಕೆ. ಹನ್ನೆರಡನೆಯ ಶತಮಾನದಲ್ಲಿ ಬೆಳೆದು ನಿಂತ ಅಪಾರ ವಾರಾಸಿ ಸದೃಶವಾದ ವಚನ ವಾಙ್ಮಯವೇ ಮೇಲಿನ ಮಾತಿಗೆ ಸಾಕ್ಷಿಯಾಗಿ ನಿಲ್ಲುತ್ತಿದೆ.

ವಚನವಾಙ್ಮಯಕಾರರೆಲ್ಲರೂ ಮೂಲತಃ ಅನುಭಾವಿಗಳು. ಅನುಭಾವದ ಅಮೃತವನ್ನು ತಾವು ಉಂಡು; ಅಂದಿನ ಸಮಾಜಕ್ಕೂ ಉಣಬಡಿಸಿ ಅಮೃತ ಪುತ್ರರಾಗಿಸಿದರು. ವೀರಶೈವ ಶರಣ ಅನುಭಾವಿಗಳು ಅಂದು, ಅನುಭವವದು ಅವರವರ ಬದುಕಿನ ಸತ್ಯ ದರ್ಶನ. ಆದುದರಿಂದ ಅದನ್ನು ಎಲ್ಲಿಂದಲೋ ಎರವಲು ಪಡೆಯುವದಕ್ಕೆ ಸಾಧ್ಯವೇ ಇಲ್ಲ. ಹೀಗಾಗಿ ಅವರು ಪಡಿಮೂಡಿಸಿದ ಅನುಭಾವದರ್ಶನದಲ್ಲಿ ಅವರವರ ಶಿವ ಜೀವನದ ಪಥವು ಮೂಡಿನಿಂತಿತು; ಮುಂದಿನವರಿಗೆ ಮಾರ್ಗತೋರಿಸಿತು. ತೋರಿದ ಪಥವನ್ನು ಸ್ವಯಂ ಅನುಭವಿಸಲು ಪ್ರೇರಣೆ ನೀಡಿತು. ಹೀಗಾಗಿ ತಮ್ಮ ತಮ್ಮ ಸತ್ಯದ್ದರ್ಶನಕ್ಕೆ ಕಂಡುದನ್ನು ಪರಸ್ಪರರಲ್ಲಿ ಹಂಚಿಕೊಂಡು ಆನಂದಿಸಿದರು. ಆನಂದಿಸುವಂತೆ ಮಾಡಿದರು. ಅವರ ಅನುಭವದ ಸಾರ ಸರ್ವಸ್ವವು ಅಧ್ಯಾತ್ಮವಾದರೂ; ಅದು ಜೀವನದಿಂದ ವಿಮುಖಗೊಂಡುದಾಗಲಿಲ್ಲ: ಜೀವನವನ್ನು ತ್ಯಾಜ್ಯವೆಂದು ತಿಳಿಸಲಿಲ್ಲ. ಜೀವನದಲ್ಲಿದ್ದು; ಜೀವನವನ್ನು ಗೆದ್ದು; ಆ ಜೀವನ ಶಿವನನ್ನು ಕಾಣುವದಷ್ಟೇ ಅಲ್ಲ; ಆ ಶಿವನೇ ತಾನಾಗುವದು ಸಾಧ್ಯವೆಂಬುದು ಮೊಟ್ಟ ಮೊದಲಿಗೆ ತೋರಿಸಿಕೊಟ್ಟವರು ವೀರಶೈವ ಅನುಭಾವಿಗಳು. ಈ ಸಂದೇಶ ನೀಡುವದಕ್ಕಾಗಿಯೇ ಶಿವಶರಣರು ಅನುಭಾವ ಮಂಟಪ ಕಟ್ಟಿದುದು; ಅದರ ಪರಂಪರೆ ಬೆಳೆಸಿದುದು; ನಿರಂತರವಾಗಿ ಉಳಿಸಿದುದು. ಹೀಗಾಗಿಯೇ ಅನುಭವದ ಈ ಪ್ರೇರಣೆ ಪ್ರಭಾವ ಅನ್ಯಮತೀಯ ಸಾಧಕ ಕವಿಗಳ ಮೇಲೂ ಗಾಢವಾಯಿತು. ವೀರಶೈವರೇ ಆದ ನಿಜಗುಣ ಶಿವಯೋಗಿ, ಸರ್ಪಭೂಷಣ

ಶಿವಯೋಗಿ, ಮುಪ್ಪಿನ ಷಡಕ್ಷರಿ, ಮೈಲಾರ ಬಸವಲಿಂಗ ಶರಣರು, ಕೂಡಲೂರ ಬಸವಲಿಂಗಶರಣರು, ಬಾಲಲೀಲಾ ಮಹಾಂತ ಶಿವಯೋಗಿ; ಕಡಕೋಳ ಶಿವಯೋಗಿ ಮಡಿವಾಳರು ಮುಂತಾದವರು ಇನ್ನಷ್ಟು ಕೊಡುಗೆಯನ್ನು ನೀಡಿ; ಅನುಭಾವ ಸಾಹಿತ್ಯ ವನ್ನು 'ಕೈವಲ್ಯ ಸಾಹಿತ್ಯ'ವಾಗುವಂತೆ ಮಾಡಿದರು. ಅನುಭಾವಾಮೃತದ ಕರ್ತೃ ಮಹ ಲಿಂಗರಂಗನು ಶೈವಸಂಪ್ರದಾಯುವಾದಿಯಾದರೂ ಈ ಪ್ರಭಾವದ ಹೊರಗೆ ಸಂಪೂರ್ಣ ಉಳಿದುಕೊಂಡು ನಿಲ್ಲುವದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಅವನು ತನ್ನ ಕೃತಿಗೆ 'ಅನುಭವಾ ಮೃತ'ವೆಂದು ಹೆಸರಿಟ್ಟದ್ದೇ ಸಾಕ್ಷಿಯಾಗಿದೆ. ಅನುಭವವು ಅಪ್ಪಟವೀರಶೈವರ ಪಾರಿಭಾಷಿಕ ಪದ. ಅರ್ಚನ-ಅರ್ಪಣದೊಂದಿಗೆ ವೀರಶೈವರು ಅನಿವಾರ್ಯವಾಗಿ ಆಚರಿಸಲೇ ಬೇಕಾದ ಕ್ರಿಯೆ ಅನುಭವ. ಹೀಗಾಗಿ ಅರ್ಚನ-ಅರ್ಪಣ-ಅನುಭವ ಎಂಬುದು ವೀರಶೈವರಲ್ಲಿ ಪ್ರಸಿದ್ಧ ಮತ್ತು ಜನಜನಿತ ವೇದಾಂತದ ಸಾರಸರ್ವಸ್ವ ಈ ಕೃತಿಯ ಮುಖಾಂತರ ಬೋಧಿಸಹೊರಟ ಮಹಲಿಂಗರಂಗನು ಎಷ್ಟೋ ಎಡೆಗಳಲ್ಲಿ ಬಸವಣ್ಣನವರ ಅನುಭವಪೂರಿತ ವಚನಗಳ ಪ್ರಭಾವಕ್ಕೆ ಒಳಗಾಗಿರುವದು ಅತ್ಯಂತ ನಿಚ್ಚಳವಾಗಿ ಗುರು ತಿಸಬಹುದಾಗಿದೆ. ಅದು ಮುಂದೆ ಉಲ್ಲೇಖಿಸಲಾಗುತ್ತಿದೆ.

ಕವಿ ಪರಿಚಯ

ಕವಿಚರಿತೆಕಾರರು ಈ ಕವಿಯನ್ನು ಕುರಿತಂತೆ ನೀಡಿರುವ ವಿವರ........ಈತನು ಅನುಭವಾಮೃತವನ್ನು ಬರೆದಿದ್ದಾರೆ. ಇವನು ಬ್ರಾಹ್ಮಣ ಕವಿಯೆಂದು ತೋರುತ್ತಿದೆ. ಇವನ ತಂದೆ ಸಹವಾಸಿ ವಂಶದ ಮಹಲಿಂಗದೇವ, ಗುರು ಪರಮಹಂಸ ಪರಿವ್ರಾಜಕಾಚಾರ್ಯ ಸಹಜಾನಂದ. ಇವನಿಗೆ ರಂಗಾವಧೂತ ಎಂಬ ಹೆಸರೂ ಉಂಟು. ತನ್ನ ಗ್ರಂಥವನ್ನು ಶ್ರೀಗಿರಿಯ ಮಲ್ಲಿಕಾರ್ಜುನದೇವರ ಅಂಕಿತದಲ್ಲಿ ಬರೆದಿದ್ದಾನೆ. ಇವನ ಗುರು ಭಕ್ತಿ ರಸಾಯನ ಕರ್ತೃವಾದ ಸಹಜಾನಂದನೇ ಆಗಿರಬಹುದೆಂದು ತೋರುತ್ತಿದೆ. ಹಾಗಿದ್ದ ಪಕ್ಷದಲ್ಲಿ ಈತನ ಕಾಲವು ಸು. ೧೬೭೫ ಆಗಬಹುದು. (ಕರ್ನಾಟಕ ಕವಿಚರಿತೆ-ಪು. ೪೫೮-ಭಾಗ II) ಕವಿಚರಿತೆಕಾರರು ಅತ್ಯಂತ ಸ್ಥೂಲವಾಗಿ ಅವನ ಪರಿಚಯವನ್ನು ನೀಡಿರುವರು. ಅವನ ಸ್ಥಳವು ಯಾವದೆಂಬುದು ಅವರು ಹೇಳು ವದಿಲ್ಲ. ಈಶ್ವರ ಕವಿ ತನ್ನ ಕೃತಿಯಲ್ಲಿ ಕೆಲವು ವಿವರಗಳನ್ನು ನೀಡಿರುವನು ಅವುಗಳಲ್ಲಿ ಕೆಲವು ಕವಿಚರಿತೆಕಾರರ ಮಾತಿಗೆ ಆಧಾರವಾಗಿರುವಂತೆ; ಕೆಲವು ಹೊಸ ವಿಚಾರಗಳೂ ತೋರುತ್ತಿವೆ. ಅವರು ತನ್ನ ವಂಶ-ತಂದೆ-ಗುರು ವಿಚಾರವನ್ನು ಕುರಿತಂತೆ ಹೀಗೆ ತಿಳಿಸಿರುವನು.

"ಘನ ತರದ ಸಹವಾಸಿ ವಂಶದೊ|
ಳನುಪಮನು ಮಹಲಿಂಗದೇವನ
ತನಯನಹ ಶ್ರೀರಂಗ ಸಹಜಾನಂದ ಗುರುಪದವ||
ನೆನೆದು............................" (೨-೧-ಪ-೩)

ಇವನು ಬ್ರಾಹ್ಮಣನಾದರೂ ವೈಷ್ಣವನಲ್ಲ; ಶೈವನೆಂಬುದು ಕೃತಿಯಲ್ಲಿನ ಆಂತರಿಕ ಆಧಾರಗಳು ಹೇಳುತ್ತಿವೆ. ಕೃತಿಯ ಆರಂಭದಲ್ಲಿ ಶಿವರೂಪನಾದ ಮಲ್ಲಿಕಾರ್ಜುನನ ಸ್ತೋತ್ರ ಮಾಡುತ್ತಾನೆ.

"ಶ್ರೀಮದನುಪಮ ತೇಜ ನತಜನ
ಕಾಮಿತಾರ್ಥ ಫಲಪ್ರದಾಯಕ।
ಸೋಮಶೇಖರ, ಸುರಮುನೀಂದ್ರಾರ್ಚಿತ ಪದಾಂಭೋಜ
ಸಾಮಗಾನಪ್ರಿಯ, ಸದಾಶಿವ।
ವಾಮಭಾಗಾಶ್ರಿತ ಭವಾನೀ।
ಪ್ರೇಮ ಶ್ರೀಗಿರಿ ಮಲ್ಲಿಕಾರ್ಜುನ ಸಲಹು ಮೂಜಗವ॥"

(ಅ-೧-ಪ-೧)

ಇನ್ನೊಂದೆಡೆಯಲ್ಲಿ ಶೈವಮತವೇ ಮತಗಳಲ್ಲಿ ಶ್ರೇಷ್ಠವೆಂದು ಹೇಳುವುದುಂಟು:

"ವ್ರತಗಳೊಳು ಶಿವರಾತ್ರಿ, ಮಂತ್ರ।
ಪ್ರತಿತೆಯೊಳು ಗ್ರಾಯತ್ರಿ, ವಿದ್ಯಾ।
ವಿತತೆಯೊಳಗಧ್ಯಾತ್ಮ ವಿದ್ಯೆಯು ಮತಗಳೊಳು ಶೈವ॥"

(ಅ-೧೦ ಪ-೧೧೯)

ಆಧ್ಯಾತ್ಮಬೋಧಿಯಾದರೂ; ಅನುಭಾವದ ನೆಲೆಯು ಹೊಂದಿರುವ ಈ ಕವಿಯು ಸಂಸಾರಿಯಾಗಿದ್ದನೆಂದು ಸಂಭಾವಿಸಬಹುದಾಗಿದೆ ಅದಕ್ಕೆ ಅವನು ಹೇಳುವ ಈ ಪದ್ಯವನ್ನು ನೋಡಬೇಕು; ಇಲ್ಲಿ ಕವಿ ಸಂನ್ಯಾಸತ್ವವನ್ನು ಜರಿಯುವಂತೆ ಕಾಣುತ್ತಿದೆ. ಡಂಭಾಚಾರದ ಸಂನ್ಯಾಸಿಗಿಂತಲೂ ಸಾರವತ್ತಾದ ಸಂಸಾರ ನಿರ್ವಹಿಸುವ ಸದಾಚಾರಿಗೆ ಬ್ರಹ್ಮಜ್ಞಾನ ಲಭ್ಯವೆಂಬುದು ಕವಿಯ ಅಭಿಮತವಾಗಿದೆ.

"ಬ್ರಹ್ಮವೇ ತಾನಾದ ಮನುಜನು।
ಹಮ್ಮಳಿದು ನಿಸ್ಸಂಗನಾಗಿಹ।
ಧರ್ಮವೇ ಸಂನ್ಯಾಸವಲ್ಲದೆ ನಿತಕರ್ಮಗಳ॥
ಸುಮ್ಮನೇ ನಿತ್ಯಾತ್ಮ ಚಿಂತೆಯು
ಲೊಮ್ಮೆಯೂ ಮನವಿಡದೆ ಬರಿದೇ
ಹೆಮ್ಮೆಗವ ಸಂನ್ಯಾಸಿಯಾದುದರಿಂದ ಫಲವೇನು?"

"ಕಾಯದಲಿ ಸನ್ಯಾಸಿ ವೇಷವ।
ಬಾಯೊಳಗೆ ಬ್ರಹ್ಮವನು ಮನದಲಿ
ರಾಯ ಪಟ್ಟವ ಕಟ್ಟಿಕೊಳಬೇಕೆಂಬುದನು ತಳೆದು
ಮಾಯೆಯೊಬ್ಬಳ ಬಿಟ್ಟೆನೆಂಬೀ

ನ್ಯಾಯದವ ತಾ ವಾದಿಯಲ್ಲದೆ।
ಮಾಯೆಯಳಿದಾತ್ಮಜ್ಞನೇ? ಸಂನ್ಯಾಸಿಯವನಲ್ಲ॥"

(ಅ-೧೦-ಪ-೯೬, ೯೭)

ಕವಿಯು ತನ್ನ ಕೃತಿಯಲ್ಲಿ ಮಾಯೆಗೆ ಉಚ್ಚಂಗಿ ಕೋಟೆಯ ಹೋಲಿಕೆಯನ್ನು ನೀಡಿರುವದರಿಂದ ವಿದ್ವಾಂಸರು ಇವನು ಉಚ್ಚಂಗಿಕೋಟೆ ಅಥವಾ ಅದರ ಸುತ್ತು-ಮುತ್ತಲಿನ ಸ್ಥಳದವನಾಗಿರಬೇಕೆಂದು ಊಹೆ ಮಾಡಿರುವರು (ಅನುಭವಾಮೃತಕ್ಕೆ ಬರೆದ ಮುನ್ನುಡಿ-ಪ್ರಗ-ಹೊಸಕೆರೆ ಚಿದಂಬರಯ್ಯ) ಕವಿಯು ಈ ಕೆಳಗಿನ ಪದ್ಯದಲ್ಲಿ ಉಚ್ಚಂಗಿಕೋಟೆಯ ಉಲ್ಲೇಖ ಮಾಡಿರುವನು.

"ಕೇಳು ಶುಕಯೋಗೀಂದ್ರ ಮಾಯೆಯ।
ಮೂಲ ಮುಟ್ಟಿ ವಿಚಾರಿಸಲು ಪುಸಿ।
ಕಾಳಲಾ ಅವಿಚಾರಸಿದ್ಧ; ವಿಚಾರಿಸಿದೊಡಿಲ್ಲ॥
ಹೇಳ ಹೇಳಲು ದೊಡ್ಡಿತಾಗಿ ವಿ
ಶಾಲಪಿನ ಉಚ್ಚಂಗಿಕೋಟೆಯ
ವೋಲು ಹೆಚ್ಚುವದಾಲಿಸಿದರೊಮ್ಮೊಳನು ಕೇಳೆಂದ॥"

(ಅ-೪-ಪ-೩೫)

ಆದರೂ ಕವಿಯ ಸ್ಥಾನವನ್ನು ಕುರಿತು ಸರಿಯಾದ ಸಂಶೋಧನೆ ನಡೆಯಬೇಕಾದ ಅವಶ್ಯಕತೆಯಿದೆ.

ಕೃತಿ ವಿಚಾರ-ಸಾರಾಂಶ

ಅದ್ವೈತ ದರ್ಶನದ ಸುವರ್ಣಕಲಶದಲ್ಲಿ ತುಂಬಿ ಹೃದಿಸಿರುವ ಅನುಭವ ಅಮೃತದ ಹೊನಲನ್ನು ಹೊತ್ತುನಿಂತ ಈ ಕೃತಿಯ ಅನುಭಾವಾಕಾಂಕ್ಷಿಗಳಿಗೆ ಅತಿ ಮಧುರವೆನಿಸುವದರಲ್ಲಿ ಸಂಶಯವಿಲ್ಲ. ಸುಲಿದ ಬಾಳೆಯ ಹಣ್ಣಿನಂತಿರುವ ಸರಳ ಕನ್ನಡದಲ್ಲಿ; ಸುಲಭ ಶೈಲಿಯಲ್ಲಿ ಸುಭಗಷಟ್ಪದಿಯಾದ ಭಾಮಿನಿಯಲ್ಲಿ ಬರೆದಿರುವ ಈ ಕೃತಿ ಪಂಡಿತ ಪಾಮರರಿಬ್ಬರಿಗೂ ಹರುಷವನ್ನುಂಟು ಮಾಡುತ್ತಿದೆ. ಕೃತಿಯ ಅಂತರಂಗವನ್ನು ನೋಡಿದರೆ ಒಟ್ಟು ವಿಷಯದ ಹರವು ಮನದಟ್ಟಾಗುತ್ತಿದೆ. ವಿಷಯ ವಿವರಗಳನ್ನಿಲ್ಲಿ ಸಂಗ್ರಹಿಸಿ ಕೊಡಲಾಗಿದೆ.

೧. ಅಧ್ಯಾಯ ಒಂದರಲ್ಲಿ ಬ್ರಹ್ಮಜ್ಞಾನಕ್ಕೆ ಅಧಿಕಾರಿಯಾಗುವ ಸಾಧಕನ ಲಕ್ಷಣಗಳನ್ನೂ ಹೇಳಲಾಗಿದೆ. ಮನುಷ್ಯನಾಗಿ ಬಂದ ಜೀವನು ತನ್ನೆಲ್ಲಾ ಪಾಪವನ್ನು ನೀಗಿಕೊಂಡು ಪುಣ್ಯ ಪಡೆಯಬೇಕಾದರೆ ಪರಬ್ರಹ್ಮನ ಸ್ಮರಣೆ ಮಾಡಲೇಬೇಕು. ಹಸನಾದ ಹೊಲದಲ್ಲಿ ಬಿತ್ತಿದ ಬೀಜವು ಸಮೃದ್ಧ ಫಸಲು ಕೊಡುವಂತೆ, ದಾನ, ಧರ್ಮ, ದಯಾ, ಮೌನ, ಶಮೆ, ದಮೆ, ಸತ್ಯ, ಶೌಚ ಮುಂತಾದ ಸದ್ಗುಣಗಳುಳ್ಳವ

ನಲ್ಲಿಯೇ ಈ ಬ್ರಹ್ಮ ಬೀಜವು ವಿಕಾಸ ಹೊಂದುತ್ತದೆ. ಅಂತಹವನೇ ಬ್ರಹ್ಮ ಜ್ಞಾನಕ್ಕೆ ಅಧಿಕಾರಿಯಾಗುತ್ತಾನೆ. ಇದನ್ನು ಕವಿ ಹಲವಾರು ಪದ್ಯಗಳಲ್ಲಿ ಹೇಳಿ ರುವದುಂಟು. (ಅ-೭-ಪ-೧೮, ೩೦) ಒಂದನ್ನಿಲ್ಲಿ ಉದಾಹರಿಸಬೇಕು.

ನಿತ್ಯನೈಮಿತ್ತಿಕವ ಕಳೆದಾ
ಪ್ರತ್ಯವಾಯಕೆಮಾಡಿ ಪ್ರಾಯ
ಶ್ಚಿತ್ತವನು ಜಪತಪದಿ ಕಾಮ್ಯನಿಷಿದ್ಧಗಳ ಬಿಟ್ಟು||
ಭಕ್ತಿಯಿಂದೀಶ್ವರನ ಪೂಜಿಸಿ|
ಚಿತ್ತಶುದ್ಧಿಯ ಪಡೆದು ಮೋಕ್ಷವ
ನರ್ಥಿಸುತ್ತಿಹ ಸಾಧುಗಳೆ ತತ್ತ್ವಾಧಿಕಾರಿಗಳು||

೨. ಎರಡನೆಯ ಅಧ್ಯಾಯದಲ್ಲಿ ವೈರಾಗ್ಯದ ಮಹತ್ವವನ್ನು ಹೇಳಲಾಗಿದೆ. ಈ ಸಂಸಾರವಮಾಯೆ, ಸಂಸಾರಕ್ಕೆ ಪೂರಕವಾಗುವ ಸ್ತ್ರೀಯು ಮಾಯೆ. ಸಂಸಾರವು ವಿಷಯ ಮುಖಗಳಿಂದ ಕೂಡಿರುತ್ತಿದೆ. ಜೀವನನ್ನು ಆಕರ್ಷಿಸಿ ಕೂಪಕ್ಕೆ ತಳ್ಳುತ್ತಿದೆ. ಆದುದರಿಂದ ಸಂಸಾರವಿರಹಿತನಾಗಿ, ವೈರಾಗ್ಯಯುಕ್ತನಾಗಿ, ಬ್ರಹ್ಮಜ್ಞಾನವ ಗಳಿಸಿ, ಮೋಕ್ಷವನ್ನು ಸಂಪಾದಿಸಬೇಕೆಂಬುದೇ ಈ ಅಧ್ಯಾಯದ ಒಟ್ಟು ತಾತ್ಪರ್ಯ ವಾಗಿದೆ. ನಾರಿಯು ಮಾಯೆಯೆಂಬ ವಿಚಾರವನ್ನಿಲ್ಲಿ ಹೇಳಲಾಗಿದೆ.

"ಮೂರು ಕಾಲದಿ ಮುಳುಗಿ ನೀರಲಿ
ನಾರ ಸೀರೆಯನುಟ್ಟು ಪರ್ಣಾ
ಹಾರದಲಿ ಮಳೆಗಾಳಿಗಂಜದೆ ಬಿಸಿಲ ಲೆಕ್ಕಿಸದೆ||
ಘೋರ ತಪವನು ಮಾಡಿ ವನವನು
ಸೇರಿಕೊಂಡಿಹ ಮುನಿಗಳೆಲ್ಲರು
ನಾರಿಯರ ವಶರಾಗಿ ಹೋದರು ಮಾರಗಿದಿರಾರು?"

(ಅ-೨-ಪ-೭೦)

ವಿಷಯಲಂಪಟರನ್ನು ಕುರಿತು ಕವಿ ತೆಗೆಯುವ ಉದ್ಗಾರದಲ್ಲಿ ವಿರಕ್ತಿಯ ಸಂದೇಶವು ಕೇಳುತ್ತಿದೆ.

"ಗ್ರಾಮಸೂಕರಗೆಂತಮೇಧ್ಯವೆ|
ಪ್ರೇಮವಾಗಿಹುದಾಪರಿಯೊಳೀ
ರಾಮಣೀಯಕ ಕಾಮುಕರಿಗೆ ಕಾಮಿನಿಯ ದೇಹವಿದು
ಹಾ ಮಹೇಶ್ವರ! ಎಂತು ಹಿತವೋ|
ತಾಮಸರಗೀ ಮನುಜ ದೇಹವು|
ರೋಮಮಲದೆಲು ಮಾಂಸ ಮಜ್ಜಾದಿಗಳ ಸಂಕುಲವು||" (ಅ-೨-ಪ-೮೩)

೩. ಅಧ್ಯಾಯ ಮೂರರಲ್ಲಿ 'ತ್ವಂ' ಪದ ಅರ್ಥವನ್ನು ಅನ್ವೇಷಿಸಲಾಗಿದೆ. ಬ್ರಹ್ಮಜ್ಞಾನ ಬಯಸುವವನಿಗೆ ಗುರುವು "ತತ್ವಮಸಿ" ಎಂದು ಉಪದೇಶ ಮಾಡುತ್ತಾನೆ. "ಅದು ನೀನೇ ಆಗಿದ್ದಿ" ಎಂಬುದು ಅದರ ಅರ್ಥ 'ಅದು' ಎಂದರೆ "ಬ್ರಹ್ಮ" ಇದನ್ನೇ ಕವಿ ಹೀಗೆ ಹೇಳುತ್ತಾನೆ.

"ನನ್ನ ನಾನೆಂತರಿವೆನೆಂಬುದ
ಮುನ್ನಲರಿವರಿವಾತ್ಮನದು; ನೆರೆ
ತನ್ನ ತಾನೇ ತೋರುತಿರ್ಪ್ಪುದು; ಸ್ವಪ್ರಕಾಶವದು॥
ತನ್ನ ಬುದ್ಧಿಗೆ ಸಾಕ್ಷಿ ತಿಳಿ ಚೈ
ತನ್ಯರೂಪವಖಂಡಮರುವದ
ನನ್ಯವಮತಾನಂದ ನೀನೆಂದದನು ನಿಶ್ಚಯಿಸು॥

(ಅ-೩-ಪ-೧೦೬)

೪. ಅಧ್ಯಾಯ ೪ರಲ್ಲಿ 'ತತ್' ಪದದ ಅರ್ಥವಿವರಣೆ ಮಾಡಲಾಗಿದೆ. 'ತತ್' ಎಂದರೆ 'ಶುದ್ಧಬ್ರಹ್ಮ'. ಮಾಯೆಯಿಂದ ಆ ಬ್ರಹ್ಮರೂಪವು ಜೀವರಿಗೆ ಕಾಣುವದಿಲ್ಲ. ನಾಮ-ರೂಪಗಳನ್ನೆಲ್ಲ ಕಳೆದು ನೋಡಿದಲ್ಲಿ, ಮಾಯೆ ಹರಿದುಹೋಗಿ ಅಲ್ಲಿ ಬ್ರಹ್ಮವೊಂದೇ ಉಳಿಯುತ್ತಿದೆ; ಕಾಣುತ್ತಿದೆ. ಈ 'ತತ್' ಅರ್ಥದ ವಿವರಣೆಗೆ ಪೋಷಕವಾಗಿ ಇಲ್ಲಿ ಮಾಯೆಯ ಸ್ವರೂಪ, ಸೃಷ್ಟಿಕ್ರಮ, ಪಂಚೀಕರಣಕ್ರಮ, ಅಧಿದೇವತೆಗಳು, ಶರೀರದಲ್ಲಿರುವ ಭೂತಾಂಶಗಳು, ತ್ರಿಗುಣಾತ್ಮಕವಾದ ಪ್ರವೃತ್ತಿ ವಿಚಾರ, ಮಾರೂವಿಲಾಸ, ಮಾಯಾನಿರಸನ ಉಪಾಯ, ಬ್ರಹ್ಮವನ್ನು ಗುರುತಿಸುವ ರೀತಿ-ಈ ಎಲ್ಲ ಅಂಶಗಳನ್ನು ಹೇಳಲಾಗಿದೆ. ಪರಬ್ರಹ್ಮದ ಸ್ವರೂಪವು ಕವಿ ಹೇಳಿರುವದಂತಿದೆ.

"ನಿರುಪಮ ನಿರಾಲಂಬ ನಿರ್ಗುಣ
ನಿರವಧಿ ನಿರಾತಂಕ ನಿರ್ಮಲ
ನಿರತಿಶಯ ನಿಶ್ಚಲ ನಿರಂಜನ ನಿರ್ವಿಕಾರ ನಿಜ॥
ಪರತರ ಪರಮಾನಂದ ಪಾವನ
ಪರಮಪದ ಪರಿಪೂರ್ಣ ಪರ ಚಿ
ತ್ಪರ ಸದದ್ವಯವಾದ ಪರಮಾರ್ಥವೆ ಪರಬ್ರಹ್ಮ"

(ಅ-೪-ಪ-೭೦)

೫. ಈ ಅಧ್ಯಾಯದಲ್ಲಿ 'ಅಸಿ' ಪದವನ್ನು ನಿರ್ಣಯಿಸಲಾಗಿದೆ. ಈಶ್ವರಲೀಲೆ, ಅವಿದ್ಯೆಯ ಕಾರಣದಿಂದ ಜೀವತ್ವವುಂಟಾಗುವ ವಿಚಾರ, ಬ್ರಹ್ಮವೇ ಮಾಯೆ ಯಿಂದ ಜೀವನಾಗುವನೆಂಬ ವಿಚಾರ, ಸುಖ-ದುಃಖಗಳು, ಉಪಾಧಿ, ಧರ್ಮಗಳು,

ಅರಿವು-ಮರೆವುಗಳು, ಕರಣ ಧರ್ಮಗಳು, ಪರಮಾತ್ಮ ವರ್ಣನೆ, ಭೇದ-ಭಾವನೆ ಬಂಧಕವೆಂಬ ವಿಚಾರ, ಸೃಷ್ಟಿಯ ಆರೋಪತ್ವ, ಬ್ರಹ್ಮವೇ ತಾನೆಂಬ ನಿಶ್ಚಯ ಮುಂತಾದ ವಿಷಯಗಳು ಈ ಪ್ರಕರಣದಲ್ಲಿ ಹೇಳಲಾಗಿದೆ. ಅರಿವಿನಿಂದ ಪರವಸ್ತು ಮರವಿನಿಂದ ಜೀವನಾಗುತ್ತಾನೆಂಬ ವಿಚಾರ ಕವಿ ಇಲ್ಲಿ ಕವಿ ಹೀಗೆ ತಿಳಿಸಿರುವನು.

"ಅರಿದುನೀ ಪರವಸ್ತುವಾದೊಡೆ
ಮರೆದು ನೀನೇನಾದೆ ಅಹಹಾ।
ಅರಿವಿನಲಿ ಬೇರೊಬ್ಬ ಮರೆವೆಯಲೊಬ್ಬರೆರಡುಂಟೆ ?
ಅರಿವು ಮರವೆಗಳಲ್ಲಿ ನೀನೆಡೆ।
ವರಿಯದರಿವಾಗಿಪ್ಪೆ; ಕೇಳಾ
ಅರಿವು ಮರವೆಗಳೆಂಬುವೆಲ್ಲವು ಕಾರಣ ಧರ್ಮಗಳು"

(ಅ-೫-ಪ-೨೦)

೬. ಈ ಅಧ್ಯಾಯದಲ್ಲಿ ಅಖಂಡ ಪರವಸ್ತುವಿನ ಜ್ಞಾನ ಸಾಧನೆಗೆ ಬೇಕಾಗುವ ಸಪ್ತಭೂಮಿಕೆಗಳ ವಿಚಾರವನ್ನು ಹೇಳಲಾಗಿದೆ. ಸುಖೇಚ್ಛೆ; ಆತ್ಮವಿಚಾರ, ನಿಸ್ಸಂಗ, ವಾಸವಾಕ್ಷಯ, ಆನಂದಿನಿ; ತುರಾವಸ್ಥೆ, ತುರ್ಯಾತೀತ ಇವೇ ಆ ಏಳು ಭೂಮಿಕೆಗಳಾಗಿವೆ. ಈ ಏಳು ಭೂಮಿಕೆಗಳ ಸಾಧನೆಯಿಂದ ಸಾಧಕನಿಗೆ ನಿರ್ವಿಕಲ್ಪ ಸಮಾಧಿಯು ಸಾಧಿತವಾಗುವದು.

"ಕನಸಿನಂದದಿ ತೋರ್ಪ ಜಗವಿದು ।
ಮನದ ಭ್ರಮೆಯಿಂದರಿದು ಕೇಳಾ ।
ಮನವನದ್ವಯವಾದ ಬ್ರಹ್ಮದೊಳೈಕ್ಯವನು ಮಾಡೆ ॥
ನೆನಹಡಗಿ ಬಾಹ್ಯವನು ಮರೆದಾ ।
ತ್ಮನಲಿ ರಮಿಸುತ್ತಿರ್ಪವಸ್ಥೆಯ ।
ನನಘ ತಿಳಿಯೈ ನಿರ್ವಿಕಲ್ಪ ಸಮಾಧಿಯೆಂದದನು"

(ಅ-೬-ಪ-೬೧)

೭. ಈ ಅಧ್ಯಾಯದಲ್ಲಿ ಪರಮಾತ್ಮ ಪದದ ವಿಚಾರವು ನಿರೂಪಿಸಲಾಗಿದೆ. ಮೂರು ತನು, ಮೂರಾವಸ್ಥೆ, ಮೂರುಗುಗ, ಮೂರುಹಮ್ಮು, ಮೂರುಕಾಲ, ಮೂರು ಕರಣ, ಮೂರುಲೋಕ, ಮೂರುಶಕ್ತಿ, ಮೂರುಗತಿ, ಇವೆಲ್ಲವುಗಳನ್ನು ಮೀರಿ ದುದೇ ಆ ಪರಮಾತ್ಮ ಪದವಾಗಿದೆ.

"ಮೂರುತನು ಮೂರಾದವಸ್ಥೆಯ
ಮೂರುಗುಣಗಳ ಮೂರು ಹಮ್ಮಿನ
ಮೂರೆನಿಪ ತ್ರಿಪುಟಿಯ ತ್ರಿವರ್ಗವೂ ತ್ರಿಕರಣಂಗಳನು

ಮೂರು ಕಾಲವ ಮೂರು ಲೋಕವ
ಮೂರು ಶಕ್ತಿಯ ಮೂರುಗತಿಗಳ
ಮೀರಿ ತೋರುವ ತುರ‍್ಯವೇ ಪರಮಾತ್ಮಪದವೆಂದ"

(ಅ-೭-ಪ-೨೨)

೮. ಮಾಯೆಯಿಂದಾಗಿ ಬ್ರಹ್ಮವು ಜಗತ್ತಾಗಿದ್ದಂತೆ ಕಾಣುವುದು; ಮಾಯೆ ಮಿಥ್ಯವಾದಲ್ಲಿ ಜಗತ್ತು ಸತ್ಯವಾಗುತ್ತಿದೆ. ಮಾಯೆಯಿಂದಾದ ಜಗತ್ತಿನಲ್ಲಿ ಬ್ರಹ್ಮನು ವ್ಯಾಪಿಸಿಕೊಂಡಿರುವುದೆಂದಾದರೆ; ಆ ಮಾಯೆ ಬ್ರಹ್ಮನೊಡನೆ ಇರುವದೆಂದು ಅರ್ಥವಲ್ಲ. ಮಾಯೆ ಚರ್ಮ ಚಕ್ಷುವಿಗೆ ಕಾಣುವಂಥದ್ದು; ಬ್ರಹ್ಮವು ಜ್ಞಾನ ಚಕ್ಷುವಿಗೆ ಕಾಣುವಂಥದ್ದು-ಹೀಗೆ ಮಾಯೆಯನ್ನು ಪರಿಪರಿಸಿಕೊಳ್ಳಬಹುದಾದ ಹಲವಾರು ವಿಚಾರಗಳನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ. ಮಾಯೆಯ ಬಹುರೂಪವನ್ನು ಕವಿ ಹೀಗೆ ಹೇಳುತ್ತಾನೆ.

"ಕೆಲರು ಮೂಲ ಪ್ರಕೃತಿಯೆಂಬರು |
ಕೆಲರು ವೈಷ್ಣವ ಮಾಯೆಯೆಂಬರು
ಕೆಲರು ಪೇಳ್ವರು ಯೋಗನಿದ್ರಾರೂಪಿಣಿಯದೆಂದು ||
ಕೆಲಬರೀಶ್ವರ ಶಕ್ತಿಯೆಂಬರು |
ಕೆಲರು ಕಾರಣಳೆಂದು ಮಾಯೆಯ |
ಹಲವು ಪರಿಯಹ ಹೋಲಿಕೆಯೊಳದ ಹೇಳುತಿಪರೆಂದ"

(ಅ-೮-ಪ-೩೫)

೯. ಈ ಅಧ್ಯಾಯದಲ್ಲಿ ವ್ಯಾವಹಾರಿಕ, ಪ್ರಾತಿಭಾಸಿಕ, ಪಾರಮಾರ್ಥಿಕ ಎಂಬ ಜೀವತ್ರಯಗಳ ವಿಚಾರವನ್ನು ಹೇಳಲಾಗಿದೆ. ಜೀವನು ಮಾಯೆಯ ನಿದ್ರೆಯಲ್ಲಿ ಮೈಮರೆದು ಜಗತ್ತಿನ ಕನಸು ಕಾಣುತ್ತ, ಅದುವೇ ಸತ್ಯವೆಂದು ತಿಳಿದು, ಮೈಮರೆತು ನಿಜವಸ್ತುವಿನಿಂದ ದೂರಾಗಿ ತೊಳಲಾಟಕ್ಕೆ ಸಿಕ್ಕುತ್ತಾನೆ. ಈ ತೊಳಲಾಟ ಜೀವಕ್ಕೆ ಹೊರತು ಆತ್ಮರಲ್ಲ. ಅವನು ಎಲ್ಲವಕ್ಕೂ ಕೇವಲ ಸಾಕ್ಷಿಭೂತ ಮಾತ್ರ. ಅವಿದ್ಯೆಯನ್ನು ನೀಗಿದಾಗ ಜೀವನಿಗೆ ಆ ಪರಮವಸ್ತುವಿನ ದರ್ಶನವಾಗುತ್ತಿದೆ. ಆಗ ಏಕಜೀವ, ಏಕದೇವ ಎಲ್ಲವೂ ಏಕ; ಐಕ್ಯ.

"ಜೀವನೊಬ್ಬನ ವಿದ್ಯೆಯಿಂದಲಿ
ಭಾವಿಸಲು ಬ್ರಹ್ಮಜೀವರಾಗಿಯೆ
ತೀವಿ ತೋರುತ್ತಿಪರು ಸ್ವಪ್ನ ಪದಾರ್ಥದಂದದಲಿ ||
ಈ ವಿಧದ ವಿದ್ಯೆಯನು ಗುರುವಿನ
ಪಾವನಾಂಘ್ರಿಯ ಪಿಡಿದು ಕೆಡಿಸಲು

ಜೀವತನವಳಿದಾಗ ಜಗವೇಕತ್ವವಾಗಹುದು"

(ಅ-೯-ಪ-೪೫)

೧೦. ಈ ಅಧ್ಯಾಯದಲ್ಲಿ ಜೀವನ್ಮುಕ್ತನ ಲಕ್ಷಣಗಳನ್ನು ವಿವರಿಸಲಾಗಿದೆ. ಜೀವನ್ಮುಕ್ತನು ನಿರ್ಲಿಪ್ತನು; ಸಮತಾಭಾವಿಯು. ಅವನು ಇದ್ದದ್ದನ್ನು ಬಿಡುವದಿಲ್ಲ; ಇಲ್ಲದ್ದನ್ನು ಬಯಸುವದಿಲ್ಲ. ಹುಡುಗರೊಂದಿಗೆ ಹುಡುಗನವನು; ಹಿರಿಯರೊಂದಿಗೆ ಹಿರಿಯನು. ದೇಹದ ಮೇಲೆ ಅವನಿಗಾವ ಅಭಿಮಾನವೂ ಇಲ್ಲ. ಆದುದರಿಂದ ದೇಹಕ್ಕೆ ಬರುವ ಜಾಡ್ಯಗಳ ಬಗೆಗೆ ಅವನು ಚಿಂತಿಸಲಾರನು. ಈ ದೇಹವು ನಾಶವಾದ ಮೇಲೆ ಅವನಿಗೆ ಬೇರೆ ಮತ್ತೆ ದೇಹವಿಲ್ಲ.

"ಹಾಲಿನಲಿ ಹಾರದಲಿ ಶಿಲೆಯಲಿ
ಹೂವಿನಲಿ ಹೆಂಟೆಯಲಿ ಮಣಿಯಲಿ
ಭಾವೆಯಲಿ, ತೃಣದಲಿ ಶತ್ರುವಿನಲ್ಲಿ ಮಿತ್ರರಲಿ
ಭಾವ ಭೇದವ ಬಿಟ್ಟು, ಸಮತೆಯು
ಸಾವಧಾನದಿ ವಿಹರಿಸುತ್ತಿಹ
ಪಾವನಾಶ್ವಗಳಲಿ ಜೀವನ್ಮುಕ್ತ ಕೇಳೆಂದ"

(ಅ-೧೦-ಪ-೮೭)

೧೧. ಕೊನೆಯ ಈ ಅಧ್ಯಾಯದಲ್ಲಿ ತಾನೇ ಬ್ರಹ್ಮನಾದವನ ನಿರ್ಗುಣ ಆರಾಧನೆಯನ್ನು ಹೇಳಲಾಗಿದೆ. "ತಾನು ಅವಸ್ಥಾತ್ರಯ ಸಾಕ್ಷಿಯೆಂಬರಿವೇ ಸಿಂಹಾಸನ, ಬುದ್ಧಿಯಲ್ಲಿ ಸಚ್ಚಿದಾನಂದ ಸ್ವರೂಪವು ಹೊಳೆಯುವದೇ ಆವಾಹನೆ, ಬ್ರಹ್ಮವನ್ನು ಅನರ್ಘ್ಯವೆಂದು ತಿಳಿಯುವದೇ ಅರ್ಘ್ಯ, ಬ್ರಹ್ಮವು ಆನಂದದ ಸುಮುದ್ರವೆಂಬುದೇ ಪಾದ್ಯ, ತಾಪತ್ರಯ ದೂರವೆಂಬುದೇ ಸ್ನಾನ, ಸರ್ವವ್ಯಾಪಿಯೆಂಬುದೇ ವಸ್ತ್ರ, ಸ್ವಯಂ ಜ್ಯೋತಿಯೆಂಬುದೇ ಆಭರಣ ಹೀಗೆಲ್ಲ ಆಗುವದರಿಂದ ತಾನು ಬ್ರಹ್ಮವೆಂಬ ಅನುಭವವು ಚೆನ್ನಾಗಿ ಅಳವಡುವದು ಎನ್ನುತ್ತಾನೆ ಕವಿ ಇಲ್ಲಿ

"ಈ ಪರಿಯುಪಚಾರ ಕಲ್ಪನೆ।
ಯಾ ಪರಬ್ರಹ್ಮದಲಿ ಸ್ವರ್ಣದಿ।
ದೀಪಿಸುತ್ತಿಹ ದೇವತಾ ಪ್ರತಿಮಾಕೃತಿ ವೋಲು॥
ದೀಪ ಧೂಪಗಳೆಂಬ ನೆಪದಲಿ
ವ್ಯಾಪಿಸಿದಮುನನವನು ನಿನಗೆ ನಿ
ರೂಪಿಸಿದೆನದರಿಂದ ದೃಢತರವಹುದು ನಿಜ ಬೋಧೆ"

(ಅ-೧೧-ಪ-೨೦)

ನಿರ್ಣಾಯಕ ವಿಚಾರ :

ಕವಿಯು "ಕೇಳು ಮಗನೆ" ಎಂಬ ಸಂಬೋಧನೆಯಿಂದ ಅಲ್ಲಲ್ಲಿ ಅದ್ವೈತ ವಿಷಯವು ಮನದಟ್ಟಾಗಲೆಂದು ಒತ್ತಿ ಒತ್ತಿ ಹೇಳಿರುವದು ಸುವಿದಿತವಾಗುತ್ತದೆ. ತಾತ್ವಿಕ ವಿಷಯವನ್ನು ಷಟ್ಪದಿಯಲ್ಲಿ ಹಿಡಿದಿರಿಸಿರುವವದರಿಂದ ಸರಳವಾಗಿದೆ. ಸುಲಭವಾಗಿ ತಿಳಿಯುವಂತಾಗಿದೆ. ಆದರೂ ಅಲ್ಲಿನ ಕೆಲವು ಪಾರಿಭಾಷಿಕ ಪದಗಳನ್ನು ಅರ್ಥೈಸಿಕೊಳ್ಳಲು "ಅದ್ವೈತ ದರ್ಶನ"ದ ಹಿನ್ನೆಲೆ ಅವಶ್ಯಕವಾಗಿ ಕಾಣುತ್ತದೆ. ವಿಷಯವನ್ನು ಓದುಗರಿಗೆ ಮನದಟ್ಟು ಮಾಡಿಕೊಡಬೇಕೆಂಬುದು ಕವಿಯ ಬಲವಾದ ಅಭೀಪ್ಸೆಯಾಗಿದ. ಆದುದರಿಂದ ಒಂದೊಂದು ವಿಚಾರವನ್ನು ಹೇಳುವಾಗ ಹಲವಾರು ಸಾದೃಶ್ಯಗಳನ್ನು, ಹೋಲಿಕೆಗಳನ್ನು ನೀಡಿ ವಿಷಯವನ್ನು ತಿಳಿಸುತ್ತಾನೆ. ಕೃತಿಯುದ್ದಕ್ಕೂ ಹಲವಾರು ಅಂತಹ ಹೋಲಿಕೆಗಳನ್ನು ನೋಡಬಹುದಾಗಿದೆ. ಉದಾಹರಣೆಗಾಗಿ ಕೆಲವನ್ನಿಲ್ಲಿ ನೋಡಬಹುದು.

೧. "ಹಾಲನೆರೆದರೆ ಕುಡಿಯುವೊಲ್ಲದ ಬಾಲಕನ ತೆರನಂತೆ"

(ಅ-೧-ಪ-೭)

೨. "ಕೊರಳು ಸುತ್ತಿದ ಹಾವು ಕಚ್ಚದೆ ಮರಳುವುದೆ?"

(ಅ-೧-ಪ-೩೯)

೩. "ಎತ್ತು ತೆಂಗಿನಕಾಯಿ ಬಲ್ಲದೆ ? ಕತ್ತೆಯರಿವುದೆ ಕತ್ತುರಿಯು?"

(ಅ-೧-ಪ-೪೧)

೪. "ಕತ್ತೆಯನು ಹಿಡಿತಂದು ಮುದ್ರೆಯನೊತ್ತಲಾ ಕತ್ತೆ, ಕತ್ತೆಯಲ್ಲದೆ ಬಸವನಪ್ಪುದೆ?"

(ಅ-೧-ಪ-೪೩)

ಈ ಕೃತಿಯಲ್ಲಿ ಕವಿಯು ಉಪನಿಷತ್ತಿನ ಅರ್ಥವನ್ನು ಕನ್ನಡಿಸಿದಂತೆ ತಿಳಿಸಿರುವನು.

"ಮುನ್ನಲುಪನಿಷದರ್ಥವನು ಸಂ
ಪನ್ನ ಮತಿಗಳು ಪೇಳ್ದುದನೆ ನಾ
ಕನ್ನಡಿಸಿದೆನು ಕೊರತೆಯಿದ್ದೊಡೆ ಮನ್ನಿಸುವದೊಲಿದು॥

(ಅ-೧-ಪ-೪)

ಈ ಕೃತಿಯನ್ನು ಕವಿಯು ಅಗಸ್ತ್ಯನು ಶುಕಮುನಿಗಳಿಗೆ ಬೋಧಿಸಿದಂತೆ ಹೇಳಿರುವನು. ಆ ಹೇಳಿಕೆಯ ಸಾರವನ್ನು ತಾನು ಮುಮುಕ್ಷುಗಳಿಗೆ ಸುಲಭವಾಗಿ ತಿಳಿಸುವನೆಂದೊರೆದಿರವನು

"ಅಖಿಲ ವೇದಾಂತಾರ್ಥವನು ನಾ।
ಯುಕುತಿಯಲಿ ಸಂಗ್ರಹಿಸಿ ಪೇಳುವೆ।
ಸಕಲರಿಗೆ ತಿಳಿಯುವಂತೆ ಸುಲಭೋಪಾಯದಿಂದೊಲಿದು॥
ಶುಕ ಮುನೀಶ್ವರನಂತೆ ನೀವಾ
ಸಕತಿಯಲಿ ನೆರೆ ತಿಳಿದು ನಿಜವಹ
ಮುಕುತಿ ಸುಧಾ ಸಾಮ್ರಾಜ್ಯ ಪದದಲಿ ನಿಂದು ಸುಖಿಯಾಗಿ"

(ಅ-೧-ಪ-೯)

ಈ ಕೃತಿಯು ತಾನು ಯಾರಿಗಾಗಿ ರಚಿಸುತ್ತಿರುವನೆಂಬುದರ ಬಗೆಗೆ ಕವಿ ಹೀಗೆ ತಿಳಿಸುತ್ತಾನೆ.

"ಸತ್ಯ ವಚನವ ನುಡಿವರಿಗೆ ಸವಿ-
ರಕ್ತರಿಗೆ ಸುಖ-ದುಃಖದಲಿ ಸಮ
ಚಿತ್ತರಿಗೆ ಸಕಲರಲಿ ಕರುಣಾವೃತ್ತಿಯುಳ್ಳವರಿಗೆ
ಉತ್ತಮ ಶ್ಲೋಕರಿಗೆ ಸದ್ಗುರು
ಭಕ್ತರಿಗೆ ಪರತತ್ವ ಚಿಂತಾ
ಸಕ್ತರಿಗೆ ಬೋಧಿಸುವದೊಲಿದೀ ಅನುಭವಾಮೃತವ"

(ಅ-೨-ಪ-೩)

ಈ ಕವಿಯು ಮೇಲೆ ಬಸವಣ್ಣನವರ ಕೆಲವು ವಿಚಾರಗಳ ಪ್ರಭಾವವನ್ನು ಗುರುತಿಸ ಬಹುದಾಗಿದೆ. ಉದಾಹರಣೆಗಾಗಿ ಅಂತಹ ಒಂದೆರಡು ಪದ್ಯಗಳನ್ನು ಇಲ್ಲಿ ಕೊಡಲಾಗಿವೆ.

೧. "ಹರಕೆಗೆಂದು ತಂದ ಕುರಿ ಮಾವಿನ ತಳಿರು ಮೆಲಿವಂತೆ...."
ಎಂಬ ಬಸವಣ್ಣನವರ ವಚನದ ಪ್ರತಿಬಿಂಬದಂತಿದೆ ಈ ಪದ್ಯ।

"ಹರಕೆಗಂದೇ ತಂದ ಕುರಿ ತಾ।
ನರಿಯದಕಟಾ! ಕೊಲುವರೆಂಬುದ
ಹರಿದು ಹಸಿವಿಗೆ ತಳಿರ ಮೆಲುವದು ತೋರಣಕೆ ತಂದ॥
ನರಕುರಿಗಳದರಂತೆ ತದ್ಗೃಹ
ಮರಣವನು ತಾವರಿಯದೇ ಸಂ
ಸರಣ ದುಃಖದಿ ಮಗ್ನರಾಗಿಯೆ ಮೃತ್ಯುವಶರಹರು"

(ಅ-೨-ಪ-೨೨)

೨. "ಹುತ್ತವ ಬಡಿದೊಡೆ ಹಾವು ಸಾಯಬಲ್ಲುವೆ ಅಯ್ಯ" ? ಎಂಬ ವಚನದ ಅನುಕರಣೆ ಯಂತಿದೆ ಈ ಪದ್ಯ.

"ಹುತ್ತ ಬಡಿದರೆ ಹಾವು ಸಾವುದೆ?
ವ್ಯರ್ಥವಾದುಪವಾಸ ಮೊದಲಾ।
ಗುತ್ತಲಿಹ ವ್ರತಗಳಲಿ ದೇಹವ ದಂಡಿಸಲು ಬರಿದೆ॥
ಮುಕ್ತಿ ದೊರಕುವದೆ? ವಿವೇಕ ವಿ
ರಕ್ತಿ ಶಮ ದಮ ಗುರುಪದಾಂಬುಜ
ಭಕ್ತಿಯಿಲ್ಲದ ಕಾಮ್ಯ ಕರ್ಮಾಸಕ್ತರಿಗೆಂದ"

(ಅ-೧-ಪ-೫೦)

ಕೃತಿಯು ಪ್ರಮುಖವಾಗಿ ತತ್ವಬೋಧನೆಗೆ ಮೀಸಲಾಗಿದ್ದರೂ, ಅಲ್ಲಲ್ಲಿ ಕಾವ್ಯದ ಮಿಂಚು ಮಿಂಚಿದೆ ಇಲ್ಲಿ.

ವೊದಲೆ ಮರ್ಕಟ ಮೇಲೆ ಮದ್ಯದ
ಮದವೆಡೆಯೆ ಹಿಡಿದಿರಲು ವೃಶ್ಚಿಕ
ತುದಿಯ ಕಾಲನು ಕಚ್ಚಿದರೆ ಕುಣಿದಾಡುವಂದದಲಿ॥
ಅಧಿಕ ಧನ ಸಂಪತ್ತು ಯವ್ವನ
ವೊದಗಿರಲು ವನಿತಾಧಿವಿಷಯಾ
ಸ್ಪದನೆನಿಸುತೊಡಲರಿಯದವಗಧ್ಯಾತ್ಮವೇಕೆಂದ"

(ಅ-೧-ಪ-೩೬)

ಎಂಬಂಥ ಪದ್ಯಗಳಲ್ಲಿ ಕಾವ್ಯದ ಮಿಂಚು ಹೊಳೆದು ಕಾಣುತ್ತದೆ.

ತತ್ವಬೋಧನೆಯ ಸಂದರ್ಭದಲ್ಲಿ ಹಲವಾರು ಸಾದೃಶ್ಯಕತೆಗಳ ಉಲ್ಲೇಖ ಬಂದಿರುವುದುಂಟು. ಅವುಗಳ ಹಿನ್ನೆಲೆ ಅರಿತ ಓದುಗರಿಗೆ ಆ ಸಂದರ್ಭವು ಸರಿಯಾಗಿ ಅರ್ಥವಾಗುತ್ತಿದೆ. ಈ ಕೃತಿಯಲ್ಲಿ ಒಟ್ಟು ೮೦೪ ಭಾಮಿನಿಯ ಷಟ್ಪದಿಯ ಪದ್ಯಗಳಿವೆ. ಪ್ರತಿಯೊಂದು ಅಧ್ಯಾಯವು "ಶ್ರೀಮತ್ಪರಮಹಂಸ, ಪರಿವ್ರಾಜಕಾಚಾರ್ಯ ಸಹಜಾನಂದ ಗುರುವರ್ಯ ಪಾದಕಮಲ ಭೃಂಗಾಯಮಾನ ಸಪವಾಸಿ ಮಹಲಿಂಗರಂಗ ವಿರಚಿತವಾದ ಅನುಭವಾಮೃತವೆಂಬ ಗ್ರಂಥದಲಿ........ಅಧ್ಯಾಯವು ಮುಗಿದುದು" ಎಂಬ ಒಕ್ಕಣಿಕೆ ಬರುತ್ತಿದೆ. ಇದು ಕವಿಯ ಪ್ರಾರ್ಥನೆಯಾಗಿದೆ

"ಅನುಭವಾಮೃತವೆಂಬ ಗ್ರಂಥವ।
ಮನವೊಲಿದು ಮಹಲಿಂಗರಂಗನು।
ವಿನುತ ಶ್ರೀಗಿರಿ ಮಲ್ಲಿಕಾರ್ಜುನನಂಕಿತವ ಮಾಡಿ
ಘನವೆನಿಪ ವಾಕ್ಪುಷ್ಪದಿಂದ
ರ್ಚನೆಯದಾ ಚಂದ್ರಾರ್ಕವಾಗಿರೆ
ಅನುಭವಿಗಳಹುದೆನಲು ರಚಿಸಿದನೇಕ ಚಿತ್ರದಲಿ"

(ಅ-೧೧-ಪ-೨೭)

ಕನ್ನಡ ನುಡಿಯ ಪ್ರೇಮವನ್ನು "ಸುಲಿದ ಬಾಳೆಯ ಹಣ್ಣಿನಂದದಿ" ಪದ್ಯದಿಂದ ಸುವ್ಯಕ್ತಗೊಳಿಸಿದ ಈ ಕವಿಯು ಕನ್ನಡ ಭಾಷೆಗೆ ಜನತೆ ಒಲಿಯುವಂತೆ ಮಾಡಿರುವನು. ಅವನ ಪದ್ಯವು ಇಲ್ಲಿಯವರೆಗೂ ಜನರ ನಾಲಿಗೆಯ ಮೇಲೆ ನಲಿದಾಡುತ್ತಿರುವದು ಸತ್ಯಸಂಗತಿಯಾಗಿದೆ. ಈ ಕೃತಿಯು ಕಾವ್ಯವೇತ್ತರಿಗೆ ಪ್ರಿಯವಾಗುವಂತೆ, ತತ್ವವೇತ್ತರಿಗೆ ಅತ್ಯಂತ ಪ್ರಿಯವೆನಿಸುತ್ತಿದೆ.

ಚಿದಾನಂದ ಅವಧೂತರ "ಜ್ಞಾನಸಿಂಧು"

(ಒಂದು ಅಧ್ಯಯನ)

—ಹೀ. ಚಿ. ಶಾಂತವೀರಯ್ಯ ಎಂ.ಎ.ಬಿ.ಇಡಿ

ಚಿದಾನಂದ ಚಿತ್+ಆನಂದ ಶಬ್ದಗಳಿಂದ ಆದುದು ಜ್ಞಾನಾನಂದ, ನಿತ್ಯಾನಂದ, ಸತ್ಯಾನಂದರಂತೆ. ಅರ್ಥ ಪರಮಾತ್ಮ. ಕನ್ನಡ ಸಾಹಿತ್ಯದಲ್ಲಿ ಹಲವರು ಚಿದಾನಂದರಿದ್ದಾರೆ. ಚಿದಾನಂದ ೧೨೩೪ ಹಲವಾರು ಶಾಸನಗಳನ್ನು ರಚಿಸಿದ್ದಾನೆ. ಚಿದಾನಂದ ೧೬೭೫ ಹಾಡುಗಳನ್ನು ಬರೆದಿದ್ದಾನೆ. 'ಕೋರಡೆ' ಎಂಬ ಹೆಸರೂ ಸೇರಿಬರುತ್ತದೆ. ಚಿದಾನಂದ ೧೬೮೦ 'ಮುನಿವಂಶಾಭ್ಯುದಯ' ರಚಿಸಿದ್ದಾನೆ. ಚಿದಾನಂದ ೧೭೨೫ 'ಚಿದಖಂಡಾನುಭವಸಾರ' ಎಂಬ ಗ್ರಂಥವನ್ನು ರಚಿಸಿದ್ದಾನೆ.

'ಅವಧೂತ' ಶಬ್ದ ನಡೆದು ಬಂದ ರೀತಿಯನ್ನು ನೋಡಿ, "ಅವಧೂತ (ಗು). ೧. ತಳಲ್ಪಟ್ಟ: ಆ ಜಯುವರ್ಮನುಂ ಅವಮಾನಪಮಾನಾವಧೂತನಾಗಿ ಪೋಗಿ (ಆದಿ ಪು. ೨–೩೮೮). (ನಾ). ೨. ಎಲ್ಲ ಬಗೆಯ ಅಭಿಮಾನವನ್ನು ತಳ್ಳಿಹಾಕಿದವನು; ವಿರಕ್ತರಲ್ಲಿ ಒಂದು ವಿಶೇಷ ಪ್ರಭೇದಃ ಭವಗೇಡಿಯಾಗಿ ಬಯಸದೆ ಬಂದ ಭಿಕ್ಷಮಂ ಸವಿದು ಚರಿಪವಧೂತ (ಭಿಕ್ಷಾಚ. ೩–೧೭); ದಿನದಿನಕೆ ದಾಯಾದಮತ್ಸರಂ ಪೆರ್ಚುತಿರೆ ಮನೆವಾಳ್ತೆಯೊಳ್ ಒಸಗೆಯುಂ ಕುಡದೆ ಗುರುತಗುಳ್ದನುಜನಂ ಪೊಱಮಡಿಸೆ ಕಾಶಿಯೊಳ್ ಪೋಗಿರ್ಪನಾತನವಧೂತನಾಗಿ (ಜೈಮಿಭಾ. ೫–೨೭). ೩. ವಿರಕ್ತರ ಹೆಸರಿನ ಕೊನೆಯಲ್ಲಿ ಸೇರುವ ಮಾತು. ಉದಾ: ಚಿದಾನಂದಾವಧೂತ. [ಸಂ.][೧] ಹೀಗೆ ನಡೆದುಬಂದಿದೆ. ಗುರುಬಸವ ೧೪೩೦ 'ಅವಧೂತಗೀತೆ' ಎಂಬ ಗ್ರಂಥವನ್ನು ರಚಿಸಿದ್ದಾನೆ. ಅವಧೂತ ಶಿವಯೋಗಿ ೧೭೫೦ 'ಕೈವಲ್ಯಾನ್ವಯ ಸಾರವನ್ನು ರಚಿಸಿದ್ದಾನೆ. ಧೋಂಡೋ ಗೋವಿಂದ ಮಹಾಜನ ೧೮೮೮ ಅವಧೂತಗೀತಾ (ಮರಾಠಿ ಅನುವಾದ) ರಚಿಸಿದ್ದಾರೆ.

'ಜ್ಞಾನ'ವನ್ನು ಹೊಂದಿರುವ ಅನೇಕ ಗ್ರಂಥಗಳ ಹೆಸರುಗಳಿವೆ. ಜ್ಞಾನ ಚಂದ್ರಾಭ್ಯುದಯ–ಕಲ್ಯಾಣ ಕೀರ್ತಿ ೧೪೩೯, ಜ್ಞಾನ ಭಾಸ್ಕರ ಚರಿತೆ–ನೇಮಣ್ಣ ೧೫೫೯, ಜ್ಞಾನ ಚಂದ್ರ ಚರಿತೆ–ಪಾಯಣವರ್ಣಿ ೧೬೫೯, ಜ್ಞಾನಸಾರ—? ೧೫೦೦ ಇವುಗಳನ್ನು ಹೆಸರಿಸಬಹುದು.

"ಶರಣ ರಕ್ಷಕ ಸಕಲಭೀಷ್ಟವನಿರುತವೀಲಾಯೋದ್ವಾಪುರವನು ಪೊರೆಯುವ ಚಿದಾನಂದಗುರು ಮಾಳ್ಕೆಮಗೆ ಮಂಗಳವಾ"[೨] ಎಂದು ದೇವೀಮಹಾತ್ಮೆಯಲ್ಲಿ ಚಿದಾನಂದ ಅವಧೂತ ಪ್ರಾರ್ಥಿಸಿದ್ದಾನೆ. ಇದರಿಂದ ಚಿದಾನಂದ ಗುರುವಿನ ಶಿಷ್ಯನಾಗಿದ್ದಂತೆ ತಿಳಿದು

ಬರುತ್ತದೆ ಅಲ್ಲದೆ "ತುಂಗಭದ್ರಾ ತೀರದಲ್ಲಿ ಮೆರೆವಾ ಯೋಗ್ಯಸ್ಥಾನವಹ ಅಯೋಧ್ಯಾದಿ ಯೋಗಿಗಳದಾಚಾರ ರಾಜಯೋಗಕೊಡೆಯನು ವರ ಚಿದಾನಂದಾಖ್ಯ ಗುರುವರನು ಆತನ ನಿಜ ಶಿಷ್ಯನಾರೆನೆ ಪಾತಕಗಳು ಪವಿತ್ರ ಸರ್ವಧೂತ ಚಿದಾನಂದಾವಧೂತನು[೩] ಎಂದು ಹೇಳಿಕೊಂಡಿರುವುದರಿಂದ ತುಂಗಾನದಿ ತೀರದಲ್ಲಿರುವ 'ಅಯೋಧ್ಯೆ' ಅವನ ಊರಾಗಿರಬೇಕು. ಗುರುವರ ಚಿದಾನಂದ ಆದರೆ ತುಂಗಾನದಿಯ ತೀರದಲ್ಲಿ 'ಅಯೋಧ್ಯೆ' ಎಂಬ ಹೆಸರಿನ ಯಾವ ಊರು ಇಲ್ಲ. ಬಹುಶಃ ಅದು 'ಶೃಂಗೇರಿ' ಆಗಿರಬಹುದು. ಇದು ಕೇವಲ ಊಹೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಶೃಂಗೇರಿ ಮಠದ ಗುರು ಪರಂಪರೆಯಲ್ಲಿ 'ಸಚ್ಚಿದಾನಂನ ಭಾರತಿ' ಎಂಬ ಹೆಸರಿನ ಗುರುಗಳುಂಟು. 'ಚಿದಾನಂದ' ಎಂಬ ಹೆಸರಿನ ಯಾವ ಗುರುವೂ ಇಲ್ಲ. 'ಚಿದಾನಂದ' ತುಂಗಾ ತೀರದಲ್ಲಿನ ಯಾವುದೋ ಊರಿನವನಾಗಿರಬೇಕು. ಇತ್ತೀಚಿನ ಸಂಶೋಧನೆ ಪ್ರಕಾರ ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನ ಒಂದು ಹಳ್ಳಿ, ಅಲ್ಲಿಯವನು.

ಆದವಾನಿ ತಾಲ್ಲೂಕಿನ ದೊಡ್ಡ ಹರಿವಾಣ ಗ್ರಾಮದ ಕರಣಿಕ ವೃತ್ತಿಯ ಲಕ್ಷ್ಮೀಪತಿ ಮತ್ತು ಅಣ್ಣಮ್ಮ ದಂಪತಿಗಳ ಮೂರನೇ ಮಗನೇ 'ಜಂಕಪ್ಪ'. ಈತ ಎಳಮೆ ಯಿಂದಲೇ ಏಕಾಂತ, ಜಪ ಮತ್ತು ತಪನಿಷ್ಠನಾಗಿರುತ್ತಿದ್ದ. ಇದನ್ನು ತಿಳಿದ ಹಿರಿಯರು ಅಯೋಧ್ಯೆಯಲ್ಲಿ ಒಂದು ಆಶ್ರಮ ಕಟ್ಟಿಕೊಟ್ಟು ಅಲ್ಲಿರಿಸಿದರು, ಜಂಕಪ್ಪ ಚಿದಾನಂದ ಗುರುವರ್ಯರ ಕರುಣೆಯಿಂದ 'ಚಿದಾನಂದ ಅವಧೂತ'ನಾಗಿ ಕಾವ್ಯನಾಮದಿಂದಲೇ ಪ್ರಸಿದ್ಧನಾದನು.

ಚಿದಾನಂದಾವಧೂತನ ಕಾಲದ ವಿಚಾರದಲ್ಲಿಯೂ ಖಚಿತವಾದ ಅಭಿಪ್ರಾಯ ಎಲ್ಲಿಯೂ ಕಂಡುಬರುವುದಿಲ್ಲ. ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿದ್ದಿರ ಬಹುದು" ಸುಲಿದ ಬಾಳೆಯ ಹಣ್ಣಿನಂದದಿ ಕಳೆದ ಸಿಗುರಿನ ಕಬ್ಬಿನಂದದಿ ಇಳಿಸಿದುಷ್ಣದ ಹಾಲಿನಂದದಿ ಸುಲಭವಾಗಿರ್ಪ ಲಲಿತರ ಕನ್ನಡದ ನುಡಿ[೪] ಎಂದು ಸಾರಿದ ಮಹಲಿಂಗರಂಗನ ಪ್ರಭಾವ ಛಾಯೆ ಚಿದಾನಂದ ಅವಧೂತನ ಮೇಲಿದೆ. ಈ ಕಾರಣದಿಂದ ಅವಧೂತನ ಕಾಲವನ್ನು '೧೭೫೦' ಎಂದು ವಿದ್ವಾಂಸರು ತೀರ್ಮಾನಿಸಿದ್ದಾರೆ.

ಚಿದಾನಂದಾವಧೂತರು 'ಜ್ಞಾನಸಿಂಧು, ದೇವಿಮಹಾತ್ಮೆ, ಕಾಮವಿಡಂಬನ, ಬಗಳಾಂಬ ಸ್ತೋತ್ರ ಚಿದಾನಂದರ ವಚನ, ಪಂಚೀಕರಣ, ತತ್ವಚಿಂತಾಮಣಿ, ನವಚಕ್ರ ಕುಲರೇಖಾ ಶಿಕ್ಷಣ' ಮೊದಲಾದ ಕೃತಿಗಳನ್ನು ರಚಿಸಿದ್ದಾನೆ.

ಇವರ ಕೃತಿಗಳಲ್ಲಿ 'ಜ್ಞಾನಸಿಂಧು' ಮತ್ತು 'ದೇವಿಮಹಾತ್ಮೆ' ಪ್ರಧಾನವಾದವುಗಳು. 'ಕಾಮವಿಡಂಬನ' ೧೧೦ ಪದ್ಯಗಳಿರುವ ಚಿಕ್ಕ ಗ್ರಂಥ 'ಹೋಳೀ ಪದಗಳು' ಎಂಬ ಹೆಸರೂ ಉಂಟು. ಕಾಮದೇವನ ಪ್ರಭಾವವನ್ನು ಇಲ್ಲಿ ವರ್ಣಿಸಲಾಗಿದೆ. ಬಗಳಾಂಬಾ ಸ್ತುತಿಯ ರೂಪವೇ 'ಬಗಳಾಂಬಾ ಸ್ತೋತ್ರ'. ೧೦೧ ಪದ್ಯಗಳಿವೆ. ಸಿದ್ಧಪರ್ವತವಾಸಿ ಯಾದ ಬಗಳಾಂಬೆಯ ಸ್ತುತಿಯಿದೆ. 'ಚಿದಾನಂದರ ವಚನ' 'ವಚನ' ಎಂಬ ಹೆಸರಿದ್ದರೂ

ಹಾಡುಗಳು ಕೀರ್ತನೆಯನ್ನು ಸ್ಮರಣೆಗೆ ತರುತ್ತವೆ. 'ಪಂಚೀಕರಣ' ೧೫ ವಚನಗಳಿಂದ ಕೂಡಿದ ಚಿಕ್ಕ ಗ್ರಂಥ 'ಚಿದಾನಂದ ಸದ್ಗುರು ಪ್ರಭುವೇ' ಅಂಕಿತ 'ತತ್ವ ಚಿಂತಾಮಣಿ' ಗದ್ಯ ಗ್ರಂಥ ವಿಶ್ವವಿರಾಟ್ ಪುರುಷ, ಜೀವ-ಈಶ್ವರ-ಪರಬ್ರಹ್ಮ ಮತ್ತು ಮೋಕ್ಷಗಳ ನಿರೂಪಣೆಯಿದೆ. 'ನವಚಕ್ರ ಕುಲರೇಖಾ ಲಕ್ಷಣ' ವೇದಾಂತ ವಿಷಯವನ್ನು ಕುರಿತು ಶಿವ-ಪಾರ್ವತಿಯರು ಮಾಡಿದ ಸಂವಾದ ರೂಪದ ಶ್ಲೋಕಗಳು 'ದೇವೀ ಮಹಾತ್ಮೆ' ೧೪ ಸಂಧಿಗಳಲ್ಲಿ ೧೯೬ ಪದ್ಯಗಳಿವೆ. ಸಂಸ್ಕೃತ 'ದೇವೀ ಮಹಾತ್ಮೆ'ಯ ಅನುವಾದ ತನ್ನ ಗುರುವಿನ ಆಜ್ಞೆಯಂತೆ ಅನುವಾದ ಮಾಡಿದೆ ಎಂದು ಹೇಳಿಕೊಂಡಿದ್ದಾನೆ. 'ಜಾನಸಿಂಧು' ರಚಿಸಿದ ನಂತರ ರಚನೆಯಾದ ಗ್ರಂಥವಿದು. ಇದರಲ್ಲಿ ಮಹಾಕವಿ ಕುಮಾರವ್ಯಾಸನ ಪ್ರಭಾವವನ್ನು ದಟ್ಟವಾಗಿ ಕಾಣಬಹುದಾಗಿದೆ.

'ಜ್ಞಾನಸಿಂಧು' ಹೆಸರೇ ಸೂಚಿಸುವಂತೆ ಜ್ಞಾನಕ್ಕೆ ಸಿಂಧುವಾದುದು. ಕನ್ನಡ ಸಾಹಿತ್ಯದಲ್ಲಿ ಅಪರೂಪದ ಗ್ರಂಥ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ೪೯ ಅಧ್ಯಾಯ ಗಳಲ್ಲಿ ೩೬೨೧ ಪದ್ಯಗಳಿವೆ. ೧೮೯೦ರಲ್ಲಿ ಬೆಂಗಳೂರಿನ ವಾಜಪೇಯ ಕೃಷ್ಣಯ್ಯನವರು ವಾಗೀಶ್ವರೀ ಮುದ್ರಾಕ್ಷರಮಾಲೆಯಲ್ಲಿ ಪ್ರಕಟಿಸಿದರು. ೧೯೮೮ರಲ್ಲಿ ಮದರಾಸಿನಲ್ಲಿ ಒಮ್ಮೆ ಮುದ್ರಣವಾಗಿದೆ. ೧೯೯೦ರಲ್ಲಿ ಧಾರವಾಡ ಹುರಕಡ್ಲಿ ಅಜ್ಜ ಶಿಕ್ಷಣ ಸಂಸ್ಥೆ ಯವರು ಮತ್ತೆ ಪ್ರಕಟಗೊಳಿಸಿದ್ದಾರೆ.

"ಪರಮಶಿವ ಷಣ್ಮುಖಿಗೆ ಸಕಲಾಚರಣೆಯಿಂದಲಿ ಯೋಗ ಬೋಧೆಯ ಪರುತವಿಸಿ ಕರುಣಿಸಿದಾತನೇ ಜ್ಞಾನ ಸಿಂಧುವನು॥ ಎಂಬ ಸೂಚನಾಪದ್ಯದಿಂದ ಗ್ರಂಥ ಪ್ರಾರಂಭ ವಾಗುತ್ತದೆ. ಅದ್ವೈತ ವೇದಾಂತ ನಿರೂಪಣವೇ ಇದರ ಪ್ರಧಾನ ವಸ್ತು. ಜನ ಸಾಮಾನ್ಯರಿಗೂ ಇದರ ವಿಚಾರ ತಿಳಿಯಬೇಕೆಂದು ಮೂಲ ಉದ್ದೇಶ ಹೊಂದಿರುವ ಕವಿ, ಗಹನವಾದ ಸಿದ್ಧಾಂತಗಳನ್ನು ಸರಳ ಕನ್ನಡದಲ್ಲಿ, ಸರಳದಾದ ಉಪಮೆ, ದೃಷ್ಟಾಂತಗಳನ್ನು ಬಳಸಿಕೊಂಡು, ಸುಲಭವಾಗಿ ಅರ್ಥವಾಗುವಂತೆ ನಿರೂಪಿಸಿದ್ದಾನೆ. ಷಣ್ಮುಖನಿಗೆ ಸಾಕ್ಷಾತ್ ಶಿವನೇ ಈ ಆಧ್ಯಾತ್ಮಿಕ ಬೋಧೆಯನ್ನು ವಿವರಿಸಿ ಹೇಳಿದಂತೆ ನಿರೂಪಿಸಲಾಗಿದೆ. 'ಜ್ಞಾನಸಿಂಧು'ವಿದೆಂಬುದೇನೆನೆ ತಾನೆ ತನ್ನನು ತಿಳಿದು ತಾನೇ ತಾನೆಯಾಗಿಹ ತನ್ನಯನುಭವ ತುಂಬಿಕೊಂಡಿರಲು ಜ್ಞಾನಸಿಂಧುವೆಂಬ ಹೆಸರಾಯ್ತು॥ ಜ್ಞಾನಸಿಂಧುವಜ್ಞಾನ ಪರಿಹರ ಜ್ಞಾನಸಿಂಧುವೆ ಪಾಪ ಪರಿಹರ ಜ್ಞಾನಸಿಂಧುವೆ ದುಃಖ ಪರಿಹರ ಜ್ಞಾನವೇ ಬೆಳಕು ಜ್ಞಾನಸಿಂಧುವೆ ಮೋಕ್ಷಗಿರಿ ಸೋಪಾನವೆನಿಸುವದಾಗಿಯೆಲ್ಲವು ಜ್ಞಾನಸಿಂಧುವದಮೃತ ಕುಡಿವುದು ಇದುವೆ ಮಂಗಳವು॥ ಎಂದು ಕೃತಿಯ ಮಹಿಮೆಯನ್ನು ತಿಳಿಸಿದ್ದಾನೆ.

ಹಿಂದೆ ಸತ್ತವರ ಕಥೆಯಿದಲ್ಲವು ಮುಂದೆ ಬೆಳೆವರ ಕಥೆಯಿದಲ್ಲವು ಬಂಧುಬಳಗವು ಮದುವೆ ಮುಂಜಿಯ ಕುಲದ ಕಥೆಯಲ್ಲ ಬಂಧನದಲಭಿಮಾನಿ ಷಣ್ಮತದಿಂದ ಬಳಲುವ ಕಥೆಯಿದಲ್ಲವುಲ ಓದಿದಡೆ ಮನಕರ್ಥ ಕೇಳುವ ಹಾದಿ ಹುಟ್ಟುವದಿದನು ಕೇಳಲು ಸಾಧಿಸು ವೇನೆಂದೆಂಬ ಬುದ್ಧಿಯು ಹುಟ್ಟುತಿರುತಿಹುದು. ಸಾಧಿಸಿದನಾದಡೆಯು ಜಗವು ವಿನೋದ

ವಾಗಿಯೆ ಬ್ರಹ್ಮತೋರ್ಪುದು ಓದದಿರದಿರಿ ಬೇಡಿಕೊಂಬೆನು ಕೈಮುಗಿದು ನಿಮ್ಮ್ಗೆ ಎಂದು ವಿನಮ್ರನಾಗಿ ಕೇಳಿಕೊಂಡಿದ್ದಾನೆ.

ಈ ಗ್ರಂಥದಲ್ಲಿ ಅಧಿಕಾರ ಲಕ್ಷಣ, ವೈರಾಗ್ಯ, ನಿರ್ಣಯ, ಗುರುಕಟಾಕ್ಷ, ತತ್ವ ನಿರ್ಣಯ, ಜೀವೇಶ್ವರೈಕ್ಯ ಜೀವ ಪರಮಾತ್ಮೈಕ್ಯ, ನಿಶ್ಚಯಜ್ಞಾನ, ನಿಜಬೋಧೆ, ನಿರಾಲಂಬಸಾಧನ ಚತುಷ್ಟಯ, ಸಪ್ತಭೂಮಿಕೆಗಳು, ಶ್ರವಣ ಮನನ ನಿಧಿಧ್ಯಾಸನ, ಹಟಯೋಗ ನಿರ್ಣಯ, ಹಟರಾಜಯೋಗ, ಲಯಯೋಗ, ಭಕ್ತಿಯೋಗ, ಯೋಗಾಂಗ ಲಕ್ಷಣ. ಚಿದ್ವಿವೇಕ, ಬಹುಸಮಾಧಿ ಲಕ್ಷಣ, ಸಗುಣ ನಿರ್ಗುಣ ಬ್ರಹ್ಮೋಪಾಸನೆ, ಸಹಜಾನಂದ, ಸತ್ಕರ್ಮಯೋಗ, ಸತ್ಕರ್ಮತ್ಯಾಗ, ಸಾಧುಗಳ ಲಕ್ಷಣ ರಾಜಯೋಗ, ದಶ ಸಾತ್ವಿಕ ಲಕ್ಷಣ, ಪ್ರಕೃತಿ ಪುರುಷ ಲಕ್ಷಣ, ಪುರುಷಲಕ್ಷಣ, ಶಾಂತಿಲಕ್ಷಣ, ಗುಣತ್ರಯ, ಜೀವನಿಗೆ ಜನ್ಮಗಳ ನಿರ್ಣಯ, ಜೀವತ್ರಯ, ಶಿವ ಜೀವ ತನು ಚತುಷ್ಟಯ, ವಾಸನಾಕ್ಷಯ ಪರಬ್ರಹ್ಮ ಸ್ವರೂಪ, ಸದ್ಗುರು ಸಚ್ಛಿಷ್ಯಲಕ್ಷಣ, ಸಹಜ ಸಮಾಧಿ, ಖಂಡಿತ ವಾಚ್ಯ, ಜೀವನ್ಮುಕ್ತಿ ಸ್ಥಿತಿ, ಅದ್ವೈತವಸ್ತು, ಸಂನ್ಯಾಸಯೋಗ, ಅವಧೂತ ಚಾರಿತ್ರ, ಮೋಹಕ ವಿವೇಕ ಯುದ್ಧ, ವಿಭೂತಿ ನಿರ್ಣಯ, ವಿಶ್ವರೂಪ ನಿರ್ಣಯ ಮತ್ತು ದರ್ಶನ, ಪೂಜಾರ್ಪಿತಯ, ಆಧ್ಯಾತ್ಮ ಸುಖಬೋಧ ನಿರ್ಣಯ, ಶಾಸ್ತ್ರೋಪಸಂಹಾರ ಎಂಬ ನಲವತ್ತೆಂಟು ಅಧ್ಯಾಯಗಳಲ್ಲಿ ವಿಷಯವನ್ನು ಹರಹಲಾಗಿದೆ.

ಸಂಸಾರಸಂಗವಿದೂರ, ಏಕನಾಥನ ಮೇಲೆ ಚಿತ್ತವಿಟ್ಟವನು, ಸತ್ವವಂತ, ಗುರು ಮನೆಯ ಕೆಲಸಕೆ ಬೇಸರಿಸದವನು, ವಾಸನಾಕ್ಷಯವಾದವನು, ನೀತಿ ಮಾರ್ಗದಿ ನಡೆವವನು, ಅದ್ವೈತ ಜ್ಞಾನ ಪ್ರಾಪ್ತಿಗೆ ಯೋಗ್ಯ ಅಧಿಕಾರಿ. ವಿಷಯಾಂಧರಿಗೆ, ಮೂರ್ಖರಿಗೆ ಈ ಜ್ಞಾನ ತತ್ವವು ಸಲ್ಲದು.

ಮೃತ್ಯು ಅನಿವಾರ್ಯ ಹುಟ್ಟು, ಜವ್ವನ, ಮುಪ್ಪು ಎಲ್ಲವೂ ದುಃಖಮಯ, ಸ್ತ್ರೀಯರ ಸಂಗ ಪಾಪದಾಯಕ ಇವೆಲ್ಲವುಗಳಿಂದ ಮುಕ್ತನಾಗುವ ದಾರಿಯೇ ವೈರಾಗ್ಯ.

ಸದ್ಗುರುವಿನ ಆಶ್ರಯ ಪಡೆದು ತನ್ನ ತಾ ಅರಿಯಬೇಕು, ಗುರುಕಾರುಣ್ಯದ ಮಹತ್ವ ಮತ್ತು ಗುರು ಸೇವೆ ಮಹತ್ವವಾದುದು. "ಗುರುವು ಇದ್ದುದೆ ಕಾಶಿಕ್ಷೇತ್ರವು ಗುರುವೆ ಸಾಕ್ಷಾದೀಶ್ವರೇಶ್ವರ ಗುರುಚರಣವುದಕವದು ಜಾಹ್ನವಿಯ ಪಾದವದು ಗಯವು ಗುರುಪ್ರಸಂಗವೆ ಅದು ಪ್ರಯಾಗವು ಗುರುವ ವಾಕ್ಯವೆ ಅದುವೆ ತಾರಕ ಗುರುವಿಗಿಂತಾ ತೀರ್ಥ ದೈವವದಿಲ್ಲ"೧೦ ಎಂದಿದ್ದಾನೆ. ದೇಹದ ಹುಟ್ಟಿನ ಸಂದರ್ಭವನ್ನು ವಿವರಿಸುವಾಗ ಪಂಚಭೂತಗಳ ತತ್ವವನ್ನು ಸಾದ್ಯಂತವಾಗಿ ವಿವರಿಸಲಾಗಿದೆ.

ಶರೀರದ ಸ್ಥಿತಿಯನ್ನು ಹೇಳಿಕೊಟ್ಟು ಅದಕ್ಕಿರುವ ಚೈತನ್ಯ ಸ್ವರೂಪದ ಪರಿಚಯ ವನ್ನು ಜೀವೇಶ್ವರೈಕ್ಯ ಅಧ್ಯಾಯದಲ್ಲಿ ಮಾಡಿಕೊಡಲಾಗಿದೆ.

ನದಿ ಒಂದೇ ಆಗಿದ್ದರೂ ತೆರೆ, ನೊರೆ, ಹುಟ್ಟುವಂತೆ ಪರಮಾತ್ಮನಲ್ಲಿ ಜೀವಾತ್ಮ, ಒಬ್ಬನೇ ಪರಮಾತ್ಮ ಎಂದು ಸ್ಪಷ್ಟಪಡಿಸಲಾಗಿದೆ.

ನೀ ಬಯಲೆಂದು ನಿಶ್ಚಯಿಸು, ನಿತ್ಯನಾ ಪರವಸ್ತುವೆಂದು ತಿಳಿ, ಬ್ರಹ್ಮವೇ ನೀನಾಗು ಎಂದು ವಿವರಿಸಲಾಗಿದೆ.

ವಿದ್ಯೆ ಮತ್ತು ಅವಿದ್ಯೆಗಳನ್ನು ತಿಳಿದು ಮಲರಹಿತ, ಗುಣರಹಿತ, ಕರ್ಮದೂರನಾಗು ಎಂಬ ನಿಜಬೋಧೆಯನ್ನು ಉಸುರಲಾಗಿದೆ.

ನಿರಾಲಂಬ ಮತ್ತು ಸಾಧನ ಚತುಷ್ಟಯಗಳಾದ ವಿರಕ್ತಿ, ವಿವೇಕ, ಶಮ ಮತ್ತು ದಮ ಇದಕ್ಕೆ ಇರುವ ಐದು ಉಪಸಾಧನೆಗಳಾದ ಉಪರತಿ, ತಿತಿಕ್ಷೆ, ಭಕ್ತಿ, ಸಮಾಧಾನ ಮತ್ತು ಮುಮುಕ್ಷತ್ವಗಳನ್ನು ವಿವರಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಸುಖೇಚ್ಛೆ, ಆತ್ಮ ವಿಚಾರ, ನಿಸ್ಸಂಗ, ವಾಸನಾಕ್ಷಯ, ಆನಿಂದಿನಿ, ತುರ್ಯ ಮತ್ತು ತುರ್ಯಾತೀತ ಎಂಬ ಸಪ್ತಭೂಮಿಕೆಗಳನ್ನು ವಿವರಿಸಲಾಗಿದೆ.

ಶ್ರವಣ, ಮನನ ನಿಧಿಧ್ಯಾಸ ಮೊದಲಾದ ಯೋಗದ ಸಾಧನಗಳನ್ನು ವಿವರಿಸಲಾಗಿದೆ.

ಹಠಯೋಗ ಎಂಬ ಅಧ್ಯಾಯದಲ್ಲಿ ಅದರ ಮಹತ್ವವನ್ನು ವಿವರಿಸಿ, ಎಲ್ಲ ವಾಸನೆಗಳನ್ನು ಲಯಗೊಳಿಸುವುದರ ಮಹತ್ವಗಳನ್ನು ನಿರೂಪಿಸಲಾಗಿದೆ.

ಪರಮಾತ್ಮನ ಕೀರ್ತನ, ಶ್ರವಣ, ಧ್ಯಾನ ಮತ್ತು ಭಕ್ತಿಯ ಲಕ್ಷಣಗಳನ್ನು ನಿರೂಪಿಸಲಾಗಿದೆ.

ಯೋಗಾಂಗ ಲಕ್ಷಣದಲ್ಲಿ ಹಿಂದಿನ ಯೋಗಗಳಿಗಿಂತ ಭಿನ್ನವಾದ ಕೆಲವು ಸಂಗತಿಗಳನ್ನು ವಿವರಿಸಲಾಗಿದೆ.

ಚಿದ್ವಿವೇಕದಲ್ಲಿ ಚಿತ್ ಅಂದರೆ ಆತ್ಮ, ಆತ್ಮನೇ ಚಿತ್ತು ಒಂದು ಅನುವಿನಿಂದ ಚಿತ್ ಪ್ರಭೆಯನ್ನು ತನ್ನ ಹೃದಯದಲ್ಲಿ ಶೋಧಿಸುವುದೇ ಚಿದ್ವಿವೇಕ ಎಂದು ಬಣ್ಣಿಸಲಾಗಿದೆ.

ಬಹು ಸಮಾಧಿ ಲಕ್ಷಣದಲ್ಲಿ ಸವಿಕಲ್ಪ, ನಿರ್ವಿಕಲ್ಪ ಸಮಾಧಿಗಳನ್ನು ಬಿಡಿಸಿ ತೋರಿಸಲಾಗಿದೆ.

ಸಗುಣ ನಿರ್ಗುಣ ಬ್ರಹ್ಮೋಪಾಸನೆ ಎಂಬ ಅಧ್ಯಾಯವು ಯೋಗ ಮಾರ್ಗವನ್ನು ಅನುಸರಿಸಿಕೊಂಡೇ ಬರುತ್ತದೆ. ಸ್ವರ್ಗಾದಿ ಲೋಕಗಳ ಸುಖ ಬಯಸುವವರಿಗೆ ಈ ಉಪಾಸನೆ ಯುಕ್ತವಲ್ಲ ಎಂದು ತಿಳಿಸಲಾಗಿದೆ.

ಸಹಜಾನಂದವೂ ಯೋಗದ ಫಲ, ಸಹಜ ಸಂವಿತ್ತಾತ್ಮನಾಗಿರುವುದೇ ಸಹಜಾನಂದ ಎಂದು ಬಣ್ಣಿಸಲಾಗಿದೆ.

ಕಾಮ್ಯ ಕರ್ಮ, ಸತ್ಕರ್ಮ. ಐಹಿಕ ಆಸೆಯ ತೃಪ್ತಿಗಾಗಿ ಮಾಡುವ ಕರ್ಮ ಕಾಮ್ಯ ಕರ್ಮ. ಪರಮಾತ್ಮನಲ್ಲಿ ತನವಿಟ್ಟು ಮಾಡುವುದೇ ಸತ್ಕರ್ಮ ಅದರಿಂದಲೇ ಮುಕ್ತಿ ಎಂದು ಎಚ್ಚರಿಸಲಾಗಿದೆ.

ಸಾಧುಗಳ ಲಕ್ಷಣಗಳ ವಿವರಣೆಗಾಗಿ ಈ ಅಧ್ಯಾಯ ಮೀಸಲಾಗಿದೆ. ಯೋಗಿ, ಸಾಧು ಪರ್ಯಾಯಗಳು ಸಾಧುಗಳು ಬ್ರಹ್ಮಚಿಂತನೆಯಲ್ಲಿದ್ದು ಸುತಕಳತ್ರರನ್ನು ಸಾಕ್ಷಾತ್

ಶಿವವೆಂದು ಕಾಣಬೇಕೆಂದು ನಿವೇದಿಸಲಾಗಿದೆ.

ರಾಜಯೋಗಕ್ಕಿಂತ ಭಿನ್ನವಾದ ಇನ್ನೊಂದು ರಾಜಯೋಗವನ್ನು ಕುರಿತು ವಿವೇಚಿಸಲಾಗಿದೆ.

ದಶಸಾತ್ವಿಕ ಲಕ್ಷಣಗಳು ಸರ್ವಜ್ಞಾನಕ್ಕೆ ಮೂಲವಾದವುಗಳು, ಬುದ್ಧಿ ಸಾಹಸ, ಸತ್ಯ, ಜ್ಞಾನ, ತಪ, ಹರುಷ, ನಿಶ್ಚಯ, ಮೌನ, ಕ್ಷಮೆ ಮತ್ತು ಧೈರ್ಯ ಇವೇ ಸಾತ್ವಿಕ ಲಕ್ಷಣಗಳು ಎಂದು ವರ್ಣಿಸಲಾಗಿದೆ.

ಪ್ರಕೃತಿ-ಪುರುಷ ಲಕ್ಷಣದಲ್ಲಿ, ದೈವೀ ಮತ್ತು ಆಸುರೀ ಪ್ರಕೃತಿ, ಅವುಗಳ ಸ್ವಭಾವ, ದಾನ, ಯಜ್ಞ, ತಪಸ್ಯ ಮೌನ ಇತ್ಯಾದಿ ಸದ್ಗುಣ ಹೊಂದಿದ್ದು, ದೈವೀ ಪ್ರಕೃತಿ ಸದಮಲ ಮೋಕ್ಷಕ್ಕೆ ಕಾರಣವಾದರೆ, ಆಸುರೀ ಪ್ರಕೃತಿ ಸಂಸಾರ ಬಂಧನಕ್ಕೆ ಕಾರಣವಾಗುತ್ತದೆ ಎಂದು ತಿಳಿಸಲಾಗಿದೆ.

ಶಾಂತಿ ಲಕ್ಷಣದಲ್ಲಿ, ಶಾಂತಿಯಿಂದ ಸರ್ವ ಅರಿಷ್ಟ, ದುರಿತ, ಉಪದ್ರ ನಾಶವೆಂದು ತಿಳಿಸಿ. ನಿರಂತರದಿ ಯೋಗವನು ಸಾಧಿಸೆ ಶಾಂತವಾಸವಾಗಿಹನು ಎನ್ನಲಾಗಿದೆ.

'ಗುಣತ್ರಯ' ಅಧ್ಯಾಯದಲ್ಲಿ ಸತ್ವ, ರಜ, ತಮಗಳು ಪರಸ್ಪರ ಬೆರೆತು, ಶುದ್ಧ ಸಾತ್ವಿಕ, ಸಾತ್ವಿಕ ರಾಜಸ, ಸಾತ್ವಿಕ ತಾಮಸ, ಶುದ್ಧರಾಜಸ, ರಾಜಸ ಸಾತ್ವಿಕ, ರಾಜಸ ತಮೋಗುಣ, ಶುದ್ಧ ತಾಮಸ, ತಾಮಸ ಸಾತ್ವಿಕ ಮತ್ತು ತಾಮಸ ರಜೋಗುಣ ಎಂದು ವಿವರಿಸಲಾಗಿದೆ ಮತ್ತು ಮೂರು ತಪ, ಕರ್ಮ, ಬುದ್ಧಿ, ಯಜ್ಞ ಮನಸ್ಸು ಮತ್ತು ಮೂರು ಸುಖ ಇತ್ಯಾದಿ ಸಂಗತಿಗಳನ್ನು ಇಲ್ಲಿ ಗುರುತಿಸಲಾಗಿದೆ.

ಜೀವನಿಗೆ ಜನ್ಮಗಳ ನಿರ್ಣಯ ಎಂಬಲ್ಲಿ ಮರಣದ ವಿಷಯ, ಮಹತ್ವ ಮತ್ತು ಮುಕ್ತಿಯ ಭೇದವನ್ನು ವಿವರಿಸಲಾಗಿದೆ.

ಜೀವತ್ರಯ ನಿರ್ಣಯದಲ್ಲಿ ಪ್ರಾತಿಭಾಷಿಕ ಮತ್ತು ಪಾರಮಾರ್ಥಿಕ, ಜೀವ-ಶಿವ-ತನು ಚತುಷ್ಟಯ, ಈಶ್ವರನ ವಿರಾಟ, ಹಿರಣ್ಯಗರ್ಭ, ಅವ್ಯಾಕೃತ ಮತ್ತು ಮೂಲ ಪ್ರಕೃತಿಯ ವಿಚಾರವಿದೆ.

ವಾಸನಾಕ್ಷಯದಲ್ಲಿ ಶಾಸ್ತ್ರ, ಲೋಕ, ದೇಹವಾಸನೆಗಳನ್ನು ವಿವರಿಸುತ್ತ ಅವುಗಳನ್ನು ಕ್ಷಯಿಸಬೇಕಾದ ಉಪಾಯಗಳನ್ನು ನಿರೂಪಿಸಲಾಗಿದೆ.

ಸಹಜ ಸಮಾಧಿ ಎಂದರೆ ಸಹಜ ಬ್ರಹ್ಮಸ್ವರೂಪ. ಧ್ಯಾನ, ಧಾರಣಗಳನ್ನು ದಾಟಿದ ಬಹಿರಾಂತರ್ಯ ದೃಷ್ಟಿಯಿಲ್ಲದ ತಾನೆ ತಾನಾಗಿರುವ ಒಂದು ಸ್ಥಿತಿ ಎಂದು ಬಣ್ಣಿಸಲಾಗಿದೆ.

ಖಂಡಿತವಾಕ್ಯದಲ್ಲಿ ಶುದ್ಧ ಬ್ರಹ್ಮವನ್ನು ವರ್ಣಿಸಲಾಗಿದೆ ನಿನ್ನ ಬಿಟ್ಟು ಅನೇಕವೆಂಬುದಿಲ್ಲ ಎಂದು ಹೇಳಲಾಗಿದೆ.

ಎರಡಿಲ್ಲದುದೇ ಅದ್ವೈತ, ನಿರಾವರಣ, ನಿರ್ಗುಣ, ಪರಮ ಪೂರ್ಣಜ್ಯೋತಿ, ಅವ್ಯಾಕೃತ್ಯ, ಅಚಲಾನಂದ, ಅನಾದಿ ಇತ್ಯಾದಿ ವಿವರಿಸಲಾಗಿದೆ.

ಸಂನ್ಯಾಸಯೋಗದಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಮತ್ತು ಸಂನ್ಯಾಸಾಶ್ರಮಗಳನ್ನು ಹೇಳಿ. ಸಂನ್ಯಾಸಿ ಸಂಸಾರದಲ್ಲಿದ್ದರೂ ನಿರ್ಲೇಪ, 'ಪರಮಹಂಸ' ಎಂಬುದನ್ನು ವಿವೇಚಿಸಲಾಗಿದೆ.

ಅವಧೂತ ಚಾರಿತ್ರ ಅನುಭಾವಮಾರ್ಗದಲ್ಲಿಯೇ ಅನುಪಮವಾದುದು· ಅವಧೂತರ ಇರುವಿಕೆಯ ವಿವಿಧ ಪರಿಗಳನ್ನು ಸಾಕಷ್ಟು ವಿಸ್ತಾರವಾಗಿ ವಿವೇಚಿಸಲಾಗಿದೆ.

ಮೋಹ-ವಿವೇಕಯುದ್ಧ ಒಂದು ರೂಪಕದಂತಿದೆ. ಇವುಗಳ ಕಾದಾಟ, ಗುಣ, ಅವಗುಣ, ಸಮಸ್ಯೆ ಮೊದಲಾದ ವರ್ಣನೆಗಳನ್ನು ತರಲಾಗಿದೆ.

ವಿಭೂತಿ ನಿರ್ಣಯದಲ್ಲಿ 'ವಿಭೂತಿಯು ಪರಶಿವನು' ಎಂದು ಅದರ ತತ್ವವನ್ನು ನಿರ್ಣಯಿಸಿ, ವಿಭೂತಿ ಮಾಲಿಕೆಯ ಪಟ್ಟಿಯನ್ನು ಕೊಡಲಾಗಿದೆ. ವಿಭೂತಿ ಸಂಪನ್ನವೆಂದರೆ ಆನೆ-ಐರಾವತ, ಆಕಳು-ಕಾಮಧೇನು, ಮನುಷ್ಯ-ಅರಸು, ಯಜ್ಞ-ಜಪ, ಪರಿಮಳ-ಕಸ್ತೂರಿ, ಹೂವು-ಕಮಲ.

ಪೂಜಾದ್ವಿತಯದಲ್ಲಿ ನಿರ್ಗುಣ ಪೂಜಾವಿಧಾನ, ಆತ್ಮ ಪೂಜಾವಿಧಾನಗಳನ್ನು ತಿಳಿಸಿ. ಪರಮಾತ್ಮನೇ ತಾನೆನ್ನುವುದು ನಿರ್ಗುಣಪೂಜೆ, ದೇಹ-ಆತ್ಮಭಾವ ಮೊದಲಾದವುಗಳನ್ನು ಕುರಿತುದೇ ಆತ್ಮಪೂಜೆ ಎಂದು ಬಿಡಿಸಲಾಗಿದೆ.

'ಆಧ್ಯಾತ್ಮ ಸುಖಬೋಧೆ' ಎಂಬ ಅಧ್ಯಾಯದಲ್ಲಿ ಕೈವಲ್ಯಸ್ವರೂಪ, ಪ್ರಾಪ್ತಿಗಳನ್ನು ಪ್ರಸ್ತಾಪಿಸಲಾಗಿದೆ.

ಜಗತ್ತು ಮತ್ತು ಅದರ ವ್ಯವಹಾರ, ಅದರಲ್ಲಿ ತನ್ನತನದ ಸತ್ವ, ಶಾಸ್ತ್ರದ ಉದ್ದೇಶ, ನಿತ್ಯ, ಶುದ್ಧ, ಬುದ್ಧ ಅದ್ವಯಾತ್ಮನೆಂದು ತಿಳಿಸುವುದನ್ನು ಪ್ರತಿಪಾದಿಸಲಾಗಿದೆ.

ಜ್ಞಾನಸಿಂಧುವು ಅಜ್ಞಾನ ದುಃಖಗಳನ್ನು ಪರಿಹರಿಸುವುದು, ಮುಮುಕ್ಷುವಿಗೆ ಜ್ಞಾನಾಮೃತವನ್ನು ನೀಡುವುದು. ವೇದ, ಶಾಸ್ತ್ರ, ಪುರಾಣ, ಆಗಮ, ಇತಿಹಾಸ, ಆರ್ಯೋಕ್ತಿ ಇತ್ಯಾದಿ ಸಕಲವಿದ್ಯೆಗಳಿಂದ ಕೂಡಿದ ಆ ವಿದ್ಯೆಗಳ ಸಾರವಾದ ಜ್ಞಾನಸಿಂಧುವಿನ ವಾಚನವು ಚಿರಮುಕ್ತಿ ಸುಖವನ್ನು ನೀಡಬಲ್ಲುದು ಎಂದು ಕವಿ ಆಶಿಸಿದ್ದಾರೆ.

'ಜ್ಞಾನಸಿಂಧು' ಒಂದು ಪ್ರಸಿದ್ಧವಾದ ಕಾವ್ಯ ಜಿಜ್ಞಾಸುಗಳು. ಮುಮುಕ್ಷುಗಳು ಹಳ್ಳಿಗಳಲ್ಲಿ ಓದಿ ಆಧ್ಯಾತ್ಮಿಕ ಸಾಧನೆಯನ್ನು ಪಡೆದುಕೊಂಡ ಮಹಾನ್‌ಕೃತಿ ಇದು. ಹುಬ್ಬಳ್ಳಿಯ ಸಿದ್ಧಾರೂಢ ಪರಂಪರೆಯವರು ಗದುಗಿನ ಶಿವಾನಂದ ಸ್ವಾಮಿಗಳ ಪರಂಪರೆಯವರು ಇದರಲ್ಲಿ ತನ್ಮಯರಾಗಿದ್ದುದು ತಿಳಿದುಬರುತ್ತದೆ.

ಪರಶಿವನು ಗುರುವಾಗಿ ಷಣ್ಮುಖನು ಶಿಷ್ಯನಾಗಿ ರೂಪಗೊಂಡ ಈ ಕಾವ್ಯದ ತಂತ್ರ ಉಪದೇಶಾತ್ಮಕವಾಗಿಯೇ ಸಾಗುತ್ತದೆ ನಲವತ್ತೆಂಟು ಅಧ್ಯಾಯಗಳ ಸುದೀರ್ಘ ನಿರೂಪಣೆಯಲ್ಲಿ ಚಿದಾನಂದವಧೂತರಿಗಿರುವ ಅಪಾರವಾದ ಜ್ಞಾನ ತಾನೆ ತಾನಾಗಿ ವ್ಯಕ್ತವಾಗುತ್ತದೆ.

ಭಾಮಿನಿಷಟ್ಪದಿ ರಾಮಾಯಣ, ಮಹಾಭಾರತ ಮೊದಲಾದ ಕಥನಕಾವ್ಯಗಳಿಗೆ ವಾಹಕವಾಗಿರುವಂತೆ ನೀತಿ ತತ್ವಗಳ ನಿರೂಪಣೆಗೂ ಸೂಕ್ತಮಾಧ್ಯಮವಾಗಿದೆ. ಕುಮಾರವ್ಯಾಸ, ಕುಮಾರ ವಾಲ್ಮೀಕಿ, ಚಾಮರಸ, ಮಹಲಿಂಗರಂಗ, ೩ನೇ ಮಂಗರಸ ಮೊದಲಾದ ಕವಿಗಳನ್ನು ಇಲ್ಲಿ ನೆನೆಯಬಹುದು. ಮಹಲಿಂಗರಂಗ ತನ್ನ ಅನುಭವಾಮೃತವನ್ನು ಭಾಮಿನಿಯಲ್ಲಿ ರಚಿಸಿ ಬೆರಹುಗೊಳಿಸಿದ. ಅಂತೆಯೇ ಅವನನ್ನು ಹೆಚ್ಚಾಗಿ ಅನುಸರಿಸಿದ ಚಿದಾನಂದ ಅವಧೂತರು ಭಾಮಿನಿಯನ್ನೇ ಆಶ್ರಯಿಸಿದ್ದಾರೆ.

'ಪ್ರಾಸ'ದಲ್ಲಿ ಅವಧೂತ ಎತ್ತಿದ ಕೈ. ತನಗೆ ಬೇಕಾದ ಹಾಗೆ ಪ್ರಾಸ ಬಳಸಿಕೊಂಡಿದ್ದಾನೆ. ಲ–ಳ, ಳ–ಲ, ರ–ಣ, ಶ–ಸ, ಮ–ವ, ಬ್ರಹ್ಮ–ಧರ್ಮ, ಸ್ವಪ್ನ–ತತ್ವ, ಅಂಟು–ಇಟ್ಟು, ಕಣ್ಣು–ತನ್ನ ಹೀಗೆ ಪ್ರಾಸದಲ್ಲಿ ಉಲ್ಲಂಘನೆ ಕಂಡುಬರುತ್ತದೆ. ಭಾಮಿನಿಯ ನಿಯಮವನ್ನು ಅನೇಕ ಕಡೆ ಗಾಳಿಗ ತೂರಿದ್ದಾನೆ. ತನಗೆ ಬೇಕಾದ ಕಡೆ ತಿರುಚಿಕೊಂಡು ಉಪಯೋಗಿಸಿಕೊಂಡಿದ್ದಾನೆ.

'ಜ್ಞಾನಸಿಂಧು' ಕೇವಲ ತತ್ವಗ್ರಂಥವಾಗಿರದೆ, ಶುಷ್ಕ ವೇದಾಂತವಾಗದೆ ಸಾವಿರಾರು, ಯಮಕ, ರೂಪಕ, ದೃಷ್ಟಾಂತ, ಉದಾಹರಣೆ, ಕಥೆ ಮತ್ತು ಉಪಕಥೆಗಳಿಂದ ಮಹತ್ತರವಾದ ವಿಷಯವನ್ನು ಮನಮುಟ್ಟುವಂತೆ ವಿವರಿಸಲು ಪ್ರಯತ್ನಿಸಲಾಗಿದೆ. ಗ್ರಂಥದ ತುಂಬ ಉಪಮೆಗಳ ಸರಮಾಲೆಯೇ ಇದೆ. ಅದೂ ನಿತ್ಯ ಜೀವನದ ಉಪಮಾನಗಳು. "ಮಣ್ಣು ತಿಂಬಾ ಸಣ್ಣವನಿಗೆಯು ಹಣ್ಣುಕೊಟ್ಟು ಮಣ್ಣು ಬಿಡಿಸಿದವೊಲ್, ನೀರು ನೀರನು ಕೂಡ್ದ ತೆರದಲಿ ಬೆಂಕಿ ಕಬ್ಬಿಣ ಸಂಗಮಾಡಲು ಬೆಂಕಿಗೂ ಕಬ್ಬಿಣದೊಡನೆ" ಪೆಟ್ಟು, ರೋಗಿ ಬಾಯಿಗೆ ಮೃಷ್ಟಾನ್ನ ವಿಷ, ನೀರೊಳಗೆ ನಿಂತು ರಜಕನು ನೀರಡಿಸಿ ಸತ್ತತೆರ, ಸರ್ಪ ಕುಪ್ಪಸ ಬಿಟ್ಟತೆರ, ಪರಮಾತುಮನಲ್ಲಿ ಯೋಗಿ ಕಲತಿಹನು ಕೊಳಚಿ ನೀರೊಳು ಶುಚಿಯ ನೀರೊಳು ಹೊಳೆಯೆ ಸೂರ್ಯನ ಬಿಂಬ ವದಕೆಯು ಕೊಳಚಿನೀರಿನ ಕ್ಲೇಷ ಶುಚಿನೀರ್ ಸುಖವು ಅಂಟೀತೆ, ಬೀಗದ ಕೈಯಲ್ಲಿದೆ. ಬೀಗ ತೆಗೆಯುವವನಂತೆ, ಅಡಿಗೆ ಮಾಡಿದ ಶಾಕಪಾಕವ ಅಂಟಿ ತೊಳಸಿದರೂ ಸೌಟಿಗೆ ರುಚಿಯ ವಿಚಾರವಿಲ್ಲ.

ಮೊದಲಾದುವುಗಳನ್ನು ನೋಡಬಹುದು. ಚಿದಾನಂದರ ಸ್ವಂತಿಕೆಯ ಕಾವ್ಯ ಪ್ರತಿಭೆಯನ್ನು ಇಲ್ಲಿ ಕಾಣಬಹುದು. ಪ್ರತಿ ಅಧ್ಯಾಯದಲ್ಲಿಯೂ ಉಪಮೆ, ದೃಷ್ಟಾಂತ ಹೋಲಿಕೆಗಳು ತುಂಬಿವೆ.

ದಶ ಸಾತ್ವಿಕ ಲಕ್ಷಣದಲ್ಲಿ ಬರುವ ದೇಹ ಮತ್ತು ಆತ್ಮರ ಸಂವಾದ ಚನ್ನಾಗಿದೆ. ಶರೀರವು ಹೀಗೆ ನುಡಿಯುತ್ತದೆ. "ಚಳಿ ಬಿಸಿಲು ತಗಲದವೋಲಾನೇ ಬಲು ಹೊದಿಕೆಯಾಗಿಹೆನು ನಿನಗೆಯು ಒಲಿದು ತಿರುಗಾಡಲಿಕೆ ಕಾಲುಗಳಾಗಿ ಇರುತಿಹೆನು ತಿಳಿಯೆ ಉಣಲಿಕೆ ಬಾಯಿ ಇಹೆನು ತೆಕೊಳ್ಳಲಿಕೆಯು ಕೈಯಾಗಿಹೆನು ನೀ ಹಳಿವುದಿರು ಆವ್ನೀತಿ"೧೧ ಇದಕ್ಕೆ ಉತ್ತರವಾಗಿ "ಮಂದಮತಿಯೆಲೆ ದೇಹ ಕೇಳ್ ಎನಗೊಂದಿಸಿದ್ದ ಚಳಿ ಬಿಸಿಲ

ನಾ ನೀರಿಂದ ತೋಯೆನು ಕಡಿಮೆ ಹರಿಯೆನು ಸುಡೆನು ಬೆಂಕಿಯಲಿ ಇಂದು ನಿರವೀಕಾರ ನನಗೆಯು ತಂದಿಡುವೆ ಕೈಕಾಲ ಬಾಯನು ಎಂದಿಗೆಯು ನಿರ್ಗಮನು ತೃಪ್ತನು ಎಂದನಾ ಆತ್ಮ"[೧೨] ಎಂದು ಆತ್ಮ ಉತ್ತರಿಸಿತು.

'ಮೋಹಕ ವಿವೇಕ ಯುದ್ಧ' ಎಂಬ ಅಧ್ಯಾಯವು ಇದೇ ರೂಪಕ ಕಾವ್ಯವೆನಿಸುತ್ತದೆ. ಮೋಹ ಮತ್ತು ವಿವೇಕ ಪರಸ್ಪರ ವೈರಿಗಳಾಗಿ ತಮ್ಮ ತಮ್ಮ ಸೈನ್ಯವನ್ನು ಸಜ್ಜುಗೊಳಿಸಿ ನಿಲ್ಲುವ ಚಿತ್ರ ಕಣ್ಣಿಗೆ ಕಟ್ಟುವಂತಿದೆ. ರಾಜ್ಯ ಸಭೆ ವ್ಯಕ್ತಿ ಆಲೋಚನೆ, ಸಮರ ಸಾವು ಮೊದಲಾದವುಗಳು ಅಧ್ಯಾತ್ಮ ಜಗತ್ತಿನ ಹೋರಾಟವನ್ನು ಅದ್ವಿತೀಯವೆನ್ನುವಂತೆ ಚಿತ್ರಿಸಲಾಗಿದೆ. ಚಿದಾನಂದಾವಧೂತರ ಸೋಪಜ್ಞತೆಗೆ, ಕಲ್ಪನೆಗೆ ಈ ಅಧ್ಯಾಯವನ್ನು ಉದಾಹರಿಸಬಹುದು.

ಚಿದಾನಂದರ ಭಾಷೆಯೇ ಬೇರೆ. ಅವರು ಯಾರಿಗೂ ಯಾವ ಸಂದರ್ಭದಲ್ಲೂ ಹೆದರದೆ ಭಾಷೆಯನ್ನು ಸ್ವೇಚ್ಛೆಯಾಗಿ ಉಪಯೋಗಿಸಿದ್ದಾರೆ. ಕನ್ನಡ ಭಾಷಾ ಚರಿತ್ರೆಯಲ್ಲಿ ಚಿದಾನಂದಾವಧೂತ ಮತ್ತು ಚಂದ್ರಸಾಗರವರ್ಣಿ ಗಳಿಗೆ ಪ್ರತ್ಯೇಕ ವ್ಯಾಕರಣ ನಿಘಂಟುಗಳುಬೇಕು. ಅವರವರನ್ನೇ ಒಂದೊಂದು ಬೃಹತ್ ಶಬ್ದಕೋಶವನ್ನು ರಚಿಸುವಷ್ಟು ಸಾಮಗ್ರಿ ಇದೆ. ಮಡಿವಂತಿಕೆ, ಅಶ್ಲೀಲತೆ ಸೂಚ್ಯಕೆಗಳಾವುವು ಇಲ್ಲಿ ಪ್ರಭಾವವಿಲ್ಲ. ಮರೆವಣ, ಕೊಂಬೋಣ, ಅರಿವಣ, ಕರೆವಣ ಎಂಬ ಶಬ್ದಗಳಂತೂ ವಿಪುಲವಾಗಿವೆ. ವಿರಕ್ತಿ, ವೀರಕ್ತಿ, ವೀಕಲ್ಪ, ನೀರವಧಿಕ, ಊಪದ್ರ, ಗಂಗಧರ, ಚಿದನಂದ, ಆಕಾಶ, ನಾದ, ನಿಕೇಪ, ಚನ್ನಗಿ, ಅಭ್ಯಸ, 'ಮಗನೇ ಕೇಳ್ದ್ಯಾ ಎನ್ನ ಗುರುವರನ ಮಾಡಿಕೊಂಡ್ಯಾ, ಬಾರೊ ಈ ಕಡೆ, ಹೀಗೆ ಹೇಳುತ್ತ ಹೋದರೆ ಅವಧೂತ ಶಬ್ದಕೋಶ ಹಿರಿದಾಗುತ್ತದೆ.'

ಮಹಲಿಂಗರಂಗನ ಅನುಭಾವಾಮೃತ ಬಹುಮಟ್ಟಿಗೆ ಜ್ಞಾನಸಿಂಧುವಿಗೆ ಪ್ರೇರಕ. ವ್ಯಾಸಮುನಿಯು ಶುಕಮುನಿಗೆ ತತ್ವಬೋಧೆಯನ್ನು 'ಅನುಭವಾಮೃತ'ದಲ್ಲಿ ಮಾಡಿದರೆ ಪರಶಿವನು ಷಣ್ಮುಖನಿಗೆ ತತ್ವವನ್ನು ಇಲ್ಲಿ ಬೋಧಿಸಿದ್ದಾನೆ. ಎರಡೂ ಭಾಮಿನಿ ಷಟ್ಪದಿಯಲ್ಲಿವೆ. ನಿರೂಪಣಾತಂತ್ರ, ಕಾವ್ಯರೂಪ, ವಸ್ತು, ಶೈಲಿಗಳು ಒಂದೇ ರೀತಿಯಾಗಿವೆ 'ಅನುಭವಾಮೃತ'ದ ಪಡಿಯಚ್ಚಿನಂತಿದ್ದರೂ 'ಜ್ಞಾನಸಿಂಧು' ಸ್ವತಂತ್ರ ಕಾವ್ಯವಾಗಿದೆ.

"ಕನ್ನಡದ ನುಡಿಯಲಿ ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೆ ಸಂಸ್ಕೃತದಲ್ಲಿಲ್ಲೇನು" ಎಂದು ಮಹಲಿಂಗರಂಗನೆಂದರೆ "ಮಾತು ಕನ್ನಡವೆಂದು ಸಂಸ್ಕೃತ ಮಾತನರಿವದರಿದನು ಹಳಿವುದು ನೀತಿಯಲ್ಲವು" ಎಂದು ಚಿದಾನಂದ ಅವಧೂತ ಹೇಳುತ್ತಾರೆ. "ಕನ್ನಡ ನುಡಿಯೆಂದುಪೇಕ್ಷಿಸಲಿನ್ನು ಹಿರಿಯರಿಗಂಜಿ ನುಡಿವೇನು ಕನ್ನಡಿಯೆದರ್ಪಣವಲ್ಲದೆ ಭೇದವೇನಿದಕೆ ಎಂದು ಮಹಲಿಂಗರಂಗ ಎಂದರೆ." ಕನ್ನಡದ

ನುಡಿಯಲ್ಲಿ ಹೇಳಿದುದನ್ನು ಹಾಗ್ಗ್ಹೀಗೆನಲು ಸಲ್ಲದು ತನ್ನ ಮುಂದೆಯೆ ಎಡೆಯು ಒಡಿಸಿಟ್ಟಂತೆ ಅನುಭವವು ತನ್ನ ತಿಳಿಯಲು ತನ್ನನರಿಯಲು ತನ್ನ ಕಾಂಬವ ಕನ್ನಡಿಯೆಯಿದು ಮನ್ನಿಸಿಯೆ ಪುಣ್ಯಾತ್ಮಗಿದನೋದುವದು ಮನವೊಲಿದು[೧೩] ಕತ್ತೆಯರಿವುದೆ ಕತ್ತುರಿಯ (ಅನುಭವಾಮೃತ) ಕಸ್ತುರಿಯು ತಾನೇಕೆ ಕತ್ತೆಗೆ (ಜ್ಞಾನಸಿಂಧು), ದತ್ತು ಪುತ್ರನಿಗೆ ಏತಕ್ಕೆ ಪಿತೃಭಕ್ತಿ (ಅನುಭವಾಮೃತ; ದತ್ತನಾಗಿಹ ಪುತ್ರಗೇತಕೆ ಅತ್ಯಧಿಕ ಪಿತೃಭಕ್ತಿ (ಜ್ಞಾನಸಿಂಧು)-ಹೀಗೆ ಅನುಭವಾಮೃತದ ಪಡಿಯಚ್ಚು ಜ್ಞಾನಸಿಂಧುವಿನಲ್ಲಿವೆ.

ವಚನ, ದಾಸ ಸಾಹಿತ್ಯ, ವೇದೋಪನಿಷತ್ತು, ಭಗವದ್ಗೀತೆ, ವಿವೇಕ ಚಿಂತಾಮಣಿ, ಕೈವಲ್ಯ ಕಲ್ಪವಲ್ಲಿರಿ, ಭಾರತ, ಭಾಗವತ ಮತ್ತು ರಾಮಾಯಣಗಳಿಂದ ನೇರ ಪ್ರೇರಣೆಯನ್ನು ಪಡೆದಿದೆ. ಅನುಭಾವಕ್ಕೆ ಸಂಬಂಧಿಸಿದ ವಿಷಯಗಳನ್ನು ಅಭಿವ್ಯಕ್ತಿಗೊಳಿಸುವಾಗ ಹೀಗಾಗುವುದು ಸಹಜ. ಆದರೆ ಅದು ಅನುಕರಣವಲ್ಲ ಪರಂಪರೆಯ ಬೆಳವಣಿಗೆ. ಇದರ ನಿಜಸ್ವರೂಪವನ್ನು ಅರಿಯಲು ತಮ್ಮ ಜ್ಞಾನ ಮತ್ತು ಅನುಭವಗಳೆರಡನ್ನೂ 'ಜ್ಞಾನಸಿಂಧು'ವಿನ ಮೂಲಕ ಧಾರೆಯೆರೆದ ಚಿದಾನಂದಾವಧೂತರ ಸಾಧನೆ ಮಹತ್ತರವಾದುದು. ಇದು ಬೃಹತ್ ಕಾವ್ಯವಷ್ಟೇ ಅಲ್ಲದೆ ಮಹತ್ ಕಾವ್ಯವೂ ಆಗಿದೆ.

ನಿಜಬೋಧೆಯ ಅಧ್ಯಾಯದಲ್ಲಿ "ಸುಧೆಗೆ ಜೇಣೆಂಬಂತೆ ಹರಿವಾನದಿಗೆ ಹೊಳೆಯೆಂಬಂತೆ ಕೈಯಣಗುದಿಗೆ ಡೋಣ್ಣೆಯೆಂಬಂತೆ ಮುದುಕಗೆ ವೃದ್ಧಾನೆಂಬಂತೆ. ಪಕ್ಷಿಗೆಯು ಹಕ್ಕಿಂಬ ತೆರದಲಿ ಕುಕ್ಷಿಗೆಯು ಹೊಟ್ಟೆಂಬ ತೆರದಲಿ ಇಕ್ಷುಯು ಕಬ್ಬೆಂಬ ತೆರದಲಿ........ ತೃಣಕೆ ಕಡ್ಡಿಯುಯೆಂಬ ಹಾಗೇ ಗಣಕೆ ಸಮೂಹವು ಎಂಬ ಹಾಗೇ ಕ್ಷಣಕೆ ನಿಮಿಷವುಯೆಂಬ ಹಾಗೆ........ಸತ್ತಿಗೆ ಛತ್ರೆಂದು ಕರೆವರು ಕತ್ತಿಗೇ ಖಡ್ಗೆಂದು ಕರೆವರು ಮೃತ್ತಿಕೆಗೆ ಮಣ್ಣೆಂದು ಕರೆವರು........ನಾರಿಗೆಯು ಸ್ತ್ರೀಯೆಂಬ ಸಾಕ್ಷಿಯು ಶೂರಗೆಯು ವೀರೆಂಬ ಪರಿಯಾ ಮಾರನಿಗೆ ಮದನೆಂಬ ತೆರದಲಿ[೧೪] ದೃಷ್ಟಾಂತವೆಂಬು ನಿಘಂಟನ್ನೇ ಕೊಟ್ಟಿದ್ದಾನೆ.

"ವಾಚ ಹೀನರಿಗನ್ಯತರಿಗೆ ಸಂಕೋಚ ಚಿತ್ತರಿಗಲ್ಪಗುಣ ದುರ್ನೀಚ ದುರ್ಗೋಷ್ಠಿಗಳಿಗತಿ ಹಾರತಿ ಕಲುಷರಿಂಗೆ ಕೂಚಮಾರಿಗಳಿಂಗೆ ಸಂಕರ ಬೂಚ ಮಾಡುವರಿಗೆಯು ನೀಚವ ಊಚ ಮಾಡುವರಿಗೆಯಿದು ತಾ ಯೋಗ್ಯವಲ್ಲ"[೧೫] 'ಜ್ಞಾನಸಿಂಧು' ಎಂದು ಎಚ್ಚರಿಸಿದ್ದಾನೆ.

"ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಚಿದಾನಂದ ಗುರುವರ್ಯ ಚರಣ ಪದ್ಮದ್ವಿರೇಫ ಶ್ರೀ ಚಿದಾನಂದಾವಧೂತ ವಿರಚಿತ ಜ್ಞಾನಸಿಂಧು ಗ್ರಂಥದಲ್ಲಿ ಶಾಸ್ತ್ರೋಪಸಂಹಾರವೆಂಬ ಅಷ್ಟಚತ್ವಾರಿಂ ಶೋಧ್ಯಾಯ ಸಪೂರ್ಣಂ" ಎಂಬ ಗದ್ಯ ಅಂತ್ಯದಲ್ಲಿ ಬಂದಿದೆ.

ಚಿದಾನಂದಾವಧೂತ ನಿಜಕ್ಕೂ ಕನ್ನಡ ಸಾಹಿತ್ಯದಲ್ಲಿ ಚಿರವಾಗಿ ನಿಲ್ಲಬಲ್ಲ ತಾತ್ವಿಕ, ದಾರ್ಶನಿಕರು ಎಂದು ಹೇಳಬಹುದು.[೧೬]

ಅಡಿಟಿಪ್ಪಣಿಗಳು

೧. ಕನ್ನಡ ನಿಘಂಟು. ಸಂಪುಟ ೧ ಪುಟ ೪೪೫.
೨. ದೇಪೀಮಹಾತ್ಮೆ ೧–೧.
೩. ಜ್ಞಾನಸಿಂಧು ೨–೧೯ ವಿ. ಸೂ. ಹಂಪಿಯ ಹತ್ತಿರ ಅಯೋಧ್ಯೆಯೆಂದಿದೆ. ಅದುವೆ ಚಿದಾನಂದರ ಸ್ಥಾನ.
೪. ಅನುಭವಾಮೃತ ೧
೫. ಜ್ಞಾನಸಿಂಧು ಸೂಚನಾಪದ್ಯ.
೬. ಜ್ಞಾನಸಿಂಧು ೧–೫.
೭. —ಅದೇ— ೪೮–೪.
೮. —ಅದೇ— ೧–೩೨.
೯. —ಅದೇ— ೧–೩೮.
೧೦. —ಅದೇ— ೩–೫೭.
೧೧. —ಅದೇ— ೨೬–೨೭.
೧೨. —ಅದೇ— ೨೬–೨೮.
೧೩. —ಅದೇ— ೧–೨೫.
೧೪. —ಅದೇ— ೮–೧೩೯ ರಿಂದ ೧೪೨.
೧೫. —ಅದೇ— ೩೪–೭೪.
೧೬. ಕನ್ನಡ ಸಾಹಿತ್ಯ ಪರಿಚಯ ತಾಯಿನಾಡು ೧೯–೭–೧೯೬೪.

ಸರ್ಪಭೂಷಣರ ತತ್ತ್ವಪದಗಳಲ್ಲಿ ನೀತಿ

—ಬಿ. ಸಿ. ವೀರಪ್ಪ

೧೯ನೆಯ ಶತಮಾನದ ಆದಿ ಭಾಗದಲ್ಲಿದ್ದ ಶ್ರೀ ಸರ್ಪಭೂಷಣ ಶಿವಯೋಗಿಗಳ ಏಕೈಕ ಕನ್ನಡದ ಕೃತಿ 'ಕೈವಲ್ಯ ಕಲ್ಪವಲ್ಲರಿ'. ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ'ಯನ್ನು ಅನುಸರಿಸಿ ರಚಿತವಾದ ದೇಶೀಯ ಹಾಡುಗಬ್ಬವಿದು. ಸಂಗೀತ ಪ್ರಾಧಾನ್ಯವುಳ್ಳ ತತ್ತ್ವಪದಗಳ ಈ ಗ್ರಂಥದಲ್ಲಿ ಐದು ಸ್ಥಲಗಳಿವೆ.[೧] ಇವುಗಳಲ್ಲಿ ಪ್ರಮುಖವಾಗಿ 'ನೀತಿ ಕ್ರಿಯಾಚರ್ಯ ಪ್ರತಿಪಾದನಾ ಸ್ಥಲ'ವನ್ನು ಮಾತ್ರ ಆಧಾರವಾಗಿಟ್ಟುಕೊಂಡು ಪ್ರಸ್ತುತ ಲೇಖನವನ್ನು ವಿವೇಚಿಸಲಾಗಿದೆ.

ಪ್ರಪಂಚದ ಯಾವುದೇ ಧರ್ಮಗಳನ್ನು ಪರಿಶೀಲಿಸಿದಾಗ್ಯೂ ಈ ಧರ್ಮ ಮತ್ತು ನೀತಿ ಪರಸ್ಪರ ಅವಿಭಾಜ್ಯ ಅಂಗಗಳಾಗಿ ಹೊಂದಾಣಿಕೆ ಸಾಧಿಸಿವೆ. 'ದಯವಿಲ್ಲದ ಧರ್ಮದಾವುದಯ್ಯಾ?' ಎಂಬ ಬಸವಣ್ಣನ ಮಾತಿನಂತೆ ಧರ್ಮದ ಅಂತಃಸತ್ವ 'ದಯೆ' ಎಂಬುದು ಸ್ಪಷ್ಟ. ಇಂತಹ ದಯಾಭಾವವೆ 'ನೀತಿ'. ಕನ್ನಡ ನಿಘಂಟುಕಾರರು ನೀತಿಯನ್ನು ಕುರಿತು "ಅದೊಂದು ಬಗೆಯ ಮಾರ್ಗದರ್ಶನ, ಒಳ್ಳೆಯ ನಡತೆ, ಸಚ್ಚಾರಿತ್ರ್ಯ, ಶಿಷ್ಟಾಚಾರ,",[೨] ಇತ್ಯಾದಿ ಮಾತುಗಳಿಂದ ಅರ್ಥೈಸಿದ್ದಾರೆ. ಹಾಗಾಗಿ ನೀತಿಯು ಒಂದು ನಿಯಮಾನುಸರಣೆಗೆ ಒಳಪಟ್ಟ ನೈತಿಕ ತಿಳುವಳಿಕೆಯೆ ಸರಿ. ಕನ್ನಡದ ಪ್ರಸಿದ್ಧ ಗಾದೆ 'ನೀತಿಯುಳ್ಳವನ ಮನೆ ದೀಪದಲ್ಲಿ ಜಾತಿಭೇದವುಂಟೆ' ಎಂಬಂತೆ ನೀತಿ ಎಂಬ ಮಾತು ಜಾತ್ಯಾತೀತ, ಧರ್ಮಾತೀತ ಕಲ್ಪನೆಗಳನ್ನುಳ್ಳದ್ದು.

ಧರ್ಮದ ನಿಜವಾದ ತಳಹದಿ ನೀತಿ. ವಿಶ್ವದ ಎಲ್ಲಾ ಧರ್ಮಗಳೂ ಹಾಗೂ ದಾರ್ಶನಿಕರೂ ತಮ್ಮ ಧಾರ್ಮಿಕ ತತ್ತ್ವ ಪ್ರತಿಪಾದನೆಗೆ ನೀತಿಯನ್ನು ಪ್ರಧಾನ ಮಾಧ್ಯಮವನ್ನಾಗಿ ಬಳಸಿಕೊಂಡಿದ್ದಾರೆ. ಬುದ್ಧನ ಬೋಧನೆಗಳಿರಲಿ, ಜೈನರ ತತ್ತ್ವಗಳಿರಲಿ, ಬಸವಾದಿ ಶರಣರ ಆಚಾರ ಸಂಹಿತೆಗಳಿರಲಿ ಎಲ್ಲವೂ ಈ ನೈತಿಕ ನೆಲೆಗಟ್ಟಿನಿಂದ ಹೊರತಾಗೇನಿಲ್ಲ. ಒಟ್ಟಾರೆ ಮನುಕುಲದ ಒಳಿತಿಗಾಗಿ ಸಮಾಜದ ಹಿತಚಿಂತನೆಗೋಸ್ಕರವೇ ರೂಪುಗೊಂಡ ದಾಸರು, ಶರಣರು, ಜೈನರು ಇತ್ಯಾದಿ ಯಾವುದೇ ಪಂಥಗಳ ಒಳತಿರುಳು, ನೀತಿಯೆ ಸರಿ. ಹೀಗಾಗಿ ನೀತಿಯು ಈ ಪ್ರಪಂಚದಲ್ಲಿ ಮನುಜ ಕುಲದ ಇತಿಹಾಸದಷ್ಟೇ ಪ್ರಾಚೀನ ಕಲ್ಪನೆಯುಳ್ಳದ್ದು ಎಂಬ ಮಾತು ಸತ್ಯ. ಪ್ರಸ್ತುತ ಹಿನ್ನೆಲೆಯಲ್ಲಿ ವೀರಶೈವ ಮತ ತತ್ತ್ವ ಪರಂಪರೆಯಲ್ಲಿ ವಚನಕಾರರ ನಂತರ ಅನೇಕ ಪುರಾಣ ಪ್ರತಿಪಾದಕರು ಆಗಿಹೋಗಿದ್ದಾರೆ. ಇವರೆಲ್ಲರಿಗೂ ಭಿನ್ನನೆಲೆಯಲ್ಲಿ ನಿಂತ ಮತ

ಪ್ರವರ್ತಕರೂ, ವಾಗ್ಗೇಯಕಾರರೂ ಆಗಿದ್ದ ಶಿವಯೋಗಿ ತ್ರಯರಃ ಸ್ಥಾನ ಅವಿಸ್ಮರಣೀಯ ವಾದದ್ದು.

ಕನ್ನಡ ಸಾಹಿತ್ಯ ಶರಧಿಯಲ್ಲಿ ಧಾರ್ಮಿಕ ಜಾಗೃತಿಯ ಹಿನ್ನೆಲೆಯಿಂದ ಜನ ಸಾಮಾನ್ಯರ ನಾಡಿಯನ್ನು ಮಿಡಿಯಿಸಿದ ಪ್ರಥಮ ಕೀರ್ತಿ ವಚನಕಾರರಿಗೆ ಸಲ್ಲತಕ್ಕದ್ದು. ಆನಂತರ ಇದೇ ಕೆಲಸವನ್ನು ಮುಂದುವರೆಸಿದ ದಾಸ ಪರಂಪರೆಯ ದಾರ್ಶನಿಕರು ತಮ್ಮದೇ ಆದ ವಿಶಿಷ್ಟ ತತ್ತ್ವಪದ ಪ್ರಯೋಗಗಳಿಗೆ ಹೆಸರಾಗಿ ಗಮನಾರ್ಹರೆನಿಸಿದರು. ಈ ಉಭಯ ತತ್ತ್ವಪ್ರವರ್ತಕರುಗಳ ಮೂಲ ಉದ್ದೇಶ ಧಾರ್ಮಿಕ ಹಾಗೂ ಸಾಮಾಜಿಕ ಪರಿವರ್ತನೆಯಾಗಿತ್ತಾದರೂ, ನೈತಿಕ ಮೌಲ್ಯಗಳೇ ಮೂಲಸೂತ್ರಗಳಾಗಿದ್ದುವು ಎಂಬುದನ್ನು ಮರೆಯುವಂತಿಲ್ಲ. ಮುಂದೆ ೧೮ ಮತ್ತು ೧೯ನೆಯ ಶತಮಾನಗಳ ಆಸು-ಪಾಸಿನಲ್ಲಿ ಇಂಥದೇ ಪರಂಪರೆಯನ್ನು ತಮ್ಮ ತತ್ತ್ವಪದಗಳ ಮೂಲಕ ಮುಂದುವರೆಸಿದ ಶಿವಯೋಗಿ ತ್ರಯರಲ್ಲಿ ಒಬ್ಬರಾದ ಸರ್ಪಭೂಷಣ ಶಿವಯೋಗಿಗಳ ಸಾಧನೆ ಅದ್ವಿತೀಯ. ಸ್ವತಃ ವಾಗ್ಗೇಯಕಾರರೂ, ಕನ್ನಡ-ಸಂಸ್ಕೃತ ಪಾಂಡಿತ್ಯವುಳ್ಳವರೂ, ಅನುಭಾವಿಗಳೂ ಸಿದ್ಧವರೇಣ್ಯರೂ ಆಗಿದ್ದ, ಸರ್ಪಭೂಷಣರ ತತ್ತ್ವಪದಗಳು, ಕೇವಲ ಸಂಗೀತ ಪ್ರಾಧಾನ್ಯವುಳ್ಳವು ಮಾತ್ರವಲ್ಲ: ಧಾರ್ಮಿಕ ನೆಲೆಗಟ್ಟಿನ ಅಂತಶ್ಶಿಸ್ತಿನೊಳಗೆ ರೂಪುಗೊಂಡ ಮಾರ್ಗದರ್ಶಕ ನೀತಿ ಸೂತ್ರಗಳೂ ಆಗಿವೆ.

ಸರ್ಪಭೂಷಣರ ಕೈವಲ್ಯ ಕಲ್ಪವಲ್ಲರಿಯ ನೀತಿ ಕ್ರಿಯಾಚರ್ಯ ಪ್ರತಿಪಾದನಾ ಸ್ಥಲದಲ್ಲಿ ಒಟ್ಟು ೨೫ ಪದ್ಯಗಳಿವೆ. ಪ್ರಸ್ತುತ ಲೇಖನದ ವಿಶ್ಲೇಷಣೆಯ ದೃಷ್ಟಿಯಿಂದ ಇವುಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

೧) ಪೌರಾಣಿಕ ದೃಷ್ಟಾಂತಗಳ ಹಿನ್ನೆಲೆಯುಳ್ಳ ನೀತಿ ಪದಗಳು.
೨) ಪ್ರಾಪಂಚಿಕ ವ್ಯವಹಾರಗಳ ಹಿನ್ನೆಲೆಯುಳ್ಳ ನೀತಿ ಪದಗಳು.
೩) ಗುಣಾವಗುಣ ನಿರ್ಣಯದ ಹಿನ್ನೆಲೆಯುಳ್ಳ ನೀತಿ ಪದಗಳು.
೪) ಪರಮಾರ್ಥ ಹಿತಚಿಂತನೆಯ ಹಿನ್ನೆಲೆಯುಳ್ಳ ನೀತಿಪದಗಳು.

ಮುಂದೆ ಈ ವರ್ಗೀಕೃತ ಪಟ್ಟಿಗೆ ಒಳಪಡಿಸಿರುವ ಪದ್ಯಗಳು ಮೇಲು ನೋಟಕ್ಕೆ ಪರಸ್ಪರ ಪೂರಕಾಂಶಗಳಿಂದ ಒಳಗೊಂಡವಾಗಿ ಕಂಡರೂ ಕೂಡ, ಅವುಗಳ ವಸ್ತುವಿನ್ಯಾಸದ ಹಿನ್ನೆಲೆಯಿಂದ ಹಾಗೂ ಕವಿ ಮನೋಭಾವಕ್ಕೆ ಅನುಗುಣವಾಗಿ ಇಂತಹ ಕ್ರಮ ಅಧ್ಯಯನ ಯೋಗ್ಯ.

೧. ಪೌರಾಣಿಕ (ದೃಷ್ಟಾಂತಗಳ) ಹಿನ್ನೆಲೆಯುಳ್ಳ ತತ್ತ್ವ (ನೀತಿ) ಪದಗಳು

ನೀತಿ ಕ್ರಿಯಾಚರ್ಯ ಪ್ರತಿಪಾದನಾಸ್ಥಲದಲ್ಲಿ ಬರುವ ಸುಮಾರು ಆರು ಪದ್ಯಗಳ ಪ್ರಮುಖ ವಸ್ತು ಪೌರಾಣಿಕ ಸಂಗತಿಗಳ ಮೂಲಕ ನೀತಿ ಪ್ರತಿಪಾದನೆ ಮಾಡುವುದು. ಇಲ್ಲಿ ಬರುವ ಕಥನಾತ್ಮಕ ಸಂಗತಿಗಳು ಆಯಾ ವ್ಯಕ್ತಿಗಳ ನೈತಿಕ ಔನ್ನತ್ಯದ ಪ್ರತೀಕ ಗಳಾಗಿವೆ. ಧರ್ಮಾತೀತ ವ್ಯಕ್ತಿಗಳ, ಗುಣಾತೀತ ವ್ಯಕ್ತಿತ್ವದ ಪ್ರತಿಬಿಂಬ ಈ ತತ್ವಪದ

ಗಳಿಲ್ಲಿವೆ. ಇಲ್ಲಿ ಪ್ರಮುಖವಾಗಿ 'ನಂಬುನಂಬೆಲೆ ಮನವೆ'....(೩-೩)* ಎಂಬ ಪದ್ಯದಲ್ಲಿ ಪರಭಕ್ತಿಯ ಭರದಿಂದ, ಮರಳ ಲಿಂಗವನೊದೆದ ತಂದೆಯ ಶಿರವನ್ನೇ ಹರಿದ ಚಂಡೇಶ; ಧಾನ್ಯವನ್ನು ಅಳೆಯುವ ಬಳ್ಳವನ್ನೇ ಶಿವಲಿಂಗವನ್ನಾಗಿ ಪೂಜಿಸಿದ ಬಳ್ಳೇಶ; ಪರವೆ ನಾಚಿಯ ಕುಚವನ್ನೇ ಶಿವಲಿಂಗವನ್ನಾಗಿ ಅರ್ಚಿಸಿದ ಸೌಂದರ ನಂಬಿ ಹಾಗೂ ಸಿಟ್ಟಾದ ಗುರು ಕೈಗಿಟ್ಟ ಕಲ್ಲನ್ನೇ ಪರಶಿವನೆಂದು ಆರಾಧಿಸಿದ ಉರಿಲಿಂಗ ಪೆದ್ದಿ, ಇವರ ದೃಷ್ಟಾಂತ ಗಳಿವೆ. ಇಲ್ಲಿ ಒಬ್ಬ ಪ್ರಮಥನೂ ಸೇರಿದಂತೆ, ಮೂವರು ಪುರಾತನರುಗಳ ಭಕ್ತಿ ಸಂಘರ್ಷದ ಚಿತ್ರಣಗಳನ್ನು ಕೊಡುವ ಕವಿ, ದುಂಬಿಯಿಂದ ಹಿಡಿಯಲ್ಪಟ್ಟ ಹುಳು ಅದನ್ನೇ ನೋಡಿ ನೋಡಿ ತಾನೂ ದುಂಬಿಯಾದಂತೆ; ಪರಶಿವನ ವಿಭಿನ್ನ ಕುರುಹುಗಳನ್ನು ಹಿಡಿದ ಭಕ್ತರು ತಾವೂ ಪರಶಿವರಾಗುವರು ಎಂಬ ದರ್ಶನ ನೀತಿಯನ್ನು ಎತ್ತಿಹಿಡಿದಿದ್ದಾರೆ.

'ನಿನ್ನ ಗುಣಗಳ ನೀನೆನುತಿಸಿ....,' (೩-೨೨) ಎಂಬ ಈ ಪದ್ಯದಲ್ಲಿ ಅತಿರಥ ಮಹಾರಥರ ಅದ್ವಿತೀಯ ಸಾಧನೆಗಳನ್ನೇ ಅರಿಯದ ಕ್ಷುದ್ರ ಮಾನವರು ತಮ್ಮದೇ ಕ್ಷುಲ್ಲಕ ಹೆಗ್ಗಳಿಕೆಗಳಿಂದ ಬೀಗುವ ರೀತಿಯನ್ನು ಪ್ರಶ್ನಿಸಲಾಗಿದೆ. ಇಲ್ಲಿ 'ತ್ರಿಲೋಕ ವೀರನ ಕೀರ್ತಿ, ಬಲ ಭೀಮನ ಶೌರ್ಯ, ಧರ್ಮರಾಯನ ದಯೆ, ಕರ್ಣನ ದಾನಶೀಲ ಗುಣ ಶ್ರೀರಾಮಚಂದ್ರನ ಪರಾಕ್ರಮ, ಸತ್ಯಹರಿಶ್ಚಂದ್ರನ ಸತ್ಯನಿಷ್ಠೆ ಇಂತಹ ಮಹಾನ್ ಸದ್ಗುಣಗಳ ಆದರ್ಶ, ಕೇವಲ ನರರಿಗೆ ಸಾಧ್ಯವೆ?' ಇದ್ದಿರಬಹುದಾದ ಕಿಂಚಿತ್ ಗುಣಗಳಿಗೆಲ್ಲಾ ನನಗಿನ್ನಾರು ಸಮನೆಂದು ಮೆರೆಯುವ ಮಂದಮತಿಗಳಿಗೆ ಇದೊಂದು ಆದರ್ಶ ನೀತಿಪಾಠ. ಇಲ್ಲಿ ಮೇಲಿನ ಪದ್ಯ ಶಿವಭಕ್ತರ ಸದ್ಭಕ್ತಿಯ ಪ್ರತೀಕವಾದರೆ ಇನ್ನೊಂದು ಅತಿರಥರ ಅತಿಶಯ ಕೀರ್ತಿಗೆ ಪ್ರತಿಬಿಂಬವಾಗಿದೆ.

ಈ ವಿಭಾಗಕ್ಕೆ ಬರುವ ಇನ್ನುಳಿದ ನಾಲ್ಕೂ ಪದ್ಯಗಳಲ್ಲೂ ಹೆಚ್ಚು ಕಡಿಮೆ ಒಂದೇ ಬಗೆಯ ಸಮಾನ ಮನೋಧರ್ಮವಿರುವುದನ್ನು ನಾವು ಸುಲಭವಾಗಿ ಗುರುತಿಸಬಹುದು. ಕಾರಣ ಇವುಗಳೆಲ್ಲ ಒಂದು ಬಗೆಯ ದೈವ ನಿಯಮವನ್ನು ಅಥವಾ ವಿಧಿಲಿಖಿತವನ್ನು ಅಳಿಸುವವರುಂಟೆ ಎಂಬ ಪ್ರಶ್ನಾತೀತ ಸಂಗತಿಗಳನ್ನು ಪ್ರತಿಪಾದಿಸುವ ಪದ್ಯಗಳಾಗಿವೆ.

ಮೊದಲು 'ನರರು ಪ್ರಾರಬ್ಧವನೆ ಗೆಲ್ಲಬಲ್ಲರೆ....' (೩-೧೫). ಈ ಪದ್ಯದಲ್ಲಿ ಸನಾತನ ಭಾರತೀಯ ಪುರಾಣ ಪರಂಪರೆಯೊಳಗೆ ಬರುವ, ಪರೀಕ್ಷಿತರಾಜನ ಸಾವು, ಶೂದ್ರಕನ ದುರ್ಮರಣ, ಕಾಳಿಂಗಭೂಪನ ಪ್ರಾಣಹರಣ, ದಶಮುಖನ (ಸೀತಾಮುಖ ದಿಂದ) ಕೇಡು, ಈ ತೆರನಾದ ಹರನಾಜ್ಞೆಯ ಸಂದಿಗ್ಧತೆಗಳನ್ನು ಮೀರುವರುಂಟೆ ಎಂಬ ತತ್ತ್ವವಿಲ್ಲಿದೆ. ಇದೇ ಗತಿಯಲ್ಲಿ ಮುಂದುವರೆಯುವ ಇನ್ನೊಂದು ಪದ್ಯ 'ಬರಲುಳ್ಳ ದುಃಖವನು ಮೀರಲಾರಿಂದಹುದು....' (೩-೨೩). ಇಲ್ಲಿಯೂ ಕೂಡ ಶ್ರೀ ಹರಿಯು ಭೃಗುಮಹರ್ಷಿಯ ಕೊಲ್ಲಬೇಕೆಂದಿದ್ದನೇ? ಮನ್ಮಥನು ಉಮಾಪತಿಯ ತಪೋಭಂಗ ಗೊಳಿಸಲೆಳ್ಚಿಸಿದ್ದನೇ? ದೇವಾನುದೇವತೆಗಳು ದಕ್ಷನ ಯಜ್ಞಕ್ಕೆ ಹೋಗಬಯಸಿದ್ದರೇ?

ಬಲಿಚಕ್ರವರ್ತಿಯು, ದಾನ ಸಮಯಕ್ಕೆ ಗುರು ಶುಕ್ರಾಚಾರ್ಯ ಕಣ್ಣು ಕಳೆದುಕೊಳ್ಳ ಬಯಸಿದ್ದನೇ? ಹೀಗೆ ಸುರಾಸುರರಾದಿಯಾಗಿ ಯಾರೂ ವಿಧಿಯ ದುರ್ವಿಪಾಕದಿಂದ ವಿಮುಕ್ತರಾಗಲಾರರು ಎಂಬ ನೀತಿ ಇಲ್ಲಿದೆ.

'ಸುಖವಳಿದು ಕಷ್ಟವಾಯ್ತೆಂದಳಲದಿರು....' (೩-೭) ಎಂಬ ಈ ಪದ್ಯದಲ್ಲಿ ಅಖಂಡ ಭೂಮಂಡಲದ ಒಡೆಯನೆನಿಸಿದ್ದ ಹರಿಶ್ಚಂದ್ರ ಕೊನೆಗೆ ಹೊಲೆಯನ ಆಳಾದದ್ದು; ಹದಿನಾರುಸಾವಿರ ನಾರಿಯರ ಗಂಡ, ಅರವತ್ತುಸಹಸ್ರ ಮಕ್ಕಳನ್ನುಳ್ಳ ಭೋಗಾಧಿಪತಿ ಶ್ರೀಕೃಷ್ಣ ಕೊನೆಗೆ ಕಾಡಡವಿಯ ಗಿಡದಡಿ ಪ್ರಾಣಬಿಟ್ಟದ್ದು; ಅಷ್ಟೈಶ್ವರ್ಯಗಳ ಅಧಿಪತಿ ಯಾಗಿದ್ದ ನಳಮಹಾರಾಜ ಕೊನೆಗೆ ಸರ್ವಸ್ವವನ್ನೂ ಕಳೆದುಕೊಂಡದ್ದು; ಪಂಚ ಪಾಂಡವರು ದಾಯಾದಿ ಮತ್ಸರದಿಂದ ಭಿಕ್ಷಾಪಾತ್ರೆಯನ್ನಿಡಿದು ವನವಾಸಗಳನ್ನು ಅನುಭವಿ ಸಿದ್ದು, ಹೀಗೆ ಅರಸೊತ್ತಿನ ಉಪ್ಪರಿಗೆಯ ಅಂತಸ್ತಿನಲ್ಲಿದ್ದವರಿಗೂ ದೌರ್ಭಾಗ್ಯದ ವಿಧಿ ಬಿಡದೆ ಕಾಡಿರುವಾಗ ಹುಲುನರರ ಪಾಡಿನ್ನೆಂತು ಎಂಬ ವಿಸ್ಮಯಕರ ಸತ್ಯಸಂಗತಿಯನ್ನು ವಿವರಿಸಲಾಗಿದೆ. ಇದೇ ವಿಭಾಗದಲ್ಲಿ ಬರತಕ್ಕ ಕೊನೆಯ ಪದ್ಯವಾಗಿ 'ಸುರನರೋರುಗ ನೆಲ್ಲರ ತಿಕ್ಕಿನೆಕ್ಕಿದೆ....'(೩-೯). ಇಲ್ಲೂ ಕೂಡ ಮೇಲಿನಂತೆಯೇ ಪೌರಾಣಿಕ ಹಿನ್ನೆಲೆಯ ಕಠುವಾಸ್ತವ ಸಂಗತಿಗಳ ಪ್ರತಿಪಾದನೆ ಮುಂದುವರೆಯುತ್ತದೆ. ಪಾಪಿ ವಿಧಿಯಿಂದಾಗಿ ಹರಿ ಹಂದಿಯ ಬಸುರಿಂದ ಬರಬೇಕಾಯ್ತು, ಬ್ರಹ್ಮ ತನ್ನ ಪಂಚತಲೆಗಳಲ್ಲಿ ಒಂದನ್ನು ತೆರಬೇಕಾಯ್ತು, ಅಹಲ್ಯಾ ಶಾಪನಿಮಿತ್ತ ಇಂದ್ರನ ಮೈ ಸಹಸ್ರಯೋನಿಯಾಯ್ತು, ಮನ್ಮಥನ ದೇಹ ಫಾಲಾಕ್ಷನ ಉರಿಗಣ್ಣಿಂದ ಬೂದಿಯಾಯ್ತು, ದೇವದಾನವರ ಕೈಗೆ ಆದಿಶೇಷ ಹಗ್ಗವಾಗಬೇಕಾಯ್ತು, ಹೀಗೆ ಮುಂದುವರೆಯುವ ಈ ಪದ್ಯ ಜಗನ್ನಿಯಾಮಕನ ಚಿತ್ರವಿಚಿತ್ರ ಲೀಲೆಗಳು ಸುರನರರಾದಿಯಾಗಿ ಸಕಲರನ್ನೂ ಮಥನಗೊಳಿಸುವುದೆಂಬ ತತ್ತ್ವವನ್ನು ಸಾರುತ್ತದೆ. ಒಟ್ಟಾರೆ ಪೌರಾಣಿಕ ಹಿನ್ನೆಲೆಯುಳ್ಳ ಎಲ್ಲಾ ಪದ್ಯಗಳಲ್ಲೂ ಎದ್ದುಕಾಣುವ ಮುಖ್ಯ ತತ್ತ್ವ ಒಂದೆ. ಈ ಜಗತ್ತು ಸುಖ-ದುಃಖಗಳ ಆಗರ. ಯಾರಿಗೂ ಯಾವುದೂ ಶಾಶ್ವತವಲ್ಲ. ಹರಿ-ಹರ-ಬ್ರಹ್ಮಾದಿಗಳಾದಿಯಾಗಿ ಹುಲು ಮಾನವರವರೆಗೆ ವಿಧಿಲಿಖಿತ, ದೈವಲೀಲೆ ಎಲ್ಲರನ್ನೂ ಜಾಲಾಡಿಯೇ ತೀರೀತು ಎಂಬ ಮಾರ್ಮಿಕ ನೀತಿಯನ್ನು ಸಾರುವುದೆ ಕವಿಗಳ ಆಶಯ.

೨. ಪ್ರಾಪಂಚಿಕ ವ್ಯವಹಾರಗಳ ಹಿನ್ನೆಲೆಯುಳ್ಳ ನೀತಿ ಪದಗಳು

ಪ್ರಸ್ತುತ ವಿಭಾಗಕ್ಕೆ ಸಂಬಂಧಪಟ್ಟಂತೆ ಸಮಾನ ಸಂಗತಿಗಳನ್ನು ಒಳಗೊಂಡ ಆರು ಪದ್ಯಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಇಲ್ಲಿ ಬರುವ ಪದ್ಯಗಳಲ್ಲಿ ಸಾಮಾನ್ಯವಾಗಿ ಎದ್ದುಕಾಣುವ ಅಂಶ ಪ್ರಾಪಂಚಿಕ ವ್ಯಾಮೋಹಿಗಳ ತೊಳಲಾಟ. ಮೊದಲಿಗೆ 'ಶಶಿಕಲಾಧರ ನಿನ್ನ ವಿಕೃತಿ....' (೩-೨). ಈ ಪದ್ಯದಲ್ಲಿ ಸಕಲ ಮಾನವರಿಗೂ ಪ್ರಿಯವಾದ ಇಂದ್ರಿಯ ತೃಷೆಗಳನ್ನು ತಣಿಸುವ ಚಿತ್ರದ ಮೂಲಕವೇ ಅಷ್ಟೇ ನೈಜವಾಗಿ

ಪರಮಾತ್ಮನ ಅನುಸಂಧಾನವನ್ನು ಹೇಗೆ ಸಾಧಿಸಿಕೊಳ್ಳಬಹುದೆಂಬ ಸರಳ ಸತ್ಯವನ್ನು ಎತ್ತಿ ತೋರಲಾಗಿದೆ. ಇಂತಹುದೇ ರೀತಿಯಲ್ಲಿ ಇಂದ್ರಿಯಗಳ ಮೇಲಿನ ಹತೋಟಿಯಿಂದ ಭಕ್ತನಾದವನು ಶಿವಾನುಭವ ಜ್ಞಾನವನ್ನು ಹೇಗೆ ಸಂಪಾದಿಸಬಹುದು ಎಂಬುದಕ್ಕೆ 'ಬೇಡಿಕೊಂಬುವೆನಭವ ನಿನ್ನಂಘ್ರಿಯನು....'(೩-೪) ಎಂಬ ಪದ್ಯ ಉತ್ತಮ ಉದಾಹರಣೆ ಯಾಗಿದೆ. ಈ ಎರಡೂ ಪದ್ಯಗಳ ತತ್ತ್ವ ಪ್ರತಿಪಾದನೆಯ ಮೂಲ ಮಾಧ್ಯಮ ಪಂಚೇಂದ್ರಿಯಗಳೇ ಆದರೂ, ಅವುಗಳ ಹಿಂದಿರುವ ನೀತಿ ಬೋಧನೆಯ ವೈಕರಿ ವಿಶಿಷ್ಟ ವಾದುದಾಗಿದೆ. ಇಹ-ಪರಗಳೆರಡರ ಸಮನ್ವಯ ಸಾಧನೆಗೂ ಈ ಇಂದ್ರಿಯಗಳೇ ಹೇಗೆ ನೆರವಾಗಬಲ್ಲುವೆಂಬ ಸರಳ ನೀತಿಯನ್ನು ಕವಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ.

'ಕರಣ ಮೂರರಲ್ಲಿಯೂ ಕೊಟ್ಟಂತು....' (೩-೧೧) ಎಂಬ ಈ ಪದ್ಯದಲ್ಲಿ ಭಕ್ತ ನಾದವ ತನ್ನ ತ್ರಿಕರಣಗಳಾದ ದೇಹ, ಮಾತು, ಮನಸ್ಸು ಇವುಗಳ ಮೂಲಕ ಸದಾ ಪರಶಿವನೊಲುಮೆಗೆ ಹೇಗೆ ಸಾಧನೆಗೈಯಬಹುದು ಎಂಬ ನೀತಿ ಇಲ್ಲಿದೆ. ಮಾನವರಿಗೆ ಸಹಜ ದೈಹಿಕ ಪ್ರಕ್ರಿಯೆಗಳಾದ ಹಸಿವು, ತೃಷೆ, ನಿದ್ರೆ, ನೀರಡಿಕೆ ಇವು ಎಷ್ಟು ಮುಖ್ಯವೋ ಹಾಗೆಯೆ ಭಕ್ತಿ, ಜ್ಞಾನ, ವೈರಾಗ್ಯ, ಜಪ-ತಪಗಳೂ ಅಷ್ಟೇ ಪ್ರಮುಖವಾದವು ಎಂಬ ತತ್ತ್ವಪ್ರತಿಪಾದನೆ ಇಲ್ಲಿದೆ. ಇವೇ ಪ್ರತಿಪಾದನೆಯ ತಂತುಗಳನ್ನು ಹಿಡಿದು ಮುನ್ನಡೆ ಯುವ ಇನ್ನೊಂದು ಪದ್ಯ 'ಮುಕ್ತಿರಾಜ್ಯವ ಸೆರೆ ಸೂರೆಮಾಡಿದ....' (೩-೧೮). ಇಲ್ಲಿ ಮುಕ್ತಿಸಾಮ್ರಾಜ್ಯವನ್ನು ಸೂರೆಗೊಳ್ಳಬೇಕಾದರೆ ಇಹಲೋಕದ ಬದುಕಿನಲ್ಲಿ ರೂಢಿಸಿ ಕೊಳ್ಳಬೇಕಾದ ಸುಜ್ಞಾನ, ದಯೆ, ಶಾಂತಿ, ಶೀಲ ಇತ್ಯಾದಿ ಗುಣಗಳನ್ನು ಒಳಗೊಂಡ ತ್ರಿಕರಣ ಶುದ್ಧಿಗಳೆಂಬ ಸೇನಾಸನ್ನದ್ಧತೆಯಿರಬೇಕು. ವ್ಯಕ್ತಿಯ ಇಂದ್ರಿಯಗಳು ಅತೀಂದ್ರಿಯ ವಾಗಿ ವರ್ತಿಸಬೇಕಾದ ಯೋಗಸಾಧನೆಯ ಪ್ರತಿಪಾದನ ತತ್ತ್ವ ಇಲ್ಲಿನ ಮುಖ್ಯವಸ್ತು. ಮುಂದಿನ, 'ಇಂದು ನಾಳೆಯು ಎನ್ನದೀಗಲೆ....' (೩-೨೪) ಈ ಪದ್ಯವು ಮೇಲಿನ ಎಲ್ಲ ಸಾಧನೆಗಳು ಕೇವಲ ಸಮಾಲೋಚನೆಯಲ್ಲೆ ಪರ್ಯವಸಾನವಾಗುವುದು ಬೇಡ. 'ನಾಳೆ ಬಪ್ಪುದು ನಮಗಿಂದೇ ಬರಲಿ' ಎಂಬಂತೆ ಸಂಸಾರದೊಳಗೆ ಮೇಲೆರಗಿ ಬರುವ ಎಲ್ಲಾ ಚಾಂಚಲ್ಯ-ವಾಂಚಲ್ಯಗಳನ್ನೂ ಅಂಕಿತದಲ್ಲಿ ಇರಿಸಿಕೊಂಡು 'ತ್ಯಾಗ-ಭೋಗಗಳ ಸವ ಯೋಗ' ಸಮನ್ವಯವನ್ನು ಆದಷ್ಟು ಶೀಘ್ರವಾಗಿ ರೂಢಿಸಿಕೊಳ್ಳಬೇಕೆಂಬ ನೀತಿ ಇಲ್ಲಿದೆ. ಇಹ-ಪರಗಳ ಸಾರ್ಥಕ ಬದುಕಿಗಾಗಿ ವ್ಯಕ್ತಿಯ ಸಾಧನೆ ಮುಖ್ಯ ಎಂಬ ತತ್ತ್ವಗಳನ್ನು ಸಾರುವ ಮಾಲಿಕೆಯ ಕೊನೆಯ ಪದ್ಯ 'ಕಾಯ ಕಾಂತಾರವ ಹೊಕ್ಕು....' (೩-೨೫). ಮೇಲಿನ ಎಲ್ಲಾ ಪದ್ಯಗಳ ಸತ್ವಗಳಿಗೆ ಕಳಸವಿಟ್ಟಂತೆ ಇಲ್ಲಿ ದೇಹವೆಂಬ ಗೊಂಡಾರಣ್ಯದಲ್ಲಿ ಅಡಗಿರುವ ಮಾಯಾ ಮೋಹದ ಮೃಗಗಳಂತಿರುವ ಅರಿಷಡ್ವರ್ಗ, ಅಷ್ಟಮದ, ಇಂದ್ರಿಯ ಚಾಪಲ್ಯ ಇತ್ಯಾದಿಗಳನ್ನು ಅರಿವೆಂಬ ಆಯುಧದಿಂದ ನಿಗ್ರಹಿಸಿ ಸುಕೃತಿಯನ್ನು ಪಡೆಯಬೇಕೆಂಬ ನೀತಿ ಮನನೀಯವಾಗಿದೆ. ಈ ದಿಸೆಯಲ್ಲಿ ಬಂದಿರುವ ಎಲ್ಲಾ ಪದ್ಯಗಳ ಮುಖ್ಯ ತತ್ತ್ವ ಕಾಯ ವಿಕಾರಗಳನ್ನು ಅಳಿಯುವುದೆ ಆಗಿದೆ.

೩. ಗುಣಾವಗುಣ ನಿರ್ಣಯದ ಹಿನ್ನೆಲೆಯುಳ್ಳ ನೀತಿ ಪದಗಳು

ನೀತಿ ಕ್ರಿಯಾಚರ್ಯೆ ಪ್ರತಿಪಾದನಾ ಸ್ಥಲದಲ್ಲಿ ಈ ವಿಭಾಗಕ್ಕೆ ಒಳಪಡುವ ಪದ್ಯಗಳ ಸಂಖ್ಯೆ ಐದು. ಇವುಗಳ ಸಾಮಾನ್ಯ ಲಕ್ಷಣ ಕೇವಲ ಮಾನವನಾಗಿದ್ದವ ಮಹೋನ್ನತಿಯ ಹಂತವನ್ನು ತಲುಪಲಿಕ್ಕಾಗಿ ಮೈಗೂಡಿಸಿಕೊಳ್ಳಬೇಕಾದ ಗುಣಾವ ಗುಣಗಳ ನಿರ್ಣಯ. ಭಕ್ತನಾದವ ತನ್ನ ಇಹಲೋಕದ ಬದುಕಿನುದ್ದಕ್ಕೂ ಅನುಸರಿಸಿದ ರೀತಿ–ನೀತಿ, ನಡೆ-ನುಡಿ, ಆಚಾರ-ವಿಚಾರ ಇತ್ಯಾದಿ ಅಂಶಗಳ ತೌಲನಿಕ ವಿವೇಚನೆ ಈ ಪದ್ಯಗಳ ಮುಖ್ಯ ತಿರುಳು. ಮೊದಲನೆಯದಾಗಿ, 'ಜ್ಞಾನಿಯೊತ್ತಿನಲ್ಲಿ ದುಃಸಂಸಾರಿ ಇದ್ದರೂ....' (೩–೧). ಈ ಪದ್ಯ ದುರ್ಗುಣಿಗಳಾದವರು ಸುಜ್ಞಾನಿಗಳ ನೆರಳಲ್ಲಿದ್ದರೂ ತಮ್ಮ ದುರ್ಗುಣ ಬಿಡಲಾರರೆಂಬುದಕ್ಕೆ ಉತ್ತಮ ಪ್ರತೀಕವಾಗಿದೆ. ಪ್ರಕೃತಿಜನ್ಯವಾದ ಕಮಲದ ಮಧುವನ್ನು ದುಂಬಿ ಸವಿಯಬಲ್ಲುದೇ ಹೊರತು, ಕೊಳದೊಳಗಿನ ಕಪ್ಪೆಗೆ ಸಾಧ್ಯವೆ. ಇಂತಹ ಉಪಮೆಗಳಿಂದ ಸಜ್ಜನ–ದುರ್ಜನರುಗಳ ಸಾದೃಶ ಅಂತರಗಳನ್ನು ಎತ್ತಿತೋರಿಸುವ ಪ್ರಾಕೃತಿಕ ದೃಷ್ಟಾಂತದ ಏಕೈಕ ಪದ್ಯವಿದು. 'ಎಲೆ ಮಗನೇ ಬಾ ನಿತ್ಯ ಮುಕ್ತಿ....' (೩–೫). ಈ ಪದ್ಯದಲ್ಲಿ ಚಿರನೂತನವಾದ ಚಿರಂತನವಾದ ಮುಕ್ತಿ ಸಂಪದವನ್ನು ಪಡೆಯಬೇಕಾದರೆ ಅಗತ್ಯವಾದ ಸಾಧಕ ಸದ್ಗುಣಗಳನ್ನು ಅನುಕ್ರಮವಾಗಿ ವಿವರಿಸಲಾಗಿದೆ ಈ ಸಂಸಾರದ ನಡುವೆ ಹುಟ್ಟಿದಾರಭ್ಯ ಅಂತಿಮ ಬದುಕಿನವರೆಗೆ, ಸದ್ಗತಿಯನ್ನು ಪಡೆಯಲಿಕ್ಕಾಗಿ ಪರಿಪಾಲಿಸಬೇಕಾದ ಸತ್‌ಚಾರಿತ್ರ್ಯಗಳ ಸುನೀತಿಗಳಿಲ್ಲಿವೆ. ಇದೊಂದು ಉಪದೇಶಾತ್ಮಕ ನೀತಿಬೋಧನೆಯ ಪದ್ಯವಾಗಿದ್ದು ಹಿಂದಿನ ಪದ್ಯಕ್ಕಿಂತ ಭಿನ್ನವಾಗಿದೆ. ಮೇಲಿನ ಈ ಎರಡೂ ಪದ್ಯಗಳಿಗೂ ಭಿನ್ನವಾದದ್ದು 'ಎನ್ನಯ ಕರಣ ತ್ರಯಗಳ....' (೩–೬). ಇಲ್ಲಿ ಜನ್ಮಜನ್ಮಾಂತರಗಳ ಪಾಪ ಕರ್ಮಗಳನ್ನು ತೊಳೆದು ಸದ್ಬುದ್ಧಿಯನ್ನು ಕೊಟ್ಟು ಕಾಪಾಡುವಂತೆ ಪರಶಿವನಲ್ಲಿ ಮೊರೆಯಿಡಲಾಗಿದೆ. ಇಹ–ಪರ ಗಳೆರಡರ ಸಾಮರಸ್ಯ ಸಾಧನೆಗೆ ಪೂರಕವಾದ ಸಾತ್ವಿಕ ಚಿಂತನೆಯ ನೀತಿ ಇಲ್ಲಿನ ಮುಖ್ಯ ತತ್ತ್ವ. ಇದೇ ಜಾಡಿನಲ್ಲಿ ಮುನ್ನಡೆಯುವ ಮತ್ತೊಂದು ಪದ್ಯ 'ಏಕೆ ಯಾತ್ರೆಯ ಮಾಡತಿರ್ಪರಲ್ಲೇನಿಹುದು....' (೩–೧೭). ಇಲ್ಲಿ ಪ್ರಮುಖವಾಗಿ ಸ್ವರ್ಗ–ನರಕ, ಪಾಪ–ಪುಣ್ಯಗಳ ಕಲ್ಪನೆ ನಮ್ಮೊಳಗೇ ಇರುವ ಪಾದ ಕಾರಣ ಯೋಗಿಗಳಾದವರಿಗೆ ಯಾತ್ರೆ–ಜಾತ್ರೆಗಳ ಗೊಂದಲ ಕೇವಲ ಆಡಂಬರ. ದುರ್ಗುಣಗಳಿಂದ ದೂರವಾಗಿ ಅಂತರಂಗ-ಬಹಿರಂಗಗಳ ಶುದ್ಧಿಯನ್ನು ಸಾಧಿಸಿದರೆ ಸದ್ಗತಿ ಖಂಡಿತವೆಂಬ ನೀತಿ ಇಲ್ಲಿ ನಿರ್ಣಾಯಕವಾಗಿದೆ.

ಹೀಗೆ ಹರಿದು ಬರುವ ಗುಣಾವಗುಣಗಳ ನಿರ್ಣಯವು 'ಅಧಿಕವಹಸಕಲ ಗುಣಗಳ ನಿಲ್ಲಿ ವರ್ಣಿಸುವೆ....' (೩–೧೯) ಎಂಬ ಪದ್ಯದೊಂದಿಗೆ ಅಂತ್ಯಗೊಳ್ಳುತ್ತದೆ. ಈ ಪದ್ಯದಲ್ಲಿ ಸದ್ಗತಿಗೆ ಪೂರಕವಾದ ಅತ್ಯುತ್ಕೃಷ್ಟ ಸಕಲ ಸದ್ಗುಣಗಳ ಪಟ್ಟಿಯನ್ನೇ ಮಾಡ ಲಾಗಿದೆ. ವ್ಯಕ್ತಿ ತನ್ನ ತ್ರಿಕರಣಪೂರ್ವಕವಾಗಿ ಈ ಪ್ರಾಪಂಚಿಕ ಬಂಧನಗಳನ್ನು ಜಯಿಸಿ

ದಾಗ ಶಕ್ತಿಯಾಗುತ್ತಾನೆ. ಇಂತಹ ಸಮಷ್ಟಿ ಪ್ರಜ್ಞೆಯ ಸಾಕ್ಷಾತ್ಕಾರ ಸ್ವರೂಪದ ಸಿದ್ಧಿಗೆ ಪೋಷಕವಾದ ನೀತಿಸೂತ್ರಗಳು ಇಲ್ಲಿವೆ.

೪. ಪರಮಾರ್ಥ ಹಿತಚಿಂತನೆಯ ಹಿನ್ನೆಲೆಯುಳ್ಳ ನೀತಿ ಪದಗಳು

ಈ ವಿಭಾಗಕ್ರಮಕ್ಕೆ ಒಳಪಡುವ ಏಳು ಪದ್ಯಗಳ ಮುಖ್ಯ ತಿರುಳು ಪರಮಾರ್ಥ ಚಿಂತನೆಯೆ ಆಗಿದೆ. ನರ ಹರನಾಗಬಯಸಿದಾಗ ತನ್ನ ಸಂಸ್ಕಾರ ಬಲದಿಂದ ಐಹಿಕ ಬಂಧನಗಳನ್ನೆಲ್ಲಾ ಕಡಿದು, ಪಾರಮಾರ್ಥಿಕ ಪದವಿಯನ್ನು ಹೇಗೆ ಸಂಪಾದಿಸಬಲ್ಲನೆಂಬ ತತ್ತ್ವ ಪ್ರತಿಪಾದನೆ ಇಲ್ಲಿದೆ. 'ಬಿಡು ಬಾಹ್ಯದೊಳು ಡಂಬವ....' (೩-೮) ಎಂದು ಆರಂಭವಾಗುವ ಈ ಪದ್ಯದಲ್ಲಿ ಮರುಳ ಮನುಜಾ ಒಣಹೆಮ್ಮೆ, ಪ್ರತಿಷ್ಠೆ ಅಹಂಕಾರ ಗಳನ್ನು ಬದಿಗಿರಿಸಿ ಶಿವಸಂಕಥಾ ಚಿಂತಿತನಾಗೆಂದು ಸಂಬೋಧಿಸಲಾಗಿದೆ. ಜನ ಮೆಚ್ಚಿಸು ವುದಕ್ಕಿಂತ ಮನ ಮೆಚ್ಚುವಂತೆ ನಡೆಯಬೇಕು, ಅಂತರ್ಮುಖ, ಬಹಿರ್ಮುಖಗಳ ಸಮನ್ವಯವಾಗಬೇಕು, ಇಹ-ಪರಗಳ ಸಾರ್ಥಕ ಸಿದ್ಧಿಗೈಯಬೇಕು, ಆಗ ಮಾತ್ರ ಪರಮಾರ್ಥ ಪದವಿಗೆ ಯೋಗ್ಯರೆಂಬ ತತ್ತ್ವವಿಲ್ಲಿದೆ.

'ದ್ವೈತ ಭಾವವಳಿಯಿತೆಂದು....,' (೩-೧೦) ಎಂಬ ಈ ಪದ್ಯದಲ್ಲೂ ಕೂಡ ಭಕ್ತ, ಮಾಹೇಶ್ವರನಾಗಬೇಕಾದರೆ ಬರಿ ಬಾಯಿಮಾತಿನ ಬೊಬ್ಬೆಯಷ್ಟೇ ಸಾಲದು; ವ್ಯಕ್ತಿಯ ತನು-ಮನ-ಧನಗಳ ವ್ಯಾಮೋಹಗಳು ಅಳಿಯಬೇಕು. ಭ್ರಾಂತಿ-ಭ್ರಮೆ ಗಳನ್ನು ತೊರೆಯಬೇಕು, ಕ್ಷಮೆ-ದಮೆಗಳನ್ನು ಧರಿಸಿ, ಕಾಯ, ವಿಕಾರಗಳಿಂದ ಮುಕ್ತರಾಗ ಬೇಕು. ಸ್ತುತಿ-ನಿಂದೆಗಳಿಂದ ಹೊರತಾಗಿ ವೇದಾತೀತ ಪರಮೋನ್ನತಿಯನ್ನು ಸಾಧಿಸುವುದೆ ಪಾರಮಾರ್ಥಿಕ ಬದುಕಿನ ಸೋಪಾನಗಳು ಎಂಬುದಾಗಿ ಸಾರುವ ನೀತಿಯಿಲ್ಲಿದೆ. ಇಂಥವೇ ಭಾವನೆಗಳನ್ನು ಉಳ್ಳ ಇನ್ನೊಂದು ಪದ್ಯ 'ಏತಕ್ಕೆ ಚಿಂತೆಯನು ಮಾಡುವಿ ಮೂಢ....,' (೩-೧೨). ಈ ಪ್ರಪಂಚದಲ್ಲಿ ಹುಟ್ಟಿ ಕೇವಲ ಜೀವನಕ್ಕಾಗಿ ಚಿಂತಿಸುವುದು ವ್ಯರ್ಥ. ಸಕಲವನ್ನೂ ಸೃಷ್ಟಿಸಿದ ಪರಮೇಶ್ವರನ ಕೆಲಸವದು. ಈ ಸಂಸಾರಿಕ ಭವ ಬಂಧನಗಳ ಭಾರದಿಂದ ತೊಳಲಾಡುವ ಗೋಜಲು ಕೇವಲ ಪರಶಿವನಿರವನ್ನು ಅರಿಯದ ಮೂಢಾತ್ಮರಿಗೇ ಹೊರತು, ಶಿವಸಾಯುಜ್ಯವನ್ನು ಅರಿತವರಿಗಲ್ಲ. ಪಶುಪಕ್ಷಿಗಳಿಗೆ ಇಲ್ಲದ ಚಿಂತೆ ಸೃಷ್ಟಿ ಸಮಷ್ಟಿಯ ನಡುವೆ ಇವನೊಬ್ಬನಿಗೆ ಏಕೆ? ಇದೇ ದಾಟಿಯಲ್ಲಿ ಮುಂದು ವರೆಯುವ 'ಗುಣಗಳೆ ಭೂಷಣವಲ್ಲದೆ....' (೩-೧೩) ಈ ಪದ್ಯದಲ್ಲಿ ಕೇವಲ ವ್ಯಾಮೋಹಿ ಮಾನವರು ಸಕಲ ಸಮೃದ್ಧಮಯ ಜೀವನಕ್ಕಾಗಿ ಏಣಗಾಡುವುದು ಸತ್ಕರ್ಮವಲ್ಲ; ಬರಿಯ ಡಂಬಾಚಾರಗಳಿಂದ ಸದ್ಗತಿ ಸಲ್ಲದು. ಸತ್ಯ, ಧರ್ಮ, ಅಹಿಂಸಾ ಪರಿಪಾಲನೆ ಗಳಿಂದ ಮಾತ್ರ ಇಹ-ಪರಗಳೆರಡರಲ್ಲೂ ಸದ್ಗತಿ ದೊರೆಕೀತು ಎಂಬ ಪಾರಮಾರ್ಥಿಕ ಚಿಂತನೆ ಮುಂದುವರೆಯುತ್ತದೆ.

ಮುಂದಿನ 'ಬರಿದೆ ಸಿರಿಯನು ಬಯಸಿ....' (೩-೧೪) ಮತ್ತು 'ಮರವೆಯಂಶವನೆಲ್ಲ

ತೊಡೆದು........,' (೩-೨೦), ಈ ಎರಡೂ ಪದ್ಯಗಳೂ ಮೇಲಿನ ತತ್ತ್ವಗಳಿಗೆ ಭಿನ್ನವಾಗೇನಿಲ್ಲ. ಆದರೆ 'ನಾಳೆ ಬಪ್ಪುದು ನಮಗಿಂದೇ ಬರಲಿ' ಎಂಬ ಶರಣತತ್ತ್ವಕ್ಕೆ ಹೊರತಾದ ನಿಲುವು ಇಲ್ಲಿದೆ. ಜನ್ಮ ಜನ್ಮಾಂತರಗಳ ಸುಕೃತಿಯ ಫಲಾಫಲಗಳನ್ನು ಗಣಿಸಲಾಗಿದೆ. ಬಡತನ-ಸಿರಿತನಗಳ ಭ್ರಾಂತಿಯರಿದು, ಸಕಲ ಜೀವರಲ್ಲೂ ದಯೆಯುಳ್ಳವರಾಗಿ, ಆಶೆ-ಆಮಿಷ-ರೋಷಗಳಿಂದ ಮುಕ್ತರಾಗಿ, ಮರಣವೂ ಮಹಾನವಮಿ ಎಂದು ಪರಿಭಾವಿಸುವಷ್ಟು ಶಾಸ್ತ್ರ ಚಿಂತಕರಾಗಬೇಕು ಎಂಬ ಪರಮಾರ್ಥತತ್ತ್ವ ಪ್ರತಿಪಾದನೆ ಈ ಪದ್ಯಗಳಲ್ಲಿದೆ.

'ಶರೀರವೆಂಬುವ ಹೊಲನ........,' (೩-೨೧), ಈ ಪದ್ಯ ಪರಮಾರ್ಥ ಹಿತ ಚಿಂತನೆಯಲ್ಲಿ ಕೊನೆಯದು. ನಮ್ಮ ಶರೀರವೆಂಬ ಹೊಲವನ್ನು ಕಲ್ಮಶಗಳ ಕಸ ತೆಗೆದು ಸ್ವಚ್ಛಗೊಳಿಸಿ ಮೋಕ್ಷಸಿದ್ಧಿ ಎಂಬ ಬೆಳೆಯನ್ನು ಬೆಳೆದುಣ್ಣಿರಿ ಎಂಬ ಸಾತ್ವಿಕ ರೂಪದ ಆತ್ಮಸಾಕ್ಷಾತ್ಕಾರದ ಪರಮೋಚ್ಚ ನೀತಿ ಇಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. ಇಂದ್ರಿಯ ನಿಗ್ರಹ, ನಿರ್ಮಲ ಮನಸ್ಸು, ಇವುಗಳನ್ನೇ ವ್ಯವಸಾಯೋಪಕರಣಗಳನ್ನಾಗಿಸಿ, ವ್ಯಾಮೋಹಗಳೆಂಬ ಗರಿಕೆ ಕಿತ್ತು, ಚಿತ್ತಸ್ವಾಸ್ಥ್ಯವೆಂಬ ಗೊಬ್ಬರವ ಹಾಕಿ, ಮೋಕ್ಷದ ಬೆಳೆಯನ್ನು ಬೆಳೆದುಣ್ಣಬೇಕಾಗಿದೆ. ಗುರುಮುಖದ ಉಪದೇಶ ಬೀಜವನ್ನು ಬಿತ್ತಿ, ಜ್ಞಾನ ಸಂಸ್ಕಾರದ ಮಳೆಯನ್ನು ಹನಿಯಿಸಿ, ಅರಿವೆಂಬ ಪೈರನ್ನು ನೆಟ್ಟು, ಪಾಪದ ಕಳೆಯನ್ನು ಕಿತ್ತು, ವೈರಾಗ್ಯದ ಬೆಳೆಯನ್ನು ಬೆಳೆದುಣ್ಣ ಬೇಕಾಗಿದೆ. ಶಾಶ್ವತವಾದ ಮೋಕ್ಷವೆಂಬ ಧಾನ್ಯಗಳನ್ನು ಬೆಳೆದು, ಚಿರಶಾಂತಿಯಲೆ ತಣಿದು ಪರಶಿವನ ಪಾದ ಪದ್ಮಗಳಿಗೆ ಶಿರಬಾಗಿ ಪರತತ್ತ್ವದ ಬೆಳೆಯನ್ನು ಬೆಳೆದುಣ್ಣ ಬೇಕಾಗಿದೆ. ಹೀಗೆ ಲೌಕಿಕ ಬದುಕಿನ ನಡುವೆಯೂ ಪರಮಾರ್ಥ ಸಿದ್ಧಿಯ ಭೂಮಿಕೆಯನ್ನು ಹೇಗೆ ರೂಪಿಸಿಕೊಳ್ಳಬೇಕೆಂಬ ಶಿವಯೋಗಿಗಳವರ ಈ ಪರತತ್ತ್ವದ ವಿಚಾರ ಅನುಭವಜನ್ಯವೂ ವಿಚಾರಪೂರ್ಣವೂ ಆಗಿದೆ.

ಕೊನೆಯದಾಗಿ ಈ ಮೇಲಿನ ನಾಲ್ಕೂ ವರ್ಗಗಳಿಗೆ ಹೊರತಾದ ಒಂದು ಒಗಟಿನ ರೂಪದ ಪದ್ಯವಿದೆ. 'ಎಂಥ ಸೋಜಿಗವಾಯಿತೆಲೆ........,' (೩-೧೬). ಎಂಬ ಈ ಪದ್ಯ ಸಂಪೂರ್ಣ ಸೋಜಿಗಮಯ ಸಂಗತಿಗಳಿಂದಲೇ ತುಂಬಿದೆ. ಇಲ್ಲಿ ಪ್ರಾಣಿ ಪ್ರಪಂಚದ ಕೌತುಕಮಯ ಅಸಂಗತ ಸಂಗತಿಗಳನ್ನು ಹೇಳತೊಡಗುತ್ತಾ, ಅಂತಿಮ ಹಂತದಲ್ಲಿ ಸಕಲ ಸೃಷ್ಟಿಯ ವೈಚಿತ್ರ್ಯಕಾರನ ಗಾರುಡಿಗ ನೀತಿಯನ್ನು ಸಾರುವುದು ಒಂದು ವಿಶೇಷವಾಗಿದೆ.

ಕೆಲವು ವಚನಗಳೊಂದಿಗೆ ಹೋಲಿಕೆ

ಸರ್ಪಭೂಷಣರು ಸಾಕಷ್ಟು ವಿಚಾರಗಳಲ್ಲಿ ವಚನಕಾರರಿಂದ ಪ್ರಭಾವಿತರಾಗಿರಬೇಕು. ಪುನರ್ಜನ್ಮ, ಹೆಣ್ಣು ಇತ್ಯಾದಿ ಸೈದ್ಧಾಂತಿಕ ವಿಚಾರಗಳಲ್ಲಿ ವಚನಕಾರರಗಿಂತ

ವಿರುದ್ಧ ಮನೋಭಾವವುಳ್ಳವರಾಗಿರುವುದನ್ನು ಒಂದೆರಡು ಕಡೆ ಗುರುತಿಸಬಹುದು. ಆದರೆ ಇವರೀರ್ವರ ತತ್ತ್ವನಿರೂಪಣಾ ಕ್ರಮದಲ್ಲಿ ಅನೇಕ ಸಾಮ್ಯತೆಗಳು ಎದ್ದು ಕಾಣುವುದನ್ನು ನಾವು ಮರೆಯುವಂತಿಲ್ಲ. ಸರ್ಪಭೂಷಣರ ಈ ನೀತಿ ಕ್ರಿಯಾಚರ್ಯೆ ಪ್ರತಿಪಾದನಾ ಸ್ಥಲದ ಕೆಲವೊಂದು ಚರಣಗಳೊಂದಿಗೆ ಕೆಲವೇ ಪ್ರಮುಖ ವಚನಕಾರರ ವಚನಗಳನ್ನು ಸಂವಾದಿಯಾಗಿಟ್ಟು ಮುಂದೆ ಪರಿಶೀಲಿಸಲಾಗಿದೆ.

ಮೊದಲಿಗೆ ಸರ್ಪಭೂಷಣರ–

"ಬೇಡಿಕೊಂಬುವೆನಭವ........
ಮನದೊಳು ನಿನ್ನ ಸಂಸ್ಮರಣೆಯನು ನಾಲಗೆಯ
ಕೊನೆಯಲ್ಲಿ ಪಂಚಾಕ್ಷರಿಯನೆ ನುಡಿವುದನು|
ತನುವಿನೊಳು ನಿನ್ನ ಸೇವೆಯ ಮಾಳ್ಪುದನು ಕಿವಿಯೊ
ಳನು ದಿನವು ಪ್ರಣವನಾದವನೆ ಕೇಳ್ವುದನು........"(೩–೪).

ಈ ಪದ್ಯಕ್ಕೆ ಸಂವಾದಿಯಾಗಿ ಬಸವಣ್ಣನವರ–

"ವಚನದಲ್ಲಿ ನಾಮಾಮೃತ ತುಂಬಿ,
ನಯನದಲಿ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಕಿವಿಯಲ್ಲಿ ಕೀರುತಿ ತುಂಬಿ,........" ಈ ವಚನ ಹೆಚ್ಚು
ಹೊಂದಾಣಿಕೆಯುಳ್ಳದ್ದಾಗಿದೆ. ಇದೇ ರೀತಿ ಸಕಲೇಶ ಮಾದರಸನ

ಒಂದು ವಚನ–"ಸರವರದ ಮಂಡೂಕನು ತಾವರೆಯನೆಳಲ ಸಾರಿದಡೆ
ಪರಿಮಳವದಕೆ ಅಯ್ಯಾ?
ಆಆಆ ಅರಿಯಬಾರದು ಪರಿಮಳವದಕೆ ಅಯ್ಯಾ,
ಆಆಆ ಅರಿಯಬಾರದು ಮದಾಳಿಗಲ್ಲದೆ........" ಇದನ್ನು

ಸರ್ಪಭೂಷಣರ–ದೂರದಿಂದೈತಂದು ತುಂಬಿ ಪದ್ಮಗರ್ಭದ| ಪುಷ್ಪ–
ಸಾರವನೀಂಟಿ ಸುಖಿಸಿ ಪೋಗಲದರ ನೆರೆಳೊಳೆ
ಸೇರಿಕೊಂಡು ದರ್ದುಶಂ ತನ್ಮಧುವರಿಯದೆ| ಪೊಂಡ
ನೀರಗುಡಿದು ಕಾಲವನ್ನು ಕಳೆಯುವಂದದಿ......." ಈ

ತತ್ತ್ವಪದದೊಂದಿಗೆ ಸಮಾನ ಗುಣಧರ್ಮಗಳ ಹಿನ್ನೆಲೆಯಲ್ಲಿ ಗುರುತಿಸಬಹುದು. ಎರಡೂ ಕಡೆಯು ಪ್ರಕೃತಿ ಜನ್ಯವಾದ ಸೃಷ್ಟಿಯ ವೈಪರೀತ್ಯ ನೀತಿಗಳನ್ನು ಪ್ರತಿಪಾದಿಸಲಾಗಿದೆ. ಕೊನೆಯದಾಗಿ ಅಲ್ಲಮಪ್ರಭುವಿನ ಒಂದು ವಚನ–

"ತನುವ ತೋಂಟವ ಮಾಡಿ ಮನವಗುದ್ದಲಿಮಾಡಿ,
ಅಗೆದು ಕಳೆದೆನಯ್ಯಾ,

ಭ್ರಾಂತಿಯಃ ಬೇರ ಒಡೆದು, ಸಂಸಾರದ ಹೆಂಟೆ ಬಡಿದು,
ಬಿತ್ತಿದೆನಯ್ಯಾ ಬ್ರಹ್ಮ ಬೀಜವ........" ಇದಕ್ಕೆ ಸಂವಾದಿಯಾಗಿ

ಸರ್ಪಭೂಷಣರ ಬಹುಜನಪ್ರಿಯವಾದ ಪದ-

"ಶರೀರವೆಂಬ ಹೊಲನ ಹಸನಮಾಡಿ,
ಪರತತ್ತ್ವ ಬೆಳೆಯನೆ ಬೆಳೆದುಣ್ಣಿರೋ||
ಶಮೆದಮೆಯೆಂದೆಂಬುವೆರಡೆತ್ತುಗಳ ಹೂಡಿ,
ವಿಮಲ ಮಾನಸವ ನೇಗಿಲನೆ ಮಾಡಿ........
........, ಗುರುವರನುಪದೇಶವೆಂಬ ಬೀಜವ ಬಿತ್ತಿ........
ದುರಿತ ದುರ್ಗುಣವೆಂಬ ಕಳೆಯು ಕಿತ್ತು
ಸ್ಥಿರಮುಕ್ತಿಯೆಂದೆಂಬ........" ಇದು ಇವೆರಡರ ನಡುವಿನ ಸದ್ಭಕ್ತರ

ಸಾಧನೆಯು ಸಮಾನ ಹಿತಚಿಂತನೆಗೆ ಉತ್ತಮ ದೃಷ್ಟಾಂತವೆನ್ನಬಹುದು. ಒಟ್ಟಾರೆ ಅನೇಕ ವಚನಗಳ ಛಾಯೆ ಸರ್ಪಭೂಷಣರ ಹಲವಾರು ತತ್ತ್ವಪದಗಳಲ್ಲಿ ಎದ್ದು ಕಾಣುವುದು ಸಹಜ. ಸಮಾನ ಗುಣಧರ್ಮ, ಸಮಾನ ನೀತಿ ಪ್ರತಿಪಾದನೆ, ಪರಮಾರ್ಥಸಾಧನೆಯ ಸಾಮರಸ್ಯ ನಿಲುವು ಇತ್ಯಾದಿ ಅಂಶಗಳ ಹಿನ್ನೆಲೆಯಿಂದ ಹನ್ನೆರಡನೆಯ ಶತಮಾನದ ಶರಣರಿಗೂ ಸರ್ಪಭೂಷಣರಿಗೂ ಪರಸ್ಪರ ಬಹಳಷ್ಟು ಸಾಮೀಪ್ಯವಿರುವುದನ್ನು ಅಲ್ಲಗಳೆಯುವಂತಿಲ್ಲ.

ಪ್ರಸ್ತುತ ಪಿವೇಚನೆಯಿಂದ ಸರ್ಪಭೂಷಣರ ನೀತಿ ನಿರೂಪಣಾ ಕ್ರಮವು ಹರಿದು ಬಂದ ವಿಭಿನ್ನ ಶೈಲಿಯ ಆಂಶಿಕ ಲಕ್ಷಣಗಳು ವಿಸ್ತೃತಗೊಂಡಿದೆ. ತಮ್ಮ ಗೇಯ ಪ್ರಧಾನವಾದ ತತ್ತ್ವಪದಗಳಿಂದ ಆಗಿನ ಬಹುತೇಕ ವರ್ಗದ ಜನಮನವನ್ನು ಸೂರೆಗೊಂಡಿದ್ದ ಶಿವಯೋಗಿಗಳಃ ವೀರಶೈವ ತತ್ತ್ವ ಪರಂಪರೆಗೆ ಅನುಗುಣವಾಗಿ, ಶರಣರ ಪ್ರತೀತಿಗನುಸಾರವಾಗಿ, ನೀತಿ ಬೋಧೆ ನಡೆಸಿದ್ದಾರೆ, ಇದರೊಳಗೆ ಬಹುತೇಕ ಪುರಾಣ ಪ್ರಪಂಚದ ಪ್ರತೀಕಗಳ ಜೊತೆಗೆ, ತಾವು ಸ್ವತಃ ಸಾಧಕರಾಗಿದ್ದು ತಮ್ಮ ಸಿದ್ಧಿಗೆ ನಿಲುಕಿದ ಎಲ್ಲಾ ಉನ್ನತ ವೈಚಾರಿಕ ದೃಷ್ಟಾಂತಗಳನ್ನು ಬಳಸಿರುವುದೇ ಒಂದು ವಿಶೇಷ ಒಟ್ಟಾರೆ ಅವರ ದೇಶ-ಕೋಶಾಧ್ಯಯನಗಳ ಪ್ರತಿಫಲ ರೂಪದ ಸಮಗ್ರ ರೀತಿಯ ನೀತಿ ನಿರೂಪಣಾ ತತ್ತ್ವ ಶರಣಸಾಹಿತ್ಯ ವಲಯದಲ್ಲಿಯೆ ಒಂದು ವಿಶಿಷ್ಟವಾದ ಹಾಗೂ ಅಪೂರ್ವ ಕೊಡುಗೆ. ಈ ಹಿನ್ನೆಲೆಯಲ್ಲಿ ಇವರ ನೀತಿಯುಕ್ತ ತತ್ತ್ವಪದಗಳನ್ನು ಜಂಗಮ ಜಗತ್ತಿನ ಜಾಗೃತಿ ಮಂತ್ರಗಳೆಂದರೂ ಒಪ್ಪುತ್ತದೆ.

ಆಕರ ಗ್ರಂಥಗಳು

೧) ಕೈವಲ್ಯಕಲ್ಪವಲ್ಲರಿ
೨) ಕನ್ನಡ ನಿಘಂಟು ಸಂ. ೫. ಕ.ಸಾ.ಪ.
೩) ಸಕಲ ಪುರಾತನರ ವಚನಗಳು ಭಾಗ ೧, ೨,
೪) ವಚನಧರ್ಮಸಾರ–ಎಂ.ಆರ್. ಶ್ರೀ
೫) ಕರ್ನಾಟಕ ಸಂಸ್ಕೃತಿ ಸಮೀಕ್ಷೆ–ಡಾ. ಎಚ್. ತಿಪ್ಪೇರುದ್ರಸ್ವಾಮಿ.

ಅಡಿ ಟಿಪ್ಪಣಿಗಳು

೧. ೧) ಶಿವಕಾರುಣ್ಯಸ್ಥಲ, ೨) ಜೀವ ಸಂಬೋಧನಾಸ್ಥಲ, ೩) ನೀತಿ ಕ್ರಿಯಾ ಚರ್ಯ ಪ್ರತಿಪಾದನಾಸ್ಥಲ, ೪) ಯೋಗ ಪ್ರತಿಪಾದನಾಸ್ಥಲ, ೫) ಜ್ಞಾನ ಪ್ರತಿಪಾದನಾಸ್ಥಲ.

೨. ಕನ್ನಡ ನಿಘಂಟು–ಸಂ. ೫. ಕ.ಸಾ.ಪ. ಪು. ೪೭೯೬.

೩. ೧) ನಿಜಗುಣ ಶಿವಯೋಗಿಗಳು, ೨) ಸರ್ಪಭೂಷಣ ಶಿವಯೋಗಿಗಳು, ೩) ಬಾಲಲೀಲಮಹಾಂತ ಶಿವಯೋಗಿಗಳು.

೪. ಇಲ್ಲಿ ಬರುವ ಎಲ್ಲಾ ತತ್ತ್ವಪದಗಳನ್ನು ಕೈವಲ್ಯಕಲ್ಪವಲ್ಲರಿಯ ನೀತಿ ಕ್ರಿಯಾ ಚರ್ಯ ಸ್ಥಲದಿಂದ ಆಯ್ದುಕೊಳ್ಳಲಾಗಿದೆ.
(ಸರ್ಪಭೂಷಣರ ಕೈವಲ್ಯಕಲ್ಪವಲ್ಲರಿ. ಲೇಖಕರು ಎಚ್. ಟಿ. ಮಹಾಂತೇಶ ಶಾಸ್ತ್ರಿಗಳು ಪ್ರ. ಪಿ. ಸಿ. ಶಾಬಾದಿಮಠ ಗದಗ ೧೯೭೬)

ಶಿವಾನುಭವ ದರ್ಪಣ

—ಡಾ. ದೇವೇಂದ್ರಕುಮಾರ ಸಿ. ಹಕಾರಿ

ಕನ್ನಡ ಜನಪದ ಪದ್ಯ ಸಾಹಿತ್ಯದ ಮೌಖಿಕ ಪರಂಪರೆಯಿಂದ ಸಂವಹನಗೊಳ್ಳುತ್ತ ಬಂದ ವಿವಿಧ ಛಂದಲಯ ದಾಟಿ ಗತ್ತುಗಳು ಶಿಷ್ಟಪದ ರಚನೆಯು ಅನೇಕ ಕವಿ ಕಾವ್ಯಗಳಿಗೆ ಸೈಗೊಟ್ಟ ಶಿವಮಾರನಿಂದ ಮೊದಲುಗೊಂಡು ಪಂಪ, ಹರಿಹರ, ರಾಘವಾಂಕ ಕುಮಾರ ವ್ಯಾಸ ನಿಜಗುಣ ಸರ್ವಜ್ಞನವರೆಗೆ ಒಂದಲ್ಲ ಒಂದು ರೀತಿಯಿಂದ ಪ್ರೇರಣೆ ನೀಡುತ್ತಲೇ ಬಂದಿವೆ. ಸಂಸ್ಕೃತ ಭಾಷೆಯ ಗಾಢ ಪ್ರಭಾವಕ್ಕೆ ಒಳಗಾಗದೆ–ಕಾವ್ಯಮೀಮಾಂಸೆಯ ಕಟ್ಟು ಕಟ್ಟಳೆಗಳಲ್ಲಿ ಸಿಲುಕಿಕೊಳ್ಳದೆ ಶಿಷ್ಟಪದ ಸಾಹಿತ್ಯದ ವಿಶಿಷ್ಟ ತೊರೆಯೊಂದು ತಾನೇ ತಾನಾಗಿ ಹರಿಯುತ್ತ ಬಂದು, ಕನ್ನಡ ಕಾವ್ಯಗಂಗೆಯ ಉಡಿ ತುಂಬಿತು; ಜನಮನದ ಅಂತರಾಳದಲ್ಲಿ ಪ್ರವಹಿಸಿತು. ಅದೇ ಹಾಡುಗಬ್ಬದ ಪರಂಪರೆ. ನೃಪತುಂಗ ಚಿತ್ತಾಣ, ಬೆದಂಡೆ ಮುಂತಾದ ದೇಸೀಯ ಕಾವ್ಯಪ್ರಕಾರಗಳನ್ನು ವಿವರಿಸುವಾಗ 'ಬಾಜನೆಗಬ್ಬ' ಎನ್ನುವ ಒಂದು ಬಗೆ ಇದ್ದುದಾಗಿ ತಿಳಿಸುತ್ತಾನೆ. ಗಮಕದ ಮೂಲಕ ಕಾವ್ಯವನ್ನು ವಾಚಿಸುವುದು ಅಂದರೆ 'ವಾಚನ ಕಾವ್ಯ' –ಗದ್ಯವಲ್ಲ– ಒಂದು ವಿಶಿಷ್ಟಶೈಲಿಯಲ್ಲಿ ರಾಗಯುಕ್ತವಾಗಿ ಕಾವ್ಯವನ್ನು ಓದುವದು ಮೌಖಿಕ ಪರಂಪರೆಯೇ ಪ್ರಬಲವಾಗಿದ್ದ ಕಾಲದಲ್ಲಿ ಮತ್ತು ಪ್ರತಿಶತ ೯೮, ೯೯ ಅನಕ್ಷರಸ್ಥರಾಗಿದ್ದ ಆ ಕಾಲದಲ್ಲಿ ಶಿಷ್ಟಪದ ಕಾವ್ಯಗಳನ್ನು ಜನತೆಗೆ ಸಂವಹನಗೊಳಿಸಲು ಈ ಬಾಜನೆಗಬ್ಬ ಒಂದು ಸುಲಭ ಮಾಧ್ಯಮವಾಗಿರಬೇಕು. ಕಾಲಾನಂತರ ಸಂಸ್ಕೃತ ಭಾಷೆ ಛಂದಸ್ಸುಗಳ ಪ್ರಭಾವಕ್ಕೆ ಸಿಲುಕಿ ಶಿಷ್ಟ ಕಾವ್ಯ ರಚನೆ ಮತ್ತು ಕಾವ್ಯಾಸ್ವಾದ ಪಂಡಿತ ಮಂಡಲಿ ಮತ್ತು ಆಸ್ಥಾನ ಮನ್ನಣೆಯ ಪರಿಧಿಗೆ ಸೀಮಿತವಾದಾಗ ಆಗ ಸಹಜ ಸುಲಭ ರಚನೆಗಳ ಹಾಡುಗಬ್ಬದ ಪರಂಪರೆ ಮುಂದುವರೆದು ಬಹುಸಂಖ್ಯಾತ ಜನ ಸಾಮಾನ್ಯರ ಮೆಚ್ಚುಗೆ ಪಡೆಯಿತು. ನಿಜಗುಣರಿಂದ ತುಂಬ ಪುಷ್ಟಗೊಂಡು, ವಿವಿಧ ವಿಷಯಗಳನ್ನೂ ಗರ್ಭೀಕರಿಸಿ ಕನ್ನಡ ಹಾಡುಗಬ್ಬದ ರೂಪ ಸ್ವರೂಪಗಳ ಹೆದ್ದಾರಿ ತೆರೆದುಕೊಂಡಾಗ ಅನೇಕರು ಜನಪದ ಛಂದಸ್ಸು ಲಯ ಧಾಟಿಗಳನ್ನು ಗಮನಿಸಿ ಧರ್ಮ, ನೀತಿ, ತತ್ತ್ವ, ಸಾಮಾಜಿಕ ವಿಡಂಬನೆ ಭಕ್ತಿ ಹೀಗೆ ಅನೇಕ ಸಂಗತಿ ಕುರಿತು ಚಿಕ್ಕ ಚಿಕ್ಕ ಕೆಲವೊಮ್ಮೆ ದೀರ್ಘ ಕೃತಿಗಳನ್ನು ರಚಿಸುತ್ತ ಬಂದರು. ನಿಜಗುಣರಿಂದ ಮೊದಲುಗೊಂಡು ಮುಪ್ಪಿನ ಷಡಕ್ಷರಿ ದಾಸರು, ಬಾಲಲೀಲಾ ಮಹಾಂತ ಶಿವಯೋಗಿ ಘನಮಠದಾರ್ಯ, ಕೂಡಲೂರ ಬಸವಲಿಂಗ ಶರಣರು ಹೇರೂರು ವಿರುಪನಗೌಡ ಶಿಶುನಾಳ ಶರೀಪರವರೆಗೆ –ಸರ್ವಜ್ಞನನ್ನೂ ಸೇರಿಸಬಹುದೆಂದು ತೋರುತ್ತದೆ– ಈ ಹಾಡುಗಬ್ಬದ ಪರಂಪರೆಯು ವ್ಯಾಪ್ತಿ. ಅವರಲ್ಲಿ ಒಬ್ಬರಾದ ಮೈಲಾರ ಬಸವಲಿಂಗ ಶರಣರು, ವೀರಶೈವ ಸಿದ್ಧಾಂತವನ್ನು ಸುಲಭೀಕರಿಸಿ ಪರಿಶುದ್ಧ ಆಚಾರಗಳ ಮೂಲಕ

ನಿಜವಾದ ಶರಣನ ಸ್ವರೂಪವನ್ನು ತಿಳಿಸಿಕೊಡುವ ಮತ್ತು ಅನುಭಾವ ಪಥದ ಸೂಕ್ಷ್ಮ ಗಳನ್ನು ವಿವರಿಸುವ ಭಕ್ತ ಕವಿಯಾಗಿದ್ದಾರೆ.

ಇವರ ರಚನೆಗಳಲ್ಲಿ ಹನ್ನೆರಡನೆಯ ಶತಮಾನದ ಶಿವಶರಣರ ವಚನಗಳ ತಾತ್ವಿಕ ತಿರುಳು ಒಡಮೂಡಿರುವುದು ಎದ್ದು ಕಾಣುವ ಅಂಶ.

೨. ಬಸವಲಿಂಗ ಶರಣರು ಅನುಭಾವ ಪಥದ ಪರಿಕಾರರು. ಅವರ ರಚನೆಗಳು, ಶರಣಪಥದ ಯಾತ್ರಿಗೆ ಕೈದೀವಿಗೆಗಳಾಗಿವೆ. ವೀರಶೈವದ ಅಂತರಂಗ ಬಹಿರಂಗ ಸ್ವರೂಪ ಗಳನ್ನು ತಮ್ಮ ಸದ್ ಭಕ್ತಿ ಸದಾಚಾರಗಳಿಂದ ಸ್ವಾಯಗೊಳಿಸಿಕೊಂಡ ಮೈಲಾರ ಶರಣರು, ತಮ್ಮ ಸಮಕಾಲೀನ ಜೀವನದ ಅನೇಕರಿಗೆ ಮಾರ್ಗದರ್ಶನ ಮಾಡಿದ ಮಹಾನುಭಾವರು. ಶರಣಸತಿ ಲಿಂಗಪತಿ ಲಿಂಗಾಂಗ ಸಾಮರಸ್ಯ ಷಟ್ಸ್ಥಲ ಇತ್ಯಾದಿಗಳ ನಿಜದನೆಲೆ ಅರಿತು, ವಾಸ್ತವ ಬದುಕಿನ ಸಾಧನೆಗೆ ಅಗತ್ಯವಾದ ತಾತ್ವಿಕಪ್ರಜ್ಞೆ, ನೈತಿಕಾವಧಾನಗಳನ್ನು ಕಾಪಿಟ್ಟು ಬೋಧಿಸಿದವರು ಅಷ್ಟಾವರಣಗಳ ಬಾಹ್ಯರೂಪಗಳನ್ನು ಸ್ವಸ್ವರೂಪದಲ್ಲಿ ಸಾಕ್ಷಾತ್ಕರಿಸಿಕೊಂಡು ಹರನಿಗಿಂತ ಶರಣ ಅಧಿಕ ಎಂದು ಸಾರಿದ ವಿಚಾರವಾದಿ. ಗುರು, ಲಿಂಗ, ಜಂಗಮ, ಪಾದೋದಕ ಪ್ರಸಾದ ವಿಭೂತಿ, ರುದ್ರಾಕ್ಷಿ ಮಂತ್ರಗಳನ್ನು ಮೈಲಾರ ಬಸವ ಲಿಂಗ ಶರಣರು ವಿವರಿಸುವ ರೀತಿ ಅವರ ಉಜ್ವಲ ಅನುಭಾವಕ್ಕೆ ಸಂಕೇತ.

'ಅರಿವೆ ಗುರುವಾಗಿ ಪ್ರಾಣವೆ ಲಿಂಗವಾಗಿ ಮ
ತ್ತಿರದೆ ಸುಜ್ಞಾನ ಜಂಗಮವಾಗಿ ಬಳಿಕವರ
ಚರಣ ಜಲ ಜಿಹ್ವೆಯೊಳು, ಶೇಷನಾಸಿಕದಲ್ಲಿ ಚಿದ್‌ಭಸಿತತ್ವಕ್ಕಿನಲ್ಲಿ
ಪರಮ ರುದ್ರಾಕ್ಷಿ ನೇತ್ರದಲಿ ಪಂಚಾಕ್ಷರಿಯು
ವರಶ್ರೋತ್ರದಲ್ಲಿಯೀ ಪರಿಯೊಳಷ್ಟಾವರಣ
ಶರಣನೊಳು ಸಂಬಂಧವಾದಂತೆ ಹರನಿಗಿಲ್ಲದರಿಂದ ಶರಣನಧಿಕಂ' ೧

ಭಕ್ತಿಸಾಧಿಸಿದವ ಶರಣ, ಶರಣನನ್ನು ಬಿಟ್ಟು ಶಿವನಿಲ್ಲವಿನ್ನು ಶಿವಶರಣರ ಬೋಧೆಯನ್ನು ಜೀವನಪರ್ಯಂತ ಅನುಸಂಧಾನ ಮಾಡಿದ ಮೈಲಾರ ಶರಣರು ಕಾಣುವ ಅಷ್ಟಾವರಣಗಳ ಅಮೂರ್ತ ರೂಪ ಬಸವಲಿಂಗ ಶರಣರ ಹಿರಿಮೆಯನ್ನು ಎತ್ತಿತೋರಿಸುತ್ತದೆ.

ಅರಿವೇ ಗುರು; ಪ್ರಾಣವೆ ಲಿಂಗ
ಸಜ್ಞಾನ ಅಂದರೆ ಅಹಂಕಾರ ನಿರಸನಗೊಂಡದ್ದು **ಜಂಗಮ**
ಜಿಹ್ವಾ ರಸವೇ **ಪಾದೋದಕ, ಶ್ವಾಸೋಚ್ಛ್ವಾಸ**–ಪರಿಮಳಗಳೇ
ಪ್ರಸಾದ, ಚಿದ್‌ಭಸ್ಮತ್ವಕ್ಕಿನಲ್ಲಿ, ನೇತ್ರ ರುದ್ರಾಕ್ಷಿ
ಶ್ರೋತ್ರ (ಪಂಚಾಕ್ಷರಿ) **ಮಂತ್ರ**

ಶಿವಶರಣರ 'ಅನುಭಾವವೆಂಬುದು ಅಂತರಂಗದ ರತ್ನ ಕಾಣಿರೋ' (ಚೆ.ಬ.) ಎನ್ನುವ **ಮಾತು** ಮೈಲಾರದ ಬಸವಲಿಂಗ ಶರಣರಿಗೆ ಸಹಜವಾಗಿ ಅನ್ವಯಗೊಳ್ಳುವಂಥದು.

ಹಾಡುಗಬ್ಬದ ಪರಂಪರೆಯಲ್ಲಿ, ವೀರಶೈವದ ತಾತ್ವಿಕ ಮತ್ತು ಆಚರಣೆಯ

ಸಂಗತಿಗಳನ್ನು ಮೈಲಾರ ಶರಣರಷ್ಟು ಸರಳ, ನೇರ ಮತ್ತು ಮನವಟ್ಟುಗುವಂತೆ ವಿವರಿಸು ವವರು ವಿರಳ. ಈ ಹಿನ್ನೆಲೆಯಲ್ಲಿ ಅವರ 'ಶಿವಾನು**ಭವದರ್ಪಣ**'ಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಇದರಲ್ಲಿ ೨೦ ರಚನೆಗಳಿದ್ದು, ಷಟ್ಪದಿ, ಚೌಪದಿ, ದ್ವಿಪದಿ ಮತ್ತು ವೃತ್ತ ಮೊದಲಾದ ವಿವಿಧ ಛಂದೋ ರೂಪಗಳು ಬಳಕೆಗೊಂಡಿವೆ ಗಮನಾರ್ಹವಾದ ಮತ್ತೊಂದು ವಿಷಯುವೆಂದರೆ, ಹೆಚ್ಚಿನ ರಚನೆಗಳಿಗೆ ಪಲ್ಲವಿಯಿದ್ದು, ರಾಗದ ಹೆಸರು ಕೂಡ ಸೂಚಿತಗೊಂಡಿರುವುದು. ಇಲ್ಲಿ ನಮೂದಿಸದ ರಾಗಗಳು ಬಸವಲಿಂಗ ಶರಣ ರಿಂದಲೇ ಸೂಚಿತವಾದುದು ಸ್ಪಷ್ಟವಾಗದಿದ್ದರೂ, ಅಂದು ಈ ರಚನೆಗಳನ್ನು ಆಯಾ ರಾಗಗಳಲ್ಲಿ ಹಾಡುತ್ತಿದ್ದರೆನ್ನುವುದು ಸ್ಪಷ್ಟ.

೩. ವೀರಶೈವದಲ್ಲಿ ಗುರುವಿನ ಸ್ಥಾನಕ್ಕೆ ವಿಶೇಷ ಸ್ಥಾನವಿರುವುದನ್ನು ಶಿವಾನು ಭವ ದರ್ಪಣದ ಆರಂಭವ ಅನೇಕ ಪದ್ಯಗಳಲ್ಲಿ ಮೈಲಾರ ಶರಣರು ಎತ್ತಿ ವಿವರಿಸಿದ್ದಾರೆ. ಗುರುಶಿಷ್ಯರ ಹಸ್ತಮಸ್ತಕ ಸಂಯೋಗವಾದ ಬಳಿಕ ವ್ಯಕ್ತಿಯಲ್ಲಿ ಭವದ ಭೌತಿಕ ಭ್ರಮೆ ಗಳು ಕರಗಿ, 'ಗುರುಕರ ಸುಜಾತ'ನೆನ್ನುವ ಹೊಸ ಅರಿವು ಮೂಡುತ್ತದೆ. ಇಷ್ಟಲಿಂಗದ ಆರಾಧನೆಯ ಮೂಲಕ ಅಂತರಂಗದಲ್ಲಿ ಸ್ವಸ್ವರೂಪ ಜ್ಞಾನ ಬೆಳಗುತ್ತದೆ. ಯಾವ ಮಾಯಾ ಮೋಹಗಳಿಗೆ ಸಿಲುಕದಂಥ ಉನ್ನತಶೀಲ ಸಂಪಾದನೆ ಸುಲಭ ಸಾಧ್ಯವಾಗುತ್ತವೆ. ಹಮ್ಮು ಹಾರಿ ಹೋಗಿ, ಅಹಂಕಾರ ನಿರಸನಗೊಂಡ ವಸ್ತುತಾನೆ ಒಂದೆರಡಾದುದು; ಕಾರಣ ಶರಣಸತಿ 'ಲಿಂಗಪತಿ' ಶರಣನ ನುಡಿ ನಡೆಗಳ ಉಸಿರಾಗುತ್ತದೆ. ಗುರುಕರುಣ ಅಪೂರ್ವ. ಆತ ಭಕ್ತರ ಕಲ್ಪತರು, ಮರವೆಯ ಬೇರು ಕಿತ್ತೊಗೆಯುತ್ತಾನೆ. ಶೀಲ ಸಂಪದಗಳನ್ನು ತಿಳಿಸುವ ತಾಯಿಯೇ ಗುರು. ಆತನೇ ಎಲ್ಲದಕ್ಕೂ ಅಧಿಕಾರಿ ಅಷ್ಟಾ ವರಣ, ಪಂಚಾಚಾರ ಷಟ್‌ಸ್ಥಲಗಳ ನೆಲೆ ಬೆಲೆಗಳನ್ನು ಅರುಹಿ ಅಂಗವೆಲ್ಲ ಲಿಂಗವಾಗುವ ಪರಿಬೋಧಿಸುವ ಗುರು ಹರನಿಂದ ಅಧಿಕ ಇತ್ಯಾದಿ ಸಂಗತಿಗಳನ್ನು ತುಂಬ ಸರಳವಾಗಿ ಹೇಳಿ, ಪೌರಾಣಿಕ ಭ್ರಮೆಗಳನ್ನು ಹೋಗಲಾಡಿಸಿ ಆಂತರಿಕ ನಿಷ್ಠೆ, ಚಿತ್ತ ಪರಿಶುದ್ಧಿ ಗಳಿಂದ ಕೂಡಿದ ಶರಣಮಾರ್ಗದ ಹಿರಿಮೆ ವೈಶಿಷ್ಟ್ಯಗಳನ್ನು ವಿವರಿಸುತ್ತಾರೆ.

ಗುರು ಕೊಟ್ಟ ಕಾಯಕ ಎಂಥ ಅಪರೂಪವಾದುದು! ಸದಾ ಎಚ್ಚರದಿಂದ ಬದುಕು ವುದು. ನಿಜದ ಅರಿವಿಗೆ ಹೊರತಾದುದನ್ನು ಮರೆಯುವುದು; ಅದೇ ಸತ್ಯಕಾಯಕ, 'ಅರುವಿನೆಚ್ಚರ ವಿಡಿದನ್ಯವ ಮರೆದುದೆ ಸತ್ಯವಣ್ಣ; ನಡೆದಂತೆ ನುಡಿದುದೆ ಸತ್ಯ. ಕಾಯಕದ ಮೂಲಕ ಕರ್ಮದ ಬಂಧನಗಳನ್ನು ಗೆಲ್ಲುವುದು ಕಾಯಕ. ಮೂರು ಕಂಗಳ ಶಿವನು ಕೂಡ ಇಷ್ಟಲಿಂಗವಿಲ್ಲದಿರೆ ಅವನೆಂಥ ಶಿವ ? ಅಂಥ ಇಷ್ಟಲಿಂಗದ ರಹಸ್ಯ ಬೋಧಿಸುವ ಗುರು ಹರನಿಂದಲಧಿಕ. ಆತ ಪರಮ ಪಾವನ ಬ್ರಹ್ಮಸ್ವರೂಪ–ಆತ ಆಚಾರವೇ ಘನವೆಂದು ಸಾಧಿಸಿ ತೋರಿಸುತ್ತಾನೆ. ಇತ್ಯಾದಿ ನಾನಾ ಪರಿಯಿಂದ ಗುರುಐಕ್ಯ ವೈಶಿಷ್ಟ್ಯಗಳನ್ನು ತಿಳಿಸುತ್ತಾರೆ.

೪. ಗುರುವಿನ ಮಹಿಮೆಯನ್ನು ಸಾರುವ ಬಸವಲಿಂಗ ಶರಣರು ವೀರಶೈವರ ಆಚರಣೆಗಳಲ್ಲಿ ಕಂಡುಬರುವ ಇಬ್ಬಂದಿ ತನಗಳನ್ನು ಖಂಡಿಸುತ್ತಾ ಕಂಡ ಕಂಡ ದೈವಕ್ಕೆ ಎರಗುವ ವ್ಯಕ್ತಿಗೆ 'ಛೀ ಹೆಡ್ಡನೀ ಎಂಥ ಶಿವಭಕ್ತ' ಎಂದು ಜರಿಯುತ್ತಾರೆ. ಅವರು ಕೊಡುವ ಒಂದು ವಿಡಂಬನೆಯ ಚಿತ್ರ ತಟ್ಟನೆ ಕಣ್ಣಿಗೆ ಕಟ್ಟುವಂತಿದೆ:

ಗುರು ಕರುಣಿಸಿದ ಇಷ್ಟಲಿಂಗ, ಸದಾ ಉರದ ಮೇಲಿರುವಂಥದು. ಗುಡಿಗೆ ಹೋಗುವ ಭಕ್ತ ಸ್ಥಾವರಕ್ಕೆ ಸಾಷ್ಟಾಂಗ ಹಾಕುತ್ತಾನೆ. ಆಗ ಲಿಂಗ ತನ್ನ ಬುಡಕ್ಕೆ ಬೀಳುತ್ತದೆ. ತನ್ನ ದೈವವನ್ನು ತಾನೇ ಅಲ್ಲಗಳೆದಂತಾಗುತ್ತದೆ. ಎಂಥ ವಿಪರ್ಯಾಸ!

'ಕಟ್ಟಿದ ಲಿಂಗವನಡಿಮಾಡಿ। ನೀ
ಮೆಟ್ಟುಗಲ್ಲಿನ ಮೇಲೆ ಬೀಳುವೆ
ನೆಟ್ಟಗಲ್ಲದು ನಿನ್ನ ದೈವವೆ ನೀನು
ಕೆಟ್ಟಕೇಡಿನ್ನೇನ ಹೇಳುವೆ.'

ಮೂಢನಂಬಿಕೆಗಳಿಗೆ ಬಲಿಯಾಗಿ 'ಕುಲದೈವ'ಗಳಲ್ಲಿ ಭೇದ ಭಾವ ಮೂಡಿ ಪರಸ್ಪರರನ್ನು ದೂಷಿಸುವ ಮತ್ತು ದೈವಗಳಲ್ಲಿಯೇ ಭಿನ್ನತೆಯನ್ನು ಕಂಡು ಭಜಿಸುವವರನ್ನಂತೂ ನಾಯಿಗಳಿಗಿಂತ ಕಡೆ ಎಂದು ಖಂಡಿಸುತ್ತಾರೆ. ನಾಯಿಗೆ ಅನ್ನ ನೀರು ಕೊಟ್ಟರೆ ಅದು ರಾತ್ರಿಯೆಲ್ಲ ಮನೆ ಕಾಯುತ್ತದೆ. ನಮ್ಮ ಕುಲ ಕಾಪಾಡುತ್ತಾನೆಂದು ಮನೆದೇವರೆಂದು ಭಜಿಸಬೇಕಾದರೆ ಆ ದೈವ ನಾಯಿಗಿಂತ ಕಡೆಯಾಯಿತಲ್ಲ!

'ಶುನಿಗನ್ನ ಪಾನವ ಹಾಕಲು। ನಿನ್ನ
ಮನೆಯ ರಾತ್ರಿಯೊಳೆಲ್ಲ ಕಾಯ್ವುದು
ಶುನಿಗಿಂದ ಕರಕಷ್ಟ ದೈವವ। ನಿನ್ನ
ಮನೆಯ ದೇವರೆಂದು ಭಜಿಸುವೆ.

ಕಾಡಿ ಬೇಡುವ ಹೀನತೆ ದೈವಕ್ಕಿಲ್ಲ, ಆದರೆ ಕಾಡಿ ಬೇಡುವ ಗುಣವುಳ್ಳ ಕ್ಷುದ್ರ ದೇವತೆಗಳನ್ನೇ ನಂಬುವ ಅದೇತರ ನಡತೆ; ಅದೇತರ ಶ್ರದ್ಧೆ! ಅದು ಕಣ್ಣಿದ್ದೂ ಕುರುಡರ ರೀತಿ; ಶರಣ ಪಥದಿಂದ ದೂರ!

೫. ನಿಜವಾದ ಶರಣ, 'ತನ್ನ ತಾನೆ ಪೂಜಿಸುವ' ಶರಣಸತಿ–ಲಿಂಗಪತಿ ಮಾರ್ಗದ ಅನುಸಂಧಾನ ನಿರತನಾಗಿರುತ್ತಾನೆ. ಆತನಿಗೆ ಲಿಂಗವೇ ಗತಿ. ನಿರಂತರ ಧ್ಯಾನ ಚಿಂತನೆಗಳ ಮೂಲಕ, ಲಿಂಗದಗುಣಗಳನ್ನು ಅಂಗಗುಣಗಳಲ್ಲಿ ತುಂಬಿ ಸರ್ವಾಂಗಲಿಂಗಿಯಾಗುತ್ತಾನೆ. ಅಂಗದ ವಿವಿಧ ನೆಲೆಗಳಲ್ಲಿ ಬೆಳಗುವ ಲಿಂಗಸ್ವರೂಪಗಳನ್ನು ಅರಿಯುತ್ತಾನೆ. ಅಂಗಸ್ಥಲ ಲಿಂಗಸ್ಥಲಗಳ ಮರ್ಮ ಭೇದಿಸಿ ಆರುನೂರೊಂದಾದ ಪರಿ ಅರಿಯುತ್ತಾನೆ. ಇಷ್ಟಭಾವ ಪ್ರಾಣಲಿಂಗಗಳ ಮೂಲಕ ಮಹಾಲಿಂಗ ನಿಷ್ಕಲಲಿಂಗ ಶೂನ್ಯಲಿಂಗ ನಿರಂಜನ ಲಿಂಗ ಹೀಗೆ ತಾನೇ ತಾನಾಗಿ ತನ್ನ ಪೂಜಿಸಿ ಪರಮಾನುಭವದ ಅನಿರ್ವಚನೀಯ ಆನಂದ

ದಲ್ಲಿ ಪರವಶನಾಗುತ್ತಾನೆ. ಅಂಥ 'ಷಟುಸ್ಥಲ ಸುಸಂಗಿಗಳ ಕರದೊಳ್ ಸತಿ ಲಿಂಗವಾಡಿದ ರುಯ್ಯಾಲೆ.' 'ಗುರು-ಲಿಂಗ-ಜಂಗಮದ ವಿಶೇಷಾನುಭವ ಹೊಂದಿದವನು ಶರಣ; ಭಕ್ತ ಕಾರಣ ಆತನಿಗೆ 'ಆದಿ ಚೈತನ್ಯರೂಪ ಅನಾದಿ ಜಂಗಮನ ಶ್ರೀಪಾದ ಗತಿ.' ಆತ ಸದಮಲಾನಂದ ರೂಪ. ಆತ ಉಪಮಾತೀತ. 'ನಿರಾಲಂಬ' ಗುಣಾತೀತ.

೫-೧. ಬಸವಲಿಂಗ ಶರಣ ಇನ್ನು ಕೆಲವು ರಚನೆಗಳಲ್ಲಿ ಪಾದೋದಕ ಪ್ರಸಾದಗಳ ಆಚರಣೆಗೆ ಸಂಬಂಧಿಸಿದ ಕ್ರಿಯೆಗಳ ಸೂಚನೆಯಿದೆ. ವಿಭೂತಿಯು ಘನತೆ-ಭಸಿತವ ಧರಿಸುವಾತನೆ ಯೋಗಿ-ಎಂದು ವಿವರಿಸುವಲ್ಲಿ 'ಗೋವಿಂದ' ಪದದ ಸಂಭವನೀಯ ಶ್ಲೇಷೆಗಳನ್ನು ಬಳಸಿ:

—ಗೋ-ಆಕಳು, 'ಗೋವಿಂದ'-ಆದರಿಂದ ಶ್ರೀ ವಿಭೂತಿ, 'ಗೋವಿಂದ' ದೈವ ಇತ್ಯಾದಿ-ಭಸ್ಮದ ಮಹತ್ವ ಹೇಳಲಾಗಿದೆ.[೨]

'ನಮಃಶಿವಾಯ' ಪಾರಂಪರಿಕ ಪಂಚಾಕ್ಷರಿ ಮಂತ್ರಬಸವಲಿಂಗ ಶರಣರ ದರ್ಶನ ದಲ್ಲಿ 'ಬಸವಲಿಂಗ' ಎಂದಾಯಿತು. ಬಸವಣ್ಣನವರ ಆರಾಧನೆ ಮೈಲಾರ ಶರಣರ ಪ್ರಾಣವಾಗಿತ್ತು.

'ಬಸವಲಿಂಗವೆಂಬೈದಕ್ಷರಗಳು ರಸನೆಯೊಳಿರಬೇಕು.

ಶಶಿಕಾಂತದೊಳಿಹ ರಸದ ಪರಿಯೊಳೀ ವಸುಧೆಯೊಳಿರಬೇಕು.' ಈ ರಚನೆ ಅದಕ್ಕೆ ನಿದರ್ಶನ. ಬಸವಣ್ಣನ ಘನತೇಜದಲ್ಲಿ ಲಿಂಗತೇಜ ಕಂಡ ಮೈಲಾರ ಶರಣರು ಬಸವಣ್ಣ ನನ್ನು 'ಕಲ್ಯಾಣಪುರವರಾಧೀಶ್ವರ ಪ್ರಧಾನಿ' 'ಕುಲಛಲ....ಮದಗಳ ನೀಗಿದ ಸುಯ್ಞಾನಿ, 'ಷಡುತತ್ವ ಸುಜ್ಞಾನಿ' 'ಸಜ್ಜನಜನಪೋಷಿ' 'ಜಂಗಮ ದಾಸೋಹಿ' ಇತ್ಯಾದಿ ಬಗೆಬಗೆ ಯಾಗಿ ಮನದುಂಬಿ ಹಾಡಿದ್ದಾರೆ. ಶರಣನೆ ಶಿವನೆಂದೂ, ಶಿವನ ವಿವಿಧ ಪೌರಾಣಿಕ ಪಂಚವದನ, 'ಹರಿನಯನ ಚರಣ' 'ಶಶಿಮೌಳಿ' 'ನಂಜುಂಡ' ಶೇಷಧರ ಕಾಲಹರ, ತ್ರಿಪುರಹರ, ಶೂಲಧರ ಮುಂತಾದ ನಾಮಗಳು ಶರಣನಿಗೆ ಹೇಗೆ ಅನ್ವಯಗೊಳ್ಳುತ್ತವೆ ಎನ್ನುವುದನ್ನು, ಮನೋಜ್ಞವಾಗಿ-ಉಪಮಾಲಂಕಾರಗಳ ಮುಖಾಂತರ-ವಿವರಿಸಿದ್ದಾರೆ. 'ನಿಜಶರಣ, ಭಕ್ತಿ ಜ್ಞಾನ ವೈರಾಗ್ಯ ತ್ರಿಶೂಲಗಳನ್ನು ಹಸ್ತದಲ್ಲಿ ಹಿಡಿದು ಆರಾಧಿಸಿ ಭವದ ಬೇರ ಕಿತ್ತೆಸೆದುದರಿಂದ ಶರಣಂಗೆ ಶೂಲಧರನೆಂಬ ನಾಮ, ಕಾರಣ ಸದಾ ತನ್ನನ್ನು ಶರಣರೊಡವೆರಸು' ಎಂದು ಹಂಬಲಿಸುತ್ತಾರೆ. ಗಾರುಡ ಕುಟಿಲ ಕುಹಕ ವಿದ್ಯೆ ಗಳನ್ನು ಕಲಿಯದೆ, ಮಂತ್ರ ತಂತ್ರಗಳನ್ನು ನಂಬದೆ, ವೀರಶೈವಾಚಾರ ನಿರತನಾಗುವುದೇ ಶ್ರೇಯಸ್ಕರ ಎಂದು ಸಾರುತ್ತಾರೆ.

ವೀರಶೈವನಾಗಿಯೂ ಅಪಶೈವನ ನಡವಳಿಕೆಗಳನ್ನು ಖಂಡಿಸುವ ಮೈಲಾರ ಶರಣರು, 'ಸತ್ಯಸದ್‌ಗುಣ ಶೀಲ'ಗಳನ್ನು ಅಳವಡಿಸಿ ಶರಣರ ಸ್ಮರಣೆಯಲ್ಲಿ ಉಸಿರಾಡಿಸುವುದೇ ನಿಜವಾದ ಭಕ್ತನ ಲಕ್ಷಣ ಎಂದು ವಿವರಿಸುತ್ತಾರೆ.

೬. ಮೂಢನಂಬುಗೆ, ಕ್ಷುದ್ರದೇವತಾರಾಧನೆ, ಅಂಧಾಚರಣೆ, ಶಕುನದಲ್ಲಿ ಆಸಕ್ತಿ

ಮುಂತಾದ ನಡವಳಿಕೆಗಳು ಸಾಮಾಜಿಕರ ವ್ಯಕ್ತಿತ್ವ ವಿಕಾಸಕ್ಕೆ ಧಾರ್ಮಿಕ ಪಥ ಶುದ್ಧಿಗೆ ಆತಂಕಗಳೆಂದು ಉಚ್ಚರಿಸುತ್ತಾರೆ. 'ಸಕಲ ಸಂಕಲ್ಪ ಸೂತಕ ಜಡಜನ್ಮ ಪಾತಕ ಕರ್ಮವನು, ಕಣಿ ಜೋಯಿಸಿ ಮುಖದಿಂ ವಿಕಳತೆಯಿಂ ಕೇಳಿ ಮಾಡುವ ಹೀನ ನರಕಿಯುವ ಭವಿ' ಎಂದು ಸಾರುತ್ತಾರೆ.

೬-೧. ಸಮಾಜ ವಿಡಂಬನೆಯ ಹಿನ್ನೆಲೆಯಲ್ಲಿ ರಚಿತವಾದ ಕೆಲವು ಹಾಡು ಅವರ ಸಾಮಾಜಿಕ ಪ್ರಜ್ಞೆಗೆ ನಿದರ್ಶನಗಳಾಗಿವೆ.

ಪುರಾಣ ಕಾಲದ ಶ್ರೀಕೃಷ್ಣ, ರಾಮ, ಮುಂತಾದವರ ಸಂದರ್ಭಗಳನ್ನು ಎತ್ತಿಕೊಂಡು ಪ್ರಶ್ನೆಗಳ ಸರಮಾಲೆಯನ್ನೇ ಸಿಡಿಸುತ್ತಾರೆ.

ಶುಭವಾರದಲ್ಲಿ ಮದುವೆ ಮಾಡಿಕೊಂಡ ಕೃಷ್ಣನ ಹದಿನಾರು ಸಾವಿರ ಸ್ತ್ರೀಯರ ಗತಿಯೇನಾಯಿತು? ವಸಿಷ್ಠಮುನಿ ಹೇಳಿದ ಶುಭಮುಹೂರ್ತದಲ್ಲಿಯೇ ರಾಮಸೀತೆಯರ ವಿವಾಹವಾಯಿತು. ಆದರೆ ಸೀತೆ ರಾಮ ಇಬ್ಬರೂ ಏನೇನು ಅವಮಾನ ಅನುಭವಿಸ ಬೇಕಾಯಿತು? ಬ್ರಹ್ಮ ಶಿರ ಕಳೆದುಕೊಂಡನೇಕೆ? ಇಂದ್ರನಿಗಾದ ಅವಮಾನವೆಂಥದು? ಶುಭದಿನ ಶುಭತಿಥಿ ಕೇಳಿದ ಮನ್ಮಥನ ಗತಿ ಏನಾಯಿತು? ಶುಭಮುಹೂರ್ತ ಕೇಳಿ, ಯಜ್ಞ ಹಮ್ಮಿಕೊಂಡ ದಕ್ಷಬ್ರಹ್ಮನಿಗಾದ ಭಂಗವೇನು? ನಿಷ್ಠೆಯಿಂದ ಪಂಚಾಂಗ ಕೇಳಿದ ಪಾಂಡವರು ದೇಶಭ್ರಷ್ಟರಾದುದೇಕೆ? ಕಾರಣ ಪಂಚಾಂಗವನ್ನೇ ನಂಬಬೇಡಿ ಎಂದು ಸಾರಿ,

'ಅಣ್ಣಾ ನೀ ಕೇಳೋ ಪಂಚಾಂಗವ। ಕೇಳಿ
ದಣ್ಣಗಳೆಲ್ಲರ ಭಂಗವ' ಎಂದು ವಿಡಂಬಿಸುತ್ತಾರೆ.

೭. ಮೈಲಾರ ಶರಣರು ದೂರದರ್ಶಿಗಳಾಗಿದ್ದರು ಮತ್ತು ದಿವ್ಯ ಅನುಭಾವದ ರಹಸ್ಯ ದೃಷ್ಟಿ ಪಡೆದ ದಾರ್ಶನಿಕರಾಗಿದ್ದರು. ಈ ಮಾತಿಗೆ ಅವರ ಇನ್ನೂ ಕೆಲವು ವಿರಳ ರಚನೆಗಳು ಸಾಕ್ಷಿ.

ಮೈಲಾರಲಿಂಗನ ಜಾತ್ರೆ ಬಸವಲಿಂಗ ಶರಣರಿಗೆ ಕಂಡ ರೀತಿಯೇ ಭಿನ್ನ. ಬಹಿರಂಗದ ವಸ್ತು ಸಂಗತಿಗಳು ಒಬ್ಬ ಅನುಭಾವಿಗೆ ನೀಡುವ ಪ್ರೇರಣೆ, ಒದಗಿಸುವ ನೋಟ ಅವರ 'ನೋಡಿರಮ್ಮ ಮೈಲಾರ ಲಿಂಗನ ಜಾತ್ರೆಯಾಗುತಿದೆ' ಎನ್ನುವ ರಚನೆಯಲ್ಲಿ ಮೂಡಿರುವ ಹದನು ವಿಸ್ಮಯಕಾರಿ:

ಮೈಲಾರಲಿಂಗನ ಜಾತ್ರೆಯಾಗುತಿದೆ ನಿಜ. ಆದರೆ ನಾಡಜನರಿಗೆ ಇದರ ಗೋಪ್ಯ ತಿಳಿಯದು ಅದರ ರಹಸ್ಯವೇ ಬೇರೆ. ಇಲ್ಲಿಯೂ ತೇರಿದೆ; ಆದರೆ ಇದು ಮರದ ತೇರಲ್ಲ. ಇದಕ್ಕೂ ಕೀಲುಗಳಿವೆ; ಅವುಗಳ ಸ್ವರೂಪ ಬೇರೆ. 'ಧರೆಯಾಕಾಶಕೆ ಮರ ಸೋಂಕದ ಘನ ತೇರು ಕಾಣುತಿದೆ' ನೆಲ ಮುಗಿಲಿಗೆ ತಾಕದ ಕಟ್ಟಿಗೆಯಿಂದಲ್ಲದ ಘನವಾದ ತೇರು 'ಘನಮನದ' ತೇರು. ಪರಿಕಿಸಿ ನೋಡಿದರೆ ಒಂಬತ್ತು ಕೀಲುಗಳು. ಕಾಯದ ತೇರು-ಸರ್ವಾಂಗಲಿಂಗವಾದ-ಘನವಾದ ತೇರು. ೨೬ ತತ್ವಗಳ ಪಟ, ಅಷ್ಟಾವರಣದ ಕುದುರೆ, ಐದು ಹಲ್ಲಣ, ಮೂರು ಬಣ್ಣದ ಎಲೆಗಳು ಹೀಗೆ ಕೆಲವು ರೂಪಕ ಉಪಮೆಗಳ ಮೂಲಕ

ವೈಲಾರ ಜಾತ್ರೆಯ ಗೊರವ, ಅಲ್ಲಿಯ ಮೆರವಣಿಗೆಗಳನ್ನು ಪ್ರತೀಕಗೊಳಿಸಲಾಗಿದೆ.

ಮೈಲಾರಲಿಂಗನ ಜಾತ್ರೆಯ ಒಂದು ಬಹುಮುಖ್ಯ ಘಟ್ಟ ಕಾರಣಿಕ. 'ಕಾರಣಿಕ ಗೊರವ' ಜಾತ್ರೆಯಲ್ಲಿ ನೆರೆದ ಸಾವಿರಾರು ಯಾತ್ರಿಕರ ನಡುವೆ ನಿಗದಿಪಡಿಸಿದ ಬಯಲಿಗೆ ಬಂದು, ದೈವೀ ಶ್ರದ್ಧೆಯಿಂದ ಪರವಶನಾಗಿ ಆವೇಶದುಂಬಿ ಬಂದು, ಅಲ್ಲಿರುವ ಸುಮಾರು ೧೬ ಅಡಿ ಎತ್ತರದ ಬಿಲ್ಲು ಸರಸರನೆ ಏರಿ 'ಸದ್ದಲೇ' ಎಂದಾಗ ಸೂಜಿ ಬಿದ್ದರೂ ಕೇಳಬಹುದಾದಂಥ ಗಪ್ಪನೆ ಮೌನ. ಆಗ ಗೊರವ ಸಾರುವ ವಾಕ್ಯಗಳೇ 'ಕಾರಣಿಕ ಸೊಲ್ಲು'. ಈ ಸೊಲ್ಲಿನಲ್ಲಿ ಪ್ರವಾದಿತ್ವವನ್ನು ಕಾಣುವ ಮತ್ತು ಸೊಲ್ಲುಗಳನ್ನು ಅರ್ಥೈಸುವ ವ್ಯಾಖ್ಯಾನಿಸುವ ಕಾರ್ಯ ಮೈಲಾರನ ಭಕ್ತರಲ್ಲಿ ನಡೆಯುತ್ತಲೇ ಇರುತ್ತದೆ.

ಬಸವಲಿಂಗ ಶರಣ ಈಬಗೆಯ ಒಂದೆರಡು ರಚನೆಗಳಲ್ಲಿ ಅವರ ದಾರ್ಶನಿಕ ವ್ಯಕ್ತಿತ್ವ ಎದ್ದು ಕಾಣುತ್ತದೆ.

ಮೈಲಾರಲಿಂಗನ ಸೊಲ್ಲನ್ನು ನಂಬಬೇಕು. 'ಡಂಭಕ-ಮಾತಲ್ಲ' ಕೇಳಿ ಕೇಳಿ ಇದು ಪರತತ್ವದ ಇರವು. ಪರುಷದ ಗಟ್ಟಿಯೆಂದರೆ 'ನಿಜಬಟ್ಟೆ ಮುಂದೆ ಈ ಸೊಲ್ಲುಗಳಲ್ಲಿ 'ಬೆಡಗು' ಮೂಡಿ ಬಂದಿದೆ. ಬೆಡಗು ೧೨ನೆಯ ಶತಮಾನದ ವಚನಗಳಲ್ಲಿಯೂ ಕಂಡುಬರುವುದುಂಟು. ದಾಸರಲ್ಲಿ ಮುಂಡಿಗೆ ಇತ್ಯಾದಿ. ಜನಪದ ಚೌಪದನಗಳಲ್ಲಿ ಕೂಡ ಒಗಟಿನ ರಚನೆಗಳಿವೆ. ಬೆಡಗು ಆಯಾ ವ್ಯಕ್ತಿಯ, ಸಾಧಕನ, ಶರಣನ ವಿಶಿಷ್ಟ ಅನುಭಾವದ ನಿಲವಿನ ಸಂಕೇತವಾಗಿರುತ್ತದೆ. ಅದನ್ನು ಇದಮಿತ್ಥಂ ಎಂದು ವ್ಯಾಖ್ಯಾನಿಸು ವುದು ಅಪಾಯಕಾರಿಯೇ.

'ಶರಣರಾಭರಣವಾಗಿಹಳೊಬ್ಬ ಬಾಲೆಯು ಕೇಳಿ ಕೇಳಿ
ಪರಿಕಿಸಲೀರೇಳು ಮುಖದ ಚಿಜ್ಜ್ವಾಲೆಯು ಕೇಳಿ ಕೇಳಿ'

....

ಶರಣರಿಗೆ ಆಭರಣ ಯಾವುದು? ಶೃಂಗಾರ ಯಾವುದು?
ಶೃಂಗಾರ ನೊಸಲ ವಿಭೂತಿ ಹಾಗಾದರೆ ಆಭರಣ? ಅದೂ ಬಾಲೆ.

ಸಾಮಾನ್ಯವಾಗಿ 'ಮುಕ್ತಿ'ವನಿತೆ ಎಂದು ಹೇಳಿಬಿಡಬಹುದು. ಆದರೆ ಶರಣರ ಪರಮಗುರಿ ಮುಕ್ತಿಯಾಗಿತ್ತೇ? ಸರಿ ಮುಕ್ತಿ ವನಿತೆಯೆಂದ ಪರಿಭಾವಿಸಿ ಮುಂದಿನ ಮಾತುಗಳನ್ನು ಗಮನಿಸಿದಾಗ ಪರೀಕ್ಷೆ ಮಾಡಿ ನೋಡಿದರೆ ೧೪ ಮುಖದ ಚಿಜ್ಜ್ಯೋತಿ. ಅಂದರೆ ಶರಣನ ಐಕ್ಯಸ್ಥಲದ ನಿಲವು ಸಮಸ್ತ ಕತ್ತಲೆಯ ಕಳೆದಿಪ್ಪ ಬೆಳಗಿನ ಬಾಲೆ-ಶರಣರ ಆಭರಣವಾದ ಬೆಳಗಿನ ಬಾಲೆ. ಹೀಗೆ ಇಂದು ಈ ಬಗೆಯ ಬೆಡಗುಗಳನ್ನು ವ್ಯಾಖ್ಯಾನಿಸುವಾಗ ವ್ಯಾಖ್ಯಾನ ಕಾರನ ಪರಿಮಿತಿಗಳು ಹಿಡಿದು ನಿಲ್ಲಿಸುವುದು ಸಹಜ, ಸಾಧ್ಯ. 'ಆರುಬಣ್ಣದ ಪಕ್ಷಿ' ಎಂದರೆ 'ಭಕ್ತಿಸ್ಥಲದಿಂದ ಐಕ್ಯಸ್ಥಲ'ದವರೆಗೆ ಸಾಧನೆಯ ಪಥದಲ್ಲಿ ಮುನ್ನಡೆಯುವ ಸಾಧ್ಯತೆ ಯುಳ್ಳ ಕಾಮಾದಿಗಳಿಂದ ಕೂಡಿ ಜೀವ ಹೀಗೆ 'ಕಣಿಯ ಕೇಳಿರಣ್ಣಗಳಿರಾ' ರಚನೆ ಕೂಡ ತುಂಬ ಸಂಕೀರ್ಣವಾಗಿದೆ. ಗುರುವಿನ ಮಗ ಜಗತ್ತಿನಲ್ಲಿ ಬಂದಿದ್ದಾನೆ. ಅವನು ಹೇಳುವ ಕಣಿ ಹುಸಿಯಲ್ಲ. ಅವನ ನುಡಿ ನಿಜದ ನುಡಿ.

'ತಲೆಯು ಇಲ್ಲದಂಗನೆಯಳು........
ಹಲವು ಜಗವನಾಳುತಾಳೆ........
ಹುಲಿಯ ತಲೆಯ ಧರಿಸಿಕೊಂಡು........
ಸುಲಭದಿಂದ ನುಂಗುತಾಳೆ........'
ಈ ರಚನೆ ನಿಜಗುಣರ
'ಆಡುತೈದಳೆ ಮಾಯೆಯೆಂಬ ಕಾಮಿನಿ ಬಿಡದೆ
ನೋಡಿ ಬಲ್ಲವರು ಸಂಸಾರ ನಾಟಕವ'
ಹಾಡು ನೆನಪಿಗೆ

'ಎಂಥ ಕನಸಕಂಡೆನೆ ಕೇಳೌ ಸುಜಾಣೆ' ರಚನೆ ಅಕ್ಕಮಹಾದೇವಿಯ 'ಅಕ್ಕಕೇಳವ್ವ' ವಚನದ ವಚನದ ಬೇರೊಂದು ರೂಪ.

ಅಂಗಗುಣಗಳೆಲ್ಲ ಲಿಂಗಗುಣಗಳಲ್ಲಿ ಪರಿವರ್ತನೆಗೊಳ್ಳುವ ಪ್ರಕ್ರಿಯೆಯ ಪರಮ ಹಂತ ಲಿಂಗಾಂಗ ಸಾಮರಸ್ಯ.

ಈ ಅನುಭಾವವೇ ಶರಣಜೀವನದ ಆತ್ಯಂತಿಕ ಗುರಿ 'ಲಿಂಗಾಂಗ ಸಾಮರಸ್ಯ'ದ ನಿಲುವಿನಲ್ಲಿ ನಿಂದ ಶರಣನಗೆ ಶಿವಾನುಭವ ಎನ್ನುವುದು ತನಗನ್ಯವಲ್ಲದ 'ತಾನೇ ತಾನಾದ' ಸಹಜ ನಿರಾಳ ಸ್ಥಿತಿ. ಆತ ಶಿವಾನುಭವದ ಕನ್ನಡಿ. ತನ್ನನಿದಿರಿಟ್ಟು ಪೂಜಿಸಿದ ತಾನೇ ಲಿಂಗರೂಪವಾದ ಭೂಮಾನುಭೂತಿ.

ಮೈಲಾರಲಿಂಗ ಬಸವಲಿಂಗ ಶರಣರು ಈ ಭೂಮಾನುಭೂತಿಯನ್ನು ಸ್ವಯದಲ್ಲಿ ಆವಿಷ್ಕರಿಸಿಕೊಂಡ ಅನುಭಾವಿ. 'ಮಾನಸ ವಾಚಕ ಕಾಯಕ'ಗಳಲ್ಲಿ ತನ್ನ ತಾನೆ ಬೆಳಗುವ ಸ್ವಯಂಜ್ಯೋತಿ ಕಂಡ ಈ ಪುಣ್ಯಚೇತನ '....ದೃಢ ಚಿತ್ತ ಬತ್ತಿಯ ಕೊನೆಯೊಳು ಲಿಂಗಕಿರಣದೊಬ್ಬುಳಿಯ ಸುಜ್ಞಾನಜ್ಯೋತಿ.'

ಅಡಿಟಿಪ್ಪಣಿಗಳು

೧. ವೀರಶೈವ ಸಿದ್ಧಾಂತ ಪ-೧೩. ಮೈಲಾರದ ಶ್ರೀ ಬಸವಲಿಂಗ ಶರಣರ ಕೃತಿಗಳು ೧೯೪೫.

೨. ಶರಣರು ತಮ್ಮನ್ನು ಪರೀಕ್ಷಿಸಬಂದ ಅನ್ಯಜಾತಿಯ (ಬ್ರಾಹ್ಮಣ?) ಶಾಲಾ ಅಧಿಕಾರಿಯ ಮನವೆ ಚ್ಚಿಸಲು ಈ ಚಮತ್ಕಾರಿಕ ಶ್ಲೇಷಾರ್ಥ ತುಂಬಿದ ಹಾಡು ರಚಿಸಿದರೆಂದು ಪ್ರತೀತಿ.

ಬಸವಲಿಂಗಶರಣರ 'ಗುರುಕರುಣ ತ್ರಿವಿಧಿ'

ಒಂದು ವಿವೇಚನೆ

—ಡಾ|| ವ್ಹಿ. ಶಿವಾನಂದ

'ಗುರು' ಶಬ್ದದಲ್ಲಿ 'ಗು' ಎಂಬುದು ಕತ್ತಲೆ. 'ರು' ಅಂಧಃಕಾರ ನಿವಾರಣ ಶಕ್ತಿ. ಮಾನವನ ಅಜ್ಞಾನಂಧಕಾರವನ್ನು ನಿವಾರಿಸಿ ಅವನನ್ನು ಸುಜ್ಞಾನ ಪಥಕ್ಕೆ ಬರಿಸುವ ಚೈತನ್ಯವೇ 'ಗುರು'. ಇದನ್ನು ವ್ಯಕ್ತಿಯಲ್ಲಿ ಆರೋಪಿಸಿದಾಗ ಆ ಅಗಾಧ ಶಕ್ತಿಯನ್ನು ಧಾರಣಮಾಡಿಕೊಂಡಿರುವ ವ್ಯಕ್ತಿ 'ಗುರು' ಎನ್ನಿಸುತ್ತಾನೆ. ಜ್ಞಾನ ಮಾರ್ಗದಲ್ಲಿ ಕೊಂಡೊಯ್ಯುವ ಉದ್ದಿಷ್ಟ ಆಶಯವುಳ್ಳದರಿಂದ ಇದೊಂದು ತತ್ತ್ವ ಕೂಡ. ಗುರುವನ್ನು ಸ್ತುತಿಸುವ, ಆರಾಧಿಸುವ ಅವನ ಕಾರುಣ್ಯಕ್ಕಾಗಿ ಹಂಬಲಿಸುವ ಸಾಧಕರ ಲಕ್ಷಣಗಳು ಸಾಮಾನ್ಯವಾಗಿ ಜಗತ್ತಿನ ಎಲ್ಲ ಧಾರ್ಮಿಕ, ಆಧ್ಯಾತ್ಮಿಕ ಸಾಹಿತ್ಯದಲ್ಲಿ ನಮಗೆ ದೊರೆಯುತ್ತವೆ. ಭಾರತೀಯ ಸಂಸ್ಕೃತಿಯಲ್ಲಂತೂ ಎಲ್ಲ ಸನಾತನ ಧರ್ಮ-ಪಂಥಗಳಲ್ಲಿ ಗುರುಮಹಿಮೆ ಅಪಾರವಾಗಿ ಅನಂತವಾಗಿ ವರ್ಣಿತಗೊಂಡಿದೆ. ಆದರೆ ಮುಪ್ಪಿನ ಷಡಕ್ಷರಿಯ ವಾಣಿಯಲ್ಲಿ 'ಅವರವರ ಭಾವಕ್ಕೆ ಅವರವರ ದರುಶನಕ್ಕೆ ಅವರವರಿಗೆಲ್ಲ ಗುರು ನೀನೊಬ್ಬನೇ' ಎಂಬಂತೆ 'ಗುರು ಅವರವರ ಆಚಾರ, ಧರ್ಮ, ಸಿದ್ಧಾಂತಕ್ಕನುಗುಣವಾಗಿ ಮುಮುಕ್ಷು ಮಾರ್ಗದಲ್ಲಿ ಬೆಳಕು ತೋರುತ್ತಾನೆ. ಮೈಲಾರ ಬಸವಲಿಂಗ ಶರಣರು ವೀರಶೈವ ಧರ್ಮ, ಸಿದ್ಧಾಂತ, ದರ್ಶನ ಸ್ತರದಲ್ಲಿ ಗುರುತತ್ತ್ವವನ್ನು ವಿಶ್ಲೇಷಿಸಿರುವ ಕ್ರಮ ಅವರ 'ಗುರುಕರುಣ ತ್ರಿವಿಧಿ'ಯಲ್ಲಿ ನಮಗೆ ಕಂಡುಬರುತ್ತದೆ.

ಗುರುಕರುಣ ತ್ರಿವಿಧಿ ೩೫೫ ತ್ರಿಪದಿ ಪದ್ಯಗಳಲ್ಲಿ ಪ್ರಾಸ-ಲಯಬದ್ಧವಾಗಿ ಹೊರಹೊಮ್ಮಿ ಬಂದ ಒಂದು ವೀರಶೈವ ಲಘು ಕೃತಿ. ಈ ಕೃತಿ ರಚನೆಗೆ ಅವರು ಸದ್ಗುರುವಿನಲ್ಲಿಟ್ಟ ಅಪೂರ್ವ ಶ್ರದ್ಧೆ ನಿಷ್ಠೆ, ವಿನಯಗಳು ಸತ್ಪ್ರೇರಣೆಯನ್ನಿತ್ತಿವೆ. ತತ್ಕಾಲದಲ್ಲಿ[೧] ತುಂಗಭದ್ರಾ ತಟಾಕದ ಲಿಂಗನಾಯಕನ ಹಳ್ಳಿಯ ಮಠಾಧೀಶ ಶ್ರೀ ಚೆನ್ನವೀರಸ್ವಾಮಿಗಳೆಂಬವರು ಬಸವಲಿಂಗ ಶರಣರ ಗುರುಗಳಾಗಿದ್ದರು. ಈ ಮಹಾಮಹಿಮರಾದ ಗುರುಗಳ ಸಾನ್ನಿಧ್ಯದಲ್ಲಿ ಅಂದು ಇನ್ನೂ ಹಲವಾರು ಸಾಧಕರು ತಮ್ಮ ಆತ್ಮೋಜ್ಯೋತಿಯನ್ನು ಬೆಳಗಿಸಿಕೊಂಡಿದ್ದಾರೆ. ಬನ್ನಿಮಟ್ಟಿ ಚೆನ್ನಪ್ಪ, ಮೈಸೂರು ಸೀಮೆಯ ಶಿವಬಸವ ಸ್ವಾಮಿಗಳು, ಶಾಂತವೀರ ಚರಮೂರ್ತಿಗಳು, ರಾಚೋಟಿ ಸ್ವಾಮಿಗಳು, 'ಕೈವಲ್ಯದರ್ಪಣ'ದ ರಚಯಿತೃ ಬಾಲಲೀಲಾ ಮಹಾಂತ ಶಿವಯೋಗಿ ಇಂತಹರ ಮಣಿಮಾಲಿಕೆಯಲ್ಲಿ ಮೈಲಾರದ ಬಸವಲಿಂಗ ಶರಣರು ಸೇರಿದ್ದಾರೆ. ವೀರಶೈವ ಧರ್ಮ ಸಂಸ್ಕೃತಿ ಆಚರಣೆಗಳು

ಭಕ್ತಿ-ಜ್ಞಾನ ವೈರಾಗ್ಯಗಳ ತ್ರಿವೇಣಿ ಒಂದೊಂದು ಕಾಲಕ್ಕೆ ಒಂದೊಂದು ಸ್ಥಳದಲ್ಲಿ ಮಡುಗಟ್ಟಿ ನಿಂತಿದೆ. ಕಲ್ಯಾಣ, ಹಂಪೆ, ಎಡೆಯೂರುಗಳನ್ನು ಕ್ರಮಿಸಿ ಅಂದು ತುಂಗಭದ್ರ ತಡಿಯ ಚನ್ನವೀರಸ್ವಾಮಿಗಳ ಲಿಂಗನಾಯಕನ ಹಳ್ಳಿಯನ್ನು ೧೯ನೆಯ ಶತಮಾನದ ಆದಿ ಭಾಗದಲ್ಲಿ ವೀರಶೈವ ಸದ್ಧರ್ಮ ತೀರ್ಥವಾಗಿಸಿದೆ. ಈ ಗುರುಕುಲದ ಅನರ್ಘ್ಯ ಅನುಭಾವ ರತ್ನ ಮೈಲಾರ ಬಸವಲಿಂಗ ಶರಣರಾಗಿದ್ದಾರೆ. ಅವರ ಗುರುಭಕ್ತಿ, ಲಿಂಗಭಕ್ತಿ ಜಂಗಮ ಭಕ್ತಿಗಳು ಈ ನೆಲದಲ್ಲಿ ಉಜ್ವಲವಾಗಿ ಪ್ರಕಟಗೊಂಡಿದೆ. ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಗೆ ಪ್ರೇರಕವಾದ ಒಂದು ಐತಿಹ್ಯ ಪ್ರಸಂಗವೂ ಇಲ್ಲಿ ಕೇಳಿ ಬರುತ್ತಲಿದೆ. 'ಚನ್ನವೀರಸ್ವಾಮಿಗಳಲ್ಲಿ ನಿಸ್ಸೀಮ ನಿಷ್ಠೆಯನ್ನಿಟ್ಟಿದ್ದ ಈ ಶರಣರು ಒಮ್ಮೆ ಮಠದ ಉತ್ತರಾಧಿಕಾರಿ ವಟುವನ್ನು ನೇಮಿಸುವಲ್ಲಿ ಆ ವಟುವಿನ ಅನರ್ಹತೆಯನ್ನು ಎತ್ತಿ ಆಡಿದರಂತೆ. ಗುರುಕರುಣೆ ಪಡೆಯಲು ನೀನು ಗುರುಸ್ತುತಿ ಮಾಡೆಂದು ಬಳಿಯಲ್ಲಿದ್ದ ಬಾಲಲೀಲಾ ಮಹಾಂತರು, ಸೂಚಿಸಿದರಂತೆ. ಗುರುವಿನ ಮನ ಕರಗುವಂತೆ ಈ ಶರಣರು 'ಗುರುಕರುಣ ತ್ರಿವಿಧಿ'ಯನ್ನು ರಚಿಸಿ ಅವರ ಕೃಪೆ ಪಡೆದರೆಂದು ಪ್ರತೀತಿ. ಇದು ನೈಜವೋ ಅಥವ ಜನವದಂತಿಯೋ! ಇಂತಹ ಐತಿಹ್ಯಗಳು ಇನ್ನೆಷ್ಟೋ ಸಿಕ್ಕುತ್ತವೆ.

ಬಸವಲಿಂಗರಂತಹ ಹುಟ್ಟು ಪ್ರತಿಭಾನ್ವಿತ, ಸಾಧನೋನ್ನತಿಯ, ಸದ್ಭಕ್ತಿ ಸದ್ವಿನಯಶಾಲಿ ಅನುಭಾವದ ಕವಿಗೆ ಮೇಲಿನ ಐತಹ್ಯ ಸಂಶೋಧಿಸಲಾರದೆಂದೇ ನಮ್ಮ ತರ್ಕ. 'ಪ್ರತಿಭಾನಾಂ ಕಾವ್ಯ ವಿದ್ಯಾ ಪ್ರಚಯ ಪರಿಚಯಂ ವೃದ್ಧಸೇವಾನುರಾಗಂ ಕವಿತೆಗೆ ನಿಯತಂ ಕಾರಣಂ' ಎಂಬ ಆಲಂಕಾರಿಕರ ಹೇಳಿಕೆ ಯಥಾರ್ಥವೆನ್ನಿಸುತ್ತದೆ. ಜನ್ಮ ಜಾತ ಪ್ರತಿಭೆ, ಬಹುಶ್ರುತತ್ವ 'ವೃದ್ಧ' ಎಂದರೆ ಗುರು ಸೇವಾಧುರಂಧರತ್ವ ಇವೆಲ್ಲದರ ಸಂಯೋಗದಿಂದ ಅವರು ವೀರಶೈವ ಸಾಹಿತ್ಯ ಪ್ರಪಂಚಕ್ಕೆ ಒಂದಲ್ಲ ನಾಲ್ಕು ಸತ್ಕೃತಿ ಗಳನ್ನು ಒದಗಿಸಿದ್ದಾರೆ. 'ಶಿವಾನುಭವ ದರ್ಪಣ' ವೀರಶೈವ ಷಟ್‌ಸ್ಥಲ ನಿರಾಭಾರಿ ಸಿದ್ಧಾಂತ ಇವು ಅವರ ಅನ್ಯತ್ರ ಕೃತಿಗಳಾಗಿವೆ. ಇವೆಲ್ಲದರಲ್ಲಿ 'ಗುರುಕರುಣ ತ್ರಿವಿಧಿ' ಅವರ ಹೆಸರನ್ನು ಚಿರಸ್ಥಾಯಿಗೊಳಿಸಿದ ಕೃತಿ. ಗುರುಕಾರುಣ್ಯದಿಂದೊದಗುವ ಉತ್ಕಟ ಆನಂದ, ಆಧ್ಯಾತ್ಮಿಕ ಅನುಭೂತಿ, ಸಾಧಕಾವಸ್ಥೆಯ ವಿಭಿನ್ನ ಮನಸ್ಸಿನ ಸ್ಥಿತಿ-ಗತಿ, ಗುರು ಭಕ್ತಿ ತಾದಾತ್ಮ್ಯ ಭಾವ ಹಾಗೂ ಗುರು ತತ್ತ್ವ ಬೋಧೆ ಇದೇ ಮೊದಲಾದುವನ್ನಿಲ್ಲಿ ಯಾವ ಬೇರೊಂದು ಮತದ ಸಾಧಕರೂ ಸಹ ಓದಿ ಆನಂದಿಸಬಹುದಾದರೆ, ಇದರಲ್ಲಿ ಬರುವ ವೀರಶೈವ ಸಿದ್ಧಾಂತದ ಸೂಕ್ಷ್ಮಗಳನ್ನು ಶಿವಶರಣರು, ಶಿವಾನುಭಾವಿಗಳು ಸದ್ಭಕ್ತರು ತಿಳಿದು ಅದರ ಘನತೆಯನ್ನೂ ಕೊಂಡಾಡಬಹುದು. ಆದುದರಿಂದ ಇದು ಕೇವಲ ತಾತ್ತ್ವಿಕ ವಿಷಯದ ಶುಷ್ಕ ಸೈದ್ಧಾಂತಿಕ ಕೃತಿಯೆನ್ನಿಸದೆ ಭಕ್ತಿಭಾವದ ಸುಪ್ರಸನ್ನ ಕೃತಿಯಾಗಿದೆ.

ತ್ರಿಪದಿ ಗಾತ್ರದಲ್ಲಿ ಕಿರಿದಾದರೂ ಪಾತ್ರದಲ್ಲಿ ಹಿರಿದಾದುದು. ಪಿಂಡಾಂಡದಲ್ಲಿ ಬ್ರಹ್ಮಾಂಡವಡಗಿರುವಂತೆ ಇದು ವರ್ಣ್ಯ ವಿಷಯವನ್ನು ಬಂಧುರಶೈಲಿಯಲ್ಲಿ ಅಭಿವ್ಯಕ್ತ

ಗೊಳಿಸುತ್ತದೆ. ಸರ್ವಜ್ಞ ಕವಿಗಂತೂ ಈ ಛಂದೋ ಶಿಲ್ಪ ಸ್ವಾನುಭವದ ಸಿದ್ಧಿ ಸಾರ್ಥಕ್ಯವನ್ನು ಪ್ರಕಟಪಡಿಸಿದೆ. ಆದರೆ 'ತ್ರಿಪದಿ' ಮತ್ತು 'ತ್ರಿವಿಧಿ' ಇವೆರಡು ಪದ ಗಳನ್ನು ವೀರಶೈವ ಕವಿಗಳು ವಿಶಿಷ್ಟವಾಗಿ ಬಳಸಿರುವಂತೆ ತೋರುತ್ತದೆ. 'ತ್ರಿಪದಿ'ಯು ಲೋಕಾನುಭವ, ಲೋಕ ವ್ಯವಹಾರದ ಒಂದು ಜನಪದ ಅಭಿವ್ಯಕ್ತಿ ಮಾಧ್ಯಮ (Folk loristic Media)ವೆನ್ನಿಸಿದರೆ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಆಚರಣೆ ಸಂಬಂಧದ ವಿಷಯ ನಿರೂಪಣೆಗೆ (Spiritual device) ಇದು ಮಾಧ್ಯಮವಾಗಿದೆ. ಅಕ್ಕನ 'ಯೋಗಾಂಗ ತ್ರಿವಿಧಿ' ಸಿದ್ಧರಾಮನ ತ್ರಿವಿಧಿತ್ರಯ, ಕರಸ್ಥಲ ನಾಗಿದೇವ ತ್ರಿವಿಧಿ, ನಿಜಗುಣರ ೬೩ ಪುರಾತನರ ತ್ರಿವಿಧಿ ಅನುಭವಸಾರ, ರಾಮಪುರ ಬೊಕ್ಕನ 'ನಿಜಶರಣನ ತ್ರಿವಿಧಿ ಇವೇ ಮೊದಲಾದುವು ಈ ಗುಂಪಿಗೆ ಸೇರುತ್ತವೆ. ಮೈಲಾರ ಬಸವಲಿಂಗ ಶರಣರ 'ಗುರುಕರುಣ ತ್ರಿವಿಧಿ' ಸಹ ಇದರಲ್ಲಿಯೇ ಸಮಾವೇಶಗೊಳ್ಳುತ್ತದೆ.

ವೀರಶೈವ ಆಧ್ಯಾತ್ಮಿಕ ಹಾಗೂ ತಾತ್ವಿಕ ಕವಿಗಳನ್ನು ಗಣ್ಯ ವಿದ್ವಾಂಸರಲ್ಲೊಬ್ಬರಾದ ಪ್ರೊ|| ಶಿ. ಶಿ. ಬಸವನಾಳರು ಕೆಲವೊಂದು ವಿಧವಾಗಿ ವಿಂಗಡಿಸಿದ್ದುಂಟು.

೧. ನಿಜಗುಣ, ಸರ್ಪಭೂಷಣ, ಮುಪ್ಪಿನ ಷಡಕ್ಷರಿ, ಘನಮಠದಾರ್ಯರು ಮುಂತಾದವರು ಇವರು ಸಹಜಸ್ಫೂರ್ತಿಯ ಅನುಭಾವದ ಹಾಡುಗಬ್ಬ ಕವಿಗಳು.

೨. ಇದರಲ್ಲಿ ನಿಜಗುಣರಂತಹರನ್ನುಳಿದು ಕೆಲವರು ತತ್ತ್ವಶಾಸ್ತ್ರ ವಿಚಾರವನ್ನೇ ಅಧಿಕಾರವಾಣಿಯಿಂದ ಬುದ್ಧ್ಯಾಪೂರ್ವಕ ಹೇಳಲುದ್ಯುಕ್ತರಾದ ಶಾಸ್ತ್ರಿ, ಪಂಡಿತ ಕವಿಗಳು.

೩. ಇವೆರಡೂ ಪರಂಪರೆಗೆ ತುಸು ಭಿನ್ನವಾಗಿದ್ದು, ಕೇವಲ ವೀರಶೈವ ವಿಶಿಷ್ಟ ಲಕ್ಷಣಗಳಾದ ಷಟ್‌ಸ್ಥಲ, ಅಷ್ಟಾವರಣ ಪಂಚಾಚಾರಗಳಂತಹ ಶಿವಾನುಭವ ವಿಷಯ ವನ್ನೇ ಮುಖ್ಯ ವಸ್ತುವಾಗಿಸಿಕೊಂಡ ಸದಾಚಾರ ಯುಕ್ತ ಕವಿಗಳು. ಈ ಮೂರನೆಯ ವರ್ಗದಲ್ಲಿ ಬಸವಲಿಂಗ ಶರಣರು ಪರಿಗಣಿತರಾಗುತ್ತಾರೆಂದು ಬಸವನಾಳರು ಅಭಿಪ್ರಾಯ ಪಡುತ್ತಾರೆ.[೨] ಆದರೆ ಈ ವರ್ಗೀಕರಣದಲ್ಲೂ ಸಹ ಕೆಲವೊಮ್ಮೆ ಮೇಲ್ಪರಿಕೆ (Overlapping) ಪರಸ್ಪರ ಕಂಡು ಬರುವದುಂಟು.

ಬಸವಲಿಂಗ ಶರಣರು ಯಾವ ಗುಂಪಿಗೆ ಸೇರಿದವರಾಗಿರಲಿ ಆದರೆ ಹೊಳೆದ ವಿಚಾರ ಗಳನ್ನು ಸೂತ್ರಪ್ರಾಯವಾಗಿಸಿ, ಸುಸಾಮಂಜಸ್ಯಗೊಳಿಸಿ ಸಲಿಲವಾಗಿ, ಬೋಧಿಸುವ, ಅದನ್ನು ಮನೋವೇದ್ಯವಾಗಿಸುವ ಕಾವ್ಯಕಲೆ ಅವರಿಗೆ ಕರಗತವಾಗಿದೆ. ಅದರಲ್ಲಿ ಅವರಿಗೆ 'ತ್ರಿವಿಧಿ' ಛಂದಸ್ಸಿನ ಮೇಲೆ ಸಂಪೂರ್ಣ ಪ್ರಭುತ್ವವಿದೆ. 'ಗುರು ಸ್ವರೂಪ' 'ಗುರು ಮಹಾತ್ಮೆಯನ್ನೇ' ವಸ್ತು ವಿಷಯವಾಗಿಸಿಕೊಂಡ ಅವರ 'ನಿರಾಭಾರಿ ವೀರಶೈವ ಸಿದ್ಧಾಂತ'ದ ಒಂದು ಪದ್ಯವನ್ನು 'ಗುರುಕರುಣ ತ್ರಿವಿಧಿ'ಯ ಪದ್ಯದೊಡನೆ ಹೋಲಿಸಿ ದಾಗ ಅವರ ಸಹಜ ಪ್ರಸನ್ನ ಶೈಲಿ, ಭಾವ ಬಂಧುರತ್ವ ಗುಣಗಳು ಈ 'ತ್ರಿವಿಧಿ ಕೃತಿ' ಯನ್ನು ಹೇಗೆ ಉತ್ಕೃಷ್ಟಗೊಳಿಸುತ್ತವೆಂಬುದನ್ನು ನಾವು ಸುಲಭವಾಗಿ ಕಂಡರಿಯಬಹುದು.

ವೀರಶೈವ ನಿರಾಭಾರಿ ಷಟ್‌ಸ್ಥಲ ಸಿದ್ಧಾಂತ

ಗುರುವೆ ಅಜ್ಞಾನ ತಿಮಿರಾರ್ಕಭವಭಂಜನನು
ಗುರುವೆ ಭಕ್ತಿ ಜ್ಞಾನ ವೈರಾಗ್ಯಮಂದಿರನು
ಗುರುವೆ ದೀಕ್ಷೆ ಸು–ಶಿಕ್ಷೆ ಮೋಕ್ಷ ಕಾರಣ ಕರ್ತರಲ್ಲದಿನ್ನೋರ್ವರಿಲ್ಲ॥

ಗುರುಕರುಣ ತ್ರಿವಿಧಿ

ಗುರುವೆ ಭಕ್ತರ ಕಲ್ಪತರುವೆ। ಸಜ್ಜನ ಮನೋ
ಹರವೆ ನಿಜಭಕ್ತಿ ಜ್ಞಾನ ವೈರಾಗ್ಯಮಂ
ದಿರವೆ ಮದ್ಗುರುವೆ ಕೃಪೆಯಾಗು॥

ಮೊದಲಿನದು ವಾರ್ಧಕ ಷಟ್ಪದಿಯ ಪೂರ್ವಾರ್ಧ್ಯ ಪದ್ಯ. ಇಲ್ಲಿನ ಎಲ್ಲ ಸಾಲುಗಳು ವೀರಶೈವ ಧರ್ಮ ಪರಿಭಾಷೆಯುಕ್ತ ವಿಶೇಷಣೋಕ್ತಿಗಳು. ಮೇಲಾಗಿ 'ಗುರುವೆ' ಎಂದು ಆರಂಭಗೊಳ್ಳುವ ಲಘು ಮಾತ್ರಾಯುಕ್ತ ಕನ್ನಡದ ಸಂಬೋಧನಾ ಪರ ವಾಕ್ಯಕ್ಕೆ ಸಂಸ್ಕೃತ ಶಬ್ದಾಡಂಬರದ ಶೈಲಿ ಭಾರವೆನ್ನಿಸುತ್ತದೆ. ಇದಾವ ಕ್ಲೀಷೆಗೊಳಗಾಗದಂತೆ ಪದ–ಅರ್ಥ, ಸಹಜ ಲಯ, ಸಹಜ ಪ್ರಾಸ ಹಾಗೂ ಕನ್ನಡ ಉಚ್ಚಾರದ ಹಿತಮಿತಗಳನ್ನು ಸಾಧಿಸಿ ಎಂತಹ ಗಹನ ಗಂಭೀರವಾದ ತತ್ತ್ವಾರ್ಥ ವಿವೇಚನೆಗೂ ಸಹ ತಕ್ಕ ಮಾಧ್ಯಮವಾಗಿ ಗುರುಕರುಣ ತ್ರಿವಿಧಿಯ ಪದ್ಯಗಳು ಮುಂದುವರೆಯುತ್ತವೆ.

ಗುರುಕರುಣ ತ್ರಿವಿಧಿಯ ವಿಷಯ ಪ್ರತಿಪಾದನೆ

ವಚನಕಾರರು ಹಾಗೂ ಕೈವಲ್ಯದ ಹಾಡು ಗಬ್ಬ ಕವಿಗಳು ವೀರಶೈವ ತತ್ತ್ವ ಸಿದ್ಧಾಂತ, ವೇದಾಂತಗಳ ಪರಾಮರಿಕಾಗಿ ಕೆಲವೊಂದು ಸ್ಥಲ–ಕುಳಗಳನ್ನು ಯೋಜಿಸಿ ಆಯಾ ಸ್ಥಲದಲ್ಲಿ ವಿಷಯ ನಿರೂಪಣೆಗೈದಿರುವದನ್ನು ಕಾಣುತ್ತೇವೆ. ಆದರೆ ಗುರುಕರುಣ ತ್ರಿವಿಧಿಯಲ್ಲಿ ಇಂತಹ ಯಾವೊಂದು ಶಾಸ್ತ್ರೀಯ ವಿಷಯ ವಿಭಜನಾಕ್ರಮ ಕಂಡು ಬರುವದಿಲ್ಲ. ಓತಪ್ರೋತವಾಗಿ ಗುರು ಮಹಿಮೆಯನ್ನು ೩೩೩ ಪದ್ಯಗಳುದ್ದಕ್ಕೂ ಸಾರುವ ಈ ಕೃತಿಯ ವಿಷಯವನ್ನು ಅಧ್ಯಯನದ ಅನುಕೂಲಕ್ಕಾಗಿ ಕೆಲವೊಂದು ಸ್ತರಗಳಲ್ಲಿ ವಿಭಜಿಸಿದರೆ ತಪ್ಪಾಗಲಾರದು.

ಗುರುಕರುಣ ತ್ರಿವಿಧಿಯ ವಿಷಯ ವಿಂಗಡಣೆ

I ಗುರುಕಾರುಣ್ಯ ಸ್ಥಲ	**ಪದ್ಯಸಂಖ್ಯೆ**
ಗುರುಕಾರುಣ್ಯದ ಹಂಬಲು	೧–೧೫, ೪೨–೪೪
ಗುರು ತತ್ತ್ವದ ಇರವು	೧೬,೧೭,೧೯
ಗುರು ಒಲುಮೆ	೨೫,೨೬,೨೭.
ಗುರು ವಾತ್ಸಲ್ಯ (ಮಾತೃಭಾವ, ಪಿತೃಭಾವ, ಬಂಧು, ಬಳಗ ಭಾವ)	೨೮–೩೯,

II ಪೂರ್ವಾಶ್ರಯ ನಿರಸನ ಸ್ಥಲ:	ಪದ ಸಂಖ್ಯೆ
ಭವಬಂಧ ನಿವಾರಕಗುರು	೪೧,೪೩,೪೮
ಪಂಚಭೂತಗಳ ಪಂಚಪಂಚೀಕರಣ	೫೭,
ಮಾಯಾಂಗನೆ	೬೩,೬೪,
ಸಂತೆಭಾವ-ಏಕಾಂತಭಾವ	೬೬.
ಊರು ಪುರ ದುರ್ಗ ಬೀದಿಗಳ ಬೆಡಗು	೬೮-೭೦
ನೈಜವ್ಯಾಪಾರ	೭೧

III ಗುರು ದೀಕ್ಷಾ ಸ್ಥಲ	
ಹಸ್ತ-ಮಸ್ತಕ ಸಂಯೋಗ	೭೨-೮೨

VI ಸಾಧಕಾಂಗ ಸ್ಥಲ	
ನವಲಿಂಗ ಸಕೀಲ	೮೯-೯೨, ೧೩೮-೧೪೯
ಅಷ್ಟಾಂಗಯೋಗ-ಶಿವಯೋಗ	೯೩-೧೦೬
ಇಷ್ಟ-ಪ್ರಾಣ-ಭಾವ	೧೧೩,೧೭೬,೨೦೬
ಗುರು-ಲಿಂಗ-ಜಂಗಮ	೧೧೨,೨೦೮-೨೨೮
ಷಣ್ಮಂತ್ರ-ಷಡಂಗ, ಷಡ್ಲಿಂಗೋಪಾಸನೆ	೧೧೭-೧೨೬
ಶರಣ ಸತಿ-ಲಿಂಗಪತಿ	೨೨೯-೨೩೦
ಭಕ್ತಿ-ವಿರಕ್ತಿ-ಮುಕ್ತಿ	೨೩೨-೨೪೭
ಅಷ್ಟಾವರಣದ ನಿಲುವು	೨೭೯-೨೩೧

ಮೇಲಿನ ಪದ್ಯಗಳ ಸಮಗ್ರ ವಿವೇಚನೆ ಇಲ್ಲಿ ಸಾಧ್ಯವಾಗಲಾರದು ಮುಖ್ಯ ಪದ್ಯಗಳಲ್ಲಿ ಬಸಲಿಂಗ ಶರಣರು ವೀರಶೈವ ಮಾರ್ಗ ಕ್ರಮದಲ್ಲಿ ಗುರುವಿನ ಸ್ಥಾನ-ಲಕ್ಷಣಗಳನ್ನು ಹೇಗೆ ನಿರೂಪಿಸಿರುವರೆಂಬ ಸಂಗತಿ ಮೇಲೆ ಒಂದಿಷ್ಟು ಬೆಳಕು ಚೆಲ್ಲಿದೆ.

ಆಣವಾದಿ ತ್ರೈಮಲಗಳನ್ನು ತೊಡೆದು ಶ್ರೀಗುರುವು ಸಚ್ಛಿಷ್ಯನ ಕರಾಬ್ಜದಲ್ಲಿ 'ಇಷ್ಟಾರ್ಥ'ವನ್ನೀವ 'ಇಷ್ಟಲಿಂಗ'ವನ್ನು ಅನುಗೊಳಿಸುತ್ತಾನೆ. ಇದನ್ನು 'ಹಸ್ತ-ಮಸ್ತಕ' ಸಂಯೋಗವೆನ್ನಲಾಗುತ್ತದೆ. 'ಮಸ್ತಕ' 'ಉತ್ತಮಾಂಗ' ಅದುವೇ ಸುಜ್ಞಾನದ ನೆಲೆ. ಅಲ್ಲಿನ 'ಅರುಹನ್ನೇ' ಕುರುಹು ಪ್ರತೀಕವಾಗಿ ಪ್ರತಿಷ್ಠೆಗೊಳಿಸುವದರಿಂದಾಗಿ ಇದು ಉಳಿದ ಹಿಂದೂ ಧರ್ಮ ಪದ್ಧತಿಯ ಮೂರ್ತಿಸ್ಥಾಪನೆ, ಮೂರ್ತಿಪೂಜೆಯೆನ್ನಿಸಲಾರದು. ಇಲ್ಲಿನ ಲಿಂಗವು ಯಾವೊಂದರ ಬಾಹ್ಯ ಕುರುಹಲ್ಲ. ಅರಿವಿಂಗೆ ಅರಿವಾದ ಅಂತರಂಗದ ಮೂಲ ಮಂತ್ರರೂಪಕ 'ಮಹಾಂತ ಬ್ರಹ್ಮ' ರೂಪವೇ ತಾನಾಗಿದೆ ಎನ್ನುತ್ತಾರೆ ಶರಣರು. ಇಂತಹ ಲಿಂಗದ ಅತ್ಯುನ್ನತ ನೆಲೆಯನ್ನು ವೀರಶೈವ ಶಿವಯೋಗದ ಹಿನ್ನೆಲೆಯಲ್ಲಿ ವಿವರಿಸುವ ರೀತಿ ಇಂತಿದೆ.

ಪಶ್ಚಿಮಾಗ್ರದೊಳಿರ್ಪ-ಸ್ವಚ್ಛ ನಿರಂಜನ
ವಾಚ್ಯ ಬ್ರಹ್ಮವನು-ನಿಶ್ಚಯಿಸಿ ಕರಕಿತ್ತ
ನಿಶ್ಚೇಷ್ಟಗುರುವೆ ಕೃಪೆಯಾಗು॥ (೮೩).
ಭ್ರೂಮಧ್ಯಾಜ್ಞೇಯ ನಿಃಸ್ಸೀಮ ಪರಬ್ರಹ್ಮವನು
ನೇಮಿಸುತಲೆನ್ನ ವಾಮಹಸ್ತದೊಳಿಟ್ಟ
ಸ್ವಾಮಿ ಶ್ರೀಗುರುವೆ ಕೃಪೆಯಾಗು॥ (೮೬)

ಇಲ್ಲಿನ 'ಪಶ್ಚಿಮಚಕ್ರ' 'ಭ್ರೂಮಧ್ಯ'ಗಳ ಅರ್ಥ ಸುಲಭಗ್ರಾಹ್ಯವಲ್ಲ ಇದಕ್ಕೆ ಲಿಂಗ-ಸಕೀಲಗಳ ಸೂಕ್ಷ್ಮಸಂಬಂಧಗಳನ್ನು ಯೋಗಾನುಸಂಧಾನದ ಮೂಲಕ ತಿಳಿದಿರಬೇಕಾಗುತ್ತದೆ. ಶರೀರದಲ್ಲಿನ ಆಧಾರಾದಿ ಆರು ಚಕ್ರಗಳಿಗೆ ಮೀರಿದ ಮೂರು ಚಕ್ರಗಳೆಂದರೆ ಬ್ರಹ್ಮಚಕ್ರ, ಶಿಖಾಚಕ್ರ, ಅದರ ಮುಂದಿನದು ಪಶ್ಚಿಮಚಕ್ರ, ಬ್ರಹ್ಮರಂಧ್ರದಲ್ಲಿ 'ನಿಷ್ಕಲಿಂಗ' ಶಿಖಿಯಲ್ಲಿ ನಿಶ್ಶೂನ್ಯಲಿಂಗ ಕೊನೆಯದಾದ ಪಶ್ಚಿಮ ಚಕ್ರದಲ್ಲಿ 'ನಿರಂಜನಲಿಂಗ'ವಿದೆ. ಇದನ್ನೇ ಬಸವಲಿಂಗ ಶರಣರು 'ನಿರಂಜನವಾಚ್ಯಬ್ರಹ್ಮ'ವೆನ್ನುತ್ತಾರೆ. 'ಭ್ರೂಮಧ್ಯ'ವನ್ನು 'ಉನ್ಮನಿ ಸ್ಥಾನ'ವೆಂತಲೂ ಕರೆಯುತ್ತಾರೆ. ಸಕಲ ಕರಣಂಗಳಲ್ಲಿ ಸುಳಿದಾಡುವ ಭ್ರಾಂತಿಮನವನ್ನು ನಿಭ್ರಾಂತಗೊಳಿಸಿ ಏಕಾಗ್ರಚಿತ್ತದಿಂದ ಎವೆಯಿಕ್ಕದೆ ನೇತ್ರದ್ವಯಗಳ ಮಧ್ಯದಲ್ಲಿ ನಿಲ್ಲಿಸುವದೇ ಭ್ರೂಮಧ್ಯಸ್ಥಾನ. ಇಲ್ಲಿಯೇ ಗಂಗೆ-ಯಮುನೆಗಳು ಸೂರ್ಯ-ಚಂದ್ರರು ಸೇರಿರುವದಾಗಿ ಯೋಗಾಭ್ಯಾಸಿಗಳು ಹೇಳುತ್ತಾರೆ. ಹೀಗೆ ತನ್ನೊಳಗಿನ ಅರಿವನ್ನೇ ಪುನರ್‌ಜಾಗರಣಗೊಳಿಸಿ ಗುರು-ಕರುಣಿಸುವ ಲಿಂಗದ ಮಹಿಮೆಯನ್ನು ಬಸವಲಿಂಗ ಶರಣರು ಬಿತ್ತರಿಸುತ್ತಾರೆ.

ಅಷ್ಟಾಂಗಯೋಗ ಮಾರ್ಗಕ್ಕಿಂತ ಶಿವಯೋಗ ಮಾರ್ಗವೇ ಚರಮಸಿದ್ಧಿಯದೆಂದು ಬಸವಲಿಂಗ ಶರಣರ ಅಭಿಮತ ಇಂತಹ ಬಾಹ್ಯಯೋಗದಿಂದ ಶರೀರವನ್ನು ವಜ್ರಸಮಗೊಳಿಸಬಹುದಾದರೂ ಇದು ಆತ್ಮಸಿದ್ಧಿಯೋಗವಾಗಲಾರದು. ಜೀವಾತ್ಮನು ಶಿವಾತ್ಮಿಕನಾಗಿ ನಿಲ್ಲಬೇಕು. ಇದುವೇ ಶಿವಯೋಗ ಈ ಅಖಂಡ ಶಿವಯೋಗಮಾರ್ಗವನ್ನು ಪ್ರಸ್ತಾಪಿಸಿ ಒಂದೊಂದು ತ್ರಿವಿಧಿ ಪದ್ಯಗಳಲ್ಲಿ ಅಷ್ಟಯೋಗಗಳನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸುವ ಎಂಟೆದೆಯ ಬಂಟರಾಗಿದ್ದಾರೆ ಬಸವಲಿಂಗ ಶರಣರು ಅದರ ಸಾರೋಕ್ತಿಗಳನ್ನಿಲ್ಲಿ ಕ್ರಮವಾಗಿ ಹೇಳಿದೆ.

'ಯಮ'ಯೋಗ ಪಾಪದಕ್ರಮ ಶಿವಯೋಗವು 'ಸತ್ಕ್ರಿಯಾಕ್ರಮ' (೯೩)
'ನಿಯಮ'ಯೋಗ ಭವದಾಲಯ, ಶಿವಯೋಗ 'ಸ್ವಯಂಲಿಂಗದ ಪೂಜೆ' (೯೪)
'ಆಸನ'ಯೋಗ ಅಭ್ಯಾಸದಾಯಾಸ ಶಿವಯೋಗ 'ಕರಸಂಜಾಸನಯೋಗ' (೯೫)
'ಪ್ರಾಣಾಯಾಮ' ತ್ರಾಣಗುಂದಿಸುವ ವಿದ್ಯೆ ಶಿವಯೋಗ 'ಮುಕ್ತಿಗೆ
ಪ್ರಾಣಲಿಂಗ' (೯೬)

'ಪ್ರತ್ಯಾಹಾರ' ಮಿಥ್ಯೆಯ ಕೊಂಬುವುದು. ಶಿವಯೋಗ 'ನಿತ್ಯ ತೃಪ್ತಿಯ ನೆಲೆ'(೯೭)
'ಧ್ಯಾನಯೋಗ' ಮೌನದ ಮಾಟ, ಶಿವಯೋಗ ಇಷ್ಟಲಿಂಗ ಜ್ಞಾನದ ಕೂಟ(೯೮)
ಧಾರಣಯೋಗ ಆಚರಣದ ಸಂಕೋಲೆ, ಶಿವಯೋಗ ಲಿಂಗಧಾರಣೆಯ
ನಿಜಲೀಲೆ (೯೯)
'ಸಮಾಧಿಯೋಗ' ತಾಮಸದ ತಳಮಳಿಕೆ ಶಿವಯೋಗ ಲಿಂಗಾಂಗ ಸಾಮರಸ್ಯದ
ಗಳಿಕೆ (೧೦೦)

ಇಂತಹ ಅಪೂರ್ವ ಶಿವಯೋಗ ವಿದ್ಯೆಯ ರಹಸ್ಯವನ್ನು ಎಷ್ಟು ಪ್ರೀತಿ-ವಾತ್ಸಲ್ಯಗಳಿಂದ ಗುರು-ಶಿಷ್ಯನಿಗೆ ಬೋಧಿಸಿದನೆಂಬುದನ್ನು ಅವರ ನುಡಿಗಡಣದಲ್ಲಿಯೇ ಕೇಳಬೇಕೆನ್ನಿಸುತ್ತದೆ.

'ಹಲವು ಯೋಗವ ಮಾಡಿ ಫಲವೇನು ಮಗನೆ ಎಂ
ದೊಲಿದು ಲಿಂಗಾಂಗ ಸುಲಭ ಯೋಗವನೊಡನೆ
ಕಲಿಸಿದಾ ಗುರುವೆ ಕೃಪೆಯಾಗು||' (೧೦೬)

ಇಷ್ಟ-ಪ್ರಾಣ-ಭಾವ ಈ ತ್ರಿವಿಧಲಿಂಗಗಳನ್ನು ತ್ರಿವಿಧಕ್ಕರ್ಪಿಸುವ ಸಕೀಲಗಳನ್ನು ಬಸವಲಿಂಗ ಶರಣರು ನಿರೂಪಿಸಿರುವಂತೆ ಮತ್ತಾವ ತ್ರಿವಿಧಿಕಾರನೂ ನಿರ್ವಚನಗೊಳಿಸಿದಂತೆ ನಮಗೆ ತೋರುವದಿಲ್ಲ. ಗುರು-ಲಿಂಗ-ಜಂಗಮ ಸ್ವಯ-ಚರಪರ, ಅ-ಉ-ಮಾ. ಪ್ರಣವಾಕ್ಷರಗಳು, ವೃತ್ತ-ಕಟಿ-ವರ್ತುಳ ಇವೆಲ್ಲವುಗಳನ್ನು 'ಲಿಂಗ-ಮುಖ ಸಂಬಂಧದ ಸಕೀಲ'ಗಳೆಂದಿಲ್ಲಿ ಕರೆಯಬಹುದು. ಈ ತ್ರಿವಿಧ ಪದಾರ್ಥಗಳ ಸಾಮರಸ್ಯ ವಿವೇಚನೆಯೇ ಇಲ್ಲಿ ಪ್ರಧಾನವಿಷಯವಾಗಿರುವದರಿಂದ ಇದನ್ನು ಈ ಅರ್ಥಸಂದರ್ಭದಲ್ಲಿ 'ಗುರು ಕರುಣ ತ್ರಿವಿಧಿ' ಎಂದಿರುವುದು ಶೀರ್ಷಿಕೆಯ ಔಚಿತ್ಯವನ್ನು ಇನ್ನಷ್ಟು ಹೆಚ್ಚಿಸಿದೆ. (ಪರಿಶಿಷ್ಟ ನೋಡಿ.) ಇದಕ್ಕೆ ಸೂತ್ರಪ್ರಾಯವಾದ ಒಂದು ಪದ್ಯವನ್ನಿಲ್ಲಿ ನಿದರ್ಶನಕ್ಕೆ ಕೊಟ್ಟಿದೆ.

ಗುರುಲಿಂಗ ಜಂಗಮವು ವರಭಾವ ಪ್ರಾಣೇಷ್ಟ
ಸ್ಥಿರ ಚರಪರ ಮೂರು ಕರದಿಷ್ಟಲಿಂಗವೆಂ
ದೊರೆದ ಶ್ರೀ ಗುರುವೆ ಕೃಪೆಯಾಗು|| (೧೧೫)

'ಲಿಂಗ' ಒಂದೇ ಸಾಕು ಬಹು ಜನ್ಮಕೃತ ಪಾಪಲೇಪನದ ವಿಮೋಕ್ಷಕ್ಕೆ ಮೃತ್ಪಿಂಡವನ್ನು ಚಿತ್ಪಿಂಡವಾಗಿಸುವದಕ್ಕೆ. ಈ 'ಲಿಂಗ' ಪದಕ್ಕೆ ಸಾಲೋಕ್ಯ, ಸಾಯುಜ್ಯಾದಿ ನಾಲ್ಕು ಪದಗಳು ಕೀಳಾಗಿ ತೋರುತ್ತವೆಂದು ಶರಣರು ನುಡಿಯುತ್ತಾರೆ. ಅಂಗ-ಲಿಂಗಗಳು ಸಕೃದ್ದರ್ಶನಕ್ಕೆ ಭಿನ್ನವಾಗಿ ಕಂಡರೂ ಅವೆರಡು ಒಂದೇ ಚೈತನ್ಯಾತ್ಮದ ವಿಸ್ಫುರಣಗಳು. ಆ ಚೈತನ್ಯ ಕಳೆಯನ್ನೇ ಅಂಗದ ಮೇಲೆ ಸಂಸ್ಕರಿಸಿದಾಗ ಉಂಟಾಗುವ ಆತ್ಮಾನುರಾಗ-ರತಿ ಅಗಮ್ಯ, ಅಪ್ರಮಾಣ!

ಈ ಲಿಂಗ ನಿನ್ನಂಗ-ಕ್ಕಾಲಿಂಗನವಾಗಲ್ಕೆ
ನೀ ಲಿಂಗ ನಿನ್ನ ಮೈಲಿಂಗವೆಂದೆನ್ನೊಳ್
ಕೀಲಿಸಿದ ಗುರುವೆ ಕೃಪೆಯಾಗು॥ ೩

ಇಂತಹ ಸಾಫಲ್ಯವನ್ನು ಗುರುಕಾರುಣ್ಯದಿಂದ ಸಾಧಕ ಪಡೆಯುತ್ತಾನೆ. ಆದರೆ ಈ ಅವಸ್ಥೆಗೆ ತಲುಪದ ಬದ್ಧಜೀವ ಅನಂತ ಭವಪಾಶದಲ್ಲಿ ತೊಳಲುತ್ತದೆ. ಇಲ್ಲಿ ಕಾಮ-ಕ್ರೋಧಗಳು, ರಾಗ-ದ್ವೇಷಗಳು ಅಷ್ಟಮದ, ಅರಿಷಡ್ವರ್ಗಗಳು ಅವನನ್ನು ಸುತ್ತಿಮುತ್ತಿ ಧಾವತಿಗೆಡಿಸುತ್ತವೆ. ಈ ಬಗೆಯ ಸಾಧಕನ ಪೂರ್ವಾವಸ್ಥೆಯ ಅನಂತ ಕೋಟಲೆಗಳ ವರ್ಣನೆ ಇಲ್ಲಿ ಮಾರ್ಮಿಕವಾಗಿದ್ದು, ಇವೆಲ್ಲದರ ಬಾಧೆಯಿಂದ ಮುಕ್ತಗೊಳಿಸುವಂತೆ ಸಾಧಕ ಮನಸ್ಸು ಶ್ರೀಗುರುವಿನಲ್ಲಿ ಮೊರೆ ಕೇಳುತ್ತದೆ.

ಕಾಮನ ಕೋಟಲೆ:

ಕರಿಯ ಕಬ್ಬಿನ ಬಿಲ್ಲು ಅರಳು ಮಲ್ಲಿಗೆ ಬಾಣ
ನುರವಣೆಗೆ ಲೋಕ ಉರುಳಲ್ಕೆ ನಾ ನಿಮ್ಮ
ಮೊರೆಹೊಕ್ಕೆ ಗುರುವ ಕೃಪೆಯಾಗು॥ (೪೪)

ಸೂರೆಗೊಳ್ಳುವ ಮಾಯಾಂಗನೆ:

ಅರಣ್ಯದೊಳು ಪಣ್ಯನಾರಿ ಮಾನವನಾರಿ
ದಾರಿಗೊಂಡವರ ಸೂರೆಗೊಂಬಳು ಗುರುವೆ
ಸೇರಿದೆನು ನಿಮ್ಮ ಕೃಪೆಯಾಗು॥ (೪೬)

ಅಷ್ಟಮದಗಳ ಕಂಟಕ:

ನಡುಮಧ್ಯ ಮಾವುತನು ಎಡಬಲದಿ ಆನೆಗಳು
ಒಡಗೂಡೆ ನೋಡಿ ಎಡರು ಕಂಟಕಲಿಪಿಯ
ತೊಡೆಯಯ್ಯ ಗುರುವೆ ಕೃಪೆಯಾಗು॥ (೪೧)

ಸಂಚಳಿಯಂದ ಪಂಚಭೂತಕ:

ಭೂತ ಪಂಚಕ ಪಂಚ ಭೂತ ತವೆ ಕೂಡಲ
ದ್ಭೂತಮಯವಾದ ಭೂತಳಕೆ ಕರ್ತಭೂ
ನಾಥ ಶ್ರೀಗುರುವೆ ಕೃಪೆಯಾಗು॥ (೬೧)

ಸಾಂಖ್ಯದರ್ಶನ ಹಾಗೂ ವೀರಶೈವ ದರ್ಶನಗಳನ್ನು ತೌಲನಿಕವಾಗಿ ವಿವೇಚಿಸಿದಾಗ ಪಂಚಭೂತ ತತ್ತ್ವಗಳ ವಿಚಾರದಲ್ಲಿ ಅಂತರ ಕಾಣಿಸುತ್ತದೆ. ಸಾಂಖ್ಯರ ಪ್ರಕಾರ ಪಂಚಭೂತಗಳೇ ಎಲ್ಲ ತತ್ತ್ವಗಳಿಗೆ ಕೊನೆಯ ಮೆಟ್ಟಿಲುಗಳಾದರೆ ವೀರಶೈವರ ಆಗಮ-ಕರಣ ಹಸುಗೆ ಗ್ರಂಥಗಳ ಪ್ರಕಾರ ಪಂಚಭೂತಗಳೇ ಉಳಿದೆಲ್ಲ ತತ್ತ್ವಗಳಿಗೆ

ಮೊದಲ ಮೆಟ್ಟಿಲಾಗಿವೆ.೪ ಇದನ್ನೇ ಮೇಲಿನ ತ್ರಿವಿಧಿಯಲ್ಲಿ ಬಸವಲಿಂಗ ಶರಣರು ಪುರಸ್ಕರಿಸುತ್ತಾರೆ. ಆದರೆ ಎಲ್ಲಿಯವರೆಗೂ ಈ ಪಂಚ ತತ್ತ್ವಗಳು ಆತ್ಯಂತಿಕವಾದ 'ಆತ್ಮ' 'ಶಿವ' ತತ್ತ್ವದಲ್ಲಿ ಬೆರೆಯುವದಿಲ್ಲವೋ ಆ ತನಕ ಪಂಚಭೂತಗಳ ಬಾಧೆಯಿಂದ ಜೀವನು ವಿಮುಕ್ತನಾಗುವದಿಲ್ಲ. ಇದನ್ನು ಬೆಡಗಿನ ಭಾಷೆಯಲ್ಲಿ ಬಸವಲಿಂಗ ಶರಣರು ಕೆಲವೊಂದು ತ್ರಿವಿಧಿಗಳಲ್ಲಿ ಬಣ್ಣಿಸಿದ್ದಾರೆ:

ಭೂಮಿ ಬೀಜವ ಬಿತ್ತಿ ಭೂಮಿಯನು ಬೆಳೆದೊಕ್ಕಿ
ಭೂಮಿಯನು ತೂರಲ್ಕೆ–ಭೂಮಿ ತಾ ಜೊಳ್ಳಾದು
ದೈ ಮಹಾಗುರುವೆ ಕೃಪೆಯಾಗು॥ (೫೬)

ನೀರು ಏರಿಯನೇರಿ ನೀರಡಿಸಿ ಬಾಯಾರಿ
ನೀರು ನೀರ್ಗುಡಿದು ನೀರಡಿಸಿ ಸತ್ತಿತೈ
ನೀರು ಶ್ರೀಗುರುವೆ ಕೃಪೆಯಾಗು॥ (೫೭)

ಲಾಭವಿಲ್ಲದ ಲೋಕವ್ಯಾಪಾರ:

ಬಸವಲಿಂಗ ಶರಣರು ಆರಂಭಿಕ ಜೀವನದಲ್ಲಿ ವ್ಯಾಪಾರವನ್ನೇ ತಮ್ಮ ಜೀವನ ವೃತ್ತಿಯಾಗಿಸಿಕೊಂಡು ಬಾಳಿದರೆಂದು ಗೊತ್ತಾಗುತ್ತದೆ. ಆದರೆ ಈ ಲೋಕ ವ್ಯಾಪಾರದ ಅರ್ಥ–ಲಾಭಗಳಿಲ್ಲದ ಬದುಕಿನಿಂದ ನಿರ್ಲಿಪ್ತರಾಗಿದ್ದು ಸದಾವಕಾಲವೂ ಏಕಾಂತದಲ್ಲಿದ್ದು ಜೀವನದಲ್ಲಿ ಪರಮಾರ್ಥ ಲಾಭದ ಗಳಿಕೆಗೆ ಗುರಿಯಿಟ್ಟರು.

ಸವಣರಾ ಪೇಟೆಯೊಳು ದಿವಸ ಸಂತೆಯ ಶಬ್ದ
ನಿವಹ ಪೂರೈಸದೇ ಕಾಂತದೊಳೆನ್ನ
ನವಧರಿಸು ಗುರುವೆ ಕೃಪೆಯಾಗು॥ (೬೬)

ಶರೀರವೆಂಬುದೇ ಚೌರಸ್ತೆಯ ಒಂದು ಬೀದಿ ಇಲ್ಲಿ ಫಲ ಸರಕನ್ನು ಒಟ್ಟಿದ್ದಾಯಿತು. ಆದರೆ ಇಂತಹ ಲೌಕಿಕ ವ್ಯಾಪಾರದಿಂದ ದೊರಕಿದ ಲಾಭವೇನು?

ಇಕ್ಕೇರಿ ಚೌಬೀದಿಯೊಳಿಕ್ಕಿರ್ದಫಲ ಸರಕ
ತಕ್ಕೊಂಡು ಮಾರಿ ಮಿಕ್ಕ ಲಾಭವದೆನಗೆ
ಸಿಕ್ಕದೈ ಗುರುವೆ ಕೃಪೆಯಾಗು॥ (೭೧)

ಒಟ್ಟಿನಲ್ಲಿ ಬದುಕು ಲೌಕಿಕದ್ದಿರಲಿ, ಅಲೌಕಿಕದ್ದೇ ಇರಲಿ. ಜೀವನದ ಅರ್ಥ–ಪರಮಾರ್ಥಗಳನ್ನು ತಿಳಿಸಿ ಸನ್ಮಾರ್ಗದಲ್ಲಿ ಮುನ್ನಡೆಸುವ 'ಗುರು' ಈ ಉಭಯ ಮಾರ್ಗದಲ್ಲೂ ಅತ್ಯಗತ್ಯವೆಂದು ಗುರುಕರುಣ ತ್ರಿವಿಧಿ ಸಾರುತ್ತದೆ. 'ಶ್ರೀಗುರುವೆ ಕೃಪೆಯಾಗು' ಎಂಬ ಅಂಕಿತದಿಂದಲೇ ಕೊನೆಗೊಳ್ಳುವ ಎಲ್ಲ ಪದ್ಯಗಳಲ್ಲಿ ಸದ್ವಿನಯ ಲಾಲಿಗಳಾದ ಅವರ ಹೃದಯವಾಣಿ ಮಿಡಿಯುತ್ತದೆ. ಬಸವಲಿಂಗ ಶರಣರ ಅನನ್ಯ

ಶರಣಾಗತಿ ನಿರ್ವಾಜ್ಯ ಪ್ರೇಮ ಆರ್ತಭಾವಗಳು ಎಲ್ಲಿಂದಲೋ ಎರವಲು ತಂದ ಪರ ಪಂಕ್ತಿಗಳಾಗದೆ ಜೀವಾತ್ಮನೇ–ಪರಿಶುದ್ಧಾತ್ಮ ಸಾಕ್ಷಾತ್ಕಾರ ಹಾಗೂ ಅದರ ಅನುಭೂತಿ ಗಾಗಿ ಹಂಬಲಿಸುವ ಧ್ವನಿ ಇಲ್ಲಿ ಕೇಳಿಬರುತ್ತದೆ.

'ಶಿಶುವಾಗಿ ಹತ್ತಿ ಪಶುವಾಗಿ ಸುಳಿದೆನ್ನೆ' (೫೧) ಸೋತು ಶಿರಬಾಗಿ ನಿಮ್ಮಂಘ್ರಿಗೆರ ಗಿದೆನು ಗುರುವೆ (೫೨) 'ಪರಿಗಂಡೆ ಗುರುವೆ, (೫೫) ಗುರುಪುತ್ರರೊಳಗೆನ್ನ ಕಿರಿಯ ಮಗನೆಂದು ಕರವಿಡಿ (೨೭), 'ಸಲಹು ಅವಧರಿಸು', ಪಾಲಿಸು 'ಬಾಳೆಂದು ಹರಸು'. ಎನ್ನೊಡೆಯ ಮಜ್ಜನನಿ, ಪೆತ್ತಯ್ಯ, ಹೆತ್ತವ್ವ, ಎನ್ನಪ್ಪ ಮಜ್ಜಯ್ಯ, ಮುತ್ತಯ್ಯ ಎನ್ನತಾತ ಎನ್ನಬಂಧು. ಆಶ್ರಯಿಸಿದೆ, ಮೊರೆಹೊಕ್ಕೆ, ಸೇರಿದೆ–ಇವು ಅಣು ರೂಪದ ಅಲ್ಪಜೀವಿ, ಮಹತ್ತಾದ, ಪರಮಭೂಮವಾದ ವಸ್ತುವೊಂದನ್ನಾಶ್ರಯಿಸುವಲ್ಲಿ ವ್ಯಕ್ತ ಪಡಿಸುವ ಉದ್ಧಾರೋಕ್ತಿಗಳಾಗಿವೆ. ತತ್ತ್ವ, ಸಿದ್ಧಾಂತ, ಆಚರಣೆ, ಅನುಭವ ಎಷ್ಟೇ ದೊಡ್ಡದಾಗಿರಲಿ, ಆದರೆ ಅದನ್ನು ಸ್ಪಂದಿಸುವ ಹೃದಯ ಭಾವಗಳಿಲ್ಲದೆ ಹೋದರೆ ಅದು ಕಾವ್ಯವೆನ್ನಿಸುವದಿಲ್ಲ. ಬರೀ ಸಿದ್ಧಾಂತ ಒಣ ವೇದಾಂತವಾಗುತ್ತದೆ. ತತ್ತ್ವದ ಹಸುಗೆ ಭಾವದ ಬೆಸುಗೆ ಇವೆರಡನ್ನೂ ಮೇಳವಿಸಿಕೊಂಡ ಸತ್ಕೃತಿ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯಾಗಿದೆ. ವೀರಶೈವ ಸಾಹಿತ್ಯದಲ್ಲಿ ಇದೊಂದು ಲಘು ಪ್ರಕಾರದ ಕೃತಿ ಯೆಂದು ಹೇಳುವದು ಸರ್ವೇಸಾಮಾನ್ಯವಾದರೂ ಇಲ್ಲಿನ ತತ್ತ್ವಚಿಂತನೆ, ನಿರರ್ಗಳಬೋಧೆ, ಉಚ್ಚ ಆದರ್ಶಗಳಿಂದಾಗಿ ಗುರುತರ ಅಷ್ಟೇ ಅಲ್ಲ ಗೌರವಾನ್ವಿತ ಕೃತಿಯೂ ಸಹ ಆಗಿರುವ ದನ್ನಿಲ್ಲಿ ಮರೆಯುವಂತಿಲ್ಲ.

ಮುಂಡರಗಿಯ ಸಂಸ್ಥಾನಮಠದ ಪೂಜ್ಯ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳವರು ಬಸವಲಿಂಗ ಶರಣರ ಹಾಗೂ ಅವರ ಗುರುಗಳ ಬಗೆಗೆ ನಿರೂಪಿ ಸಿರುವ ಎರಡು ಕೃತಿಗಳು (೧) ಲಿಂಗನಾಯ್ಕನಹಳ್ಳಿಯ ಶ್ರೀ ಚನ್ನವೀರ ಮಹಾಶಿವ ಯೋಗಿಗಳು (ಚರಿತ್ರೆ ೧೯೮೧) ಹಾಗೂ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿ (ವ್ಯಾಖ್ಯಾನ) ವೀರಶೈವ ದಾರ್ಶನಿಕ ಸಿದ್ಧಾಂತ (೧೯೮೯) ಇವು ಅವರೀರ್ವರ ಕಾಲ–ಜೀವನ–ಕೃತಿ ಸಂಗತಿಗಳಿಗೆ ಅತ್ಯಮೂಲ್ಯವಾದ ಬೆಳಕು ಚಲ್ಲುವ ಕೃತಿಗಳಾಗಿವೆ. "ದಾರ್ಶನಿಕ ಸಿದ್ಧಾಂತ"ವಂತೂ ವೀರಶೈವ ತ್ರಿವಿಧಿ ಸಾಹಿತ್ಯ ಪರಾಮರ್ಶನ ಗ್ರಂಥಗಳಲ್ಲೇ ಬಂದು ಹೊಸ ಆಯಾಮ ತಂದಿರುವ ಮಹತ್ವದ ಕೃತಿ.

ಪರಿಶಿಷ್ಟ:

ಗುರುಕರುಣ ತ್ರಿವಿಧಿಯಲ್ಲಿ ವ್ಯಕ್ತಗೊಂಡ ತ್ರಿವಿಧಲಿಂಗಮುಖ ಸಂಬಂಧ ಸಕೀಲಗಳು.

ಬಸವಲಿಂಗ ಶರಣರು 'ಸಕೀಲ' ಪದವನ್ನು ಪ್ರಯೋಗಿಸಿಲ್ಲವಾದರೂ ಇಲ್ಲಿ ಇಷ್ಟ–ಪ್ರಾಣ–ಭಾವ ಈ ಮೂರರ ಸಂಬಂಧಗಳು ಯಾವ ಯಾವ ಸ್ಥಳ–ಕುಳದಲ್ಲಿ ಹೇಗೆ ಪಾರಸ್ಪರಿಕ ಸಂಬಂಧಗಳನ್ನುಂಟುಮಾಡಿವೆ. ಇವುಗಳ ಜೋಡಣೆಯನ್ನಿಲ್ಲಿ ತಿಳಿಯಲು

ಈ ಪರಿಶಿಷ್ಟದಲ್ಲಿ ಈ ಕೆಳಗಿನ ಲಕ್ಷಣಗಳನ್ನು ತ್ರಿವಿಧಿಯ ಪದ್ಯಗಳ ಅನುಕ್ರಮ ಸಂಖ್ಯೆಯೊಂದಿಗೆ ಹೇಳಲಾಗಿದೆ.

ತ್ರಿವಿಧಲಿಂಗ / ತ್ರಿವಿಧತತ್ತ್ವ	ಇಷ್ಟ	ಪ್ರಾಣ	ಭಾವ	ಪದ್ಯಸಂಖ್ಯೆ
	ರೂಪಕ	ಚಿದ್ರೂಪಕ	ನಿರ್ಲೇಪಕ	೧೭೭
	ತನು	ಮನ	ಆತ್ಮ	೧೭೮
	ತೋರತನು	ಗಂಭೀರತನು	ಕಾರಣತನು	೧೭೯
	ಮನ	ಸನ್ಮನ	ಉನ್ಮನ	೧೮೦
	ಆತ್ಮ	ಅಂತರಾತ್ಮ	ಪರಮಾತ್ಮ	೧೮೧
	ಜೀವವಿಶ್ವ	ಜೀವತೈಜಸ	ಪ್ರಾಜ್ಞಜೀವ	೧೮೨
	ಅಂಗ	ಅಂತರಂಗ	ಉತ್ತಮಾಂಗ	೧೮೩
	ಭಾವ	ಅನುಭಾವ	ನಿರ್ಭಾವ	೧೮೫
	ಅಡಿ	ನಡು	ಮೇಲಡಿ	೧೮೬
	ಅಂಗ	ಪ್ರತ್ಯಂಗ	ಉಪಾಂಗ	೧೮೭
	ಎಡ	ಬಲ	ನಡು	೧೮೮
	ಕಯ್ಯು	ಬಾಯಿ	ವಚನ	೧೮೯
	ನಡೆ	ಮೂರ್ನುಡಿ	ನಡೆ–ನುಡಿ	೧೯೦
	ನಿಲ್ಲು	ಕುಳ್ಳಿಕೆ	ಮಲಗಿಕೆ	೧೯೧
	ಜಾಗ್ರ	ಸ್ವಪ್ನ	ಸುಪುಪ್ತಿ	೧೯೨
	ದೀಕ್ಷೆ	ಶಿಕ್ಷೆ	ಮೋಕ್ಷ	೧೯೨
	ಅಂಗಾಚರಣೆ	ಲಿಂಗಮಂತ್ರ	ಪ್ರಾಣಸಂಗ	೧೯೪
	ಸ್ಥಾವರ	ಸಂಚರ	ಪ್ರಾಣತತ್ಪರ	೧೯೫
	ಗುರುಪಾದೋದಕ	ಲಿಂಗೋದಕ	ಚರಣೋದಕ	೧೯೬
	ಶುದ್ಧಶೇಷ	ಸಿದ್ಧ	ಪ್ರಸಿದ್ಧ	೧೯೭
	ಭೂತಿ	ವಿಭೂತಿ	ಚಿದ್ಭೂತಿ	೧೯೮
	ರುದ್ರಾಕ್ಷೇಕ್ಷಣ	ರುದ್ರಾಕ್ಷಕಳೆ	ರುದ್ರಾಕ್ಷಭಾವ	೧೯೯
	ಮಂತ್ರಮೂಲ	ಮಂತ್ರಶಾಖೆ	ಪ್ರಾಣಮಂತ್ರ	೨೦೦
	ತ್ಯಾಗಾಂಗ	ಭೋಗಾಂಗ	ಯೋಗಾಂಗ	೨೦೨
	ಧ್ಯಾನಾರ್ಚನೆ	ಜ್ಞಾನಾರ್ಚನೆ	ಮೌನಾರ್ಚನೆ	೨೦೩
	ಅಷ್ಟಾವರಣ	ಪಂಚಾಚಾರ	ಷಟ್‌ಸ್ಥಲ	೨೦೧
	ಕರಜಪ	ಸ್ವರಜಪ	ಬಯಲಜಪ	೨೦೫
	ಶರೀರಾರ್ಪಣ	ಕರಣಾರ್ಪಣ	ಭಾವಾರ್ಪಣ	೨೦೬

ಅಡಿಟಿಪ್ಪಣಿಗಳು

೧. ಕ. ಚ. ಕಾರರು ಕವಿಚರಿತೆಯ ತೃತೀಯ ಸಂಪುಟದಲ್ಲಿ ನ್ಯೈಲಾರ ಬಸವಲಿಂಗ ಶರಣರ ಕಾಲ ಸು. ೧೬೦೦ ಎಂದಿದ್ದಾರೆ. ಇವರು ಬಾಲಲೀಲಾ ಮಹಾಂತ ಶಿವಯೋಗಿಗಳ ಸಮಕಾಲೀನರೂ, ಸಹಪಾಠಿಗಳೂ ಆಗಿದ್ದರಿಂದ ಇವರು ಸು. ೧೮೪೦ರಲ್ಲಿದ್ದರೆಂದು ಡಾ॥ ಎಂ. ಎಸ್. ಸುಂಕಾಪುರ ತರ್ಕಿಸಿದ್ದಾರೆ. ಗು. ಕ. ತ್ರಿ.–ಕವಿ ಕಾವ್ಯ ಪರಿಚಯ ಪು. xxiii ಮುರುಘಾಮಠ ಪ್ರಕಾಶನ.

೨. ಬಸವನಾಳರ ಬರೆಹಗಳು (ಸಂಕಲನ) ಕರ್ನಾಟಕ ಸರಕಾರ ಪ್ರಕಟಣೆ, ೧೯೮೨.

೩. ಈ ದಿವ್ಯಾನುಭೂತಿಯನ್ನೇ ಒಬ್ಬ ಅನುಭಾವ ಕವಿ 'ಕರಣಂಗಳೆಲ್ಲ ಚಿತ್ಕಿರಣಂ ಗಳಾದುವೆಂದು ಬಣ್ಣಿಸಿದ್ದಾನೆ. ಕಾಶ್ಮೀರ ಶೈವದ ಶಿವಸೂತ್ರಗಳಲ್ಲಿ 'ಶುದ್ಧ ತತ್ತ್ವ' ರೂಪಿಯಾದ ಶಿವನ ಅರಿವು ಜೀವಿಗುಂಟಾದಾಗ ಸರ್ವದೇಹ ವ್ಯಾಪಾರವು ಚಿನುಮಯ ಶಿವರೂಪದ್ದಾಗಿ ತೋರುವದಾಗಿ ಹೇಳಿದೆ.

ಸರ್ವಂ ದೇಹಂ ಚಿನ್ಮಯಂ ಹಿ ಜಗದ್ವಾ ಪರಿಭಾವಯೇತ್
ಯುಗಪನ್ನಿರ್ವಿಕಲ್ಪೇನ ಮನಸಾ ಪರಮೋದ್ಭವಃ (ವಿಜ್ಞಾನ ಭೈರವ)

೪. ಡಾ॥ ನಂದೀಮಠ–ಕರ್ನಾಟಕ ಧರ್ಮಗಳು ಕ. ಚ. ಭಾ. ೩ (ಕನ್ನಡ ಸಾಹಿತ್ಯ ಪರಿಷತ್ ಪ್ರಕಟನೆ)

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳವರ ಕೈವಲ್ಯ ದರ್ಪಣ

—ಕೆ. ವಿ. ಬಾಳಿಕಾಯಿ

ವೀರಶೈವ ಧರ್ಮವು ಬಹು ಪ್ರಾಚೀನವಾದುದು. ಷಟ್‌ಸ್ಥಲಗಳ ಮೂಲಕ ಮಾನವನನ್ನು ಮಹಂತನನ್ನಾಗಿ ಮಾಡುವ ದಿವ್ಯಾಮೃತ. ಅಲ್ಲಿಂದ ಇಲ್ಲಿಯವರೆಗೆ ಈ ವಿಶಾಲ ಧರ್ಮದಲ್ಲಿ ಅನೇಕ ಮಹಾತ್ಮರು, ಶಿವಶರಣರು ಆಗಿಹೋಗಿದ್ದಾರೆ. ಎಲ್ಲರ ತತ್ತ್ವಗಳನ್ನು ಕಂಡಾಗ, ಕಂಡು ಉಂಡಾಗ ಬಹಿರಂಗ ಸಂಗ ಬಿಟ್ಟು ಅಂತರಂಗದ ಜ್ಯೋತಿ ತಾನೇ ತಾನಾಗಿ ದೇದೀಪ್ಯಮಾನವಾಗಿ ಬೆಳಗುತ್ತದೆ. ಇಂತಹ ಮಹಾತ್ಮರಲ್ಲಿ ಮುಳಗುಂದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಒಬ್ಬರಾಗಿದ್ದಾರೆ.

ಈ ಶಿವಯೋಗಿಗಳ ಬಗೆಗೆ ಐತಿಹಾಸಿಕವಾದ ಚಾರಿತ್ರ್ಯವು ನಮಗೆ ಸಾಕಷ್ಟು ಲಭ್ಯವಾಗಿಲ್ಲ. ಅಲ್ಲಲ್ಲಿ ಪ್ರಚಲಿತವಿದ್ದ ಅಂಶಗಳನ್ನು ಗಮನಿಸಿ ಇವರ ಚರಿತ್ರೆಯನ್ನು ಹೇಳಬೇಕಾಗುತ್ತದೆ. ಈ ಮಹಾತ್ಮರು ೧೯ನೆಯ ಶತಮಾನದ ಮೊದಲ ಪಾದದಲ್ಲಿ ಬಾಳಿ ಬೆಳಗಿದರು. ಮುಳಗುಂದದ ಕಲ್ಮಠದ ಮಹಾಂತ ಶಿವಯೋಗಿಗಳು ಬಿಜಾಪುರ ಜಿಲ್ಲೆಯ ಯರನಾಳ ಗ್ರಾಮದ ಹಿರೇಮಠದ ಸದ್ಭಕ್ತ ದಂಪತಿಗಳಿಗೆ ಗಂಡುಮಗುನನ್ನು ಆಶೀರ್ವದಿಸಿದರು. ಆತನೇ ಮುಂದೆ ಬಾಲಲೀಲಾ ಮಹಾಂತ ಶಿವಯೋಗಿಯೆಂದು ಪ್ರಸಿದ್ಧವಾದನು.

ತಮ್ಮ ಚಿಕ್ಕ ವಯಸ್ಸಿನಲ್ಲೇ ತಾಯಿ-ತಂದೆಯನ್ನು ಬಿಟ್ಟು ಸದ್ಗುರುಗಳನ್ನು ಹುಡುಕುತ್ತ ಲಿಂಗನಾಯಕನಹಳ್ಳಿಗೆ ಒಂದು ಅಲ್ಲಿ ಶ್ರೀ ಚೆನ್ನವೀರ ಸ್ವಾಮಿಗಳ ಶಿಷ್ಯರಾಗಿ ಶಿವಯೋಗ ಸಾಧನವನ್ನು ಪಡೆದು ಜ್ಞಾನನಿಧಿಯಾಗಿ ದೇಶಸಂಚಾರ ಮಾಡುತ್ತ, ಬಾಲಲೀಲೆಗಳನ್ನು ತೋರುತ್ತ ಭಕ್ತರನ್ನು ಶಿವಭಕ್ತಿಯಲ್ಲಿ ನಡೆಸುತ್ತ ಅವರನ್ನು ಉದ್ಧರಿಸಿದರು.

ಈ ಮಹಾತ್ಮರು ರಚಿಸಿದ ಕೃತಿಯೇ 'ಕೈವಲ್ಯ ದರ್ಪಣ'. ಕೈವಲ್ಯವೆಂದರೆ ಮೋಕ್ಷ ದರ್ಪಣವೆಂದರೆ ಕನ್ನಡಿ. ಮೋಕ್ಷವನ್ನು ತೋರಿಸುವ ಕನ್ನಡಿ. ಇದೊಂದು ಬಿಡಿಪದ್ಯಗಳ ಸಂಕಲನ. ಇದರ ಮಹಿಮೆಯನ್ನು ಎಷ್ಟು ವರ್ಣಿಸಿದರೂ ತೀರದು. ಶ್ರೀಗಳವರ ಆತ್ಮಧ್ವನಿಯೇ ಈ ಪದ್ಯಗಳಲ್ಲಿ ಗುಂಜಾರವ ಮಾಡಿದಂತೆ ಆಗುತ್ತದೆ. ಒಂದೊಂದು ಪದ್ಯವೂ ಸಾಧಕನಿಗೆ ಸಾಧನೆಯ ಸೋಪಾನ. ಎಲ್ಲ ಪದ್ಯಗಳ ಸೌಂದರ್ಯವನ್ನು ವಿವರಿಸಿ ಹೇಳುವುದು ಈ ಲೇಖನಕ್ಕೆ ಮೀರಿದ ಮಾತು.

ವೀರಶೈವ ಧರ್ಮದ ಅಷ್ಟಾವರ್ಣಗಳಲ್ಲಿ ಮೊದಲನೆಯ ಸ್ಥಾನ ಗುರುವಿನದು. 'ನ ಗುರೋರಧಿಕಂ' ಎನ್ನುವ ಮಾತಿನಂತೆ, ಗುರುವಿಗಿಂತ ಹಿರಿದಾದ ವಸ್ತು ಜಗತ್ತಿನಲ್ಲಿ ಯಾವುದೂ ಇಲ್ಲ. ಅದನ್ನೇ 'ಪಾಲಿಸೈ ಪರಮ ಶ್ರೀ ಗುರುನಾಥ ದಯೆಯಿಂದ' ಎನ್ನುವ ಪದ್ಯದಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ. ಈ ಪದ್ಯದ ಭಾವ ಅಲೌಕಿಕ ಮತ್ತು ಇವರು ಪರಮಾತ್ಮನಲ್ಲಿ ಮೊರೆಯಿಡುವ ರೀತಿಯಂತೂ ಅನ್ಯಾದೃಶ, "ಸಾಕು ಪರಿಹರಿಸು ಎನ್ನ ದೇಹದ ದುರ್ಗುಣಗಳನ್ನು ನೂಕು ನುಗ್ಗನು ಮಾಡಿ ಕಾಡುತಿಹವು". ದೇಹದ ಒಳಗಿರುವ ಚೇಳು, ಹಾವು, ಹುಲಿ, ಕರಡಿಗಳೆಂಬ ದುರ್ಗುಣಗಳ ಬಾಧೆಯನ್ನು ಪರಿಹರಿಸು ದೇವಾ ಎಂದು ಬೇಡಿಕೊಳ್ಳುತ್ತಾರೆ. ಇಂಥಹ ಪದಗಳು ನಮ್ಮ ನಿತ್ಯಮಂತ್ರಗಳಾಗ ಬೇಕಾಗಿವೆ. 'ಮನಸ್ಸೆಂಬ ಮಂಗವು ವಿಷಯದ ಇಂದ್ರಿಯದ ಶಾಖೆ ಶಾಖೆಗಳು ಹಾರುತಿದೆ, "ಕಂದನೆನ್ನನು ಸಲಹೋ ಗುರು ಮಹಾಂತಲಿಂಗ" ಎಂದು ಆರ್ತರಾಗಿ ಕೇಳುತ್ತಾರೆ. ಅದೇ ರೀತಿಯಾಗಿ ಲಿಂಗದ ಮಹಿಮೆಯನ್ನು ಕೊಂಡಾಡಿದ್ದಾರೆ. ಜಂಗಮದ ಮಹತಿಯನ್ನಂತೂ ಅವರ ಬಾಯಿಂದಲೇ ಕೇಳಬೇಕು.

ಜಂಗಮವೆ ಪರದೈವ। ಜಂಗಮವೆ ಪರವಸ್ತು।
ಜಂಗಮವೆ ಪರಮ ಪಾವನಮೂರ್ತಿಯು॥
ಜಂಗಮದ ಪಾದವನು। ಪಿಂಗದಲೆ ನೆನೆ ಮನವೆ
ಭಂಗಗೊಳಿಪುದು ಭವದ ಬೇರುಗಳನು ॥೧॥
ಜಂಗಮವೆ ಜಗದೊಡೆಯ। ಜಂಗಮವೆ ಜಗಭರಿತ।
ಜಂಗಮವೆ ಸಾಕ್ಷಾತ್ ಲಿಂಗಮೂರ್ತಿ॥
ಜಂಗಮದ ಪಾದವನು। ಅಂಗ ಮನ ಪ್ರಾಣದಲಿ।
ಸಂಗೊಳಿಸು ಕಂಡೆಯಾ ಎಲೆ ಚಿತ್ತವೇ ॥೨॥

ಮತ್ತೊಂದು ಪದ್ಯದಲ್ಲಿ ಸುಖಭೋಗ ದೊರೆಯುವ ಮಹಾಹಾದಿಯನ್ನೇ ಹೇಳಿ ಕೊಟ್ಟಿದ್ದಾರೆ. ಅದು ತುಂಬಾ ಪ್ರಚಲಿತವಾಗಿರುವ ಪದ್ಯ ಎರಡು ಮಾಣಿಕ್ಯದ ಮಾತುಗಳು. ಹರಪೂಜೆ ಗುರುಸೇವೆ ಇಲ್ಲದೇ ಸುಖಭೋಗಗಳು ದೊರೆಯಲಾರದು. ಇದೇ ಪದ್ಯದ ಕೊನೆಯಲ್ಲಿ 'ನರಪಾಪ ಪುಣ್ಯವನು ನರರ ಸೆರಗಿನಲಿ ಹಾಕ ಗುರು ಮಹಾಂತ ಲಿಂಗ ತಾ ಮರೆಯಾಗಿರುತಿರುವ', ಅವರವರ ಪಾಪಪುಣ್ಯಗಳಿಗೆ ಅವರವರೇ ಬಾಧ್ಯಸ್ಥರು. 'ಉದ್ಧರೇತ್ ಆತ್ಮಾನಾ' 'ಆತ್ಮನಂ' ಎಂಬ ಗೀತೆಯ ಮಾತು ಇಲ್ಲಿ ಪ್ರಸ್ತುತ.

ವೀರಶೈವ ಸಿದ್ಧಾಂತದಲ್ಲಿ ಜಗತ್ತು ಮಿಥ್ಯೆಯಲ್ಲ ಜಗತ್ತು ಸತ್ಯವಾದುದು. ಪ್ರಪಂಚ ದಿಂದ ಪಾರಮಾರ್ಥದ ಕಡೆಗೆ ಸಾಗುವ ಮಹತ್ತಿನ ಹಾದಿ ಇದರಲ್ಲಿ ಅಡಕವಾಗಿದೆ. ಪ್ರಪಂಚಕ್ಕೆ ವಿಮುಖವಾಗುವುದು ಸಲ್ಲ. ಅದನ್ನೇ ಪೂಜ್ಯ ಶ್ರೀಗಳವರು,

ಸಂಸಾರದೊಳಗೆ ಸದ್ಗತಿಯುಂಟು ಕೇಳ್ ಮಗನೆ।
ಬಸವಾದಿ ಪ್ರಮಥರಿಗೇನಿದ್ದಿಲ್ಲವೇ॥

ಎನ್ನುವ ಪದ್ಯದಲ್ಲಿ ಮೋಕ್ಷದ ದಾರಿಯನ್ನು ಅತ್ಯಂತ ಸುಲಭವಾಗಿ ತಿಳಿಸಿಕೊಟ್ಟಿದ್ದಾರೆ.

ಇನ್ನೊಂದು ಪದ್ಯದಲ್ಲಿ ಶಿವಯೋಗಿಯ ಇರುವಿಕೆಯನ್ನು ಅತ್ಯಂತ ಹೃದ್ಯವಾಗಿ ಹೇಳಿದ್ದಾರೆ. ಆ ಶಿವಯೋಗಿಯ ಸ್ವರೂಪವನ್ನು ನೆನೆಸಿಕೊಂಡಾಗ ಆಗುವ ಆನಂದ ಅವರ್ಣನೀಯ.

ಶಿವಯೋಗಿ ಸಾಕ್ಷಾತ್। ಶಿವನಾದ ಕಾರಣದಿ।
ಅವನಿಭೋಗಗಳವಗೆ ತೃಣಗಾಂಬುವು॥

'ಏಕಂ ಸದ್ವಿಪ್ರಾಃ ಬಹುಧಾ ವದಂತಿ' ಎನ್ನುವ ಮಾತಿನಂತೆ ದೇವನು ಒಬ್ಬನೇ. ಏಕದೇವನ ಇರುವಿಕೆಯನ್ನು ಎಲ್ಲರಿಗೂ ಅತ್ಯಂತ ಸುಲಭವಾಗಿ ತಿಳಿಯುವ ರೀತಿಯಲ್ಲಿ ಅರುಹಿದ್ದಾರೆ.

ಅವರವರ ಭಕ್ತಿಗೆ ಅವರವರ ಭಾವಕ್ಕೆ।
ಅವರವರ ತೆರನಾಗಿ ಇರುತಿಹನು ಶಿವಯೋಗಿ

ಈ ಪದ್ಯದ ಭಾವವನ್ನು ನಾವು ಸಂಪೂರ್ಣವಾಗಿ ಅರಿತು ಅನುಭವಿಸಿದ್ದಾದರೆ ನಾವು ಪೂರ್ಣ ನೆಮ್ಮದಿಯಿಂದ ಬಾಳಬಹುದಲ್ಲವೇ!

ಇವರು ತಮ್ಮ ಮಂಗಳಾರತಿ ಪದ್ಯದಲ್ಲಿ ಪರಮಾತ್ಮನನ್ನು ವರ್ಣಿಸಿದ ರೀತಿ ಅತ್ಯದ್ಭುತ. ವೇದೋಪನಿಷತ್ತುಗಳಲ್ಲಿ ಪರಮಾತ್ಮನನ್ನು ಅನೇಕ ರೀತಿಯಲ್ಲಿ ವರ್ಣಿಸಿದ್ದಾರೆ. ಅದನ್ನೇ ನಮ್ಮ ಸಿರಿಗನ್ನಡದಲ್ಲಿ ಈ ಮಹಾಶಿವಯೋಗಿಗಳು ಎಲ್ಲರಿಗೂ ಸುಲಭಗ್ರಾಹ್ಯವಾಗುವ ರೀತಿಯಲ್ಲಿ ವರ್ಣಿಸಿದ್ದಾರೆ.

ಬೇಕು ಬೇಡಂಬೆರಡು ಭವಬೀಜಗಳ ಹುರಿದು।
ಲೋಕದೊಳಗಿದ್ದು ಇಲ್ಲದ ಮಹಿಮಗೆ ॥೨॥

ಭಂಗಾರ ಕಬ್ಬುನವು ಹಿರಿಕಿರಿದು ಸಮಗಂಡ।
ಲಿಂಗ ಮಹಂತೇಶ ಮಹಾ ಜಗತ್ಪುತ್ರಗೆ ॥೩॥

ಅತ್ಯಂತ ಕ್ಲಿಷ್ಟವಾದ ವಿಷಯವನ್ನು ಅತ್ಯಂತ ಸುಲಭವಾಗಿ ತಿಳಿಸುವ ರೀತಿ ಜ್ಞಾನಿಗಳಿಗೆ ಮಾತ್ರ ಸಾಧ್ಯ. ಮತ್ತೊಂದು ಪದ್ಯದಲ್ಲಿ ಭಕ್ತಿಯ ಹಿರಿಮೆಯನ್ನು ಕೊಡಮಾಡಿದ್ದಾರೆ. 'ಸೆಡವು ಬಿಗುವಿನ ಭಕ್ತಿ ಹಿಡಿಯಬೇಡೆಂದು ನಮ್ಮೊಡೆಯ ಹೇಳಿದನು ಕೇಳಯ್ಯ' ಭಕ್ತಿಯಲ್ಲಿ ಸಂಪೂರ್ಣ ಸಮರ್ಪಣ ಭಾವವಿರಬೇಕು. ಆ ಸಮರ್ಪಣ ಭಾವವಿರುವಾಗ 'ಗುರು ತಂದೆ ಕಾಯುವಾ', ಮತ್ತೊಂದು ಪದ್ಯದಲ್ಲಿ ಶ್ರೀಗಳು ಗುರುವನ್ನು ಮಾತನಾಡಿಸುವ ರೀತಿಯನ್ನು ನೋಡಬೇಕು.

ಗುರುವೆ ನೀ ಮಾತನಾಡೊ ಸುರತರು ಕಲ್ಪತರುವೆ ನೀ ಮಾತನಾಡೊ।
ಸುರರ ದೇವರ್ಕಳ ಒಡ್ಡೋಲಗದೊಳು ಮೆರೆವೆ ನೀ ಮಾತನಾಡೋ ॥ಪ॥

ಲಿಂಗವೆ ಮಾತನಾಡೊ ಶ್ರೀಗುರು ಮಹಂತ
ಲಿಂಗವೆ ಮಾತನಾಡೋ॥

ಸಂಗನ ಶರಣರ ಅಂಗೈಯೊಳಿರುವಂಥ।
ಲಿಂಗವೆ ಮಾತನಾಡೋ ॥೧॥

ಈ ಮಾತನ್ನು ಕೇಳಿದಾಗ ಗುರುಲಿಂಗವು ಸಾಕ್ಷಾತ್ ಎದುರಿಗೆ ನಿಂತಿರುವ ಹಾಗೆ ಭಕ್ತರಿಗೆ ಭಾಸವಾಗುತ್ತದೆ.

ಒಟ್ಟಾರೆಯಾಗಿ ಈ ಶಿವಯೋಗಿಗಳವರ 'ಕೈವಲ್ಯ ದರ್ಪಣ'ವೆಂಬ ಕೃತಿರತ್ನ ನಮ್ಮ ಸಾಹಿತ್ಯದ ಅಮೂಲ್ಯಕೃತಿಗಳಲ್ಲಿ ಒಂದಾಗಿದೆ. ಇದರ ವಿಷಯದ ಹರಹು ಬಹು ವಿಸ್ತಾರವಾದದ್ದು. ಶೈಲಿಯಂತೂ ಪಂಡಿತ ಪಾಮರರಿಗೂ ಹೃದ್ಯ. ಸಾಹಿತ್ಯಜ್ಞರಿಗೂ ಇಲ್ಲಿ ಅಲಂಕಾರಗಳ ರಸದೌತಣವಿದೆ. ಉದಾಹರಣೆಗೆ ಯಮಕಾಲಂಕಾರವು ಎಷ್ಟು ಸಹಜವಾಗಿ ಬಂದಿದೆ ನೋಡಿ.

ಪುಣ್ಯದಿಂದಲಿ ಆನೆ ಕುದುರೆಯು। ಪುಣ್ಯದಿಂದಲಿ ರಥ ಪದಾತಿಯು
ಪುಣ್ಯದಿಂದಲಿ ಸರ್ವಸಿದ್ಧಿಯು ಕೇಳು ಪುಣ್ಯಾತ್ಮ॥
ಪುಣ್ಯದಿಂದಲಿ ಅನ್ನವಸ್ತ್ರವು। ಪುಣ್ಯದಿಂದಲಿ ದಂಡು ಮಾರ್ಬಲ।
ಪುಣ್ಯದಿಂದಲಿ ಸರ್ವಸಿದ್ಧಿಯು ಕೇಳು ಪುಣ್ಯಾತ್ಮ॥

ಎಲ್ಲೂ ಕ್ಲಿಷ್ಟತೆಯ ಸುಳಿವಿಲ್ಲ. ಮಾನವನಿಗೆ ಅತ್ಯಂತ ಸರಳವಾಗಿ ಸಾಧನಾ ಮಾರ್ಗವನ್ನು ತಿಳಿಸಿದೆ ಈ ಕೃತಿರತ್ನ. ಇದರಲ್ಲಿಯ ತತ್ತ್ವಗಳು ನಮ್ಮ ದಾರಿದೀಪಗಳಾಗಬೇಕು. ಶಿವನೇ ತಾನಾದ ಈ ಮಹಾಶಿವಯೋಗಿಯು ಮನುಕುಲದ ಕಲ್ಯಾಣಕ್ಕಾಗಿ ಈ ಕೃತಿಯನು ನೀಡಿ ನಮ್ಮನ್ನು ಧನ್ಯರಾಗಿಸಿದ್ದಾರೆ. ಈ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಯ ದಿವ್ಯ ಪಾದಪದ್ಮಗಳಲ್ಲಿ ನನ್ನ ದೀರ್ಘದಂಡ ನಮನಗಳು.

ಮಡಿವಾಳಪ್ಪನವರ ಅನುಭಾವ ಪದಗಳು

—ಡಾ|| ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ

ಮಡಿವಾಳಪ್ಪನವರ ಪೂರ್ವಜರು ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ನಾಗಠಾಣ ಗ್ರಾಮದವರು. ಹದಿನೆಂಟನೆಯ ಶತಮಾನದ ಮಧ್ಯಂತರದಲ್ಲಿ ಆ ಭಾಗದಲ್ಲಿ ಬರಗಾಲ ಬಿದ್ದಿತು. ಈ ಗ್ರಾಮದ ವೃದ್ಧನೊಬ್ಬನು ವಿಧವೆಯಾದ ಗಂಗಮ್ಮ ಹೆಸರಿನ ಮಗಳೊಂದಿಗೆ, ಹೊಟ್ಟೆ ಹೊರೆದುಕೊಳ್ಳಲೆಂದು, ಕಲಬುರ್ಗಿ ಜಿಲ್ಲೆಯ ಬಿದನೂರಿಗೆ ಬರುತ್ತಾನೆ. ಬಿದನೂರಿನ ಮಲ್ಲಿಕಾರ್ಜುನಪ್ಪಗೌಡರು ಆಧ್ಯಾತ್ಮಿಗಳಾಗಿದ್ದರು. ಇವರಲ್ಲಿ ಈ ವೃದ್ಧ ಮತ್ತು ಈತನ ಮಗಳು ಗಂಗಮ್ಮ ಅವರಿಗೆ ಆಶ್ರಯ ದೊರೆಯುತ್ತದೆ. ದುಡಿದುಕೊಂಡು ಜೀವಿಸುತ್ತಿದ್ದರು.

ಬಿದನೂರ ಮಠದ ಆ ವಿರೂಪಾಕ್ಷಸ್ವಾಮಿಗಳ ಸೇವೆ ಮಾಡುವ ಅವಕಾಶವೂ ಗಂಗಮ್ಮಳಿಗೆ ದೊರಕುತ್ತದೆ. ಕೆಲ ತಿಂಗಳುಗಳ ನಂತರ ಗಂಗಮ್ಮ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಆ ಮಗುವೇ ಮಡಿವಾಳಪ್ಪ. ಮಲ್ಲಿಕಾರ್ಜುನಗೌಡ, ವಿರೂಪಾಕ್ಷ ಸ್ವಾಮಿ, ತಾಯಿ ಗಂಗಮ್ಮ ಇವರ ಲಾಲನೆ-ಪಾಲನೆಯಲ್ಲಿ ಮಗು ಮಡಿವಾಳಪ್ಪ ಬೆಳೆದು ದೊಡ್ಡವನಾಗುತ್ತಾನೆ. ಅನುಭಾವಿಗಳ ಪರಿಸರದ ಪ್ರಭಾವದಿಂದಾಗಿ, ಸಂಸ್ಕಾರದಿಂದಾಗಿ ಮಡಿವಾಳಪ್ಪ ಚಿಕ್ಕಂದಿನಿಂದಲೇ ಪಾರಮಾರ್ಥದತ್ತ ಒಲವು ಮೂಡಿಸಿಕೊಂಡವ ನಾಗಿರುತ್ತಾನೆ.

ಚಿಣಮಗೇರಿ ಮಹಾಂತಗುಡ್ಡದ ಶ್ರೀ ಗುರುಬಸವೇಶ್ವರರಿಂದ ಮಡಿವಾಳಪ್ಪನವರಿಗೆ ಲಿಂಗದೀಕ್ಷೆಯಾಗಿರುತ್ತದೆ. ಸಂಪ್ರದಾಯಕ್ಕೆ ಜೋತುಬಿದ್ದು ಮಡಿವಾಳಪ್ಪನವರಿಗೆ ಅಯ್ಯಾಚಾರದ ದೀಕ್ಷೆ ಕೊಡಿಸಬೇಕೆಂದಾಗ ಕೆಲವರು ವಿರೋಧಿಸುತ್ತಾರೆ. ಮನಸ್ಸಿನ ನೆಮ್ಮದಿಗೆಂದೂ, ಅಯ್ಯಾಚಾರದ ದೀಕ್ಷೆಗೆಂದೂ ಮಡಿವಾಳಪ್ಪನವರನ್ನು ಹಿರಿಯರು ಅರಳಗುಂಡಗಿಯ ಶ್ರೀ ಶರಣಬಸವೇಶ್ವರರ ಕಡೆಗೆ ಕಳುಹಿಸಿಕೊಡುತ್ತಾರೆ. ಅಲ್ಲಿ ಅವರು ತಮ್ಮ ಗುರುಗಳಾದ ಕಲಕೇರಿ ಮರುಳಾರಾಧ್ಯರಿಂದ ಮಡಿವಾಳಪ್ಪನವರಿಗೆ ಅಯ್ಯಾಚಾರದ ದೀಕ್ಷೆ ಕೊಡಿಸುತ್ತಾರೆಂದು ತಿಳಿದುಬರುತ್ತದೆ. (ಜನ ವದಂತಿ)

ಮಡಿವಾಳಪ್ಪನವರು ಶರಣರ ಸಾನ್ನಿಧ್ಯದಲ್ಲಿದ್ದುಕೊಂಡು ಅನ್ನದಾಸೋಹದೊಂದಿಗೆ ಜ್ಞಾನದಾಸೋಹ ಕಾರ್ಯವನ್ನೂ ನಡೆಸುತ್ತಾರೆ. ವಿರೋಧಿಗಳ ಉಪಟಳದಿಂದ ಬೇಸತ್ತು, ಶರಣರ ಅಪ್ಪಣೆಪಡೆದುಕೊಂಡು, ಮಡಿವಾಳಪ್ಪನವರು ಬಿದನೂರಿಗೆ ಹಿಂತಿರುಗುತ್ತಾರೆ. ಚಿಣಮಗೇರಿ ಮಹಾಂತನ ಪವಿತ್ರಸ್ಥಾನದಲ್ಲಿ ಹನ್ನೆರಡು ವರುಷಗಳ ಪರ್ಯಂತ ತಪಸ್ಸು

ಮಾಡುತ್ತಾರೆ, ಚಿಂತನ ನಡೆಸುತ್ತಾರೆ. ಒಂದುವರುಷ ಪರ್ಯಂತ, ಅನುಷ್ಠಾನ ಕೈಕೊಳ್ಳು ತ್ತಾರೆ. ಹೀಗೆ ಜಪ-ತಪ ಮಾಡುತ್ತ ಲಿಂಗಪೂಜೆಯಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡು, ಅಂತರ್ಮುಖಿಯಾಗಿ ಅಧ್ಯಾತ್ಮದನುಭವವನ್ನು ಸವಿಯುತ್ತಾರೆ. ಶ್ರೀಶೈಲದಲ್ಲಿ ನಿನಗೆ ಮಹಾಂತನ ದರ್ಶನ' ಎಂಬ ಕನಸು ಕಾಣುತ್ತಾರೆ. ಅದರಂತೆ ಶ್ರೀಶೈಲಕ್ಕೆ ತೆರಳಿ ಅಲ್ಲಿಯೂ ಹನ್ನೆರಡು ವರುಷಗಳ ಕಾಲ ತಪಸ್ಸ ನಡೆಸುತ್ತಾರೆ. ಹೀಗೆ ಶಿವಾನುಭವದ ಜೊತೆಗೆ ಲೋಕಾನುಭವವನ್ನೂ ಪಡೆದುಕೊಂಡು ಲೌಕಿಕ-ಪಾರಮಾರ್ಥ ವೆರಡರಲ್ಲೂ ಪಳಗಿದವರಾಗುತ್ತಾರೆ. ಆಗ ಅಲ್ಲಿ ಅವರಿಗೆ ಮಹಾಂತನ ದರ್ಶನವೂ ಆಗುತ್ತದೆ.

ತನ್ನ ಶ್ರೇಯೋಭಿವೃದ್ಧಿಗೆ ಕಾರಣ ಕರ್ತರಾದ ಶ್ರೀ ಶರಣಬಸವೇಶ್ವರರ ಹಳ್ಳಿ ಅರಳ ಗುಂಡಿಗೆಗೆ ತೆರಳಿ ಅವರ ದರ್ಶನಾಶೀರ್ವಾದ ಪಡೆದುಕೊಳ್ಳುತ್ತಾರೆ. ಒಬ್ಬರಿಗೊಬ್ಬರು ಅನುಭಾವ ಮಾಡುತ್ತಾರೆ. ಅಲ್ಲಿ ನಡೆಯುತ್ತಿದ್ದ ಅನ್ನದಾಸೋಹ ಮತ್ತು ಜ್ಞಾನ ದಾಸೋಹಗಳಲ್ಲಿ ಭಾಗಿಗಳಾಗುತ್ತಾರೆ. ಅನ್ಯಾಯದ, ಅಜ್ಞಾನದ, ಮೂಢ ನಂಬಿಕೆಗಳ ಅಳಿವಿಗಾಗಿ ಬೋಧ ಮಾಡುತ್ತಾರೆ. ತತ್ವಪದಗಳನ್ನು ಕಟ್ಟಿ ಹಾಡುತ್ತಾರೆ. ಕೆಲ ವಿರೋಧಿಗಳ ಉಪಟಳಕ್ಕೆ ಬೇಸತ್ತು ಅರಳಗುಂಡಿಗೆಯಿಂದ ಹೊರಟು, ಕೋಣ ಸಿರಸಗಿ, ಜಂಬೇರಾಳ್ ಮೂಲಕ ಕಡಕೋಳಕ್ಕೆ ತೆರಳುತ್ತಾರೆ. ಅಲ್ಲಿಯ ಗೌಡರ ಆಮಂತ್ರಣ ಮನ್ನಿಸಿ ಕಡಕೋಳಕ್ಕೆ ತೆರಳಿದ ಮಡಿವಾಳಪ್ಪನವರು ಅಲ್ಲಿಯೇ ನೆಲೆಸುತ್ತಾರೆ.

'ಕಡಕೋಳ' ಕಲುಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಒಂದು ಹಳ್ಳಿ. ಜೇವರ್ಗಿಯಿಂದ ಸು. ೨೫ ಮೈಲು ದೂರದಲ್ಲಿರುವ ಇದನ್ನು ಸಗರನಾಡಿನ ಶಿಖರ ಎಂದೂ, ಭಕ್ತಿ ಸಾಮ್ರಾಜ್ಯದ ಮುಕ್ತಿ ಧಾಮವೆಂದೂ, ಕಲ್ಯಾಣನಾಡಿನ ಕೈಲಾಸವೆಂದೂ, ಭವಲೋಕದ ಕಲ್ಪವೃಕ್ಷವೆಂದೂ ಕರೆದಿದ್ದಾರೆ. ಕಡಕೋಳದಲ್ಲಿ 'ಕಾಗಿ ಜೇವ್ಹಾನೂ ಪಾವನ' ಎಂದರಿದು ಶ್ರೀಸಾಮಾನ್ಯರೂ ಕಡಕೋಳ ಗ್ರಾಮದ ಆಧ್ಯಾತ್ಮದ ಎತ್ತರವನ್ನು ಬಿತ್ತರಿಸಿದ್ದಾರೆ. ಮಡಿವಾಳಪ್ಪನವರ ವಾಸ್ತವ್ಯದಿಂದಾಗಿ ಈ ಕಡಕೋಳ ಗ್ರಾಮವು ಪವಿತ್ರ ತಾಣವಾಗಿ ಕಂಗೊಳಿಸಿತು. ಈ ಗ್ರಾಮದಲ್ಲಿ ನೆಲೆನಿಂತ ಮಡಿವಾಳಪ್ಪನವರಿಗೆ ಸುಖ-ನೆಮ್ಮದಿ ತಂದು ಕೊಟ್ಟಿತು. ಅದರಿಂದಾಗಿ ಮಡಿವಾಳಪ್ಪನವರನ್ನು ಕಡಕೋಳದ ಮಡಿವಾಳಪ್ಪ ಎಂದೇ ಕರೆಯುವ ವಾಡಿಕೆ. ಇಲ್ಲಿಯೇ ಮಡಿವಾಳಪ್ಪನವರ ಸಾವಿರಾರು ಶಿಷ್ಯರೂ ಸುತ್ತುವರಿಯುತ್ತಾರೆ. ಕಲ್ಯಾಣದ ಅನುಭವಮಂಟಪದಂತೆ ಇಲ್ಲಿಯೂ ಅನುಭಾವ ಮಂಟಪವೊಂದು ಹುಟ್ಟಿಕೊಂಡಿತು.

ಮಡಿವಾಳಪ್ಪನವರ ಶಿಷ್ಯರಲ್ಲಿ ಎಲ್ಲ ಜಾತಿ ಮತ ಧರ್ಮದವರೂ ಇದ್ದರು. ಖೈನೂರು ಕೃಷ್ಣಪ್ಪ, ಚೆನ್ನೂರ ಜಲಾಲಸಾಹೇಬ, ಗಂವ್ಹಾರ ಶಾಸ್ತ್ರಿ, ಕಡ್ಲೆವಾಡ ಸಿದ್ದಪ್ಪ, ತೆಲಗುಬಾಳ ದ್ಯಾವಪ್ಪ ಮೊದಲಾದವರು ಪ್ರಮುಖರೆನಿಸಿದ್ದಾರೆ. ಮಡಿವಾಳಪ್ಪ ನವರು ಕಡಕೋಳ ಬೃಹನ್ಮಠದ ಪೀಠಾಧಿಕಾರಿಗಳಾಗಿ ಜನತೆಯ ಕಲ್ಯಾಣಕ್ಕಾಗಿ ಹಲ

ವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಶ್ರೀಸಾಮಾನ್ಯರ ಉದ್ಧಾರಕ್ಕಾಗಿ ಸಾವಿರಾರು ಅನುಭವಪದಗಳನ್ನು ಕಟ್ಟಿ, ಹಾಡಿದರು. ಇವರಂತೆ ಇವರ ಶಿಷ್ಯರೂ ಅನುಭವ ಪದಗಳನ್ನು ರಚಿಸಿದರು. 'ಗುರುಮಹಾಂತ' ಎಂಬುದು ಮಡಿವಾಳಪ್ಪನವರ ಹಾಡುಗಳಲ್ಲಿ ಬರುವ ಮುದ್ರಿಕೆಯಾಗಿದೆ. ಹಾಡುಗಳ ಹೊರತಾಗಿ ನೂರಾರು ವಚನಗಳನ್ನು ಮಡಿವಾಳಪ್ಪನವರು ಬರೆದಿದ್ದಾರೆ. ಇವರ ಹಾಡು ಮತ್ತು ವಚನಗಳಲ್ಲಿ ಅವರ ನಿಜ ಜೀವನದ, ತುಂಬು ಜೀವನದ, ಘಟನೆಗಳನ್ನು ಎರಕ ಹೊಯ್ದಿದ್ದಾರೆ. ಒಂದೊಂದು ಹಾಡಿಗೂ ಒಂದೊಂದು ಕಥೆಯು, ಸನ್ನಿವೇಶದ ಹಿನ್ನೆಲೆಯಿರುತ್ತದೆ. ಒಂದರ್ಥದಲ್ಲಿ ಮಡಿವಾಳಪ್ಪನವರ ಆತ್ಮಗೀತೆಗಳಂತೆ ಶೋಭಿಸುತ್ತವೆ.

ಮಡಿವಾಳಪ್ಪನವರು ತಮ್ಮ ಜೀವನದುದ್ದಕ್ಕೂ ಹಲವಾರು ಸಮಸ್ಯೆಗಳನ್ನು ಎದುರಿಸಿದ್ದಾರೆ. ನಿಂದಕರನ್ನೂ ಬೆರಗುಗೊಳಿಸುವ ರೀತಿಯಲ್ಲಿ ಅದ್ಭುತ ಬೋಧೆ ಮಾಡಿದ್ದಾರೆ. ನಿಂದಕರಿದ್ದರೇನೇ ಮನೆ, ಮನ, ಓಣಿ ಹಸನ–ಅವರು ತಂದೆ ತಾಯಿಗಳಿಗಿಂತಲೂ ಅಧಿಕ ಎನ್ನುವ ಅವರ ಪದದಲ್ಲಿ ಉದಾತ್ತ ತತ್ವ ಅಡಗಿರುವುದನ್ನು ಗುರುತಿಸಬಹುದಾಗಿದೆ. 'ಬೈದವರೆನ್ನ ಬಂಧುಗಳೆಂಬೆ' ಎಂದ ಅಣ್ಣ ಬಸವಣ್ಣನವರಂತೆಯೆ ಮಡಿವಾಳಪ್ಪನವರು ವಿರೋಧಿಗಳನ್ನು ಪ್ರೀತಿಸುವ ಉದಾತ್ತ ಗುಣ ಹೊಂದಿದವರಾಗಿದ್ದರು.

ನಿಂದಕರಿರಬೇಕೊ ಹತ್ತು। ಹಂದಿ
ಇದ್ದರೆ ಕೇರಿ ಹಸನಾಗುದು ಪಾಕೊ
ತಂದಿ ತಾಯಿಗಿಂತ ಅಧಿಕೊ। ಮುಂಚಾ
ನೆದ್ದು ನಿಂದಕರಿಗೆ ಶರಣು ಕೊಡಬೇಕೊ।....(ಪು–೧೩೨)

ನಿಂದಕರನ್ನು ಮಹಾಂತ ಸ್ವರೂಪಿಗಳೆಂದೇ ಭಾವಿಸುವ, ವೈರಿಗಳನ್ನು ದೇವರೆಂದು ಕಾಣುವ ಮನೋವೈಶಾಲ್ಯ ಮಡಿವಾಳಪ್ಪನವರನ್ನು ಇನ್ನೂ ಎತ್ತರದ ವ್ಯಕ್ತಿತ್ವಕ್ಕೆ ಒಯ್ದಿದೆ.

ಮಡಿವಾಳಪ್ಪನವರದು ಧರ್ಮದೃಷ್ಟಿ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಹಿರಿಯ ವ್ಯಕ್ತಿ. ಹುಟ್ಟಿ ಬಂದ ಮೇಲೆ ಮಾಯಾ ಮೋಹದ ಜಾಲದಲ್ಲಿಯೇ ಬಿದ್ದು ಒದ್ದಾಡುವುದನ್ನು ಬಿಟ್ಟು ಕ್ಷಣವಾದರೂ ಗುರುವಿನನ್ನು ನೆನೆ, ಭಜಿಸು, ಒಳ್ಳೆಯ ಕಾರ್ಯ ಮಾಡು–ಎಂದೆಲ್ಲ ಬೋಧಿಸಿದ್ದಾರೆ. ಈ ಜನ್ಮದಲ್ಲಿ ಪಾಪ ಕಳೆದುಕೊಳ್ಳಲು ಸಾಧ್ಯವಿಲ್ಲದಷ್ಟು ಗೊಂದಲದಲ್ಲಿ ಸಿಲುಕಿದ ಮಾನವರಿಗೆ ಕುಲ, ಛಲ ಎಲ್ಲಾ ಸುಳ್ಳು; ಇಹ ಲೋಕದ ಅಭಿಮಾನ ಬಿಟ್ಟು ನಿತ್ಯ ಶಿವಧ್ಯಾನ ಮಾಡಲು ಉಪದೇಶಿಸಿದ್ದಾರೆ. ಆಯುಷ್ಯ ನಿಮ್ಮದಲ್ಲ, ವಾಯುವಿಗೆ ಹೊತ್ತಿಲ್ಲ, ನಾಳೆ ಇರುತ್ತೇನೆಂಬುದೂ ನಕ್ಕೀ ಇಲ್ಲ, ನೀವ್ಯಾರೆಂಬುದೂ ನಿಮಗೆ ಗೊತ್ತಿಲ್ಲ, ಆಸೆಯಿಂದ ಘಾಸಿಯಾಗುತ್ತೀರಿ; ಆಶೆಯೇ ದೇಶ ನುಂಗೀತು, ಆಶೆಯೆ ಹೇಸಿ, ಆಸೆ ಬಿಟ್ಟವನೇ ಈಶ. ಏನು ಭಜಿಸಿದರೇನು? ಎಷ್ಟು ಓದಿದರೇನು? ಶಾಸ್ತ್ರ ಹೇಳಿದರೇನು? ಪಂಡಿತನಾಗಿ ತಿರುಗಿದರೇನು? ವಾಸನೆ ಅಳಿಯ

ಬೇಕು. ಈ ಹೇಸಿ ನರಜನ್ಮ ವ್ಯರ್ಥ ಕೆಟ್ಟು ಹೋಗುವುದು. ಅದಕ್ಕಾಗಿ ಶಿವನಾಮವ ಸ್ಮರಿಸೊ, ಜಲ್ದಿ ನೋಡಿಕೊಳ್ಳೊ ತಮ್ಮ, ಧರ್ಮದ ಗುಣವು ನಿನ್ನಲ್ಲಿದ್ದರೆ ನಿರ್ಮಳಾಗೊ–ಈ ಮೊದಲಾದ ಹಾಡುಗಳಲ್ಲಿ ಮಾರ್ಮಿಕವಾಗಿ, ಉಪದೇಶಿಸಿದ್ದಾರೆ. ತಾವೇ ತಾವಾದಾಗ 'ತನ್ನ ತಾನು ತಿಳಿದ ಮೇಲೆ ಇನ್ನೆನೀನ್ನೇನೊ'-ಎಂದು ಹಾಡಿದ್ದಾರೆ. ತಾವು ಕಂಡುಂಡ ನಿಜದ ನಿಲವನ್ನು ಸಾರಿದ್ದಾರೆ.

ಮಡಿವಾಳಪ್ಪನವರು ತನ್ನ ತಾನರಿತ ಮಹಾ ಶಿವಯೋಗಿಗಳು. ತಾವು ಕಂಡುಂಡ ಸತ್ಯದ ನಿಲವನ್ನು, ತತ್ವ ಸಿದ್ಧಾಂತವನ್ನು ಸಾಮಾನ್ಯರಿಗೆ ಅರ್ಥವಾಗುವಂತೆ ಸರಳ ದೃಷ್ಟಾಂತಗಳ ಮೂಲಕ ತಿಳಿಯ ಹೇಳಿದ್ದಾರೆ. 'ಬ್ರಹ್ಮ ಎಂಬುವದದು ಬ್ಯಾರಿಲ್ಲ, ಬ್ರಹ್ಮವೇ ತಾನಾದೆಂಬುವದೆಲ್ಲ', ಎಲೆರೊ ಎಲೆರೊ ಕೆಡಬೇಡಿರೊ! ನಿಮ ಒಡಲೊಳಗೇ ಶಿವಹಾನ ನೋಡಿರೋ'—'ಏನಗಾದೇನಾಗದೋ ಹರ। ನಿನ್ನೋಲಿಸುವದೇನಗಾದೋ। ಗುರು ವಿನೊಲಿಸುವುದೇನಾಗದೊ।' ಮುಂತಾದ ಹಾಡುಗಳಲ್ಲಿ ಮಡಿವಾಳರು ಆತ್ಮಜ್ಞಾನದ ಮರ್ಮವನ್ನು ತಿಳಿಹೇಳಿದ್ದಾರೆ. ತನ್ನ ತಾನರಿತು ಬ್ರಹ್ಮವಾಗುವುದಕ್ಕೆ ಶ್ರದ್ಧೆ ಬೇಕು. ಒಲವು ಬೇಕು. ಅಂಥ ಗುರುವಿನ ಮಾರ್ಗದರ್ಶನಕ್ಕಾಗಿ ಇವರು ' ಗುರುವೆ ನೀ ಬೇಗನೆ ಮೊರೆ ಕೇಳೊ। ವ್ಯರ್ಥ ಹರಿದು ಹೋಗತೀನಿ ಹಿಡಕೋರೊ' ಎಂದು ಮೊರೆಹೊಕ್ಕಿದ್ದಾರೆ.

ವೀರಶೈವ ಧರ್ಮದ ಆಳವಾದ ಅಭ್ಯಾಸ, ಅರಿವು, ಅನುಭಾವ ಮಡಿವಾಳಪ್ಪನವರಿಗಿದ್ದುದರಿಂದ ಇವರ ಹಾಡುಗಳಲ್ಲಿ ಷಟ್‌ಸ್ಥಲ ಸಿದ್ಧಾಂತ ಚೆಲ್ಲುವರಿದಿದೆ. ಲಿಂಗದೀಕ್ಷೆ ತೊಟ್ಟಾಗ ಆಲಿಂಗ 'ಕಾಮಧೇನು' ಎಂದು ಕೊಂಡಾಡಿದ್ದಾರೆ. ಜಗತ್ತು ಮಿಥ್ಯ ಎಂದು ಹಳಿಯುವ ವೇದಾಂತಿಗಳ ಬಾಯಿ ಮುಚ್ಚಿಸಿ, ಶಕ್ತಿ ವಿಶಿಷ್ಟಾದ್ವೈತವನ್ನು ಮೆರೆದಿದ್ದಾರೆ. ಅರುಹು ಹಿಡಿದು ಕುರುಹ ಕಂಡು ಅಖಂಡವೇ ತಾವಾದ ನಿಲುವನ್ನು ತಮ್ಮ ನೂರಾರು ವಚನಗಳಲ್ಲಿ ಎರಕ ಹೊಯ್ದಿದ್ದಾರೆ. 'ನರನಾಗಿ ಅರುಹು ಹಿಡಿದು ಕುರುಹು ಕಂಡವರಿಗೆ ಗರ್ವವುಂಟೆ ? ಅರುವ ಪಿಡಿಯದೆ ಕುರುಹಗಾಣದೆ ಬರಿ ಬಾಯಿಲೆ ಬ್ರಹ್ಮವ ನುಡಿವರೆ ಬ್ರಹ್ಮನಾಗಬಲ್ಲನೆ ? ಬ್ರಹ್ಮನಾದ ಮೇಲೆ ಇಮ್ಮನ ಎಲ್ಲಿ ಹೋದವು.... ಗುರುವ ಹಿಂದುಗಳಿದು, ಕಟ್ಟಿದ ಲಿಂಗವ ಬಿಟ್ಟು, ಜಂಗಮುವ ಜರೆಯಲುಂಟೆ ? ಆ ಅಖಂಡ ತಿಳಿದು ಆ ಅಖಂಡವೇ ತಾನಾಗದೆ ಭುಗಿಮುಕ್ಕಿದವನಂತೆ, ಅಂಗಬತ್ತಲೆಯಾಗಿ ಮಂಗಮತಿಗೂಡಿ ಸಂಗವ ಸುದು ಒಂದಾದರೆ ಭಂಗಾಗಿ ಹೋದರು' ಎಂದು ಹಾಡಿದ್ದಾರೆ.

ಮಡಿವಾಳಪ್ಪನವರು ಹಲವಾರು ಸಿದ್ಧಿಗಳನ್ನೂ ಬಲ್ಲವರು. ಆದರೆ ಭಂಡರಂತೆ ಅವುಗಳನ್ನು ದುರುಪಯೋಗಪಡಿಸಿಕೊಂಡವರಲ್ಲ. ಹಾಗೆ ಮಾಡುವವರ ಕುಟಿಲ ಕಾರಸ್ಥಾನವನ್ನು ತಮ್ಮ ವಚನಗಳಲ್ಲಿ ಖಂಡಿಸಿದ್ದಾರೆ. ಪ್ರಪಂಚ ಮಾಯೆಯೆಂದು ಅದನ್ನು ತ್ಯಜಿಸಿ, ಊರು ಬಿಟ್ಟು, ತೀರ್ಥ ಕ್ಷೇತ್ರಗಳಲ್ಲಿ ಮಿಂದು ಸಾಯುಬಾರದ ಅಂಗಸಿದ್ಧಿ, ಅಲಗು ನೋಯಿಸದ ಘಟಕಸಿದ್ಧಿ, ಹೇಳಿದ್ದಾಗುವ ವಾಕ್ಯಸಿದ್ಧಿ, ಹೆಸರು ಹೇಳುವ

ಬೆನಕನ ಸಿದ್ಧಿ, ರೋಗ ಕಳೆಯುವ ಮೂಲಕಿ ಸಿದ್ಧಿ, ಬೆರಗು ಮಾಡುವ ಬ್ಯಾತಾಳ ಸಿದ್ಧಿ, ಗಗನಕ್ಕೆ ಹಾರುವ ಯೋಗ ಸಿದ್ಧಿ, ಚಂಡಿ ಚಾಮುಂಡ್ಯಾದಿಗಳ ಮಾತನಾಡಿಸುವ ಮಂತ್ರ ಸಿದ್ಧಿ, ಮೃಗ ಪಕ್ಷಿಗಳ ಮಾತು ತಿಳಿಯುವ ಮಂತ್ರ–ತಂತ್ರ ಸಿದ್ಧಿ ಈ ಮೊದಲಾದ ಸಿದ್ಧಿಗಳಿಗೆ ಆಸೆಮಾಡಿ ಮಣ್ಣುಗಾಣದೆ ಹೋದರೆಂದು ಹೇಳಿದ್ದಾರೆ.

'ಮನವ ಅಳಿಯುದೆ, ಘನವ ತಿಳಿಯುದೆ
ತನುವ ಉಳಿಯುದೆ ಪಂಚೇಂದ್ರಿಯು ಮಿಂಚು
ತೊಳೆಯುದೇ! ಹಳೆ ಹಂಚಾದರೋ........'

ಎಂದು ವಿಡಂಬಿಸಿದ್ದಾರೆ. 'ತಾವೇ ಮಹಾಜ್ಞಾನಿಗಳೆಂದು ಅಹಂಕರಿಸಿ 'ನಮ್ಮನ್ನು ಬಲ್ಲವರು ಪುಣ್ಯವಂತರು, ಅರಿಯದವರು ಪಾಪಿಷ್ಟರು' ಎನ್ನುತ್ತ ನಾವು ಮಹತ್ವ ಉಳ್ಳವರು, ನಾವು ಮಕ್ಕಳ ಕೊಡವೆವು, ನಾವು ರೋಗ ಕಳೆಯುವೆವು.... ಪಿಶಾಚಿಯ ಸೋಂಕ ಬಿಡಿಸುವೆವು' ಎಂದು ವಿಭೂತಿ ಮಂತ್ರಿಸಿ ಕೊಡುವ ಸೋಗಲಾಡಿಗಳನ್ನು ಕಂಡು 'ಇವರು ನಿಚ್ಚ ಕಚ್ಚೆಗಡುಕರು' ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಅಧ್ಯಾತ್ಮದ ಕೊನೆಯ ಸಿದ್ಧಿಯಲ್ಲಿ ನಿಂದು, ಕ್ರಿಯೆಗಿಳಿದು ಅನುಭವಿಸಿದ ಮಡಿವಾಳಪ್ಪನವರು ಸುಂದರವಾದ ಸಂಕೇತಗಳೊಂದಿಗೆ ಬೆಡಗಿನ ವಚನಗಳನ್ನೂ ಹಾಡಿ, ರಚಿಸಿ ಪುನೀತರಾಗಿದ್ದಾರೆ. ಹಲವಾರು ಕಾಲಜ್ಞಾನ ವಚನಗಳನ್ನೂ ಬರೆದ ಕೀರ್ತಿ ಮಡಿವಾಳಪ್ಪನವರದು. ಕೈವಲ್ಯ ಪದ್ಧತಿಗೆ ಸಂಬಂಧಿಸಿದಂತೆ ನೂರಾರು ವಚನಗಳನ್ನೂ ಬರೆದ ಶ್ರೇಷ್ಠ ವಚನಕಾರರು.

ಜ್ಞಾನಕ್ರಿಯೆಗಳ ಸುಂದರ ಸಮನ್ವಯವೇ ಲಿಂಗಾಂಗಸಾಮರಸ್ಯದ ಕೊನೆಯ ಸಿದ್ಧಿಯೆಂದು ಬೆಡಗಿನಲ್ಲಿ ಎರಕಹೊಯ್ದಿದ್ದನ್ನು ಈ ಕೆಳಗಿನ ವಚನದಲ್ಲಿ ಗುರುತಿಸ ಬಹುದಾಗಿದೆ.

'ಬೆಡಗ ಕೊಡಲಿ ಪಿಡಿದಲ್ಲದೆ ಕಾಡ ಕಡಿಯದು ಆ
ಕಾಡ ಕಡಿಯದಲ್ಲದೆ ಕಲ್ಪವೃಕ್ಷದ ವನವು ಕಾಣದು. ಆ
ಕಲ್ಪವೃಕ್ಷದ ವನವಳಿದಲ್ಲದೆ ಕದಳಿಯು ಸಿಗದು ಆ
ಕದಳಿಯ ಸುಲಿದು ಒಳಪೊಕ್ಕಲ್ಲದೆ ನಿಜವು ತಿಳಿಯದು ಆ
ನಿಜವು ತಿಳಿದಲ್ಲದೆ ಬೈಲು ಹೋಗದು ಆ ಬೈಲು
ಹೋಗದೆ ನಿರ್ವಯಲು ತಾನಾಗದು.......'

ಎಂದು ಹೇಳಿ ಕ್ರೀ ಇಲ್ಲದ ಜ್ಞಾನಕ್ಕೆ ಯಾವ ಬೆಲೆಯೂ ಇಲ್ಲ, ಅಲ್ಲಿ ನಿರ್ವಯಲ ಸ್ಥಿತಿಯೂ ಇಲ್ಲ ಎಂದಿದ್ದಾರೆ.

ಶ್ರೀಸಾಮಾನ್ಯರ ಮಧ್ಯದಲ್ಲಿ ಬದುಕಿ ಬಂದ ಮಡಿವಾಳಪ್ಪನವರು ಹೆಡ್ಡ, ದಡ್ಡರ ಅಜ್ಞಾನಕ್ಕೆ ಮರುಗಿ ಕನಿಕರಪಟ್ಟದ್ದೂ ಉಂಟು. ತೀವ್ರವಾಗಿ ಖಂಡಿಸಿ ಅಂಥವರನ್ನು

ತರಾಟೆಗೆ ತೆಗೆದುಕೊಂಡಿದ್ದೂ ಉಂಟು. ಕುಂಡಿ ನೋಡಿ ಮಣೆಹಾಕುವ ಮೂಢರನ್ನು ಕಂಡು ವಿಡಂಬಿಸಿದ್ದಾರೆ.

'ಮಂಡಲದೊಳಗೆ ಈ ಮಂದಿ ಮಾಡುದು
ಕಂಡು ಅದಕೆ ಬಂದವಪ್ಪ ಇಂಥಾ ದಿನಾ-
ಮಂಡಮೂಳರು ಕೂಡಿ ಕುಂಡಿ ಚಿವುಟ್ಕರು ಕೂಡಿ
ಕುಂಡಿ ನೋಡಿ ಮಣೆ ಹಾಕುವರಣ್ಣಾ ೧

ಸುಣ್ಣ ಬಣ್ಣನುಟ್ಟು ಬಣ್ಣಿಸಿ ಬಂದರೆ
ಮಣ್ಣಿಸಿ ಕರೆವರಣ್ಣ।
ಚಣ್ಣದವರು ಬಂದರೆ। ಕಣ್ಣೆತ್ತಿ ನೋಡ್ತಾರ
ಟೊಣ್ಣೆ ಸೂಳೆ ಮಕ್ಕಳಿವರಣ್ಣ ೨
..............................'

ಮಡಿವಾಳಪ್ಪನವರ ಎಷ್ಟೋ ಪದಗಳು, ಅವರ ಶಿಷ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರ ರೂಪದಂತಿವೆ. ಆ ಆ ಪ್ರಶ್ನೆಗಳ ಸಂದರ್ಭ ತಿಳಿದಾಗ ಆ ಹಾಡುಗಳ ಅರ್ಥವಾಗುತ್ತದೆ. ಇನ್ನು ಕೆಲವು ವಚನಗಳು ಆಧ್ಯಾತ್ಮದ ಶಿಖರದಂತೆ. ಸಂಕೇತಗಳಲ್ಲಿ ರಚನೆಗೊಂಡಂತಿವೆ. ಮಡಿವಾಳಪ್ಪನವರೇ ಅವುಗಳ ಅರ್ಥ ಬಲ್ಲವರು-ಇಲ್ಲವೆ ಅವರ ಅನುಭಾವನೆತ್ತರಕ್ಕೆ ಏರಿದ ಮಹಾಂತರಿಗೆ ಮಾತ್ರ ಅರ್ಥೈಸಲು ಸಾಧ್ಯವಾಗಬಹುದಾಗಿದೆ. ಇದಕ್ಕೆ ಅವರ 'ಗಾಳಿಪೂಜೆ' ಎಂಬ ವಚನ ಸಾಕ್ಷಿ. 'ನೀತಿ ತಪ್ಪಿ ನಡೆಯಬಾರದು, ಮಾತು ತಪ್ಪಿ ಆಡಬಾರದು' ಎಂಬುದು ಮಡಿವಾಳಪ್ಪನವರ ಅಮರ ಸಂದೇಶವಾಗಿದೆ.

'ನೀತಿಗೇಡಿ ಅಂಗದ ಸಂಗ। ಹುಳತ ಸಂವತಿ ಹಣ್ಣ।
ನೀತಿಯುಳ್ಳವರ ಸಮರಸ। ಸುಲದ ಬಾಳಿ ಹಣ್ಣ'

ಮಡಿವಾಳಪ್ಪನವರ ಹಾಡುಗಳಲ್ಲಿ ಪ್ರತಿಭೆಗೇನೂ ಕೊರತೆಯಿಲ್ಲ. ತತ್ವ ಸಿದ್ಧಾಂತ ಮೂಲ ಭಂಡವಾಲವಾದರೂ ಸಾಮಾಜಿಕ ಪ್ರಜ್ಞೆ, ಕಳಕಳಿ-ಹಾಸುಹೊಕ್ಕಾಗಿದೆ. ಧರ್ಮದ ಜೊತೆಗೆ ಕಾವ್ಯಧರ್ಮವು ಬೆಳೆದುಬಂದಿದೆ. ಹಲವಾರು ಉಪಮೆ, ರೂಪಕ ಸ್ವಭಾವೋಕ್ತಿ, ಅನ್ಯೋಕ್ತಿಗಳಂತಹ ಅಲಂಕಾರಗಳು, ಪ್ರತಿಮೆಗಳು-ಸಹಜ ರೀತಿಯಲ್ಲಿ ಬಳಕೆಯಾಗಿವೆ. ಆಡುಮಾತಿನ ಬಳಕೆಯ ಶಬ್ದಗಳನ್ನಂತೂ ಸ್ವರವಚನಗಳಲ್ಲಿ ಧಾರಾಳವಾಗಿ, ಸಹಜ ಬಳಸಿಕೊಂಡಿದ್ದಾರೆ. 'ಹುಡ್ತ ಹುಸ್ತ, ಜಿನಸಾನಿ, ಅಪರಂಪಾರ, ಅಡನಾಡಿ, ಇದಿಮಾಯಿ, ಎಬಡತಬಡ, ಕಂಡಾಬಟ್ಟೆ, ಕಚ್ಚೆಗಡಕ, ಕಿಸಬಾಯಿ, ಜುಂಗಲಾಡಿ, ನಿಗರ್‍ಯಾಡಿ, ಪುರಮಾಸಿ, ಮುಡಚೆಟ್ಟ, ಮಚಗೊಟ್ಟೆ, ಹಾದರಗಿತ್ತಿ-ಇಂಥ ಶಬ್ದಗಳನ್ನು ಹದವರಿತು, ಹಾಳತಾಗಿ ಮಡಿವಾಳಪ್ಪನವರು ತಮ್ಮ ಹಾಡುಗಳಲ್ಲಿ ಬಳಸಿಕೊಂಡಿದ್ದಾರೆ. ಇಂಥ ಮಣ್ಣಿನ ವಾಸನೆ

ಯಿಂದಾಗಿ, ಆಡುನುಡಿಯ ಬೆಡಗಿನಿಂದಾಗಿ ಇವರ ಹಾಡುಗಳ ಸೊಗಡು ಹೆಚ್ಚಿ–ಜನಪದ ಹಾಡುಗಳ ಸತ್ವ, ಶೈಲಿಗೆ ಹೆಚ್ಚಿನ ಮೆರಗು ಬಂದಂತಾಗಿದೆ.

ಮಡಿವಾಳಪ್ಪನವರ ವ್ಯಕ್ತಿತ್ವಕ್ಕೂ ಕವಿತ್ವಕ್ಕೂ ನಿಕಟ ಸಂಬಂಧವಿದೆ. ಕವಿತ್ವ-ವ್ಯಕ್ತಿತ್ವದಿಂದ ಜಾರಿಕೊಂಡಿಲ್ಲ. ಲೋಕವಿರೋಧಿ, ನ್ಯಾಯ ನಿಷ್ಠುರಿ, ತತ್ವನಿಷ್ಠ ಮಡಿವಾಳಪ್ಪನವರು ಸಂಪ್ರದಾಯದ ಕೊಳೆಯನ್ನು ತೊಳೆದು ಹೊಸತನವನ್ನು ಮೆರೆದಿದ್ದಾರೆ. ಅಂತೆಯೇ ಕನ್ನಡದ ಅನುಭಾವಿ ಕವಿಗಳಲ್ಲಿ ಶ್ರೀಮಂತರೆನಿಸಿ ಖ್ಯಾತರಾಗಿದ್ದಾರೆ.

ಘನಮಠದಾರ್ಯರ ಸುಬೋಧಸಾರ

—ಡಾ|| ಸಂಗಮೇಶ ಸವದತ್ತಿಮಠ

ಇಂದಿನ ಆಂಧ್ರಪ್ರದೇಶ ರಾಜ್ಯದ ರಂಗಾರೆಡ್ಡಿ ಜಿಲ್ಲೆಯಲ್ಲಿ ಒಂದು ಸಣ್ಣ ಹಳ್ಳಿ ದಾರೂರು. ಅಲ್ಲಿಂದ ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲದಲ್ಲಿ ಒಂದು ದಿನ ಸಂಸಾರ ತ್ಯಾಗ ಮಾಡಿದ ನಾಗಭೂಷಣನೆಂಬ ಶಿವಯೋಗಿ ಕರ್ನಾಟಕದಲ್ಲಿ ಪಾದವಿಟ್ಟ, ಬಸವಕಲ್ಯಾಣದೆಡೆಗೆ ಸಾಗುತ್ತಿದ್ದ ಅವನನ್ನು ನೀನಾರು? ಎಂದು ಕೇಳಿದವರಿಗೆ 'ಘನಮಠೇಶೋನಿ' ಎಂದುತ್ತರಿಸಿ

ಶಿವಶಿವ ನನಬ್ರೋವುಮಯ್ಯಾ
ಭವಮೂಲ ನೋ ಭಾಪುಮಯ್ಯಾ

ಅಜ್ಞಾನಿ ಅಪರಾಧಿನ ಪ್ರಜ್ಞಾನಿನುಡಚಾಲ ಮುನರಿಂಚಯ್ಯ

ಎಂದು ತೆಲುಗಿನಲ್ಲಿ ಹಾಡುತ್ತ ಮುಂದೆ ಸಾಗಿದ ಈತನನ್ನು ಕಂಡು ಜನ ಕುತೂಹಲಿಗಳಾದರು. ನಿರರ್ಗಳವಾಗಿ ಸಂಸ್ಕೃತ, ತೆಲಗು ಮಾತನಾಡುವ, ಮಂತ್ರ ತಂತ್ರಗಳ ತಿರುಳನ್ನು ಅರಿತ ಈ ಅರಿವಿನ ಆಗರವನ್ನು ಕಂಡು ಜನ ಬೆಕ್ಕಸಬೆರಗಾದರು. ಘನಮಠೇಶನ ತೀಕ್ಷ್ಣನೋಟಕ್ಕೆ ಮಾರುಹೋದರು. 'ಸ್ವಾಮಿ ನಮ್ಮ ಭಾಷೆಯಲ್ಲಿ ಹೇಳಿರಿ ಎಂದರು ಆಯಿತು ಕನ್ನಡವನ್ನು ಕಲಿತು ಕನ್ನಡನುಡಿ ಪುತ್ರರಿಗೆ ಸುಬೋಧಸಾರವನ್ನುಣಬಡಿಸ ತೊಡಗಿದರು. ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿಯಂತೆ ಸದಾ ಸಂಚಾರಿಯಾಗಿ ಮೂಢರನ್ನು ತಿದ್ದುತ್ತ ಸೊಕ್ಕಿನವರನ್ನು ಎಗ್ಗಿಸುತ್ತ, ಲೋಕಕಲ್ಯಾಣದ, ಆತ್ಮೋದ್ಧಾರದ ಕೈಂಕರ್ಯವನ್ನು ಕೈಕೊಂಡು ಎಲ್ಲೆಂದರಲ್ಲಿ ಸುಳಿದಾಡಿದ ಈ ಶಿವಯೋಗಿ ಉಂಡಿದ್ದು ಒಪ್ಪೊತ್ತಿನ ಗಂಜಿ, ಉಟ್ಟಿದ್ದು ಮಾರುದ್ದ ಕಾವಿನಿಲುವಂಗಿ. ವೈರಾಗ್ಯದ ಖಣಿ, ನಿಷ್ಠುರತೆಯ ಮಣಿ. ಆಧ್ಯಾತ್ಮದ ಗುಣಿಯಾಗಿ ಈ ಶಿವಯೋಗಿ ಕೃಷಿಕರಿಗೆ ಕಲ್ಪವೃಕ್ಷ, ಭಕ್ತರಿಗೆ ಕಾಮಧೇನುವಾಗಿ ನುಡಿದದ್ದೆಲ್ಲ ಸುಬೋಧಸಾರವಾಯಿತು. ನಡೆದದ್ದೆಲ್ಲ ಧರ್ಮಮಾರ್ಗವಾಯಿತು.

ಘನಮಠೇಶ ದಾರೂರಿನಿಂದ ಹೊರಟು ಸುಮಾರು ಮೂವತ್ತು ವರ್ಷಕಾಲ ನಿರಂತರವಾಗಿ ಸಂಚರಿಸುತ್ತ ರಾಯಚೂರು ಜಿಲ್ಲೆಯ ಸಂತೆಕೆಲ್ಲೂರಿಗೆ ಬಂದಾಗ ದೇಹ ದಣಿದಿತ್ತು, ಮಣಿಹ ಮುಗಿದಿತ್ತು. ಇಂದಿಗೆ ಸುಮಾರು ಒಂದನೂರಾ ಹನ್ನೆರಡು ವರ್ಷಗಳ ಹಿಂದೆ ಸಂತೆಕೆಲ್ಲೂರಿನಲ್ಲಿ ಲಿಂಗೈಕ್ಯರಾದಾಗ ಕನ್ನಡದ ಅತ್ಯಪೂರ್ವ ವ್ಯಕ್ತಿತ್ವದ ಶಿವಯೋಗಿಯೊಬ್ಬ ಭೌತಿಕವಾಗಿ ಕಣ್ಮರೆಯಾಗಿದ್ದ. ಮನೆಮಠ ತೊರೆದನಂತರ

ಮೂರು ದಶಕಗಳಲ್ಲಿ ಘನಮಠದಪ್ಪ ರಚಿಸಿದ ತತ್ತ್ವಪದಗಳಿಗೆ ಲೆಕ್ಕವಿಲ್ಲ. ಸುದೈವದಿಂದ ದೊರೆತ ಕೆಲವನ್ನು ಧಾರವಾಡ ಮುರುಘಾಮಠದ ಲಿಂ. ಮೃತ್ಯುಂಜಯಪ್ಪಗಳು 'ಭಕ್ತಿ ಸುಧಾಸಾರ' ಹೆಸರಿನಲ್ಲಿ ೧೯೪೩ರಲ್ಲಿ ಅಚ್ಚುಹಾಕಿಸಿದರು. ಅನಂತರ ಶ್ರೀ ನಿ. ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳು (ಮರಕುಂಬಿ) ೧೯೭೦ರಲ್ಲಿ ಘನಮಠೇಶ ತತ್ತ್ವ ಪದಗಳು ಎಂಬ ಹೆಸರಿನಲ್ಲಿ ಪ್ರಕಟಪಡಿಸಿದರು. ಅದರ ಅನೇಕ ಮುದ್ರಣಗಳಾದವು. ಆದರೆ ಅದರಲ್ಲಿ ಕೇವಲ ೧೪೭ ಪದಗಳು ಮಾತ್ರ ಇದ್ದು, ಇನ್ನೂ ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ. ಅವುಗಳೆಲ್ಲವನ್ನು ಸೇರಿಸಿ ವಿಸ್ತೃತಾರ್ಥದೊಂದಿಗೆ ಪ್ರಕಟಿಸುವ ಅಗತ್ಯ ಇದೆ. ಹಾಗೆಯೆ ಘನಮಠದಾರ್ಯರ ಕೃಷಿಜ್ಞಾನ ಪ್ರದೀಪಿಕೆ ಗ್ರಂಥವನ್ನು ಹಲವು ಮುದ್ರಣಗಳಲ್ಲಿ ಪ್ರಕಟಿಸಲಾಗಿದೆಯಾದರೂ ಸಂಶೋಧನಾತ್ಮಕವಾಗಿ ಸಂಪಾದಿಸಿ ಪ್ರಕಟಿಸುವ ಅಗತ್ಯವೂ ಇದೆ. ಕೃಷಿಜ್ಞಾನ ಪ್ರದೀಪಿಕೆ ಘನಮಠದಾರ್ಯರು ಸ್ವತಃ ಹೇಳಿ ಬರೆಸಿದ ಕೃತಿಯಾದರೆ ತತ್ತ್ವಪದಗಳು ಅವರ ಹೃದಯ ಗೀತೆಗಳಾಗಿವೆ. ಕನ್ನಡದ ತತ್ತ್ವಪದ ಸಾಹಿತ್ಯದ ಕ್ಷೇತ್ರದಲ್ಲಿ ಘನಮಠದಾರ್ಯರ ತತ್ತ್ವಪದಗಳಿಗೆ ವಿಶಿಷ್ಟ ಸ್ಥಾನವಿದೆ.

ಅನುಭಾವದ ಆಳದಿಂದ ಹೊಮ್ಮಿದ ಸಾತ್ವಿಕ ವಿಚಾರಗಳಿಂದ ಕೂಡಿದ ಮನುಷ್ಯನ ಪರಿಶುದ್ಧ ವಿಕಾಸದ ಆಶಯವನ್ನು ಹೊಂದಿದ ಭಾವಗೀತೆಗಳೇ ತತ್ತ್ವಪದಗಳು. ಶಿವ ಶರಣರು ತಮ್ಮ ಅಂತರಂಗದ ಚಿಂತನೆಯ ತಿರುಳನ್ನು ತಮ್ಮ ಜೀವನಾನುಭವದ ಹಿನ್ನಲೆಯಲ್ಲಿ ವಿವೇಚಿಸಿದ್ದು ತತ್ತ್ವಪದಗಳಲ್ಲಿ. ತತ್ತ್ವಪದಗಳು ವಚನಗಳಿಗಿಂತಲೂ ಮೊದಲೇ ಹಾಗೂ ವಚನರಚನೆಯೊಂದಿಗೇ ಶಿವಶರಣರಿಂದ ರಚಿತವಾಗುತ್ತಿದ್ದವು. ವಚನ ಚಳುವಳಿಯ ನಂತರ ವಚನಗಳ ಪ್ರಭಾವ ಇವುಗಳ ಮೇಲಾದರೂ ಮೂಲ ಸ್ವರೂಪ ಬದಲಾಗಲಿಲ್ಲ. ಬೋಧನೆ, ತತ್ತ್ವನಿರೂಪಣೆ, ಆತ್ಮವಿಮರ್ಶೆ, ತಾತ್ತ್ವಿಕ ವಿವೇಚನೆ ಏನೇ ಇರಲಿ, ಪದಗಳಲ್ಲಿ ರಾಗಬದ್ಧವಾಗಿ ಭಾಷೆಯ ಬಂಧುರತ್ವದೊಡನೆ ಹೊಂದಿಕೊಂಡು ಆಕರ್ಷಕವೆನಿಸಿವೆ. ಅಂತೆಯೇ ಪ್ರಬುದ್ಧರಿಗಿಂತ ಜನಸಾಮಾನ್ಯರಿಗೆ ಇವು ಹೆಚ್ಚು ಹತ್ತಿರವಾಗಿವೆ. ಇಂದಿಗೂ ಜನಸಾಮಾನ್ಯರಲ್ಲಿ ಇವು ಉಳಿದುಕೊಂಡು ಬಂದಿವೆ. ಹಾಗೆಂದು ಎಲ್ಲ ತತ್ತ್ವಪದಗಳೂ ಸರಳವೆನ್ನಲು ಬಾರದು. ತತ್ತ್ವಪದಗಳ ಪರಂಪರೆ ಶಿವಶರಣ ಸಕಲೇಶಮಾದರಸರಿಂದ ಆರಂಭವಾದರೂ ಅವುಗಳಿಗೆ ನಿಜಗುಣ ಶಿವಯೋಗಿಗಳಿಂದ ಸ್ಪಷ್ಟಸ್ವರೂಪ ಬಂದಿತೆಂದು ಹೇಳಲಾಗುತ್ತಿದೆ. 'ಆಗಳಾಗಳಿನ ಶಿವಾನುಭವಕ್ಕೆ ನವಗೀತೆಯಂ ಪಾಡು'ವ ಲಕ್ಷಣದಿಂದಾಗಿ ಸಮಕಾಲೀನತೆ ತತ್ತ್ವಪದಗಳ ವೈಶಿಷ್ಟ್ಯಗಳಲ್ಲೊಂದು. ಬೋಧನೆ ಇಲ್ಲಿ ನೇರವಾಗಿಯೂ ಇರಬಹುದು. ಪರೋಕ್ಷ ವಾಗಿಯೂ ಇರಬಹುದು. ತನ್ನ ಅನುಭವ ಅನುಭಾವದ ಹಿನ್ನಲೆಯಲ್ಲಿ ಶರಣನು ಶಿವಯೋಗ ಸಾಧನೆಯ ಮಜಲುಗಳನ್ನು ಪರಿಚಯಿಸುತ್ತ ಆತ್ಮನನ್ನು ಪರಮಾತ್ಮನ

ನ್ನಾಗಿಸುವ ಗೀತಾತ್ಮಕ ನಿರೂಪಣೆ ಇಲ್ಲಿರುತ್ತದೆ. ಘನಮಠದಾರ್ಯರು ಈ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

'ಘನಮಠೇಶ' ಇದು ನಾಗಭೂಷಣ ಶಿವಯೋಗಿಗಳು ತಾವು ರಚಿಸಿದ ತತ್ತ್ವಪದಗಳಲ್ಲಿ ಬಳಸಿರುವ ಅಂಕಿತ. 'ಘನಮಠ' ಎಂಬ ಹೆಸರಿನ ಮಠ ಕರ್ನಾಟಕದಲ್ಲಿ ಇಲ್ಲ. (ರಾಯಚೂರು ಜಿಲ್ಲಾ ಲಿಂಗಸೂಗೂರ ತಾಲೂಕು ಸಂತೆಕೆಲೂರಿನಲ್ಲಿ ಘನಮಠದಾರ್ಯರ ಗದ್ದುಗೆ ಇದ್ದು ಅಲ್ಲಿನ ತೋಂಟದಾರ್ಯಮಠಕ್ಕೆ ಈಗ ಘನಮಠವೆಂದೇ ಹೆಸರಿಸಲಾಗುತ್ತದೆ.) ದಾರೂರಿನ 'ಪೆದ್ದಮಠ'ವೇ ನಾಗಭೂಷಣ ಅಧ್ಯಾತ್ಮದ ಪಾಠಶಾಲೆಯಂತಾಗಿತ್ತು. ನಿತ್ಯ ಸಂಚಾರಿಯಾಗಿ ಜನಕಲ್ಯಾಣ, ಆತ್ಮೋದ್ಧಾರದ ಕೈಂಕರ್ಯವನ್ನು ಹೊತ್ತು ನಾಗಭೂಷಣ ಶಿವಯೋಗಿಗಳ ಸುಬೋಧಗೀತೆಗಳು ಇಂದಿಗೂ ಪ್ರಸ್ತುತವೆನಿಸಿವೆ. ಕುಳಿತಲ್ಲಿ, ನಿಂತಲ್ಲಿ, ನಡೆವಲ್ಲಿ ಅವರು ನುಡಿದ ಮಾತೇ 'ಗೀತೆ'ಯಾದವು. ಅವರ ಶ್ರೀಕಂಠದಿಂದ ಬಂದ ಹಾಡುಗಳು ನೀಲಕಂಠನಿಂದ ಬಂದ ಪರಮ ಸಂದೇಶವೆನಿಸಿದವು. ಜನಪರ ವ್ಯಕ್ತಿತ್ವದ ಘನಮಠದಾರ್ಯರ ಪದಗಳಲ್ಲಿ ಭಾಷೆಯ ಸರಳತೆ, ಸಂಗೀತದ ಮೋಡಿ ಇದ್ದರೂ ಆಧ್ಯಾತ್ಮದ ಗಾಂಭೀರ್ಯ, ಸಾಮಾಜಿಕ ಸುಧಾರಣೆಯ ಕಳಕಳಿ, ತಪ್ಪನ್ನು ಎತ್ತಿತೋರಿಸುವ ನಿರ್ದಾಕ್ಷಿಣ್ಯ ಒಡೆದು ಕಾಣುವ ಅಂಶಗಳು.

ಗುರುಮಹಿಮೆ, ಬಸವಾದಿ ಪ್ರಮಥರ ಗುಣಗಾನ, ಶಿವಸ್ತುತಿ, ಸಾಮಾಜಿಕ ವಿಡಂಬನೆ, ನೀತಿಬೋಧೆ, ವೀರಶೈವಧರ್ಮ ತತ್ತ್ವ ವಿಶೇಷ ಮುಂತಾದ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಪದ್ಯಗಳನ್ನು ನಾಗಭೂಷಣ ಶಿವಯೋಗಿಗಳು ಮನನಂಬುಗುವಂತೆ ರಚಿಸಿದುದರಿಂದ ಈಗಲೂ ಜನರ ನಾಲಗೆಯ ಮೇಲೆ ಇವು ಉಳಿದುಕೊಂಡು ಬಂದಿವೆ.

ಮಹಾತ್ಮ ಬಸವಣ್ಣನಲ್ಲಿ ಇವರಿಗೆ ಅಪಾರ ಭಕ್ತಿ. ಬಸವನನ್ನು ಎಷ್ಟು ಸ್ತುತಿಸಿದರೂ ಇವರ ಮನ ದಣಿಯದು. ಬಸವನ ಕುರಿತು, ಜೋ ಜೋ ಬಸವಲಿಂಗ ಜೋ ಎಂದು ಜೋಗುಳ ಹಾಡು, ಬಸವನ ನೋಡುತೆ ಬಸವನ ಪಾಡುತೆ ಬಸವನೊಳ್ ಕೂಡುತೆ ವಶವಾಗಿ ಘನಮಠ ವಾಸಗೆ ಕಮ್ಮೆಣ್ಣೆ ಕುಶಲೇರ್ ಹಚ್ಚುವ ಬನ್ನಿರೆ ಎಂಬ ಬಸವತೈಲಾಂಭ್ಯಂಜನ ಪದ, ಶೋಭನವನ್ನಿರೆ ಶುಭಕರ ಬಸವೇಶನಿಗೆ ಎಂಬ ಶೋಭಾನ ಹಾಡು, ತ್ರಿಪದಿ ಛಂದಸ್ಸಿನಲ್ಲಿರುವ ಬಸವ ಶತಕ, ನೂರೆಂಟು ಸಾಲುಗಳ ಬಸವ ನಾಮಾವಳಿ, ಬಸವನ ಮಹಿಮೆ, ಗುಣಗಾನಗಳನ್ನು ಎತ್ತಿ ಸ್ತುತಿಸುವ ನೂರಾರು ಬಗೆ ಬಗೆಯ ಪದಗಳು ಘನಮಠದಾರ್ಯರ ಬಸವಭಕ್ತಿಯ ಪರಾಕಾಷ್ಠತೆಯನ್ನು ಹೊರಹೊಮ್ಮಿಸಿ 'ಶ್ರೀಗುರುಬಸವನ ಸ್ಮರಿಸಲು ನಿಜಪದವಾಗುವುದಿದು ನಂಬೋ ಮನುಜ' ಮನವರಿಕೆ ಮಾಡಿಕೊಡುತ್ತವೆ. ಬಸವಣ್ಣನಲ್ಲದೆ ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ತೋಂಟದ ಸಿದ್ಧಲಿಂಗ, ರೇವಣಸಿದ್ಧೇಶ್ವರ, ಮಲ್ಲಿಕಾರ್ಜುನ ಪಂಡಿತಾರಾಧ್ಯ ಮುಂತಾದ ಶಿವಶರಣರನ್ನು ಮನದುಂಬಿ ಸ್ತುತಿಸಿರುವುದೂ ಉಂಟು. ಇನ್ನುಳಿದಂತೆ

ನೂರಾರು ನೂತನ ಪುರಾತನ ಶರಣರನ್ನು ಬೇರೆ ಬೇರೆ ಪದ್ಯಗಳಲ್ಲಿ ಸ್ಮರಿಸುತ್ತಾರೆ. ಒಂದು ಪದ್ಯವಂತೂ ಬರೀ ಶಿವಶರಣೆಯರ ಸ್ತವನಕ್ಕೆ ಮೀಸಲಾಗಿದೆ. ಇದರಲ್ಲಿ ನೂರಾಹನ್ನೊಂದು ಶರಣೆಯರ ಹೆಸರುಗಳಿವೆ. ಘನಮಠದಾರ್ಯರ ಹಾಡುಗಳಲ್ಲಿ ಶಿವ ಶರಣೆಯರ ವಚನಗಳ ಗಾಢ ಪ್ರಭಾವವನ್ನು ಗುರುತಿಸಬಹುದಾಗಿದೆ.

"ತನುವೊಳೊಬ್ಬ ಮನಸಿನೊಳಗೊಬ್ಬ....ನಯನದೊಳೊಬ್ಬನ ನೆರೆವ............ ವನಿತೆಯರಿಗೆ ಸೋಲುತೆ" ಎಂಬಲ್ಲಿ ಬಸವಣ್ಣನ 'ಅವಳ ವಚನ ಬೆಲ್ಲದಂತೆ........ಕಂಗಳ ಲ್ಲೊಬ್ಬನ ಕರೆವಳು........ಮನದಲೊಬ್ಬನ ನೆರೆವಳು' ವಚನದ ಛಾಯೆ ಇದೆ.

"ಒಳ್ಳೆ ನಾಗರಹಾವು ಹಿಡಿತಂದು ಗಾರುಡಿಯನಂಗಳ
ದಲ್ಲಿ ಭಲ ಭಲರೆ ಭಲರೆಂದು ಆಡಿಸುತಮಿದಕಿ
ಷ್ಟಲ್ಲಿ ಹಾಲೆರಿರವ್ವಯ್ಯನೆಯೆಂದು ಬೇಡಿದರೆ ನಮ್ಮ
ಲ್ಲಿಲ್ಲ ಇಲ್ಲಿಂದಾಚೆಗಾಗೆಂದು ಪಳಿಯುತ್ತ ಭ್ರಷ್ಟರು
ಬೆಲ್ಲವಾಕಳ ಹಾಲು ನಾರಿಯರೆಲ್ಲ ಸಂಭ್ರಮದಿ ಪಿಡಿಯುತ
ಕಲ್ಲನಾಗರ ಮೇಲೆ ವ್ಯರ್ಥದಿ ಚಲ್ಲುತಿಹ ಪಾಪಾತ್ಮರಿಗೆ ಮತ್ತೆಲ್ಲಿ ಮುಕ್ತಿ"

ಈ ಪದ ಬಸವಣ್ಣನ "ಕಲ್ಲನಾಗರ ಕಂಡರೆ ಹಾಲನೆರೆಯೆಂಬರಯ್ಯ" ವಚನವನ್ನು ನೆನಪಿಗೆ ತರುತ್ತದೆ. "ಉಣುವ ಜಂಗಮದೇವರೈತಂದು...." ಪದ್ಯ "ಉಂಬ ಜಂಗಮ ಬಂದರೆ........" ಎಂಬ ಬಸವಣ್ಣನವರ ವಚನದ ಸಾಲನ್ನು ನೆನಪಿಸುತ್ತದೆ.

ಸಮಾಜದಲ್ಲಿ ದುರಾಚಾರ, ಡಂಭಾಚಾರ, ನೀತಿಭ್ರಷ್ಟತೆ, ಮೋಹ ಪರವಶತೆ, ಕುಟಿಲತೆ ಮುಂತಾದವುಗಳಿಗೆ ಈಡಾದ ವ್ಯಕ್ತಿಗಳನ್ನು ನಾಗಭೂಷಣ ಶಿವಯೋಗಿಗಳು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ.

"ಎಲ್ಲಿ ಭಕ್ತಿಯದೆಲ್ಲಿ ಮುಕ್ತಿಯದೊ ಈ ಸೂಳೆಮಕ್ಕಳಿ
ಗೆಲ್ಲಿ ಭಕ್ತಿಯದೆಲ್ಲಿ ಮುಕ್ತಿಯದೊ
....
ಮತ್ತ ನಾಗರಪಂಚಮಿಯಲ್ಲಿ ಜನರೆಲ್ಲ ಹಾಳ
ಹುತ್ತ ಹುಡುಕುತ ಪೋಗಿ ತಾವಲ್ಲಿ ನಾಗಪ್ಪಯೆಂದೊದ
ರುತ್ತ .. ....
ಚಿತ್ತವೃತ್ತಿಯ ಪರೀಕ್ಷೆಗಾ ಹೆಡೆಯುತ್ತಿಯಾಡಲ್ಕೆವ್ವೆ ನಾನಿ
ನ್ನೆತ್ತ ಪೋಗಲಿಯೆಂದು ಕಲ್ಮರನ್ನೆತ್ತಿ ಹಾಕೆಂದೆಂಬ ಹೊಲೆಯರಿ
ಗೆಲ್ಲಿ ಭಕ್ತಿಯದೊ"

"........ಹೋಳಿಗಿ ಕರ್ಚಿಕಾಯಿ ಮಾಡಿದ ದಿನದೊಳು ಜಂಗಮರಾಯ
ಶೀಲದಿಬಂದು ಭಿಕ್ಷಾಕೇಳಲು ಹಳಸಿದಂಥ

ಕೊಳಿಷ್ನು ತಂದು ಹಿಡಿಜೋಳಿಗೆ ಬೇಗನೆಂಬರಿಗುಂ
........ಉಂಟೇ ಭಕುತಿಯಿಂಥಾ ಶುಂಠಜನರಿಗೆ ಮನಭಂಟರಿಗೆ........"
"ನಂಬಬಾರದು ಇವರ ನಂಬಬಾರದು
ಶಂಭುಭಕ್ತಿ ಬಾಹ್ಯರಾದ ಡಂಭಕರನು ಶರಣರೆಂದು"
"ಏನಾದಿ ಮನುಜ ಏನಾದಿ ಶಿವ
ಜ್ಞಾನವರಿಯದೆ ನೀನೆಲೆವಾದಿ"
"ಕೇಳಿರೆ ಶರಣಗಣಾಳಿಸುವಚನ ಪೇಲು ಸುಖವು ನಿಮಗಾಗುವದು"
"........ಷಂಡನಂ ಸತಿಯಳನುಭೋಗಕೆ ಕಂಡು ಕಳುಹಲ್ಕವನು ವೈರದಿ
ಮುಂಡೆಯಂ ಹೊಡಕೊಂಬ ಪರಿ ಈ ಭಂಡ ಜನರಿಗೆ........"
"ಜಾತಿಗೋತ್ರಪೆಂದು ಬಹುಪ್ರಖ್ಯಾತಿಯಲ್ಲಿ ಪೇಳುವ ನೀತಿ
ಮಾತೆ ಸೂತಕದಿಂದೆಯಾದುದೀತನುವಲ್ಲೇನೋ ಕೋತಿ...."
'ಹೊತ್ತಿರಲಿಕೆ ಊರಿಗೆ ಸೇರೋ ದಾರಿ
ಕತ್ತಲೆಯೊಳಗರುಪುವರಾರೋ'
'ನರರಿಗೆಂತಹುದಯ್ಯ ಹರಭಕುತಿ ಇರದೆ ಗುಡಿಹೋಗುತೀಶ್ವರೇಶನ
ಮರೆದು ಕೆರಹಿನ ಚಿಂತಿಹಲನೋಲ್ ತರುಣಿ ಧನವನು ಕರಿಸಿರುವದುಃ'
"ಆಗಮಾರ್ಥದರಿವ ನೈಜವಾಗಿ ತನ್ನೊಳರಿಯದೊಂದು
ಸೋಗು ಹಾಕಿಕೊಂಡು ಒಣ ವಿರಾಗಿಯಾಗಬಹುದು
ಸತ್ಯಶರಣನಾಗಬಾರದಾರಿಗೆ ಈ ಜಗದಿಸತ್ಯ........"

ಇಂತಹ ಹಲವಾರು ನುಡಿಗಳಲ್ಲಿ ಘನಮಠದಾರ್ಯರು ಸಮಾಜವನ್ನು ನಿರೀಕ್ಷಿಸಿದ ತೀಕ್ಷ್ಣ ಬುದ್ಧಿಯ ಹಾಗೂ ಅವರು ಖಂಡತುಂಡವಾಗಿ ನೀತಿ ಹೇಳುವ ರೀತಿಯ ಕಲ್ಪನೆ ಯುಂಟಾಗುತ್ತದೆ.

ವೀರಶೈವಾಚರಣೆಗೆ ಅವರು ನೀಡಿದ ಮಹತ್ವ "ಗುರುಕರ ಜಾತರು ನಮ್ಮವರು ಭವಮರಣವ ಗೆಲಿದರು ನಮ್ಮವರು" ಎಂಬ ದ್ವಿಪದಿ ಪದ್ಯವೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ. ವೀರಶೈವಾಚಾರ ಸಂಪನ್ನನಿಗೆ ಯಾರ ಹಂಗೂ ಇಲ್ಲವೆಂಬುದನ್ನು "ಆರಗೊಡವೆಯಿನ್ನೇ ನೆಮಗೆ ಪಾರಮಾರ್ಥದೊಳಿರುವವಗೆ| ವೀರಶೈವ ಸುವಿಚಾರ ಪ್ರಮಥರಾಚಾರವಿಡಿದು ಭವದೂರ ನಾದಗಿನ್........" ಎಂಬ ಪದ್ಯದಲ್ಲಿ ಘೋಷಿಸಿದ್ದಾರೆ. ಘನಮಠದಾರ್ಯರು ನಿಜವಿರಕ್ತರನ್ನು ಗೌರವಿಸಿ ಸೋಗಿನ ವಿರಕ್ತರನ್ನು ಯಾವ ಅನುಮಾನವೂ ಇಲ್ಲದೆ ದೂಷಿಸಿದ್ದಾರೆ.

ಘನಮಠದಾರ್ಯರ ಬೋಧಾಮೃತ ಶ್ರೀ ಸಾಮಾನ್ಯನಿಂದ ವಿರಕ್ತ ಜಗದ್ಗುರುವರೆಗೆ ಎಲ್ಲರಿಗೂ ಮೃತ್ಯುಂಜಯನಾಗುವ ಸುಲಭ ಮಾರ್ಗವನ್ನು ತೋರಿದೆ, ಸದ್ಭಕ್ತಿಯ

ಸಹಾಯದಿಂದ ಮೋಹನಿದ್ರೆಯನ್ನಳಿದು ಕಾಲವನ್ನು ಗೆದ್ದು ಶಿವಲಿಂಗಪೂಜೆಯ ಮೂಲಕ ಮೃತ್ಯುವನ್ನು ಗೆದ್ದು ಮುಕ್ತಿಯನ್ನು ಪಡೆವ ಅರಿವಿನ ಮಾರ್ಗವನ್ನು ಅವರ ಬೋಧಾಮೃತ ತೋರಿಸುತ್ತದೆ. ಸಾಮಾಜಿಕ ಸ್ತರದಲ್ಲಿ ನಿಂತು ಆಧ್ಯಾತ್ಮಿಕ ಮಾರ್ಗವನ್ನು ಅರ್ಥಪೂರ್ಣವಾದ ಶೈಲಿಯಲ್ಲಿ ಹಾಡಿದ ಬಗೆ ಅವರ ತತ್ತ್ವಪದಗಳ ವೈಶಿಷ್ಟ್ಯವಾಗಿದೆ. ಸಂಸ್ಕೃತ ಕನ್ನಡ ಮಿಶ್ರಣ ಅಲ್ಲಲ್ಲಿ ತೋರಿದರೂ ಕಳಕಳಿಯ ಕಟೂಕ್ತಿಗಳು ಭಕ್ತಿರಸಪೂರ್ಣ ನಿರೂಪಣೆ ಅಲ್ಲಲ್ಲಿ ಮಿಂಚುವ ಉಪಮೆಗಳು, ಪ್ರಾಸದ ಸೊಗಸು ಪದವಿನ್ಯಾಸದ ಬೆಡಗು, ಛಂದೋವೈವಿಧ್ಯ, ಅಲಂಕಾರಗಳ ಮಾಧುರ್ಯ, ಶಿಷ್ಟ-ಜಾನಪದ ಸಮ್ಮಿಶ್ರಪದಬಳಕೆ, ಇವೆಲ್ಲವುಗಳನ್ನೂ ಒಳಗೊಂಡು ಘನಮಠದಾರ್ಯರ ಸುಬೋಧಸಾರದ ಪದ್ಯಗಳು ಕನ್ನಡ ಪಾರಮಾರ್ಥ ಸಾಹಿತ್ಯದ ಅಮೂಲ್ಯ ಕೊಡುಗೆಗಳಾಗಿವೆ.

ಸೋಮೇಕಟ್ಟೆ ಕರಿವೃಷಭೇಂದ್ರರ ಕೈವಲ್ಯಪದಗಳು

—ಪಂ. ಕೆ. ಪಿ. ಶಿವಲಿಂಗಯ್ಯ (ಪುಲಿಕೇಶಿ)

ಒಂದು ಕೈವಲ್ಯ ಪದ

ಗುರುಪುತ್ರರನು ಕಂಡು ನರರ ಮಾತುಗಳನು ಆಡಬಾರದು।
ಧರೆಯೊಳಗಿರುತಿಹ ಕರುಗುಲ್ಮ ಕಲ್ಲಿಗೆ ಎರಗಬಾರದು॥ ॥ಪಲ್ಲವಿ॥

ನರನಾಗಿ ಜನಿಸಲು ಗುರುವನು ಸೇರದೆ ಇರಲುಬಾರದು।
ಗುರುಕರುಣವಿಲ್ಲದೆ ಬರಿಯ ತಪಗಳ ಮಾಡಬಾರದು॥ ೧

ಮೋಕ್ಷದಪೇಕ್ಷೆಯಲಿ ಮರುಳುತ್ತ ಹಿಮ್ಮೆಟ್ಟಿ ನಿಲ್ಲಬಾರದು।
ರಾಕ್ಷಸನಂದದಿ ಭಕ್ಷ್ಯಾದಿಗಳ ನೋಡಿ ಬಯಸಬಾರದು॥ ೨

ಹೆಣ್ಣು ಹೊನ್ನು ಮಣ್ಣು ಮೂರನ್ನು ಮನದೊಳು ಕಚ್ಚಬಾರದು।
ಹುಣ್ಣಿಮೆ ಚಂದ್ರನ ಹಾಂಗೆ ಹೊಳೆಯುವ ಹೆಣ್ಣು ನೋಡಬಾರದು॥ ೩

ಅರಿಷಡ್ವರ್ಗಂಗಳ ಉರುಳಿನೊಳಗೆ ಸಿಕ್ಕಿ ಸಾಯಬಾರದು।
ದುರುಳ ಪಂಚೇಂದ್ರಿಯದಿರವಿನೊಳಗೆ ಮನವಿಕ್ಕಬಾರದು॥ ೪

ಬೋಧವು ಇಲ್ಲದೆ ವೇದವ ನೋದಬಾರದು।
ಮೋದದಿ ದಶನಾದ ಕಿವಿಯೊಳು ಕೇಳದಿರಲುಬಾರದು॥ ೫

ಸಾಧಿಸಿ ಗುರುವನು ಮನದೊಳು ಸ್ಮರಿಸದೆ ಇರಲುಬಾರದು।
ಗಾದೆಯ ಮಾತಿಲಿ ವೇದಾಂತಿಗಳ ಕೂಡೆ ವಾದಿಸಬಾರದು॥ ೬

ಸಾಧನೆಯಿಲ್ಲದೆ ಬರಿಯ ವೈರಾಗ್ಯವ ನಾಡಬಾರದು।
ಓದಿದ ಅರ್ಥವು ತಿಳಿಯದೆ ಬಾಯೊಳು ಬೊಗಳಬಾರದು॥ ೭

ಬರಿಯ ಸತ್ಕರ್ಮದಿ ಮನವನು ಇಕ್ಕುತ ಸಾಯಬಾರದು।
ತಿರುಗಿ ತಿರುಗಿ ಯಮಪುರದೊಳು ಕೊರಗುತ ಇರಲು ಬಾರದು ೮

ಸೋಮೇಕಟ್ಟೆ ಈಶಸ್ವಾಮಿಯ ಪಾದವ ಮರೆಯಬಾರದು।
ನಾಮವಿದೂರ ನೀನೆಂದು ನಂಬದೆ ಇರಲು ಬಾರದು॥ ೯

ಕೈವಲ್ಯ ಸಾಹಿತ್ಯ ವಿವರಣೆ

ಇದು ಕೈವಲ್ಯ ಸಾಹಿತ್ಯಕ್ಕೆ ಸೇರಿದ ಒಂದು ಹಾಡು; 'ಕೈವಲ್ಯಪದ' ಅಂತಲೂ ಕರೆಯುತ್ತಾರೆ. ಕೈವಲ್ಯವೆಂದರೆ 'ಮುಕ್ತಿ'ಯೆಂದು ಸಾಮಾನ್ಯವಾದ ಅರ್ಥ. ಈ

ಸಂಬಂಧವಾದ ತಿಳಿವಳಿಕೆಗೆ 'ಕೇವಲಜ್ಞಾನ' ಎನ್ನುತ್ತಾರೆ ಜೈನ ಸಂಪ್ರದಾಯದಲ್ಲಿ. ಕನ್ನಡ ಸಾಹಿತ್ಯ ಈ ಬಗೆಯ ಕೈವಲ್ಯ ಸಾಹಿತ್ಯ ಪ್ರಕಾರದಿಂದ ಸಾಕಷ್ಟು ಶ್ರೀಮಂತವಾಗಿದೆ. ವಿಶೇಷವಾಗಿ ಹಾಡುಗಬ್ಬಗಳ ರೂಪದಲ್ಲಿ ಪ್ರವಹಿಸಿರುವ ಈ ಸಾಹಿತ್ಯದ ಆದ್ಯ ಪ್ರವರ್ತಕರು ಶ್ರೀ ನಿಜಗುಣ ಶಿವಯೋಗಿಗಳು. ಆದರೂ ಬಸವಾದಿ ಪ್ರಮಥರ (ದಾಸಿಮಯ್ಯನವರಿಂದ ಹಿಡಿದು) ವಚನ-ಸಂಪ್ರದಾಯದಿಂದ ಈ ಸಾಹಿತ್ಯ ಪ್ರಕಾರದ ಉಗಮವಾಗಿದೆಯೆನ್ನಬಹುದು. ಸಾಹಿತ್ಯದೊಂದಿಗೆ ಸಂಗೀತ ಮಿಳಿತಗೊಂಡು ಹೊರ ಹೊಮ್ಮುವುದು ಈ ಸಾಹಿತ್ಯದ ಪ್ರಮುಖ ಲಕ್ಷಣ. ಸಂಗೀತ ಕಲೆ, ಮಾನವನ ಜೀವನ ಪಥವನ್ನು ನಯಗೊಳಿಸುವ ಸಾಧನ. ಇದು ನಿತ್ಯಜೀವನದ ಏರಿಳಿತಗಳಲ್ಲಿ ಸಾಗುವ ಮಾನವನ ಮನಸ್ಸನ್ನು ಹಗುರಗೊಳಿಸಬಲ್ಲುದು.

ಜೀವನದ ಮಹೋನ್ನತ ಉದ್ದೇಶವನ್ನು ಈಡೇರಿಸಿಕೊಳ್ಳಬೇಕಾದ್ದೂ ಮಾನವ ಜನ್ಮದ ಮುಖ್ಯ ಗುರಿ. ದೇಹೋsಹಂಭಾವವನ್ನು ಕಳೆದು, ತನ್ನ ನಿಜಸ್ವರೂಪವನ್ನು ಅರಿವು ಮಾಡಿಕೊಂಡು ಸಾಧನಾಜೀವಿಯನ್ನಾಗಿಸುವ ಪವಿತ್ರ ಕಾರ್ಯವನ್ನು ಮಹಿಮಾಶಾಲಿಗಳು ಆಚರಿಸಿ ತೋರಿಸಿದ್ದಾರೆ. ಭೋಗಲಾಲಸೆಯ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವ ಮಾನವರನ್ನು ಅಧ್ಯಾತ್ಮಸಾಧನೆಯತ್ತ ಒಯ್ದು, ಜೀವನದ ಸಾರ್ಥಕ್ಯವನ್ನುಂಟುಮಾಡುವ ಮಹಾಕಾರ್ಯದಲ್ಲಿ ಕೈವಲ್ಯ ಸಾಹಿತ್ಯ ರಚನಾಕಾರರು ಪ್ರಮುಖಪಾತ್ರ ವಹಿಸಿದ್ದಾರೆ.

ಕೈವಲ್ಯ ಸಾಹಿತ್ಯ ರಚಯಿತರು

ವೀರಶೈವ ಸಂಪ್ರದಾಯದಲ್ಲಿ ಕೃತಿರಚನೆ ಮಾಡಿದ ಕೈವಲ್ಯ ಸಾಹಿತ್ಯ ರಚನಾಕಾರರಲ್ಲಿ ನಿಜಗುಣಶಿವಯೋಗಿಗಳು ಮೊದಲಿಗರೆಂದು ಈ ಮೇಲೆಯೇ ಹೇಳಿದೆಯಷ್ಟೆ. ಅವರನ್ನು ಅನುಸರಿಸಿದವರಲ್ಲಿ ಬೆಂಗಳೂರಿನ ಸರ್ಪಭೂಷಣ ಶಿವಯೋಗಿಗಳು, ಯರಗಂಬಳ್ಳಿಯ ಮುಪ್ಪಿನಷಡಕ್ಷರಿ ಸ್ವಾಮಿಗಳು, ಬಾಲಲೀಲಾ ಮಹಾಂತ ಶಿವಯೋಗಿಗಳು, ಘನಮಠದಾರ್ಯರು, ಮೈಲಾರದ ಬಸವಲಿಂಗ ಶರಣರು ಮೊದಲಾದವರು ಈ ದಿಸೆಯಲ್ಲಿ ಹೆಸರಾಂತವರು, ಇವರ ಸಾಲಿನಲ್ಲಿ ಸೇರ್ಪಡೆಯಾಗತಕ್ಕ ಇನ್ನೊಬ್ಬ ಮಹಾನುಭಾವರೇ ಪ್ರಕೃತ ಲೇಖನದ ಕರ್ತೃಗಳಾದ ನೊಣವಿನ ಕೆರೆ ಸೋಮೇಕಟ್ಟೆ ಮಠದ ಕರಿವೃಷಭೇಂದ್ರರು.

ಗುರುಪರಂಪರೆ

ಚೀಲಾಳ ಸಮಯದ ವಿರಕ್ತ ಚರಮೂರ್ತಿಗಳು ಮಹಾವೈರಾಗ್ಯಶೀಲರಾಗಿ ಶಿವಯೋಗಾನುಸಂಧಾನ ತಪಶ್ಚರ್ಯ ಕ್ರಿಯೆಗಳನ್ನಾಚರಿಸುತ್ತಿದ್ದರು. ಶಿಷ್ಯರ ಪ್ರಾರ್ಥನೆ ಯಂತೆ ಭಕ್ತರ ಉದ್ಧಾರಕ್ಕಾಗಿ ದೇಶಾಟನೆ ಮಾಡುತ್ತ ತುಮಕೂರು ಪಟ್ಟಣಕ್ಕೆ ದಯಮಾಡಿಸಿದರು. ಅಲ್ಲಿನ ಭಕ್ತರ ಪ್ರಾರ್ಥನೆಯಂತೆ ಊರಿನ ಪೂರ್ವಭಾಗದಲ್ಲಿ ಒಂದು ಶಿವಾಲಯವನ್ನು ಕಟ್ಟಿಸಿ, ಸೋಮೇಶ್ವರಾಭಿಧಾನದಿಂದ ಶಿವಲಿಂಗವನ್ನು ಪ್ರತಿಷ್ಠಿಸಿದರು.

'ಸೋಮೇಕಟ್ಟೆ' ಎಂಬೊಂದು ಕಟ್ಟೆಯನ್ನು 'ಸೋಮೇಕಟ್ಟೆಮಠ'ವೊಂದನ್ನು ಕಟ್ಟಿಸಿ ಅಲ್ಲಿಯೇ ನೆಲೆಗೊಂಡರು. ಅಲ್ಲಿ ಶಿವಯೋಗವನ್ನಾಚರಿಸುತ್ತ ಅನುಭಾವಗೋಷ್ಠಿಗಳನ್ನು ನಡೆಸುತ್ತ ಜ್ಞಾನನಿಧಿಗಳಾಗಿದ್ದರು.

ಕೆಲಕಾಲಾನಂತರ, ಈ ಪರಂಪರೆಯ ಸೂತ್ರಾನುವರ್ತಿಗಳಾದ ಸಿದ್ಧೇಶ್ವರಸ್ವಾಮಿಗಳೆಂಬವರು ಅತ್ಯಂತ ವೈರಾಗ್ಯ ಹೊಂದಿ ನಿಸ್ಸಂಗವಂ ಬಯಸಿ ಸಂಚಾರ ಹೊರಟು ತಿಪಟೂರು ತಾಲ್ಲೂಕು ನೊಣವಿನಕೆರೆ ಎಂಬ ಗ್ರಾಮದ ಸಮೀಪದ ವನಾಂತರದಲ್ಲಿ ತಪಸ್ಸು ಮಾಡುತ್ತ ಅಂತರ್ಮುಖಿಗಳಾಗಿದ್ದರು. ಇವರೇ ಕಾಡಸಿದ್ಧೇಶ್ವರ ಸ್ವಾಮಿಗಳೆಂದು ಖ್ಯಾತರಾದವರು. ಹೀಗಿರುವಲ್ಲಿ ಹಾಗಲವಾಡಿ ಪಾಳೆಯಗಾರನಾದ ಮುದಿಯಪ್ಪನಾಯಕ ಎಂಬವನು ಬೇಟೆಯಾಡುತ್ತಾ ಅದೇ ಕಾಡಿಗೆ ಬಂದನು. ಜಟಾಧಾರಿಗಳಾಗಿದ್ದು ತಪಸ್ಸಿನಲ್ಲಿ ನಿರತರಾಗಿದ್ದ ಸಿದ್ಧೇಶ್ವರ ಸ್ವಾಮಿಗಳನ್ನು ದೂರದಿಂದ ನೋಡಿ ಕರಡಿಯೆಂದು ಭಾವಿಸಿ ಗುಂಡಿನಿಂದ ಹೊಡೆದನು. ಸಮೀಪಕ್ಕೆ ಬಂದು ನೋಡುವಲ್ಲಿ ಗುಂಡಿನೇಟನ್ನು ತಡೆದುಕೊಂಡು ಶಿವಯೋಗಾನುಸಂಧಾನದಲ್ಲಿದ್ದ ಮೂರ್ತಿಗಳನ್ನು ಕಂಡು ಭಯಭರಿತನಾಗಿ ತನ್ನ ಅಪರಾಧವನ್ನು ಕ್ಷಮಿಸಿ ಕಾಪಾಡಬೇಕೆಂದು ಬೇಡಿಕೊಂಡನು. ಸ್ವಾಮಿಗಳು ಕೃಪಾದೃಷ್ಟಿ ಬೀರಿ ಆತನನ್ನು ಕ್ಷಮಿಸಿ ಅವನಿಗೆ ಜ್ಞಾನದೀಕ್ಷೆ ಮಾಡಿ ಲಿಂಗಾಂಗ ಸಾಮರಸ್ಯವನ್ನು ಅನುಗ್ರಹಿಸಿ ಶಿಷ್ಯನನ್ನಾಗಿ ಮಾಡಿಕೊಂಡರು. ಆತನು ಗುರುಗಳಿಗೆ ಅಲ್ಲಿಯೇ ಒಂದು ಮಠವನ್ನು ಕಟ್ಟಿಸಿಕೊಟ್ಟನು. ಅದೇ ಈಗ ಇರುವ ಕಾಡಸಿದ್ಧೇಶ್ವರಮಠ ಶ್ರೀ ಸ್ವಾಮಿಗಳವರ ಗದ್ದುಗೆ ಅಲ್ಲಿಯೇ ವಿರಾಜಮಾನವಾಗಿದೆ.

ಕರ್ತೃಗಳ ಜನನ ಹಾಗೂ ಮಠದ ಅಧಿಕಾರ ಸ್ವೀಕಾರ:

ಇವರ ಪರಂಪರ ಸೂತ್ರಾನುವರ್ತಿಗಳಾಗಿ ೧೬ನೆಯ ಚರವರೇಣ್ಯರಾದ ಶ್ರೀಮನ್ನಿರಂಜನ ಪ್ರಣವಸ್ವರೂಪಿ ಕರಿವೃಷಭೇಂದ್ರಸ್ವಾಮಿಗಳು ಕ್ರಿ. ಶ. ೧೮೮೦ರಲ್ಲಿ ಶಿವಗಂಗಾ ಕ್ಷೇತ್ರದ ಸಮೀಪದ 'ಅದರಂಗಿ' ಗ್ರಾಮದಲ್ಲಿ ಅವತರಿಸಿದರು. ಮರುಳಾರಾಧ್ಯರ ಸದ್ವಂಶಸ್ಥ ರಾಚಪ್ಪದೇವರೆಂಬುವರು ಶ್ರೀ ಗಳವರ ಪೂರ್ವಾಶ್ರಮದ ಜನಕರು. ಬಾಲ್ಯದಲ್ಲಿಯೇ ವೈರಾಗ್ಯಶೀಲರಾಗಿ ಶಿವಾನುಭವ ಶಾಸ್ತ್ರವನ್ನು ಅಭ್ಯಾಸ ಮಾಡುತ್ತಲಿದ್ದು ನೊಣವಿನ ಕೆರೆ ಮಠಕ್ಕೆ ಬಂದರು ಈ ಮರಿದೇವರು. ಆ ಮಠದ ಚರವರ್ಯರಾಗಿದ್ದ ಶ್ರೀ ರುದ್ರಸ್ವಾಮಿಗಳವರ ಕರಕಮಲಸಂಜಾತರಾಗಿ ಚರಪಟ್ಟರನ್ನು ಅನುಗ್ರಹಿಸಿಕೊಂಡರು. ಅಲ್ಲಿ ಶಿವಯೋಗಾನುಷ್ಠಾನದಿಂದ ತಪಸ್ಸನ್ನಾಚರಿಸುತ್ತ ಅನೇಕ ಸಿದ್ಧಿಗಳನ್ನು ಪಡೆದರು. ಶಿಷ್ಯ ವರ್ಗಕ್ಕೆ ಭಕ್ತಿಜ್ಞಾನ ವೈರಾಗ್ಯಾದಿಗಳನ್ನು ಬೋಧಿಸುತ್ತ ಮಹಾಮಹಿಮರೆನಿಸಿದರು. ಇವರಿಂದ ನಡೆದ ಪವಾಡಗಳು ಅನೇಕ. ಅವುಗಳಲ್ಲೊಂದನ್ನು ಉಲ್ಲೇಖಿಸುವ.

ಶ್ರೀಗಳವರ (ಒಂದು) ಪವಾಡ

ಶ್ರೀ ಸ್ವಾಮಿಗಳ ಶಿಷ್ಯಾಗ್ರಣಿಗಳಲ್ಲೊಬ್ಬರು ಮಲ್ಲೇನಹಳ್ಳಿ (ಲಿಂಗೈಕ್ಯ) ಚನ್ನಬಸವಯ್ಯನವರು ಒಂದು ದಿನ ಪ್ರಾತಃಕಾಲ ದಂತಧಾವನ ಗೈಯ್ಯುತ್ತ ಬಳಿಯಲ್ಲಿದ್ದ

ಚನ್ನಬಸವಯ್ಯನವರನ್ನು ಕುರಿತು, "ನಿನಗೇನಾದರೂ ಕವಿತಾ ಮಾಡಲು ಬಂದರೆ ಹೇಳಪ್ಪ" ಅಂದರು. ಅವರು ತನಗೇನೂ ಬರುವುದಿಲ್ಲೆಂದರು. 'ಹಾಗಾದರೆ ಇಲ್ಲಿ ಬಾ' ಎಂದು ಹತ್ತಿರಕ್ಕೆ ಬರಮಾಡಿಕೊಂಡು ಅವರ ನಾಲಿಗೆಯ ಮೇಲೆ ತಾವು ಹಲ್ಲನ್ನು ತಿಕ್ಕುತ್ತಿದ್ದ ಕಡ್ಡಿಯಿಂದ ನಾಲಿಗೆಯ ಮೇಲೆ ಪ್ರಣವಾಕ್ಷರವನ್ನು ಬರೆದರು. ಆಶ್ಚರ್ಯ! ಒಡನೆಯೇ ಚನ್ನಬಸವಯ್ಯನವರು ಅನೇಕ ಕವನಗಳನ್ನು ಹಾಡತೊಡಗಿದರು. ಅವುಗಳಲ್ಲಿ ಕೆಲವನ್ನು ಮುಂದೆ ವಿವೇಚಿಸುವಾ-

ನಿರ್ವಯಲ ಸಮಾಧಿ

ಸುಮಾರು ೪೦ ವರ್ಷಗಳ ಕಾಲ ಕೈವಲ್ಯ ಪದಗಳನ್ನು ರಚಿಸಿ, ಮಹಾಮಹಿಮರಾಗಿ ಚರಪಟ್ಟಾಧಿಕಾರವನ್ನು ಸಾರ್ಥಕಗೈದ ಮಹಾಸ್ವಾಮಿಗಳವರು ತಮ್ಮ ಕೃತಿಗೆ ಪಾತ್ರರಾಗಿ, ಸೇವಾ ಶುಶ್ರೂಷೆಯನ್ನು ಕೈಕೊಂಡಿದ್ದ ಮರಿಸ್ವಾಮಿಗಳಿಗೆ ಕರಿಬಸವಸ್ವಾಮಿಗಳೆಂಬ ಅಭಿಧಾನದಿಂದ ಮಹಾಮಂತ್ರೋಪದೇಶ ಗೈದು ವೀರಶೈವ ಧರ್ಮದ ಮರ್ಮಗಳನ್ನೆಲ್ಲ ಬೋಧಿಸಿ ವಿರಕ್ತ ಚರಪಟ್ಟವನ್ನೂ ದಯಪಾಲಿಸಿದರು. ಕ್ರಿ. ಶ. ೧೮೭೭ರಲ್ಲಿ ತಮ್ಮ ಶಿಷ್ಯ ಮಂಡಲಿಯನ್ನೆಲ್ಲ ಬರಮಾಡಿಕೊಂಡು ತಾವು ಲಿಂಗೈಕ್ಯರಾಗುವ ಸಮಯವನ್ನು ಎಲ್ಲರಿಗೂ ತಿಳಿಸಿ ಅರ್ಚನ-ಅರ್ಪಣ-ಅನುಭಾವಗಳನ್ನು ನಡೆಸಿದರು. ಮಠದಲ್ಲಿ ಮೊದಲೇ ಶಾಸ್ತ್ರೀಯವಾಗಿ ನಿರ್ಮಿಸಿದ್ದ ಕ್ರಿಯಾಸಮಾಧಿಯ ಬಳಿಗೆ ದಯಮಾಡಿಸಿ, ಗದ್ದುಗೆಯ ಮೇಲೆ ಮಂಡಿಸಿ ಶಿಷ್ಯರಲ್ಲಿ ಜಯಘೋಷ ಮಾಡುತ್ತಿರಲು, ಶಿವಯೋಗಾನುಸಂಧಾನದಿಂದ, ಮಹಾಮಂತ್ರೋಚ್ಚಾರಣೆ ಮಾಡುತ್ತ ನಿರ್ವಯಲ ಸಮಾಧಿಯಲ್ಲಿ ಲಿಂಗದೊಳಗಾದರು. ಅಲ್ಲಿಯೇ ಗದ್ದುಗೆಯಾಗಿರುತ್ತದೆ.

ಈ ಮೇಲೆ ಶೃತಪಡಿಸಿದ ಚನ್ನಬಸವಯ್ಯನವರಲ್ಲದೆ, ಹೊನ್ನುಡಿಕೆಯಲ್ಲಿದ್ದ ಗಂಗಾಧರ ಸ್ವಾಮಿಗಳೆಂಬುವರು ಸಹಿತ ಮಹಾಸ್ವಾಮಿಗಳವರ ಕೃಪೆಗೆ ಪಾತ್ರರಾಗಿದ್ದು ಕವಿತ್ವ ಶಕ್ತಿಯನ್ನು ಪಡೆದವರಾಗಿದ್ದರು.

ಶ್ರೀ ಕರಿವೃಷಭೇಂದ್ರರ ಕೈವಲ್ಯ ಪದಗಳು

ಪೂಜ್ಯರಾದ ಈ ಮಹಾಸ್ವಾಮಿಗಳವರು ೫೩ ಪದಗಳನ್ನು ಅಷ್ಟಾವರಣ ತ್ರಿವಿಧಿ ಹಾಗೂ ಅಷ್ಟೋತ್ತರ ಶತ ತ್ರಿವಿಧಿಗಳನ್ನು ರಚಿಸಿರುತ್ತಾರೆ; ಅಂದರೆ ದೊರೆತಿರುವ ಹಾಗೂ ಪ್ರಕಟವಾಗಿರುವ ಸಾಹಿತ್ಯವಿಷ್ಟು:

'ಉತ್ಸವವು ನಮಗೇತಕೋ' ಎಂದು ಪ್ರಾರಂಭವಾಗುವ ಪದದಲ್ಲಿ 'ವಾಸನೆಯು ಏಕೆಂಬ ಘಾಸಿ ನಮಗೇನಿಲ್ಲ....ದಿಟ್ಟ ಸೋಮೇಕಟ್ಟಿ ಕರಿವೃಷಭ ಲಿಂಗೇಂದ್ರ ನಿನ್ನೊಳಿಟ್ಟು ಕೊಳ್ಳೈ ತನುವನು'- ಈ ರೀತಿ ಹೇಳಿರುವುದರಲ್ಲಿ ದೇಹೋಽಹಂಭಾವ ಶ್ರೀಗಳವರಲ್ಲಿ ಕಿಂಚಿತ್ತೂ ಇರಲಿಲ್ಲವೆಂಬುದು ವಿದಿತವಾಗುತ್ತದೆ.

"ಅರಿವೆಂಬ ಸರಪಣಿ ಸರಸದಿಂ ಹೂಡುತ
ಸ್ಥಿರವೆಂಬ ತೊಟ್ಟಿಲೊಳು ಪರವೆಂಬ ಶಿಶುವಿಗೆ

ವರವಿವೇಕಗಳೆಂಬ ಹಾಸಿಗೆಯನೆ ಹಾಸಿ
ಚಿರತರ ಸುಖವೆಂಬ ಒರಗುದಿಂಬುಗಳಿಟ್ಟು

ಜೋ ಜೋ ಜೋ ಎಂದು ಜೋಗುಳ ಪಾಡಿರೆ ಸತ್ಯ ಸೋಮೇಕಟ್ಟೆ ಕರ್ತೃ ಕರಿವೃಷಭನ" ಎನ್ನುವುದರಲ್ಲಿ ಜ್ಞಾನವೇ ಸರಪಣಿ ಅಥವಾ ಹಗ್ಗ, ನಿತ್ಯತ್ವವೇ ತೊಟ್ಟಿಲು, ಪರವೇ ಶಿಶು, ಶ್ರೇಷ್ಠ ವಿವೇಕವೇ ಹಾಸಿಗೆ, ಶಾಶ್ವತ ಸುಖವೇ ಒರಗುದಿಂಬು-ಎಂಬೀ ರೂಪಕಗಳು ಎಷ್ಟು ಒಪ್ಪವಾಗಿ ನಿರೂಪಿತವಾಗಿವೆ!

ಜೋಗುಳ- ಎನ್ನುವ ಪದದಲ್ಲಿ ಬರುವ "ಹುಚ್ಚುಮಾಯೆಯು ಸಂಗದಿ। ಜಗವಿದುವೆ। ಹುಚ್ಚಾಗಿ ಮುಳುಗಿ ಇಹುದು। ನೀ। ಬೆಚ್ಚಿ ಬೆದರಲಿಬೇಡ ನಿನ್ನ ನೀ ತಿಳಿಯೆಂದು ಬೆಚ್ಚು ನೀರು ಹಾಕಿರವ್ವ" ಎಂದು 'ಮಾಯಾಪ್ರಪಂಚಕ್ಕೆ ಹೆದರದೆ ನಿನ್ನ (ಸ್ವರೂಪವನ್ನು) ನೀನು ತಿಳಿಯಬೇಕು' ಎನ್ನುವ ನಿಜಜ್ಞಾನವನ್ನು ಅಂಕುರಿಸುತ್ತಾರೆ ಇಲ್ಲಿ.

ಜೂರಿ ದೂರಿಯು ದೂರಿ ದುರಿತನಾಶಾಯ

"ಆರು ಹುಲಿಯ ನುಂಗಿ ಆರೆರಡಾನೆಯ ಪಿಂಗಿ
ಮೂರುಗ್ರಾಮವ ಸುಟ್ಟು ಮೂಲಿಗನಾಗಿರೆ।
ಪಂಚರೈವರ ಕೊಂದು ಸಂಚಿತ ಮೂರವಿಾರಿ
ಪಂಚಮುಖನ ಧ್ಯಾನ ನಿರಂತರದೊಳಗಿದೆ॥"

ಎನ್ನುವೀ ಪದ್ಯಭಾಗದಲ್ಲಿ ಕಾಮಾದಿ ಷಡ್ವರ್ಗ ಮೊದಲಾದವುಗಳನ್ನು ಗೆದ್ದು ಸದಾ ಪರಬ್ರಹ್ಮ (ಆತ್ಮ) ಧ್ಯಾಸದಲ್ಲಿರತಕ್ಕದ್ದು- ಎಂದು ಸೂಚಿಸಿದ್ದಾರೆ.

"ನಾಸಿಕಾಗ್ರದ ದೃಷ್ಟಿ ಸೂಸಲೀಯದೆ ಮನ
ವಾಸನೆಗಳು ಏನೂ ತೋರದಂತೆ
ಸಾಸಿರದಳ ಪೀಠ ವಾಸವಾಗಿರುತಿಹ
ಭಾಸುರ ಕಳೆಯೊಳು ಲೇಸಿನಿಂದ"

ನಿದ್ರೆಯ ಮಾಡು ನೀ ಭದ್ರಮಂಟಪದೊಳು- ಎಚ್ಚರಿಸಿದ್ದಾರೆ.

ಏಳು ಕರಿವೃಷಭೇಂದ್ರ

ಉದಯರಾಗವೆಂಬ ೭ನೆಯ ಪದದಲ್ಲಿ:

"ದಳನಾಲ್ಕು ದಳವಾರು ದಳಹತ್ತು ಹನ್ನೆರಡು
ದಳ ಹದಿನಾರು ದ್ವಿದಳದೊಳಗಾಡುತ
ಸಾಸಿರ ದಳ ಪೀಠವಾಸ ತೊಟ್ಟಿಲೊಳು
ಭಾಸುರ ಬೆಳಗನು ಲೇಸಿನಿಂ ನೋಡುತ...."

ಎಂದು ತಾವು ಸ್ವತಃ ಬೆಳಕು ಕಂಡ ಅನುಭಾವವನ್ನು ನಮಗೂ ಕಾಣಲು ಬೋಧಿಸುತ್ತಾರೆ. ಮೂಲಾಧಾರ-ಸ್ವಾಧಿಷ್ಠಾನ-ಮಣಿಪೂರಕ-ಅನಾಹತ-ವಿಶುದ್ಧ-ಆಜ್ಞಾ ಈ ಆರೂ ಚಕ್ರಗಳನ್ನು ಆಯಾದಳಗಳನ್ನು ಹೆಸರಿಸುವ ಮೂಲಕ ಕ್ರಮವಾಗಿ ಬಿತ್ತರಿಸಿ, ಅಲ್ಲಿಂದ

ಮೇಲೆ ಹೋಗಿ 'ಸಹಸ್ರ ದಳ ಕಮಲ' (ಬ್ರಹ್ಮರಂಧ್ರ)ದಲ್ಲಿ ಪ್ರಕಾಶವನ್ನೀಕ್ಷಿಸಲು ಹೇಳುತ್ತಾರೆ.

"ಆರು ಚಕ್ರದ ಗಾಲಿ ಮೂರು ಮಲುಕಿನ ತೇರು
ಮೇಲುಮಂಟಪದೊಳು ದೇವನ ತೋರಿಸುತೀನಿ,
ಬರ್‍ತೀರೇನ್ರೀ ಇಲ್ಲೆ ಇರ್‍ತೀರೇನ್ರಿ"

ಎಂಬ ಜನಪದ ಗೀತೆಯು ಸಾರುವುದೂ ಆ ದಿವ್ಯ ತತ್ವವನ್ನೆ!

ಏಕೆ ಮರೆದಿಹೆ ಮನವೆ

ಎಲ್ಲ ಮರೆವೆಯು ಬಿಟ್ಟು ನಿನ್ನ ನಿಜವಳವಟ್ಟು
ಫುಲ್ಲಶರನನು ಸುಟ್ಟು ಭಸಿತವಿಟ್ಟು
ಬಲ್ಲ ಸೋಮೇಕಟ್ಟಿ ಕರಿವೃಷಭಲಿಂಗೇಂದ್ರ–
ನಲ್ಲದೇ ನಿಲ್ಲುವೆನೆ ಮನ ಮುಕ್ತಿವಟ್ಟು

ಈ ಪದ ಭಾಗದಲ್ಲಿ ಸರ್ಪಭೂಷಣ ಶಿವಯೋಗಿಗಳ "ಮರವೆಯಂಶವನೆಲ್ಲ ತೊಡೆದು ಬಿಟ್ಟಿರುವನೆ ದೇವರ ದೇವ...." ಎನ್ನುವುದೂ, ನಿಜಗುಣರ "...ಮಾರಮರ್ದನ ಶಂಭು ಲಿಂಗವನೊಲಿಸಿ ಗಂಭೀರ ಸುಖದೊಳಿರೆಂದರುಪುವ...." ಎನ್ನುವ ಅಂಶವೂ ಧ್ವನಿತವಾಗುತ್ತವೆ. Great Men think alike (ದೊಡ್ಡವರು ಒಂದೇ ತರಹ ಆಲೋಚಿಸುತ್ತಾರೆ) ಎನ್ನುವ ಉಕ್ತಿ ಇಲ್ಲಿ ಅತ್ಯಂತ ಸಮಂಜಸವಾಗಿ ಒಡಮೂಡಿದೆ.

ನೋಡೋಣ ಬಾರೆ ಸಖಿ ಪ್ರಾಣಕಾಂತನ। ಕೂಡೋಣ ಬಾರೆ....

ಆಗಮಾತೀತನಭೇದ್ಯನ
ನಿಗಮಾಗಮಂಗಳಿಗೆ ಸಿಲುಕದಾತನ।
ಭೋಗರಹಿತ ಸ್ವಪ್ರಕಾಶನ ಜನನ–
ದಾಗುಹೋಗುಗಳಿಲ್ಲದಾತನ.... ಇವೆಲ್ಲ 'ಆತ್ಮ' ಲಕ್ಷಣಗಳೇ ಅಲ್ಲವೆ?

ಕಾಣದಿರಲಾರೆನೆ

ಮಾಯಾ ಸಂಸಾರವೆಂಬ ಮೋಹಕೆ ಸಿಲ್ಕಿ ಆಯಾಸ ಪಡುತಲಿರೆ
ಕಾಯಜನನು ಸುಟ್ಟು ಬೂದಿಯು ಫಣೆಗಿಟ್ಟ
ಮಾಯಾರಹಿತ ಗುರುರಾಯನ ಪಾದವ....

ಇಲ್ಲಿ 'ಕಾಯಜ'ನೆಂದರೆ ಆಸೆಯೇ; ಆಶಾತ್ಯಾಗ ಅರ್ಥಾತ್ ವೈರಾಗ್ಯಭಾವ ಸಾಧನ ಚತುಷ್ಟಯದ ಬಹು ಮುಖ್ಯಾಂಗ ತಾನೆ!

ಧ್ಯಾನ ಮಾಡು ನೀನು

ಅಂತರಂಗದೊಳಗೆ। ಅನುದಿನ। ಸಂತತ ನಿನ್ನೊಳಗೆ
ಚಿಂತೆಯು ನೀಗಿ ನಿರಂತರ ಬ್ರಹ್ಮನ
ಚಿಂತೆಯೊಳನುದಿನ ಸಂತತವಿರುತಿರು–

ಎಲ್ಲ ಮತ ತತ್ತ್ವಗಳೂ ಒಳಮುಖಮಾಡು (Look Within=know Thyself) ಎನ್ನುವುದನ್ನೇ ಸಾರಿ ಹೇಳುತ್ತಿವೆ; ಆದು ಕಾರಣ ಲೋಕದ ಚಿಂತೆಯು ಬಿಟ್ಟು, ಪರ ವಸ್ತುವ ಆದೂ ನಿನ್ನೊಳಗೇ ಇರುವಂತಹದನ್ನು ಅರಿಯುವ ಪ್ರಯತ್ನ ನಿರಂತರವಾಗಿ ಮಾಡು ಎನ್ನುವುದೇ ಸ್ವಾಮಿಗಳವರ ದಿವ್ಯ ಸಂದೇಶ!

ಕಾಂತೆ ಪೋಗಿ ಕರೆದು ತಾರೆ ಕಾಂತ ಕರಿವೃಷಭೇಂದ್ರನ

ಸ್ವಾನುಭಾವದ ಸುಖವ ತೋರಿ ಎನ್ನ ಸ್ವಸ್ವರೂಪಳ ಮಾಡಿದ
ತಾನು ತಾನೆ ತಾನೆಯಾಗೆ ನಾನು ನೀನೆಂದರುಹಿದ....

ಇಲ್ಲಿ ಸ್ವ–ಅನುಭಾವ (Self-knowledge) ಅಂದರೆ ಸ್ವಪ್ರಜ್ಞೆಯ ವಿಕಾಸವು ತೋರುವ ಸುಖ ಲೋಕದ ಯಾವ ವಸ್ತುವಿನಿಂದಲೂ ಲಭಿಸಲು ಸಾಧ್ಯವಿಲ್ಲ; ತಾನಾರೆಂಬುದನ್ನು ಅರಿಯುವ ಘನತರ ಸುಖವದು–ಎಂದಿಲ್ಲಿ ಬಿತ್ತರಿಸಿದ್ದಾರೆ.

ಮುನ್ನ ನಾನೇನು ಸುಕೃತವ ಮಾಡಿರ್ದೆನೋ

ಜ್ಞಾನವೆಂಬುವ ದಂಡ ನೇಮವೆಂಬುವ ಪಾತ್ರೆ
ಸ್ವಾನುಭಾವದ ಕಾವಿಯುಂಬರವ ಹೊದೆದು
ತಾನು ತನ್ನೊಳಗೆ ವಿನೋದದಿಂದಾಡುತಲಿ

ಭಾವಭಜಿಪರ ಬಾಂಧವ ಬಂದ ಮನೆಗೆ–ನಿಜವಾದ ಅನುಭಾವಿಯ ಲಕ್ಷಣಗಳಿವು!

ಸಾರಿ ಶಪಿಸುವೆ ನಿನ್ನನು। ತಪೋರಾಜ। ದೂರ ಮಾಡಿದೆಯೆನ್ನನು

....ಮನವು ಮಹದೊಳಗಾಗಿ ತನುವು ಸೂರೆಹೋಗಲಿ (ಸೂರ್ಹೋಗಲಿ)
ಕುಲಛಲ ಮುಳುಗಲಿ ಕುತ್ಸಿಕ ಹಾಳಾಗಲಿ
ಮದಗಳು ಮುಳುಗಲಿ ಅರಿಗಳು ಹಾರಲಿ
ಕರಣೇಂದ್ರಿಯಗಳು ಎಲ್ಲಾ ಕಾಡ ಸೇರಲಿ....

–ದೇಹಾಭಿಮಾನ ಹೋಗದೆ ಮನಸ್ಸು ಮಹದೊಳಗೆ ಸೇರಲಾರದು, ಅದಕ್ಕಾಗಿ ಕುಲಛಲಾದಿಗಳು ಹಾಳಾಗಲೇಬೇಕು: ಕಾಮಾದಿ ಅರಿಷಡ್ವರ್ಗ ಹಾಗೂ ಅಹಂಕಾರ ಹಾರಿಹೋಗಬೇಕು!

ಶಂಕರ ಎನ್ನನು ಭವದ ಶಂಕೆ ಹರಿಸುವೆನೆಂದು

ಸಿಲುಕಿದೆನು ತತ್‌ಪದದ ತ್ವಂ ಪದದ ಸಾಧ್ಯದಲಿ। ಬಲು ಸುಖದ ಸುಗ್ಗಿ ಚಿತ್‌-ಸುಖವರಿಯದೆ।। –ತತ್=ಆ ಮಹಾ(ಘನ)ವಸ್ತುವು, ತ್ವಂ=ನೀನೇ (ಅಸಿ=ಆಗಿರುವೆ) ಎನ್ನುವುದು ಸ್ವಾನುಭಾವವಾದಾಗ ಆಗುವುದೇ (ಚಿತ್) ಸುಖ; ಅದನ್ನೇ ಕೃಪೆಮಾಡಿದನು ಭರವಸೆಯಿತ್ತ ಶಂಕರನು।

"ಬಸವನ ಭಕ್ತಿಯ ಬಿಸರುಹಜಾಂಡದಿ ಹೊಸದಾಗಿಯೆ ತೋರಲಿಕ್ಕೆಂದು
ಪಶುಪತಿ ರೂಪಿನ ಪರಸೇವೆಯೊಳಗೆ ಬಹುಕುಶಲತ್ವವ ತಾ ಕೈಕೊಂಡು...."

ಈ ಪದ್ಯಭಾಗದಲ್ಲಿ ಇಡೀ ಬ್ರಹ್ಮಾಂಡದಲ್ಲೇ ಬಸವಣ್ಣನವರ ಭಕ್ತಿಯೋಗ ಹಾಗೂ ಸೇವಾಭಾಗ್ಯ ಹೊಸತರಹದ್ದು ಆಗಿದ್ದಿತಲ್ಲವೆ 'ಯೋಗಃ ಕರ್ಮಸು ಕೌಶಲಮ್' ಎಂಬ ವಾಕ್ಯದಂತೆ, ಅವರ ಕಾರ್ಯಪ್ರಪಂಚವೆಲ್ಲ (ಮಹಾಮಂತ್ರಿಯಾಗಿ, ಭಂಡಾರಿಯಾಗಿ, ಅಸ್ಪೃಶ್ಯೋದ್ಧಾರಕ್ಕಾಗಿ, ಅನುಭವಮಂಟಪ ರಚಯಿತರಾಗಿ, ಕಡೆಗೆ ಕಾಯಕಯೋಗಿಯಾಗಿ) ಬಹು ಕುಶಲತೆಯ ದ್ವಾರಾಯೋಗವೇ ಆಗಿದ್ದಿತೆಂದು ಸ್ವಾಮಿಗಳವರು ಸೂಚಿಸಿರುತ್ತಾರೆ.

"ಶರಣು ಸೋಮೆಶಕಟ್ಟ ಯೀಶ ಆನು ಪರಿಭವಯುತಂ...."-ಎಂಬೀ ಏಭಾಗದಲ್ಲಿ

ಬರಲಾರೆ ಸರ್ವಯೋನಿಯೊಳು। ಬಂದು। ತಿರುಗಲಾರೆ ಯಮಪುರದ ದಾರಿಯೊಳು।
ಕೊರಗಲಾರೆನು ಸಂಸ್ಕೃತಿಯೊಳು ಮೂರು ತೆರನಾದ ಮಲದೊಳಗೆ ಇರಲಾರೆನಿನ್ನು॥

-ಎಂದು ಸಂಸಾರನಿರಸನವಾಗಲು ಬಯಸಿ 'ಆಣವ-ಮಾಯಾ-ಕಾರ್ಮಿಕ' ಈ ತ್ರೈಮಲಗಳನ್ನು ದೂರಮಾಡೆಂದು 'ದೇವಸದೃಶ'ನಾದ ಗುರುವಿನಲ್ಲಿ ಪ್ರಾರ್ಥಿಸುವುದು ಅಭಿವ್ಯಕ್ತವಾಗುತ್ತದೆ.

'ಏತರ ಭಯವಣ್ಣ ನಮಗಿ। ನ್ನೇತರ ಭಯವಣ್ಣ....' ಈ **ಪದದಲ್ಲಿ**

"ಕಾಮನ ಗೆದ್ದವ ಕರದೊಳಗಿರುತಿರೆ
ಕಾಮಿನಿ ಭಯಗಳು ನಮಗೇಕೆ।
ಸೋಮಧರನು ಎನ್ನ ಪ್ರೇಮದಿ ನೋಡಲು
ಆ ಮಹಾ ಕಾಲನ ಭಯವೇಕೆ॥"

ಹೀಗೆ ಓದುತ್ತಿದ್ದಂತೆಯೇ ಸ್ಪಷ್ಟವಾಗಿ ಅರ್ಥವಾಗುತ್ತದೆಯಲ್ಲವೆ?

ಇನ್ನು ಕರಿವೃಷಭೇಂದ್ರರ ಕರುಣೆಯಿಂದ ಕವಿತೆ ರಚಿಸಲು ಶಕ್ತರಾದ ಮಲ್ಲೇನಹಳ್ಳಿ ಚೆನ್ನಬಸವಯ್ಯನವರ, ಹೊನ್ನುಡಿಕೆ ಗಂಗಾಧರಸ್ವಾಮಿಗಳ ಮತ್ತು ಗುಬ್ಬಿ ಕಿಡಿಗಣ್ಣಪ್ಪನವರ ಕೈವಲ್ಯಪದಗಳು ಕೂಡ ಈ ಸಂಕಲನದಲ್ಲಿ ಸೇರಿರುತ್ತವೆ. ಲೇಖನವಿಸ್ತೃತ ಭಯದಿಂದ ಅವುಗಳನ್ನು ಕುರಿತು ಬರೆಯಲು ತೊಡಗಲಿಲ್ಲ. ಆದರೂ ನಮ್ಮ ಪ್ರಾಂತದಲ್ಲಿ (ನಾನೂ ಹೊನ್ನುಡಿಕೆಯ ಸಮೀಪದವನೇ) ಜನಪ್ರಿಯವಾಗಿರುವ ಹೊನ್ನುಡಿಕೆ ಗಂಗಾಧರ ಸ್ವಾಮಿಗಳಿಂದ ರಚಿತವಾದ ಹೆಚ್ಚಿನ ಪದಗಳಲ್ಲಿ ಒಂದಾದ ಷಡಕ್ಷರ (ಮಹಾಮಂತ್ರದ ಹಾಡನ್ನು ಇಲ್ಲಿ ಓದುಗಬಂಧುಗಳಲ್ಲಿ ಕೆಲವರಿಗಾದರೂ ಪ್ರಯೋಜನವಾಗಲೆಂದು ಲಿಖಿಸಬಯಸುವೆ:

"ಓಂ, ಓಂ" ನಿಲ್ಲಿಸು ಕಾಯದ ಮಧ್ಯದಿ ಸೋಹಂ ಸಿದ್ಧಿಯ ಪ್ರಣಮವಿದೆ।
ಆಹಾ, ಆಹಾ, ಹಂಸಧ್ವನಿಯೊಳು ಅ-ಉ-ಮಾಕ್ಷರಗಳ ನುಸುರುತಿದೆ ॥ಪ॥
"ನ, ನ" ಎಂಬುವ ನಗಾರಿ ಹೊಡೆಯುತೆ, ಜ್ಞಾನದ ರತ್ನವು ಹೊಳೆಯುತಿದೆ।

ನಾನೀನೆಂಬುವದೇನೊಂದಿಲ್ಲದೆ, ತಾನೇ ತನ್ನೊಳು ತಿಳಿಸುತಿದೆ||
"ಮಃ ಮಃ" ಎಂಬುವ ಮಕಾರ ಪ್ರಣಮವು, ಮಹಮನೆಯೊಳು ತಾ ಚರಿಸುತಿದೆ|
ರಾಮತಾರಕ ನಾಮದ ಸೀಮೆಗೆ ಹೇಮದಂತೆ ಸಾಕ್ಷಿ(ಯಿ)ರುತಲಿದೆ||
"ಶಿ, ಶಿ" ಎಂಬುವ ಶಿಕಾರ ಪ್ರಣಮವು ಶಿವಲಿಂಗದೊಳು ಬೆಳಗುತಿದೆ|
ನಾಶಿಕ ತುದಿಯೊಳು ಸೂಸುವ ಅಕ್ಷರ ಹಂಸನೊಳ್ಳೈವತ್ತು ತೋರುತಿದೆ||
"ವಾ, ವಾ" ಎಂಬುವ ವಕಾರ ಪ್ರಣಮವು ಒಳಗು ಹೊರಗು ತಾ ಚರಿಸುತಿದೆ|
ಭಾವಾಭಾವಕೆ ಕೇವಲ ಬೆಳಕಿದು, ಭಾವಿಸೆ ಬಾಗಿಲೊಳಿರುತಲಿದೆ||
"ಯ, ಯ" ಎಂಬುವದೆಲ್ಲವು ಆಗಿ ಕಾಯದ ಕರ್ಮವ ಕಳೆಯುತಿದೆ|
ರಾಯ ಚಿದಾತ್ಮಕ ಸೋಮೇ ಕಟ್ಟೇಶನು ಧ್ಯೇಯದಿ ಅರುಹದ ಅರಿವು ಇದೆ||

ಈ ಕೈವಲ್ಯ ಪದ ಎಷ್ಟು ಅರ್ಥವತ್ತಾಗಿದೆಯೆನ್ನುವುದು ಸ್ವಯಂ ಅನುಭಾವಿಗಳಾದವರಿಗೆ ವೇದ್ಯವಾಗದಿರದು; ಹಾಡಲ್ಲೂ ಚೆನ್ನಾಗಿ ಹೊಂದಿಕೆಯಾಗಿದೆ.

ಉಪಸಂಹಾರ

ಒಟ್ಟಿನಲ್ಲಿ ಕೈವಲ್ಯ ಸಾಹಿತ್ಯ ರಚನೆಯಲ್ಲಿ ಮೊದ ಮೊದಲು ಮಾರ್ಗದರ್ಶನ ಮಾಡಿದ ನಿಜಗುಣ ಶಿವಯೋಗಿಗಳಂತೆ ಅಥವಾ ಸರ್ಪಭೂಷಣ ಶಿವಯೋಗಿಗಳಂತೆ ಸಾಹಿತ್ಯ-ಅನುಭಾವಗಳು ಪ್ರತಿ ಪದದಲ್ಲಿಯೂ ಹಾಸು ಹೊಕ್ಕಾಗಿವೆ. ಆದರೆ ಅವರುಗಳ ಹಾಗೆ ಕಾವ್ಯಗುಣಗಳು ಅಷ್ಟಾಗಿ ಎದ್ದು ಕಾಣುವುದಿಲ್ಲ ಹಾಗೂ ಅಲ್ಲಿ ಕಾಣುವ ವಿಭಜನಾಕ್ರಮ ಇಲ್ಲಿ ಇಲ್ಲ ಎನ್ನುವುದನ್ನು ಯಾರೂ ಒಪ್ಪಲೇ ಬೇಕು. ಆ ಕೈವಲ್ಯಕಾರರ ಪರಂಪರೆಯನ್ನು ಉಳಿಸಿ ಬೆಳೆಸಿದ್ದಾರಲ್ಲ-ಎನ್ನುವುದರ ಬಗೆಗೆ ಸಂತಸಪಡಬೇಕು.

೧ನೆಯ ಭಾಗ: ಶ್ರೀ ಕರಿವೃಷಭೇಂದ್ರರು ೫೩ ಪದಗಳು, ಅಷ್ಟಾವರಣ ತ್ರಿವಿಧಿ (೩೨) ಅಷ್ಟೋತ್ತರ ಶತ ತ್ರಿವಿಧಿ (೧೦೮) ಇವನ್ನು ರಚಿಸಿರುತ್ತಾರೆ.

೨ನೆಯ ಭಾಗ: ಗುಬ್ಬಿ ತಾ|| ಮಲ್ಲೇನಹಳ್ಳಿ ಚೆನ್ನಬಸವಯ್ಯನವರು ರಚಿಸಿದ ಪದಗಳು ೧೪ ಸಾಕಷ್ಟು ವಿಸ್ತೃತವಾಗಿಯೇ ರಚಿತವಾಗಿವೆ.

೩ನೆಯ ಭಾಗ: ಹೊನ್ನುಡಿಕೆ ಗಂಗಾಧರ ಸ್ವಾಮಿಗಳ ಪದಗಳು ೨ ಸಿಕ್ಕಿವೆ.

೪ನೆಯ ಭಾಗ: ಗುಬ್ಬಿ ಕಿಡಿಗಣ್ಣಪ್ಪನವರಿಂದ ರಚಿತವಾದ ಪದಗಳು ೧೧ ಇವೆ.

ಅವಶಿಷ್ಟ ಪದಗಳು:

ಶ್ರೀ ಕರಿವೃಷಭ ದೇಶಿಕೇಂದ್ರ ಸ್ವಾಮಿಗಳವರ ಹೆಚ್ಚಿನ ಪದಗಳು	-೩
ಮಲ್ಲೇನಹಳ್ಳಿ ಚನ್ನಬಸವಯ್ಯನವರ ಹೆಚ್ಚಿನ ಪದಗಳು	-೧೪
ಹೊನ್ನುಡಿಕೆ ಗಂಗಾಧರ ಸ್ವಾಮಿಗಳ ಹೆಚ್ಚಿನ ಪದಗಳು	-೧
ಕೊನೆಯದಾಗಿ ಸೋಮೆಕಟ್ಟೆ ಸ್ತುತಿ ಗೀತೆಗಳು	-೮

ನಮ್ಮ ಹಿರಿಯರೂ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರ ಪರಮ ಭಕ್ತರೂ ಆಗಿದ್ದ ಹೊನ್ನುಡಿಕೆ ರುದ್ರಯ್ಯ ಮಹಾಂತಯ್ಯನವರು ಇಷ್ಟಾದರೂ ಕೈವಲ್ಯ ಸಾಹಿತ್ಯ ಇಂದು ನಮಗೆ ಲಭಿಸುವಂತೆ ಮಾಡಿದ್ದಾರಲ್ಲಾ–ಎನ್ನುವ ಸಮಾಧಾನ ಉಂಟಾಗುವು ದೇನೋ ನಿಜ. ಆದರೆ ಇದನ್ನು ವ್ಯವಸ್ಥಿತವಾದ ರೀತಿಯಲ್ಲಿ ಪುನಾರಚಿಸಬೇಕಾದ ಅವ ಶ್ಯಕತೆಯಿದೆಯೇನ್ನುವುದೂ ಅಷ್ಟೆ ನಿಜ. ಶ್ರೀ ಗುರುವು ಹೇಗೆ ನಡೆಸುವನೋ ಕಾದು ನೋಡಬೇಕು. ಶ್ರೀಮನಿಪ್ರ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು (ವ್ಯವ ಧಾನ ಸಾಕಷ್ಟಿಲ್ಲದಿದ್ದರೂ) ಈ ಸಚ್ಚಿಂತನೆಯ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕೆ ಕೃತಜ್ಞಾಪೂರ್ವಕ ಸಾಷ್ಟಾಂಗ ನಮಸ್ಕಾರಗಳು.

ಶ್ರೀ ಶರೀಫರ ಬದುಕು-ಬರಹ

—ಡಾ॥ ಮಲ್ಲಿಕಾರ್ಜುನ ಸಿಂದಗಿ

ಶಿಶುನಾಳ ಗ್ರಾಮವು ಧಾರವಾಡ ಜಿಲ್ಲೆಯ, ಸಿಗ್ಗಾಂವಿ ತಾಲೂಕಿನಲ್ಲಿರುವ ಒಂದು ಸಣ್ಣ ಹಳ್ಳಿ. ಅಲ್ಲಿ 'ಶರೀಫನವರ' ಎನ್ನುವದು ಒಂದು ಮುಸಲ್ಮಾನರ ಮನೆತನ. ಆ ಮನೆಯೊಡೆಯರು ಇಮಾಮಸಾಹೇಬರು. ಅವರು ಬಲು ಸಾತ್ವಿಕ ವ್ಯಕ್ತಿ, ಸಜ್ಜನ ಪ್ರೇಮಿಗಳೂ ಆಗಿದ್ದರು. ಪರೋಪಕಾರ ಅವರ ಬಾಳಿನ ಉಸಿರು ಆಗಿತ್ತು. ಅವರಿಗೆ ಹತ್ತಾರು ವಿದ್ಯೆಗಳು ಗೊತ್ತಿದ್ದವು. ಗಿಡ ಮೂಲಿಕೆ ಶಾಸ್ತ್ರ ತಿಳಿದಿದ್ದ ಅವರು ಹಳ್ಳೀ ಹಕೀಮರೆನಿಸಿದ್ದರು. ದೆವ್ವ, ಭೂತ, ಪಿಶ್ಯಾಚಿಗಳ ಬಾಧೆಯನ್ನು ನಿವಾರಿಸುತ್ತಿದ್ದ ಅವರನ್ನು ಜನರು 'ದೇವಕಾರ' ಇಮಾಮ ಎಂದು ಕರೆಯುತ್ತಿದ್ದರು. ಅವರ ಪತ್ನಿಯ ಹೆಸರು ಹಜ್ಜೂಮಾ. ಈ ದಂಪತಿಗಳಿಗೆ ಮಕ್ಕಳಿಲ್ಲದ ಕೊರತೆ ಕಾಡುತ್ತಿತ್ತು. ಹುಲಗೂರ ಹಜರೇಶಾ ಖಾದರಿ ಅವರ ಸೇವೆಯನ್ನು ಈ ದಂಪತಿಗಳು ೧೦-೧೨ ವರ್ಷಗಳ ಕಾಲ ಮಾಡಿದ್ದರು. ಅವರು ಮಾಡಿದ್ದ ಪುಣ್ಯದ ರಾಶಿ ಹಣ್ಣಾಗಿತ್ತು. ಅಲ್ಲಾನ ಅನುಗ್ರಹ ಆಯಿತೇನೋ! ಶರೀಫರು ಶಿಶುನಾಳದಲ್ಲಿ ದಿನಾಂಕ ೩-೭-೧೮೧೯ರಂದು ಜನಿಸಿದರು. ಆಗ ಸೂರ್ಯೋದಯದ ಸಮಯ. ಪೂರ್ವ ದಿಕ್ಕಿನಲ್ಲಿ ಹೊರಗೆ ಸೂರ್ಯ ಉದಯಿಸಿದ. ಶಿಶುನಾಳದ ಇಮಾಮಸಾಹೇಬರ ಮನೆಯ ಒಳಗೆ ಶಿಶುನಾಳದ ಸೂರ್ಯ ಅವತರಿಸಿದ.

ಶರೀಫರು ಎಲ್ಲ ಮಕ್ಕಳಂತೆ ಬೆಳೆದರೂ, ಅವರು ಎಲ್ಲ ಮಕ್ಕಳಂತೆ ಇರಲಿಲ್ಲ. ಯಾವುದನ್ನೂ ಅವರು ಸರಳವಾಗಿ ಸುಲಭವಾಗಿ ಒಪ್ಪಿಕೊಳ್ಳುತ್ತಿರಲಿಲ್ಲ. ಅದು ಹಾಗೇಕೆ? ಇದು ಹೀಗೇಕೆ? ಎಂದು ಅವರು ಚಿಂತಿಸುತ್ತಿದ್ದರಂತೆ. ಅವರ ಚಿಂತನಶೀಲ ಬುದ್ಧಿ ಚಿಕಿತ್ಸಕ ದೃಷ್ಟಿಕೋನಗಳು ತಂದೆಯವರಿಗೆ ಹಿಡಿಸಿದವು. ಅವರಿಗೆ ಹಾಡುಗಳ ಕಡೆಗೆ ಒಲವು ಹೆಚ್ಚಾಗಿತ್ತು. ಭಜನೆ, ಪ್ರಾರ್ಥನೆಗಳತ್ತ ಅವರ ಮನ ಓಡುತ್ತಿತ್ತು. ಶಾಸ್ತ್ರ, ಪುರಾಣಗಳನ್ನು ಅವರು ಆಸಕ್ತಿಯಿಂದ ಆಲಿಸುತ್ತಿದ್ದರು. ಊರಿನ ಸ್ವಾಮಿಗಳು ಶರೀಫರಿಗೆ ವೀರಶೈವ ಸಾಹಿತ್ಯ, ಶರಣರ ಜೀವನಗಳ ಬಗೆಗೆ ತಿಳಿಸಿದರು. ಹೀಗಾಗಿ ಎಳೆತನದಿಂದಲೇ ಶರೀಫರಿಗೆ ವೀರಶೈವ ಸಾಹಿತ್ಯ, ಸಂಸ್ಕೃತಿ, ಸಂಸ್ಕಾರಗಳ ಪರಿಚಯ ಇತ್ತು ಎನ್ನಬೇಕು.

ಶರೀಫರು ಒಂದು ಸ್ವಪ್ನವನ್ನು ಕಾಣುತ್ತಿದ್ದರಂತೆ. ಅಲ್ಲಿ ಒಬ್ಬರು ಯತಿಗಳು ದೂರದಲ್ಲಿ ನಿಂತು, 'ಶರೀಫಾ ಬೇಗ ಬಾ, ಬಾರಪ್ಪ' ಎಂದು ಕರೆದಂತಾಗುತ್ತಿತ್ತು. ಅವರು ಚಿಂತಿಸಿದರು. ಆ ಸಂಗತಿಯನ್ನು ಅವರು ತಂದೆಯವರಿಗೆ ಹೇಳಿದರು. ಇಮಾಮ ಸಾಹೇಬರಿಗೆ ಆ ಸ್ವಪ್ನ ಬರುವ ಗುರುವಿನ ಆಗಮನವನ್ನು ಹೇಳಿತು. ತಮ್ಮನ್ನು ಕರೆಯುವವರಾರು? ಅವರು ಎಲ್ಲಿಯವರು? ಏಕೆ ಕರೆಯುತ್ತಿರಬಹುದು? ಎಂದು

ಶರೀಫರ ಮನ ಚಿಂತಿಸಿತು. ಆ ಕರೆ ಅವರಿಗೆ ಹಿತವೆನಿಸಿತು. ಅತ್ತ ಹೋಗಲು ಜೀವ ಆಶಿಸಿತು. ಎಲ್ಲಿ? ಏನು? ಎನ್ನುವದು ತಿಳಿಯದೇ ಅವರು ಚಡಪಡಿಸಿದರು. ಹೀಗೆ ಸಮಯ ಸರಿಯುತ್ತಿತ್ತು. ಕರುಳು ಕಾತರಿಸುತ್ತಿತ್ತು. ಒಳಗೆ ಕಾಣುತ್ತಿದ್ದ ಗುರುಗಳನ್ನು ಹೊರಗೆ ನೋಡುವ ಸುಯೋಗ ಸಂಧಿಸಿತು.

೧೮೩೦-೩೧ನೆಯ ಇಸ್ವಿ ಇರಬೇಕು. ಗುರುಗಳನ್ನು ಕಾಣುವ ಆ ಅಪೂರ್ವ ದಿನ ಬಂತು. ಅಂದು ಶಿಶುನಾಳದಲ್ಲಿ ಸೂರ್ಯ ಉದಯಿಸಿದ. ಅವನು ನಿತ್ಯದಂಥ ಸೂರ್ಯ ಅಲ್ಲ. ಎಂದಿನಂತೆ ಉದಯಿಸಿದರೂ ಅವನು ಎಂದಿನಂಥವನಾಗದೇ ಹೊಚ್ಚಹೊಸಬ ನೆನಿಸಿದ; ಕತ್ತಲೆ ಕಳೆಯಿತು. ಬೆಳಕು ಚಿಮ್ಮಿತು. ಪ್ರಕೃತಿಯೆಲ್ಲ ನಿತ್ಯನೂತನವಾಗಿ ಕಂಡಿತು. ತಮ್ಮ ಮನೆಯ ಎದುರಿನ ಕಟ್ಟೆಗೆಯ ತುಂಡಿನ ಮೇಲೆ ಕುಳಿತ ಶರೀಫರಿಗೆ ದೂರದಲ್ಲಿ ಒಬ್ಬರು ಯತಿಗಳು ತಮ್ಮ ಮನೆಯ ಕಡೆಗೇ ನಡೆದು ಬರುವದು ಕಂಡಿತು. ಮನ ಉಲ್ಲಸಿತವಾಯಿತು. ಬಿಸಿಲಲ್ಲಿ ದಣಿದವಗೆ ತಂಗಾಳಿ ಬಂದು ತಟ್ಟಿದಂತಾಯಿತು. ಶರೀಫರು ತಮ್ಮ ತಂದೆಗೆ "ಬಾಬಾ, ನನ್ನ ಸ್ವಪ್ನದಲ್ಲಿ ಕಾಣಿಸಿಕೊಳ್ಳುತ್ತಿದ್ದ ಸಾಧುಗಳು ಅದೋ ಅಲ್ಲಿ ಬರುತ್ತಿದ್ದಾರೆ. ನೋಡು" ಎಂದಾಗ ಇಮಾಮರ ಮುಖದಲ್ಲಿ ಹರ್ಷ ಸೂಸಿತು 'ಗೋವಿಂದ ಯತಿಗಳು ಬರಬೇಕು ಬರಬೇಕು' ಎಂದು ಇಮಾಮರು ಆ ಯತಿಗಳನ್ನು ಬರಮಾಡಿಕೊಂಡರು. ಬೆಳಕೇ ನಡೆದು ಬಂದಂತೆ ಅವರು ಬಂದರು.

ಬಂದಂಥ ಯತಿಗಳು ಕಳಸದ ಗೋವಿಂದ ಭಟ್ಟರು. ಅವರು ಶಕ್ತಿಯ ಉಪಾಸಕರು, ಬಲು ಸರಳ ಜೀವಿಗಳು. ಅವರು ತಲೆಗೊಂದು ರುಮಾಲು ಸುತ್ತಿರುತ್ತಿದ್ದರು. ಬರಿ ಮೈ, ಮೈಮೇಲೆ ಒಂದು ವಸ್ತ್ರ ಹೊದ್ದುಕೊಳ್ಳುತ್ತಿದ್ದರು. ಬಡಕಲು ಶರೀರದ ಅವರು ಒಳಗೆ ಬಹಳಷ್ಟು ತುಂಬಿಕೊಂಡಿದ್ದರು. ಶರೀಫರ ದೀಕ್ಷಾಗುರು, ಮೋಕ್ಷಾಗುರು ಆಗಲಿದ್ದ ಅವರು ಶರೀಫರ ಎದೆಯ ಹೊಲದ ಮಣ್ಣನ್ನು ಪರೀಕ್ಷಿಸಲೆಂದು ಬಂದಿದ್ದರು. ಅವರ ಬಳಿಯಲ್ಲಿ ಹಲವಾರು ಜನ ಶಿಷ್ಯರಿದ್ದರು. ಅವರು ತಮ್ಮ ಬಳಿಯ ಶಿಷ್ಯರನ್ನು ಬಹುವಾಗಿ ಪರೀಕ್ಷಿಸಿದ್ದರು. ಅವರಿಗೆ ತಮ್ಮ ತಪಸ್ಸನ್ನು ಹೊತ್ತು ಮೆರೆಯಬಲ್ಲ ಒಬ್ಬ ಸತ್ ಶಿಷ್ಯ ಬೇಕಾಗಿದ್ದ. ಗುರುವಿನ ಬಳಿಯಲ್ಲಿ ಆಧ್ಯಾತ್ಮದ ಅನ್ನದ ರಾಶಿ ಇತ್ತು. ಶಿಷ್ಯ ಶರೀಫರಿಗೆ ಪಾರಮಾರ್ಥಿಕ ಹಸಿವು ಹೆಚ್ಚಿತ್ತು. ಹಸಿದವರಿಗೇ ಅನ್ನ ಹೆಚ್ಚು ರುಚಿಸುತ್ತದೆ ಎಂಬುದು ಲೋಕಕ್ಕೆ ತಿಳಿದ ವಿಷಯ.

ಶರೀಫರ ಮನೆಯಲ್ಲಿ ಊರ ದೈವವೇ ಕೂಡಿತು. ತಂದೆಯ ಬಳಿಯಲ್ಲಿ ನಿಂತ ಪುಟ್ಟ ಶರೀಫರಿಗೆ ದೊಡ್ಡ ಗುರುಗಳು, 'ಶರೀಫಾ, ನಿಮ್ಮ ಅಪ್ಪ ಯಾರೋ?' ಎಂದು ಪ್ರಶ್ನಿಸಿದರು, ಎಳಕ ಹುಡುಗ ತಡವರಿಸಲಿಲ್ಲ. ಗಾಬರಿಗೊಳ್ಳಲಿಲ್ಲ ಒಂದು ಕ್ಷಣ ಚಿಂತಿಸಿದ ಅವರು ಗೋವಿಂದ ಭಟ್ಟರಿಗೆ, 'ದೇವಾ, ನೀವು ಯಾವ ಅಪ್ಪನನ್ನು ಕೇಳುತ್ತೀರಿ? ಅದು ನನಗೆ ಸ್ಪಷ್ಟವಾಗಬೇಕು' ಎಂದರು. 'ಹಾಗೆಂದರೇನೋ ಶರೀಫಾ?' ಎನ್ನುವದು ಗುರುಗಳ ಪ್ರಶ್ನೆಯಾಗಿತ್ತು. ಆಗ ಶರೀಫರು 'ದೇವಾ ವೀರಶೈವ ಶಾಸ್ತ್ರ ಹೇಳುತ್ತಿದೆ, ಒಂದು ಜೀವ

ಎಂಬತ್ನಾಲ್ಕು ಲಕ್ಷ ಯೋನಿಗಳಲ್ಲಿ ಹುಟ್ಟಿ ಹುಟ್ಟಿ ಬರುತ್ತದೆಂದು, ನಾನೂ ಈ ಹಿಂದೆ ನೂರಾರು ಸಲ ಹುಟ್ಟಿದ್ದೇನೆ, ಸತ್ತಿದ್ದೇನೆ, ಹುಟ್ಟಿದಾಗೊಮ್ಮೆ ನನಗೆ ಒಬ್ಬ ಅಪ್ಪ ಇದ್ದೇ ಇದ್ದ. ಇಂಥ ಹಲವಾರು ಮಂದಿ ಅಪ್ಪಂದಿರ ಸಾಲಿನಲ್ಲಿ ನೀವು ಯಾವ ಅಪ್ಪನ್ನ ಕೇಳುತ್ತೀರಿ ಎನ್ನುವದು ನನಗೆ ಸ್ಪಷ್ಟವಾದರೆ, ಇಂಥ ಜನ್ಮದಲ್ಲಿ ಇಂಥವರು ಅಪ್ಪ ನಾಗಿದ್ದರು ಎಂದು ನೆನಪಿಸಿಕೊಂಡು ನಿಮಗೆ ಉತ್ತರ ಹೇಳುತ್ತೇನೆ' ಎಂದರು. ಶರೀಫರ ಮಾತು ಕೇಳಿ ಗುರುಗಳಿಗೆ ಒಳಗೊಳಗೆ ಹಿಗ್ಗು. ಆಗ ಅವರು 'ಶರೀಫ್ಯ, ಒಂದು ಜೀವಕ್ಕೆ ಎಷ್ಟು ಮಂದಿ ಅಪ್ಪಂದಿರು ಇರುವರೋ ಬಾಳಾ?' ಎಂದು ಪ್ರಶ್ನಿಸಿದರು. 'ತಂದೇ, ಒಂದು ಜೀವಕ್ಕೆ ಇಬ್ಬರು ಅಪ್ಪಂದಿರು, ಒಬ್ಬರು ಹಡದಪ್ಪ, ಮತ್ತೊಬ್ಬರು ಪಡದಪ್ಪ, ಈ ಜನ್ಮದೊಳಗೆ ಇರುವ ನನ್ನ ಹಡೆದಪ್ಪ' ಎಂದು ಇಮಾಮಸಾಹೇಬರತ್ತ ಕೈಮಾಡಿ ಹೇಳಿದರು. ಆಗ ಗುರುಗಳು, 'ಶರೀಫಾ ಈ ಹಡೆದಪ್ಪ, ಪಡೆದಪ್ಪ ಇವರು ಯಾರೋ?' ಎಂದು ಕೇಳಿದರು. ಶರೀಫರು ಸಮಾಧಾನ ಚಿತ್ತರಾಗಿ, 'ತಂದೇ, ಮರ್ತ್ಯದ ಮೈಯನ್ನು ನೀಡುವವನೇ ಹಡೆದಪ್ಪ. ಮರ್ತ್ಯತ್ವವನ್ನು ನೀಗಿ ಮೋಕ್ಷವನ್ನು ಕೊಡುವವನೇ ಪಡೆದಪ್ಪ' ಎಂದು ಉತ್ತರಿಸಿದರು. ಶರೀಫರ ಮಾತು ಕೇಳಿದವರ ಅಂತಃಕರಣ ಅಭಿಮಾನದಿಂದ ಉಬ್ಬಿತು. ಈ ಜೀವ ಬದುಕಿನ ಕುಲಿಮೆಯಲ್ಲಿ ಹಲವಾರು ಸಂಸ್ಕಾರಗಳ ನೀರನ್ನು ಕುಡಿದಿದೆ ಎಂದು ಹಿರಿಯರು ನಂಬಿದರು. ಶರೀಫರನ್ನೇ ಕಣ್ತುಂಬ ನೋಡುತ್ತಿದ್ದ ಗುರುಗಳು, 'ಶರೀಫಾ, ಇಷ್ಟೆಲ್ಲ ಹೇಳುತ್ತೀ? ನಿನ್ನ ಪಡೆದಪ್ಪ ಎಲ್ಲಿದ್ದಾರೆ ಎನ್ನುವದು ನಿನಗೆ ಗೊತ್ತೇನೋ?' ಎಂದು ಪ್ರಶ್ನಿಸಿದರು. ಪ್ರಸನ್ನಚಿತ್ತರಾದ ಶರೀಫರು ಗುರುಗಳ ಶ್ರೀ ಚರಣಕ್ಕೆ ಹಣೆಹಚ್ಚಿ, 'ದೇವಾ, ನಾನು ಬಹಳ ಪುಣ್ಯವಂತ. ನನ್ನ ಗುರುಗಳು ನನ್ನನ್ನೇ ಹುಡುಕುತ್ತ ನನ್ನ ಮನೆಗೇ ಬಂದಿದ್ದಾರೆ. ನೀವೇ ನನ್ನ ಪಡೆದಪ್ಪ' ಎಂದು ನಮಿಸಿದರು. ಗುರುಗಳಿಗೆ ಹೆಮ್ಮೆ ಅನಿಸಿತು. 'ಇದು ಜಾತಿಯ ಮುತ್ತು. ಶುದ್ಧ ಅಪರಂಜಿ, ಉದ್ಧಾರಕ್ಕೆಂದೇ ಉದಯಿಸಿದ ಪುಣ್ಯದ ಪುಂಜ' ಎಂದು ನಿರ್ಧರಿಸಿದರು. ಧನ್ಯತೆ ಮೈತುಂಬಿತು. ಅಭಿಮಾನದಿಂದ ಎದೆ ಉಬ್ಬಿತು. ಹರ್ಷದಿಂದ ಕಣ್ಣು ಹನಿಗೂಡಿದವು. ಗುರುಗಳು ಇಮಾಮರಿಗೆ, 'ಇಮಾಮ, ಭೂಮಿ ಹದ ಅದ, ನಾ ಬೀಜ ಬಿತ್ತಿದರ ತಕ್ಕ ಫಲ ಸಿಗತದ. ನನ್ನ ವಸ್ತು ನಾ ಒಯ್ಯುತ್ತೇನೆ. ನನಗೆ ನನ್ನ ಮಗನಾಗುವವನನ್ನು ನೀಡು' ಎಂದು ಬೇಡಿದರು. ಹಡೆದ ತಂದೆ ತನ್ನ ಮಗನನ್ನು ಪಡೆದ ತಂದೆಯ ಉಡಿಯೊಳಗೆ ಹಾಕಿದರು. ಕಳಸದ ಗೋವಿಂದ ಭಟ್ಟರು ಶಿಶುನಾಳದ ಇಮಾಮ ಸಾಹೇಬರ ಮಗನಾದ ಶರೀಫ ಸಾಹೇಬರನ್ನು ಕಳಸಕ್ಕೆ ಕರೆತಂದರು. ತಮ್ಮ ಮನದಲ್ಲಿ, ಮನೆಯಲ್ಲಿ ಸ್ಥಳ ನೀಡಿದರು. ತಮ್ಮ ಅನ್ನದಲ್ಲಿ ಅವರಿಗೆ ಅನ್ನ ನೀಡಿದರು. ಶರೀಫರ ಹೊಟ್ಟೆ, ನೆತ್ತಿ ನೋಡಿಕೊಳ್ಳುವ ಪಾರಮಾರ್ಥಿಕ ತಂದೆಯಾದರು. ಎಲ್ಲಿಯದೋ ಬೆಟ್ಟದ ಮೇಲಿನ ನೆಲ್ಲಿಕಾಯಿಗೆ, ಎಲ್ಲಿಯದೋ ಸಮುದ್ರದ ಉಪ್ಪಿನ ಸಂಬಂಧ; ಎಂಥದ್ದೋ ಸವಿಸುಖ. ಯಾವದೋ ಊರಿನವರು ಗೋವಿಂದ ಭಟ್ಟರು. ಎಲ್ಲಿಯವರೋ ಶರೀಫ ಸಾಹೇಬರು;

ಇಬ್ಬರೂ ಕೂಡಿದರು. ಕರ್ನಾಟಕದ ಆಧ್ಯಾತ್ಮ ಪ್ರಪಂಚಕ್ಕೆ ಹೊಸ ಬಣ್ಣ ಬಂತು. ಕಳಸದ ಗೋವಿಂದ ಭಟ್ಟರು ಶರೀಫರ ಆತ್ಮೋದ್ಧಾರದ ಸಲುವಾಗಿಯೇ ಹುಟ್ಟಿದ್ದರು. ಗೋವಿಂದ ಭಟ್ಟರ ಕೈಯಲ್ಲಿ ಶಿಷ್ಯತ್ವವನ್ನು ಪಡೆದು ಉದ್ಧಾರವಾಗಲಿಕ್ಕೆಂದೇ ಶರೀಫರು ಜನ್ಮವೆತ್ತಿದ್ದಿರಲು ಸಾಕು ಎಂದು ಹೇಳಬೇಕು. ಶಿಶುನಾಳದಲ್ಲಿ ಶರೀಫರು ಹುಟ್ಟಿರದಿದ್ದರೆ, ಕಳಸದ ಗೋವಿಂದ ಭಟ್ಟರು ಊರಲ್ಲಿ ಮದುವೆ, ಮುಂಜುವಿಯ ಮುಹೂರ್ತ ಹೇಳುವ ಬಡ ಬ್ರಾಹ್ಮಣರಾಗಿಯೇ ಉಳಿಯುತ್ತಿದ್ದರೋ ಏನೋ ಗೋವಿಂದ ಭಟ್ಟರು ಇಲ್ಲವಾಗಿದ್ದರೆ ಶರೀಫರ ಹೆಸರು ನಾಡಿನಲ್ಲಿ ಕೇಳಿ ಬರುತ್ತಿತ್ತೋ ಇಲ್ಲವೋ ಹೇಳಲಿಕ್ಕೆ ಆಗದು. ಜನ್ಮಾಂತರದ ಸುಕೃತ ಗುರು ಶಿಷ್ಯರನ್ನು ತಂದು ಒಂದೆಡೆ ಬೆಸೆಯಿತು ಎಂದು ಹೇಳಬೇಕು.

ಶೀಲ ಚಾರಿತ್ರ್ಯ, ವೀರ ಮಡಿವಂತಿಕೆಗೆ ಕಳಸದಲ್ಲಿ ಹೆಸರಾದ ಬ್ರಾಹ್ಮಣರ ಮನೆಯಲ್ಲಿ ಮುಸಲ್ಮಾನರ ಒಬ್ಬ ಹುಡುಗ ಓಡಾಡತೊಡಗಿದ. ಹತ್ತಾರು ಬ್ರಾಹ್ಮಣರ ಹುಡುಗರ ಸಂಗಡ ಅವನ ವಿದ್ಯಾಭ್ಯಾಸ ನಡೆಯಿತು. ಗೋವಿಂದ ಭಟ್ಟರು ತಮ್ಮ ಇಡೀ ಆಧ್ಯಾತ್ಮ ಸಾಮ್ರಾಜ್ಯದ ಸಂಪೂರ್ಣ ಆಸ್ತಿಗೆ ಅಧಿಕಾರಿ ಆಗುವ ರೀತಿಯಲ್ಲಿ ಶರೀಫನನ್ನು ತರಬೇತಿಗೊಳಿಸಲು ಅಣಿಯಾದರು. ಸಂಸ್ಕಾರ ನೀಡಿದರು. ದೀಕ್ಷೆ ಕೊಟ್ಟರು; ತಿದ್ದಿದರು. ಜನಿವಾರ ಹಾಕಿದರು. ಆ ಪ್ರಸಂಗವನ್ನು ಶರೀಫರೇ 'ಹಾಕಿದ ಜನಿವಾರ, ನೂಕಿದ ಭವಭಾರ, ಬೇಕೆನುತ ಬ್ರಹ್ಮಜ್ಞಾನ ಉಚ್ಚರಿಸೆಂದು' ಹಾಡಿದ್ದಾರೆ. ಗುರುಗಳು ಶರೀಫರಿಗೆ ಪೇಟೆಯಲ್ಲಿ ಸಿಗುವ ದಾರ ಹಾಕಿದರೋ ಇಲ್ಲವೋ ತಿಳಿಯದು. ಆದರೆ ಜೀವ ಬ್ರಹ್ಮವಾಗುವಂತೆ, ಕಿಂಕರ ಶಂಕರನಾಗುವಂತೆ, ಮನುಷ್ಯ ಮಹಾದೇವನಾಗುವಂತೆ ಅರುಹಿನ ಆತ್ಮ ವಿದ್ಯೆಯ ಕಿಚ್ಚನ್ನು ಆರದಂತೆ ಶರೀಫರ ಎದೆಯ ಒಲೆಯಲ್ಲಿ ಹೊತ್ತಿಸಿದರೆನ್ನುವದು. ನಿರ್ವಿವಾದ ಲಕ್ಷ್ಮೇಶ್ವರದಲ್ಲಿ ಒಬ್ಬರು ರಾಯರು ಶರೀಫರಿಗೆ, 'ಶರೀಫಾ, ಆ ಗೋವಿಂದಭಟ್ಟ ನಿನಗ ಜನಿವಾರ ಹಾಕಿದರೇನೋ?' ಎಂದು ಪ್ರಶ್ನಿಸಿದರು. ಆಗ ಶರೀಫರು ಆ ರಾಯರಿಗೆ, 'ಏ ಪುಣ್ಯಾತ್ಮಾ, ನನ್ನ ತಂದೆ, ನನ್ನ ಗುರು ಆದ ಗೋವಿಂದ ಭಟ್ಟರು ನನಗ ಆ ದಾರಾ ಈ ದಾರಾ ಹಾಕಲಿಲ್ಲ. ಭಗವಂತನ ಆದಾರ (ಆಧಾರ) ಹಾಕಿದರೋ' ಎಂದು ಹೇಳಿದರು. ಶರೀಫರ ಆ ಮಾತು ಅವರ ಹೃದಯಕ್ಕೆ ಹಿಡಿದ ಕನ್ನಡಿ ಎನ್ನಬೇಕು.

ಶರೀಫರು ಗೋವಿಂದ ಭಟ್ಟರ ಅರುಹಿನ ಗರಡಿಯಲ್ಲಿ ತರಬೇತುಗೊಳ್ಳುತ್ತ ನಡೆದಾಗ ಅವರಿಗೆ ಸುತ್ತಲಿನ ಬದುಕಿನಲ್ಲಿಯ ಕಟು, ಅಸಹ್ಯ ಕಮಟ ವಾಸನೆ, ಹಳಸಲು, ಬಾಳಿನ ವಿರೂಪ ಚಿತ್ರ ಕಣ್ಣಿಗೆ ಬಡಿಯಿತು. ದೇವರ ಸ್ಥಾನ, ದೇವರ ಗುಡಿ ಎನಿಸಿಕೊಳ್ಳಬಹುದಾದ ಈ ಮನುಷ್ಯ ದೇಹವು ಈಗ ಹಾಳಕ ಬೀಳಕ ಮನೆಯಂತಾಗಿದೆ. ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ ಎಂಬಂತೆ ಬಾಗಿಲಲ್ಲಿ ಹುಲ್ಲು ಬೆಳೆದಿದೆ. ಮನದಲ್ಲಿ ರಜೋಗುಣ ತುಂಬಿದೆ. ನೂರಾರು ಸಾವಿರಾರು ಸಲ ಹುಟ್ಟಿ ಸತ್ತು, ಸತ್ತು ಹುಟ್ಟಿದ. ಈ ಮನೆಯ ತೊಲೆ ಕುಂಭಗಳನ್ನು ಹುಳ ತಿಂದಿವೆ. ಜಂತಿ ಹಾಳಾಗಿದೆ. ಮಾಯಾ ಮಳೆಗೆ; ಜೀವದ ಮನೆ ಜರ್ಜರಿತವಾಗಿದೆ. ಅಜ್ಞಾನ ಅಂಧಕಾರ ಒಳಗೆ ಹೊರಗೆ ಆವರಿಸಿದೆ. ಕಷ್ಟ

ಕಾರ್ಪಣ್ಯಗಳ ಜಡಿ ಮಳೆಗೆ ಸಿಕ್ಕು ದೇಹದ ಮನೆ ಸೋರ ತೊಡಗಿದೆ. ಇಂಥ ಅಸಹಾಯಕ ಪರಿಸ್ಥಿತಿಯಲ್ಲಿ ಸಿಲುಕಿದ ಜೀವ-ದೇಹದ ಸ್ಥಿತಿಗಳನ್ನು ಶರೀಫರು ಕಂಡು—

ಸೋರುತಿಹುದು ಮನೆಯ ಮಾಳಿಗಿ ಅಜ್ಞಾನದಿಂದ।
ಸೋರುತಿಹುದು ಮನೆಯ ಮಾಳಿಗಿ।

ಎಂದು ಹಾಡಿದರು. ಅವರ ಈ ಪದ್ಯ ಎಷ್ಟು ವ್ಯಕ್ತಿಗತವೋ ಅಷ್ಟೇ ವಿಶ್ವವ್ಯಾಪಿ; ಸಾರ್ವತ್ರಿಕ. ಶರೀಫರ ಮಾಂಸದ ಮನೆ ಅಷ್ಟೇ ಮಾಯಾ ಮಳೆ ಗಾಳಿಗೆ ಸಿಕ್ಕು ಸೋರುತ್ತಿಲ್ಲ. ಹುಟ್ಟಿದ ಕೋಟ್ಯಾಂತರ ಜೀವಗಳೆಲ್ಲ ವ್ಯಸನಕ್ಕೆ ತುತ್ತಾಗಿ, ಮೋಹಕ್ಕೆ ಮರುಳಾಗಿ, ಪ್ರಾಪಂಚಿಕ ಆಮಿಷಕ್ಕೆ ಪಕ್ಕಾಗಿ, ಅರುವಿಲ್ಲದೆ, ಗುರಿಯಿಲ್ಲದೆ ಸಾಗಿರುವದರಿಂದ ಎಲ್ಲರ ಮನೆಗಳೂ ಸೋರತೊಡಗಿವೆ. ಯಾರಿಗೂ ಮನೆ ಸೋರುವತ್ತ ಗಮನವೇ ಇಲ್ಲ. ಸೋರದಂತೆ ತಡೆಯುವದಕ್ಕೆ ಉಪಾಯ, ಗೊತ್ತುಗುರಿ ಇಲ್ಲ. ಕತ್ತಲೆ ತುಂಬಿದ ಮನೆಯಲ್ಲಿ ಬೆಳಕು ಮಾಡುವವರೇ ಇಲ್ಲ. ಶರೀಫರು ಜೀವಿಯ ಈ ಅಸಹಾಯಕ ಪರಿಸ್ಥಿತಿಯನ್ನು—

"ಸೋರುತಿಹುದು ಮನೆಯ ಮಾಳಿಗಿ
ಆರುಗಟ್ಟಿ ಮಾಳ್ಪರಿಲ್ಲ
ಕಾಳ ಕತ್ತಲೆಯೊಳಗೆ ನಾನು
ಮೇಲಕ್ಕೇರಿ ಮೆಟ್ಟಲಾರದೇ"

ಎಂದು ಹಾಡುತ್ತಾರೆ. ಮನುಷ್ಯ ದೇಹವು ಆತ್ಮನು ವಾಸಮಾಡಿದ ಮಾಂಸದ ಮನೆ. ಹೊರಗಿನ ಮಣ್ಣಿನ ಮನೆಯು ಮಳೆಗೆ ಸೋರುತ್ತದೆ. ಮಳೆ ಬರುವ ಮೊದಲು ಮನೆ ಯೊಡೆಯ ಮಾಳಿಗೆ ಏರುತ್ತಾನೆ. ಅಲ್ಲಿ ಬೆಳೆಯುವ ಕಸಕಡ್ಡಿ ಕೀಳುತ್ತಾನೆ. ಇಲಿ, ಹೆಗ್ಗಣ ಗುದ್ದುಗಳನ್ನು ಮಾಡಿದ್ದರೆ ಅವುಗಳನ್ನು ಮೆಟ್ಟುತ್ತಾನೆ. ಹೀಗೆ ಪೂರ್ವಭಾವಿಯಾಗಿ ಎಲ್ಲ ಕಾರ್ಯಗಳನ್ನು ಮಾಡುವದರಿಂದ ಮನೆ ಮಳೆಗಾಲದಲ್ಲಿ ಸೋರದು. ದೇಹದ ಮನೆಯೂ ವ್ಯಸನಗಳ ಮರ ಮಳೆಗೆ ಸಿಕ್ಕು ಸೋರ ತೊಡಗಿದೆ. ಯಾರೂ ಗಟ್ಟಿ ಮಾಡುವವರೇ ಇಲ್ಲವಲ್ಲ ಎಂದು ಶರೀಫರು ಮರುಗುತ್ತಾರೆ.

ಸಾವಿರಾರು ಸಲ ಸತ್ತು ಹುಟ್ಟಿದ ಈ ಮನೆಯ ಅವಸ್ಥೆ ತೀರಾ ಶೋಚನೀಯ. ಕಂಭಗಳಿಗೆ ಹುಳ ಹತ್ತಿವೆ. ಜಂತಿಯೆಲ್ಲ ಮಳೆಯಿಂದ ಕೊಳತಿವೆ. ಈಗಲೋ ಆಗಲೋ ಬೀಳುವಂತಾಗಿದೆ. ಅದನ್ನೇ ಅವರು—

"ಮುರಕ ತೊಲೆಯು ಹುಳಕ ಜಂತಿ
ಕೊರೆದು ಸರಿದು ಕೀಲ ಸಡಲಿ
ಹರಕ ಚಪ್ಪರ ಜೀರಗಿಂಡಿ
ಮರೆತು ನಾನು ಮುಚ್ಚಲಾರದೇ"

ಎಂದು ಹಾಡುತ್ತಾರೆ. ಮನುಷ್ಯನಿಗೆ ದೇಹದ ಒಳಗುಟ್ಟು ತಿಳಿಯಲಾರದುದು ಒಂದು

ದೊಡ್ಡ ದುರ್ದೈವ; ಮೀರಿದ ದುರಂತ. ಎದೆಯ ಹೊಲದಲ್ಲಿ ಆತ್ಮಜ್ಞಾನದ ಅಮೃತ ಫಲ ಬಿತ್ತಿ ಬೆಳೆಯಬಹುದು ಎಂಬುದು ತಿಳಿಯದೆ ಹೋಗಿದೆ. ಮನುಷ್ಯನು ಪ್ರಪಂಚವೇ ಸತ್ಯ, ಭೋಗಗಳೇ ಕೊನೆಯ ಗುರಿ; ಬೆಳ್ಳಿಬಂಗಾರ, ಮನೆ ಮಾರು ಸಂಗ್ರಹಿಸುವದೇ ಸರ್ವಸ್ವ ಎಂದು ತಿಳಿದ್ದಾನೆ. ಅವನು ಅದರಾಚೆ ಬೇರೆ ಏನನ್ನೂ ಯೋಚಿಸಿಲ್ಲ. ಯೋಚಿಸು ವಂತೆಯೂ ಇಲ್ಲ ಎಂದು ಮರುಗುತ್ತಾರೆ ಶರೀಫರು.

ಎಚ್ಚತ್ತ ಶರೀಫರು ತಮ್ಮ ಮನೆ ಸೋರದಂತೆ ಒಳಮುಖವಾಗಿ ಮೇಲೇರಿದರು. ಅವರು ಹೊಲ ಮನೆ ಗಳಿಸಲು ಹೆಣಗಲಿಲ್ಲ. ಬಾಳ ಬೀದಿಯಲ್ಲಿ ನಡೆದ ಲಕ್ಷಾಂತರ ಜನಗಳು ಅಲ್ಲದುದನ್ನೇ ಗಳಿಸಲು ಹೊರಟುದನ್ನು ನೋಡಿದ ಅವರ ಕವಿ ಹೃದಯ ಮರುಗಿತು. ಅಯ್ಯೋ! ದೇವನ ಅಂಗಡಿಯಲ್ಲಿ ಪುಕ್ಕಟೆಯಾಗಿ ಪಡೆದುಕೊಂಡು ಬಂದ ಈ ಶರೀರವು ಸಂಸಾರದ ಪೇಟೆಯೊಳಗೆ ವ್ಯರ್ಥವಾಗಿ ಸವೆದು ಹೋಗುತ್ತಿದೆಯಲ್ಲ. ಈ ಬದುಕು ಸ್ಥಿರವಲ್ಲ. ಅಸ್ಥಿರವಾದ ಈ ಶರೀರವನ್ನು ನಂಬಬೇಡ. ಬಾಳು ನಮಗೆ ಕಂಡರಿಯದಂತೆ ಕೆರವಿನ ಅಟ್ಟೆಯಂತೆ ಅದು ಮೆಲ್ಲಗೆ ಸವೆಯುತ್ತಲೇ ಇರುತ್ತದೆ. ಹಾಳಾಗು ವಂಥದ್ದನ್ನು ಕೊಟ್ಟು ಹಾಳಾಗದಂಥ ನಿತ್ಯ ಸತ್ಯ, ಶಿವ ಶಕ್ತಿಯನ್ನು ಗಳಿಸದೆ ಜೀವನು ಕಾಲವನ್ನು, ಕಾಯವನ್ನು, ವಾಯುವನ್ನು ವ್ಯರ್ಥ ಹಾಳು ಮಾಡುತ್ತಿದ್ದಾನಲ್ಲ! ಎಂದು ನೊಂದರು.

"ಹೋಗುತಿಹುದು ಕಾಯ ವ್ಯರ್ಥ।
ಇದರ ಲಾಗವ ತಿಳಿದವ ಯೋಗಿ ಸಮರ್ಥ"

ಎಂದು ಅವರ ಕವಿ ಹೃದಯ ಹಾಡಿತು. ಅಯ್ಯಾ ಜೀವನೇ, ಈ ದೇಹದ ಮಹತ್ವವನ್ನು ಅರಿತುಕೋ. ಇದರೊಳಗಿನ ಗುಪ್ತ ನಿಧಿಯನ್ನು ಹುಡುಕಿಕೋ. ದೇಹವನ್ನು ಭೋಗಕ್ಕೆ ಮಾರಿಕೋಬೇಡ. ಅದನ್ನು ಯೋಗದ ಸಿರಿತನದತ್ತ ಹೊರಳಿಸು. ನೀನು ಎಷ್ಟು ಜನ್ಮ ಹೀಗೇ ಕಳೆದಿರುವಿಯೆಂದು ನಿನಗೆ ಗೊತ್ತಿಲ್ಲ. ನೀನು ಬಂದಾಗಲೆಲ್ಲಾ ಮಾಡಿದ್ದು ಪ್ರಾಪಂಚಿಕ ಗಳಿಕೆಯೇ ಹೊರತು ಪಾರಮಾರ್ಥಿಕ ಸಂಪತ್ತಲ್ಲ. ಹೀಗೆ ಎಷ್ಟು ಸಲ ಬರುತ್ತೀ? ಎಷ್ಟು ಸಲ ಹೋಗುತ್ತೀ? ಇದಕ್ಕೆ ಕೊನೆ ಬೇಡವೇ? ಇಷ್ಟು ದಿವಸ ತಿಳುವಳಿಕೆ ಇಲ್ಲದೆ, ಅಜ್ಞಾನದಲ್ಲಿ ಮಲಗಿದ್ದಾಯಿತು. ಇನ್ನಾದರೂ ಮೈ ಕೊಡವಿಕೊಂಡು ಎದ್ದೇಳು. ಇನ್ನಾದರೂ ದೇವನತ್ತ ಹೊರಳು; ನೀನು ಹೋಗಿ ತಲುಪಬೇಕಾದ ಅಂತಿಮ ಸ್ಥಳವೂ ಅದೇ ಆಗಿದೆ ಎಂದು ಜೀವನನ್ನು ಅವರು ಎಚ್ಚರಿಸಿದರು. "ಇನ್ನಾರ ತಿಳಿಕಂಡ್ಯಾ ತಮ್ಮಾ" ಎಂದು ಮೊರೆಯಿಟ್ಟರು. ಜೀವಿಯ ಉದ್ಧಾರದ ಕಳಕಳಿ ಅವರ ತತ್ವಪದಗಳಲ್ಲಿ ಮಿಡಿಯುತ್ತಿದೆ.

ಸ್ವತಂತ್ರ ವಿಚಾರಧಾರೆಯ, ಚಿಂತನಶೀಲ ಬುದ್ಧಿಯ ಸೂಕ್ಷ್ಮ ಸಂವೇದಿಯಾದ

ಶರೀಫರ ಹೃದಯ ಶೃತಿಗೊಳಿಸಿದ ವೀಣೆಯಂತಿದ್ದಿರಬೇಕು. ಅದು ಯಾವುದಕ್ಕೂ ಅನುರಣಿಗೊಳ್ಳುತ್ತಿತ್ತು.

'ಶರೀಫಾ, ಮಾಯಾ ಎನ್ನುವ ಒಬ್ಬಳು ಮಹಾ ಮಹಿಳೆ ಸಂಸಾರದ ಸಂತೆಯಲ್ಲಿ ಅಲ್ಪ ತೃಪ್ತಿಯನ್ನು ನೀಡುವ ವಸ್ತುಗಳನ್ನು ಹರಡಿದ್ದಾಳೆ. ಹೊನ್ನು, ಹೆಣ್ಣು, ಮಣ್ಣು ಗಳ ಮೋಹವನ್ನು ಮನುಷ್ಯನ ಮನದಲ್ಲಿ ಬಿತ್ತಿದ್ದಾಳೆ. ಮಂಗ ಮನಸ್ಸು ಒಳಮುಖ ವಾಗಿ ಮೇಲೇರಿ, ತನ್ನ ನಿಜವಾದ ಗಂಡನಾದ ಆ ದೇವನನ್ನು ಕಾಣದೆ, ಕೂಡದೇ, ನಿತ್ಯ ಸುಖ ಪಡೆಯದೆ, ಹೊರಗಿನ ಆಮಿಷಕ್ಕೆ ಬಲಿಯಾಗುತ್ತಿದೆ. ಆತ್ಮ ಜ್ಞಾನಿ ಎನಿಸುವ ಜೀವ ಈ ಮೋಹವನ್ನು ಮೆಟ್ಟಬೇಕು' ಎಂದು ಬೋಧಿಸುತ್ತಿದ್ದ ಬೋಧೆ ಕಳಸದ ಗಾಳಿಯಲ್ಲಿ ಸಂಚರಿಸುತ್ತಿತ್ತು. ಗೋವಿಂದಭಟ್ಟರು ಶರೀಫರ ಅಭ್ಯುದಯದ ಮೇಲೆ ಒಂದು ಕಣ್ಣು ಇಟ್ಟಿದ್ದರು.

ಒಂದು ದಿನ ಗೋವಿಂದ ಭಟ್ಟರು ಶರೀಫರನ್ನು ಕರೆದು, 'ಸ್ನಾನಮಾಡಿ ಸ್ವಚ್ಛವಾಗಿ ಬಾ' ಎಂದರು. ಶರೀಫರು ಸ್ನಾನಕ್ಕೆಂದು ಭಾವಿಗೆ ಹೋದಾಗ, ಅಲ್ಲಿ ತಲೆಯ ಮೇಲೆ ಕೊಡವನ್ನು ಹೊತ್ತುಕೊಳ್ಳುತ್ತಿದ್ದ ಹಳ್ಳಿಗಾಡಿನ ಹುರಿಕಟ್ಟಿನ ಚಲುವೆಯನ್ನು ಕಂಡರು. ಮನ ಅತ್ತ ಒಂದು ನಿಮಿಷ ಹರಿಯಿತೇನೊ! ಮರು ಗಳಿಗೆಗೇ ಅವರೊಳಗಿನ ವಿವೇಕ ಎಚ್ಚೆತ್ತಿತು. ಗುರುಗಳ ಮಾತು ಅವರನ್ನು ಎಚ್ಚರಿಸಿತೇನೋ! ತೊಗಲು ತೊಳೆದ ರೇನು? ಮನ ಮಡಿಯಾಗದನ್ನಕ್ಕರ ಎಂಬ ಅರಿವು ಮೂಡಿತು. ಯಾವಳನ್ನೋ ಆಶಿಸಿ, ಮನಸ್ಸನ್ನು ಹೊಲಸು ಮಾಡಿಕೊಂಡೆನೋ 'ಅಂಥ ಹೊಲಸಾದ' ಮನವನ್ನು ಒಳಗಿಟ್ಟು, ಹೊರಗೆ ನೀರಿನಿಂದ ತೊಗಲನ್ನು ತೊಳೆದುಕೊಂಡ ಮಾತ್ರಕ್ಕೆ ಮಡಿಯಾದೆ ಎಂದು ಹೇಳಿದರೆ ಅದು ಆತ್ಮದ್ರೋಹ, ಗುರುದ್ರೋಹ, ದೇವದ್ರೋಹವಾದೀತು ಎಂದು ಅವರು ಚಡಪಡಿಸಿದರು. ಗುರುಗಳ ಉಪದೇಶ ನೆನಪಾಯಿತು. ಅಹುದು; ಈ ಮನಸ್ಸಿನ ನಿಜವಾದ ಗಂಡ ಆ ಪರಮಾತ್ಮ. ಈ ಮನಸ್ಸು ಆ ಪತಿಯನ್ನೇ ಕೂಡಬೇಕು. ಆದರೆ ಈ ಮನವು ಈಗ ಗಂಡನನ್ನು ಬಿಟ್ಟು ವಿಷಯವಾಸನೆ ಎನ್ನುವ ಅನ್ಯ ಪುರುಷನನ್ನು ಕೂಡಿ, ಅನಂತ ಬಯಕೆಗಳೆಂಬ ಮಕ್ಕಳನ್ನು ಪಡೆಯುತ್ತಿದೆ. ಗಂಡನನ್ನು ಬಿಟ್ಟು ಮಿಂಡನನ್ನು ಕೂಡಿ, ಮಕ್ಕಳನ್ನು ಪಡೆಯುವ ಈ ಮನಸ್ಸೆಂಬ ಹೆಣ್ಣು 'ಮಕ್ಕಳ್ಹಡೆದ ಸೂಳೆ'–ಈ ಹೆಣ್ಣಿನ ಸಂಗವನ್ನು ಆತ್ಮಜ್ಞಾನ ವಿದ್ಯೆ ಗಳಿಸ ಬಂದ ನಾನು ಮಾಡಬಾರದಾಗಿತ್ತು ಎಂದು ತಲೆ ಜಜ್ಜಿಕೊಂಡರು. ಪಶ್ಚಾತ್ತಾಪದ ಉರಿಯಲ್ಲಿ ಬೆಂದರು. ಕಸಿವಿಸಿಗೊಂಡ ಕವಿ ಹೃದಯ ನೊಂದು–

'ಮಕ್ಕಳ್ಹಡೆದ ಸೂಳಿ ಸಂಗ ಮಾಡಬಾರದೋ ಅವಳ
ಕಕ್ಕುಲಾತಿಯಿಂದ ಹೋಗಿ ಕೂಡಬಾರದೋ....'

ಎಂದು ಹಾಡಿತು

ಮಲಿನವಾದ ಮನವು ಮಡಿವಾಗುವದೆಂತು? ಎಂದು ಜೀವ ಚಿಂತಿಸಿತು. ವೇಳೆ

ಸರಿಯುತ್ತಿತ್ತು. ಹಗಲು ಕಳೆದು ರಾತ್ರಿ ಬಂದಿತು. ಒಳಗೂ ಕತ್ತಲೆ; ಹೊರಗೂ ಕತ್ತಲೆ.

ತಮಗೆ ತಮ್ಮ ಅರಿವೇ ಗುರು. ಬೆಳಗಿನ ಜಾವ ಪೂರ್ವದಲ್ಲಿ ಬೆಳ್ಳಿ ಚಿಕ್ಕಿ ಮೂಡಿತ್ತು. ಕತ್ತಲು ಹರಿದು ಬೆಳಕು ಚಿಮ್ಮುತ್ತಿತ್ತು. ಮನದ ಕ್ಷೋಭೆ ಅಡಗತೊಡಗಿತ್ತು. ಯಾವಳನ್ನು ನೋಡುವದರ ಮೂಲಕ ಮನಸ್ಸು ಹೊಲಸಾಯಿತೋ, ಅವಳಿಂದಲೇ ಅದು ಮಡಿಯಾಗಬೇಕು ಎಂದು ವಿವೇಕ ಸೂಚಿಸಿತು. ಮರು ದಿವಸ ಅವರೇ ಆ ಮಹಿಳೆಯ ಮನೆಗೆ ಹೋದರು. ತಾವಾಗಿಯೇ ಮನಸ್ಸು ಹಸನಾಗುವಂತೆ ಅವಳ ಕೈಯ್ಯ ಬಾರಕೋಲಿನಿಂದ ಹೊಡೆಯಿಸಿಕೊಂಡು ಮಡಿಯಾದರು. ಗೋವಿಂದಭಟ್ಟರು ಶಿಷ್ಯನ ಆಂತರಿಕ ಸ್ನಾನವನ್ನು ಕಂಡು ಹರ್ಷ ಪಟ್ಟರು.

ಗುರುಗಳ ಮನವನ್ನು ಗೆಲ್ಲುತ್ತ, ಆತ್ಮೋದ್ಧಾರದ ಹಾದಿಯಲ್ಲಿ ಮುನ್ನಡೆಯುತ್ತ, ಶರೀಫರು ಗಾವರೀ ಶಾಲಾ ಶಿಕ್ಷಕರಾಗಿ ಜೀವನ ರಂಗದಲ್ಲಿ ಕಾಲಿಟ್ಟಾಗ ಅವರಿಗೆ ಬದುಕಿನ ಮುಖ ಕಾಣತೊಡಗಿತು. ಅವರು ಓಣಿಯಲ್ಲಿ ನಡೆದಾಗ ಮಗ್ಗುಲಿನ ಮಸೂತಿಯಲ್ಲಿ ಕುಳಿತ ಮುಲ್ಲಾ ಅವರ ಗಮನ ಸೆಳೆದ. ಆತನು ಅಲ್ಲಿ ಕುಳಿತುಕೊಂಡು ಪಂಜೆ ಪೂಜೆ ಮಾಡಿ, ಡೋಲಿ ಕಟ್ಟಿ ಕುಣಿದಾಡುವದನ್ನು ಕಂಡಾಗ ಅವರ ಮನಕ್ಕೆ ನೋವೆನಿಸಿತು. ಧರ್ಮಕ್ಕೆ ವಿರುದ್ಧವಾದ ಆಚರಣೆ ಕಂಡು ಅವರು ಸಿಡಿದೆದ್ದರು. ಅಲ್ಲಿಯ ಮುಲ್ಲಾ ಶರೀಫರನ್ನು ತಡೆದ, 'ಶರೀಫಾ, ನಮ್ಮ ಮಸೂತಿಗೆ ನೀನು ಏಕೆ ಬರುತ್ತಿಲ್ಲವೋ?' ಎಂದು ಪ್ರಶ್ನಿಸಿದ. ಕ್ರಾಂತಿಕಾರಿ ವಿಚಾರದ ಸ್ವತಂತ್ರ ಮನೋಧರ್ಮದ, ಚಿಕಿತ್ಸಕ ಬುದ್ಧಿಯ ಶರೀಫರು ಆತನಿಗೆ, 'ಎಲ್ಲಿದೆಯೋ ನಿನ್ನ ಮಸೂತಿ?' ಎಂದು ಸವಾಲೆಸೆದರು. ಈ ಮಸೂತಿ ಏನು? ಅದು ಎಲ್ಲಿತ್ತು? ನಿಜವಾದ ಮಸೂತಿ ಯಾವುದು? ನಿನಗೆ ಏನಾದರೂ ಗೊತ್ತೆ?

'ಬಲ್ಲವರಾದರೆ ತಿಳಿದು ಹೇಳಿರಿ
ಮುಲ್ಲಾನ ಮಸೂತಿ ಎಲ್ಲಿತ್ತೋ?
ಗುಲ್ಲ ಮಾಡಿ ಗುದ್ದ್ಯಾಟದಲಾವಿಗೆ
ಬೆಲ್ಲ ಹಂಚುವದೆಲ್ಲಿತ್ತೋ?'

ಎಂದು ಅವರು ಪ್ರಶ್ನಿಸಿದರು. ಅಲ್ಲಾನನ್ನು ಅರಿಯದ ಮುಲ್ಲಾ ಬರಿ ಬೆಲ್ಲಕ್ಕೆ ಓದಿಕೆ ಮಾಡುತ್ತ ಕುಳಿತರೇನು ಫಲ? ಮಸೂತಿ ಯಾವುದು? ಅದು ಮೊದಲು ಎಲ್ಲಿತ್ತು? ನೀನು ನನಗೆ ಹೇಳು? ಎಂದು ಅವರು ಮುಲ್ಲಾಗಳಿಗೆ ಸವಾಲೆಸೆದರು. "ಎಲೋ ಮುಲ್ಲಾ ನೀ ಕೇಳು. ನಾನು ನಿನ್ನ ಮಣ್ಣಿನ ಮಸೂತಿಗೆ ಬರಲಾರೆ. ನನ್ನದೇ ಆದ ಮಸೂತಿ ನನ್ನ ಮೈಯೇ ನನ್ನ ಮಸೂತಿ ಈ ನನ್ನ ಮೈ ಎನ್ನುವ ಮಸೂತಿಯಲ್ಲಿ ಅರಿವು ಅನ್ನುವ ಅಲ್ಲಾ ಒಳಗೆ ಮಲಗಿದ್ದಾನೆ. ಅವನನ್ನು ಎಚ್ಚರಿಸಲೆಂದು ನಾನು ಒಳಗಿನ ಮಸೂತಿಗೆ ಹೋಗುತ್ತೇನೆ" ಎಂದರು. ಮಹಮ್ಮದೀಯರಾದ ಶರೀಫರಿಗೆ

ಮಹಮ್ಮದೀಯರೇ ಎದುರಾದರು. 'ಶರೀಫಾ, ನಿಮ್ಮ ಮನೆಯಿಂದ ನಮ್ಮ ಮಸೂತಿಗೆ ಎಡೆಯೇ ಬಂದಿಲ್ಲ! ಅದರಿಂದ ಬೇಗ ಕಳಿಸಿಕೊಡು' ಎಂದು ಒಬ್ಬ ಮುಲ್ಲಾ ಪ್ರಶ್ನಿಸಿದ; ಅವನ ಮಾತಿಗೆ ಕೆರಳಿದ ಶರೀಫರು, "ಎಲೋ ಮುಲ್ಲಾ! ನಮ್ಮ ಮನೆಯ ಅರುಹಿನ ಎಡೆ ಆ ಅಲ್ಲಾ ಸಾಹೇಬರಿಗೆ ದಿನಾ ನಿತ್ಯ ಹೋಗೇ ಹೋಗುತ್ತಿದೆ. ಹಸಿದು ಮಸೂತಿಯಲ್ಲಿ ಕುಳಿತ ನಿನಗೆ ನಮ್ಮ ಮನೆಯ ಎಡಿ ಇನ್ನು ಬರುವಂಗಿಲ್ಲ. ನೀನು ಹಾದಿ ಕಾಯಬೇಡ" ಎಂದರು. ಶರೀಫಾ, "ನಿನ್ನ ಎಡಿ ಯಾವುದೋ?" ಎನ್ನುವದು ಮುಲ್ಲಾನ ಪ್ರಶ್ನೆ, ನನ್ನ ಎಡೆ ಅರುಹಿನ ಎಡೆ; ಜನ್ಮಾಂತರದಿಂದ ಕಟ್ಟಿಕೊಂಡು ಬಂದ ಕರ್ಮವೆಂಬ ಕುರಿಯನ್ನು ಕಡಿದು ಹಾಕೋಣ. ಅರಿವೆಂಬ ಗುರುವನ್ನು ಪಡೆಯೋಣ. ಸ್ಥಿರವಾದ ದೇವರು ಇರುವ ಅರುಹಿನ ಮಸೀದಿಗೆ ನನ್ನ ಎಡೆ ಹೋಗುತ್ತಿದೆ. ಇದೋ ಕೇಳು.

'ಎಡೆಯ ಒಯ್ಯುಣ ಬಾರೇ! ದೇವರಿಗೆ
ಎಡೆಯ ಒಯ್ಯುಣು ಬಾರೆ
ಮಡಿಹುಡಿಯಿಂದಲಿ
ಪೊಡವಿಗಧಿಕ ಎನ್ನೊಡೆಯ ಅಲ್ಲಮನಿಗೆ'

ಎಂದು ಹಾಡಿದರು. ಆಗ ಮತ್ತೊಬ್ಬ ಮುಲ್ಲಾ ಶರೀಫರಿಗೆ ಎದುರಾದ. "ಏ ಶರೀಫಾ ನಮ್ಮಲ್ಲಿ ಎಷ್ಟು ಮಂದಿ ಮುಲ್ಲಾ, ಮೌಲ್ವಿ, ಖಾಜಿ, ಖತೀಬರಿರಲಿಲ್ಲ. ನಿನಗೆ ಅರುಹಿನ ಹಾದಿ ತೋರಿಸಲು ನಮ್ಮಲ್ಲಿ ಇಷ್ಟು ಜನರಿದ್ದಾಗಲೂ ನೀನು ಆ ಕಳಸದ ಬಡ ಬ್ರಾಹ್ಮಣನನ್ನು ಏಕೆ ಹಿಡಿದು ಕೊಂಡಿ" ಎಂದು ಅವನು ಪ್ರಶ್ನಿಸಿದ. ಆಗ ಶರೀಫರು ಅವನಿಗೆ, 'ಎಲೋ ಮುಲ್ಲಾ! ಊರಿಗೆ ದಾರಿ ಯಾರು ತೋರಿಸಿದರೇನು? ಅರುಹಿಗೆ ಹಿಂದೂ ಮುಸಲ್ಮಾನ ಎಂಬ ಜಾತಿ ಇದೆಯೇ? ನಿನ್ನ ಮನೆಯಂಗಳ, ಮಸೂತಿಯಲ್ಲಿ ಬೀಳುವ ಬೆಳಕು ಹಿಂದೂ ದೇವಾಲಯದ ಅಂಗಳದಲ್ಲಿ ಬೀಳುವ ಬೆಳಕಿಗೆ ಏನಾದರೂ ವ್ಯತ್ಯಾಸವಿದೆಯೇ? ನಿನ್ನ ಮನೆಯಲ್ಲಿ ಉರಿಯುವ ಅಗ್ನಿ, ಪರರ ಮನೆಯಲ್ಲಿ ಉರಿಯುವ ಅಗ್ನಿಗಿಂತ ಯಾವ ರೀತಿಯಲ್ಲಿ ಭಿನ್ನ? ಇನ್ನೊಬ್ಬರು ಕುಡಿಯುವ ನೀರಿಗಿಂತ ನಿನ್ನ ನೀರು ಏನಾದರೂ ಬೇರೆಯುಂಟೇ? ನಡೆವ ನೆಲ, ಎಲ್ಲರ ಎದೆಯನ್ನು ಆಳುವ ಅರಿವು, ಎಲ್ಲರ ತಲೆಯ ಮೇಲಿರುವ ಆಕಾಶ ಒಂದೇ ಆಗಿರುವಾಗ ಅವನು ಇವನು, ಅದು ಇದು ಎಂದು ಹೇಳುವದೇಕೆ?' ಎಂದು ಪ್ರಶ್ನಿಸಿದರು. ಶುದ್ಧ ಸರೋವರದಂತಿದ್ದ ಶರೀಫರೆದುರು ಕೊಳಚೆ ಗುಂಡಿಯಂತಿದ್ದ ಆ ಮುಲ್ಲಾ ಅವರ ಆಳ ಅಂತಸ್ತನ್ನು ಅರಿಯದೆ ಹೋದ ಪ್ರತಿಯಾಗಿ ಅವರು ನಡೆವ ಹಾದಿಯಲ್ಲಿ ಮುಳ್ಳನ್ನೇ ಬಿತ್ತಿದ. ನಮ್ಮ ಮನೆಯಲ್ಲಿ ಹುಟ್ಟಿದ ಇವನು ನಮಗೇ ಬುದ್ಧಿ ಕಲಿಸಲು ಬಂದಿದ್ದಾನೆ. ಇವನಿಗೆ ನಾವೇ ತಕ್ಕ ಬುದ್ಧಿ ಕಲಿಸಬೇಕೆಂದು ಅವನು ಹಲ್ಲು ಕಡಿದ.

ಮಗುದೊಬ್ಬ ಮುಲ್ಲಾ ಬಂದು ಶರೀಫರೆದುರು ಎದೆಸೆಟೆದು ನಿಂತು "ಶರೀಫಾ, ಆ ಬ್ರಾಹ್ಮಣನನ್ನು ಕೂಡಿದ ನಿನಗ ನಮಾಜ ಅನ್ನುವದು ಗೊತ್ತೇನೋ?" ಎಂದು

ಅಣಿಕಿಸಿದ, 'ನಮಾಜ ಅಂದರೆ ಏನು? ಉತ್ತರ ಹೇಳಬಲ್ಲೆಯಾ?' ಎಂದು ಪ್ರಶ್ನಿಸಿದ. "ನಾ ಅನ್ನುವದು ಮಾಜಿದಾಗ ನಡೆಯುವ ಪ್ರತಿಕ್ರಿಯೆಯೂ ನಮಾಜ" ಎಂದು ಗೋವಿಂದ ಭಟ್ಟರು ನನಗೆ ಎಂದೋ ಹೇಳಿಕೊಟ್ಟಿದ್ದಾರೆ ಎಂದು ಶರೀಫರು ಉತ್ತರಿಸಿದರು. ನಮಾಜ ಎಂಬ ಉರ್ದು ಪದವನ್ನು ಕನ್ನಡದಲ್ಲಿ ವಿಚ್ಛೇದಿಸಿ ಅಪೂರ್ವ ರೀತಿಯಲ್ಲಿ ಅರ್ಥೈಸಿದುದು ಅವನಿಗೆ ಅರ್ಥವೇ ಆಗಲಿಲ್ಲವೆಂದು ತೋರುತ್ತದೆ. ಆ ಮುಲ್ಲಾ ಮುಂದೆ ಬಂದು 'ಏ ಶರೀಫಾ ಹಾಗೆಂದರೇನೋ? ಎಂದು ಕೇಳಿದ. ಅವನ ಅಜ್ಞಾನಕ್ಕೆ ಶರೀಫರು, 'ಹುಚ್ಚಪ್ಪಾ!' ನಾ ಅಂದರೆ ಮಮಕಾರ, ಅಹಂಕಾರ, ಜಂಭ ಡಂಭ; ಮಾಜು ಎಂದರೆ ಬಿಟ್ಟು ಬಿಡು. ಅಹಂಕಾರ ಬಿಟ್ಟು ನಿರ್ಮಲನಾಗಿ ನಿಷ್ಕಾಮ ಭಾವನೆಯಿಂದ ಮಾಡುವ ಪ್ರತಿಕಾರ್ಯವೂ ನಮಾಜ ಅಲ್ಲವೇನೋ?' ಎಂದರು. ಪೂಜೆ, ನಮಾಜು ಎಂದರೆ ಕೇವಲ ಹೊರಗೆ ಮಾಡುವ ಧಾರ್ಮಿಕ ಶುಷ್ಕ ಕಾರ್ಯಾಚರಣೆ: ಮಂತ್ರ ಹೇಳುವದು, ಗಂಟೆ ಬಾರಿಸುವದು, ಧೂಪದೀಪ ಬೆಳಗುವದೇ ಅಲ್ಲ. ಮನವೆಲ್ಲಾ ಶಿವಮಯ-ಅಲ್ಲಾಮಯವಾಗಿರಿಸುವದು ಪೂಜೆ, ನಮಾಜು ಎನ್ನುವದು ಅವರ ಆಶಯವಾಗಿತ್ತು.

ಬ್ರಾಹ್ಮಣರು ಗೋವಿಂದಭಟ್ಟರನ್ನು ಕಾಡಿದರು. ಮಹಮ್ಮದೀಯರು ಶರೀಫರನ್ನು ನೋಯಿಸಿದರು. ಆದರೆ ಗುರುಶಿಷ್ಯರಿಬ್ಬರೂ ಹೊಗಳಿಕೆ ತೆಗಳಿಕೆಗೆ ಕಿವಿಗೊಡಲಿಲ್ಲ. ಅವನೊಬ್ಬ ಬ್ರಾಹ್ಮಣ, ಇವನೊಬ್ಬ ಸಾಬಾ ಇಬ್ಬರಿಗೂ ದುಡಿಮೆ ಇಲ್ಲ. ಪಿರಿಪಿರಿ ತಿರುಗುತ್ತಾರೆ ಎಂದು ಜನ ಅವರನ್ನು ಮೂದಲಿಸಿತು. ಜನದ ಮೂದಲಿಕೆಗೆ ಅವರು ಅಳುಕಲಿಲ್ಲ. ಅಂಜಲಿಲ್ಲ. ಮಾನಾಪಮಾನವಲ್ಲವೂ ನಿನ್ನದು ತಾಯೇ ಎಂದು ಗೋವಿಂದಭಟ್ಟರು ಶಾಂತರಾದರು.

ಸಾಧಕರಾದ ಶರೀಫರು ಗುರುಕರುಣೆ ಗಳಿಸುತ್ತ ನಾಲ್ಕಾರು ಊರುಗಳಲ್ಲಿ ಕನ್ನಡ ಗಾವಠೀ ಶಾಲಾ ಶಿಕ್ಷಕರಾಗಿ ಕಾರ್ಯ ಮಾಡತೊಡಗಿದರು. ಜೊತೆಗೆ ಕನ್ನಡಸಾಹಿತ್ಯದ ಅಧ್ಯಯನವೂ ನಡೆಯಿತು. ಹೀಗೆ ಸಾಧಕರಾಗಿ ನಡೆದ ಶರೀಫರ ಮನವು ಹೊನ್ನು, ಹೆಣ್ಣು, ಮಣ್ಣುಗಳ ಮಾಯೆಯನ್ನು ಗೆಲ್ಲುವದು ಹೇಗೆ? ಎಂದು ಚಿಂತಿಸುತ್ತಿತ್ತು. ಅವರು ಹಲವಾರು ಕೆಲಸಗಳಲ್ಲಿ ಹೊರಮೈಯ್ಯಲ್ಲಿ ತೊಡಗಿಕೊಂಡಿರುತ್ತಿದ್ದರೂ, ಅವರ ಅಂತರ್ಯದಲ್ಲಿ ಮಾಯೆಯನ್ನು ಗೆಲ್ಲುವ ಚಿಂತನೆಯೇ ತುಂಬಿರುತ್ತಿತ್ತು.

ಶರೀಫರಿಗೆ ಅವರ ಅರಿವೇ ಅವರಿಗೆ ಗುರುವಾಗಿತ್ತು. ಅವರು ತಮ್ಮೊಳಗೆ ತಾವು ತಿಳಿದುಕೊಂಡರು. ಗೋವಿಂದಭಟ್ಟರೇ ತಮ್ಮನ್ನು ಪಾರಗಾಣಿಸುವ ಪಾರಮಾರ್ಥಿಕ ಗುರುವೆಂದು ನಂಬಿದ್ದರು.

"ನನ್ನೊಳಗೆ ನಾ ತಿಳಕೊಂಡೆ ನನಗೆ
ಬೇಕಾದ ಗಂಡನ್ನ ಮಾಡಿಕೊಂಡೆ"
....

"ಗುರು ಉಪದೇಶ ಪಡಕೊಂಡೆ
ಗುರು ಗೋವಿಂದರ ಪಾದಾ ಹಿಡಕೊಂಡೆ"

ಎಂದು ಅವರು ಹಾಡಿದ ಹಾಡು ಅವರ ಅಂತರಂಗಕ್ಕೆ ಹಿಡಿದ ಕನ್ನಡಿಯಾಗಿದೆ. ಗೋವಿಂದ ಗುರು–ಗಂಡ–ಬಂದು ಕೈಯನ್ನು ಹಿಡಿಯದ ತನಕ ಅವರು ಮಿಂಡಿಯಾಗಿ ತಿರುಗುತ್ತಿದ್ದರು. ಆ ಗಂಡ ಬಂದು ಗುಂಡು ಮುದ್ರೆ ಧರಿಸಿದ. ಮುಪ್ಪಾಗದಂಥ ಮುತ್ತೈದಿತನವ ತಂದುಕೊಟ್ಟ. ಶರೀಫರ ಆ ಗಂಡ ಮೈಗೆ ಮೈಸುಖ, ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ಕೊಡಿಸುವ ಮರ್ತ್ಯದ ಮಳ್ಳ ಗಂಡ ಆಗಿರಲಿಲ್ಲ. ಅವರ ಸಂಸಾರದ ತಿಪ್ಪಿಗುಂಡಿಗೆ ಆಧ್ಯಾತ್ಮದ ಬೆಂಕಿಯಿಟ್ಟು ಒಳಗೆಲ್ಲ ಬೆಳ್ಳಗೆ ಬೆಳಕಾದ ಗಂಡ ಆಗಿದ್ದರು. ಅವರು ಅಂತಿಂಥ ಗಂಡ ಆಗಿರದೆ ಬಲು ಪುಂಡ ಗಂಡ. ಭವವನ್ನೇ ಕಸ್ತು ಬೀಸಾಕುವ ದೇವ ಗಾರುಡಿಗ ಗಂಡರಾಗಿದ್ದರು. ಶರೀಫರು ಆ ಗಂಡನನ್ನು,

"ಎಲ್ಲರಂಥವನಲ್ಲೋ ಏನ ಗಂಡ| ಬಲ್ಲಿದನು ಪುಂಡ|

ಎಂದು ಹಾಡಿದ್ದಾರೆ. ಶಿಷ್ಯನೆಂಬ ಸತಿಯು ಅಂಕುಡೊಂಕು, ಕೊಂಕು ಕೊಳಕಗಳನ್ನು ಆ ಪತಿ ಪರಮಾತ್ಮನು ಕಳೆದ. ಅವಗುಣಗಳನ್ನು ಅಳಿದ. ತಂದೆ ತಾಯಿಗಳ ಮನೆಯಿಂದ ಗಂಡನ ಮನೆಗೆ, ಗಂಡನ ಮನೆಯಿಂದ ಅರುಹಿನ ಮಹಾಮನೆಗೆ ಹಂತ ಹಂತವಾಗಿ ಆ ದೇವ ಗಂಡನು ನಡೆಗಲಿಸಿದ ಆತ್ಮೋದ್ಧಾರದ ಒಳಮೈ ಹಾದಿಯನ್ನು ಶರೀಫರು ಮನದುಂಬಿ ಹಾಡಿದರು. ಆ ಗಂಡನು,

"ತೊಂಟ ಸಂವತೆರ ಸೊಂಟ ಮುರಿ ಹೊಡೆದ| ಒಣ
ಪಂಟ ಮಾತಿನ ಗಂಟಗಳ್ಳರ ಮನೆಗೆ ಬರಗೊಡದ"

ಎಂದು ಹಾಡಿದ್ದಾರೆ. ಇಂಥ ಪತಿಯ ಪಾದದಲ್ಲಿ ವ್ಯಕ್ತಿ ಶಕ್ತಿ ವಿಶ್ವಶಕ್ತಿಯಾಗುವ ಹಾದಿಯಲ್ಲಿ ನಡೆಯುತ್ತಿರುವಾಗ ತಂದೆ ತಾಯಿಗಳ ಕರುಳಬಳ್ಳಿ ಮಗನಿಗೆ ಕನ್ಯೆಯನ್ನು ಹುಡುಕ ತೊಡಗಿತ್ತು, ವಂಶೋದ್ಧಾರದ ಬಳ್ಳಿ ಹಬ್ಬಬೇಕೆಂಬುದು ಅವರ ಆಶಯವಾಗಿತ್ತು. ತಮ್ಮ ಮಗನು ತಮ್ಮ ವಂಶದ ಕೀರ್ತಿಯನ್ನು ಸೂರ್ಯ ಚಂದ್ರ ಭೂಮಿ ಆಕಾಶ ನಕ್ಷತ್ರಗಳಿರುವ ತನಕ ನಿಲ್ಲುವಂತೆ ಮಾಡುತ್ತಾನೆಂಬ ತಿಳುವಳಿಕೆ ಆ ಮುಗ್ಧ ತಂದೆತಾಯಿಗಳಿಗೆ ಇರಲಿಲ್ಲ. ಕುಂದಗೋಳದಲ್ಲಿ ಗೋವಿಂದಭಟ್ಟರು ಶರೀಫರಿಗೆ ಕನ್ಯೆಯನ್ನು ನೋಡಿದ್ದರಂತೆ. ಲಗ್ನದ ಮಾತು ಬಂದಾಗ ಶರೀಫರು "ತಂದೇ! ಮೋಹ ಮಾಯೆಗಳು ಬಹಳ ಕಸುವುಳ್ಳವುಗಳು. ಮಡದಿ ಮಕ್ಕಳ ಮೋಹ ನನ್ನನ್ನು ಹಿಡಿದು ಮುಕ್ಕಿದರೆ ಏನು ಮಾಡಲಿ?" ಎಂದು ಗುರುಗಳಿಗೆ ಕೇಳಿದರು. ಆಗ ಗುರುಗಳು, "ಶರೀಫಾ ಎಷ್ಟು ಮಳೆಯಾದರೆ ಗಾಳಿ ಬೆಳಕುಗಳು ತೊಯ್ಯಬಲ್ಲುವೋ ಬಾಳಾ! ನೀನು ಸುಮ್ಮನೇ ಲಗ್ನವಾಗು" ಎಂದು ಹೇಳಿದರು. ಗುರುಗಳೇ ನಿಂತು ಎಲ್ಲ ಮಾಡಿದರು. ಬ್ರಾಹ್ಮಣ ಗುರು ಮಹಮ್ಮದೀಯ ಶಿಷ್ಯನಿಗೆ ಕನ್ಯೆ ತೆಗೆದು ಲಗ್ನ ಮಾಡಿದ ಅಪೂರ್ವ ಪ್ರಸಂಗ ಇದು ಎನ್ನಬೇಕು.

ಹೆಂಡತಿ ಮನೆಗೆ ಬಂದಳು. ಶರೀಫರು–ಸಂಸಾರದಲ್ಲಿ ಧುಮುಕಿದರು. ಸುಖವೋ

ದುಃಖವೊ ಬಂದುದನ್ನು ಉಂಡರು. ಅವರಿಗೆ ಒಬ್ಬಳು ಮಗಳೂ ಹುಟ್ಟಿದಳು. ಅವಳಿಗೆ ಲತ್ತೂಮಾ ಎಂದು ಹೆಸರಿಟ್ಟರು. ದಿನಗಳು ಉರುಳುತ್ತಿದ್ದವು ಶರೀಫರ ತಂದೆತಾಯಿಗಳು ದೇಹಬಿಟ್ಟರು. ಊರಿನ ಮುಲ್ಲಾ ಮೌಲ್ವಿಗಳು ಶರೀಫರ ತಂದೆತಾಯಿಗಳನ್ನು ಊರಿನ ಖಬರಸ್ತಾನದಲ್ಲಿ ಅಂತ್ಯಕ್ರಿಯೆ ಮಾಡಲು ಅವಕಾಶ ನೀಡಲಿಲ್ಲವಂತೆ, ಅದರಿಂದ ಕ್ರಾಂತಿಕಾರಿ ವಿಚಾರದ ಶರೀಫರು ತಮ್ಮ ಹೊಲದಲ್ಲಿಯೇ ಅವರ ಅಂತ್ಯಕ್ರಿಯೆ ಮಾಡಿ ಪೂಜಿಸತೊಡಗಿದರು. ಅಲ್ಲಿ ಒಂದು ಮಲ್ಲಿಗೆ ಬಳ್ಳಿಯನ್ನು ನೆಟ್ಟರು. ಎರಡು ಬೇವಿನ ಮರಗಳು ಮಗ್ಗುಲ ಮಗ್ಗುಲಲ್ಲಿಯೇ ಎದ್ದವು. ತಂದೆ ತಾಯಿಗಳು ಮಲಗಿದ ಆ ಸ್ಥಳವೇ ಅವರಿಗೆ ಮಕ್ಕಾ ಮದೀನಾ, ಕಾಶೀ, ಕಾಬಾ, ಕೈಲಾಸವೆನಿಸಿತು.

ಸಜಾತಿ ಬಂಧುಗಳಿಂದ ತಿರಸ್ಕಾರ, ಸಮಾಜದ ವೈರ, ಬೆನ್ನು ಹತ್ತಿ ಬಂದ ಬಡತನ, ನಿಶ್ಚಿತ ದುಡಿಮೆಯಿಲ್ಲದೇ ಕುಂಟುತ್ತ ನಡೆದ ಕೌಟುಂಬಿಕ ಜೀವನ, ಯಾರಿಗೂ ಜೀಯಾ ಎನ್ನದ ಸ್ವಾಭಿಮಾನಗಳಿಂದಾಗಿ ಶರೀಫರ ಜೀವನ ಹತ್ತು ಹಲವು ತೊಂದರೆಗಳನ್ನು ಎದುರಿಸಬೇಕಾಯಿತು. ಈ ನಡುವೆ ಪತ್ನಿಯೂ ತೀರಿದಳು. ಆಗ ಮಗಳನ್ನು ಅಳಿಯನನ್ನೂ ತಂದು ಮನೆಯಲ್ಲಿಯೇ ಇಟ್ಟುಕೊಂಡರು. ಅವರಿಗೆ ನಿಶ್ಚಿತ ದುಡಿಮೆಯೆಂಬುದು ಇರಲಿಲ್ಲ. ಯಾರಾದರೂ ಅಲಾವಿ ಮೇಳ ಕಟ್ಟಿದ್ದರೆ, ಅವರನ್ನು ಕರೆದುಕೊಂಡು ಹೋಗುತ್ತಿದ್ದರು. ಅಲಾವಿ ಮುಗಿದ ಮೇಲೆ ಅಷ್ಟಿಷ್ಟು ಕಾಳುಕಡಿಯನ್ನು ಶಿಶುನಾಳಕ್ಕೆ ತಂದುಮುಟ್ಟಿಸುತ್ತಿದ್ದರು. ಶರೀಫರು ದೊಡ್ಡಾಟಗಳನ್ನು ಕಲಿಸಿದರು. ದೊಡ್ಡಾಟದ ಕಥೆಗಳನ್ನೂ ಬರೆದುಕೊಟ್ಟರು. ಹಬ್ಬ–ಹರಿದಿನಗಳು ಬಂದಾಗ ಅಲಾವಿ ಮೇಳ ಕಟ್ಟಿದರು. ಸವಾಲು–ಜವಾಬುಗಳಲ್ಲಿ ಭಾಗವಹಿಸಿ, ತಮ್ಮ ಅಗಾಧ ಕವಿತ್ವದಿಂದ ಕಲಿಸಿದರು. ಎದುರಾಳಿಯನ್ನು ನಡುಗಿಸಿದರು ಜೊತೆಗೆ ಜನತೆಯನ್ನು ರಂಜಿಸಿದರು. ಇಂಥ ಸಾಂಸ್ಕೃತಿಕ ಕಾರ್ಯಗಳು ಅವರಿಗೆ ಸಂತೋಷ ತಂದವು. ಆದರೆ ಅವರ ಬಡತನವನ್ನು ಅವು ಹಿಂಗಿಸಲಿಲ್ಲ.

ಬಾಳಬೀದಿಯಲ್ಲಿ ನಡೆದ ಶರೀಫರು ಬದುಕಿನ ಒಳ ಪದರುಗಳನ್ನು ನಿರೀಕ್ಷಿಸಿದರು. ಅವರಿಗೆ ಅಲ್ಲಿ ಕಂಡದ್ದೇನು? ಜೀವನವೊಂದು ನಿರಂತರ ಜಾತ್ರೆ; ಸವೆಯದ ಹಾದಿ. ಜೀವ ಎಲ್ಲಿಂದಲೋ ತನ್ನ ಪಾಪ ಪುಣ್ಯದ ಫಲವಾಗಿ ಹುಟ್ಟಿ ಇಲ್ಲಿಗೆ ಬರುತ್ತದೆ. ಅದಕ್ಕೆ ಬಂದುದು ಎಲ್ಲಿಂದ? ಏತಕ್ಕಾಗಿ? ಎಂಬುದು ತಿಳಿಯದು. ಇಲ್ಲಿ ಒಂದಿಷ್ಟು ದಿವಸ ಇದ್ದು, ಅದು ಇದು ಮಾಡಿ, ಸುಖವೋ ದುಃಖವೋ ಉಂಡು ಎಲ್ಲಾ ನನ್ನದು ನಾನು ಎಂದು ಬಡಬಡಿಸಿ, ಬಾಳಿನಲ್ಲಿ ಸಂಜೆಯಾಯಿತೋ ಹಣ್ಣೆಲೆ ಉದುರಿ ಮತ್ತೆ ಮಣ್ಣಿನ ಮಡಲಿಗೆ ಬೀಳುವಂತೆ ಅವನು ಭೂಮಿಯಲ್ಲಿ ಒರಗುತ್ತಾನೆ. ಪಂಚಭೂತಗಳು ಪಂಚಭೂತಗಳೊಂದಿಗೆ ಕೂಡಿಕೊಳ್ಳುತ್ತವೆ. ಅವರಿವರು ಅವನಿಗಾಗಿ ಕೊಂಚಕಾಲ ಅಳುತ್ತಾರೆ. ಅತ್ತವರೂ ಒಂದು ದಿವಸ ಇಲ್ಲವಾಗುತ್ತಾರೆ. ಹೀಗೆ ಬರಹೋಗುವ ನಿರಂತರ ಯಾತ್ರೆಯ ಉದ್ದೇಶ ವೇನು? ಗುರಿ ಯಾವುದು? ಎಂದು ಶರೀಫರ ಚಿಂತನಶೀಲ ಬುದ್ಧಿ ವಿಚಾರಿಸಿತು. ಪ್ರಕೃತಿ

ಪುರುಷರು ಕೂಡಿದಾಗ, ರೇತು-ರಕ್ತ ಒಂದಾದಾಗ ಹುಟ್ಟಿ ಬಂದ ಜೀವಕ್ಕೆ ಅನ್ನ ಆಶ್ರಯ, ಆಚ್ಛಾದನಗಳ ಚಿಂತೆ, ಮೋಹ ಮಾಯೆಗಳ ಹೊಡೆತ, ಕಷ್ಟ ಸುಖಗಳ ನೆರಳು-ಬಿಸಿಲುಗಳ ನಡುವೆ ತೊಳಲಿ ಬಳಲಿ ಸಾಯುವ ಜೀವದ ಯಾತ್ರೆ ಅನಂತ, ಅವರ್ಣನೀಯ. ಈ ಅಸಫಲ, ಅರುಚಿಯ ಭಾರವಾದ ಜಡ ಜಾತ್ರೆಯನ್ನು ಶರೀಫರು-

'ಹುಟ್ಟಿದ್ದು ಹೊಲೆಮನಿ
ಬಿಟ್ಟೋಂಟೋ ಕಾಯಮನಿ
ಎಷ್ಟಿದ್ದರೇನಿದು ಖಾಲಿಮನಿ'

ಎಂದು ಹಾಡಿದರು. ಆತ್ಮೋನ್ನತಿಯ ಹಾದಿಯಲ್ಲಿ ನಡೆಯದೆ, ಸ್ವಸ್ವರೂಪ ಜ್ಞಾನ ಪಡೆಯದೆ, ನಡೆದ ಜೀವಿಯು ಉದ್ಧಾರವಾಗಬೇಕಾದರೆ ಈ ಮನೆಯು ಪರಮಾತ್ಮನ ಪೂಜಾ ಮಂದಿರವಾಗಬೇಕು. ಈ ಜೀವ ಆ ದೇವನನ್ನೇ ಕೊಂಡಾಡುವ, ಹಾಡುವ ಭಜಿಸುವ ದೇವಮಂದಿರವಾಗಬೇಕು ಎಂದು ಆಶಿಸಿದರು.

'ವಸಧಿಯೊಳು ನಮ್ಮ ಶಿಶುನಾಳಾಧೀಶನ
ಹಸನಾದ ಪದಗಳ ಹಾಡುವ ಮನಿಯೋ'

ಇದು ಶರೀಫರ ಆಶಯ. ದೇವನ ಆಗರವಾಗಬಹುದಾದ ಈ ದೇಹದ ಮನೆಯು ಈಗ ವ್ಯಸನಗಳ ಮಹಾಕೂಪವಾಗಿದೆ. ಅರುಹಿನ ಆಗರವಾಗಬೇಕಾದುದು ಬೇಕು-ಬೇಡ ಗಳ ತಿಪ್ಪೆಗುಂಡಿಯಾಗಿದೆ. ಜೀವವು ವ್ಯರ್ಥವಾಗಿ ಹಾಳಾಗುತ್ತಿದೆ. ದೇಹದ ಮಹತಿಯು ತಿಳಿಯದಾಗಿದೆ. ಕಾಯದ ಈ ವ್ಯರ್ಥ ತೊಳಲಾಟವನ್ನು ಶರೀಫರು-

"ಹೋಗುತಿಹುದು ಕಾಯ ವ್ಯರ್ಥ। ಇವರ
ಲಾಗವ ತಿಳಿದವ ಯೋಗಿ ಸಮರ್ಥ"

ಎಂದು ಹಾಡಿದರು. ಎಲೇ ಜೀವವೇ ನೀನು ಇಲ್ಲಿ ಬಂದು ಮಾಡಿದುದಾದರೂ ಏನು? ಸಾರ್ಥಕವಾದ ಬದುಕನ್ನು ನೀನು ಮಾಡಲಿಲ್ಲ. ಬರಿ ಭ್ರಮೆಯಲ್ಲಿ ಹೊರಳಾಡುತ್ತ ಪ್ರಾಯ ಕಳೆದುಕೊಂಡಿ. ಈಗ ಮರೆವಿನ ಮುದಿಕಿಯಾಗಿ, ಮುದ್ದೆಯಾಗಿ ಇರುವ ಈ ವ್ಯರ್ಥ ಹೋರಾಟದ ಚಿತ್ರಣವನ್ನು-

"ಬದುಕೇನು ಮಾಡಿದಿ ಇಲ್ಲೇ ಸುಳ್ಳೇ
ಮುದಿಕ್ಯಾಗಿ ಮೆರೆದೆಲ್ಲೋ ಛೀ ಹುಚ್ಚ ಮರುಳೇ"

ಎನ್ನುತ್ತಾರೆ ಶರೀಫರು. ಜೀವಾತ್ಮನೇ! ಇಷ್ಟು ದಿನದಿಂದ ತಿಳುವಳಿಕೆಯಿಲ್ಲದೆ ಮಲಗಿದಿ; ಜಡ ನಿದ್ದೆ ಸಾಕು. ಈಗಲಾದರೂ ಮೈಕೊಡವಿಕೊಂಡು ಎದ್ದೇಳು.

'ಇನ್ನಾರ ತಿಳಿಕೊಡ್ಯಾ ತಮ್ಮಾ' ಎಂದು ಜೀವನಿಗೆ ಅವರು ಬೇಡಿಕೊಳ್ಳುವ ಬೇಡಿಕೆ ಯಲ್ಲಿ ಜೀವಿಯ ಉದ್ಧಾರದ ಹಿರಿದಾದ ಆಸೆ ಇದೆ, ಕಳಕಳಿ ಇದೆ, ಮರುಕ ಇದೆ.

ಜೀವನ ಸಂಗ್ರಾಮದಲ್ಲಿ ಹೆಂಡಿರು ಮಕ್ಕಳ ಸೇವೆ ಮಾಡಿ ಹಾಳಾಗುವದಕ್ಕಿಂತ ಆ ಪರಮಾತ್ಮನ ಚಾಕರಿ ಮಾಡಲು ಶರೀಫರು ಜೀವನನ್ನು ಕರೆಯುತ್ತಾರೆ. ದೇಹ

ಮನ ಭಾವ ಶುದ್ಧವಾಗಿ, ಮೋಹ ಮಾಯೆಗಳನ್ನು ಮೆಟ್ಟಿ, ಮೀರುತ್ತ ಮುನ್ನಡೆಯು ವಂತೆ ಪ್ರೋತ್ಸಾಹಿಸುತ್ತಾರೆ: ಪ್ರೇರೇಪಿಸುತ್ತಾರೆ. ಜೀವನು ಈ ದೈವೀ ಯಾತ್ರೆಯಲ್ಲಿ ಮುನ್ನಡೆದರೆ, ಆತನು ಬಾಳಿನ ಪಾಪತಾಪ ನೈರಾಸ್ಯ, ಸಾವು ನೋವುಗಳನ್ನು ಮರೆತು ನಿತ್ಯ ಸುಖದಲ್ಲಿ, ದೈವೀ ಆನಂದದಲ್ಲಿ ಕಾಲಿಡುತ್ತಾನೆ. ಆ ಆನಂದ ಅವರ್ಣನೀಯ; ಅನಿರ್ವಚನೀಯ. ಆ ಆನಂದ ಸಾಮ್ರಾಜ್ಯದಲ್ಲಿ ಮೇಲು ಕೀಳು ಇಲ್ಲ. ಬಡವ ಬಲ್ಲಿದರಿಲ್ಲ. ಕರಿದು ಬಿಳಿದು ಕಾಣದು, ವೈರ, ಮುನಿಸು ಕ್ರೌರ್ಯಗಳಿಲ್ಲ. ಅಲ್ಲಿ ಕೇವಲ ಆನಂದವೇ ಆನಂದವಿದೆ. ಅಂಥದ್ದೊಂದು ಕ್ಷೇತ್ರಕ್ಕೆ ಶರೀಫರು ಜೀವನ ಸಂತೆಯಲ್ಲಿ ಸಿಕ್ಕ ಜೀವಾತ್ಮನನ್ನು ಕರೆಯುತ್ತಾರೆ. ಅಯ್ಯಾ ! ಆ ದೇವನ ಪುಣ್ಯ ಸೀಮೆಗೆ ನಿನ್ನನ್ನು ಒಯ್ಯುತ್ತೇನೆ. ಬರುತ್ತೀಯಾ ನನ್ನ ಸಂಗಡ' ಎಂದು ಬಲು ಆತ್ಮೀಯತೆಯಿಂದ ಕರೆಯುತ್ತಾರೆ.

'ಅಲ್ಲೀಕೇರಿಗೆ ಹೋಗೋಣು ಬರ್ತಿರೇನ್ರೇ
ಒಲ್ಲದಿದ್ದರೆ ಇಲ್ಲೇ ಇರ್ತಿರೇನ್ರೇ'

ಎಂದು ಕೇಳುತ್ತಾರೆ. ಲೋಕದ ಜನಗಳೆಲ್ಲ ಕಲ್ಲಾಬಿಲ್ಲಿ ಗೆಳೆತೆಯರಂತೆ; ಯಾರೋ, ಎಲ್ಲಿಯವರೋ ಇಲ್ಲಿ ಬಂದು ಸೇರಿದ್ದಾರೆ. ಅನ್ನದ, ನೀರಿನ ರಕ್ತದ ಋಣಕ್ಕೆ ಒಳಪಟ್ಟು ಇಲ್ಲಿ ಅಣ್ಣ, ತಮ್ಮ, ಅಕ್ಕ, ತಂಗಿ ಗಂಡ ಹೆಂಡತಿ ಎಂಬ ನೆಂಟಸ್ಥಿಕೆಗೆ ಅಂಟಿಸಿಕೊಂಡಿದ್ದಾರೆ. ಈ ಬೀಗತನ, ಬಂಧುತ್ವ ಒಬ್ಬನು ಜೀವಿಸಿರುವವರೆಗೆ ಮಾತ್ರ. ಅವನೊಳಗಿನ ಉಸಿರು ನಿಂತಿತೋ ಈ ಎಲ್ಲ ಸಂಬಂಧ, ಸಾಮೀಪ್ಯಗಳು ಕೂಡಲೇ ಕಳಚಿ ಬೀಳುತ್ತವೆ. ಜೀವರಿಗೆ ಇವರು ನಡುವೆ ಬಂದು ಹೋಗುವ ಬಂಧುಗಳು, ಈ ಜೀವರಿಗೆ ನಿಜವಾದ ನೆಲೆ ಆ ಶಿವನೇ ಆಗಿದ್ದಾನೆ. ಇವನ ಗುರಿ ಅವನನ್ನೇ ಕೂಡುವದಾಗಿದೆ. ಆ ದೇವನ ರಾಜ್ಯಕ್ಕೆ ಬರುವಿರೇನೋ ಒಲ್ಲದಿದ್ದರೆ ಇಲ್ಲೇ ಇರುವಿರೇನೋ' ಎಂದು ಅವರು ಕೇಳುತ್ತಾರೆ.

ಈ ಜೀವನು ಬದುಕಿನ ಹಾದಿಯಲ್ಲಿ ನೂರಾರು ಸಾವಿರಾರು ಸಲ ಹುಟ್ಟಿದ್ದಾನೆ, ಸತ್ತಿದ್ದಾನೆ. ಸಾವಿರಾರು ಸಲ ಅವನು ಬಂದು ಹೋದುದರಿಂದ ಅವನು ಜೀರ್ಣಗೊಂಡಿದ್ದಾನೆ. ಇಂಥ ಜೀವ ಚೈತನ್ಯವನ್ನು ಶರೀಫರು ಹಲವಾರು ಕಡೆಗಳಲ್ಲಿ ಕಾಣುತ್ತಾರೆ. ಬೇರೆ ಬೇರೆ ರೂಪಗಳಲ್ಲಿ ಬದುಕಿಗೆ ಬಂದ ಈ ಚೈತನ್ಯಕ್ಕೆ ಈಗ ಪ್ರಾಯ ಬಂದಿದೆ. ಆ ಶಕ್ತಿಯನ್ನು ಮೊದಲಗಿತ್ತಿಯ ರೂಪದಲ್ಲಿ ಶರೀಫರು ಬದುಕಿನ ಮಾರ್ಗದಲ್ಲಿ ಕಾಣುತ್ತಾರೆ. ಆ ಚೈತನ್ಯವನ್ನು ಆತ್ಮೋದ್ಧಾರದತ್ತ ತಳ್ಳದೆ, ಬದುಕಿನತ್ತಲೇ ಎಲ್ಲರೂ ಕೂಡಿ ನೂಕುತ್ತಾರೆ. ತಾವು ಬಿದ್ದ ತೆಗ್ಗಿನಲ್ಲಿಯೇ ಅದನ್ನೂ ಕೆಡುಹುತ್ತಾರೆ. ಆ ಜೀವಕ್ಕೆ ಇರುಸು ಮುರುಸು. ಅದು ಮುಂದುಗಾಣದೆ ಅಳುತ್ತ ನಿಂತಿದೆ. ಅಂಥ ಅಳುತ್ತ ನಿಂತ ಜೀವಕ್ಕೆ ಶರೀಫರು ಅಳಬೇಡ ಯಾಕೆ ಅಳುತ್ತೀ? ಅತ್ತರೆ ನಿನ್ನನ್ನು ತವರುಮನೆಯವರು ಇಟ್ಟುಕೊಳ್ಳುತ್ತಾರೆಯೇ? ಎಲ್ಲರೂ ನಿನ್ನನ್ನು ಸಂಸಾರದ ಕೆಸರಿನಲ್ಲಿ–ರಾಡಿಯಲ್ಲಿ ತಳ್ಳುವವರೇ ಆಗಿದ್ದಾರೆ. ಆದಕ್ಕೆ ಬದಲಾಗಿ ಆತ್ಮೋದ್ಧಾರದ ಹಾದಿ ಹೇಳಿಕೊಟ್ಟು, ಪಾರಮಾರ್ಥಿಕದತ್ತ ನಡೆಸುವವರೇ ಇಲ್ಲವಲ್ಲ! ಎಂದು

ಶರೀಫರು ಆ ಚೇತನೆಯನ್ನು ರಮಿಸುತ್ತಾರೆ. ಸಮಾಧಾನ ನೀಡುತ್ತಾರೆ. ಎಲೇ ಜೀವವೇ, ನೀನು ಅಳುವುದಾದರೂ ಯಾತಕ್ಕೆ? ಯಾರಿಗಾಗಿ? ಏನು ಕಾರಣ? ಹುಟ್ಟಿದ ಮನೆ, ಹೆತ್ತ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಬಂಧು-ಬಳಗ ಬಿಟ್ಟು ಹೋಗಬೇಕಾಯಿತೆಂದು ನೀನು ಅಳುತ್ತೀಯಾ? ಇಲ್ಲವೆ ಯಾವುದೋ ಒಂದು ಮನೆಗೆ ಹೋಗಬೇಕು. ಅಲ್ಲಿ ಗಂಡನೆಂಬುವನು ಎಂಥವನೋ! ಅವನ ಸಂಸ್ಕಾರ ಎಂಥದ್ದೋ! ಅತ್ತೆ ಮಾವಂದಿರು ತನ್ನನ್ನು ಪ್ರೀತಿಯಿಂದ ನೋಡಬಹುದೇ! ತನ್ನ ಜೀವನ ಇನ್ನೊಬ್ಬರ ಮನೆಯಲ್ಲಿ: ಆ ಮನೆ ತನ್ನದಾಗುವವರೆಗೆ ತಾನು ನೆಮ್ಮದಿಯಿಂದ ಇರಬಹುದೇ ಎಂದು ಅಳುತ್ತಿಯಾ ? ಎಲೇ ಚೈತನ್ಯವೇ! ಈ ಮನೆ, ಬಂಧು ಬಳಗ ಬಾಂಧವರು ಇವರು ನಡುವೆಯೇ ಬಂದು, ನಡುವೆಯೇ ಹೋಗುವವರು. ಇವರಿಗಾಗಿ ನೀನು ಅಳುವದಾದರೆ ಅಳಬೇಡ, ಜೀವದ ನಿಜವಾದ ಕೊನೆಯ ಸ್ಥಾನ ಆ ಶಿವನನ್ನೇ ಹೋಗಿ ಸೇರಬೇಕಾದುದು. ಅವನೇ ಶಾಶ್ವತ ಆಧಾರ, ಆಶ್ರಯ. ಅವನಿಗಾಗಿ ಅಳುತ್ತಿದ್ದರೆ ನಿನ್ನ ಅಳುವಿಗೆ ಒಂದು ಕಿಮ್ಮತ್ತು ಇರುತ್ತಿತ್ತು. ಲೌಕಿಕವಾಗಿ ಬಂದು ಹೋಗುವ ಈ ಪ್ರಾಪಂಚಿಕ ಸ್ಥಿತಿಗೆ ಅಳುವದಾದರೆ ಅಳಬೇಡ ಎಂದು ಶರೀಫರು ಆ ಜೀವ ಚೈತನ್ಯಕ್ಕೆ ಸಮಾಧಾನಪಡಿಸಿದರು.

ಅದೇ ಜೀವ ಚೈತನ್ಯವನ್ನು ಶರೀಫರು ಸಂಸಾರದ ಸಂತೆಯಲ್ಲಿ, ಜನಗಳ ಗದ್ದಲದ ಮಧ್ಯದಲ್ಲಿ, ಒದರಾಟ, ಚೀರಾಟಗಳ ನಡುವೆ ಗುರುತಿಸಿದರು. ಬಾಳ ಬೀದಿಯಲ್ಲಿ ಮೊದಲಗಿತ್ತಿಯಾಗಿ ಅಳುತ್ತ ನಿಂತ ಅದೇ ಚೈತನ್ಯವೇ ಈಗ ಸಂಸಾರದ ಕುಲುಮೆಯಲ್ಲಿ ಕುದಿದಿದೆ. ಅದರ ಯೌವನ ಕರಗಿದೆ. ಕಸುವು ಕಡಿಮೆಯಾಗಿದೆ. ಲವಲವಿಕೆ ಇಲ್ಲವಾಗಿದೆ. ಈಗ ಮುಪ್ಪು ಆವರಿಸಿದೆ. ಕಣ್ಣ ದೃಷ್ಟಿ ಮಂಜಾಗಿವೆ. ಕಿವಿ ಕೇಳುತ್ತಿಲ್ಲ. ದೇಹ ಸೊರಗಿದೆ. ಬೆನ್ನು ಬಾಗಿದೆ. ತಲೆ ಬೆಳ್ಳಗಾಗಿದೆ. ನಡ ಬಗ್ಗಿದೆ. ತೊಗಲು ಜೋತು ಬಿದ್ದಿದೆ. ಬಾಯಿ ಬಚ್ಚಾಗಿದೆ. ಆದರೂ ಆ ಹಣ್ಣು ಹಣ್ಣು ಜೀವ ಇನ್ನೂ ಜೀವನದ ಸವಿಯನ್ನು ಸವಿಯಲು ಹಸಿದಿದೆ. ಹಾತೊರೆಯುತ್ತಿದೆ. ಇಡೀ ಆಯುಷ್ಯವೆಲ್ಲ ಆ ಜೀವ ಏನೇನೋ ಕಂಡಿತು. ಏನೇನೋ ಉಂಡಿತು. ನೂರು ಸಾವಿರ ಸಾವಿರ ಬಾರಿ ತೊಗಲ ಸುಖ ಸವಿದಿತು. ಆದರೂ ಅದರ ಭೋಗಾಕಾಂಕ್ಷೆ ಕಳೆದಿಲ್ಲ, ಕಡಿಮೆಯಾಗಿಲ್ಲ. ನಡೆಯಲು ಆಗದಿದ್ದರೂ ಜನಗಳ ನೂಕು ನುಗ್ಗಲಾಟದಲ್ಲಿ ಆ ಮುದಿ ಜೀವ ಬಂದಿದೆ. ಗದ್ದಲದಲ್ಲಿ ಬೀಳುತ್ತ ಏಳುತ್ತ ಸಾಗಿದ ಈ ಹಣ್ಣುಹಣ್ಣಾದ ಜೀವ ಚೈತನ್ಯವನ್ನು ಶರೀಫರು ಕೈ ಹಿಡಿದು, 'ಅಬೇ ಬಿದ್ದಿಯಬೇ' ಎಂದು ಹಾಡಿದರು.

ಹುಲಗೂರ ಸಂತಿ, ಅಲ್ಲಿ ಕಂಡ ಮುದಿಕಿ ಬಾಹ್ಯ ಜಗತ್ತಿನ ಅಲ್ಪ ಕ್ಷುದ್ರವೆನ್ನುವ ಪ್ರತಿಮೆಯಾಗಿದೆ. ಸಂಸಾರವೇ ದೊಡ್ಡದಾದ ಒಂದು ನಿರಂತರ ಸಂತೆ. ಜೀವಿಗಳು ಇಲ್ಲಿಗೆ ಎಂದಿನಿಂದಲೋ ಬರುತ್ತಲೇ ಇದ್ದಾರೆ. ಬಂದವರು ಕೆಲವು ಕಾಲ ಇದ್ದು ಉಂಡು ತಿಂದು ಏನೇನೋ ಮಾಡಿ ಹೋಗುತ್ತಾರೆ. ಅವರು ಹೋಗುತ್ತಾರೆ ತಿರುಗಿ ಬರಲಿಕ್ಕೆ. ಅವರು ತಿರುಗಿ ಬರುತ್ತಾರೆ, ಬರಿ ಹೋಗುವದಕ್ಕೆ. ಇಂಥ ಬರಹೋಗುವ, ಹುಟ್ಟಿ

ಸಾಯುವ ಈ ಅವಸ್ಥೆ, ಈ ಹೋರಾಟವನ್ನು, ಹೆಣಗಾಟವನ್ನು ನಿಲ್ಲಿಸಬೇಕಾಗಿದೆ. ಈ ಜೀವಕ್ಕೆ ಸಂತೆಯಲ್ಲಿ ಒಬ್ಬ ಸಮರ್ಥ ಗುರು ಇಲ್ಲ, ಹಾದಿ ತೋರುವವರಿಲ್ಲ. ಆ ಜೀವಕ್ಕೆ ಅಭಯ ನೀಡುವವರಿಲ್ಲ. ಬಿದ್ದರೆ ಎಬ್ಬಿಸುವವರಿಲ್ಲ. ಇಂಥ ಅಸಹಾಯಕ, ಅಶಕ್ತ, ನಾಜೂಕಾದ ಜೀವ ಚೈತನ್ಯಕ್ಕೆ ಶರೀಫರು 'ಬಿದ್ದಿಯಬೇ' ಎಂದು ಎಚ್ಚರಿಸುತ್ತಾರೆ. ಅನಾಥವಾದ ಆ ಜೀವಕ್ಕೆ ಕೈಹಿಡಿದು, ಅಭಯ ನೀಡಿ, ಅರುಹಿನ ಹಾದಿ ತೋರುವ, ಬೆಳಕು ನೀಡುವ ಗುರುವಾಗಿ ಶರೀಫರು ದೊರಕುತ್ತಾರೆ.

ಈ ಜೀವ ಹೀಗೆ ಅಧೋಮುಖವಾಗಿ ಸಾಗುವದಕ್ಕೆ ಪಾರಮಾರ್ಥಿಕದತ್ತ ಅದಕ್ಕೆ ಹೋಗದೆ ಇರುವದಕ್ಕೆ ಒಂದು ಮುಖ್ಯ ಕಾರಣ: ಅದಕ್ಕೆ ಊರ್ಧ್ವಮುಖವಾಗಿ ಬೆಳೆಯುವಂತೆ ಮಾರ್ಗದರ್ಶನ ಮಾಡುವ ಸದ್ಗುರು ದೊರಕದೇ ಇದ್ದದು; ಅಲ್ಲದೆ ಮನುಷ್ಯ ದೇಹದ ರಚನೆಯೂ ಮಗದೊಂದು ಕಾರಣವಾಗಿರಲೂ ಸಾಕು. ಮನುಷ್ಯನ ದೇಹದಲ್ಲಿರುವ ಪಂಚೇಂದ್ರಿಯಗಳೆಲ್ಲ ಹೊರ ಮುಖವಾಗಿಯೇ ಇವೆ. ಅವುಗಳು ಪ್ರಾಕೃತಿಕವಾಗಿಯೇ ಹೊರಮುಖವಾಗಿವೆ. ಅದರಿಂದ ಅವುಗಳ ಗಮನ ಸರಳವಾಗಿ, ಸುಲಭವಾಗಿ, ಯಾವ ಪ್ರಯತ್ನವಿಲ್ಲದೆ ಹೊರಕ್ಕೆ ನೆಗೆಯುತ್ತವೆ. ಕಣ್ಣು ಹೊರಗೇ ನೋಡಲು ಹಾತೊರೆಯುತ್ತದೆ. ಕಿವಿ ಹೊರಗಿನದನ್ನೇ ಕೇಳಲು ಎಳಸುತ್ತದೆ. ಈ ಇಂದ್ರಿಯಗಳು ತಮ್ಮಷ್ಟಕ್ಕೆ ತಾವೇ ಹೊರಗೆ ನೋಡುವಂತೆ ಒಳಗೆ ನೋಡವು. ಹಾಗೆ ಒಳಮುಖವಾಗಿ ಈ ಇಂದ್ರಿಯಗಳು ನೋಡಬೇಕಾದರೆ ಅವುಗಳಿಗೆ ತರಬೇತಿ ಬೇಕು ಮಾರ್ಗದರ್ಶನದ ಅವಶ್ಯಕತೆಯಿದೆ. ಸಮರ್ಥ ಸದ್ಗುರು ಬೇಕು. ಆತ್ಮೋದ್ಧಾರದ ಹಸಿವು ಹುಟ್ಟಬೇಕು; ಹೆಚ್ಚಬೇಕು.

ವ್ಯಕ್ತಿಯಲ್ಲಿ ಹೀಗೆ ಉದ್ಧಾರದ ಹಸಿವು ಹೆಚ್ಚಿದಾಗ ಆತನು ಆ ದೇವನೆಡೆಗೆ ಹೊರಳಬೇಕು. ಶರೀಫರು ಅಂಥ ಚೇತನವನ್ನು–

"ನಡಿಯೋ ದೇವರ ಚಾಕರಿಗೆ| ಮುಕ್ತಿ–
ಗೊಡೆಯ ಖಾದರಲೀಗ ನೆಲಸಿರ್ಪ ಗಿರಿಗೇ"

ಎಂದು ಕರೆಯುತ್ತಾರೆ. ಮನುಷ್ಯನು ಜೀವಿಸಿರುವಷ್ಟು ಕಾಲ ಯಾರ್‍ಯಾರದೋ ಬಳಿ ನೌಕರಿ ಮಾಡುತ್ತಾನೆ. ಕೆಲಸಕ್ಕಿರುತ್ತಾನೆ. ತನ್ನ ಒಡಲು, ತನ್ನವರ ಒಡಲಿಗಾಗಿ ದುಡಿಯುತ್ತಾನೆ. ಈ ಕೆಲಸದಿಂದ ಈ ದುಡಿತದಿಂದ ಆತ್ಮತೃಪ್ತಿ ಇಲ್ಲ. ಉದ್ಧಾರವಿಲ್ಲ. ಆದರಿಂದ ಶರೀಫರು ಮನುಷ್ಯನ ಸೇವೆ ಮಾಡುವದರಿಂದ ಹೊಟ್ಟೆಗೆ ಹಿಟ್ಟು ಸಿಗಬಹುದು. ಮೈಗೆ ಬಟ್ಟೆ ಸಿಗಬಹುದು. ಆದರೆ ಆತ್ಮಕ್ಕೆ ಬೆಳಕಿಲ್ಲ. ಅದಕ್ಕಾಗಿ ಎಲೇ ಜೀವವೇ ಮನುಷ್ಯನ ಬಳಿ ನೌಕರಿ ಮಾಡುವದಕ್ಕಿಂತ, ಮಹಾದೇವನ ಚಾಕರಿ ಮಾಡು. ಅದರಿಂದ ನಿನಗೆ ತೃಪ್ತಿಯೆಂದು ಸಾರುತ್ತಾರೆ.

ಆತ್ಮೋದ್ಧಾರದ ಹಂಬಲ ಹೊತ್ತ ಶರೀಫರು ಸಂಸಾರದ ಕೆಸರಲ್ಲಿ ತಮ್ಮ ಕಾಲುಗಳನ್ನು ಇಟ್ಟಿದ್ದರೂ, ಅವರ ತಲೆ, ವಿಚಾರಗಳು ಆಕಾಶದೆತ್ತರದಲ್ಲಿದ್ದವು. ಶರೀಫರು ಸಂಸಾರಿಗಳಾಗಿದ್ದರು. ಮಡದಿ ಮಕ್ಕಳು ಅವರಿಗಿದ್ದರು. ಸಂಸಾರವಿತ್ತು, ಬಡತನ, ತಾಪ

ತ್ರಯು, ಸಾಲ, ಶೂಲ, ಮಾನಾಪಮಾನಗಳಿದ್ದವು. ಇವೆಲ್ಲವುಗಳಿದ್ದರೂ ಅವರು ಅವನ್ನೆಲ್ಲ ಮೆಟ್ಟಿ ಮುಂದೆ ನಡೆದಿದ್ದರು. ಸಂಸಾರದ ಬೇಕು ಬೇಡಗಳಿಗೆ ಸ್ಪಂದಿಸುತ್ತಿದ್ದ ಅವರೂ ಸಂಸಾರದ ಸಂತೆಗೆ ಹೋದರು.

"ನೋಡೋಣು ಬಾ ಗೆಳತಿ,
ನಾಡೋಳ್ ಹುಲಗೂರ ಸಂತಿ
ಬಾಡ ಮಾರುವವರ ಬಡಿವಾರ ಬಹಳೈತೀ"

ಎಂದು ಸಂತೆಯನ್ನು ಬಣ್ಣಿಸುತ್ತಾರೆ. ಲೌಕಿಕದ ಸಂತೆಯಲ್ಲಿ ಒಬ್ಬಳು ಹೆಣ್ಣುಮಗಳು ಕಾಯಿಪಲ್ಲೆ, ಬೆಂಡಿ, ಬದನಿ, ಚವಳಿ, ಕುಂಬಳಕಾಯಿ, ಹರಿಪಲ್ಲೆ, ಮೆಂತೆಸೊಪ್ಪು ಹಚ್ಚಿಕೊಂಡು ಕುಳಿತಿದ್ದಾಳೆ. ಈ ಎಲ್ಲ ವಸ್ತುಗಳು ಮೊದಲ ದಿವಸ ಚೆನ್ನಾಗಿರುತ್ತವೆ. ಎರಡನೇ ದಿವಸ ಬಾಡುತ್ತವೆ. ದಿನಗಳೆದಂತೆ ಅವೆಲ್ಲ ಹಾಳಾಗುತ್ತವೆ. ಅದರಂತೆಯೇ ಸಂಸಾರದ ಸಂತೆಯಲ್ಲಿ ಮಹಾ ಮಾಯೆಯೆಂಬ ಹೆಣ್ಣುಮಗಳು ಹೊನ್ನು, ಹೆಣ್ಣು, ಮಣ್ಣುಗಳೆಂಬ ವಸ್ತುಗಳನ್ನು ಹರವಿಕೊಂಡು ಕುಳಿತಿದ್ದಾಳೆ. ಅವಳೇ ಜೀವಿಗಳನ್ನು ತನ್ನತ್ತ ಸೆಳೆದುಕೊಳ್ಳುತ್ತಾಳೆ. ಇಂಥ ಸಂಸಾರದ ಸಂತೆಯೊಳಗೆ ಶರೀಫರು ನಡೆದರು. ಪ್ರಾಪಂಚಿಕರ ಮಧ್ಯೆ ಈ ಪಾರಮಾರ್ಥಿಕ ಸಂಸಾರಿ ತಮ್ಮೊಳಗೇ ತಾವಾಗಿ ನಡೆದರು. ಅವರ ಸಂಸ್ಕಾರ ಮಂತ ಮನಕ್ಕೆ, ಬದುಕಿನ ಪ್ರಖರ, ನಿಖರ ಸತ್ಯವನ್ನು ತಿಳಿದಿದ್ದ ಅವರಿಗೆ ಸಾವು ನೋವು ಯಾವ ಪರಿಣಾಮವನ್ನೂ ಉಂಟು ಮಾಡಲಿಲ್ಲ.

ಕಡೆಗಾಲದಲ್ಲಿ ಗೋವಿಂದ ಭಟ್ಟರ ಸ್ಥಿತಿ ಚೆನ್ನಾಗಿರಲಿಲ್ಲ. ಅವರಿಗೆ ಅಸ್ತಮಾ ಕಾಡುತ್ತಿತ್ತು. ಅವರು ತಮ್ಮ ಶರೀರ ಬಿಡುವ ಮೊದಲು ತಮ್ಮ ಮನೆಯ ಕೀಲಿಕೈ ತಕ್ಕ ವಾರಸುದಾರನಿಗೆ ಕೊಡಲು ನಿರ್ಧರಿಸಿದರು. ತಮ್ಮ ಶಿಷ್ಯರಲ್ಲಿ ಟೊಳ್ಳು ಎಷ್ಟು? ಗಟ್ಟಿ ಎಷ್ಟು? ಎನ್ನುವ ಒಂದು ಪರೀಕ್ಷೆ ಯಾರಿಗೂ ತಿಳಿಯದಂತೆ ನಡೆಸಿದರು. ಗೋವಿಂದ ಭಟ್ಟರ ಪಾಲಿಗೆ ಬಂದದ್ದು ಒಂದು ಮುರಕ ಮನೆ, ಹರಕ ಚಾಪಿ, ಒಡಕ ಗಡಿಗೆ ಪರ್‍ಯಾಣ; ಅವರ ಹಾಸಿಗೆಯ ಬಳಿ ಅವರ ಆಸ್ತಿಯ ಮೇಲೆ ಕಣ್ಣಿಟ್ಟ ಶಿಷ್ಯರೇ ಸೇರಿಕೊಂಡಿದ್ದರು. ಅವರು ಸೇವೆ ಮಾಡಿದ ನೆಪದಲ್ಲಿ ಗೋವಿಂದ ಭಟ್ಟರ ಆಸ್ತಿಯ ಕೀಲಿಕೈ ಪಡೆಯುವ ಆತುರದಲ್ಲಿದ್ದರು. ಇಂಥ ಶಿಷ್ಯರನ್ನೆಲ್ಲ ಗೋವಿಂದ ಭಟ್ಟರು ಕರೆಸಿದರು. 'ಅಪ್ಪಗಳಿರಾ! ಈ ಮನೆ ಖಾಲೀ ಮಾಡತೀನಿ; ಕೀಲಿಕೈ ಶರೀಫಗೆ ಕೊಡಬೇಕಾಗಿದೆ. ಅವನೆಲ್ಲಿದ್ದಾನೆ ನೀವು ಕರೆದು ತನ್ನಿರಿ' ಎಂದರು. ಆಗ ಶಿಷ್ಯರೆಲ್ಲರೂ ಶರೀಫರನ್ನು ಕರೆತರಬಾರದು ಕಡೆಗಾಲದಲ್ಲಿ ಅವನನ್ನು ಇಲ್ಲಿಗೆ ಬರಗೊಡದಂತೆ ನೋಡಿಕೊಳ್ಳಬೇಕು ಎಂದು ಯೋಚಿಸಿದ್ದರು. ಅದರಿಂದ ಅವರು, 'ಗುರುಗಳೇ ಶರೀಫನನ್ನು ಎಲ್ಲ ಕಡೆಗೂ ಹುಡುಕಿದೆವು. ಅವನು ಎಲ್ಲಿಯೂ ಸಿಗಲಿಲ್ಲ. ಏನು ಕೊಡುತ್ತೀರೋ ನಮಗೆ ಕೊಡಿರಿ!' ಎಂದರು. ಕತ್ತಲೆಯ ಮೊತ್ತದಂತಿರುವ ನೀವು ಬೆಳಕಿನ ರಾಶಿಯಾಗಿರುವ ಆ ಶರೀಫರನ್ನು ಎಷ್ಟು ದಿವಸ ಹುಡುಕಿದರೆ ಸಿಗಬಹುದೋ ಎಂದು ನುಡಿದ ಗೋವಿಂದ ಭಟ್ಟರು ಶರೀಫರನ್ನು

ಶರೀಫಾs ಎಂದು ಕೂಗಿ ಕರೆದರು. ಎರಗುಪ್ಪಿಯಲ್ಲಿ ದೊಡ್ಡಾಟ ಆಡಿಸುತ್ತಿದ್ದ ಶರೀಫರಿಗೆ ಗುರುಗಳ ಕರುಳಿನ ಕೂಗು ಕೇಳಿಸಿತು. ಓಡಿಬಂದರು. 'ಶರೀಫಾs ಹೋಗತದ ಹಿಡಕೋ' ಎಂದರು. ವಾಂತಿ ಆಯಿತು. ಬೊಗಸೆಯನೊಡ್ಡಿದರು. ಗುರು ಕೃಪೆಯನ್ನು ಹಿಡಿದು ಕೊಂಡರು. ಯಾರೂ ತುಳಿಯದ ಸ್ಥಳದಲ್ಲಿ ಚೆಲ್ಲಲು ಗುರುಗಳು ಹೇಳಿದ್ದರು. ಶರೀಫರು ಕ್ಷಣ ಕಾಲ ಚಿಂತಿಸಿದರು; ತಮ್ಮ ಎದೆಯ ಅಂಗಳದಲ್ಲಿ ಯಾರೂ ಪಾದಾ ಇಟ್ಟಿಲ್ಲ. ಅಲ್ಲಿಯೇ ಜೋಪಾನವಾಗಿ ಇಟ್ಟುಕೊಳ್ಳಲು ಹವಣಿಸಿ ಅದನ್ನು ಗಟಗಟ ಕುಡಿದು, ಮೈಕೈಗೆ ಒರೆಸಿಕೊಂಡರು. ಗುರುಗಳ ಕಫಾ-ಕೃಪೆಯಾಗಿತ್ತು; ಉಳಿದವರಿಗೆ ಹೇಸಿಗೆ ಎನಿಸಿತ್ತು. ಶರೀಫರಿಗೆ ಅದು ಹಸನಾದ ಹಸಾದವಾಗಿತ್ತು. ಸಂತಸಗೊಂಡ ಗುರುಗಳು ಶರೀಫರ ತೊಡೆಯ ಮೇಲೆ ತಲೆಯಿಟ್ಟು ದೇಹಬಿಟ್ಟರು. ಆಗ ಶರೀಫರು 'ದೊರಕಿದಾ ಗುರು ದೊರಕಿದಾ!' ಎಂದು ತಮಗಾದ ದೈವೀ ಆನಂದವನ್ನು ಹಾಡಿಕೊಂಡರು. ಗುರು ಶಿಷ್ಯರ ಮನೆಗೆ ಬಂದರು. ಗುರುಗಳ ಪರೀಕ್ಷೆಯಲ್ಲಿ ಗಟ್ಟಿ ಶಿಷ್ಯ-ಶರೀಫರು ಗೆದ್ದಿದ್ದರು. ಗುರುವಿನ ಆತ್ಮಾನಂದದ ಅರಮನೆಗೆ ಅಧಿಕಾರಿಗಳಾಗಿದ್ದರು.

ಆತ್ಮಾನಂದದ ಅಮೃತವನ್ನು ಹೃದಯದ ತುಂಬ ತುಂಬಿಕೊಂಡಿದ್ದ ಶರೀಫರವಾಣಿ ಪ್ರಾಸಾದಿಕವಾಣಿ. ಅವರು ತತ್ವಪದಗಳಿಗೆ ವಸ್ತುಗಳನ್ನು ಹುಡುಕಲು ದೂರ ಹೋಗ ಲಿಲ್ಲ. ಜೀವನದ ಹಾದಿಯಲ್ಲಿ ಎಲ್ಲೆಂದರಲ್ಲಿ ಸುಲಭವಾಗಿ, ಸಾಮಾನ್ಯವಾಗಿ ಕಣ್ಣಿಗೆ ಬೀಳುವ ಸಾಮಾನ್ಯ ಸಂಗತಿಗಳೇ ಅವರಿಗೆ ಕಾವ್ಯಕ್ಕೆ ವಸ್ತುಗಳಾದವು. ಕೋಳಿ, ಕುರಿ, ಪಾರಿವಾಳ, ಬೆಳವ, ಮೊದಲಗಿತ್ತಿ, ಸಂತೆಯ ಮುದಿಕಿಯರು ಕಾವ್ಯ ಕ್ಷೇತ್ರಕ್ಕೆ ಬಂದರು. ತಮ್ಮ ಲೌಕಿಕ ಕೊಳಕತನವನ್ನು ಕಳೆದುಕೊಂಡರು. ಶರೀಫರು ಅವುಗಳಲ್ಲಿ ಆತ್ಮಾನಂದದ ಅಮೃತವನ್ನು ತುಂಬಿದರು. ಅದರಿಂದಾಗಿ ಆ ಸಣ್ಣ ಸಣ್ಣ ಕ್ಷುಲ್ಲಕ ವಸ್ತುಗಳು ತಮ್ಮ ಅಲ್ಪತೆಯನ್ನು ಕಳೆದುಕೊಂಡು, ಆಧ್ಯಾತ್ಮದ ಮೆರಗಿನಿಂದ ಕಂಗೊಳಿಸತೊಡಗಿದವು. ಅದರಿಂದ ಅವು ಆನಂದದ ಆಗರಗಳೆನಿಸಿದವು. ಈ ವಸ್ತುಗಳನ್ನು ಉಚ್ಚರಿಸುವಾಗಲೇ ಅವುಗಳ ಲೌಕಿಕ ಅರ್ಥ ಮರೆಯಾಗಿ, ಕೂಡಲೇ ಓದುಗರ ಬಗೆಗಣ್ಣೆದುರು ಪಾರಮಾರ್ಥಿಕ ಅರ್ಥವೇ ಕುಣಿಯುವಂತಾಗುತ್ತದೆ. ಹೊರಮೈಯ್ಯ ಅರ್ಥಕ್ಕಿಂತ, ಒಳಮೈ ಅರ್ಥವೇ ನಮ್ಮ ಒಳಗಣ್ಣೆದುರು ಬಂದುನಿಲ್ಲುತ್ತದೆ. ಆತ್ಮಜ್ಞಾನಿಯ ಅಂತರಂಗದ ಅನುಭವಗಳೇ ರಮ್ಯ ಕವನಗಳಾಗಿ, ಕವಿಯ ಎದೆಯಿಂದ ಚಿಮ್ಮಿ ಬಂದುದನ್ನು ನಾವು ಅರಿಯುತ್ತೇವೆ. ಅವರ ಪದಗಳಲ್ಲಿಯ ಒಳಗುಟ್ಟು ಏನೆಂದರೆ ಲೌಕಿಕ ಪದಗಳ ಅಡಿಗಳಲ್ಲಿಯೇ ಪಾರಮಾರ್ಥಿಕ ಅರ್ಥ ತುಂಬಿ ತುಳುಕುತ್ತಿರುವದು. ಅವರ ಹಾಡುಗಳು ಒಂದು ಅರ್ಥದಲ್ಲಿ, ಒಂದು ನಿಟ್ಟಿನಲ್ಲಿ ನೋಡಿದಾಗ ವ್ಯಕ್ತಿಗತ ಎನಿಸಿದರೆ ಮಗುದೊಂದು ನಿಲುವಿನಲ್ಲಿ ಅವು ಸರ್ವಮಾನ್ಯ ವಿಶ್ವಮಾನ್ಯ ಎಂದು ಹೇಳಬಹುದು. ಅವು ಬರಿ ಹಾಡುಗಳಲ್ಲ ಆತ್ಮಾನಂದದ ಅಮೃತ ಕೆನೆ, ರಸಪಾಕ, ಅಧರಕ್ಕೂ ಸಿಹಿ; ಅಂತೆಯೇ ಉದರಕ್ಕೂ ಸಿಹಿ.

ಹಾನಗಲ್ಲ ಶ್ರೀ ಕುಮಾರ ಮಹಾಶಿವಯೋಗಿಗಳ ಭಾವಗೀತೆಗಳು

—ಶಿವಯೋಗಿ

ಕನ್ನಡಿಗರು ಚದುರರು, 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿ'ಗಳೆನ್ನುವುದಕ್ಕೆ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು ಹಿರಿಯ ನಿದರ್ಶನವಾಗಿದ್ದಾರೆ. ಶ್ರೀಗಳವರಲ್ಲಿ ಬಹುಮುಖವಾದ ಪ್ರತಿಭೆ ಇದ್ದಿತು. ಅವರು ಹೆಚ್ಚಿನ ಪ್ರೌಢ ವ್ಯಾಸಂಗವನ್ನು ಮಾಡಿದವರಲ್ಲ, ಸ್ಕೂಲು-ಕಾಲೇಜುಗಳನ್ನೂ ಕಂಡವರಲ್ಲ. ಆದರೆ ಅವರಲ್ಲಿ ಕವಿತ್ವ ಶಕ್ತಿಯು ಸಹಜವಾಗಿಯೇ ಮೂಡಿಬಂದಿದ್ದಿತು. ನಿಜಗುಣರ 'ಕೈವಲ್ಯ ಪದ್ಧತಿ'ಯ ಅನುಭವ ಪದಗಳೆಲ್ಲ ಶ್ರೀಗಳವರಿಗೆ ಕಂಠಸ್ಥವಾಗಿದ್ದವು; ಅವುಗಳ ಅರ್ಥವು ಅವರ ನಿತ್ಯದ ನಡೆ ನುಡಿಗಳಲ್ಲಿ ಸ್ಪಷ್ಟವಾಗಿ ರೂಪುಗೊಂಡಿದ್ದಿತು. ಅದರಿಂದ ಆಗಾಗ ಸಮಯ ಸಿಕ್ಕಾಗ ಶ್ರೀಗಳವರು ಕೆಲವು ಅನುಭವದ ಪದಗಳನ್ನು ರಚಿಸುವ ರೂಢಿಯನ್ನಿಟ್ಟುಕೊಂಡಿದ್ದರು. ಅವರ ದಿವ್ಯ ಬಾಳಬೆಳಗಿನಲ್ಲಿ ಎಷ್ಟೋ ಜನ ಕವಿಗಳಾದುದುಂಟು. ಕವಿತ್ವವೂ ಒಂದು ಕಲೆ. ಅದನ್ನು ಸಾಧಿಸುವಂತೆ ಶ್ರೀಗಳವರು ಮಂದಿರದ ಸಾಧಕರಿಗೆ ಪ್ರೇರಣೆಯನ್ನು ಕೊಟ್ಟು ಮುನ್ನಡೆಯಿಸುತ್ತಿದ್ದರು. ಲಿಂ. ದ್ಯಾಂಪುರದ ಚೆನ್ನಕವಿಗಳು, ಹುಕ್ಕೇರಿಯ ಸದಾಶಿವ ಶಾಸ್ತ್ರಿಗಳು, ದ್ಯಾಂಪುರದ ಮಹಾಲಿಂಗಯ್ಯನವರು ಶ್ರೀಗಳವರ ಮಾರ್ಗದೋರಿಕೆಯಲ್ಲಿ ಮುಂದುವರಿದು ಕವಿತ್ವಶಕ್ತಿಯನ್ನು ಸಂಪಾದಿಸಿದವರು.

ಋಷಿಯಾಗದವನು ಕವಿಯಾಗನು—ಎಂಬ ಮಾತು ತಾತ್ತ್ವಿಕವಾಗಿದೆ. ತತ್ತ್ವದರ್ಶಿಗಳಾದ ಶ್ರೀಗಳವರು ಶಿವಯೋಗಿಯಾಗಿದ್ದರು, ಪರಮರ್ಷಿಯಾಗಿದ್ದರು. ಶ್ರೀಗಳವರು ಜೀವನದ ಸಿಹಿ-ಕಹಿಗಳನ್ನು ಅನುಭವಿಸಿ ಅವೆರಡನ್ನೂ ಮೀರಿ ನಿಂತ ರಸಯೋಗಿಯಾಗಿದ್ದರು. ಅವರ ಅನುಭವ ಅಂತರಾಳದಿಂದ ಭಾವಗೀತೆಗಳ ರೂಪದಲ್ಲಿ ಹೊರಹೊಮ್ಮುತ್ತಿತ್ತು. ತತ್ತ್ವನಿರೂಪಣೆ, ತನ್ಮಯತೆ, ಪ್ರಾರ್ಥನೆ ಎಲ್ಲವೂ 'ಶಿವಯೋಗ'ದ ಮುದ್ರೆಯೊಂದಿಗೆ 'ರಸತರಂಗಿಣಿ'ಯ ಹೊನಲಾಗಿ ಹರಿದು ಬರುತ್ತಿದ್ದವು.

ಈ ಗೀತೆಗಳಲ್ಲಿ ಶ್ರೀಗಳವರು ಬಳಸಿದ ಭಾಷೆ ಅಚ್ಚಗನ್ನಡ. ಅವರಂತೆಯೇ ಅವರ ಭಾಷೆಯೂ ನಿರಾಡಂಬರ. 'ಸುಲಿದ ಬಾಳೆಯ ಹಣ್ಣ'ನಂತೆ ಅವರು ಪದಗಳಲ್ಲಿ ಬಳಸಿದ ಭಾಷೆಯೂ ಸರಳವಾಗಿದೆ. ಲಲಿತವಾಗಿದೆ. ಭಾವದಲ್ಲಿ ಕಲ್ಪನಾವಿಲಾಸವಿಲ್ಲ. ಅವರ ಭಾವ-ಭಾಷೆ ಎಲ್ಲವೂ ಸಹಜ ಸುಂದರ.

ಶ್ರೀಗಳವರ ಪ್ರಾರ್ಥನೆಯ ಪದಗಳಲ್ಲಿ ಭಾವುಕತೆ-ತಲ್ಲೀನತೆ ತುಂಬಿದೆ. ಎಲ್ಲರೂ ಸುಖಿಗಳಾಗಲಿ, ಒಬ್ಬನೂ ದುಃಖಪಡುವದು ಬೇಡ; ಯಾರೂ ಯಾರನ್ನೂ ನಿಂದಿಸು

ವದು ಬೇಡ; ಎಲ್ಲರೂ ಒಂದಾಗಿ ಚೆಂದಾಗಿ ಬಾಳಲೆಂಬ ವಿಶ್ವಕುಟುಂಬಿಯ ವಿಶಾಲ ಭಾವನೆ ಶ್ರೀಗಳವರ ಈ ಗೀತೆಗಳಲ್ಲಿ ಒಡಮೂಡಿದೆ. ಇಲ್ಲಿ ಶ್ರೀಗಳವರ ಭಾವನೆ ವಚನಕಾರರ ಮಟ್ಟವನ್ನು ಮುಟ್ಟುವಷ್ಟು ಎತ್ತರಕ್ಕೆ ಹೋಗುತ್ತದೆ.

ಒಂದು ಸನ್ನಿವೇಶದ ಚಿತ್ರ ಈ ಮಾತಿಗೆ ನಿದರ್ಶನವಾಗಿ ನಿಲ್ಲುವಂತಿದೆ. ಒಮ್ಮೆ ಶ್ರೀಗಳವರು ಸೊಲ್ಲಾಪುರಕ್ಕೆ ದಯಮಾಡಿಸಿದ್ದರು. ಯಾರೋ ಪ್ರಮಥರ ನಿಂದೆಯನ್ನು ಮಾಡಿದರೆಂದು ಕೇಳಿ ಶ್ರೀಗಳವರ ಮನ ನೊಂದಿತು. 'ನ ಕೇವಲಂ ಯೋ ಮಹತೋಽಪ ಭಾಷತೆ ಶೃಣೋತಿ ತಸ್ಮಾದಪಿ ಯಃ ಸ ಪಾಪಭಾಕ್' ಎಂಬ ಕವಿ ಕಾಲಿದಾಸನ ಉಕ್ತಿಯನ್ನು ಹಲವು ಬಾರಿ ಓದಿಯರಿತ ಶ್ರೀಗಳವರು ಮನದಲ್ಲಿ ಬಹು ಬೇಸರಗೊಂಡು ಶ್ರೀ ಸಿದ್ದರಾಮ ನೆದುರಿನಲ್ಲಿ ಬಂದು ನಿಂದು ಒಂದೆ ಮನದಿಂದ ಹೀಗೆ ಬೇಡುತ್ತಾರೆ.

(ರಾಗ–ಮಾಂಡ)

ಶಿವ ಮಂಗಲವನು ಕೊಡು ಬೇಗ
ಭವ ದುಃಖದಿ ಬಳಲುವೆವೀಗೆ
ಭುವಿಗವತರಿಸಿದ ಕಾರಣವ
ಜವದೊಳು ನೆನೆಯುತೆ ಗುರುದೇವ ||ಪ||

ಮನುಜ ಜನ್ಮವನು ತೊಟ್ಟಿಹೆವು,
ಘನ ಮಹಿಮರ ಪಥ ಬಿಟ್ಟಿಹೆವು.
ಮನದಿ ಹೀನಗುಣ ತೊಡರಿಹವು,
ಮುನಿವಂದ್ಯನೆ ನಮಿಸುತ್ತಿಹೆವು ||೧||

ಹುಟ್ಟಿ ಹುಟ್ಟಿ ಸಾಯುವ್ವದ ನೋಡಿ
ಕಷ್ಟತೆರದಿ ಬಹು ಚರಿಸ್ಯಾಡಿ
ದುಷ್ಟರೆನಿಸಿಕೊಂಬುದ ನೋಡಿ
ಶಿಷ್ಟನೆ ನೀನತಿದಯೆಗೂಡಿ ||೨||

ಇದ್ದ ಗುಣಗಳೆಲ್ಲವ ಮರಸಿ
ಶುದ್ಧ ಗುಣದೆ ಮನವನ್ನಿರಿಸಿ
ಸಿದ್ಧರಾಮ ಗುರುದಯಕರಿಸಿ
ತಿದ್ದುವದತಿ ನೀ ಮುದವಿರಿಸಿ ||೩||

ದೇವ ಸಿದ್ಧರಾಮ! ಕೃಪೆದೋರಿ ಎನ್ನವರ ಮರುಳತನವನ್ನು ಕಳೆದು ಅವರಿಗೆ ಸನ್ಮಂಗಲ ವನ್ನು ನೀಡು–ಎಂದು ಮುಂತಾಗಿ ಶ್ರೀಗಳು ಅನನ್ಯ ಭಾವದಿಂದ ಪ್ರಾರ್ಥಿಸುತ್ತಾರೆ.

ಕವಿಯ ಎದೆದಾಣದ ಆಳವನ್ನು ಅವನ ಕೃತಿಗಳಿಂದಲೇ ಅರಿಯಬೇಕಾಗುವದು. ಶ್ರೀಗಳವರ ಉದಾರ ಹೃದಯವನ್ನು, ಮುಗ್ಧಭಾವವನ್ನು ಅವರ ಗೀತೆಗಳ ಪ್ರತಿ ಪಲ್ಲವಿ ಯಲ್ಲಿಯೂ ಕಾಣಬಹುದಾಗಿದೆ. ಅವರ ಬೋಧೆಯ ಬಗೆಯನ್ನಿಲ್ಲಿ ಕಾಣಿರಿ.

ಮಾನವಾ, ನೀನಾರೋ? ಕಾಯ
ಮನ ಮರುತ ನಿನಗಿವೇನೋ ||ಪ||

ಭ್ರಮಾತ್ಮಕ ಸಂಸಾರವಿದು
ಕುಮತಿಯು ತರಬಿಡದೈಸ
ಮಮತೆಯಿಂ ಬಾಧಿಪ್ರದೈಸೆ ||೧||

ಅನಾದಿ ವೃಥಾ ಮೂಢಮತಿ
ಜನನ ಮರಣದೊಳು ಕೂಡಿ
ಘನಸುಖ ಕೆಡಿಪುದು ನೋಡೋ ||೨||

ಪರಾತ್ಮಕ ಸಂಸಾರವಹ
ಪರ ಶಿವಯೋಗವನ್ನೈದಿ
ಸುರಸ ಸುಖವ ನೀ ಹೊಂದೋ ||೩||

ಶಿವಯೋಗಿಗಳ ಸುಂದರ ಸರಳ ಸಾಹಿತ್ಯವು ಪಂಡಿತರ ಮನ್ನಣೆಗೆ ಪಾತ್ರವಾದಂತೆ ಜನ ಸಾಮಾನ್ಯರ ಪ್ರೇಮಾದರಗಳಿಗೂ ಅರ್ಹವಾಗಿದೆ; ನೀತಿಯ ರೀತಿಯನ್ನು ಗುರುತಿಸಿ ಕೊಡುವ ಸಾಧನವಾಗಿದೆ. ಶ್ರೀಗಳವರ ಈ ಗೀತೆಗಳು ಬಾಳಿನುರಿಯಲ್ಲಿ ಬಳಲಿದ ಮೋಕ್ಷಪಿಪಾಸುಗಳಿಗೆ ಅಮೃತರಸದ ಪಾನ ಮಾಡಿಸುವಂತಿವೆ. 'ಮಾನವಾ ನೀನಾರೋ?' ಎಂದು ಎಚ್ಚರಿಸುವಲ್ಲಿ 'ಆತ್ಮಾವಾ ಅರೇ ದ್ರಷ್ಟವ್ಯಃ' ಎಂಬ ಉಪನಿಷತ್ತಿನ ಮಂತ್ರವೂ, 'ಆರು ನಾನೆಂದು ವಿಚಾರಿಸು' ಎಂಬ ನಿಜಗುಣರ ಉಕ್ತಿಯೂ, "ಅವ್ಯಕ್ತೋಽಯಮ ಚಿಂತ್ಯೋಽಯಮ ವಿಕಾರ್ಯೋಽಯಮುಚ್ಯತೇ, ತಸ್ಮಾದೇವಂ ವಿದಿತ್ವೈನಂ...." ಎಂದು ಹೇಳುವ ಗೀತೆಯ ಬೋಧೆಯೂ ಧ್ವನಿತವಾಗುತ್ತದೆ. ಲಲಿತ ಮತ್ತು ಸರಸ ಪದ ಬಂಧದಿಂದ ಇಲ್ಲಿ ದಿವ್ಯ ಕವನ ಸುಂದರಿಯು (ಸಾತ್ತ್ವಿಕ ಭಾವಗಳ) ಗರಿಗೆದರಿ ನರ್ತಿಸುವ ಮತ್ತ ಮಯೂರನಂತೆ ಮುಮುಕ್ಷು ಪ್ರೇಕ್ಷಕರ ಮನವನ್ನು ಆಕರ್ಷಿಸುವಂತಿದೆ.

ಮನುಷ್ಯನಿಗೆ ಭಕ್ತಿಜ್ಞಾನಗಳ ಸಂಪಾದನೆಯಲ್ಲಿ ಅಭಿರುಚಿಯುಂಟಾಗಬೇಕಾದರೆ ಮೊದಲು ವಿಷಯಗಳೆಂದರೆ ಓಕರಿಕೆಯುಂಟಾಗಬೇಕು, ವಚನಕಾರರ ಷಟ್‌ಸ್ಥಲ-ಸಾಹಿತ್ಯವು ಸಂಸಾರಹೇಯದಿಂದ ಮೊದಲಾಗುತ್ತದೆ, ಇದೆಲ್ಲವನ್ನು ಅನುಭವದ ಆಳಕ್ಕೆ ತಂದುಕೊಂಡ ಶ್ರೀಗಳವರು ಮನಕ್ಕೆ ಬೋಧಿಸುತ್ತಾರೆ: ಈ ಸಿರಿಸಂಪದವೆಲ್ಲ ಕ್ಷಣಿಕವಾದುದು, ಭ್ರಾಂತಿಯಿಂದ ಕೂಡಿದ್ದು. ಮನದ ತಪ್ಪು ಗ್ರಹಿಕೆಗೆ ಕಾರಣವಾದ ಮರವೆಯನ್ನು ಕಳೆದು ಶಿವಯೋಗದ ಬೆಳಗು ಭಾವದಲ್ಲಿ ಮೂಡಿ ಬರುವಂತೆ ಬೆಸಸುತ್ತಾರೆ. 'ಭವ ಬಂಧನ ಭವಪಾಶವಾದ ಕಾರಣವೇನಯ್ಯಾ?' ಎಂಬ ಬಸವಣ್ಣನವರ ವಚನವನ್ನೇ ನಮ್ಮ ನೆನಪಿಗೆ ತಂದುಕೊಡುತ್ತಿದೆ ಈ ಗೀತೆ; ತಂದೆಯು ತನ್ನ ಮಗನನ್ನು ತೊಡೆಯ ಮೇಲಿರಿಸಿಕೊಂಡು ಮೊಗವಿಡಿದು ಮುದ್ದಾಡಿ ಮಮತೆಯಿಂದ ಹಿತವಚನ ನುಡಿಯು

ವಂತಿದೆ. ಇಲ್ಲಿ ವಿಶ್ವಕುಟುಂಬಿಗಳಾದ ಶ್ರೀಗಳವರ ವಾತ್ಸಲ್ಯವನ್ನು ಕಾಣಬಹುದಾಗಿದೆ. ವಿಷಯುವೆಂಬ ಹಸುರಿಗೆ ಆಶೆಪಟ್ಟು ಪಂಕದಲ್ಲಿ ಬಿದ್ದ ಬಡಪಶುವಿನ ಗತಿಯಾಗಿದೆ ಸಂಸಾರಿ ಮಾನವನದು. ಅದನ್ನು ಕಂಡು ಶ್ರೀಗಳವರು ದಯಾಪೂರಿತರಾಗಿ ಈ ಬಗೆಯಾಗಿ ನಿಬೋಧ ಗೀತವನ್ನು ಹಾಡುತ್ತಾರೆ.

ಗೀತವು ಭಾವ ಪ್ರಧಾನವಾದುದು. ಕವಿಯ ಹೃದಯ ತುಂಬಿ ಬಾರದೆ ಅದು ಹೊರಹೊಮ್ಮದು. ಅಂತಹ ಭಾವಪೂರ್ಣ ಕವನ ಕಟ್ಟಲು ಪ್ರತಿಭೆ ಬೇಕು, ಚಾತುರ್ಯ ಬೇಕು. ಒಳ್ಳೆಯ ಕವಿಯಲ್ಲಿ ಹಿರಿದಾದ ಜಾಣ್ಮೆ ಇರಬೇಕು; ಬಲಿದ ಭಾವವಿರಬೇಕು; ಸಾರಾಸಾರ ವಿವೇಕವೂ ಒಡನಿರಬೇಕು. ಬರಿಯ ಪದಗಳನ್ನು ಕೂಡಿಸಿದರೆ ಪದ್ಯವಾಗು ವದಿಲ್ಲ. ಉತ್ತಮ ಕವಿಯ ಮಾತು ಓದಿದೊಡನೆ ಕೇಳಿದೊಡನೆ ನೇರವಾಗಿ ಹೃದಯಕ್ಕೆ ತಾಗಿ ವಿಚಾರದ ತೆರೆಗಳನ್ನು, ಆನಂದದಲೆಗಳನ್ನು ಉಂಟು ಮಾಡುತ್ತದೆ. ಅವನ ವಾಣಿಯಲ್ಲಿ ಕೇಳುವವರನ್ನು ಮೈಮರೆಯಿಸಿ ತನ್ಮಯರಾಗುವಂತೆ ಮಾಡುವ ಮಾಟವಿದೆ. ಅದುವೆ ದಿವ್ಯ ಕಾವ್ಯ, ಸರಸ ಸಾಹಿತ್ಯ. ಶ್ರೀಗಳವರ ಪದಗಳಲ್ಲಿ ಈ ಗುಣಗಳು ಪರಿಪೂರ್ಣವಾಗಿವೆ.

ವೀರಶೈವ ಷಟ್‌ಸ್ಥಲ ಮಾರ್ಗದಲ್ಲಿ ಭಕ್ತಿಯ ಪರಾಕಾಷ್ಠೆಯನ್ನು ಸತಿಪತಿ ಭಾವದ ವಚನಗಳಲ್ಲಿ–ಗೀತಗಳಲ್ಲಿ ಕಾಣುತ್ತೇವೆ. ಸತಿಪತಿಭಾವ ಬಲಿದ ಶರಣನ, ಶಿವಯೋಗಿಯ ರೀತಿಯೇ ಬೇರೆ; ಅವನ ಮಾತೆ ಬೇರೆ! ಶಿವನನೊಂದುಗೂಡುವ ತವಕವು ಅವನಲ್ಲಿ ಹೆಚ್ಚಿ ಎಲ್ಲೆ ಮೀರುತ್ತದೆ; ಲಿಂಗಾಂಗ ಸಾಮರಸ್ಯ ಸುಖದಲ್ಲಿಯ ಆತುರತೆ ಅಧಿಕವಾಗು ತ್ತದೆ. ಆಗ ಇಂದ್ರಿಯುಗಳೆಲ್ಲ ಅಂತರ್ಮುಖವಾಗುತ್ತವೆ, ಲಿಂಗಕಿರಣಗಳಾಗಿ ಸ್ಫುರಿಸು ತ್ತವೆ. ಈ ಅವಸ್ಥೆಯನ್ನೆ ಗೀತೆಯಲ್ಲಿ 'ಬ್ರಾಹ್ಮೀ ಸ್ಥಿತಿ' ಎಂದು, ವಚನ ಸಾಹಿತ್ಯದಲ್ಲಿ 'ಲಿಂಗವಿಕಳಾವಸ್ಥೆ' ಎಂದು ಕರೆಯಲಾಗಿದೆ. ಮಹಾದೇವಿಯಕ್ಕಗಳ ಸತಿಪತಿ ಭಾವದ ವಚನಗಳು ವಿಶ್ವಸಾಹಿತ್ಯದ ಅಮರ ಕೃತಿಯಾಗಿವೆ. ಅವುಗಳಲ್ಲಿಯ ವಿರಹವೇದನೆಯ ಕರೆಯುನ್ನು ಕೇಳಿ ಕಲ್ಲೂ ಕಣ್ಣೀರಿಡಬೇಕು. ಶ್ರೀಗಳವರೂ ಶಿವಯೋಗದ ಆ ಸ್ಥಿತಿಯನ್ನು ಅನುಭವಿಸಿದ್ದರು. ಅಂತಹ ಸ್ಥಿತಿಯಲ್ಲಿರುವಾಗ ಕೆಲವು ಗೀತಗಳನ್ನು ಹಾಡಿರುವರು. ಅವು ಸಿರಿಗನ್ನಡಮ್ಮನ ಕಿರೀಟದಲ್ಲಿ ಹೊಳೆಯುವ ಪವಳಗಳಂತಿವೆ.

(ರಾಗ-ದರ್ಬಾರಿ ಕಾನಡಾ)

ಶಿವ! ಶಾಂತಿಸುಖವ ಕೊಡು ಬೇಗನೇ
ವೃಥಾಬದ್ಧಭವಬಾಧೆಯ ಲಯಮಾಡುತ ನೀ ಪರತರ ಗುರುವರ ||ಪ||
ಮಂದತಾಮಸವ ಪೊದಿನಿಂದೆ ನಾನು
ಕುಂದುವಡೆಯುತೆ ಸದಾ ಮೂಢತಮ

ಖೇದ ಮೋದವು ದಹಿಸಲಹುದೆನ್ನಂ
ಚರಾಚರ! ಪರಾತ್ಪರ!! ನಿರಂತರ ||೧||
ಕುಟಿಲರಾಜಸವು ಪಟುತರವಾಗಿಹುದು
ದಿಟವನರಿಯೆನು ದೃಢಾಲಿಂಗನ
ಮಾಡಿ ಕೂಡಿ ಬಿಡದೆ ಕಾಡದೆನ್ನಂ
ಭವೋತ್ತರ! ಶಿವಾಪರ!! ಭುವೀಶ್ವರ!!! ||೨||
ವಿನಯದಾನ ತಪ ಘನ ಶಮೆ ದಮೆಗಳನು
ಮನದ ಕೊನೆಯೊಳು ಅಸಾಧಾರಣ
ಧ್ಯಾನ ಮೌನ ಶಿವಯೋಗವ ಕೊಡು ನೀ
ನವೋಽಭವ! ಉಮಾಧವ!! ಸುಮೋದವ ||೩||

ಇಂತು ತಮ್ಮ ಕಾತರದೆದೆಗೆ ಶಾಂತಿಯನೀಯಲು ದೇವನಲ್ಲಿ ಸೆರಗೊಡ್ಡಿ ಬಗೆ ಬಗೆಯಾಗಿ ಬೇಡುವರು ಹಾಡುವರು. ಆತನನ್ನು ಮನದುಂಬಿ ಎದೆದುಂಬಿ ಹೊಗಳುವರು. ಮತ್ತೆ ಮತ್ತೆ ಬಾಗಿ ಬೀಗಿ ಹಾಡಿ ಪಾಡಿ ಮಣಿದು ಕುಣಿದು ನಲಿನಲಿದಾಡುವರು. ಮೇಲೆ ಮೇಲೆ ಲಿಂಗವನಪ್ಪಿ ಅಪ್ಪಿ ಕೊಂಡಾಡಿ ನುತಿಸುವರು. ಸ್ತುತಿಸುವರು. ದೇವ! ಎನ್ನನು ಸುಮ್ಮನೇ ಕಾಡಿಸಿ ಪೀಡಿಸುವದೇಕೆ? ಏಕಿಂತು ಬಾರದೆ ತೋರದೆ ನೋಯಿಸಿ ಘಾಸಿಗೊಳಿಸುವೆ? ನಿನಗಾಗಿ ಕಾದು ಕಾದು ಕಾತುರನಾಗಿರುವೆ. ಬಾ! ಇದೋ, ಈ ಹೃದಯ ಪೀಠವ ಅಲಂಕರಿಸಿ ನಿನ್ನವರನುಳುಹಿಕೊ, ಭವಹರ ಉಮಾವರ! ಎನ್ನ ಮನದ ತಾಮಸವ ತೊಡೆದು ಖೇದವ ಕಳೆದು ಬೆರಸಿ ಬೇರಿಲ್ಲದಂತಿರಿಸು ಎಂದು ಬೇಡುವರು, ಬಯಸುವರು. ದೇವ! ಕಾಡದೆನ್ನನು ನಿರಂತರವಾಗಿ ಆಲಿಂಗಿಸೆಂದು ಅಂಗಲಾಚಿ ಬೇಡುವರು. "ದಿಟವನರಿಯೆನು, ದೃಢಾಲಿಂಗನವ ಮಾಡಿ ಕೂಡಿ" ಎಂದೆದೆಯೊಡ್ಡಿ ಬಾಯ್ದುಂಬಿ ಬೇಡುವಾಗ ಅವರ ಮೈಯಲ್ಲಿ ಪುಳಕಂಗಳು ಪುಟ್ಟಿರಬೇಕು. ಕಂಠವು ಕಂಪಿಸಿರಬೇಕು; ಗದ್ಗದವು ತೋರಿರಬೇಕು. ಕಂಗಳಿಂದಾನಂದಾಶ್ರುಗಳು ಒಂದೊಂದಾಗಿ ಉದಿರಿರಬೇಕು. ಹೃದಯದಲ್ಲಿ ಚಿಜ್ಜ್ಯೋತಿಯು ಪೊಣ್ಮಿರಬೇಕು. ಅಂತೆಯೇ ಈಗಲೂ, ಅವರ ಆ ಮಾತುಗಳು ನಮ್ಮೆದೆದಾಣದಲ್ಲಿ ಬಿಡದಲೆ ಕುಣಿ ಕುಣಿದು ಮೋಹಿಸುತ್ತಿವೆ. ಓದಿದೊಡನೆಯೇ ಮನವು ಬೇರೊಂದು ಬಗೆಗೆ ನಿಲ್ಲುತ್ತಿದೆ. ನೂತನ ಶಾಂತಿ ಕಾಂತಿಗಳೊದಗಿ ಹೊಸದೊಂದು ಆನಂದವು ನಮಗೆ ತೋರುತ್ತಿದೆ. ಮತ್ತೊಂದು ಗೀತೆಯಲ್ಲಿ ಇಂತು ಬೇಡುವರು;

ಮನವನು ಪರಿಪಾಲಿಸು ನೀ! ಜ್ಞಾನದಾನ ಮಾಡಿ ಶಿವ
ಚಿನುಮಯ ಪ್ರಭು ಮಾಯಾರಿ! ಮಾರಾರಿ, ಕಾಲಾರಿ ||ಪ||
ನೇತ್ರದಾಟ ನಿಲ್ಲಿಸಿ ಸೂತ್ರದಿಹ ಸುಮತಿಯ ಗೂಡಿ
ಗಾತ್ರತ್ರಯವಳಿಯುತೆ ಚಿತ್ರದ ಚಿದ್ಬಿಂದು ತೋರಿ ||೧||

ನಾದ ಬ್ರಹ್ಮ ಭೇದವ ಶೋಧಿಸಿ ದೃಢಚಿತ್ತನಾಗಿ
ಸಾಧಿಸಿ ಶಿವಕಲೆಯನು ಮೋದಗೊಳ್ಳುವಂತೆ ಮಾಡಿ ||೨||
ಲಿಂಗಾಂಗಸಂಗದ ಇಂಗಿತದ ಬೋಧವಿತ್ತು
ಲಿಂಗೈಕ್ಯನ ಮಾಡುತೆ ಮಂಗಲ ಶಿವಯೋಗಿಯೆನಿಸಿ ||೩||

ದೇವಾ! ಎನ್ನಯ ಸ್ಥೂಲ-ಸೂಕ್ಷ್ಮ ಕಾರಣಗಳೆಂಬ ಮೂರೂ ತನುಗಳನಳಿದು ನೀನೇ ನಾನಾಗುವಂತೆ ಚಿತ್ತ ಚಾಂಚಲ್ಯವನ್ನು ತೊಡೆದು ಚಿದ್ಬಿಂದುವಿನ ದರ್ಶನ ಮಾಡಿಸು. ಉರಿಕಪ್ಪುರ ಸಂಯೋಗದಂತಿರುವ ಅಂಗ ಲಿಂಗದ ಸಂಗವನೊದಗಿಸು. ನಾನು ನಿನ್ನೊಳಗಾಗಿ ನೀನು ನನ್ನೊಳಗಾಗುವ ಸಮಯವಿನ್ನೆಂದೋ ದೇವ? ಎಂದು ಅಹೋರಾತ್ರಿ ಕುದಿಯುತಲಿದ್ದರು. ಮತ್ತೊಂದು ಇಂತಹ ಆತ್ಮಗೀತೆಯಲ್ಲಿ "ಜತೆಗೂಡಿ ಅತಿಬೇಗ ಬಾ! ಪೊರೆಯೋ ಎಂತಲೂ, ಮಗುದೊಂದರಲ್ಲಿ "ದೇವ ದೇವ! ಜೀವಗುಣವ ಜವದಿ ನಾಶಗೊಳಿಸಿ ಕಾಯೋ" ಎಂಬುದಾಗಿ ದೇವನಲ್ಲಿ ದೈನ್ಯದಿಂದ ಮೊರೆವೋಗಿರುವರು. ಈ ಎರಡು ಗೀತೆಗಳಲ್ಲಿರುವ 'ಅತಿಬೇಗ' 'ಜವದಿ' ಎಂಬೆರಡು ಪದಗಳು ಲಿಂಗಾಂಗ ಸಾಮರಸ್ಯದಲ್ಲಿ ಅವರಿಗಿರುವ ತವಕದ ಪರಾಕಾಷ್ಠೆಯನ್ನು ಚೆನ್ನಾಗಿ ತೋರುತ್ತಿವೆ. ಈ ಬಗೆಯ ಆತ್ಮಗೀತೆಗಳು ಅನೇಕ ಸಿಕ್ಕುತ್ತಿವೆ. ಶ್ರೀಗಳವರ ಪ್ರತಿಯೊಂದು ಪದ್ಯವೂ ಕಡೆಯಲ್ಲಿ 'ಶಿವಯೋಗ' ಎಂಬ ಮುದ್ದಾದ ಮುದ್ರಿಕೆಯಿಂದ ಭೂಷಿತವಾಗಿದೆ. ಇವರ ಕವನ ಪ್ರಪಂಚದಲ್ಲಿ ಆಯ್ಕೆ ಮಾಡಿದರೆ ಬರೆದಿಟ್ಟುಕೊಳ್ಳಬೇಕಾದ ಮುದ್ದಾದ ಮಾತುಗಳೂ ಸಣ್ಣ ಸಣ್ಣ ನಾಣ್ಣುಡಿಗಳೂ ಹೇರಳವಾಗಿ ಸಿಕ್ಕುತ್ತಿವೆ. "ಚಿತ್ತದ ರಾಗ ಭ್ರಾಂತಿಯ ಪೂಗ" "ವೃತ್ತಿಯ ಜಾಲ ಚಿಂತೆಯ ಮೂಲ" ಈ ಬಗೆಯ ಅನೇಕ ಸವಿಮಾತುಗಳು ಇದರಲ್ಲಿ ಅಡಗಿವೆ. ಇಂತೆಲ್ಲ ಗುಣಗಳನೊಳಗೊಂಡುದರಿಂದ ಅವರ ಸಾಹಿತ್ಯಕ್ಕೆ ಇನಿತೊಂದು ಗೌರವವನ್ನೂ ಮೇಲ್ಮೆಯನ್ನೂ ಕೊಡಬೇಕಾಗಿದೆ.

ಶ್ರೀಗಳವರ ಈ ಗೀತಗಳಲ್ಲಿ ಮಹಾಕವಿಯ ಪ್ರೌಢಿಮೆ ಮತ್ತು ಕಲಾಚಾತುರ್ಯವಿಲ್ಲ; ಭಾಷೆಯಲ್ಲಿ ಅಲಂಕಾರದ ಬೆಡಗೂ ಇಲ್ಲ; ಭಾವದಲ್ಲಿ ಕಲ್ಪನೆಯ ವೈಖರಿಯೂ ಇಲ್ಲ. ಆದರೆ ಸಹಜ ಪ್ರತಿಭೆಯ ಸಾತ್ತ್ವಿಕ ತೇಜಸ್ಸು ಈ ಪದಗಳಲ್ಲಿ ತಿಳಿಯಾಗಿ ಮೂಡಿದೆ. ಅಂತೆಯೆ, ಅವುಗಳಿಗೆ ಸತ್ತ್ವಪೂರ್ಣವಾದ ಸಾಹಿತ್ಯ ಪ್ರಪಂಚದಲ್ಲಿ ಎಂದಿಗೂ ಬೆಲೆಯಿದೆ, ಸ್ಥಾನವಿದೆ.

ಶ್ರೀ ಶಿವಯೋಗಮಂದಿರದ ಬೆಳಗು (ಸಂಸ್ಥೆಯ ಸುವರ್ಣ ಮಹೋತ್ಸವದ ಸ್ಮಾರಕ) ಗ್ರಂಥದಿಂದ ೧೯೬೦
ಸಂ-ಪ್ರೊ. ಜಿ. ಎಂ. ಉಮಾಪತಿಶಾಸ್ತ್ರಿಗಳು, ಬಾಗಲಕೋಟೆ

ಭಾಗ ಎರಡು

ಅನುಭಾವಿಯ ಸಾಹಿತ್ಯ ಸೌರಭ

ತತ್ವ-ಸಾಹಿತ್ಯಕ್ಕೆ ಶ್ರೀ ಸನ್ನಿಧಿಯವರ ಕೊಡುಗೆ
(ಶ್ರೀಗಳ ಗ್ರಂಥಗಳ ಕುರಿತ ಚಿಂತನ)

—ಶ್ರೀ ಯೋಗೀಶ ಯಡ್ರಾವಿ

"ತತ್ವಪ್ರಧಾನವಾದುದು ವೀರಶೈವ ಸಿದ್ಧಾಂತವಯ್ಯಾ
ತತ್ವವನರಿಯದೆ ವ್ಯಕ್ತಿನಿಷ್ಠೆಗಿಳಿದರೆ
ತತ್ವಕ್ಕೆ ಠಾವಿನ್ನೆಲ್ಲಿಯದೊ?
ತತ್ವವನರಿದಾಚರಿಸುವಲ್ಲಿಯೆ ಚಿರಸುಖ ನೋಡಯ್ಯಾ
ತತ್ವವನರಿದಾಚರಿಸುವರ ತೊತ್ತಾಗಿರಿಸಯ್ಯಾ
ಮೃಡಗಿರಿ ಅನ್ನದಾನೀಶ"

ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಗಣನೀಯವಾದ ಸೇವೆಸಲ್ಲಿಸುತ್ತಿರುವ ಸಂಪೂಜ್ಯರಲ್ಲಿ ಪರಮಪೂಜ್ಯ ಶ್ರೀ ಮ. ನಿ. ಪ್ರ. ಜಗದ್ಗುರು ಶ್ರೀ ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳವರ ಶುಭ ನಾಮವು ಇಂದು ಅತ್ಯಂತ ಒಡೆದು ಕಾಣುವಂತಹದು. ಅವರದು ನಿಜಕ್ಕೂ ಬಹು ಶ್ರೀಮಂತ ಧೀಮಂತವಾದ ಬಹು ಮುಖ್ಯ ವ್ಯಕ್ತಿತ್ವ. ನಿಜ ಜಂಗಮನ ನೈಜ ನಿಲವು ಅವರದು. ಅವರು ಸ್ವಂತ ಅನುಷ್ಠಾನ ದಿಂದ ತಪೋಶಕ್ತಿಯನ್ನು ಗಳಿಸಿ, ಬೆಳಿಸಿಕೊಂಡಿರುವ ಮಹಾತಪಸ್ವಿಗಳು. ಆಚಾರ-ವಿಚಾರ ಗಳಲ್ಲಿ ಶುಚಿತ್ವದ ಸೌರಭವನ್ನು ಸುತ್ತಲೂ ಪಸರಿಸುತ್ತಿರುವ ಸುಂದರ-ಸಮೃದ್ಧ ವ್ಯಕ್ತಿತ್ವ ಅವರದು. ವೀರಶೈವ ಸಾಹಿತ್ಯ ಹಾಗೂ ತತ್ವಜ್ಞಾನಗಳ ಮೇಲೆ ಸಮರ್ಥವಾಗಿ, ಅಧಿಕೃತವಾಗಿ ಮಾತನಾಡಬಲ್ಲ ಮತ್ತು ಬರೆಯಬಲ್ಲ ಪೂಜ್ಯರವರಾಗಿದ್ದಾರೆ. ಜನಪ್ರಿಯತೆ ಯನ್ನು ಗಳಿಸುವ ವೈಯಕ್ತಿಕ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವ ಹುಚ್ಚು ಹವ್ಯಾಸ ಅವರಿಗಿಲ್ಲ. ಬದಲಾಗಿ, ಜನಹಿತ ಕಾರ್ಯಕ್ರಮಗಳನ್ನು ಹಲವು-ಹತ್ತು ವಿಧವಾಗಿ ಹಮ್ಮಿಕೊಳ್ಳುವ ಪ್ರಾಮಾಣಿಕ ಹಂಬಲ ಅವರದು. ಅವರಿಗೆ ಸಾಮಾಜಿಕ ಜೀವನದಲ್ಲಿ ಧರ್ಮ-ಪ್ರತಿಷ್ಠೆ ಆಗಬೇಕು. ಇದೆಲ್ಲಕ್ಕೂ ಹೆಚ್ಚಾಗಿ ಮಾತೃ-ಹೃದಯವನ್ನು ಹೊಂದಿದ ಮಹಾನುಭಾವರವರು.

ಬಹಳಷ್ಟು ಜನ ಸ್ವಾಮಿಗಳು ಯುಗಧರ್ಮವೆಂದು ಕರೆಯಬಹುದಾದ ರಾಜಕೀಯ ವ್ಯವಸ್ಥೆಯೊಡನೆ ರಾಜಿ ಮಾಡಿಕೊಂಡು ವೈಯಕ್ತಿಕ ಪ್ರಭಾವವನ್ನು ಹೆಚ್ಚಿಸಿಕೊಳ್ಳುವದರಲ್ಲಿ ಮಗ್ನರಾಗಿರುವದನ್ನು ನಾವು ಕಾಣುತ್ತೇವೆ. ಆದರೆ, ಪರಮಪೂಜ್ಯ ಶ್ರೀ ಜಗದ್ಗುರು ಸನ್ನಿಧಿಯವರು ಮಾತ್ರ ತಮ್ಮ ಸ್ಥಾನಕ್ಕೆ ಶೋಭೆ ತರುವ ಅನುಷ್ಠಾನ ತಪಸ್ಸುಗಳಲ್ಲಿ

ಮತ್ತು ತಮ್ಮ ಕರ್ತವ್ಯ ನಿರ್ವಹಣೆಗೆ ಭೂಷಣಪ್ರಾಯವಾದಸಮಾಜೋದ್ಧಾರ ಕಾರ್ಯಗಳಲ್ಲಿ ಪರಮಾಸಕ್ತರು. ಇದೆಲ್ಲವೂ ನಾನು ಅವರನ್ನು ಹೊಗಳಿಕ್ಕೆ ಅಣಿಯಾಗಿ ಆಡಿದ ಅತ್ಯುಕ್ತಿಯಾಗಿರನೆ, ನೈಜತೆಯನ್ನು ಹೆಚ್ಚಿನ ವಿಶೇಷಣಗಳನ್ನು ಬಳಸದೆ ಬರೆಯಲು ಯತ್ನಿಸಿದ ಫಲಿತಾಂಶ. ಆದ್ದರಿಂದ ಇದೊಂದು ಒಣ ಪ್ರಶಂಸೆ ಅಥವಾ ಸ್ತುತಿಯೆಂದಾಗಲಿ, ಸಂದರ್ಭೋಚಿತವಾಗಿ ಬರೆದ ಮಾತೆಂದಾಗಲೀ ಭಾವಿಸಬಾರದೆಂದು ನನ್ನ ಹೃತ್ಪೂರ್ವಕ ಪ್ರಾರ್ಥನೆ ಇರಲಿ.

ಶ್ರೀ ಸನ್ನಿಧಿಯವರ ಪಟ್ಟಾಭಿಷೇಕದ ರಜತಮಹೋತ್ಸವದ ಸವಿನೆನಪಿಗಾಗಿ ಹೊರತರುತ್ತಿರುವ ಅಭಿನಂದನ ಗ್ರಂಥಕ್ಕೆ ನಾನೂ ಒಂದು ಲೇಖನ ಬರೆದು ಕಳಿಸಬೇಕೆಂದು ಸಂಯೋಜಕ–ಸಂಪಾದಕರು ಬಯಸಿ ಬರೆದುದು ನನ್ನ ಪರಮ ಭಾಗ್ಯವೆಂದು ನಾನು ಭಾವಿಸುತ್ತೇನೆ. ಅದರಲ್ಲೂ ನನಗೆ ಪ್ರಿಯವಾದ ತತ್ವ–ಸಾಹಿತ್ಯವನ್ನು ಕುರಿತು! ಪರಮ ಪೂಜ್ಯ ಸನ್ನಿಧಿಯವರು ಕನ್ನಡ ಸಾರಸ್ವತ ಲೋಕಕ್ಕೆ ತಮ್ಮದೇ ಆದ ಅಮೂಲ್ಯ ಕೊಡುಗೆಯನ್ನು ನೀಡಿದ ಬೆರಳೆಣಿಕೆಯಲ್ಲಿರುವ ವೀರಶೈವ ಮಹಾಸ್ವಾಮಿಗಳಲ್ಲಿ ಒಬ್ಬರು. ಅವರದು ಒಂದರ್ಥದಲ್ಲಿ ವಿಶಿಷ್ಟ ಕೊಡುಗೆ. ಅವರು ನಾಲ್ಕಾರು ಸಾಹಿತ್ಯ ಪ್ರಕಾರಗಳಲ್ಲಿ ಕೈಯಾಡಿಸಿದ್ದರೂ ಕೂಡ, ತತ್ವ–ಸಾಹಿತ್ಯಕ್ಕೆ ಅವರದು ವಿಶಿಷ್ಟ ಕೊಡುಗೆ ಎಂದು ನಾವು ಧಾರಾಳವಾಗಿ ಹೇಳಬಹುದು. ಒಬ್ಬ ಸಾಹಿತ್ಯ–ವಿಮರ್ಶಕರ ಕೆಳಗಿನ ಮಾತುಗಳನ್ನು ನಾವೀ ಸಂದರ್ಭದಲ್ಲಿ ಗಮನಿಸಬಹುದಾಗಿದೆ.

"ಲೌಕಿಕ ಅಥವಾ ಭೌತಿಕ ವಿಷಯಗಳ ಬಗೆಗೆ ಹೃದಯ ಮಿಡಿಯುವಂತೆ ರಮಣೀಯವಾಗಿ, ಛಂದೋಬದ್ಧವಾಗಿ ಅಭಿವ್ಯಕ್ತಿಗೊಳಿಸುವವನ **ಕವಿಯಾದರೆ,** ಆಧ್ಯಾತ್ಮಿಕ ಅಥವಾ ಪಾರಮಾರ್ಥಿಕ ವಿಷಯಗಳ ಬಗೆಗೆ ಅಂದರೆ, ಸತ್ಯ, ಮಾಯೆ, ಜಗತ್ತು, ಈಶ್ವರ, ಜನನ–ಮರಣ, ಬಂಧ–ಮೋಕ್ಷ, ಭಕ್ತಿ, ಜ್ಞಾನ, ವೈರಾಗ್ಯ, ಉಪರತಿ ಇತ್ಯಾದಿ ಬಗೆಗೆ ರಮಣೀಯವಾಗಿ, ಛಂದೋಬದ್ಧವಾಗಿ ಅಭಿವ್ಯಕ್ತಿಗೊಳಿಸುವವನು **ಆಧ್ಯಾತ್ಮಿಕ ಕವಿಯೆನಿಸುವನು.** (ಡಾ|| ಪಿ. ಎಂ. ಸಿದ್ಧಯ್ಯ: "ಶಂಭುಲಿಂಗದೆಡೆಗೆ", ೧೯೮೨). ಇಲ್ಲಿ **ಸಾಮಾನ್ಯ ಕವಿ** ಬರೆಯುವದು ಏನನ್ನು ಕುರಿತು ಮತ್ತು **ಆಧ್ಯಾತ್ಮಿಕ ಕವಿ** ಬರೆಯುವದು ಏನನ್ನು ಕುರಿತು ಎಂಬುದನ್ನು ಬಹು ಮಾರ್ಮಿಕವಾಗಿ, ಮನೋಜ್ಞವಾಗಿ ಹೇಳಿದೆ. ಇದನ್ನೇ ಸ್ವಲ್ಪ ಬದಲಿಸಿಕೊಂಡು ಹೇಳುವದಾದರೆ, ಭೌತಿಕ ಅಥವಾ ಲೌಕಿಕ ವಿಷಯಗಳನ್ನು ಕುರಿತು ಬರೆಯುವವರು ವಿಜ್ಞಾನಿ ಸಾಹಿತಿಗಳಾದರೆ, ಧಾರ್ಮಿಕ ಅಥವಾ ಆಧ್ಯಾತ್ಮಿಕ ವಿಷಯಗಳಾದ ಜೀವ, ಜಗತ್ತು, ಈಶ್ವರ, ಬಂಧ, ಮೋಕ್ಷ, ಭಕ್ತಿ, ಜ್ಞಾನ, ಕ್ರಿಯೆ, ವೈರಾಗ್ಯ, ಅಂಗ, ಲಿಂಗ, ಲಿಂಗಾಂಗಯೋಗ, ಲಿಂಗಾಂಗ ಸಾಮರಸ್ಯ, ಶೂನ್ಯ ಸಂಪಾದನೆ ಇತ್ಯಾದಿ ವಿಷಯಗಳನ್ನು ಕುರಿತು ಬರೆಯುವವರು (ತತ್ವ) ಜ್ಞಾನಿಗಳಾದ ಸಾಹಿತಿಗಳೆನಿಸುತ್ತಾರೆ. ಶ್ರೀ ಸನ್ನಿಧಿಯವರು ಸರ್ವಾರ್ಥದಲ್ಲೂ (ತತ್ವಜ್ಞಾನಿಗಳಾದ)

ಅನುಭಾವಿ ಸಾಹಿತಿಗಳಾಗಿದ್ದಾರೆ. (ಶ್ರೀ ಸನ್ನಿಧಿ: ಆರೈದು-ಭಾಗ ೩, 'ಸುಜ್ಞಾನ-ವಿಜ್ಞಾನ'-ಲೇಖನ ನೋಡಿರಿ).

ಹಾಗೆ ನೋಡಿದರೆ, ಶ್ರೀ ಜಗದ್ಗುರು ಸನ್ನಿಧಿಯವರಿಂದ ವಿರಚಿತ ಬಹುತೇಕ ಗ್ರಂಥಗಳು ಆಧ್ಯಾತ್ಮ ಸಾಹಿತ್ಯಕ್ಕೇ ಸೇರ್ಪಡೆಯಾಗುವ ಸಂಪೂರ್ಣ ಅರ್ಹತೆ ಪಡೆದಿವೆ ಎಂದೇ ಹೇಳಬೇಕಾಗುತ್ತದೆ. ಆದರೆ, ನಾನಿಲ್ಲಿ ಬರೆಯಲಿರುವ "ತತ್ವ-ಸಾಹಿತ್ಯಕ್ಕೆ ಶ್ರೀ ಸನ್ನಿಧಿಯವರ ಕೊಡುಗೆ" ಎಂಬ ಲೇಖನಕ್ಕೆ ಬಳಸಿಕೊಂಡ ಪ್ರಮುಖ ಗ್ರಂಥಗಳು ನಾಲ್ಕಾರು ಮಾತ್ರ. ಅದರಲ್ಲೂ, ಅವರು ಅನುಗ್ರಹಿಸಿದ "ಶ್ರೀ ಮೈಲಾರ ಬಸವಲಿಂಗ ಶರಣರ ತ್ರಿಪದಿಗಳಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ" ಮತ್ತು "ಆರೈದು" ಎಂಬೆರಡು ಗ್ರಂಥಗಳ ವಿಶೇಷ ಉಪಯೋಗವನ್ನು ನಾನಿಲ್ಲಿ ಮಾಡಿಕೊಂಡಿದ್ದೇನೆ. ನಾನು ಆಯಾ ಗ್ರಂಥದಲ್ಲಿರುವ ಸಾಹಿತ್ಯಕ ಮತ್ತು ಇತರ ಮೌಲ್ಯಗಳ ವಿಷಯವಾಗಿ ವಿಶೇಷವೇನನ್ನೂ ಬರೆಯುವ ಗೊಡವೆಗೆ ಹೋಗಿರುವದಿಲ್ಲ. ಹಾಗೆ ಮಾಡಿದರೆ, ಅದೊಂದು ಮಹಾಪ್ರಬಂಧವೇ ಆದೀತು. ಆದ್ದರಿಂದ ನಾನಿಲ್ಲಿ ಅವರು ವೀರಶೈವ ಧರ್ಮಕ್ಕೆ ಸಮನ್ವಯಾತ್ಮಕ ಹಿನ್ನೆಲೆಯಾಗಿ ಕಂಗೊಳಿಸುವ ತತ್ವಜ್ಞಾನ, ದರ್ಶನ ಅಥವಾ ಸಿದ್ಧಾಂತವನ್ನು ಕುರಿತು ಬರೆದ ವಿಷಯವನ್ನೇ ಹೆಚ್ಚಾಗಿ ವಿವೇಚಿಸಿದ್ದೇನೆ.

ಹಿರಿಯ ವಿದ್ವಾಂಸರು ಪ್ರತಿಯೊಂದು ಧರ್ಮದಲ್ಲೂ ಮೂರು ಮುಖ್ಯ ವಿಭಾಗಗಳಿರುತ್ತವೆಂದು ಬಹುಸ್ಪಷ್ಟವಾಗಿ ಅಷ್ಟೇ ಖಚಿತವಾಗಿ ಪ್ರತಿಪಾದಿಸುತ್ತ ಬಂದಿದ್ದಾರೆ. ಅವರ ಆ ಪ್ರತಿಪಾದನೆ ಸತ್ಯವಾಗಿಯೂ ಇದೆ. ಮೊದಲನೆಯ ವಿಭಾಗ 'ನೈತಿಕ'ಕ್ಕೆ ಸಂಬಂಧಪಟ್ಟುದಾದರೆ, ಎರಡನೆಯ ಹಾಗೂ ಮೂರನೆಯ ವಿಭಾಗಗಳು ಕ್ರಮವಾಗಿ 'ಧಾರ್ಮಿಕ' ಮತ್ತು 'ತಾತ್ವಿಕ'ಕ್ಕೆ ಸಂಬಂಧಪಟ್ಟುದಾಗಿವೆ. ಬಹುಶಃ 'ನೀತಿ'ಯನ್ನು ಬೋಧಿಸದ ಧರ್ಮವೇ ಇಲ್ಲವೆಂದು ಹೇಳಬಹುದು. ನಿಜವಾಗಿಯೂ, ನೀತಿಯಿಲ್ಲದ ಧರ್ಮ ಒಂದು ಬಗೆಯ ಶುಷ್ಕ ಆಚರಣೆಯಾಗುತ್ತದೆ. ಅಲ್ಲದೆ, ಅದು ಮತಾಂಧತೆ-ಧರ್ಮಾಂಧತೆಗಳಿಗೆ ಆಸ್ಪದವೀಯುತ್ತದೆ. ಅಂತೆಯೇ, ಧರ್ಮದ ಸುಭದ್ರವಾದ ಹಿನ್ನೆಲೆಯಿಲ್ಲದ 'ನೀತಿ' ಉದ್ದೇಶಿತ ಸಂಪೂರ್ಣ ಯಶಸ್ಸನ್ನು ಸಾಧಿಸಿಕೊಡಲಾರದೆ ಹೋಗುತ್ತದೆ. ಇದಕ್ಕೆ 'ಚಾರ್ವಾಕ' ಅಥವಾ ಲೋಕಾಯುತರನ್ನೇ ಉದಾಹರಯಾಣೆಗಿ ನಾವಿಲ್ಲಿ ನೋಡಿಕೊಳ್ಳಬಹುದು. ಹಾಂ, ಈ 'ನೀತಿ' ಎರಡು ಪ್ರಕಾರವಾಗಿರುತ್ತದೆಂಬುದು ನಿರ್ವಿವಾದ. ಒಂದು ಸಾರ್ವತ್ರಿಕ ಮೌಲ್ಯವುಳ್ಳದು; ಮತ್ತೊಂದು, ಆಯಾಧರ್ಮದ ಸಿದ್ಧಾಂತ-ಸಾಧನ ಮಾರ್ಗಗಳಿಗೆ ಅನುಗುಣವಾದುದು. ಅಂತೂ, **ನೀತಿಬೋಧೆಯೂ** ಆಯಾ ಧರ್ಮದ ಅಥವಾ ಧಾರ್ಮಿಕರ ಒಂದು ಸಹಜ ಧೋರಣೆಯಾಗಿರುವದನ್ನು ನಾವು ಕಾಣುತ್ತೇವೆ

ವಂಶಾನುಗತವಾಗಿ ನಡೆದುಕೊಂಡು ಬಂದು ಆಯಾ ವ್ಯಕ್ತಿಗೆ ಸ್ವಾಭಾವಿಕವಾಗಿಯೇ ಸಂಪ್ರಾಪ್ತವಾದ (ಮತ) ಧರ್ಮವು ಸಮಾಜರೂಪವನ್ನು ತಳೆದಾಗ, ನೈತಿಕ, ಧಾರ್ಮಿಕ (ಸಾಮಾಜಿಕ) ಹಾಗೂ ತಾತ್ವಿಕ ವಿಭಾಗಗಳು ಅದರಲ್ಲಿ ಬೆಳೆದುಕೊಂಡು

ಬರುತ್ತವೆ. ಇದನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. ಈ ದೃಷ್ಟಿಯಿಂದ ವೀರಶೈವ ಧರ್ಮವನ್ನು ವಿವೇಚಿಸಿಕೊಂಡಾಗ, ಅದೂ ಕೂಡ ವಂಶಾನುಗತವಾಗಿ ಆಯಾ ಕುಟುಂಬ ದಲ್ಲಿ ನಡೆದುಕೊಂಡು ಬಂದಿರುವ ಮಹಾನ್ ಧರ್ಮನಾಗಿದೆ. ಅಂತಲೇ ಅದು ಸಮಾಜ ಧರ್ಮವೆನಿಸಿದೆ. ಅದರಲ್ಲಿ ಸ್ವಾಭಾವಿಕವಾಗಿಯೇ ಈ ಮೂರು ಅಂಶಗಳು ಬಹು ವೈಶಿಷ್ಟ್ಯಪೂರ್ಣವಾಗಿಯೂ, ಅಷ್ಟೇ ವ್ಯಾಪಕವಾಗಿಯೂ ಬೆಳೆದುಕೊಂಡು ಬಂದಿವೆ. ಹಿರಿಯರು ಸಾಮಾನ್ಯವಾಗಿ ಆ ಮೂರು ಭಾಗಗಳನ್ನು ವೀರಶೈವ ಧರ್ಮದಲ್ಲಿ ಹೀಗೆ ಗುರುತಿಸಿದ್ದಾರೆ: ವೀರಶೈವ ಧರ್ಮ ಪುರುಷನಿಗೆ ಅಷ್ಟಾವರಣವೇ ಅಂಗ; ಪಂಚಾ ಚಾರವೇ ಪ್ರಾಣ; ಮತ್ತು ಷಟ್‌ಸ್ಥಲವೇ ಆತ್ಮ. ವೀರಶೈವನಾದ ಶಿವಯೋಗ ಸಾಧ ಸಾಧಕನೂ ಸಹ ಅಷ್ಟಾವರಣಯುಕ್ತನಾಗಿ, ಪಂಚಾಚಾರಗಳನ್ನು ಪ್ರಾಣಕ್ಕಿಂತಲೂ ಮಿಗಿಲಾಗಿ ತನ್ನ ಜೀವನದುದ್ದಕ್ಕೂ ಪರಿಪಾಲಿಸುತ್ತ, ಅವುಗಳನ್ನು ಅಂತರಂಗ-ಬಹಿರಂಗ ಗಳೆರಡರಲ್ಲೂ ಅಳವಡಿಸಿಕೊಳ್ಳುವುದನ್ನೇ ತನ್ನ ಬದುಕಿನ ನಿಜ ಧ್ಯೇಯವನ್ನಾಗಿಸಿ ಕೊಂಡು; ಷಟ್-ಸ್ಥಲಗಳೇ ತನ್ನ ಸಾಧನೆಯ ಹಾಗೂ ಸಾಧ್ಯಗಳ ಆತ್ಮವೆಂದರಿತು, ಆ ಷಟ್-ಸ್ಥಲಾಚರಣೆಯ ದಿವ್ಯ ಮಾರ್ಗದಿಂದ ಸಾಧನ ನಿರತನಾಗಿ, ಅಂತಿಮವಾಗಿ ಲಿಂಗಾಂಗ ಸಾಮರಸ್ಯದ ಪರಮಸಿದ್ಧಿಯನ್ನು ಪಡೆಯುವನು. "ವೀರಶೈವ ಸಿದ್ಧಾಂತದಲ್ಲಿ ಜ್ಞಾನಕ್ಕೆ ಮಹತ್ವವಿರುವಂತೆ ಆಚರಣೆಗೂ ವಿಶಿಷ್ಟ ಸ್ಥಾನವಿರುತ್ತದೆ. 'ಅಷ್ಟಾವರಣವೇ ಅಂಗ, ಪಂಚಾಚಾರವೇ ಪ್ರಾಣ, ಷಟ್-ಸ್ಥಲವೇ ಆತ್ಮನಾಗುವ ಅವಕಾಶ ವೀರಶೈವನಿಗೆ ಮಾತ್ರ ಲಭ್ಯ, ತತ್ವಾಚಾರಣೆಯಿಂದ ತತ್ವಪುರುಷನಾಗುವ ಭಾಗ್ಯ ವೀರಶೈವರಿಗಲ್ಲದೆ ಇತರರಿಗೆ ಕಾಣುತ್ತಿಲ್ಲ. ("ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು" —ಪು. ೭೦, ಶ್ರೀ ಸನ್ನಿಧಿಯವರ ಲೇಖನದಿಂದ).

ಈ ಮೇಲಿನ ಮಾತುಗಳಲ್ಲಿ ವೀರಶೈವ ಧರ್ಮದಲ್ಲಿ ನೈತಿಕ, ಧಾರ್ಮಿಕ, ತಾತ್ವಿಕ ಗಳೆಂಬ ಮೂರು ವಿಭಾಗಗಳನ್ನು ಗುರುತಿಸಿದೆ. ಇಲ್ಲಿ ಪಂಚಾಚಾರಗಳು ನೈತಿಕ ವಿಭಾಗ ದಲ್ಲಿ ಅಡಕವಾಗಿದ್ದರೆ, ಅಷ್ಟಾವರಣ ಹಾಗೂ ಷಟ್‌ಸ್ಥಲಗಳು ಕ್ರಮವಾಗಿ ಧಾರ್ಮಿಕ ಮತ್ತು ತಾತ್ವಿಕ ವಿಭಾಗಗಳಲ್ಲಿ ಬರುತ್ತಿವೆ. ತಾತ್ವಿಕ ವಿಭಾಗದಲ್ಲಿ (೧) ಜೀವ (೨) ಜಗತ್ತು (೩) ಈಶ್ವರ (೪) ಬಂಧ ಹಾಗೂ ಬಂಧ ಕಾರಣ ಮತ್ತು (೫) ಮೋಕ್ಷ ಹಾಗೂ ಮೋಕ್ಷೋಪಾಯಗಳ ವಿವೇಚನೆ ಬರುತ್ತದೆಂಬುದು ವಿದ್ವಾಂಸಕರ ಅಭಿಪ್ರಾಯ (ಪಂ. ವೈ. ನಾಗೇಶ ಶಾಸ್ತ್ರಿಗಳು "ಅಷ್ಟಾವರಣ ವಿವೇಕ"), ತತ್ವಶಾಸ್ತ್ರ ದೃಷ್ಟಿಯಿಂದ ಈ ಮಾತು ಸರಿಯಾಗಿಯೇ ಇದೆ. ವೀರಶೈವ ಧರ್ಮದಲ್ಲಿ ಈ ಐದರ ವಿವೇಚನೆ ಬಹು ಅನುಭವ ಪೂರ್ಣವೂ ಸುಶಾಸ್ತ್ರೀಯವಾಗಿಯೂ ಬಂದಿದೆ. ಅದನ್ನು ಅವಗಾಹಿಸಿದಾಗ ವೀರ ಶೈವದ ವಿಶಾಲತೆ-ವಿಶಿಷ್ಟತೆ-ಯಥಾರ್ಥತೆಗಳು ಬಹು ಸ್ಪಷ್ಟವಾಗಿ ನಮ್ಮ ಅಂತಃ ಚಕ್ಷು ವಿನ ಮುಂದೆ ಚಿತ್ತವತ್ತಾಗಿ ಮೂಡಿ ನಿಲ್ಲುತ್ತವೆ. ಆದರೆ, ಅನುಭಾವಿಗಳ ಅಭಿಪ್ರಾಯ

ದಲ್ಲಿ ಈ ಧರ್ಮ ತಾತ್ವಿಕತೆ ಸರ್ವಗ್ರಾಹಿಯಾಗಿ ಇನ್ನೂ ವಿಶಾಲವಾದ ಅರ್ಥಸಂಪತ್ತನ್ನು ಒಳಗೊಂಡಿದೆ. ಜೈನಧರ್ಮದಲ್ಲಿ '**ರತ್ನತ್ರಯ**'ವಿರುವಂತೆ ವೀರಶೈವದಲ್ಲಿ 'ತತ್ವತ್ರಯ' ವಿದೆ. ಅವೇ ಅಷ್ಟಾವರಣ, ಪಂಚಾಚಾರ ಮತ್ತು ಷಟ್-ಸ್ಥಲಗಳು. ಶ್ರೀ ಸನ್ನಿಧಿಯವರು "ವೀರಶೈವವೆಂಬುದು ಜಾತಿ ಸೂಚಕ ಪದವಲ್ಲ. ವೀರಶೈವ ಅಥವಾ ಲಿಂಗವಂತ ಪದಗಳು ತತ್ವಸೂಚಕಗಳಾಗಿವೆ. ವೀರಶೈವನು ಅಷ್ಟಾವರಣವನ್ನೇ ಅಂಗವನ್ನಾಗಿಸಿಕೊಂಡು ಪಂಚಾಚಾರಗಳನ್ನು ಪ್ರಾಣವಾಗಿಸಿಕೊಳ್ಳುತ್ತ ಷಟ್‌ಸ್ಥಲಗಳನ್ನು ಆತ್ಮಸಾತ್ ಮಾಡಿಕೊಂಡರೆ, **ತತ್ವಪುರುಷನೇ ತಾನಾಗುವನು.** ಶರೀರ-ಪ್ರಾಣ-ಆತ್ಮಗಳು ಒಂದಕ್ಕೊಂದು ಅಭಿನ್ನವಾಗಿರುವಂತೆ ಈ **ತತ್ವತ್ರಯಗಳು** ಒಂದಕ್ಕೊಂದು ಅಭಿನ್ನವಾಗಿವೆ. ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಸಿದ್ಧಾಂತವೂ ಇದುವೇ." (ಶ್ರೀ ಸನ್ನಿಧಿ- 'ಆರೈದು'-ಭಾಗ. ೨ ಪು. ೩೭). ಹೀಗೆ, ವೀರಶೈವ ತತ್ವತ್ರಯವನ್ನು ಕುರಿತು ವಿಸ್ತೃತವಾಗಿ ವಿರಚಿತವೆಲ್ಲವೂ ತತ್ವಸಾಹಿತ್ಯವೇ ಆಗಿದೆ. ಶ್ರೀ ಸನ್ನಿಧಿಯವರು ತತ್ವಸಾಹಿತ್ಯಕ್ಕೆ ನೀಡಿರುವ ಅಪಾರ, ಅಮೂಲ್ಯ ಅಪೂರ್ವ ಕೊಡುಗೆಯನ್ನು ಈ ದೃಷ್ಟಿಕೋನದಿಂದ ಈ ಲೇಖನದಲ್ಲಿ ವಿವೇಚಿಸಲಾಗಿದೆ.

ಪರಮ ಪೂಜ್ಯ ಶ್ರೀ ಜಗದ್ಗುರು ಸನ್ನಿಧಿಯವರು ಕೆಲವು ಜೀವನ ಚರಿತ್ರೆಗಳಿಗೆ ಸಂಬಂಧಿಸಿದ ಲೇಖನ ಹಾಗೂ ಪುಸ್ತಕಗಳನ್ನು ಬಿಟ್ಟರೆ, ಅವರ ಬದುಕಿನಂತೆಯೇ ಅವರ ಬರೆಹವೆಲ್ಲವೂ ತತ್ವಪ್ರಧಾನವಾಗಿಯೇ ಉಂಟು. ಶ್ರೀ ಸನ್ನಿಧಿಯವರ ಅಧ್ಯಯನ-ಅನುಷ್ಠಾನಗಳು ತತ್ವಾನುಭವದ ಹಿನ್ನೆಲೆಯಲ್ಲಿಯೇ ನಡೆದಿದೆ. ಅಂತಲೇ ಅವರ ಶ್ರೀಮುಖದಿಂದ ಹೊರಹೊಮ್ಮುವ ವಾಣಿಯಾಗಲಿ, ಅವರ ಲೇಖನಿಯಿಂದ ಮೂಡಿ ಬರುವ ಬರೆಹವಾಗಲಿ ಸ್ವಾಭಾವಿಕವಾಗಿಯೇ ತತ್ವ ಚಿಂತನದ ಫಲಸ್ವರೂಪವಾಗಿದೆ. ಅವರ ಪರಿಶುದ್ಧ-ಪವಿತ್ರ-ಪರಿಪಕ್ವ ಹೃದಯಕಾಸಾರದಲ್ಲಿ ಆಳವಾದ ಆಧ್ಯಾತ್ಮಿಕ ಅನುಭೂತಿಯ ಅಲೆಗಳೇ ಲಾಸ್ಯವಾಡುತ್ತವೆ. ಇದು ಅವರ ವ್ಯಕ್ತಿತ್ವಕ್ಕೆ ಗಾಂಭೀರ್ಯ-ಪ್ರಸನ್ನತೆಗಳನ್ನು ತಂದು ಕೊಟ್ಟಿರುವದಲ್ಲದೆ ಅವರ ಬದುಕು ಅಪ್ಪಟ ಅಪರಂಜಿಯನ್ನಾಗಿಯೂ, ಅವರ ಬರೆಹ ಶಾಸ್ತ್ರ ಶುದ್ಧ, ತರ್ಕಬದ್ಧ ಹಾಗೂ ಅನುಭವ ಸಂಸಿದ್ಧವಾಗಿರುವಂತೆಯೂ ಮಾಡಿದೆ. ೧೯೮೦-೮೧ರ ಅವಧಿಯಲ್ಲಿ ಬರೆಯಲ್ಪಟ್ಟ ಶ್ರೀ ಸನ್ನಿಧಿಯವರ "ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ" ಎಂಬ ಮೇರುಕೃತಿ ಅವರು ತತ್ವಸಾಹಿತ್ಯಕ್ಕೆ ನೀಡಿದ ಅಪೂರ್ವ ಕೊಡುಗೆಗಳಲ್ಲಿ ಅಗ್ರಪಂಕ್ತಿಯಲ್ಲಿ ವಿರಾಜಮಾನವಾಗಬಲ್ಲ ಉದ್ಗ್ರಂಥವಾಗಿದೆ. ಅದರದಲ್ಲಿ ಶ್ರೀ ಸನ್ನಿಧಿಯವರು ವೀರಶೈವ ತತ್ವತ್ರಯದ ಬಹು ವಿಸ್ತೃತವಾದ, ವಿಶಿಷ್ಟವಾದ ಅನುಭವಪೂರ್ಣ ಮೌಲಿಕ ವಿವೇಚನೆಯನ್ನು ತತ್ವಭುಭುಕ್ಷುಗಳಿಗೆ ಆಶೀರ್ವದಿಸಿದ್ದಾರೆ. "ಹತ್ತು ಮಕ್ಕಳನ್ನು ಹಡೆಯುವದಕ್ಕಿಂತ ಮುತ್ತಿನಂಥ ಒಂದೇ ಮಗುವನ್ನು ಹಡೆದರೂ ಸಾಕು!" ಎನ್ನುವಂತೆ ಶ್ರೀ ಸನ್ನಿಧಿಯವರು ಇದೊಂದೇ ಕೃತಿರಚನೆ ಮಾಡಿದ್ದರೂ ಕೂಡ,

ಅವರು ತತ್ವಸಾಹಿತ್ಯಕ್ಕೆ ನೀಡಿದ ಕೊಡುಗೆಯೇನೂ ಮೌಲಿಕತೆಯಲ್ಲಿ ಕೊರತೆಯಾಗುತ್ತಿರಲಿಲ್ಲ! ಇದು ನನ್ನ ಹೃದಯುದ ಆಶಯುವನ್ನು ಸಂಪೂರ್ಣವಾಗಿ ಅಭಿವ್ಯಕ್ತಿಸಿದರೆ, ನನ್ನ ಮಾತು ಸಾರ್ಥಕವಾದಂತೆಂದು ಬಗೆವೆ. ಆದರೆ ನಮ್ಮ ಸುದೈವದಿಂದ ಅವರ ಲೇಖನಿಯು ಅಷ್ಟಕ್ಕೇ ವಿರಮಿಸದೆ ಮತ್ತೆ ಹತ್ತು ಹಲವು ಚಿಕ್ಕ ದೊಡ್ಡ ಗ್ರಂಥಗಳ ರೂಪದಲ್ಲಿ ಅವರ ಅನುಭವ ತಪಸ್ಸಿನ ಪರಿಪಕ್ವ ಫಲಗಳನ್ನು ಕನ್ನಡ ಮುಮುಕ್ಷಗಳಿಗೆ ನೀಡಿವೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ಹೆಸರಿಸಬಹುದಾದರೆ, ಅವರಿಂದ ರಚಿತ "ಆರೈದು" (ನಾಲ್ಕು ಭಾಗ ಗಳಲ್ಲಿ), "ವೈರಾಗ್ಯ ನಿಧಿ ಶ್ರೀ ಅಕ್ಕಮಹಾದೇವಿಯುವರ ಯೋಗಾಂಗ ತ್ರಿವಿಧಿ ವ್ಯಾಖ್ಯಾನ", ಶಿವಯೋಗ, ವಚನ, ಸಂಪದ ಮತ್ತು ಮಾನವ ಧರ್ಮ ಇವು ನಿಜಕ್ಕೂ ಕನ್ನಡ ಸರಸತಿಯ ಭಾಂಡಾರವನ್ನು ಇನ್ನಷ್ಟು ಧೀಮಂತವೂ, ಶ್ರೀಮಂತವೂ ಆಗುವಂತೆ ಮಾಡಿವೆ. ನಿಜವಾಗಿಯೂ, ಇವುಗಳಲ್ಲಿ ಕೆಲವಾದರೂ ಹಿಂದಿ, ಮರಾಠಿ, ತೆಲಗು, ತಮಿಳು ಮೊದಲಾದ ಭಾರತದ ಇತರ ಪ್ರಮುಖ ಭಾಷೆಗಳಲ್ಲಿ ಅನುವಾದಗೊಳ್ಳಲು ಅರ್ಹವಾಗಿವೆ.

"ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಗಳಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ" ಎಂಬೀ ಗ್ರಂಥದಲ್ಲಿ ಬಂದಿರುವ ವೀರಶೈವ ತತ್ವತ್ರಯುದ ವಿವೇಚನೆಯ ಕೆಲವು ಸಂಗತಿಗಳನ್ನು ನಾವೀಗ ನೋಡಿಕೊಳ್ಳಲು ಯತ್ನಿಸೋಣ. ಜೊತೆ ಜೊತೆಗೆ ನಾವು ನೋಡಿಕೊಳ್ಳುವ ಸಂಗತಿಗಳಿಗೆ ಸದೃಶವಾದ ಮಾತುಗಳನ್ನು ಅವರ ಬೇರೆ ಗ್ರಂಥ ಗಳಿಂದ ಸಾಧ್ಯವಾದಷ್ಟು ಸಂಕ್ಷಿಪ್ತವಾಗಿ ಅವಲೋಕಿಸೋಣ, ಪೂಜ್ಯ ಶ್ರೀ ಮೈಲಾರ ಬಸವಲಿಂಗ ಶರಣರ ಸಮಗ್ರ ಗ್ರಂಥಗಳೂ ಸಹ ವೀರಶೈವ ತತ್ವ ವಿವೇಚನೆಯನ್ನು ಬಹು ವಿಶಿಷ್ಟವಾದ ಶೈಲಿಯಲ್ಲಿ ಮತ್ತು ಅಷ್ಟೇ ವಿಸ್ತಾರವಾದ ರೀತಿಯಲ್ಲಿ ಒಳಗೊಂಡಿವೆ. ಅವು ಗಳಲ್ಲಿ "ಮೈಲಾರ ಬಸವಲಿಂಗ ಶರಣರ ತ್ರಿವಿಧಿಗಳು ವೀರಶೈವ ದಾರ್ಶನಿಕ ಸಿದ್ಧಾಂತ"ವೂ ಒಂದು, ಗುರುಕರುಣ ತ್ರಿವಿಧಿ" ಒಟ್ಟು ೩೩೩ ತ್ರಿಪದಿಗಳನ್ನು ಒಳಗೊಂಡಿದೆ. ಶ್ರೀ ಸನ್ನಿಧಿಯುವರು ಈ ಎಲ್ಲ ೩೩೩ ತ್ರಿವಿಧಿಗಳಿಗೂ ಕೂಡ ಒಂದು ಶಬ್ದವನ್ನೂ ಬಿಡದೆ ಸಮಗ್ರ ವಾದ ವಿವರಣೆ ನೀಡಿದ್ದಾರೆ. ಅವರು ಸುಮ್ಮನೆ ಪ್ರತಿಯೊಂದು ತ್ರಿವಿಧಿಗೂ ಉದ್ದಕ್ಕೂ ವಿವರಣೆ ಕೊಡುತ್ತ ಹೋಗಿಲ್ಲ. ತ್ರಿವಿಧಿಗಳನ್ನೆಲ್ಲಾ ಸೂಕ್ತ ಶೀರ್ಷಿಕೆಗಳ ಕೆಳಗೆ ವರ್ಗೀಕ ರಿಸಿ ಆಯಾ ಶೀರ್ಷಿಕೆಗಳ ಕೆಳಗೆ ಬರುವ ವಿಷಯುವನ್ನು ಸಂಕ್ಷಿಪ್ತವಾದರೂ ಅತ್ಯಂತ ಸಮಗ್ರವಾದ ರೀತಿಯಲ್ಲಿ ವಿವೇಚಿಸಿದ್ದಾರೆ. ಇಷ್ಟೇ ಅಲ್ಲ, ಆಯಾ ವಿಷಯ ತನ್ನ ಆಂತರಿಕ ಶಕ್ತಿಯಿಂದಲೇ ತನ್ನಷ್ಟಕ್ಕೆ ತಾನೇ ಹಂತ-ಹಂತವಾಗಿ ಬೆಳೆಯುತ್ತ ಹೋಗಿ ಕೊನೆಯಲ್ಲಿ ಪೂರ್ಣತೆಯ ಶಿಖರವನ್ನು ಮುಟ್ಟುತ್ತದೇನೋ, ಎಂಬಂತಹ ಅದ್ಭುತ ಶೈಲಿಯಲ್ಲಿ ಶ್ರೀ ಸನ್ನಿಧಿಯುವರು ವಿಷಯು ವಿವೇಚನೆ ಮಾಡಿದ್ದಾರೆ. ಬಹುಶಃ ಇಂತಹ ಅದ್ಭುತ ಕಲೆ ಸುರಿತ ಬರೆಹಗಾರರಿಗೆ ಮಾತ್ರ ಸಾಧಿಸುವಂತಹದು. ಅನುಷ್ಠಾನರೂಪ ತಪಸ್ಸಿನೊಂದಿಗೆ ಅಧ್ಯಯನ ತಪಸ್ಸು, ಪ್ರವಚನ ತಪಸ್ಸು, ಲೇಖನ ತಪಸ್ಸು ನಡೆದಿದೆ,

ನಡೆಯುತ್ತಿದೆಯೆಂದು ಧಾರಾಳವಾಗಿ ಹೇಳಬಹುದು. ಅವರ ಜನ ಸೇವಾರೂಪ ತಪಸ್ಸಂತೂ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅವ್ಯಾಹತವಾಗಿ ನಡೆದೇ ಇರುವವನ್ನು ನಾನಿಲ್ಲಿ ಬೇರೆ ಹೇಳಬೇಕಾಗಿಲ್ಲ. ನಿಜಕ್ಕೂ ಈ **"ವೀರಶೈವ ದಾರ್ಶನಿಕ ಸಿದ್ಧಾಂತ"** ಗ್ರಂಥದಲ್ಲಿ ಬಂದಿರುವ ಅವರ ವಿವೇಚನಾ ಪದ್ಧತಿಯು ಅವರ ಅಧ್ಯಯನ ತಪಸ್ಸಿನ ಸತ್ಫಲವಾಗಿದೆ. ಆದರ ಜೊತೆಗೆ ಇದು ಅವರು ಅನುಷ್ಠಾನ ಬಲದಿಂದ ಪಡೆದಿರುವ ಸ್ವಾನುಭಾವದ ಹಿನ್ನೆಲೆಯನ್ನು ಹೊಂದಿರುವದು ಒಂದು ಅರ್ಥಪೂರ್ಣವಾದ ವೈಶಿಷ್ಟ್ಯವಾಗಿದೆ.

ಅವರು ಆಯಾ ಮುಖ್ಯ ವಿಭಾಗಗಳ ಕೆಳಗೆ ಬರುವ ಉಪ ವಿಭಾಗಗಳಿಗೆ ಶೀರ್ಷಿಕೆ ಕೊಟ್ಟಿರುವದರಲ್ಲಿ ನಾವು ಆ ವೈಶಿಷ್ಟ್ಯ-ವೈಭವೋಪೇತ ಶೈಲಿಯಲ್ಲಿ ಕಾಣುತ್ತೇವೆ. ಒಂದೇ ಮಾತಿನಲ್ಲಿ ಹೇಳುವದಾದರೆ, ಹೀಗೆ ವಿಷಯ ನಾಮ ನಿರ್ದೇಶನ ಮಾಡುವದರಲ್ಲಿಯೇ ಅವರ ತತ್ವ-ಚಿಂತನದ, ಸಿದ್ಧಾಂತ ಪರಿಜ್ಞಾನದ, ಸ್ವಾನುಭಾವ-ಪ್ರಕಾಶದ ಹಾಗೂ ನಿರೂಪಣಾಶೈಲಿಯ ಆಳ-ಆಗಲಗಳನ್ನು ನಾವು ಸುಲಭವಾಗಿ ಗುರುತಿಸಬಲ್ಲೆವು. ಆದರ ಪೂರ್ಣ ವಿವರಗಳ ವಿವೇಚನೆಯೇ ಒಂದು ಸ್ವತಂತ್ರ ಅಧ್ಯಯನದ ವಿಷಯವಾಗಿರುವದರಿಂದ ಅದು ಈ ಲೇಖನದ ಪರಿಮಿತಿಗೆ ಹೊರತಾದುದು. ಆದರೆ ಅದರ ಝಳುಕನ್ನು ಮಾತ್ರ ಅದೂ ತತ್ವಸಾಹಿತ್ಯ ಅವರ ಕೊಡುಗೆಯ ವೈಶಿಷ್ಟ್ಯವನ್ನು ಎತ್ತಿ ತೋರಿಸುವ ಮಟ್ಟಿಗೆ ಮಾತ್ರ ಇಲ್ಲಿ ತೋರ್ಪಡಿಸಲಾಗುತ್ತದೆ.

'ಶ್ರೀಗುರು' ಎಂಬ ಮುಖ್ಯ ಶೀರ್ಷಿಕೆಯಡಿಯಲ್ಲಿ ಬರುವ ವಿಷಯ ನಾಮ ನಿರ್ದೇಶನ ಅವರು ಈ ಉದ್ಗ್ರಂಥದ ಉದ್ದಕ್ಕೂ ಮಾಡಲಿರುವ ಉದ್ದಾಮ, ಉತ್ಕೃಷ್ಟ ವಿವೇಚನೆಗೆ ತಕ್ಕ ಪೂರ್ವ ಪೀಠಿಕೆಯನ್ನು ಒದಗಿಸುತ್ತದೆ. ಉದಾಹರಣೆಗಾಗಿ, ೧. ಶ್ರೀ ಗುರು ಪ್ರಾರ್ಥನೆ, ೨. ಸದ್ಗುರುವಿನ ಸ್ವರೂಪ, ೩. ಗುರುವಿನ ಮಹತ್ವ, ೪. ಗುರು ಕೃಪೆಯ ಅವಶ್ಯಕತೆ, ೫. ಸದ್ಗುರುವಿನ ಮಹಿಮಾತಿಶಯ, ೬. ಶ್ರೀ ಗುರುವೇ ಸಕಲ ಬಂಧು-ಬಳಗ-ಈ ಉಪಶೀರ್ಷಿಕೆಗಳ ಅಡಿಯಲ್ಲಿ ಬರುವ ತ್ರಿವಿಧಿಗಳು ಮತ್ತು ಅವುಗಳ ವಿವರಣೆ ಇವು ಸಮಗ್ರ ಗ್ರಂಥಕ್ಕೇನೇ ಯೋಗ್ಯ ಪೀಠಿಕೆಯನ್ನು ಒದಗಿಸುತ್ತವೆ. ಶ್ರೀ ಸನ್ನಿಧಿಯವರು ಇಲ್ಲಿ ಅಷ್ಟಾವರಣಗಳಲ್ಲಿ ಬರುವ 'ಗುರು' ಎಂಬ ಪ್ರಥಮಾವರಣವನ್ನು ಬಹು ಸುಂದರವಾಗಿ, ಸುವಿಶದವಾಗಿ ವಿವೇಚಿಸಿದ್ದಾರೆ. ಈ ವಿವೇಚನೆಯಲ್ಲಿ 'ಶ್ರೀ' ಮತ್ತು 'ಗುರು'—ಈ ಪದಗಳ ಅಕ್ಷರಾರ್ಥವನ್ನು **"ಅಮರಕೋಶ"** ಹಾಗೂ **"ಶ್ರೀ ಗುರು ಗೀತಾ"** ಎಂಬ ಗ್ರಂಥಗಳ ಆಧಾರದಿಂದ ಬಹು ಮಾರ್ಮಿಕವಾಗಿ ವಿವರಿಸಿದ್ದಾರೆ. ಇಂಥ ಪರಮ ಗುರುವಿನ ಉಪದೇಶ ಶಿಷ್ಯನ ಹೃದಯವನ್ನು ಪ್ರವೇಶಿಸಬಲ್ಲುದು. ಮತಿಗೆ ಮಂಗಲವನ್ನೀಯಬಲ್ಲುದು. ಪ್ರೇಮದಿಂದೆ ತೀವ್ರವಾಗಿ ಕರುಣೆ ದೊರೆಯಬಹುದು," ಎಂದು ಮುಂತಾಗಿ ಹೇಳುತ್ತ "ಈ **'ಗುರುಕರುಣ ತ್ರಿವಿಧಿ'** ಯಲ್ಲಿ ಪ್ರತಿಪಾದಿಸಲ್ಪಟ್ಟ **'ಶ್ರೀ ಗುರು' ನಿರಾಭಾರಿಗುರು**ವೆಂಬುದರಲ್ಲಿ ಯಾವ ಸಂಶಯವಿಲ್ಲ" ಎಂದು

ನಿರ್ಣಯಿಸಿದ್ದಾರೆ. "ಮತಿ ಮಲಿನವಾಗುವದು ಮಾನವ ಸಮಾಜಕ್ಕೆ ಸಹಜವಾದುದು. ಮಲಿನವಾದ ಮತಿಯನ್ನು ಗುರುಸನ್ನಿಧಿಯಲ್ಲಿ ಮಂಗಳಮಯುಗೊಳಿಸುವದೇ ಮಾನವನ ಕರ್ತವ್ಯ" ಎಂದು ಹೇಳಿ ಆಧ್ಯಾತ್ಮಿಕಲೋಕದ ಅಬಾಧಿತ ಅನುಭವ ಸತ್ಯವೊಂದನ್ನು ಎತ್ತಿ ಹಿಡಿದಿದ್ದಾರೆ.

"ಸದ್ಗುರುವು ಸಾಮಾನ್ಯನಲ್ಲ....ಸದ್ಗುರುವು ಬಾಹ್ಯ ಹಾಗೂ ಆಂತರಿಕವಾಗಿಯೂ ಮನೋಹರನಾಗಿರುತ್ತಾನೆ. ಸೌಂದರ್ಯಕ್ಕೆ ತಕ್ಕ ಶಿವತ್ವವೂ ತುಂಬಿ ತುಳುಕುತ್ತಿರುತ್ತದೆ. ಮಂಗಲಮಯವಾದ ಸೌಂದರ್ಯದಲ್ಲಿ ಅವಶ್ಯವಾಗಿ ಸತ್ಯವಿರುತ್ತದೆ. **ಸತ್ಯಂ ಶಿವಂ ಸುಂದರಂ** ತತ್ವ ಓತಪ್ರೋತವಾಗಿರುತ್ತದೆ. ಅದು ಕಾರಣ, ಸದ್ಗುರುನಾಥನು ನೈಜ ವಾದ ಭಕ್ತಿಜ್ಞಾನ-ವೈರಾಗ್ಯಗಳಿಗೆ ಆಶ್ರಯಸ್ವರೂಪನಾಗಿರುತ್ತಾನೆ. ಸದ್ಗುರುವಿನ ಭಕ್ತಿ-ಜ್ಞಾನ-ವೈರಾಗ್ಯಗಳಲ್ಲಿ ಅಸಹಜತೆಯಿರುವದಿಲ್ಲ. ಮೂರೂ ಸತ್ಯಸ್ವರೂಪವಾಗಿರುತ್ತವೆ. ಯಥಾರ್ಥವಾಗಿ ಸದ್ಗುಣಭರಿತನಾದವನೇ ಇನ್ನಿತರರಿಗೆ ಸದ್ಗುಣಗಳನ್ನು ಕಲಿಸಬಲ್ಲನು. ಡಾಂಭಿಕ ಮನೋಭಾವದಿಂದ ಭಕ್ತಿ-ಜ್ಞಾನ-ವೈರಾಗ್ಯಗಳು ಹರಿದುಬರಲಾರವು. ಭಕ್ತರ ಹೃದಯದಲ್ಲಿ ಬೆಳೆದು ಫಲನೀಡಲಾರವು. ಸದ್ಗುರುವು ವಂಚನೆಯಿಲ್ಲದೆ ಭಕ್ತಿಯಿಂದ ಬಂದ ಭಕ್ತರಿಗೆ ಕಲ್ಪತರುವಿನಂತೆ ಭಕ್ತಿ-ಜ್ಞಾನ-ವೈರಾಗ್ಯಗಳನ್ನು ನೀಡುತ್ತಿದ್ದರೆ, ಆತ್ಮೀಯತೆ ಬೆಳೆದು ಬರುತ್ತದೆ" ಎಂದು ಹೇಳುವ ಶ್ರೀ ಸನ್ನಿಧಿಯವರ ಕಳಕಳಿಯ ಜೊತೆಗೆ ಅವರು ಸದ್ಗುರು ಸ್ವರೂಪವನ್ನು ತಮ್ಮ ಅಂತಃಚಕ್ಷುವಿನೆದುರು ಯಾವ ಬಗೆಯಾಗಿ ಚಿತ್ರಿಸಿಕೊಂಡಿದ್ದಾರೆಂಬುದೂ ಸ್ಫುಟವಾಗಿ ದೃಗ್ಗೋಚರವಾಗುತ್ತದೆ. ವೀರಶೈವದ ಪರಿವಿಡಿಯಲ್ಲಿ ಗುರುವಿನ ಸ್ವರೂಪವನ್ನು ಕುರಿತು "ಯಾರು ಹೆಣ್ಣು-ಹೊನ್ನು-ಮಣ್ಣುಗಳಲ್ಲಿ ನಿರಾಶೆಯುಳ್ಳವರಾಗಿ ಮಲತ್ರಯವನ್ನು ದೂರಮಾಡಿಕೊಂಡಿರುತ್ತಾರೆಯೋ ಅಂಥವರು ಮಾತ್ರ ಭಕ್ತರ ಸಂಕಲ್ಪ-ವಿಕಲ್ಪಗಳನ್ನು ದೂರಮಾಡಿ ಮಲತ್ರಯಗಳಿಂದ ಮುಕ್ತರನ್ನಾಗಿ ಮಾಡಬಲ್ಲರು" ಎಂದು ಅವರು ಅಪ್ಪಣೆ ಕೊಡಿಸುವ ಮಾತು ತ್ರಿವಾರ ಸತ್ಯವಾಗಿದೆ. ಕಾರ್ಯ-ಕಾರಣ ಭಕ್ತಿತೂರ್ಯತಾಮಸದ ಚಿತ್। ಸೂರ್ಯ ಎಡರಿಂಗೆ ಧೈರ್ಯವಾಗಿಹ ಗುರು। ವರ್ಯ ನೀ ನೆನಗೆ ಕೃಪೆಯಾಗು ॥೪॥ ಸಾಧ್ಯ ಸದ್ಭಕ್ತರ್ಗೆ। ವೇದ್ಯ ಲಿಂಗೈಕ್ಯರ್ಗೆ। ಭೇದ್ಯ ಸತ್-ಪ್ರಮಥ ಗಣನಿಕರವೆಲ್ಲಕ್ಕಾ। ರಾಧ್ಯ ನೀನೆನಗೆ ಕೃಪೆಯಾಗು ॥೫॥ ಎಂಬ ಎರಡು ತ್ರಿವಿಧಿಗಳಲ್ಲಿ ಬರುವ ಸಾಧ್ಯ, ವೇದ್ಯ, ಭೇದ್ಯ ಹಾಗೂ ಆರಾಧ್ಯ, ಅಂತೆಯೇ ಕಾರಣತ್ವ, ತುರ್ಯತ್ವ, ಚಿತ್‌ಸೂರ್ಯತ್ವ ಮತ್ತು ಧೈರ್ಯತ್ವಗಳನ್ನು ತಿಳಿಸಿಕೊಡುವ ಶ್ರೀ ಸನ್ನಿಧಿಯವರ ಶೈಲಿ ಅತ್ಯಂತ ಮನಂಬುಗುವಂತಹದಾಗಿದೆ. ಗುರುವು ಸಾಧಕರಿಗೆ ಸಾಧ್ಯ, ಸಿದ್ಧರಿಗೆ ವೇದ್ಯ, ಪರಿಪೂರ್ಣರಿಗೆ ಭೇದ್ಯನಾಗಿದ್ದಾನೆಂದು ಹೇಳಿ ಅವನು ಸರ್ವರಿಗೂ ಆರಾಧ್ಯನಾಗಿದ್ದಾನೆಂದು ನಿರೂಪಿಸಿದ್ದಾರೆ. ಇಲ್ಲಿ ಬರುವ "ಭಕ್ತನಾಗಿ ಲಿಂಗವನ್ನು ಆಯತಮಾಡಿಕೊಳ್ಳುವವನೇ ಸಾಧಕನು. ಲಿಂಗ

ಗುಣಗಳನ್ನು ಸ್ವಾಯತ್ತೀಕರಿಸಿಕೊಂಡವನೇ ಲಿಂಗೈಕ್ಯನು. ಅವನೇ ಸಿದ್ಧನು. ಲಿಂಗವನ್ನು ಸನ್ನಿಹಿತಮಾಡಿಕೊಂಡು ತಾನೇ ಲಿಂಗವಾದವನು ಪರಿಪೂರ್ಣನು ಅಥವಾ ಸ್ವತಃಸಿದ್ಧನೆನ್ನ ಬಹುದು; ಅವನೇ ಪ್ರಮಥ ಪುಂಗವ" ಎಂಬ ಮಾತಿನಲ್ಲಿ ಶ್ರೀಗಳವರ ಅನುಭವ ಪ್ರಕಾಶ ತಾನೇ ತಾನಾಗಿ ತೊಳಗಿಬೆಳಗಿದೆ. "ಗುರುವಿಗೂ ಪರಶಿವನಿಗೂ ಭಿನ್ನತೆಯಿಲ್ಲ. ಶಿವನ ಸಾಕಾರ ಮೂರ್ತಿಯೇ ಸದ್ಗುರುವು. ಗುರುಸಾಕ್ಷಾತ್ಕಾರವೇ ಶಿವಸಾಕ್ಷಾತ್ಕಾರವಾಗಿದೆ. ಅದು ಕಾರಣ ಗುರುದೇವನು ಸದ್ಭಕ್ತರ್ಗೆ ಸಾಧ್ಯನಾಗುತ್ತಾನೆ. ಲಿಂಗೈಕ್ಯರ್ಗೆ ವೇದ್ಯನಾಗುತ್ತಾನೆ. ಸತ್‌ಪ್ರಮಥಂಗೆ ಭೇದ್ಯನೂ ಬೋಧ್ಯನೂ ಆಗುತ್ತಾನೆ. ಅಂಥ ಸದ್ಗುರು ಸರ್ವರಿಗೂ ಆರಾಧ್ಯನಾಗುವದರಲ್ಲಿ ಸಂಶಯವೇನಿದೆ?" ಇದು ಶ್ರೀ ಸನ್ನಿಧಿಯವರ ಶ್ರೀವಾಣಿಯ ಸಂಪದ್ಭರಿತ ವೈಭವ.

'ಶ್ರೀಗುರು' ಎಂಬೀ ವಿಭಾಗದಲ್ಲಿ ೧-೭೪ ತ್ರಿವಿಧಿಗಳುದ್ದಕ್ಕೂ ಶ್ರೀ ಸನ್ನಿಧಿಯವರು ಗುರುಕರುಣ ಹಾಗೂ ಲಿಂಗಧಾರಣಗಳಿಗೆ ಪೂರ್ವಭಾವಿಯಾಗಿ ಬರುವ ಸಮಗ್ರ ವಿಷಯಗಳನ್ನು ತಮ್ಮ ಸರಳ, ಸುಂದರ ಶೈಲಿಯಲ್ಲಿ ನಿರೂಪಿಸಿದ್ದಾರೆ. ಬಳಿಕ, ಅಷ್ಟಾವರಣಗಳಲ್ಲಿ ಎರಡನೆಯದಾದ **'ಲಿಂಗ'** ಎಂಬುದರ ವಿವೇಚನೆಯನ್ನು ೭೫-೨೦೬ ತ್ರಿವಿಧಿಗಳುದ್ದಕ್ಕೂ ಬಹು ವಿಸ್ತಾರವಾಗಿ, ಪರಿ-ಪರಿಯಿಂದ ತಿಳಿಸಿಕೊಟ್ಟಿದ್ದಾರೆ. ನುಡಿಯ ಬ್ರಹ್ಮವು ನಡೆಗೆ ಬಂದುದೇ ಇಷ್ಟಲಿಂಗ ಮುಂತಾದ ಉಪವಿಭಾಗಗಳ ಆಕರ್ಷಕ ಶೀರ್ಷಿಕೆಗಳ ಅಡಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತದ ಅತಿ ಮೌಲಿಕ ವಿಷಯಗಳನ್ನೆಲ್ಲಾ ಅತ್ಯಂತ ಮನೋಹರ ಮತ್ತು ಮನೋಜ್ಞಶೈಲಿಯಲ್ಲಿ ಸುಶ್ರಾವ್ಯವಾಗಿ, ಸಪ್ರಮಾಣವಾಗಿ ವಿವೇಚಿಸಿದ್ದಾರೆ. ಅವರು ಲಿಂಗವೆಂದರೇನು? ಅದರ ಸ್ವರೂಪವೇನು? ಎಂಬಂತಹ ಪ್ರಶ್ನೆಗಳಿಗೆ ವ್ಯಾಪಕವಾದ ಚರ್ಚೆಯ ರೂಪದಲ್ಲಿ ಉತ್ತರವನ್ನು ದಯಪಾಲಿಸಿದ್ದಾರೆ. "ಯಾವ ಮಹಾವಸ್ತುವಿನಲ್ಲಿ ಸಕಲ ಚರಾಚರ ಪ್ರಾಣಿಗಳು ಲೀನವಾಗುವವೋ, ಪುನಃ ಹುಟ್ಟುವವೋ ಅದುವೆ ಲಿಂಗವೆಂಬುದಾಗಿ ಲಿಂಗತತ್ವವನ್ನು ಬಲ್ಲಜ್ಞಾನಿಗಳು ನಿರೂಪಿಸಿದ್ದಾರೆ ಮತ್ತು ಈ ಲಿಂಗಮಧ್ಯದಲ್ಲಿ ಮೂರು ಲೋಕದ ಸಕಲ ಚರಾಚರ ಜಗತ್ತು ಅಡಗಿದೆ; ಇದನ್ನು (ಲಿಂಗವನ್ನು) ಹೊರತುಪಡಿಸಿ ಬೇರೆ ಯಾವುದೂ ಇಲ್ಲ; ಎಲ್ಲವನ್ನೂ ಒಳಕೊಂಡ ಮಹಾಲಿಂಗವನ್ನು ಚನ್ನಾಗಿ ಪೂಜಿಸಬೇಕು ಎಂದು ತಿಳಿಸಿದ್ದಾರೆ. ಇದು ಬ್ರಹ್ಮಾದಿ ದೇವತೆಗಳಿಗೂ ದೊರಕಿಲ್ಲ; ಇಂಥ ಮಹಾಘನಲಿಂಗವನ್ನು ಗುರು ಇಷ್ಟಲಿಂಗವನ್ನಾಗಿ ಕರುಣಿಸುತ್ತಾನೆ; ಅರುಹಿನ ಕುರುಹನ್ನಾಗಿ ಉಪದೇಶಿಸುತ್ತಾನೆ. ಚಿಚ್ಚೈತನ್ಯದ ಚುಳುಕಾಗಿ ಅನುಗ್ರಹಿಸುತ್ತಾನೆ" ಎಂದು ಲಿಂಗದ ಸ್ವರೂಪವನ್ನು ಶಾಸ್ತ್ರಾಧಾರದಿಂದ ತಿಳಿಸಿಕೊಟ್ಟಿದ್ದಾರೆ. "ಬ್ರಹ್ಮಾಂಡಗತವಾದ ಮಹಾಲಿಂಗವು ಮಹಾಚೈತನ್ಯವಾಗಿದ್ದರೆ, ಪಿಂಡಾಂಡಕ್ಕೆ ಪ್ರಾಪ್ತವಾದ ಇಷ್ಟಲಿಂಗವು ಮಹಾಚೈತನ್ಯದ ಚುಳುಕು. ಇಷ್ಟಲಿಂಗವನ್ನು ಸಂಶೋಧಿಸಿದ ಮಹಾನುಭಾವರು ಮನುಷ್ಯನ ಆಕಾರಕ್ಕೇನೇ ಸಾದೃಶ್ಯಗೊಳಿಸಿದ್ದಾರೆ. ಈ ಲಿಂಗವು ಐದು ಲಕ್ಷಣಗಳಿಂದ ಕೂಡಿರಬೇಕು. ಇವಕ್ಕೆ ಪಂಚಸೂತ್ರಗಳೆನ್ನುವರು" ಎಂದು

ಹೇಳುತ್ತ ಲಿಂಗದ ನೆಲೆ-ಕಲೆಗಳನ್ನು ಅನುಭವಪೂರ್ಣವಾಗಿ ನಿರೂಪಿಸಿದ್ದಾರೆ. "ವೀರಶೈವ ಧಾರ್ಮಿಕ ಪರಿಕಲ್ಪನೆಗಳಲ್ಲಿ ಮತ್ತು ಆಚಾರ-ವಿಚಾರಗಳಲ್ಲಿ ವೈಜ್ಞಾನಿಕತೆ ತುಂಬಿತುಳುಕಿದೆ. ಇಲ್ಲಿ ಯಾವ ಮಾತನ್ನೂ ಮೂಢನಂಬಿಕೆಯಿಂದಾಗಲಿ; ರಂಜನೆಯಿಂದಾಗಲಿ ಹೇಳಿಲ್ಲ, ಎಂಬಂತಹ ಖಚಿತವಾಣಿಯಲ್ಲಿ ಅವರ ಸ್ವಾನುಭಾವ ಪ್ರಭೆಯ ಪ್ರತಿಭಾಪೂರ್ಣ ಪ್ರಭಾವ ಎದ್ದುಕಾಣುತ್ತದೆ. ಇಂಥ ಇಷ್ಟಲಿಂಗವನ್ನು ದೀಕ್ಷಾಸಂಸ್ಕಾರದ ಮೂಲಕ ಗುರುವಿನಿಂದ ಪಡೆದುಕೊಳ್ಳಬೇಕಾಗುತ್ತದೆ. "ಆಧ್ಯಾತ್ಮ ಜೀವನದಲ್ಲಿ ಗುರುಪುತ್ರನಾಗುವದೇ ಉನ್ನತ ಮಾರ್ಗ. ಅದರಲ್ಲೂ ವೀರಶೈವ ಸಿದ್ಧಾಂತವು ತತ್ವಪ್ರಧಾನವಾದುದು. ವೀರಶೈವವು ಜಾತಿಸೂತಕವಲ್ಲ; ತತ್ವ ಸೂಚಕವಾದುದು. ಗುರುಕರಜಾತನಾಗುವದು ಬಹು ಮುಖ್ಯವಾದ ಪ್ರಕ್ರಿಯೆ" ಎಂದು ಪೂಜ್ಯರು ಅಪ್ಪಣೆಕೊಡಿಸುವಾಗ ವೀರಶೈವ ಧರ್ಮದ ರಹಸ್ಯವನ್ನೇ ತೆರೆದಿಟ್ಟಿದ್ದಾರೆ. ಇದು ಅವರ ಸ್ವಾನುಭವಕ್ಕೆ ಹಿಡಿದ ರನ್ನಗನ್ನಡಿ.

ಈ ವಿಭಾಗದಲ್ಲಿ ಸಂಸ್ಕಾರ, ದೀಕ್ಷೆಯ ಮಹತ್ವ, ದೀಕ್ಷೆಯ ಪ್ರಕಾರಗಳು, ಅಂಗನಾದವನೇ ಲಿಂಗವಾಗುವ ಬಗೆ, ಸರ್ವಾಂಗಲಿಂಗಿಯ ಸ್ಥಿತಿ ಮೊದಲಾದ ಆಧ್ಯಾತ್ಮಲೋಕದ ಅನುಭವ ಸಿದ್ಧಾಂತಗಳ ಸವಿಸ್ತಾರವಾದ ಸಮಾಲೋಚನೆ ಶ್ರೀ ಸನ್ನಿಧಿಯವರ ಲೇಖನಿಯಿಂದ ನಿರಪವಾದವಾಗಿ, ನಿರುಪಾಧಿಕವಾಗಿ, ನಿರರ್ಗಳವಾಗಿ ಹರಿದು ಬಂದಿದೆ. ಇದು ನಿಜವಾಗಿಯೂ ಸಾಧಕ-ಸಂಜೀವಿನಿಯಾಗಿದೆಯೆಂದು ಹೇಳಬಹುದು. ನವಚಕ್ರಗಳಲ್ಲಿ ನವಲಿಂಗಗಳ, ಲಿಂಗಷಟ್-ಸ್ಥಲಗಳ ವರ್ಣನೆಯೊಂದಿಗೆ, ಅಷ್ಟಾಂಗಯೋಗ ನಿರಸನ ಮೂಲಕ ಶಿವಯೋಗ (ಲಿಂಗಾಂಗಯೋಗ)ದ ವಿವೇಚನೆ ಇಲ್ಲಿ ಗೋಚರಿಸುವ ಅತಿ ಮಹತ್ವದ ವಿಷಯುಗಳಲ್ಲಿ ಒಂದಾಗಿದೆ. ಅಂತೆಯೇ, ಹತ್ತು ಚಕ್ರಗಳಲ್ಲಿ ಇಷ್ಟಲಿಂಗ (ಹತ್ತು ಚಕ್ರಗಳ ಗೊತ್ತು-ಗುರಿ), ಕರ್ಮೇಂದ್ರಿಯಗಳಲ್ಲಿ ಕ್ರಿಯಾಲಿಂಗ (ಇಷ್ಟಲಿಂಗ ಸಂಬಂಧ), ಜ್ಞಾನೇಂದ್ರಿಯಗಳಲ್ಲಿ ಪ್ರಾಣಲಿಂಗ (ಪ್ರಾಣಲಿಂಗ ಸಂಬಂಧ) ಮತ್ತು ಕರ್ಮೇಂದ್ರಿಯ (ಕರಣಂ)ಗಳಲ್ಲಿ ಭಾವಲಿಂಗ (ಭಾವಲಿಂಗ ಸಂಬಂಧ) ಎಂಬೀ ವಿಷಯಗಳೂ ಸಹ ಅತ್ಯಂತ ಮಹತ್ವದವಾಗಿವೆ. ಶ್ರೀಗಳವರ ವಿಸ್ತಾರವಾದ ಜ್ಞಾನಾನುಭವ ದಿವ್ಯ ಸಂಪತ್ತಿಗೆ, ಅಂತೆಯೇ ಅವರ ವಿದ್ವತ್ಪೂರ್ಣ ವಿವೇಚನೆಗೆ ಮತ್ತು ಸರಳ, ಸುಂದರ ನಿರೂಪಣೆಗೆ ಹಿಡಿದ ಕನ್ನಡಿಯಾಗಿದೆ ಈ ವಿಭಾಗದ ವಿವರಣೆ.

ಬಳಿಕ ಬರುವ **'ಜಂಗಮ'** ಎಂಬ ಮುಖ್ಯ ವಿಭಾಗದ ಶೀರ್ಷಿಕೆಯಡಿಯಲ್ಲಿ ಲಿಂಗದ ಪ್ರಾಣವೇ ಜಂಗಮ, ನುಡಿದಂತೆ ನಡೆವ ಷಡುಸ್ಥಲದಿರವು ಮುಂತಾದ ಉಪ ಶೀರ್ಷಿಕೆಗಳ ಕೆಳಗೆ ೨೦೭-೨೬೯ ತ್ರಿವಿಧಿಗಳ ವ್ಯಾಪ್ತಿಯಲ್ಲಿ ಅನೇಕ ಮಹತ್ವದ ವಿಷಯಗಳನ್ನು ಶ್ರೀಸನ್ನಿಧಿಯವರು ಬಹುಮನೋಜ್ಞವಾಗಿ ನಿರೂಪಣ ಶೈಲಿಯಲ್ಲಿ ವಿವೇಚಿಸಿದ್ದಾರೆ. ವೀರಶೈವತತ್ವ ಸಾಹಿತ್ಯದಲ್ಲಿ ಷಟ್‌ಸ್ಥಲಾಚರಣೆಗೆ ಅತಿ ಮಹತ್ವದ ಸ್ಥಾನವಿದೆ. ಒಂದರ್ಥದಲ್ಲಿ ವೀರಶೈವ ಸಿದ್ಧಾಂತವೆಂದರೇನೇ ಷಟ್‌ಸ್ಥಲ 'ಸಿದ್ಧಾಂತ ಸ್ಥಲ' ಎಂಬ ಪದಕ್ಕೆ ಹಲವಾರು ಅರ್ಥಗಳಿದ್ದರೂ ವೀರಶೈವದಲ್ಲಿ ಅದಕ್ಕೆ ಪರಬ್ರಹ್ಮ, ಪರಶಿವಲಿಂಗ

ವಿವಿಧ ನೋಟಗಳಲ್ಲಿ ಪೂಜ್ಯರು



ಅಧ್ಯಯನ ನಿರತ ಶ್ರೀ ಸನ್ನಿಧಿಯವರು



ಚಿಂತನಾಶೀಲರಾದ ಪೂಜ್ಯರು



ಶೂನ್ಯಸಿಂಹಾಸನದಲ್ಲಿ ಮಂಡಿಸಿದಾಗ



ಶಿವಾನುಭವ ಗೋಷ್ಠಿಯಲ್ಲಿ



←
ಕಾಶಿ ಹಿಂದೂ
ವಿಶ್ವವಿದ್ಯಾಲಯದ
ಗೀತಾಭವನದ ಮುಂದೆ

→
ಅಶ್ವಾರೂಢರಾಗಿ
ಪೀಠಾರೋಹಣದ ದ್ವಾದಶ
ಮಹೋತ್ಸವದಲ್ಲಿ






ದ್ವಾದಶ ಮಹೋತ್ಸವದ ಅಡ್ಡಪಲ್ಲಕ್ಕಿ ಮಹೋತ್ಸವ

ಪ್ರಕೃತಿಯ ಮಡಿಲಲ್ಲಿ ಪೂಜ್ಯ ಶ್ರೀಗಳು









ಶ್ರೀಮಠದ ದಾಳಿಂಬರ ಬನದಲ್ಲಿ

ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯ ವಿಚಾರ ಸಂಕಿರಣಗಳು




ಹುಬ್ಬಳ್ಳಿಯ
ಹೊಸಮಠ, ಸುತ್ತೂರು
ಹಾಗೂ
ಧಾರವಾಡದ
ಶ್ರೀಗಳೊಂದಿಗೆ



ಬೆಂಗಳೂರು,
ಲಿಂಗನಾಯಕನಹಳ್ಳಿ,
ಧಾರವಾಡ, ಶಿರ್ಶಿ
ಶ್ರೀಗಳೊಂದಿಗೆ




ಉಳವಿಯ ಚನ್ನಬಸವಣ್ಣನವರ ವಿಚಾರಸಂಕಿರಣ ಸಂದರ್ಭದಲ್ಲಿ
ಷಟ್‌ಸ್ಥಲ ಧ್ವಜಾರೋಹಣ



ಬನವಾಸಿಯಲ್ಲಿ ಜರುಗಿದ ಜಂಗಮ ಪುಂಗವ ಅಲ್ಲಮಪ್ರಭು ದೇವರ
ವಿಚಾರ ಸಂಕಿರಣದಲ್ಲಿ ಪೂಜ್ಯ ಸನ್ನಿಧಿಯವರು



ಶಿಕಾರಿಪುರದ 'ಅಕ್ಕಮಹಾದೇವಿ'ಯವರ ವಿಚಾರ ಸಂಕಿರಣದಲ್ಲಿ ಶ್ರೀಗಳು



ಸೊಲ್ಲಾಪುರದ 'ಶಿವಯೋಗಿ ಸಿದ್ಧರಾಮ'ರ ವಿಚಾರ ಸಂಕಿರಣದಲ್ಲಿ



ಶ್ರೀ ಸನ್ನಿಧಿಯರ ರಜತಮಹೋತ್ಸವ ಕಾರ್ಯಕ್ರಮದ ಪ್ರಾರಂಭೋತ್ಸವ –
ಉಳವಿ ಸುಕ್ಷೇತ್ರದಲ್ಲಿ (ದಿ. ೨೨–೪–೧೯೯೩)

ಎಂಬ ಹಾಗೂ ಹಂತ, ಸೋಪಾನ ಎಂಬ ಎರಡೇ ಅರ್ಥಗಳಲ್ಲಿ ಬಳಸಿದ್ದಾರೆ. ಇದನ್ನು **'ಹಂತ'** ಎಂಬ ಅರ್ಥದಲ್ಲಿ ಬಳಸಿರುವದು ಶಿವಯೋಗ ಸಾಧನೆಯ ದೃಷ್ಟಿಯಿಂದ. ಆಗ ಸ್ಥಲವಿಭಾಗೀಕರಣಕ್ಕೆ ಮಹತ್ವ ಬರುತ್ತದೆ. ಈ ಸ್ಥಲವಿಭಾಗೀಕರಣವು ವೈಶಿಷ್ಟ್ಯಪೂರ್ಣವಾಗಿರುವಂತೆಯೇ ವೈವಿಧ್ಯಪೂರ್ಣವೂ ಆಗಿದೆ. ಇದರಲ್ಲಿ ಮನೋವೈಜ್ಞಾನಿಕ ಅಂಶಗಳು ಅಪೂರ್ವವಾದ, ಅದ್ಭುತವಾದ ರೀತಿಯಲ್ಲಿ ಅಡಕವಾಗಿವೆ. ಸ್ಥಲವಿಭಾಗೀಕರಣ ಬೇರೆ ಬೇರೆ ದೃಷ್ಟಿಯಿಂದ ಮಾಡಲ್ಪಟ್ಟಿದೆ. ಈ ಸ್ಥಲವಿಭಾಗೀಕರಣದಲ್ಲಿ ಒಟ್ಟು ೬ (ಆರು) ದೃಷ್ಟಿಗಳಿರುವದು ಕಂಡುಬರುತ್ತದೆಂದು ವೀರಶೈವ ವಿದ್ವಾಂಸರು ಮತ್ತು ಅನುಭಾವಿಗಳು ಹೇಳಿರುವದು ಇಲ್ಲಿ ಗಮನಾರ್ಹ.

೧. **ಉಪಾಸನಾದೃಷ್ಟಿ:** ಇದರ ಪ್ರಕಾರ ೧, ೨, ೬, ೧೮ ಮತ್ತು ೩೬ ಸ್ಥಲಗಳಾಗುತ್ತವೆ. ಇದರಲ್ಲಿಯೇ ತನುತ್ರಯದೃಷ್ಟಿಯೂ ಅಡಕವಾಗಿದೆ. ಇದನ್ನು ನಾವು ಅರ್ಚನದೃಷ್ಟಿಯೆಂದೂ ಕರೆಯಬಹುದು.

೨. **ಪ್ರಸಾದದೃಷ್ಟಿ**: ಇಲ್ಲಿ ೬, ೩೬ ಮತ್ತು ೨೧೬ ಸ್ಥಲಗಳೇ ಮುಖ್ಯವಾಗಿವೆ. ಇದನ್ನು ನಾವು ಸಮುಸಮುಚ್ಚಯದೃಷ್ಟಿ ಅಥವಾ ಅರ್ಪಣದೃಷ್ಟಿ ಎಂದೂ ಕರೆಯಬಹುದು.

೩. **ಜಪದೃಷ್ಟಿ**: ಇಲ್ಲಿ ೯ ಸ್ಥಲಗಳು ನವಚಕ್ರಗಳಲ್ಲಿ ನವವಿಧ ಲಿಂಗಗಳೇ ಆ ಸ್ಥಲಗಳಾಗಿವೆ.

೪. **ಅನುಭಾವ(ಅನುಭವ) ದೃಷ್ಟಿ**: ಇಲ್ಲಿ ಅನುಭಾವಿಗಳು ತಮ್ಮ ತಮ್ಮ ಅನುಭವದ ಆಧಾರದ ಮೇಲೆ ಸ್ಥಲ ಸಂಖ್ಯೆಯನ್ನು ಮಾಡಿಕೊಂಡಿದ್ದಾರೆ. ೧೬, ೨೧, ೨೮, ೫೮, ೬೧ ಮುಂತಾಗಿ, ಸ್ವತಂತ್ರ ರೀತಿಯಿಂದ ಈ ಸ್ಥಲವಿಭಾಗೀಕರಣ ಇರುತ್ತದೆ. ಇದನ್ನು ಸ್ವತಂತ್ರ ಸೃಷ್ಟಿಯೆಂದೂ ಕರೆಯಬಹುದು.

೫. **ಲಿಂಗಾಂಗ ಸಾಮರಸ್ಯದೃಷ್ಟಿ**: ೧೦೧ ಸ್ಥಲಗಳು ಇದರಲ್ಲಿ ಬರುತ್ತವೆ.

೬. **ಅಭೇದದೃಷ್ಟಿ:** ಶರೀರದ ಪ್ರತ್ಯಂಗದಲ್ಲಿ ಲಿಂಗವಿರುವದನ್ನು ಈ ದೃಷ್ಟಿಯು ಗುರುತಿಸುತ್ತದೆ. ಶಿವಯೋಗಿಯ ಅಂಗ ಬೇರೆಯಲ್ಲ, ಲಿಂಗ ಬೇರೆಯಲ್ಲ. ಅವನ ಅಂಗವೇ ಲಿಂಗ.

ಆದರೆ, ಶಿವಯೋಗ ಸಾಧಕನಿಗೆ ಷಟ್–ಸ್ಥಲಾಚರಣೆಯೇ ಅತಿ ಮುಖ್ಯ. ಷಟ್‌ಸ್ಥಲ ಮಾರ್ಗವು ವೀರಶೈವದ ಲಿಂಗೋಪಾಸನೆಗಾಗಿ, ಯುಕ್ತಿಯುಕ್ತವಾಗಿ ಕಲ್ಪಿಸಿದ ಸಾಧನಮಾರ್ಗ, ಅದು ತಾತ್ವಿಕವಾಗಿಲ್ಲ ಎಂಬ ಗ್ರಹಿಕೆ ಕೆಲವರಿಗಿದೆ. ಆದರೆ ಇದು ಸರಿಯಲ್ಲ. ಷಟ್‌ಸ್ಥಲ ಮಾರ್ಗ ಉಪಾಸನೆಯ ಮಾರ್ಗವೆಂಬುದೇನೋ ನಿಜ. ಆದರೆ ಅದು ಕಾಲ್ಪನಿಕವಾಗಿಲ್ಲ; ತತ್ವಬದ್ಧವಾಗಿದೆ. (ಪಂ. ವೈ. ನಾಗೇಶ ಶಾಸ್ತ್ರಿಗಳು: ಷಟ್‌ಸ್ಥಲ ದರ್ಪಣ). ಈ ಮಾತು ಶ್ರೀಗಳವರ ಒಂದು ವಚನದಲ್ಲಿ ಬಹು ಅರ್ಥಪೂರ್ಣವಾಗಿ, ಅನುಭವಪೂರ್ಣವಾಗಿ ನಿರೂಪಿತವಾಗಿದೆ."ಷಟ್-ಸ್ಥಲವು ಜೀವನ ಸಿದ್ಧಾಂತ. ಷಟ್‌ಸ್ಥಲವು ಆತ್ಮಸಾಕ್ಷಾತ್ಕಾರ ಸಾಧನ. ಷಟ್–ಸ್ಥಲವೆ ಲಿಂಗಾಂಗ ಸಮರಸ ಷಟ್–ಸ್ಥಲವೆ ಭಕ್ತನು

ಷಡ್ಲಿಂಗಗಳನಾರಾಧಿಸಿ ಐಕ್ಯನಾಗುವ ಸಹಜಾಚರಣೆ, ನೋಡಯ್ಯ, ಮೃಡಗಿರಿ ಅನ್ನದಾನೀಶ! ('ವಚನಸಂಪದ' ಪು. ೨೬೪) ಅಂತೆಯೇ **"ಷಟ್‌ಸ್ಥಲವು** ಆತ್ಮವೆನಿಸಿದೆ. ಶರಣ ತತ್ವವು ನುಡಿದಂತೆ ನಡೆವ ಮಾರ್ಗವನ್ನು ಬೋಧಿಸುತ್ತದೆ. ಅದುವೇ ಷಟ್‌ಸ್ಥಲ. ಇದು ಜೀವನ ಸಿದ್ಧಾಂತವೆನಿಸಿದೆ. ನುಡಿಯನ್ನು ನಡೆಯಲ್ಲಿ ತೋರಿಸಿಕೊಡುವ ಪ್ರಾಯೋಗಿಕ ದರ್ಶನವೆನಿಸಿದ" ಎಂಬೀ ಅವರ ಶ್ರೀ ವಾಣಿಯನ್ನು ನಾವಿಲ್ಲಿ ನೋಡಿಕೊಳ್ಳಬಹುದು. (ಆರೈದು ಭಾಗ ೨ ಪು. ೧೨೯). ಶ್ರೀ ಸನ್ನಿಧಿಯವರು ಷಟ್‌ಸ್ಥಲ ಸಿದ್ಧಾಂತವನ್ನು ಕುರಿತು ಹೇಳುವ ಈ ಮಾತುಗಳು ಮಾರ್ಮಿಕವಾಗಿವೆ. 'ವೀರಶೈವ ಸಿದ್ಧಾಂತ'ದಲ್ಲಿ ಷಟ್‌ಸ್ಥಲವು ತಾತ್ವಿಕ ಮಾರ್ಗವು. ಭಕ್ತಿಯ ಬೆಳವಣಿಗೆಗೆ ಇದು ಪೂರಕವಷ್ಟೇ ಅಲ್ಲ, ಪೋಷಕವೂ ಹೌದು. 'ಭಕ್ತೇರಸಾಧ್ಯಂ ನಕಿಂಚಿದಸ್ತಿ'-ಭಕ್ತಿಮಾರ್ಗಕ್ಕೆ ಅಸಾಧ್ಯವಾದುದು ಯಾವುದಿಲ್ಲ. ಶರಣ ಸಿದ್ಧಾಂತದಲ್ಲಿ ಭಕ್ತಿಯು ಪಂಚಮಪುರುಷಾರ್ಥವೆನಿಸಿಕೊಂಡಿದೆ. ಭಕ್ತಿಯು ವಿಕಾಸದಿಂದ ಭಕ್ತನು ಐಕ್ಯನೆನಿಸುತ್ತಾನೆ. ಷಟ್‌ಸ್ಥಲಾನುಭವದ ಚರಮಗುರಿ ಭಕ್ತಿವಿಡಿದು ಮುಕ್ತಿ ಸಂಪಾದಿಸುವದು. ಇದಕ್ಕೆ ತಾತ್ವಿಕ ಹಿನ್ನೆಲೆಯನ್ನು ಒದಗಿಸಿರುವದು ಶಕ್ತಿವಿಶಿಷ್ಟಾದ್ವೈತ ಅಥವಾ ಶಿವಾದ್ವೈತದರ್ಶನ ಎಂಬುದನ್ನು ಹೇಳುತ್ತ "ಇತ್ತೀಚೆಗೆ ಕೆಲವರು ಇದನ್ನು ಶೂನ್ಯ ಸಿದ್ಧಾಂತವೆನ್ನುತ್ತಾರೆ. ವೀರಶೈವರು ಶೂನ್ಯವನ್ನು **'ಆತ್ಯಂತಿಕ ಸಿದ್ಧಿ'**ಯನ್ನಾಗಿ ಮೊದಲಿನಿಂದಲೂ ಮನ್ನಿಸುತ್ತಾರೆ. ಶೂನ್ಯವನ್ನು ಸಂಪಾದಿಸಲು ನಿರೂಪಿಸುತ್ತಾರೆ. ಯಾವುದು ಆತ್ಯಂತಿಕ ಸಾಧ್ಯವೋ ಅದು ಸ್ವತಃ ಸಿದ್ಧವಾದುದು. ಅದನ್ನು ಸಿದ್ಧಾಂತಗೊಳಿಸಲಿಕ್ಕಾಗುವದಿಲ್ಲ!" (ಆರೈದು-೩, ಪು. ೪೧-೪೨) ಎಂದು ಪರಿಶುದ್ಧ ಸಂಪ್ರದಾಯ ಹಾಗೂ ಸ್ವಾನುಭವದ ಆಧಾರದ ಮೇಲೆ ಸಮರ್ಪಕವಾಗಿ ಶ್ರೀ ಸನ್ನಿಧಿಯವರು ಅಪ್ಪಣೆ ಕೊಡಿಸಿರುವದು ಸಂತೋಷದ ಸಂಗತಿಯಾಗಿದೆ.

"ಸರ್ವಶೂನ್ಯ ನಿರಾಲಂಬ, ನಿಃಕಲಲಿಂಗವೆನಿಸುತ್ತ ನಿಃಕಲಲಿಂಗವೇ ಮಹಾಲಿಂಗ ವಾಗುವದು.ಇದುವೆ ಪರಶಿವ. ಇಂಥ ಪರಶಿವನ ಚಿತ್‌ಶಕ್ತಿಯೇ ಲಿಂಗಅಂಗವೆರಡಾಗುವದು. ಲಿಂಗವನ್ನು ಶಕ್ತಿಯು, ಅಂಗವನ್ನು ಭಕ್ತಿಯು ಅನನ್ಯವಾಗಿ ಆಶ್ರಯಿಸಿ ಷಟ್‌ಸ್ಥಲದ ವಿಕಾಸಪೂರ್ಣಗೊಳ್ಳುವದು. **ಈ ತತ್ವವು ಕೇವಲ ಬುದ್ಧಿಯ ಜಿಜ್ಞಾಸೆಯೆನಿಸದೆ ನಿತ್ಯ ಸತ್ಯದರ್ಶನವೆನಿಸಿದೆ.** ಷಟ್‌ಸ್ಥಲವು ಜೀವನ ದರ್ಶನ, ಜೀವನ ಸಿದ್ಧಾಂತವಾಗಿದೆ. ಜೀವನದಲ್ಲಿ ಇದನ್ನು ಹಾಸುಹೊಕ್ಕಾಗುವಂತೆ ಸಾಧಿಸಲು ಬರುವದು. ಭಕ್ತನಲ್ಲಿ ಭಕ್ತಿಯು ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ, ಆನಂದವಾಗಿ ಸಮರಸಗೊಳಿಸುವ ಮಹತ್ಸಾಧನ ವಾಗಿದೆ. ಇದುವೆ ವೀರಶೈವ ತಾತ್ವಿಕ ಮಾರ್ಗ. ಆತ್ಮನ ಅಹಂಕಾರವಳಿದು ಮನ ಉನ್ಮನಗೊಂಡು ನಿಜಸುಖಾನುಭವಕ್ಕೆ ಸಾಧನವಾದುದು ಷಟ್-ಸ್ಥಲ" (ಆರೈದು. ೩ ಪು. ೯೨-೪೩) ಈ ಮಾತುಗಳಲ್ಲಿ ವೀರಶೈವ ದರ್ಶನ, ಸಿದ್ಧಾಂತ ತತ್ವ ಇದರ ಸಂಪೂರ್ಣ ರಹಸ್ಯವನ್ನೇ ಪೂಜ್ಯರು ಅಪ್ಪಣೆಕೊಡಿಸಿದ್ದಾರೆ. ಇದು ಅವರಿಗೆ ಇಷ್ಟೊಂದು ಮನನ ವಾಗಿದೆಯೆಂಬುದು ನಿಜವೇ; ಇದಕ್ಕಿಂತಲೂ ಹೆಚ್ಚಾಗಿ ಇದು ಅವರ ಸ್ವಾನುಭವದ

ಸಹಜಸಿದ್ಧ ವಿಷಯವೂ ಆಗಿದೆ. ಅಂತೆಲೇ ಅವರು ಇದನ್ನು ಕುರಿತು ಹೇಗೆ ಬೇಕಾದರೂ ಹೇಳಿ ಕೇಳುವವರಿಗೆ, ಓದುವವರಿಗೆ ಮನದಟ್ಟು ಮಾಡಿಕೊಡಬಲ್ಲವರಾಗಿದ್ದಾರೆ. ಶ್ರೀ ಸನ್ನಿಧಿಯವರು ವೀರವಿರಾಗಿಣಿ ಶ್ರೀ ಮಹಾದೇವಿಯಕ್ಕ ರಚಿಸಿದ "ಯೋಗಾಂಗ ತ್ರಿವಿಧಿ" ಎಂಬೊಂದು ಅನುಭವ ಪ್ರಧಾನ ಗ್ರಂಥಕ್ಕೆ ಬಹಳೇ ಅಪರೂಪವಾದ ವ್ಯಾಖ್ಯಾನವನ್ನು ಬರೆದಿದ್ದಾರಷ್ಟೆ. ಅಲ್ಲಿ ಬರುವ ಶ್ರೀಗಳವರ ಈ ಶ್ರೀ ವಾಣಿಯನ್ನು ಆಲಿಸಿರಿ: "ಮಹಾದೇವಿಯಕ್ಕನವರು ಇನ್ನಷ್ಟು ಸೂಕ್ಷ್ಮವಾಗಿ ಪ್ರಾಣಲಿಂಗದ ಸ್ವರೂಪವನ್ನು ನಿರೂಪಿಸುತ್ತಾರೆ. ಪ್ರಾಣಲಿಂಗವು ಪ್ರಕಾಶಸ್ವರೂಪದ್ದು ಎಂಬುದನ್ನು ಈಗಾಗಲೇ ವಿವರಿಸಲಾಗಿದೆ. ಬಿಳಿಯ ಬಣ್ಣ ಆರು ವಿಧವಾದ ರೂಪ (ಬಣ್ಣ-)ವನ್ನು ಹೊಂದ ಬಲ್ಲುದು. ಅದರಂತೆ ಬಿಳಿಯ ಪ್ರಕಾಶರೂಪವುಳ್ಳ ಪ್ರಾಣಲಿಂಗವೂ 'ಆರು ಮುಖದ ಮುತ್ತೆ'ನಿಸುತ್ತದೆ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಕೆಳಗೆ ಮೇಲೆ ಎಂಬ ಆರು ಮುಖವುಳ್ಳದು. ಅಲ್ಲದೇ, ಮೂರ್ತಿಬ್ರಹ್ಮ, ಪಿಂಡಬ್ರಹ್ಮ, ಕಲಾಬ್ರಹ್ಮ, ಆನಂದಬ್ರಹ್ಮ, ವಿಜ್ಞಾನಬ್ರಹ್ಮ, ಪರಬ್ರಹ್ಮ ಎಂಬ ಆರು ಬ್ರಹ್ಮರ ರೂಪಾದುದು ಮತ್ತು ಶಾಸ್ತ್ರದೃಷ್ಟಿಯಿಂದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ, ಗೌಪ್ಯ ಎಂಬ ಆರು ಮುಖವುಳ್ಳದೂ ಹೌದು. ಷಟ್‌ಸ್ಥಲ ಸಿದ್ಧಾಂತದಂತೆ ಭಕ್ತ–ಮಹೇಶ–ಪ್ರಸಾದಿ–ಪ್ರಾಣಲಿಂಗಿ–ಶರಣ–ಐಕ್ಯನಿಂದ, ಆಚಾರ–ಗುರು–ಶಿವ–ಜಂಗಮ–ಪ್ರಸಾದ–ಮಹಾಲಿಂಗಗಳ ರೂಪದಿಂದ ಆರಾಧಿಸಲ್ಪಡುವ ಆರಾಧ್ಯಮೂರ್ತಿಯೂ ಆಗುತ್ತದೆ. ಆಧಾರಾದಿ ಆರು ಚಕ್ರಗಳಲ್ಲಿ ಇಚ್ಛಾದಿ ಆರು ಶಕ್ತಿಸ್ವರೂಪವನ್ನು ಹೊಂದಿದ ಆರು ಲಿಂಗಗಳನ್ನು ಸುಚಿತ್ತಾದಿ ಆರು ಹಸ್ತಗಳಿಂದ ಶ್ರದ್ಧಾದಿ ಆರು ಭಕ್ತಿಗಳಿಂದ ಸುಗಂಧಾದಿ ಆರು ಪ್ರಸಾದಗಳನ್ನಿತ್ತು ಆನಂದಿಸುತ್ತ ಸಮರಸಹೊಂದುವ ಪೂರ್ಣಮುಖವೇ ಪ್ರಾಣಲಿಂಗವೆನಿಸಿದೆ." ("ಯೋಗಾಂಗ ತ್ರಿವಿಧಿ ವ್ಯಾಖ್ಯಾನ"–ಪು.೪೬). ಈ ಮಾತುಗಳಲ್ಲಿ ಶ್ರೀ ಜಗದ್ಗುರು ಸನ್ನಿಧಿಯವರ ಸಕೀಲಗಳ ಸಂದರ್ಭದಲ್ಲಿ ಷಟ್–ಸ್ಥಲಗಳ ಸಮಗ್ರ ಸ್ವರೂಪದ ಒಂದು ಬಂಧುರವಾದ, ಸುಂದರವಾದ ಚಿತ್ರವನ್ನು ನಮ್ಮ ಮುಂದೆ ನಿಲ್ಲಿಸುತ್ತಾರೆ.

ಶ್ರೀ ಸನ್ನಿಧಿಯವರು ತಮ್ಮ **"ಯೋಗಾಂಗ ತ್ರಿವಿಧಿ ವ್ಯಾಖ್ಯಾನ"**ದಲ್ಲಿ ನೂರೊಂದು ಸ್ಥಲಗಳ ರಹಸ್ಯವನ್ನು ಬಹು ಶಾಸ್ತ್ರೀಯವಾಗಿ, ಅಷ್ಟೇ ಅನುಭವಪೂರ್ಣವಾಗಿ ನಿರೂಪಿಸಿದ್ದಾರೆ. ಇದು ೧೪ನೇ ತ್ರಿವಿಧಿಯ ವ್ಯಾಖ್ಯಾನದಲ್ಲಿ ವಿಸ್ತಾರವಾಗಿ ವಿವರಣೆಗೊಂಡಿದೆ. ಆದರೆ ಇಲ್ಲಿ ಕೇವಲ ಷಟ್–ಸ್ಥಲ ವಿವೇಚನೆಗೆ ಮಾತ್ರ ಸಮೀಕ್ಷೆ ಸೀಮಿತಗೊಂಡಿದೆ ಇರಲಿ. ಶ್ರೀಗಳವರು ಷಟ್–ಸ್ಥಲಾಚರಣೆಯ ಬಗೆಗೆ ಅದೆಷ್ಟು ಅನುಭವಪೂರ್ಣವಾಗಿ ಹೇಳಬಲ್ಲರೆಂಬುದನ್ನು ಅವರೀ ವಚನಗಳಲ್ಲಿ ನಾವು ಬಹು ಸುಲಭವಾಗಿ ಕಂಡುಕೊಳ್ಳಬಹುದು:

"ಅಂಗ ಲಿಂಗನಾಗುವ ಸಾಧನವೆ ಷಟ್-ಸ್ಥಲ
ಭಕ್ತನ ಭಕ್ತಿವಿಕಾಸ ಮಾರ್ಗವೇ ಷಟ್-ಸ್ಥಲ
ಲಿಂಗದ ಶಕ್ತಿ ಸಾಮರ್ಥ್ಯ ಸಾಕ್ಷಾತ್ಕಾರವೇ ಷಟ್-ಸ್ಥಲ.
ಅಂಗ-ಲಿಂಗ, ಭಕ್ತಿ-ಶಕ್ತಿ, ಹಸ್ತ-ಮುಖ, ಪದಾರ್ಥ-ಪ್ರಸಾದಂಗಳ
ಸಕೀಲ ಸಂಬಂಧವೇ ಷಟ್-ಸ್ಥಲವಯ್ಯ, ಮೃಡಗಿರಿ ಅನ್ನದಾನೀಶ ||೨೬೫||
ಷಟ್-ಸ್ಥಲ ವಿವರವೆಂತೆಂದೊಡೆ ನೀವು ಕೇಳಿರಯ್ಯಾ:
ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯವೆಂಬಿವು
ಅಂಗ ಷಟ್-ಸ್ಥಲ ಕಾಣಿರಯ್ಯಾ
ಆಚಾರ-ಗುರು-ಶಿವ-ಜಂಗಮ-ಪ್ರಸಾದ-ಮಹಾಲಿಂಗವೆಂಬಿವು
ಲಿಂಗ ಷಟ್‌ಸ್ಥಲ ನೋಡಯ್ಯಾ.
ಭಕ್ತಾದಿ ಸ್ಥಲಗಳಲ್ಲಿ ನಿಲ್ಲುತ ಷಡ್ಲಿಂಗಾರಾಧನೆಯ ಸಾಧಿಸುವುದೇ
ಷಟ್-ಸ್ಥಲದಿರುವು ನೋಡಾ, ಮೃಡಗರಿ ಅನ್ನದಾನೀಶ ||೨೬೬||
ಅಷ್ಟಾವರಣಾಂಗವ ಪೊಂದಿ ಶ್ರದ್ಧೆಯಿಂದಾಸೋಹಿಯಾದವನೆ ಭಕ್ತ.
ಪಂಚಾಚಾರ ಪ್ರಾಣಿಯಾಗಿ ನಿಷ್ಠೆಯಿಂ ಸಕಲೇಂದ್ರಿಯ
ನಿಗ್ರಹಿಯಾದವನೇ ಮಹೇಶ.
ಲಿಂಗಮುಖದಿಂದ ಬಂದುದ ಅವಧಾನ ಭಕ್ತಿಯಿಂ ಗ್ರಹಿಸಿ
ಪ್ರಸನ್ನ ಚಿತ್ತವುಳ್ಳಾತನೆ ಪ್ರಸಾದಿ.
ವಿಷಯಂಗಳ ತೊರೆದು, ವಾಯುಗಳ ನಿಲಿಸಿ,
ಅನುಭಾವದಿಂ ಲಿಂಗಪ್ರಾಣಿಯಾದವನೆ ಪ್ರಾಣಲಿಂಗಿಯು.
ಶಿವದೃಷ್ಟಿ ಬಲಿದು ಲಿಂಗಪತಿಗೆ ಆನಂದದಿಂ
ಸರ್ವಾರ್ಪಣ ಮಾಡಬಲ್ಲಾತನೆ ಶರಣ.
ಉರಿಯುಂಡ ಕರ್ಪೂರದಂತೆ ಸಮರಸವುಳ್ಳಾತನೇ ಐಕ್ಯ.
ಇದು ಷಟ್-ಸ್ಥಲಸಾರ ನೋಡಾ, ಮೃಡಗಿರಿ ಅನ್ನದಾನೀಶ ||೨೬೮||
("ವಚನ ಸಂಪದ" ಪು. ೬೯-೭೦).

ಅನುಭಾವಿಗಳು ಬರೆದ ವಚನಗಳೇ ನಿಜವಾದ ವಚನಸಾಹಿತ್ಯ ಎಂಬುದಕ್ಕೆ ಇವು ನಿದರ್ಶನಗಳಾಗಿಲ್ಲವೆ?

ಈಗಾಗಲೇ ನೋಡಿಕೊಂಡಿರುವಂತೆ "ಶ್ರೀ ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ" ಎಂಬ ಮೇರುಕೃತಿಯಲ್ಲಿ ಶ್ರೀ ಸನ್ನಿಧಿಯವರು ತಮ್ಮ ವಿದ್ವತ್ಪೂರ್ಣ ಹಾಗೂ ಸ್ವಾನುಭವವೇದ್ಯ ವಿಸ್ತಾರವಾದ ವಿವೇಚನೆಯನ್ನು ಎಂಟು (೮) ಮುಖ್ಯ ವಿಭಾಗಗಳಲ್ಲಿ ನೀಡಿದ್ದಾರೆ ಮತ್ತು ಅವುಗಳಿಗೆ 'ಶ್ರೀಗುರು', 'ಲಿಂಗ' ಮುಂತಾದ ಅಷ್ಟಾವರಣಗಳ ಹೆಸರುಗಳನ್ನು ಶೀರ್ಷಿಕೆಗಳನ್ನಾಗಿ

ಬಳಸಿದ್ದಾರೆ. ಆದರೆ, ಅವುಗಳಲ್ಲಿ ಒಂದೊಂದನ್ನೂ ವಿಸ್ತೃತವಾಗಿ ವಿವರಿಸುವಾಗ ಗ್ರಂಥದ ಶಿರೋನಾಮೆಯಲ್ಲಿಯೇ ಸೂಚಿತವಾಗಿರುವಂತೆ, ವೀರಶೈವ ಸಿದ್ಧಾಂತದ ಸಮಗ್ರ ವಿವೇಚನೆಯೇ ಬಂದಿದೆ. ಗುರು ಮತ್ತು ಲಿಂಗಗಳ ವಿವೇಚನೆಯನ್ನು ನಾವು ಉದಾಹರಣೆಯ ರೂಪದಲ್ಲಿ ಸ್ವಲ್ಪ ವಿಸ್ತಾರವಾಗಿಯೇ ನೋಡಿಕೊಂಡಿದ್ದೇವೆ. 'ಜಂಗಮ' ಎಂಬ ಮುಖ್ಯ ವಿಭಾಗದಲ್ಲಿ ಬರುವ, ವೀರಶೈವದ ನಿಜಹೃದಯವೇ ಆದ ಷಟ್-ಸ್ಥಲ ಸಿದ್ಧಾಂತವನ್ನು ಸಾಕಷ್ಟು ವಿವರವಾಗಿ ನೋಡಿಕೊಂಡಿದ್ದೇವೆ. ಶ್ರೀಗಳ ವಿವಿಧ ಗ್ರಂಥಗಳಲ್ಲಿ ಬಂದ ಈ ವಿಷಯದ ವಿವೇಚನೆಯ ವೈಭವವನ್ನು ಕಂಡು ಆನಂದಿಸಿದ್ದೇವೆ. ಇಷ್ಟರ ಮೇಲಿಂದಲೇ "ತತ್ವಸಾಹಿತ್ಯಕ್ಕೆ ಶ್ರೀ ಸನ್ನಿಧಿಯವರ ಕೊಡುಗೆ"ಯ ಸ್ವರೂಪ ಸ್ವಾರಸ್ಯಗಳೆಂತಹವು ಎಂಬುದನ್ನು ಮನಗಾಣಬಹುದಾಗಿದೆಯಾದರೂ, ಅವರ ತಾತ್ವಿಕ ನಿಲವಿನ ಪೂರ್ಣಕಲ್ಪನೆ ಬರುವದಕ್ಕಾಗಿ ಇನ್ನೆರಡು-ಮೂರು ಬಹು ಮುಖ್ಯ ಸಂಗತಿಗಳನ್ನು ಈ ಲೇಖನದಲ್ಲಿ ಎತ್ತಿತೋರಿಸುವದು ಸಮುಚಿತವೆನಿಸಿದೆ.

"**ವೀರಶೈವ ದಾರ್ಶನಿಕ ಸಿದ್ಧಾಂತ**"ದಲ್ಲಿ ಜಂಗಮ, ಪಾದೋದಕ ಮತ್ತು ಪ್ರಸಾದಗಳ ಅತ್ಯಂತ ಅನುಭವಪೂರ್ಣವೂ, ಮನೋಜ್ಞವೂ ಆದ ರೀತಿಯಲ್ಲಿ ವಿವೇಚನೆ ಬಂದಿರುವದನ್ನು ನಾವು ಸ್ವತಃ ಗ್ರಂಥದಿಂದಲೇ ತಿಳಿದುಕೊಳ್ಳಬೇಕು. ಜಂಗಮದ ಸ್ವರೂಪ-ಪ್ರಭೇದಗಳ ವಿಸ್ತಾರವಾದ ವಿವೇಚನೆ ನಿಜಕ್ಕೂ ವೈಶಿಷ್ಟ್ಯಪೂರ್ಣವಾಗಿದೆ. ಸ್ವತಃ ಜಂಗಮ ಪುಂಗವರಾದ ಶ್ರೀ ಸನ್ನಿಧಿಯವರು ಈ ಎಲ್ಲ ವಿಷಯಗಳನ್ನು ತಮ್ಮ ನಿತ್ಯ ಜೀವನದಲ್ಲಿ ಸ್ವತಃ ಬದುಕುತ್ತಿರುವದರಿಂದ ಇವೆಲ್ಲವುಗಳ ವಿವರಣೆ ಶಾಸ್ತ್ರದ ಸುಭದ್ರವಾದ ಹಿನ್ನೆಲೆಯಲ್ಲಿ ಅತಿ ಅನುಭವಪೂರ್ಣವಾಗಿ ಮೂಡಿಬಂದಿದೆ. ಅವರು ಸಂದರ್ಭೋಚಿತವಾಗಿ ಸಂಸ್ಕೃತ-ಕನ್ನಡ ಗ್ರಂಥಗಳೆರಡರಿಂದಲೂ ಕೊಡುವ ಉಲ್ಲೇಖಗಳು ಅವರ ವಿಸ್ತಾರವಾದ ಓದು ಹಾಗೂ ಔಚಿತ್ಯ ಪ್ರಜ್ಞೆಗಳಿಗೆ ಹಿಡಿದ ಕನ್ನಡಿಯಾಗಿವೆ. ಅವರು "**ವೀರಶೈವ ದಾರ್ಶನಿಕ ಸಿದ್ಧಾಂತ**"ದ ಕೊನೆಯಲ್ಲಿ ಕೊಟ್ಟ ಆಧಾರಗ್ರಂಥಗಳ ಯಾದಿಯನ್ನು ಅವಲೋಕಿಸಿದಾಗ ಆಶ್ಚರ್ಯವೆನಿಸುತ್ತವೆ. ೧೪೯ ಕನ್ನಡ, ೬೭ ಸಂಸ್ಕೃತ ಮತ್ತು ೧೮ ಹಿಂದಿ ಗ್ರಂಥಗಳು ಈ ಯಾದಿಯಲ್ಲಿ ಬಂದಿವೆ. ಅಂತಲೇ ಈ ಗ್ರಂಥ ಅವರಿಂದ ರಚಿತವಾದ ಗ್ರಂಥಗಳಲ್ಲಿಯೇ ಉದ್ದಾಮ ಕೃತಿಯೆನಿಸಿದೆ. ಶ್ರೀಗಳವರ ಪಂಚಾಚಾರಗಳ ವಿಷಯವಾಗಿಯೂ ಅತ್ಯಂತ ಅನುಭವಪೂರ್ಣ, ಸುಶಾಸ್ತ್ರೀಯ ಶೈಲಿಯಲ್ಲಿ ವಿವೇಚನೆ ನೀಡಿದ್ದಾರೆ. ಹಾಗೆಯೇ ಅವರು ಶಿವಯೋಗ-ಪಂಚೀಕರಣಗಳ ವಿವರಣೆಯನ್ನೂ ಕೂಡ ಉತ್ಕೃಷ್ಟವಾಗಿ ಬರೆದಿದ್ದಾರೆ.

ಶ್ರೀ ಸನ್ನಿಧಿಯವರಿಂದ ರಚಿತವಾದ "**ಶಿವಯೋಗ**" ಎಂಬ ಚಿಕ್ಕಪುಸ್ತಿಕೆಯಲ್ಲಿ ಅವರು ತಮ್ಮ ಬದುಕಿನುದ್ದಕ್ಕೂ ನಡೆಸಿದ ಚಿಂತನ, ಸಾಧನೆ ಹಾಗೂ ಪಡೆದ ಅನುಭವಗಳ ಸುಶಾಸ್ತ್ರೀಯ ಮತ್ತು ಸವಿಸ್ತರ ವಿವೇಚನೆ ಇದರಲ್ಲಿ ಬಂದಿದೆ. ಇದು ಗಾತ್ರದಲ್ಲಿ ಕಿರಿದಾದರೂ, ಪಾತ್ರದಿಂದ ಹಿರಿದಾಗಿದೆ. ಇದು ಶಿವಯೋಗವನ್ನೇ ಪ್ರಧಾನವಾಗಿ

ಪ್ರತಿಪಾದಿಸಲು ಪ್ರವೃತ್ತವಾಗಿದ್ದರೂ, ಇದರಲ್ಲಿ ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯ ಸತ್ಯ-ಸೌಂದರ್ಯ-ಶಿವತತ್ವಗಳು ನಿತ್ಯಸಂವರ್ಧನಶೀಲವಾಗಿರುವಂತೆ ಮಾಡಿದ ಸಮಸ್ತ ದರ್ಶನಗಳ ಸಂಕ್ಷಿಪ್ತ ಸಮೀಕ್ಷೆ ಶ್ರೀಗಳ ಸಲ್ಲೇಖನಿಯಿಂದ ಜ್ಞಾನಗಂಗೆಯಾಗಿ ಹರಿದು ಬಂದಿದೆ. ಆದ್ದರಿಂದ ಇದೂ ಕೂಡ ಶ್ರೀ ಸನ್ನಿಧಿಯವರು ತತ್ವಸಾಹಿತ್ಯಕ್ಕೆ ನೀಡಿದ ಮಹಾಕೊಡುಗೆಯ ಆಳ-ಅಗಲಗಳನ್ನು ಗುರುತಿಸುವಲ್ಲಿ ನೈಜ ನೆರವನ್ನು ನೀಡುತ್ತದೆ. ಎತ್ತರ-ಬಿತ್ತರಗಳನ್ನು ಎತ್ತಿ ತೋರಿಸುವ ಉತ್ತಮ ಕೃತಿಯಾಗಿದೆ. ಆದ್ದರಿಂದ ಇವರಲ್ಲಿ ಬರುವ ವಿಷಯ ಹಾಗೂ ತದ್ವಿವೇಚನೆ ಮತ್ತು ನಿರೂಪಣಾಶೈಲಿಯ ಸೊಗಸು-ಸೊಬಗುಗಳ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳುವದು ಪ್ರಸ್ತುತವೆನಿಸಿದೆ. ಶ್ರೀ ಸನ್ನಿಧಿಯವರು ಭಾರತೀಯ ಯೋಗ ಸಿದ್ಧಾಂತಗಳೊಂದಿಗೆ **ಶಿವಯೋಗದ** ತುಲನಾತ್ಮಕ ಹಾಗೂ ವೈಜ್ಞಾನಿಕ ಅಧ್ಯಯನವನ್ನು ಇದರಲ್ಲಿ ಆಶೀರ್ವದಿಸುವ ಉದ್ದೇಶವನ್ನು ಹೊಂದಿದ್ದಾರೆ. ತಮ್ಮ ಉದ್ದೇಶದ ಹೊಳಹನ್ನು ನೀಡುವ

"ಹಲವು ಯೋಗವ ಮಾಡಿ|
ಫಲವೇನು ಮಗನೆ ಎಂ-|
ದೊಲಿದು ಲಿಂಗಾಂಗ-ಸುಲಭ ಯೋಗವ ನೋಡ-|
ಗಲಿಸಿದಿಂಗುರುವೆ ಕೃಪೆಯಾಗು||"

ಎಂಬ ಶಿವಕವಿಗಳಾದ ಶ್ರೀ ಮೈಲಾರ ಬಸವಲಿಂಗ ಶರಣರ ತ್ರಿವಿಧಿಯಿಂದಲೇ ಲೇಖನವನ್ನು ಪ್ರಾರಂಭಿಸಿದ್ದಾರೆ. ಈ ತ್ರಿವಿಧಿಯಲ್ಲಿ ಶಿವಯೋಗದ ಸರ್ವಸುಲಭತೆ-ಸೇವ್ಯತೆಗಳು ಉಕ್ತವಾಗಿವೆ.

ಶ್ರೀ ಜಗದ್ಗುರು ಸನ್ನಿಧಿಯವರು, ಭಾರತೀಯರಲ್ಲಿ ಸಹಜವಾಗಿರುವ ಧಾರ್ಮಿಕ ಮತ್ತು ವೈಚಾರಿಕ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ವಿವಿಧ ಮತಗಳು, ದರ್ಶನಗಳು ಬೆಳೆದುಕೊಂಡು ಬಂದಿರುವದನ್ನು ಚನ್ನಾಗಿ ಗುರುತಿಸಿದ್ದಾರೆ. ನಾಸ್ತಿಕ ದರ್ಶನಗಳಾದ ಚಾರ್ವಾಕದರ್ಶನ, ಜೈನದರ್ಶನ ಹಾಗೂ ಬೌದ್ಧದರ್ಶನಗಳನ್ನೂ ಆಸ್ತಿಕ ದರ್ಶನಗಳಾದ ಷಡ್ದರ್ಶನಗಳನ್ನೂ (ನ್ಯಾಯ-ಯೋಗ-ಸಾಂಖ್ಯಯೋಗ-ಪೂರ್ವಮೀಮಾಂಸಾ-ಉತ್ತರ ಮೀಮಾಂಸಾ ದರ್ಶನಗಳನ್ನು) ಬಹು ಸಂಕ್ಷಿಪ್ತವಾಗಿ ಮೊದಲು ಹೇಳಿ, ಆ ಬಳಿಕ **ವೀರಶೈವದರ್ಶನದ** ರೂಪು-ರೇಷೆಗಳನ್ನು ಬಹು ಮನಂಬುಗುವಂತೆ ನಿರೂಪಿಸಿದ್ದಾರೆ. ಈ ದರ್ಶನವನ್ನು ಶಕ್ತಿವಿಶಿಷ್ಟಾದ್ವೈತ ದರ್ಶನವೆಂಬ ನಾಮದಿಂದ ನಿರ್ದೇಶಿಸಿ, ಅದರ ವಿಶಿಷ್ಟತೆ-ವೈಜ್ಞಾನಿಕತೆ ಸತ್ಯತೆಗಳನ್ನು ಉಜ್ವಲವಾಗಿ ಬಿಂಬಿಸಿದ್ದಾರೆ. 'ಕಿರಿದರೊಳ್ ಪಿರಿದರ್ಥಮಂ' ಎಂಬಂತೆ ಇದೆಲ್ಲವನ್ನೂ ಶಿವಯೋಗದ ವಿವೇಚನೆಗೆ ಯಥಾಪ್ರಾಪ್ತ-ಯಥಾರ್ಥ ಹಿನ್ನೆಲೆಯಾಗಿ ಶ್ರೀಗಳವರು ಬಳಸಿಕೊಂಡಿರುವದು ನಿಜಕ್ಕೂ ಅವರ ವಿಷಯ ಪ್ರಭುತ್ವ, ಸಂಕ್ಷಿಪ್ತತೆಯ ಶೈಲಿ ಮತ್ತು ನಿರೂಪಣೆಯ ಸಕಲ ಸ್ಪಷ್ಟತೆಗಳಿಗೆ ಹಿಡಿದ ಕನ್ನಡಿಯಾಗಿದೆ. ವೀರಶೈವ ಸಿದ್ಧಾಂತವು ತನ್ನದೇ ಆದ ವಿಶಿಷ್ಟ ಸ್ಥಾನ-ಮಾನಗಳನ್ನು

ಹೊಂದಿದೆ. ಅಷ್ಟಾವರಣವನ್ನೇ ಅಂಗವಾಗಿಸಿಕೊಂಡ ಶರಣನು ಪಂಚಾಚಾರಗಳನ್ನು ಪ್ರಾಣವಾಗಿಸಿಕೊಳ್ಳುತ್ತ ಷಟ್‌ಸ್ಥಲಾತ್ಮಕವಾಗಿ ಮುನ್ನಡೆಯುತ್ತಾನೆ. ಭಕ್ತಸ್ಥಲದ ಉಪಕ್ರಮದಿಂದ ಐಕ್ಯನ ಐಕ್ಯಸ್ಥಿತಿಯಲ್ಲಿ ಉಪಸಂಹಾರವಾಗುತ್ತದೆ. ಒಂದಾದುದು ನೂರೊಂದಾಗಿ ಪುನಃ ಒಂದರಲ್ಲಿ ಸಮರಸವಾಗುವ ತತ್ವಪ್ರರುಷನೇ ತಾನಾಗುವ ಶುಭ ಯೋಗ ವೀರಶೈವರದು. ಇದುವೆ 'ಶಿವಯೋಗ'ವೆನಿಸಿದೆ. ಇದಕ್ಕೆ ಲಿಂಗಾಂಗ ಸಾಮರಸ್ಯವೆಂತಲೂ ಖ್ಯಾತಿ ಬಂದಿದೆ. ('ಶಿವಯೋಗ'-ಪು. ೧೧). ಹೀಗೆ ಶ್ರೀಗಳವರು ವೀರಶೈವದ ವಿಶೇಷತೆಯನ್ನು ಬಹು ಕಲಾತ್ಮಕವಾಗಿ, ರಮಣೀಯವಾಗಿ ಬಿತ್ತರಿಸಿದ್ದಾರೆ. ಬಳಿಕ ಶ್ರೀ ಸನ್ನಿಧಿಯವರು ಯೋಗದ ವ್ಯಾಖ್ಯಾನ, ಯೋಗದ ಮಹತ್ವ, ಯೋಗದ ಪ್ರಭೇದಗಳಾದ ಹಠಯೋಗ, ಲಯಯೋಗ, ಮಂತ್ರಯೋಗ, ರಾಜಯೋಗಗಳನ್ನೂ, ಪ್ರಾಸಂಗಿಕವಾಗಿ ಮುದ್ರೆ ಮತ್ತು ದೃಷ್ಟಿಗಳನ್ನೂ ಬಹು ಅದ್ಭುತ ವಾಗಿ, ಪ್ರಮಾಣಭೂತವಾಗಿ, ಅಷ್ಟೇ ಸ್ಪಷ್ಟವೂ, ಸರಳವೂ ಆದ ಶೈಲಿಯಲ್ಲಿ ತಿಳಿಸಿ ಕೊಟ್ಟಿದ್ದಾರೆ. ಈ ಚಿಕ್ಕ ಪುಸ್ತಿಕೆ ಸುಮಾರು ೨೦ ಪುಟಗಳುದ್ದಕ್ಕೂ ಈ ಎಲ್ಲ ವಿಷಯಗಳ ಬಹು ಶ್ರೀಮಂತ-ಧೀಮಂತ ವಿವೇಚನೆ ಬಂದಿದೆ. ಬಳಿಕ ಅವರು ಭಗವದ್ಗೀತೆಯಲ್ಲಿ ಬರುವ ವಿವಿಧ ಯೋಗಗಳನ್ನೂ ಶ್ರೀ ಅರವಿಂದರ ಮಹರ್ಷಿಗಳ ಪೂರ್ಣಯೋಗವನ್ನೂ ಅತಿಸಂಕ್ಷೇಪವಾಗಿ ತಿಳಿಸಿದ್ದಾರೆ. ಭಗವದ್ಗೀತೆಯ

ಸಮತ್ವಂ ಯೋಗ ಉಚ್ಯತೇ।
ಯೋಗಃ ಕರ್ಮಸು ಕೌಶಲಂ।
ತಂ ವಿದ್ಯಾತ್ ದುಃಖ ಸಂಯೋಗ ವಿಯೋಗಂ ಯೋಗ ಸಂಜ್ಞಿತಂ।

ಮುಂತಾದ ಮಾತುಗಳ ನಿಜ ಮರ್ಮವನ್ನು ತಿಳಿಸಿಕೊಡುವ ಶ್ರೀಗಳವರ ಶೈಲಿ ನಿಜಕ್ಕೂ ಮನೋಜ್ಞವಾದುದು. ಅವರು "ಸ್ವಲ್ಪ ಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್।" ಎಂಬ ಗೀತೆಯು ನೀಡಿದ ಯೋಗದ ಬಗೆಗಿನ ಭರವಸೆಯ ವಾಕ್ಯವನ್ನು ಎತ್ತಿ ಹೇಳುವದನ್ನು ಮರೆತಿಲ್ಲ. ಇದು ಅವರ ಔಚಿತ್ಯಪ್ರಜ್ಞೆಗೆ ಉಜ್ವಲ ಉದಾಹರಣೆ. ಹಾಗೆಯೇ ಶ್ರೀ ಅರವಿಂದರ ಪೂರ್ಣಯೋಗಕ್ಕೂ, ಶಿವಯೋಗಕ್ಕೂ ಇರುವ ಸಾಮ್ಯ ವನ್ನೂ ಅವರು ಎತ್ತಿ ಹೇಳಿದ್ದಾರೆ.

ಲಿಂಗಪೂಜೆಯೇ ಪ್ರಧಾನವಾಗಿ ಶಿವಯೋಗವೆನಿಸುತ್ತದೆ ಎಂಬುದು ಶ್ರೀಗಳವರು ಅನುಭವಾಧಾರಿತ ಖಚಿತವಾದ ಅಭಿಪ್ರಾಯ. ಅಂತಲೇ ಅವರು ಪ್ರಸಂಗ ಬಂದಾಗಲೆಲ್ಲಾ ಇದರ ಮೇಲೆಯೇ ಹೆಚ್ಚು ಒತ್ತುಕೊಟ್ಟು ಅಪ್ಪಣೆಕೊಡಿಸುತ್ತಾರೆ. ಆದ್ದರಿಂದಲೇ ವೀರಶೈವದ ಯಥಾರ್ಥತೆ, ಇಷ್ಟಲಿಂಗದ ಸ್ವರೂಪ ಮತ್ತು ವೈಜ್ಞಾನಿಕತೆ, ಲಿಂಗಧಾರಣದ ಆವಶ್ಯಕತೆ, ಇಷ್ಟಲಿಂಗಾರ್ಚನೆ, ಲಿಂಗಪೂಜೆಯೇ ಶಿವಯೋಗ, ಶಿವಯೋಗದ ಅಂಗಗಳು, ಅಷ್ಟಾಂಗಯೋಗದ ನಿರಸನ ಹಾಗೂ ಸಮನ್ವಯ ಮತ್ತು ಕೊನೆಯದಾಗಿ, ಉಪಸಂಹಾರ ಎಂಬೀ ವಿಷಯವಿವೇಚನೆಯ ಅನುಕೂಲತೆಗಾಗಿ ಮಾಡಿಕೊಂಡ ಶೀರ್ಷಿಕೆಗಳ ಅಡಿಯಲ್ಲಿ

ಶಿವಯೋಗದ ರಹಸ್ಯ-ಸ್ವಾರಸ್ಯಗಳನ್ನು ಬಹು ಮನೋಜ್ಞವಾಗಿ, ಅನುಭವಪೂರ್ಣವಾಗಿ ಶ್ರೀ ಸನ್ನಿಧಿಯವರು ನಿರೂಪಿಸಿದ್ದಾರೆ. ಸಾಧಕರಿಗೆ ಇಲ್ಲಿ ಉದ್ದಕ್ಕೂ ಅಮೃತರಸದುಣಿಸೇ ಸಿಕ್ಕುತ್ತದೆ. ಶಿವಯೋಗದ ಅಂಗಗಳನ್ನು ಪ್ರತಿಪಾದಿಸುತ್ತ ಅವರು ಅಪ್ಪಣೆ ಕೊಡಿಸಿರುವ ಈ ಮಾತುಗಳು ಮಾರ್ಮಿಕವಾಗಿವೆ. ಅಂತೆಯೇ, ಮನನೀಯವಾಗಿವೆ: "ಈ ಶಿವಯೋಗದಲ್ಲಿ ಹಿಂದಿನ ಯೋಗಗಳೆನಿಸಿದ ಹಠ, ಲಯ, ಮಂತ್ರ, ರಾಜಯೋಗಗಳೂ ಸಮಾವೇಶಗೊಳ್ಳುತ್ತವೆ. ಹಠಯೋಗ ಶರೀರಶುದ್ಧಿಯ ಸಾಧನವಾದರೆ, ಲಯಯೋಗವು ಪ್ರಾಣಶುದ್ಧಿಯ ಸಾಧನಯೋಗವೆನಿಸಿದೆ. ಮಂತ್ರಯೋಗವು ಮನಶುದ್ಧಿಯ ಸಾಧನವೆನಿಸಿದರೆ, ರಾಜಯೋಗವು ಇವೆಲ್ಲಕ್ಕೂ ರಾಜನಾದ ಜೀವಶುದ್ಧಿಯ ಸಾಧನಯೋಗವು. ಹೀಗೆ ರಾಜಯೋಗದಲ್ಲಿ ಶುದ್ಧನಾದ ಜೀವಾತ್ಮನು ಶಿವನಲ್ಲಿ ಸಮರಸ ಹೊಂದುವದೇ ಶಿವಯೋಗ. ನಾಲ್ಕು ಯೋಗಗಳು ಮಂಚದ ನಾಲ್ಕು ಕಾಲುಗಳಿದ್ದಂತೆ. ಶಿವಯೋಗವು ನಾಲ್ಕು ಕಾಲುಗಳನ್ನು ಹೊಂದಿದ ಪೂರ್ಣವಾದ ಮಂಚದಲ್ಲಿ ಆನಂದಕೊಡುವಂಥಹದು. **ರಾಜನೆಂದರೆ ಚಂದ್ರ; ರಾಜಯೋಗವೆಂದರೆ, ಚಂದ್ರಯೋಗ. ಶಿವಯೋಗವೆಂದರೆ ಚಂದ್ರಧರಯೋಗ!"** (ಶಿವಯೋಗ-ಪು. ೫೦-೫೧) ಈ ಮಾತುಗಳು ಸರ್ವಸಮ್ಮತವೂ ಆಗಿವೆ. ಶಿವಯೋಗದ ರಹಸ್ಯವನ್ನು ತಿಳಿಸಲು ಶ್ರೀಗಳವರು "ಅಳಿದು ಕೂಡುವದು ಒಂದು ಯೋಗ. ಅಳಿಯದೇ ಕೂಡುವದು ಒಂದು ಯೋಗ. ಈ ಎರಡು ಯೋಗಗಳಲ್ಲಿ **ಅಳಿಯದೇ ಕೂಡುವ ಯೋಗವರಿವುದು, ಗುಹೇಶ್ವರಾ!"** ಎಂಬೀ ಶ್ರೀ ಅಲ್ಲಮಪ್ರಭುಗಳ ವಚನದಿಂದ ಶಿವಯೋಗದ ರಹಸ್ಯವನ್ನು ತಿಳಿಸಿಕೊಟ್ಟಿದ್ದರೆ, "ಹರಿವ ನದಿಗೆ ಮೈಯೆಲ್ಲಾ ಕಾಲು! ಉರಿವ ಅಗ್ನಿಗೆ ಮೈಯೆಲ್ಲಾ ನಾಲಿಗೆ! ಬೀಸುವ ಗಾಳಿಗೆ ಮೈಯೆಲ್ಲಾ ಮುಖ(ಕೈ?)! ಗುಹೇಶ್ವರಾ, ನಿಮ್ಮ ಶರಣಂಗೆ ಸರ್ವಾಂಗವೆಲ್ಲವೂ ಲಿಂಗ!" ಎಂಬೀ ಪ್ರಭುಗಳ ಮತ್ತೊಂದು ವಚನದಿಂದ ಜೀವನ್ಮುಕ್ತನಾದ ಪರಮ ಶಿವಯೋಗಿಯ ನಿಜ ನಿಲವನ್ನು ಅರುಹಿದ್ದಾರೆ. ಈ ಶಿವಯೋಗದ ವಿಷಯವನ್ನೇ "ಮೈಲಾರ ಬಸವಲಿಂಗ ಶರಣರು **ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ"** ಎಂಬ ಮಹಾನ್ ಕೃತಿಯಲ್ಲಿ ೧೧೬-೧೧೮ ತ್ರಿವಿಧಿಗಳ ವಿವರಣೆ-ವಿವೇಚನೆಯಲ್ಲಿ **'ಲಿಂಗಾಂಗಯೋಗ'** ಎಂದೂ "ವೈರಾಗ್ಯನಿಧಿ ಶ್ರೀ ಅಕ್ಕಮಹಾದೇವಿಯವರ **ಯೋಗಾಂಗ ತ್ರಿವಿಧಿ ವ್ಯಾಖ್ಯಾನ"** ಎಂಬ ಅಮೂಲ್ಯ ಕೃತಿಯಲ್ಲಿ ೧೯ನೆಯ ತ್ರಿವಿಧಿಯ ವಿವರಣೆಯಲ್ಲಿ **"ಪ್ರಾಣಲಿಂಗಯೋಗ"** ಎಂದೂ. ೩೨ನೇ ತ್ರಿವಿಧಿಯ ನಿರೂಪಣೆಯಲ್ಲಿ 'ಶಿವಯೋಗ (ಲಿಂಗದೃಷ್ಟಿ)' ಎಂದೂ, ಅಂತೆಯೇ, "ಆರೈದು-ಭಾಗ ಎರಡು; ತತ್ವದರ್ಶನ" ಎಂಬ ಸುಂದರ ಹಾಗೂ ಉಪಯುಕ್ತ ಗ್ರಂಥದಲ್ಲಿ **'ಯೋಗ-ಶಿವಯೋಗ'** ಎಂದೂ ಹೆಸರಿಸಿ ಶ್ರೀ ಸನ್ನಿಧಿಯವರು ಅನನುಕರಣೀಯ, ಉತ್ಕೃಷ್ಟ ಶೈಲಿಯಲ್ಲಿ ವಿವೇಚಿಸಿದ್ದಾರೆ.

"ಶಿವಯೋಗ" ಎಂಬೀ **ಚಿಕ್ಕ** ಪುಸ್ತಿಕೆಯಲ್ಲಿ ಶ್ರೀಗಳವರ ಶಿವಾಗಮ,

ಶಂಕರ ಸಂಹಿತೆ, ಸಿದ್ಧಾಂತ ಶಿಖಾಮಣಿ, ಶ್ರೀ ಚನ್ನಸದಾಶಿವಯೋಗಿ ಕೃತ ಶಿವಯೋಗ ಪ್ರದೀಪಿಕೆ, ಶ್ರೀ ಮುಗ್ಗಿಯ ಮಾಯಿದೇವರ ಶಿವಾನುಭವ ಸೂತ್ರ, ಶ್ರೀಮನ್ನಿಜಗುಣ ಶಿವಯೋಗಿಗಳ **'ಕೈವಲ್ಯ ಪದ್ಧತಿ'** ಮತ್ತು ಪಾರಮಾರ್ಥ ಪ್ರಕಾಶಿಕೆ, ಶ್ರೀ ಸರ್ಪಭೂಷಣ ಶಿವಯೋಗಿಗಳ **'ಕೈವಲ್ಯ ವಲ್ಲವಲ್ಲರೀ',** ಶ್ರೀ ಮೈಲಾರ ಬಸವಲಿಂಗಶರಣರ ಗುರುಕರುಣ ತ್ರಿವಿಧಿ ಮತ್ತು ಇತರ ಕೃತಿಗಳು, ಹಾಗೆಯೇ ೧೨ನೆಯ ಹಾಗೂ ೧೫ನೆಯ ಶತಮಾನದ ಪ್ರಮುಖ ವಚನಕಾರರ ವಚನಾದಿಗಳು—ಈ ಅಮೋಘ ಮೂಲ ಸೂತ್ರಗಳಿಂದ ವಿಪುಲ ಉಲ್ಲೇಖಗಳನ್ನು ಪ್ರಮಾಣವಾಗಿಯೇ, ಉದಾಹರಣೆಯಾಗಿಯೇ ಸಮರ್ಥವಾಗಿ, ಸರಿಯಾಗಿ ಬಳಸಿಕೊಂಡಿದ್ದಾರೆ. ಇದು ಅವರ ವ್ಯಾಪಕವಾದ ಗ್ರಂಥಾಧ್ಯಯನ ಶಾಸ್ತ್ರೀಯ ಸಿದ್ಧತೆ ಮತ್ತು ಔಚಿತ್ಯ ಪ್ರಜ್ಞೆಗಳಿಗೆ ಉತ್ತಮ ನಿದರ್ಶನವಾಗಿದೆ. ಶ್ರೀಗಳವರು 'ಶಿವಯೋಗ' ಪುಸ್ತಿಕೆಯ ಕೊನೆಯಲ್ಲಿ ಕೊಟ್ಟಿರುವ 'ಗ್ರಂಥಋಣ'ದ ಕನ್ನಡ, ಸಂಸ್ಕೃತ ಹಾಗೂ ಹಿಂದೀ ಭಾಷೆಯಲ್ಲಿರುವ ೨೧ ಗ್ರಂಥಗಳು ಬಂದಿವೆ. ನಿಜಕ್ಕೂ ಇಂತಹ ಅನುಷ್ಠಾನ-ನಿಷ್ಠೆ ಮತ್ತು ಉಜ್ವಲ ವಿದ್ವತ್ತೆ ಇರುವ ಶ್ರೀ ಸನ್ನಿಧಿಯವರು ಸಮಾಜದ ದಿವ್ಯ ಆಸ್ತಿ, ಸಂಪತ್ತು.

ಒಂದೊಂದು ಇಂದ್ರಿಯವೂ ಆಯಾ ವಿಷಯವನ್ನು ಗ್ರಹಿಸುತ್ತಿರುವ ಸರ್ವರ ಅನುಭವದಲ್ಲಿಯೂ ಇದೆ. ಇದನ್ನೇನೂ ಶಾಸ್ತ್ರದಿಂದಲೇ ತಿಳಿದುಕೊಳ್ಳಬೇಕೆಂಬುದಿಲ್ಲ. ಆದರೆ, ಜಿಜ್ಞಾಸುಗಳಿಗೆ ಕುತೂಹಲವನ್ನು ಉಂಟುಮಾಡುವ ಸಂಗತಿಯೆಂದರೆ, ಒಂದು ಇಂದ್ರಿಯವು ತನ್ನ ವಿಶಿಷ್ಟ ವಿಷಯವನ್ನು ಮಾತ್ರ ಗ್ರಹಿಸುತ್ತದೆ. ಉದಾಹರಣೆಗಾಗಿ, ನೇತ್ರೇಂದ್ರಿಯ ತನ್ನ ವಿಷಯವಾದ ರೂಪವನ್ನು ಮಾತ್ರ ಗ್ರಹಿಸುತ್ತದೆ; ಉಳಿದ ಸ್ಪರ್ಶ, ರಸ ಮುಂತಾದ ವಿಷಯಗಳನ್ನು ಗ್ರಹಿಸುವದಿಲ್ಲ. ಹೀಗೆಯೇ ರಸನೇಂದ್ರಿಯಾದಿ ಇತರ ಇಂದ್ರಿಯಗಳೂ ಕೂಡ ತಮ್ಮ ತಮ್ಮ ಒಂದೊಂದೇ ವಿಷಯವನ್ನು ಮಾತ್ರ ಗ್ರಹಿಸುತ್ತವೆಯೇ ವಿನಾ ಉಳಿದ ಇಂದ್ರಿಯ ವಿಷಯಗಳನ್ನು ಗ್ರಹಿಸುವದಿಲ್ಲ. ಇದು ಹೀಗೇ ಏಕೆ? ಎಂಬುದೇ ಜಿಜ್ಞಾಸುವಿಗೆ ಕುತೂಹಲಕಾರಿಯಾದ ಪ್ರಶ್ನೆಯಾಗಿ ನಿಲ್ಲುತ್ತದೆ. ಸಾಮಾನ್ಯ ಜೀವನದಲ್ಲಿ ಸರ್ವರ ಅನುಭವದಲ್ಲಿಯೂ ಇರುವ ಇಂತಹ ಅದೆಷ್ಟೋ ಸಂಗತಿಗಳತ್ತ ಗಮನ ಹೋಗುವದಿಲ್ಲ. ಜಿಜ್ಞಾಸುಗಳ ಲಕ್ಷ್ಯ ಮಾತ್ರ ಸಹಜವೇ ಅತ್ತ ಹರಿಯುತ್ತದೆ. ಆಗ ಶಾಸ್ತ್ರ ಅವರ ನೆರವಿಗೆ ಬರುತ್ತದೆ. ಇದೀಗ ಆಯಾ ಇಂದ್ರಿಯ ಆಯಾ ವಿಷಯವನ್ನು ಮಾತ್ರ ಗ್ರಹಿಸಲು ಕಾರಣವೇನು? ಎಂಬ ಪ್ರಶ್ನೆಗೆ ಭಾರತೀಯ ತತ್ವಶಾಸ್ತ್ರದಲ್ಲಿ ಅದರಲ್ಲೂ, ವೇದಾಂತ ಶಾಸ್ತ್ರದಲ್ಲಿ ಮಾತ್ರ ಇದಕ್ಕೆ ಸಮಾಧಾನಕಾರಕ ಉತ್ತರ ಸಿಕ್ಕುತ್ತದೆ. ವೇದಾಂತದಲ್ಲಿ **'ಪಂಚೀಕರಣ'** ಎಂಬ ಒಂದು ಪ್ರಮುಖ ಪ್ರಕ್ರಿಯೆ ಬರುತ್ತದೆ. ಅದು ಆಯಾ ಇಂದ್ರಿಯ ಆಯಾ ವಿಷಯವನ್ನು ಮಾತ್ರ ಗ್ರಹಿಸಲು ಬಹು ವೈಜ್ಞಾನಿಕವಾದ ಕಾರಣಗಳನ್ನು ಕೊಡುತ್ತದೆ. ಉದಾಹರಣೆಗಾಗಿ, ನೇತ್ರೇಂದ್ರಿಯ ಮತ್ತು ರೂಪ ವಿಷಯ-ಇವು ಅಗ್ನಿತತ್ವದಿಂದಾಗಿದ್ದು, ಅವುಗಳಲ್ಲಿ ಮಾತ್ರ **'ಸಂಯೋಗ'** ಸಂಘಟಿಸ

ಬಲ್ಲುದು. "The like attract the like" ಎಂದು ಹೇಳುವದಿಲ್ಲವೆ? ಆ ನಿಯಮ ಇಲ್ಲಿಯೂ ಸರಿಯಾಗಿಯೇ ಅನ್ವಯಿಸುತ್ತದೆ. ಹಾಗೆಯೇ, ತ್ವಗೇಂದ್ರಿಯ ಹಾಗೂ ಸ್ಪರ್ಶ-ವಿಷಯ-ಇವು ವಾಯು ತತ್ವದಿಂದಾಗಿವೆ. ಆದ್ದರಿಂದ ತ್ವಗೇಂದ್ರಿಯ ಸ್ಪರ್ಶಗ್ರಹಣ ಮಾತ್ರ ಮಾಡುತ್ತದೆ; ಉಳಿದ ತತ್ವಗಳಿಂದಾದ ಇತರ ವಿಷಯಗಳನ್ನು ಅದು ಗ್ರಹಿಸಲು ಸರ್ವಥಾ ಅಸಮರ್ಥವಾಗಿದೆ. ವೈಚಾರಿಕತೆಗೆ ಅಗ್ರಸ್ಥಾನವನ್ನಿತ್ತಿರುವ ವೀರಶೈವ ಇಂತಹ ವೈಜ್ಞಾನಿಕ ಪ್ರಕ್ರಿಯೆಯನ್ನು ಅದೆಂತು ಕಡೆಗಣಿಸಲು ಸಾಧ್ಯ? ಅದು ತನ್ನದೇ ಆದ ಕೆಲವು ಸಾಮಾನ್ಯ ಮಾರ್ಪಾಟುಗಳೊಂದಿಗೆ ಪಂಚೀಕರಣವನ್ನು ತನ್ನ ಸಿದ್ಧಾಂತದಲ್ಲಿ ಅಳವಡಿಸಿಕೊಂಡಿದೆ. ಅದು ಶ್ರೀ ಮೈಲಾರ ಬಸವಲಿಂಗ ಶರಣ 'ಗುರುಕರುಣ ತ್ರಿವಿಧಿ'ಯಲ್ಲಿಯೂ ನಿರೂಪಣೆಗೊಂಡಿದೆ. ಅದನ್ನು ಪೂಜ್ಯ ಶ್ರೀ ಜಗದ್ಗುರು ಸನ್ನಿಧಿಯವರು ಬಹು ಉತ್ಕೃಷ್ಟವಾದ ರೀತಿಯಲ್ಲಿ ವಿವರಿಸಿದ್ದಾರೆ.

ಶ್ರೀ ಸನ್ನಿಧಿಯವರು "ವೀರಶೈವ ದಾರ್ಶನಿಕ ಸಿದ್ಧಾಂತ" ಎಂಬ ತಮ್ಮ ಉದ್ಗ್ರಂಥದಲ್ಲಿ **"ಗುರುಕರುಣ ತ್ರಿವಿಧಿ"**ಯ ೫೬ ರಿಂದ ೭೪ರ ವರೆಗೆ ಬರುವ ತ್ರಿಪದಿಗಳಲ್ಲಿ ಪಂಚೀಕರಣದ ವಿಷಯ ಬಂದಿರುವದನ್ನು ಯಥಾರ್ಥವಾಗಿ ಗುರುತಿಸಿ ಬಹು ಶಾಸ್ತ್ರೀಯವಾಗಿ, ಸಪ್ರಮಾಣವಾಗಿ ಪ್ರತಿಪಾದಿಸಿದ್ದಾರೆ. ಜಗತ್-ಸೃಷ್ಟಿ-ದೇಹೋತ್ಪತ್ತಿ-ಜೀವನಿಗೆ ಸಂಸಾರ-ಇದೆಲ್ಲವೂ ಹೇಗಾಯಿತೆಂಬುದನ್ನು ಅವರು ಅತ್ಯಂತ ಮಾರ್ಮಿಕವಾಗಿ ಪಂಚೀಕರಣದಡಿಯಲ್ಲಿ ವಿವೇಚಿಸಿದ್ದಾರೆ. ೬೬ ರಿಂದ ೭೦ರ ವರೆಗಿನ ತ್ರಿವಿಧಿಗಳ ಅರ್ಥ ವಿವರಣೆಯಲ್ಲಿ ಆಯಾ ಇಂದ್ರಿಯ ಆಯಾ ವಿಷಯವನ್ನೇ ಏಕೆ ಗ್ರಹಿಸುತ್ತದೆಂಬುದನ್ನು ಪಂಚೀಕರಣದ ಸಹಾಯದಿಂದ ಬಹುಸುಂದರವಾಗಿ, ಸವಿಸ್ತಾರವಾಗಿ ಶ್ರೀ ಸನ್ನಿಧಿಯವರು ನಿರೂಪಿಸಿದ್ದಾರೆ. ಇದೇ ವಿಷಯವನ್ನು ಅವರು **"ಮಾನವ-ಧರ್ಮ"** ಎಂಬ ತಮ್ಮ ಮತ್ತೊಂದು ಕೃತಿಯಲ್ಲಿಯೂ "೩ ದಮ" ಮತ್ತು "೬ ಇಂದ್ರಿಯ ನಿಗ್ರಹ" ಎಂಬ ಶೀರ್ಷಿಕೆಗಳ ಕೆಳಗೆ ಅತ್ಯಂತ ಮನೋಜ್ಞ ಹಾಗೂ ಮನನೀಯ ಶೈಲಿಯಲ್ಲಿ ತಿಳಿಸಿಕೊಟ್ಟಿದ್ದಾರೆ. "ಜಗತ್ತಿನಲ್ಲಿ ವಿಷಯಗಳು ಐದು. ಅವನ್ನು ಅನುಭವಿಸುವ ಇಂದ್ರಿಯಗಳೂ ಐದು. ಈ ಐದರಲ್ಲಿ ದೊರೆಯುವ ಸುಖಕ್ಕಾಗಿ ಮಾನವನು ಅಹೋರಾತ್ರಿ ಶ್ರಮಪಡುತ್ತಿರುವನು. ಇಂದ್ರಿಯಗಳಿಗೆ ವಿಷಯಗಳ ಸಂದರ್ಶನವಾದಾಕ್ಷಣವೇ ಸ್ವಭಾವತಃ ಅವು ಅವುಗಳ ಬಲಿಗೆ ಬೀಳುತ್ತವೆ. ಇದು ಪ್ರಕೃತಿಯ ನಿಯಮ. ಹೀಗೇ ಇಂದ್ರಿಯ-ವಿಷಯ ಸಂಯೋಗ-ತತ್ಪರಿಣಾಮ ಪರಂಪರೆಗಳ ಸುದೀರ್ಘವಾದ ಸುಂದರವಾದ ವಿವೇಚನೆ ಉದ್ದಕ್ಕೂ ಮುಂದುವರಿಯುತ್ತದೆ. ಪಂಚೀಕರಣದಡಿಯಲ್ಲಿ ಜೀವನಿಗೆ ಸಂಸಾರ ಹೇಗೆ ಬಂತು ಎಂಬುದರ ಚರ್ಚೆಯೂ ಕೂಡ ಬಂದಿರುವದಷ್ಟೆ? "ಸಂಸಾರ ಸಾಗರದಲ್ಲಿ ಬೆಂಕಿಯಂತಿರುವ ಆತ್ಮಜ್ಞಾನವು ನಂದಿಹೋದರೆ ಅಜ್ಞಾನವು ಜೀವಾತ್ಮನನ್ನು ಆವರಿಸುವದು. ಬೂದಿಮುಚ್ಚಿದ ಕೆಂಡದಂತೆ ಅಜ್ಞಾನವು ಇವನನ್ನು ಒಳಗೊಳಗೇ (ಶರೀರದಲ್ಲಿ) ಬೇಯಿಸುತ್ತದೆ. ಅಲ್ಲದರಲ್ಲಿ ಅಹುದೆಂಬ ಬುದ್ಧಿಯು ಅಜ್ಞಾನಕ್ಕೆ ಕಾರಣ. ಜೀವಾತ್ಮನು

ದೇಹವೇ ತಾನು, ದೇಹ ಸುಖವೇ ನಿಜಸುಖವೆಂದು ತಿಳಿದು ಸಾಂಸಾರಿಕ ವ್ಯಾಮೋಹದಲ್ಲಿ ಸಿಲುಕುತ್ತಾನೆ. ಸುಖ-ಸಂತೃಪ್ತಿಗಳು ದೊರೆಯದಿದ್ದಾಗ ನೊಂದುಕೊಳ್ಳುವನು; ದುಃಖಿತನಾಗುವನು. ಈ ಅಜ್ಞಾನದಿಂದ ಉಂಟಾಗುವ ನೋವು ಬಾಳಸಮುದ್ರವನ್ನು ವ್ಯಾಪಿಸಿ ಎಡೆಬಿಡದೆ ದಹಿಸುತ್ತದೆ. ಈ ನೋವು ಆರದ ನೋವಾಗಿದೆ. ಇದರಿಂದ ಜೀವನವು ಬರಡಾಗುತ್ತದೆ. ಇದನ್ನು ನಿವಾರಿಸುವ ಸಾಮರ್ಥ್ಯ ಶ್ರೀಗುರುವಿನಲ್ಲಿದೆ. ಗುರುವೆ! ನಿನ್ನ ಜ್ಞಾನಬೋಧೆಯಿಂದ ಎನ್ನಲ್ಲಿಯ ಅಜ್ಞಾನದ ಬೇಗೆಯನ್ನು, ಹೊಗೆಯನ್ನು ಹೋಗಲಾಡಿಸಿ, ಆತ್ಮಜ್ಞಾನಾಗ್ನಿಯನ್ನು ಬೆಳಗಿಸಿ ಕಾಪಾಡು!" ಇಲ್ಲಿ ಶ್ರೀಗಳವರು ಸದ್ಗುರುಬೋಧೆಯಿಂದ ಸಂಪ್ರಾಪ್ತವಾಗಿ ಜ್ಞಾನದ ಮಹಿಮಾತಿಶಯವನ್ನು ಯಥಾರ್ಥವಾಗಿ ಗುರುತಿಸಿದ್ದಾರೆ. ಶ್ರೀ ನಿಜಗುಣ ಶಿವಯೋಗಿಗಳ ಮಾತನ್ನು ಉಲ್ಲೇಖಿಸಿ ಅಜ್ಞಾನ ಭ್ರಾಂತಿಯ ನಿವೃತ್ತಿಗೆ ಜ್ಞಾನ ಬೇಕೆ ಬೇಕೆಂಬುದನ್ನು ಒತ್ತಿಹೇಳಿದ್ದಾರೆ. "ಜ್ಞಾನವು ಮಾನವ ಜೀವನದ ಜೀವಾಳ. ಮಾನವೀಯತೆಯ ಮಹೋನ್ನತಿ ಜ್ಞಾನದಿಂದಲೇ ವ್ಯಕ್ತವಾಗುವದು. ಮಾನವ ಧರ್ಮದ ಅಡಿಗಲ್ಲು ಜ್ಞಾನವೇ ಆಗಿದೆ. ಜ್ಞಾನ ಸಂಪಾದನೆಯಿಂದಲೇ ಮಾನವ ಜನ್ಮದ ಸಾರ್ಥಕತೆಯಾಗುವದು. ಇಂಥ ಜ್ಞಾನಕ್ಕೆ ಸದೃಶವಾದ ಪವಿತ್ರ ವಸ್ತುವು ಮತ್ತೊಂದಿಲ್ಲವೆಂಬುದು ಸತ್ಯಸಿದ್ಧವಾದ ಮಾತು" (ಆರೈದು-ಭಾಗ ೩. ಪು. ೬).

ತತ್ವ ಸಾಹಿತ್ಯಕ್ಕೆ ಸನ್ನಿಧಿಯವರು ಇಂತಹ ಅಮೂಲ್ಯ ಕೊಡುಗೆಯನ್ನು ನೀಡಲು ಸಾಧ್ಯವಾದುದಕ್ಕೆ ಕಾರಣವೇ ಶಾಸ್ತ್ರ ಮತ್ತು ಶಾಸ್ತ್ರೀಯ ಪದ್ಧತಿ, ಅಂತೆಯೇ ತದನುಸಾರವಾದ ವಿವೇಚನೆಗಳಲ್ಲಿ ಅವರಿಗಿರುವ ಪ್ರೀತಿ-ಗೌರವಗಳು ಪೂಜ್ಯರ ಗ್ರಂಥಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದಾಗ ಅವರಿಗಿರುವ ಈ ಪ್ರೀತಿ-ಗೌರವಗಳ ಕಲ್ಪನೆ ನಮಗೆ ಬರುವದರಲ್ಲಿ ಸಂಶಯವೇ ಇಲ್ಲ. ವೀರಶೈವ ಸಿದ್ಧಾಂತವನ್ನು ಕುರಿತು ಆಳವಾಗಿ ಆಲೋಚಿಸಿ ಬರೆದ ಇತರ ಆಧುನಿಕ ವಿದ್ವಾಂಸರುಗಳಿಗೂ, ಸ್ವಾಮಿಗಳಿಗೂ ಮತ್ತು ಇವರಿಗೂ ಇರುವ ವ್ಯತ್ಯಾಸವೇ ಇದರಲ್ಲಿದೆ. ಜಿಜ್ಞಾಸುಗಳಿಗಂತೂ ಶ್ರೀಗಳವರ ಬರವಣಿಗೆ ಬಹಳ ಆಪ್ಯಾಯಮಾನವೆನಿಸುತ್ತದೆ. ಅವರ ಶಾಸ್ತ್ರೀಯ ಪದ್ಧತಿಯ ಪ್ರಜ್ಞೆಗೆ ಉಜ್ವಲ ಉದಾಹರಣೆಯಾಗಿ ಅವರು ತಮ್ಮೆರಡು ಗ್ರಂಥಗಳ ಆರಂಭದಲ್ಲಿ ಮಂಗಳಾಚರಣೆ ಮತ್ತು ಅನುಬಂಧ-ಚತುಷ್ಟಯಗಳನ್ನು ಎತ್ತಿ ತೋರಿಸಿದ್ದು. "ವೀರಶೈವ ದಾರ್ಶನಿಕ ಸಿದ್ಧಾಂತ"ದಲ್ಲಿ 'ಗುರುಕರುಣ ತ್ರಿವಿಧಿ ಅನುಬಂಧಚತುಷ್ಟಯುವನ್ನು' ಹೊಂದಿರುವದನ್ನು ಬಹು ಶಾಸ್ತ್ರೀಯವಾಗಿ ನಿರೂಪಿಸುತ್ತಾರೆ. "ಸತ್ಯ ಶುದ್ಧ ಕಾಯಕತತ್ಪರನು, ಸತ್ಕ್ರಿಯಾ ಸುಜ್ಞಾನದಿಂದ ಲಿಂಗಾಂಗ ಸಾಮರಸ್ಯ ಸೌಖ್ಯಾಕಾಂಕ್ಷಿಯಾದ ಸದ್ಭಕ್ತನು ಇದಕ್ಕೆ **ಅಧಿಕಾರಿ**ಯಾಗಿದ್ದಾನೆ. ಅಷ್ಟಾವರಣಾಂಗ-ಪಂಚಾಚಾರಪ್ರಾಣ-ಷಟ್‌ಸ್ಥಲಾತ್ಮತತ್ವಪ್ರಧಾನವಾದ ವೀರಶೈವ ದಾರ್ಶನಿಕ ಸಿದ್ಧಾಂತವೇ ಇಲ್ಲಿಯ **ವಿಷಯವಾಗಿದೆ.** ಅಂಗನನ್ನು ಲಿಂಗನನ್ನಾಗಿಸಬಲ್ಲ ಸದ್ಗುರು ಶಿಷ್ಯನಿಗೆ ಸಂಬಂಧಿಯಾಗಿದ್ದಾನೆ. (ಆದ್ದರಿಂದ

ಗುರು-ಶಿಷ್ಯಭಾವ) ಅರ್ಥಾತ್ ಬೋಧ್ಯ-ಬೋಧಕಭಾವ **ಸಂಬಂಧ**ವಿದೆ. ಲಿಂಗಾಂಗ ಸಾಮರಸ್ಯರೂಪ ಮಹಾಮಂಗಳವೇ **ಪ್ರಯೋಜನವಾಗಿದೆ** ಅಥವಾ ಶರಣನ ಶೂನ್ಯಸಂಪಾದನೆಯೇ ಮಹಾ-ಪ್ರಯೋಜನವೆಂತಲೂ ಹೇಳಬಹುದು." (ಪ್ರ. ೫), ಹೀಗೆಯೇ, "ಯೋಗಾಂಗ ತ್ರಿವಿಧಿ ವ್ಯಾಖ್ಯಾನ"ದಲ್ಲಿಯೂ ಈ ಶಾಸ್ತ್ರೀಯ ಪ್ರಕ್ರಿಯೆ ಸ್ಥಾನ ಪಡೆದಿದೆ: "ಗುರುಪಾದ ಸೇವನಾಸಕ್ತನಾದ ಸದ್ಭಕ್ತನೇ ಇಲ್ಲಿ **ಅಧಿಕಾರಿ**ಯೆನಿಸುತ್ತಾನೆ. 'ಸರ್ವಂಲಿಂಗಮಯಂ' ಎಂಬ ಪ್ರಮಾಣದಂತೆ ಸಕಲವೂ ಲಿಂಗಸ್ವರೂಪವೆಂಬ ತತ್ವದ ಚದುರ ಪದಗಳೇ **ವಿಷಯು**ವೆನಿಸಿವೆ. ಅರ್ಥಾತ್ ಲಿಂಗಾಂಗಯೋಗವೇ ಈ ಗ್ರಂಥದ ವಿಷಯು. ಸದಮಲ ಸದ್ಗುರು ಸೇವಾಸಕ್ತನಾದ ಶಿಷ್ಯನಿಗೆ ಲಿಂಗಾಂಗಸಾಮರಸ್ಯ ರೂಪ ಮಹಾಮಂಗಳವೇ **ಪ್ರಯೋಜನ**ವೆನಿಸಿದೆ." (ಪ್ರ. ೫)

ಶ್ರೀ ಸನ್ನಿಧಿಯುವರಿಂದ ರಚಿತವಾದ ತತ್ವಸಾಹಿತ್ಯದ ಇನ್ನೊಂದು ಗಮನಿಸಲೇ ಬೇಕಾದ ವೈಶಿಷ್ಟ್ಯವೆಂದರೆ-"ಗುರುಕರುಣ ತ್ರಿವಿಧಿ"ಯಲ್ಲಿ ಮತ್ತು "ಯೋಗಾಂಗ ತ್ರಿವಿಧಿ"ಯಲ್ಲಿ ಅನೇಕ ತ್ರಿಪದಿಗಳು ಬೆಡಗಿನ ವಚನಗಳಷ್ಟೇ ಕ್ಲಿಷ್ಟವಾಗಿವೆ. ಆದರೆ, ಶ್ರೀ ಸನ್ನಿಧಿಯುವರು ಅವುಗಳನ್ನು ಸಹಜ ಸುಲಭವೆಂಬಂತೆ ವಿವರಿಸಿ ವಿಚಾರಿಸಿದ್ದಾರೆ. ಉದಾಹರಣೆಗಾಗಿ,

"ಯೋಗಾಂಗ ತ್ರಿವಿಧಿ" "ಸಪ್ತಸಾಗರ ಬತ್ತಿ।
ಹತ್ತು ಸಂಖ್ಯೆಯು ಸತ್ತು ಮುತ್ತು-ಮಾಣಿಕವು ತಲೆದೋರೆ ಅದ ಕಂಡು।
ಸತ್ತವನು ಎದ್ದು ಕುಣಿದಿಹನು" ॥೩೪॥

ಎಂಬೊಂದು ತ್ರಿಪದಿ ಬರುತ್ತದೆ. ಇದರ ಒಳಮರ್ಮ ಅನುಭಾವಿಗಳಲ್ಲದವರಿಗೆ ತಿಳಿಯದು, ಹೊಳೆಯದು-ಆದರೆ, **ಅನುಭಾವಿಕ ಭೂಮಿಕೆಯು ಮೇಲೆ ನಿಂತ** ಶ್ರೀ ಸನ್ನಿಧಿಯುವರು ಅಪ್ಪಣೆಕೊಡಿಸುವದರ ಸ್ವಾರಸ್ಯವನ್ನು ಪರಿಭಾವಿಸಿರಿ: "ಸಂಸ್ಕಾರ ವಿಶೇಷತೆಯಿಂದ ದೇಹ ಚಿದ್ಭೂಮಿಯಾಗಿ ಲಿಂಗವೃಕ್ಷ ಬೆಳೆಯುತ್ತದೆ. ಲಿಂಗಜ್ಞಾನ ಫಲ ಪಕ್ವವಾಗುವದರಿಂದ ಸಪ್ತ ವ್ಯಸನಗಳೆಂಬ ಏಳುಸಾಗರಗಳು ಬತ್ತಿಹೋಗುತ್ತವೆ. ಪಂಚ ಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯುಗಳು ಕೂಡಿ ಹತ್ತು ಇಂದ್ರಿಯಗಳೂ ಲೌಕಿಕ ಕ್ರಿಯೆಯನ್ನು ಅರ್ಥಾತ್ ವಿಷಯ ವ್ಯಾಮೋಹವನ್ನು ತ್ಯಜಿಸಿದಾಗ ಈ ಹತ್ತು ಸಂಖ್ಯೆಯು ಸತ್ತಂತೆಯೇ. ಬಾಹ್ಯ ಪ್ರಪಂಚದ ವ್ಯವಹಾರ ನಿಂತು ಹೋಗಲು ಮುತ್ತಿನ ಶುಭ್ರ ವರ್ಣದ ಜ್ಯೋತಿರೂಪದ ಪ್ರಾಣಲಿಂಗವೂ ಮುತ್ತು ಮಾಣಿಕ್ಯದಂತೆ ದೀಪ್ತಿಯುಳ್ಳ ಭಾವಲಿಂಗವೂ ಸುಜ್ಞಾನದಿಂದ ಪ್ರತ್ಯಕ್ಷವಾಗಿ ಅನುಭವಕ್ಕೆ ವೇದ್ಯವಾಗುತ್ತದೆ. ಆಗ ಜಡದೇಹದ ಅಭಿಮಾನಿಯಾದ ಜೀವಾತ್ಮನು ಸಂಪೂರ್ಣವಾಗಿ ಸತ್ತಂತೆಯೇ. ತನುವಿಗೆ ಇಷ್ಟಲಿಂಗ, ಜೀವಕ್ಕೆ ಪ್ರಾಣಲಿಂಗರೂಪಾಗಿ ಭಾವಕ್ಕೆ ಭಾವಲಿಂಗವಾಗಿ ಲಿಂಗಲೀಲೆಯು ಲೀಲಾಮಯವಾಗಿ ತೋರುತ್ತವೆ." (ಪ್ರ. ೬೦) ಇಂಥವೇ ಕೊಡುಗೆಯನ್ನು ನಾವು "ಜಂಗಮ ಪುಂಗವ ಶ್ರೀ ಅಲ್ಲಮಪ್ರಭುದೇವರು" (ಸಂ. ಶ್ರೀ ಸನ್ನಿಧಿಯುವರು) ಎಂಬ

ಗ್ರಂಥದಲ್ಲಿ ಶ್ರೀಗಳವರ **"ಪ್ರಭುದೇವರ ಬೆಡಗಿನ ವಚನಗಳು"** (ಪು. ೧೨೦-೧೪೫) ಎಂಬೀ ಅಭ್ಯಾಸಪೂರ್ಣ, ಅನುಭವಪೂರ್ಣ ಲೇಖನದಲ್ಲಿ ಕಾಣುತ್ತೇವೆ.

ನಿಜಕ್ಕೂ, ಶ್ರೀ ಸನ್ನಿಧಿಯವರ ಅನುಷ್ಠಾನ ನಿಷ್ಠೆಯಿಂದ ಸಂಪ್ರಾಪ್ತವಾದ ಸ್ವಾನುಭವದ ದಿವ್ಯ ಪ್ರಭೆ ಮತ್ತು ವಿಸ್ತಾರದ ಶಾಸ್ತ್ರಾಧ್ಯಯನದ ಸಂವಿತ್-ಪ್ರತಿಭೆಗಳು ಅವರಿಂದ ರಚಿತವಾದ ತತ್ವಸಾಹಿತ್ಯಕ್ಕೆ ಅಪೂರ್ವ ಮೆರುಗನ್ನು ಒದಗಿಸಿವೆ. ಅವರ ತಾತ್ವಿಕ ಪ್ರಜ್ಞೆ ಸದಾ ಜಾಗೃತವಾಗಿರುತ್ತದೆ. ಅಂತೆಲೆ ಅವರು ಬರೆದ ಸಾಹಿತ್ಯದಲ್ಲಿ ಎಲ್ಲಿ ಬೇಕಂದರಲ್ಲಿ ಅದು ಸುಸಂಗತವಾಗಿ ಅಭಿವ್ಯಕ್ತಿ ಪಡೆದಿದೆ. ಅವರು ಸಂಪಾದಿಸಿದ ಶ್ರೀ ಚೆನ್ನಬಸವಣ್ಣನವರ ಆಯ್ದ ವಚನಗಳುಳ್ಳ ಒಂದು ಪುಸ್ತಕವಿದೆ. ಆ ವಚನಗಳನ್ನು ಅನುಭಾವದ ನಿಜ ನಿಲುವು. ಜೀವನಕ್ಕೆ ಅನುಭಾವ ಅವಶ್ಯ, ಅನುಭಾವವಿಲ್ಲದ ಜೀವನ ವ್ಯರ್ಥ, ಕೂಡಲಚನ್ನಸಂಗಯ್ಯನ ನಿಲವು, ಪರಮಾತ್ಮ ಅನಾದಿ ಸ್ವಯಂಭು, ಜಗದುತ್ಪತ್ತಿ, ಸಂಸಾರಬಂಧನ, ಪರಶಿವನೆ ಕರುಣಿಸಲು ಗುರುವಾದನು, ವೀರಶೈವ ಗುರುವಿನ ಮಹತ್ವ, ಗುರುಮಹಿಮೆ, ಗುರುಕಾರುಣ್ಯದ ಘನತೆ, ಲಿಂಗಧಾರಣೆಯ ವಿಶೇಷತೆ,........ ಲಿಂಗದ ನಿಜವೆ ಜಂಗಮ,........ಭಕ್ತಿಯ ನಿಲವು, ಭಕ್ತಸ್ಥಲದ ಸಕೀಲ........ಶರಣನ ಸಹಜಾಚರಗಳು:

೧) ಅನ್ಯದೈವ ನಿರಾಕರಣೆ ೨) ಭವಿ-ಭಕ್ತಕುಲವೆರಡು ಮಾತ್ರ, ೩) ಲಾಂಛನ ಭಂಡುತನಹೊಲ್ಲ........ನಿರ್ದೇಹಿಯ ನಿಲವು, ಶರಣರು ಭವರಹಿತರು, ಐಕ್ಯಸ್ಥಲ,........ ಪೂರ್ವಾಶ್ರಯವ ಬೆರೆಸಲಾಗದು ಮುಂತಾದ ಶೀರ್ಷಿಕೆಗಳ ಕೆಳಗೆ ಕೊಟ್ಟಿರುವುದನ್ನು ನೋಡಿದರೆ, ನಮಗೆ ಆಶ್ಚರ್ಯವೆನಿಸುತ್ತದೆ. ಶ್ರೀಗಳವರ ತಾತ್ವಿಕ ಪ್ರಜ್ಞೆ ಇಲ್ಲಿಯೂ ಕೆಲಸ ಮಾಡಿರುವುದನ್ನು ನಾವು ಸುಲಭವಾಗಿ ಗುರುತಿಸಬಹುದು. ಇಂಥ ಅದ್ಭುತ ತಾತ್ವಿಕ ಪ್ರಜ್ಞೆಯೇ ಶ್ರೀ ಸನ್ನಿಧಿಯವರು. ತತ್ವ ಸಾಹಿತ್ಯಕ್ಕೆ ನಿಜವಾದ ಅರ್ಥದಲ್ಲಿ ಅಪೂರ್ವ ಮತ್ತು ಅಮೂಲ್ಯ ಕೊಡುಗೆಯನ್ನು ನೀಡಲು ಕಾರಣವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಅವರಿಂದ ಕನ್ನಡ ಜಿಜ್ಞಾಸುಲೋಕಕ್ಕೆ ಇನ್ನೂ ಅನೇಕ ಕೃತಿಗಳು ಸಲ್ಲುವಂತಾಗಲೆಂದು ಹಾರೈಸುವೆ. ಓದಿ ಬರೆಯುವವರೇ ಬಹಳ ಜನರಿರುವ ಇಂದಿನ ಕಾಲದಲ್ಲಿ ಅಧ್ಯಯನ-ಸಾಧನ-ಅನುಷ್ಠಾನಗಳ ನೆರವು ಪಡೆದು ಬರೆಯಲು ಶ್ರೀ ಸನ್ನಿಧಿಯವರಂತಹರಿಗೇ ಸಾಧ್ಯ.

"ವೀರಶೈವವು ತತ್ವನಿಷ್ಠವಲ್ಲದೆ
ವ್ಯಕ್ತಿನಿಷ್ಠವಲ್ಲ ನೋಡಾ!
ವ್ಯಕ್ತಿಗೆ ಅಳಿವುಂಟು ತತ್ವಹಾಳಾಗದಯ್ಯಾ
ತತ್ವಕ್ಕೆ ಬೆಲೆಯಿತ್ತರೆ, ದಳದಳವಾಗಿ ಬೆಳೆಯುವದಯ್ಯಾ
ತತ್ವನಿಷ್ಠೆಯು ವ್ಯಕ್ತಿಗಳಲಿ ಬೆಳೆಯುತ್ತಿರೆ

ತತ್ವಪುರುಷರೇ ತಾವಾಗಬಹುದಯ್ಯಾ
ವೃಡಗಿರಿ ಅನ್ನದಾನೀಶ"

ಲೇಖನಕ್ಕಾಗಿ ಬಳಸಿದ ಶ್ರೀ ಸನ್ನಿಧಿಯವರ ಗ್ರಂಥಗಳು

೧. ವೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ, ೧೯೮೧.
೨. ಮಾನವ-ಧರ್ಮ, ೧೯೮೧.
೩. ವಚನ-ಸಂಪದ, ೧೯೮೮.
೪. ಷಟ್-ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ತತ್ವಪ್ರತಿಪಾದಕ ವಚನಗಳು. ಸಂ. ೧೯೯೦.
೫. ಷಟ್-ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು, ಸಂ. ೧೯೯೧.
೬. ಜಂಗಮ ಪುಂಗವ ಶ್ರೀ ಅಲ್ಲಮಪ್ರಭುದೇವರು, ಸಂ. ೧೯೯೨.
೭. ವೈರಾಗ್ಯನಿಧಿ ಶ್ರೀ ಅಕ್ಕಮಹಾದೇವಿಯವರ ಯೋಗಾಂಗ ತ್ರಿವಿಧಿ ವ್ಯಾಖ್ಯಾನ, ೧೯೯೨.
೮. ಆರ್ಯೆದು ಭಾಗ ೨: ತತ್ವದರ್ಶನ, ೧೯೯೨.
೯. ಶಿವಯೋಗ, ೧೯೯೩.
೧೦. ಆರ್ಯೆದು-ಭಾಗ ೩: ಹನ್ನೊಂದು ವಿಮರ್ಶಾತ್ಮಕ ಚಿಂತನಗಳು, ೧೯೯೩.

ಶ್ರೀ ಜಗದ್ಗುರುಗಳು ನಿರೂಪಿಸಿದ

ಜೀವನ ಚರಿತ್ರೆ ಮತ್ತು ನಾಟಕ

—ಡಾ|| ಡಿ. ಮಂಗಳಾ ಪ್ರಿಯದರ್ಶಿನಿ, ಬೆಂಗಳೂರು

ಯಂತ್ರನಾಗರಿಕತೆ, ವೈಜ್ಞಾನಿಕತೆ, ನಗರೀಕರಣ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದ ಭಾರದಲ್ಲಿಇಂದಿನ ನಮ್ಮ ಬದುಕು ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿದೆ. 'ಧರ್ಮ' ತನ್ನ ವ್ಯಾಪ್ತಿ, ವಿಶಾಲ ನೆಲೆಯ ಪರಿಧಿಯನ್ನು ಕಳೆದುಕೊಂಡು ರಾಜಕೀಯದ ಕಪಿಮುಷ್ಟಿ ಯೊಳಗೆ ಸಿಲುಕಿ ಹೆಚ್ಚು ಸೀಮಿತವಾಗುತ್ತಿದೆ. ವಿಶಾಲ ಪರಿಧಿಯಲ್ಲಿ 'ಧರ್ಮ'ದ ಪುನರ್ ವ್ಯಾಖ್ಯಾನ, ಪುನರ್ ಪರಿಶೀಲನೆ ನಮ್ಮ ಬದುಕಿಗೆ ಬಹಳ ಅಗತ್ಯವಾಗಿದೆ. 'ಧರ್ಮ' ಮತಾಂಧರ ಕೈಗೆ ಸಿಲುಕಿ 'ಹಿಂಸೆ'ಯ ಆಯುಧವಾಗುತ್ತಿದೆ. 'ಧರ್ಮ' ಮಾನವತೆಯ 'ಸಾರ'ವಾಗಿ ಪ್ರಕಟಗೊಳ್ಳುವುದು ಇಂದು ಮುಖ್ಯವಾಗಿದೆ. ರಾಜಕೀಯ ಬಣ್ಣದಿಂದ ಹೊರತಾದ ಶುದ್ಧ ಮಾನವೀಯ ಪ್ರವೃತ್ತಿಗಳಿಗೆ ಬೆಲೆ ನೀಡುವ ಧರ್ಮ ಮನುಷ್ಯನಿಗೆ ಅಂದೂ ಬೇಕಾಗಿತ್ತು, ಇಂದೂ ಬೇಕಾಗಿದೆ. ಅಹಿಂಸೆ, ಪ್ರೀತಿ, ಸಮಭಾವ, ಕರುಣೆ–ಮುಂತಾದ ಮಾನವೀಯ ಮೌಲ್ಯಗಳಿಗೆ ಬೆಲೆ ನೀಡುವ, ಮೂಲ ಮಂತ್ರವಾಗುವ ಧರ್ಮ ನಮ್ಮೆಲ್ಲರ ಗುರಿಯಾಗಿದೆ.

ಅತಿಯಾದ ತಿಳುವಳಿಕೆ, ಅನ್ಯಜ್ಞಾನ, ಅನ್ಯವಿಷಯ, ಶಿಸ್ತು, ವೈಜ್ಞಾನಿಕತೆ–ಈ ಹಿನ್ನೆಲೆಯಲ್ಲಿ 'ಧರ್ಮ'ದ ವ್ಯಾಖ್ಯಾನ ಮೂಡಿಸುವ ಬರಹಗಳು ಆಧುನಿಕ ಓದುಗನಿಗೆ ಬೇಕಾಗಿವೆ. ಅವನ ಸಂವೇದನೆಗಳಿಗೆ ಇಂಬು ನೀಡಿ, ಅವನನ್ನು ಹೆಚ್ಚು ಸುಸಂಸ್ಕೃತ ನನ್ನಾಗಿಸುವ, ಅವನ ಅಭಿರುಚಿಯನ್ನು ಸಂಸ್ಕರಿಸುವ ಬದುಕು, ಬರಹಗಳು ಅಗತ್ಯವಾಗಿ ಬೇಕಾಗಿವೆ. ನಮ್ಮ ಚಿತ್ತ ಸ್ವಾಸ್ಥ್ಯವನ್ನು ಕಾಪಾಡುವ, ತನ್ಮೂಲಕ ಸಮಾಜದ ಆರೋಗ್ಯವನ್ನು ಕಾಪಾಡುವಲ್ಲಿ ಈ ಬದುಕು, ಬರಹಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಒಬ್ಬ ಯಶಸ್ವೀ ವ್ಯಕ್ತಿಯ ಬದುಕು ಒಂದು ಸಮಾಜದ ದೃಢತೆ, ಆರೋಗ್ಯ ವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದಲೇ ನಮ್ಮ ಚರಿತ್ರೆಯಲ್ಲಿ ಆಗಿಹೋದ, ನಮ್ಮ ನಡುವೆ ಇರುವ ಸಂತರು, ಸದ್‌ವ್ಯಕ್ತಿಗಳ ಬದುಕು, ಬರಹಗಳು, ಹಿತನುಡಿಗಳು, ಅನುಭವದ ಚಿಂತನೆಗಳು ನಮ್ಮ ಮೇಲೆ ಪ್ರೇರಣೆ ಬೀರುತ್ತವೆ. ನಮ್ಮಲ್ಲಿ ನೈತಿಕ ಮೌಲ್ಯಗಳನ್ನು ತುಂಬಿ ಹೆಚ್ಚು ಹೆಚ್ಚು ಮಾನವರಂತೆ, ಮಾನವೀಯವಾಗಿ ಬದುಕಲು ಒತ್ತಾಯಿಸುತ್ತವೆ. ಆದ್ದರಿಂದಲೇ ಸಾಹಿತ್ಯದಲ್ಲಿ ಧಾರ್ಮಿಕ ಸಾಹಿತ್ಯಕ್ಕೆ ಬಹಳ ಪ್ರಮುಖವಾದ ಸ್ಥಾನವುಂಟು. ಇವುಗಳು ಈ ದೃಷ್ಟಿಯಿಂದಲೇ ಮೌಲ್ಯಾಧಾರಿತ ಕೊಡುಗೆಗಳಾಗುತ್ತವೆ.

ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ಈ ದಿಶೆಯಲ್ಲಿ ಬಹಳ ಒಳ್ಳೆಯ ಕೃತಿಗಳನ್ನು ರಚಿಸಿದ್ದಾರೆ. ಅಷ್ಟೋತ್ತರ ಶತನಾಮಾವಳಿಯಂತಹ ಶುದ್ಧ ಧಾರ್ಮಿಕ ಬರಹಗಳಿಂದ ಹಿಡಿದು 'ಜಂಗಮ ಜ್ಯೋತಿ'ಯಂತಹ ನಾಟಕ, 'ಮಾನವ ಧರ್ಮ'ದಂತಹ ವೈಚಾರಿಕ ಪ್ರಬಂಧಗಳು, 'ಆರ್ಯೆದು' ಎಂಬ ೧೧ ಜನ ವಿಭೂತಿ ಪುರುಷರ ವ್ಯಕ್ತಿಚಿತ್ರಗಳವರೆಗೂ ಲೇಖನಿ ಸಾಗುತ್ತದೆ.

ಶ್ರೀಗಳದು ಸಂಶೋಧಕ ಪ್ರವೃತ್ತಿ. ಜೊತೆಗೆ ತಮಗೆ ತಿಳಿದ ಮಠಗಳ ಇತಿಹಾಸ, ಶರಣಗುರುಗಳ ಪರಂಪರೆಯ ಬಗೆಗೆ ತಿಳಿಸಿಕೊಡುವ ತೀವ್ರ ಆಸಕ್ತಿ ಮುಖ್ಯ ಕಾಳಜಿಯಾಗಿದೆ. ಇದೇ ದೃಷ್ಟಿಯನ್ನು ಹೊಂದಿ ರಚಿತಗೊಂಡಿರುವ ಕೃತಿಗಳು, 'ಶ್ರೀ ಶಿವಯೋಗಮಂದಿರ' ಹಾಗೂ 'ಹಾಲವರ್ತಿ ಶಿವಾನುಭವ ಚರವರ್ಯ ಲಿಂಗನಾಯಕನ ಹಳ್ಳಿ ಶ್ರೀ ಚನ್ನವೀರ ಮಹಾಶಿವಯೋಗಿಗಳು' ಎಂಬ ಗ್ರಂಥಗಳು ೧೨ನೇ ಶತಮಾನದ ಶರಣರು ಯಾವ ಪವಿತ್ರ ಕಾರ್ಯವನ್ನು ಪ್ರಾರಂಭಿಸಿದರೋ ಕಾರಣಾಂತರಗಳಿಂದ ಆ ಚಟುವಟಿಕೆಗಳು ಸ್ಥಗಿತ ಗೊಂಡಾಗ, ಪುನಃ ಅದಕ್ಕೆ ಚಾಲನೆ ನೀಡಲು ಪ್ರಾರಂಭಿಸಿದ ಶರಣರು ಕೂಡ ೧೨ನೇ ಶತಮಾನದ ಶರಣರಿಗೆ ಸಮನಾದವರೆ. ಅವರ ಉದ್ದೇಶಗಳು ಕೂಡ ಶರಣ ಪ್ರಮಥರ ಆದರ್ಶಗಳಲ್ಲಿ ನಡೆಯುವುದೇ ಆಗಿದೆ. ಈ ದಿಶೆಯಲ್ಲಿ ಬಸವಾದಿ ಪ್ರಮಥರ ಸಂದೇಶ, ಧ್ಯೇಯಗಳನ್ನು ಪಾಲಿಸಲು ಹೊರಡುವ ವ್ಯಕ್ತಿಗಳು ಕೂಡ ಇಂದಿನ ಬದುಕಿನಲ್ಲಿ ಬಹಳ ಮುಖ್ಯರಾಗುತ್ತಾರೆ. ಆಧ್ಯಾತ್ಮಿಕ ಜ್ಞಾನ, ಸಮಾಜೋದ್ಧಾರ, ಸಾಹಿತ್ಯ–ಈ ಮೂರೂ ಕ್ಷೇತ್ರಗಳಲ್ಲಿ ಸಾಧಿಸಿದ ಮಹನೀಯರುಗಳ ಸ್ಮರಣಕಾರ್ಯ ಆಗಿಂದಾಗ್ಗೆ ಉಂಟಾಗಬೇಕಾಗು ತ್ತದೆ. ಈ ದಿಶೆಯಲ್ಲಿ ಲಿಂಗನಾಯಕನಹಳ್ಳಿ ಪೂಜ್ಯರಾದ ಹಾಲವರ್ತಿ ಶಿವಾನುಭವಚರವರ್ಯ ಶ್ರೀ ಚನ್ನವೀರ ಮಹಾಶಿವಯೋಗಿಗಳು ಸಮಾಜಕ್ಕೆ ಸಲ್ಲಿಸಿರುವ ಸೇವೆ ಅನುಪಮ ವಾದುದು. ಶಿವಯೋಗಿಗಳು ಬಳ್ಳಾರಿ ಪ್ರಾಂತ್ಯದಲ್ಲಿ ಶರಣ ಸಂಸ್ಕೃತಿ, ಲಿಂಗಮಹಿಮೆಯನ್ನು ಎತ್ತಿಹಿಡಿದರು. ಇವರ ಧಾರ್ಮಿಕ, ಆಧ್ಯಾತ್ಮಿಕ ಮಾರ್ಗ ಆಧುನಿಕ ಯುಗದಲ್ಲಿ ಆದರ್ಶ ಪ್ರಾಯವಾದುದು. ಒಂದು ಹಂತದಲ್ಲಿ ಇವರು ಇಡೀ ಮಾನವಕುಲದ ಬಗ್ಗೆ ಅತೀತವಾಗಿ ಚಿಂತಿಸುತ್ತಾರೆ. ನಮ್ಮ ಭಾರತೀಯ ಸಂಸ್ಕೃತಿಯ ಹಿನ್ನೆಲೆಯೊಳಗೆ ಶರಣಸಂಸ್ಕೃತಿ ಪ್ರಕಟಗೊಂಡಿರುವ ಸ್ವರೂಪವನ್ನು ಗುರುತಿಸುವ ಪ್ರಯತ್ನವೊಂದು ಈ ಕೃತಿಯ ಸಂದರ್ಭದಲ್ಲಿ ಮೂಡಿಬಂದಿದೆ. ಶಿವಯೋಗಿಗಳ ಸಾಧನೆಯಲ್ಲಿ ಮುಖ್ಯವಾಗಿ ಚರ್ಚಿಸ ಬೇಕಾದ ವಿಚಾರವೆಂದರೆ ಅವರ ಶಿಷ್ಯ ಪರಂಪರೆ ಎಂಥ ಗುರುವೋ, ಅಂಥ ಶಿಷ್ಯ. ಸತ್ವಶೀಲನಾದ ಗುರುವಿಗೆ ಸತ್ವಶೀಲನಾದ ಶಿಷ್ಯ ದೊರೆಯುತ್ತಾನೆ. ರಾಮಕೃಷ್ಣ ಪರಮಹಂಸ ರಂತಹ ಘನಗುರುವಿಗೆ ವಿವೇಕಾನಂದರಂತಹ ಘನಶಿಷ್ಯ. ಈ ಹಂತದಲ್ಲಿ ಶಿವಯೋಗಿಗಳು ಪಡೆದ ಶಿಷ್ಯ ಸಂಪತ್ತು ಆಶ್ಚರ್ಯಪಡುವಂತಹದು. ಮೈಲಾರಲಿಂಗ ಬಸವಲಿಂಗಶರಣರು, ಬಾಲಲೀಲಾ ಮಹಾಂತರು, ಮೈಲಾರದ ಚೆನ್ನಪ್ಪನವರು, ಚಿಕ್ಕಬೂರ ಲಿಂಗಪ್ಪನವರು—

ಇಂತಹ ಶಿಷ್ಯರು ಕೈಗೊಂಡ ಸಮಾಜಕಾರ್ಯ, ಸಂಸ್ಕೃತಿಯನ್ನು ಕಾಪಾಡುವಲ್ಲಿ ವಹಿಸಿದ ಪಾತ್ರಗಳನ್ನು ಗುರುತಿಸುವಲ್ಲಿ ಕೃತಿಕಾರರು ಯಶಸ್ವಿಯಾಗುತ್ತಾರೆ.

ಈ ಗ್ರಂಥ ಬರೆಯುತ್ತಿರುವ ಉದ್ದೇಶವನ್ನು ಕೂಡ ಶ್ರೀಗಳು ಪ್ರಸ್ತಾಪಿಸುತ್ತಾರೆ. "ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಸಿಲುಕಿ ಸಮಾಜದ ಪ್ರಾದೇಶಿಕ ಸಂಸ್ಕೃತಿಗಳು ಅವಶೇಷವಾಗುತ್ತಿರುವ ಸಂದರ್ಭದಲ್ಲಿ ಸಂಸ್ಕೃತಿ ರಕ್ಷಣೆಯ ಕಾರ್ಯವನ್ನು ಮಾಡ ಬೇಕಾದುದು ಕೂಡ ಪ್ರಜ್ಞಾವಂತರ ಕರ್ತವ್ಯವಾಗಿರುತ್ತದೆ. ಈ ದಿಶೆಯಲ್ಲಿ ನಮ್ಮಲ್ಲಿ ಆಗಿಹೋದ ಮಹನೀಯರುಗಳ ಬದುಕು, ಬರಹಗಳಿಂದ ಸ್ಫೂರ್ತಿ ಪಡೆಯುವುದು ಸಾಧ್ಯ" ಎಂಬುದು.

"ಸಾಹಿತಿಗಳಲ್ಲದ, ಕವಿಗಳಲ್ಲದ ಶರಣರು, ಮಹಾತ್ಮರು, ಶಿವಯೋಗಿಗಳು ಅಜ್ಞಾತವಾಸದಲ್ಲಿ ಮುಳುಗಿಹೋಗಿದ್ದಾರೆಂಬುದನ್ನು ಗುರುತಿಸುತ್ತಾರೆ. ಚನ್ನವೀರ ಶಿವಯೋಗಿಗಳ ಹೆಸರು ಅಷ್ಟೊಂದು ಪ್ರಕಾಶಕ್ಕೆ, ಗಮನಕ್ಕೆ ಬಾರದಿರುವುದಕ್ಕೆ ಇದು ಕೂಡ ಮುಖ್ಯ ಕಾರಣವಾಗಿದೆ" ಎನ್ನುತ್ತಾರೆ.

ಒಬ್ಬಗುರು ಜಗತ್ತಿನಲ್ಲಿ ತಾನು ನಡೆದುಕೊಳ್ಳುವ ಮಾರ್ಗ, ಅನುಸರಿಸುವ ಬದುಕು- ಇವುಗಳಿಗನುಗುಣವಾಗಿ ಜನಮನದಲ್ಲಿ ಉಳಿಯುತ್ತಾನೆ. ಇಂಥ ಗುರುವಿನ ಸಂದೇಶ, ದಿವ್ಯಮಂತ್ರಗಳನ್ನು ಸಮಾಜಕ್ಕೆ ತಲುಪಿಸುವಲ್ಲಿ ಶಿಷ್ಯರು ಕೂಡ ಮುಖ್ಯ ಪಾತ್ರ ವಹಿಸು ತ್ತಾರೆ. ಶ್ರೀ ಚನ್ನವೀರ ಶಿವಯೋಗಿಗಳು ಜನಮನದಲ್ಲಿ ಉಳಿಯಲು ಬಸವಲಿಂಗಶರಣರ ಕೃತಿಗಳು ವಹಿಸಿದ ಪಾತ್ರ ಕೂಡ ಅಷ್ಟೇ ಮಹತ್ವದ್ದು. ಹಾಗೆ ಶ್ರೀಗಳು ಬಾಲಲೀಲಾ ಮಹಂತರಂತಹ ಶರಣರ ಜೀವನದ ಪ್ರಸಂಗಗಳನ್ನು ದಾಖಲು ಮಾಡುತ್ತಾರೆ. ಅಂತೆಯೇ ಬನ್ನಿಮಟ್ಟಿ ಚನ್ನಪ್ಪನವರು, 'ಜ್ಯೋತಿಯವರು' ಎಂದೇ ಪ್ರಸಿದ್ಧರಾದ ಕೃಷಿ ಕಾಯಕದ ಹೊಳಲಿನ ಲಿಂಗಪ್ಪನವರ ಬದುಕೂ ಆಶ್ಚರ್ಯಗೊಳಿಸುವಂಥದ್ದೇ. ಲಿಂಗಸಂಸ್ಕಾರ ಹೊಂದದ ಯಾವ ಧಾನ್ಯವನ್ನೂ ತಿನ್ನುತ್ತಿರಲಿಲ್ಲ. ತಾವು ಉಪಯೋಗಿಸುವ ಮಡಕೆ, ಕುಡಿಕೆಗಳ ಮೇಲೂ ಲಿಂಗಧಾರಣೆ ಮಾಡುತ್ತಿದ್ದ ಜ್ಯೋತಿಯವರು, ಎಲ್ಲರಿಗೂ ಎಣ್ಣೆ ನೀಡಿ ದೀಪಹಚ್ಚಲು ಕಾರಣರಾಗಿದ್ದರು. ಮನೆಯನ್ನಷ್ಟೇ ಬೆಳಗದೆ, ಜ್ಯೋತಿಯವರು ಮನಗಳನ್ನೂ ಬೆಳಗಿದರು. ಇವರು ತಮ್ಮ ೧೦೪ನೇ ವಯಸ್ಸಿನಲ್ಲಿ ಸೋಮವಾರ, ಮಧ್ಯಾಹ್ನ ಶಿವನ ಪ್ರಾರ್ಥನೆಯಲ್ಲಿದ್ದಾಗಲೇ ತೀರಿಕೊಂಡದ್ದು ಒಂದು ರೀತಿಯ ಅದ್ಭುತ. ಇಂಥ ಮಹಿಮಾನ್ವಿತರ ಬದುಕಿನ ಚಿತ್ರಣವನ್ನು ನಮಗೆ 'ಶ್ರೀ ಚನ್ನವೀರ ಮಹಾಶಿವಯೋಗಿಗಳು' ಕೃತಿ ಪರಿಚಯಿಸುತ್ತದೆ.

ಕ್ರಿ. ಶ. ೧೯೦೯ರಲ್ಲಿ ಪೂಜ್ಯ ಹಾನಗಲ್ಲ ಶ್ರೀ ಕುಮಾರ ಮಹಾಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟ 'ಶಿವಯೋಗಮಂದಿರ'ವು ವೀರಶೈವ ಧರ್ಮದ ಇತಿಹಾಸದಲ್ಲಿ ಅನೇಕ ದೃಷ್ಟಿಗಳಿಂದ ಬಹಳ ವಿಶಿಷ್ಟ ಕಾರ್ಯಗಳಿಗಾಗಿ ಗುರುತಿಸಬೇಕಾದ ಶಿವಮಠೀಯ ಸಂಸ್ಥೆ. ಇದು ಮಠೀಯ ಆಶಯಗಳನ್ನು ಮೀರಿ ತತ್ತ್ವಜ್ಞಾನ, ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಆಗರವಾಯಿತು.

ಹಾನಗಲ್ಲ ಶ್ರೀ ಕುಮಾರ ಮಹಾಸ್ವಾಮಿಗಳು ಸಮಾಜೋದ್ಧಾರದ ಕನಸನ್ನು ಕಣ್ಣಿನ ತುಂಬ ಹೊತ್ತವರು. ಇವರು ಧರ್ಮಜಾಗೃತಿಗಾಗಿ, ಸಂಸ್ಕೃತಿ ಪ್ರಸಾರಕ್ಕಾಗಿ ಪಾಠಶಾಲೆಯನ್ನು ಸ್ಥಾಪಿಸಿದರು. ಹಳ್ಳಿ ಹಳ್ಳಿಗೂ ಸಂಚರಿಸಿ ಚರಜಂಗಮರಾಗಿ ಧರ್ಮಬೋಧೆಯನ್ನು ಮಾಡಿದರು. ಹಳ್ಳಿ ಹಳ್ಳಿಗೆ ತೆರಳುವ ಮೂಲಕ ಹಳ್ಳಿಗರ ಅಜ್ಞಾನವನ್ನು ಮನಗಂಡು ಅವರಿಗೆ ಜ್ಞಾನಬೋಧನೆಯನ್ನು ಮಾಡಿದರು. ಅಲ್ಲಿರುವ ಬಡತನ, ನೈರಾಶ್ಯ, ದಾರಿದ್ರ್ಯ, ಅನಾರೋಗ್ಯ, ಅನಕ್ಷರತೆಯನ್ನು ಕಂಡು ಮಮ್ಮಲ ಮರುಗಿದರು. ಅದಕ್ಕಾಗಿಯೇ ಅವರು ಹೋದಲ್ಲೆಲ್ಲ ಪಾಠಶಾಲೆ ತೆರೆಯುವ ಮೂಲಕ, ರೋಗಿಗಳಿಗೆ ಔಷಧೋಪಚಾರ ಮಾಡುವುದರ ಮೂಲಕ ಸಮಾಜಸೇವೆಯನ್ನು ಸಲ್ಲಿಸಿದರು.

ಶ್ರೀ ಕುಮಾರ ಮಹಾಸ್ವಾಮಿಗಳ ಅತಿದೊಡ್ಡ ಸಾಧನೆಯೆಂದರೆ, ಇವರು ಕೈಗೊಂಡ ಅಖಿಲಭಾರತ ವೀರಶೈವ ಮಹಾಸಭೆಯ ಸ್ಥಾಪನೆ, ಇದರ ಮೂಲಕ ದೇಶಾದ್ಯಂತ ಮುಂಬೈ, ಮದ್ರಾಸು, ಹೈದರಾಬಾದು, ಮೈಸೂರ ರಾಜ್ಯಗಳಲ್ಲಿ ದಿಕ್ಕಾಪಾಲಾಗಿ ಚದುರಿ ಹೋಗಿರುವ ವೀರಶೈವರನ್ನು ವೀರಶೈವ ಮಹಾಸಭೆಯನ್ನು ನಿರ್ಮಾಣ ಮಾಡುವ ಮೂಲಕ ಒಂದು ಕಡೆ ಸಂಘಟಿಸಿದರು. ಇದಲ್ಲದೆ ಗುರುಲಿಂಗ ಜಂಗಮ ನಿಷ್ಠೆ ಕಳೆದು ಕೊಂಡ ವೀರಶೈವರಿಗಾಗಿ ಕಣ್ಣೀರು ಸುರಿಸಿದರು. ಧಾರವಾಡದಲ್ಲಿ ನಡೆದ ಅಖಿಲಭಾರತ ವೀರಶೈವ ಸಭೆಯಲ್ಲಿ ಪ್ರಸ್ತಾಪಿಸಿದ ಅಂಶಗಳು ಬಹಳ ಸ್ವಾರಸ್ಯವಾಗಿದೆ. 'ವೀರಶೈವ ಧರ್ಮ'ದ ನೆಪದಲ್ಲಿ ಪರಮತಗಳು ಕೀಳು ಎಂದು ಭಾವಿಸುವುದು ತಪ್ಪು, ಪರಮತ ಸಹಿಷ್ಣುತೆಯೊಂದಿಗೆ ಸ್ವಮತಾಭಿವೃದ್ಧಿ ಮಾಡುವ ಮನೋಭಾವದ ಬಗೆಗೆ ಕರೆನೀಡಿದರು.

ಹಳ್ಳಿಗಳಲ್ಲಿರುವ ಕುಶಲ ಕರ್ಮಿಗಳ ಕಲಾಕೌಶಲ್ಯಗಳನ್ನು ಪ್ರೋತ್ಸಾಹಿಸುವುದರ ಮೂಲಕ ಕಲೆಯನ್ನು ಕಾಪಾಡುವುದಷ್ಟೇ ಅಲ್ಲದೆ, ಸಮಾಜದ ಆರ್ಥಿಕ ಪ್ರಗತಿಯನ್ನು ಸಾಧಿಸುವುದು, ಲಿಂಗಾಯತ ಸಮಾಜದಲ್ಲಿನ ಒಳಜಗಳಗಳನ್ನು ಹೋಗಲಾಡಿಸಿ, ಅವರಲ್ಲಿ ಒಂದು ಸಂಘಟನೆಯನ್ನು ತಂದು, ಶರಣರಲ್ಲಿ ಆತ್ಮವಿಶ್ವಾಸ, ಒಗ್ಗಟ್ಟನ್ನು ಉಂಟು ಮಾಡುವುದು. ಈ ಸಭೆಯಾದ ಕೆಲವೇ ದಿನಗಳಲ್ಲಿ ಈ ಠರಾವು ನಿಜಜೀವನದಲ್ಲಿ ಕಾರ್ಯರೂಪಕ್ಕಿಳಿದುದನ್ನು ಕಾಣುತ್ತೇವೆ. ಸ್ವಾತಂತ್ರ್ಯಪೂರ್ವದ ಜೈಲಿನಲ್ಲಿರುವ ಖೈದಿಗಳೂ ಸಹ ತಮ್ಮ ಇಷ್ಟಲಿಂಗ ಧಾರಣೆಯನ್ನು ಮಾಡಬಹುದು ಎಂಬುವಷ್ಟರ ಮಟ್ಟಿಗೆ ಈ ಮೂಲಕ ಇಷ್ಟಲಿಂಗಧಾರಣೆ, ಧರ್ಮದ ಸಾಮಾಜಿಕ ಮಹತ್ವದ ಬಗೆಗೆ ಲೇಖಕರು ಪ್ರಸ್ತಾಪಿಸುತ್ತಾರೆ.

ಶಿವಯೋಗ ಮಂದಿರವನ್ನು ನಿರ್ಮಿಸಲು ಬೇಕಾದ ಸ್ಥಳದ ಆಯ್ಕೆಯನ್ನು ಕುರಿತು ನಡೆದ ಪವಾಡವನ್ನು ಬಹಳ ಮನಮುಟ್ಟುವಂತೆ ವರ್ಣಿಸಲಾಗಿದೆ. ಶಿವಯೋಗಮಂದಿರದ ಸಾಧನೆಗಳನ್ನು ಕುರಿತು ವಿವರಿಸುತ್ತಾ ಸಮಾಜ ಸಂಘಟನೆಯ ಮೂಲಕ ವೀರಶೈವ ಮಹಾಸಭೆ, ಸಮಾಜದ ತತ್ತ್ವಗಳ ಮತ್ತು ಸಮಸ್ಯೆಗಳ ಬಗೆಗೆ ನಿರ್ಣಯಗಳನ್ನು ಕೈಗೊಳ್ಳುವ ಸಿದ್ಧಾಂತ ಕೇಂದ್ರವಾಗಬೇಕು, ಸಿದ್ಧಾಂತಗಳು ಪ್ರಚಾರಗೊಳ್ಳುವ ಹಾಗೂ

ಪ್ರಯೋಗಗೊಳ್ಳುವ ಪ್ರಯೋಗ ಶಾಲೆಯಾಗಿ ಶಿವಯೋಗಮಂದಿರ ದುಡಿಯಬೇಕು ಎನ್ನುತ್ತಾರೆ.

'ಶಿವಯೋಗ ಮಂದಿರ'ವನ್ನು ಮುಖ್ಯವಾಗಿ ಪ್ರವಾಸಿಗರಿಗೆ ಪರಿಚಯ ಮಾಡಿ ಕೊಡುವ ಮಾರ್ಗದರ್ಶಿಯ ಕೆಲಸವನ್ನು ಶ್ರೀಗಳು ಮಾಡುತ್ತಾರೆ. ಬಹಳ ವಿವರಣಾತ್ಮಕ ವಾಗಿ ಅಲ್ಲಿಯ ಜ್ಞಾನದೇಗುಲವಾದ ಕಲ್ಮಠ, ವಿಜಯ ಮಹಾಂತೇಶ್ವರ ಗ್ರಂಥಾಲಯ, ವಾಚನಾಲಯ, ಮುದ್ರಣಾಲಯ, ಹೊಸಮಠ, ಇಮಾರತಿ, ಹಳಗನ್ನಡ ಶಾಲೆ, ಲತಾಮಂಟಪ–ಇವುಗಳ ಬಗೆಗೆ ಸಾಕಷ್ಟು ಮಾಹಿತಿ ನೀಡುತ್ತಾರೆ. ಇವುಗಳನ್ನು ಯಾವ ಉದ್ದೇಶಕ್ಕಾಗಿ, ಯಾರು, ಎಷ್ಟು ಖರ್ಚು ಮಾಡಿ ಸ್ಥಾಪಿಸಿದರು–ಇತ್ಯಾದಿ ಗ್ರಂಥಾಲಯ ದಲ್ಲಿ ಯಾವ ಭಾಷೆಯ, ಎಷ್ಟು ಗ್ರಂಥಗಳಿವೆ ಎಂಬುದರ ಅಂಕಿ–ಅಂಶಗಳನ್ನೂ ಕೂಡ ನೀಡುತ್ತಾರೆ. ಇದಲ್ಲದೆ ಶ್ರೀಕುಮಾರ ಮಹಾಶಿವಯೋಗಿಗಳ ಅನುಭಾವ ಗೀತಗಳ ಪರಿಚಯ ಹಾಗೂ ವಿಮರ್ಶೆ ಕೂಡ ನಡೆಯುತ್ತದೆ. ಶ್ರೀಕುಮಾರ ಮಹಾಶಿವಯೋಗಿಗಳ ಸಂಗೀತಾಸಕ್ತಿಯ ಬಗೆಗೆ ಪರಿಚಯ ಮಾಡಿಕೊಡುತ್ತಾ ಹುಟ್ಟುಗುರುಡ ಪಂಚಾಕ್ಷರಿ ಗವಾಯಿಗಳನ್ನು ಸಂಗೀತ ಜಗತ್ತಿಗೆ ಸೆಳೆದು ತಂದ ಮಹಾನುಭಾವರಾಗಿದ್ದಾರೆ ಎನ್ನುತ್ತಾರೆ. ಶಿವಯೋಗ ಮಂದಿರದ ವಿವಿಧ ಶಾಖೆಗಳು, ಅತಿಥಿಗೃಹ, ಅಲ್ಲಿಯ ದಾಸೋಹ ಕ್ರಮ, ಗೋಶಾಲೆ, ಸಂಸ್ಕೃತ ವಿದ್ಯಾಪೀಠ, ಪ್ರಾಚ್ಯವಿದ್ಯಾ ಪ್ರಸಾರಕ ಸಮಿತಿ–ಮುಂತಾದ ಸಂಸ್ಥೆಗಳ ಬಗೆಗೂ ವಿವರಣಾತ್ಮಕ ಪರಿಚಯವಿದೆ.

'ಶಿವಯೋಗ ಮಂದಿರ'ಕ್ಕೆ ಆಗಮಿಸುವ ಯಾತ್ರಾರ್ಥಿಗಳಿಗೆ ಆ ಸಂಸ್ಥೆಯ ಸ್ಥಾಪನೆ, ಉದ್ದೇಶ, ಅದರ ಸಾಧನೆಗಳು, ಅದಕ್ಕಾಗಿ ದುಡಿದ ಮಹನೀಯರು–ಹೀಗೆ ಇದೊಂದು ಉತ್ತಮ ಕೈಪಿಡಿ ಗ್ರಂಥವಾಗಿದೆ. ಬೃಹದುದ್ದೇಶದಿಂದ ಸ್ಥಾಪಿತಗೊಳ್ಳುವ ಸಂಸ್ಥೆಗಳ ಬಗೆಗೆ ಇಂಥ ಗ್ರಂಥಗಳು ಬಂದರೆ, ಮುಂದಿನ ಜನಾಂಗಕ್ಕೆ ಸಾಂಸ್ಕೃತಿಕವಾಗಿ ಬಹಳಷ್ಟು ಅನುಕೂಲವಾಗುತ್ತದೆ.

'ಆರೈದು' ಹನ್ನೊಂದು ಜನ ವಿಭೂತಿ ಪುರುಷರ ಬದುಕು, ಸಾಧನೆಗಳನ್ನು ಪರಿಚಯ ಮಾಡಿಕೊಡುವ ಗ್ರಂಥ ಅದಕ್ಕೆ ಹೆಸರಿಡುವುದಕ್ಕೆ ಸ್ಫೂರ್ತಿ ನೀಡಿದ ವಚನ ವೊಂದನ್ನು ಉದ್ಧರಿಸಿ, 'ಆರಯ್' ಎಂಬ ಪದಕ್ಕಿರುವ ನಿಷ್ಪತ್ತಿ, ಅದರ ವ್ಯಾಪ್ತಿಯನ್ನು ಕುರಿತು ಹೇಳುತ್ತಾ, ತಮ್ಮ ಉದ್ದೇಶವನ್ನು 'ಶ್ರೀವಾಣಿ'ಯ ಪ್ರಾರಂಭದಲ್ಲಿಯೇ ಹೇಳುತ್ತಾರೆ. ಇಲ್ಲಿ ಬರುವ ವಿಭೂತಿ ಪುರುಷರು, ಈ ಶತಮಾನದ ವಚನ ಸಾಹಿತ್ಯ, ವೀರಶೈವಧರ್ಮ, ಸಂಸ್ಕೃತಿಗೆ ಮಹತ್ವದ ಕೊಡುಗೆಯನ್ನು ನೀಡಿದ ಮಹನೀಯರು, ಶ್ರೀಗಳಿಗೆ ತಮ್ಮ ಸಮಕಾಲೀನರ ಬಗ್ಗೆ ಬರೆಯುವಾಗ ವಿಚಾರಗಳ ಸ್ಪಷ್ಟತೆ, ಮಾಹಿತಿಗಳ ಖಾಚಿತ್ಯತೆ ಇದ್ದಂತೆ, ತಮ್ಮ ನಡುವಿನ ವ್ಯಕ್ತಿಗಳ ಬಗ್ಗೆ ವಿಮರ್ಶಾತ್ಮಕವಾಗಿ ಮಾತ ನಾಡುವ ದಿಟ್ಟತನ ಕೂಡ ಇದೆ. ಇಲ್ಲಿ ಬರುವ ಹನ್ನೊಂದು ವ್ಯಕ್ತಿಗಳಿಗೆ ಅವರ ಬದುಕಿನ ಪ್ರಮುಖ ಧೋರಣೆ ಅಥವಾ ಗುರಿಯನ್ನು ಗಮನಿಸಿ ವಿಶೇಷಣಗಳನ್ನು ಹಚ್ಚಲಾಗಿದೆ

ಉದಾ ಶ್ರೀಕುಮಾರ ಮಹಾಶಿವಯೋಗಿಗಳು 'ಕಾರಣಿಕ ಯೋಗಿ' ಪುರುಷರಾಗಿದ್ದಾರೆ, ಗದಗದ ಪಂಚಾಕ್ಷರೀ ಗವಾಯಿಗಳು 'ಪರಮನಾದಯೋಗಿ'ಯಾಗಿದ್ದಾರೆ, ಅಥಣಿಯ ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳು 'ಜಂಗಮ ಜ್ಯೋತಿ' ಯಾಗಿದ್ದಾರೆ, ಗುಳೇದಗುಡ್ಡದ ಶ್ರೀ ನೀಲಕಂಠ ಮಹಾಸ್ವಾಮಿಗಳು 'ಆನಂದ ಮೂರ್ತಿ'ಗಳಾಗಿದ್ದಾರೆ, ಶ್ರೀ ಜ. ಚ. ನಿ.ಯವರು 'ಕಾರಣಿಕ ಕುಮಾರ ಯೋಗಿಯ ಕುಮಾರ, ಸಾಹಿತ್ಯಯೋಗಿ' ಯಾಗಿದ್ದಾರೆ.

'ಮಹಾತ್ಮರಂ ನೆನೆವುದೆ ಘನಮುಕ್ತಿ ಪದಂ'-ಎಂಬುದೇ ಈ ಬರವಣಿಗೆಯ ಹಿಂದಿರುವ ಮುಖ್ಯ ಉದ್ದೇಶ. ಈ ಗ್ರಂಥವನ್ನು ಅರ್ಪಿಸಲಾಗಿರುವ ಹಾನಗಲ್ಲ ಶ್ರೀ ಕುಮಾರ ಮಹಾಶಿವಯೋಗಿಗಳ ಬಾಲ್ಯ ಹಾಗೂ ಶಿಕ್ಷಣ, ಸಿದ್ಧಾರೂಢ ಶ್ರೀಗಳಲ್ಲಿ ವಿದ್ಯಾಭ್ಯಾಸ, ತಮ್ಮಲ್ಲಿ ಶಿಷ್ಯವೃತ್ತಿ ಕೈಗೊಂಡಶಿಷ್ಯರ ಉದ್ಧಾರ, ಶಿವಯೋಗಮಂದಿರದ ಸ್ಥಾಪನೆ-ಹೀಗ 'ಶ್ರೀ ಶಿವಯೋಗಮಂದಿರ', 'ಶ್ರೀ ಚನ್ನವೀರ ಮಹಾಶಿವಯೋಗಿಗಳು' ಗ್ರಂಥವನ್ನು ಓದಿದರೆ ಇದು ಪುನರಾವರ್ತನೆ ಎನ್ನಿಸಿದರೂ, ೩೩ ಪುಟಗಳಲ್ಲಿ ಸಂಕ್ಷಿಪ್ತವಾಗಿ ತಿಳಿದುಕೊಳ್ಳಲು ಬಹಳ ಅನುಕೂಲವಾದ ಲೇಖನ. 'ಜಂಗಮ ಜ್ಯೋತಿ'ಯಾಗಿ ಕಾಣಿಸಿಕೊಂಡಿದ್ದಾರೆ, ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳು.

ಇವರು ತಮಗೆ ಒದಗಿ ಬಂದ ದೊಡ್ಡ ಮಠಗಳ ಅಧಿಕಾರ ಪಟ್ಟವನ್ನು ನಿರಾಕರಿಸಿದರು. ಇವರು ಮುಖ್ಯವಾಗಿ ಮಕ್ಕಳ ಕಲ್ಯಾಣ, ಬಡವರ ಉದ್ಧಾರ, ಶಿಕ್ಷಣ-ಇವುಗಳ ಕಡೆಗೆ ನಿರಂತರವಾಗಿ ದುಡಿದ ಮಹನೀಯರು, ಪರಮನಾದಯೋಗಿ ಪಂಚಾಕ್ಷರ ಗವಾಯಿಗಳ 'ನಾದಯೋಗ' ಅತ್ಯಂತ ಹೃದಯಂಗಮವಾದ ಲೇಖನವಾಗಿದೆ. ಗವಾಯಿಗಳ ಬದುಕೇ ಅಂಥ ಮಿಡಿತ ಹೊಂದಿರುವಂಥದ್ದು. ಸಂಗೀತ ಪ್ರಪಂಚಕ್ಕೆ ವೀರಶೈವರ ಕೊಡುಗೆಯನ್ನು ಕುರಿತು ಹೇಳುತ್ತಾ, ಅಂಧಗಾಯಕನ ಸಾಧನೆ, ಸಿದ್ಧಿಗಳ ಪರಿಚಯ ಮಾಡಿಕೊಡುತ್ತಾರೆ. ಶ್ರೀಕುಮಾರ ಮಹಾಸ್ವಾಮಿಗಳ ಕೃಪಾದೃಷ್ಟಿ ಅಂಧಬಾಲಕ ಗದಿಗಯ್ಯನ ಮೇಲೆ ಬಿದ್ದದ್ದು, ಅವರು ಈ ಬಾಲಕನಿಗೆ ಹಿಂದೂಸ್ಥಾನಿ, ದಾಕ್ಷಿಣಾತ್ಯ ಎರಡೂ ಶೈಲಿಗಳ ಸಂಗೀತ-ಕಲಿಸಿದ್ದು, ಅದಕ್ಕಾಗಿ ಸ್ವಾಮಿಗಳು ಆ ಕಾಲದಲ್ಲಿ ೧೨,೦೦೦ರೂ. ಖರ್ಚು ಮಾಡಿದ್ದು ಈ ಎಲ್ಲ ವಿವರಣೆಗಳನ್ನೂ ನೀಡುತ್ತಾರೆ. ಗವಾಯಿಗಳ ಮುಖ್ಯ ಸಂಗೀತ ಕಾರ್ಯಕ್ರಮಗಳು, ನಂತರ ಅವರೇ ಸಾವಿರಾರು ಮಕ್ಕಳಿಗೆ ಜಾತಿ, ಭೇದವಿಲ್ಲದೆ ಸಂಗೀತದಾನ ಮಾಡಿದ್ದು-ಇವುಗಳನ್ನು ಪರಿಚಯಿಸುತ್ತಾರೆ. ಸಾವಿರಾರು ಅಂಧ ಮಕ್ಕಳಿಗೆ ಸಂಗೀತ ಕಲಿಸಿ ಆತ್ಮಾನಂದ ಪಡೆದ ಶಿವಯೋಗಿ, ನಾದಯೋಗಿ-ಎನ್ನುವ ಭಾವುಕತೆ ಲೇಖನದ ತುಂಬ ಹರಿಯುತ್ತದೆ.

ಸಮಕಾಲೀನ ವೀರಶೈವ ಸಾಹಿತ್ಯದಲ್ಲಿ ಈ ಇಳಿವಯಸ್ಸಿನಲ್ಲೂ ಧರ್ಮ ಶ್ರದ್ಧೆ, ಜ್ಞಾನದ ಆಸಕ್ತಿ, ಸಂಶೋಧಕ ಕುತೂಹಲಗಳಿಂದ ಕೆಲಸ ಮಾಡುತ್ತಾ, ನೂರಾರು ಕೃತಿಗಳನ್ನು ರಚಿಸಿ ಧಾರ್ಮಿಕ, ಸಾಮಾಜಿಕ ಸೇವೆ ಸಲ್ಲಿಸುತ್ತಿರುವವರು ಡಾ. ಜ. ಚ. ನಿ.

ಅವರು ನಿಡುಮಾಮಿಡಿ ಸಂಸ್ಥಾನದಲ್ಲಿ ಸಾಹಿತ್ಯ ಹಾಗೂ 'ಕಾಯಕ' ಎರಡನ್ನೂ ಕೈಗೊಂಡಿದ್ದಾರೆ. ಮುಖ್ಯವಾಗಿ ಜ. ಚ. ನಿ.ಯವರು ಸಂಶೋಧನೆಯಲ್ಲಿ ಆಸಕ್ತಿ ತಳೆದಿದ್ದಾರೆ. ಹಲವು ಹೊಸ ವಿಚಾರಗಳ ಬಗೆಗೆ ಬೆಳಕು ಚೆಲ್ಲುವ ಅವರ ಬರಹಗಳು ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದಲ್ಲಿ ಬಹಳ ಮುಖ್ಯವಾದುದು.

ಹೀಗೆ, 'ಆರೈದು' ಗ್ರಂಥ ಸಮಕಾಲೀನ ಶರಣ ಗುರುಗಳ ಸಾಧನೆ, ಸಿದ್ಧಿಗಳನ್ನು ತಿಳಿಸುವ ಬಹಳ ಉತ್ತಮ ಆಕರ ಗ್ರಂಥವಾಗಿದೆ. ನಮ್ಮ ನಡುವೆ ಕನ್ನಡ ನಾಡಿನಾದ್ಯಂತ ಹರಿದು ಹಂಚಿಹೋಗಿರುವ ಧಾರ್ಮಿಕ ಗುರುಗಳನ್ನು ಪರಿಚಯಿಸುವ ಈ ಗ್ರಂಥ ನಿಜಕ್ಕೂ ಪ್ರಯೋಜನಕಾರಿಯಾಗಿದೆ.

೧೨ನೇ ಶತಮಾನದ ಬಸವಣ್ಣನವರ ವಚನ ಕ್ರಾಂತಿಯ ಮೂಲ ಬೇರುಗಳನ್ನು ಹಿಡಿದು ಹೋರಾಟ ಮಾಡಿದ ಮಹಾನ್ ಶರಣ ಚನ್ನಬಸವಣ್ಣನವರಿಂದ ಆಶೀರ್ವಾದ ಪಡೆದ ಮೃಡಗಿರಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸ್ವಾಮಿಗಳನ್ನು ಕುರಿತ ವ್ಯಕ್ತಿ ಚರಿತ್ರೆ, 'ಚಿನ್ಮಯ ಚೇತನ.' ಅದೇ ವಸ್ತುವನ್ನಿಟ್ಟುಕೊಂಡ ದೃಶ್ಯರೂಪಕ 'ಜಂಗಮ ಜ್ಯೋತಿ,' 'ಚಿನ್ಮಯ ಚೇತನ' ಮೃಡಗಿರಿಯ ಶ್ರೀ ಮಠದ ಚರಿತ್ರೆಯನ್ನು ಗದ್ಯದಲ್ಲಿ ಹೇಳುತ್ತದೆ. ಆದರೆ ಶೈಲಿ ಕಾವ್ಯಾತ್ಮಕವಾಗಿ ಸಾಗುತ್ತದೆ. ಸ್ವಾಮಿಗಳ ಗುಣ, ಸ್ವಭಾವ, ಅವರು ಬದುಕಿದ ರೀತಿಯನ್ನು ಪರಿಚಯ ಮಾಡಿಕೊಡಲೆಂದೇ ವಚನಕಾರರ ವಚನಗಳು, ಹಿಂದೆ ಆಗಿ ಹೋದ ಶರಣ ಕಾವ್ಯಗಳನ್ನೂ ಬಳಸಿಕೊಳ್ಳುತ್ತಾರೆ. ಅನ್ನದಾನೀಶ್ವರರ ತಾತ್ತ್ವಿಕ ಹಾಗೂ ಆಧ್ಯಾತ್ಮಿಕ ಚಿಂತನೆಗಳು, ಅವರು ಅನೇಕ ವ್ಯಕ್ತಿಗಳ ಬದುಕಿನಲ್ಲಿ ವಹಿಸಿದ ಮುಖ್ಯಪಾತ್ರ, ಅವರ ಶಿಷ್ಯರು ಅವರನ್ನು ನಡೆಸಿಕೊಂಡ ರೀತಿ–ಇವುಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಒಟ್ಟಾರೆಯಾಗಿ ಈ ಕೃತಿಯನ್ನು ಓದಿ ಮುಗಿಸಿದ ಓದುಗನೊಬ್ಬನಿಗೆ ಮಾನವತಾ ಕ್ರಾಂತಿಗೆ ಕಹಳೆಯೂದುತ್ತಿರುವ ಪರಿಪೂರ್ಣ ಜಂಗಮರೊಬ್ಬರು ಆತ್ಮೀಯರಾಗುತ್ತಾರೆ.

ಎಲ್ಲಕ್ಕಿಂತ ಭಿನ್ನ ನೆಲೆಯಲ್ಲಿ ನಿಲ್ಲುವ ಕೃತಿ 'ಜಂಗಮ ಜ್ಯೋತಿ,' ಇದು ಕೂಡ 'ಚಿನ್ಮಯ ಚೇತನ'ದ ವಸ್ತುವನ್ನೇ ಹೇಳಿದರೂ, ಅದನ್ನು ನಿರ್ವಹಿಸುವ ಕ್ರಮದಲ್ಲಿ ಉಳಿದೆಲ್ಲ ಕೃತಿಗಳಿಗಿಂತ ಭಿನ್ನವಾಗುತ್ತದೆ. 'ಕಾವ್ಯೇಷು ನಾಟಕಂ ರಮ್ಯಂ' ಎಂಬ ಮಾತುಗಳನ್ನಾಡುತ್ತಾ ಇದೇ ವಸ್ತುವಿಗೆ ಒಂದು ದೃಶ್ಯವೈಭವವನ್ನು ಕಲ್ಪಿಸುತ್ತಾರೆ. ಬಹುಶಃ ದೃಶ್ಯ ಮಾಧ್ಯಮವೇ ಸಮೂಹ ಮಾಧ್ಯಮಗಳಲ್ಲೆಲ್ಲ ಅತ್ಯಂತ ಪ್ರಭಾವಶಾಲಿಯಾದ ಮಾಧ್ಯಮವಾದುದರಿಂದ ಇದು ನಮ್ಮನ್ನು ಸೆಳೆದುಕೊಳ್ಳುತ್ತದೆ. ಅದನ್ನು 'ಶ್ರೀವಾಣಿ'ಯಲ್ಲಿ ಆದ್ಯರು ಚಿಂತಿಸುತ್ತಾರೆ. 'ಆದರ್ಶವನ್ನರಿಯದೆ ಬಹಿರ್ಮುಖ ಪ್ರಪಂಚದಲ್ಲಿ ಮುಳುಗೇಳುತ್ತಿರುವ ಮಾನವರಿಗೆ ಮಹಾನುಭಾವರ ಜೀವನಚಿತ್ರ ಹಾಗೂ ಸಂದೇಶಗಳನ್ನು ಕಾವ್ಯ, ಪುರಾಣಗಳಿಂದ ತಿಳಿಸುವುದು ಕಷ್ಟಸಾಧ್ಯವೇ!' ಎನ್ನುವ ಮಾತುಗಳನ್ನಾಡುವ ಅವರಿಗೆ, ಬಹುಶಃ ಓದುಗರ ಒಲವಿನ ಮಾಧ್ಯಮಗಳ ಮೂಲಕವೇ

ಸಂಸ್ಕೃತಿ, ಪರಂಪರೆಗಳ ಪರಿಚಯ ಮಾಡಿಕೊಡುವುದು ಸೂಕ್ತವೆನ್ನಿಸಿದೆ. ಹೀಗಾಗಿ, 'ನಾಟಕ'ದ ಮಾಧ್ಯಮದ ಮೂಲಕ ಪ್ರಯೋಗ ನಡೆಸುತ್ತಿದ್ದಾರೆ. ೧೯೮೩ರಲ್ಲಿ ರಚಿತಗೊಂಡ ಈ ನಾಟಕದಲ್ಲಿ ಮುಂಡರಗಿಯ ಶ್ರೀ ಜಂಗಮರ ಪರಿಚಯ ಮಾಡಿಕೊಟ್ಟಿದ್ದರೂ, ಗದ್ಯದ ಮೂಲಕವೂ ಮತ್ತೊಮ್ಮೆ ಇದೇ ವಿಚಾರದ ಬಗ್ಗೆ ಬರೆಯುತ್ತಾರೆ.

ಈ ನಾಟಕದಲ್ಲಿ ಸುಮಾರು ೧೩ ಪಾತ್ರಗಳು ಬಂದರೂ, ನಾಲ್ಕು ಮುಖ್ಯಪಾತ್ರಗಳು ಬರುತ್ತವೆ. ಇಡೀ ನಾಟಕದಲ್ಲಿ ಸೂತ್ರಧಾರನೋಪಾದಿಯಲ್ಲಿ ಶ್ರೀಮಠದ ಇತಿಹಾಸವನ್ನು ನಿರೂಪಿಸುವವನಾಗಿ ಶ್ರೀ ಸಂಸ್ಥಾನದ ಸದ್ಭಕ್ತ ಬಸವಪ್ಪ ಕಾಣಿಸುತ್ತಾನೆ. ಅವನಿಂದ ವಿಚಾರಗಳನ್ನು ಪ್ರಶ್ನೆಗಳ ಮುಖಾಂತರ, ವೈಜ್ಞಾನಿಕ ವಿಚಾರವಂತಿಕೆಯ ಒರೆಯ ಹಿನ್ನೆಲೆಯಲ್ಲಿ ತಿಳಿದುಕೊಳ್ಳುವ ನವಯುವಕನಾಗಿ ಶಿವಪ್ಪ ಕಾಣಿಸಿಕೊಳ್ಳುತ್ತಾನೆ.

ಶಿವಪ್ಪ ಇಂದಿನ ಯುಗದ ನವನಾಗರೀಕ ಆಧುನಿಕ ಜನಾಂಗವನ್ನು ಸಂಕೇತಿಸುತ್ತಾನೆ. ಅವನು ಕೇಳುವ ಪ್ರಶ್ನೆಗಳು ಧರ್ಮದ ಅಜ್ಞಾನದಿಂದ ಮೂಡಿಬಂದವುಗಳಲ್ಲ ಅಥವಾ ಕುಚೇಷ್ಟೆಯಿಂದ ಪ್ರಶ್ನಿಸಿದವೂ ಅಲ್ಲ. ತಂದೆ ಬಸವಪ್ಪ ಹಳೆಯ ತಲೆಮಾರನ್ನು ಸಂಕೇತಿಸುತ್ತಾನೆ. ಧರ್ಮದ ಬಗೆಗಿನ ಶ್ರದ್ಧೆ, ಹಿರಿಯರ ಬಗೆಗೆ ಗೌರವ, ದೇವರ ಬಗೆಗಿನ ಭಕ್ತಿಯನ್ನು ಪ್ರಕಟಿಸುತ್ತಾನೆ. ಹಿರಿಯನಾದುದರಿಂದ ಅವನ ವಯಸ್ಸಿನ ಫಲವಾಗಿ ಗಳಿಸಿದ ಅನುಭವ, ತಾನೇ ಶ್ರದ್ಧೆ, ಆಸಕ್ತಿಗಳಿಂದ ಪಡೆದುಕೊಂಡ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಜ್ಞಾನ– ಇವೆರಡರ ಬೆಂಬಲದಿಂದ ಶಿವಪ್ಪನಂತಹವರ ಪ್ರಶ್ನೆಗಳಿಗೆ, ಅನುಮಾನಗಳಿಗೆ, ಸಂಶಯಗಳಿಗೆ ವಿವರಗಳನ್ನು ನೀಡುತ್ತಾನೇ ಹೊರತು ಅಂಧ ಅಭಿಮಾನದಿಂದಲೇ ಆಗಲಿ, ಅಹಂಕಾರ, ಆತ್ಮ ಪ್ರತ್ಯಯಗಳಿಂದಲೇ ಆಗಲ್ಲ.

ಇಲ್ಲಿನ ಶಿವಪ್ಪ, ಬಸವಪ್ಪರ ಮೂಲಕ ಧರ್ಮಕ್ಕೆ ಸಂಬಂಧಿಸಿದಂತೆ, ಪವಾಡಗಳಿಗೆ ಸಂಬಂಧಿಸಿದಂತೆ ಬಹಳ ವೈಜ್ಞಾನಿಕವಾಗಿ ಚಿಂತಿಸುವ ಪ್ರಯತ್ನ ಮಾಡುತ್ತಾರೆ. ಪವಾಡಗಳಿಗೆ ಸಂಬಂಧಿಸಿದಂತೆ ಲೇಖಕರು ನೀಡುವ ವಿವರಣೆ ಅತ್ಯಂತ ವೈಜ್ಞಾನಿಕವಾಗಿದೆ, ವಿಚಾರವಂತಿಕೆಯಿಂದ ಕೂಡಿವೆ. ಹಣವನೋಚುವ, ಮುಗ್ಧರನ್ನು ವಂಚಿಸುವ, ಬೆರಗುಗೊಳಿಸುವ ಯಾವುದೇ ತಂತ್ರವೂ ಕೂಡ ಅಪಾಯಕಾರಿಯಾದುದು ಎನ್ನುತ್ತಾರೆ.

ಶ್ರೀಗಳ ಸಂಶೋಧನಾ ಪ್ರವೃತ್ತಿ ಬಹಳ ಕುತೂಹಲಕಾರಿಯಾದದ್ದು. ಸಂಶೋಧನಾ ಪ್ರವೃತ್ತಿ ವಿಚಾರಶೀಲ ಮನಸ್ಸಿಗೆ ಮಾತ್ರ ಮೂಡುವಂತಹದು. ಮೃಡಗಿರಿಯೇ ಮುಂಡರಗಿ ಆಗಿರುವಂತಹದು, ಹಾಲರ್ತಿ–ಹಾಲ–ವರತಿ–ಹಾಲವರ್ತಿ ಆಗಿರುವಂತಹದು. ಹಾಗೇ ಹಾಲೆಂದರೆ, ಅಮೃತ. ಇಂಥ ಅಮೃತವೇ 'ವರ'ವನ್ನು ನೀಡಬಲ್ಲದು, ಕೊಪ್ಪಳದ ಸಮೀಪ 'ಹಾಲವರ್ತಿ' ಗ್ರಾಮ–ಹಾಲವರ್ತಿ ಹೊಂಡ. ಇದಕ್ಕೂ, ಪೂಜ್ಯರಿಗೂ ಸಂಬಂಧವಿರಬಹುದೆ?–ಮುಂತಾದ ಶೋಧಕ ಮನೋವೃತ್ತಿ ತೋರುತ್ತಾರೆ. ಹಾಗೇ 'ಜಂಗಮಜ್ಯೋತಿ'ಯ ಕೊನೆಯಲ್ಲಿ ಶಿವಪ್ಪನಿಂದ ಆಡಿಸುವ ಮಾತುಗಳು, 'ಅಪ್ಪಾಜಿ! ನಮ್ಮ ಮಠದ ಭವ್ಯ ಇತಿಹಾಸವನ್ನು ಕೇಳಿ ಸಂತಸವಾಯಿತು.

ಇನ್ನೂ ಐತಿಹಾಸಿಕ ದಾಖಲೆಗಳ ಸಂಶೋಧನೆ ಅತ್ಯವಶ್ಯ. ನಮ್ಮ ಮಠದ ಇತಿಹಾಸವನ್ನು ವ್ಯತಿರಿಕ್ತಗೊಳಿಸಿರುವುದನ್ನು ನಿಷ್ಪಕ್ಷಪಾತಿಗಳಾದ ಸಾಹಿತಿಗಳು ಗಮನಿಸಲೆಂದು ಆಶಿಸುತ್ತೇನೆ.' ಇದು ಸ್ವತಃ ಶ್ರೀಗಳ ಮನದ ಇಂಗಿತವೇ ಆಗಿದೆ. ನಮ್ಮಲ್ಲಿ ಇಂಥ ಕಾರ್ಯ ನಿಜಕ್ಕೂ ಆಗಬೇಕಾಗಿದೆ.

ಒಟ್ಟಾರೆಯಾಗಿ ಐದೂ ಕೃತಿಗಳನ್ನು ಓದಿ ಮುಗಿಸಿದಾಗ ಒಂದು ಅವಿಸ್ಮರಣೀಯ ಅನುಭವವುಂಟಾಗುತ್ತದೆ. ಶ್ರೀಗಳಿಗೆ ವೀರಶೈವ ಚಳುವಳಿಯ ಪುನರುತ್ಥಾನದ ಎಳೆಗಳನ್ನು ಹಿಡಿದು ಶೋಧಿಸುವ ಆಶಯವಿದೆ. ಇದಕ್ಕೆ ಪೂರಕವಾಗಿ ನಮ್ಮ ನಡುವೆ ಆಗಿಹೋದ, ಇರುವ ಮಹಾಚೈತನ್ಯಗಳ ಬದುಕು, ಬರಹಗಳ ಸ್ಫೂರ್ತಿ ಪಡೆಯುತ್ತಾರೆ. ಧಾರ್ಮಿಕ ಆಸಕ್ತಿಯನ್ನು ಹೊಂದಿಕೊಂಡೇ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುತ್ತಾರೆ. ಇಂದಿನ ಯುವ ಪೀಳಿಗೆಗೆ ಇಂಥ ಮಾನವೀಯ ಮೌಲ್ಯಗಳು ವರ್ಗಾಯಿಸಲ್ಪಡಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. ಯುವ ಜನಾಂಗ ಅಪಾಯದ ಅಂಚಿನಲ್ಲಿ ನಿಂತಿದೆ, ಪಾಶ್ಚಾತ್ಯ ಸಂಸ್ಕೃತಿಗೆ ತನ್ನನ್ನು ತಾನು ಅರ್ಪಿಸಿಕೊಂಡು ತನ್ನ ದೇಶೀಯ ಸಂಸ್ಕೃತಿಯ ಬೇರುಗಳನ್ನು ಕಳೆದುಕೊಂಡಿದೆ ಎಂಬ ನೋವಿದ್ದರೂ, ಅದರ ಬಗ್ಗೆ ದೂರುವುದಿಲ್ಲ. ಇಂಥ ಯುವ ಶಕ್ತಿಯನ್ನು ತಮ್ಮ ಸಾಂಸ್ಕೃತಿಕ ನೆಲೆಗಟ್ಟಿನೊಳಗೆ ಹೇಗೆ ಸೆಳೆದುಕೊಳ್ಳ ಬಹುದು ಎಂಬ ಕಾರಣಕ್ಕಾಗಿಯೇ ಅವರಿಗೆ ನಮ್ಮ ಚರಿತ್ರೆ, ವ್ಯಕ್ತಿಗಳ, ಘಟನೆಗಳ ಚಾರಿತ್ರಿಕ ಪರಿಚಯ ಮಾಡಿಕೊಡಲು ಮುಂದಾಗುತ್ತಾರೆ. ಈ ಬರಹಗಳಲ್ಲಿ ಕನಸು, ಆದರ್ಶಗಳಿದ್ದರೂ, ಅವು ದೃಢವಾಸ್ತವದ 'ಕರ್ತಾರನ ಕಮ್ಮಟ'ವನ್ನು ಮೀರಿದವುಗಳಲ್ಲ. ವಾಸ್ತವದ ಬದುಕಿನಲ್ಲಿ ಸಾಧನೆಗೆ ತೊಡಗಬಹುದಾದ, ಅನುಷ್ಠಾನಕ್ಕೆ ತರಬಹುದಾದಂತಹ ಚಿಂತನೆಗಳು. ಆ ಕಾರಣದಿಂದಲೇ ಅವರ 'ಜಂಗಮಜ್ಯೋತಿ'ಯ ಲೌಕಿಕದ ನಾಯಕನಾದ ಶಿವಪ್ಪ ಕೂಡ ವಿದ್ಯಾವಂತ, ನವನಾಗರೀಕ ಯುವಜನಾಂಗದ ಪ್ರತಿನಿಧಿಯಾದರೂ, ಧರ್ಮಾಸಕ್ತನಾಗಿದ್ದಾನೆ, ಒಳ್ಳೆಯ ವ್ಯಕ್ತಿಯ ಚಿಂತನೆಯನ್ನು, ನಡೆನುಡಿಯನ್ನು ಕೇಳಿ, ತಿಳಿದುಕೊಳ್ಳುವ ಶ್ರದ್ಧಾವಂತನಾಗಿದ್ದಾನೆ. ಇದು ಬದುಕನ್ನು ಕುರಿತಾದಂತಹ tve ಧೋರಣೆ, ಆಶಾವಾದೀ ಮನೋಭಾವ ಎಂದೇ ಮನಗಾಣಬೇಕು. ಇದು ನಿಜವಾದ ಶರಣನ ಗುಣ. ಈ ಬರಹಗಳ ಚಿಂತನೆಯನ್ನು, ಧ್ಯೇಯ, ಧೋರಣೆಗಳನ್ನು ಒಗ್ಗೂಡಿಸಿ ಕೊಂಡಾಗ, ಬದುಕಿನ ಬಗೆಗೆ, ಧರ್ಮದ ಬಗೆಗೆ, ಸಮಾಜದ ಬಗೆಗೆ, ಅಲ್ಲಿರುವ ನೋವು, ಅನ್ಯಾಯ, ಅನಕ್ಷರತೆ, ಬಡತನ, ದಾರಿದ್ರ್ಯ, ನೈರಾಶ್ಯ–ಇವುಗಳ ಬಗೆಗೆ ಸತತವಾಗಿ ಚಿಂತಿಸುವ, ಅವರ ಹೋರಾಟಕ್ಕೆ ದನಿಯಾಗುವ, ಅವರ ಉದ್ಧಾರಕ್ಕೆ ಧಾವಿಸುವ 'ಮಹಾ ಮಾನವತಾವಾದಿ'ಯ ಚಿತ್ರಣವೊಂದು ರೂಪುಗೊಳ್ಳುತ್ತದೆ

ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ

ವ್ಯಾಖ್ಯಾನ ಗ್ರಂಥಗಳು

—**ಪ್ರೊ|| ಆರ್. ರಾಜಪ್ಪ,** ಬೆಂಗಳೂರು

ಸೃಜನಶೀಲ ಸಾಹಿತ್ಯದ ಹಿಂದೆಯೇ ವಿಮರ್ಶೆ, ವ್ಯಾಖ್ಯಾನ, ಟೀಕಾಸಾಹಿತ್ಯಗಳು ಹುಟ್ಟಿಬರುತ್ತವೆ. ಸೃಜನಶೀಲ ಸಾಹಿತ್ಯದಲ್ಲಿನ ಭಾವಾಭಿವ್ಯಕ್ತಿಯನ್ನೂ, ಅರ್ಥವಂತಿಕೆಯನ್ನೂ ವಿವರಿಸುವುದು ವಿಮರ್ಶೆಯಾಗುತ್ತದೆ. ಈ ವಿಮರ್ಶನ ವರ್ಗಕ್ಕೆ ಸೇರಿದುವು ವ್ಯಾಖ್ಯಾನ ಸಾಹಿತ್ಯ, ಟೀಕಾಸಾಹಿತ್ಯ. ವ್ಯಾಖ್ಯಾನ ಶಬ್ದಕ್ಕೆ ಮೋನಿಯರ್ ವಿಲಿಯಂಸ್ ಅವರು **Explaining, expounding, commenting, inter pretation, Narration** ಇತ್ಯಾದಿ ಅರ್ಥಗಳನ್ನು ಹೇಳಿದ್ದಾರೆ. ಫಾದರ್ ಕಿಟೆಲ್ ಅವರು ವ್ಯಾಖ್ಯಾನ ಎಂಬುದಕ್ಕೆ 'ಒಕ್ಕಣೆ' ಎಂದೂ, **Explaining in detail, commenting** ಎಂದು ಅರ್ಥ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಒಂದು ಕೃತಿಯ ವೈಶಿಷ್ಟ್ಯ, ವಿವರಗಳು, ಅಲ್ಲಿ ಸ್ಫುರಿಸುವ ಶಬ್ದಾರ್ಥ, ಸೂಚ್ಯಾರ್ಥ, ಅನ್ವಯಾರ್ಥ ಮತ್ತು ಅದಕ್ಕೆ ಸಂಬಂಧಿಸಿದಂತೆ ಉದಾಹರಣ ಸಹಿತ ವಿವರಗಳನ್ನು ಕೊಡುವುದು ವ್ಯಾಖ್ಯಾನ ಈ ತೆರನ ಸಾಹಿತ್ಯವನ್ನು ವ್ಯಾಖ್ಯಾನ, ಭಾಷ್ಯ, ವಿವರಣೆ ಎಂಬ ಹೆಸರುಗಳಿಂದ ಭಾರತೀಯ ಮೀಮಾಂಸಕರು ಕರೆದಿದ್ದಾರೆ.

ಭಾರತೀಯ ಸಾಹಿತ್ಯದಲ್ಲಿ ಸಂಸ್ಕೃತ, ಪ್ರಾಕೃತ ಗ್ರಂಥಗಳಿಗೆ ಬರೆದ ವ್ಯಾಖ್ಯಾನ ಸಾಹಿತ್ಯ ಶ್ರೀಮಂತವಾಗಿದೆ. ಪತಂಜಲಿಯ ಮಹಾಭಾಷ್ಯ, ಸಾಯಣಾಚಾರ್ಯನ ವೇದಭಾಷ್ಯ, ಮಲ್ಲಿನಾಥನ ಕಾಳಿದಾಸ ಕೃತಿ ಪಂಚಕಟೀಕೆ ಮೊದಲಾದುವು ಪ್ರಸಿದ್ಧವಾಗಿವೆ.

ಸಂಸ್ಕೃತ ಸಾಹಿತ್ಯದಂತೆ ಕನ್ನಡ ಸಾಹಿತ್ಯದಲ್ಲಿಯೂ ಈ ವ್ಯಾಖ್ಯಾನ ಸಾಹಿತ್ಯ ಯಥೇಚ್ಛವಾಗಿ ಬೆಳೆದಿದೆ. ಸಂಸ್ಕೃತ, ಪ್ರಾಕೃತ ಗ್ರಂಥಗಳಿಗೆ ವ್ಯಾಖ್ಯಾನ ಬರೆದಿರುವ ಕಾರ್ಯ ಸಾಕಷ್ಟು ನಡೆದಿದೆ. ಉಭಯಸಿದ್ಧಾಂತಗಳಿಗೆ ಶ್ಯಾಮಕುಂದಾಚಾರ್ಯ, ತೆಂಬಳೂರಾಚಾರ್ಯರ ವ್ಯಾಖ್ಯಾನ, ಉಮಾಸ್ವಾತಿಯ 'ತತ್ವಾರ್ಥ'ಸೂತ್ರಕ್ಕೆ ಬರೆದಿರುವ 'ಚೂಡಾಮಣಿ' (ಕೃತಿಕಾರನ ಹೆಸರು ಉಪಲಬ್ಧವಿಲ್ಲ); ಆರಾಧನಾ ಸಾಹಿತ್ಯಕ್ಕೆ ಬರೆದ, 'ಆರಾಧನಾ ಕರ್ಣಾಟ ಟೀಕಾ' ಇವುಗಳನ್ನು ಈ ನಿಟ್ಟಿನಲ್ಲಿ ಗಮನಿಸಬಹುದು. ಇಷ್ಟಾದರೂ ಹದಿನೈದನೆಯ ಶತಮಾನದವರೆಗೆ ಈ ವ್ಯಾಖ್ಯಾನ ಸಾಹಿತ್ಯ ಹೆಚ್ಚು ಸಂಖ್ಯೆಯಲ್ಲಿ ಮೂಡಿ ಬರಲಿಲ್ಲ. ಪದಿನೈದನೆಯ ಶತಮಾನದ ನಂತರ ಅಲ್ಲೊಂದು ಇಲ್ಲೊಂದು ವ್ಯಾಖ್ಯಾನ ಕೃತಿಗಳು

ಹುಟ್ಟಿಕೊಂಡವು. ಆನಂತರ ಬಂದ ವೀರಶೈವರಿಂದ ಈ ವ್ಯಾಖ್ಯಾನ ಸಾಹಿತ್ಯ ಹೆಚ್ಚು ಹೆಚ್ಚಾಗಿ ಮೂಡಿಬಂದಿತು.

ವೀರಶೈವರಿಗೆ ಕನ್ನಡ ನಾಡು ಹುಟ್ಟು ನೆಲ. ಇಲ್ಲಿನ ಮಣ್ಣಿನ, ಜಲದ, ಗಾಳಿಯ ಸತ್ವವನ್ನು ಮೈಗೂಡಿಸಿಕೊಂಡ ವೀರಶೈವರಿಗೆ ಕನ್ನಡತನ ಉಸಿರಾಗಿದೆ. ಆದ್ದರಿಂದಲೇ ಹಿರಿಯ ವಿದ್ವಾಂಸರೊಬ್ಬರು "ವೀರಶೈವ ಧರ್ಮವೆಂದರೆ ಕನ್ನಡ ಧರ್ಮ ವೀರಶೈವ ಸಾಹಿತ್ಯವೆಂದರೆ ಕನ್ನಡ ಸಾಹಿತ್ಯ" ಎಂದಿದ್ದಾರೆ. ಇದು ತಥ್ಯವೂ ಹೌದು. ಕನ್ನಡ ನಾಡಿನಲ್ಲಿ ಬ್ರಾಹ್ಮಣ, ಜೈನ, ವೀರಶೈವ ಧರ್ಮಗಳು ಪ್ರಮುಖವಾಗಿವೆ. ಬ್ರಾಹ್ಮಣರಿಗೆ ಮಾತೃಭಾಷೆ ಕನ್ನಡವಾದರೆ, ಧರ್ಮ ಭಾಷೆ ಸಂಸ್ಕೃತವಾಗಿದೆ. ಜೈನರಿಗೆ ಮಾತೃಭಾಷೆ ಕನ್ನಡವಾದರೆ ಧರ್ಮಭಾಷೆ ಪ್ರಾಕೃತವಾಗಿದೆ. ವೀರಶೈವರಿಗೆ ಮಾತೃಭಾಷೆಯೂ ಕನ್ನಡ, ಧರ್ಮ ಭಾಷೆಯೂ ಕನ್ನಡ. "ಹಾಗಾಗಿ ನೋಡಿರೆ ಕನ್ನಡವ, ನುಡಿಸಿರೆ ಕನ್ನಡವ, ತಲೆಯೊಲೆಯುತ ಬಂದು ಕುಣಿಯುವ ಕನ್ನಡವ" ಎಂದು ಹನ್ನೆರಡನೆ ಶತಮಾನದ ನಿಜಗುಣ ಹಾಡಿದ. ಹಾಗೆಯೇ ಭೀಮಕವಿ "ಬರಿಯ ಕನ್ನಡ ಭಾಷೆಯೆಂದೆನಲಾಗದಿಳೆಗಿದು ಲೇಸೆನಿಪ ವೇದಪ್ರಮಾಣವೆನಿಪುದು" ಎಂದು ಹಾಡಿದ್ದಾನೆ. ಭಾಷೆಯ ಬಗೆಗೆ ಅಪಾರ ಗೌರವ ಹೊಂದಿದ್ದ ಕಾರಣದಿಂದಾಗಿ ವೀರಶೈವರು ವಿಪುಲವಾಗಿ ಸೃಜನ ಹಾಗೂ ಸಾಹಿತ್ಯ ಪ್ರಸಾರ ವಿಧಾನವಾದ ವ್ಯಾಖ್ಯಾನ ಸಾಹಿತ್ಯರಚನೆ ಮಾಡಿದರು. ವೀರಶೈವ ವ್ಯಾಖ್ಯಾನ ಸಾಹಿತ್ಯವನ್ನು ೧) ಅನ್ಯಭಾಷಾ ಸಾಹಿತ್ಯಕ್ಕೆ ಬರೆದ ವ್ಯಾಖ್ಯಾನ ೨) ಕನ್ನಡ ಭಾಷಾ ಸಾಹಿತ್ಯಕ್ಕೆ ಬರೆದ ವ್ಯಾಖ್ಯಾನ ಎಂದು ಎರಡು ಗುಂಪಾಗಿಸಬಹುದು.

ಅನ್ಯಭಾಷಾ ಸಾಹಿತ್ಯಕ್ಕೆ ಬರೆದ ವ್ಯಾಖ್ಯಾನ

ವೀರಶೈವರಿಂದ ಹೆಚ್ಚಾಗಿ ವ್ಯಾಖ್ಯಾನ ಬರೆಯಿಸಿಕೊಂಡದ್ದು ಸಂಸ್ಕೃತ ಸಾಹಿತ್ಯ. ವೀರಶೈವ ತತ್ವ-ಸಿದ್ಧಾಂತಗಳನ್ನು ಒಳಗೊಂಡ ಸಂಸ್ಕೃತದ ಆಗಮಗಳು ಉಪನಿಷತ್ತುಗಳು ಮತ್ತು ಕವಿಕೃತಿಗಳಿಗೆ ಉಭಯಭಾಷಾ ಪಂಡಿತರಾದ ವೀರಶೈವರು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಬಸವಣ್ಣನವರ ಸಮಕಾಲೀನನೆನಿಸಿದ ಶಿವಲೆಂಕ ಮಂಚಣ್ಣನ ತಂದೆ "ಕಾಮಿಕಾದ್ಯಖಿಳ ಶಿವಕಥಿತತಂತ್ರಾವಳಿಗಳಿಗೆ ಪ್ರೇಮದಿಂ ವೃತ್ತಿದೀಪಿಕೆಗಳಂ ಬಿತ್ತರಿಸಿದನು." ಆನಂತರ ವಾತುಲ ತಂತ್ರಟೀಕೆ, ವೀರಮಾಹೇಶ್ವರಾಚಾರ ಸಾರೋದ್ಧಾರ ಟೀಕೆ, ಸಿದ್ಧಾಂತ ಶಿಖಾಮಣಿ ಟೀಕೆ, ಶಿವಯೋಗ ಪ್ರದೀಪಿಕೆ ಟೀಕೆ, ಶ್ರೀ ರುದ್ರಭಾಷ್ಯಟೀಕೆ, ಶಿವಾನುಭವ ಟೀಕೆ, ಸಾರಸ್ವತವ್ಯಾಕರಣ ಟೀಕು,ಪುರುಷಸೂಕ್ತಟೀಕು, ನಮಕ, ಚಮಕ ಟೀಕು, ಕೈವಲ್ಯಸಾರ ಟೀಕೆ, ಯಜುರ್ವೇದ ಭಾಷ್ಯಾ ಟೀಕು, ವೀರಮಾಹೇಶ್ವರಾಚಾರ ಸಂಗ್ರಹ ವ್ಯಾಖ್ಯಾನ, ವಿಶೇಷಾರ್ಥ ಪ್ರಕಾಶಿಕೆ ಟೀಕೆ, ಮಲಯರಾಜಸ್ತೋತ್ರ ಟೀಕು, ಮಲ್ಹಣ ಸ್ತೋತ್ರಟೀಕು,ಮಹಿಮ್ನ ಸ್ತೋತ್ರ ಟೀಕೆ ಮೊದಲಾದವು ಹುಟ್ಟಿಕೊಂಡಿವೆ. ಈ ಗ್ರಂಥಗಳಲ್ಲಿ ಕರ್ತೃವಿನ ಉಭಯಭಾಷಾ ಪ್ರೌಢಿಮೆ ವಿಷಯದ ಮೇಲಿನ ಪ್ರಭುತ್ವ, ನಿರೂಪಣಾ ತಂತ್ರ, ಪರಿಕರ ಸಾಹಿತ್ಯದ ಜ್ಞಾನ ಸ್ಪಷ್ಟವಾಗಿವೆ.

ಕನ್ನಡ ಭಾಷಾಸಾಹಿತ್ಯಕ್ಕೆ ಬರೆದ ವ್ಯಾಖ್ಯಾನ

ಹನ್ನೆರಡನೆ ಶತಮಾನದಲ್ಲಿಯೇ ಸೃಜನಸಾಹಿತ್ಯದ ಜೊತೆಯಲ್ಲಿಯೆ ವ್ಯಾಖ್ಯಾನ ಸಾಹಿತ್ಯವೂ ಹುಟ್ಟಿಬಂದಿರುವ ಸಾಧ್ಯತೆಗಳಿವೆ. ವಚನಗಳನ್ನು ಅದರಲ್ಲಿಯೂ ಬೆಡಗಿನ ವಚನಗಳನ್ನು ಸಾಮಾನ್ಯರಿಗೆ ಅರ್ಥೈಸಿಕೊಡುವ ಪ್ರಯತ್ನ ಅಂದೇ ನಡೆದಿದೆ ಎಂಬಂಶ "ಹತ್ತುಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು? ಮುಟ್ಟುವ ತೆಗನರಿಯದನ್ನಕ್ಕ" ಎಂಬ ಮಾತುಗಳಿಂದ ಸ್ಪಷ್ಟವಾಗುತ್ತದೆ. ವಚನಗಳಿಗೆ ವಿವರಣೆ ನೀಡಿದಂತೆ ವೀರಶೈವ ಕಾವ್ಯಗಳಿಗೂ ವ್ಯಾಖ್ಯಾನ ನೀಡುವ ರೂಢಿ ಬೆಳೆದು ಬಂದಿತು. ಇದರೊಂದಿಗೆ ಶಾಸ್ತ್ರ ಗ್ರಂಥಗಳಿಗೂ ವ್ಯಾಖ್ಯಾನ ಬರೆಯುವ ಸಂಪ್ರದಾಯವೂ ಬೆಳದು ಬಂದಿತು. ವೀರಶೈವ ವ್ಯಾಖ್ಯಾನ ಸಾಹಿತ್ಯವನ್ನು ವಚನ ಟೀಕೆ-ಕಾವ್ಯ, ಶಾಸ್ತ್ರ ಟೀಕೆ ಎಂದು ವಿಭಜಿಸಬಹುದು. ಕೆಲವರು ಜೀವನದುದ್ದಕ್ಕೂ ಟೀಕಾಸಾಹಿತ್ಯವನ್ನು ರಚಿಸಿಕೊಂಡು ಬಂದುದರಿಂದ "ಟೀಕಿನ ಗುರುಪಾದದೇವ" ಎಂಬ ಅನ್ವರ್ಥಕ ಹೆಸರನ್ನೂ ಗಳಿಸಿದರು. ಈಗಲೂ ಟೀಕಾ ಮಠ ಗಳಿರುವುದು ಗಮನಾರ್ಹ ಸಂಗತಿ. ಈ ಪರಂಪರೆಯಲ್ಲಿ ಕಲ್ಲುಮಠದ ಪ್ರಭುದೇವ, ಮಹಾಲಿಂಗ ದೇವರು, ಸೋಮಶೇಖರ ಶಿವಯೋಗಿ, ಪರ್ವತ ಶಿವಯೋಗಿ, ಗುರುಬಸವ ರಾಜದೇವ ಮೊದಲಾದವರು ಮಹಾಶಿವಯೋಗಿಗಳೂ ವ್ಯಾಖ್ಯಾನ ರಚನೆಯಲ್ಲಿ ಸಿದ್ಧಹಸ್ತರೂ ಆಗಿದ್ದರು. "ಪ್ರಭುದೇವರ ಟೀಕಿನ ವಚನಗಳು;" 'ಬೆಡಗಿನ ವಚನ ಟೀಕೆ'; ಅಕ್ಕಮಹಾದೇವಿಯ ಸೃಷ್ಟಿಯ ವಚನ ಟೀಕು, ಚೆನ್ನಬಸವೇಶ್ವರನ ಪದ ಮಂತ್ರಗೋಪ್ಯ ಟೀಕೆ, ಕರಣಹಸಿಗೆ ಟೀಕೆ, ಮಂತ್ರಗೋಪ್ಯ ಟೀಕು; ಮಿಶ್ರಾರ್ಪಣ ಟೀಕು, ಲಿಂಗಲೀಲಾಸ ಗ್ರಂಥದ ವ್ಯಾಖ್ಯಾನ, ಏಕೋತ್ತರ ಶತಸ್ಥಲ ಟೀಕೆ, ಶತಕತ್ರಯ ವ್ಯಾಖ್ಯಾನ, ಪಂಚಗದ್ಯ ಟೀಕೆ, ಭಾವ ಚಿಂತಾರತ್ನ ಟೀಕೆ, ಬಸವೇಶ್ವರನ ಪಂಚ ಸ್ತೋತ್ರ ಟೀಕೆ, ಮಹೇಶ್ವರ ನಾಂದ್ಯದ ಟೀಕೆ, ಮರುಳದೇವರ ಕಂದಸಾರ ಟೀಕೆ, ರಾಜಶೇಖರ ವಿಲಾಸ ವ್ಯಾಖ್ಯಾನ, ಶಬ್ದಮಣಿದರ್ಪಣ ಟೀಕೆ, ಶೀಲವಂತಯ್ಯನ ತ್ರಿವಿಧಿ ಟೀಕೆ, ಕರಸ್ಥಲದ ನಾಗಿದೇವನ ತ್ರಿವಿಧಿ ಟೀಕೆ, ಕೈವಲ್ಯ ಪದ್ಧತಿ ಟೀಕೆ, ಗುರುಸ್ತೋತ್ರ ತ್ರಿವಿಧಿ ಟೀಕೆ; ವಾರ್ತೆಯ ಸೋಮಣ್ಣನ ಪಂಚೀಕರಣ ಟೀಕೆ, ಪ್ರಭುಲಿಂಗಕಂದದ ಟೀಕೆ, ಪರಮಾರ್ಥ ಗೀತೆ ಟೀಕೆ,-ಹೀಗೆ ವೀರಶೈವ ವ್ಯಾಖ್ಯಾನ ಸಾಹಿತ್ಯದಟ್ಟವಾಗಿ ಮೂಡಿ ಬಂದಿದೆ.

ವೀರಶೈವ ವ್ಯಾಖ್ಯಾನ ಗ್ರಂಥಗಳು ಒಂದೇ ಮಟ್ಟದವಾಗಿಲ್ಲ. ವ್ಯಾಖ್ಯಾನಕಾರನ ಅಭ್ಯಾಸ, ಅನುಭವ,-ಅನುಭಾವಗಳ ವ್ಯಾಪ್ತಿ. ಇತಿ-ಮಿತಿಗಳಿಗೆ ಒಳಗೊಂಡು ಮೂಡಿ ಬಂದಿವೆ. ಅವುಗಳಲ್ಲಿ ಕೆಲವು ಪ್ರತಿಪದಗಳ ಅರ್ಥ ಹೇಳುವ ಟೀಕೆಗಳು, ಸಂಕ್ಷಿಪ್ತ ರೂಪದ ಟೀಕೆಗಳು; ಸಾರರೂಪದ ಟೀಕೆಗಳು, ತಾತ್ಪರ್ಯ ರೂಪದ ಟೀಕೆಗಳು ಮೂಡಿ ಬಂದಿವೆ. ಒಂದು ವಚನ ಅಥವಾ ಪದ್ಯಕ್ಕೆ ವಾಚ್ಯಾರ್ಥ, ತಾತ್ವಿಕಾರ್ಥವನ್ನು ಹೇಳಿರುವ

ಟೀಕಾಕಾರರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಕೆಲವರು ಪಾಂಡಿತ್ಯ ಪ್ರದರ್ಶನಕ್ಕಾಗಿ ಒಂದು ವಚನಕ್ಕೆ ನಾಲ್ಕೈದು ವಿಧವಾಗಿ ಅರ್ಥವನ್ನು ಪ್ರಯತ್ನಪೂರ್ವಕವಾಗಿ ಹೇಳಿ ರುವುದುಂಟು.

ವ್ಯಾಖ್ಯಾನ ಗ್ರಂಥಗಳು ವಾಚ್ಯಾರ್ಥ, ಭಾವಾರ್ಥ, ಅಂತರಾರ್ಥ, ತಾತ್ವಿಕಾರ್ಥ ಗಳನ್ನು ಹಿಂಜಿ ಹೇಳುವುದರಿಂದ ಮೂಲಕೃತಿಯ ತಿರುಳನ್ನು ತಿಳಿಯಲು ಅಭ್ಯಾಸಿಗಳಿಗೆ ನೆರ ವಾಗುವುದು ಸಹಜವಾದುದು. ಇಂತಹ ವ್ಯಾಖ್ಯಾನ ಗ್ರಂಥಗಳು ಓದುಗನ ಜ್ಞಾನ ವ್ಯಾಪ್ತಿ ಯನ್ನು ಹೆಚ್ಚು ಮಾಡುವುದಲ್ಲದೆ ತತ್ವವಿಚಾರಗಳಿಗೆ ಸಂಬಂಧಿಸಿದಂತೆ ಓದುಗನಲ್ಲಿ ಮೂಡಿ ಬರಬಹುದಾದ ಅರ್ಥಸಂದಿಗ್ಧತೆ, ಸಂಶಯಗಳಿಗೆ ಪರಿಹಾರವನ್ನು ಒದಗಿಸಿಕೊಡುತ್ತವೆ. ಹೀಗಾಗಿ ವ್ಯಾಖ್ಯಾನ ಸಾಹಿತ್ಯ ವೀರಶೈವ ಸಾಹಿತ್ಯದ ಒಂದು ಅಮೂಲ್ಯವಾದ ಆಸ್ತಿ ಎಂಬುದರಲ್ಲಿ ಸಂಶಯವಿಲ್ಲ.

ಇಷ್ಟಾದರೂ ವ್ಯಾಖ್ಯಾನ ಗ್ರಂಥಗಳ ಇನ್ನೊಂದು ಮುಖವಿದೆ. ವಾಕ್ಯಗಳು ತೀರಾ ಉದ್ದವಾಗಿದ್ದು ಕರ್ತೃ, ಕರ್ಮ, ಕ್ರಿಯೆಗಳ ಸಂಬಂಧವು ತಪ್ಪಿ ಹೋಗಿ ವಿವರಣೆ ಸ್ಪಷ್ಟ ವಾಗದೇ ಹೋಗುವ ಸಾಧ್ಯತೆ ಇದೆ. ಒಂದೇ ರೀತಿಯ ವಾಕ್ಯಗಳು ಪದೇ ಪದೇ ಬರುವುದರಿಂದ ಓದುಗನಿಗೆ ಬೇಸರ ಬರುತ್ತದೆ. ವಿಷಯ ಸ್ಪಷ್ಟನೆಗಾಗಿ ವ್ಯಾಖ್ಯಾನ ಕಾರರು ಉದಾಹರಣೆಗಳ ಮೇಲೆ ಉದಾಹರಣೆಗಳು, ಉಪಮೆಗಳ ಮೇಲೆ ಉಪಮೆಗಳು, ದೃಷ್ಟಾಂತಗಳ ಮೇಲೆ ದೃಷ್ಟಾಂತಗಳನ್ನು ತಂದು ತುರುಕುವುದರಿಂದ ಉದ್ದೇಶಿತ ಫಲ ದೊರೆಯದೆ ವ್ಯಾಖ್ಯಾನ ಸೋಲುವುದೂ ಉಂಟು. ಮೂಗಿಗಿಂತ ಮೂಗುತಿ ಭಾರ ವಾಗುವ ಸಂಭವದಿಂದಾಗಿ ಇಂಥಾ ವ್ಯಾಖ್ಯಾನ ಗ್ರಂಥಗಳನ್ನು ಓದುವುದಕ್ಕಿಂತ ಮೂಲ ಗ್ರಂಥಗಳನ್ನು ಓದಿ ಅಸ್ವಾದಿಸುವುದು (ಲಭ್ಯವಿದ್ದಷ್ಟು) ಲೇಸು ಎಂಬ ತೀರ್ಮಾನಕ್ಕೆ ಅನಿವಾರ್ಯವಾಗಿ ಓದುಗ ಬರುವ ಸಾಧ್ಯತೆಯೂ ಇದೆ.

ಆಧುನಿಕ ಕಾಲದಲ್ಲಿಯೂ ಈ ತೆರನಾದ ವ್ಯಾಖ್ಯಾನ-ಟೀಕಾ ಕೃತಿಗಳು ಮೂಡಿ ಬಂದಿರುವುದುಂಟು. ಆಚಾರ್ಯ ಡಿ. ಎಲ್. ನರಸಿಂಹಾಚಾರ್ಯರು ಪಂಪನ ಭಾರತಕ್ಕೆ 'ಪಂಪಭಾರತ ದೀಪಿಕೆ' ರಚಿಸಿ ಅಲ್ಲಿನ ಸಂಗತಿಗಳು ಓದುಗನಿಗೆ ಸ್ಪಷ್ಟವಾಗುವಂತೆ ನಿರೂಪಿಸಿದ್ದಾರೆ. ಡಾ ಶಿವಾನಂದ ಅವರು 'ಶಬ್ದಮಣಿ ದರ್ಪಣ ವಿಳಾಸ' ಎಂಬ ಶಿರೋನಾಮೆಯಲ್ಲಿ ಕೇಶಿರಾಜನ ವ್ಯಾಕರಣ ಗ್ರಂಥಕ್ಕೆ ವಿವರಣೆ ನೀಡಿದ್ದಾರೆ. ಇದೇ ರೀತಿ ಎಚ್. ಎಸ್. ಬಿಳಗಿರಿಯವರು ಶಬ್ದಮಣಿದರ್ಪಣದ ಸಂಧಿ ಪ್ರಕರಣದವರೆಗೆ 'ಆಲೋಕ' ಎಂಬ ಶಿರೋನಾಮೆಯಲ್ಲಿ ಆಧುನಿಕ ಭಾಷಾ ಶಾಸ್ತ್ರಕ್ಕನುಗುಣವಾಗಿ ವಿವರಣೆ ನೀಡಿದ್ದಾರೆ. ಇವೇ ನಿಟ್ಟಿನಲ್ಲಿ ಅಬ್ದುಲ್‌ಬಷೀರ್ ಅವರು 'ದರ್ಪಣ ದೀಪಿಕೆ' ಗ್ರಂಥ ರಚಿಸಿದ್ದಾರೆ. ಡಾ. ಎಲ್ ಬಸವರಾಜು ಅವರು ಬಸವಣ್ಣನವರ ವಚನಗಳಿಗೆ ತಿರುಳುಗನ್ನಡದಲ್ಲಿ ವಿವರಣೆ ನೀಡಿದ್ದಾರೆ. ಈ ಆಧುನಿಕ ವ್ಯಾಖ್ಯಾನಕಾರರ ಸಾಲಿನಲ್ಲಿ ಎದ್ದು ಕಾಣುವ ಹೆಸರು ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳದ್ದು.

ಧಾರವಾಡ ಜಿಲ್ಲೆಯಲ್ಲಿರುವ ಮುಂಡರಗಿ ಅಲ್ಲಿನ ಸಾಹಿತ್ಯ ಚಟುವಟಿಕೆಗಳಿಂದ ಹೆಸರು ಪಡೆದಿದೆ. ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ ಸುಮಾರು ೬೦ ಕೃತಿಗಳನ್ನು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಪ್ರಕಟಿಸಿದೆ. ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು, ಸ್ವತಃ ಸಾಹಿತಿಗಳು, ಅನುಭಾವಿಗಳು, ದಾರ್ಶನಿಕರು. ಹೀಗಾಗಿ ಸಂಪಾದನೆ, ದರ್ಶನ ಸಾಹಿತ್ಯ ವ್ಯಾಖ್ಯಾನ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಸುಮಾರು ಇಪ್ಪತ್ತೆಂಟು ಕೃತಿಗಳನ್ನು ರಚಿಸಿರುವ ಪೂಜ್ಯರು ಅನೇಕ ಸಾಹಿತಿಗಳ ಕೃತಿಗಳನ್ನೂ ಪ್ರಕಟಿಸಿ ಪ್ರೋತ್ಸಾಹಿಸಿದ್ದಾರೆ. ಸಾಹಿತ್ಯಾಭಿರುಚಿಯುಳ್ಳ ಸ್ವಾಮಿಗಳವರು, ಕೇವಲ ಸ್ವಾಮಿಗಳಾಗಿರದೆ, ಧರ್ಮಚಿಂತನೆಯೊಂದಿಗೆ ಸಾಹಿತ್ಯ ಅಧ್ಯಯನವನ್ನೂ ಕೈಗೊಂಡು, ಸಾಹಿತ್ಯರಚನೆ, ಪ್ರಕಟಣೆ, ಪ್ರಸಾರ ಕಾರ್ಯಗಳನ್ನೂ ಹಮ್ಮಿಕೊಂಡಿರುವುದು ಅನುಕರಣೀಯ. ಮಠಾಧಿಪತಿಗಳು ಕೇವಲ ಧರ್ಮಚಿಂತಕರಾಗಿ, ಇಲ್ಲವೆ ರಾಜಕಾರಣಿಗಳಾಗಿ, ಇಲ್ಲವೆ ವ್ಯವಹಾರಿಗಳಾಗಿ ವರ್ತಿಸುತ್ತಿರುವ ಈ ಕಾಲದಲ್ಲಿ ಇಂತಹ ಒಬ್ಬ ಮಠಾಧಿಪತಿ ಇದ್ದಾರೆ ಎಂಬುದೇ ಸಂತೋಷದ ವಿಷಯ. ಸ್ವತಃ ಸಾಹಿತಿಗಳಾಗಿ, ಸಾಹಿತ್ಯ ಪೋಷಕರಾಗಿ, ಪ್ರಕಾಶಕರಾಗಿ, ಧರ್ಮಚಿಂತಕರಾಗಿ, ದಾರ್ಶನಿಕರಾಗಿ ಕೆಲಸ ನಡಸುತ್ತಿರುವ ಮುಂಡರಗಿ ಜಗದ್ಗುರುಗಳು ಅನ್ಯಮಠಾಧಿಪತಿಗಳಿಗೆ ಆದರ್ಶಪ್ರಾಯರಾಗಿದ್ದಾರೆ.

ಸ್ವಾಮಿಗಳವರು ತಮ್ಮ ಸಾಹಿತ್ಯ ವ್ಯವಸಾಯದಲ್ಲಿ ವ್ಯಾಖ್ಯಾನಕಾರರಾಗಿಯೂ ಕೆಲಸ ಮಾಡಿದ್ದಾರೆ. ಹೀಗಾಗಿ ಪೂಜ್ಯರು 'ಭಾವ-ಸೌರಭ' (೧೯೭೩); "ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ" (೧೯೮೧); 'ತಿರುಳು' (೧೯೮೭); 'ಅಲ್ಲಮಪ್ರಭುದೇವರ ನೂರೆಂಟು ವಚನಗಳು'-ಭಾವನಿರೂಪಣೆ (೧೯೯೧); ಅಕ್ಕಮಹಾದೇವಿಯವರ 'ಯೋಗಾಂಗ ತ್ರಿವಿಧಿ ವ್ಯಾಖ್ಯಾನ' (೧೯೯೨) ಎಂಬ ಐದು ವ್ಯಾಖ್ಯಾನ ಗ್ರಂಥಗಳನ್ನು ರಚಿಸಿದ್ದಾರೆ.

ಭಾವ-ಸೌರಭ (೧೯೭೩)

ಕನ್ನಡ ಸಾಹಿತ್ಯದಲ್ಲಿ ಅದರಲ್ಲಿಯೂ ವಾಗ್ಗೇಯಕಾರರಲ್ಲಿ ಪ್ರಮುಖ ಸ್ಥಾನ ಪಡೆದಿರುವ ನಿಜಗುಣ ಶಿವಯೋಗಿಗಳು 'ಅರುವತ್ತು ಮೂವರು ಪುರಾತನರ ತ್ರಿವಿಧಿ' ಯನ್ನು ರಚಿಸಿದ್ದಾರೆ. ವಿಶ್ವಸಾಹಿತ್ಯದಲ್ಲಿ ಕವಿಯಾಗಿ, ಯೋಗಿಯಾಗಿ, ಲೌಕಿಕ-ಪಾರಮಾರ್ಥಿಕ ಜ್ಞಾನಿಯಾಗಿ, ನಿಜಭಕ್ತನಾಗಿ ತನ್ನದೇ ಆದ ಸ್ಥಾನ ಗಳಿಸಿದ್ದಾರೆ ನಿಜಗುಣ ಶಿವಯೋಗಿಗಳು. 'ಸತ್ಯಂ ಶಿವಂ ಸುಂದರಂ' ತತ್ವದರ್ಶನವನ್ನು ಸರ್ವರಿಗೂ ವೇದ್ಯವಾಗುವಂತೆ ಓತಪ್ರೋತವಾಗಿ ಬೋಧಿಸಿದ ಮಹಾ ಮೇಧಾವಿಗಳು ನಿಜಗುಣರು.

ಪುರಾತನ ತ್ರಿವಿಧಿಯು ಶೈವಧರ್ಮದ ಆಧಿಕ್ಯವನ್ನು ಎತ್ತಿ ತೋರುವ ಕೃತಿಯಾಗಿದೆ. ಈ ಪುರಾತನರು ಶಿವನಲ್ಲಿ ಅನನ್ಯ ಪ್ರೇಮವನ್ನಿಟ್ಟು ಆ ಪರಮಾತ್ಮನ ದರ್ಶನ ಪಡೆದು ಗಣಪದವಿ ಗಳಿಸಿದವರು. ಇವರಲ್ಲಿ ಕೆಲವರು ಶೈವರು ಇನ್ನು ಕೆಲವರು ವೀರಶೈವರು.

ಮಹಿಮಾಶಾಲಿಗಳಾಗಿ, ಪರಮ ಪಾವನ ಚರಿತರಾದ ಇವರನ್ನು ಕುರಿತು ತಮಿಳಿನಲ್ಲಿ 'ಪೆಜಿಯಿಯ ಪುರಾಣ' ಕೃತಿರಚನೆಯಾಗಿದೆ. ಕನ್ನಡದಲ್ಲಿ ಹರಿಹರ ರಗಳೆಯ ರೂಪದಲ್ಲಿ ಇವರ ಚರಿತ್ರೆಯನ್ನು ನಿರೂಪಿಸಿದ್ದಾನೆ. ಸುರಂಗ ಚಂಪುವಿನಲ್ಲಿ; ವೀರಭದ್ರ ಕವಿವಾರ್ಧಕ ಷಟ್ಪದಿಯಲ್ಲಿ; ಶಿವಯೋಗಿ ಸೋಮೇಶ್ವರನು ಸಾಂಗತ್ಯದಲ್ಲಿ ಇವರ ಜೀವನ ಚಿತ್ರಿಸಿದ್ದರೆ, ಭೀಮಕವಿ, ವಿರೂಪಾಕ್ಷಪಂಡಿತ, ಲಕ್ಕಣದಂಡೇಶ, ಗುಬ್ಬಿಯ ಮಲ್ಲಣಾರ್ಯರು ತಮ್ಮ ಕಾವ್ಯಗಳಲ್ಲಿ ಇವರ ಚರಿತ್ರೆಯನ್ನು ಹೇಳಿದ್ದಾರೆ. ನಿಜಗುಣರು ತ್ರಿಪದಿ ರೂಪದಲ್ಲಿ ರಚಿಸಿರುವ ಈ ಕೃತಿಯನ್ನು ಪೂಜಾ ಸಮಯದಲ್ಲಿ ಅನೇಕರು ಪಾರಾಯಣ ರೂಪದಲ್ಲಿ ನಿತ್ಯವೂ ಪಠಿಸುವುದುಂಟು.

ಇಂತ ಅಮೂಲ್ಯ ಕೃತಿಗೆ ಪೂಜ್ಯರು ವಿವರಣೆ ನೀಡಿ ಅದರ ಭಾವ ಸೌರಭವನ್ನು ಸೂಸಿದ್ದಾರೆ. ಈ ತ್ರಿವಿಧಿಯಲ್ಲಿ ಬರುವ ಅರುವತ್ತು ಮೂವರು ಪುರಾತನರ ಜೀವನ ಚಿತ್ರ ಮತ್ತು ಅವರು ಶಿವನನ್ನು ಒಲಿಸಿಕೊಂಡ ಪರಿ; ಭಕ್ತಿಯ ಆಚರಣೆಗಳ ಬಗೆಗೆ ಸ್ಪಷ್ಟ ವಿವರಣೆಯನ್ನು ನೀಡಿದ್ದಾರೆ. ಈ ಕೃತಿಗೆ ಪ್ರಸ್ತಾವನೆಯನ್ನು ಬರೆಯುತ್ತ ಕನ್ನಡ ಸಾಹಿತ್ಯದಲ್ಲಿ ನಿಜಗುಣರ ಸ್ಥಾನದ ಮಹತ್ವವನ್ನು ಪರಿಚಯಿಸಿ, ಪುರಾತನರ ಕಾಲ ಪರಿಧಿ ಹಾಗೂ ಅವರ ಬಗೆಗೆ ಈ ವರೆಗೆ ಬಂದಿರುವ ಕೃತಿಗಳ ಪರಿಚಯ ಮಾಡಿ ಕೊಟ್ಟಿದ್ದಾರೆ. ಪದ್ಯರೂಪದ ತ್ರಿಪದಿಗಳಿಗೆ ತಾತ್ಪರ್ಯ ಮತ್ತು ಕಥೆಯನ್ನು ವಿವರಿಸಿ ವ್ಯಾಖ್ಯಾನಿಸಿದ್ದಾರೆ. ಈ ವ್ಯಾಖ್ಯಾನ ಗ್ರಂಥ ನಮಗೆ ಪುರಾತನರ ಜೀವನದ ಸ್ಪಷ್ಟ ಚಿತ್ರ ನೀಡುವುದಲ್ಲದೆ ಅವರ ಭಕ್ತಿಯ ನಿಷ್ಠೆಯನ್ನು ವಿವರಿಸುತ್ತದೆ. ಭಕ್ತಿಯನ್ನು ಆಚರಿಸುವ, ಸಂಸ್ಕೃತಿಯನ್ನು ಗೌರವಿಸುವ, ನೀತಿಯನ್ನು ಪಾಲಿಸುವ ಸಮುದಾಯಕ್ಕೆ ಇದು ನಿತ್ಯ ಪಾರಾಯಣ ಮಾಡತಕ್ಕ ಕೃತಿಯಾಗಿದೆ.

ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ (೧೯೮೧)

೧೮ನೇ ಶತಮಾನದ ಉತ್ತರಾರ್ಧದಲ್ಲಿ ಶಿವಭಕ್ತ ಹರದ ಮನೆತನದಲ್ಲಿ ಮೈಲಾರ ಬಸವಲಿಂಗ ಶರಣರು ಜನಿಸಿದರು. ಇವರು ಲಿಂಗ ನಾಯಕನಹಳ್ಳಿಯ ಶ್ರೀಮನ್ನಿರಂಜನ ಪ್ರಣವಸ್ವರೂಪಿ ಶ್ರೀ ಚನ್ನವೀರ ಮಹಾಶಿವಯೋಗಿಗಳ ಆಪ್ತ ಶಿಷ್ಯರಾಗಿದ್ದು, ಅವರ ಪೂರ್ಣ ಅನುಗ್ರಹಕ್ಕೆ ಪಾತ್ರರಾಗಿ ಶೂನ್ಯ ಸಂಪಾದನೆ (ಲಿಂಗಾಂಗ–ಸಾಮರಸ್ಯ)ಯನ್ನು ಬಾಳಿನಲ್ಲಿ ಅಳವಡಿಸಿಕೊಂಡ ಮಹಾಶಿವಶರಣರು. ಗುರು ಕೃಪೆಯಿಂದ ಶಿವಯೋಗ ವನ್ನು ಸಾಧಿಸಿದ ಈ ಮಹಾನುಭಾವರು ತಮ್ಮ ಪಕ್ಕೆ ತಾವು ನಿರ್ಲಿಪ್ತರಾಗದೆ ಸಾಧಕ ರೆಲ್ಲರೂ ಉದ್ಧಾರವಾಗಲೆಂಬ ದೃಷ್ಟಿಯಿಂದ "ಗುರು ಕರುಣ ತ್ರಿವಿಧಿ"ಯನ್ನು ರಚಿಸಿ ದ್ದಾರೆ. ಈ ತ್ರಿವಿಧಿಯಲ್ಲಿ ವೀರಶೈವ ಸಿದ್ಧಾಂತವನ್ನು ಕ್ರಮವಾಗಿ ತಿಳಿಸುತ್ತಾ ಕರ್ಮೇಂದ್ರಿಯಗಳಲ್ಲಿ ಇಷ್ಟಲಿಂಗ; ಜ್ಞಾನೇಂದ್ರಿಯಗಳಲ್ಲಿ ಪ್ರಾಣಲಿಂಗ; ಅಂತಃಕರಣದಲ್ಲಿ ಭಾವಲಿಂಗದ ಸಂಬಂಧವನ್ನು ಪ್ರತಿಪಾದಿಸಿದ್ದಾರೆ. ಅಷ್ಟಾವರಣಗಳಲ್ಲಿ ಅಡಗಿರುವ

ಅಂತರಾರ್ಥವು ಸಾಧಕರ ಆಚರಣೆಗೆ ದೊರಕುವಂತೆ ನಿರೂಪಿಸಿದ್ದಾರೆ. ಈ ಕೃತಿಯಲ್ಲಿ ಸಮಗ್ರ ವೀರಶೈವ ದಾರ್ಶನಿಕ ಸಿದ್ಧಾಂತ ಪ್ರತಿಪಾದಿತವಾಗಿದೆ. ಶಿವಕವಿಗಳಾದ ಬಸವಲಿಂಗ ಶರಣರ ವೈಚಾರಿಕತೆ, ಆಳವಾದ ಅನುಭವ, ತರ್ಕಬದ್ಧವಾದ ವಿಚಾರ ವಿಮರ್ಶೆಗಳು, ತತ್ವಸಿದ್ಧಾಂತಗಳ ಪ್ರತಿಪಾದನೆ ಸಮರ್ಥವಾಗಿ ಮೂಡಿಬಂದಿದೆ. ೩೩೩ ತ್ರಿಪದಿಗಳಲ್ಲಿ ಅಪಾರ ತತ್ವಸಿದ್ಧಾಂತವನ್ನು ಹಿಡಿದಿಡುವ ಸಾಹಸವನ್ನು ಶರಣರು ಮಾಡಿದ್ದಾರೆ. ಶರಣರು "ಷಟ್‌ಸ್ಥಲ ನಿರಾಭಾರಿ ವೀರಶೈವ ಸಿದ್ಧಾಂತ"; "ಶಿವಾನುಭವದರ್ಪಣ"; "ಲಿಂಗಪೂಜಾ ವಿಧಾನ" ಕೃತಿಗಳನ್ನು ರಚಿಸಿದ್ದಾರೆ.

'ಗುರುಕರುಣ ತ್ರಿವಿಧಿ'ಯಲ್ಲಿ ಬರುವ ಅರ್ಥ, ಭಾವ, ತತ್ವ ಸ್ತರಗಳು ನೇರವಾಗಿ ಓದುಗನಿಗೆ ವ್ಯಕ್ತವಾಗುವುದಿಲ್ಲ. ಇಲ್ಲಿ ಬಂದಿರುವ ತಾತ್ವಿಕ ವಿವೇಚನೆಗೆ ಅನುಭಾವದ ನೆಲೆಗಟ್ಟು ಬೇಕಾಗುತ್ತದೆ ಈ ಎಲ್ಲಾ ಅಂಶಗಳನ್ನು ಮನಗಂಡ ಶ್ರೀ ಅನ್ನದಾನೀಶ್ವರ ಜಗದ್ಗುರುಗಳವರು ಇಲ್ಲಿನ ತ್ರಿಪದಿಗಳಿಗೆ ತಾತ್ಪರ್ಯ, ತಾತ್ವಿಕ ವಿಚಾರಗಳ ವಿವರಣೆಯನ್ನು ತಮಗಿರುವ ಅನುಭಾವದ ಅಡಿಗಲ್ಲಿನ ಮೇಲೆ ಮಾಡಿ ಕೊಟ್ಟು ಓದುಗರಿಗೆ ಮಹದುಪಕಾರ ಮಾಡಿದ್ದಾರೆ. ಎರಡು ಬಾರಿ ಮೌನಾನುಷ್ಠಾನ ಮಾಡಿದಾಗ ಕೇವಲ ೫೧ ದಿವಸಗಳ ಅನುಷ್ಠಾನದ ಪ್ರತಿಫಲವಾಗಿ ಈ ಕೃತಿ ಮೂಡಿ ಬಂದಿದೆ. ಅನುಭಾವ ಪ್ರಪೂರ್ಣವಾದ ಗುರುಕರುಣ ತ್ರಿವಿಧಿಯನ್ನು ತಮ್ಮ ದಿವ್ಯಾನುಭಾವದ ಮೂಲಕ ಸರಳ ವಿವರಣೆಯನ್ನು ಉದಾಹರಣೆಗಳೊಂದಿಗೆ ನೀಡಿದ್ದಾರೆ. ಸರಳ ಸುಂದರ ಶೈಲಿ ಹೊಂದಿರುವ ಶ್ರೀಗಳು ಗಹನವಾದ ತತ್ವಗಳನ್ನು ಸುಲಭವಾಗಿ ಎಲ್ಲರಿಗೂ ತಿಳಿಯುವಂತೆ ಆಕರ ಗ್ರಂಥಗಳ ಉದಾಹರಣೆಯೊಂದಿಗೆ ಸಮನ್ವಯಗೊಳಿಸಿ ವಿವರಿಸಿದ್ದಾರೆ.

ಈ ವ್ಯಾಖ್ಯಾನ ಕೃತಿ ಕೇವಲ ಪ್ರತಿಪದಾರ್ಥ ಹೇಳುವ ಟೀಕಾ ಗ್ರಂಥವಲ್ಲ. ತ್ರಿಪದಿಗಳ ಭಾವಾರ್ಥ, ತಾತ್ಪರ್ಯ, ತಾತ್ವಿಕಾರ್ಥಗಳ ಸ್ತರದಲ್ಲಿ ವ್ಯಾಖ್ಯಾನ ಮುಂದುವರೆದು ದಾರ್ಶನಿಕ ನಿಲವನ್ನು ಬಿಡಿಸಿ ತೋರುವ ಕ್ರಿಯೆಯಲ್ಲಿ ತೊಡಗುತ್ತದೆ. ತಮ್ಮ ವಿವರಣೆಗೆ ಸಂಸ್ಕೃತ, ಕನ್ನಡ ಮತ್ತು ಇತರ ಭಾಷಾ ಗ್ರಂಥಗಳಿಂದ ಉದಾಹರಣೆಗಳನ್ನು ಹೆಕ್ಕಿ ಉದ್ಧರಿಸಿರುವುದು ಶ್ರೀಗಳವರ ಅಭ್ಯಾಸದ ಹರಹನ್ನು ಸೂಚಿಸುತ್ತದೆ. ಈ ವ್ಯಾಖ್ಯಾನ ವಿವರಣೆಯನ್ನು ಓದುತ್ತಾ ಹೋದಂತೆ ಗುರುತತ್ವ ಪರಿಕಲ್ಪನೆ ಯಾರಿಗಾದರೂ ಸಹಜವಾಗಿ ಉಂಟಾಗುತ್ತದೆ. ಗುರುಕರುಣ ತ್ರಿಪಿಧಿಯ ಆತ್ಮಶ್ರೀಯನ್ನು ಬಿಡಿಸಿ ತೋರುವ ಈ ಕೃತಿ ಕನ್ನಡ ತತ್ವ ಸಾಹಿತ್ಯಕ್ಕೆ ಒಂದು ಅಮೂಲ್ಯವಾದ ಕೊಡುಗೆ. ಶ್ರೀಗಳವರಿಗೆ 'ದರ್ಶನ ಸಾಹಿತಿ' ಗೌರವವನ್ನು ಹೊತ್ತು ತಂದಿತ್ತ ಕೃತಿಯಾಗಿದೆ.

ಈ ವ್ಯಾಖ್ಯಾನ ಗ್ರಂಥದ ಸತ್ವವನ್ನು ಮನಗಂಡ ಧಾರವಾಡ ಮುರಘಾಮಠದ ಶ್ರೀ ಮಹಾಂತಪ್ಪಗಳು ಈ ಕೃತಿ ಸಂಶೋಧನ ಪ್ರಬಂಧವೆಂದು ಭಾವಿಸಿ ಜಗದ್ಗುರುಗಳನ್ನು ಸತ್ಕರಿಸಿ 'ಧರ್ಮಭಾಸ್ಕರ" ಎಂಬ ಪ್ರಶಸ್ತಿಯನ್ನು ಸಲ್ಲಿಸಿದರು. ಶ್ರೀ ಜಗದ್ಗುರು

ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು, ವೀರಶೈವ ಉತ್ತಮ ಗ್ರಂಥ ಮಾಲಿಕೆಯಲ್ಲಿ ೧೫೦೧ ರೂ.ಗಳನ್ನಿತ್ತು ಪುರಸ್ಕರಿಸಿದ್ದಾರೆ. ಹಿರೇವಡ್ಡಟ್ಟಿಯ ಶಾಖಾ ಮಠ ದಲ್ಲಿ ಪುರಾಣ ಮಂಗಲದ ಅಂಗವಾಗಿ ಈ ಕೃತಿಯನ್ನು ಆನೆಯ ಮೆರವಣಿಗೆ ಮಾಡಿಸಿದು ಈ ಕೃತಿಯು ಸತ್ವದ ಪ್ರತೀಕ. ಇಂತಹ ದಾರ್ಶನಿಕ ಕೃತಿ ಎರಡನೆಯ ಮುದ್ರಣ ಕಂಡಿರು ವುದು ಇದರ ಜನಪ್ರಿಯತೆಯ ದ್ಯೋತಕ.

ತಿರುಳು (೧೯೮೭)

'ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ'ವು ಬೃಹತ್ ಕೃತಿ ಯಾಗಿ ಪ್ರಕಟಗೊಂಡಿದ್ದು ಅದರ ದ್ವಿತೀಯ ಮುದ್ರಣ ಕಷ್ಟ ಸಾಧ್ಯವೆಂದಾದಾಗ ಓದುಗರಿಗೆ ಸಾಧಕರಿಗೆ ತ್ರಿವಿಧಿಯ ತಿರುಳನ್ನು ತಿಳಿಸಲು ೧೧೧ ತ್ರಿಪದಿಗಳನ್ನು ಆಯ್ದು 'ತಿರುಳು' ವ್ಯಾಖ್ಯಾನ ಕೃತಿಯನ್ನು ಸಿದ್ಧಪಡಿಸಲಾಗಿದೆ. ಇಂದಿನ ಅವಸರ ಯುಗದಲ್ಲಿ ಬೃಹತ್ ಕೃತಿಗಳನ್ನು ಓದುವ ವ್ಯವಧಾನ ಓದುಗನಿಗೆ ಕಡಿಮೆ. ಹೀಗಿರುವಲ್ಲಿ ಕಬ್ಬಿಣದ ಕಡಲೆಯಂತಹ ದರ್ಶನ ಕೃತಿಗಳನ್ನು ಓದುವುದಿರಲಿ ತೆರೆದು ನೋಡಲೂ ವೇಳೆಯಿಲ್ಲವಾಗುತ್ತದೆ. ತತ್ವ ಜಿಜ್ಞಾಸುಗಳಾದ ಕೆಲವರಿಗಾದರೂ ವೀರಶೈವ ಧರ್ಮವನ್ನು ಅರಿಯಲು ಈ 'ತಿರುಳು' ವ್ಯಾಖ್ಯಾನ ಕೃತಿ ಕೈಗನ್ನಡಿಯಾಗಿದೆ. ಕಿರಿದರೊಳ್ ಪಿರಿದರ್ಥವನ್ನು ಹಿಡಿದಿಟ್ಟಿರುವ ಗುರುಕರುಣ ತ್ರಿವಿಧಿಯನ್ನು ಕರಿಯು ಕನ್ನಡಿಯೊಳು ಅಡಗಿದಂತೆ ಇಲ್ಲಿ ವಿವರಣೆ ನೀಡ ಲಾಗಿದೆ. ಅಲ್ಪದರಲ್ಲಿ ಕಲ್ಪವನ್ನು ಕೆತ್ತಿರುವ ಮಹಾ ಶಿಲ್ಪವಾಗಿದೆ. ಈ ಕೃತಿಯ ಅಧ್ಯಯನ ತತ್ವ ಜಿಜ್ಞಾಸುಗಳಿಗೆ ತೃಪ್ತಿ ನೀಡುವಲ್ಲಿ ಬಸವಲಿಂಗ ಶರಣರ ಆಧ್ಯಾತ್ಮ ಚಿಂತನ ವನ್ನು ಪರಿಚಯಿಸುವಲ್ಲಿ ಸಾರ್ಥಕತೆಯನ್ನು ಪಡೆದಿದೆ.

ಉದಾಹರಣೆಗಾಗಿ 'ಲಿಂಗಾಂಗಯೋಗ' ಎಂಬ ಶೀರ್ಷಿಕೆಯಲ್ಲಿ ಮೂರು ತ್ರಿಪದಿ ಗಳಿಗೆ ಪೂಜ್ಯರು ನೀಡಿರುವ ವಿವರವನ್ನು ಗಮನಿಸೋಣ.

ಹಲವು ಯೋಗವ ಮಾಡಿ ಫಲವೇನು ಮಗನೆ ಎಂ-
ದೊಲಿದು ಲಿಂಗಾಂಗ-ಸುಲಭಯೋಗವ ನೋಡ
ಗಲಿಸಿದಾ ಗುರುವೆ ಕೃಪೆಯಾಗು.
ಈ ಲಿಂಗ ನಿನ್ನಂಗ ಕಾ ಲಿಂಗನವಾಗಲ್ಕೆ
ನೀ ಲಿಂಗ ನಿನ್ನ ಮೈಲಿಂಗ ವೆಂದೆನ್ನೊಳ್
ಕೀಲಿಸಿದ ಗುರುವೆ ಕೃಪೆಯಾಗು.
ಈ ಲಿಂಗವನು ಭಕ್ತಿಶೀಲ ನೇಮಗಳಿಂದ
ಓಲೈಸು ನಿನಗೆ ಮೇಲು ಪದವಹುದೆಂದು
ಪಾಲಿಸಿದ ಗುರುವೆ ಕೃಪೆಯಾಗು.

ಇವು ಮೂರು ತ್ರಿಪದಿಗಳಲ್ಲಿ ಬಸವಲಿಂಗ ಶರಣರು ಲಿಂಗಾಂಗ ಸಾಮರಸ್ಯವನ್ನು

ನಿರೂಪಿಸಿದ್ದಾರೆ, ಇವುಗಳಿಗೆ ಪೂಜ್ಯ ಅನ್ನದಾನೀಶ್ವರ ಸ್ವಾಮಿಗಳವರು ಕೊಡುವ ವಿವರಣೆ ಇಂತಿದೆ.

ಶಿವಕವಿ ತನ್ನ ಸ್ವಾನುಭಾವದಿಂದ ಅಷ್ಟಾಂಗ ಯೋಗಗಳಿಗಿಂತ, ತಾಂತ್ರಿಕ ಮುದ್ರೆಗಳಿಗಿಂತ ಲಿಂಗಾಂಗ ಯೋಗವೇ ಸುಲಭ ಸಹಜವೆಂಬುದನ್ನು ತಾತ್ವಿಕವಾಗಿ ಬಿತ್ತರಿಸುತ್ತಾನೆ.

"ಕರುಣಾಳು ಗುರು ಒಲುಮೆಯಿಂದ ಲಿಂಗಾಂಗಯೋಗವನ್ನು ಬೋಧಿಸುತ್ತಾನೆ. ಶಿಷ್ಯನೇ! ಕೇಳು. ಲಿಂಗಾಂಗಯೋಗ ಸುಲಭ ಹಾಗೂ ಸಹಜ. ನಾಲ್ಕು ಯೋಗಗಳಲ್ಲಿ ರಾಜಯೋಗ ಮಿಗಿಲೆನಿಸಿದರೆ ಅದಕ್ಕಿಂತ ರಾರಾಜಿಸುವ ಯೋಗ ಲಿಂಗಾಂಗಯೋಗ ಅಥವಾ ಶಿವಯೋಗ, ಇದರಲ್ಲಿ ಎಲ್ಲ ಯೋಗಗಳ ಸಾರ ಅಡಕವಾಗಿದೆ. ಕಾರಣ ಇದನ್ನು ರಾಜಯೋಗವೆಂದು ಅನುಭವಿಗಳು ಕರೆದರು. ನೋಡು, ಈ ನಿನ್ನ ಇಷ್ಟ ಲಿಂಗವು ನಿನ್ನ ಅಂಗವನ್ನು ಆಲಂಗಿಸುತ್ತಲೇ ನಿನ್ನ ಅಂಗಾಂಗಗಳನ್ನೆಲ್ಲ ಲಿಂಗಮಯವನ್ನಾಗಿಸುವುದು. ಒಳಹೊರಗೆ ಲಿಂಗ ಚೈತನ್ಯ ತುಂಬಿ ತುಳುಕುವುದು. ಇಷ್ಟಲಿಂಗವು ಸಾಮಾನ್ಯ ವಸ್ತುವಲ್ಲ· ಇದು ಸಮ್ಯಕ್ ಜ್ಞಾನಕ್ಕೆ ತವರು. ಸತ್ಕ್ರಿಯೆಗಳಿಗೆ ಮೂಲವೆನಿಸಿದೆ ಆದ್ದರಿಂದ ಈ ಲಿಂಗ ಪೂಜೆಯನ್ನು ಸಮ್ಯಕ್ ಜ್ಞಾನವುಳ್ಳವನಾಗಿ ಸತ್ಕ್ರಿಯೆಗಳಿಂದ ಮಾಡಬೇಕು. ಮೂರು ವೇಳೆಯಲ್ಲಿ ಲಿಂಗಪೂಜೆಯನ್ನು ತಪ್ಪದೆ ಮಾಡುವದರಿಂದ, ಅಪಮೃತ್ಯು-ಕಾಲ-ಕರ್ಮಗಳು ದೂರಾಗುತ್ತವೆ. ಭಕ್ತಿ-ಶೀಲ-ನೇಮಗಳಿಂದ ಲಿಂಗ ಪೂಜೆಯನ್ನು ಮಾಡಬೇಕು. ಸಾಲೋಕ್ಯ-ಸಾಮೀಪ್ಯ-ಸಾರೂಪ್ಯ-ಸಾಯುಜ್ಯಗಳೆಂಬ ನಾಲ್ಕು ಮುಕ್ತಿಗಳೂ ಸಹ ಲಿಂಗಾಂಗ ಸಮರಸ ಪದವಿಗೆ ಸರಿಬರುವುದಿಲ್ಲ. ಇಷ್ಟಲಿಂಗ ಪೂಜೆಯಿಂದ ಶಿವನ ಷಟ್ ಶಕ್ತಿಗಳ ಆವಿಷ್ಕಾರವುಂಟಾಗುವುದು. ಶಿವಲಿಂಗವೇ ತಾನಾಗುವ ಲಿಂಗಾಂಗಯೋಗವನ್ನು ಭಕ್ತಿ-ಶೀಲ-ನೇಮಗಳಿಂದ ತಪ್ಪದೆ ಸಾಧಿಸಬೇಕು." ಈ ವಿವರಣೆ ಬಸವಲಿಂಗ ಶರಣರ ಲಿಂಗಾಂಗಯೋಗವನ್ನು ನಮ್ಮ ಅಂತರಂಗಕ್ಕೆ ತಲುಪಿಸುವಲ್ಲಿ ಸಾರ್ಥಕವಾಗಿದೆ.

ಅಲ್ಲಮಪ್ರಭುಗಳ ನೂರೆಂಟು ವಚನಗಳು (ಭಾವ ನಿರೂಪಣೆ) (೧೯೯೧)

ವಚನ ಸಾಹಿತ್ಯ ಚರಿತ್ರೆಯಲ್ಲಿ ಪ್ರಜ್ವಲಿಸುವ ಹೆಸರು ಅಲ್ಲಮನದ್ದು. ಕೇವಲ ವಚನಕಾರನಾಗಿರದೆ ಅನುಭಾವ ಕವಿಯಾಗಿಯೂ ಅಲ್ಲಮ ಹೆಸರು ಶಾಶ್ವತ. ಬೆಡಗಿನ ಶೈಲಿಯಲ್ಲಿಯೂ ಪಳಗಿದ ಕೈ ಅಲ್ಲಮನದು. ಜಗತ್ತಿನ ಅನುಭಾವ ಕವಿಗಳ ಸಾಲಿನಲ್ಲಿ ಧ್ರುವತಾರೆಯಂತೆ ಹೊಳೆವ ಅನುಭಾವ ಕವಿ ಅಲ್ಲಮ. ಅನುಭಾವ ಸಿದ್ಧಿಯಿಲ್ಲದವರಿಗೆ ಈತನ ವಚನಗಳು ಸುಲಭ ಗ್ರಾಹ್ಯವಲ್ಲ. ಈತನ ವಚನಗಳಿಗೆ ಅನೇಕ ತತ್ವವೇತ್ತರು ವ್ಯಾಖ್ಯಾನಗಳನ್ನು ರಚಿಸಿದ್ದಾರೆ. ಪ್ರಸ್ತುತದಲ್ಲಿ ಮುಂಡರಗಿ ಜಗದ್ಗುರುಗಳವರು ಅಲ್ಲಮನ ೧೦೮ ವಚನಗಳನ್ನು ಆಯ್ದು ವ್ಯಾಖ್ಯಾನಿಸಿದ್ದಾರೆ. ಈ ನೂರೆಂಟು ವಚನಗಳಲ್ಲಿ, ಪರಮಾತ್ಮನ ನಿಲವು, ಅನುಭಾವ, ಗುರುಮಹಿಮೆ, ಅಂಗ_ಲಿಂಗಗಳ ಸಂಬಂಧ: ಭಕ್ತ ಲಕ್ಷಣ, ಜಂಗಮ ಮಹಿಮೆ, ಶರಣನ ಹಿರಿಮೆಯ ಚಿತ್ರಗಳೊಂದಿಗೆ ಮಾಯಾ

ವಿಡಂಬನೆ, ಸಂಸಾರ ಸಹಜ ಚಿತ್ರವೂ ಮೂಡಿ ಬಂದಿದೆ. ಒಂದು ಉದಾಹರಣೆಯನ್ನು ಗಮನಿಸೋಣ.

ಅಡವಿಯಲೊಂದು ಮನೆಯ ಮಾಡಿ
ಆಶ್ರಯವಿಲ್ಲದಂತಾಯಿತ್ತು
ನಡುನೀರ ಜ್ಯೋತಿಯವಾಯುವಿನ
ಕೈಯಲ್ಲಿ ಕೊಟ್ಟಂತಾಯಿತು ಗುಹೇಶ್ವರ
ನಿಮ್ಮ ಶರಣರ ಎರವಿನ ಲಿಂಗ ಮೂರು ಲೋಕಕ್ಕೆ

ಅಲ್ಲಮನ ಈ ವಚನಕ್ಕೆ ಶ್ರೀಗಳವರ ಭಾವ ವಿವರಣೆ ಇಂತಿದೆ. "ಇಲ್ಲಿ ಅಡವಿ ಎಂದರೆ ಭವಾರಣ್ಯ. ಈ ಹುಟ್ಟು ಸಾವಿನ ಭವಾರಣ್ಯದೊಳಗೆ ಜೀವನು ಕಾಯವೆಂಬ ಮನೆಯನ್ನು ತಾನೇ ಅನುಗೊಳಿಸಿದರೂ ಜೀವ ಭಾವ ಹಿಂಗುವುದಿಲ್ಲ. ಹೀಗಾಗಿ ಲಿಂಗಭಾವ ದೊರಕೊಳ್ಳದೆ ಆಶ್ರಯವಿಲ್ಲದಂತಾಗುವನು. ಲಿಂಗದ ಆಧಾರ ಲಭ್ಯವಾಗದೆ ಪುನಃ ಪುನಃ ಭವಾರಣ್ಯದಲ್ಲಿ ಅಲೆದಾಡಬೇಕಾಗುವದು. ನೀರ ಶಬ್ದದ ಅರ್ಥ ಮನಸ್ಸು. ಆ ಮನಸ್ಸಿನ ಮಧ್ಯದೊಳಗಿರುವ ಜ್ಞಾನ ಜ್ಯೋತಿಯು ಪ್ರಾಣವಾಯು ವಿಕಾರದಿಂದ ಅಳಿಯುವದು. ಜ್ಞಾನ ಬೆಳಕು ಆರುವದು. ಆದರೆ ಗುಹೇಶ್ವರನ ಶರಣರು ಪ್ರಾಣ ವಾಯುವಿನ ವಿಕಾರ ವನ್ನು ಕಳೆದುಕೊಂಡು ಪ್ರಾಣಲಿಂಗಿಗಳಾಗಿ ಲಿಂಗದಲ್ಲಿ ಅನ್ಯೋನ್ಯ ಪ್ರೇಮವುಳ್ಳವರಾಗಿ ಮೂರು ಲೋಕದಲ್ಲಿ ಶ್ರೇಷ್ಠರೆನಿಸುವರು". ಈ ವಿವರಣೆ ಶರಣನ ನಿಲವನ್ನು ಸ್ಪಷ್ಟ ಗೊಳಿಸುವುದು.

ಯೋಗಾಂಗ ತ್ರಿವಿಧಿ ವ್ಯಾಖ್ಯಾನ ೧೯೬೨

ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ ಹೆಸರೇ ಸೂಚಿಸುವಂತೆ ಶಿವಯೋಗದ ಎತ್ತರ ಬಿತ್ತರಗಳನ್ನು ವಿವರಿಸುವ ವಿಶಿಷ್ಟ ಕೃತಿಯಾಗಿದೆ. ವಚನಕಾರ್ತಿಯಾಗಿ, ಕನ್ನಡದ ಮೊದಲ ಕವಯಿತ್ರಿಯಾಗಿ ಭಾವಗೀತೆಗಳಂತಹ ವಚನಗಳನ್ನು ರಚಿಸಿಕೊಟ್ಟ ಅಕ್ಕಮಹಾದೇವಿ ಭಾರತೀಯ ಪರಂಪರೆಯ ಯೋಗಶಾಸ್ತ್ರದ ಸಾಗರವನ್ನು ವೀರಶೈವ ಪರಿಭಾಷೆಯಲ್ಲಿ ಹಿಡಿದಿಟ್ಟ ಚಿಕ್ಕ-ಚೊಕ್ಕ ಕೃತಿಯನ್ನು ನೀಡಿದ್ದಾಳೆ. ಅನುಭಾವ ಕಾವ್ಯವೆನ್ನುವ ಪಟ್ಟವನ್ನು ಹೊಂದಿರುವ ಈ ಕೃತಿ ಆಡು ಮಾತಿನಲ್ಲಿ ಯೋಗತತ್ವ, ವೀರಶೈವ ಸಾಧನ ಮಾರ್ಗವನ್ನು ವಿವರಿಸುತ್ತದೆ. ಸಂಕೇತ, ಪ್ರತಿಮೆ, ಪ್ರತೀಕಗಳ ಮೂಲಕ ಪರಿಪ್ಲುತವಾದ ಅಕ್ಕನ ಯೋಗಾಂಗ ತ್ರಿವಿಧಿಗೆ ಶ್ರೀ ಚನ್ನಮಲ್ಲಿಕಾರ್ಜುನರು ತಾತ್ಪರ್ಯವನ್ನು ೧೯೪೯ರಲ್ಲಿಯೇ ರಚಿಸಿದ್ದರು. ಇದನ್ನು ಗಮನಿಸಿ ಅಕ್ಕನ ಈ ತ್ರಿವಿಧಿಯ ತಾತ್ವಿಕ ಮೌಲವನ್ನು ಮನಗೊಂಡ ಮುಂಡರಗಿ ಜಗದ್ಗುರುಗಳವರು ವಿಸ್ತಾರವಾದ ಭಾವಾನುವಾದವನ್ನು ವಚನ ಸಾಹಿತ್ಯ, ವೀರಶೈವ ಚಿಂತಾಮಣಿ, ಶಿವಯೋಗ ಪ್ರದೀಪಿಕೆ, ಕೈವಲ್ಯ ದರ್ಪಣ, ಸರ್ವಜ್ಞನ ವಚನ, ಕೈವಲ್ಯ ಕಲ್ಪವಲ್ಲರಿ, ಪರಮಾರ್ಥ ಪ್ರಕಾಶಿಕೆ,

ಯೋಗತತ್ತ್ವೋಪನಿಷತ್ ಗ್ರಂಥಗಳಿಂದ ಪ್ರಮಾಣಗಳನ್ನು ಬಳಸಿ ವಿಷಯ ಪ್ರತಿಪಾದನೆ ಮಾಡಿದ್ದಾರೆ. ಭಾರತೀಯ ಯೋಗದರ್ಶನ ಹಾಗೂ ವೀರಶೈವ ದರ್ಶನಗಳ ಆಳವಾದ ಅಭ್ಯಾಸ ಹೊಂದಿರುವ ಪೂಜ್ಯರು ಅಕ್ಕನ ತ್ರಿವಿಧಿಯನ್ನು ವ್ಯಾಖ್ಯಾನಿಸುವಲ್ಲಿ ಪರಿಪೂರ್ಣ ಗೊಂಡಿದ್ದಾರೆ. ಇಷ್ಟಲಿಂಗ ಧ್ಯಾನದಿಂದ ಅರಿವಿನ ಮಾರ್ಗ ಶಿವಯೋಗದ ಕಡೆ ಸಾಗಲು ಅಕ್ಕ ಸೂಚಿಸಿರುವ ಶಿವಯೋಗ ಮಾರ್ಗವನ್ನು ಸಮರ್ಥವಾಗಿ ನಿರೂಪಿಸಿದ್ದಾರೆ.

ಒಂದು ಉದಾಹರಣೆಯನ್ನು ಗಮನಿಸೋಣ.

"ಅಷ್ಟಾವರಣದ ಹಣ್ಣು ಬಟ್ಟ ಬಯಲೊಳಗಿರಲು
ಅಷ್ಟಾಂಗಯೋಗವನು ಮಾಡಿ ಬಳಲುವರು
ದೃಷ್ಟಿ ಇಡುವುದನುವರೆದಿಹರು."

ಇದು ಅಕ್ಕನ ತ್ರಿವಿಧಿ. ಇಲ್ಲಿ ಶಿವಯೋಗವನ್ನು ಹೇಳಲಾಗಿದೆ. ಇದಕ್ಕೆ ಶ್ರೀಗಳು ಕೊಡುವ ಭಾವ ವಿವರ ಇಂತಿದೆ: "ವೀರಶೈವ ಸಿದ್ಧಾಂತ ತತ್ತ್ವನಿಷ್ಠವಾಗಿದೆ. ಅಷ್ಟಾವರಣವೇ ಅಂಗ. ಪಂಚಾಚಾರಗಳೇ ಪ್ರಾಣ. ಷಟ್‌ಸ್ಥಲವೇ ಆತ್ಮವುಳ್ಳದು. ನೆಲ, ಜಲ, ಅನಿಲ, ಆಕಾಶ, ಸೂರ್ಯ, ಚಂದ್ರ, ಆತ್ಮರೆಂಬ ಬಯಲು ಬ್ರಹ್ಮಾಂಡದ ಎಂಟು ತನುಗಳೇ ಪ್ರಸಾದ, ಪಾದೋದಕ, ಭಸ್ಮ, ರುದ್ರಾಕ್ಷ, ಮಂತ್ರ, ಗುರು, ಲಿಂಗ, ಜಂಗಮ ಎಂಬ ಎಂಟು ಆವರಣಗಳಾಗಿರುತ್ತವೆ. ಅರ್ಥಾತ್ ಇವೇ ಅಷ್ಟಾವರಣಗಳು ಅವುಗಳನ್ನು ಆಚರಣೆಯ ಮೂಲಕ ಅಳವಡಿಸಿಕೊಳ್ಳುತ್ತ ಆಂತರಿಕ ಸಾಧನೆಯೂ ಬಲಿಯಬೇಕು. ಈ ಅಷ್ಟಾವರಣದ ಹಣ್ಣು ಎಂದರೆ ಲಿಂಗವೇ! ನಿರಂಕಾರ ಪರವಸ್ತು, ಅರುಹಿನ ಕುರುಹು, ಚೈತನ್ಯದ ಚುಳುಕು ಇಷ್ಟಲಿಂಗವೇ! ಇಷ್ಟ-ಪ್ರಾಣ-ಭಾವವೆಂದು ಮೂರುತೆರನಾಗಿರುತ್ತದೆ. ಮೂರು ಶರೀರದಲ್ಲಿ. ಅಷ್ಟಾವರಣಕ್ಕೆ ಮೂಲವಾದುದು ಲಿಂಗ. ಇದು ಫಲವೂ ಹೌದು-ಹಣ್ಣಾಗುವ ಬಗೆಯನ್ನು ಮಹಾತ್ಮ ಬಸವಣ್ಣನವರು ಸುಂದರವಾಗಿ ಪ್ರತಿಪಾದಿಸಿದ್ದಾರೆ.

ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು.
ಆಚಾರವೆಂಬ ಕಾಯಾಯಿತ್ತು. ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ (೫೫)

ಅಷ್ಟಾವರಣದ ಹಣ್ಣು ಭಕ್ತಿಯೆಂಬ ಪೃಥ್ವಿಯಲ್ಲಿ ಮಾತ್ರ ಬೆಳೆಯಬಲ್ಲದು. ಈ ಅಷ್ಟಾವರಣ ವೃಕ್ಷಕ್ಕೆ ಗುರುವೇ ಬೀಜ. ಗುರುಬೀಜ ಅಂಕುರಿಸಿ ಪಲ್ಲವಿಸಿದರೆ ಲಿಂಗವೆಂಬ ಎಲೆಯಾಗುವುದು. ಲಿಂಗ ಎಲೆಗಳು ಬೆಳೆದಾಗ ವಿಚಾರ ಹೂ ಅರಳುವದು. ವಿಚಾರ ಹೂ ಅರಳಿ ಮಿಡಿಯಾಗಲು ಆಚಾರಬೇಕು. ವಿಚಾರ, ಜ್ಞಾನ, ಆಚಾರ-ಸತ್ಕ್ರಿಯೆ ಗಳಿಂದ ಅಷ್ಟಾವರಣ ಹಣ್ಣು ಪಕ್ವವಾಗುವದು. ಈ ಹಣ್ಣು ಇತರ ಹಣ್ಣುಗಳಂತೆ

ಕೊಳೆಯುವಂತಹುದಲ್ಲ. ಇದು ನಿಷ್ಪತ್ತಿಗೊಂಡ ಹಣ್ಣು. ಜ್ಞಾನ ಕ್ರಿಯೆಗಳ ಸಮ ಸಮುಚ್ಚಯದಿಂದ ಲಿಂಗಾಂಗ ಸಾಮರಸ್ಯ ಅರ್ಥಾತ್ ಶಿವಯೋಗ ಸಾಧ್ಯವಾಗುವದು. ಇಂಥ ಸುಲಭ ಸಾಧ್ಯವಾದ ಶಿವಯೋಗವನ್ನು ಸಾಧಿಸುವುದು ಬಿಟ್ಟು, ಕಷ್ಟಸಾಧ್ಯವೆನಿಸಿದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಯೆಂಬ ಹಠಯೋಗದ ಅಷ್ಟಾಂಗಯೋಗ ಸಾಧನೆ ಮಾಡಿ ಬಳಲುತ್ತಾರೆಂಬುದನ್ನು ಅಕ್ಕನವರು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಅಲ್ಲದೆ ಸುಲಭ ಸಾಧ್ಯವಾದ ದೃಷ್ಟಿಯೋಗ ವನ್ನು ಸಹ ಮರೆಯುತ್ತಾರೆಂಬುದನ್ನು ನಿರೂಪಿಸಿದ್ದಾರೆ. ಮೈಲಾರ ಬಸವಲಿಂಗ ಶರಣರು ಶಿವಯೋಗದ ಸುಲಭ ಸಾಧ್ಯತೆಯನ್ನು ಮನಂಬುಗುವಂತೆ ವಿವರಿಸಿದ್ದಾರೆ.

ಹಲವು ಯೋಗವಮಾಡಿ–ಫಲವೇನು ಮಗನೆ ಎಂ–
ದೊಲಿದು ಲಿಂಗಾಂಗ–ಸುಲಭಯೋಗವ ನೋಡ
ಗಲಿಸಿದ ಗುರುವೆ ಕೃಪೆಯಾಗು (೧೦೮–ಗು. ತ್ರಿ.)

"ಹಲವು ಯೋಗಗಳನ್ನು ಮಾಡಿ ಬಳಲುವುದಕ್ಕಿಂತ ಲಿಂಗಾಂಗ ಸುಲಭಯೋಗವೇ ದೃಷ್ಟಿ ಯೋಗವೆಂದರಿಯಬೇಕು. ಲಿಂಗದಲ್ಲಿ ದೃಷ್ಟಿಯಿರಿಸಿ ಸಾಧಿಸುವುದರಿಂದ ಲಿಂಗಾಂಗ ಸಾಮರಸ್ಯರೂಪ ಅಷ್ಟಾವರಣ ಹಣ್ಣು ನಿಷ್ಪತ್ತಿಗೊಂಡರೆ ಪರಮಾತ್ಮನ ಪ್ರೀತಿಗೆ ಪಾತ್ರ ವಾಗುವನು. ದೃಷ್ಟಿಯೋಗವಿಲ್ಲದೆ ಮಾಡುವ ಶಿವಪೂಜೆ ಪ್ರಯೋಜನಕಾರಿಯಾಗುವುದಿಲ್ಲ." ಈ ವಿವರಣೆ ಅಕ್ಕನವರ ಶಿವಯೋಗದ ಸಹಜ ಚಿತ್ರವನ್ನು ನೀಡುತ್ತದೆ.

ಶ್ರೀ ಜಗದ್ಗುರುಗಳ ವ್ಯಾಖ್ಯಾನ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದು ದಾಗಿದೆ. ಇಲ್ಲಿಯೂ ಟೀಕಾಗ್ರಂಥಗಳಲ್ಲಿನ ದೀರ್ಘ ವಿವರಣೆ, ನಾನಾ ಉದಾಹರಣೆಗಳ ನಿರೂಪಣೆ ಇದ್ದರೂ, ತಾತ್ವಿಕ ವಿಚಾರಗಳನ್ನು ಸ್ಪಷ್ಟಪಡಿಸುವಾಗ ಅವು ಅತಿಯೆನಿಸುವು ದಿಲ್ಲ. ಶ್ರೀಗಳವರ ಭಾಷೆ ಸರಳ, ಸಹಜ, ಸುಂದರ. ನಿರೂಪಣಾ ತಂತ್ರ ಓದುಗನನ್ನು ತನ್ನೆಡೆ ಸೆಳೆದುಕೊಳ್ಳುವಲ್ಲಿ ಸಾರ್ಥಕವಾಗಿದೆ. ಒಟ್ಟಿನಲ್ಲಿ ಕನ್ನಡ ತತ್ವ ವ್ಯಾಖ್ಯಾನ ಸಾಹಿತ್ಯದಲ್ಲಿ ಜಗದ್ಗುರುಗಳ ಕೃತಿಗಳು ಗಮನಾರ್ಹವಾದುವಾಗಿವೆ.

ಮುಂಡರಗಿ ಅನ್ನದಾನೀಶ್ವರ ಮಹಾಸ್ವಾಮಿಗಳ ಸಂಪಾದಿತ ಕೃತಿಗಳು

—**ಶ್ರೀ ಎನ್. ಬಸವಾರಾಧ್ಯ** ಬೆಂಗಳೂರು

ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಗಾಗಿ ನಾಡಿನ ಹಲವಾರು ಮಠಗಳೂ ಸಂಘ ಸಂಸ್ಥೆಗಳೂ ಮಹೋನ್ನತವಾದ ಸೇವೆಯನ್ನು ಸಲ್ಲಿಸಿರುವುದೂ ಸಲ್ಲಿಸುತ್ತಿರುವುದೂ ಸರ್ವವಿದಿತವಾದುದು. ಈ ದಿಸೆಯಲ್ಲಿ ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳ ಶ್ರೀಮಠ ಸಲ್ಲಿಸುತ್ತಿರುವ ಸೇವೆ ಗಮನಾರ್ಹವಾದುದು "ಈಗಿನ ಜಗದ್ಗುರುಗಳಾದ ಪೂಜ್ಯ ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು ಬಸವನ ಭಕ್ತಿ, ಚೆನ್ನಬಸವನ ಜ್ಞಾನ, ಅಲ್ಲಮನ ವೈರಾಗ್ಯ, ಸಿದ್ಧರಾಮನ ಭೂತಾನುಕಂಪೆ, ಮಡಿವಾಳ ಮಾಚಯ್ಯನ ನಿಷ್ಠೆಗಳನ್ನು ಮೈಗೂಡಿಸಿಕೊಂಡಿರುವ ಅಪೂರ್ವ ಗುಣಸಂಪನ್ನರು. ಜಗದ್ಗುರುಗಳವರು ಸ್ವತಃ ದೊಡ್ಡವಿದ್ವಾಂಸರು, ಬಹುಶ್ರುತರು• ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಪ್ರಬಂಧ ಸಾಹಿತ್ಯ (ಚಿಂತನಗಳು), ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ವಚನಗಳನ್ನು ರಚಿಸಿ ಆಧುನಿಕ ವಚನಕಾರರೆನಿಸಿದ್ದಾರೆ. ಕೆಲವು ಗ್ರಂಥಗಳನ್ನು ಸಂಪಾದಿಸಿದ್ದಾರೆ. ಪ್ರಾಚೀನ ಕೃತಿಗಳಿಗೆ ವ್ಯಾಖ್ಯಾನ ರಚಿಸಿದ್ದಾರೆ...." "ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕು ಒಂದು ಹಿಂದುಳಿದ ಪ್ರದೇಶ. ಅಲ್ಲಿನ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠವು ಅವಿರಳ ಜ್ಞಾನಿ ಶ್ರೀಚನ್ನಬಸವಣ್ಣನವರ ಭವ್ಯಪರಂಪರೆಯಲ್ಲಿ ಸಾಗಿ ಬಂದಿದೆ. ಶ್ರೀಮಠದ ಕೀರ್ತಿಯನ್ನು ಹೆಚ್ಚಿಸುವಲ್ಲಿ ಇಂದಿನ ಜಗದ್ಗುರುಗಳ ಪಾತ್ರ ಅಮೋಘವಾದುದು. ಪೂಜ್ಯರು ಸ್ವತಃ ವಿದ್ವಾಂಸರು, ತ್ರಿಭಾಷಾಪಂಡಿತರು. ಶ್ರೀ ಅನ್ನದಾನೀಶ್ವರ ಗ್ರಂಥಮಾಲೆಯ ಮೂಲಕ ೮೮ಕ್ಕೂ ಹೆಚ್ಚು ವಿವಿಧ ಪ್ರಕಾರದ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಆರು ಲಕ್ಷಕ್ಕೂ ಹೆಚ್ಚು ಹಣವನ್ನು ಕನ್ನಡ ನುಡಿ ಸೇವೆಗೆ ಸಲ್ಲಿಸಿ ಸುಮಾರು ಹತ್ತುಸಾವಿರ ಪುಟಗಳ ಸಾಹಿತ್ಯವನ್ನು ನೀಡಿರುವುದು ಅಭಿಮಾನಪಡತಕ್ಕ ಸಂಗತಿಯಾಗಿದೆ"—ಇಂತಹ ಶ್ರೀಗಳವರ ಪೀಠಾರೋಹಣ ರಜತಮಹೋತ್ಸವ ನಿಮಿತ್ತವಾಗಿ ಏರ್ಪಡಿಸಿರುವ ಶ್ರೀಸನ್ನಿಧಿಯವರ ಸಮಗ್ರ ಸಾಹಿತ್ಯ ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟದ್ದಕ್ಕೂ ಶ್ರೀಗಳವರ ದರ್ಶನ–ಸಂದರ್ಶನ ಭಾಗ್ಯ ಲಭಿಸುವಂತಾದುದಕ್ಕೂ ಪ್ರಪ್ರಥಮವಾಗಿ ಈ ಕಾರ್ಯಕ್ರಮದ ಸಂಚಾಲಕರನ್ನು ಅಭಿವಂದಿಸಬೇಕಾಗಿದೆ.

ಶ್ರೀಗಳವರ ಸಮಗ್ರ ಸಾಹಿತ್ಯ ಈ ಭಾಗದವರಿಗೆ ಪರಿಚಯವಾಗಬೇಕು ಎಂಬ

ಉದ್ದೇಶದಿಂದ ಏರ್ಪಡಿಸಿರುವ ವಿಚಾರಸಂಕಿರಣದಲ್ಲಿ ಪೂಜ್ಯರ ಸಂಪಾದಿತ ಕೃತಿಗಳನ್ನು ಕುರಿತು ಒಂದು ಪ್ರಬಂಧವನ್ನು ಮಂಡಿಸಬೇಕೆಂದು ಸಂಚಾಲಕರು ವಿಜ್ಞಾಪಿಸಿಕೊಂಡಿದ್ದಾರೆ. ಯಥಾಮತಿಯಾಗಿ ಈ ಕಾರ್ಯವನ್ನು ನಿರ್ವಹಿಸಲು ಪ್ರಯತ್ನಿಸುತ್ತೇನೆ. ನನ್ನ ವಿವೇಚನೆಗೆ ಸಂಚಾಲಕರು ಒದಗಿಸಿರುವ ಕೃತಿಗಳು: ೧. ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ತತ್ತ್ವಪ್ರತಿಪಾದಕ ವಚನಗಳು. ೨. ಷಟ್ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು. ೩. ಜಂಗಮ ಪುಂಗವ ಅಲ್ಲಮ ಪ್ರಭುದೇವರು–ಇವು ಮೂರು. ಇವುಗಳಲ್ಲಿ ಮೊದಲನೆಯದು ಚೆನ್ನಬಸವಣ್ಣನವರ ಸಮಗ್ರ ವಚನಗಳಿಂದ ಆಯ್ದ ೨೫೦ ವಚನಗಳ ಸಂಗ್ರಹ. ಎರಡನೆಯುದು ಉಳವಿಯಲ್ಲಿ ನಡೆದ ಚನ್ನಬಸವಣ್ಣನವರ ವಿಚಾರ ಸಂಕಿರಣದ ಲೇಖನಗಳ ಸಂಕಲನ. ಮೂರನೆಯದು ಬನವಾಸಿಯಲ್ಲಿ ನಡೆದ ಅಲ್ಲಮಪ್ರಭುದೇವರ ವಿಚಾರ ಸಂಕಿರಣದ ಲೇಖನಗಳ ಸಂಕಲನ.

ಪ್ರಾಚೀನ ಗ್ರಂಥಸಂಪಾದನಾ ನಿಯಮಾನುಸಾರ ಮೇಲಿನ ಕೃತಿಗಳನ್ನು ವಿಶ್ಲೇಷಣೆ ಮಾಡುವುದು ಸಾಧುವೂ ಅಲ್ಲ, ಸಾಧ್ಯವೂ ಇಲ್ಲ. ಕಾರಣ ಇವು ಆ ನಿಯಮಗಳಿಗೆ ಹೊರತಾದುವು. ಅಲ್ಲದೇ ಈ ಕೃತಿಗಳ ಸಂಪಾದಕರಾದ ಶ್ರೀಗಳು ನಿಯಮಾತೀತರು. ಹನ್ನೆರಡನೆಯ ಶತಮಾನದ ವಚನಕಾರರ ನೇತಾರರು ಬಸವಣ್ಣನವರಾದರೆ ಇವುಗಳ ಸೂತ್ರಧಾರರು ಚನ್ನಬಸವಣ್ಣ ಮತ್ತು ಅಲ್ಲಮಪ್ರಭುದೇವರು. ವೀರಶೈವಧರ್ಮದ ನೀತಿನಿಯಮಗಳ ನಿರ್ಣಾಯಕರು ಈ ಮಹನೀಯರು. ಈ ಇಬ್ಬರ ಬಗೆಗೆ ಅಪಾರವಾದ ಸಾಹಿತ್ಯ ಸೃಷ್ಟಿಯಾಗಿರುವುದು ಸರ್ವವಿದಿತ. ಬಹುತೇಕ ಎಲ್ಲ ವಚನಕಾರರೂ ಚೆನ್ನಬಸವಣ್ಣ ಮತ್ತು ಅಲ್ಲಮಪ್ರಭುವನ್ನು ಮುಕ್ತಕಂಠದಿಂದ ಸ್ಮರಿಸಿದ್ದಾರೆ. ಹಾಡಿ ಹೊಗಳಿದ್ದಾರೆ. ಬಸವಣ್ಣನವರು ಚನ್ನಬಸವಣ್ಣನನ್ನು ಕುರಿತು ಹೇಳಿರುವ ಈ ಮುಂದಿನ ವಚನಗಳು ಚನ್ನಬಸವಣ್ಣನ ಅಸಾಧಾರಣ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಂತಿದೆ:

ಗುರುವಿಗೆ ನೀನೆ ಕರ್ತ ಲಿಂಗಕ್ಕೆ ನೀನೆ ಕರ್ತ
ಜಂಗಮಕ್ಕೆ ನೀನೆ ಕರ್ತ ಪ್ರಸಾದಕ್ಕೆ ನೀನೆ ಕರ್ತ
ಉಪದೇಶಕ್ಕೆ ನೀನೆ ಕರ್ತ ಕೂಡಲಸಂಗಮದೇವರು
ಸಾಕ್ಷಿಯಾಗಿ ಎನಗೆಯೂ ನೀನೆ ಕರ್ತನಾದ ಕಾರಣ
ನಾನು ಬೇಕೆನಲಮ್ಮೆ ಬೇಡೆನಲಮ್ಮೆ ಕಾಣಾ ಚನ್ನಬಸವಣ್ಣಾ.

ಕಾಣಬಾರದ ಘನವ ಕರಸ್ಥಲದಲ್ಲಿ ತೋರಿದ
ಹೇಳಬಾರದ ಘನವ ಮನಸ್ಥಲದಲ್ಲಿ ತೋರಿದ
ಉಪಮಿಸಬಾರದ ಘನವ ನಿಮ್ಮ ತೃಪ್ತಿಯ ಮುಖದಲ್ಲಿ ತೋರಿದ
ಇಂತೀ ತ್ರಿವಿಧವು ಏಕಾರ್ಥವಾಗಿಹ ಭೇದವ
ಚನ್ನಬಸವಣ್ಣ ತೋರಿದನಾಗಿ ಆನುಬದುಕಿದೆನು ಕಾಣಾ ಕೂಡಲಸಂಗಮದೇವಾ.

ಅಲ್ಲಮ ಪ್ರಭುದೇವರ ಒಂದು ವಚನ ಇಂತಿದೆ:

ಆದಿಯಲ್ಲಿ ನೀನೆ ಗುರುವಾದ ಕಾರಣ ನಿನ್ನಿಂದ ಹುಟ್ಟಿತ್ತು ಲಿಂಗ
ಆದಿಯಲ್ಲಿ ನೀನೆ ಲಿಂಗವಾದ ಕಾರಣ ನಿನ್ನಿಂದ ಹುಟ್ಟಿತ್ತು ಜಂಗಮ
ಆದಿಯಲ್ಲಿ ನೀನೆ ಜಂಗಮನಾದ ಕಾರಣ ನಿನ್ನಿಂದ ಹುಟ್ಟಿತ್ತು ಪ್ರಸಾದ
ಆದಿಯಲ್ಲಿ ನೀನೆ ಪ್ರಸಾದಿಯಾದ ಕಾರಣ ನಿನ್ನಿಂದ ಹುಟ್ಟಿತ್ತು ಪಾದೋದಕ
ಇಂತಿ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ ಸ್ವರೂಪ ನೀನೆಯಾದ ಕಾರಣ
ಜಂಗಮ ಪ್ರಾಣಿಯಾಗಿ ಸದಾಚಾರಿಯಾದೆ ಅದು ಕಾರಣ
ನೀನೆ ಸರ್ವಾಚಾರ ಸಂಪನ್ನನಾಗಿ ಪೂರ್ವಾಚಾರಿ ನೀನೆಯಾದ ಕಾರಣ
ಗುಹೇಶ್ವರ ಲಿಂಗದಲ್ಲಿ ಚಂದಯ್ಯಂಗೆ ಲಿಂಗದ ನಿಜವ ತಿಳುಹಾ ಚನ್ನಬಸವಣ್ಣಾ.

ಕರ್ನಾಟಕ ವಿಶ್ವವಿದ್ಯಾನಿಲಯವು ಚನ್ನಬಸವಣ್ಣನವರ ೧೭೦೩ ವಚನಗಳನ್ನು ಪ್ರಕಟಿಸಿದೆ. ಪ್ರಸ್ತುತ ಶ್ರೀಗಳವರು ಸಂಪಾದಿಸಿರುವ "ಷಟ್ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ತತ್ತ್ವ ಪ್ರತಿಪಾದಕ ವಚನಗಳು" ಕೃತಿಯಲ್ಲಿ ೨೫೦ ವಚನಗಳನ್ನು ಸಮಾವೇಶ ಗೊಳಿಸಲಾಗಿದೆ. ತಲೆಬರಹದೊಂದಿಗೆ ಉತ್ತಮವಾದ ಹಾಗೂ ಉಪಯುಕ್ತವಾದ ವಚನಗಳ ಸಂಗ್ರಹ ಇಲ್ಲಿದೆ, ಸುಲಭವಾಗಿ ಓದುಗರಿಗೆ ಲಭ್ಯವಾಗಿದೆ.

ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ತತ್ತ್ವಪ್ರತಿಪಾದಕ ವಚನಗಳು

ಈ ಕೃತಿಯಲ್ಲಿ ಚನ್ನಬಸವಣ್ಣನವರ ೨೫೦ ವಚನಗಳನ್ನು ಆರಿಸಿ ಸೇರಿಸಲಾಗಿದೆ. ಸನ್ನಿಧಿಯ ಸೂಳ್ನುಡಿಯಲ್ಲಿ "ಶ್ರೀಮಠದ ಕರ್ತೃಗಳಿಗೆ ಕ್ರಿಯಾಘಟ್ಟಿಯನ್ನು ಆಶೀರ್ವದಿಸಿದ ಪರಮಗುರು ಶ್ರೀ ಚನ್ನಬಸವಣ್ಣನವರ ಜಂಗಮ ಕ್ಷೇತ್ರದಲ್ಲಿಯೇ ಈ ಮೊದಲನೆಯ ಉಪನ್ಯಾಸ ಮಾಲೆಯು ನಡೆಯಲೆಂದು ಆಶಿಸಿದಂತೆ ಪಂಡಿತರಿಗೆ ಸೂಕ್ತ ವಿಷಯಗಳನ್ನು ಮಂಡಿಸಲು ಸೂಚಿಸಲಾಯಿತು. ಇಂಥ ಸಂದರ್ಭದಲ್ಲಿ ಉಪನ್ಯಾಸಗಳೊಂದಿಗೆ ಮೌಲಿಕವಾದ ಕೃತಿಯ ಬಿಡುಗಡೆಗಾಗಿ ವಿಚಾರಿಸಿದಾಗ ಮಹಾಜ್ಞಾನನಿಧಿ ಚನ್ನಬಸವಣ್ಣನವರ ಜ್ಞಾನ ಸಂಪತ್ತಿನ ಒಂದಂಶ ಸಕಲರಿಗೆ ದೊರೆಯುವಂತಾಗಲೆಂದು ಈ "ತತ್ವಪ್ರತಿಪಾದಕ ವಚನಗಳು" ಎಂಬ ಕೃತಿಯನ್ನು ಹೊರತರುವ ಪ್ರಯತ್ನ ಮಾಡಬೇಕಾಯಿತು. ಅಲ್ಪ ಸಮಯದಲ್ಲಿಯೇ ಬೃಹತ್ ಗ್ರಂಥದಿಂದ ಆಯ್ದು ತಾತ್ವಿಕ ವಚನಗಳನ್ನೇ ಸಂಗ್ರಹಿಸಲಾಗಿದೆ. ತತ್ವದೃಷ್ಟಿಯನ್ನು ಆಚರಣೆಯ ವಿಧಾನಗಳನ್ನು ಷಟ್‌ಸ್ಥಲ ಸಿದ್ಧಾಂತವನ್ನು ಪರಿಚಯಿಸುವ ಉದ್ದೇಶದಿಂದ ವಚನಗಳನ್ನು ಸಂಗ್ರಹಿಸಿ ತಲೆಬರಹದೊಂದಿಗೆ ಪ್ರಕಟಿಸಲಾಗಿದೆ. ಸಮಯಾಭಾವದಿಂದ ಅವುಗಳಿಗೆ ವಿವರಣೆ ನೀಡಲಾಗಲಿಲ್ಲ. ಹೊಂದಾಣಿಕೆಯಲ್ಲಿಯೂ ಸಂಗತವಾಗಿಲ್ಲದಿರಬಹುದು" ಎಂದು ಹೇಳಲಾಗಿದೆ.

ಪ್ರಸ್ತುತ ಗ್ರಂಥದಲ್ಲಿ ಸೇರ್ಪಡೆಯಾಗಿರುವ ವಚನಗಳನ್ನು ಡಾ|| ಆರ್. ಸಿ. ಹಿರೇಮಠರು ಸಂಪಾದಿಸಿದ ಚನ್ನಬಸವಣ್ಣನವರ ಸಮಗ್ರ ವಚನಗಳ ಕೃತಿಯಿಂದ ಆರಿಸಿ

ಕೊಳ್ಳಲಾಗಿದೆ. ಚನ್ನಬಸವಣ್ಣನವರ ಮುದ್ರಿತ ವಚನಗಳ ಗ್ರಂಥದಿಂದ ಈ ತತ್ವಪ್ರತಿಪಾದಕ ವಚನಗಳನ್ನು ಆರಿಸಿಕೊಳ್ಳಲಾಗಿದೆ. ಪ್ರತಿಯೊಂದು ವಚನದಲ್ಲಿ ಪ್ರತಿಪಾದಿತವಾಗಿರುವ ವಿಷಯವನ್ನು ತಲೆಬರೆಹದೊಂದಿಗೆ ಸೂಚಿಸಿರುವುದು ಇದರ ವೈಶಿಷ್ಟ್ಯ. ಪ್ರಾಚೀನ ಗ್ರಂಥ ಸಂಪಾದನಾ ವಿಧಿವಿಧಾನಗಳನ್ನು ಈ ಕೃತಿಯ ಸಂಪಾದನೆಯಲ್ಲಿ ಪರಿಪಾಲಿಸಲಾಗಿಲ್ಲವಾದುದರಿಂದ ಈ ಕೃತಿಯನ್ನು ಸಂಪಾದನೆ ಎನ್ನುವುದಕ್ಕಿಂತ ಸಂಗ್ರಹ ಎನ್ನುವುದು ಸಮುಚಿತವಾಗುತ್ತದೆ. ಚನ್ನಬಸವಣ್ಣನವರ ಜ್ಞಾನಸಂಪತ್ತಿನ ಒಂದಂಶ ಸಕಲರಿಗೆ ದೊರೆಯುವಂತಾಗಲೆಂದು ಈ ತತ್ವಪ್ರತಿಪಾದಕ ವಚನಗಳನ್ನು ಸಂಗ್ರಹಿಸಲಾಗಿದೆ ಎಂಬ ಶ್ರೀಗಳವರ ಆಶಯ ನೆರವೇರಿದೆ ಎಂದಿಷ್ಟು ಮಾತ್ರ ಹೇಳಬಹುದಾಗಿದೆ.

ವಿಚಾರ ಸಂಕಿರಣದ ಪ್ರಬಂಧಗಳನ್ನು ಸಮುಚಿತವಾಗಿ ಸಂಪಾದಿಸುವುದು ತುಂಬ ಕಷ್ಟಕರವಾದುದು. ಯಾವ ವ್ಯಕ್ತಿಯ ವಿಷಯವಾಗಿ ವಿಚಾರ ಸಂಕಿರಣವನ್ನು ಏರ್ಪಡಿಸಲಾಗುವುದೋ ಆ ವ್ಯಕ್ತಿಯ ಸಮಗ್ರ ವಿಷಯಗಳನ್ನು ತಜ್ಞವಿದ್ವಾಂಸರಿಗೆ ವಹಿಸಿ ಮಂಡಿತವಾದ ಪ್ರಬಂಧಗಳನ್ನು ಅಗತ್ಯ ತಿದ್ದುಪಡಿಗಳೊಡನೆ ಹೊರತರಬೇಕಾದುದು ಸಂಪಾದಕರ ಜವಾಬ್ದಾರಿಯಾಗಿರುತ್ತದೆ. ಪ್ರಬಂಧಗಳಲ್ಲಿನ ಅರೆಕೊರೆಗಳನ್ನು ಲೋಪದೋಷಗಳನ್ನೂ ಸಂಪಾದಕರು ಅನಿವಾರ್ಯವಾಗಿ ಸರಿಪಡಿಸಬೇಕಾಗುತ್ತದೆ. ಪ್ರಕೃತ ಷಟ್ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ಕೃತಿಯ ಮಾಹಿತಿ ಇಂತಿದೆ.

ಷಟ್ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು

೧೯೯೦ ನವೆಂಬರ್ ೧೧, ೧೨ ಮತ್ತು ೧೩ರಂದು ಉತ್ತರಕನ್ನಡ ಜಿಲ್ಲೆಯ ಉಳವಿಯಲ್ಲಿ ಷಟ್ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರನ್ನು ಕುರಿತು ಸಮಗ್ರ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಆ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಸಂಪಾದಿಸಿ ಈ ಕೃತಿಯನ್ನು ಪ್ರಕಟಿಸಲಾಗಿದೆ. ಮೂರು ದಿನಗಳು ನಡೆದ ಈ ವಿಚಾರ ಸಂಕಿರಣದಲ್ಲಿ ಆರು ಗೋಷ್ಠಿಗಳೂ ಸಮಾರೋಪ ಸಮಾರಂಭವೂ ನಡೆದಿವೆ.

ಒಂದನೆಯ ಗೋಷ್ಠಿಯಲ್ಲಿ

೧. ಶರಣರ ಉದಯದ ಪೂರ್ವಕಾಲ –ಡಾ॥ ವೀರಣ್ಣ ರಾಜೂರು, ೨. ಮಹಾಜ್ಞಾನಿ ಚನ್ನಬಸವಣ್ಣನವರ ಜನನ–ಬಾಲ್ಯ ವಿವೇಚನೆ –ಡಾ॥ ಎಸ್. ಎಂ. ವೃಷಭೇಂದ್ರಸ್ವಾಮಿ, ೩. ಚನ್ನಬಸವಣ್ಣನವರನ್ನು ರೂಪಿಸುವಲ್ಲಿ ಅಕ್ಕನಾಗಮ್ಮನ ಪಾತ್ರ–ಪ್ರೊ. ವೀಣಾ ಹೂಗಾರ, ೪. ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ಜೀವನ ಹಾಗೂ ಸಾಧನೆ –ಮಹಾಲಿಂಗ ಯಾಳಗಿ. ಈ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ವಾಂಸರು ತಮ್ಮ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಎರಡನೆಯ ಗೋಷ್ಠಿಯಲ್ಲಿ

೫. ಅಪ್ಪಾವರಣ ಜೀವನದ ಅವಿಭಾಜ್ಯ ಅಂಗ–ಡಾ॥ ಪಂಚಾಕ್ಷರಿ ಹಿರೇಮಠ,

೭. ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ಇಷ್ಟಲಿಂಗ ಸಂಹಿತೆ–ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಸಂಸ್ಥಾನಮಠ, ೭. ಸರ್ವಾಚಾರ ಸಂಪತ್ತಿನ ಸಂಗ್ರಹ –ಶ್ರೀ ಶಿವಲಿಂಗ ಮಹಾಸ್ವಾಮಿಗಳು, ಶಿರ್ಶಿ, ಹಂದಿಗನೂರ, ೮. ಸರ್ವಾಚಾರ ಸಂಪತ್ತಿನ ಸಂಗ್ರಾಹಕ–ಶ್ರೀ ಯೋಗೀಶ ಯಡ್ರಾವಿ, ೯. ಷಟ್‌ಸ್ಥಲ–ಮೂಲ ಮತ್ತು ವ್ಯಾಪ್ತಿ –ಡಾ|| ಮಲ್ಲಿಕಾರ್ಜುನ ಪರಡ್ಡಿ. ಈ ವಿಷಯುಗಳನ್ನು ಕುರಿತು ವಿದ್ವನ್ಮಣಿಗಳೂ ಶ್ರೀಗಳವರೂ ಪ್ರಬಂಧಗಳನ್ನು ನಿರೂಪಿಸಿದ್ದಾರೆ.

ಮೂರನೆಯ ಗೋಷ್ಠಿಯಲ್ಲಿ

೧೦. ಶ್ರೀ ಚನ್ನಬಸವಣ್ಣನವರ ಕರಣಹಸಿಗೆ–ಶರೀರವಿಜ್ಞಾನ–ಡಾ||ಮೃತ್ಯುಂಜಯ ಮುಳಗುಂದ ಸರ್ಜನ, ೧೧. ಷಟ್‌ಚಕ್ರ ಹಾಗೂ ಸಕೀಲದ ವಚನಗಳು–ಪ್ರೊ. ಶರಣ ಬಸವರಾಜ ಬಿಸರಹಳ್ಳಿ, ೧೨. ತತ್ವಪ್ರತಿಪಾದಕ ಚನ್ನಬಸವಣ್ಣನವರು–ಶ್ರೀ ಕುಮಾರ ಸ್ವಾಮಿಗಳು ವಿರಕ್ತಮಠ, ಹಾನಗಲ್ಲ, ೧೩. ವೀರಶೈವ ತತ್ವಸಾಹಿತ್ಯಕ್ಕೆ ಚನ್ನಬಸವಣ್ಣನವರ ಕೊಡುಗೆ–ಡಾ|| ಬಿ. ವಿ. ಮಲ್ಲಾಪೂರ–ಈ ವಿಷಯಗಳಿಗೆ ಸಂಬಂಧಿಸಿದ ಪ್ರಬಂಧಗಳನ್ನು ವಿದ್ವಾಂಸರೂ ಶ್ರೀಗಳವರೂ ಸಾದರಪಡಿಸಿದ್ದಾರೆ.

ನಾಲ್ಕನೆಯ ಗೋಷ್ಠಿಯಲ್ಲಿ

೧೪. ವೀರಶೈವ ವಿಕಾಸಕ್ಕೆ ಚನ್ನಬಸವಣ್ಣನವರ ಕೊಡುಗೆ–ಪ್ರೊ. ಮಲ್ಲಿಕಾರ್ಜುನ ಹಿರೇಮಠ, ೧೫. ವೀರಶೈವದ ಗುರಿ–ಚನ್ನಬಸವಣ್ಣನವರ ದೃಷ್ಟಿಯಲ್ಲಿ ಶಿವಯೋಗ ಡಾ|| ನಿಜಲಿಂಗಮ್ಮ ಕೊಪ್ಪಳ, ೧೬. ಚನ್ನಬಸವಣ್ಣನವರು ಹಾಗೂ ಸಮಾಜ ಸುಧಾರಣೆ –ಡಾ|| ನಾರಾಯಣ ಧೂಳಖೇಡ, ೧೭. ಚನ್ನಬಸವಣ್ಣನವರ ವಚನಗಳಲ್ಲಿ ಮಾನವೀಯ ಮೌಲ್ಯಗಳು–ಪ್ರೊ. ಹೆ. ಜಿ. ಮಾರಿಹಾಳ–ಈ ವಿಷಯಗಳಿಗೆ ಸಂಬಂಧಿಸಿದ ಪ್ರಬಂಧಗಳು ಮಂಡಿತವಾಗಿವೆ.

ಐದನೆಯ ಗೋಷ್ಠಿಯಲ್ಲಿ

೧೮. ಜನಪದ ಸಾಹಿತ್ಯದಲ್ಲಿ ಚನ್ನಬಸವಣ್ಣ–ಡಾ|| ಬಸವರಾಜ ಮಲಶೆಟ್ಟಿ, ೧೯. ಅನುಭವಮಂಟಪದ ನೇತಾರ ಚನ್ನಬಸವಣ್ಣ–ಡಾ|| ಎಸ್. ಎಂ. ಹಿರೇಮಠ, ೨೦. ಶರಣರು ಕಂಡ ಚನ್ನಬಸವಣ್ಣ–ಪ್ರೊ. ಬಿ. ಎಸ್. ಪಾಟೀಲ—ಈ ವಿಷಯಗಳಿಗೆ ಸಂಬಂಧಿಸಿದ ಪ್ರಬಂಧಗಳನ್ನು ಸಾದರಪಡಿಸಲಾಗಿದೆ.

ಆರನೆಯ ಗೋಷ್ಠಿಯಲ್ಲಿ

೨೧. ಮಧ್ಯಕಾಲೀನ ವೀರಶೈವ ಕವಿಗಳ ಮೇಲೆ ಚನ್ನಬಸವಣ್ಣನವರ ಪ್ರಭಾವ –ಬ. ಸೋ. ಗೊರವರ, ೨೨. ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣದಲ್ಲಿ ಮೂಡಿ ಬಂದ ಚನ್ನಬಸವಣ್ಣನ ವ್ಯಕ್ತಿತ್ವ–ಪ್ರೊ. ಎಸ್. ಆರ್. ಗೌಡರ್, ೨೩. ಒಂದು

ಅವಲೋಕನ–ಡಾ|| ಎಚ್. ತಿಪ್ಪೇರುದ್ರಸ್ವಾಮಿಗಳ ಅವಿರಳ ಜ್ಞಾನಿ ಚನ್ನಬಸವಣ್ಣ–ಮಹಾಲಿಂಗ ಯಾಳಗಿ—ಈ ವಿಷಯಗಳ ಪ್ರಬಂಧಗಳು ಮಂಡಿತವಾಗಿವೆ.

ಸಮಾರೋಪ ಸಮಾರಂಭದಲ್ಲಿ

೨೪. ಸನ್ಮಾನಕ್ಕೆ ಪ್ರತಿ ಸೂಳ್ನುಡಿ–ಶ್ರೀ ಚಂದ್ರಶೇಖರ ಮಹಾಸ್ವಾಮಿಗಳು, ಹೊಸಮಠ, ೨೫. ಮುಖ್ಯ ಅತಿಥಿಗಳ ಸಮಾರೋಪ–ಡಾ|| ಎಚ್. ತಿಪ್ಪೇರುದ್ರಸ್ವಾಮಿಗಳು, ೨೬. ಸಮಾರೋಪ ಸಂದೇಶ–ಶ್ರೀ ಸುತ್ತೂರು ಜಗದ್ಗುರುಗಳು—ಈ ಸಂಬಂಧದ ಬರಹಗಳು ಪ್ರಕಟವಾಗಿವೆ.

ಸುಮಾರು ೪೦೦ ಪುಟಗಳಿರುವ ಈ ಹೊತ್ತಗೆಯಲ್ಲಿ ಚನ್ನಬಸವಣ್ಣನವರ ಜನನ ಬಾಲ್ಯ, ವಿದ್ಯಾಭ್ಯಾಸ, ಸಾಧನೆ, ಸಿದ್ಧಿಗಳನ್ನು ಅವರ ವಚನಗಳನ್ನೂ ಸಮಗ್ರವಾಗಿ ವಿವೇಚಿಸಲಾಗಿದೆ. ನಾಡಿನ ಹಲವಾರು ವಿದ್ವಾಂಸರು ತಮ್ಮ ಸದಭಿಪ್ರಾಯಗಳನ್ನು ಬರೆದು ತಿಳಿಸಿದ್ದಾರೆ. ಚನ್ನಬಸವಣ್ಣನವರ ಸಮಗ್ರ ದರ್ಶನವನ್ನು ಈ ಕೃತಿ ಸಮರ್ಥವಾಗಿ ಮಾಡಿಕೊಡುತ್ತದೆ. ಈ ಕೃತಿಯು ಪರಿಪೂರ್ಣತೆಗಾಗಿ "ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ಇಷ್ಟಲಿಂಗ ಸಂಹಿತೆ" ಎಂಬ ಪ್ರಬಂಧವನ್ನು ಅನ್ನದಾನೀಶ್ವರ ಮಹಾಸ್ವಾಮಿಗಳವರೇ ಸಾದರಪಡಿಸಿ ಕೃತಿಯಲ್ಲಿ ಸಮಾವೇಶಗೊಳಿಸಿದ್ದಾರೆ.

ಶೂನ್ಯಸಿಂಹಾಸನಾಧೀಶ್ವರನಾದ ಅಲ್ಲಮ ಪ್ರಭುದೇವರನ್ನು ಕುರಿತು ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳು ಮುಂತಾದ ವಿವರಗಳು ಇವು.

ಜಂಗಮಪುಂಗವ ಅಲ್ಲಮಪ್ರಭುದೇವರು

೧೯೯೧ ಅಕ್ಟೋಬರ್ ೨೭, ೨೮ ಮತ್ತು ೨೯ರಂದು ಬನವಾಸಿಯಲ್ಲಿ ನಡೆದ ಜಂಗಮಪುಂಗವ ಅಲ್ಲಮಪ್ರಭುದೇವರು ಸಮಗ್ರ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳು ಈ ಕೃತಿಯಲ್ಲಿ ಸಮಾವೇಶಗೊಂಡಿವೆ. ಮೂರುದಿನಗಳು ನಡೆದ ಈ ವಿಚಾರಸಂಕಿರಣದಲ್ಲಿ ಒಟ್ಟು ಐದು ಗೋಷ್ಠಿಗಳು ನಡೆದು ಹದಿನೇಳು ಪ್ರಬಂಧಗಳು ಮಂಡಿತವಾಗಿವೆ. ಆ ಪ್ರಬಂಧಗಳ ವಿವರ ಇಂತಿದೆ:

ಗೋಷ್ಠಿ ಒಂದು

೧. ಬನವಾಸಿಯ ನೋಟ–ಡಾ|| ಸಂಗಮೇಶ ಹಂಡಗಿ ಸವಿಲುಗುಂದ, ೨. ಜಂಗಮ ಪುಂಗವ ಅಲ್ಲಮಪ್ರಭುದೇವರು–ಡಾ|| ಕೆ. ಅಭಿಶಂಕರ, ೩. ಸ್ವಯವಚನಗಳಲ್ಲಿ ಸ್ವಯಂಭು –ಪ್ರೊ. ಮಹಾಲಿಂಗ ಯಾಳಗಿ, ೪. ಪ್ರಭುದೇವರ ಚರಿತ್ರೆ–ಒಂದು ಹೊಸಬೆಳಕು –ಪ್ರೊ. ವಿ. ವಿ. ಸಂಗಮದ, ೫. ಒಂದು ವಿವೇಚನೆ–ಅಲ್ಲಮಪ್ರಭು ಜೀವನ ಹಾಗೂ ಸಾಧನೆ–ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು.

ಗೋಷ್ಠಿ ಎರಡು

೬. ಅಲ್ಲಮಪ್ರಭುವಿನ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ–ಡಾ|| ಶ್ರೀಪಾದಶೆಟ್ಟಿ,

೭. ಅಲ್ಲಮನ ವಚನಗಳ ವಸ್ತುವಿನ್ಯಾಸ–ಪ್ರೊ. ಜಿ. ಎಸ್. ಅವಧಾನಿ, ೮. ಪ್ರಭುದೇವರ ಬೆಡಗಿನ ವಚನಗಳು–ವಿಶ್ಲೇಷಣೆ –ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು.

ಗೋಷ್ಠಿ ಮೂರು

೯. ಅನುಭಾವಮಂಟಪದ ಅಧ್ಯಕ್ಷ ಅಲ್ಲಮಪ್ರಭುದೇವರು–ಡಾ|| ಎಂ. ಎಸ್. ಹಿರೇಮಠ, ೧೦. ವಚನಕಾರರಲ್ಲಿ ಅಲ್ಲಮಪ್ರಭುವಿನ ಸ್ಥಾನ –ಪ್ರೊ. ಬಿ. ಪಿ. ರಾಮಯ್ಯ, ೧೧. ಪ್ರಭುಲಿಂಗಲೀಲೆಯಲ್ಲಿ ಅಲ್ಲಮಪ್ರಭು–ಪ್ರೊ. ಎಚ್. ವಿ. ಕುಲಕರ್ಣಿ, ೧೨. ಶೂನ್ಯ ಸಂಪಾದನೆ ಹಾಗೂ ಅಲ್ಲಮಪ್ರಭು–ಡಾ|| ಎನ್. ಆರ್. ನಾಯಕ.

ಗೋಷ್ಠಿ ನಾಲ್ಕು

೧೩. ಅಲ್ಲಮಪ್ರಭು–ಶಿವಕವಿಗಳು ಕಂಡಂತೆ –ಪ್ರೊ. ಆರ್. ಎಲ್. ಪೋಲಿಸ್ ಪಾಟೀಲ್, ೧೪. ಜಾನಪದದಲ್ಲಿ ಅಲ್ಲಮಪ್ರಭು –ಡಾ|| ಸಯ್ಯದ ಜಮೀರುಲ್ಲಾ ಪರೀಫ, ೧೫. ಪರಮಯೋಗ–ಮಂತ್ರಗೋಪ್ಯ–ನಿ. ಪ್ರ. ಕುಮಾರ ಸ್ವಾಮಿಗಳು.

ಗೋಷ್ಠಿ ಐದು

೧೬. ಭಾರತೀಯ ಭಾಷಾ ಸಾಹಿತ್ಯದಲ್ಲಿ ಅಲ್ಲಮ ವೃತ್ತಾಂತ–ಪ್ರೊ. ಬಿ. ಸಿ. ವೀರಪ್ಪ, ೧೭. ಅಲ್ಲಮಪ್ರಭು ಹಾಗೂ ನಾಥಸಂಪ್ರದಾಯ –ಪಂ. ಷಣ್ಮುಖಯ್ಯ ಅಕ್ಕೂರಮಠ.

ಈ ಗ್ರಂಥದಲ್ಲಿ ಹದಿನೇಳು ಪ್ರಬಂಧಗಳು ಮಂಡಿತವಾಗಿ ಪ್ರಕಟವಾಗಿವೆ. ಇವುಗಳಲ್ಲಿ "ಒಂದು ವಿವೇಚನೆ–ಅಲ್ಲಮಪ್ರಭು ಜೀವನ ಹಾಗೂ ಸಾಧನೆ" ಮತ್ತು "ಪ್ರಭುದೇವರ ಬೆಡಗಿನ ವಚನಗಳು" ಎಂಬ ಬಹುಮಹತ್ವದ ವಿಷಯಗಳ ಬಗೆಗೆ ಸ್ವತಃ ಶ್ರೀಗಳವರೇ ಪ್ರಬಂಧಗಳನ್ನು ಸಾದರಪಡಿಸಿದ್ದಾರೆ. ಈ ಎರಡೂ ಬಹುಮುಖ್ಯವೆಂದು ಅರಿತ ಸಂಪಾದಕರು ಇವನ್ನು ಸೇರಿಸುವುದರ ಮೂಲಕ ಈ ಕೃತಿಯ ಸಮಗ್ರತೆಯನ್ನು ಕಾಪಾಡಿಕೊಂಡಿದ್ದಾರೆ. ಪ್ರಬಂಧಗಳನ್ನು ಅಣಿಗೊಳಿಸುವಲ್ಲಿಯೂ ಶ್ರೀಗಳವರು ತಮ್ಮ ನೈಪುಣ್ಯವನ್ನು ಪ್ರದರ್ಶಿಸಿದ್ದಾರೆ. ಅಲ್ಲಮಪ್ರಭುದೇವರ ಒಂದು ದಿವ್ಯದರ್ಶನವನ್ನು ಈ ಕೃತಿ ಸಮರ್ಥವಾಗಿ ಮಾಡಿಕೊಡುತ್ತದೆ.

ಇದೆ ತೆರನಾಗಿ ಪೂಜ್ಯ ಜಗದ್ಗುರುಗಳು ಶಿವಮೊಗ್ಗ ಜಿಲ್ಲೆಯ ಪುರದಲ್ಲಿ ವೀರ ವಿರಾಗಿಣಿ ಅಕ್ಕಮಹಾದೇವಿ, ಕುರಿತು ೧೯೯೨ ಅಕ್ಟೋಬರ ನಾಲ್ಕನೆಯ ವಿಚಾರ ಸಂಕೀರಣವು, ಕಾರಣಿಕ ಯುಗಪುರುಷ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳನ್ನು ಕುರಿತು, ೧೯೯೩ನೇ ನವಂಬರ ಇದೇ ಸಾಲಿನ ಡಿಶಂಬರ ತಿಂಗಳು ೨೫–೨೬–೨೭ ರಂದು ಸೊಲ್ಲಾಪುರದಲ್ಲಿ ಶಿವಯೋಗಿ ಸಿದ್ಧರಾಮರನ್ನು ಕುರಿತು ಸಮಗ್ರ ವಿಚಾರ ಸಂಕಿರಣಗಳು ಸಾಂಗವಾಗಿವೆ. ಅವುಗಳ ವಿಷಯ ವಿಸ್ತಾರ ಕೆಳಗಿನಂತಿದೆ.

ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠದ ಶ್ರೀಗಳವರು

ಕನ್ನಡ ಸಾಹಿತ್ಯ ಸಂಸ್ಕೃತಿಗೆ ಅದರಲ್ಲೂ ವೀರಶೈವ ಸಾಹಿತ್ಯಕ್ಕೆ ಅಮಿತವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಆದರೆ ಏಕೋ ಏನೋ ಶ್ರೀಗಳವರ ಕೃತಿಗಳು ಸರ್ವತ್ರ ಪ್ರಚುರವಾಗದಿರುವುದು ದುರ್ದೈವದ ಸಂಗತಿ. ವಿವಿಧ ಪ್ರಕಾರಗಳಿಗೆ ಸೇರಿದ ಸುಮಾರು ೮೮ ಕೃತಿಗಳು ಶ್ರೀ ಅನ್ನದಾನೀಶ್ವರ ಗ್ರಂಥಮಾಲೆಯ ಮೂಲಕ ಪ್ರಕಟವಾಗಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಈ ಅಮೂಲ್ಯ ಕೃತಿಗಳನ್ನು ಜನತೆ ಶ್ರದ್ಧಾಭಕ್ತಿ ಪೂರ್ವಕವಾಗಿ ಓದಲಿ ಎಂದೂ ಈ ತೆರನ ವಿಚಾರ ಸಂಕಿರಣಗಳು ಈ ಕಾರ್ಯಕ್ಕೆ ಪೂರಕವಾಗಲಿ ಎಂದೂ ಹಾರೈಸಿ ಶ್ರೀಗಳವರ ಚರಣಾರವಿಂದಗಳಿಗೆ ನನ್ನ ಅನಂತ ನಮನಗಳನ್ನು ಸಲ್ಲಿಸುತ್ತೇನೆ.

ವೀರ ವಿರಾಗಿಣಿ ಮಹಾದೇವಿಯಕ್ಕನವರು

ಗ್ರಂಥದ ಅಂತರಂಗ

ಗೋಷ್ಠಿ ನಾಲ್ಕು

ಗೋಷ್ಠಿ ಐದು

ಗೋಷ್ಠಿ ಆರು

ನಾಲ್ಕನೆಯ ವಿಚಾರ ಸಂಕಿರಣ

ಕಾರಣಿಕ ಯುಗಪುರುಷ

'ಶ್ರೀ ಕುಮಾರ ಮಹಾಶಿವಯೋಗಿಗಳು' ಕುರಿತು ಬದಾಮಿ ತಾ. ನಂದಿಕೇಶ್ವರದಲ್ಲಿ ೧೯೯೩ ನವ್ಹಂಬರ ೨೦, ೨೧ ಮತ್ತು ೨೪ ರಂದು ನಡೆದ ಉಪನ್ಯಾಸಗಳು.

ಗೋಷ್ಠಿ ಒಂದು

೧) ಋಣ ವಿಮುಕ್ತರು —ಡಾ॥ ಬಸವರಾಜ ಜಗಜಂಪಿ, ಸವದತ್ತಿ
೨) ಗುರುಕಾರುಣ್ಯ ಗರಿಷ್ಠರು —ಪ್ರೊ. ಜಿ. ಬಿ. ಶೀಲವಂತರ, ಬದಾಮಿ
೩) ಮರಣವ ಗೆಲಿದ ಮಹಾಂತರು —ಪ್ರೊ. ಎಂ. ಆರ್. ಉಳ್ಳಾಗಡ್ಡಿ, ಸವದತ್ತಿ

ಗೋಷ್ಠಿ ಎರಡು

೪) ಯುಗ ಪ್ರಜ್ಞಾವಂತರು —ಪ್ರೊ. ಎಲ್. ಎ. ಪಾಟೀಲ, ಸಂಕೇಶ್ವರ
೫) ಕೃಷಿ ತಜ್ಞರು —ಶ್ರೀ ವೀರಪ್ಪ ಕೌತಾಳ, ಗದಗ
೬) ಮಹಿಳೆಯರ ಹಿತಚಿಂತಕರು
—ಪ್ರೊ. ಗುರುದೇವಿ ಉ. ಹುಲೆಪ್ಪನವರಮಠ, ಸವದತ್ತಿ

ಗೋಷ್ಠಿ ಮೂರು

೭) ಸಮಾಜೋದ್ಧಾರಕರು —ಡಾ॥ ವಸಂತ ಪಾಟೀಲ, ಧಾರವಾಡ
೮) ಸಂಘಟನಾ ಚತುರರು —ಭಾಗ ೧
ಅಖಿಲ ಭಾರತ ವೀರಶೈವ ಮಹಾಸಭಾ ಸಂಸ್ಥಾಪಕರು
—ಡಾ॥ ಬಸವರಾಜ ಮಲಶೆಟ್ಟಿ, ಹೊಸಪೇಟ
೯) ಭಾಗ ೨– ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥಾಪಕರು
—ಡಾ॥ ಗುರುಪಾದ ಮರೆಗುದ್ದಿ, ಸಂಕೇಶ್ವರ

ಗೋಷ್ಠಿ ನಾಲ್ಕು

೧೦) ಶರಣ ಸಾಹಿತ್ಯ ಪೋಷಕರು —ಪ್ರೊ. ಸಿ. ವಿ. ಕೆರಿಮನಿ, ಲಕ್ಷ್ಮೇಶ್ವರ

೧೧) ಲಿಂಗಸಾಹಿತ್ಯ ಸಂಪದ ಸಂವರ್ಧಕರು
—ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಮುಂಡರಗಿ
೧೨) ಸಂಗೀತೋದ್ಧಾರಕರು —ಪ್ರೊ. ಸಿದ್ಧರಾಮಯ್ಯ ಮಠಪತಿ, ಬಾಗಲಕೋಟ

ಗೋಷ್ಠಿ ಐದು

೧೩) ಕೀರ್ತನ–ಪುರಾಣ ಪ್ರವಚನಕಾರರ ಸಂರಕ್ಷಕರು
—ಶ್ರೀ ಷ. ಬ್ರ. ರುದ್ರಮುನಿ ಶಿವಾಚಾರ್ಯ ಹಿರೇಮಠ, ಕಸುಬಾ ಜಂಬಗಿ
೧೪) ಸರ್ವಾಚಾರ ಸಂಪನ್ನರು —ಶ್ರೀ ಯೋಗೀಶ ಯಡ್ರಾವಿ, ಧಾರವಾಡ
೧೫) ಅನುಭಾವ ಕವಿಗಳು - ಶ್ರೀ ಜಗದ್ಗುರು ಸನ್ನಿಧಿಯವರು

ಗೋಷ್ಠಿ ಆರು

೧೬) ವಿರಾಗ ವಿಭೂತಿಗಳು
೧೭) ಶಿವಯೋಗ ಸಿದ್ಧರು —ಡಾ|| ನಿಜಲಿಂಗಮ್ಮ ಕೊಪ್ಪಳ, ಧಾರವಾಡ
೧೮) ಅನ್ವರ್ಥಕ ಜಂಗಮರು
—ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಮುಂಡರಗಿ

ಸಮಾರೋಪ
—ಡಾ|| ಪುಟ್ಟರಾಜ ಕವಿ ಗವಾಯಿಗಳು, ವೀರೇಶ್ವರ ಪುಣ್ಯಾಶ್ರಮ, ಗದಗ

ಐದನೆಯ ವಿಚಾರ ಸಂಕಿರಣ

'ಶ್ರೀ ಶಿವಯೋಗಿ ಸಿದ್ಧರಾಮ ದೇವರು' ಕುರಿತು ಸೊನ್ನಲಾಪುರದಲ್ಲಿ ೧೯೯೩ನೇ ಡಿಶೆಂಬರ–೨೫, ೨೬, ೨೭ರಂದು ನಡೆದ ಉಪನ್ಯಾಸಗಳು.

ಗೋಷ್ಠಿ ಒಂದು

೧) ಸೊನ್ನಲಿಗೆ–ಒಂದು ಚಾರಿತ್ರಿಕ ನೋಟ —ಡಾ|| ಬಿ.ಬಿ.ಪೂಜಾರಿ,ಸೋಲಾಪೂರ
೨) ಸಿದ್ಧರಾಮದೇವರ ಪೂರ್ವಜೀವನ
—ಪ್ರೊ. ಆರ್. ಎಲ್. ಪೋಲೀಸಪಾಟೀಲ, ಮುಂಡರಗಿ
೩) ಕರ್ಮಯೋಗಿ ಸಿದ್ಧರಾಮ —ಪ್ರೊ. ಬಿ.ಎಸ್. ಕರಿಭರಮಗೌಡರ, ಮುಂಡರಗಿ

ಗೋಷ್ಠಿ ಎರಡು

೪) ಸಿದ್ಧರಾಮರು ಕಂಡ ಗುರುಸ್ವರೂಪ
—ಶ್ರೀಮತಿ ನಿಂಗಮ್ಮ ಪತಂಗಿ, ಗುಲಬರ್ಗಾ
೫) ಶಿವಯೋಗಿ ಸಿದ್ಧರಾಮರು —ಪ್ರೊ. ವ್ಹಿ. ಜಿ. ನೂರಿಹಾಳ, ಧಾರವಾಡ
೬) ಸಿದ್ಧರಾಮದೇವರ ಲಿಂಗದೀಕ್ಷಾವತಾರ
—ಡಾ|| ಸಂಗಮೇಶ ಸವದತ್ತಿಮಠ, ಗುಲಬರ್ಗಾ

ಗೋಷ್ಠಿ ಮೂರು

೭) ಸಮಾಜ ಚಿಂತಕರು —ಡಾ|| ಕಾಶೀನಾಥ ಅಂಬಲಿಗೆ, ಗುಲಬರ್ಗಾ

೮) ಮನಃಶಾಸ್ತ್ರಜ್ಞ ಸಿದ್ಧರಾಮ —ಪ್ರೊ. ಎಸ್.ಎಸ್. ಪಾಟೀಲ, ಗುಲಬರ್ಗಾ

೯) ತತ್ತ್ವ ಪ್ರತಿಪಾದಕ ಸಿದ್ಧರಾಮ ದೇವರು

—ಡಾ|| ಬಸವರಾಜ ಜಗಜಂಪಿ, ಸವದತ್ತಿ

ಗೋಷ್ಠಿ ನಾಲ್ಕು

೧೦) ಸಮಕಾಲೀನ ಶರಣರ ದೃಷ್ಟಿಯಲ್ಲಿ ಸಿದ್ಧರಾಮ

—ಪ್ರೊ. ಬಿ. ಎಸ್. ಪಾಟೀಲ, ಮುಂಡರಗಿ

೧೧) ಶಿವಕವಿಗಳು ಕಂಡ ಸಿದ್ಧರಾಮದೇವರು

—ಡಾ|| ಎಸ್. ಎಂ. ಹಿರೇಮಠ, ಕಲಬುರ್ಗಿ

೧೨) ಸಿದ್ಧರಾಮರ ಪ್ರಭಾವಲಯದಲ್ಲಿ ಬಂದ ವ್ಯಕ್ತಿ ಚೇತನರು

—ಡಾ|| ಸುವರ್ಣಾ ಎಂ. ಹೆಗಡೆ, ಅಕ್ಕಲಕೋಟ

ಗೋಷ್ಠಿ ಐದು

೧೩) ಜನಪದ ಸಾಹಿತ್ಯದಲ್ಲಿ ಸಿದ್ಧರಾಮ

—ಪ್ರೊ. ಶಂಕರಗೌಡ ಬಿರಾದಾರ, ಅಕ್ಕಲಕೋಟ

೧೪) ಜಯದೇವಿ ತಾಯಿ ಕಂಡ ಸಿದ್ಧರಾಮ

—ಡಾ|| ಬಸವರಾಜ ಮಲಶೆಟ್ಟರ, ಹೊಸಪೇಟೆ

೧೫) ಸಿದ್ಧರಾಮರನ್ನು ಕುರಿತ ಸಾಹಿತ್ಯ ಸೌರಭ

—ಡಾ|| ಎಸ್. ಎಂ. ಹಿರೇಮಠ, ಗುಲಬರ್ಗಾ

೧೬) ಸಿದ್ಧರಾಮರ ಬಗೆಗಿನ ಶಾಸನ ಸ್ಮಾರಕಗಳು

—ಡಾ|| ಎಸ್. ಎಂ. ಹಿರೇಮಠ, ಗುಲಬರ್ಗಾ

ಗೋಷ್ಠಿ ಆರು

೧೭) ಸಿದ್ಧರಾಮರ ತ್ರಿವಿಧಿ ಸಾಹಿತ್ಯ ಮೌಲ್ಯ —ಡಾ. ಡಿ.ಬಿ. ನಾಯಕ, ಗುಲಬರ್ಗಾ

೧೮) ಸಿದ್ಧರಾಮರ ಸಾಹಿತ್ಯದಲ್ಲಿ ವಿಶ್ವಮಾನ್ಯ ಮೌಲ್ಯಗಳು

—ಡಾ|| ಮಾಣಿಕರಾವ ಧನಶ್ರೀ, ಗುಲಬರ್ಗಾ

೧೯) ಸಿದ್ಧರಾಮರ ಪವಾಡಗಳ ಸಾಂಕೇತಿಕತೆ

—ಡಾ|| ವ್ಹಿ. ಟಿ. ಪೂಜಾರ, ಗುಲಬರ್ಗಾ

ವಚನ ಸಂಪದದಲ್ಲಿ ಅಲೌಕಿಕ ಸಂಪದ

—ಶ್ರೀ ಪಿ. ಎಸ್. ಹಿರೇಮಠ, ರಾಯಚೂರು

ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆಯ ನಲವತ್ತನೆಯ ಕುಸುಮವಾಗಿ ಅರಳಿನಿಂತ ಈ ಗ್ರಂಥ 'ವಚನ ಸಂಪದ' ಪೂಜ್ಯ ಜಗದ್ಗುರುಗಳವರು ಅನಂತಕಾಲ ನಡೆಸಿಕೊಂಡು ಬಂದ ಆಧ್ಯಾತ್ಮ ಸಾಧನೆಯ ಅನುಭವದ ಪ್ರತೀಕದಂತಿದೆ. ಅವರ ಪರುಷಲೇಖನಿಯಿಂದ ಮೂಡಿನಿಂತ ವಿಶಿಷ್ಟ ವಚನ ಸಂಗ್ರಹವಾಗಿದೆ.

ಬಸವ ಪೂರ್ವದಲ್ಲಿಯೇ ಉದಿಸಿದ ವಚನಗಂಗೆ ತೊರೆಯಾಗಿ ಹರಿಯುತ್ತ ಒಮ್ಮೆ ಪ್ರಕಟವಾಗಿ, ಮತ್ತೊಮ್ಮೆ ಗುಪ್ತಗಾಮಿನಿಯಾಗಿ ಮಗುದೊಮ್ಮೆ ಆರ್ಭಟಿಸಿ ಮತ್ತೊಮ್ಮೆ ಶಾಂತವಾಗಿ ಪ್ರವಹಿಸುತ್ತ ಬಂದು ಇಂದು ವಚನವಾರಿಧಿಯಾಗಿ ಬೆಳೆದುನಿಂತಿದೆ. ಇದು ಅನುಭವದ ಅಭಿವ್ಯಕ್ತಿಯಾಗಿ ಶರಣರು ನಿರ್ಮಿಸಿಕೊಂಡ ಒಂದು ಸರಳ ಸುಂದರ ವಿಶಿಷ್ಟರೂಪ. ಇಂದಿಗೂ ಈ ರೂಪ ಶ್ರೀಸಾಮಾನ್ಯರನ್ನು ಆಕರ್ಷಿಸುತ್ತ ಬಂದಿರುವುದು ಇದರ ಜನಪ್ರಿಯತೆಗೊಂದು ಸಂಕೇತವಾಗಿದೆ. ವಚನಸಾಹಿತ್ಯ ಒಂದು ಬತ್ತದ ಜಿಲುಮೆ. ಅನಂತವಾಗಿ ಪ್ರವಹಿಸುವ ಜೀವಚೈತನ್ಯ ಶಕ್ತಿಯನ್ನು ಅರಗಿಸಿಕೊಂಡು ಬಂದ ದೇವಬೆಳೆ.

ಇದು ಇಪ್ಪತ್ತನೆಯ ಶತಮಾನದಲ್ಲಿಯೂ ತನ್ನತನವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ. ಮಠಾಧೀಶರು, ಜಗದ್ಗುರುಗಳು, ಅನುಭಾವಿಗಳು, ಸಾಹಿತಿಗಳು, ಸಾಮಾನ್ಯರು ಈ ರೂಪದಲ್ಲಿ ಕೃಷಿಗೈದು ಶರಣಸಂದೇಶವನ್ನು ಸಾರುವುದರ ಜೊತೆಗೆ ಸಮಕಾಲೀನ ರೀತಿ–ನೀತಿಗಳನ್ನು ಮೈಗೂಡಿಸಿಕೊಂಡಿದೆ. 'ಸಾಹಿತ್ಯವು ಕಾಲಪರಿಸರದ ಕೈಗನ್ನಡಿ' ಎಂಬ ಮಾತಿಗೆ ಸಾಕ್ಷಿಯಾಗಿದೆ. ಡಾ॥ ಜಚನಿ, ಜಗದ್ಗುರು ಮೂಜಗಂ, ಜಗದ್ಗುರು ಅನ್ನದಾನ ಮಹಾಸ್ವಾಮಿಗಳು, ನಾರದಗಡ್ಡೆ ಚನ್ನಬಸವಸ್ವಾಮಿಗಳು ಹೀಗೆ ಅನೇಕ ಮಠಾಧಿಪತಿಗಳು, ಸಾಧುಸಜ್ಜನರಲ್ಲದೆ, ಡಾ॥ ಸಿದ್ಧಯ್ಯ ಪುರಾಣಿಕ, ಮಹದೇವ ಬಣಕಾರ, ಸಂಗಮೇಶ ಹೊಸಮನಿ, ಡಿವಿಜಿ, ಎಸ್. ವಿ. ರಂಗಣ್ಣ, ಮಹಾಂತಪ್ರಿಯ, ಗುರುಸ್ವಾಮಿ ಕಲಕೇರಿ, ಪಿ.ಎಸ್. ಹಿರೇಮಠ ಮುಂತಾದ ಸಾಹಿತಿಗಳು ತಮ್ಮ ವಿಚಾರ ಪ್ರಕಟನೆಗಾಗಿ ಈ ರೂಪವನ್ನು ಬಳಸಿಕೊಂಡಿರುವುದು ಇದರ ಸುಭಗತೆಗೆ ಸಾಕ್ಷಿಯಾಗಿದೆ.

ಪ್ರಸ್ತುತ ಸಂಕಲನ 'ವಚನ ಸಂಪದ'ದ ಕರ್ತೃ ಪೂಜ್ಯ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ಸ್ವತಃ ಧರ್ಮದರ್ಶಿಗಳೂ, ಧರ್ಮಮುಖ್ಯರೂ, ಅನುಭಾವಿಗಳೂ ಆದುದರಿಂದ ಪಾರಮಾರ್ಥಿಕ ವಿಷಯದ ಬಗ್ಗೆ ಹೆಚ್ಚಾಗಿ ತಮ್ಮ ಚಿಂತನೆಯನ್ನು ನಡೆಸುವುದ

ರೊಂದಿಗೆ ಲೌಕಿಕ ಜೀವನದ ರೀತಿನೀತಿಗಳನ್ನು ವಿವರಿಸಿದ್ದಾರೆ-'ಪಾಕ-ಶುದ್ಧಿಗಾಗಿ ಪಾತ್ರೆಯ ಸ್ವಚ್ಛತೆಯ ಅವಶ್ಯಕತೆಯಿರುವಂತೆ ಆತ್ಮಶುದ್ಧಿಗಾಗಿ ಸದಾಚಾರದ ಅವಶ್ಯಕತೆಯನ್ನು ಮನಂಬುಗುವಂತೆ' ವಿವರಿಸಿದ್ದಾರೆ. ಮನುಷ್ಯಲೌಕಿಕ ಭೋಗೋಪಭೋಗಗಳನ್ನೆಲ್ಲ ಪ್ರಯತ್ನಿಸಿ ಪಡೆಯಬಹುದು. ಆದರೆ ಅಲೌಕಿಕವಾದ ಸುಖಶಾಂತಿಗಳನ್ನು ಪಡೆಯಲಾರ. ನೆಮ್ಮದಿಯ ಜೀವನ ನಡೆಸಲಾರ. ಆಧ್ಯಾತ್ಮದ ಆಚರಣೆ, ಅದರಿಂದುಂಟಾಗುವ ನೆಮ್ಮದಿಯೇ ನಿಜವಾದ ಬದುಕಿನ ಮೌಲ್ಯ ಎಂಬುದನ್ನು 'ಅಲೌಕಿಕ ಸಂಪದ' ಭಾಗದಲ್ಲಿ ಮಾರ್ಮಿಕವಾಗಿ ವಿವರಿಸಿದ್ದಾರೆ. ಹಾಗೆಂದು ಶ್ರೀಗಳು ಕೇವಲ ಅಲೌಕಿಕ ಸಂಪದಕ್ಕೇ ಒತ್ತುಕೊಟ್ಟು ಲೌಕಿಕವನ್ನು ದೂರತಳ್ಳುವುದಿಲ್ಲ. ಅದು ಭಾರತೀಯ ಸಾಂಸ್ಕೃತಿಕ ಪರಂಪರೆಯೂ ಅಲ್ಲ. ಲೌಕಿಕದಲ್ಲಿದ್ದುಕೊಂಡೇ ಅಲೌಕಿಕವನ್ನು ಸಾಧಿಸಬೇಕೆಂಬ ಶರಣ ತತ್ವಕ್ಕೇನೂ ಹೊರತಾಗಿ, ಅವರ ವಚನಗಳುದ್ದಕ್ಕೂ, ಈ ಮಾತು ಪ್ರತಿಧ್ವನಿತವಾಗುತ್ತಿರುವುದನ್ನು ಅವರ ಸಂಕಲನವಲ್ಲಿ ಕಾಣುತ್ತೇವೆ. ಆದ್ದರಿಂದ ಅಲೌಕಿಕ ಸಾಧನೆಗೆ ಲೌಕಿಕ ಜೀವನದ ಸತ್ಯ ಶುದ್ಧ ಬದುಕು ಮುಖ್ಯ ಎನ್ನುವ ಲೋಕಾನುಭವ ಇವರ ವಚನಗಳಲ್ಲಿ ಅಡಕವಾಗಿದೆ. ಪ್ರಸ್ತುತ ನನ್ನ ವಿರವಣಿಗೆ ಶ್ರೀಗಳವರ 'ವಚನ-ಸಂಪದ'ದ ಅಲೌಕಿಕದ ಭಾಗಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಅಲ್ಲಿ ಅಭಿವ್ಯಕ್ತವಾದ ಶ್ರೀಗಳವರ ವಿಚಾರಧಾರೆಯನ್ನು ಕಂಡುಕೊಳ್ಳುವ ಪ್ರಯತ್ನ ನಡೆಸಿದ್ದೇನೆ ಅಷ್ಟೆ.

'ಅಲೌಕಿಕ ವೈಭವ' ಈ ಭಾಗದಲ್ಲಿ 'ಆರಾಧ್ಯ ಅಭಿವಂದನೆ'ದಿಂದ 'ಭಕ್ತಿಮುಕ್ತಿಗೆ ಮೂಲ'ದ ವರೆಗೆ ಒಟ್ಟು ೩೨ ಅಧ್ಯಾಯಗಳಿವೆ. ಈ ಭಾಗದಲ್ಲಿ ೪೦೩ ವಚನಗಳಿವೆ. ಅಧ್ಯಾಯದಿಂದ ಅಧ್ಯಾಯಕ್ಕೆ ಹಂತಹಂತವಾಗಿ ಏರುತ್ತ ನಡೆದಿವೆ. ಶ್ರೀಗಳವರ ವಿಚಾರಧಾರೆ. ಅಲ್ಲಿಯ ಅಧ್ಯಾಯಗಳ ಹೆಸರೂ ಕೂಡ ಒಂದಕ್ಕೊಂದು ಸಂಬಂಧಿಸಿ ಹಿಂದಿನ ಅಧ್ಯಾಯಕ್ಕೂ ಮುಂದಿನ ಅಧ್ಯಾಯಕ್ಕೂ ಕೊಂಡಿಯನ್ನೂ ಕಲ್ಪಿಸುತ್ತವೆ. ಶ್ರೀಗಳವರು ಆಧ್ಯಾತ್ಮಸಾಧನೆಯಲ್ಲಿ ಉನ್ನತ ಹಂತದಲ್ಲಿದ್ದವರು ಜೊತೆಗೆ ಅಪಾರವಾದ ಲೋಕಾನುಭವ ಲೌಕಿಕ ಅನುಭವವನ್ನು ಪಡೆದಿರುವವರು. ಈ ಆಧ್ಯಾತ್ಮಸಾಧನೆ-ಲೋಕಾನುಭವದ ಸಮ್ಮಿಳನ ಇವರ ವಚನಗಳಲ್ಲಿ ನಿಚ್ಚಳವಾಗಿ ಮೂಡಿನಿಂತಿದೆ. ಲೌಕಿಕರಿಗೂ ಅರ್ಥವಾಗಬಲ್ಲ ಸರಳ ಶೈಲಿ ಇಲ್ಲಿದೆ.

> ಕುಂಬಸಹಸ್ರ ಉದಕದಲ್ಲಿ
> ಬಿಂಬಿಸಿ ತೋರುವ ಸೂರ್ಯನಿಪ್ಪಂತೆ
> ಕೋಟಿ ಕೋಟಿ ಆತ್ಮರಲಿ
> ಪರಮಾತ್ಮನಿಪ್ಪನಯ್ಯ. (ಪು. ೩. ವ-೧)

ಶಿವನು ಸರ್ವಾಂತರ್ಯಾಮಿ. ಸರ್ವಜೀವಿಗಳಾತ್ಮದಲಿ ಜೀವ ಚೇತನವಾಗಿ ವ್ಯವಹರಿಸುತ್ತಲಿದ್ದಾನೆ. ಅವನಿಲ್ಲದ ತಾಣವಿಲ್ಲ, ಅವನಿಲ್ಲದೆ ಜಗವಿಲ್ಲ. ಅವನು ನಾಮರಹಿತನು. ರೂಪರಹಿತನು, ಶಬ್ದಾತೀತನು, ವಿಧಿವಿಧಾನಕ್ಕೆ ನಿಲುಕದಾತನು. ಭಕ್ತ-ನಿಷ್ಠೆಗಳಿಗೆ

ಮಾತ್ರ ಒಲಿಯುತ್ತಾನೆ. (ಪು. ೩, ವ-೯). ತನ್ನ ಸೃಷ್ಟಿಯ ಪ್ರತಿಯೊಂದು ವಸ್ತುವಿಗೂ ಒಂದು ಬಗೆಯ ಹಸಿವನ್ನಿತ್ತಿದ್ದಾನೆ. ಮಾನವ ಪ್ರಾಣಿಗಳಂತೂ ಐದು ಇಂದ್ರಿಯಗಳನ್ನಿತ್ತು ಒಂದೊಂದಕ್ಕೂ ಒಂದೊಂದು ಬಗೆಯ ಹಸಿವೆಯನ್ನಿತ್ತು ಅದನ್ನು ಹಿಂಗಿಸಿಕೊಳ್ಳಲು ಸತತ ಹೋರಾಟ ನಡೆಸಿಯೇ ಇದ್ದಾನೆ. ಇದೇ ಜೀವನ. ಇದೇ ಪ್ರಕೃತಿಯ ವ್ಯಾಪಾರ. ಇದು ಅನಿವಾರ್ಯ-ಅವಶ್ಯಕ. ಆದರೆ ಇದು ಇಲ್ಲಿಗೇ ನಿಲ್ಲಬಾರದು. ಇದನ್ನು ದಾಟಿ ಸೃಷ್ಟಿರಚನೆಯ ರಹಸ್ಯವನ್ನರಿಯುವತ್ತ ಮಾನವನ ಬುದ್ಧಿ ಮನಸುಗಳು ಪ್ರಯಾಣ ಹೊರಡಬೇಕು. ಮನುಷ್ಯನ ಅನ್ನಮಯ ಪ್ರಜ್ಞೆ ಮುಂದುವರಿದು ಮನೋಮಯ ಪ್ರಜ್ಞೆಯತ್ತ ಸಾಗಬೇಕು. ಆಗಸದಲ್ಲಿ ಅಸಂಖ್ಯ ಗೋಲಗಳ ಕಾಣದಂತಿರಿಸಿದಾನೆ. ಸಾಗರಮಧ್ಯದಲಿ ಧರೆಯ ಕರಗದಂತಿರಿಸಿದ್ದಾನೆ. ಅನಿಲನ ಕಾಣದಂತಿರಿಸಿ-ಮರಗಳಲ್ಲಿ ಮಂದಾಗ್ನಿಯ ಸುಡದಂತಿರಿಸಿ ಕಡಲಲಿ ವಡಬಾಗ್ನಿಯ ತೋರದಂತಿರಿಸಿದ ಈ ವಿಶ್ವವನ್ನೆಲ್ಲ ಶೋಧಿಸುವ (ವ-೧೩) ಜಿಜ್ಞಾಸೆ ಮೂಡಬೇಕು. ವಿಶ್ವವ್ಯಾಪಿಯಾದ ದೇವನ ಅನಂತತೆ ಅರಿವಾದಾಗ 'ಮಠ-ಮಂದಿರ', ಮಸೀದೆಗಳಲ್ಲಿರುವ ನಿನ್ನ ರೂಪು ಭಿನ್ನ ನಾಮವೂ ಭಿನ್ನ (ವ-೧೮)ವಾಗಿ ಹಾಲೊಳು ಬೆರೆದ ಸಕ್ಕರೆ ಹಾಲನೊಳಕೊಂಬಂತೆ; ನೀರೊಳು ಬೆರೆದ ಉಪ್ಪು ನೀರನೊಳಕೊಂಬಂತೆ ಸರ್ವ ವಸ್ತುಗಳಲ್ಲಿ ಅಡಕವಾದ ಶಿವಚೈತನ್ಯ ಆಯಾ ವಸ್ತುವಿನಂತೆಯೇ ಅದರಲ್ಲಿ ಲೀನವಾಗಿ ತಾನೇ ತಾನಾಗುತ್ತದೆ. ಹೀಗಿದ್ದರೂ ಈ ದೇವ-ಸೃಷ್ಟಿಯಲ್ಲಿ ಜೀವಿಗಾಗಿ ಹೆಜ್ಜೆ ಹೆಜ್ಜೆಗೂ ಆಟಿಗೆ ವಸ್ತುಗಳು ನಿರ್ಮಾಣವಾಗಿವೆ. ಹೆತ್ತವ್ವನಿತ್ತ ವಸ್ತುಗಳ ನೋಡಿ ನಲಿವ ಶಿಶುವಿನಂತೆ ನೀನಿತ್ತ ಮಾಯಾ ಪ್ರಪಂಚದ ವಿಷಯಂಗಳಲಿ ಸಿಲುಕಿದೆನಯ್ಯ (೧೧) 'ಹರಿವ ತೊರೆಗೆ ಅಣೆಕಟ್ಟುಗಳ ಕಟ್ಟಿದರಲ್ಲದೆ, ಹರಿವ ಮನವ ಬಂಧಿಸಿದರೇನಯ್ಯ' (೩೩) ಎಂಬ ಮಾತುಗಳಲ್ಲಿ ದೇವ-ಜೀವ-ಜಗತ್ತುಗಳಿಗಿರುವ ಸಂಬಂಧ, ಅವುಗಳ ಭೇದ ಹಾಗೂ ಜೀವಜಗತ್ತನ್ನು ಮೀರಿ ದೇವನನ್ನು ಕಾಣುವ ತೀವ್ರ ಬಯಕೆ ಮೂಡಬೇಕು. ಅದಕ್ಕಾಗಿ ಸಾಧನೆ ನಡೆಯಬೇಕು. ಮನಸ್ಸು ಊರ್ಧ್ವಮುಖವಾಗಬೇಕು. ಮನೋಮಯ ಪ್ರಜ್ಞೆಯಿಂದ ಆಧ್ಯಾತ್ಮಪ್ರಜ್ಞೆಯತ್ತ ಮುನ್ನಡೆಯಬೇಕು. ಆಗ ಮಾತ್ರ 'ಸಕಲರ ಲೇಸಬಯಸುವ, ದಯಾಗುಣವೇ ಧರ್ಮ, ತನ್ನಂತೆ ಪರರ ಬಗೆದೊಡೆ ತಾನೇ ದೇವನಲ್ಲವೇ?' (೪೮) ಎನ್ನುವ, ಸಕಲ ಜೀವಿಗಳಲ್ಲಿ ಲೇಸನೇ ಕಾಣುವ, ಲೇಸನೇ ಬಯಸುವ, ಉದಾತ್ತ ಭಾವನೆ ಬೆಳೆದುಬರುತ್ತದೆ. ವಿಶ್ವಮಾನವ ಪ್ರಜ್ಞೆ ಮೂಡುತ್ತದೆ. ಆಗ ಸುತ್ತುವರಿದ ಬಂಧುತ್ವದ ಬಂಧನ, ಜನನ-ಮರಣಗಳು, ನಡೆಯಲೇಬೇಕಾದ ಕ್ರಿಯೆಗಳಿಂದ ದೂರ ಸರಿದರೆ ಬದುಕು ಪೂರ್ಣವಾಗಲಾರದು, ಅದು ಸಾಧಕವೇ ಹೊರತು ಬಾಧಕವಲ್ಲ. (ಪು. ೫೮,೬೩)

ಈ ಬದುಕೊಂದು ವಿಷಮ ಸಮರರಂಗ. ಇಲ್ಲಿ 'ಕಾಮ-ಕಾಲ-ಮಾಯೆ'ಗಳಾಟ ನಿರಂತರ ನಡದೇ ಇದೆ. ಇದರ ಬಾಧೆಯನ್ನು ಸಹಿಸುವಂತೆಯೂ ಇಲ್ಲ, ಬಿಟ್ಟು ದೂರ ಓಡುವಂತೆಯೂ ಇಲ್ಲ. ಹೆದರಿ ಹಿಂದೆ ಸರಿದಂತೆ ಬದುಕು ಭಯಂಕರವಾಗಿ ಕಾಣುತ್ತದೆ. ಬಂದುದನ್ನು ಎದುರಿಸಲೇಬೇಕು. ಎದುರಿಸಿ ಗೆಲ್ಲಬೇಕು. ಐದು ಹೆಡೆಗಳ ಹಾವು ತನುವ

ಕಚ್ಚುತ್ತಿರುತ್ತದೆ. (೭೧) ಕಣ್ಣಿಗೆ ಕಾಣದ ಕಾಮನುರವಣಿಗೆ (೭೨) ಇವು ಬೆಂಕಿ ಎಂದು ತಿಳಿದರೂ ಮತ್ತೆ ಮತ್ತೆ ಅವುಗಳ ಆಕರ್ಷಣೆಗೆ ಒಳಗಾಗುತ್ತದೆ ಮನಸ್ಸು. ದೀಪದ-ಅಂದಕ್ಕೆ ಸುತ್ತುವ ಪತಂಗದಂತೆ ಮುತ್ತಿಕ್ಕಲು ಹೋಗಿ ತಾನೇ ಬೂದಿಯಾಗುವಂತಾಗ ಬಾರದು. 'ಶ್ವಾನ ತನ್ನ ನೆರಳೊಡನೆ ಹೋರಾಡಿ ಸಾಯ್ವಂತೆ, ಮಾಯಾಮೋಹದಿ ಬಿದ್ದು ಬಳಲುವುದು ಉಚಿತವಲ್ಲ, ಜಗವೆಂಬ ಕನ್ನಡಿಯಲಿ ತನ್ನ ತಾ ತಿದ್ದಿಕೊಳ್ಳಬೇಕು.' (೭೭) ಅದಕ್ಕಾಗಿ ತನುವೆಂಬ ಹೊಲಕೆ ನೀತಿ-ನೇಮಗಳೆಂಬ ಬೆದರನಿರಿಸಿ, ನಿತ್ಯಜಾಗ್ರತೆ ಎಂಬ ಕೈಯಲ್ಲಿ ಧೈರ್ಯವೆಂಬ ಕವಣೆಯಿದ್ದೊಡೆ ಅರಿಷಡ್ವೈರಿಗಳ ಉಪದ್ರವವಾಗಲಾರದು (೯೮).

ಕಾಯ-ಕರ್ಮ-ಮಲ-ಪಾಶಗಳನ್ನು ಗೆಲ್ಲುವುದು ಸಾಧ್ಯವೆ? ಸಾಧ್ಯ ಎನ್ನುತ್ತದೆ ಶ್ರೀವಾಣಿ. ಆದರೆ ಅದಕ್ಕಾಗಿ ಕಠೋರ ಸಾಧನೆ ಬೇಕು. ಅನ್ನಮಯ, ಮನೋಮಯ ಪ್ರಪಂಚಗಳನ್ನು ದಾಟಿ ಆಧ್ಯಾತ್ಮ ಪ್ರಪಂಚದಲ್ಲಿ ಮನ ವಿಹರಿಸಬೇಕು. ಕಾಯಗುಣ ಆಕರ್ಷಣೆಗೆ ಒಳಗಾಗುವುದು ಸಹಜ. ಅದನ್ನು ಹಾಗೆಯೇ ಬಿಟ್ಟರೆ ಅವನತಿಯೂ ಅಷ್ಟೇ ಸಹಜ. ಅದಕ್ಕಾಗಿ ಅದನ್ನು ಕಾದ ಕಬ್ಬಿಣದಂತೆ ಬಡಿದು ಬಡಿದು ರೂಪುಗೊಳಿಸ ಬೇಕಲ್ಲದೆ ಮುದ್ದಿಕ್ಕಿ ಸಂತಯಿಸಬಾರದು. (೧೦೪) ಅದಕ್ಕಾಗಿ ಪ್ರಮಥರು ರಾಜಮಾರ್ಗ ವೊಂದನ್ನು ನಿರ್ಮಿಸಿದರು. ಅವರಲ್ಲಿ ತಾವು ನಡೆದು ಬೆಳಕಿನ ಬೆಟ್ಟವಾದರು. ತಮ್ಮ ಬಾಳ ಸಿದ್ಧಾಂತವನ್ನು ಇತರರಿಗೆ ಬಾಳದೀವಿಗೆಯಾಗಿಸಿದರು. ಅದುವೇ ವೀರಶೈವ ಸಿದ್ಧಾಂತ. ಅದು ಸಂತೆಯ ಸುದ್ದಿಯಲ್ಲ, ಪುಂಡರಗೋಷ್ಠಿಯಲ್ಲ, ಗೊರವರ ಡುಂಡುಚಿ ಯಲ್ಲ, ಅದು ತತ್ವನಿಷ್ಠವಾದ ಸಿದ್ಧಾಂತ. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಹಂತಹಂತವಾದ ನಿಷ್ಠಾಚರಣೆ, ನಿಷ್ಠೆಯಿಂದ ನಿರಂತರ ಸಾಧನೆಯಿಂದ ಅನ್ನಮಯ ಪ್ರಪಂಚದಿಂದ ಆಧ್ಯಾತ್ಮಪ್ರಪಂಚವನ್ನು ಪ್ರವೇಶಿಸಿ ಅತಿಮಾನಸ ಪ್ರಜ್ಞೆಯನ್ನು ಪಡೆದುಕೊಳ್ಳುತ್ತಾನೆ. ಜೀವಿ-ಶಿವನಮಟ್ಟಕ್ಕೇರುತ್ತಾನೆ. ಇದೇ ಮಾನವನು ಸಾಧಿಸ ಬೇಕಾದ ಕೊನೆಯ ಹಂತ. ಆದಾಗಲೇ ಅವನ ಮಹಂತ.

ವೀರಶೈವ ಸಿದ್ಧಾಂತದಲ್ಲಿ ನಿರೂಪಿತವಾಗಿರುವ ಈ ತತ್ವಗಳ ನಿಷ್ಠಾಯುತ ಆಚರಣೆ ಅನುಸಂಧಾನಗಳಿಂದ ಶ್ರೀಗಳವರೂ 'ಈ ಮಹಾಂತ' ತತ್ವವನ್ನು ಸಾಧಿಸಿಕೊಳ್ಳುತ್ತಿದ್ದಾರೆ ಎನಿಸುತ್ತದೆ. ಅದು ಅವರ ಪ್ರವೃತ್ತಿ. ವೃತ್ತಿಯಲ್ಲ, ಅವರು ವಚನರೂಪದಲ್ಲಿ ನಿರೂಪಿಸಿದ ಅಷ್ಟಾವರಣದಲ್ಲಿ ಅಡಕವಾಗಿರುವ ಗುರು ಲಿಂಗ ಜಂಗಮ ಪಾದೋದಕ ಪ್ರಸಾದ, ವಿಭೂತಿ ರುದ್ರಾಕ್ಷಿ ಮಂತ್ರ ಈ ಒಂದೊಂದರ ತತ್ವ ಮಹತ್ವಗಳನ್ನು ಸುಲಭ ಶೈಲಿಯಲ್ಲಿ ಸಾಮಾನ್ಯರೂ ಅರಿತು ಆಚರಿಸುವ ಮಟ್ಟದಲ್ಲಿ ವಿವರಿಸಿದ್ದಾರೆ. ವೀರಶೈವನಿಗೆ ಅಷ್ಟಾವರಣ ಗಳು ಆವರಣ, ಪಂಚಾಚಾರಗಳು ಪ್ರಾಣ, ಷಟಸ್ಥಲಗಳು ಆತ್ಮ ಎಂಬುದನ್ನು ವಚನಗಳ ಮುಖಾಂತರ, ಒಂದೊಂದು ಆಚಾರವನ್ನೂ ಒಂದೊಂದು ಸ್ಥಲವನ್ನೂ ಅವುಗಳ ಮಹತ್ವ ವನ್ನೂ ವಿವರಿಸಿ ತಿಳಿಸಿ ಹೇಳುವ ದಾರ್ಶನಿಕ ರೀತಿ ಸುಂದರವಾಗಿದೆ. ರಚನೆಯಲ್ಲಿ

ಸೋತಂತೆ ತೋರುವುದಿಲ್ಲ. ಏರಿದಂತೆ ಇನ್ನೂ ಮೇಲೇರಬೇಕೆಂಬ ಉತ್ಸಾಹ ಇವರ ಲೇಖನಿಯಲ್ಲಿರುವಂತೆ ತೋರುತ್ತದೆ.

ಪದ್ಯದ ಲಯವನ್ನು, ಗದ್ಯದ ಮಾಧುರ್ಯವನ್ನು ಮೈಗೂಡಿಸಿಕೊಂಡು ಬೆಳೆದುಬಂದ ಈ ವಚನ ಸಾಹಿತ್ಯವು ಕನ್ನಡವು ವಿಶ್ವಸಾಹಿತ್ಯಕ್ಕೆ ನೀಡಿದ ವಿಶಿಷ್ಟ ಕೊಡುಗೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. 'ಗೀತಗದ್ಯ'ಗಳೆನಿಸಿದ ಈ 'ವಚನವೇದವು' ಕರ್ಮ ಸಿದ್ಧಾಂತವನ್ನು ಹೊರಗುಳಿಸಿ ಜೀವನ ಸಿದ್ಧಾಂತವನ್ನು ಒಪ್ಪಿಕೊಂಡಿದೆ. ಜನಸಾಮಾನ್ಯರ ಭಾಷೆಗೆ ದೇವಮಾನ್ಯ ಪಟ್ಟವನ್ನು ಒದಗಿಸಿಕೊಟ್ಟವರು ಶಿವಶರಣರು. ಭಾಷೆ ವಸ್ತು ರೀತಿ ತಂತ್ರ ನಿರೂಪಣಾ ರೀತಿಗಳಲ್ಲಿ ತನ್ನ ವೈವಿಧ್ಯತೆಯನ್ನು ಮೆರೆದ ಈ ಸಾಹಿತ್ಯ ರೂಪವು ಶ್ರೀಸಾಮಾನ್ಯರನ್ನೂ ತನ್ನತ್ತ ಆಕರ್ಷಿಸುತ್ತಲಿದೆ.

ಬಸವತತ್ವ ಪ್ರಭಾವಿತರೂ, ಬಸವಮಾರ್ಗಾನುಯಾಯಿಗಳೂ, ಬಸವತತ್ವಾನುಸಂಧಾನಿಗಳೂ ಆದ ಶ್ರೀಗಳವರು ವಚನ ಸಾಹಿತ್ಯಕ್ಕೆ ಮಾರುಹೋದುದೇನೂ ವಿಶೇಷ ಸಂಗತಿಯಲ್ಲ. ಆದರೆ ಅವುಗಳ ಅಭ್ಯಾಸ ಅನುಸಂಧಾನಗಳಿಂದ ವಚನಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆ ಮಾತ್ರ ವಿಶೇಷವಾಗಿದೆ. ಶರಣರ ವಚನಗಳ ದಟ್ಟ ಪ್ರಭಾವ ಇವರ ವಚನಗಳ ಮೇಲಾದುದು ಮೇಲುನೋಟಕ್ಕೇ ಗೋಚರವಾದರೂ ಸ್ವಲ್ಪ ಸೂಕ್ಷ್ಮಾವಲೋಕನ ಮಾಡಿದಾಗ ಇವರ ವಚನಗಳ ವಿಶೇಷತೆ ತಿಳಿದುಬರುತ್ತದೆ.

ಹಾಲೊಳು ಬೆರೆದ ಸಕ್ಕರೆ ಹಾಲನೊಳಕೊಂಬಂತೆ
ನೀರೊಳು ಬೆರೆದ ಉಪ್ಪು ನೀರನೊಳಕೊಂಬಂತೆ
ಮೃಡಗಿರಿ ಅನ್ನದಾನೇಶ ಎನ್ನೊಳು ಬೆರೆದ ನೀನು
ಎನ್ನೊಳೊಳಕೊಂಡಿಪ್ಪೆಯಯ್ಯಾ. ಪು. ೬. ವ. ೨೦.

ಹಾಲು ಸಕ್ಕರೆಗಳ ಅವಿನಾಭಾವ, ನೀರು ಉಪ್ಪುಗಳ ಅಪ್ಪುಗೆ ಅಗೋಚರ–ಅನುಭಾವ ಗಮ್ಯ. ಹಾಗೆ ಶಿವನ-ಶಿವಶರಣರ ಸಂಬಂಧ ಆಂತರಂಗಿಕವಾದುದು. ಅದು ಅಗೋಚರ. ಶರಣರು ಇತರರಂತೆ ಸಾಮಾನ್ಯರಾಗಿ ಕಂಡರೂ, ಅವರ ಅಂತರಂಗದಲ್ಲಿ ಮನೆಮಾಡಿದ ಶಿವತತ್ವದಿಂದಾಗಿ ಅವರ ನಡೆ–ನುಡಿಗಳೆಲ್ಲವೂ ವಿಶಿಷ್ಟವಾಗಿರುತ್ತವೆ. ಹೀಗೆ ದೇವಭಕ್ತರ ಸಂಬಂಧವನ್ನು ವಿವರಿಸುವಲ್ಲಿ ಕಂಡುಬರುವ ಉಪಮಾಲಂಕಾರ ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

ಮುಗಿಲಮರೆಯ ತರಣಿಯಂತೆ
ನೆಲದಮರೆಯ ನಿಧಾನದಂತೆ
ತಿಲದಮರೆಯ ತೈಲದಂತೆ
ಕ್ಷೀರಮರೆಯ ಘೃತದಂತೆ
ನೀರಮರೆಯ ತರಂಗದಂತೆ

ಶಿವಭಕ್ತನ ಶರೀರವಮರೆಮಾಡಿಕೊಂಡು
ಸಕಲ ನಿಃಕಲ ನೀನಾದೆಯಯ್ಯ
ಮೃಡಗಿರಿ ಅನ್ನದಾನೀಶ. ವ. ೨೨

ಸಕಲ ನಿಃಕಲನಾದ ಪರಶಿವನು ಸೃಷ್ಟಿಯ ಪ್ರತಿ ವಸ್ತುವಿನಲ್ಲಿಯೂ ಅದರ ಜೀವಚೈತನ್ಯವಾಗಿದ್ದಾನೆ. ಒಂದನ್ನುಳಿದಿನ್ನೊಂದಿಲ್ಲ ಎನ್ನುವಲ್ಲಿ ಕಂಡುಬರುವ ಶಿವ-ಭಕ್ತ, ಮುಗಿಲು-ತರಣಿ, ನೆಲ-ನಿಧಾನ, ತಿಲ-ತೈಲ, ನೀರು-ತರಂಗ ಇವು ಒಂದಕ್ಕೊಂದು ಆಶ್ರಯ, ಆಧಾರ, ಒಂದರಿಂದ ಒಂದಕ್ಕೆ ಮೆರಗು. ಒಂದರಿಂದೊಂದು ಬೇರೆಯಾದಾಗ ಅವುಗಳ ಅಸ್ತಿತ್ವಕ್ಕೆ ಬೆಲೆಯಿಲ್ಲ. ಹಾಗೆ ಶಿವ ಭಕ್ತರ ಆಧೀನ. ಭಕ್ತ–ಶಿವನಿಗೆ ಆಧಾರ ಎನ್ನುವಲ್ಲಿ ಪ್ರಯೋಗವಾದ ಉಪಮಾಲಂಕಾರದ ಬಳಕೆ ಸಹಜಸುಂದರವಾಗಿದೆ.

ಉಪಮ ಅಲಂಕಾರದಂತೆ ದೃಷ್ಟಾಂತ ಅಲಂಕಾರದ ಪ್ರಯೋಗವೂ ಇವರ ವಚನಗಳಲ್ಲಿ ಸಮರ್ಥವಾಗಿ ಮೂಡಿಬಂದಿದೆ.

ಅನ್ಯಾಯಕ್ಕೆ ರಾಜಾಶ್ರಯ ದೊರೆತರೆ ನ್ಯಾಯಕ್ಕೆ ಠಾವಿನ್ನೆಲ್ಲಿಯದೋ
ಅಜ್ಞಾನವೆ ಆಡಳಿತ ನಡೆಸುತಿರೆ ಜ್ಞಾನಕ್ಕೆ ಠಾವಿನ್ನೆಲ್ಲಿಯದೋ
ಅನಾಚಾರವೆ ಅಧಿಕಾರ ಹೊತ್ತರೆ ಸದಾಚಾರಕ್ಕೆ ಠಾವಿನ್ನೆಲ್ಲಿಯದೋ
ನಗ್ನತೆಯೆ ನಾಗರಿಕತೆಯಾದರೆ ಸಂಸ್ಕೃತಿಗೆ ಠಾವಿನ್ನೆಲ್ಲಿಯದೋ
ಮೃಡಗಿರಿ ಅನ್ನದಾನೀಶ ಡಂಭಾಚಾರವೇ ಧರ್ಮವಾಗುತಿರೆ
ಸದ್ಧರ್ಮಕ್ಕೆ ಠಾವಿನ್ನೆಲ್ಲಿಯದೋ. ವ. ೫೧

ಜನಾಂಗದ ಸುಖಜೀವನಕ್ಕೆ, ದೇಶ ಸುಭಿಕ್ಷವಾಗಿರಲು ಸಂಸ್ಕೃತಿಯ ಪಾಲನೆ, ಜ್ಞಾನ, ಸದಾಚಾರ, ಧರ್ಮ, ನ್ಯಾಯಗಳು ಇಂದು ಅರ್ಥಹೀನವಾಗಿ ವಿಪರ್ಯಾಸ ಅರ್ಥದಲ್ಲಿ ಬಳಕೆಯಾಗುತ್ತಿವೆ. ನಮ್ಮ ಸಂಸ್ಕೃತಿ ಬರಬರುತ್ತ ನಗ್ನವಾಗುತ್ತಿದೆ. ಅಜ್ಞಾನ, ಅನಾಚಾರಗಳು, ಅಧರ್ಮ, ಅನ್ಯಾಯಗಳು ತಾಂಡವವಾಡುತ್ತಿವೆ ಎಂಬ ಸಾಮಾಜಿಕ ನೋವು ಕಳಕಳಿಗಳು ಈ ವಚನದಲ್ಲಿ ವ್ಯಕ್ತವಾಗುತ್ತವೆ.

ಗೇಣುದ್ದ ಗುಮ್ಮಿಯ ತುಂಬಲಾರದೆ
ಬಳಲಿ ಬೆಂಡಾಗುತ್ತಿದೆ ಲೋಕ
ಗುಮ್ಮಿಯ ತುಂಬಿದವರಿಲ್ಲ
ತುಂಬಿ ತುಳುಕಿಸಿದವರು ಮತ್ತಿಲ್ಲ
ನಿತ್ಯ ಸೋರುವ ಗುಮ್ಮಿಯ ನೆಚ್ಚದೆ
ಆದರೊಡೆಯ ಮೃಡಗಿರಿ ಅನ್ನದಾನಿಯ
ಕೃಪಾ ಪ್ರಸಾದವ ಕೊಂಡು ಬದುಕಿರಯ್ಯ. ವ. ೨೩೮

ಅನ್ನಮಯ ಪ್ರಪಂಚದಲ್ಲಿ ಬದುಕುವ ಮಾನವನ ನಿರಂತರ ಹೋರಾಟ ಅನ್ನವನ್ನು ದೊರಕಿಸಿಕೊಳ್ಳುವತ್ತ ಮಾತ್ರ. ಆದರೆ ಇದು ಒಂದು ಹೊತ್ತಿನ ಒಂದು ದಿನದ ಸಮಸ್ಯೆ

ಯಲ್ಲ. ಜೀವನದುದ್ದಕ್ಕೂ ನಡೆಯುವ ಹೋರಾಟ ಇದರಲ್ಲಿ ದೇವರತ್ತ ಗಮನ ಸಾಧ್ಯವೇ ಇಲ್ಲ ಎಂಬ ವಿಡಂಬನಾಧ್ವನಿಯಿದೆ.

ಸಾಹಿತ್ಯದಲ್ಲಿ ಒಂದರ ಪ್ರಭಾವ ಮತ್ತೊಂದರಲ್ಲಿ ಬಿಂಬ ಪ್ರತಿಬಿಂಬ ಭಾವದಂತೆ ತೋರುವುದು ಸಹಜ. ಅದು ಪರಂಪರಾಗತೆಯ ಸಂಕೇತವೂ ಹೌದು. ಆದರೆ 'ಪರರೊಡ್ಡವವನ್ನು' ತನ್ನದೆನ್ನುವುದು ಕೃತಿಚೌರ್ಯದ ಮಹಾಪರಾಧವಾಗುತ್ತದೆ. ವಚನ ಸಾಹಿತ್ಯದಂತಹ ಸುಪ್ರಸಿದ್ಧ ರೂಪದಲ್ಲೂ ಈ ಬಗೆಯ ಅನುಕರಣೆ ಅಲ್ಲಲ್ಲಿ ಕಂಡುಬಂದಿದೆ ಯಾದರೂ ಒಂದರಿಂದೊಂದಕ್ಕೆ ವಿಶೇಷತೆ ಇದ್ದೇ ಇದೆ. ವಚನ ಸಾಹಿತ್ಯ ನಿತ್ಯನೂತನ ಅಲ್ಲಿ ಕೃತಿಚೌರ್ಯದ ಅಪರಾಧವಿಲ್ಲ. ಪರಂಪರಾಗತದ ಸಂಕೇತವಿದೆ.

ಶ್ರೀಗಳವರ ವಚನಾವಲೋಕದಲ್ಲಿ ಅಂಥ ಸಂಶಯಕ್ಕೆಡೆಯಿಲ್ಲ. ಬಸವಣ್ಣನಿಂದ ಸರ್ವಜ್ಞನವರೆಗಿನ ವಚನಗಳ ಪ್ರಭಾವ ಕಂಡುಬಂದಿದೆಯಾದರೂ ಅಂಧಾನುಕರಣವಿಲ್ಲ, ವಸ್ತುತಂತ್ರ ವೈವಿಧ್ಯತೆ, ನಿರೂಪಣಾ ರೀತಿಯಲ್ಲಿ ಯುಗಧರ್ಮಗಳ ವ್ಯತ್ಯಾಸವೇ ಕಂಡು ಬರುತ್ತದೆ. ಇಲ್ಲಿ ಕೆಲವು ಹಿರಿಯ ವಚನಕಾರರ ಛಾಯೆಯನ್ನು ಮಾತ್ರ ಗುರುತಿಸ ಬಹುದಾಗಿದೆ.

ನೀನೊಲಿದರೆ ಹಾವು ಹೂವಾಗುವುದಯ್ಯ
ನೀನೊಲಿದರೆ ಫಲ ಪಕ್ವಾನ್ನವಾಗುವುದಯ್ಯ
ನೀನೊಲಿದರೆ ದುಃಖ ದೂರವಾಗುವದಯ್ಯ
ನೀನೊಲಿದರೆ ಸಕಲ ಸಮಸ್ಯೆಗಳು ಪರಿಹಾರವಾಗುವವಯ್ಯ
ಮೃಡಗಿರಿ ಅನ್ನದಾನೀಶ ನಿನ್ನೊಲುಮೆಯಲಿ ಏನಿಲ್ಲವಯ್ಯ. ವ. ೩೯

ಎಂಬ ವಚನ ಬಸವಣ್ಣನವರ

ನೀನೊಲಿದರೆ ಕೊರಡು ಕೊನರುವುದಯ್ಯ
ನೀನೊಲಿದರೆ ಬರಡು ಹಯನಹುದಯ್ಯ
ನೀನೊಲಿದರೆ ವಿಷ ಅಮೃತವಹುದಯ್ಯ
ನೀನೊಲಿದರೆ ಸಕಲ ಪಡಿಪದಾರ್ಥಗಳು ಇದಿರಲ್ಲಪ್ಪವು
ಕೂಡಲಸಂಗಮದೇವಾ.

ಮೇಲಿನ ವಚನದಲ್ಲಿ ಅನುಕರಣವಿದೆಯಾದರೂ ಇಂದಿನ ಸಂಕೀರ್ಣಮಯ ಬದುಕಿನಲ್ಲಿ ಕಾಣಬರುವ ದುಃಖ, ಸಮಸ್ಯೆಗಳು ಇಂದಿನ ಕಾಲಮಾನದ ರೂಪಗಳಾಗಿ ಕಂಡು ಬರುತ್ತಿಲ್ಲವೆ?

ನೊಣ ಹಾರುತಿರೆ ಕಪ್ಪೆ ಬೆನ್ನಟ್ಟುವುದು
ಕಪ್ಪೆ ಜಿಗಿಯುತಿರೆ ಹಾವು ಹಾತೊರೆವುದು. ವ, ೮೪

ಎಂಬ ವಚನ

'ಹಾವಿನ ನೆರಳಲ್ಲಿ ಕುಳಿತ ಕಪ್ಪೆ
ಹಸಿದು ಹಾರುವ ನೊಣಕ್ಕೆ ಆಶಿಸಿದಂತೆ.'

ಎಂಬ ಬಸವಣ್ಣನವರ ವಚನವನ್ನು ನೆನಪಿಸುತ್ತದೆ. ಆದರೆ 'ಸಾವು ನೆರಳಂತೆ ಹಿಂಬಾಲಿಸುವ' ಹೋಲಿಕೆ ಮಾತ್ರ ಮನೋಜ್ಞವಾಗಿದೆ.

ಮೂರ ಮುರಿದು ಮೂರ ತೊರೆದು
ಮೂರ ಸಂಗದಿ ಮೂರ ಪಡೆದು
ಮೂರರಿಂದ ಮೂರ ಪೂಜಿಸಿ
ಮಾರಾರಿಯ ಕೃಪೆ ಪಡೆಯೆಂದನಯ್ಯ
ಮೃಡಗಿರಿ ಅನ್ನದಾನೀಶ. ವ. ೨೮೨

ಮತ್ತು

ಆರು ಭ್ರಮೆಗಳ ತೊರೆಯಲು, ಆರು ವೈರಿಯಂಗೆಲ್ಲಲು
ಆರು ಸಂಪತ್ತಿಗಧಿಪತಿಯಾಗಲು, ಆರನಾಶ್ರಯಿಸಬೇಕು
ಆರಂಗನಾಗಿ, ಆರು ಶಕ್ತಿಯ ಆರುಲಿಂಗವಹೊಂದಿ
ಆರು ಭಕ್ತಿಯಿಂ ಆರುಹಸ್ತದಿ ಆರು ಪ್ರಸಾದವಕೊಂಡು
ಆರು ಚಕ್ರಗಳ ಮಧ್ಯದಿ ಆರಾರಾಕೃತಿಯಿಂ
ಪರಿಶೋಭಿಸುವ ಆರು ವರ್ಣದ ಮಂತ್ರವ ಜಪಿಸಿ
ಆರಾರರಿಯದ ಮಾರಮರ್ದನ ಪರಮನಿರಂಜನ
ಮೃಡಗಿರಿ ಅನ್ನದಾನಿಯನರಿದು ಧೀರನಾಗಬೇಕಯ್ಯ. ವ. ೨೬೯

ಮೇಲಿನ ವಚನಗಳು ಮೇಲುನೋಟಕ್ಕೆ ಶಬ್ದಾಲಂಕಾರದಂತೆ ತೋರುತ್ತಿದ್ದರೂ ಇಲ್ಲಿ ಪ್ರಯೋಗವಾಗಿರುವ ಮೂರು ಮತ್ತು ಆರು ಸಂಖ್ಯೆಗಳು ವೀರಶೈವ ಪರಿಭಾಷಾ ಕೋಶ ಗಲ್ಲಿ ವಿಶೇಷಾರ್ಥವನ್ನು ಧ್ವನಿಸುವುದರೊಂದಿಗೆ ಬೆಡಗಿನ ವಚನಗಳಾಗಿಯೂ ರಂಜಿಸುತ್ತವೆ.

ವ್ಯಕ್ತಿ ಸಾಹಿತ್ಯಗಳು ಎಷ್ಟೇ ಪ್ರಾಚೀನವೆನಿಸಿದರೂ ಅಲ್ಲಿ ಕಾಲಪರಿಸರಗಳ ಪ್ರಭಾವವನ್ನು ಗುರುತಿಸುವಂತೆ ಸಮಕಾಲೀನ ಇತಿಹಾಸದಂತೆಯೂ ಕೆಲಸಮಾಡುತ್ತವೆ. ಅವು ಯುಗಮಾನದ ಸಾಂಸ್ಕೃತಿಕ ರಾಯಭಾರಿಗಳೂ ಆಗಿರುವುದು ತಿಳಿದುಬರುತ್ತದೆ. ಹಾಗೆ ಶ್ರೀಗಳವರ ವಚನಗಳಲ್ಲಿಯೂ ಯುಗಧರ್ಮಗಳನ್ನು ಗುರುತಿಸುವ ಒಂದು ಪ್ರಯತ್ನ ಮಾತ್ರವಲ್ಲ. ಸಾಹಿತಿ ಕಾಲಪರಿಸರದ ಕೈಗೂಸು ಎನ್ನುವದಕ್ಕೊಂದು ನಿದರ್ಶನ. ಅಂಥ ಕೆಲವು ವಚನ–

"ಕ್ಷಿಪಣಿಗಿರಿ ಬಲು ಮುಂದೆ ನಿನ್ನ ವೇಗ
ಕ್ಷಣಾರ್ಧದಲ್ಲಿ ಭೂಮಂಡಲವ ಸುತ್ತಿ ಬರುವೆ ನೀನು." ವ. ೯೭.

"ರಾಜಕಾರಣಿಯಾಗಿ ಫಲವೇನು? ಸ್ವಾರ್ಥ ಪ್ರತಿಷ್ಠೆ ಬಿಡದನ್ನಕ್ಕರ
ಧಾರ್ಮಿಕನೆನಿಸಿ ಫಲವೇನು ಡಂಭಾಚಾರವ ತೊರೆಯದನ್ನಕ್ಕರ." ವ. ೧೦೮

ಹೋಕಾಯಂತ್ರದಿಂದ ಉದೀಚಿಯ ಗುರುತಿಸುವಂತೆ
ಸಾಕಾರದಿಂ ನಿರಾಕಾರವ ನಿರೀಕ್ಷಿಸಬೇಕು
ಫೋನಿನಿಂ ದೂರ ಶ್ರವಣವನಾಲಿಸುವಂತೆ
ಮಂತ್ರದಿಂ ಮಹಾದೇವನ ನೋಡಬೇಕು. ವ. ೧೪೧

ಹರಿವತೊರೆಗೆ ಆಣೆ ಕಟ್ಟುಗಳ ಕಟ್ಟಿದರಲ್ಲದೆ
ಸರಿವ ಮನವ ಬಂಧಿಸಿದರೇನಯ್ಯಾ. ವ. ೨೬

ಮೇಲಿನ ಸಾಲುಗಳಲ್ಲಿ ಉಕ್ತವಾಗಿರುವ ಕ್ಷಿಪಣಿ, ಫೋನು, ಆಣೆಕಟ್ಟು ರಾಜಕಾರಣಿ ಪದಗಳು ಇಂದಿನ ವೈಜ್ಞಾನಿಕ ಯುಗದ ಪ್ರತಿನಿಧಿಗಳಾಗಿವೆ. ಆಡುನುಡಿ–ಗಾದೆ ಸೊಗಡು.

ದಾರಿಯ ತೋರಬಂದವರು ನಿಲ್ಲುವರಲ್ಲದೆ ಜೊತೆಗೆ ಬಾರರು. ವ. ೫೮

ಬೇಲಿಯಿಕ್ಕದ ಹೊಲ ರಕ್ಷಣೆಯ ಹೊಂದಬಹುದೇನಯ್ಯ.
ಬೆದರು ಇಲ್ಲದ ಬೆಳೆ ಉಳಿಯಬಹುದೇನಯ್ಯ. ವ. ೯೮

ಕಾದ ಕಬ್ಬುನವ ಬಡಿದು ಬಡಿದು ರೂಪುಗೊಳಿಸುವರಲ್ಲದೆ
ಮುದ್ದಿಕ್ಕಿ ಸಂತೈಸಬಹುದೆ? ವ. ೧೦೪

ಕೈದುವ ಕೊಡುವರಲ್ಲದೆ ಕಲಿತನವ ಕೊಡಲಾಗದು
ಪಾಠ ಕೊಡುವರಲ್ಲದೆ ಪರಿಣತಿಯ ಕೊಡಲಾಗದು. ವ. ೧೨೧

ವಿತ್ತಾಪಹಾರಕೆ ಗುರುಗಳು ವಿಪುಲರಲ್ಲದೆ
ಹೃತ್ತಾಪಹಾರಕ ಗುರುಗಳು ವಿರಳವಯ್ಯ. ವ. ೧೨೪

ಹಾರುವ ಹಕ್ಕಿಗೆ ಗರಿ ಭಾರವಲ್ಲ
ದುಡಿಯುವ ವ್ಯಕ್ತಿಗೆ ಸತಿ-ಸುತರು ಭಾರವಲ್ಲ ವ. ೨೮೩

ಹೊಲಬನರಿಯದ ಹೊತ್ತುಗಳೆದರೆ ಮತ್ತೆ ಬಪ್ಪುದೆ?
ಮುಕ್ತಿಗಿಂತಲೂ ಹೊತ್ತು ಉತ್ತಮ ನೋಡಾ– ವ. ೪೬೫

ಮರವನಾಶ್ರಯಿಸಿದ ಬಳ್ಳಿ ಬೆಳೆಯುವುದು
ಶಿರವನಾಶ್ರಯಿಸಿದ ಕೇಶ ಬೆಳೆವುದು. ವ. ೩೭೭

ಅನ್ನವಾಯಿತೆಂಬುದ ತಿಳಿಯಲು ಒಂದಗುಳ ಹಿಚುಕದರೆ ಸಾಲದೆ
ಮಳೆಯಾದುದ ತಿಳಿಯಲು ನೆಲ ನೋಡಿದರೆ ಸಾಲದೆ. ವ. ೩೯೪

ಹೊರಗೆಲ್ಲ ತೋರಣ, ಒಳಗಿಲ್ಲ ಹೂರಣ, ಇದೆಂಥ ಕಾರಣ
ಹೆಸರು ನೋಡೆ ಹಾಲಪ್ಪ ಮನೆಯಲ್ಲಿ ಮಜ್ಜಿಗೆಯಿಲ್ಲದೊಡೆ
ಅದೆಂತು ಸಾರ್ಥಕವಯ್ಯ. ವ. ೪೮೯

ಸಾರಿನೊಳು ಸಟ್ಟುಗ ಸುತ್ತಾಡಿದರೇನು
ಸಾರಸವಿಯ ಹೀರ ಬಲ್ಲುವೆ. ವ. ४೧४

ಹೀಗೆ ಸರ್ವವಿಧದಲ್ಲಿಯೂ ಇದೊಂದು ಮನೋಜ್ಞ ನಿರೂಪಣೆಯ ವಿಶಿಷ್ಟ ಶೈಲಿಯ ವಚನ ಸಂಕಲನವೆಂಬುದರಲ್ಲಿ ಬೇರೆ ಮಾತಿಲ್ಲ.

ಹೃದಯ ತೆರೆಯುವ 'ವಚನ-ಸಂಪದ'ದೊಳಗಿನ

ಲೌಕಿಕ ಸಂಪದ

— ಅಂದಾನೆಪ್ಪ ವಿಭೂತಿ, ಬೆಳ್ಳಟ್ಟಿ

ಶ್ರೀ ಮ. ನಿ. ಪ್ರ. ಜಗದ್ಗುರು ಅನ್ನದಾನ ಮಹಾಸ್ವಾಮಿಗಳವರ ಅನುಭವದ ಪ್ರತಿಫಲವೇ ಈ ವಚನ ಸಂಪದ. ಪ್ರತಿ ಓದುಗನ ಹೃದಯದ ಕದ ಬಡಿದು ತೆರೆದು ನೇರವಾಗಿ ಒಳಸೇರಬಹುದಾದ ಸಾಮರ್ಥ್ಯವನ್ನು ಇದು ಪಡೆದಿದೆ. ತಮ್ಮ ಗುರು-ದೇವರು-ದೈವ-ಸರ್ವಸ್ವವೂ ಆದಂಥ ಮೃಡಗಿರಿ ಅನ್ನದಾನೀಶನನ್ನು ಸ್ಮರಿಸುತ್ತ, ಹೇಳಬೇಕಾದುದನ್ನು ನೇರವಾಗಿ, ಸರಳವಾಗಿ, ಅತ್ಯಂತ ಸಮಯೋಚಿತವಾಗಿ, ಸಂದರ್ಭೋಚಿತವಾಗಿ, ಅರ್ಥಪೂರ್ಣವಾಗಿ ಹೇಳಿದ್ದಾರೆ. ಬದುಕಿನ ಪ್ರತಿ ರಂಗವನ್ನು ಹೊಕ್ಕು ಅಲ್ಲಿನ ಒಳಿತು-ಕೆಡುಕುಗಳ ಹೆಕ್ಕಿ ತಮ್ಮದಾದ ಸರಳ ಭಾಷೆಯಲ್ಲಿ ಬಿಚ್ಚಿಟ್ಟಿದ್ದಾರೆ. ಯಾವುದನ್ನೂ ಮುಚ್ಚಿಡಲಾರದ ಶ್ರೀಗಳು ಲೌಕಿಕ-ಅಲೌಕಿಕಗಳನ್ನು ಮನ-ತಲುಪುವಂತೆ ನವಿರಾದ ಹಾಸ್ಯದೊಂದಿಗೆ, ವ್ಯಂಗ್ಯವಾಗಿ, ವಿಡಂಬನಾತ್ಮಕವಾಗಿ, ಟೀಕಾತ್ಮಕವಾಗಿ ಎಲ್ಲಕ್ಕಿಂತಲೂ ಹೆಚ್ಚಾಗಿ ಹೆಚ್ಚು ಕಾಳಜಿ ಪೂರ್ವಕವಾಗಿ, ಪದರು-ಪದರುಗಳಾಗಿ ಬಿಂಗಡಿಸಿ ಎಲ್ಲರೂ ಮೆಚ್ಚುವಂತೆ ಜಗದೆದುರು ತೆರೆದಿಟ್ಟಿದ್ದಾರೆ. ಇಲ್ಲಿ ನೋಡಿ, ಶ್ರೀಗಳು ಚಿತ್ರಿಸಿದ ಲೌಕಿಕ ಸಂಪದದ ಚಿತ್ರಣ,

ಬಾಳು; ಅನ್ಯರ ಬಾಳಗೊಡು
ನಗು; ತನ್ನವರ ನಗಿಸು
ಅರಳು; ಇತರರ ಅರಳಿಸು
ಬೆಳಗು; ದೇಶವ ಬೆಳಗಿಸು
ಇದುವೆ ಜೀವನದ ನಿಜ ಬದುಕು ನೋಡಾ
ಮೃಡಗಿರಿ ಅನ್ನದಾನೀಶ.

ಬದುಕನ್ನು ಎಷ್ಟೊಂದು ವಿಶಾಲ ದೃಷ್ಟಿಯಿಂದ ನೋಡಿದ್ದಾರೆ, ಮೆಚ್ಚುವಂಥದು. ಬದುಕಿನ ವಾಸ್ತವತೆಗೆ ಜನಪರ ಭಾವನೆಗಳಿಗೆ ಸ್ಪಂದಿಸಿದ್ದಾರೆ. ಜೀವನ ಕ್ರೀಡಾಂಗಣದಲ್ಲಿ ಧುಮುಕಬೇಕಾದದ್ದು ಕರ್ತವ್ಯ. ಸೋಲು-ಗೆಲುವುಗಳು ಮನುಷ್ಯನಾಧೀನವಲ್ಲ ಸೋಲು-ಗೆಲುವಿನ ಮೂಲ, ಗೆಲುವೆನೆಂಬ ಸೊಲ್ಲು ಸೋಲಿಗೆ ಮೂಲ.

ನಶ್ವರ ಪ್ರಪಂಚದಿ ಶಾಶ್ವತ ಕೀರ್ತಿಯ ಗಳಿಸಿದವರು ವಿರಳ, ಅಹಂಕಾರಿಗಳಾಗಿ ಅಳಿದವರಲ್ಲದೇ ಉಳಿದವರು ಮಾತ್ರ ಇಲ್ಲ. ಇದು ಯಾವತ್ತೂ ಉಳಿದಿರುವಂಥ ಸತ್ಯತೆ.

ಆದರೂ ಬದುಕಬೇಕು. ಸುಖ-ದುಃಖ, ಬಡತನ-ಸಿರಿತನ, ಜೀವನ ನಾಣ್ಯದ ಎರಡು ಮುಖಗಳೆಂಬ ಅರಿವಿನೊಡನೆ ಬದುಕಲೆಂದೇ ಹುಟ್ಟಿಸಿದವನನ್ನು ನೆನೆಯುತ್ತ ಬದುಕಬೇಕು.

ಹೋರಾಟ-ಏರಾಟ-ಮೇಲಾಟ-ತೊಳಲಾಟ-ಮತ್ತೆ ಜಂಜಾಟವಿದ್ದರೂ ಬದುಕಿ ಬಾಳಬೇಕು, ಬದುಕಲೇಬೇಕು. ಬರುವಾಗ ತರಲಿಲ್ಲ. ಹೋಗುವಾಗ ಒಯ್ಯಲಿಲ್ಲ. ದಿನ-ದಿನವೂ ಸಂಪಾದನೆ ನಿಲ್ಲಲಿಲ್ಲ. ಹೊಲ-ಮನೆ ಅಧಿಕಾರ ಎಲ್ಲವೂ ಬಂದರೂ ತೃಪ್ತಿ ಇಲ್ಲ. ಸಾಕೆಂಬ ಮಾತು ಇಲ್ಲವೇ ಇಲ್ಲ. ಶಾಶ್ವತದ ಭ್ರಮೆ ದಟ್ಟವಾಗಿ ಅಡಗಿರುತ್ತದೆ. ಮುಂದೊಬ್ಬ ಬಂದ, ಹಿಂದೊಬ್ಬ ಬರುವ, ಮುಂದೆ ಬಂದವ ಮುಂದೆಯೇ ಹೊರಟ, ಹಿಂದೆ ಬಂದರೂ ಹಿಂದೆಯೆ ಹೊರಡುವ, ಮುಂದೆ ಬಂದು ಹಿಂದೆ ಹೋಗಬಹುದು, ಹೋಗುವುದಂತೂ ನಿಶ್ಚಿತ, ಸತ್ಯ! ಯಾರಿಗೆ ಯಾರಿಲ್ಲ ಎರವಿನ ಸಂಸಾರ ನೀರ ಮೇಲಣ ಗುಳ್ಳೆ, ನಿಜವಲ್ಲ ಹರಿಯೇ, ಇದುವೇ ಜೀವನ ಬದುಕು.

ದೇಶ-ಭಾಷೆಯ ವಿಷಯವಾಗಿ ಅಭಿಮಾನದಿಂದ, ಹೆಮ್ಮೆಯಿಂದ ನುಡಿದಿದ್ದಾರೆ. ಮಲಗಿದವರನ್ನು ಎಚ್ಚರಿಸಿದ್ದಾರೆ, ಸಮಗ್ರತೆಯನ್ನು ಸಾಧಿಸಿದರೆ ಮಾತ್ರ ದೇಶ ಸುಭದ್ರ ವಾಗುವುದನ್ನು ಒತ್ತಿ ಹೇಳಿದ್ದಾರೆ.

ಚಿನ್ನದ ನಾಡಿನಲ್ಲಿ ಧರಿಸಲು ಹಿತ್ತಾಳೆ ಸಿಗುವುದಿಲ್ಲ, ರೇಶ್ಮೆಯ ಬೀಡಿನಲಿ ಉಡಲು ಉರುಟು ಬಟ್ಟೆಗೆ ಕೊರತೆ, ಕನ್ನಡಮ್ಮನ ಮಕ್ಕಳಿಗೆ ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಸಂಚಕಾರ, ಎಂಥ ದುರದೃಷ್ಟ?! ಇಂಥ ದುರ್ಬಲ ಪರಿಸ್ಥಿತಿ ಬೇರೆಲ್ಲೂ ಇರಲಿಕ್ಕಿಲ್ಲ.

ರೈತನನ್ನು ಕುರಿತು ಹೇಳಿದ್ದು ತುಂಬ ಅರ್ಥಪೂರ್ಣವಾಗಿದೆ. ಕಸ್ತೂರಿ ಅರಮನೆ-ಗುರುಮನೆ ಸೇರಬಹುದು. ಕಸ್ತೂರಿಮೃಗ ಮಾತ್ರ ಕಾಡಿನಲ್ಲಿ ಅಲೆಯುವುದು, ಬೆಳೆದ ವಸ್ತು ಬೆಲೆ ಬಾಳಬಹುದು. ಬೆಳೆಯುವ ರೈತನಿಗೆ ಬೆಲೆ ಇಲ್ಲ. ರೈತರ ಉದ್ಧಾರವಾಗ ಬೇಕೆನ್ನುವುದು ಶ್ರೀಗಳ ಪ್ರಾರ್ಥನೆ.

ಮಠ-ಮಂದಿರಗಳೆಲ್ಲ ತಮ್ಮ ಮೂಲ ಉದ್ದೇಶವನ್ನು ಮರೆತು ದ್ರೋಹಿಗಳ ಕಾರ್ಯದಲ್ಲಿ ನಿರತವಾಗಿರುವುದನ್ನು ಕಂಡು ಲೇಖಕರು ವಿಷಾದಿಸಿದ್ದಾರೆ. ವ್ಯಕ್ತಿ-ಪ್ರತಿಷ್ಠೆ ಗಾಗಿ ಸ್ವಾಮಿಗಳ ಉಪಯೋಗ, ಸ್ವಾರ್ಥ-ಸಾಧನೆಗಾಗಿ ಗುರುಗಳ ಅವಶ್ಯಕತೆ ಚುನಾವಣೆ ಯಶಸ್ಸಿಗಾಗಿ ಪೂಜ್ಯರ ಹಾರೈಕೆ! ಸಮಯ ಸಾಧಕರಿಂದ ದೇಶದ ಉದ್ಧಾರವಾಗಬಹುದೇ?

ರಾಜಕಾರಣಿಗಳಿಗೂ ತಮ್ಮ ಮಾತಿನ ಚಾಟಿಯನ್ನು ಬೀಸಿದ್ದಾರೆ. ವರುಷಕ್ಕೊಮ್ಮೆ ಗಾಂಧಿಯನ್ನು ನೆನೆಯುವುದು ಯಾಂತ್ರಿಕತೆಯಾದಂತಾಗಿದೆ. ಮಾಡುವುದೆಲ್ಲ ಅನಾಚಾರ, ಜನ ಹಿತ ಸಾಧಿಸುವುದಾಗಿ ಸಾರಿ, ಸ್ವಜನಹಿತಕ್ಕಾಗಿ ಅಧಿಕಾರ, ಐಶ್ವರ್ಯದ ದುರುಪಯೋಗಮಾಡಿಕೊಳ್ಳುವುದು, ಇಂಥವರು ಮಂತ್ರಿಯಾದರೇನು? ಯಾವ ಸ್ಥಾನದಲ್ಲಿದ್ದರೇನು? ದೇಶದ ಪ್ರಗತಿ ಮಾತ್ರ ಅಸಾಧ್ಯ! ಜನಸಂಖ್ಯೆ ನಿಯಂತ್ರಣ, ಒಂದು ಎರಡು ಬೇಕು-ಮೂರು ಸಾಕು. ಒಂದೇ ಸಾಕು ಅಥವಾ ಬೇಡವೇ ಬೇಡ, ಇವೆಲ್ಲ ಹೇಳುವುದಕ್ಕೆ ಬರೆಯುವದಕ್ಕೆ ಆಕರ್ಷಕ, ಬೇಕು-ಬೇಡಗಳನ್ನು ನಿಯಂತ್ರಿಸುವುದು

ನಮ್ಮಿಷ್ಟವಲ್ಲ. ಮುಖ್ಯವಾಗಿ ಬೇಕಾಗಿರುವುದು ಜೀವನ ಸಂಯಮ, ರಾಷ್ಟ್ರೀಯ ಮನೋಭಾವನೆ.

ಅಧಿಕಾರ ಐಶ್ವರ್ಯದ ಮದದಲ್ಲಿ, ಬೀರು-ಬ್ರಾಂಡಿಯ ಅಮಲಿನಲ್ಲಿ ಜನತೆಯನ್ನು ಮರೆಯುವಂಥ ನಾಯಕರನ್ನು ಅವರ ವರ್ತನೆಯನ್ನು ಮೋಸ-ವಂಚನೆಯನ್ನು ತೆರೆದಿರಿಸಿದ್ದಾರೆ.

ಜನತಾ ಜನಾರ್ಧನನಿಗೆ ಅವಶ್ಯಕ ವಸ್ತುಗಳನ್ನಿತ್ತು ಸಲಹುವ ಸುಬುದ್ಧಿ ಇಂದಿನ ಮುಖಂಡರಲ್ಲಿ ಹುಟ್ಟಬೇಕು. ಅವರಲ್ಲಿ ಪ್ರಾಮಾಣಿಕತೆ ಬರಬೇಕು. ಕಾಳಜಿ ಬೇಕು. ಸೇವಾ ಮನೋಭಾವನೆ ಬೇಕು, ಬರೀ ಘೋಷಣೆ ಮಾಡಿದರೆ ಕುಡುಕನ ಪ್ರತಿಜ್ಞೆಯಂತಾಗುತ್ತದೆ, ಶ್ರೀ ಸನ್ನಿಧಿಯವರ ಉದಾಹರಣೆ ಸಮರ್ಥನೀಯವಾಗಿದೆ. ಕುಡಿದು ಮಾಡಿದ ಕುಡುಕನ ಪ್ರತಿಜ್ಞೆ, ಚುನಾವಣೆ ಕಣದಲ್ಲಿ ನೀಡಿದ ಆಶ್ವಾಸನೆ, ಸ್ಮಶಾನ ಯಾತ್ರೆಯಲ್ಲಿ ಬಂದ ವೈರಾಗ್ಯ, ಬಲವಂತರೊಡ ಮಾಡಿದ ಬಡವನ ಸಿಟ್ಟು, ಜಲದಿ ಬರೆದ ಲಿಪಿಯಂತೆ, ನಿಜವಾದ ದೇಶ-ಭಕ್ತ ಆಶೆ ರೋಷ ಸ್ವಾರ್ಥಗಳನ್ನು ತ್ಯಜಿಸಬೇಕು.

ಪೂಜ್ಯ ಶ್ರೀಗಳು ಜಗವೆಂಬ ರಂಗ ಮಂಟಪದಲ್ಲಿ ತಮ್ಮನ್ನು ಸಮರ್ಪಿಸಿಕೊಂಡ ರೀತಿ ಅಭಿನಂದನೀಯ.

ಜಗವೆಂಬ ರಂಗಮಂಟಪದಿ
ಕೋಟಿ ಕೋಟಿ ಜೀವಿಗಳೇ
ನಟ-ನಟಿಯರಯ್ಯಾ
ನರಕುಲ ನಾಟಕದಿ ನನಗಿದೇ
ಪಾತ್ರ ಬೇಕೆಂಬ ಹಟ ಸಲ್ಲದಯ್ಯಾ
ಸೂತ್ರಧಾರ ಮೃಡಗಿರಿ
ಅನ್ನದಾನೀಶನಿತ್ತ ಪಾತ್ರಕ್ಕೆ
ತಕ್ಕ ನಟನಾಗಬೇಕಯ್ಯಾ
ಆವ ಪಾತ್ರವಾದರೇನು?
ಸೂತ್ರಧಾರನ ಕೃಪೆಗೆ
ಪಾತ್ರನಾದರೆ ಸಾಕಯ್ಯಾ.

ಅರ್ಪಿತ ಭಾವನೆ ನೋಡಿ ಇಷ್ಟು ಕಾಲ ಕಳೆದುಕೊಂಡಿರುವದಕ್ಕೆ ದುಃಖವಿಲ್ಲ ಪಡೆದುಕೊಂಡದ್ದು ಕೂಡ ಕಡಿಮೆಯಿಲ್ಲ. ಜೀವಿಸುವ ವಿಶ್ವಾಸ, ಅದುವೇ ಜೀವನದ ನಿಶ್ವಾಸ, ನನ್ನಿಂದ ಈ ಲೋಕ, ಜಗವೆಲ್ಲ ನನಗಾಗಿ ಎಂಬ ವಿಶ್ವಾಸವೇ ಜೀವನದ ಸಾಫಲ್ಯ. ಮರಣವ ಮೀರಿ ಮಹದೇವನ ತೋರಬಲ್ಲುದೆ ಆಧ್ಯಾತ್ಮಿಕ ಸಾಹಿತ್ಯ.

ಯುವ ಶಕ್ತಿ

ಈ ದೇಶದ ಭವಿಷ್ಯ, ಆಗು-ಹೋಗುಗಳೆಲ್ಲ ಇಂದಿನ ಯುವಕರನ್ನು ಅವಲಂಬಿಸಿವೆ.

ನಾಳಿನ ದೇಶದ ಆಡಳಿತ ಸೂತ್ರಕ್ಕೆ ಜವಾಬ್ದಾರರಾಗುವವರು, ಉತ್ತಮ ನಾಗರಿಕರಾಗ ಬೇಕಾದವರು ತಂದೆ-ತಾಯಿಗಳ ಆಶೆ-ಆಕಾಂಕ್ಷೆಗಳೆಲ್ಲ ಮಕ್ಕಳ ಬೆಳವಣಿಗೆಯ ಮೇಲೆ ಅವಲಂಬಿತವಿರುತ್ತವೆ. ಮಕ್ಕಳು ಜಾಣರಾದರೆ ತಂದೆ ತಾಯಂದಿರರಿಗೆ ಅದುವೇ ತೃಪ್ತಿ. ಅದೇ ಮಕ್ಕಳು ಬೇಜವಾಬ್ದಾರರಾದರೆ, ಅನಾಗರಿಕರಾದರೆ ಅದೊಂದು ದುರದೃಷ್ಟ. ಮಕ್ಕಳನ್ನು ಹಡೆದದ್ದೇ ಪಾಪಕೃತ್ಯ ಎಂದೆನಿಸುತ್ತದೆ ಹಡೆದವರಿಗೆ! ಇಂಥದೇ ಸ್ಥಿತಿ ಈಗ ಈ ದೇಶದ ಬಹುಜನ ಪಾಲಕರಲ್ಲಿ-ಮುಖಂಡರಲ್ಲಿ-ಪ್ರಾಮಾಣಿಕರಲ್ಲಿ ಮೂಡಿದೆ.

ಯಾವ ಗೊತ್ತು-ಗುರಿಯಿಲ್ಲದೇನೇ, ಕೇವಲ ಮಾದಕ ಪದಾರ್ಥಗಳಿಗೆ ಅಧೀನ ರಾಗಿ ತಮ್ಮ ಅಮೌಲ್ಯವಾದ, ಶ್ರೇಷ್ಠವಾದ ಯೌವ್ವನವನ್ನು ಹಾಳು ಮಾಡಿಕೊಳ್ಳು ತ್ತಿದ್ದಾರೆ. ಅಧ್ಯಯನವಿಲ್ಲದೇ ಪದವಿ ಪಡೆಯಬೇಕು. ದುಡಿತವಿಲ್ಲದೇ ದುಡ್ಡು ಬರಬೇಕು. ವರದಕ್ಷಿಣೆಯ ದುಡ್ಡಿನಿಂದಲೇ ಬದುಕಬೇಕು, ದೇಶಾಭಿಮಾನ ಮಾತ್ರ ಶೂನ್ಯ! ಶೀಲ-ಸಚ್ಚಾರಿತ್ರ್ಯಗಳನ್ನು ಕೇಳಲೇಬಾರದು, ಎಲ್ಲಿಡೆಯೂ ಅಶಿಸ್ತು, ಯುವ ಶಕ್ತಿ ಇವತ್ತು ತನ್ನ ಅಸ್ತಿತ್ವವನ್ನು, ವ್ಯಕ್ತಿತ್ವವನ್ನು ಸಂಪೂರ್ಣ ಕಳೆದುಕೊಂಡಿದೆ. ಮಾದಕ ಪೇಯ ಗಳಿಗೆ ಶರಣಾಗತವಾಗಿ ಬುದ್ಧಿಶೂನ್ಯವಾಗಿದೆ. ಯುವಶಕ್ತಿ ಹೇಗಿರಬೇಕು ಎಂಬ ಬಗ್ಗೆ ಶ್ರೀಗಳ ಚಿಂತನೆ ಸೂಕ್ತವಾಗಿದೆ.

ಯುವಶಕ್ತಿ ಉಕ್ಕೇರಿ ಹರಿವ ತೊರೆಯಂತಾಗಬಾರದು, ಉಕ್ಕೇರಿದ ತೊರೆ ತೀರವ ಕೊಚ್ಚುವಂತೆ, ಸನ್ಮಾರ್ಗವಿಲ್ಲದ ಯುವಶಕ್ತಿ, ಸಂಸ್ಕೃತಿಯ ಕೊಚ್ಚಿಹಾಕುವುದು, ಅಮೂಲ್ಯ ಜೀವನ ಮೌಲ್ಯವ ಕಳಚಿ ಹಾಕುವುದು, ಕೊರೆವ ತೊರೆಗೆ ಏರಿಯನಿಕ್ಕಿ, ಕೃಷಿ ಕೃತ್ಯ ಬೆಳೆಸುವಂತೆ ಸುವಿಚಾರ-ಸನ್ಮಾರ್ಗದಲ್ಲಿ ನಡೆವ ಯುವಶಕ್ತಿ ದೇಶ ಸಮೃದ್ಧಿ ಯನ್ನು ಸಾಧಿಸಬಲ್ಲುದು. ಪ್ರತಿಯೊಬ್ಬ ಯುವಕರು ಆತ್ಮಚಿಂತನೆ ಮಾಡಿಕೊಳ್ಳಬೇಕು. ಪ್ರಬುದ್ಧತೆಯತ್ತ ಹೆಜ್ಜೆಯಿರಿಸಬೇಕು.

ಆರೋಗ್ಯ ಭಾಗ್ಯದ ವಿಷಯವಾಗಿ ತಿಳಿಸುತ್ತ ಉಪವಾಸ ಮಾಡುವವರ ಕಂಡು ಶ್ರೀಗಳು ಹಾಸ್ಯಮಯವಾಗಿ ಅಂಥವರನ್ನು ತೋರಿಸಿದ್ದಾರೆ. ಉಪವಾಸವೆಂದರೇನು? ಅನ್ನವ ಬಿಟ್ಟು, ಅವಲಕ್ಕಿ ಉಪ್ಪಿಟ್ಟು-ಉಂಡಿ-ಹಣ್ಣುಗಳ ತಿಂದು ತೇಗುವುದು ಉಪವಾಸವೇ? 'ಅಲ್ಲ'ವೆಂಬುದು ಉತ್ತರ, ಶಿವನ ಸಾನ್ನಿಧ್ಯವನ್ನು ಬಯಸಿ, ಆತನನ್ನು ಧ್ಯಾನಿಸುವುದೇ ಉಪವಾಸ. ನಿರಾಹಾರಿಯಾಗಿ, ಶಿವನ ಚಿಂತನೆಯಲ್ಲಿ, ಆತನ ಪೂಜೆಯಲ್ಲಿ ರುವುದೇ ಉಪವಾಸ, ಇಂಥ ಉಪವಾಸ ತನು-ಮನ-ಭಾವ ಶುದ್ಧಿಗೆ ಸಾಧನ, ಆರೋಗ್ಯವುಳ್ಳಂಥ ವ್ಯಕ್ತಿಯ ಮನಸ್ಸು ನಿರ್ಮಲವಾಗಿರುತ್ತದೆ. ಆರೋಗ್ಯಭಾಗ್ಯವೇ ಸಕಲ-ಸಂಪದಕೆ ಸಂಪದವೆಂಬುದು ವಚನಕಾರರ ಅಭಿಮತ.

ವಿಜ್ಞಾನದ ಅಜ್ಞಾನವನ್ನು ಹೊರಗೆಡವಿದ್ದಾರೆ. ಇವತ್ತು ಎಲ್ಲೆಡೆಯೂ ಶಾಲೆ-ಕಾಲೇಜುಗಳಾಗಿವೆ. ಆದರೆ ಶಿಕ್ಷಣದ ಮಟ್ಟ ಎಲ್ಲಿದೆ? ಪ್ರತಿ ಹಳ್ಳಿಗಳಲ್ಲೂ ದವಾಖಾನೆ

ಗಳಾಗಿವೆ. ವೃಥಕಾಯುರಾಗಿದ್ದವರ ಜನರ ಪ್ರಮಾಣ ಎಷ್ಟು? ನಾವು ಬಹಳಷ್ಟು ಬೆಳೆದಿದ್ದೇವೆ. ದೂರದಲ್ಲಿದ್ದವರನ್ನು ಮಾತನಾಡಿಸುವ ಸಾಮರ್ಥ್ಯ ಬಂದಿದೆ. ಇತ್ತೀಚೆಗೆ ಕಣ್ಣಿಂದ ನೋಡುತ್ತಲಿದ್ದೇವೆ, ವಿಜ್ಞಾನದಿಂದ ಜಗತ್ತು ಬಹಳಷ್ಟು ಚಿಕ್ಕದಾಗಿದೆ. ಆದರೆ ಮಾನವೀಯತೆಯಿಲ್ಲದೆ, ಕೇಳುತ್ತಲಿದ್ದೇವೆ. ವಿಜ್ಞಾನ ಯಾವತ್ತಿದ್ದರೂ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ರಕ್ಷಣೆಯ ನೆಪದಲ್ಲಿ ಮಾರಕಾಸ್ತ್ರಗಳನ್ನು ಬೆಳೆಸಿಕೊಂಡ ದೇಶಗಳೆಲ್ಲ ತೃಪ್ತಿಯ ಜೀವನವನ್ನು ನಡೆಸಿವೆಯೇ? ಬರೀ ಅಂಜಿಕೆಯ ಬದುಕು! ಜಗತ್ತು ಯಾವಾಗಲಾದರೊಮ್ಮೆ ವಿನಾಶದ ಸ್ಥಿತಿಗೆ ತಲುಪಿದ್ದಾದರೆ ಅದು ವಿಜ್ಞಾನದಿಂದ! ಮಾರಕಾಸ್ತ್ರಗಳಿಂದ ಪ್ರಪಂಚವನ್ನು ಸ್ಮಶಾನದಂತೆ ಮಾಡಬೇಡವೆಂದು ಶ್ರೀಸನ್ನಿಧಿಯವರು ದೇವನಲ್ಲಿ ಪ್ರಾರ್ಥಿಸಿದ್ದಾರೆ.

ಬದುಕಿಗೊಂದು ನೀತಿ–ನಿಯಮಗಳು ಬೇಕು. ಇವತ್ತು ದುಡ್ಡು–ಒಡವೆ–ಧಾನ್ಯ ಇರದೇ ಇದ್ದರೆ,ಬೇರೆಯವರಿಂದ ಪಡೆಯಬಹುದು. ಆದರೆ ನೀತಿ–ನ್ಯಾಯ–ಪ್ರಾಮಾಣಿಕತೆ–ದುಡಿಮೆ–ಸಂಸ್ಕೃತಿಗಳಿಲ್ಲದಿದ್ದರೆ ಅನ್ಯ ದೇಶದಿಂದ ತರಿಸುವ ಸಾಧ್ಯತೆಯಿದೆಯೇ? ದುಡಿವವಗೆ ದುಡ್ಡಿನ ಹಂಬಲವಿರಬಾರದು, ಮಾಡುವವಗೆ ನುಡಿವ ಹಂಬಲವಿರಬಾರದು. ದುಡಿಮೆಯಿಂದ ದುಡ್ಡು; ಕೃತಿಯಿಂದ ಮಾತು, ಇದು ನಮಗಿವತ್ತು ಬೇಕು.

ನಾಯಕರು ನೀತಿಬಾಹಿರರಾದರೆ, ರಕ್ಷಕರೇ ಭಕ್ಷಕರಾದರೆ, ಸೇವಕರೇ ಸೇವಿಸುವವರಾದರೆ, ಗುರುಗಳೇ ದುರಾಚಾರಿಗಳಾದರೆ, ನಂಬಿದವರು ವಿಶ್ವಾಸಘಾತುಕರಾದರೆ, ಬದುಕುವುದು ಹೇಗೆ? ನೀತಿ–ನಿಯಮಗಳನ್ನು ಗಾಳಿಗೆ ತೂರಿದ್ದಾರೆ.

ಇನ್ನೊಂದೆಡೆ ಬಲು ಸುಂದರ, ಸರಿಯಾದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಸಿನಿಮಾ ನಟ–ನಟಿಯರು ಬಂದರೆ ನವತರುಣರು ಪುಷ್ಪ–ಪರಿಮಳ ಹಿಡಿದು ನುಗ್ಗುವರು. ಮಂತ್ರಿಗಳು ಬಂದರೆ ವ್ಯಾಪಾರಿಗಳು ಹಾರ ಹಿಡಿದು ಓಡುವರು. ಎಲ್ಲಿದೆ ನ್ಯಾಯ ನೀತಿ?

ಮಾನವ ಬೀಜದಿಂದ ಮಾನವೀಯತೆ ಬೆಳೆಯದಿದ್ದರೆ ಇದೆಂಥ ನರ ಬೀಜ? ಎಷ್ಟೊಂದು ಹರಿತವಾಗಿದೆ ನೋಡಿ, ಇಂಥವು ಬೇಡವೇ ಬೇಡ ಎಂದು ನಿಷ್ಠುರತೆಯನ್ನು ತಾಳಿದ್ದಾರೆ. ಬಿತ್ತಿದ್ದನ್ನು ಬೆಳೆದುಕೊಳ್ಳಬೇಕಲ್ಲವೇ?

ಇವತ್ತು ಬರ ಬಂದಿದೆಯೆಂದು ಎಲ್ಲೆಡೆ ಹಾಹಾಕಾರ ಕೇಳಿ ಬರುತ್ತದೆ. ಆದರೆ ಶ್ರೀಗಳ ಚಿಂತನೆಯೇ ಬೇರೆ, ಯಾವುದಕ್ಕೆ ಬರ ಬಂದಿದೆ.

ಪ್ರಕೃತಿಯನ್ನು ವಿಕೃತಿಗೊಳಿಸಿದರೆ (ಮರಗಳನ್ನು ಕಡಿದು) ಬರಬಾರದಿರವುದೇ? ಧರ್ಮ–ನೀತಿ–ನ್ಯಾಯಗಳಿಗೆ ಬರ ಬಂದಿದೆ. ಆಚಾರ–ವಿಚಾರಗಳಿಗೆ ಬರ ಬಂದಿದೆ. ಮಾತಾ–ಪಿತರ ಸೇವೆ ಮಾಡಲು ಬರ ಬಂದಿದೆ. ಈ ಬರವನ್ನು ಮೊದಲು ಹೋಗ

ಲಾಡಿಸಿಕೊಳ್ಳಬೇಕು. ಅರಿವು ಮೂಡಿ ಬರಬೇಕು. ಶ್ರೀಗಳ ಆಶಯ ಅರ್ಥಪೂರ್ಣ ವಾದುದು.

ಸಾಗರ ಬತ್ತಿಹೋಗಲಿ, ನೀರಡಿಕೆ ಬತ್ತದಿರಲಿ
ಬಯಸಿದ ಜೀವನ ಸಿಗದಿರಲಿ,
ಬಾಳ್ವ ಛಲ ಬತ್ತದಿರಲಿ,
ಬಾಳ ಬಟ್ಟೆ ಕಂಟಕದಿ ಕೂಡಿರಲಿ,
ಗುರಿ ದೂರವಿರಲಿ,
ದೃಢ ವಿಶ್ವಾಸವಳಿಯದಿರಲಿ, ಬಾಳ ಸಂಗಾತಿ
ಮೃಡಗಿರಿ ಅನ್ನದಾನೀಶನಿರಲು
ಆವುದು ಅಸಾಧ್ಯವಯ್ಯಾ?॥

ಶ್ರೀಗಳ ಮನೋಬಲ, ಆತ್ಮಸ್ಥೈರ್ಯ ಮೆಚ್ಚುವಂಥದ್ದಾಗಿದೆ. ಸಾಧಕರಿಗೆ, ನವಯುವಕರಿಗೆ ಅವರ ಸಂದೇಶ ದಾರಿದೀಪ.

ಕೊನೆಯಲ್ಲಿ ಪೂಜ್ಯರು ತಮ್ಮ ಕಿರು ಪರಿಚಯವನ್ನು ಸ್ವಲ್ಪದರಲ್ಲಿ ತಿಳಿಸಿದ್ದಾರೆ. ಶಿವಯೋಗ ಮಂದಿರದ ಸಂಬಂಧ, ಕಾಶಿಯಲ್ಲಿನ ವಿದ್ಯಾಭ್ಯಾಸ, ಮೃಡಗಿರಿಗೆ ಬಂದಿದ್ದು, ಹೀಗೆ ಸ್ವಲ್ಪವಾಗಿ ಹೇಳಿ ವಚನ–ಸಂಪದಕ್ಕೆ ಮಂಗಲ ಹಾಡಿದ್ದಾರೆ.

ಶ್ರೀಗಳ ವ್ಯಕ್ತಿತ್ವದ, ಪಾಂಡಿತ್ಯದ ಶ್ರೇಷ್ಠತೆಯನ್ನು ಬಹು ಎತ್ತರಕ್ಕೆ ಒಯ್ದಿದೆ ಈ ವಚನ–ಸಂಪದ. ಪ್ರತಿ ಓದುಗನ ಆಧ್ಯಾತ್ಮ ಚಿಂತನೆಗೆ, ಧಾರ್ಮಿಕ ಮನೋಭಾವಕ್ಕೆ ಎಡೆಮಾಡಿ ಕೊಡುವಲ್ಲಿ ವಚನ–ಸಂಪದ ಸಮರ್ಥನೀಯವಾಗಿದೆ

ಕಾದಂಬರಿ ಬರೆಯಬಹುದು; ಕಥೆ ಬರೆಯಬಹುದು. ಆದರೆ ವಚನ–ಕಾವ್ಯ ಸಾಮಾನ್ಯವಾದುದಲ್ಲ. ಹೆಸರಾಂತ ಲೇಖಕ ಶ್ರೀ ಯು. ಆರ್. ಅನಂತಮೂರ್ತಿಯವರು ಹೇಳುವಂತೆ "ಕಾದಂಬರಿ ಸಾಂಬರ ಇದ್ದಂತೆ, ಹಳಸಿದರೂ ಬಳಸಬಹುದು. ಆದರೆ ಕಾವ್ಯ ಹಾಲು ಇದ್ದ ಹಾಗೆ, ಒಡೆದರೆ ತೀರಿತು. ಉಪಯೋಗಕ್ಕೆ ಬಾರದು."

ಬದುಕಿನ ಪ್ರತಿಯೊಂದು ಮಜಲುಗಳನ್ನು ಕಂಡು–ಕೇಳಿ–ಅನುಭವಿಸಿ, ವ್ಯಕ್ತಿಯ ನಾಡಿ–ಬಡಿತವನ್ನು ಅಭ್ಯಸಿಸಿ, ಜನಪರ ಮನೋಭಾವನೆಗಳಿಗೆ ಸ್ಪಂದಿಸಿ, ದೇಶ–ಭಾಷೆ–ಸಾಮಾಜಿಕ–ಧಾರ್ಮಿಕ–ಆಧ್ಯಾತ್ಮಿಕ ವಿಷಯುಗಳನ್ನು ಚಿಂತಿಸಿ ಸಮಾಜದ ಮೇಲಿರುವಂಥ ತಮ್ಮ ಕಾಳಜಿಯನ್ನು ತಮ್ಮ ಲೇಖನಿಯಿಂದ ಸರಳವಾಗಿ, ಸುಲಲಿತವಾಗಿ, ಅರ್ಥಪೂರ್ಣ ವಾಗಿ ಲೌಕಿಕ–ಅಲೌಕಿಕಗಳೆರಡನ್ನೂ ಎಳೆ–ಎಳೆಯಾಗಿ, ಬಿಡಿಸಿ, ಮನ–ಮುಟ್ಟುವಂತೆ ಮೂಡಿಸಿದ್ದಾರೆ. ಮಹಾಸ್ವಾಮಿಗಳ ಚಿಂತನ–ಮಂಥನ ಧಾರಾಳವಾಗಿ ಹರಿದಿದೆ ಈ ಸಂಪದದಲ್ಲಿ,

ಅನೇಕ ಶರಣರ ಛಾಯೆ-ನೆರಳು ಈ ವಚನ-ಸಂಪದದಲ್ಲಿರಬಹುದು. ಆದರೆ ಇದು ಹಳೆಯದಲ್ಲ. ಹೊಸದಾಗಿ ಬರೆದದ್ದು ಹೊಸದು, ಭಾವ ಹೊಸದು, ಉದ್ದೇಶ-ಗುರಿ ಒಂದೇ ಸಮಾಜ-ಧರ್ಮ-ದೇಶ-ಭಾಷೆ-ಜನ ಇವುಗಳ ಉದ್ಧಾರದ ಕನಸು-ಕಲ್ಪನೆ-. ಚಿಂತನೆ-ಮಂಥನಗಳ ಹುಟ್ಟು ಈ ವಚನ-ಸಂಪದ, ಹಾಡು ಹಳೆಯದಾದರೇನು? ಭಾವ ನವ ನವೀನ! ನವ ನವೀನ!!

ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳ ವಚನಗಳ ವಿಮರ್ಶೆ

—**ಡಾ|| ಪಿ. ವಿ. ನಾರಾಯಣ,** ಬೆಂಗಳೂರು

ಕನ್ನಡದಲ್ಲಿ ವಚನ ಸಾಹಿತ್ಯವು ಹನ್ನೆರಡನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗೂ ಹರಿದು ಬಂದಿದೆ. ಇದು ವಚನಸಾಹಿತ್ಯ ಪ್ರಕಾರದ ವೈಶಿಷ್ಟ್ಯ ವನ್ನಲ್ಲದೆ, ಲೇಖಕರು ವಚನಗಳ ಅಭಿವ್ಯಕ್ತಿ ಶಕ್ತಿಯಲ್ಲಿ ಹೊಂದಿರುವ ವಿಶ್ವಾಸವನ್ನೂ ತೋರಿಸುತ್ತದೆ. ಅಲ್ಲದೆ, ವಚನ ಪ್ರಕಾರವು ಆಧುನಿಕ ಲೇಖಕರೆಲ್ಲರ ಮೇಲೆಯೂ ಪ್ರಭಾವವನ್ನು ಬೀರಿದೆ; ಭಾಷಾ-ಶೈಲಿಗಳಲ್ಲಿ, ವಿಚಾರಪ್ರಣಾಲಿಯಲ್ಲಿ ಹಾಗೂ ಸ್ವೋಪಜ್ಞತೆಯಲ್ಲಿ. ಈ ವಚನ ರಚನಾ ವಾಹಿನಿಯಲ್ಲಿ ಮೂರು ನಿಚ್ಚಳವಾದ ಘಟ್ಟಗಳನ್ನು ನಾವು ಗುರುತಿಸಬಹುದು: ಮೊದಲನೆಯದು ಹನ್ನೆರಡನೆಯ ಶತಮಾನದ ಚಳುವಳಿಯ ಕಾಲಕ್ಕೆ ಸೇರಿದುದು; ಎರಡನೆಯದು, ವೀರಶೈವದ ಪುನರುತ್ಥಾನ ಕಾಲದ ಹದಿನೈದು-ಹದಿನಾರನೆಯ ಶತಮಾನಗಳದ್ದು; ಮೂರನೆಯದು, ಆಧುನಿಕ ಕನ್ನಡದ್ದು ಎಂದರೆ ಇಪ್ಪತ್ತನೆಯ ಶತಮಾನಕ್ಕೆ ಸೇರಿದುದು. ಆದರೆ ಈ ಮೂರೂ ಘಟ್ಟಗಳಲ್ಲಿ ರಚಿತವಾದ ವಚನಗಳ ಸ್ವರೂಪ, ರೀತಿ, ಸತ್ವ ಕಾಲಾನುಗುಣವಾಗಿ ವ್ಯತ್ಯಾಸಕ್ಕೆ ಒಳಗಾಗಿವೆ. ಹೀಗಾಗಿ ಇವೆಲ್ಲ ವಚನಗಳೆನ್ನಿಸಿಕೊಂಡರೂ ಅವುಗಳ ದ್ರವ್ಯ ವಿವಿಧ ಪಾಕಗಳಿಂದಾದುದು.

ಮೊದಲನೆಯ ಘಟ್ಟದಲ್ಲಿ ನೂರಾರು ಮಂದಿ ಶರಣರು ವಚನ ರಚನೆ ಮಾಡಿದರು. ಇವರು ಸಮಾಜದ ವಿವಿಧ ಸ್ತರಗಳಿಗೆ ಸೇರಿದ, ವಿವಿಧ ಕಾಯಕಗಳನ್ನು ಅವಲಂಬಿಸಿದ್ದ, ವಿವಿಧ ವಿದ್ಯಾಮಟ್ಟದ ಜನರು; ಆದರೆ ಇವರೆಲ್ಲ ಆ ಕಾಲದ ಧಾರ್ಮಿಕ-ಸಾಮಾಜಿಕ ಚಳುವಳಿಯ ವಾಹಿನಿಯಲ್ಲಿ ಸೇರಿದ್ದವರು. ಇವರಾರೂ ತಮ್ಮ ರಚನೆಗಳು ಸಾಹಿತ್ಯವೆಂಬ ಪ್ರಜ್ಞೆಯನ್ನು ಹೊಂದಿದವರಲ್ಲ, ಆವರೆಗೆ ಬಾಯಿಬಿಡದ ಸಮಾಜದ ಅತ್ಯಂತ ಕೆಳಸ್ತರದವರೂ, ಸ್ತ್ರೀಯರೂ ಮೊದಲಬಾರಿಗೆ ಕನ್ನಡ ನಾಡಿನಲ್ಲಿ ರಚನೆ ಮಾಡಿ ಇತಿಹಾಸವನ್ನು ಸೃಷ್ಟಿಸಿದರು; ಅಲ್ಪಸ್ವಲ್ಪ ರಚನಾ ಶಕ್ತಿಯಿದ್ದವರೆಲ್ಲ ಈ ಕಾರ್ಯಕ್ಕೆ ಕೈಹಾಕಿದರು. "ಲಿಂಗವಂತರು ತಾವಾದ ಬಳಿಕ ಅನುಭವ ವಚನಗಳ ಹಾಡಿ ಸುಖದುಃಖಗಳಿಗಭೇದ್ಯವಾಗಿರಬೇಕು" ಎಂಬ ಸಿದ್ಧರಾಮನ ಮಾತಿಗೆ ಅನುಗುಣವಾಗಿ ನೂರಾರು ಮಂದಿ ಇದರಲ್ಲಿ ತೊಡಗಿದರು. ಈ ಜನರ ಮೂಲಕವೇ ಚಳುವಳಿಯು ತನ್ನ ಅಂತರಂಗವನ್ನು ತೆರೆದುಕೊಳ್ಳುತ್ತಿತ್ತು; ಚಳುವಳಿಯ ಧೋರಣೆಗಳೂ ರೂಪು ಪಡೆಯುತ್ತಿದ್ದವು. ಹೀಗಾಗಿ ಚಳುವಳಿಯ ದನಿ-ವೈಯಕ್ತಿಕ ಸಂವೇದನೆ ಒಂದರೊಡನೊಂದು ಮಿಳಿತವಾಗಿತ್ತು. ವ್ಯಕ್ತಿಗತ

ಭಾವನೆಗಳ ಅಭಿವ್ಯಕ್ತಿಯಿಂದ ಚಳುವಳಿಯ ಧೋರಣೆ-ದಾರಿಗಳು ಖಚಿತಗೊಳ್ಳುತ್ತಿದ್ದರೆ, ಚಳುವಳಿಯ ಸಮಷ್ಟಿ ಇಂಗಿತ ವೈಯಕ್ತಿಕ ಕಾಳಜಿಗಳಿಗೆ ಸಾಣೆ ಹಿಡಿಯುತ್ತಿತ್ತು. ಹೀಗಾಗಿ ವ್ಯಷ್ಟಿ-ಸಮಷ್ಟಿ ಪ್ರಜ್ಞೆಗಳು ಈ ಕಾಲದ ವಚನಗಳಲ್ಲಿ ಪರಸ್ಪರ ಪೂರಕವಾಗಿವೆ, ಸ್ವರೂಪ ನಿರ್ಧಾರಕಗಳಾಗಿವೆ. ವಚನ ರಚನೆಯಲ್ಲದೆ, ವಚನಗಳ ಹಾಡುವಿಕೆ, ವ್ಯಾಖ್ಯಾನಗಳೂ ವಚನ ಪ್ರಸಾರಕ್ಕೆ ನೆರವಾದವು. ಹೀಗಾಗಿ ಆ ಕಾಲದ ವಾತಾವರಣದಲ್ಲಿ ವಚನ ಬೆರೆತಿತ್ತು; ಅವುಗಳಿಂದ ಚಳುವಳಿಯನ್ನು ಬೇರ್ಪಡಿಸಲು ಸಾಧ್ಯವಿಲ್ಲ; ವಚನಗಳಿಲ್ಲದೆ ಚಳುವಳಿಯಿಲ್ಲ.

ಎರಡನೆಯ ಘಟ್ಟವು ಬಸವಾದಿಗಳ ವಚನಗಳ ಸಂಗ್ರಹ ಜೋಡಣೆ-ವ್ಯಾಖ್ಯಾನಿಗಳೊಂದಿಗೆ ಆರಂಭವಾಯಿತು. ವಚನಗಳು ನಾಶವಾಗದಂತೆ ಸಂಗ್ರಹಿಸಿ, ಅವುಗಳನ್ನು ಪ್ರತಿಮಾಡಿಕೊಳ್ಳುವುದು; ಸ್ಥಲಾನುಸಾರಿಯಾಗಿ ವಿಂಗಡಿಸುವುದು, 'ಲಿಂಗಲೀಲಾ ವಿಲಾಸ' ದಲ್ಲಿರುವ ಹಾಗೆ ಅವುಗಳಿಗೆ ವ್ಯಾಖ್ಯಾನ ಬರೆಯುವುದು–ಆಗ ಬಿರುಸಿನಿಂದ ನಡೆಯಿತು. ಅದರ ಬೆನ್ನಿಗೇ ವಚನರಚನೆಯೂ ಹೊಸದಾಗಿ ಆರಂಭವಾಯಿತು. ಹತ್ತಾರುಮಂದಿ ಸಾವಿರಾರು ವಚನಗಳನ್ನು ಬಸವಾದಿಗಳ ವಚನಗಳನ್ನು ಮಾದರಿಯಾಗಿರಿಸಿಕೊಂಡು ರಚನೆ ಮಾಡಿದರು. ಶಾಸ್ತ್ರಕ್ಕಾದರೂ ಈ ಕಾಲದಲ್ಲಿ ಸ್ತ್ರೀಯೊಬ್ಬಳ ರಚನೆ ಸಿಗದು. ಅಲ್ಲದೆ, ಹನ್ನೆರಡನೆಯ ಶತಮಾನದ ವಚನಗಳ ಒಂದು ಮಗ್ಗುಲನ್ನು ಮಾತ್ರ ಈ ಕಾಲದ ವಚನಗಳು ಅನುಕರಿಸಿದವು. ಅದೆಂದರೆ ವೀರಶೈವದ ವಿವಿಧ ಅಂಗಗಳಿಗೆ, ದರ್ಶನಕ್ಕೆ ಸ್ಪಷ್ಟರೂಪ ನೀಡುವ ಪಾರಿಭಾಷಿಕತೆ. 'ಶೂನ್ಯಸಂಪಾದನೆ' ಒಂದು ರೀತಿಯಲ್ಲಿ ಈ ಸ್ವರೂಪ ನಿರ್ಧಾರದ ಶಿಖರಕೃತಿ. ಈ ಕಾಲದ ರಚನೆಗಳಲ್ಲಿ ವೈಯಕ್ತಿಕ ಸಂವೇದನೆ ಸ್ಥಾನ ಪಡೆದುದು ತೀರ ಕಡಿಮೆಯಾದ್ದರಿಂದ, ಇಲ್ಲಿ ಸಾಹಿತ್ಯದ ಆರ್ದ್ರತೆಯಿಲ್ಲ.

ಮೂರನೆಯ ಹಾಗೂ ಈಚಿನ ಘಟ್ಟವೆಂದರೆ ಇಪ್ಪತ್ತನೆಯ ಶತಮಾನದ್ದು. ವಚನಗಳ ಸಾಹಿತ್ಯ ಸೌಂದರ್ಯವನ್ನು ಗುರುತಿಸಿದುದೇ ಅನೇಕ ಆಧುನಿಕ ಲೇಖಕರ ಪ್ರತಿಭೆಯನ್ನು ಕೆದಕಲು ಕಾರಣವಾಯಿತು. ವಚನ ಪ್ರಕಾರವನ್ನು ಸಾಹಿತ್ಯವೆಂಬಂತೆ ಪರಿಗಣಿಸಲು ತೊಡಗಿದ್ದೇ ಈ ಕಾಲದಲ್ಲಿ. ಇದನ್ನು ರಚಿಸಿದವರು ಈವರೆಗೆ ವೀರಶೈವಕ್ಕೆ ಸೇರಿದವರು ಮಾತ್ರವಾಗಿದ್ದರೆ, ಈಗ ಅದರ ವ್ಯಾಪ್ತಿ ವಿಸ್ತಾರಗೊಂಡಿತು. ಆಧುನಿಕತೆಯಲ್ಲಿ ಮತಾತೀತದೃಷ್ಟಿ ಮುಖ್ಯವಾದದ್ದರಿಂದ ಎಲ್ಲ ಪಂಗಡದವರನ್ನೂ ವಚನ ಆಕರ್ಷಿಸಿದೆ. ಸ್ತ್ರೀಯರೂ ವಚನ ರಚನೆ ಮಾಡಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಚಳುವಳಿಯಿಂದಾಗಿ ಆ ಕಾಲದ ವಚನಗಳಲ್ಲಿನ ಏಕಮುಖತೆ ಇಲ್ಲಿಲ್ಲ; ಹದಿನೈದು-ಹದಿನಾರನೆ ಶತಮಾನಗಳ ವಚನಗಳ ಪಾರಿಭಾಷಿಕತೆ (ವೀರಶೈವ ಮಠಾಧಿಪತಿಗಳ ರಚನೆಗಳನ್ನು ಹೊರತುಪಡಿಸಿ) ಕೂಡ ಇಲ್ಲಿಲ್ಲ. ಇಲ್ಲಿರುವುದು ಅನೇಕ ಮುಖತೆ, ವೈಯಕ್ತಿಕ ಸಂವೇದನೆಗಳ ಅಭಿವ್ಯಕ್ತಿ. ಇಷ್ಟಾದರೂ, ಈ ಶತಮಾನದ ಮುಖ್ಯ ಸಾಹಿತ್ಯ ಧ್ವನಿ ವಚನದ್ದಲ್ಲ.

ಮುಕ್ತಕಗಳಾದದ್ದರಿಂದ ಅಂದಂದಿನ ಆಲೋಚನೆ ಸಾಹಿತ್ಯವಾಗಲು ವಚನವೇ ತಕ್ಕ ಮಾಧ್ಯಮವೆಂದು ಕೆಲವು ಆಧುನಿಕ ಲೇಖಕರು ಭಾವಿಸಿರಬೇಕು. ವಚನಗಳನ್ನು ಮಾತ್ರ ಬರೆದವರು ಯಾರೂ ಇಲ್ಲ–ಎಂಬುದು ಗಮನಾರ್ಹವಾದ ಅಂಶ.

ಹನ್ನೆರಡನೆಯ ಶತಮಾನದ ವಚನಗಳ ಹಿಂದಿನ ಸಮಷ್ಟಿ ದೃಷ್ಟಿಯಾಗಲೀ, ಹದಿನೈದು–ಹದಿನಾರನೇ ಶತಮಾನಗಳ ವಚನಗಳ ಹಿಂದಿನ ವೀರಶೈವ ತಾತ್ತ್ವಿಕ ಪರಿಭಾವನೆಯಾಗಲೀ ಈ ಕಾಲದ ವಚನಗಳಲ್ಲಿ ಇಲ್ಲದಿರುವುದರಿಂದ ಅವುಗಳ ಹಿಂದೆ ಯಾವುದೇ ಏಕಸೂತ್ರತೆಯಿಲ್ಲ. ಹೊರರೂಪದಲ್ಲಿ ಮಾತ್ರ ಇವುಗಳು ವಚನಗಳು: ಮುಕ್ತಕ ಸ್ವರೂಪ, ಅಂಕಿತದ ಬಳಕೆ, ಏಕಭಾವನಾಭಿವ್ಯಕ್ತಿ, ರಚನಾಸಾಮ್ಯ, ದೈನಂದಿನ ವಸ್ತು-ವಿಷಯಗಳ ಪ್ರತಿಮಾಕರಣ, ನಡುಗನ್ನಡ ಭಾಷಾಶೈಲಿ–ಇವುಗಳಲ್ಲಿ ಈಗಿನ ವಚನಗಳೂ ಹಿಂದಿನವನ್ನು ಹೋಲುತ್ತವೆ. ಬೇಂದ್ರೆಯವರೂ ಪ್ರಾಯಶಃ ೨೦–೨೧ರ ಹೊತ್ತಿಗೇ 'ಕರುಳಿನ ವಚನ'ಗಳನ್ನು ಬರೆದರು; ಆದರೆ ಇವು ವಚನಗಳಲ್ಲ, ಸ್ವಚ್ಛಂದ ರಚನೆಗಳು. ಮುಂದೆ ಎಸ್. ವಿ. ರಂಗಣ್ಣನವರಿಂದ ಆರಂಭವಾಗಿ ನೂರಾರು ಮಂದಿ ವಚನಗಳನ್ನು ರಚಿಸಿದ್ದಾರೆ. ಜ.ಚ.ನಿ. ಪ್ರಾಯಶಃ ಆರೇಳು ಸಾವಿರ ವಚನಗಳನ್ನು ಬರೆದು ಎಲ್ಲ ಕಾಲಕ್ಕೂ ಅತ್ಯಂತ ಹೆಚ್ಚಿನ ವಚನಗಳನ್ನು ಬರೆದ ಇತಿಹಾಸ ನಿರ್ಮಿಸಿದ್ದಾರೆ. ಆದರೆ ಆಧುನಿಕ ವಚನಕಾರರ ದೃಷ್ಟಿ–ಧೋರಣೆ, ಶೈಲಿ–ಸಾರಪ್ರವ್ಯ–ಇವುಗಳಲ್ಲಿ ಹೋಲಿಕೆ ಅಸಾಧ್ಯ.

ಮುಂಡರಗಿಯ ಸಂಸ್ಥಾನಮಠದ ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು ೧೯೭೪ರಲ್ಲಿಯೇ 'ವಚನವಲ್ಲರಿ' ಎಂಬ ಹೆಸರಿನಲ್ಲಿ ನೂರೆಂಟು ವಚನಗಳ ಸಣ್ಣ ಸಂಕಲನವೊಂದನ್ನು ಪ್ರಕಟಿಸಿದರು. 'ಮೃಡಗಿರಿ ಅನ್ನದಾನೀಶ' ಎಂಬ ಅಂಕಿತದ ಈ ವಚನಗಳು ವೀರಶೈವದ ವಿಶಿಷ್ಟ ಪರಿಕಲ್ಪನೆಗಳಾದ ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳನ್ನು ಕುರಿತವು. ಮುಂದೆ ಇಂತಹುದೇ ರಚನೆಗಳನ್ನು ಮುಂದುವರಿಸಿದ ಲೇಖಕರು, ಮೇಲೆ ಹೇಳಿದ ವಚನಗಳನ್ನೂ ಒಳಗೊಂಡಂತೆ ಒಟ್ಟು ೬೨೧ ವಚನಗಳ ಸಂಕಲನವೊಂದನ್ನು 'ವಚನ ಸಂಪದ'ವೆಂಬ ಹೆಸರಿನಿಂದ ೧೯೮೭ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಎರಡು ಭಾಗಗಳಿವೆ: 'ಅಲೌಕಿಕ ವೈಭವ' ಹಾಗೂ 'ಲೌಕಿಕ ವೈಭವ' ಮೊದಲ ಭಾಗದಲ್ಲಿ 'ಆರಾಧ್ಯ ಅಭಿವಂದನ' 'ದೇವ-ಜಗತ್ತು' 'ಮಾನವಧರ್ಮ' 'ವಿಷಮ ಸಂಸಾರ' ಮುಂತಾದ ಕಿರುಭಾಗಗಳೊಡನೆ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳಲ್ಲಿ ಒಂದೊಂದರ ಬಗೆಗೂ ರಚಿಸಿದ ವಚನಗಳ ಗುಂಪುಗಳಲ್ಲದೆ, 'ಶಿವಯೋಗ' 'ಬಸವತತ್ತ್ವ' ಮುಂತಾದ ವಿಷಯಾನುಸಾರಿ ವಿಂಗಡಣೆಯ ವಚನಗಳಿವೆ. ಎರಡನೆಯ ಭಾಗದಲ್ಲಿ 'ಜೀವನ–ಬದುಕು', 'ದೇಶ–ಭಾಷೆ', 'ಯುವಶಕ್ತಿ', 'ಆರೋಗ್ಯ ಭಾಗ್ಯ', 'ವಿಜ್ಞಾನ', 'ನೀತಿನಿಬಂಧನ' ಹಾಗೂ 'ಮಂಗಲ' ಎಂಬ ಉಪಭಾಗಗಳಿವೆ. ಮೊದಲ ಭಾಗದಲ್ಲಿನ ವಚನಗಳ ಸಂಖ್ಯೆ ೪೭೭; ಎರಡನೆಯ ಭಾಗದಲ್ಲಿ ಉಳಿದ ೧೪೪ ವಚನಗಳಿವೆ.

ಲೇಖಕರೇ ಹೇಳಿಕೊಂಡಿರುವಂತೆ "ವಚನ ವಾಙ್ಮಯವನ್ನು ಮತ್ತೆ ಮತ್ತೆ ಅಭ್ಯಸಿಸುತ್ತಿದ್ದಂತೆ ಮತ್ತೆ ಮತ್ತೆ ವಚನಗಳು ಮೂಡಿ ಬಂದವು"; ಅಲ್ಲದೆ "ಈ ದಿಶೆಯಲ್ಲಿ 'ವಚನ ಸಂಪದ'ವು ತಾತ್ವಿಕವಾಗುವಂತೆ ಪ್ರಯತ್ನಿಸಲಾಗಿದೆ." ಇದರಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ: ಒಂದು, ಬಸವಾದಿಗಳ ವಚನಗಳ ಮಾದರಿಗಳನ್ನು ಎದುರಿಗಿರಿಸಿಕೊಂಡು ತಮ್ಮ ಭಾವನೆಯ ದ್ರವ್ಯಗಳನ್ನು ಅವುಗಳ ಅಚ್ಚಿನಲ್ಲಿ ಸುರಿದಿರುವುದು ಹಾಗೂ ಎರಡು, ತಾತ್ತ್ವಿಕತೆಗೆ ಪ್ರಜ್ಞಾಪೂರ್ವಕವಾಗಿ ಪ್ರಾಮುಖ್ಯವಿತ್ತಿರುವುದು. ಒಟ್ಟಾರೆ ಈ ವಚನಗಳಲ್ಲಿ ಹೃದಯ ಕರಗಿಸುವಂತಹ ಅಥವಾ ಹೃದಯ ಬಿರಿಸುವಂತಹ ರಚನೆಗಳು ಇಲ್ಲ. ಆದರೆ ಇಲ್ಲಿ ನೇರವೂ, ಸರಳವೂ ಆದ ವಚನಗಳು ಮೂಡಿವೆ.

ಅಲೌಕಿಕ ವೈಭವದ ಭಾಗದಲ್ಲಿನ ವಚನಗಳಲ್ಲಿ ಕಾಣುವ ಒಂದು ಅಂಶವೆಂದರೆ ಸಹಜವಾದ ಅದ್ವೈತಭಾವ. "ಮುಗಿಲ ಮರೆಯ ತರಣಿಯಂತೆ, ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ ಕ್ಷೀರ ಮರೆಯ ಘೃತದಂತೆ, ನೀರ ಮರೆಯ ತರಂಗದಂತೆ, ಶಿವಭಕ್ತನ ಶರೀರವ ಮರೆಗೊಂಡು ಸಕಲನಿಃಕಲ ನೀನಾದೆಯಯ್ಯಾ ಮ್ನಡಗಿರಿ ಅನ್ನದಾನೀಶ" ಎಂಬ ಪಿಂಡಸ್ಥಲದ ವಚನವನ್ನು ನೋಡಬಹುದು. ಜೀವವು ಶಿವತ್ವವನ್ನು ತನ್ನಲ್ಲೇ ಹೊಂದಿರುತ್ತದೆ; ಅದು ವಿಕಾಸಗೊಳ್ಳಬೇಕಾದ ಪರಿಯನ್ನು ಅನೇಕ ವಚನಗಳು ನಿರೂಪಿಸುತ್ತವೆ. ಮಾನವರ ವಿಚಿತ್ರ ವರ್ತನೆಗಳನ್ನು "ನಿನ್ನ ಲೀಲಾ ವಿನೋದ"ವೆಂದು ದೈವಕ್ಕೆ ಹೇಳುವ ಸಾಂಪ್ರದಾಯಿಕ ನಂಬಿಕೆ ಇಲ್ಲಿದೆ (೩೩). ಈ ಹಿನ್ನೆಲೆಯಲ್ಲೇ ಈ ಭಾಗದ ವಚನಗಳು ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಬಗ್ಗೆ ಈಗಾಗಲೇ ಖಚಿತಗೊಂಡ ವೀರಶೈವ ಪರಿಕಲ್ಪನೆಗಳನ್ನೂ, ಅವುಗಳ ವಿಶಿಷ್ಟತೆಯನ್ನೂ ವಿವರಿಸುತ್ತವೆ. ಅವುಗಳಲ್ಲಿ ಹೊಸ ವಿಚಾರ ಇರಲು ಸಾಧ್ಯವಿಲ್ಲ; ಹೇಳುವ ರೀತಿ ಹೊಸದಿರಬಹುದು ಅಷ್ಟೆ. ಅಲ್ಲದೆ, "ಪಾದೋದಕವ ಜಲವೆಂಬವಂಗೆ ಭವ ಹಿಂಗದು, ಪಾದೋದಕವ ಜಲವೆಂಬವಂಗೆ ನರಕ ತಪ್ಪದಯ್ಯಾ" (೨೪೯) ಎಂಬಂತಹ ಮಾತುಗಳು ಆಧುನಿಕ ಪ್ರಜ್ಞೆಗೆ ಈ ಒಪ್ಪಿತವಾಗದೇ ಹೋಗಬಹುದು. ಅಂತೆಯೇ ಸತ್ಯಶುದ್ಧ ಕಾಯಕದ ಒಗ್ಗೆ ಅನೇಕ ವಚನಗಳಲ್ಲಿ ವಿವರಣೆಯಿದೆ. (ಉದಾ: ೫೭೭, ೫೩೨ ಇ.) ಕಾಯಕದ ಪರಿಕಲ್ಪನೆಯು ಬಸವಾದಿ ಶರಣರ ಅತ್ಯಂತ ವಿಶಿಷ್ಟವಾದ ಪರಿಕಲ್ಪನೆ. ಒಂದು ರೀತಿಯಲ್ಲಿ ಲೌಕಿಕತೆ. ಆಧ್ಯಾತ್ಮಿಕತೆಗಳನ್ನು ಅದು ಒಂದುಗೂಡಿಸುತ್ತದೆ. ಅವರ ಕಾಲಕ್ಕೆ ಅದರ ಆವಶ್ಯಕತೆಯಿದ್ದಿರಬಹುದು. ಕಾಯಕದ ಎರಡು ತುದಿಗಳಾದ ದುಡಿಮೆ-ದಾಸೋಹಗಳನ್ನು ಆಧುನಿಕವಾಗಿಯೂ ವ್ಯಾಖ್ಯಾನಿಸುವ ಸಾಧ್ಯತೆಯಿದೆ ಮತ್ತು ಅದು ಆವಶ್ಯಕವೂ ಹೌದು. ಈ ವಚನಗಳು 'ಲೌಕಿಕ ವೈಭವ' ಭಾಗದಲ್ಲಿದ್ದರೂ ಅವುಗಳ ವಿವರಣೆ ಮಾತ್ರ ಸಾಂಪ್ರದಾಯಿಕವಾಗಿರುವುದು ಈ ವಚನಗಳ ಮಿತಿಯಾಗಿದೆ.

ಹಾಗೆಯೇ ಇಲ್ಲಿನ ಕೆಲವು ವಚನಗಳು ಧಾರ್ಮಿಕ-ಮತೀಯ ಭಾವನೆಗಳನ್ನು

ವಿಶಾಲಗೊಳಿಸಬೇಕಾದುದನ್ನು ಹೇಳುತ್ತವೆ. "ಮಠ-ಮಂದಿರ-ಮಸೀದೆಗಳಲ್ಲಿರುವ ನಿನ್ನ ರೂಪು ಭಿನ್ನ; ನಾಮವು ಭಿನ್ನವಯ್ಯಾ, ಭಿನ್ನತೆಯ ಹೆಸರಿನಲಿ ಹೋರಾಟ ಮಾಡುವರಯ್ಯಾ ನಿನ್ನನರಿಯದೆ ಬರಿದೆ ಬಡಿದಾಡುವ ಮಂದಮತಿಗಳಿಗೇನೆಂಬೆನಯ್ಯಾ?" (೧೮) ಎಂಬ ವಚನದಲ್ಲಿ ಈ ಉದಾತ್ತತೆಯಿದೆ. ಆದರೆ ಕೆಲವು ವಚನಗಳು ವೀರಶೈವ ಪ್ರಚಾರದ ವೈಖರಿಯಲ್ಲಿದೆ. "ವೀರಶೈವವು ಜಾತಿಸೂಚಕವಲ್ಲ; ತತ್ವಸೂಚಕ ನೋಡಾ!.... ಆವ ಮಾನವನಾದಡೇನು? ಗುರುಕೃಪೆಯಿಂ ಲಿಂಗಧಾರಿಯಾಗಬಹುದಯ್ಯಾ." ವೀರಶೈವವು ಸಕಲರ ಲೇಸ ಬಯಸುವ ವಿಶ್ವಮಾನವ ಧರ್ಮವಯ್ಯಾ" (೧೦೫) "ವೀರಶೈವ ಧರ್ಮದ ಮರ್ಮ ಪಡೆದಿಪ್ಪ ಕಾರಣದಿ ಶರಣಧರ್ಮವೆ ಮಿಗಿಲಹುದಯ್ಯಾ (೩೪೦) ಇತ್ಯಾದಿ ವಚನಗಳಲ್ಲಿ ಇದನ್ನು ಕಾಣಬಹುದು. ಅನ್ಯಮತ ವಿಡಂಬನೆಯಾಗಲೀ, ಹೋಲಿಕೆ ಯಾಗಲೀ ಇಲ್ಲದಿರುವುದು ನಿಜವಾದರೂ, ನೇರ ಮಾತುಗಳ ಪ್ರಚಾರ ಬೇಕೇ ಎಂಬುದು ಪ್ರಶ್ನೆ.

ನನ್ನಂತಹವನಿಗೆ ಮೆಚ್ಚಿಕೆಯಾಗುವುದು ಲೌಕಿಕ ಜೀವನಕ್ಕೆ ಸಂಬಂಧಿಸಿದ ವಚನ ಗಳಲ್ಲಿನ ವಿವೇಕ ಹಾಗೂ ವ್ಯಾವಹಾರಿಕತೆ. ಅಂತಹ ಅನೇಕ ಭಾವನೆಗಳು ಇಲ್ಲಿ ರೂಪು ಪಡೆದಿವೆ. "ಬದುಕಬೇಕು ಬದುಕಬೇಕು, ಜೀವವಿರುವವರೆಗೂ ಬದುಕಬೇಕಯ್ಯಾ, ಜೀವನದಿ ಕುತ್ತುಗಳ ಸರಮಾಲೆ, ನಿರಾಶೆಯ ಸರಪಳಿಯ ಧರಿಸಿಯೂ ಬದುಕಬೇಕು" (೪೨೨) ಎಂಬ ಮಾತುಗಳ ಹಿಂದಿನ ಬದುಕುವ ಆಸೆ ಮೆಚ್ಚಬೇಕಾದದ್ದು. ಅಲ್ಲದೆ, "ಬಿದ್ದಲ್ಲೆ ಬಿದ್ದರೂ ಮೇಲೆದ್ದು ಬಾಳುವುದೇ ಜೀವನ. ಬಿದ್ದ ಚೆಂಡು ಮತ್ತೆ ಮತ್ತೆ ಪುಟಿಯದ" (೪೨೭) ಎಂಬಲ್ಲಿನ ಛಲ, ಉತ್ಸಾಹಗಳು ಜೀವನದಲ್ಲಿ ತುಂಬಿರಬೇಕಾದು ದನ್ನು ಸೂಚಿಸುತ್ತದೆ. ಬದುಕಿನ ಭೂಮಿಕೆ ಈ ಜಗತ್ತು:

"ಸಗ್ಗ ಕಾಣದ ತಾಣ
ಜನ್ಮಭೂಮಿ ಸಿದ್ಧಿಯ ಸದನ
ಈ ಮಣ್ಣಿನಲಿ ಹುಟ್ಟಿ ಬೆಳೆದು
ದುಡಿದು ನಲಿದಾಡುವ ಭಾಗ್ಯ ಮತ್ತೆಲ್ಲಿ ಕಾಣಬಹುದಯ್ಯಾ?
ಜಗದೊಡೆಯ ಮೃಡಗಿರಿ ಅನ್ನದಾನಿಯನೊಲಿಸಲು
ಈ ನೀತಿಯೆ ನೆಲೆಯಲ್ಲವೆ ಮತ್ತೆ ಬೇರುಂಟೆ ಹೇಳಾ." (೪೭೨)

ಈ ವಚನದಲ್ಲಿ ಪಾರಂಪರಿಕವಾದ ಭಾವನೆ-ಪ್ರಭುಲಿಂಗಲೀಲೆಯಲ್ಲಿ ಪ್ರಕಟವಾದಂತಹುದೇ ಹುದುಗಿದೆ. "ಭೋಗ ಭೂಮಿಯ ಭೋಗ-ತನುವಿನಲಾಗದನುಪಮ ಸಿದ್ಧಿ ಕರ್ಮೋ ದ್ಯೋಗ ಭೂಮಿಯು ಕರ್ಮ ತನುವಿನಲಲ್ಲದಪಜಿಂಪೆ. ಯೋಗಯೋಗ್ಯರು ಯೋಚಿಸುತ ಭೂಭಾಗದಲಿ ಮಾನವ ಶರೀರಿಗಳಾಗಿ ಸಾಧಿಸಿ ನಿಜವನಜಿವರು ಗಿರಿಜೆ ಕೇಳೆಂದ" (೧.೩೪) ಆದರೂ ಬದುಕಿನ ಬಗ್ಗೆ ಪ್ರೀತಿಯನ್ನು ವ್ಯಕ್ತಪಡಿಸುವ ಆರೋಗ್ಯಕರ ಮನಸ್ಥಿತಿ

ಇಲ್ಲಿದೆ. ಈ ಭಾವನೆ ಅರ್ಥಪೂರ್ಣವಾಗುವುದು ವ್ಯಕ್ತಿ ತನ್ನ ವೈಯಕ್ತಿಕ ಆಕಾಂಕ್ಷೆಗಳನ್ನು ಸಮಷ್ಟಿ ಹಿತಕ್ಕೆ ಹೊಂದಿಸಿಕೊಂಡಾಗ:

“ಸಮಷ್ಟಿಯಿಂದ ವ್ಯಷ್ಟಿಗೆ ಸೊಬಗು
ವನದಿಂದ ತರುಲತೆಗಳಿಗೆ ಸೊಬಗು
ಕೊಂಬೆಗಳಿಂದ ಮರಕ್ಕೆ ಸೊಬಗು
ಅಲೆಗಳಿಂದ ಅಂಬುಧಿಗೆ ಸೊಬಗು
ಸಮಾಜದಿಂದ ವ್ಯಕ್ತಿಗೆ ಸೊಬಗು
ಸಮಷ್ಟಿಯಳಿದು ವ್ಯಷ್ಟಿಯಾಗುತಿರೆ ಸೊಬಗಿಲ್ಲ
ಬಲವಿಲ್ಲ ಬೆಲೆಯಿಲ್ಲವಯ್ಯಾ ಮೃಡಗಿರಿ ಅನ್ನದಾನೀಶ” (೪೬೨)

(ಕೊಂಬೆ, ಅಲೆಗಳ ಬಗೆಗಿನ ಹೇಳಿಕೆಗಳು ವ್ಯತ್ಯಸ್ತವಾಗಿವೆಯಲ್ಲವೇ?)

“ಬರಬಂತು ಬರಬಂತು ಎನ್ನುವ ಅಣ್ಣಗಳೇ ಕೇಳಿರೇ! ಪ್ರಕೃತಿಯು ವಿಕೃತಗೊಳಿಸುತಿರೆ ಬರಬಪ್ಪುದು ತಪ್ಪದು” (೬೦೪) ಎಂಬ ಎಚ್ಚರಿಕೆ ಸಕಾಲಿಕವಾಗಿದೆ. ಸಮಷ್ಟಿಯಲ್ಲಿ ವ್ಯಷ್ಟಿಹಿತವನ್ನು ಸಮೀಕರಿಸಿಕೊಳ್ಳಬೇಕೆಂದರೆ ವ್ಯಕ್ತಿತ್ವಹೀನನೇನಾಗಬೇಕಾಗಿಲ್ಲ; ತನ್ನತನ ವನ್ನುಳಿಸಿಕೊಳ್ಳುವುದೂ ಮುಖ್ಯವೇ. ಒಂದು ರೀತಿಯಲ್ಲಿ ಪ್ರತಿ ವ್ಯಕ್ತಿಯ ಇರವೂ ಆಕಸ್ಮಿಕ, ತಾನು ಬಯಸಿ ತನ್ನನ್ನು ಸೃಷ್ಟಿಸಿಕೊಂಡದ್ದಲ್ಲ, ಆದರೆ ಅಸ್ತಿತ್ವಕ್ಕೆ ಬಂದನಂತರ ತನ್ನತನವನ್ನು ಕಾಪಾಡಿಕೊಳ್ಳಬೇಕಾದದ್ದು ಆವಶ್ಯಕ. ಒಂದು ವಚನದಲ್ಲಿ ಈ ಭಾವನೆ ಯಿದೆ. ಇಲ್ಲಿ ವ್ಯಕ್ತಿಯು ಜಗತ್ತೆಂಬ ರಂಗಮಂಟಪದಲ್ಲಿ ನಟಿಸುತ್ತಿರುವ ಪಾತ್ರಧಾರಿ ಎಂಬ ಹಳೆಯ ರೂಪಕದ ಮೂಲಕ ವ್ಯಕ್ತಿಯ ಅಸ್ತಿತ್ವಕ್ಕೆ ಅವನೇ ಕಾರಣನಲ್ಲ ಎಂಬುದು ಸೂಚಿತವಾಗಿದೆ: ಆದರೆ “ನರಕುಲ ನಾಟಕದಿ ನನಗಿದೇ ಪಾತ್ರಬೇಕೆಂಬ ಹಟ ಸಲ್ಲದಯ್ಯಾ” (೫೦೦). ದೊರೆತ ಪಾತ್ರ ನಿರ್ವಹಿಸುವ, ತನ್ನ ಪಾತ್ರ ಕಡಿಮೆಯುದಲ್ಲವೆಂಬ ಆತ್ಮವಿಶ್ವಾಸ ಬೇಕು.

ಈ ಎಲ್ಲ ಆದರ್ಶಗಳ ಹಿನ್ನೆಲೆಯಲ್ಲಿ ಈ ವಚನಕಾರರಿಗೆ ವಾಸ್ತವತೆಯ ಪ್ರಜ್ಞೆಯಿದೆ. ಅನೇಕ ಮಂದಿ ಸಮಷ್ಟಿಯ ಹೆಸರು ಹೇಳಿ ವ್ಯಕ್ತಿಗತ ಹಿತವನ್ನು ಸಾಧಿಸುವವರು. “ವ್ಯಕ್ತಿ ಪ್ರತಿಷ್ಠೆಗಾಗಿ ಸ್ವಾಮಿಗಳ ಉಪಯೋಗ, ಸ್ವಾರ್ಥ ಸಾಧನೆಗಾಗಿ ಗುರುಗಳ ಆವಶ್ಯಕತೆ, ಚುನಾವಣೆ ಯಶಸ್ಸಿಗಾಗಿ ಪೂಜ್ಯರ ಹಾರೈಕೆ ಬಯಸುವ ಸಮಯ ಸಾಧಕರಿಂದ ದೇಶದ ಉದ್ಧಾರವಾಗಬಹುದೇನಯ್ಯಾ ಮೃಡಗಿರಿ ಅನ್ನದಾನೀಶ?” (೪೭೫) ಹಾಗೆಯೇ ಪ್ರೀತಿಯ ನಟನೆಯ ಹಿಂದಿನ ಸ್ವಾರ್ಥದ ಬಗ್ಗೆಯೂ ಇಲ್ಲಿ ವಿಡಂಬನೆಯಿದೆ:

“ಸತ್ತ ಶವವ ಮುಂದಿಟ್ಟು ಅಳುವುದು ತಮ್ಮ ಮುಂದಿನ
ಭವಿಷ್ಯ ಕುರಿತಲ್ಲದೆ ಸತ್ತವನಿಗಾಗಿ ಅಲ್ಲ ನೋಡಾ!
ಅತ್ತು ಕಣ್ಣೀರಿಡುವ ಬಂಧು ಬಳಗವು ಸತ್ತವನೊಡನೆ
ಹೋಗಲಾರದು ನೋಡಾ!” (೪೫೧) ಎಂಬಲ್ಲಿನ

ಅತ್ಯಂತ ಕಠಿಣ ವಾಸ್ತವವು ನೇರ ಮಾತುಗಳಲ್ಲಿ ವ್ಯಕ್ತವಾಗಿದೆ. ಈ ಅರಿವು ವ್ಯವಹಾರ ಜ್ಞಾನವಾಗಿದೆ ಕೆಲವೆಡೆ!

"ಕುಡಿದು ಮಾಡಿದ ಕುಡುಕನ ಪ್ರತಿಜ್ಞೆ
ಚುನಾವಣಾ ಕಣದಿ ನೀಡಿದ ಆಶ್ವಾಸನೆ
ಸ್ಮಶಾನ ಯಾತ್ರೆಯಲಿ ಬಂದ ವೈರಾಗ್ಯ
ಬಲವಂತರೊಡನೆ ಮಾಡಿದ ಬಡವನ ಸಿಟ್ಟು
ಇವು ನಾಲ್ಕು ಜಲದಿ ಬರೆದ ಲಿಪಿ ಕಂಡಯ್ಯಾ
ಮೃಡಗಿರಿ ಅನ್ನದಾನೀಶ" (೪೯೫)

ಹೀಗಾಗಿ ವಚನಕಾರರು ನೇರವೂ ಸರಳವೂ ಆದ ಜೀವನ ಸೂತ್ರಗಳನ್ನು ಕೆಲವೆಡೆ ನೀಡುತ್ತಾರೆ: "ತನ್ನ ಮನೆಗೆಲಸವ ಮಾಡದ ಆಲಸಿ ದೇಶ ಸೇವೆಯನೆಂತು ಮಾಡುವನಯ್ಯಾ?" (೫೨೦) "ದುಡಿಮೆಯಿಂದ ದುಡ್ಡು, ಕೃತಿಯಿಂದ ಮಾತು ಸಾರ್ಥಕವಯ್ಯಾ" (೫೫೮) "ಬಾಳು; ಅನ್ಯರ ಬಾಳುಗೊಡು; ನಗು; ತನ್ನವರ ನಗಿಸು, ಅರಳು; ಇತರರ ಅರಳಿಸು" (೪೬೦) ಮುಂತಾದವು. ಎಲ್ಲಿಯೂ ಅಬ್ಬರವಿಲ್ಲದ, ಆದರೆ ತನ್ನ ಜಿಗುಟುತನ ಬಿಡದ ಈ ಭಾವನೆಗಳು ವಚನಕಾರರ ವಿವೇಕದ ಪ್ರತೀಕವಾಗಿದೆ.

ಹನ್ನೆರಡನೆಯ ಶತಮಾನದ ವಚನಗಳು ಈ ವಚನಕಾರರ ಶೈಲಿಯ ಆಳಕ್ಕಿಳಿದಿವೆ. ಹೀಗಾಗಿ ಯಾವ ವಚನವನ್ನೋದಿದರೂ ಬಸವಾದಿಗಳ ವಚನದಂತಿದೆಯಲ್ಲ ಎನ್ನಿಸುವುದು ಸಹಜ. ಬಸವಣ್ಣನ ವಚನಗಳಂತೂ ಈ ವಚನಕಾರರ ಮನಸ್ಸನ್ನು ಆವರಿಸಿಬಿಟ್ಟಿರುವುದು ವಿದಿತ. ಹಲವೆಡೆ ಬಸವಣ್ಣನ ಮಾತುಗಳು ತೂರಿಬಂದಿದ್ದರೆ, ಮತ್ತೆ ಕೆಲವು ವಚನಗಳಿಗೆ ಆತನ ವಚನಗಳೇ ಕಣ್ಣ ಮುಂದಿನ ಮಾದರಿ. "ಕೆಟ್ಟವಂಗೆ ಕೆಳೆಯಲ್ಲ" (೩೫), "ಬೇವಿನ ಬೀಜವ ಸಿಹಿಗೊಳಿಸಲೆಂದು ಬೆಲ್ಲದ ಕಟ್ಟೆಯೊಳಿಟ್ಟು ಜೇನುತುಪ್ಪ ಹಾಕಿ ಕ್ಷೀರನೆರೆದರೆ ಕಹಿಯುಳಿದು ಸಿಹಿಯಪ್ಪುದೆ?" (೧೨೬) "ಜೋರೆಸಿಕೊಂಡು ಹೋದ ನಾಯಿ ಮೊಲನೇನ ಹಿಡಿಯಬಲ್ಲುದಯ್ಯಾ" (೫೯) "ತನುವಿನ ಕೋಪ ತನ್ನ ಹಿರಿತನದ ಕೇಡು ಮನದ ಕೋಪ ತನ್ನ ಅರುಹಿನ ಕೇಡೆಂಬರು ಶರಣರು", (೫೩೮); "ಕೀಳಿಂಗಲ್ಲದೆ ಪಸು ಹಯನ ಕರೆಯಬಹುದೆ?" (೪೫೦) ಮುಂತಾದ ಸಾಲುಗಳು ಪ್ರಸ್ತುತ ಲೇಖಕರ ವಚನಗಳಲ್ಲಿ ಬಂದಿವೆ. ಇವು ತದ್ವತ್ತಾಗಿಯೋ ಸ್ವಲ್ಪ ವ್ಯತ್ಯಸ್ತಗೊಂಡೋ ಬಂದಿರುವ ಬಸವಾದಿಗಳ ವಚನಗಳ ಸಾಲುಗಳು. ಹಾಗೆಯೇ ಕೆಲವು ವಚನಗಳು ಸಂಪೂರ್ಣವಾಗಿ ಹಿರಿಯರ ವಚನಗಳ ಮಾದರಿಯಲ್ಲಿ ಮೂಡಿದವು. "ದೇವಾ! ನಿನ್ನ ಶಕ್ತಿ ಅಗಮ್ಯ, ನಿನ್ನ ಭಜಿಪ ನನ್ನ ಭಕ್ತಿ ಅಲ್ಪವೇನಯ್ಯಾ?" (೬೦೬) ಎಂಬ ವಚನವು "ಕಂಥೆಸ, ಅಂಕುಶ ಕಿರಿದೆನ್ನಬಹುದೇ, ಬಾಳದಯ್ಯಾ" ಎಂಬ ಬಸವ ವಚನದ ಧ್ವನಿ-ಧಾರಿಯಲ್ಲಿದೆ; ಆದರೆ ಭಾವನೆ ಬೇರೆ. "ಮಾವು ಗಿಳಿಗೆ ಒಲವು, ಬೇವು ಕಾಗೆಗೆ ಒಲವು ಸುಗಂಧ ಅಳಿಗೆ ಒಲವು, ಭಕ್ತಿ ಭಕ್ತನಿಗೆ ಒಲವು, ಮೃಡಗಿರಿ ಅನ್ನದಾನೀಶನೊಲವಿರಲಯ್ಯಾ ಎನಗೆ" (೩೮೬) ಎಂಬ ವಚನವು

"ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ" ಎಂಬ ವಚನವನ್ನು ತಟ್ಟನೆ ನೆನಪಿಸುತ್ತದೆ. "ಸಾರಿನೊಳು ಸಟ್ಟುಗ ಸುತ್ತಾಡಿದರೇನು, ಸಾರ ಸವಿಯ ಹೀರಬಹುದೇ? ಮೊಸರಿನೊಳು ಕಟಿಗೋಲು ಕಡೆದರೇನು, ಬೆಣ್ಣೆಯ ಸ್ವಾದ ಅದಕೆಲ್ಲಿಯದೋ?"(೪೧೪) ಎಂಬ ವಚನವು "ಎನಿಸು ಕಾಲ ಕಲ್ಲು ನೀರೊಳಗಿದ್ದಡೇನು, ನೆನೆದು ಮೃದುವಾಗಬಲ್ಲುದೇ?" ಎಂಬ ಬಸವ ವಚನದ ಮಾದರಿಯಲ್ಲಿದೆ. ಅಂತೆಯೇ "ಕೋಳಿ-ಕಾಗೆಯಾದಡೇನು, ಸಿಕ್ಕುದ ಹಂಚಿ ತಿನ್ನಲಾರವೇನಯ್ಯಾ" ಎಂದು (೫೭೫) ಮೊದಲಾಗುವ ವಚನ "ಕಾಗೆ ಒಂದಗುಳ ಕಂಡಂತೆ ಕರೆಯದೆ ತನ್ನ ಬಳಗವನು" ಎಂಬುದ ನೆರಳಾಗಿದೆ. "ಆನೆಯನೇರಿಕೊಂಡು ಹೋದಿರೇ ನೀವು" ಎಂಬ ವಚನದ ಅಣಕವಾಗಿ ಕೆಳಗಿನ ವಚನವಿದೆ:

> "ಬಸ್ಸನ್ನೇರಿಕೊಂಡು ಹೋದಿರೇ ನೀವು!
> ಕಾರನ್ನೇರಿಕೊಂಡು ಹೋದಿರೇ ನೀವು!
> ಉಗಿಬಂಡಿ-ವಿಮಾನವೇರಿ ಹೋದಿರೇ ನೀವು!
> ಅಧಿಕಾರದ-ಐಶ್ವರ್ಯ ಗದ್ದುಗೆ ಹತ್ತಿ ಹೋದಿರಲ್ಲಾ!
> ಬೀರು ಬ್ರಾಂಡಿಯ ಅಮಲಿನಲ್ಲಿ ಜನತೆಯ ಮರೆತಿರಲ್ಲಾ!
> ಸತ್ಯದ ನಿಲವನರಿಯದೆ ವ್ಯರ್ಥಕಾಲ ಕಳೆದಿರಲ್ಲಾ!
> ಓಟು ಪಡೆದು ಅಧಿಕಾರ ಪಡೆದು ಜನಹಿತ ಮಾಡಲಿಲ್ಲಾ!
> ಸಂಬಳ ಪಡೆದು ಗಿಂಬಳಕಾಶಿಸಿ ದುರಾಚಾರಿಗಳಾದಿರಲ್ಲಾ!
> ಸತ್ಯ ಸದ್ಗುಣ ಸಾಧಿಸದೆ, ಮೋಸ ವಂಚನೆ ತ್ಯಜಿಸದೆ
> ಅಹಂಕಾರದಲ್ಲಿ ಹೂತು ಹೋದಿರಲ್ಲಾ
> ಮೃಡಗಿರಿ ಅನ್ನದಾನಿಯ ಮರೆತು ಭೂಮಿಗೆ
> ಭಾರವಾದಿರಲ್ಲಾ ನೀವು" (೪೮೩)

ಅಂತೆಯೇ ಮಿಕ್ಕ ಕೆಲವೆಡೆ ಅನ್ಯಪ್ರಭಾವಗಳನ್ನೂ ಗುರುತಿಸಬಹುದು. "ವಿನಯ ವಿದ್ಯೆಗೆ ಭೂಷಣ, ಶ್ರದ್ಧೆ ಬುದ್ಧಿಗೆ ಭೂಷಣ" (೫೯೦) ಎಂದು ಮೊದಲಾಗುವ ವಚನವು "ರವಿಯಾಕಾಶಕೆ ಭೂಷಣಂ" ಎಂದು ಆರಂಭಗೊಳ್ಳುವ ಸೋಮೇಶ್ವರ ಶತಕದ ಪದ್ಯವನ್ನೂ; "ತಾಯಕೊಟ್ಟು ತೊತ್ತಕೊಳ್ವರೇ." (೪೯೮) ಎಂಬುದು "ತಾಯಂ ಮಾರಿ ತೊತ್ತ ಕೊಂಬರೇ" ಎಂಬ ರಾಘವಾಂಕನ ಮಾತನ್ನು (ಇದೊಂದು ಹಿಂದಿನ ಗಾದೆ) ನೆನಪಿಸುತ್ತದೆ.

ಕೆಲವು ವಚನಗಳಲ್ಲಿ ಸಾಂಕೇತಿಕತೆಯ ಬಳಕೆಯಿದೆ. "ಐದು ಹೆಡೆಗಳ ಹಾವು ತನುವ ಕಚ್ಚುತಿದೆ." (೭೧) ಸಹಜವಾಗಿಯೇ ಐದು ಹೆಡೆಗಳು ಪಂಚೇಂದ್ರಿಯಗಳನ್ನು ಸಂಕೇತಿಸುತ್ತದೆ. ಒಂದೆರಡು ವಚನಗಳು ಬೆಡಗನ್ನು ಹೋಲುತ್ತವೆ, "ಎಂಟು ತನಯರ ತಾಯಿಗೆ ತಲೆಯಿಲ್ಲ, ಮಕ್ಕಳಿಗೆ ಫಲವೇಳ ಇಕ್ಕುವಳು. ತಿನ್ನುವ ಆತುರದಿ ಸೋದರರ ಸಹಕಾರವೆಲ್ಲಿ? ಸಹನೆ ತಪ್ಪಿ ಒಡಿದಾಡಿ ತಂದೆ ಮೃಡಗಿರಿ ಅನ್ನದಾನಿಗೆ ದೂರಾದರಯ್ಯಾ" (೯೩) ಏಕೋ ಶರಣಸತಿ-ಲಿಂಗಪತಿಯ ವಚನಗಳನ್ನು ಲೇಖಕರು ಈ ಬರೆದಿಲ್ಲ.

ಪ್ರಭಾವವು ವ್ಯಾಪಕವೂ ಆಳವೂ ಆಗಿದ್ದರೂ ಹಲವಾರು ವಚನಗಳು ಅಚ್ಚುಕಟ್ಟಾಗಿವೆ. ಶ್ರೀ ಅನ್ನದಾನೀಶ್ವರರ ಆಲೋಚನೆಗಳು ಸಹಜವಾಗಿಯೇ ದೃಷ್ಟಾಂತಗಳ ರೂಪದಲ್ಲಿ ಸಾಗುವಂತೆ ತೋರುತ್ತದೆ. ಬಸವಾದಿಗಳ ವಚನಗಳ ವೈಶಿಷ್ಟ್ಯವಾದ ರಚನಾಸಾಮ್ಯ ಶ್ರೀಯುತರ ವಚನಗಳ ವಿಶಿಷ್ಟ ಗುಣವೂ ಹೌದು. ಇಂತಹ ಒಂದು ಸರಳ ವಚನ ಇದು:

"ದಾರಿಯು ತೋರಬಂದವರು ನಿಲ್ಲುವರಲ್ಲದೆ ಜೊತೆ ಬಾರರು
ಮರದ ನೆರಳು ತಳದಲ್ಲಿ ತಂಪು ಕೊಡುವುದಲ್ಲದೆ
ಕೊಡೆಯಾಗಿ ಜೊತೆ ಬಾರದು
ರಾಜ ಬೀದಿಯ ಕೈಮರ ಮಾರ್ಗದರ್ಶನ ನೀಡುವುದಲ್ಲದೆ
ಸಹಕಾರಿಯಾಗಿ ಬಾರದು
ಜೊತೆಗೂಡಿ ಬರಬಲ್ಲುದು ಧರ್ಮ, ಜೊತೆಗೂಡಿ ಬರಬಲ್ಲವ
ಮೃಡಗಿರಿ ಅನ್ನದಾನೀಶನೊಬ್ಬನಯ್ಯಾ" (೫೮)

ಹಾಗೆಯೇ ನೇರವಾಗಿಯಾದರೂ ಪರಿಣಾಮಕಾರಿಯಾದ ಈ ವಚನ ನೋಡಿ:

"ಮೂಗುತಿ ಕೊಟ್ಟವರ ಹೊಗಳುವರು
ಮೂಗು ಮಾಡಿದವನ ನೆನೆಯರು
ಆಭರಣ ಮಾಡಿದವನ ವರ್ಣಿಸುವರು
ಚಿನ್ನವ ಮಾಡಿದವನ ಸ್ತುತಿಪರು
ಅಡಿಗೆ ಮಾಡಿದವನ ಪ್ರಶಂಸಿಸುವರು
ಪಡಿ ಪದಾರ್ಥಂಗಳನಿತ್ತವನ ಸ್ಮರಿಸರು
ಮೃಡಗಿರಿ ಅನ್ನದಾನೀಶನ ಉಪಕೃತಿ ಸ್ಮರಣೆ
ಯಿಲ್ಲದವರನೆಂತು ಮನುಷ್ಯರಯ್ಯಾ" (೪೫೨)

ಹಾಗೆಯೇ ತನ್ನ ಜನಪರ ಕಾಳಜಿಯಿಂದಾಗಿ ಮನಂಬುಗುವ ವಚನವಿದು:

"ಕಸ್ತೂರಿ ಅರಮನೆ-ಗುರುಮನೆ ಸೇರಬಹುದು
ಕಸ್ತೂರಿಮೃಗ ಕಾಡಿನಲ್ಲೆ ಅಲೆವುದು
ಬೆಳೆದ ವಸ್ತು ಬೆಲೆಬಾಳಬಹುದು
ಬೆಳೆಯುವ ರೈತನಿಗೆ ಬೆಲೆಯಿಲ್ಲವಯ್ಯಾ" (೪೬೭)

ದೃಷ್ಟಾಂತಗಳ ಸರಮಾಲೆಯೇ ಅನೇಕ ವಚನಗಳಲ್ಲಿದೆ (೪೫೪, ೫೬೭, ಮು.) ಹಲವಾರು ಸಾಲುಗಳು ಸೂತ್ರಬದ್ಧವಾಗಿ ನಾಣ್ಣುಡಿಗಳಂತಿವೆ: "ಅಪ್ಪುವಿನಲ್ಲಿ ಕೈಯೆದ್ದಿ ಚೀಪಿದೊಡೆ ತೃಷೆ ಹಿಂಗಬಹುದೇನಯ್ಯಾ" (೧೮), "ಮಾರುದ್ದ ಭಾಷಣಕ್ಕಿಂತ ಗೇಣುದ್ದ ನಡೆ ಲೇಸು" (೫೮೧), "ಯೋಜನೆ ರೂಪಿಸಿ ಭೋಜನ ಗಳಿಸಿದವರುಂಟು" (೫೨೪), "ಮನೆಯ ದೀಪವೆಂದು ಮುದ್ದಿಸುವರುಂಟೇನಯ್ಯಾ" (೫೫೪) ಮುಂತಾದವನ್ನು

ಉದಹರಿಸಬಹುದು. ಆದರೆ "ತಜ್ಞತೆ ಬೆಳೆದರೇನು ಕೃತಜ್ಞತೆ ಅಳಿಯುತಿರಲು" "ತಜ್ಞತೆಯು ಬೆಳೆಯುತ್ತಿರುವಂತೆಯೇ ಕೃತಜ್ಞತೆಯು ಅಳಿಯುತ್ತಿದೆಯಯ್ಯಾ" ಎಂಬ (ಸಿದ್ಧಯ್ಯ ಪುರಾಣಿಕರ ಮಾತಿನ ಛಾಯೆ) ಎಂಬಂತಹ ಕಡೆ ವ್ಯರ್ಥಪ್ರಾಸವಿದೆ.

ಶ್ರೀ ಅನ್ನದಾನೀಶ್ವರರ ಒಟ್ಟು ಮಾತುಗಾರಿಕೆ ಹನ್ನೆರಡನೆಯ ಶತಮಾನದ ವಚನಕಾರರಿಂದ ರೂಪಿತವಾದುದು. ಆದರೆ 'ಮಾಳ್ಪವೋಲ್' (೪೪೭), 'ಭಾವದಿಂ' (೫೨೩) ಮುಂತಾದ ಹಳಗನ್ನಡ ರೂಪಗಳೂ ಇಲ್ಲಿ ತೂರಿಬಂದಿವೆ. 'ಚಂದ್ರ ಕಳಂಕಿತನಾಗಿರುವುದು' (೩೦), 'ಹಾಲು ನೀರಿನಲಿ ಹಾಲು ಸವಿವ ಹಂಸ' (೫೦೩) ಮುಂತಾದ ಸಾಂಪ್ರದಾಯಿಕ ಕಲ್ಪನೆ-ಕವಿ ಸಮಯಗಳೂ ಇಲ್ಲಿ ಎಡೆವಡೆದಿವೆ. ಮಾನವೀಯತೆ ಎಂಬ ಶಬ್ದದ ಸಾಮ್ಯದಿಂದ ದಾನವೀಯತೆ, ಪಾಶವೀಯತೆ (೫೫೬) ಎನ್ನುವ ಶಬ್ದರೂಪಗಳನ್ನು ಲೇಖಕರು ನಿರ್ಮಿಸಿಕೊಂಡಿದ್ದಾರೆ. "ಬನ್ನಿ! ಬನ್ನಿ! ಬನ್ನಿರೆಲ್ಲರೂ, ಬನ್ನಿ ವಿನಿಮಯ ಮಾಡಬನ್ನಿರಿ" (೬೦೫) ಎಂಬಲ್ಲಿ ಬನ್ನಿ ಶಬ್ದಶ್ಲೇಷೆಯಿಂದ ಕೂಡಿದೆ. ಹಾಗೆಯೇ "ಮನ ಕೆರಳಿಸುವ ಕೃತಿಯು ಮುಟ್ಟಿ ಕೈತೊಳೆಯಬೇಕಯ್ಯಾ; ಮನವರಳಿಸುವ ಕೃತಿಯ ಕಂಡು ಕೈತೊಳೆದು ಮುಟ್ಟಬೇಕಯ್ಯಾ" (೫೦೭) ಎಂಬಲ್ಲಿ ಚಮತ್ಕಾರ ಬಳಕೆಯಾಗಿದೆ.

ಬಸವಣ್ಣನಂತಹ ವಚನಕಾರನಲ್ಲಿ ಅಂಕಿತವು ಅದ್ಭುತವಾದ ರೀತಿಯಲ್ಲಿ ಆತನ ನೆರವಿಗೆ ಬರುತ್ತದೆ. ಅದು ರಚಯಿತನ ಗುರುತು ಎಂಬುದು ಅದರಿಂದಾಗುವ ಮೊದಲ ಪ್ರಯೋಜನ. ಜಗತ್ತಿನಲ್ಲಿ ತಾನು ಕಂಡ ಸಂಗತಿಗಳಿಂದ ಧೃತಿಗೆಡುವ, ಗೊಂದಲಕ್ಕೀಡಾಗುವ ಚೇತನವು ತನ್ನ ಅನುಭವವನ್ನು ಎಲ್ಲರಿಗೂ ಮೇಲಿರುವ ವಿಶ್ವಚೇತನಕ್ಕೆ ವರದಿಯೊಪ್ಪಿಸುವ ಧಾಟಿಯಲ್ಲಿ ಅಂಕಿತ ಬಳಕೆಯಾಗಬಹುದು. ಒಳತೋಟಿ, ತೊಳಲಾಟ, ಪಾಪನಿವೇದನೆಗಳಂತಹ ಸನ್ನಿವೇಶಗಳಲ್ಲಿ ವಚನಕಾರನ ಅಂಕಿತ ಆತನ ಸಾಕ್ಷಿಪ್ರಜ್ಞೆಯಾಗಿ ಕೆಲಸಮಾಡಬಹುದು. ಆದರೆ ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳ ವಚನಗಳಲ್ಲಿ ಆತ್ಮನಿವೇದನೆ, ಆತ್ಮವಿಡಂಬನೆ, ಆತ್ಮವಿಮರ್ಶೆ ಕಾಣಿಸುವುದಿಲ್ಲ, ಇದಕ್ಕೆ ಕಾರಣ ಇವರ ದೃಷ್ಟಿಯು ಹೊರಗಿನದು; ಒಳಗಿನದಲ್ಲ, ಅಬ್ಬರವಿಲ್ಲದ ನೇರ ಮಾತುಗಾರಿಕೆ, ವಿವೇಚನಾಯುತವಾದ ದೃಷ್ಟಿ, ಲೋಕ ವಿವೇಕ ಇವುಗಳಿಂದಾಗಿ ಇವರ ವಚನಗಳು ವಿಶಿಷ್ಟವಾಗಿವೆ. ಅನುಭವಕ್ಕೆ ಮೀರಿದ್ದನ್ನು ಹೇಳದ ಪ್ರಾಮಾಣಿಕತೆ ಇಲ್ಲಿ ಎದ್ದು ಕಾಣುವ ಗುಣ. ಅಲ್ಲದೆ, ನನ್ನ ದೃಷ್ಟಿಯಲ್ಲಿ ಬಹುಮುಖ್ಯವಾದ ಗುಣ ಈ ವಚನಗಳಲ್ಲಿ ಕಾಣುವುದು, ಅದಮ್ಯವಾದ ಜೀವನ ಪ್ರೀತಿ ಅದನ್ನು ತುಂಬಿಕೊಂಡ ವಚನವೊಂದರ ಸಾಲುಗಳನ್ನು ಉದ್ಧೃತಗೊಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ;

"ಸಾಗರ ಬತ್ತಿ ಹೋಗಲಿ, ನೀರಡಿಕೆ ಬತ್ತದಿರಲಿ
ಬಯಸಿದ ಜೀವನ ಸಿಗದಿರಲಿ, ಬಾಳ್ವ ಛಲ ಬತ್ತದಿರಲಿ" (೫೯೪)

ವೀರಶೈವ ದಾರ್ಶನಿಕ ಸಿದ್ಧಾಂತದಲ್ಲಿ "ಗುರು ಕರುಣೆ"

—ಶ್ರೀ ಉಳವೀಶಸ್ವಾಮಿ ಹುಲೆಪ್ಪನವರಮಠ, ಮುರಗೋಡ

ಮೈಲಾರ ಬಸವಲಿಂಗ ಶರಣರ ಗುರು ಕರುಣ ತ್ರಿವಿಧಿಯಲ್ಲಿ "ವೀರಶೈವ ದಾರ್ಶನಿಕ ಸಿದ್ಧಾಂತ" ಬೃಹದ್ಗ್ರಂಥವು ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ಸಂಸ್ಥಾನಮಠ ಮುಂಡರಗಿ ಅವರ ಅನುಭವ ಪೂರ್ಣವಾದ, ಅನುಭಾವಿಗಳು ಅಧ್ಯಯನ ಮಾಡಲೇಬೇಕಾದ, ವೀರಶೈವ ಸಿದ್ಧಾಂತ ಪ್ರತಿಪಾದನೆಯು ಈ ಶತಮಾನದ ಅತ್ಯಮೌಲ್ಯ ಗ್ರಂಥವಾಗಿದೆ.

'ಸ್ವಾಧ್ಯಾಯ ಪ್ರವಚನಾಭ್ಯಾಂ ನಪ್ರಮದಿತವ್ಯಂ
ತದ್ಧಿ ತಪಃ ತದ್ಧಿ ತಪಃ'

ಎಂಬುದಾಗಿ ತೈತರೇಯ ಉಪನಿಷತ್ತು ಆಜ್ಞಾಪಿಸಿದೆ. ಈ ಉದ್ಗ್ರಂಥವು ಈ ಉಪನಿಷದ್ವಾಣಿಯನ್ನು ಅಕ್ಷರಶಃ ಪ್ರತಿಪಾದಿಸಿದಂತಾಗಿದೆ.

ಶಿವಾನುಭವ ಸಂಪನ್ನರಾದ ಮೈಲಾರ ಬಸವಲಿಂಗ ಶರಣರ, ವೀರಶೈವ ಸಿದ್ಧಾಂತ ಸಂಪತ್ತಿನಿಂದ ವಿಜೃಂಭಿಸುವ ೩೩೩ ತ್ರಿಪದಿಗಳ ಮೇರು ಕೃತಿ "ಗುರು ಕರುಣ ತ್ರಿವಿಧಿ ಪಾರಾಯಣ ಗ್ರಂಥ ಎಂಬ ಗ್ರಹಿಕೆಯನ್ನು ವಿಸ್ತೃತಗೊಳಿಸಿ ಇದು ವೀರಶೈವ ದರ್ಶನದ ಸಿದ್ಧಾಂತ ಪ್ರತಿಪಾದಕ ಗ್ರಂಥ, ಇದು ಶಿವಾನುಭವಿಗಳ ಅಧ್ಯಯನಕ್ಕೆ ಅಧ್ಯಾಪನಕ್ಕೆ ಸದುಪಯುಕ್ತವಾದ ಗ್ರಂಥ, ಇದು ಲಿಂಗಾಂಗ ಸಾಮರಸ್ಯ ಸಾಧನೆಗೆ ಮಕುಟಪ್ರಾಯವಾದ ಗ್ರಂಥ. ಇದು "ಶೂನ್ಯ ಸಂಪಾದನೆಯ" ಸಿದ್ಧಿಯ ಶ್ರೀಗಿರಿಯ ಆರೋಪಣಕ್ಕೆ ಕಾರಣವಾದ ಮಹಾನ್‌ಗ್ರಂಥ ಎಂಬುದನ್ನು ಪರಮಪೂಜ್ಯ ಜಗದ್ಗುರುಗಳವರು ಖಚಿತಪಡಿಸಿದ್ದಾರೆ.

ಪೂಜ್ಯ ಶ್ರೀಗಳು ಐವತ್ತೊಂದು ದಿನಗಳ ಕಾಲ ಮೌನ ಅನುಷ್ಠಾನ ಕೈಕೊಂಡು, ಅರ್ಚನ ಅರ್ಪಣಗಳನ್ನು ಪೂರೈಸಿ, ಅಂತರಂಗದಲ್ಲಿ ಅನುಭಾವ ಮಾಡಿಕೊಂಡು, ತ್ರಿಪದಿಗಳ ಆತ್ಮದಲ್ಲಿ ತಾದಾತ್ಮ್ಯ ಹೊಂದಿ ಆರುನೂರು ಪುಟಗಳ ಹೊಬ್ಬೊತ್ತಿಗೆಯನ್ನು ರಚಿಸಿರುವುದು ಒಂದು ಪವಾಡ ಸದೃಶ ಕಾರ್ಯವೆಂದರೆ ಅತ್ಯುಕ್ತಿಯಲ್ಲ. 'ಸ್ವಾಧ್ಯಾಯ ಪ್ರವಚನ' ಎಂಬುದೇ ತಪಸ್ಸು ಎಂದು ಉಪನಿಷತ್ತು ಸಾರಿರುವುದರ ಮಥಿತಾರ್ಥವನ್ನು ಇಲ್ಲಿ ಅನುಭವಿಸಬಹುದಾಗಿದೆ.

"ಜೇಂಗೊಡದಂತೆ, ಝೇಂಕರಿಪ ತುಂಬಿಗಳಿಂ ಚರದಂತೆ, ಪಣ್ತಸೆವ ಮಾಮರದಂತೆ,

ಬೆಳದಿಂಗಳಂತೆ, ಎಳೆಗಾಳಿಯಂತೆ, ಚಿತ್ತಂಗೊಳಲಾರದೆ ಈ ಕೃತಿ? ಷಡಕ್ಷರ ದೇವಕೃತಂ ಸರಸಜ್ಞರ?" ಎಂದು ಶೃಂಗಾರ ರಸಕಾವ್ಯಕರ್ತೃ ಷಡಕ್ಷರಿ ಮಹಾಕವಿಯು ರಸಜ್ಞರಿಗೆ ಆಹ್ವಾನ ನೀಡಿದ ಹಾಗೆ. ಈ "ವೀರಶೈವ ದಾರ್ಶನಿಕ ಸಿದ್ಧಾಂತ" ಕೃತಿಯು ಶಿವಾನುಭವಿಗಳ, ಷಟ್‌ಸ್ಥಲಜ್ಞಾನ ಸಂಪನ್ನರ, ವೀರಶೈವ ಧರ್ಮತತ್ವನಿರತ ನಿಶಿತಮತಿಗಳ ಚಿತ್ತಂಗೊಳದಿರ ಲಾರ್ಪುದೆ? ಎಂದು ಆಹ್ವಾನವೀಯುತ್ತದೆ ಎಂದರೆ ಅತಿಶಯೋಕ್ತಿಯೇನಲ್ಲ.

ಪೂಜ್ಯ ಶ್ರೀಗಳವರು ಈ ಗ್ರಂಥಕ್ಕೆ "ವೀರಶೈವ ದಾರ್ಶನಿಕ ಸಿದ್ಧಾಂತ" ಎಂದು ನಾಮಕರಣ ಮಾಡಿದುದು ಕೂಡ ಔಚಿತ್ಯ ಪೂರ್ಣವಾಗಿದೆ.

ಆಧ್ಯಾತ್ಮ ವಿದ್ಯೆಯ ವೈಶಿಷ್ಟ್ಯವನ್ನು ಬಿತ್ತರಿಸುವಲ್ಲಿ ವೇದ, ಉಪನಿಷತ್ತು, ಆಗಮ, ದರ್ಶನಗಳ ಪಾತ್ರವು ಮಹತ್ತರವಾದುದಾಗಿದೆ. ಆಗಮಗಳಲ್ಲಿ ಉಕ್ತವಾದ ವೀರಶೈವ ಮತವು ಷಡ್ದರ್ಶನಗಳಲ್ಲೊಂದಾದ ಉತ್ತರ ಮೀಮಾಂಸಾ ದರ್ಶನದಲ್ಲಿ ಶಕ್ತಿ ವಿಶಿಷ್ಟಾದ್ವೈತ ಮತವೆಂಬುದಾಗಿಯೂ ವಿವರಿಸಲ್ಪಟ್ಟಿದೆ.

ಶ್ರದ್ಧೆಗಿಂತ ಬುದ್ಧಿಗೇ ಪ್ರಾಧಾನ್ಯತೆಯನ್ನು ನೀಡಿದ ಬುದ್ಧದೇವನ ಉಪದೇಶ ವಾಣಿಯ ಪರಿಣಾಮದಿಂದ ಉಂಟಾದ ವಿಶಿಷ್ಟ ಸಂದರ್ಭದಲ್ಲಿ ಷಡ್ದರ್ಶನಗಳ ಉಗಮ ವಾದುದನ್ನು ನೋಡಬಹುದು. ಶ್ರುತಿ, ಸ್ಮೃತಿ, ಆಗಮಗಳ ತರುವಾಯ ದರ್ಶನಗಳ ಸೃಷ್ಟಿಯಾದುದು ತಿಳಿದು ಬರುತ್ತದೆ. ಶ್ರುತಿ ಎಂದರೆ ಕೇಳಿದುದು. ಸ್ಮೃತಿ ಎಂದರೆ ಕೇಳಿದುದನ್ನು ತಲೆಯಲ್ಲಿ ತಾಳಿದುದು. ಆಗಮ ಎಂದರೆ ಕೇಳಿದುದನ್ನು ತಲೆಯಲ್ಲಿ ತಾಳಿದುದನ್ನು ಪರಂಪರಾಗತವಾಗಿ ಹೇಳಿದುದು. ದರ್ಶನ ಎಂದರೆ ಕೇಳಿದುದನ್ನು, ತಲೆಯೊಳಗೆ ತಾಳಿದುದನ್ನು, ಪರಂಪರಾಗತವಾಗಿ ಹೇಳಿದುದನ್ನು ಸ್ವಯಂ ವಿಮರ್ಶೆಯಿಂದ ನಿಷ್ಕರ್ಷಿಸಿ ಗ್ರಹಿಸಿದ್ದು, ಸಾಕ್ಷಾತ್ಕರಿಸಿಕೊಂಡದ್ದು ಎಂಬ ವಿಚಾರ ಪ್ರಕಟವಾಗಿದೆ. ಆಗಮದಲ್ಲಿ, ದರ್ಶನದಲ್ಲಿ ಉಕ್ತವಾದ ವೀರಶೈವ ಮತದ ಪರಿಷ್ಕೃತ ರೂಪವನ್ನು ಸಿದ್ಧಾಂತ ಶಿಖಾಮಣಿಯಲ್ಲಿ, ಹನ್ನೆರಡನೆಯ ಶತಮಾನದ ಶರಣ-ಶರಣೆಯ ವಚನ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ವಿಶ್ವಗುರು ಮಹಾತ್ಮಾ ಬಸವಣ್ಣನವರು, ಜ್ಞಾನನಿಧಿ ಚೆನ್ನಬಸವಣ್ಣನವರು ಹೊಸ ರೂಪವನ್ನು ಕೊಟ್ಟರು. ವೀರಶೈವ ಸಿದ್ಧಾಂತದ ಆಚರಣೆ ದೈನಂದಿನ ಬದುಕಿನಲ್ಲಿ ಒಡಮೂಡುವಂತೆ ಮಾಡಿದುದು ಬಸವಾದಿ ಶರಣರು ಮಾಡಿದ ಮಹದುಪಕಾರ. ಹದಿನೈದನೆಯ ಶತಮಾನದಲ್ಲಿ ತೋಂಟದ ಸಿದ್ಧಲಿಂಗಯತಿಗಳು ಷಟ್‌ಸ್ಥಲ ಜ್ಞಾನ ಸಾರಾಮೃತ ರಚಿಸಿ ಷಟ್‌ಸ್ಥಲ ಸಿದ್ಧಾಂತವು ಉಜ್ವಲವಾಗಿ ಪ್ರಕಟಿಸು ವಂತೆ ಮಾಡಿದರು ಈ ಹಿನ್ನೆಲೆಯಲ್ಲಿ ಹಾಲವರ್ತಿ ಶಿವಾನುಭವ ಚರವರ್ಯ ಶ್ರೀ ಚೆನ್ನವೀರ ಶಿವಯೋಗಿಗಳ ಕೃಪಾ ಕಟಾಕ್ಷದ ಪರಿಣಾಮವಾಗಿ ಮೈಲಾರ ಬಸವಲಿಂಗ ಶರಣ ವರೇಣ್ಯರು "ಗುರುಕರುಣ ತ್ರಿವಿಧಿ"ಯನ್ನು ರಚಿಸಿದರು ಎಂಬುದನ್ನು ವಿಶ್ಲೇಷಿಸಿದ ಪೂಜ್ಯ ಜಗದ್ಗುರುಗಳವರು ಗ್ರಂಥ ರಚನೆಗೆ ಪ್ರೇರಕವಾದ ಅಂಶವನ್ನು ಚಿತ್ರಿಸಿದುದು ಸೂಕ್ತವಾಗಿದೆ.

ವೀರಶೈವ ತತ್ವ ಹಾಗೂ ಸಿದ್ಧಾಂತಗಳ ವಿಷಯವಾಗಿ ಡಾ. ಜ. ಚ. ನಿ. ಅವರ 'ಸಂಪಾದನೆಯ ಸೊಂಪು' ಶ್ರೀ ಜೋಳದ ರಾಶಿಯವರ 'ಬಯಲ ಗಳಿಕೆ' ಪ್ರೋ. ಬ್ರ. ಶ್ರೀ ಶಿವಕುಮಾರ ಸ್ವಾಮಿಗಳವರ 'ಅಷ್ಟಾವರಣ' ಪೂಜ್ಯ ಜಗದ್ಗುರು ಶ್ರೀ ನಿ. ಪ್ರ. ಸ್ವ. ಅನ್ನದಾನೀಶ್ವರ ಮಹಾಸ್ವಾಮಿಗಳವರ "ವೀರಶೈವ ದಾರ್ಶನಿಕ ಸಿದ್ಧಾಂತ" ಗ್ರಂಥಗಳು ಈ ಇಪ್ಪತ್ತನೆಯ ಶತಮಾನದ ಉಲ್ಲೇಖಾರ್ಹ, ಗಮನಾರ್ಹ ಕೃತಿಗಳೆಂದು ಹೇಳಬಹುದು.

"ವೀರಶೈವ ದಾರ್ಶನಿಕ ಸಿದ್ಧಾಂತ"ದಲ್ಲಿ ಗುರು ಕರುಣ ತ್ರಿವಿಧಿಯೊಳಗಿನ ತ್ರಿಪದಿಗಳ ಅರ್ಥವಿವರಣೆ ಮಾತ್ರವಲ್ಲ ಪೂಜ್ಯ ಶ್ರೀಗಳು ತಮ್ಮ ಪಾಂಡಿತ್ಯಪೂರ್ಣವಾದ ಚತುರೋಕ್ತಿಗಳಿಂದ, ಆನುಷಂಗಿಕವಾದ ದೃಷ್ಟಾಂತ ದಾರ್ಷ್ಟಾಂತಗಳಿಂದ ಸ್ವಾನುಭವದ ಅಮೃತ ಸಿಂಚನೆಯಿಂದ, ಶರಣರ, ಸಂತರ, ಶಿವಾನುಭವಿಗಳ ನುಡಿಗಳನ್ನು ಉದಾಹರಿಸಿ ಆಳವಾದ ಸ್ವಾಧ್ಯಯನದ ಬೆಳಕನೂಡಿಸಿ ವೈಭವೀಕರಿಸಿದ್ದಾರೆ.

ಮಹಾ ಮಹೋಪಾಧ್ಯಾಯರಾದ ಸಿದ್ಧಪ್ಪಾರಾಧ್ಯರು "ಪೂಜ್ಯಪಾದರು ಶಿವಪ್ರೇರಣೆ ಯಂತೆ ಶಿವಾನುಭವವನ್ನು ಅನುಭವಿಸುತ್ತ ಶಿವಭಾವದಿಂದ ರಚಿಸಿರುವ ಈ ದಿವ್ಯ ಕೃತಿಯು ಬದ್ಧರನ್ನು ಬುದ್ಧರನ್ನಾಗಿ, ಕರ್ಮಿಗಳನ್ನು ಕರ್ಮಯೋಗಿಗಳನ್ನಾಗಿ ಮಾರ್ಪಡಿಸಿ ಮಾನವ ಸಮಾಜದಲ್ಲಿ ಶಾಂತಿ, ಸದ್ಭಾವನೆ, ಸಮಾಧಾನ ಹುಟ್ಟಿಸುತ್ತದೆ" ಎಂದು ಅಭಿಪ್ರಾಯಪಟ್ಟರೆ ವೀರಶೈವ ದಾರ್ಶನಿಕ ಶರಣ ಅನುಭಾವಿ ಸಾಹಿತಿ ಶ್ರೀ ತಿಪ್ಪೇರುದ್ರಸ್ವಾಮಿಯವರು "ಪೂಜ್ಯ ಜಗದ್ಗುರುಗಳವರು ಶ್ರೀ ಬಸವಲಿಂಗ ಶರಣರು ಕಂಡ ಶಿವಯೋಗದ ನಿಲುವನ್ನು ಅತ್ಯಂತ ಪ್ರೌಢವಾಗಿ ಅರ್ಥಪೂರ್ಣವಾಗಿ ವಿವರಿಸುವಲ್ಲಿ ಆಳವಾದ ಪಾಂಡಿತ್ಯ ಸೂಕ್ಷ್ಮಗ್ರಾಹಿಯಾದ ನಿಶಿತಮತಿ ಪರಿಶುದ್ಧ ಭಾವನೆಯಿಂದ ಕೂಡಿದ ಅಂತರ್ದೃಷ್ಟಿ ಮೇಳವಿಸಿವೆ" ಎಂದು ಉದ್ಗರಿಸಿದ್ದಾರೆ. ಘನ ವಿದ್ವಾಂಸರಾದ ಡಾ. ಮಲ್ಲಾಪೂರ ಅವರು "ಗುರು ಕರುಣ ತ್ರಿವಿಧಿ"ಯ ಹೊರಮೈ ಒಳಮೈಗಳನ್ನು ಅದಕ್ಕಿಂತ ಮುಖ್ಯವಾಗಿ ಅದರ 'ಆತ್ಮಶ್ರೀ'ಯನ್ನು ತೆರೆದು ತೋರುವ ಪೂಜ್ಯ ಶ್ರೀಗಳವರ ಈ "ವೀರಶೈವ ದಾರ್ಶನಿಕ ಸಿದ್ಧಾಂತ ಕೃತಿ ಕನ್ನಡದ ತತ್ವ ಸಾಹಿತ್ಯಕ್ಕೆ ನಿಶ್ಚಯವಾಗಿಯೂ ಒಂದು ಅಮೌಲ್ಯ ಕೊಡುಗೆ ಎಂದು ಪ್ರಶಂಸಿಸಿದ್ದಾರೆ.

ಪುರಾಣಗಳಲ್ಲಿಯೇ ಪ್ರಭುಲಿಂಗ ಲೀಲೆ ಪ್ರಪ್ರಥಮಸ್ಥಾನವನ್ನು ಪಡೆದಿದೆ ಎಂದು ಒಂದೆಡೆ ಹೇಳಿರುವ ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ, ಕನ್ನಡ ಸಾಹಿತ್ಯ ಕ್ಷೇತ್ರದ ದಿಗ್ಗಜ ಶ್ರೀ ಆರ್. ಸಿ. ಹಿರೇಮಠರು ಇದು ಶಿವಯೋಗ ವಿದ್ಯಾವಿಶಾರದ ಚಾಮರಸರಿಂದ ರಚಿತವಾದುದರಿಂದಲೇ "ಪ್ರಭುಲಿಂಗಲೀಲೆ ಕಳಸಪ್ರಾಯವಾದ ಕೃತಿ ಯಾಗಿದೆ ಎಂದು ಹೇಳುವದನ್ನು ಮರೆತಿಲ್ಲ. ಈ ಹೇಳಿಕೆಗಳನ್ನು ನೆನಪಿಸಿಕೊಂಡರೆ: ಪೂಜ್ಯ ಶ್ರೀಗಳವರಾದ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳವರು ಶಿವಾನುಭವ ಸಂಪನ್ನರು, ಶಿವಯೋಗನಿಷ್ಣಾತರು, ವಿದ್ವನ್ಮಣಿಗಳು ಬರೆದಿರುವುದರಿಂದಲೇ

ಈ ಗುರು ಕರುಣ ತ್ರಿವಿಧಿ ಮಹೋನ್ನತವಾದ "ವೀರಶೈವ ದಾರ್ಶನಿಕ ಸಿದ್ಧಾಂತ" ಗ್ರಂಥ ವಾಗಿದೆ ಎಂಬುದನ್ನು ಉದ್ಘೋಷಿಸುವದು ತಪ್ಪಾಗಲಾರದು.

ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ ಷಟ್‌ಸ್ಥಲವೇ ಆತ್ಮವಾಗಿ ಇರುವ ಧರ್ಮ ವೀರಶೈವ ಧರ್ಮ ಎಂಬ ಸುಪ್ರಸಿದ್ಧ ರೂಪಕವನ್ನು ಮನದಂದರೆ ಅಷ್ಟಾವರಣದ ವಿಶ್ಲೇಷಣೆಯೇ ಮುಖ್ಯವಾಗಿರುವ 'ಗುರು ಕರುಣ ತ್ರಿವಿಧಿ' ಪಂಚಾಚಾರ, ಷಟ್‌ಸ್ಥಲ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಮೈತುಂಬಿ ಪ್ರವಹಿಸುವ ಹೆದ್ದೊರೆಯು ಸಾಗರ ಮುಖವನ್ನೇ ಸೇರುವ ಹಾಗೆ 'ಗುರು ಕರುಣ ತ್ರಿವಿಧಿ'ಯ ತತ್ವ ಪ್ರವಾಹವು ಶೂನ್ಯ-ಸಂಪಾದನೆಯ ಸಾಗರದಲ್ಲಿ ಸಮಾವೇಶವಾಗುವುದನ್ನು ಗಮನಿಸ ಬಹುದಾಗಿದೆ.

'ಗುರು ಕರುಣ ತ್ರಿವಿಧಿ'ಯಲ್ಲಿಯ ೩೩೩ ತ್ರಿಪದಿಗಳಲ್ಲಿ ೭೪ ತ್ರಿಪದಿಗಳು, ಗುರುಕೃಪೆ ಗುರುಮಹಿಮೆ, ಗುರುವಿನ ಉಪಕಾರ, ಗುರುವಿನ ಉನ್ನತಿಕೆಗಳಿಗಾಗಿ ಮೀಸಲಾಗಿವೆ. ಅಷ್ಟಾವರಣಗಳಲ್ಲಿ ಮೊಟ್ಟ ಮೊದಲನೆಯ ಆವರಣ 'ಗುರು' ಆದುದರಿಂದ ಯಾವ ತತ್ವಗಳೇ ಇರಲಿ, ಯಾವ ಸಿದ್ಧಾಂತವೇ ಇರಲಿ, ಗುರುಕರುಣೆ, ಗುರುಕೃಪೆ, ಗುರುಸಾನ್ನಿಧ್ಯ ಇರದ ಹೊರತು ಅರ್ಥವಾಗಲಾರವು ಎಂಬ ಕಾರಣಕ್ಕಾಗಿ 'ಗುರು' ಸ್ಥಾನದ ವಿವರಣೆ ಗಾಗಿ ಇಷ್ಟೊಂದು ಪದ್ಯಗಳು ಮೀಸಲಾಗಿರುವುದನ್ನು ಕಾಣಬಹುದು. ಪೂಜ್ಯ ಜಗದ್ಗುರು ಗಳವರೂ ಕೂಡ ಆರುನೂರು ಪುಟಗಳ ಈ ಉದ್ಗ್ರಂಥದಲ್ಲಿ ನಾಲ್ಕನೆಯ ಒಂದು ಭಾಗ ದಷ್ಟು ಅರ್ಥಾತ್ ನೂರೈವತ್ತು ಪುಟಗಳಲ್ಲಿ ಗುರುದೇವನ ವಿವರಣೆಯನ್ನು ನೀಡಿರುವುದು ಔಚಿತ್ಯಪೂರ್ಣವಾಗಿದೆ.

'ಗುರು' ಎಂಬ ಪದವೇ 'ದೊಡ್ಡದು' ಎಂಬರ್ಥ ನೀಡುತ್ತದೆ. ಎಷ್ಟು ದೊಡ್ಡದು? ಇದಕ್ಕಿಂತ ದೊಡ್ಡದೆಂಬುವುದೇ ಇಲ್ಲ ಅಷ್ಟು ದೊಡ್ಡದು ಎಂದು ಹೇಳಬಹುದು. ಉಪನಿಷತ್ತುಗಳು, ಬಸವಾದಿಶರಣರು, ಅಕ್ಕಮಹಾದೇವಿಯಾದಿ ಶರಣೆಯರು, ಸರ್ಪಭೂಷಣ ಶಿವಯೋಗಿಗಳು, ನಿಜಗುಣ ಶಿವಯೋಗಿಗಳು, ಕಬೀರದಾಸರು, ಪುರಂದರದಾಸರು, ಆದಿಯಾಗಿ ಗುರುವಿನ ಶ್ರೇಷ್ಠತೆಯನ್ನು, ಆವಶ್ಯಕತೆಯನ್ನು, ಮಹಿಮೆಯನ್ನು ಹಿರಿಮೆ ಗರಿಮೆಗಳನ್ನು ಕೊಂಡಾಡಿದುದುಂಟು. ಇವರೆಲ್ಲರೂ ವಿವರಿಸಿದ ಗುರುಮಹಿಮಾ ವಿಚಾರಗಳನ್ನು ಸಂದರ್ಭೋಚಿತವಾಗಿ ಉಪಯೋಗಿಸಿ ತ್ರಿಪದಿಗಳ ಅರ್ಥಕ್ಕೆ, ಭಾವಕ್ಕೆ ಪೂಜ್ಯ ಜಗದ್ಗುರುಗಳವರು ಪುಷ್ಟಿಯನ್ನು ಒದಗಿಸಿರುವುದನ್ನು ಮನಗಾಣಬಹುದು.

ಪಂಚ ಪರುಷಗಳನ್ನು ಹೊಂದಿರುವ ಗುರುಹರನಿಂದಲಧಿಕ. ಶಿವಪಥವನರಿವೊಡೆ ಗುರುಪಥವೆ ಮೊದಲು. ಗುರುವಿನ ಪರಿ ವಿಪರೀತವಾಯಿತ್ತು. ಭೃಂಗ ಕೀಟಕ ನ್ಯಾಯ ದಂತಾಯಿತ್ತು. ಶಿಷ್ಯನ ಗುರು ತನ್ನಂತೆ ಮಾಡಿದ. ಭವಬಂಧನ ಕಳೆದು ಪರಮ ಸುಖವ ತೋರಿದ, ಇಂದು ಜ್ಞಾನವಾಯಿತ್ತೆಂದೊಡೆ ಹಿಂದಣ ಜನ್ಮದಲ್ಲಿ ಗುರುಕೃಪೆ ಹೊಂದದೆ

ಆಯಿತ್ತೇ? ಮುಂತಾಗಿ ಉದ್ಧರಿಸಿರುವ ಶರಣ–ಶರಣೆಯರ ನುಡಿ ಮುತ್ತುಗಳನ್ನು ಪೂಜ್ಯರು ಅಲ್ಲಲ್ಲಿ ಉದಾಹರಿಸಿ, ಗ್ರಂಥ ವ್ಯಾಸಂಗದ ತಪಸ್ಸಿನಿಂದ ತಾವು ಪ್ರಾಪ್ತ ಮಾಡಿಕೊಂಡ ಅನುಭಾವದ ಬೆಳಕಿನಲ್ಲಿ ಗುರುಮಹಿಮೆಯ ೭೪ ತ್ರಿಪದಿಗಳ ಭಾವಾರ್ಥ ವನ್ನು ನೂರೈವತ್ತು ಪುಟಗಳಲ್ಲಿ ವಿಸ್ತರಿಸಿ ವಿದ್ವತ್ತೆಯನ್ನು ಮೆರೆಸಿದ್ದಾರೆ.

ಗುರುವಿನ ಕರುಣೆ, ಗುರುವಿನ ಕೃಪೆ, ಗುರುವಿನ ಮಹಿಮೆ, ಗುರುವಿನ ಹೆಗ್ಗಳಿಕೆ ಕುರಿತಂತೆ ವಿಶ್ವದ ಯಾವುದೇ ಮತ, ಪಂಥ, ಧರ್ಮಗಳು, ಯಾವುದೇ ದಾರ್ಶನಿಕರು, ದಾಸರು, ಸಂತರು, ಸಿದ್ಧರು, ಶರಣ–ಶರಣೆಯರು, ಅನುಭಾವವೇದ್ಯರು ಸ್ತುತಿಸದಿಲ್ಲ.

ಕಾಡಮಾನವನು ನಾಡಮಾನವನಾಗುವ ಪರಿವರ್ತನೆಯ ಹಂತದಲ್ಲಿ ಗುರುವಿನ ಸ್ಥಾನವನ್ನು ಗುರುತಿಸಿದುದನ್ನು ವೀಕ್ಷಿಸಬಹುದು. ಲೌಕಿಕ ಜೀವನವು ಸುಖಪ್ರದವಾಗ ಲಿಕ್ಕೂ ಗುರುಕೃಪೆಯು ಬೇಕು. ಪಾರಲೌಕಿಕ, ಪಾರಮಾರ್ಥಿಕ, ಜೀವನ ಸುಖದಾಯಕ ವಾಗಲಿಕ್ಕೂ ಗುರುಕೃಪೆ ಬೇಕು. ರಾಜಮಹಾರಾಜರಿರಲಿ, ಶ್ರೀಸಾಮಾನ್ಯರಿರಲಿ ಗುರುಬಲದ ಆವಶ್ಯಕತೆ ಇದೆ. "ಈ ಸ್ಥಾನದಲ್ಲಿ ಗುರು ಇರುವುದರಿಂದ ಶನಿಗ್ರಹದ ಪ್ರಭಾವ ನಡೆಯ ದಂತಾಗಿದೆ ನಿಮ್ಮ ಕುಂಡಲಿಯಲ್ಲಿ" ಎಂದು ಜ್ಯೋತಿಷ್ಯಶಾಸ್ತ್ರಜ್ಞರು ಹೇಳುವುದನ್ನು ಕೇಳುವಾಗ ಗುರುಬಲದ ಅರಿವು ನಮಗಾಗಬಲ್ಲುದು. ಅರಮನೆ ಗುರುಮನೆಗಳ ಐತಿಹ್ಯ ವನ್ನು ಇಂದಿನ ಪ್ರಜಾಪ್ರಭುತ್ವದ ಆಡಳಿತದ ಪರಿಣಾಮವನ್ನು ಅನುಭವಿಸುತ್ತಿರುವವರೂ ಬಲ್ಲರು. "ಅರಮನೆಯ ಆನೆಗೆ ಗುರುಮನೆಯ ಅಂಕುಶ" ಬೇಕು ಎಂಬ ರೂಪಕವೇ ಪ್ರಸಿದ್ಧವಾಗಿದೆ. ಅಂದು ರಾಜಗುರುಗಳು ಇದ್ದ ಹಾಗೆ ಇಂದು ಒಂದೊಂದು ಮನೆತನಕ್ಕೂ ಗುರುಗಳು ಇರುವುದನ್ನು ಕಾಣುತ್ತೇವೆ. (ವರ್ಣ) 'ಅಕ್ಷರಮಾತ್ರಂ ಕಲಿಸಿದಾತಂ ಗುರು' ಎಂದು ಕೃತಜ್ಞತೆ ಸಲ್ಲಿಸಲಾಗುತ್ತಿದೆ. ಅಕ್ಷರ ಎಂದರೆ ಸ್ವರಾದಿಯಾಗಿರುವ ವ್ಯಂಜನಾಕ್ಷರ ಗಳು ಎಂದು ಗ್ರಹಿಸುವುದಕ್ಕಿಂತ ಅ–ಕ್ಷರ ಕ್ಷರ ಎಂದರೆ ನಾಶ. ಅ ಎಂದರೆ ಇಲ್ಲ. ನಾಶವಿಲ್ಲದುದನ್ನು ಅವಿನಾಶಿಯಾದುದನ್ನು ಬೋಧಿಸಬಲ್ಲಾತ ಗುರು ಎಂದು ಅರ್ಥೈಸಿದರೆ ಹೆಚ್ಚು ಸಮಂಜಸವಾಗಬಹುದು. 'ಗುರು' ಎಂದ ತಕ್ಷಣವೇ ಎಂಥವರೇ ಇರಲಿ, ಅವರ ಹೃದಯದೊಳಗೆ ಪೂಜ್ಯ ಭಾವನೆಗಳ ಚಿಲುಮೆಯೇ ಚಿಮ್ಮುತ್ತದೆ. ಹಾಗೆಂದೇ "ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ ಆ ತೃಣವನಾ ಕೆಂಡ ನುಂಗುವಂತೆ ಗುರುಚರಣದ ಮೇಲೆ ತನುವನಿರಿಸಿದರೆ ಸರ್ವಾಂಗವೆಲ್ಲ ಲಿಂಗ" ಎಂದು ಶರಣರು ಸಾರಿರುವುದು ರೋಮಾಂಚಕಾರಿಯೆನಿಸುವ ಉಪಮೆ. ಗುರುವಿನ ಚರಣದಲ್ಲಿಯೇ ಇಂತಹ ಶಕ್ತಿ ಇರುವಾಗ ಗುರೂಪದೇಶದಲ್ಲಿ ಏನಿರಬೇಡ?

ಎಲ್ಲ ಧರ್ಮಗಳೂ ಗುರುವಿನ ಲೀಲೆಯನ್ನು ಕೊಂಡಾಡುತ್ತವೆ. ವೀರಶೈವ ಧರ್ಮದ ವಿಶೇಷವೆಂದರೆ ಗುರು ಹಾಗೂ ಜಂಗಮ ಲೀಲೆಗಳನ್ನು ಕೊಂಡಾಡುವುದು. ಗುರುವಿನ ಗುರು ಜಂಗಮ ಎಂದು ಈ ಧರ್ಮತತ್ವ ಸಾರುತ್ತದೆ. ವೀರಶೈವರಾಗಿರುವ ಪ್ರತಿಯೊಬ್ಬರೂ ದೀಕ್ಷೆ ಹೊಂದಲೇಬೇಕು. ಲಿಂಗಾಯತ, ಲಿಂಗಸ್ವಾಯತ, ಲಿಂಗಸನ್ನಿಹಿತ ಸಂಸ್ಕಾರವನ್ನು

ಶ್ರೀಗುರುವಿನಲ್ಲಿ ಹೊಂದಬೇಕು. ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಗುರು ಎಂಬುದನ್ನು ಮಾನ್ಯಮಾಡಲಾಗಿದೆ. ಈ ಸಂಸ್ಕಾರವನ್ನು ಒಬ್ಬರೇ ಸದ್ಗುರುಗಳು ನೀಡಲೂಬಹುದು. ಶಿಷ್ಯನ ಮಸ್ತಕದ ಮೇಲೆ ಸದ್ಗುರುವು ತನ್ನ ವರದಹಸ್ತವನ್ನಿರಿಸಿ ಶಿಷ್ಯನ ಹೃದಯಸ್ಥ ನಿಜವಸ್ತುವನ್ನು (ಶಿವಚೈತನ್ಯವನ್ನು) ಇಷ್ಟಲಿಂಗರೂಪದಲ್ಲಿ ಶಿಷ್ಯನ ಹಸ್ತದಲ್ಲಿ ಇರಿಸು ತ್ತಾನೆ. ಈ ಇಷ್ಟಲಿಂಗವನ್ನು ನಿನ್ನಂಗದಲ್ಲಿ ಅರೆಕ್ಷಣವೂ ಅಗಲದಂತೆ ಇರಿಸು. ಹಸ್ತದಲ್ಲಿರಿಸಿ ಅರ್ಚಿಸು, ಧ್ಯಾನಿಸು, ಸಮರಸವಾಗು ಎಂದು ಶಿಕ್ಷಾಗುರುವಾಗಿ ಉಪದೇಶಿಸುತ್ತಾನೆ. ಲಿಂಗಾನುಷ್ಠಾನದ ಮಹತಿಯನ್ನು ಪ್ರಾಯೋಗಿಕವಾಗಿ ಬಿತ್ತರಿಸುತ್ತ ಪಾದೋದಕ ಪ್ರಸಾದವನ್ನು ಕರುಣಿಸಿ ಲಿಂಗಾಂಗ ಸಾಮರಸ್ಯದ ಗುರಿಯನ್ನು ತಲುಪಿಸುವ ಮೋಕ್ಷ ಗುರುವಾಗಿ ಜಂಗಮಮೂರ್ತಿ ಕಾಪಾಡುತ್ತಾನೆ. ಡಾ. ಮಲ್ಲೇದೇವರು 'ವೀರಶೈವ ಧರ್ಮ' ಗ್ರಂಥದಲ್ಲಿ ಗುರುವಿನ ಬಗೆಗೆ ಸೊಗಸಾಗಿ ವಿವರಿಸಿದುದನ್ನು ಗಮನಿಸಬಹುದು: **(Guru is required to do three functions namely Initiation, Training and Instruction and for achievement of salvation.)**

ಬಸವಲಿಂಗ ಶರಣರು: "ಸಾಭಾರಿ ಗುರುಗಳು (ಪಟ್ಟಾಧಿಕಾರಿ) ಲಿಂಗದೀಕ್ಷಾ ಸಂಸ್ಕಾರ ವನ್ನು ನೀಡಿದರೆ ನಿರಾಭಾರಿ ಜಂಗಮ ದೇವರ ಅನುಗ್ರಹ ನೀಡುವರೆಂದು ತ್ರಿವಿಧಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಸೂರ್ಯಚಂದ್ರರಿಬ್ಬರೂ ಆತ್ಮಪ್ರಕಾಶದಿಂದ ಬೆಳಗುತ್ತಿದ್ದಂತೆ ಗುರುಲಿಂಗಗಳೆರಡೂ ಜಂಗಮಪ್ರಕಾಶದಿಂದಲೇ ಬೆಳಗಬಲ್ಲವೆಂದು" ಉದಾಹರಿಸಿದ್ದಾರೆ. "ನಾನು ಲಿಂಗಪೂಜೆಯು ಮಾಡುವೆನಯ್ಯ ಜಂಗಮ ಮನೆಗೆ ಬರಬೇಕೆಂದು ಜಂಗಮ ಮನೆಗೆ ಬಂದರೆ ಲಿಂಗಪೂಜೆಯುನುಳಿದು ಜಂಗಮ ಸೇವೆಯ ಮಾಡುವೆನಯ್ಯಾ" ಎಂಬ ವಚನವನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಮೈಲಾರ ಬಸವಲಿಂಗ ಶರಣರು ತ್ರಿವಿಧಿ ಗ್ರಂಥಾರಂಭದಲ್ಲಿ ಶ್ರೀಗುರುವಿನ ಪ್ರಾರ್ಥನೆ ಮಾಡುತ್ತ ಸತ್ಕ್ರಿಯೆಗಳ ಆಗರವೇ ಆದ ಸುಜ್ಞಾನದ ಸಾಗರವೇ ಆದ ಗುರುವೆ ನನ್ನ ಮತಿಗೆ ಮಂಗಳವನ್ನು ದಯಪಾಲಿಸೆನ್ನುತ್ತಾರೆ. ಸದ್ಗುರುವಿನ ಸ್ವರೂಪವನ್ನು ನಿವೇದಿಸುತ್ತ ಗುರುಭಕ್ತರಿಗೆ ಕಲ್ಪತರುವಾಗಿರುತ್ತಾನೆ. ಭಕ್ತಿ ಜ್ಞಾನ ವೈರಾಗ್ಯ ಮಂದಿರವೆ ಆಗಿರುತ್ತಾನೆ. ಭಕ್ತರ ಸಂಕಲ್ಪ ವಿಕಲ್ಪಗಳನ್ನು ದೂರೀಕರಿಸುವವನೂ ಆಣವಮಲ ಮಾಯಾಮಲ ಕಾರ್ಮಿಕ–ಮಲಗಳೆಂಬ ಮೂರೂ ದೋಷಗಳನ್ನು ಅಳಿಸಿಹಾಕುವವನೂ ಆಗಿರುತ್ತಾನೆ ಎನ್ನುತ್ತಾರೆ.

ನಿಗಮಾಗಮಗಳು 'ನಗುರೋರಧಿಕ'ವೆಂದೂ, ಹರಮುನಿದರೆ ಗುರುಕಾಯ್ವನೆಂದೂ ಸಾರುತ್ತಿವೆ. ಶಿವನ ಸನ್ನಿಧಿಯನ್ನು ಬಯಸಿದ ಮಾನವರಿಗೆ ಭವ–ಮರಣ ಭೀತಿಗಳುಂಟು. ಗುರು ಸನ್ನಿಧಿಯನ್ನು ಬಯಸಿದರೆ, ಗುರು ಪಾದಪದ್ಮವನ್ನು ನಂಬಿದರೆ ಭವಮರಣಗಳ ಭೀತಿಯೇ ಇರಲಾರದೆಂದು ವಿವರಿಸಿ ಗುರುವಿನ ಮಹತ್ವವನ್ನು ಸಾರಿದ್ದಾರೆ.

ಗುರುವಿನ ಕೃಪೆಯು ಇರದಿದ್ದರೆ ಯಾವ ಕಾರ್ಯವೂ ಸಾಧಿಸಲಾರದು. ಗಂಟೆ ಯೊಳಗೆ ನಾದ ತುಂಬಿಕೊಂಡಿದ್ದರೇನು? ಬಾರಿಸದ ಹೊರತು ನಾದವು ಹೊರಹೊಮ್ಮದು.

ಮಾನವ ದೇಹವೆಂಬ ಗಂಟೆಯೊಳಗೆ ಪ್ರಣವನಾದವು ತುಂಬಿರುತ್ತದೆ. ಗುರುವಿನ ಕೃಪಾಹಸ್ತಸ್ಪರ್ಶದಿಂದ, ಸಂಸ್ಕಾರ ವಿಶೇಷದಿಂದ. ಮಂತ್ರೋಪದೇಶದಿಂದ, ಈ ಪ್ರಣವ ನಾದವು ಹೊರಹೊಮ್ಮಬಲ್ಲುದು. ವೀಣೆಯ ತಂತಿಗಳ ಮೇಲೆ ಜಾಣಕಲಾವಿದನ ಬೆರಳಾಡಿದಾಗ ಇಂಚರದ ಸಂಚಾರವಾಗುವಂತೆ ಜಾಣ ಶ್ರೀಗುರುವಿನ ದೃಷ್ಟಿಪಾತದಿಂದ ಮಾನವನಲ್ಲಿ ಸಾರಾಸಾರ ವಿಚಾರ ತರಂಗಗಳು ಹೊರಹೊಮ್ಮುತ್ತವೆ. ಆತ್ಮದೇವನ ದೇಗುಲವಾಗಿರುವ ಈ ದೇಹದೊಳಗೆ ಗುರೂಪದೇಶದ ಧ್ವನಿಯಿಲ್ಲದೆ ಲಿಂಗಧ್ಯಾನದ ಪ್ರತಿಧ್ವನಿಯು ಮೊಳಗಲಾರದು. ಯಂತ್ರವಾಹಕನಿಂದ ಚಲಿಸುವ ವಾಹನವು ನಿಶ್ಚಿತ ಸ್ಥಾನ ತಲುಪುವ ಹಾಗೆ ಶ್ರೀಗುರುಕೃಪೆಯಿಂದ ಮಾನವನ ಜೀವನ ಸಿದ್ಧಿಸಾಧ್ಯವಾಗುವುದು. ಈ ತೆರನಾಗಿ ಸದ್ಗುರುವಿನ ಕೃಪೆಯು ಮಹತಿಯುನ್ನು ವಿವರಿಸುತ್ತ ಸದ್ಗುರು ಮಹಿಮಾತಿಶಯದ ವರ್ಣನೆಯನ್ನು ಮಾಡುತ್ತ ಬಸವಲಿಂಗ ಶರಣರು ಶ್ರೀಗುರುವು ಪರತತ್ವವನ್ನು ಅರುಹುವ ಪರತತ್ವ ಮೂರ್ತಿಯೇ ಆಗಿದ್ದಾನೆ. ನಿಷ್ಕಲನಾದ ಶಿವನ ದರ್ಶನ ಮಾಡಿಸುವ ಸಾಮರ್ಥ್ಯ ಸಕಲನಾದ ಸದ್ಗುರುವಿನಿಂದ ಮಾತ್ರ ಸಾಧ್ಯವಾಗುವದು. ಪಿಂಡಾಂಡ ಬ್ರಹ್ಮಾಂಡಗಳ ಪರಿಶೋಧನೆ ಸದ್ಗುರುವಿನಿಂದಲ್ಲದೆ ಆಗದು ಆದಿ ಪರ ವಸ್ತುವಿಗೆ ಅನಾದಿ ಚೈತನ್ಯನಾಗಿ ಶ್ರೀಗುರುವು ಪರಿಶೋಭಿಸುವನು. ಸ್ವಯಂ ಜ್ಯೋತಿ ಸ್ವರೂಪನಾದ ಪರಶಿವನೇ ಭಕ್ತೋದ್ಧಾರಕ್ಕಾಗಿ ಸಕಲರೂಪ ಗುರುನಾಥನಾಗಿ ಮೆರೆಯು ತ್ತಿರುವನು. ಸಕಲ ಜೀವಿಗಳಿಗೆ ಲೇಸನೇ ಬಯಸುವನು. ಹಲವು ಮಾತುಗಳನಾಡುವುದ ರಿಂದೇನು ಪ್ರಯೋಜನ? ಒಂದು ಮಾತಿನಲ್ಲಿ ಹೇಳುವುದಾದರೆ ಶ್ರೀಗುರು ಪಾದವನಿಟ್ಟ ನೆಲವೇ ಕ್ಷೇತ್ರ. ಜಲವೇ ತೀರ್ಥ. ಗುರುಪ್ರಸನ್ನನಾಗಿ ಕರುಣೆದೋರಿದರಾಯಿತು ಶಿಷ್ಯನು ಧನ್ಯನಾಗುವನು. ಗುರುಮನ್ನಣೆಗಿಂತ ಮಿಗಿಲಾದುದು ಯಾವುದೂ ಇಲ್ಲ.

'ಅರಸು ಒಲಿದರೆ ಅರ್ಧರಾಜ್ಯ' ಎಂಬ ನಾಣ್ನುಡಿಯಂತೆ ಅರಸನ ಮನ್ನಣೆಗೆ ಪಾತ್ರವಾದ ಸೇವಕನನ್ನು ಎಲ್ಲ ಜನರೂ ಗೌರವಭಾವದಿಂದ ಕಾಣುವರು. ಹಾಗೆ ಗುರುಕೃಪಾ ಪಾತ್ರನಾದವನು ಸಕಲರಿಂದ ಗೌರವಿಸಲ್ಪಡುವನು. ಗುರುವಿನ ಒಲುಮೆಯಾದರೆ ಕೊರಡು ಕೊನರುವುದು. ಬರಡು ಹಯನಹುದು. ಕುರುಡನಿಗೆ ಕಂಗಳು ಮೂಡುವುವು. ಕುರುಡು ಎಂಬುದನ್ನು ಅಜ್ಞಾನಕ್ಕೆ; ಕಣ್ಣು ಎಂಬುದನ್ನು ಜ್ಞಾನಕ್ಕೆ ಹೋಲಿಸಬಹುದು. ಕಣ್ಣು ಗಳಿದ್ದರೆ ಸಾಕು ಏನನ್ನು ಬೇಕಾದರೂ ನೋಡಬಹುದು ಎಂಬುದು ತಾತ್ವಿಕಾರ್ಥದಲ್ಲಿ ಭ್ರಮೆಯೇ ಆಗುವುದು. ಯಥಾರ್ಥವಾದುದನ್ನು ಕಣ್ಣು ನೋಡಬೇಕು. ಇಂತಹ ಕಣ್ಣು ಗುರುಕೃಪೆಯಿಂದ ಮಾತ್ರ ಸಾಧ್ಯವಾಗುವುದು.

> ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ।
> ಈಕ್ಷತೇಯೋಗ ಯುಕ್ತಾತ್ಮಾ, ಸರ್ವತ್ರ ಸಮದರ್ಶನಃ॥

ಎಂದು ಗೀತೆಯು ಹೇಳುವ ಹಾಗೆ ಹೊರಗಣ್ಣು ನೋಡುವದನ್ನು ಮಾತ್ರ ಮಾಡಬಹುದು.

ಸರ್ವರಲ್ಲಿ, ಸರ್ವದರಲ್ಲಿ ಆತ್ಮವನ್ನೇ ನೋಡುವ ಕಣ್ಣು ಶ್ರೀಗುರು ಕೃಪೆಯಿಂದ ಮಾತ್ರ ಸಾಧ್ಯವಾಗುವುದೆಂಬುದನ್ನು ಮರೆಯಲಾಗದು.

ಈ ಬಗೆಯಾಗಿ ಬಸವಲಿಂಗ ಶರಣರು ಗುರುವಿನ ಮಹಿಮಾತಿಶಯವನ್ನು ಬಿಂಬಿಸಿ ಶ್ರೀಗುರುವೇ ನಿಜವಾದ ತಂದೆ, ತಾಯಿ, ಬಂಧು, ಬಳಗ ಎಂದು ಅಪ್ಪಿಕೊಂಡು ಪ್ರಾರ್ಥಿಸುವ ರೀತಿ ಅಪ್ರತಿಮವಾದುದಾಗಿದೆ. ಲೌಕಿಕ ತಂದೆ, ತಾಯಿ, ಬಂಧು, ಬಳಗದವರು ಈ ಲೋಕದ ಸುಖದ ಸಾಧನೆಯನ್ನು ಸಾಧ್ಯವಾದರೆ ನಮಗೆ ಪರಿಚಯಿಸಬಹುದು. ಪಾರಲೌಕಿಕವಾದ ಅಲೌಕಿಕವೆಂದೆನಿಸುವ ದುಃಖನಿವೃತ್ತಿ ಪರಮಾನಂದ ಪ್ರಾಪ್ತಿಯ ಸಾಧನೆಯನ್ನು ಇವರು ಹೇಳಲಾರರು. ಸದ್ಗುರುದೇವನು ಮಾತ್ರ ಈ ಸಾಧನೆಯನ್ನು ಹೇಳಲು ಸಮರ್ಥನು.

ತಂದೆಗೂ ಗುರುವಿಗೂ ಒಂದು ಅಂತರವುಂಟು
ತಂದೆ ತೋರುವನು ಸದ್ಗುರುವ ಆ ಗುರುವೆ
ಬಂಧನವ ಕಳೆವ ಸರ್ವಜ್ಞ ||

ಎಂಬ ನುಡಿಯನ್ನು ಗಮನಿಸಬಹುದು.

ಔರಸಪುತ್ರನಾಗಿರುವ ಪುತ್ರನು 'ಗುರುಪುತ್ರ'ನಾಗಬೇಕು. ಗುರುಪುತ್ರರೊಳಗೇ ನನ್ನನ್ನು ಕಿರಿಯ ಮಗನೆಂದು ಕರಪಿಡಿದು ನಡೆಸು ಎಂದು ಬಸವಲಿಂಗ ಶರಣರು ನಿವೇದಿಸುವ ರೀತಿ ತುಂಬಾ ಸೊಗಸಾಗಿದೆ. ಕಿರಿಯ ಮಗನ ಮೇಲೆ ತಂದೆ ತಾಯಿಂದಿರು ವಿಶೇಷ ಪ್ರೀತಿಯನ್ನಿರಿಸುವುದು ಲೋಕರೂಢಿ. ಈ ಕಾರಣದಿಂದಲೇ ಶರಣರು ನನ್ನನ್ನು ಕಿರಿಯ ಮಗನೆಂದು ಹರಸು ಎಂದು ಗುರು ತಂದೆಯಲ್ಲಿ ಕೇಳಿಕೊಂಡಿದ್ದಾರೆ.

ಸದ್ಗುರುವಿಗೆ ಗುರು ತಾಯಿ ಎಂದು ಅಂತಃಕರಣದಿಂದ ಹೇಳಿಕೊಂಡಿರುವುದನ್ನು ಗಮನಿಸಬಹುದು. ಅಳುವ ಕಂದನ ತಲೆಯ ಮೇಲೆ ತಾಯಿಯು ತನ್ನ ಕೈ ಇಟ್ಟರೆ ಸಾಕು ಮಗು ತೆಪ್ಪಗಾಗುವುದನ್ನು ಸಂತಸಪಡುವುದನ್ನು ಎಲ್ಲರೂ ಕಂಡಿದ್ದೇವೆ. ಗುರು ತಾಯಿಯೂ ಕೂಡ ಭಕ್ತ ಬಾಲಕನ ತಲೆಯನ್ನು ನೇವರಿಸಿದರೆ ಸಾಂಸಾರಿಕ ತಾಪತ್ರಯದ ಅಳಲಿನಿಂದ ಮುಕ್ತನಾಗಿ ನಿಜಾನಂದದ ಪಥ ಗಾಮಿಯಾಗುತ್ತಾನೆ. ಬಸವಲಿಂಗ ಶರಣರೇ ಹೇಳಿದ ಹಾಗೆ:

ಮಸ್ತಕದ ಮೇಲೆ ವರ ಹಸ್ತವನು ಇರಿಸಿ ನಿಜ
ವಸ್ತುವನು ತೆಗೆದೆನ್ನ ಹಸ್ತದಲಿರಿಸಿದ
ಸ್ವಸ್ತಿ ಶ್ರೀಗುರುವೆ ಕೃಪೆಯಾಗು.

'ಗುರು ತಾಯಿ' ಎನ್ನುವ ಮಾತು ಭಾವಪೂರ್ಣವಾದುದಷ್ಟೇ ಅಲ್ಲ ಕರುಳಿನದಾಗಿದೆ. 'ಗುರು ತಾಯಿ' ಎಂದಾಗ ಆನಂದಾಶ್ರುಗಳು ತುಳುಕುತ್ತವೆ.

ಗುರುನಾಥನಿಗೆ ಶರಣರು 'ನನ್ನಪೆತ್ತಯ್ಯ'ನೆಂದೂ 'ನನ್ನಮುತ್ತಯ್ಯ'ನೆಂದೂ

'ನನ್ನವ್ವ, ನನ್ನಪ್ಪ, ನನ್ನ ಬಂಧು ಬಳಗ' ಎಂದೂ ಮಣಿಮಿಡಿದು ಕರೆದು ಭಿನ್ನವಿಸಿ ಕೊಂಡಿದ್ದಾರೆ.

ಆಪತ್ಕಾಲದಲ್ಲಿ ಆದವರೇ ಬಂಧುಗಳೆಂದು ಅನುಭವಿಗಳು ಹೇಳುವ ಹಾಗೆ ಮಾನವ ಜನ್ಮದ ಗುರಿಯನ್ನೇ ಮರೆತಿರುವಂತಹ ಆಪತ್ಕಾಲವಿನ್ನಾವುದೂ ಇಲ್ಲ. ಇಂತಹ ಆಪ ತ್ಕಾಲದಲ್ಲಿ ಶ್ರೀ ಗುರುನಾಥನೇ ಪಾರುಮಾಡುತ್ತಾನೆಂಬುದು ಶತಃಸಿದ್ಧವಾದುದು.

ಬೀಜದಲ್ಲಿ ಹೆಮ್ಮರವಾಗುವ ಶಕ್ತಿ ಇದೆ. ಆದರೆ ಹದವಾದ ನೆಲದಲ್ಲಿ ಮಾತ್ರ ಬಿದ್ದ ಬೀಜ ಹುಸಿಯಾಗಲಾರದು. ಗುರುಕರುಣೆ ಮಾನವನ ಉದ್ಧಾರವನ್ನು ಮಾಡಿಯೇ ಮಾಡುತ್ತದೆ. ಹೃದಯ ಭೂಮಿ ಮಾತ್ರ ಹದಭರಿತವಾಗಿರಬೇಕಾಗುತ್ತದೆ. ಸಂಸಾರದ ಬಗೆಗೆ ಹೇಯ ಭಾವನೆಯೇ ಮೂಡದಿದ್ದರೆ, ಗುರುವಿನಲ್ಲಿ ಆರ್ತಭಾವದ ಪ್ರಾರ್ಥನೆಯೇ ಇರದಿದ್ದರೆ ಗುರುಕರುಣೆಯ ಪರಿಣಾಮವಾಗುವುದು ಹೇಗೆ? ಗುರುಕೃಪೆಗೆ ಪಾತ್ರನಾಗುವ ಮಾನವನು ಅಂತರಂಗದ ಅಷ್ಟಮದಗಳಿಂದ ಬಹಿರಂಗದ ಅಷ್ಟಮದಗಳಿಂದ ಮುಕ್ತನಾಗ ಬೇಕು. ಮದಗಳ ದಾಳಿಯಿಂದ ಮನುಜರು ಮದದಾನೆಯಂತಾಗುತ್ತಾರೆ. ಇಂತಾದಾಗ ಸಂಸಾರದ ವಿಷಯದಲ್ಲಿ ಹೇಯ ಭಾವನೆಯು ಒಡಮೂಡಲಾರದು. ಇಂತಹ ಸ್ಥಿತಿಯಲ್ಲಿ ಗುರುಕರುಣೆ ಫಲಕಾರಿಯಾಗಲಾರದು. ಇದನ್ನರಿತು ಬಸವಲಿಂಗ ಶರಣರು ಮದಗಜ ಗಳನ್ನು ಉದಾಹರಿಸಿ ಶ್ರೀ ಗುರುನಾಥನಲ್ಲಿ ಶರಣು ಹೋಗುವುದೇ ಅನಿವಾರ್ಯ ಮಾರ್ಗ ವೆಂದು ವಿವರಿಸಿದ್ದಾರೆ.

ಗುರುದೇವನನ್ನು ಕಾಲಹರ, ಕರ್ಮಹರ, ಪಾಪಹರ ಎಂದು ಹೇಳುವುದು ಸಮಂಜಸ ವಾಗಿದೆ. ಈ ಜಗತ್ತಿನಲ್ಲಿ ಕಾಲನಭಯವೇ ಹಿರಿದಾದ ಭಯ. ಇನ್ನುಳಿದ ಭಯಗಳು ಇಷ್ಟು ಭೀಕರವಲ್ಲ. ಈ ಕಾಲನ ಭಯವನ್ನು ತೊಡೆದುಹಾಕಬಲ್ಲವನು ಗುರುನಾಥ ನೊಬ್ಬನೇ. ಈ ಜೀವನು ಕಾಲಭಯವನ್ನು ಕಡೆಗಣಿಸಿ ಕಾಮಕೇಳಿಯಲ್ಲಿ ತೊಡಗುವನು. ಋಷಿಮುನಿಗಳನ್ನೂ ಕಾಡಿದ ಈ ಕಾಮದ ಉಪಟಳದಿಂದ ಪಾರುಮಾಡೆಂದು ಗುರುಚರಣ ಗಳಲ್ಲಿ ಅರಿಕೆ ಮಾಡಿಕೊಳ್ಳುತ್ತಾನೆ ಕವಿ.

ಶ್ರೀ ಬಸವಲಿಂಗ ಶರಣರು ತೆಂಗಿನಮರವನೇರಿದ ಉದಾಹರಣೆಯನ್ನು ಬಲು ಸೊಗಸಾಗಿ ನೀಡಿದ್ದಾರೆ. ಉಪನಿಷತ್ತು, ಭಗವದ್ಗೀತೆಗಳಲ್ಲಿ ಅಶ್ವತ್ಥವೃಕ್ಷದ ಉದಾಹರಣೆ ಯನ್ನು ಕೊಡಲಾಗಿದೆ. ಈ ಮರದ ಬೇರು ಆಗಸದಲ್ಲಿ ಮರವು ಭೂಲೋಕದಲ್ಲಿ ಹರಡಿರುವದನ್ನು ಡಿ.ವ್ಹಿ.ಜಿ.ಯವರೂ 'ಮಂಕುತಿಮ್ಮನ ಕಗ್ಗ'ದಲ್ಲಿ ವಿವರಿಸಿದ್ದಾರೆ. ಆದರೆ ಬಸವಲಿಂಗ ಶರಣರು ತೆಂಗಿನಮರದ ನೂತನ ಕಲ್ಪನೆಯನ್ನು ನೀಡಿರುವುದು ಅಪ್ರತಿಮವಾಗಿದೆ. ಮಾಯಾರಹಿತ ಶರಣನ ಹೃದಯವು ತೆಂಗಿನ ಹಾಲಿನಂತೆ ನಿರ್ಮಲ. ಕೊಬ್ಬರಿಯಂತೆ ಮಧುರ. ಆದುದರಿಂದಲೇ ಅದು ಶಿವನಿಗೆ ಅರ್ಪಿತವಾಗುತ್ತದೆ ಎಂದು ಪೂಜ್ಯ ಜಗದ್ಗುರುಗಳು ವ್ಯಾಖ್ಯಾನಿಸಿರುವುದು ಮನನೀಯವಾದುದಾಗಿದೆ. ಪರಿಶುದ್ಧ ಹೃದಯದ ಶರಣನು ಊರ್ಧ್ವಮುಖಿಯಾಗಿ ಮೂಲ ತತ್ವವನ್ನು ಸೇರುವನು. ೫೦ನೆಯ

ಈ ತ್ರಿಪದಿಯ ಲಕ್ಷ್ಯಾರ್ಥವನ್ನು ಸೂಕ್ಷ್ಮವಾಗಿ ಅರಿತಂತೆ ವಿಸ್ತೃತ ಅರ್ಥವ್ಯಾಪ್ತಿ ಹೊಂದಿರುವುದನ್ನು ಅನುಭವಿಸಬಹುದು. ಇದರ ವಾಚ್ಯಾರ್ಥವೂ ಕೂಡ ವಿಶಿಷ್ಟವಾದುದಾಗಿದೆ.

ಶಶಿಸೂರ್ಯಬಿಂಬ, ಕರಿಯಬಣ್ಣದ ಪಕ್ಷಿ, ಸರಿ ಬಿತ್ತಿ ಬೆಸನೊಗೆದ ಮರ, ಹದ್ದು ಹಾವನು ಕಚ್ಚಿ, ಸುರಲೋಕದರಸು, ಈ ತ್ರಿಪದಿಗಳು ಶರಣರ ಬೆಡಗಿನ ವಚನಗಳಂತೆ ಮಾರ್ಮಿಕವಾಗಿವೆ. ಅನುಭಾವಿಗಳಿಗೆ ಮಾತ್ರ ಅರ್ಥವಾಗುವ ಈ ತ್ರಿಪದಿಗಳಲ್ಲಿಯೂ ಸದ್ಗುರುವಿನ ಮಹಿಮಾ ವಿಶೇಷವನ್ನು ಅರಿತುಕೊಳ್ಳಬಹುದು.

'ಭೂತಪಂಚಕ'ದ ತ್ರಿಪದಿಗಳು ಕೂಡ ಬೆಡಗಿನ ತ್ರಿಪದಿಗಳಾಗಿವೆ. ಪಂಚಭೂತಗಳಿಂದಲೇ ಸೃಷ್ಟಿಯು ಉಗಮವಾಗಿರುವುದನ್ನೂ (ಸಾಂಖ್ಯ ದರ್ಶನವು ಈ ಬಗೆಗೆ ವಿವರವಾಗಿ ಹೇಳುತ್ತದೆ.) ಇಂತಹ ಅತ್ಯದ್ಭುತ ಸೃಷ್ಟಿಯ ಬಗೆಗೆ ಅರಿವು ಮೂಡಿಸಿ ಯಥಾರ್ಥ ಜ್ಞಾನ ಮಾಡಿಕೊಡುವವನು ಗುರುನಾಥನ ಹೊರತು ಬೇರಾರೂ ಇಲ್ಲವೆಂದು ಬಸವಲಿಂಗ ಶರಣರು ಸೋದಾಹರಣವಾಗಿ ವಿಶದೀಕರಿಸಿದ್ದಾರೆ. ಬೆಡಗಿನ ತ್ರಿಪದಿಗಳನ್ನೇ ಮುಂದುವರಿಸುತ್ತ ದೇಹ ವಿಕಾರದಿಂದಾಗುವ ಅನಾಹುತಗಳ ಚಿತ್ರಣ ನೀಡಿ, ಅಜ್ಞಾನದಿಂದಾಗಿಯೇ ಸಪ್ತವ್ಯಸನಗಳು, ಅಷ್ಟಮದಗಳು ಜೀವಿಯನ್ನು ಘಾಸಿಗೊಳಿಸುತ್ತಿವೆ. ಈ ಬಾಧೆಯನ್ನು ಗುರುದೇವನೇ ಪರಿಹರಿಸಬಲ್ಲನಲ್ಲದೆ ಅನ್ಯರಿಗೆ ಸಾಧ್ಯವಿಲ್ಲವೆಂದು ಹೇಳಲಾಗಿದೆ.

ಜೀವಾತ್ಮನು ಜ್ಞಾನದಿಂದ ವಂಚಿತನಾಗುವ ಕಾರಣವನ್ನು ನೀರು ತರುವ ರಂಭೆಯ ಕಲ್ಪನೆಯ ಮುಖಾಂತರ ತಿಳಿಸಿರುವುದು ಅದ್ಭುತವಾದ ಉಪಮೆಯಾಗಿದೆ. ಒಂಬತ್ತು ರಂಧ್ರಗಳಿದ್ದರೂ ಸೋರದ ಕೊಡವೇ ಈ ದೇಹವಾಗಿದೆ. ದೇಹದ ಈ ನವದ್ವಾರಗಳ ಮುಖಾಂತರ ಮನಸ್ಸು ಸಂಚರಿಸಿ ಬಂದು ಒಳಗೆ ಕೂಡ್ರುತ್ತದೆ. ಇಂದ್ರಿಯುಗಳ ಮುಖಾಂತರ ಆಟವಾಡುವ ಚಪಲ ಮನಸ್ಸಿನ ಕಾರಣವಾಗಿಯೇ ಜೀವಿಯು ಅಜ್ಞಾನದ ಕತ್ತಲಲ್ಲಿ ಕೊಳೆಯಬೇಕಾಗುತ್ತದೆ.

> ನವದ್ವಾರಗಳ ಮೆಟ್ಟಿ ಶಿವಧ್ಯಾನದೊಳಗಿರಲು
> ನವಖಂಡ ಪೃಥ್ವಿಯೊಳಗಣ ಮಾತೆಲ್ಲ
> ಕಿವಿಯೊಳಗಿರ್ಕು ಸರ್ವಜ್ಞ.

ಎಂದು ಕವಿಯು ಹೇಳಿದ ಹಾಗೆ ಶಮ ದಮೆಗಳ ಮೂಲಕ ಮನಸ್ಸನ್ನು ನಿಯಂತ್ರಿಸುವ ತಂತ್ರವನ್ನು ಗುರುದೇವನು ಮಾತ್ರ ತಿಳಿಸಿ ಕೊಡಬಲ್ಲನು ಗುರುಕರುಣೆಯನ್ನು ಪಡೆಯದ ಕಾಯವು ಗಾಳಿಯಲ್ಲಿರಿಸಿದ ಸೊಡರಿನಂತೆ ತೀವ್ರ ನಾಶಹೊಂದುವುದು.

ಪಂಚೇಂದ್ರಿಯುಗಳ ಕುರಿತಾಗಿರುವ ತ್ರಿಪದಿಗಳೂ ಕೂಡ ಬೆಡಗಿನ ನುಡಿಗಳಿಂದ ಮಾರ್ಮಿಕವಾಗಿವೆ. ವಿಷಯಾಧೀನನಾಗಿರುವುದರಿಂದಲೇ ಜೀವಾತ್ಮನು ತನ್ನ ನೆಲೆಯನರಿಯದೆ ಪರಿತಪಿಸುತ್ತಾನೆ. ಇಂದ್ರಿಯುಗಳ ಸೆಳೆತ ಸಾಮಾನ್ಯವಾದುದಲ್ಲ. ವಚನಕಾರರು: "ಪಂಚೇಂದ್ರಿಯುಗಳೆಂಬ ಪಂಚ ಹೆಡೆಯ ಸರ್ಪ ಕಚ್ಚಲು ಪಂಚವಿಷಯವೆಂಬ ವಿಷ ತಲೆಗೇರಿತ್ತು ನೋಡಾ! ಶ್ರೀಗುರುಮಂತ್ರವೇ ಇದಕ್ಕೆ ಮದ್ದು" ಎಂದು ಹೇಳಿದುದು

ಸಮಂಜಸವಾಗಿದೆ. ಪಂಚವಿಷಯುಗಳು, ಪಂಚತನ್ಮಾತ್ರೆಗಳು, ಪಂಚಇಂದ್ರಿಯುಗಳು ಎಷ್ಟೊಂದು ಪ್ರಬಲವಾಗಿವೆ ಎಂಬುದನ್ನು ಚತುರೋಕ್ತಿಯಿಂದ ತ್ರಿಪದಿಗಳಲ್ಲಿ ವಿವರಿಸ ಲಾಗಿದೆ. ಜೊತೆಗೆ ಗುರುದೇವನಿಗೆ ಮೊರೆ ಹೊಕ್ಕರೆ ಮಾತ್ರ ಇವುಗಳಿಂದ ಪಾರುಗಾಣ ಬಹುದೆಂದು ವಿವರಿಸಲಾಗಿದೆ.

ಕಲ್ಲು ಕಟ್ಟಿಕೊಂಡು ನದಿಯಲ್ಲಿ ಈಸಿ ದಾಟುತ್ತೇನೆ ಎಂದರೆ ಕೇಳಿದವರು ನಗದಿರ ಲಾರರು. ಸಂಸಾರದ ವಿಷಯುವನ್ನು ಕಟ್ಟಿಕೊಂಡು ಸದ್ಗುರುವಿನ ಕೃಪೆಯುನ್ನು ಪಡೆಯುವೆ ನೆನ್ನುವವರ ಸ್ಥಿತಿಯೂ ಹೀಗಿಯೇ ನಗೆಗೀಡಾಗುವುದು. ಸಂಸಾರ ವಿಷಯುದ ಬಗೆಗೆ ಹೇಯು ಭಾವನೆ ಒಡಮೂಡಿದಾಗ ಮಾತ್ರ ಗುರುಕರುಣೆಯುನ್ನು ಪಡೆಯುಬಹುದು. ನೂರೊಂದು ಸ್ಥಲಗಳ ವಿವರಣೆಯಲ್ಲಿ ಸಂಸಾರಹೇಯುಸ್ಥಲ ಗುರುಕರುಣಸ್ಥಲ ಜೊತೆ ಯಲ್ಲೇ ಇರುವುದನ್ನು ಕಾಣಬಹುದು.

ಕಾಯು ಕರ್ಮಗಳೆಂಬ ಮಾಯು ಸಂಸಾರವನು
ಹೇಯುವನೆ ಮಾಡಿ ಪ್ರಿಯುದಿಂ ಪಾಲಿಸುವ
ಐಯ್ಯ ಶ್ರೀಗುರುವೆ ಕೃಪೆಯಾಗು ||೭೪||

ಎಂದು ಮೈಲಾರ ಬಸವಲಿಂಗ ಶರಣರು ಮಾಯಾ ಸಂಸಾರವು ಹೇಯುವಾದುದೆಂಬ ಅರಿವು ಮೂಡಿದಂದು ಶ್ರೀ ಸದ್ಗುರುವಿನ ಕರುಣೆಯ ಕಿರಣ ಮೂಡಿ ಉದ್ಧರಿಸುವದೆಂದು ಹೇಳಿ 'ಗುರು' ಆವರಣದ ಮಂಗಲ ಮಾಡಿರುವರು.

ವೈಲಾರ ಬಸವಲಿಂಗ ಶರಣರ "ಗುರುಕರುಣ ತ್ರಿವಿಧಿ"ಯಲ್ಲಿ

ವೀರಶೈವ ದಾರ್ಶನಿಕ ಸಿದ್ಧಾಂತ

ಒಂದು ಅಭಿಪ್ರಾಯ

—ಶ್ರೀ ಬಿ. ಎಸ್. ಪಾಟೀಲ, ಬೆಳಗಾವಿ

ಆಯುಕ್ತರು

ವೀರಶೈವ ಧರ್ಮ ಯಾವುದೇ ಒಂದು ವ್ಯಕ್ತಿಗೆ ನಿಷ್ಠವಾಗಿಲ್ಲ, ಶಕ್ತಿಗೆ ನಿಷ್ಠ ವಾಗಿದೆ. "ಅಷ್ಟಾವರಣವೇ ಅಂಗ, ಪಂಚಾಚಾರಗಳೇ ಪ್ರಾಣ, ಷಟ್‌ಸ್ಥಲವೇ ಆತ್ಮ" ಎಂಬುದು ವೀರಶೈವರ ಸಿದ್ಧಾಂತ. ಈ ಸಿದ್ಧಾಂತಗಳ ಸಾಧನೆಯಿಂದ ವೀರಶೈವನಾದವನು ಶರೀರ ಹಾಗೂ ಮನಸ್ಸಿನಲ್ಲಿದ್ದ ಕೊಳೆಯನ್ನು ದೂರಮಾಡಿ, ಆತ್ಮವನ್ನು ಜಾಗೃತಗೊಳಿಸಿ ಮಾನವೀಯ ವಿಕಾಸತೆ ಪಡೆದು ದೇವತ್ವವನ್ನು ಹೊಂದುತ್ತಾನೆ.

ಮೈಲಾರ ಬಸವಲಿಂಗ ಶರಣರು ಅಚ್ಚ ವೀರಶೈವ ಸಂಸ್ಕೃತಿಯನ್ನು ಮೆರೆದವರು. ಶಿವನಿಗಿಂತ ಶಿವಭಕ್ತನೇ ಶ್ರೇಷ್ಠನೆಂದು ತಮ್ಮ ಕೃತಿಗಳಲ್ಲಿ ನಿರ್ಭೀತಿಯಿಂದ ಪ್ರತಿಪಾದಿಸಿ ದವರು. ಇವರು ಬರೆದ "ಗುರುಕರುಣ ತ್ರಿವಿಧಿ" ಎಂಬ ಗ್ರಂಥದಲ್ಲಿ ಷಟ್‌ಸ್ಥಲ ಸಿದ್ಧಾಂತ, ಶಿವಾನುಭವ ತತ್ವ ಮತ್ತು ಲಿಂಗಪೂಜಾ ವಿಧಾನಗಳು ಮನೋಜ್ಞವಾಗಿ ಬಿಂಬಿಸಲ್ಪಟ್ಟಿವೆ.

ಶ್ರೀ ಮ. ನಿ. ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಮುಂಡರಗಿ ಸಂಸ್ಥಾನಮಠ, ಇವರು ಬಹುಮುಖ ಪ್ರತಿಭೆಯುಳ್ಳವರು, ದಿವ್ಯವ್ಯಕ್ತಿತ್ವ ಹೊಂದಿದವರು. ಸತತ ಪರಿಶ್ರಮ, ಸಾಹಿತ್ಯಾಧ್ಯಯನ, ಆಧ್ಯಾತ್ಮಿಕ ಚಿಂತನೆಗಳು ಇವರಲ್ಲಿ ಮುಪ್ಪುರಿ ಗೊಂಡು, ಸಾಹಿತ್ಯಸೃಷ್ಟಿಗೆ ಚೈತನ್ಯವನ್ನೊದಗಿಸಿವೆ. ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿಯೂ ಅವರು ಸಾಧಿಸಿದ್ದು ಅಪಾರ. ಅವರು ಭಕ್ತರ ಕಲ್ಯಾಣಕ್ಕಾಗಿ, ಮಾನವ ಕುಲದ ಉದ್ಧಾರಕ್ಕಾಗಿ ಸಾಧ್ಯವಿದ್ದುದೆಲ್ಲವನ್ನೂ ಮಾಡಿದ್ದಾರೆ ಮತ್ತು ಮಾಡುತ್ತಲಿದ್ದಾರೆ. ಸಾಹಿತ್ಯ ರಚನೆಯಲ್ಲಿ ಪೂಜ್ಯ ಶ್ರೀಗಳ ಸಾಧನೆ ಅಮೋಘವಾದುದು.

ಅವರು ರಚಿಸಿದ ಮೈಲಾರ ಬಸವಲಿಂಗ ಶರಣರ "ಗುರುಕರುಣ ತ್ರಿವಿಧಿ"ಯಲ್ಲಿ "ವೀರಶೈವ ದಾರ್ಶನಿಕ ಸಿದ್ಧಾಂತ" ಎಂಬ ವಿದ್ವತ್ಪೂರ್ಣ ಬಹತ್ಕೃತಿ ಒಂದು ವೈಚಾರಿಕ, ಸಂಶೋಧನಾತ್ಮಕ ಗ್ರಂಥವಾಗಿದೆ. ಇದರಲ್ಲಿ ವೀರಶೈವ ಧರ್ಮತತ್ವ ಪ್ರತಿಪಾದನೆಯೊಂದಿಗೆ ಸರ್ವಧರ್ಮ ಸಮನ್ವಯದ ದಿವ್ಯಮಾರ್ಗದ ಸೂಚನೆಯೂ ಇದೆ. ಅಷ್ಟಾವರಣ,

ಪಂಚಾಚಾರ ಮತ್ತು ಷಟ್‌ಸ್ಥಲದ ಬೆಳಕನ್ನು, ಲಿಂಗಾಂಗ ಸಾಮರಸ್ಯದ ದಾರಿಯನ್ನು ನುಡಿದಂತೆ ನಡೆಯಲು ಅನುಕೂಲವಾಗುವ ರೀತಿಯಲ್ಲಿ ಬೋಧಿಸುವ ಗ್ರಂಥವಿದಾಗಿದೆ. ಪಾರಾಯಣ ಯೋಗ್ಯವಾದ "ಗುರುಕರುಣ ತ್ರಿವಿಧಿ"ಯಲ್ಲಿ ಕೇವಲ ೩೩೩ ತ್ರಿಪದಿಗಳಿದ್ದರೂ ಅವುಗಳಲ್ಲಡಗಿದ ಅಪಾರವಾದ ತತ್ವಗಳನ್ನು ಪೂಜ್ಯ ಶ್ರೀಗಳು ತಮ್ಮ ಸತ್ಕ್ರಿಯೆ ಸುಜ್ಞಾನಗಳ ಆಚರಣೆಯ ಸ್ವಾನುಭಾವದಿಂದ ಮತ್ತು ಅಂತಃಪ್ರೇರಣೆಯಿಂದ ಸರಳ, ಸುಂದರ ಹಾಗೂ ಮಧುರ ಶೈಲಿಯಲ್ಲಿ ಯಥಾರ್ಥ ದರ್ಶನ ಮಾಡಿಸಿದ್ದಾರೆ. ಅವರು "ಗುರುಕರುಣ ತ್ರಿವಿಧಿ"ಯನ್ನು ಮೊದಲು ಅಭ್ಯಸಿಸಿ ಅನುಭವಿಸಿ ಎರಡು ಸಲ ಅನುಷ್ಠಾನ ಮಾಡಿ ಮೌನವ್ರತ ಆಚರಿಸಿ ಅರ್ಚನ ಅರ್ಪಣಗಳನ್ನೆಲ್ಲಾ ಪೂರೈಸಿ ೬೦೦ ಪುಟದ ಈ ಹೆಬ್ಬೊತ್ತಿಗೆಯನ್ನು ಕೇವಲ ೫೧ ದಿನಗಳಲ್ಲಿ ಬರೆದು ಮುಗಿಸಿದ್ದಾರೆಂದರೆ ಸಣ್ಣ ಮಾತಲ್ಲ. ಇದು ಅತ್ಯಂತ ಆಶ್ಚರ್ಯಪಡಬೇಕಾದ ಸಂಗತಿ. ಅದು ಇಂತಹ ಮಹಾನುಭಾವಿಗಳಿಗೆ ಮಾತ್ರ ಸಾಧ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಸದ್ಗುರುವಿನ ಅವಶ್ಯಕತೆಯನ್ನು ಒತ್ತಿಹೇಳುತ್ತ ಅಷ್ಟಾವರಣಗಳಲ್ಲಿ ಪಂಚಾಚಾರ ಮತ್ತು ಷಟ್‌ಸ್ಥಲಗಳು ಹೇಗೆ ಅಡಕಗೊಂಡಿವೆ ಎಂಬುದನ್ನು ವಿವರಿಸಿ, ಶರಣ ಸಿದ್ಧಾಂತ ದಂತೆ ಮಾಯೆ ಹೊರಗಿನದಲ್ಲ ಮನದ ಮುಂದಣ ಆಸೆಯೇ ಮಾಯೆಯಾಗಿ ಮನುಷ್ಯ ನನ್ನು ಕಾಡುತ್ತದೆ ಎಂಬ ಭಯಾನಕ ಸತ್ಯವನ್ನು ಮನಗಾಣಿಸುತ್ತ, ಅಜ್ಞಾನಿಯಾದ ಜೀವಿಯು ಅಷ್ಟಮದ ಸಪ್ತವ್ಯಸನಗಳಿಂದ ಹೇಗೆ ತೊಂದರೆ ಅನುಭವಿಸುತ್ತಾನೆ ಎಂದು ಅರುಹುತ್ತ ಬಸವಲಿಂಗ ಶರಣರು ತಮ್ಮ ಐತಿಹಾಸಿಕ ಪ್ರಜ್ಞೆ, ತೀರ್ಥಕ್ಷೇತ್ರಗಳ ಪರಿಚಯ, ವ್ಯವಹಾರಿಕ ಜ್ಞಾನ ಮತ್ತು ಯೌಗಿಕ ಪ್ರತಿಭೆ ಎಲ್ಲವನ್ನೂ ತಮ್ಮ ಚಿಕ್ಕ ಕೃತಿಯಲ್ಲಿ ಕ್ರಮಬದ್ಧ ಕಥಾನಕದಂತೆ ವ್ಯಕ್ತಪಡಿಸಿದ್ದಾರೆ. ಗುರುಕಾರುಣ್ಯದಿಂದ ಇಷ್ಟಲಿಂಗ ದೊರೆ ಯುತ್ತದೆ. ಅದು ಬೇರೇನೂ ಅಲ್ಲ. ಶಿಷ್ಯನ ಚಿತ್‌ಚೈತನ್ಯದಿಂದ, ಸದ್ಗುರುವಿನ ಯೋಗ ಶಕ್ತಿಯಿಂದ ಅರುಹಿನ ಕುರುಹಾಗಿ ಕಾಣಿಸಿಕೊಳ್ಳುತ್ತದೆ ಮತ್ತು ಇಂತಹ ಲಿಂಗದ ಪ್ರಾಣವೇ ಜಂಗಮವೆಂಬುದನ್ನು ಶರಣರು ಬಿತ್ತರಿಸಿದ್ದಾರೆ. ಅಷ್ಟಾವರಣದ ಸಾಧನಗಳಾದ ವಿಭೂತಿ, ರುದ್ರಾಕ್ಷಿ, ಮಂತ್ರಗಳನ್ನು ಆಂತರಿಕವಾಗಿ ಹೇಗೆ ಧರಿಸಿಕೊಳ್ಳಬೇಕು ಎಂಬುದನ್ನು ಶರಣರು ಬಹಳ ಸುಂದರವಾಗಿ ವರ್ಣಿಸಿದ್ದಾರೆ. ಹೀಗೆ "ಗುರುಕರುಣ ತ್ರಿವಿಧಿ"ಯಲ್ಲಿ ಸಂಪೂರ್ಣ ವಾಗಿ ವೀರಶೈವ ದಾರ್ಶನಿಕ ಸಿದ್ಧಾಂತವು ಪ್ರತಿಪಾದಿಸಲ್ಪಟ್ಟದೆ.

ಪೂಜ್ಯ ಶ್ರೀಗಳವರು ನೀಡಿದ ಮಹಾಕೃತಿ ಇದಾಗಿದ್ದು ವೀರಶೈವ ಸಾಹಿತ್ಯ ಸಂಸ್ಕೃತಿಗೆ ಅಮೂಲ್ಯ ಕೊಡುಗೆಯಾಗಿದೆ. ವೀರಶೈವದ ಸಮಗ್ರ ತತ್ವಗಳನ್ನು ತಿಳಿಯ ಲಿಚ್ಛಿಸುವ ಜಿಜ್ಞಾಸುಗಳಿಗ ಇದೊಂದು ಕೈಗನ್ನಡಿಯಾಗಿದೆ ಎಂದು ಲಿಂ. ಶ್ರೀ ಹಾನಗಲ್ಲ ಸದಾಶಿವಸ್ವಾಮಿಗಳು ಹೇಳಿದ್ದು ಯಥೋಚಿತವಾಗಿದೆ. ಸಾಧಕರನ್ನು ಸಿದ್ಧರನ್ನಾಗಿ ಮಾಡುವ ಪರಮ ಪವಿತ್ರವಾದ ವೀರಶೈವ ಧರ್ಮಗ್ರಂಥವೆಂದು ಡಾ|| ಟಿ. ಜಿ. ಸಿದ್ದಪ್ಪಾರಾಧ್ಯರು ಸರಿಯಾಗಿಯೇ ಹೇಳಿದ್ದಾರೆ.

ಈ ಕೃತಿಯನ್ನು ಕೆಲವೊಂದು ಕಡಿಗೆ ಆನೆಯ ಮೇಲಿಟ್ಟು ಮೆರವಣಿಗೆ ಮಾಡಿ ಭಕ್ತಿನಮನ ಸಲ್ಲಿಸಲಾಗಿದೆ. ವಿದ್ವದ್ಗೋಷ್ಠಿಯಲ್ಲಿ ಗೌರವ ಸಲ್ಲಿಸಿ ಪ್ರಶಸ್ತಿಯನ್ನು ಸಮರ್ಪಿಸಲಾಗಿದೆ. ಇದಕ್ಕೆ ಅನೇಕ ಪಂಡಿತರಿಂದ ಸಂತಸದ ಸ್ವಾಗತ ದೊರಕಿದೆ ಮತ್ತು ಹುಬ್ಬಳ್ಳಿಯ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಸಾರಕ ಮಂಡಳಿಯಿಂದ ಉತ್ತಮ ಗ್ರಂಥವೆಂದು ಪುರಸ್ಕಾರವನ್ನಿತ್ತು ಗೌರವಿಸಲಾಗಿದೆ. ಒಟ್ಟಿನ ಮೇಲೆ ಇದೊಂದು ಸರ್ವಾದರಣೀಯವಾದ ಮತ್ತು ಪಿ. ಎಚ್. ಡಿ. ಗೆ ಯೋಗ್ಯವಾದ ಗ್ರಂಥವಾಗಿದೆಯೆಂದು ಲಿಂ. ಪೂಜ್ಯಶ್ರೀ ಮಹಾಂತ ಅಪ್ಪಗಳು ಹೇಳಿದ್ದರಲ್ಲಿ ಅತಿಶಯೋಕ್ತಿಯೇನಿಲ್ಲ. ಇದನ್ನು ನಾಡಿನ ಜನರೆಲ್ಲ ಓದಿ ಧನ್ಯರಾಗಲಿ ಮತ್ತು ಧರ್ಮದಲ್ಲಿ ಆಸಕ್ತಿ ಹೊಂದಲಿ ಎಂದು ಹಾರೈಸುತ್ತೇನೆ.

ಅಪರೂಪದ ಗ್ರಂಥ

—ಶ್ರೀಮತಿ ಶಾಂತಾದೇವಿ ಸ. ಮಾಳವಾಡ, ಧಾರವಾಡ

ಉತ್ತರ ಕರ್ನಾಟಕದ ವೀರಶೈವರ, ಧಾರ್ಮಿಕ ಪರಂಪರೆಯ ಮನೆಗಳಲ್ಲಿ ಬೆಳಗಿನ ಲಿಂಗಪೂಜೆಯ ವೇಳೆಯಲ್ಲಿ ಮನೆಯ ಹೆಣ್ಣುಮಕ್ಕಳು, ಹಿರಿಯ ಗಂಡುಮಕ್ಕಳು ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯನ್ನು ಭಕ್ತಿಭಾವದಿಂದ ಹೇಳುವದು ಹಿಂದೆ ರೂಢಿಯಾಗಿತ್ತು.

"ಗುರುವೆ ಭಕ್ತರ ಕಲ್ಪತರುವೆ ಸಜ್ಜನ ಮನೋ
ಹರನೆ ನಿಜಭಕ್ತಿ ಜ್ಞಾನವೈರಾಗ್ಯ ಮಂ
ದಿರವೆ ಮದ್ಗುರುವೆ ಕೃಪೆಯಾಗು".

ಬೆಳಿಗ್ಗೆ ಏಳುವುದರಲ್ಲಿ ನಮ್ಮ ಕಿವಿಗೆ ಬೀಳುತ್ತಿತ್ತು, ಬರಬರುತ್ತ ಆ ಸಂಪ್ರದಾಯ ಮಾಯವಾಗಿದೆ. ಈಗ ಎಲ್ಲೆಲ್ಲೂ ಆಕಾಶವಾಣಿ, ದೂರದರ್ಶನಗಳ ಸಂಗೀತ ಕೇಳ ಬರುತ್ತಿದೆ. ಇಂದಿನ ಯಾಂತ್ರಿಕ ಜೀವನದ ಗದ್ದಲ, ಗಡಿಬಿಡಿಯಲ್ಲಿ ಲಿಂಗಪೂಜೆಗೆ, ಭಕ್ತಿಗೀತಕ್ಕೆ ಬಹಳಡೆ ಅವಕಾಶವಿಲ್ಲದಾಗಿದೆ. ಇತ್ತೀಚೆಗೆ ಮೈಲಾರ ಬಸವಲಿಂಗ ಶರಣರ ತ್ರಿಪದಿಗಳನ್ನು ಎಲ್ಲೋ ಕೆಲವರು ಅನ್ನುತ್ತಿದ್ದಾರೆ. ಇದುವರೆಗೆ ಅದೊಂದು ಗುರುಸ್ತುತಿಯ ಭಕ್ತಿಗೀತ ಎಂಬ ಭಾವನೆ ಜನಸಾಮಾನ್ಯರದಾಗಿತ್ತು. ೧೯೭೩ರಲ್ಲಿ ಈ ಭಕ್ತಿಗೀತ, ಗದುಗಿನ ತೋಂಟದಾರ್ಯ ಮಠದ ವೀರಶೈವ ಪ್ರಗತಿಶೀಲ ಯುವಕ ಸಂಘದಿಂದ ಪ್ರಕಟವಾಗಿತ್ತು.

ಮುಂಡರಗಿಯ ಪರಮಪೂಜ್ಯ ಶ್ರೀ ಮ.ನಿ.ಪ್ರ. ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮೀಜಿಯವರ ದಾರ್ಶನಿಕ ದೃಷ್ಟಿಗೆ ಈ ಭಕ್ತಿಗೀತದ ಒಳಗೆ ಅಡಗಿರುವ ಜ್ಞಾನ ಶಕ್ತಿ, ಕ್ರಿಯಾಶಕ್ತಿಯ ಅರಿವಾಗಿದೆ. ಈ ಅರಿವನ್ನು ಪೂಜ್ಯರು ತಮ್ಮೊಳಗೆ ಇಟ್ಟುಕೊಂಡು ಅಂತರಂಗದ ಆನಂದವನ್ನು ಅನುಭವಿಸಿದರು. ತಮಗೆ ದೊರೆತ ಈ ಆನಂದ ವೀರಶೈವ ಸಮಾಜಕ್ಕೆ ದೊರೆಯಲಿ ಎಂದು ಮೈಲಾರ ಬಸವಲಿಂಗ ಶರಣರ 'ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾರ್ಶನಿಕ ಸಿದ್ಧಾಂತ' ಎಂಬ ಬೃಹದ್‌ಗ್ರಂಥ ರಚಿಸಿ ಪ್ರಕಟಿಸಿದ್ದಾರೆ. ಶರಣರ ೩೩೩ ತ್ರಿಪದಿಗಳಿಗೆ ೬೦೦ ಪುಟದ ಅರ್ಥವತ್ತಾದ ವಿವರಣೆಯನ್ನಿತ್ತಿದ್ದಾರೆ. ಈ ಗ್ರಂಥದಲ್ಲಿ ಪೂಜ್ಯರ ಬಹುಭಾಷಾಜ್ಞಾನ ಸಂಪತ್ತಿದೆ. ಅನುಭಾವದ ಪ್ರತಿಪಾದನೆಯಿದೆ. ಭಕ್ತಿ, ಜ್ಞಾನ, ಅನುಭಾವಗಳ ತ್ರಿವೇಣಿ ಸಂಗಮದ ಪ್ರವಾಹವನ್ನು ಪುಟ ಪುಟಗಳಲ್ಲಿ ಕಾಣಬಹುದಾಗಿದೆ. ಕನ್ನಡ ಸಾಹಿತ್ಯದಲ್ಲಿ ದೊರೆಯುವ ೧೫೯ ಆಧ್ಯಾತ್ಮ

ಗ್ರಂಥಗಳಲ್ಲಿ ದೊರೆಯುವ ವಚನ, ಭಕ್ತಿಗೀತ, ಅನುಭಾವ ಪದಗಳನ್ನು ಸಾಂದರ್ಭಿಕವಾಗಿ ಉದಹರಿಸಿದ್ದಾರೆ. ೬೬ ಸಂಸ್ಕೃತ ಗ್ರಂಥಗಳನ್ನು ೧೯ ಹಿಂದಿ ಗ್ರಂಥಗಳನ್ನು ಆಧಾರ ಗ್ರಂಥಗಳನ್ನಾಗಿಸಿದ್ದಾರೆ. ಮಜ್ಜಿಗೆ ಕಡೆದು, ಬೆಣ್ಣೆ ತೆಗೆದು, ತುಪ್ಪ ಕಾಯಿಸಿ ಕನ್ನಡಿಗರಿಗಿತ್ತಿದ್ದಾರೆ.

ವಚನ ಸಾಹಿತ್ಯ ಸಂಪತ್ತು ಅಪಾರವಾಗಿದೆ, ವೀರಶೈವ ಧರ್ಮತತ್ವಗಳ ಕೈಪಿಡಿಯೊಂದು ಆವಶ್ಯಕವಾಗಿತ್ತು. 'ವೀರಶೈವ ದಾರ್ಶನಿಕ ಸಿದ್ಧಾಂತ' ಈ ಕೊರತೆಯನ್ನು ನೀಗಿಸಿದೆ. 'ಗುರುಕರುಣ ತ್ರಿವಿಧಿ' ಗಾತ್ರದಲ್ಲಿ ಬಹಳ ಚಿಕ್ಕದು, ಇದೇನು ಚಂಪೂ ಮಹಾಕಾವ್ಯವೇನಲ್ಲ ಎಂದು ವಿಮರ್ಶಕರ ದೃಷ್ಟಿಗೆ ಬಿದ್ದಿರಲಿಲ್ಲ. ಸಂಶೋಧಕರಿಗೆ ಸಾಮಗ್ರಿಯನ್ನೊದಗಿಸಬಲ್ಲ ಮೇರು ಕೃತಿಯಲ್ಲ, ಭಕ್ತಿಯಿಂದ ಪಠಿಸುವಂಥ ಭಕ್ತಿಗೀತವೆನಿಸಿದ 'ಗುರುಕರುಣ ತ್ರಿವಿಧಿ ಪೂಜ್ಯ ಮುಂಡರಗಿ ಜಗದ್ಗುರುಗಳವರ ದೃಷ್ಟಿಯಲ್ಲಿ ದಾರ್ಶನಿಕ ಸಿದ್ಧಾಂತವಾಗಿ ರೂಪುಗೊಂಡಿತು. ತ್ರಿಪದಿಯ ಈ ರತ್ನಕ್ಕೆ ಪೂಜ್ಯರು ತಮ್ಮ ಅನುಭಾವದ ಬಂಗಾರವನ್ನಿಕ್ಕಿ ಸುಂದರವಾದ ಆಭರಣವನ್ನಾಗಿಸಿ ಕನ್ನಡ ತಾಯಿಯ ಕಂಠಾಭರಣವನ್ನಾಗಿಸಿದರು 'ದೃಷ್ಟಿಯಂತೆ, ಸೃಷ್ಟಿ' ಎಂಬ ಮಾತಿಗೆ, ಪೂಜ್ಯರ ಪಾಂಡಿತ್ಯ, ಪ್ರತಿಭೆಗೆ ಈ 'ವೀರಶೈವ ದಾರ್ಶನಿಕ ಸಿದ್ಧಾಂತ' ಗ್ರಂಥ ಸಾಕ್ಷಿಯಾಗಿದೆ.

೩೩೩ ತ್ರಿಪದಿಗಳಲ್ಲಿ ಒಂದನ್ನು ಆಯ್ದು, ಪೂಜ್ಯರು ಹೇಳಿದ ಅರ್ಥವನ್ನು ಅರಿತರೆ, ಈ ಗ್ರಂಥದ ಘನತೆಯು ಅರಿವಾಗುತ್ತದೆ. ಗೃಹಿಣಿ ಒಂದೇ ಅಗಳು ಅನ್ನವನ್ನು ನೋಡಿ, ತಪ್ಪಲೆಯ ಅನ್ನ ಆಗಿದೆ ಎಂದು ಅರಿಯುವಂತೆ ಒಂದು ಪದ್ಯದ ಅರ್ಥವನ್ನು ನೋಡಿದರೆ ಸಾಕು, ಈ ಗ್ರಂಥದ ಹಿರಿಮೆಯು ಅರಿವಾಗುವದು.

"ಮನವಿಷ್ಟಲಿಂಗ ಸನ್ಮನ ಪ್ರಾಣಲಿಂಗ ಉ
ನ್ಮನ ಭಾವಲಿಂಗ, ಮನ ತ್ರೈಲಿಂಗವನೆನ
ಗನುಗೊಳಿಸ ಗುರುವೆ ಕೃಪೆಯಾಗು."

'ತನುತ್ರಯದಲ್ಲಿ ಲಿಂಗತ್ರಯವನ್ನು ತಿಳಿಸಿ, ಮನವನ್ನು ಮೂಬಗೆಯಾಗಿಸಿ ಲಿಂಗದ ವ್ಯಾಪ್ತಿಯನ್ನು ತೋರಿದ್ದಾರೆ ಶರಣರು. ವೀರಶೈವ ಧರ್ಮ ತತ್ವದಲ್ಲಿರುವ ತನುತ್ರಯ, ಮನತ್ರಯಗಳನ್ನು ಎತ್ತಿ ತೋರಿದ್ದಾರೆ ಶರಣರು, ಅದನ್ನು ಪೂಜ್ಯರು ತಮ್ಮ ದಾರ್ಶನಿಕ ದೃಷ್ಟಿಯಿಂದ ವಿವರಿಸಿದ್ದಾರೆ. ಮನ, ಸನ್ಮನ, ಉನ್ಮನಗಳೆಂದರೆ, ಏಕಾಗ್ರ ಚಿತ್ತದಿಂದ ಇಷ್ಟಲಿಂಗದಲ್ಲಿ ಧ್ಯಾನಮಗ್ನರಾಗುವದೇ, ಮನ. ಸುವಿಚಾರಗಳತ್ತ ಹರಿಯುವುದೇ ಸುಮನ. ಆಧ್ಯಾತ್ಮದತ್ತ ಸಾಗಿರುವುದೇ ಉನ್ಮನ ಎಂದು.

ಮನ-ಇಷ್ಟಲಿಂಗ, ಸನ್ಮನ-ಪ್ರಾಣಲಿಂಗ, ಉನ್ಮನ-ಭಾವಲಿಂಗವೆಂದು ಸಾಧನೆಗೈಯಬೇಕು ಎಂದಿದ್ದಾರೆ. ಶ್ರೀ ಅರವಿಂದರು ತಮ್ಮ ತತ್ವಜ್ಞಾನದಲ್ಲಿ ಒಮ್ಮನಗಳನ್ನು ವಿವರಿಸಿದ್ದಾರೆ. ಅವುಗಳಲ್ಲಿ.

ಮೊದಲಿನದು-'ಮನ-ಜಡಮನ', 'ಸನ್ಮನ-ವಿಜ್ಞಾನಮನ', 'ಉನ್ಮನ-ಉನ್ಮನ'

ವೆಂದಿದೆ. ಪೂಜ್ಯರು ಒಂದೊಂದು ತ್ರಿಪದಿಗೆ ೨-೩ ಪುಟಗಳಷ್ಟು ವಿವರಣೆಯನ್ನಿತ್ತಿದ್ದಾರೆ. ಪ್ರತಿಯೊಂದು ತ್ರಿಪದಿಗೆ ಹೊಂದಿಕೆಯಾಗಬಲ್ಲ ವಚನ, ಅನುಭಾವ ಪದ್ಯ, ಸಂಸ್ಕೃತ ಶ್ಲೋಕಗಳ ಮೂಲಕ ಆ ತ್ರಿಪದಿಯ ಅರ್ಥ ಓದುಗರ ಮನದಲ್ಲಿ ಸ್ಥಿರವಾಗಿ ನಿಲ್ಲುವಂತೆ ನಿರೂಪಿಸಿದ್ದಾರೆ. ತ್ರಿಪದಿಗಳಲ್ಲಡಕವಾದ ಭಾವ, ಅರ್ಥಗಳು ಜಗದ್ಗುರಗಳವರ ದಾರ್ಶನಿಕ ದೃಷ್ಟಿಗೆ, ಅವರ ಅನುಷ್ಠಾನದ-ಅನುಭಾವಕ್ಕೆ ಸಿದ್ಧಾಂತವಾಗಿದೆ. ಅವರು ತಮ್ಮ ಅನುಷ್ಠಾನದ ಫಲವನ್ನು ಅರಿವು ಪಡೆಯಬೇಕೆನ್ನುವವರಿಗೆ ಈ ಗ್ರಂಥದ ಮೂಲಕ ಹಂಚಿದ್ದಾರೆ. ಜ್ಞಾನದಾಸೋಹಗೈದಿದ್ದಾರೆ. ಪೂಜ್ಯ ಜಗದ್ಗುರುಗಳವರ 'ವೀರಶೈವ ದಾರ್ಶನಿಕ ಸಿದ್ಧಾಂತ' ಕನ್ನಡ ಸಾಹಿತ್ಯದಲ್ಲಿ ಚಿರಕಾಲ ಬಾಳಬಲ್ಲ ಮಹಾಗ್ರಂಥವಾಗಿದೆ.

ಜಂಗಮ ಜ್ಯೋತಿ

—ಪ್ರೊ. ವ್ಹಿ.ಜಿ. ಮಾರಿಹಾಳ

ಶ್ರೀಮಠದ ಮೂಲಪುರುಷರ ಚಾರಿತ್ರ್ಯಾತ್ಮಕ ದೃಶ್ಯರೂಪಕವನ್ನು ಸ್ವತಃ ಶ್ರೀಗಳೇ ಬರೆದದ್ದು ಸಾಮಯಿಕವಾದುದಾಗಿದೆ. ಸಮಗ್ರ ಚರಿತ್ರೆಯನ್ನು ಜನಸಾಮಾನ್ಯ ಭಕ್ತ ವರ್ಗಕ್ಕೆ ಮುಟ್ಟಿಸುವ ತಂತ್ರದಲ್ಲಿ 'ನಾಟಕ' ಒಂದು ಸಾಧನ. ಅಲ್ಲಿ ಶ್ರೀಗಳು ಯಶಸ್ವಿಯಾಗಿದ್ದಾರೆಂದೇ ಹೇಳಬೇಕು. ಮೂಲಕರ್ತೃಗಳು ಉಳವಿಯಿಂದ ಮುಂಡರಗಿಗೆ ಆಗಮಿಸಿದ ಬಗೆಗೆ ಅಲ್ಲಲ್ಲಿ ಕಾಣಬರುವ ಕುರುಹುಗಳನ್ನು ಪರಿಶೀಲಿಸುತ್ತ ಈ 'ಜಂಗಮ ಜ್ಯೋತಿ'ಯನ್ನು ಹೊತ್ತಿಸುವ ಪ್ರಯತ್ನ ಮಾಡಲಾಗಿದೆ.

ತಮ್ಮ ಮಠದ ಪರಂಪರೆಯನ್ನು ಮಠದ ಸದ್ಭಕ್ತರು ತಿಳಿಯಬೇಕೆಂಬ ಆಕಾಂಕ್ಷೆ ಇದ್ದೇ ಇದೆ. ಈ ಜಾಡಿನಲ್ಲಿ ಅವರು ಸಮರ್ಪಕವಾದ ಚರಿತ್ರೆಯನ್ನು ತಿಳಿದುಕೊಳ್ಳಬೇಕು. ಮಹಾಜ್ಞಾನಿ, ಷಟ್‌ಸ್ಥಲ ಚಕ್ರವರ್ತಿ ಶ್ರೀ ಚನ್ನಬಸವಣ್ಣನನ್ನು ತಮ್ಮ ಆರಾಧ್ಯ ದೈವವೆಂದು ಪರಿಗಣಿಸಿ ಅದೇ ಪರಂಪರೆಯಲ್ಲಿ ಶ್ರೀಮಠವು ಓತಪ್ರೋತವಾಗಿ ಜನತೆಯ ಉದ್ಧಾರವನ್ನೇ ತನ್ನ 'ಪೂಜೆ'ಯೆಂದು ಸ್ವೀಕರಿಸಿ ಕರ್ತವ್ಯವನ್ನು ಮಾಡುತ್ತ ಬಂದಿರುವ ದೃಶ್ಯಗಳನ್ನು ಈ ನಾಟಕದ ಅನೇಕ 'ಪ್ರವೇಶ'ಗಳಲ್ಲಿ ನಾವು ಕಾಣುತ್ತೇವೆ.

ಮುಂಡರಗಿಯ ಪ್ರದೇಶವು ಒಂದು ಕಾಲದಲ್ಲಿ ಹಿಂದುಳಿದ ಭಾಗ. ಅಲ್ಲಿ ಸಂಸ್ಕೃತಿಯನ್ನು, ಧರ್ಮವನ್ನು, ನೀತಿ-ನಿಯತ್ತುಗಳನ್ನು ತರುವಲ್ಲಿ ಶ್ರೀಮಠಕ್ಕೆ ಬಂದ ಎಲ್ಲ ಹತ್ತೂ ಶ್ರೀಗಳು ಅಹರ್ನಿಶಿ ಪ್ರಯತ್ನಿಸಿ, ಭಕ್ತರ ಸೇವೆಯೇ ಲಿಂಗಪೂಜೆ ಎಂಬ ಮಾತನ್ನು ಸಾರ್ಥಕಗೊಳಿಸಿದ್ದಾರೆ.

ನಾಟಕವು ೧೨ನೆಯ ಶತಮಾನದಿಂದ ಇಂದಿನವರೆಗೆ 'Hash bark' ತಂತ್ರದ ಮುಖಾಂತರ ಸರಿದಾಡುತ್ತದೆ. ಈ ಮಠದ ಅಧಿಕಾರವನ್ನು ಸ್ವೀಕರಿಸಿದ ಎಲ್ಲ ಶ್ರೀಗಳ ಕಾರ್ಯಕ್ಷೇತ್ರದ ವಿವರಗಳೂ ಅಲ್ಲಿ ದೊರೆಯುತ್ತವೆ. ಅನ್ನದಾನಿಗಳಾಗಿ, ಮುಮುಕ್ಷುಗಳನ್ನು ಉದ್ಧರಿಸಿ, ತಪ್ಪಿದವರನ್ನು ತಿದ್ದಿ, ಅನಾಗರಿಕರನ್ನು ನಾಗರಿಕರನ್ನಾಗಿ ಮಾಡಿ, ಲೋಕೋದ್ಧಾರದ ಸಾವಿರಾರು ಕರ್ತವ್ಯಗಳನ್ನು ಪೂರೈಸಿದ ಈ ಚರಿತ್ರೆಯ ನಾಟಕ ವೈಶಿಷ್ಟ್ಯಪೂರ್ಣವಾದುದಾಗಿದೆ.

ಇಲ್ಲಿಯ ಇನ್ನೊಂದು ವೈಶಿಷ್ಟ್ಯವೆಂದರೆ, ಮಠದ ಸದ್ಭಕ್ತರಲ್ಲಿ ಭಕ್ತಿಯ ಪ್ರೇರಣೆಯನ್ನು ತಂದು, ಅವರು ಈ ತೆರನಾದ ಸಾಹಿತ್ಯದ ಪ್ರಕಟಣೆಗೆ ಪುರಸ್ಕರ್ತರನ್ನಾಗಿ

ಮಾಡಿದ್ದು. ಇದೊಂದು ಒಳ್ಳೆಯ ಪರಂಪರೆ. ನಾಡಿಗೆ ಸಾಹಿತ್ಯ ಒದಗಿ ಬರುವುದ ರೊಡನೆ, ಶ್ರೀಮಂತ ಭಕ್ತರ ಭಕ್ತಿಗೆ ಸನ್ಮಾರ್ಗಗಾಮಿ ಚಾಲನೆ ದೊರೆಯುತ್ತದೆ.

ನಾಟಕದುದ್ದಕ್ಕೂ ಅನೇಕ ವೀರಶೈವ ಪರಿಭಾಷೆ ಬರುತ್ತದೆ. ಅವುಗಳಿಗೆಲ್ಲ ವಿವರಣೆಗಳು ಅಲ್ಲಿಯೇ ದೊರೆತು, ಅರ್ಥಪೂರ್ಣವಾದ ವಿವರಗಳು ಸ್ಪಷ್ಟಗೊಳ್ಳುತ್ತವೆ. ಮಧ್ಯೆ-ಮಧ್ಯೆ ವಚನಗಳು, ಉದಾಹರಣೆಗಳು, ಪ್ರತಿಮಾಸಂಕೇತಗಳು ಬಂದು ಒಟ್ಟು ಬಂಧದ ಮೆರುಗಿಗೆ ಕಾರಣವಾಗಿವೆ.

ಈ ನಾಟಕದ ಮುಖಾಂತರ, ಒಂದರ್ಥದಲ್ಲಿ, ಸಮಗ್ರ ವೀರಶೈವವನ್ನೇ ಸಾರ ರೂಪದಲ್ಲಿ ಶ್ರೀಗಳು ತರಲು ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆಂದೇ ಹೇಳಬೇಕು. ಲಿಂಗಾನುಷ್ಠಾನದ ಬಗೆಗಿನ ಕೆಲವು ಸನ್ನಿವೇಶಗಳು ನಾಟಕದ ಪ್ರೌಢಿಮೆಯನ್ನು ಹೆಚ್ಚಿಸಿವೆ.

ಮಾನವ ಧರ್ಮ:

ಶ್ರೀಗಳಿಂದ ನಿರ್ಮಿತವಾದ ಕೃತಿಗಳಲ್ಲಿ ಇದು ಹದಿನಾರನೆಯದು. ಇಂದಿನ ತಲೆ ಮಾರಿನ ದೊಡ್ಡ ತೊಂದರೆಯೆಂದರೆ ಅವರು ಭ್ರಾಂತಿಯಿಂದ ನಂಬಿಕೊಂಡಿರುವ ಅಪ ಮೌಲ್ಯಗಳು! ಮಾನವ ಜೀವನದ ನಿರಂತರ ಮೌಲ್ಯಗಳ ಅರಸುವಿಕೆಯಲ್ಲಿ ಶ್ರೀಗಳ ಅಭ್ಯಾಸು ಜೀವನದ ಹಲವು ಮುಖಗಳ ದರ್ಶನ ಈ ಪುಸ್ತಿಕೆಯಿಂದ ಸಾಧ್ಯ. ಈ ನಿರ್ಣಯಗಳಲ್ಲಿ ಭಾರತೀಯವಾದುದು, ಹಿಂದೂ ಆದುದು, ವೀರಶೈವವಾದುದು-ಎಲ್ಲವೂ ತಾರ-ತಮ್ಯವರಿತು ಸೇರಿಸಲ್ಪಟ್ಟಿವೆ.

ಧರ್ಮದ ಅರ್ಥ-ವ್ಯಾಪ್ತಿಗಳ ಬಗ್ಗೆ ಶ್ರೀಗಳು ತಮ್ಮದೇ ಆದ ಅಧಿಕಾರವಾಣಿ ಯಿಂದ ವಿವರಣೆಗಳನ್ನು ಕೊಟ್ಟಿದ್ದಾರೆ. ಇಂದಿನ ತಲೆಮಾರಿಗೆ ಅದು ಕೇವಲ ಒಂದು 'ಜಾತಿ' ಸ್ವರೂಪವನ್ನು ಹೊಂದಿರುವುದು ದುರ್ದೈವದ ಸಂಗತಿ. ಧರ್ಮದ ವ್ಯಾಖ್ಯೆ ಗಳನ್ನು ಶ್ರೀಗಳು ಸಂಸ್ಕೃತ ಸಾಹಿತ್ಯದಿಂದ ಹೇರಳವಾಗಿ ಪಡೆದಿದ್ದಾರೆ. ಪಶು ಜೀವನ, ಮನುಷ್ಯಜೀವನ, ಇವುಗಳ ಭೇದವನ್ನು ಕಂಡು ಮಾನವರು ಅತಿಮಾನವ ಸ್ಥಿತಿಯನ್ನು ನಿಲುಕಲು ಈ ಧರ್ಮಪ್ರಜ್ಞೆ ಮಹತ್ವದ್ದಾಗಿದೆ.

ಧೃತಿ, ಕ್ಷಮೆ, ದಮೆ, ಅಸ್ತೇಯ, ಶೌಚ, ಇಂದ್ರಿಯ ನಿಗ್ರಹ, ಧೀಃ, ವಿದ್ಯಾ, ಸತ್ಯ, ಅಕ್ರೋಧ ಮುಂತಾದವುಗಳು ಮಾನವ ಸಂಸ್ಕೃತಿಯ ನಿರ್ಮಿತಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ ರೀತಿಯನ್ನು ವಿವರಿಸುವಾಗ, ಇಡಿಯ ಭಾರತೀಯ ಸಂಸ್ಕೃತಿಯೇ ಶ್ರೀಗಳ ಮುಖದಿಂದ ಮಾತನಾಡಿದಂತೆ ಭಾಸವಾಯಿತು.

ಜಗದ್ಗುರು ಪೀಠದ ಶ್ರೀಗಳು ತಮ್ಮ ಆಶ್ರಿತ ಭಕ್ತವರ್ಗಕ್ಕೆ ಅಗತ್ಯವಾಗಿ ಬೇಕಾದ ಆತ್ಮ ಸಂಸ್ಕಾರಕ್ಕೆ ಇಂತಹ ಗ್ರಂಥಗಳ ರಾಶಿ ಎಷ್ಟು ಹೆಚ್ಚಿದರೂ ಕಡಿಮೆಯೇ. ಇಂಥಹ ಪುಸ್ತಕಗಳು ಈಗ ಶಿಕ್ಷಣ ಕ್ಷೇತ್ರದಲ್ಲಿ ಅಗತ್ಯವಾಗಿವೆ. ಈಗ 'Moral Education' ನೈತಿಕ ಶಿಕ್ಷಣವೆಂದು ನಡೆಸಲ್ಪಡುವ ಶಾಲಾಶಿಕ್ಷಣ ಕ್ಷೇತ್ರದಲ್ಲಿ ಈ ಪುಸ್ತಕವು ಮೌಲಿಕವಾಗಿ, ಉಳಿಯುವುದರಲ್ಲಿ ಯಾವ ಸಂದೇಹವಿಲ್ಲ.

ಲಂಗುಲಗಾಮಿಲ್ಲದೆ, ಸ್ವೈರದಿಂದ ಬೀಗುತ್ತಿರುವ ಇಂದಿನ ಯುವಪೀಳಿಗೆಗೆ ಇಂತಹ ಸಾಹಿತ್ಯ ಕೃತಿಗಳು ಅವರ ಮನಸ್ಸನ್ನು ಸ್ವಚ್ಛಗೊಳಿಸುವುದಲ್ಲದೆ, ಸನ್ಮಾರ್ಗಕ್ಕೂ ದಾರಿಯನ್ನು ತೋರುತ್ತವೆ. ಎಳೆವೆಯಲ್ಲಿ ಇಂತಹ ಗ್ರಂಥಗಳ ಅವಲೋಕನೆ ಮಕ್ಕಳಿಗೆ ಸಿಂಧುವಾದುದಾಗಿದೆ. ನಮ್ಮ ಆಪ್ತರಾದ ಶ್ರೀ ಉಪ್ಪಿನ ಅವರು ಗ್ರಂಥದಾನ ಮಾಡಿದುದನ್ನು ಓದಿ ಇನ್ನೂ ಸಂತೋಷವಾಯಿತು. ತಮ್ಮ ತಂದೆ ತಾಯಿಯರನ್ನು ಅವರು ಸ್ಮರಿಸಿದ ರೀತಿ ಚೇತೋಹಾರಿ. ಇದ್ದಾಗಲೇ ತಮ್ಮ ತಂದೆ ತಾಯಿಗಳನ್ನು ಹೀಗಳೆಯುವವರಿಗೆ ಈ ದಾರಿ-ಬಂಗಾರದ ದಾರಿ!

ಆರೈದು-ಭಾಗ ಒಂದು
(ಕೃತಿ ಸಮೀಕ್ಷೆ)

—**ಡಾ. ಬಸವರಾಜ ಜಗಜಂಪಿ, ಸವದತ್ತಿ**

ಉಚ್ಚನೀಚ ಭಾವನೆಯನ್ನು ತೊಡೆದು ಹಾಕಿ, ಸರ್ವಸಮಾನತೆಯನ್ನು ಮೆರೆದ ವೀರಶೈವ ಧರ್ಮ ಮನುಕುಲವನ್ನೇ ಪ್ರೀತಿಸಿದ ವಿಶ್ವಧರ್ಮ. ಅಂತೆಯೇ ವೀರಶೈವದ ತತ್ವಗಳು ವಿಶ್ವಮಾನ್ಯವಾಗಿವೆ. ನಮ್ಮ ಸಂಸ್ಕೃತಿಯ ನೆಲೆಮನೆಯಾದ ವೀರಶೈವ ಮಠಗಳು ಅನ್ನದಾಸೋಹದಂತೆ ಜ್ಞಾನದಾಸೋಹವನ್ನೂ ನಡೆಸುತ್ತ ವಿಶ್ವದಲ್ಲೇ ಅಪರೂಪದ ಕಾರ್ಯವೆಸಗುತ್ತಿವೆ. ಈ ಮಾತಿಗೆ ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠವೂ ಹೊರತಾಗಿಲ್ಲ. ಧಾರ್ಮಿಕರಂಗದಂತೆಯೇ ಅದಕ್ಕೆ ಪೂರಕವಾದ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ರಂಗಗಳಲ್ಲಿಯೂ ಪರಿವರ್ತನೆಯನ್ನು ಮಾಡುತ್ತ ಸಮಾಜದ ಸಂಘಟನೆಗಾಗಿ ಶ್ರಮಿಸುತ್ತಿರುವ ಮುಂಡರಗಿ ಸಂಸ್ಥಾನ ಮಠದ ಶ್ರೀಮನ್ನಿರಂಜನ ಪ್ರಣವಸ್ವರೂಪ ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು ಸಾಹಿತ್ಯಾಸಕ್ತರೂ ಆಗಿದ್ದಾರೆ. ವೀರಶೈವಧರ್ಮದ ತತ್ವಗಳನ್ನು ತಮ್ಮ ಬರಹಗಳ ಮೂಲಕ ಪ್ರಚುರಪಡಿಸುತ್ತಿರುವ ಪೂಜ್ಯರು ಹಲವಾರು ಹಿರಿಕಿರಿಯ ಜಂಗಮಪುಂಗವರ ಸಂಗದಲ್ಲಿದ್ದವರು, ಅವರ ತೇಜಃಪುಂಜ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾದವರು. ಇದೀಗ ಪೂಜ್ಯರಿಂದ ರಚಿತವಾದ "ಆರೈದು" (ಭಾಗ–ಒಂದು) ಎಂಬ ಈ ಕೃತಿಯಲ್ಲಿ ಹನ್ನೊಂದು ಜನ ವಿಭೂತಿಪುರುಷರ ಭವ್ಯವ್ಯಕ್ತಿತ್ವದ ದರ್ಶನವಿದೆ.

"ಆರಯ್" ಪದ ತುಂಬ ಮಾರ್ಮಿಕವಾದುದು. ವಚನಸಂಪದದ ೪೧೧೮ನೆಯ ವಚನದ

"ಆರಿಸಿಕೋ ಆರಿಸಿಕೋ ಆರಯ್ದು ಆರಿಸಿಕೋ
ಆರಯ್ಯದೆ ಗುರಿ ದೊರಕುವುದೆಂತು?"

ಹಾಗೂ

ಆರೈದು ನುಡಿವವನು ಆರೈದು ನಡೆವವನು
ಆರೈದು ಅಡಿಯನಿಡುವವನು ಲೋಕಕ್ಕೆ
ಆರಾಧ್ಯವಕ್ಕು ಸರ್ವಜ್ಞ॥

ಎಂಬ ವಚನದಲ್ಲಿ ಬಳಕೆಗೊಂಡ "ಆರೈದು" ಎಂಬ ಪದವೇ ಈ ಕೃತಿಗೆ ಸ್ಫೂರ್ತಿ. ಲೇಖಕರೇ ಹೇಳುವಂತೆ ಆರು ಮತ್ತು ಐದು ಸೇರಿದರೆ ಆರೈದು. ಹನ್ನೊಂದು ಜನ

ವಿಭೂತಿ ಪುರುಷರ ಸ್ವರೂಪ ಚಿತ್ರ ಸಂಕ್ಷಿಪ್ತವಾಗಿ ಬಂದಿದೆ. "ಆರು ನಾನೆಂದು ವಿಚಾರಿಸು, ವಿಷಮ ಸಂಸಾರವಿದನು ಕನಸೆಂದರಿ, ಮಾರಮರ್ದನ ಶಂಭುಲಿಂಗವನೊಲಿಸಿ"ದಂಥವರು ಲೋಕಪೂಜ್ಯರೇ! ಪಂಚತತ್ವಗಳು ನಾನಲ್ಲ. ನಾನು ಆರನೆಯ ಆತ್ಮತತ್ವವೆಂಬುದನ್ನು ಅಳವಡಿಸಿಕೊಂಡು ಪರಮಾತ್ಮ ಅಥವಾ ಲಿಂಗಸ್ವರೂಪಿಯಾದವನು ಎಂಬ ವಿಚಾರದಿಂದ 'ಆರು ಪೂಜ್ಯರು ಲಿಂಗಸ್ವರೂಪಿಗಳಾದವರು, ಐದು ಜನರು ಭೂತಪ್ರಪಂಚದಲ್ಲಿ ನಡೆವವರ ವಿವರಣೆ ಇಲ್ಲಿದೆ.' ಪೀಠಿಕೆ ಚಿಕ್ಕದಾಗಿದ್ದರೂ ಮುಂದಿನ ಓದಿಗೆ ಉತ್ತಮ ಅಡಿಪಾಯ ವನ್ನೊದಗಿಸಿದೆ.

ಎಲ್ಲ ಜೀವಜಂತುಗಳಲ್ಲಿ ಸರ್ವಶ್ರೇಷ್ಠನೆನಿಸಿದ, ಮಿಗಿಲೆನಿಸಿದ ಮಾನವ, ನಡೆನುಡಿ ಗಳಲ್ಲಿ ಆರೈದು ಅಡಿಯಿಟ್ಟು, ಲೋಕಕ್ಕೆ ಆರಾಧ್ಯನೆನಿಸುವ ಅಗತ್ಯ ಎಂದಿಗಿಂತ ಇಂದು ಹೆಚ್ಚಾಗಿದೆ. ಆರೈದ ಮಹಾಪುರುಷರ ಜೀವನ ಸಂದೇಶಗಳು ಸಮಾಜಕ್ಕೆ ಸ್ಫೂರ್ತಿದಾಯಿ. ಅಂತೆಯೇ ಆರೈದು ನಡೆದು ನುಡಿದ ಮಹಾಂತರ ಜೀವನ ಅನುಕರಣೀಯ ಆದರ್ಶ. ಅವರ ಜೀವನವೇ ಒಂದು ದಿವ್ಯ ಸಂದೇಶ, ಸಮಾಜವನ್ನು ಮುನ್ನಡೆಸುವ ದಾರಿದೀಪ.

ಅನೀತಿ–ಅನ್ಯಾಯ–ಅನಾಚಾರ ಹಾಗೂ ಧರ್ಮಗ್ಲಾನಿಯಾದ ಸಂದರ್ಭದಲ್ಲಿ ಸಿಡಿಲಿನಂತೆ ಸ್ಫೋಟಗೊಂಡು ಆವಿರ್ಭವಿಸಿದ ವಿಭೂತಿ ಪುರುಷರು ಅಜ್ಞಾನಾಂಧಕಾರದಲ್ಲಿ ಮುಳುಗಿದ ಜನರನ್ನು ಮೇಲೆತ್ತಿ ಲೆತ್ತಿನಿಸಿ, ನೂತನ ಪ್ರಜ್ಞಾವಂತ ಸಮಾಜವೊಂದರ ರೂವಾರಿಗಳೆನಿಸುತ್ತಾರೆ. ಪುಣ್ಯಪ್ರದ ಭರತಭೂಮಿಯಲ್ಲಿ ಇಂಥ ಅಸಂಖ್ಯ ಮಹಾಪುರುಷರು ಅವತರಿಸಿದ್ದಾರೆ. ಸಮಾಜಕ್ಕೇ ತಮ್ಮನ್ನು ಸಮರ್ಪಿಸಿಕೊಂಡು, ಜನಸಾಮಾನ್ಯರ ನೋವನ್ನು ಕಂಡು ಮರುಗಿ ಸುಮ್ಮನಾಗದೆ, ಅದರಿಂದ ಕಳವಳಗೊಂಡು, ಸಂತಾಪವನ್ನು ತೋಡಿಕೊಂಡು, ತಮ್ಮ ಸಾತ್ವಿಕ ಶಕ್ತಿಯಿಂದ ಆದಕ್ಕೆ ಪರಿಹಾರ ಹುಡುಕುವಲ್ಲಿ ಶ್ರಮಿಸು ತ್ತಾರೆ; ಸಮಾಜದಲ್ಲಿ ಧರ್ಮವನ್ನು ನೆಲೆಗೊಳಿಸಿ, ಶೈಕ್ಷಣಿಕ ಕ್ರಾಂತಿಯನ್ನು ಗೈದು ಅದರ ಸರ್ವತೋಮುಖ ಅಭಿವೃದ್ಧಿಗಾಗಿ ಪರಿಶ್ರಮಿಸುತ್ತಾರೆ.

ಶ್ರೀಗಳು ಇಲ್ಲಿ ಚಿತ್ರಿಸಿದ ಹಲವಾರು ವಿಭೂತಿಗಳೊಂದಿಗೆ ನಿಕಟ ಸಂಪರ್ಕ ಹೊಂದಿ ದವರು, ಆತ್ಮೀಯವಾಗಿ ಒಡನಾಡಿದವರು. ಅದರಲ್ಲೂ ತಾವು ನೆಲೆನಿಂತ ಪರಿಸರವನ್ನು ಕಾಶಿಯಷ್ಟೇ ಪರಮಪವಿತ್ರಗೊಳಿಸಿ, ಎಲ್ಲರ ಅಂತರಾತ್ಮಗಳಲ್ಲಿ ಚೇತನ ಸ್ವರೂಪದಲ್ಲಿ ಬೆಳಗುತ್ತಿರುವ, ಗುರುವಿನ ಗುರುವೆನಿಸಿದ ಶ್ರೀಗುರು ಕುಮಾರೇಶರು ಮರೆಯಲಾಗದ ಮಹಾಂತರು. ಲೇಖಕರು ಶ್ರೀಕುಮಾರೇಶರನ್ನು ನೋಡಿರದಿದ್ದರೂ ಕೇಳಿಯೇ ತಿಳಿದು ಚಿತ್ರಿಸಿದ ಅವರ ವ್ಯಕ್ತಿತ್ವದ ಚಿತ್ರಣವಂತೂ ಎಲ್ಲ ವಟುಗಳಿಗೆ, ಜಂಗಮರಿಗೆ ನಿತ್ಯ ಚೇತೋಹಾರಿ. ಆ ದೃಷ್ಟಿಯಿಂದ 'ಆರೈದು' ಕೃತಿ ಶ್ರೀಗುರು ಕುಮಾರೇಶರನ್ನು ಕುರಿತ ಲೇಖನದಿಂದ ಪ್ರಾರಂಭಗೊಂಡುದು ತುಂಬ ಅರ್ಥಪೂರ್ಣ.

ಸೃಷ್ಟಿನ ಆಗರವೆನಿಸಿದ ಭರತಭೂಮಿಯಲ್ಲಿ ಅವತರಿಸಿದಷ್ಟು ವಿಭೂತಿಪುರುಷರು ಜಗತ್ತಿನ ಮತ್ತಾವ ಎಡೆಯಲ್ಲೂ ಕಾಣಸಿಗುವುದಿಲ್ಲ. ಭಾರತಾಂಬೆಯ ಜೇಷ್ಠ ಸುಪುತ್ರಿ

ಯೆನಿಸಿದ ಕನ್ನಡಾಂಬೆಯ ಪುಣ್ಯೋದರದಲ್ಲಂತೂ ಅಸಂಖ್ಯ ಶರಣ-ದಾಸ-ತೀರ್ಥಂಕರರು-ಸಂತಮಹಂತರು ಉದಯಿಸಿದ್ದಾರೆ. ಅದರಲ್ಲಿ ಹಾನಗಲ್ಲಿನ ಶ್ರೀಗುರು ಕುಮಾರೇಶರು ವೀರಶೈವರೆಲ್ಲರಿಗೂ ಪರಮಾರಾಧ್ಯರು. ವೀರಶೈವ ಸಮಾಜದ ಎರಡು ಕಣ್ಣುಗಳಂತಿರುವ ಶಿವಯೋಗ ಮಂದಿರ ಹಾಗೂ ವೀರಶೈವ ಮಹಾಸಭೆಗಳ ಸಂಸ್ಥಾಪಕರಾದ ಹಾನಗಲ್ಲ ಶ್ರೀಕುಮಾರ ಮಹಾಸ್ವಾಮಿಗಳು ಪುಣ್ಯಚರಿತರು.

ಧಾರವಾಡ ಜಿಲ್ಲೆಯ ಜೋಯಿಸರ ಹರಳಹಳ್ಳಿಯ ಶರಣದಂಪತಿಗಳಾದ ನೀಲಮ್ಮ-ಬಸವಯ್ಯನವರ ಪುಣ್ಯಗರ್ಭದಲ್ಲಿ ಜನಿಸಿದ ಕಾರಣಿಕ ಶಿಶು ಭವಹರ ಭಸ್ಮವನ್ನು ಧರಿಸಿದ ತಕ್ಷಣ ಹಾಲುಂಡು, ಅನ್ವರ್ಥಕವಾಗಿ 'ಹಾಲಯ್ಯ'ನೆನಿಸಿ ಕಜ್ಜರಿ ಗ್ರಾಮದ ಹಿರೇಮಠ ರಾಚಯ್ಯನವರ ಸಹಾಯದಿಂದ ಮಹಾದೇವಪಂತ ಜೋಗಳೇಕರರಲ್ಲಿ ವಿದ್ಯೆ ಪಡೆದು ಆದರ್ಶ ವಿದ್ಯಾರ್ಥಿಯೆನಿಸಿದರು. ತಾಯಿಯ ತವರು ಲಿಂಗದಳ್ಳಿಯ ಬಸವಯ್ಯನವರಲ್ಲಿ ನಿಜಗುಣರ ಷಟ್‌ಶಾಸ್ತ್ರಗಳ ಕುರಿತು ಚಿಂತನೆ ನಡೆಸಿ ತಮ್ಮ ಆಧ್ಯಾತ್ಮದ ಹಂಬಲಕ್ಕೆ ಕೈವಲ್ಯ ಪದ್ಧತಿಯ ವಿಶೇಷ ಬೆಂಬಲ ಪಡೆದರು; ಜನತೆಗೆ ವೇದಾಂತವನ್ನು ಬೋಧಿಸಿ, ಊರ ಮಕ್ಕಳಿಗೆ ವಿದ್ಯೆಯನ್ನು ನೀಡಿದರು. ಆಗಲೇ ಭಕ್ತಿ ಜ್ಞಾನ ವೈರಾಗ್ಯಗಳು ಮುಪ್ಪುರಿಗೊಂಡ ಅವರು ಮದುವೆಯ ಮಾತೆತ್ತಿದ ಮಾತೆಯನ್ನು "ವಿಷಯವೆಂಬ ವಿಷವನ್ನು ಕುಡಿಸಬೇಡ"ವೆಂದು ತುಂಬ ಸೌಜನ್ಯದಿಂದಲೇ ಒಲಿಸಿ, ಅಂದೇ ತಾಯಿ ಮಕ್ಕಳ ಸಂಬಂಧಕ್ಕೆ ತಿಲಾಂಜಲಿಯನ್ನಿತ್ತರು, ಹೆಣ್ಣಿನದ ವ್ಯಾಮೋಹವನ್ನೂ ಅಳಿದರು.

ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಶ್ರೀಗಳಲ್ಲಿ ವೇದಾಂತದ ಅಧ್ಯಯನ ನಡೆಸಿ, ಎಮ್ಮಿಗನೂರಿನ ಜಡೆಯುಸಿದ್ಧರಿಂದ 'ಶಿವಯೋಗಿ'ಯೆಂಬ ಅಭಿದಾನ ಪಡೆದರು; ಷಟ್‌ಶಾಸ್ತ್ರಗಳನ್ನು ತಮ್ಮ ಜೀವನ ಸಿದ್ಧಾಂತವನ್ನಾಗಿಸಿಕೊಂಡಿದ್ದ ಎಳಂದೂರಿನ ಬಸವಲಿಂಗಸ್ವಾಮಿಗಳು ಶ್ರೀಮಠಕ್ಕೆ ಬಂದಾಗ ಸಿದ್ಧಾರೂಢರ ಆಣತಿಯಂತೆ ಅವರೊಂದಿಗೆ ಚರ್ಚಿಸುತ್ತ ಬಸವಲಿಂಗಸ್ವಾಮಿಗಳ ಘನವ್ಯಕ್ತಿತ್ವಕ್ಕೆ ಮನಸೋತ ಹಾಲಯ್ಯನವರು ಸದ್ಗುರುವನ್ನು ಪಡೆದು ಸಂತುಷ್ಟರಾಗುವರು. ಪರಮ ಗುರುವಿನ ಅನುಗ್ರಹಕ್ಕೆ ಪಾತ್ರರಾಗಿ ಶಂಭುಲಿಂಗನ ಬೆಟ್ಟದಲ್ಲಿ ನಿಜಗುಣರ ಆರುಶಾಸ್ತ್ರಗಳನ್ನು ಅಭ್ಯಸಿಸಿದರು.

ಬಸವಲಿಂಗಸ್ವಾಮಿಗಳು ಲಿಂಗದಲ್ಲಿ ಬೆರೆದ ಮೇಲೆ ತಾಯನಗಲಿದ ಶಿಶುವಿನಂತಾದ ಹಾಲಯ್ಯದೇಶಿಕರು ಸೊರಬದ ಗುರುಬಸವಾರ್ಯರ ಗದ್ದುಗೆಯಲ್ಲಿ ಅನುಷ್ಠಾನಗೈದು, ಪುರಾತನ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳ ವಿರಕ್ತಮಠದ ಅಧಿಕಾರಿಗಳಾಗಿ, ಶ್ರೀ ಸದಾಶಿವ ಮಹಾಸ್ವಾಮಿಗಳೆಂಬ ಹೊಸ ಹೆಸರು ಪಡೆದು, ಭೌತಿಕ ಸಂಪತ್ತಿಗೆ ಮಾರು ಹೋಗದೆ ಸಮಾಜಸೇವೆ ಮಾಡುತ್ತ, ಭಕ್ತ ಸಮೂಹಕ್ಕೆ ಅಚ್ಚುಮೆಚ್ಚಿನವರಾದರು, ಭಕ್ತವತ್ಸಲರೆನಿಸಿದರು.

ಧರ್ಮಬೋಧಕರ ತರಬೇತಿ ಕೇಂದ್ರವನ್ನಾರಂಭಿಸಿ ಪುರಾಣ-ಪ್ರವಚನ-ಕೀರ್ತನಕಾರರನ್ನು ಸಿದ್ಧಗೊಳಿಸಿದ್ದು, ಶಿಕ್ಷಣ ಕ್ಷೇತ್ರದ ಪ್ರಗತಿಗೆ ಶ್ರಮಿಸಿದ್ದು, ಹಲವು ಹತ್ತು

ಕ್ಷೇತ್ರಗಳಲ್ಲಿ ಶ್ರದ್ಧೆಯಿಂದ ದುಡಿದು, ಕಾರ್ಯವನ್ನು ಗಂಧದಂತೆ ಸವೆಸಿದ್ದು–ಇವೇ ಮೊದಲಾದ ಸಂಗತಿಗಳು ಇಲ್ಲಿ ವಿವರವಾಗಿ ಬಂದಿದ್ದು, ಸಾಧಕರಿಗೆ ಕೈದೀವಿಗೆಯೆನಿಸಿವೆ.

ಸಮಾಜವನ್ನು ನಿರ್ಮಿಸುವಲ್ಲಿ ಧರ್ಮ ವಹಿಸುವ ಪಾತ್ರ ಎಷ್ಟು ಮುಖ್ಯವೋ ಅದನ್ನು ವಿಘಟಿಸುವಲ್ಲೂ ಅದು ನಿರ್ವಹಿಸುವ ಪಾತ್ರ ವಿಚಿತ್ರ. ಅಂತೆಯೇ ಸಮಾಜದಲ್ಲಿನ ಅನೈಕ್ಯತೆಯನ್ನು ಮನಗಂಡ ಶ್ರೀಗಳು, ವೀರಶೈವರನ್ನು ಸಂಘಟಿಸುವ ಮಹತ್ಕಾರ್ಯ ಕ್ಕಾಗಿ ಅಖಿಲಭಾರತ ವೀರಶೈವ ಮಹಾಸಭೆಯನ್ನು ಅಸ್ತಿತ್ವದಲ್ಲಿ ತಂದರಲ್ಲದೆ ಶಿವಯೋಗ ಮಂದಿರದ ಸ್ಥಾಪನೆಗೂ ಸಿದ್ಧರಾದರು; ಘಟ್ಟಿವಾಳಯ್ಯನ ಕಾಲಜ್ಞಾನ ವಚನದ ಸತ್ಯಸಾರ್ಥಕತೆಗೆ ಕಾರಣರಾದರು. ಸಮಾಜದಲ್ಲಿ ಬೇರೂರಿದ್ದ ಅನೀತಿ–ಅನಾಚಾರಗಳ ನಿವಾರಣೆಗೈದು, ಶಿವಯೋಗಸಾಧಕರಿಗೆ ಮಾರ್ಗದರ್ಶನ ನೀಡಿ ಶಿಸ್ತಿನ ಸ್ವಯಂಸೇವಕ ರಾಗುವಂತೆ ಮಾಡಿದರು. ಪಂಚಾಕ್ಷರಿ ಗವಾಯಿಗಳನ್ನು ಉಭಯಗಾನವಿಶಾರದರನ್ನಾಗಿಸಿ ದರು. ಸಮಾಜದ ಸೊತ್ತನ್ನು ಔಚಿತ್ಯವರಿತು ವಿನಿಯೋಗಿಸುವ ಉಚಿತ ಪರಿಯನ್ನು ಅರಿವಿಗೆ ತಂದುಕೊಟ್ಟ ಪೂಜ್ಯಕುಮಾರೇಶರು 'ಗುರುವಿನ ಗುರು'ವೆನಿಸಿದ್ದು ಇದೇ ಕಾರಣಕ್ಕಾಗಿ.

ಶ್ರೀ ಕುಮಾರೇಶರ ಬೋಧನೆಗಿಂತ ಸಾಧನೆ ಮುಖ್ಯ. ಅದು ಅವರ ಪರಿಸರದ ಎಲ್ಲರಿಗೂ ಪ್ರೇರಕ ಶಕ್ತಿ. ವೀರಶೈವ ಸಮಾಜ ಅಸ್ತಿತ್ವದಲ್ಲಿರುವವರೆಗೂ ಇಂಥ ಅದ್ಭುತ ಕರ್ತೃತ್ವಶಕ್ತಿಯ ಶ್ರೀಗುರುಕುಮಾರೇಶರನ್ನು ಮರೆಯುವಂತಿಲ್ಲ. ಹೀಗೆ ಎಣಿಕೆಗೆ ಮೀರಿದ ಅಪರೂಪದ ಸಾಧನೆಗೈದ ಪೂಜ್ಯ ಶ್ರೀಗಳ ಕುರಿತು ಹಲವಾರು ಗಣ್ಯರ ಹೇಳಿಕೆಗಳನ್ನು ಉಲ್ಲೇಖಿಸಿ, ಅವರ ಸಾಧನೆಗಳನ್ನು ಸಾಕ್ಷಾತ್ಕರಿಸಿಕೊಡುವಲ್ಲಿ ಲೇಖಕರ ಶ್ರಮ ಸಾರ್ಥಕವಾಗಿದೆ.

ಐದು ವರ್ಷದ ಬಾಲಕರಾಗಿದ್ದಾಗ ಗಚ್ಚಿನ ಮಠಕ್ಕೆ (ಅಥಣಿ) ಆಗಮಿಸಿ, ಹದಿನೈದು ವರ್ಷ ನಿರಂತರ ಅಧ್ಯಯನದಿಂದ ಲೌಕಿಕ ಪಾರಮಾರ್ಥಿಕಗಳೆರಡನ್ನೂ ಅರಿತು, ಶ್ರೀಮರುಳಶಂಕರಸ್ವಾಮಿಗಳಿಂದ ಷಟ್‌ಸ್ಥಲಬ್ರಹ್ಮೋಪದೇಶ ಪಡೆದು, ಜಂಗಮತ್ವವನ್ನು ಸಾಧಿಸಿ ಮುರುಘೇಂದ್ರ ಶಿವಯೋಗಿಗಳೆನಿಸಿದರು. ಪಾದಚಾರಿಗಳಾಗಿ ನಡೆದಿದ್ದರೂ ಆಯಾಸಗೊಳ್ಳದ ಸದೃಢ ದೇಹಸಂಪತ್ತು, ವಿಶಾಲವಾದ ವಕ್ಷಸ್ಥಲ, ಅಜಾನುಬಾಹುದ್ವಯ, ಬಳಲಿಬಂದ ಭಕ್ತರನ್ನು ಹರಸಬಲ್ಲ ಕರಸ್ಥಲ, ಬಂಗಾರದ ಮೈಬಣ್ಣ ಕಾವಿಯ ಉಡುಗೆ ಯಲ್ಲಿ ಕಾಂತಿ ಚಿಮ್ಮುತ್ತಿತ್ತು. ಆತ್ಮತೇಜಸ್ಸು ಮುಖಕಮಲದಲ್ಲಿ ತುಂಬಿತುಳುಕುತ್ತಿತ್ತು. ದೃಢತರವಾದ ವೈರಾಗ್ಯದಿಂದ ತ್ರಿಕಾಲಲಿಂಗಪೂಜೆ ಮಾಡುತ್ತ ಶಿವಭಕ್ತರ ಮನೆಯ ಭಿಕ್ಷಾನ್ನದಿಂದ ತಕ್ಕಷ್ಟು ದೇಹಪೋಷಣೆ ಮಾಡುತ್ತಿದ್ದರು. ಶಿವಾನುಭವ ಸಂಪಾದನೆ ಮಾಡುವದೇ ಅವರ ಮುಖ್ಯ ದಿನಚರಿಯಾದವು. ಭಕ್ತಿಯಿಂದ ಬಂದ ವಸ್ತು, ಮಾತಿ

ನಲ್ಲಿಯೇ ಸ್ವೀಕರಿಸಿ ಆಶೀರ್ವದಿಸುತ್ತಿದ್ದರು" ಎಂಬ ಚಿತ್ರ, ಅಥಣಿ ಶಿವಯೋಗಿಗಳ ವ್ಯಕ್ತಿವಿಶೇಷಗಳನ್ನು ತುಂಬ ಮನೋಹರವಾಗಿ ಪರಿಚಯಿಸುತ್ತದೆ.

ಜಮಖಂಡಿ ತಾಲೂಕಿನ ಗುಹೇಶ್ವರಗಡ್ಡಿಯ ಕೃಷ್ಣಾತೀರದಲ್ಲಿ ಆರು ವರ್ಷ ಅನುಷ್ಠಾನಗೈದು,ಶಿವಶಕ್ತಿಯನ್ನು ಸಂಪಾದಿಸಿಕೊಂಡು ಗಚ್ಚಿನಮಠಕ್ಕೆ ತೆರಳಿ, ಗುರುವಚನಕ್ಕೆ ಗೌರವವಿತ್ತು ಅಲ್ಲಿಯೇ ನೆಲೆಸಿದರು. ಮಠಕ್ಕೆ ಬಂದ ಜಂಗಮರನ್ನು ಗೌರವಿಸಿ, ಅವರ ಪೂಜೆಗೆ ವ್ಯವಸ್ಥೆಗೊಳಿಸಿ, ಗಣಾರಾಧನೆಗಳನ್ನು ನೆರವೇರಿಸಿ ಭಕ್ತರನ್ನು ಸಂತುಷ್ಟಗೊಳಿಸಿ ದರು; ಮೃತ್ಯುಂಜಯಪ್ಪಗಳನ್ನು ಶಿಷ್ಯರನ್ನಾಗಿ ಪಡೆದು ಅವರನ್ನು ಸಮಾಜಸೇವೆಗೆ ಅಣಿಗೊಳಿಸಿದರು. ಮಾಯೆಯನ್ನು ಜಯಿಸಿ, ಅನ್ವರ್ಥಕ ಶಿವಯೋಗಿ–ಜಂಗಮಜ್ಯೋತಿ–ನಾಡಿನ ನಂದಾದೀಪ–ಭಕ್ತರ ಕಾಮಧೇನುವೆನಿಸಿದ ಶಿವಯೋಗಿಗಳ ದಿವ್ಯವ್ಯಕ್ತಿತ್ವದ ಚಿತ್ರಣ ಹೃದಯಸ್ಪರ್ಶಿ.

ತಪಸ್ವಿಗಳೂ ಸಮಯನಿಷ್ಠರೂ ಆಗಿದ್ದ ಹಾಲಕೆರೆಯ ಶ್ರೀ ಅನ್ನದಾನ ಮಹಾಸ್ವಾಮಿಗಳು ಶಿವಯೋಗಮಂದಿರದ ಶ್ರೇಯೋಭಿಲಾಷಿಗಳು–ಹಿತೈಷಿಗಳು. "ಎತ್ತರ ವಾದ ಬೆತ್ತವನ್ನು ಹಿಡಿದು ಗಂಭೀರವಾದ ಮುಖಮುದ್ರೆಯನ್ನು ಹೊಂದಿದ ದಟ್ಟವಾದ ಕಾವಿಯ ಕಪನಿಯನ್ನು ಹಾಕಿ ಶಾಟಿಯನ್ನು ಹೊದ್ದು ರುಮಾಲನ್ನು ಸುತ್ತಿದ" ಅಜ್ಜನವರ ದರ್ಶನ ಆನಂದದಾಯಕ. ಗಣಿತದಲ್ಲಿ ಅವರದು ಎತ್ತಿದ ಕೈ. ಚಿತ್ರಕಲೆಯಲ್ಲಿ ಪಡೆದ ಪರಿಣತಿಯನ್ನು ತಾವೇ ಇಟಗಿ ಹಾಗೂ ಹಾಲಕೆರೆಗಳಲ್ಲಿ ನಿರ್ಮಿಸಿದ ಮಠಗಳಲ್ಲಿ ಸಾಕಾರಗೊಳಿಸಿದವರು. ಆಂಗ್ಲಶಾಲೆಯಿಂದ ತೊಡಗಿ ಮಹಾವಿದ್ಯಾಲಯದವರೆಗಿನ ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸಿ ನರೇಗಲ್ಲನ್ನು ವಿದ್ಯಾರ್ಜನೆಯ ಕೇಂದ್ರವನ್ನಾಗಿಸಿ ದವರು. ಅಖಿಲಭಾರತ ವೀರಶೈವ ಮಹಾಸಭೆಯ ೧೭ನೆಯ ಅಧಿವೇಶನ ಯಶಸ್ವಿಯಾಗು ವಲ್ಲಿ ಹಾಲಕೆರೆ ಶ್ರೀಗಳ ಪಾತ್ರ ಹಿರಿದು. ತಮಗಿಂತ ಕಿರಿಯರನ್ನು ಪ್ರೋತ್ಸಾಹಿಸಿ ಬೆಳೆಸಿದ ಪೂಜ್ಯರು ಗೌರವಾನ್ವಿತ ಮಹಾಸ್ವಾಮಿಗಳೆನಿಸಿದ ಬಗೆಯನ್ನು ಲೇಖಕರು ಸ್ವಾನುಭವದ ಹಿನ್ನೆಲೆಯಲ್ಲಿ ನಿದರ್ಶಿಸಿದ್ದಾರೆ.

ಶಿವಯೋಗಮಂದಿರಕ್ಕೆ ಆಗಮಿಸಿದ ಲೇಖಕ (ಅಂದು ಬಾಲಕ)ರನ್ನು ಅಲ್ಲಿಯ ಪಾವನ ನೆಲಜಲಗಳು ತುಂಬ ಆಕರ್ಷಣೀಯವೆನಿಸಿದವು. "ಅರಕೇರಿ ಖೋಲಿಯ ಮುಂದೆ ಶತಪಥ ಹಾಕುತ್ತಿದ್ದ ಶಿವಯೋಗ ಕಳೆಯಿಂದ ಕಂಗೊಳಿಸುತ್ತಿದ್ದ ಶಿವಯೋಗಿ ಪುಂಗವನ ಸಂದರ್ಶನವಾಯಿತು. ಎತ್ತರವಾದ ಕಾಯ; ವಿಶಾಲವಾದ ಹಣೆ, ಅಚ್ಚಳಿಯದ ತ್ರಿಪುಂಡ್ರ, ಪ್ರಾತಃಕಾಲದ ಶಿವಪೂಜೆಯಿಂದ ಶಿವಭಾವವನು ಸೂಸುವ ಮುಖಮುದ್ರೆ, ಅಜಾನುಬಾಹು ಗಳು ಹಾಗೂ ಅಭಯಪ್ರದವಾದ ಹಸ್ತಗಳು ಶಿಷ್ಯನನ್ನು ಆತ್ಮೀಯವಾಗಿ ಬರಮಾಡಿ ಕೊಂಡವು. ಶಿವಯೋಗಿಯ ದಿವ್ಯ ವ್ಯಕ್ತಿತ್ವಕ್ಕೆ ಮಾರುಗೊಂಡು ಮಂತ್ರಮುಗ್ಧವಾಗ ಬೇಕಾಯಿತು. ಭಕ್ತಿಭಾವ ಬಿರಿಯಿತು. ಮನ ತಣಿಯಿತು" ಎನ್ನುವಲ್ಲಿ ಅಲ್ಲಿನ ಪವಿತ್ರ ಪರಿಸರ, ಅದರ ಹಿರಿಮೆ ಗರಿಮೆಗಳನ್ನು ಏರೆತ್ತರಕ್ಕೇರಿಸುವಲ್ಲಿ ಶ್ರಮಿಸುತ್ತಿದ್ದ

ಶ್ರೀ ಸದಾಶಿವ ಶಿವಯೋಗಿಗಳ ದಿವ್ಯವ್ಯಕ್ತಿತ್ವ ಕಣ್ಮುಂದೆ ಕಟ್ಟುವಂತೆ ಚಿತ್ರಣಗೊಂಡಿವೆ. "ಆಗ ಆಷಾಢಮಾಸ. ಮಳೆಯಾಗಿ ಗಿಡಮಾಗಡಿಯು ಒಡಲು ಹಚ್ಚಹಸಿರಾಗಿತ್ತು. ಸುತ್ತಲಿನ ಪರ್ವತಶ್ರೇಣಿ ಶೋಭಾಯಮಾನವಾಗಿ ಕಂಗೊಳಿಸುತ್ತಿತ್ತು. ಮರಬಳ್ಳಿಗಳು ಹಸಿರೆಲೆಗಳಿಂದ ಅಂದವಾಗಿದ್ದವು. ನವಿಲುಗಳ ಕೇಕೆಯೊಡನೆ ಮಲಪ್ರಭೆಯ ದಿಡುಗು ಝೇಂಕರಿಸುತ್ತಿತ್ತು. ಕಾರಣಿಕ ಮಹಾಪುರುಷನ ಪುಣ್ಯತಾಣದ ಪ್ರಶಾಂತ ವಾತಾವರಣವು ಆಗಂತುಕರನ್ನು ವಿಸ್ಮಯಾನಂದಗಳಲ್ಲಿ ತೇಲಿಸುತ್ತಿತ್ತು. ಪ್ರಾತಃಕಾಲದ ತರಣಿಕಿರಣವು ಕಾವಿಯ ಕಾಂತಿಯನ್ನು ಕಳೆಯೇರಿಸಿತ್ತು." ಮೊದಲಾದ ಲೇಖಕರ ಪ್ರಾಕೃತಿಕ ಚಿತ್ರಗಳ ವರ್ಣನೆ ಅಪ್ಯಾಯಮಾನ.

ಹಾನಗಲ್ಲೇಶರ ದಿವ್ಯದೃಷ್ಟಿಗೆ ಬಿದ್ದ ಬಾಲಕ ಚಂದ್ರಶೇಖರ, ಶಿವಯೋಗಮಂದಿರಕ್ಕೆ ಅರ್ಪಿತರಾಗಿ, ಸಕಲಶಾಸ್ತ್ರಕಲೆಗಳನ್ನು ಶ್ರದ್ಧೆಯಿಂದ ಅಧ್ಯಯನಗೈದು, ತಮ್ಮ ಕುಶಾಗ್ರಮತಿಯಿಂದ ಸರ್ವರ ಪ್ರೀತ್ಯಾದರಗಳಿಗೆ ಪಾತ್ರರಾಗಿ, ಕರ್ತವ್ಯಾಸಕ್ತಿಯೊಂದಿಗೆ ವಿರಕ್ತಿಯನ್ನೂ ಸಾಧಿಸಿದರು; ಸಾಧಕರು ಪಾಕಶಾಸ್ತ್ರಾದಿಗಳಲ್ಲೂ ಬಲ್ಲಿದರಾಗಬೇಕೆಂಬುದನ್ನು ಸಾಧಿಸಿ ತೋರಿಸಿದರು. ಲೇಖನದಂತೆ ಚಿತ್ರ-ಶಿಲ್ಪಗಳಲ್ಲೂ ಅಪಾರ ಜ್ಞಾನವನ್ನು ಹೊಂದಿದ್ದ ಅವರ ನೇತೃತ್ವದಲ್ಲಿ ರೂಪುಗೊಂಡ ಕುಮಾರೇಶರ ಗದ್ದುಗೆಯ ಶಿಲಾಮಂಟಪ ಅಮೋಘ ಕಲಾವಂತಿಕೆಯ ಉತ್ತಮ ನಿದರ್ಶನವೆನಿಸಿದೆ.

ಹಿರಿಯರ ಆದೇಶದಂತೆ ಹಾನಗಲ್ಲಮಠದ ಉತ್ತರಾಧಿಕಾರಿಗಳಾಗಿ ಶ್ರೀ ಸದಾಶಿವ ಸ್ವಾಮಿಗಳೆಂಬ ಅಭಿದಾನ ಪಡೆದು, ಶಿವಯೋಗಮಂದಿರದ ಸಂಚಾಲಕತ್ವದ ಹೊಣೆಯನ್ನು ಹೊತ್ತು, ತಮ್ಮ ಸರಳ ಹಾಗೂ ಕ್ರಮಬದ್ಧ ಜೀವನದಿಂದ ಶಿವಯೋಗಿ ಶಿಖಾಮಣಿಗಳಾಗಿ ಆದರ್ಶನಿದರ್ಶನವೆನಿಸಿದ ಬಗೆಯನ್ನು ಬಿತ್ತರಿಸಿದ ರೀತಿ ಪರಿಣಾಮಕಾರಿ. ಹೀಗೆ ನಿತ್ಯನಿರೂಪಮ ವ್ಯಕ್ತಿತ್ವದ ಶ್ರೀಸದಾಶಿವ ಸ್ವಾಮಿಗಳ ಬಗೆಗೆ ಲೇಖಕರು ತಾಳಿದ ಭಕ್ತಿಗೌರವದ ಭಾವನೆಗಳು ಈ ಲೇಖನದಲ್ಲಿ ಸುವ್ಯಕ್ತವಾಗಿವೆ.

ಅನ್ನದಾನ-ಜ್ಞಾನದಾನ-ಭಕ್ತಿದಾನಗಳ ಮಹಾದಾಸೋಹಗೈದು ಪ್ರಖ್ಯಾತಿಪಡೆದ, ಭೌತಿಕಸಂಪತ್ತಿಗೂ ತವರೆನಿಸಿದ ನಿಡಸೋಸಿಯ ಸಿದ್ಧಸಂಸ್ಥಾನಮಠದ ದರ್ಶನಕ್ಕೆಂದು ಹೊರಟ ಪೂಜ್ಯಲೇಖಕರು ಅಲ್ಲಿನ ಭಕ್ತಿಭಾವದ ಪರಿಸರದಿಂದ ಪುಳಕಗೊಂಡು ಮುನ್ನಡೆಯುವಷ್ಟರಲ್ಲಿ ದೊಡ್ಡವರಿಗಷ್ಟೇ ಅಲ್ಲ, ಶಾಲೆಯ ಚಿಕ್ಕಚಿಕ್ಕ ಮಕ್ಕಳಿಗೂ ಒಳ್ಳೆಯ ಸಂಸ್ಕಾರವನ್ನುಂಟುಮಾಡಿದ ಪೂಜ್ಯ ಮಠಾಧ್ಯಕ್ಷರ ಬಗೆಗೆ ಅಯತ್ನಪೂರ್ವಕ ಗೌರವ ವುಂಟಾಯಿತೆನ್ನುತ್ತಾರೆ. ಶ್ರೀಮಠಕ್ಕೆ ಹೋದ ಸಂದರ್ಭದಲ್ಲಿ "ಅರಿತ ಅನುಭವಿಗಳಾದ ಈ ಶ್ರೀಗಳು ಭಿನ್ನಭಾವಗೈದರಲ್ಲ" ಎಂದು ಭಾವಿಸಿ, ಅವರೊಂದಿಗೆ ಜಂಗಮವಿನೋದಗೈಯಲೆಂದು ಹುಸಿಮುನಿಸಿನಿಂದ ಸಂಭಾಷಣೆ ನಡೆಸದೆ ಹಾಗೆಯೇ ಹೊರಟ ಲೇಖಕರು ಸ್ವತಃ ಶ್ರೀಗಳೇ ಶಿವಪೂಜೆಗೆ ಅಪ್ಪಣೆಕೊಡಿಸಿದಾಗ, 'ಲಿಂಗಪೂಜಾಲೋಲರಾಗಿ ಲಿಂಗಾನಂದದಲ್ಲಿ ನಿಬ್ಬೆರಗಾಗಿದ್ದ ಅಣ್ಣಬಸವಣ್ಣ-ಪ್ರಭುದೇವರ ಪ್ರಸಂಗ'ವನ್ನು

ನೆಸಪ್ರಮಾಡಿಕೊಂಡದ್ದು, ಶ್ರೀ ಜಗದ್ಗುರು ನಿಜಲಿಂಗೇಶ್ವರ ಮಹಾಸ್ವಾಮಿಗಳೊಡನೆ ನಿಜಲಿಂಗಾನಂದದ ಆಧ್ಯಾತ್ಮಸುಖವನ್ನು ಅನುಭವಿಸಿ ಆನಂದಿಸಿದ ಅವಿಸ್ಮರಣೀಯ ಪ್ರಸಂಗದ ಚಿತ್ರಣ ರೋಮಾಂಚಕಾರಿ!

ಕಲೆ—ಅದರ ವ್ಯಾಖ್ಯೆ-ವ್ಯಾಪ್ತಿ-ಅದರಿಂದುಂಟಾಗುವ ಆನಂದಪ್ರಾಪ್ತಿಗಳ ಬಗೆಗೆ ಹೇಳುತ್ತ, ಸಂಗೀತ ಹುಟ್ಟಿ ಬೆಳೆದುಬಂದ ಬಗೆಯನ್ನು ವಿವರಿಸಿ, ಹದಿನೈದನೆಯ ಶತಮಾನದ ಗ್ವಾಲಿಯರ್ ಸಂಸ್ಥಾನದ ವಿಜಯ-ಜಂಗಮರೇಬ ವೀರಶೈವ ಪ್ರಖ್ಯಾತ ಸಂಗೀತಗಾರರನ್ನು ಪ್ರಸ್ತಾಪಿಸುತ್ತ, ಸಂಗೀತ ಸಾಧನೆಯಿಂದ ಶಿವಯೋಗಸಿದ್ಧಿ ಯನ್ನು ಹೊಂದಿದ ಉಭಯಗಾನವಿಶಾರದರೂ ಗಾಯಕಪರಮಗುರುವೂ ಎನಿಸಿದ ಪಂಡಿತ ಪಂಚಾಕ್ಷರಿಗವಾಯಿಗಳ ಪರಿಚಯಕ್ಕೆ ತೊಡಗಿದ್ದು, ಸಂಗೀತದ ಸತ್ವ-ಮಹತ್ವಗಳ ಕುರಿತು ಒಳ್ಳೆಯ ಹಿನ್ನೆಲೆ ಒದಗಿಸಿದ್ದು ಅತ್ಯಂತ ಅಭ್ಯಾಸಪೂರ್ಣವಾಗಿದೆ.

ಗವಾಯಿಗಳ ಜನ್ಮಭೂಮಿ ಕಾಡಶೆಟ್ಟಿಹಳ್ಳಿಗೆ ದಯಮಾಡಿಸಿದ ಶ್ರೀ ಕುಮಾರೇಶರು ಬಾಲಕ ಗದಿಗೆಯ್ಯನನ್ನು ತಮ್ಮ ಜೋಳಿಗೆಗೆ ಹಾಕಿಸಿಕೊಂಡು, ಹಿಂದುಸ್ತಾನೀ ಸಂಗೀತ ದಲ್ಲಿ ವಿಶಾರದರೆನಿಸುವಂತೆ ಮಾಡಿದ್ದು, ಮುಂದೆ ಅದೇ ಗದಿಗೆಯ್ಯ 'ಪಂಚಾಕ್ಷರಿ' ಎಂಬ ಅಭಿದಾನ ಹೊತ್ತು ಗದುಗಿನಲ್ಲಿ 'ವೀರೇಶ್ವರ ಪುಣ್ಯಾಶ್ರಮ' ಸ್ಥಾಪಿಸಿ, ಕುರುಡಕುಂಟ ಮಕ್ಕಳಿಗೆ ಪ್ರಜ್ಞಾಚಕ್ಷುವನ್ನು ಕರುಣಿಸಿ ಸಮಾಜದಲ್ಲಿ ಸ್ವತಂತ್ರವಾಗಿ ಬಾಳುವ ಆತ್ಮವಿಶ್ವಾಸ ವನ್ನು ತುಂಬಿದ್ದು, ಅದರ ಬೆಳವಣಿಗೆಗೆ ಅಹೋರಾತ್ರಿ ಶ್ರಮಿಸಿದ್ದು—ಮೊದಲಾದ ವಿವರ ಗಳು ಇಲ್ಲಿ ಚೆನ್ನಾಗಿ ಮೂಡಿಬಂದಿವೆ.

ಶಿವಯೋಗಮಂದಿರದಲ್ಲಿ ನೆಲೆನಿಂತು, ಕುಮಾರೇಶನ ಕೃಪಾಕಟಾಕ್ಷಕ್ಕೊಳಗಾಗಿ ಸಮೃದ್ಧವಾದ ಸಾಹಿತ್ಯವನ್ನು ಸೃಷ್ಟಿಸಿ, ಅನ್ವರ್ಥಕವಾಗಿ ಸಾಹಿತ್ಯ ಶಿವಯೋಗಿ ಗಳೆನಿಸಿದ ಜಚನಿಯವರು ಲೇಖನಕಾರ್ಯದಲ್ಲೇ ಕಾಯಕದ ಕೈಲಾಸ ಕಂಡವರು; ಲೌಕಿಕ ಪಾರಮಾರ್ಥಿಕ ಗುರುಗಳೆನಿಸಿ ಅವೆರಡನ್ನೂ ಜಾಣತನದಿಂದ ಒಂದುಗೂಡಿಸಿದ ನೈಪುಣ್ಯ ವನ್ನು ಸಾಹಿತ್ಯಸೃಷ್ಟಿಯಲ್ಲಿ ಕಂಡರಿಸಿದವರು. ಕನ್ನಡಿಗರಿಗೆ ನೂರಾರು ಕೃತಿರತ್ನಗಳನ್ನಿತ್ತು ಕನ್ನಡಮ್ಮನ ಮುಡಿಗೆ ಹೂವು ತಂದವರೆಂಬುದು 'ಕಾರಣಿಕ ಕುಮಾರಯೋಗಿಯ ಕುಮಾರ-ಸಾಹಿತ್ಯಯೋಗಿ' ಎಂಬ ಲೇಖನದಲ್ಲಿ ಚಿತ್ರಿತವಾಗಿದೆ.

ಸಹಜಾಚರಣೆಯ ನೈಜ ಜಂಗಮತ್ವವನ್ನು ಅಳವಡಿಸಿಕೊಂಡ ಧಾರವಾಡ ಮುರುಘಾಮಠಾಧ್ಯಕ್ಷರಾದ ಶ್ರೀ ಮಹಾಂತಪ್ಪಗಳ ಬಗೆಗೆ ಬರೆದ ಲೇಖನ,ವೀರಶೈವಧರ್ಮ ಪರಂಪರೆಯಲ್ಲಿ ಘನಸ್ಥಾನಹೊಂದಿದ-ಅಷ್ಟಾವರಣದ ಅಧಿದೇವತೆಯೆನಿಸಿದ ಜಂಗಮದ ಬಗೆಗೆ ತುಂಬ ಚೆನ್ನಾಗಿ ವ್ಯಾಖ್ಯಾನಿಸುತ್ತದೆ. ಭವರೋಗನಿವಾರಣೆಯಲ್ಲಿ ಶಸ್ತ್ರವೈದ್ಯ ನೆನಿಸುವ, ಪರವಸ್ತುವಿನ ಪ್ರತ್ಯಕ್ಷಸ್ವರೂಪಿಯಾದ ಜಂಗಮ, ಲಿಂಗಾಂಗಸಾಮರಸ್ಯವೆನಿಸಿದ ಷಟ್‌ಸ್ಥಲವನ್ನು ಬೋಧಿಸುವ ಅಧಿಕಾರಿ. ಇಂಥ ಅನುಪಮವೂ ಘನವೂ ಆದ ಜಂಗಮತ್ವ ವನ್ನು ನೈಜವಾಗಿ ಅಳವಡಿಸಿಕೊಂಡು ನಿತ್ಯಾಚರಣೆಯ ಮೂಲಕ ಅಗ್ಗಳಿಕೆಗೆ ಪಾತ್ರರಾದು

ದಲ್ಲದೆ ಸರಳ ಸಾಕಾರಮೂರ್ತಿಗಳೆನಿಸಿ, ತಮ್ಮ ಪೂಜ್ಯ ಗುರುಗಳಾದ ಮೃತ್ಯುಂಜಯಪ್ಪ ಗಳವರ ಆದರ್ಶಗಳನ್ನು ನಿಷ್ಠೆಯಿಂದ ಅನುಸರಿಸುತ್ತ ಶ್ರೀ ಮಠದ ಪ್ರಗತಿಯನ್ನು ಉತ್ತರೋತ್ತರವಾಗಿ ಸಾಧಿಸಿ ಮುಂದಿನವರಿಗೆ ಮಾರ್ಗದರ್ಶಕರೆನಿಸಿದ್ದಾರೆ; ಶಿಕ್ಷಣ ಹಾಗೂ ಧರ್ಮ ತತ್ವಗಳ ಪ್ರಸಾರ ಕಾರ್ಯದಿಂದ ಆದರ್ಶಪನಿಸಿದ್ದಾರೆ.

ಭಕ್ತಿ ಜ್ಞಾನ ವೈರಾಗ್ಯವೆಂಬ ತ್ರಿವಿಧ ಗುಣಗಳನ್ನು ಹೊಂದಿದವ ಜಂಗಮನೆನಿಸಿದರೆ, ಭಕ್ತಿಯ ವಿಶೇಷತೆಯಿಂದ ಸ್ವಯಜಂಗಮನೆನಿಸುತ್ತಾನೆಂದು ಹೇಳುತ್ತ ಸ್ವಯಜಂಗಮದ ಗುಣಲಕ್ಷಣಗಳನ್ನೆಲ್ಲ 'ಶಿರ್ಸಿಯ ಸ್ವಯಜಂಗಮ' ಎಂಬ ಲೇಖನದಲ್ಲಿ ವಿಶೇಷವಾಗಿ ವಿವರಿಸಲಾಗಿದೆ. ಅನೇಕ ಧರ್ಮಗಳ ಸಂಗಮ ಸ್ಥಾನವಾದ ಶಿರ್ಸಿಯಲ್ಲಿ ವೀರಶೈವರ ಸಂಖ್ಯೆ ಹೆಚ್ಚಿಲ್ಲದಿದ್ದರೂ ಕರ್ತವ್ಯನಿಷ್ಠರೂ, ಆಚಾರ ಸಂಪನ್ನರೂ, ವಿಚಾರ ಪರರೂ ಎನಿಸಿ ತಮ್ಮತನವನ್ನು ಳಿಸಿಕೊಂಡು ಬಂದಿರುವ ಸ್ವಯಜಂಗಮರು ಗುರುಸಿದ್ಧ ಸ್ವಾಮಿಗಳು. ಅವರು ಎಪ್ಪತ್ತರ ಗಡಿ ದಾಟಿದ್ದರೂ ಇಪ್ಪತ್ತರ ಉತ್ಸಾಹಿಗಳು.

ಮಾಸಿಕ ಶಿವಾನುಭವಗಳನ್ನು ನಡೆಸುವ ಮೂಲಕ ಸಮಾಜದ ಜನರ ಜೀವನದಲ್ಲಿ ಧಾರ್ಮಿಕ-ಸಾಮಾಜಿಕ-ಸಾಂಸ್ಕೃತಿಕ ಎಚ್ಚರಿಕೆಯನ್ನು ಮೂಡಿಸಿ, ಪ್ರಗತಿಗೆ ಕಾರಣ ರಾಗಿರುವ ಗುಳೇದಗುಡ್ಡದ ಪೂಜ್ಯ ಶ್ರೀ ನೀಲಕಂಠ ಸ್ವಾಮಿಗಳು ಎಂಬತ್ತರ ವಯೋವೃದ್ಧರು. ತಮ್ಮ ನಕ್ಕು ನಗಿಸುವ ಅಪರೂಪದ ಕಲೆಯಿಂದ ನಿಜ ಆನಂದ ಮೂರ್ತಿಯೆನಿಸಿದವರು.

ಹಾನಗಲ್ಲ ಶ್ರೀಗಳು ಸ್ಥಾಪಿಸಲು ಸಂಕಲ್ಪಿಸಿದ ಶಿವಯೋಗ ಮಂದಿರಕ್ಕೆ ಸ್ಥಾನವನ್ನು ನಿರ್ದೇಶಿಸಿದ ಪರಮ ತಪಸ್ವಿ ಇಲಕಲ್ಲ ಶ್ರೀ ವಿಜಯ ಮಹಾಂತ ಸ್ವಾಮಿಗಳ ಪರಂಪರೆ ಯಲ್ಲಿ ಹತ್ತೊಂಬತ್ತನೆಯವರಾಗಿರುವ ಶ್ರೀ ಮಹಾಂತ ಸ್ವಾಮಿಗಳು ಶ್ರೀ ಗುರು ಕುಮಾರೇಶರ ಮಹಾ ಕೃಪೆಗೆ ಪಾತ್ರರಾಗಿ ಶಿವಯೋಗ ಮಂದಿರದಲ್ಲಿದ್ದು ಕನ್ನಡ ಸಂಸ್ಕೃತ ಭಾಷಾಧ್ಯಯನದೊಂದಿಗೆ ಶಿವಯೋಗವನ್ನೂ ಸಾಧಿಸಿದವರು. ಶ್ರೀ ಮಹಾಂತ ಶಿವಯೋಗಿ ಗಳು ಇಲಕಲ್ಲ ಮಠಾಧ್ಯಕ್ಷರಾಗಿ ಹನ್ನೆರಡು ಸಂವತ್ಸರಗಳನ್ನು ಪೂರೈಸಿದ್ದನ್ನು ಪ್ರಸ್ತಾಪಿಸುತ್ತ, ಪ್ರಸ್ತುತ ಅವಧಿಯಲ್ಲಿ ಸಮಾಜಕ್ಕೆ ಅವರು ಕೊಟ್ಟ ಕೊಡುಗೆ ಯೇನೆಂಬುದನ್ನು ಸಿಂಹಾವಲೋಕನ ಕ್ರಮದಲ್ಲಿ ತಿಳಿಸುವುದೇ ಈ ಲೇಖನದ ಉದ್ದೇಶ.

ಪ್ರಭಾವಶಾಲಿ ಮಠದ ಅಧಿಕಾರಿಗಳಾಗಿ, ಶಾಖಾಮಠಗಳ ಜೀರ್ಣೋದ್ಧಾರ ಗೈದು ವಿದ್ಯಾಸಂಸ್ಥೆಗಳ ಸ್ಥಾಪನೆಯ ಮೂಲಕ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿ, ಸಾಹಿತಿ-ಕಲಾವಿದರನ್ನು ಆಹ್ವಾನಿಸಿ ಅವರಿಂದ ಉಪನ್ಯಾಸಗಳನ್ನೇರ್ಪಡಿಸಿ, ಅವರನ್ನು ಸತ್ಕರಿಸಿ, ಅವರಿಂದ ಶರಣಸಾಹಿತ್ಯ ಕುರಿತು ಬರೆಸಿ ಪ್ರಕಟಿಸುವ ಮಹತ್ಕಾರ್ಯ ವನ್ನೆಸಗಿದವರು.

ಜಂಗಮ ಸಂಸ್ಕಾರದ ಕಾಲಕ್ಕೆ ಶ್ರೀನಿರಾಭಾರಿ ಗುರುಗಳಿಂದ ಪಡೆದ ಜೋಳಿಗೆಯ ಮೂಲ ಉದ್ದೇಶ ಮರೆಯಾಗಿ, ಬೇಡುವುದೇ ನಮ್ಮ ಜನ್ಮಸಿದ್ಧ ಹಕ್ಕೆಂದು ಭಾವಿಸಿರುವ

ಜಂಗಮರನ್ನು ಜಾಗ್ರತಗೊಳಿಸಿ, ನಿಜವಾದ ಜಂಗಮನು ದುರ್ಗುಣ ದುಶ್ಚಟಗಳೆಂಬ ಮೃತ್ಯುವಿನಿಂದ ಜನರನ್ನು ಪಾರು ಮಾಡಿ, ಸುಖ ಜೀವನದ ಸನ್ಮಾರ್ಗ ತೋರುವುದನ್ನೇ ತನ್ನ ಪರಮ ಗುರಿಯೆಂದು ಭಾವಿಸಬೇಕೆಂದು ಜಂಗಮದ ಅರ್ಥ ಸಾರ್ಥಕತೆಗಳನ್ನು ಸಮರ್ಥವಾಗಿ ತಿಳಿಯಪಡಿಸಿದವರು. ತಮ್ಮದೇ ಆದ ವೈಶಿಷ್ಟ್ಯಪೂರ್ಣ 'ಮಹಾಂತ ಜೋಳಿಗೆ'ಯ ಮೂಲಕ ಸಾಮಾಜಿಕ ಅವನತಿಯನ್ನು ತಡೆಗಟ್ಟಿದವರು: ಶ್ರೀ ಗುರು ಕುಮಾರೇಶನ ಸಮಾಜೋದ್ಧಾರದ ಕನಸನ್ನು ನನಸಾಗಿಸಿದವರು.

ಈ ಹನ್ನೊಂದು ಜನ ಮಹಾ ಪುರುಷರ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾಗಿ, ತಾವು ಅವರ ಬಗೆಗೆ ತಾಳಿದ ಗೌರವಯುತ ನಿಲುವು, ಅದನ್ನು ತಿಳಿಯಪಡಿಸುವ ಲೇಖಕರ ಒಲವು ಇಲ್ಲಿನ ಲೇಖನಗಳಲ್ಲಿ ನಿಚ್ಚಳವಾಗಿ ಗುರುತಿಸುವಂತಿದೆ. ಇಲ್ಲಿನ ಪೂಜ್ಯ ಹಿರಿಯರ ಜೀವನ ಸಾಧನೆಗಳು ಅನುಕರಣೀಯ ಆದರ್ಶಗಳಾಗಿವೆ. ಅಂತೆಯೇ ಇವು ಕೇವಲ ವ್ಯಕ್ತಿಚಿತ್ರಗಳಾಗದೆ ಸ್ವಾನುಭವದ ಹಿನ್ನೆಲೆಯಲ್ಲಿ ಮೂಡಿ ಬಂದು ಸಜೀವ ಕಳೆಯಿಂದ ಕಂಗೊಳಿಸುತ್ತಿವೆ.

ಸಾಮಾನ್ಯವಾಗಿ ಎಲ್ಲ ವ್ಯಕ್ತಿ ಚಿತ್ರಗಳಲ್ಲೂ ಬರುವ ಜಂಗಮದ ಬಗೆಗಿನ ಅರ್ಥ–ವ್ಯಾಖ್ಯೆ–ವಿವರಣೆ–ವಿಶ್ಲೇಷಣೆ–ಆ ಕುರಿತ ಶ್ರೀಗಳಿಗಿರುವ ಅಭ್ಯಾಸ ಪೂರ್ಣ ಪಾಂಡಿತ್ಯವನ್ನಷ್ಟೇ ಅಲ್ಲ, ಗೌರವಾದರಗಳನ್ನೂ ಅಭಿವ್ಯಕ್ತಪಡಿಸುತ್ತದೆ ಮೈಲಾರ ಬಸವಲಿಂಗ ಶರಣರ ಕೃತಿಯಲ್ಲಿ ಬರುವ ಪ್ರಸ್ತುತ ಜಂಗಮಾದಿಗಳ ಬಗೆಗಿನ ವಿಷಯ–ವ್ಯಾಖ್ಯೆ ಮೊದಲಾದ ವಿವರಗಳನ್ನು ಸಾಧಾರವಾಗಿ ಉಲ್ಲೇಖಿಸಿ ಪ್ರತಿಪಾದಿಸುವಲ್ಲಿ ಲೇಖಕರು ಪಟ್ಟ ಪರಿಶ್ರಮದ ಮನದಟ್ಟಾಗುತ್ತದೆ. ಹೀಗೆ ಹನ್ನೊಂದು ಜನ ವಿಭೂತಿ ಪುರುಷರ ವ್ಯಕ್ತಿ ಚಿತ್ರಗಳು ಸಂಕ್ಷಿಪ್ತವಾದರೂ ಸೊಗಸಾಗಿ ಚಿತ್ರಣಗೊಂಡಿವೆ. "ಕರಿಯನ್ನು ಕನ್ನಡಿಯಲ್ಲಿ ದರ್ಶಿಸುವ" ಶ್ರೀಗಳ ಬರವಣಿಗೆಯ ಸರಳ ಹಾಗೂ ಸುಭಗ ಶೈಲಿ, ನಿರೂಪಣೆಯ ಜಾಣ್ಮೆ ಮೆಚ್ಚುವಂತಿದೆ.

ಭಕ್ತಿ ಜ್ಞಾನ ವೈರಾಗ್ಯಗಳ ಪ್ರತಿರೂಪರೂ, ಆರೈದು ನಡೆದು ಆರೈಯಲು ಹಚ್ಚಿದ ಪೂಜ್ಯರೂ ಬಸವಾದಿ ಪ್ರಮಥರು ಕಟ್ಟಿ ಬೆಳೆಸಿದ ವೀರಶೈವ ಧರ್ಮದ ಭವ್ಯ ಕಟ್ಟಡಕ್ಕೆ ಶಿವಯೋಗ ಮಂದಿರದ ಸ್ಥಾಪನೆಯ ಮೂಲಕ ದಿವ್ಯ ಕಳಶವಿಡುವ ಮಹಾನ್ ಕಾರ್ಯಗೈದವರೂ ಹರಿದು ಹಂಚಿ ಹೋದ ವೀರಶೈವ ಸಮಾಜವನ್ನು ಒಂದುಗೂಡಿಸುವಲ್ಲಿ ಅಹರ್ನಿಶಿ ಶ್ರಮಿಸಿದವರೂ ಆದ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳಿಗೆ ಈ ಕೃತಿ ಪುಷ್ಪ ಅರ್ಪಿತವಾಗಿರುವುದು ಅತ್ಯಂತ ಔಚಿತ್ಯ ಪೂರ್ಣವಾಗಿದೆ. ಅಂತೆಯೇ ಎಲ್ಲ ಲೇಖನಗಳಲ್ಲಿ ಸಾಧ್ಯವಿದ್ದೆಡೆಯಲ್ಲೆಲ್ಲ ಶ್ರೀ ಹಾನಗಲ್ಲೇಶನನ್ನು ಪ್ರಸ್ತಾಪಿಸಿ, ಅವರ ಬಗೆಗೆ ತಮಗಿರುವ ಶ್ರದ್ಧೆ–ನಿಷ್ಠೆ–ಭಕ್ತಿ ಗೌರವಗಳನ್ನು ಪ್ರಕಟಿಸಿದ್ದಾರೆ.

ಒಟ್ಟಿನಲ್ಲಿ 'ಮಹಾತ್ಮರನ್ನು ನೆನೆವುದೇ ಘನಮುಕ್ತಿಪದ'ವೆಂಬಂತೆ ಅಂತಹ ಮಹಾಂತ

ರನ್ನು ನೆನೆವ, ಅವರ ಬಗೆಗೆ ಅರಿಯುವ, ತನ್ಮೂಲಕ ನಮ್ಮ ಜೀವನದ ಮಣಿಹವನ್ನು ಸಾಧಿಸುವ ಹಂಬಲವನ್ನು ಮೂಡಿಸುವ ಶ್ರೀಗಳ ಪ್ರಯತ್ನ ಫಲಪ್ರದವಾಗಿದೆಯೆಂದೇ ಹೇಳಬೇಕು. ತಮ್ಮ ಸಮಕಾಲೀನ ಶ್ರೀಗಳನ್ನು ಕಂಡ ದೃಷ್ಟಿಕೋನದೊಂದಿಗೆ ಹಿಂದಿನ ಪೂಜ್ಯರನ್ನು ಅರಿತ ಬಗೆಯನ್ನೂ ಮೇಳವಿಸಿ, ಆಗಾಗ್ಯೆ ಬರೆದ ವ್ಯಕ್ತಿ ಚಿತ್ರಗಳನ್ನು ಈ ಕೃತಿ ಸೂತ್ರದಲ್ಲಿ ಕಟ್ಟಿಕೊಡುವ ಶ್ರೀಗಳ ಕಾರ್ಯ ಸ್ತುತ್ಯವಾಗಿದೆ.

ಮೃಡಗಿರಿಯ ಕರ್ತೃ

ಶ್ರೀ ಜಗದ್ಗುರು ಅನ್ನದಾನೀಶ್ವರ ಶಿವಯೋಗಿಗಳವರ 'ಅಷ್ಟೋತ್ತರ ಶತನಾಮಾವಳಿ'ಯ ಸಮೀಕ್ಷೆ

— ಪ್ರೊ. ಕು. ಅಕ್ಕಮಹಾದೇವಿ ವ್ಹಿ. ಹಿರೇಮಠ

ಮೃಡಗಿರಿಯ ಶ್ರೀ ಅನ್ನದಾನೀಶ್ವರರ ಮಹಾ ಸಂಸ್ಥಾನ ಮಠವು ತನ್ನದೇ ಆದ ಜ್ವಲಂತ ಪರಂಪರೆಯನ್ನು ಹೊಂದಿದ್ದು ಒಂದು ವಿಶಿಷ್ಟ ರೀತಿಯಲ್ಲಿ ಬೆಳೆದು ಬಂದಿದೆ. ಮಠಾಧಿಪತಿಗಳ ಅಥವಾ ಸ್ವಾಮಿಗಳ ಜೀವನ ಕೇವಲ ಸನ್ಯಾಸ ಜೀವನವಲ್ಲ. ಅದೊಂದು ಮಹಾ ಸಾಧನೆ. ಶ್ರೀ ಮಠದ ಜಗದ್ಗುರುಗಳವರು ಸಮಾಜದ ಸರ್ವಾಂಗೀಣ ಪ್ರಗತಿಗಾಗಿ ನಾಡಿನ ಭಕ್ತರ ಸಮಗ್ರ ಕಲ್ಯಾಣಕ್ಕಾಗಿ ತಮ್ಮ ಲಿಂಗ ಪೂಜಾಫಲ ತಪಃ ಫಲ ಹಾಗೂ ತಮ್ಮ ಜ್ಞಾನ ಭಂಡಾರವನ್ನು ವಿನಿಯೋಗಿಸುತ್ತ ಬಂದಿದ್ದಾರೆ. ಇಂತಹ ಸಾಧನೆಯ ಹಾದಿಯಲ್ಲಿ ಶ್ರೀ ಅನ್ನದಾನೀಶ್ವರರ ಮಠವು ಭಕ್ತ ವೃಂದಕ್ಕೆ ಇಡೀ ಸಮಾಜಕ್ಕೆ ಮಾರ್ಗದರ್ಶಕವಾಗಿ ಬೆಳೆದು ಬಂದಿದೆ. ಅಂತೆಯೇ ಶ್ರೀ ಮಠವು ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಂಡು ಅದಕ್ಕನುಸಾರವಾಗಿ ಭಕ್ತರಿಗೆ, ಸಮಾಜಕ್ಕೆ ಮಾರ್ಗದರ್ಶಕವಾಗಿ ಮುಂದುವರೆಯುತ್ತ ನಡೆದಿದೆ. ಈ ಭಾಗದಲ್ಲಿ ಧಾರ್ಮಿಕ, ಆಧ್ಯಾತ್ಮಿಕ, ಐತಿಹಾಸಿಕ, ಸಂಶೋಧಕ, ಶೈಕ್ಷಣಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಪರಂಪರೆಯನ್ನು ಜಗದ್ಗುರು ಅನ್ನದಾನೀಶ್ವರರು ಬೆಳೆಸಿಕೊಂಡು ಹೋಗುತ್ತಿರುವದು ಬಹಳ ಪ್ರಶಂಸನೀಯ.

ಹೀಗೆ ವಿವಿಧ ಕ್ಷೇತ್ರಗಳಿಗೆ ಅಪಾರ ಕೊಡುಗೆಯನ್ನು ನೀಡಿದ ಶ್ರೀಮಠವು ಅದರಲ್ಲೂ ಸಾಹಿತ್ಯ ಕ್ಷೇತ್ರಕ್ಕೆ ಅನುಪಮ ಕಾಣಿಕೆ ನೀಡಿದೆ. ಪ್ರಸ್ತುತ ಮಹಾಸ್ವಾಮಿಗಳವರು ಅಪಾರ ಪಾಂಡಿತ್ಯ ಗಳಿಸಿದ್ದಾರೆ. ಪೂಜ್ಯರ ಜ್ಞಾನ ಶಿವಯೋಗ ಮಂದಿರದಿಂದ ಬೆಳೆಯುತ್ತ, ಕಾಶಿಯಲ್ಲಿ ಪಕ್ವಗೊಂಡು ವೀರಶೈವ ದಾರ್ಶನಿಕ ಕ್ಷೇತ್ರದತ್ತ ಸಮೃದ್ಧಿಯಾಗಿ ಬೆಳೆದು ಬಂದಿದೆ. ಶ್ರೀಗಳವರು ರಚಿಸಿದ ಭಾವ ಸೌರಭ, ವಚನ ವಲ್ಲರಿ, ಅಷ್ಟೋತ್ತರ ಶತ ನಾಮಾವಳಿಗಳಂತಹ ಪ್ರಾರ್ಥನಾ ಕೃತಿಗಳಿಂದ ಹಿಡಿದು ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯಲ್ಲಿ "ವೀರಶೈವ ದಾರ್ಶನಿಕ ಸಿದ್ಧಾಂತ"ದಂತಹ ದಾರ್ಶನಿಕ ಗ್ರಂಥಗಳನ್ನು ಪೂಜ್ಯರು ಶ್ರೀಮಠದ ಕೊಡುಗೆಯಾಗಿ ಸಮಾಜಕ್ಕೆ ನೀಡಿದ್ದಾರೆ.

ವೀರಶೈವ ಸಾಹಿತ್ಯದಲ್ಲಿ 'ನಾಮಾವಳಿ' ಸಾಹಿತ್ಯವೂ ಒಂದಾಗಿದೆ. ಅಂತೆಯೇ ಶ್ರೀ ಸನ್ನಿಧಿಯವರು ರಚಿಸಿದ ಅನೇಕ ಮಹಾನ್ ಗ್ರಂಥಗಳಲ್ಲಿ "ಶ್ರೀ ಕರ್ತೃ ಜಗದ್ಗುರು

ಅನ್ನದಾನೀಶ್ವರ ಶಿವಯೋಗಿಗಳವರ ಅಷ್ಟೋತ್ತರ ಶತನಾಮಾವಳಿ" ಎಂಬ ಕೃತಿಯು ಮೂಲ ಕರ್ತೃ ಶ್ರೀ ಜಗದ್ಗುರು ಅನ್ನದಾನೀಶ್ವರ ಶಿವಯೋಗಿಗಳವರ ಲೀಲೆ, ಚರಿತ್ರೆ, ವ್ಯಕ್ತಿತ್ವ, ಶ್ರೀ ಮಠದ ವೈಶಿಷ್ಟ್ಯಪೂರ್ಣ ಪರಂಪರೆಯನ್ನು ಒಳಗೊಂಡ ಚಿಕ್ಕ ಕೃತಿಯಾಗಿದೆ. ಎಲ್ಲವನ್ನೂ ಪೂಜ್ಯರು ಈ ಕೃತಿಯಲ್ಲಿ ಸವಿಸ್ತಾರವಾಗಿ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಒಂದೆಡೆ ಮಹಾನುಭಾವಿಗಳು "ಯತ್ರ ಗಾಯಂತಿ ಮದ್ಭಕ್ತಾಃ ತತ್ರ ತಿಷ್ಠಾಮಿ ಪಾರ್ವತಿ!" ಎಲೈ ಪಾರ್ವತಿಯೇ ಎಲ್ಲಿ ನನ್ನ ಭಕ್ತರು ಸ್ತುತಿಸಿ ಹಾಡುವರೋ ಅಲ್ಲಿಯೇ ನಾನಿರುತ್ತೇನೆ ಎಂಬುದಾಗಿ ಶಿವನು ಶಿವಾಗಮದಲ್ಲಿ ಹೇಳಿರುವುದನ್ನು ಉಲ್ಲೇಖಿಸಿದ್ದಾರೆ. ಅದರಂತೆ ಕಲಿಯುಗದಲ್ಲಿ ನಾಮಸಂಕೀರ್ತನೆಯಿಂದಲೇ ಮುಕ್ತಿದೊರೆಯುವುದೆಂದೂ ದಾಸವಾಣಿ ಹೇಳಿದೆ. ಆದರೆ ಎಂತಹ ಪಾಪಿಯಾಗಿದ್ದರೂ ಕೂಡ ಭಗವಂತನ ನಾಮಸ್ಮರಣೆಯಿಂದ ಪಾವನವಾಗುವನೆಂದು ಶರಣವಾಣಿ ಸಾರಿದೆ. ಅಷ್ಟೆ ಅಲ್ಲದೇ ಏಳೇಳು ಜನ್ಮದಲ್ಲಿ ಘಟಿಸಿದ ಪಾಪವು ಶಿವನಾಮ ಸ್ಮರಣೆಯಿಂದ ನಾಶವಾಗುವುದೆಂದು ಶ್ರೀವಾಣಿ ನುಡಿದಿದೆ. ಸರ್ವಾಂತರ್ಯಾಮಿ ಶಿವನು ನಿರಾಕಾರ, ನಿರ್ಗುಣನಾದರೂ ಅನಂತ ನಾಮಗಳಿಂದ ಶೋಭಿಸಿದ್ದಾನೆ.

ಗುರುಬ್ರಹ್ಮಾ, ಗುರುವಿಷ್ಣು, ಗುರುದೇವೋ ಮಹೇಶ್ವರಃ। ಗುರುದೇವನು ಪ್ರತ್ಯಕ್ಷ ಬ್ರಹ್ಮ, ವಿಷ್ಣು, ಮಹೇಶ್ವರನೆನಿಸಿ ಸಾಕಾರಮೂರ್ತಿಯೂ, ಲೀಲಾ ಪುರುಷನೂ ಆಗಿದ್ದಾನೆ. ಗುರುಕರುಣೆಯು ಕೂಡ 'ಅವರವರ ಭಾವಕ್ಕೆ ಅವರವರ ಭಕ್ತಿಗೆ ಅವರವರ ತೆರನಾಗಿ ಇರುತಿಹನು ಶಿವಯೋಗಿ' ಎನ್ನುವಂತೆ ಯಾರು ಗುರುವನ್ನು ಅನನ್ಯ ಭಕ್ತಿ, ಭಾವನೆಗಳಿಂದ ಸ್ಮರಿಸುವರೋ ಅಂಥವರ ಭಕ್ತಿಗೆ ವರವನ್ನು ಕರುಣಿಸುವನು. ನಾಮಸ್ಮರಣೆಯು ಕಾಲಕ್ಕೆ ಸದ್ಗುರುವಿನ ಲೀಲಾವಿಲಾಸದ ಅನುಭವ ಪಡೆದ ಭಕ್ತನಿಗೆ ಅತ್ಯಂತ ಆನಂದವೆನಿಸುತ್ತದೆ. ನಾಮದ ಬಲವೊಂದಿದ್ದರೆ ಶಿವನ ಹಂಗೂ ಬೇಡ, ನಂಬಿ ಕರೆದರೆ ಓ ಎಂಬನು ಶಿವನು ಎಂಬ ಮಾತುಗಳು ನಿಜಕ್ಕೂ ಸತ್ಯ ಹಾಗೂ ಮಾರ್ಮಿಕವಾಗಿವೆ. ಆದ್ದರಿಂದಲೇ ಈ ಕಲಿಕಾಲದಲ್ಲಿ ನಾಮ ಸಂಕೀರ್ತನೆಯೇ ಬಹುದೊಡ್ಡ ಆಸರವೆನಿಸಿದೆ. ಸತ್ಯಶುದ್ಧವಾದ ಮನಸ್ಸಿನಿಂದ, ನಿಷ್ಠೆಯಿಂದ ತಪ್ಪದೇ ಪರಮಗುರುವಿನ ನಾಮಸ್ಮರಣೆ ಮಾಡಿದರೆ ಭವಬಂಧನ, ಭವಪಾಶಗಳು ಮುಕ್ತವಾಗುವುದರಲ್ಲಿ ಏನೂ ಸಂಶಯವಿಲ್ಲ.

ಅಂತೆಯೇ ಪ್ರಸ್ತುತ ಕರ್ತೃ ಶ್ರೀ ಜಗದ್ಗುರು ಅನ್ನದಾನೀಶ್ವರ ಶಿವಯೋಗಿಗಳವರ ನಾಮಾವಳಿಯು ಶ್ರೀ ಮಠದ ಚರಿತ್ರೆ, ಇತಿಹಾಸ ಅವರ ಪವಾಡ ಹಾಗೂ ತತ್ವಗಳನ್ನು ಪರಿಚಯಿಸಿಕೊಡುತ್ತದೆ. ಮೃಡಗಿರಿಯ ಮಹಾಸಂಸ್ಥಾನ ಮಠದ ಪ್ರಪ್ರಥಮ ಗುರುಗಳಾದ ಕರ್ತೃ ಶ್ರೀ ಜಗದ್ಗುರು ಅನ್ನದಾನೀಶ್ವರರು ಸಾಕ್ಷಾತ್ ಪರಶಿವನೇ. ಜಂಗಮ ಸ್ವರೂಪಿಗಳೂ, ಮಹಾತಪಸ್ವಿಗಳೂ, ಪವಾಡ ಪುರುಷರೂ (ಲೀಲಾ ಪುರುಷರೂ) ಆಗಿದ್ದಾರೆ. ಅಷ್ಟೇ ಅಲ್ಲದೇ ಅವರು ಜ್ಞಾನನಿಧಿ ಚನ್ನಬಸವರಿಂದ ಅನುಗ್ರಹಿಸಲ್ಪಟ್ಟವರು.

ಅವರ ನಾಮಸಂಕೀರ್ತನೆಯಲ್ಲಿ ಶ್ರೀಗಳವರ ಕರ್ತೃತ್ವ ಶಕ್ತಿ, ದಾಸೋಹಂಭಾವ, ಅನಂತ ಲೀಲೆಗಳ ವಿಚಾರವಷ್ಟೇ ಅಲ್ಲದೇ ಐತಿಹಾಸಿಕ ಸಂಗತಿಯೂ ವೇದ್ಯವಾಗುತ್ತದೆ.

ಮೃಡಗಿರಿಯ ಮಹಾಪೀಠವು ಅನಾದಿ ನಿರಂಜನ ಜಂಗಮ ಪರಂಪರೆಯಿಂದ ಮುನ್ನಡೆದು ಅಲ್ಲಮಪ್ರಭುವಿನ ಪ್ರತಿಸ್ವರೂಪರಾಗಿ ಪೂಜ್ಯರು ಬಂದಿದ್ದಾರೆಂಬುದನ್ನು

ಓಂ ಅನಾದಿ ನಿರಂಜನ ಪರಂಪರಾಗತಾಯ ನಮಃ
ಓಂ ಅಭಿನವಾಲ್ಲಮಾಯ ನಮಃ
ಓಂ ಪ್ರಭುಪೀಠ ಪರಂಪರಾಗತಾಯ ನಮಃ

ಎಂಬ ನಾಮಾವಳಿಗಳಿಂದ ತಿಳಿಯಬಹುದಾಗಿದೆ.

ಓಂ ಅನ್ನಗಿರಿ ಮಠಸ್ಥಾಪಕಾಯ ನಮಃ
ಓಂ ಅನ್ನಗಿರಿ ಪತಿಪೂಜಿತ ಪಾದಪದ್ಮಾಯ ನಮಃ
ಓಂ ಕನಕ ನಾಯಕ ಪೂಜಿತ ಪಾದಾರವಿಂದಾಯ ನಮಃ
ಓಂ ವಡ್ಡಟ್ಟಿಮಠ ಸ್ಥಾಪಕಾಯ ನಮಃ
ಓಂ ಮೃಡಗಿರಿ ಪೀಠಾಧ್ಯಕ್ಷಾಯ ನಮಃ

ಈ ಮುಂತಾದ ನಾಮಾವಳಿಗಳು ಜಗದ್ಗುರುಗಳ ಶ್ರೀ ಪೀಠದ ಸ್ಥಾಪನೆ ಹಾಗೂ ಅವರು ಕೈಕೊಂಡ ಕಾರ್ಯಕ್ಷೇತ್ರವೇನೆಂಬುದನ್ನು ತಿಳಿಸುತ್ತವೆ. ಕರ್ತೃ ಜಗದ್ಗುರುಗಳವರು ಪೂಜಾ ನಿಷ್ಠರೂ, ಆಚಾರ ಪರಿಪೂರ್ಣರೂ, ಅಘಟಿತ ಘಟನಾ ಚರಿತರೂ, ತ್ರಿಕಾಲ ಜ್ಞಾನಿಗಳೂ, ಶಿವಯೋಗ ಸಂಪನ್ನರೂ, ಅವಿಶ್ರಾಂತರೂ, ವೀರಶೈವ ಸಿದ್ಧಾಂತ ಪ್ರವೀಣರೂ, ಪರಮತ ಸಹಿಷ್ಣುಗಳೂ ಆಗಿದ್ದರಲ್ಲದೇ ದೀನಬಂಧುಗಳು ಆರ್ತಜನ ರಕ್ಷಕರು ಆಗಿ ಭಕ್ತರ ಉದ್ಧಾರಕ್ಕಾಗಿ ಸತತವಾಗಿ ಶ್ರಮಿಸುತ್ತ ಅಜ್ಞಾನ ನಿವಾರಕರೂ ಆಗಿದ್ದರೆಂಬುದು

ಓಂ ಅಜ್ಞಾನ ನಿವಾರಕಾಯ ನಮಃ
ಓಂ ಅವಿಶ್ರಾಂತ ಶಿವಪೂಜನ ಪರಾಯ ನಮಃ
ಓಂ ಅನನ್ಯ ಭಕ್ತೋದ್ಧಾರಕಾಯ ನಮಃ
ಓಂ ಆಚಾರ ಪರಿಪೂರ್ಣಾಯ ನಮಃ
ಓಂ ಆಚಾರಾದಿ ಲಿಂಗಮಯಾಯ ನಮಃ
ಓಂ ಆರ್ತಜನ ಪೋಷಕಾಯ ನಮಃ
ಓಂ ಪರಹಿತ ಸಹಿಷ್ಣುವೇ ನಮಃ
ಓಂ ತ್ರಿಕಾಲ ಜ್ಞಾನಿನೇ ನಮಃ
ಓಂ ಇಚ್ಛಿತ ವರ ಪ್ರದಾಯಿನೇ ನಮಃ

ಈ ಮುಂತಾದವುಗಳಿಂದ ವೇದ್ಯವಾಗುತ್ತದೆ. ವೀರಶೈವ ತತ್ವತ್ರಯಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳೇ ಶ್ರೀ ಜಗದ್ಗುರುಗಳವರ ಶರೀರ ಪ್ರಾಣಗಳಾ

ಗಿದ್ದವು. ಮದ ಬಂದ ಮತ್ತ ಜನರಿಗೆ ಜಗದ್ಗುರುಗಳವರು ದುಷ್ಟ ಶಿಕ್ಷಕರಾದರೆ, ಭಕ್ತರಿಗೆ (ಸ್ಮರಿಸಿದವರಿಗೆ) ಅತ್ಯಂತ ಕರುಣಾಮಯಿಗಳೂ, ಸರ್ವರಿಗೂ ಉಪಕಾರವನ್ನೇ ಬಯಸುವರೂ, ಓಂಕಾರ ಸ್ವರೂಪರೂ, ವಿಶ್ವ ಬಂಧುಗಳೂ ಆಗಿದ್ದರಲ್ಲದೇ ಬೇಡಿದ ಭಕ್ತರಿಗೂ ಸಕಲವನ್ನೂ ನೀಡುವ ಕಾಮಧೇನು ಕಲ್ಪವೃಕ್ಷವಾಗಿ ಸರ್ವಲೋಕೋಪಕಾರಕ ರಾಗಿದ್ದಾರೆ. ಇಂತಹ ಪೂಜ್ಯರು ಕಾಡಬೇಡ ಜನರಿಂದ ಆವೃತವಾಗಿದ್ದ ಈ ಮಂಡಗಿರಿ ಯನ್ನು ಮೃಡಗಿರಿಯನ್ನಾಗಿ ಪಾವನಗೊಳಿಸಿದ ಮಹಿಮಾ ಪುರುಷರು.

ಓಂ ಅಷ್ಟಾವರಣ ಗರಿಷ್ಠಾಯ ನಮಃ
ಓಂ ಪಂಚಾಚಾರ ಪ್ರಾಣಾಯ ನಮಃ
ಓಂ ಷಟ್‌ಸ್ಥಲಾತ್ಮನೇ ನಮಃ
ಓಂ ಸಜ್ಜನ ಕಲ್ಪ ಧ್ರುವಾಯ ನಮಃ
ಓಂ ಮತ್ತಜನ ಭಂಜಕಾಯ ನಮಃ

ಹೀಗೆ ಪ್ರತಿಯೊಬ್ಬ ವೀರಶೈವನೂ ಪ್ರತಿ ನಿತ್ಯ ಪಠಣ ಮಾಡಬಹುದಾದಂತಹ ಉತ್ತಮ ನಾಮಸಂಕೀರ್ತನೆಯಾಗಿವೆ. ಇಂತಹ ನಾಮ ಸಂಕೀರ್ತನೆಯಲ್ಲಿಯೇ ಗುರುವಿನ ಶಕ್ತಿ ಎಂತಹದೆಂಬುದನ್ನು ತಿಳಿಯಬಹುದಾಗಿದೆ.

ಓಂ ಕಾಲಕರ್ಮ ಮಾಯಾರಹಿತಾಯ ನಮಃ
ಓಂ ಜಗದ್ವಂದ್ಯಾಯ ನಮಃ
ಓಂ ನಿಶ್ಶೂನ್ಯ ಜಂಗಮ ಪುಂಗವಾಯ ನಮಃ
ಓಂ ನಿಷ್ಕಲಲಿಂಗಾತ್ಮನೇ ನಮಃ

ಗುರುಗಳಾದವರು ಕಾಲ, ಕರ್ಮ, ಮಾಯೆಗಳನ್ನು ಗೆಲ್ಲಬಲ್ಲವರು ಸರ್ವರಿಂದಲೂ ಪೂಜಿಸಿಕೊಳ್ಳುವರು, ವಂದಿಸಿಕೊಳ್ಳುವರು ಇಡೀ ವಿಶ್ವವನ್ನೇ ತಮ್ಮಲ್ಲಿ ಅಡಗಿಸಿಕೊಂಡವರು ಕಳಂಕರಹಿತರೂ ಆದ ಇವರು ಲಿಂಗಾನಂದದಲ್ಲಿಯೇ ತೃಪ್ತಿಯನ್ನು ಹೊಂದಿದ್ದು, ಲಿಂಗ-ಸ್ವರೂಪರೂ ಆಗಿದ್ದಾರೆ ಎಂಬುದು ಈ ಮುಂತಾದ ನುಡಿಗಳಿಂದ ವ್ಯಕ್ತವಾಗುತ್ತವೆ. ಇಂತಹ ಗುರುದೇವನು ನೂರೊಂದು ಸ್ಥಲ ಹೊಂದಿದವರೂ, ಏಕಾದಶ ಪ್ರಸಾದ ತೃಪ್ತರೂ ಆದ ಇವರು ಷಟ್‌ಸ್ಥಲ ವಿಜ್ಞಾನಿ ಸ್ವರೂಪಿ ಜಂಗಮರೆಂಬುದು ಈ ನಾಮಾವಳಿ ಗಳಲ್ಲಿ ಅಡಕವಾಗಿರುವುದು. ಇಂತಹ ತಾತ್ವಿಕ ವಿಚಾರಗಳನ್ನು ಪೂಜ್ಯರು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ.

ಓಂ ಏಕಾದಶ ಪ್ರಸಾದ ತೃಪ್ತಾಯ ನಮಃ
ಓಂ ಏಕೋತ್ತರ ಶತಸ್ಥಲ ವಿಜ್ಞಾನಿನೇ ನಮಃ
ಓಂ ದ್ವಾದಶ ಪ್ರಣವೋಚ್ಚಾರ ಮುಖಾಯ ನಮಃ
ಓಂ ಮಹಾಮಂತ್ರ ಮೂರ್ತಯೇ ನಮಃ

ಗುರುಗಳು ಚಿನ್ಮಯಾನುಗ್ರಹಿಗಳು, ಹನ್ನೆರಡು ಪ್ರಣವಗಳುಳ್ಳ ಮಂತ್ರಗಳನ್ನು ಪಠಣ ಮಾಡುವಂಥವರಾಗಿ ಮಂತ್ರ ಸ್ವರೂಪಿಗಳೇ ಆಗಿದ್ದಾರೆ. ಅಂತಹ ಶಕ್ತಿಯನ್ನು ಶ್ರೀಗುರು ನಾಮಸ್ಮರಣೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಹೀಗೆ ಪೂಜ್ಯ ಜಗದ್ಗುರುಗಳು ಇಂಥ ಚಿಕ್ಕ ಕೃತಿಯಲ್ಲಿ ಸಂಶೋಧನೆ, ಕರ್ತೃಗಳ ಅಗಾಧ ವ್ಯಕ್ತಿತ್ವ, ತತ್ವ ಸ್ವರೂಪ ಮೊದಲಾದ ಗುಣಗಳನ್ನು ಪ್ರತಿಬಿಂಬಿಸಿದ್ದಾರೆ.

ಈ ದಿಶೆಯಲ್ಲಿ ಒಂದು ಮಠ ಏನೆಲ್ಲ ಸಾಧಿಸಿ ಕಾರ್ಯ ನಿರ್ವಹಿಸಿ ಸಾಮಾಜಿಕ ಜೀವನದಲ್ಲಿ ಹೇಗೆ ಭಕ್ತರಿಗೆ ಮಾರ್ಗದರ್ಶಕವಾಗಿದೆ ಎಂಬುದಕ್ಕೆ ಮುಂಡರಗಿಯ ಶ್ರೀಮಠ ಹಾಗೂ ಶ್ರೀ ಜಗದ್ಗುರುಗಳವರು ಒಂದು ನಿದರ್ಶನ ಹಾಗೂ ಆದರ್ಶವಾಗಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಹೀಗೆ ಮೃಡಗಿರಿಯ ಈ ಪವಿತ್ರ ಪೀಠದ ಪರಂಪರೆಯಲ್ಲಿ ಆಗಿಹೋದ ಮಹಾದಿವ್ಯ ಚೈತನ್ಯ ಮೂರ್ತಿಗಳನ್ನು ಒಮ್ಮೆ ವೀಕ್ಷಿಸಿದರೆ ಬಹಳ ಆನಂದ ಹಾಗೂ ಆಶ್ಚರ್ಯವೆನಿಸುತ್ತದೆ. ಶ್ರೀ ಮಠವು ಇಂತಹ ವಿವಿಧ ರೀತಿಯ ಮಹಾಚೇತನಗಳನ್ನು ಸಾಧನಗಳನ್ನು ಮೈಗೂಡಿಸಿಕೊಂಡು ಜ್ವಲಂತ ಇತಿಹಾಸವನ್ನು ಸೃಷ್ಟಿಸಿಕೊಂಡು ಬಂದಿದೆ. ಮುಂಡರಗಿಯ ಮಠ ಸಾಮಾನ್ಯವಾದುದಲ್ಲ. ಅದಕ್ಕೆ ಭೌತಿಕ ಸಂಪತ್ತಿರದಿದ್ದರೂ ಆಧ್ಯಾತ್ಮಿಕ ಸಂಪತ್ತಿನಿಂದ ಸಾಕಷ್ಟು ತುಂಬಿ ತುಳುಕುತ್ತದೆ. ಈ ಮಠದಲ್ಲಿ ಆಗಿಹೋದ ಮಹಾಮಹಿಮರು ಒಬ್ಬರಿಗಿಂತ ಒಬ್ಬರು ಉಗ್ರರೂ, ಲಿಂಗಪೂಜಾನಿಷ್ಠರೂ, ಶಾಪಾನುಗ್ರಹ ಸಮರ್ಥರೂ, ಪವಾಡ ಪುರುಷರೂ ಆಗಿ ಹೋಗಿದ್ದಾರೆ.

ಈ ರೀತಿಯಲ್ಲಿ ಲೀಲಾಮಯರೂ, ಸಕಲ ಗುಣಸಂಪನ್ನರೂ ಆಗಿ ಸಕಲ ಸಂಪತ್ತನ್ನು ನೀಡುವ, ಸನಾತನ ಧರ್ಮವನ್ನು ಉದ್ಧಾರ ಮಾಡಿದ ಮಹಾಮುನಿಪುಂಗವ ರಾದ ಕರ್ತೃ ಶ್ರೀ ಜಗದ್ಗುರು ಅನ್ನದಾನೀಶ್ವರ ಶಿವಯೋಗಿಗಳವರ ಅಷ್ಟೋತ್ತರ ಶತನಾಮಾವಳಿಯನ್ನು ಪ್ರತಿಯೊಬ್ಬನೂ ಪ್ರತಿನಿತ್ಯ ತಪ್ಪದೇ ಪಠಣ ಮಾಡಲೇ ಬೇಕು. ಪೂಜ್ಯ ಶ್ರೀಗಳವರ ನಾಮಸಂಕೀರ್ತನೆಯಿಂದ ಲೌಕಿಕ ಜಗತ್ತಿಗೆ ಬೇಕಾದ ಸಕಲಭೋಗ ಭಾಗ್ಯಗಳು ಮತ್ತು ಪಾರಮಾರ್ಥಕವಾಗಿ ಬೇಕಾದ ಮೋಕ್ಷವೂ ಅತೀ ಬೇಗನೇ ಸಿಗುವು ದೆಂದು ಇಲ್ಲಿ ಶ್ರೀಗಳವರು ಫಲಶೃತಿಯನ್ನು ತಿಳಿಸಿದ್ದಾರೆ.

ಈ ಕೃತಿ ಚಿಕ್ಕವಾದರೂ ಬಹು ಚೊಕ್ಕಟವಾಗಿದೆ. ಮಾನವನ ಜೀವನದಲ್ಲಿ ಅಡಗಿರುವ ಅಜ್ಞಾನ ಅಂಧಕಾರಗಳನ್ನು ದೂರಮಾಡಿ ಜ್ಞಾನದ ಬೆಳಕಿನಲ್ಲಿ ಮುನ್ನಡೆಯಲು ದಾರಿದೀಪವಾಗಿದೆ. ಮೂಲ ಕರ್ತೃ ಶ್ರೀ ಜಗದ್ಗುರು ಅನ್ನದಾನೀಶ್ವರ ಶಿವಯೋಗಿಗಳ ನೂರೆಂಟು ನಾಮಾವಳಿಗಳಲ್ಲಿ ಅಡಗಿರುವ ಜ್ಞಾನ, ವೈರಾಗ್ಯ, ತ್ಯಾಗ ತಪಸ್ಸು, ಅನ್ನದಾನ ಇತ್ಯಾದಿಗಳನ್ನು ಸುಲಭವಾಗಿ ವರ್ಣಿಸಲು ಸಾಧ್ಯವಿಲ್ಲ. ಈ ಸದ್ಗುರುವಿನಲ್ಲಿರುವ ಜ್ಞಾನ ಸಂಪತ್ತು ಪ್ರತಿಯೊಬ್ಬ ಮಾನವ ಜೀವಿಗಳಿಗೆ ದೊರೆಯಲೆಂದು ದಶಮ ಪೀಠದ ಮಹಾ ಸನ್ನಿಧಿಯವರು ಅರ್ಥಪೂರ್ಣವಾಗಿ ಹಾಗೂ ಬಹು ಸುಂದರವಾಗಿ

ರಚಿಸಿದ್ದಾರೆ. ಈ ಕೃತಿಗೆ ಸಮೀಕ್ಷೆ ಬರೆಯಲು ಕಿರಿಯಳಾದ ನನ್ನನ್ನು ಕರೆದು ಅಂತಃಕರುಣೆಯಿಂದ ಪ್ರೇರಣೆ ಪ್ರೋತ್ಸಾಹಗಳನ್ನು ನೀಡಿ ಎಲ್ಲ ವಿಷಯಗಳನ್ನು ತಿಳಿಸಿ ಈ ಲೇಖನದಲ್ಲಿರುವ ಓರೆಕೋರೆಗಳನ್ನು ತಿದ್ದಿ ತೀಡಿ ಸರಿಪಡಿಸಿದ ಶ್ರೇಯಸ್ಸು ಪೂಜ್ಯ ಸನ್ನಿಧಿಯವರಿಗೆ ಸಲ್ಲುತ್ತದೆ. ಇಂಥ ಸತ್ಕಾರ್ಯದಲ್ಲಿ ಪಾಲ್ಗೊಂಡು ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳಲೆಂದು ನನ್ನಂತೆ ಇನ್ನೂ ಅನೇಕ ಮಹಿಳೆಯರಿಗೂ, ಪುರುಷರಿಗೂ ಮಾರ್ಗದರ್ಶಕರಾಗಿದ್ದಾರೆ. ಇಂಥ ಪರಮ ಪೂಜ್ಯ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳಾದ ಜಗದ್ಗುರು ಅನ್ನದಾನೀಶ್ವರ ಶಿವಯೋಗಿಗಳವರ ದಿವ್ಯ ಪಾದಪದ್ಮಗಳಿಗೆ ನನ್ನ ಅನಂತ ಅನಂತ ಪ್ರಣಾಮಗಳನ್ನು ಅರ್ಪಿಸುತ್ತ ತ್ರಿಕಾಲದಲ್ಲಿಯೂ ಅವರ ಆಶೀರ್ವಾದ ನನಗೆ ರಕ್ಷಾಕವಚವಾಗಿರಲೆಂದು ಪ್ರಾರ್ಥಿಸಿಕೊಳ್ಳುವೆ.

ಇಷ್ಟಲಿಂಗಾರ್ಚನೆ ಹಾಗೂ ಶ್ರೀ ರುದ್ರ ಗ್ರಂಥ ಪರಿಚಯ

—ಪ್ರೊ. ಗುರುದೇವಿ ಉ. ಹುಲೆಪ್ಪನವರಮಠ ಸವದತ್ತಿ

'Every writer is a true Child of his own Century' ಪ್ರತಿಯೊಬ್ಬ ಲೇಖಕ ತನ್ನ ಕಾಲದ ಕೂಸು ಎನ್ನುವ ನುಡಿಯೊಂದಿದೆ ಲೇಖಕ ತನ್ನ ಕಾಲದ, ಜನಾಂಗದ ಆಶೋತ್ತರಗಳಿಗೆ ಸ್ಪಂದಿಸುವ, ಚಿಂತೆ-ಸಮಸ್ಯೆಗಳಿಗೆ ಪ್ರತಿಕ್ರಿಯಿಸುವ, ಅನುಮಾನ-ವಿವಾದಗಳಿಗೆ ಉತ್ತರಿಸುವ ಮಾನವೀಯ ಆದರೆ ಜವಾಬ್ದಾರಿಯುತ ಕಾರ್ಯವನ್ನು ಪರೋಕ್ಷವಾಗಿಯೋ, ಪ್ರತ್ಯಕ್ಷವಾಗಿಯೋ ತನ್ನ ಕೃತಿಯಲ್ಲಿ ಮಾಡುವದರ ಮೂಲಕ ತನ್ನವರ ಸ್ವಾಸ್ಥ್ಯ ಕಾಪಾಡುವಲ್ಲಿ ನೆರವಾಗುತ್ತಾನೆ. ಅಂಥ ಲೇಖಕ ಆ ಜನಾಂಗದ ವರವೇ ಸರಿ. ಈ ದೃಷ್ಟಿಯಿಂದ ಮುಂಡರಗಿಯ ಶ್ರೀ. ಮ.ನಿ.ಪ್ರ.ಸ್ವ.ಜ. ಅನ್ನದಾನೀಶ್ವರ ಮಹಾಸ್ವಾಮಿಗಳು 'ಇಷ್ಟಲಿಂಗಾರ್ಚನೆಯ ಸಂದರ್ಭದಲ್ಲಿ ರುದ್ರಾಧ್ಯಯನ, ರುದ್ರಾಭಿಷೇಕ ಅವಶ್ಯವೆ?' ಎಂದು ಇಂದು ವ್ಯಕ್ತಗೊಳ್ಳುತ್ತಿರುವ, ಅನುಮಾನ, ಅನಾದರ ಭಾವ, ಅಸಡ್ಡೆಯ ದೃಷ್ಟಿ ದೋಷಗಳನ್ನು ನಿವಾರಿಸಲೆಂದು 'ಇಷ್ಟಲಿಂಗಾರ್ಚನೆ ಹಾಗೂ ಶ್ರೀ ರುದ್ರ' ಎನ್ನುವ ಗ್ರಂಥ ರಚಿಸಿ ತಾವು ಒಪ್ಪಿ ಅಪ್ಪಿಕೊಂಡ ಧರ್ಮ ಪೋಷಣೆ, ಪ್ರಚಾರದ ಹೊಣೆಯನ್ನು ನಿರ್ವಹಿಸುವದರೊಂದಿಗೆ ಧಾರ್ಮಿಕ ಆಚರಣೆಯೊಂದರ ಪಾರಮ್ಯವನ್ನು ಕಣ್ಣಿಗೆ ಕಟ್ಟುವಂತೆ, ಮನಕ್ಕೆ ನಾಟುವಂತೆ, ಹೃದಯ ತಟ್ಟುವಂತೆ ಈ ಗ್ರಂಥದಲ್ಲಿ ತೆರೆದಿಟ್ಟಿದ್ದಾರೆ. ಕಣ್ಮುಚ್ಚಿ ನಡೆದವನ ಕೈ ಹಿಡಿದು ಎಚ್ಚರಿಸಿ ಕಣ್ತೆರೆಸಿ ಆತನ ಕಾಲ್ಕೆಳಗಿನ ಚಿನ್ನದ ಗಟ್ಟಿಯತ್ತ ಗಮನ ಸೆಳೆದ ಮಹತ್ಕಾರ್ಯವನ್ನು ಶ್ರೀಗಳಿಲ್ಲಿ ಮಾಡಿದ್ದುಂಟು. ಜೊತೆಗೆ ಗ್ರಂಥಾಭಿಪ್ರಾಯದಲ್ಲಿಯ ಡಾ. ಪುಟ್ಟರಾಜ ಗವಾಯಿಗಳವರ ಮಂಗಳವಾಣಿಯಂತೆ ಪರಮಾತ್ಮನ ಸಾಕ್ಷಾತ್ ಸ್ವರೂಪಿಯಾದ ಜಂಗಮನ ಕರ್ತವ್ಯವಾದ ಲೋಕೋಪಕಾರವನ್ನು ಈ ಗ್ರಂಥ ರಚನೆಯ ಮೂಲಕ ಮಾಡಿ ನಮ್ಮುಪಕೃತ ಸ್ಮರಣೆಗೆ ನಿರಂತರವೂ ಪಾತ್ರರಾಗಿದ್ದಾರೆ.

ಮುನ್ನುಡಿಯ ಸ್ವರೂಪದಲ್ಲಿ ವ್ಯಕ್ತಗೊಂಡ ನಾಡಿನ ಅನೇಕ ವಿದ್ವಾಂಸರ, ತಪಸ್ವಿ, ಅನುಭಾವಿಗಳ ವಿದ್ವತ್ಪೂರ್ಣ, ಅನುಭಾವ ಜನ್ಯ ವಿಚಾರಭಿಪ್ರಾಯಗಳು ಈ ಕೃತಿ ದೇಗುಲದೆದುರು ಎಳೆದ ಅಂದದ ಮಂಗಳಮಯ ರಂಗವಲ್ಲಿಯಂತಿದೆ. ಕೃತಿಯ ಸತ್ವ, ಸೊಗಸು, ಧ್ಯೇಯ, ಸಾಧನೆಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುವಲ್ಲಿ ಸಫಲವಾಗಿವೆ.

ಸಮಸ್ಯೆಗಳ ಸುಳಿವು, ವೀರಶೈವ ಧರ್ಮವು ಪ್ರಾಚೀನ, ೧೨ನೇ ಶತಮಾನ ವೀರಶೈವಕ್ಕೆ ಪೋಷಕ, ಇಷ್ಟಲಿಂಗಕ್ಕೆ ಉಪಚಾರಬೇಕು, ಶ್ರೀ ರುದ್ರಾಭಿಷೇಕ ಅವಶ್ಯವೆ? ಶರಣರ ದೃಷ್ಟಿಯಲ್ಲಿ ಆಗಮ, ಶರಣವಾಣಿಯಲ್ಲಿ ರುದ್ರಪ್ರರುಷ ಶ್ರೀ ರುದ್ರಮಹಿಮೆ, ಶ್ರೀ 'ರುದ್ರ' ಪದದ ವ್ಯಾಖ್ಯೆ ರುದ್ರಾಭಿಷೇಕದ ಪರಿಣಾಮ, ಆರೋಪಗಳಿಗೆ ಉತ್ತರ, ಶ್ರೀ ರುದ್ರಾಧ್ಯಾಯ ಕುರಿತು ಅಭಿಪ್ರಾಯಗಳು, ಶ್ರೀ ರುದ್ರದ ತಾತ್ವಿಕಾರ್ಥ ಮುಂತಾದ ತಲೆಬರೆಹಗಳಡಿ ವಸ್ತುವಿಷಯ ಹಬ್ಬಿ ಹರಡಿದೆ. ಪ್ರತಿಯೊಂದೂ ವಿಭಾಗದಡಿಯ ಬರೆಹಗಳು ಸಂಶೋಧನಾತ್ಮಕವಾಗಿದ್ದು ಕೃತಿಗಾರರ ಆಳವಾದ ಕೂಲಂಕಷ ಅಧ್ಯಯನ, ತೌಲನಿಕ ದೃಷ್ಟಿಕೋನ, ತಾರ್ಕಿಕ ಭಾವ, ಸಂಕ್ಷಿಪ್ತ ಆದರೆ ಸ್ಪಷ್ಟ ನಿರೂಪಣಾ ಶೈಲಿ, ನಿಶಿತಮತಿಗೆ ಕನ್ನಡಿ ಹಿಡಿಯುತ್ತವೆ.

ಇಷ್ಟಲಿಂಗ ಪೂಜೆಯ ಸಂದರ್ಭದಲ್ಲಿ ದ್ರವ್ಯಾರ್ಪಣೆ, ಇನ್ನುಳಿದ ಉಪಚಾರಗಳು ಅದ್ಹೇಗೆ ಅತ್ಯವಶ್ಯ ಅನ್ನುವದನ್ನು ತುಂಬ ವ್ಯವಹಾರಿಕವಾಗಿ ತಾರ್ಕಿಕವಾಗಿ, ವೈಜ್ಞಾನಿಕವಾಗಿ 'ಪೂಜೆ ಅಂದರೇನೇ ತ್ಯಾಗ ಇಲ್ಲ ಅರ್ಪಣೆ' 'ತ್ಯಾಗವಿಲ್ಲದ ಪೂಜೆ ಗಾಂಧೀಜಿ ಹೇಳಿದಂತೆ ಪಾಪಗಳಲ್ಲಿ ಒಂದು' ಎಂದು ಸ್ಪಷ್ಟಪಡಿಸಿ 'ಸಾಮಾನ್ಯವಾಗಿ ಲೌಕಿಕದಲ್ಲಿ ಯಾವನೊಬ್ಬ ವ್ಯಕ್ತಿಯ ಪ್ರಸನ್ನತೆಗೆ ಅವನ ಬಗ್ಗೆ ಉಪಚಾರ, ಆದರಗಳು, ಅವಶ್ಯವಿರುವಂತೆ ಅಲೌಕಿಕವಾಗಿ ಲಿಂಗಪತಿಯ ಒಲುಮೆಗಾಗಿ ಷೋಡಶೋಪಚಾರ, ಲಿಂಗಾರ್ಚನಾ ವಿಧಿ ಅನಿವಾರ್ಯ' ಎನ್ನುವ ನೈಜ ವಾಸ್ತವಾಂಶವನ್ನು ತೆರೆದಿಡುವ ರೀತಿ ಅದ್ಭುತ. ಲಿಂಗಾಂಗ ಸಾಮರಸ್ಯದ ಸುಖದ ಗಳಿಕೆಯೇ ವೀರಶೈವ ಧರ್ಮಾಚರಣೆಯ ಉದ್ದೇಶ. ಈ ಸುಖದ ಪ್ರಾಪ್ತಿಗೆ ಕರಸ್ಥಲದಲ್ಲಿಯ ಇಷ್ಟಲಿಂಗದೊಡನೆ ದೃಷ್ಟಿಯೋಗ ಅನಿವಾರ್ಯ. ಈ ದೃಷ್ಟಿಯೋಗ ಶೀಘ್ರವಾಗಿ, ಸುಲಭವಾಗಿ, ಯಶಸ್ವಿಯಾಗಿ ಅಳವಡಲು ಲಿಂಗ ಕಾಂತಿಯಿಂದ ಕೂಡಿರಬೇಕಾದದ್ದು ಅಷ್ಟೇ ಅತ್ಯವಶ್ಯ. ಲಿಂಗಯ್ಯನ ಈ ಕಾಂತಿ ಸಂಪಾದನೆಗೆ ಕೆಲ ದ್ರವ್ಯಗಳರ್ಪಣೆ ತೀರ ಅನಿವಾರ್ಯ ಎನ್ನುವದನ್ನು ಶ್ರೀಗಳು ಸಮರ್ಥ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದು ಮನನೀಯ. ಅವರ ಈ ತಾರ್ಕಿಕ ಅಭಿಪ್ರಾಯ ಮಂಡನೆಯಲ್ಲಿ ವೈಜ್ಞಾನಿಕ ಸತ್ಯದೊಡನೆ ವೈಚಾರಿಕ ಅಂಶವೂ ಅಡಗಿದೆ.

ಪೂಜೆಯ ಸಂದರ್ಭದಲ್ಲಿ ಒಂದೊಂದು ದ್ರವ್ಯಗಳನ್ನು ಕೈಮುಟ್ಟಿ ಬಳಸುವದರಿಂದ ಉಪಾಸಕನ ಮೈ-ಮನಗಳ ಮೇಲಾಗುವ ಸತ್ಪರಿಣಾಮವನ್ನು ವಿವರಿಸುತ್ತ 'ಸೂಕ್ಷ್ಮವಾಗಿ ವಿಚಾರಿಸಿದರೆ ಬ್ರಹ್ಮಾಂಡದ ಯಾವ ಪದಾರ್ಥವೂ ವ್ಯರ್ಥ ಹೋಗುವದಿಲ್ಲ, ಕಣಕಣವಾದ ದ್ರವ್ಯವೂ ಮತ್ತೊಂದು ಜೀವಿಗೆ ಸಲ್ಲದೆ ಇರುವದಿಲ್ಲ' ಎಂದಾಡಿರುವ ಸತ್ಯಪೂರ್ಣ ಸಾಲು ಮೇಲಿನ ಅವರ ಎಲ್ಲ ವಿಚಾರಗಳಿಗೆ ಕಳಸಪ್ರಾಯವಾಗಿದೆ. 'ದ್ರವ್ಯಾರ್ಪಣೆ ವ್ಯರ್ಥ'ವೆಂದು ಅರಚುವವರ ಬಾಯ್ಮುಚ್ಚಿಸುವಂತಿದೆ. ಕಣ್ತೆರೆಸುವಂತಿದೆ.

ಶಿವನಿಗಿಂತಲೂ ಶಿವಶರಣರೇ ಅಧಿಕವೆಂದು ಸಾರಿದ ಮೈಲಾರ ಬಸವಲಿಂಗ ಶರಣರು. ಬಸವಣ್ಣನವರನ್ನೊಳಗೊಂಡು ಎಲ್ಲ ಶಿವಶರಣರು ಶಿವಪೂಜಾ ವಿಧಾನದಲ್ಲಿ ಬಹು ಉಪಚಾರಗಳನ್ನು ಸಮರ್ಥಿಸಿ ಆಚರಿಸಿದ ರೀತಿಯನ್ನು ಕೃತಿಕಾರರು ಸೋದಾಹರಣವಾಗಿ ತಿಳಿಸಿದ್ದು ಅವರು ತೆರೆದುತೋರಿಸ ಹೊರಟ ಸತ್ಯವೊಂದರ ಸ್ವರೂಪಕ್ಕೆ, ಕೃತಿಯ ಮೂಲ ಆಶಯಕ್ಕೆ ಸಾಕಷ್ಟು ಪುಷ್ಟಿಯನ್ನೊದಗಿಸುತ್ತದೆ. ಕೃತಿಕಾರರು ಉದಾಹರಿಸಿದ ಶರಣರ ಷೋಡಶೋಪಚಾರ ಸಮನ್ವಿತ ಪೂಜೆಯ ಕುರಿತಾದ ವಚನಗಳು ಈ ಕೃತಿಯುದ್ದೇಶವನ್ನರ್ಥ ಸಾಧಿಸಿದಂತಿದೆ. ಭಾರತದಾದ್ಯಂತ ಪಠಿಸಲ್ಪಡುತ್ತಿರುವ ಪುರಾತನ ಕೃತಿಯಾದ ಶ್ರೀ ರುದ್ರಸೂಕ್ತದ ಮಹಿಮೆಯನ್ನು ಕೈವಲ್ಯೋಪನಿಷತ್ತಿನ ಶ್ಲೋಕಗಳನ್ನು ಉದ್ಧರಿಸಿ 'ಮಂತ್ರ ಮಾತೆಯೆನಿಸಿದ ಶಿವಪಂಚಾಕ್ಷರಿ ಮಂತ್ರವನ್ನೊಳಗೊಂಡಿರುವ ರುದ್ರಾಧ್ಯಯನವನ್ನು ಲಿಂಗಾಭಿಷೇಕದ ಕಾಲದಲ್ಲಿ ಮಾಡುವವನು ಅಗ್ನಿತತ್ವಕ್ಕೆ ಸಂಬಂಧಿಸಿದ ಜಠರಾಗ್ನಿದೋಷ, ದೃಷ್ಟಿದೋಷಗಳಿಂದ ಬಿಡುಗಡೆ ಹೊಂದುವನು ಹಾಗೂ ಶಿವಮಂತ್ರ ಸ್ಮರಣೆಯಿಂದ ಅವನ ಶ್ವಾಸೋಚ್ಛ್ವಾಸಗಳು ಪರಿಶುದ್ಧವಾಗಿ ಪ್ರಾಣಾದಿ ವಾಯುದೋಷಗಳಿಂದ ಮುಕ್ತನಾಗುವನು.' 'ಶ್ರೀ ರುದ್ರದ ಉದಾತ್ತ ಅನುದಾತ್ತ ಸ್ವರಿತಗಳ ತರಂಗಗಳು ವೈಜ್ಞಾನಿಕವಾಗಿ ಮಾನಸಿಕ ರೋಗಿಗಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ ಅದಕ್ಕಾಗಿ ಶ್ರೀ ರುದ್ರವನ್ನು ಮನಸ್ಸಿನಲ್ಲಿ ಅನ್ನುವದಿಲ್ಲ, ಸ್ವರೋಕ್ತವಾಗಿ ಅನ್ನುವದು' ಎಂದೆಲ್ಲ ಕೃತಿಗಾರರು ನೀಡಿದ ವಿವರ ಶ್ರೀ ರುದ್ರಾಧ್ಯಯನ, ಅಭಿಷೇಕದ ಸತ್ಪರಿಣಾಮಗಳನ್ನು ವೈಜ್ಞಾನಿಕವಾಗಿಯೇ ಸ್ಪಷ್ಟಪಡಿಸುತ್ತವೆ. "ಇಪ್ಪತ್ತೆಂಟು ಶಿವಾಗಮಗಳಲ್ಲಿ ಹದಿನೆಂಟು ಆಗಮಗಳು ರುದ್ರ ಪರವಾದವುಗಳಾಗಿವೆ" ಎಂದ ಶ್ರೀ ಜಚನಿ ಅವರ ಸೋದಾಹರಣ ಸ್ಪಷ್ಟನೆಯನ್ನು, ಶ್ರೀ ಚತ್ರದ ಹಳ್ಳಿ ಚಂದ್ರಶೇಖರ ಶಾಸ್ತ್ರಿಗಳು, ಪುಟ್ಟರಾಜ ಗವಾಯಿಗಳು ರುದ್ರಸೂಕ್ತದ ಮೌಲ್ಯಮಾಪನ ಮಾಡಿ ವ್ಯಕ್ತಪಡಿಸಿದ ವಿಚಾರಗಳನ್ನು ಗ್ರಂಥದಲ್ಲಿ ಕೃತಿಕಾರರು ಉಲ್ಲೇಖಿಸಿದ್ದು ಸಮಯೋಚಿತ ಹಾಗೂ ವಿಷಯೋಚಿತವಾಗಿದೆ.

ಧರ್ಮತತ್ವಗಳಿಗೆ ಸಂಬಂಧಿಸಿದ ವೇದಾಗಮ ಪ್ರಮಾಣಗಳನ್ನು ಎತ್ತಿಹಿಡಿದು ತಮ್ಮ ವಚನಗಳಲ್ಲಿ ಧಾರಾಳವಾಗಿ ಬಳಸಿದ್ದನ್ನು ಸೋದಾಹರಣವಾಗಿ ತಿಳಿಸುತ್ತ 'ವೀರಶೈವ ಸಿದ್ಧಾಂತ ಆಗಮ ಪ್ರತಿಪಾದ್ಯ' ಎಂದು ಹೇಳಿದ್ದು ಚಿಂತನಾರ್ಹವಾಗಿದೆ. 'ಜಗದ ಕರ್ತ ಏಕಮೇವ ಅದ್ವಿತೀಯನಾದ ಶ್ರೀ ರುದ್ರನೇ ಕೂಡಲಸಂಗಮನಾಥನೆಂದು ಶ್ರೀ ರುದ್ರನ ಪ್ರಾಚೀನತೆ, ಸರ್ವೇಶ್ವರರತ್ವತೆ, ಸರ್ವವ್ಯಾಪಕತೆ ಮೊದಲಾದ ಮಹಾಗುಣಗಳನ್ನು ಶರಣರು ವಚನಗಳಲ್ಲಿ ವರ್ಣಿಸಿರುವದನ್ನು, ವೀರಶೈವ ಸಿದ್ಧಾಂತಪರವಾದ ಏಕೇಶ್ವರ ತತ್ವವನ್ನು ಸರ್ವಜನ ಹಿತವನ್ನು ಎತ್ತಿ ತೋರಿಸುವ ಪ್ರಮಾಣಗಳನ್ನು ಶರಣರು ಅಂಗೀಕರಿಸಿದ್ದನ್ನು ಉಲ್ಲೇಖಿಸಿ 'ರುದ್ರತತ್ವವೇ ಲಿಂಗವಾಗಿದ್ದು ಇಂಥ ಪರಾತ್ಪರ ವಸ್ತುವಿನ ವಿರಾಟ್ ಸ್ವರೂಪವನ್ನು ಪುರುಷಸೂಕ್ತ ಬಣ್ಣಿಸಿದಂತೆ ಶರಣರ ವಚನಗಳೂ ಹೇಳಿವೆ'.

ಎಂದ ಕೃತಿಕಾರರ ಸ್ಪಷ್ಟನೆ 'ಬಸವಾದಿ ಪ್ರಮಥರು ಶ್ರೀ ರುದ್ರವನ್ನು ಒಪ್ಪಿಕೊಂಡಿಲ್ಲ' ವೆಂದು ಜೊಳ್ಳುವಾದಕ್ಕಿಳಿದಿರುವವರಿಗೆ ಸೂಕ್ತ ಉತ್ತರ ನೀಡುತ್ತವೆ. ಶರಣೆ ಕಾಳವ್ವೆ 'ತಾಪ ತಾಪತ್ರಯ ನಿವಾರಣೆಗೆ ರುದ್ರಜಪ ಅರ್ಥಾತ್ ಶ್ರೀ ರುದ್ರಾಧ್ಯಯನ ಹಾಗೂ ಮಹೇಶ್ವರ ಆರಾಧನೆಯನ್ನು ಅವಶ್ಯವಾಗಿ ಮಾಡಬೇಕೆಂದು ತನ್ನ ವಚನದಲ್ಲಿ ಹೇಳಿದ್ದನ್ನು ಲೇಖಕರಿಲ್ಲಿ ತುಂಬ ಅರ್ಥಪೂರ್ಣವಾಗಿ ಉದಾಹರಿಸಿದ್ದುಂಟು. ವಚನಗಳ ಉಲ್ಲೇಖ, ಹೇಳಿಕೆಗೆ ಸಂಪೂರ್ಣ ಸಮರ್ಥನೆಯನ್ನೊದಗಿಸಿವೆ.

ರುದ್ರ ಪದದ ಅರ್ಥಪೂರ್ಣ ವ್ಯಾಖ್ಯೆಯನ್ನು ನೀಡಿ 'ಅಳುವಿನಿಂದ ಅಳಿವುದನ್ನು ಉಳಿಸಿ ಬಾಳುವವನು' ವಿದ್ವಾಂಸರ ಅಭಿಪ್ರಾಯದಂತೆ 'ಸತ್ಯ ಸ್ವರೂಪವನ್ನು ಅನುಗ್ರಹಿಸುವವ ರುದ್ರ' 'ಸತ್ ಸ್ವರೂಪ ಸಾಧನೆಯೇ ವೀರಶೈವರ ಶಿವಪೂಜೆ' ಎನ್ನುವ ಲೇಖಕರ ಮೌಲಿಕ ವಿಚಾರಗಳು ವೀರಶೈವ ಧರ್ಮ, ಆಚಾರ, ಸಿದ್ಧಾಂತಗಳ ಬಗೆಗಿನ ಅವರ ಆಳವಾದ ಜ್ಞಾನವನ್ನು, ಆ ಜ್ಞಾನವನ್ನು ತುಲನಾತ್ಮಕವಾಗಿ ಸಾಮಾನ್ಯರಿಗೂ ಅರ್ಥವಾಗುವಂತೆ ತಿಳಿಸುವ ಕ್ರಮವನ್ನು ತೆರೆದು ತೋರಿಸುತ್ತವೆ.

ಶ್ರೀ ರುದ್ರ ಸೂಕ್ತದ ಸಂಸ್ಕೃತ ಶ್ಲೋಕಗಳ ಅರ್ಥವನ್ನು ಸರಳ ಕನ್ನಡದಲ್ಲಿ ವಿವರಿಸುತ್ತ 'ರುದ್ರದಲ್ಲಿ ಅಣುರೇಣು ತೃಣ ಕಾಷ್ಠಗಳಲ್ಲಿ ಅಡಕವಾದ ಪರಾತ್ಪರ ಶಕ್ತಿಗೆ ನಮಸ್ಕಾರವಿದೆ' ಶರಣರು ಬೋಧಿಸುವ 'ದೇವನೊಬ್ಬ ನಾಮ ಹಲವು' ತತ್ವವೂ ರುದ್ರದಲ್ಲಿ ಅಡಕವಾಗಿದೆ ಇತ್ಯಾದಿ ಹೇಳುತ್ತ ನಮಸ್ಕಾರದಿಂದ ಎಂಥ ಉಗ್ರ ಮನುಷ್ಯನೂ ಶಾಂತವಾಗುತ್ತಾನೆ ಅಂದಾಗ ನಮಸ್ಕಾರ ಪೂರ್ವಕವಾಗಿ 'ಆತ್ಮರಕ್ಷಣೆ' ಪುತ್ರ-ಕಲತ್ರ-ಪಶು ಮುಂತಾದವುಗಳ ಸಂರಕ್ಷಣೆಯನ್ನು ಯಾಚಿಸುವದರಲ್ಲಿ ತಪ್ಪೇನಿದೆ? ಎಂದು ಮುಂತಾಗಿ ಕೇಳಿ 'ಶ್ರೀರುದ್ರದ ನಮಕಗಳಲ್ಲಿಯ ಶ್ರೀರುದ್ರರೂಪಿ ಪರಶಿವನಿಗೆ ಅರ್ಪಿಸಿರುವ ನಮಸ್ಕಾರ'ವನ್ನು ಪುರಸ್ಕರಿಸಿರುವ ರೀತಿ ಆಪ್ಯಾಯಮಾನವಾಗಿದೆ. ವ್ಯವಹಾರಿಕ, ವಾಸ್ತವಿಕ ಉದಾಹರಣೆಗಳಿಂದ ನಿತ್ಯ ಸತ್ಯವೊಂದನ್ನು ಸಮರ್ಥಿಸಿದ್ದು ತಲೆದೂಗುವಂಥದು.

'ಲಿಂಗವಂತರು ವೇದಗಳನ್ನು, ಆಗಮಗಳನ್ನು ಬೇರೆ ಧರ್ಮದ ಗ್ರಂಥಗಳನ್ನು ಪ್ರಮಾಣವೆಂದು ನಂಬುವದಿಲ್ಲ' ಎಂದಾಡುವವರಿಗೆ 'ಲಿಂಗವಂತರು ಅನುಭವ ಪ್ರಮಾಣ ವನ್ನು ಮನ್ನಿಸುತ್ತಿದ್ದುದರಿಂದ ಯಾವ ಧರ್ಮದ ಅಥವಾ ಧರ್ಮಗ್ರಂಥದ ಒಳ್ಳೆಯ ವಿಚಾರಗಳಿದ್ದರೂ ಅವುಗಳನ್ನವರು ಅಲ್ಲಗಳೆಯುವದಿಲ್ಲ' ಎಂದು ಲೇಖಕರುತ್ತರಿಸಿದ್ದು ಸಮರ್ಪಕವಾಗಿದೆ.

ಒಟ್ಟಿನಲ್ಲಿ ಲೇಖಕರು ಮಹತ್ವದ ಧರ್ಮಾಚರಣೆಯೊಂದರ ಬಗೆಗೆ ತಲೆದೋರಿದ, ಏಳಬಹುದಾದ ಹಲವಾರು ಅನುಮಾನ, ತಪ್ಪುಕಲ್ಪನೆಗಳನ್ನು ಗ್ರಂಥಾಧಾರಗಳಿಂದ, ವಚನ, ಅನೇಕ ಧರ್ಮಗ್ರಂಥಗಳ ಸಾಲುಗಳ ಉಲ್ಲೇಖದಿಂದ, ತಮ್ಮ ತಾರ್ಕಿಕ ಮಂಡನೆಯ ಅಸ್ತ್ರಗಳಿಂದ ಪರಿಹರಿಸಿದ್ದು ಜನಸಾಮಾನ್ಯರು ತಮ್ಮ ವೈಯಕ್ತಿಕ ದೈಹಿಕ, ಮಾನಸಿಕ,

ಸಾಂಪತ್ತಿಕ ಕ್ಷೇಮಕ್ಕಾಗಿ ಶ್ರೀ ರುದ್ರನನ್ನು ನಮಿಸಿ ಧ್ಯಾನಿಸಿ, ಪೂಜಿಸುವದನ್ನು, ಜನಸಾಮಾನ್ಯರ ಯೋಗಕ್ಷೇಮವನ್ನೇ ತಮ್ಮ ಬದುಕಿನ ಬಟ್ಟೆಯನ್ನಾಗಿ ಮಾಡಿಕೊಂಡ ಶರಣಜೀವಿಗಳು ಅವರೇಳ್ಗೆಗೇ ಶ್ರೀ ರುದ್ರಾಧ್ಯಯನ, ಅಭಿಷೇಕಾದಿಗಳನ್ನು ಮಾಡುವದಾಗಿ ಹೇಳಿದ್ದು, ತಾವು ಮಾಡುವ ಕ್ರಿಯೆಯೊಂದರ ಕುರಿತಾದ ಅಪಾರ ಜ್ಞಾನವನ್ನು ಸ್ಫುಟವಾಗಿ ತೆರೆದು ತೋರಿಸುತ್ತವೆ.

'ಕೆಡುಕಿನಿಂದಲೂ ಒಮ್ಮೊಮ್ಮೆ ಒಳಿತಾಗುವದುಂಟು' ಎಂಬ ಅನುಭವಾಮೃತ ವಾಣಿಯಂತೆ 'ಶ್ರೀ ರುದ್ರಪಠಣ, ಅಭಿಷೇಕಾದಿಗಳು ಇಷ್ಟಲಿಂಗ ಪೂಜಾ ಸಂದರ್ಭದಲ್ಲಿ ಅನವಶ್ಯಕ, ಬಸವಾದಿ ಶರಣರು ಅದನ್ನು ಪುರಸ್ಕರಿಸಿಲ್ಲ....' ಇತ್ಯಾದಿ ಅಲ್ಪಮತಿಗಳ ಅನುಮಾನಕ್ಕುತ್ತರವಾಗಿ ಶ್ರೀಗಳಿಂದ ಇಂಥ ಗ್ರಂಥ ರಚಿಸಲ್ಪಟ್ಟು ನಮಗುಪಕಾರವಾಗಿದೆ. ಈ ತಪ್ಪು ತಿಳುವಳಿಕೆ ವ್ಯಕ್ತಗೊಳ್ಳದಿದ್ದರೆ ಶ್ರೀ ರುದ್ರದ ಸಂಪೂರ್ಣಜ್ಞಾನ, ಮಹಿಮೆ, ಪ್ರಯೋಜನಾದಿಗಳ ವಿವರಗಳಿಂದ ನಾವು ವಂಚಿತರಾಗುತ್ತಿದ್ದೇವೇನೊ.

ಅರಿವು ಇಲ್ಲದ ಆಚಾರ, ಆಚಾರ ಇಲ್ಲದ ಅರಿವು ಎರಡೂ ನಿಷ್ಪ್ರಯೋಜಕ ಎಂದು ಸ್ಪಷ್ಟಪಡಿಸಿದ ಶರಣರ ವಾಣಿಯಂತೆ ಅರಿಯದೇ ಶ್ರೀ ರುದ್ರದ ಪಠಣ, ದ್ರವ್ಯಾರ್ಪಣೆ ಮಾಡುವವರಿಗೂ, ಮಾಡುವ ಕ್ರಿಯೆಯ ಅರ್ಥ-ಪ್ರಯೋಜನಗಳನ್ನು ಅರಿತುಕೊಳ್ಳಲು ಈ ಗ್ರಂಥ ಉಪಯೋಗವಾಗಬಲ್ಲುದು. ಕ್ರಿಯೆಯ ಅರಿವು ಕ್ರಿಯೆಯನ್ನು ಸಾರ್ಥಕಪಡಿಸುವದರಿಂದ ಶ್ರೀ ರುದ್ರಾಧ್ಯಯನ ಮಾಡುವ ಮುನ್ನ, ರುದ್ರಾಧ್ಯಯನಕ್ಕೆ ಸಂಬಂಧಿಸಿದಂತೆ ಏನೇ ಅನುಮಾನವುಂಟಾದರೆ ಅತ್ಯವಶ್ಯವಾಗಿ ಈ ಗ್ರಂಥವನ್ನು ಕೈಗೆತ್ತಿಕೊಂಡು, ಕಣ್ಣೋಡಿಸಿ ಸಮಾಧಾನಯುತ ಪರಿಹಾರ ಪಡೆವ ಭಾಗ್ಯವನ್ನು ಮುಂಡರಗಿಯ ಶ್ರೀಗಳು ಕರುಣಿಸಿದ್ದಾರೆ.

ಈ ಪುಟ್ಟ ಗ್ರಂಥವನ್ನು ಓದಿದ ಮೇಲೆ ಶ್ರೀ ರುದ್ರಾಧ್ಯಯನವನ್ನು ಅಲ್ಲಗಳೆಯುವದಿರಲಿ ಆ ಅಧ್ಯಯನ, ಅಭಿಷೇಕಾದಿಗಳ ಕುರಿತು ಪೂಜ್ಯ ಭಾವ ಮೂಡಿ ತತ್‌ಕ್ಷಣ ಆ ಕ್ರಿಯೆಗೆ ತೊಡಗಬೇಕೆನ್ನಿಸುತ್ತದೆ, ಶಾಂತಿ ಸಮಾಧಾನಗಳ ಸಂಪಾದನೆಗಿರುವ ಧಾರ್ಮಿಕ ಆಚರಣೆಯ ಪ್ರಯೋಜನವನ್ನೂ ಭೌತಿಕ ಲಾಭದ ದೃಷ್ಟಿಯಿಂದ ಅಳೆದು ನೋಡುವ ವೈಚಾರಿಕ ಶಕ್ತಿಯ ಕೊರತೆಯಿಂದ ಕನಲುವವರನ್ನು ಕಂಡು ಕವಿ ವರ್ಡ್ಸ್‌ವರ್ಥನಂತೆ **'What man has made of man'** ('ಅಯ್ಯೋ ಮನುಷ್ಯ ತನ್ನನ್ನು ತಾನೇ ಅದೇನು ಮಾಡಿಕೊಳ್ಳುತ್ತಿದ್ದಾನೆ?') ಎಂದು ಮರುಗಬೇಕೆನ್ನಿಸುತ್ತದೆ. ಮನೆಯಲ್ಲಿ, ಮನದಲ್ಲಿ ನಿತ್ಯ ಪಠಣ ಯೋಗ್ಯವಾದ, ಶ್ರೀ ರುದ್ರದ ಸಮಗ್ರ ವಿವೇಚನೆಯನ್ನು ಈ ಸಂಬಂಧಿತ ಸಂಶಯಗಳಿಗೆ ಪರಿಹಾರರೂಪೀ ವಿವರಣೆಗಳನ್ನು ಒಳಗೊಂಡ ಶ್ರೀ ಮುಂಡರಗಿ ಶ್ರೀಗಳ ಪ್ರಯತ್ನವಾದ ಈ ಗ್ರಂಥ ನಮಗೊಳಿತನ್ನುಂಟು ಮಾಡುವ 'ಪರಮಾತ್ಮ'ವೇ.

ಶ್ರೀ ಶಿವಯೋಗ ಮಂದಿರ ಕೈಪಿಡಿ

—**ಪ್ರೊ. ಶಶಿಧರ ಸ್ವಾಮಿಗಳು ವಸ್ತ್ರದ,** ಗದಗ

೧೯೮೬ ರಲ್ಲಿ ಶ್ರೀ ಶಿವಯೋಗ ಮಂದಿರ ಸಂಸ್ಥೆಯ ಯಾತ್ರಾ ಮಹೋತ್ಸವ ಕಾಲದಲ್ಲಿ ಪ್ರಕಟಗೊಂಡ ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನ ಮಹಾಸ್ವಾಮಿಗಳು ಸಂಸ್ಥಾನಮಠ ಮುಂಡರಗಿ ಇವರ ಕೃತಿಗಳಲ್ಲಿ ಒಂದು ಕಿರು ಹೊತ್ತಿಗೆ. ಈ ಕೃತಿ ವೀರಶೈವರಿಗಷ್ಟೇ ಅಲ್ಲಾ ಕರ್ನಾಟಕದ ಯಾತ್ರಾರ್ಥಿಗಳಿಗೆಲ್ಲಾ ಅದರ ಸುಪರಿಚಯವನ್ನು ನೀಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು. ಅಖಿಲಭಾರತ ವೀರಶೈವ ಮಹಾ ಸಭೆಯ ಸಂಸ್ಥಾಪಕರಾದ ಲಿಂಗೈಕ್ಯ ಶ್ರೀ ಹಾನಗಲ್ಲ ಕುಮಾರ ಮಹಾಸ್ವಾಮಿಗಳವರ ಭವಿಷ್ಯ ಚಿಂತನೆಗಳು ಅದರಲ್ಲಿ ಸಂಪೂರ್ಣವಾಗಿ ಮೂಡಿಬಂದಿವೆ. ಅವು ಇಷ್ಟು ಕಾಲ ವಾದರೂ ಸಂಪೂರ್ಣವಾಗಿ ಅನುಷ್ಠಾನಗೊಳ್ಳದಿರುವದು ನಮ್ಮೆಲ್ಲರ ದೌರ್ಭಾಗ್ಯವೇ ಸರಿ.

ಶ್ರೀ ಮದ್ವೀರಶೈವ ಶಿವಯೋಗ ಮಂದಿರ ಸಂಸ್ಥೆಯ ಸಂಸ್ಥಾಪಕರಾದ ಕುಮಾರ ಶಿವಯೋಗಿಗಳ ಜೀವನ ಪರಿಚಯವನ್ನು ಸಂಕ್ಷಿಪ್ತದಲ್ಲಿ ನೀಡುವದರ ಜತೆಗೆ ಅವರ ಅಪಾರವಾದ ಸಾಹಸ, ಯೋಗಬಲ, ಶಿವಪೂಜಾನಿಷ್ಠೆ ಚಿಂತನೆ, ಸಾಮಾಜಿಕ ಪ್ರಜ್ಞೆಗಳು ಬಿಡಿಬಿಡಿಯಾಗಿ ಚಿತ್ರಿಸಿದ್ದರಿಂದ ಇಡಿಯಾಗಿ ಅವಲೋಕಿಸಿದಾಗ ಅವರ ಪ್ರತಿಭೆ, ಹಂಬಲ, ತಾಳ್ಮೆ ಸಂಘಟನೆಗಳು ತಿಳಿದುಬರುತ್ತವೆ.

ಸಮಾಜದಲ್ಲಿ ಧಾರ್ಮಿಕ ಭಾವನೆಗಳು ನೆಲೆಯೂರಿ, ಪರಂಪರೆಯ ಶುಷ್ಕ ಕಂದಾ ಚಾರಗಳೂ, ಮೂಢನಂಬಿಕೆಗಳೂ ದೂರಾಗಿ, ಪ್ರಗತಿ ಸಾಧಿಸಲು ಮಠಗಳೇ ಕೇಂದ್ರ ಗಳೆಂದೂ, ಮಠಾಧೀಶರು ಸುಶಿಕ್ಷಿತರೂ, ಆಚಾರ, ತಪೋನಿಷ್ಠರೂ, ಸೇವಾಸಕ್ತರು ಆದಾಗಲೇ ಪ್ರಗತಿಸಾಧಿಸಲು ಶಕ್ಯವೆಂಬುದನ್ನು ಕಂಡುಕೊಂಡ ಶ್ರೀಗಳ ದೂರದೃಷ್ಟಿಯನ್ನು ಸಾದರಪಡಿಸುತ್ತದೆ. ಇವೆಲ್ಲವುಗಳನ್ನು ಉಚಿತವಾಗಿ ನೀಡಲು ತೆರೆದ ಕೇಂದ್ರವೇ ಶಿವಯೋಗಮಂದಿರ. ಅದರಿಂದ ನಾಡಿನ ಉದ್ದಗಲಕ್ಕೂ ಧರ್ಮ ಜಾಗ್ರತಿಯನ್ನು ಮಾಡುವ ವಿಚಾರವನ್ನಷ್ಟೇ ಹೊಂದದೇ, ಆ ಮೂಲಕ ಶಿಕ್ಷಣ, ವಾಣಿಜ್ಯಗಳ ಅಭಿವೃದ್ಧಿಯಲ್ಲೂ ಅವರದೇ ಸಿಂಹ ಪಾಲು ಎಂಬುದನ್ನೂ ಎತ್ತಿ ತೋರಿಸಿದೆ.

ಸಂಸ್ಥೆಯ ಅಭಿವೃದ್ಧಿಗಾಗಿ ಸದಾಕಾಲವು ಸಮಾಜದ ಬಡವರಲ್ಲಿ ಭಿಕ್ಷೆ ಬೇಡುವದು ವಿಹಿತವಲ್ಲವೆಂದು ಮನಗಂಡ ಶ್ರೀಗಳವರು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿ ಮಾಡಲು ಒಕ್ಕಲುತನವನ್ನೂ, ಬಾಗಲಕೋಟೆಯಲ್ಲಿ ಜೀನ್, ಚಿತ್ರಮಂದಿರ, ಮುದ್ರಣಾಲಯ ಗಳನ್ನು ತೆರೆದುದು ವ್ಯವಹಾರ ಕೌಶಲ್ಯವನ್ನು ಬಿಂಬಿಸಿದೆ. ಅಂದಿನ ಮಠಾಧೀಶರಿಂದ

ಗ್ರಾಮಾಂತರ ಪ್ರದೇಶಗಳಲ್ಲಿ ಗಾವಠೀ ಶಾಲೆಗಳ ಮುಖಾಂತರ ಶಿಕ್ಷಣ ದೊರೆಯು ವಂತಾದರೆ, ನಗರ ಪಟ್ಟಣಗಳಲ್ಲಿ ಮಾಧ್ಯಮಿಕ ಶಾಲೆ, ಕಾಲೇಜು, ಉಚಿತ ಪ್ರಸಾದ ನಿಲಯಗಳ ಅನುಕೂಲತೆ ಕಲ್ಪಿಸಿಕೊಟ್ಟು ಸಮಾಜವಷ್ಟೇ ಅಲ್ಲಾ, ಸರ್ವರೂ ಶಿಕ್ಷಣ ವನ್ನು ಹೊಂದಿ ಸರಕಾರ ಸೇವೆಯಲ್ಲೂ ರಾಜಕೀಯದಲ್ಲೂ ಮುಂದುವರೆಯಲು ಸಾಧ್ಯವಾಯಿತು. ಅದಿಲ್ಲವಾದರೆ ಕರ್ನಾಟಕದ ಬಹುಸಂಖ್ಯಾತರು ಇನ್ನು ಕತ್ತಲೆಯಲ್ಲಿ ವಂಚಿತರಾಗಿ ಉಳಿಯಬಹುದಿತ್ತು ಎಂಬುದು ಸತ್ಯ ಸಂಗತಿ.

ಅಲ್ಲಿಯ ಶಿವಯೋಗ ಸಾಧಕರಿಗೆ ಕಲ್ಪಿಸಿದ ಅವಕಾಶ, ಅನುಕೂಲತೆಗಳು ಹತ್ತಾರು, ವಾಚನಾಲಯ, ಮುದ್ರಣ, ಪತ್ರಿಕೆ ಪ್ರಕಟನೆ, ಸಾಹಿತ್ಯ ರಚಿಸಲು ಹೊರತರಲು ಸದವಕಾಶ ದಿಂದ ಅನೇಕ ಶ್ರೀಗಳು ಪ್ರತಿಭಾವಂತರಾಗಿ ಪ್ರಕಾಶಿಸಿದ್ದಾರೆ. ಅವರಲ್ಲಿ ಪೂಜ್ಯ, ಜ. ಚ. ನಿ.ಯವರು, ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ ಹುಬ್ಬಳ್ಳಿ, ಪಂಡಿತ, ಪುಟ್ಟರಾಜ, ಗವಾಯಿಗಳು ವೀರೇಶ್ವರ, ಪುಣ್ಯಾಶ್ರಮ ಗದಗ ಅದ್ವಿತೀಯರಾಗಿದ್ದಾರೆ. ಅವರ ಕೃತಿಗಳು ಸಾಹಿತ್ಯ ಸರಸ್ವತಿಯ ಮುಕುಟಮಣಿಗಳಾಗಿ ಹೊರಬಂದುದೇ ಸಾಕ್ಷಿ.

ಪರಮ ಪೂಜ್ಯ, ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನ ಮಹಾಸ್ವಾಮಿಗಳವರು ಶಿವಯೋಗ ಮಂದಿರದಲ್ಲಿ, ವಟುಗಳಾಗಿ, ಸಾಧಕರಾಗಿ, ದೇವರಾಗಿ, ಸಂಚಾಲಕ ಸದಸ್ಯರಾಗಿ ಬೆಳೆದು ಬಂದ ಕಾರಣದಿಂದ ಅಲ್ಲಿಯ ಪ್ರತಿಯೊಂದು, ಕಲ್ಲು, ಗಿಡ, ಮರ, ಮಠದ ಮೂಲೆ ಮೂಲೆ, ಪ್ರಾಂಗಣ ವಿಸ್ತಾರ, ಸುತ್ತುವರಿದಿರುವ ಸುಂದರ ಬೆಟ್ಟ, ಹರಿವ, ಮಲಪ್ರಭೆಯ ಮಂಜುಳನಾದ, ಪಶುಪಕ್ಷಿಗಳ ಇಂಚರ ಸವಿ ಅವರಲ್ಲಿ ಸೌಂದರ್ಯ ಪ್ರಜ್ಞೆಯನ್ನು ಬೆಳೆಸುವಲ್ಲಿ ಪ್ರೇರಣೆ ನೀಡಿರಲು ಸಾಕೆಂಬುದನ್ನು ಅವರು ಬಳಸಿರುವ ಸಾಹಿತ್ಯವು ಸಾದರ ಪಡಿಸುತ್ತದೆ. ಅವರೊಬ್ಬ ರಸಋಷಿಯಾಗಿ, ಸಾಹಿತಿಗಳಾಗಿ, ಸಾಹಿತ್ಯ ಚಿಂತಕರಾಗಿ, ವಿಮರ್ಶಕರಾಗಿ, ಪ್ರಜ್ಞಾವಂತರಾಗಿ, ಪ್ರತಿಭಾವಂತರಾಗಿ, ಪ್ರತಿಭಾ ಪೋಷಕರಾಗಿ ಹೊರಬಂದುದು ಈ ಕೃತಿಯನ್ನು ಓದಿದವರಿಗೆ ವ್ಯಕ್ತವಾಗದೇ ಇರಲಾರದು.

ಶ್ರೀ ಕುಮಾರ ಶಿವಯೋಗಿಗಳ ಬಗೆಗೂ, ಶ್ರೀ ಸದಾಶಿವ ಮಹಾಸ್ವಾಮಿಗಳ ಬಗೆಗೂ, ಶ್ರೀ ಹಾಲಕೇರಿ ಅನ್ನದಾನ ಮಹಾಸ್ವಾಮಿಗಳ ಬಗೆಗೂ ಅವರು ತಾಳಿರುವ ಗೌರವ, ಕೃತಜ್ಞತೆಗಳು ಕೃತಿಯ ತುಂಬೆಲ್ಲಾ ಹಾಸುಹೊಕ್ಕಾಗಿ ಉಕ್ತವಾಗಿವೆ. ಅವರ ಈ ಸಂಸ್ಕೃತಿಗೆ ಅಂತಃಸ್ಫೂರ್ತಿಯ ಸೆಲೆಯೂ ನೆಲೆಯೂ ಶ್ರೀ ಶಿವಯೋಗ ಮಂದಿರ ಕ್ಷೇತ್ರವೂ, ಹಾನಗಲ್ಲ ಕುಮಾರೇಶನ ಕರುಣೆಯು, ಸದಾಶಿವ ಸ್ವಾಮಿಗಳವರ ಪ್ರೇರಣೆಯು ಎಂಬುದನ್ನು ಕಾಡುಕೊಳ್ಳಬಹುದಾಗಿದೆ ಈ ಸದ್ಗುಣ ಅದೆಷ್ಟು ಮಠಾಧೀಶರಲ್ಲಿ ಕೊರತೆಯಾದ ಬಗೆಗೆ ಕಾರಣಗಳು ತಿಳಿಯುತ್ತಿಲ್ಲಾ.

ಶಿವಯೋಗ ಮಂದಿರದ ಜೊತೆಯಲ್ಲಿಯೇ ಬೆಳೆದು ಬಂದ ನಿಡಗುಂದಿಕೊಪ್ಪ ಶಾಖಾ ಶಿವಯೋಗ ಮಂದಿರ, ರಾಯಚೂರ ಜಿಲ್ಹೆಯ ರಾಮಗಡ್ಡೀ ಶಾಖಾಮಂದಿರ, ಕಪನಳ್ಳಿ ಶಿವಯೋಗಾಶ್ರಮ ವೀರೇಶ್ವರ ಪುಣ್ಯಾಶ್ರಮಗಳ ಪರಿಚಯವನ್ನು ನೀಡಿದ್ದು

ಅತ್ಯಂತ ಸ್ತುತ್ಯ ಹಾಗೂ ಉಪಯುಕ್ತವಾದ ದಾಖಲೆಗಳಾಗಿವೆ. ಅವುಗಳಿಗೆಲ್ಲಾ ಪ್ರೇರಕರು, ಪೋಷಕರು ಶ್ರೀ ಕುಮಾರಸ್ವಾಮಿಗಳು ಎಂದು ಬೆಳಕಿಗೆ ತಂದಿದ್ದಾರೆ. ಆದರೆ ಅವೆಲ್ಲಾ ಶಾಖಾ ಸಂಸ್ಥಾನಗಳು ಈಗ ಸ್ವತಂತ್ರ ಮಠಗಳಾಗಿ ಪರಿವರ್ತನೆಗೊಳ್ಳುತ್ತಿರುವದು ವಿಷಾದನೀಯ.

ಶ್ರೀ ಶಿವಯೋಗಮಂದಿರ ಸಂಸ್ಥೆಯು ಸಮಾಜದ ಸೊತ್ತೆಂಬುದನ್ನು ನಿರ್ವಂಚನೆ ಹಾಗೂ ನಿರ್ಭಿಡೆಯಿಂದಾ ಪ್ರತಿಪಾದಿಸುವಲ್ಲಿ ತಮ್ಮ ಕೆಚ್ಚನ್ನೂ ವ್ಯಕ್ತಗೊಳಿಸಿದ್ದಾರೆ. ಅದಕ್ಕಾಗಿ ಅಂದು ಶ್ರಮಿಸಿದ, ಸಹಕರಿಸಿದ ಸರ್ವರನ್ನು ದಾಖಲೆಗೊಳಿಸುವ ಸೌಜನ್ಯ ತೋರಿದ್ದಾರೆ. ಅಂದಿನ ಬಿಜಾಪೂರ ಜಿಲ್ಹೆಯ ಕಲೆಕ್ಟರ ಲಿಂ. ರೇವಣಸಿದ್ಧಯ್ಯನವರು, ಕಿತ್ತೂರ ಸಾಹೇಬರು, ಅರಕೇರಿಯವರು, ಗುಳೇದಗುಡ್ಡ ವಸ್ತ್ರದ ಸಹೋದರರು, ಶಿಲ್ಪಿಗಳಾದ ಬಾಗಲಕೋಟೆಯ ಯಮನಪ್ಪಾ ಮತ್ತು ಮೀನಪ್ಪ, ನಂದಿಕೇಶ್ವರ ಹಾಗೂ ಪಟ್ಟದಕಲ್ಲಿನ ಕೆಲಸಗಾರರನ್ನು ಕೃತಿಯಲ್ಲಿ ನೆನಪಿಗೆ ತಂದಿದ್ದಾರೆ. ಅವರೆಲ್ಲಾ ಇಂದಿನ ಸಮಾಜದಲ್ಲಿ ಎಲೆಯಮರೆಯ ಕುಸುಮದಂತೆ, ಕಾಣದೇ ಬಾಡಿ ಹೋದ ಜೀವಗಳು.

ಅದರಲ್ಲಿ ನಾನು ಮೆಚ್ಚಿಕೊಂಡ ಇನ್ನೊಂದು ಅಂಶವೆಂದರೆ ಶ್ರೀ ಕುಮಾರೇಶನ ಕಾವ್ಯವಾಣಿ ಎಂಬ ಭಾಗದಲ್ಲಿ ಅವರಿಂದ ರಚಿತವಾದ ಕೆಲವು ಪದಪದ್ಯಗಳು ಅವರ ಅಂತಃಸತ್ವದ ಪ್ರತೀಕವೆಂದೇ ಹೇಳಬಹುದು. ಅವರು ಕಾವ್ಯಮೀಮಾಂಸೆ ಸಂಸ್ಕೃತ ಸಾಹಿತ್ಯ ಅಭ್ಯಸಿಸದ ಪಂಡಿತರಲ್ಲವಾದರೂ ಶಿವಯೋಗಿ ಏನೆಲ್ಲವನ್ನು ಸಾಧಿಸಬಲ್ಲನೆಂಬುದಕ್ಕೆ ಸಾಕ್ಷಿ ಅವುಗಳನ್ನು ಯಾರೂ ಹಾಡುತ್ತಿಲ್ಲಾ, ಹೀಗಾಗಿ ಕೇಳಿರಲಿಲ್ಲಾ. ಅದು ಅವರ ಸಂದೇಶವಾದರೂ, ಉಳಿದ ಸಾಧಕರಿಗೆ ಮಾರ್ಗದರ್ಶಿ ಎಂದೇ ಹೇಳಬಹುದಾಗಿದೆ.

ಲಿಂಗೈಕ್ಯ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳವರು ಗುರುವಿರಕ್ತರಲ್ಲಿ ಸಮತಾವಾದಿಗಳಾಗಿದ್ದರೆಂಬುದನ್ನು ಅವರು ರೇಣುಕರನ್ನು ಕುರಿತು ಹಾಡಿದ್ದನ್ನು ಸ್ಮರಿಸಿಕೊಂಡಾಗ, ಇಂದೇಕೆ ಈ ಗುರುವಿರಕ್ತರ ಕಲಹ ಇಷ್ಟೊಂದು ಪ್ರಬಲವಾಗಿ ಬೆಳೆದು ಸಮಾಜದ ಸ್ವಾಸ್ಥತೆಗೆ ಅಡ್ಡವಾಗಿದೆ ಎಂದು ವಿಚಾರಿಸಿದರೆ ವಿಷಾದವಾಗುತ್ತದೆ. ಸಂಸ್ಥಾಪಕರ ವಿಚಾರವನ್ನು ಅಲ್ಲಿಂದ ಹೊರಬಂದ ಮಠಾಧೀಶರು ಸ್ವಪ್ರತಿಷ್ಠೆಗಾಗಿ ಮರೆಮಾಚಿ ಹೆಗ್ಗಳಿಕೆ ಪಡೆಯುತ್ತಿರುವದು, ಸಂಸ್ಥೆಗೊ, ಸಂಸ್ಥಾಪಕರಿಗೊ ಎಸಗುತ್ತಿರುವ ದ್ರೋಹವೆಂದೇ ಆಪಾದಿಸಬಹುದು. ಅವರ ಆ ಕೃತಿಯನ್ನು ವಿರಕ್ತ ಸ್ವಾಮಿಗಳು ಪಠಿಸಿದರೆ ಒಪ್ಪಿಕೊಂಡರೆ ತಪ್ಪಾದೀತೇ? ಸೇವಾಸಕ್ತರಿಗೆ ಪ್ರತಿಷ್ಠೆ ಶ್ರೇಯವಾದುದಲ್ಲಾ ಸಮಾಜದ ಹಿತದೃಷ್ಟಿಯಿಂದಾದರೂ ಇದು ಬೆಳೆದು ಬರಲಿ "ಮಹಾತ್ಮರನ್ನು ನೆನೆಯುವಲ್ಲಿಯೇ ಮುಕ್ತಿ ಪದವಿ ಎಂಬ ಮಹಾನುಭಾವರ ಉಪದೇಶವನ್ನು ಮರೆಯಬಾರದು ಯಾತ್ರಾ ಸ್ಥಳಗಳ ಐತಿಹಾಸಿಕ, ಧಾರ್ಮಿಕ ಹಿನ್ನೆಲೆ ಅರಿಯದೇ ಯಾತ್ರೆಯ ಮಹಿಮೆವೇನು? ಸಮಯದ ಹಾಗೂ ದ್ರವ್ಯದ ಅಪವ್ಯಯವೇ ಯಾತ್ರೆಯೇ?" ಎಂಬ ಚಿಂತನೆಗೆ ಇಂದು ಎಷ್ಟುಜನ ವಿಚಾರಿಸುತ್ತಿದ್ದಾರೆ. ಅದೊಂದು ಕೇವಲ ವ್ಯಾಪಾರ ಪ್ರತಿಷ್ಠೆಯ ಪ್ರಚಾರ ಮಾಧ್ಯಮವಾಗಿ

ಬೆಳೆಯುತ್ತಿದೆ ಎಂಬುದನ್ನು ಹೇಳುವಲ್ಲಿ ಹಿಂಜರಿದಿಲ್ಲಾ.

ಶಿವಯೋಗಮಂದಿರ ಸಂಸ್ಥೆಯು ಯಾರೊಬ್ಬರ ಸೊತ್ತಲ್ಲಾ, ಯಾವ ಮಠದ ಒಡೆತನಕ್ಕೂ ಸೇರಿಲ್ಲಾ, ಅದು ಕುಮಾರ ಶಿವಯೋಗಿಗಳವರ ಉದಾರತನ, ಸಂಸ್ಥೆ ಸಮಾಜದ ಸೊತ್ತು, ಅದರ ಟ್ರಸ್ಟಿಗಳ ನಿಯಮಾವಳಿಯನ್ನು ಪುಟ ೩೭ ರಲ್ಲಿ ಸ್ಪಷ್ಟ ಪಡಿಸಿದ್ದಾರೆ. ಅದರ ಅಭಿವೃದ್ಧಿಗೆ ಸಹಾಯ ಸಹಕಾರ ಕೋರಿದ್ದಾರೆ. ಇದರಿಂದಾಗಿ ಶಿವಯೋಗಮಂದಿರವು ವಿರಕ್ತಮಠಾಧೀಶರಿಗೆ ಮೀಸಲೆಂದೂ, ಹಾನಗಲ್ಲ ಮಠಾಧೀಶರೇ ಅದರ ಅಧ್ಯಕ್ಷರಾಗಬೇಕೆಂಬ ಬಹುಜನರ ತಪ್ಪು ಕಲ್ಪನೆಗಳಿಗೆ ಕನ್ನಡಿ ಹಿಡಿದಿದ್ದಾರೆ. ಯಾವದೇ ವಿಚಾರಗಳೂ,ಪರಂಪರೆಗಳೂ ಕಾಲಾನಂತರ ನಶಿಸಿ ಬೆಳೆದು ಬಂದುದೇ ನಂಬಿಗೆಗೆ ಕಾರಣವಾಗುತ್ತದೆ. ಕಾರಣ ಈ ಸಂಸ್ಥೆಯಲ್ಲಿ ಉಳಿದ ಮಠಾಧೀಶರಿಗೂ ಸ್ಥಾನ ನೀಡಬೇಕಲ್ಲದೇ, ಅಧ್ಯಕ್ಷರನ್ನಾಗಿ ನಿಯೋಜಿಸಿದಾಗ ಗುರುವಿರಕ್ತರ ಕಲಹಕ್ಕೆ ಒಂದು ತೆರೆ ಎಳೆಯಲು ಸಾಧ್ಯವಾಗಬಹುದಾಗಿದೆ. ಆದರೆ ಅಧಿಕಾರವನ್ನು ಅಷ್ಟು ಸುಲಭವಾಗಿ ಬಿಟ್ಟು ಕೊಡಲು ಯಾರಿಗೂ ಸಾಧ್ಯವಾಗದಿದ್ದರೆ ಅಲ್ಲಿ ರಾಜಕೀಯವು ಪ್ರವೇಶ ಮಾಡಿ ತತ್ವಗಳಿಗೆ ತಿಲಾಂಜಲಿ ಸಮರ್ಪಣೆಯಾಗುವದರಲ್ಲಿ ಸಂದೇಹವೇ ಇಲ್ಲಾ.

ಈ ಕಿರು ಗ್ರಂಥದಲ್ಲಿ ಶಿವಯೋಗಮಂದಿರದ ಮಾರ್ಗದರ್ಶಿ ನಕ್ಷೆ ಸೇರಿಸಿದ್ದರೆ ಪ್ರವಾಸಿಗರಿಗೆ ಹೆಚ್ಚು ಅನುಕೂಲವಾಗುತ್ತಿತ್ತು. ಅದು ಗುರು ವಿರಕ್ತರ ವಿದ್ಯಾಕೇಂದ್ರವೆಂಬುದನ್ನು ಸಾದರಪಡಿಸುವಲ್ಲಿ ಅಲ್ಲಿ ತಯಾರಾಗಿ ಹೊರಬಂದ ಮಠಾಧೀಶರ ಒಂದು ದಾಖಲೆ ನೀಡಿದ್ದರೆ ಸ್ಪಷ್ಟ ಚಿತ್ರ ಸಿಗುತ್ತಿತ್ತು. ಯಾಕಂದರೆ ಅಲ್ಲಿ ಹೆಚ್ಚಾಗಿ ವಿರಕ್ತ ವಟುಗಳಿಗೇ ಮಠಾಧೀಶರಿಗೇ ಮೀಸಲಾಗಿದೆ ಎಂಬ ಆಪಾದನೆಗೆ ವಿರಾಮ ದೊರೆಯಲು ಸಾಧ್ಯವಾಗಬಹುದಿತ್ತು. ಅದರ ಪ್ರತಿಯೊಂದು ಅಂಗ ಸಂಸ್ಥೆಗಳ ಸಮಗ್ರ ಪರಿಚಯ ನೀಡುವದರ ಜತೆಗೆ ಮಾತ್ರ ಸಂಸ್ಥೆಗೆ ವಂಚಿಸಿದವರನ್ನೂ, ಪ್ರತಿಷ್ಠೆಗಾಗಿ ವಾಗ್ದಾನಮಾಡಿ ಕೊಡದೇ ಇರುವವರನ್ನೂ ಬೈಲಿಗೆ ತರುವಲ್ಲಿ ಧೈರ್ಯ, ನಿರ್ಭಿಡೆ, ಸಂಸ್ಥೆಯ ಬಗೆಗೆ ಶ್ರೀಗಳವರಲ್ಲಿ ಇರುವ ಕಳವಳವೂ ತಿಳಿದುಬರುತ್ತದೆ.

ಅಷ್ಟೊಂದು ಅಪಾರ ಆಸ್ತಿ, ಸಂಪತ್ತು, ಹಿನ್ನೆಲೆ ಪಡೆದಿದ್ದರೂ ಸರಿಯಾದ ವ್ಯವಸ್ಥೆ, ವಿದ್ಯಾಭ್ಯಾಸದ ಅನಾನುಕೂಲತೆ, ಸಾಹಿತ್ಯ ಪ್ರಕಾಶನದ ಕೊರತೆ, ನಿಂತುಹೋದ ಪತ್ರಿಕೆ, ಕರಗುತ್ತಿರುವ ಗ್ರಂಥ ಭಾಂಡಾರ, ಕುಸಿಯುತ್ತಿರುವ ಕಟ್ಟಡಗಳು, ಅಲಕ್ಷಿಸಲ್ಪಟ್ಟ ಗೋಸಂಪತ್ತು ಶ್ರೀಗಳವರ ಉದಾರ ಹೃದಯವನ್ನು ಕಲಕಿ ವಿಷಾದಪಡಿಸಿದ್ದೂ ವ್ಯಕ್ತವಾಗಿದೆ. ಅದರ ಪರಿಹಾರ ಕುರಿತು ಮಿಕ್ಕ ಮಠಾಧೀಶರು ಕೊಂಚವಾದರೂ ಚಿಂತಿಸಬೇಕಾದುದು ಅವಶ್ಯ.

ಕಲಿತ ಮೇಲೆ ಕೃತಘ್ನರಾಗಿಯೇ ಹೊರಬರುವ ಇಂದಿನ ಜಗತ್ತಿನಲ್ಲಿ ಮಾತ್ರ ಸಂಸ್ಥೆಯ ಬಗೆಗೆ, ತಮ್ಮ ಬಾಳು ಭವಿತವ್ಯಕ್ಕೆ ನೆರವು ನೀಡಿದವರ ಬಗೆಗೆ ಕೃತಜ್ಞತೆ ಸಲ್ಲಿಸುವದು ಪರಮ ಪವಿತ್ರ ಕಾರ್ಯವೆಂಬುದನ್ನು ಮನಗಂಡ ಜಗದ್ಗುರುಗಳವರು ತಾವು

ಮಂದಿರಕ್ಕೆ ಸಲ್ಲಿಸಿದ ಸೇವೆಯನ್ನು ಸೇರಿಸಿದ್ದು ಪ್ರತಿಷ್ಠೆಗಾಗಿ ಅಲ್ಲಾ. ಇತರರಿಗೂ ಮಾರ್ಗದರ್ಶನವಾಗಿದೆ. ಇವರಂತೆ ಇನ್ನಿತರ ಮಠಾಧೀಶರೂ ಸಂಸ್ಥೆಯ ಪ್ರಗತಿಗೆ ದುಡಿದರೆ ಅದೊಂದು ಗುರುಕುಲ ವಿದ್ಯಾಪೀಠವಾಗಿ, ವಿಶ್ವವಿದ್ಯಾಲಯವೇ ಆಗಿ ರೂಪ ಗೊಳ್ಳಬಹುದಾಗಿದೆ. ರಾಮಕೃಷ್ಣ ಪರಮಹಂಸರ ಆಶ್ರಮದಂತೆ, ಪಾಂಡೀಚೇರಿಯ ಶ್ರೀ ಅರವಿಂದರ ಆಶ್ರಮದಂತೆ, ಅರುಣಾಚಲದ ರಮಣಾಶ್ರಮದಂತೆ, ಮೌಂಟ ಅಬೂ ದಲ್ಲಿಯ ಈಶ್ವರೀ ವಿದ್ಯಾಲಯದಂತೆ ಬೆಳೆದು ದೇಶದ ನಾನಾ ಭಾಗಗಳಲ್ಲಿ ಪ್ರಸಾರಗೊಂಡು ಸೇವೆಸಲ್ಲಿಸಬಹುದಾಗಿದೆ. ಆ ದಿಸೆಯಲ್ಲಿ ಮಂದಿರವು ಚಿಂತಿಸುವದೇ?

ಅಲ್ಲಿ ವೀರಶೈವ ವಟುಗಳ ಆಯ್ಕೆಯು ತಜ್ಞರು, ಪರಿಣಿತರ ಸಮಿತಿಯೊಂದರಿಂದ ನಡೆದು, ಅವರಿಗೆ ಉಚಿತವಾದ ಶಿಕ್ಷಣ ದೊರೆತು, ಅವರ ಪ್ರತಿಭೆಗೆ, ಸೇವೆಗೆ ಪುರಸ್ಕಾರ ದೊರೆತಾಗ ಪರಂಪರೆಯ ವಂಶಸ್ಥಗಳು ಪುನಃ ಮಠದ ಉತ್ತರಾಧಿಕಾರಿಗಳಾಗಿ ಗದ್ದುಗೆ ಏರುವದನ್ನು ತಪ್ಪಿಸಬಹುದು ಈ ವಿಚಾರಕ್ಕೆ ನಾನು ಹಿಂದೆಯೂ ಸೂಚಿಸಿದ್ದೇನೆ, ಪ್ರತಿಪಾದಿಸಿದ್ದೇನೆ. ಸ್ಪಷ್ಟವಾಗಿ ಖಂಡಿಸಿದ್ದೇನೆ. ಅದು ಇನ್ನು ಕಾರ್ಯಗತವಾಗಿಲ್ಲಾ, ಇದು ತತ್ವಕ್ಕೆ ತಿಲಾಂಜಲಿ ಕೊಟ್ಟಂತೆ ಆಗುವದಿಲ್ಲವೇ?

ಅಲ್ಲಿ ಸಾಧಕರ ಜತೆಯಲ್ಲಿ, ಶಾಂತಿಗಾಗಿ, ನಿವೃತ್ತ ಜೀವನಕ್ಕೆ ಅಧ್ಯಯನ, ಸಂಶೋಧನೆಗೆ ಬರುವವರೆಗೂ ಆಶ್ರಯ ದೊರೆತರೆ ಹೆಚ್ಚು ಸೂಕ್ತ. ಕೃತಿ ಚಿಕ್ಕದಾದರೂ ಚೊಕ್ಕಟವಾಗಿ ಪ್ರಕಟಗೊಂಡಿದೆ. ಹಿಂದಿನವರು, ನಾಡು ನುಡಿ, ಸಂಸ್ಕೃತಿ, ಸಮಾಜ, ಧರ್ಮಗಳಿಗೆ ಮಾಡಿರುವ ತ್ಯಾಗ, ಸೇವೆಗಳನ್ನು ನೆನಪಿಗೆ ತರುವಲ್ಲಿ ಸಾರ್ಥಕವಾಗಿದೆ.

ಈ ಮೂಲಕವಾಗಿ ಶಿವಯೋಗಮಂದಿರದ ಕ್ಷೇತ್ರಾದರ್ಶನ, ಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳ ಜೀವನ ಚರಿತ್ರೆಯ ಮನನ ಮಾಡುವದರ ಜೊತೆಗೆ, ನಾನಲ್ಲಿಗೂ ಸಂದರ್ಶಿಸಿ, ತನು, ಮನ, ಧನದಿಂದ ಸೇವೆ ಸಲ್ಲಿಸಲು, ತನ್ಮೂಲಕ ಸಮಾಜಕ್ಕೂ ಸೇವೆ ಸಲ್ಲಿಸಲು ಪ್ರೇರಣೆ ನೀಡಿದುದಕ್ಕೆ ಜಗದ್ಗುರುಗಳವರ ಶ್ರೀಪಾದಕ್ಕೆ ಸಹಸ್ರ ಸಹಸ್ರ ದೀರ್ಘದಂಡ ಪ್ರಣಾಮಗಳನ್ನು ಸಲ್ಲಿಸುವರೊಂದಿಗೆ ನನ್ನ ಕೃತಜ್ಞತೆಯನ್ನು ನಿವೇದಿಸುವೆ.

ಷಟ್‌ಸ್ಥಲ ಚಕ್ರವರ್ತಿ ಶ್ರೀ ಚನ್ನಬಸವಣ್ಣನವರು
ಉತ್ತಮ ಪುಸ್ತಕ

—ವಿಮರ್ಶಕರು: **ದ. ಲ. ಕೆರೂರ**

ಹನ್ನೆರಡನೆ ಶತಮಾನದಲ್ಲಿ ಅಣ್ಣ ಬಸವಣ್ಣನವರು ವೀರಶೈವ ಧರ್ಮದ ಪುನರುತ್ಥಾನ ಮಾಡಿ ಕ್ರಾಂತಿಯನ್ನೇ ಸಾಧಿಸಿದರು ಎಂಬುದು ಸರ್ವವಿದಿತ. ಈ ಕಾರ್ಯದಲ್ಲಿ ಅನುಭವ ಮಂಟಪವು ಅಲ್ಲಮ ಪ್ರಭುವಿನ ನೇತೃತ್ವದಲ್ಲಿ ಆಡಿದ ಪಾತ್ರವು ಅಮೋಘ. ಕಲ್ಯಾಣ ಕ್ರಾಂತಿಯ ನಂತರ ವೀರಶೈವವನ್ನು ಸುಪ್ರತಿಷ್ಠಾಪಿಸಿ, ಅದರ ಸುವ್ಯವಸ್ಥಿತ ಪ್ರಚಾರ ಕಾರ್ಯವನ್ನು ವಹಿಸಿಕೊಂಡ ಶ್ರೀ ಚನ್ನಬಸವಣ್ಣ ಈ ಇಬ್ಬರು ಹಿರಿಯರಿಗೆ ಯಾವ ವಿಧದಲ್ಲೂ ಕಡಿಮೆಯವರಲ್ಲ. ಬಸವಣ್ಣ ದಣ್ಣಾಯಕನಾದರೆ ಚನ್ನಬಸವಣ್ಣ ಚಿಕ್ಕದಣ್ಣಾಯಕ. ಅಲ್ಲಮ ಪ್ರಭುವು ಅನುಭವ ಮಂಟಪದ ಶೂನ್ಯ ಸಿಂಹಾಸನಾದೀಶನಾಗಿ ಶರಣರ ಕ್ರಾಂತಿಗೆ ಮಾರ್ಗದರ್ಶನ ನೀಡಿದ ಮಹಾನುಭಾವನಾದರೆ ಆತನಿಂದಲೇ ಅಪೂರ್ವ ಶಿವಯೋಗಿ ಎಂಬ ಪ್ರಶಂಸೆಗೆ ಪಾತ್ರನಾದ ಚನ್ನಬಸವಣ್ಣ ಷಟ್‌ಸ್ಥಲ ಚಕ್ರವರ್ತಿ, ಅವಿರಳಜ್ಞಾನಿ ಎಂದೆನಿಸಿಕೊಂಡು ಬಸವಣ್ಣನವರ ನಂತರದಲ್ಲಿ ಉಳವಿಗೆ ಬಂದು ವೀರಶೈವ ಧರ್ಮವನ್ನು ಸುವ್ಯವಸ್ಥಿತವಾಗಿ ಪ್ರಚಾರಮಾಡಿದ ಮಹಾಮಹಿಮ ಚನ್ನಬಸವಣ್ಣನವರು. ಉಳವಿಯಲ್ಲಿ ನೆಲೆನಿಂತು ವೀರಶೈವ ಧರ್ಮ ಪ್ರಸಾರ ಕೈಕೊಂಡಿದ್ದಿಲ್ಲವಾದರೆ ಇಂದಿನ ಸ್ವರೂಪದಲ್ಲಿ ವೀರಶೈವ ವಿಸ್ತಾರ ಹೊಂದುತ್ತಿರಲಿಲ್ಲ. ಆದರೂ ಇಂಥ ಮಹಾನುಭಾವನ ಬಗ್ಗೆ ವೀರಶೈವ ಧರ್ಮ ಸಾಹಿತ್ಯದಲ್ಲಿ ಸಿಗಬೇಕಾದಷ್ಟು ಪ್ರಚಾರ ಸಿಕ್ಕಿಲ್ಲ. ಚನ್ನಬಸವಣ್ಣನವರ ಬಗ್ಗೆ ವೀರಶೈವ ಸಾಹಿತ್ಯದಲ್ಲಿ ಗ್ರಂಥಗಳೇ ಅಲ್ಪ. ಅವರ ವೈವಿಧ್ಯಮಯ ಜೀವನವನ್ನು ಸಮಗ್ರ ದೃಷ್ಟಿಯಿಂದ ಪರಿಚಯಿಸುವ ಗ್ರಂಥದ ಅಭಾವ ಇದೆ.

ಇದನ್ನು ಗಮನಿಸಿಯೋ ಏನೋ ಮುಂಡರಗಿಯ ಶ್ರೀ ಅನ್ನದಾನೀಶ್ವರ ಸಂಸ್ಥಾನಮಠದ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ಚನ್ನಬಸವಣ್ಣನವರ ಬಗ್ಗೆ ಆಸಕ್ತಿ ತಳೆದು ಇತ್ತೀಚೆಗೆ ಅಂದರೆ ೧೯೮೦ ನವೆಂಬರದಲ್ಲಿ ಉಳವಿಯಲ್ಲಿ ಚನ್ನಬಸವಣ್ಣನವರ ಬಗ್ಗೆ ಮೂರು ದಿನಗಳ ವಿಚಾರ ಸಂಕಿರಣವನ್ನು ನಾಡಿನ ಅನೇಕಾನೇಕ ವಿದ್ವಾಂಸರನ್ನು, ಮಠಾಧೀಶರನ್ನು ಕರೆಸಿ, ಅವರ ಸಹಕಾರದಿಂದ ನಡೆಸಿದ್ದಲ್ಲದೆ, ಆ ವಿಚಾರ ಸಂಕೀರ್ಣದ ಆರು ವಿವಿಧ ಗೋಷ್ಠಿಗಳಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಸೂಕ್ತವಾಗಿ ಸಂಪಾದಿಸಿ ಗ್ರಂಥರೂಪದಲ್ಲಿ ನೀಡಿರುವ ಪರಿಣಾಮವಾಗಿ ಈ "ಷಟ್‌ಸ್ಥಲ ಚಕ್ರವರ್ತಿ ಶ್ರೀ ಚನ್ನಬಸವಣ್ಣನವರು" ಬೆಳಕು ಕಂಡಿದೆ. ಸಂಪಾದಕರು ತಮ್ಮ ವಿಸ್ತೃತ ಮುನ್ನುಡಿ

ಯಲ್ಲಿ ತಮ್ಮ ಯೋಜನೆಯನ್ನು ವಿವರಿಸಿ ಈ ಗ್ರಂಥದಿಂದ ಚನ್ನಬಸವಣ್ಣನವರ ಸಮಗ್ರ ಪರಿಚಯವಾದೀತೆಂದು ಹಾರೈಸಿದ್ದಾರೆ. ಆದರೂ ಸಂಶೋಧನೆಗೆ ಕೊನೆಯಿಲ್ಲವೆಂದೂ ಹೇಳಿದ್ದಾರೆ.

ಬಸವಣ್ಣನವರ ಅಕ್ಕನಾಗಮ್ಮ ಶಿವದೇವರ ಮಗ ಚನ್ನಬಸವಣ್ಣನವರ ಜನನದ ಬಗ್ಗೆ ವಿನಾಕಾರಣ ವಿವಾದ ವೀರಶೈವ ಸಾಹಿತ್ಯದಲ್ಲಿ ತಲೆ ಎತ್ತಿರುವ ಬಗ್ಗೆ ಇಬ್ಬರು ಮೂವರು ವಿದ್ವಾಂಸರು ಅಭ್ಯಾಸಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದು, ಈ ವಿವಾದದಲ್ಲಿ ಹುರುಳಿಲ್ಲ, ಚನ್ನಬಸವಣ್ಣನವರು ಅಕ್ಕನಾಗಮ್ಮ ಶಿವದೇವರ ಪುತ್ರನೆಂಬುದೇ ಸಾಧು ಎಂದು ಪ್ರತಿಪಾದಿಸಿದ್ದಾರಲ್ಲದೆ, ತನ್ನ ಮಗನ ಜೀವನ ತಿದ್ದಿತೀಡುವಲ್ಲಿ ಕೊನೆವರೆಗೂ ಆತನಿಗೆ ಬೆಂಬಲಕ್ಕೆ ನಿಂತು ಸಹಾಯನೀಡುವಲ್ಲಿ ಅಕ್ಕನಾಗಮ್ಮ ತೋರಿದ ಶ್ರದ್ಧೆ ವಹಿಸಿದ ಪಾತ್ರ ಪ್ರಾಮುಖ್ಯವಾದುದರಿಂದ ಆಕೆಯ ಹೆಸರೇ ಪ್ರಾಮುಖ್ಯವಾಗಿ ಕೇಳಿಬರುತ್ತದೆ. ಹೊರತು ಶಿವದೇವನಲ್ಲ ಎಂದು ಸ್ಪಷ್ಟಾಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವೀರಶೈವ ಧರ್ಮದಲ್ಲಿ ಭಕ್ತನು ಗುರುಕರ ಸುಜಾತನಾದ ಬಳಿಕ ಶರಣನಾಗಿ ಪೂರ್ವಜೀವನವನ್ನು ತೊರೆದು ಗುರುವಿನ ನೆರಳಿನಂತೆ ಬಾಳಬೇಕಾಗುತ್ತದೆ ಎಂಬ ಮಾತಿನಂತೆ ಚನ್ನಬಸವಣ್ಣನವರ ಹೆಸರಿನ ಜೊತೆಗೆ ಕಕ್ಕಯ್ಯ ಮುಂತಾದವರ ಹೆಸರುಗಳು ಸೇರಿಕೊಂಡಿದ್ದಿರಬಹುದು. ಆದರೆ ಚನ್ನಬಸವಣ್ಣನ ತಂದೆ ಶಿವದೇವನೇ ಸೈ ಎಂದೂ ಸಾರಿದ್ದಾರೆ. ಚನ್ನಬಸವಣ್ಣ ಬಾಳಿದ್ದು ಬರಿ ೨೪ ವರ್ಷ.

ಎರಡನೆ ಗೋಷ್ಠಿಯಲ್ಲಿ ಅಷ್ಟಾವರಣ, ಇಷ್ಟಲಿಂಗ ಸಂಹಿತೆ, ಸರ್ವಾಚಾರ ಸಂಪತ್ತು, ಷಟ್‌ಸ್ಥಲ ವಿಚಾರಗಳ ಕುರಿತು ಚನ್ನಬಸವಣ್ಣನವರು ವ್ಯಕ್ತಪಡಿಸಿರುವ ಅಂಶಗಳನ್ನು ವಿವೇಚಿಸಲಾಗಿದೆ. ಚನ್ನಬಸವಣ್ಣನವರು ವೀರಶೈವರ ಮೈ ಮೇಲೆ ಲಿಂಗವಿರಬೇಕು ಎಂಬ ವಿಚಾರದಲ್ಲಿ ಅದೆಷ್ಟು ನಿಷ್ಠುರವಾಗಿದ್ದಾರೆಂಬುದು ಸಿದ್ಧರಾಮನಿಗೆ ಲಿಂಗಧಾರಣೆ ಮಾಡಿಸಿದ ಸಂದರ್ಭದಲ್ಲಿ ಕಂಡುಬರುತ್ತದೆ. ದೇಹದಲ್ಲಿಯ ಷಟ್‌ಚಕ್ರವೇ ಷಟ್‌ಸ್ಥಲ. ಭಕ್ತನು ಕ್ರಮೇಣ ಸಾಧನೆ ನಡೆಸಿ ಒಂದೊಂದು ಘಟ್ಟಗಳನ್ನು ಏರುತ್ತ ಶಿವಯೋಗಿ ಯಾಗಬೇಕು. ಇದುವೆ ಷಟ್‌ಸ್ಥಲ ರಹಸ್ಯ ಎಂದಿದ್ದಾರೆಂಬ ಮಾತನ್ನು ಈ ಗೋಷ್ಠಿಯ ಪ್ರಬಂಧಗಳಲ್ಲಿ ಕಾಣಬಹುದು.

ಚನ್ನಬಸವಣ್ಣನವರು ಕರಣಹಸಿಗೆ, ಪದಮಂತ್ರಗೋಪ್ಯ, ಹಿರಿಯ ಮಂತ್ರ ಗೋಪ್ಯ, ಮಿಶ್ರಾರ್ಪಣ ಘಟಚಕ್ರ ಎಂಬುವ ಹೊತ್ತಿಗೆಗಳನ್ನು ವಿಪುಲ ವಚನಗಳನ್ನು ರಚಿಸಿದ್ದಾರೆ. ಆಧುನಿಕ ಶರೀರ ವಿಜ್ಞಾನ ತಮಗೆ ಗೊತ್ತಿತ್ತೇನೋ ಎಂಬಂತೆ ಚನ್ನಬಸವಣ್ಣ ನವರು 'ಕರಣ ಹಸಿಗೆ'ಯಲ್ಲಿ ಮಾನವ ಶರೀರದ ಉತ್ಪತ್ತಿ ಬೆಳವಣಿಗೆಗಳನ್ನು ನಿಖರವಾಗಿ ನಿವೇದಿಸಿದ್ದಾರೆ. ಕಾರಣದಿಂದಲೇ ಧರ್ಮಾಚರಣೆ ನಡೆಸಬೇಕಾಗಿರುವಾಗ ಕಾಯವನ್ನು ಮಂತ್ರಮಯ ಮಾಡಬೇಕು. ಭಕ್ತನು ಪದಾರ್ಥವನ್ನು ಲಿಂಗಾರ್ಪಣೆ ಮಾಡಿದಲ್ಲದೆ ಸೇವಿಸಲಾಗದು. ಲಿಂಗಾರ್ಪಿತವಾದ ನಂತರವೇ ಪದಾರ್ಥವು ಪ್ರಸಾದವಾಗಿ ಭಕ್ಷಿಸಲು

ಯೋಗ್ಯ. ಆ ರೀತಿಯ ಲಿಂಗಾರ್ಪಣೆ ಹೇಗೆ ಮಾಡಬೇಕು ಎಂಬೆಲ್ಲ ವಿಚಾರಗಳನ್ನು ಚನ್ನಬಸವಣ್ಣನವರ ಗ್ರಂಥಗಳ ಆಧಾರದಿಂದ ಪರಿಚಯಿಸಿಕೊಂಡಿದ್ದಾರೆ. ಆತನ ಖಚಿತ ಜ್ಞಾನವನ್ನು ಪ್ರಶಂಸಿದ್ದಾರೆ.

ಚನ್ನಬಸವಣ್ಣನವರ ಜೀವನ ದೃಷ್ಟಿ ತತ್ವ ಪ್ರತಿಪಾದನೆಗಳ ಕುರಿತು ನಾಲ್ಕು ಪ್ರಬಂಧಗಳು ನಾಲ್ಕನೇ ಗೋಷ್ಠಿಯಲ್ಲಿ ಬಂದಿವೆ. "ಲಿಂಗ ಕಟ್ಟಿದರೆ ಸಾಕು, ಆತ 'ವೀರಶೈವ' ಎಂದು ಬಸವಣ್ಣನವರು ಒಪ್ಪುತ್ತಾರೆ. ಆದರೆ ನಾನು ಹಾಗಲ್ಲ, ಆತನ ನಿಷ್ಠೆಯನ್ನು ಪರೀಕ್ಷಿಸಿ ನಿಷ್ಠಾವಂತನಿದ್ದಾನೆಂದಾದರೆ ಒಪ್ಪಿಕೊಳ್ಳುತ್ತೇನೆ" ಎಂದು ಚನ್ನಬಸವಣ್ಣನವರು ಹೇಳಿರುವ ಮಾತು ಅವರ ಕೆಚ್ಚೆದೆಯನ್ನು ಎತ್ತಿ ತೋರಿಸುತ್ತದೆ. ನುಲಿಯ ಚಂದಯ್ಯ ತನ್ನ ಕಳೆದು ಹೋದ ಲಿಂಗವನ್ನು ಪುನಃ ಕಟ್ಟಿಕೊಳ್ಳದಿದ್ದಾಗ ಆತನಿಗೆ ಬಿಂಬಿಸುವಂತೆ ತಿಳಿಹೇಳಿ ತಿರುಗಿ ಲಿಂಗಧಾರಣಕ್ಕೆ ಅಣಿಗೊಳಿಸುತ್ತಾನೆ. ಅನುಭವ ಮಂಟಪದಲ್ಲಿ ಬಗೆಹರಿಯದಂಥ ಸಮಸ್ಯೆಗಳೇನಾದರೂ ಬಂದರೆ ಅದಕ್ಕೆ ಅಲ್ಲಮಪ್ರಭುವು ಪರಿಹಾರಗಳನ್ನು ಕೇಳಿ ಪಡೆಯುತ್ತಿದ್ದುದು ಚನ್ನಬಸವಣ್ಣನವರಿಂದಲೇ. ನಡೆನುಡಿಗಳಲ್ಲಿ ಒಂದಾದ ಶಿವಯೋಗಿ ನಮ್ಮ ಚನ್ನಬಸವಣ್ಣ ಎಂದು ಅಲ್ಲಮ ಪ್ರಭುಗಳು ಅವರನ್ನು ಹೊಗಳುತ್ತಿದ್ದರು. ಅಂತೆಯೇ ಕ್ರಾಂತಿ ತರದ ಧರ್ಮ ಪರಿಪಾಲನೆ ಪ್ರಚಾರಕಾರ್ಯ ಚನ್ನಬಸವಣ್ಣನವರೇ ನೋಡಿಕೊಳ್ಳಬೇಕೆಂದು ಆವೇಶಿಸಿದ್ದುಂಟು. ಐದನೆಯ ಗೋಷ್ಠಿಯಲ್ಲಿ ಚನ್ನಬಸವಣ್ಣನವರು ಎಂಥ ಹಿರಿಯ ಪಾತ್ರವಹಿಸಿದರೆಂಬುದನ್ನು ನಿವೇದಿಸಲಾಗಿದೆ. ಜಾನಪದ ಸಾಹಿತ್ಯದಲ್ಲಿ ಚನ್ನಬಸವಣ್ಣನವರ ಜನನದ ಕುರಿತಿರುವ ವಾದ ಕೂಡ ಪ್ರದರ್ಶಿಸಲ್ಪಟ್ಟಿದೆ.

ಇತರ ವೀರಶೈವ ಕವಿಗಳ ಮೇಲೆ ಚನ್ನಬಸವಣ್ಣನವರು ಬೀರಿದ ಭಾವವನ್ನು ಕಂಡು ಹಿಡಿದ ಪ್ರಯತ್ನ ಆರನೆಯ ಗೋಷ್ಠಿಯ ಪ್ರಬಂಧದಲ್ಲಿ ನಡೆದಿದೆ. ವಿರೂಪಾಕ್ಷ ಪಂಡಿತನು ಚನ್ನಬಸವ ಪುರಾಣವೆಂಬ ಮಹಾಕಾವ್ಯ ಬರೆದಿದ್ದಾನೆ. ಚಾಮರಸ ಮುಂತಾದ ಅನೇಕಾನೇಕ ಕವಿಗಳು ಚನ್ನಬಸವಣ್ಣನವರ ವಚನಗಳನ್ನು ಅಭಿಮಾನದಿಂದ ಉದ್ಧರಿಸಿ ತಮ್ಮ ಕಾವ್ಯಗಳಲ್ಲಿ ಏರ್ಪಡಿಸಿಕೊಂಡಿದ್ದಾರೆ. ಚನ್ನಬಸವಣ್ಣನವರು ಬರೆದಿರುವ ಕರಣಹಸಿಗೆ, ಮಿಶ್ರಾರ್ಪಣ, ಪದಮಂತ್ರಗೋಪ್ಯ, ಹಿರಿಯ ಮಂತ್ರಗೋಪ್ಯ ಘಟಚಕ್ರ ಗ್ರಂಥಗಳು ಹೆಬ್ಬೊತ್ತಿಗೆಗಳಲ್ಲ. ಆದರೆ ಸೂತ್ರರೂಪಿ ಗ್ರಂಥಗಳೆಂದು ಹೇಳಬೇಕು. ಆದರೆ ಅವುಗಳಲ್ಲಿ ಅಡಗಿದ ಅಗಾಧ ಜ್ಞಾನ, ತತ್ವ ವಿಚಾರಗಳು ಇಂದಿಗೂ ಪ್ರಮಾಣಗಳಾಗಿ ನಿಂತಿವೆ. ಇಂಥ ಮಹಾನುಭಾವನ ಕೃತಿಗಳನ್ನು ಇನ್ನಿತರರು ಉದಾಹರಿಸುವದರಲ್ಲಿ ಅಚ್ಚರಿಯೆಲ್ಲಿಂದ ಬಂತು!

ಇಷ್ಟನ್ನು ಬರೆದರೂ ಪ್ರಸಕ್ತ ಗ್ರಂಥದ ಬಗೆಗೆ ಏನನ್ನು ಹೇಳಿದಂತಾಗಲಿಲ್ಲ. ಇದೊಂದು ಇಣುಕು ನೋಟ ಅಷ್ಟೆ. ಅವಿರಳಜ್ಞಾನಿ ಷಟ್‌ಸ್ಥಲ ಚಕ್ರವರ್ತಿ ಶಿವಯೋಗಿ ಚನ್ನಬಸವಣ್ಣನನ್ನು ಆತನ ಆಚಾರ ವಿಚಾರಗಳನ್ನು, ನಡೆನುಡಿಗಳನ್ನು ವಿಮರ್ಶಾತ್ಮಕ

ದೃಷ್ಟಿಯಿಂದ ಪರಿಶೀಲಿಸಿ, ಪರೀಕ್ಷಿಸಿ ೨೨ ವಿದ್ವಾಂಸರು ಬರೆದ ಈ ಪ್ರಬಂಧಗಳಲ್ಲಿ ಅಡಕವಾಗಿರುವ ವಿಷಯವೆಲ್ಲವನ್ನೂ ಈ ಕಿರು ಪರಿಚಯದಲ್ಲಿ ಮಾಡಿಕೊಡಲು ಸಾಧ್ಯವಿಲ್ಲ. ಇಡೀ ಗ್ರಂಥವನ್ನೇ ಓದಿ ಶ್ರಮಪಡಬೇಕಾಗುವದು. ಇಲ್ಲಿಯ ಲೇಖಕರಲ್ಲಿ ಗಣ್ಯ ಪ್ರಾಧ್ಯಾಪಕರು, ಸಾಹಿತಿಗಳು ಇದ್ದಾರಲ್ಲದೆ; ಹಲಕೆಲವು ಪೀಠಾಧಿಪತಿಗಳೂ ತಮ್ಮ ಪರಿಪಕ್ವ ವಿಚಾರಗಳನ್ನು ಮಂಡಿಸಿದ್ದಾರೆ. ಚನ್ನಬಸವಣ್ಣನವರನ್ನು ಅರಿತುಕೊಳ್ಳಬೇಕೆನ್ನುವವರಿಗೆ ಇದೊಂದು ಸಮೀಚೀನ ಭೋಜನವೇ ಸೈ. ಡಾ. ತಿಪ್ಪೇರುದ್ರಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆದ ಈ ವಿಚಾರ ಸಂಕಿರಣ ಜನಕ್ಕೆ ಒಂದು ಉದ್‌ಗ್ರಂಥ ಒದಗಿಸಿದ್ದು ಪ್ರಶಂಸನೀಯ.

ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರರ ಪ್ರಯತ್ನ ಪರಿಶ್ರಮಗಳ ಫಲವಾಗಿ ಈ ಗ್ರಂಥವು ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯ ಪ್ರಥಮ ಪುಷ್ಪವಾಗಿ ಅರಳಿರುವುದು ನಾಡಿನ ಸೌಭಾಗ್ಯ. ಶ್ರೀ ಜಗದ್ಗುರುಗಳ ಶ್ರಮದ ಸಾರ್ಥಕ್ಯ; ಇದೊಂದು ಆಕರ ಗ್ರಂಥವಾಗಬಲ್ಲದು.

ನಿರಂಜನ ಜಂಗಮ ಪುಂಗವ ಅಲ್ಲಮ ಪ್ರಭುದೇವರ ಸಮಗ್ರ ವಿಚಾರ ಸಂಕಿರಣ ಕೃತಿ ಕುರಿತು

— **ವ್ಯಾಕರಣತೀರ್ಥ ಪಂ. ಚಂದ್ರಶೇಖರ ಶಾಸ್ತ್ರಿಗಳು,** ಮಾಗಳ

ಪೂಜ್ಯ ಜಗದ್ಗುರುಗಳು "ಜಂಗಮ ಪುಂಗವ ಅಲ್ಲಮ ಪ್ರಭುದೇವರು" ಗ್ರಂಥ ಪ್ರಕಟಿಸಿರುವುದು ಅತ್ಯುತ್ತಮವಾದ ಕಾರ್ಯವಾಗಿದೆ, ಈ ಗ್ರಂಥದಲ್ಲಿ ೧೬ಜನ ಲೇಖಕರು ಇರುವರು ಇವರಲ್ಲಿ ಮ. ನಿ. ಪ್ರ. ಜ. ಅನ್ನದಾನ ಶ್ರೀಗಳು ಓರ್ವರು, ಈ ೧೬ ಜನ ಲೇಖಕರು ತಮ್ಮ ತಮ್ಮ ಬೌದ್ಧಿಕ ಜಾಣ್ಮೆಗನುಸಾರವಾಗಿ ವೈಚಾರಿಕ ಮತ್ತು ವೈವಿಧ್ಯಮಯ ಲೇಖನಗಳನ್ನು ಬರೆದಿರುವುದು ಸಂತಸದ ಸಂಗತಿ. ಇವರೆಲ್ಲರು ವಿದ್ವಾಂಸರು ಉನ್ನತ ಪದವೀಧರರು, ಉಪನ್ಯಾಸಕರು, ಸಂಶೋಧಕರನ್ನೊಳಗೊಂಡ ಈ ಗ್ರಂಥ ಅತ್ಯಂತ ವಾಸ್ತವಾಂಶ ಒಳಗೊಂಡಿದೆ, ಈ ಗ್ರಂಥದಲ್ಲಿ ಶ್ರೀಗಳವರು ಎರಡು (೨) ಲೇಖನಗಳನ್ನು ನಾನು ಸಂಕ್ಷೇಪವಾಗಿ ವಿಮರ್ಶಿಸಿರುತ್ತೇನೆ, ಆ ಲೇಖನಗಳು ಈ ಕೆಳಗಿನಂತಿವೆ.

೧. ಒಂದು ವಿವೇಚನೆ–ಅಲ್ಲಮಪ್ರಭು ಜೀವನ ಸಾಧನೆ,

೨. ಪ್ರಭುದೇವರ ಬೆಡಗಿನ ವಚನಗಳ ವಿಶ್ಲೇಷಣೆ,

ಈ ಎರಡು ಲೇಖನಗಳನ್ನು ಶ್ರೀಗಳು ಸಮಂಜಸವಾಗಿ ವಿವರಿಸಿದ್ದಾರೆ, ಅಲ್ಲಮಪ್ರಭುದೇವರು ಘನವಾದ ಹಾಗೂ ಉಪಮಾತೀತ ಮಹಾನ್ ಧಾರ್ಮಿಕ ಪುರುಷರು ಇಂತವರ ಬಗ್ಗೆ ಬರೆಯುವುದು ಅಪೂರ್ವವಾದ ಕಾರ್ಯ, ನಮ್ಮ ವೀರಶೈವ ಶರಣರ ಬಗ್ಗೆ ಯಾರಾದರೂ ಗ್ರಂಥಗಳನ್ನು ಬರೆಯಬೇಕಾದರೆ ಅವರು ಅವರ ವಚನಗಳನ್ನು ಓದಿ ವಿವರಿಸಬೇಕಾಗುತ್ತವೆ, ಆದರೆ ಪ್ರಭುದೇವರ ವಚನಗಳು ಜನ ಸಾಮಾನ್ಯರಿಗೆ ತಿಳಿಯತಕ್ಕವುಗಳಾಗಿರುವುದಿಲ್ಲ, ಅವರ ವಚನಗಳು ಉಕ್ಕಿನ ಕಡಲೆಯಾಗಿರುತ್ತವೆ. ಅಂತಹ ಕಡಲೆಗಳನ್ನು ತಿನ್ನುವವರು ವಿವೇಚಿಸಿ ತಿನ್ನಬೇಕಾಗುತ್ತದೆ, ಇಲ್ಲದಿದ್ದರೆ ಅವರ ದಂತಗಳು ಪುಡಿ ಪುಡಿಯಾಗುತ್ತವೆ, ಅದರಲ್ಲಿಯೂ "**ಅವರ ಬೆಡಗಿನ ವಚನಗಳಂತು ಅರ್ಥವಾಗುವುದು ಬಹಳ ಕಠಿಣವಾದ ಕೆಲಸ**"

ಶ್ರೀಗಳವರ ಮೊದಲನೆಯ ಲೇಖನದಲ್ಲಿ ಹರಿಹರ ಬರೆದ ವಿಷಯಗಳನ್ನು ಖಂಡಿಸಿರುತ್ತಾರೆ, ಹರಿಹರನಿಗೆ ಸರಸಕವಿ, ಕಮಲರವಿ; ಕವಿ ಸಾರ್ವಭೌಮ ಎಂಬ ಬಿರುದು ಅಲ್ಲದೆ ಹರಿಹರ ವೀರಶೈವರ ಆದ್ಯ ಕವಿಯಾಗಿದ್ದಾನೆ, ಈ ಕವಿ ಕನ್ನಡ ಭಾಷೆಯುಲ್ಲಿ ಪ್ರವೀಣ ಆದರೆ ಆತನಿಗೆ ಸಮಗ್ರವಾಗಿ ಪ್ರಭುದೇವರ ಎಲ್ಲಾ ಗ್ರಂಥಗಳನ್ನು ಓದಲು ಶಕ್ಯವಾಗಿರಲಿಕ್ಕಿಲ್ಲ, ಪ್ರಭುದೇವರ ಬಗ್ಗೆ ಯಾರೇ ಬರೆದರು ಅದು ಅವರ ಅವರ ಅನಿಸಿಕೆ

ಹೊರತು ಅದೊಂದು ತಾತ್ವಿಕ ಸಿದ್ಧಾಂತವಲ್ಲ. ವಿವಿಧ ಕವಿಗಳು ಹಲ ಕೆಲವು ಲೇಖಕರು ವಿಧ ವಿಧ ರೀತಿಯಲ್ಲಿ ಲೇಖನಗಳನ್ನು ಬರೆದಿರುತ್ತಾರೆ. ಆದರೆ ಅವರಂತೆ (ಲೇಖಕರಂತೆ) ಅಲ್ಲಮ ಪ್ರಭುದೇವರು ಶ್ರೀಸಾಮಾನ್ಯರಲ್ಲ ಅವರೊಬ್ಬ ಮಹಾನ್‌ಯೋಗಿ ಪುಂಗವರು.

"ಅಲ್ಲಮ ಪ್ರಭುಗಳನ್ನೂ ಕುರಿತು (**"ಆತ್ಮರಾವ್"**) ಉಭಯ ಭಾಷಾ ಪಂಡಿತರು, ಇವರು **"ಹಿಂದಿ''** ಮತ್ತು **"ಸಂಸ್ಕೃತ"** ಭಾಷೆಗಳಲ್ಲಿ ಕೃತಿರತ್ನಗಳನ್ನು ರಚಿಸಿದ್ದಾನೆ. ಇದು ಈಗಿನ ಗುಜರಾತ ರಾಜ್ಯದ ಮಥುರಾ ನಗರದಲ್ಲಿ ಮುದ್ರಣವಾಗಿದೆ. ಈ ಪಂಡಿತರು ಸಮಗ್ರ ಭಾರತ ದೇಶದ ಯೋಗಿಗಳ ಮಾಲಿಕೆಯನ್ನು ತಯಾರಿಸಿ, ಅದರೊಳಗೆ ೨೧ ಜನ ಯೋಗಿ ಪುಂಗವರು ಸೇರ್ಪಡೆಯಾಗಿದ್ದಾರೆ. ಅದರಲ್ಲಿ ಅಲ್ಲಮಪ್ರಭುಗಳವರು ಓರ್ವರು. ಇದರಿಂದ ನಮಗೆ ತಿಳಿಯುವದೇನೆಂದರೆ (**ಅಲ್ಲಮಪ್ರಭು ದೇವಸ್ಯ**) ಎಂದು ವ್ಯಾಖ್ಯೆ ಇದೆ. ಪ್ರಾಯಶಃ ಅಲ್ಲಮ+ಪ್ರಭುಗಳು ಬೇರೆ ಎಂದು ಲೇಖಕರಿಗೆ ಅನಿಸಿರಬೇಕು. ಆದರೆ ಅಲ್ಲಮ ಪ್ರಭು ಓರ್ವರೇ ಇದ್ದುದರಿಂದ ನಮಗೆ ತಿಳಿಯುವುದೇನೆಂದರೆ, ಅಲ್ಲಮ ಪ್ರಭುಗಳು ವೀರಶೈವರಾಗಿರುವುದು ನಮ್ಮೆಲ್ಲರಿಗೂ ಒಂದು ಹೆಮ್ಮೆಯ ವಿಷಯವಾಗಿರುತ್ತದೆ. ನಮ್ಮ ಕರ್ನಾಟಕದಲ್ಲಿ ಕೆಲವರು ಮನಬಂದಂತೆ ಲೇಖನಗಳನ್ನು ಬರೆದಿರುವುದು ಅಸಹ್ಯಕರವಾದದ್ದು, ಅಂತಹ ಬರಹಗಳನ್ನೆಲ್ಲ ಇಲ್ಲಿ ಉಲ್ಲೇಖಿಸಲಾರೆ. ಅದರಲ್ಲಿಯೂ ಕೆಲವರಂತು (ವೀರಶೈವರು) ಬರೆದಿರುವುದು ಬಹಳ ವಿಷಾದಕರ ಹಾಗೂ ಅತೃಪ್ತಿಯ ಸಂಗತಿಯಾಗಿದೆ.

ಗತಿಸಿದ ೭೫ ಸಂವತ್ಸರಗಳಿಂದ ವೀರಶೈವರ (ಯಾನವಿ ಕಲಹ) ಪ್ರಥಮದಲ್ಲಿ ವಾರಣಾಸಿ, (ಬನರಸಿ)-(ಕಾಶಿ,)ಯಲ್ಲಿ ಪ್ರಾರಂಭವಾದದ್ದು ಇಂದಿನವರೆಗೂ ಉಭಯತರು ಮನಬಂದಂತೆ, ಟೀಕೆ-ಟಿಪ್ಪಣಿ ಬರೆದಿದ್ಸರೆ, ಈ ಮಹಾನ್ ಧಾರ್ಮಿಕ ಪುರುಷರಾದ, ಆಧ್ಯಾತ್ಮಿಕ ಚಿಂತಕರಾದ "ಅಲ್ಲಮ ಪ್ರಭು'', "ಜಗಜ್ಯೋತಿ ಬಸವೇಶ್ವರ", "ಷಟಸ್ಥಲ ಚಕ್ರವರ್ತಿ'', "ಚನ್ನಬಸವ" ಕರ್ಮಯೋಗಿ ಸೊನ್ನಲಾಪುರದ (ಸೊಲ್ಲಾಪುರ) 'ಸಿದ್ಧರಾಮೇಶ್ವರ' ಮೊದಲಾದವರ ಬಗ್ಗೆ ಬರೆದಿರುವುದು, ಅತ್ಯಂತ ಘೋರ ಹಾಗೂ ಪಾಪಪೂರಿತ್ಯ ಕೆಲಸವಾಗಿರುತ್ತದೆ. ಕರ್ನಾಟಕದ ಇತ್ತೀಚಿನ ಬೀದರ ಜಿಲ್ಲೆಯ ಪ್ರಮುಖ ಪಟ್ಟಣವಾದ ಬಸವ ಕಲ್ಯಾಣದಲ್ಲಿ ಅನುಭವಮಂಟಪವನ್ನು ತಯಾರಿಸಿ ೩೦೦ ಜನ ಶಿವ ಶರಣರು-ಶಿವಶರಣೆಯುರು ಸೇರಿ ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿ ಈ ವೇದಿಕೆಯಲ್ಲಿ ಭಕ್ತಿ ಭಂಡಾರಿ ಬಸವೇಶ್ವರರು ಅಗ್ರಗಣ್ಯರು. ಇಂತವರ ಬಗ್ಗೆ ಇಲ್ಲ ಸಲ್ಲದ ಟೀಕೆಗಳನ್ನು, ಆರೋಪ ಗಳನ್ನು ಮಾಡುತ್ತ ಬಂದಿದ್ದಾರೆ, ಇದರ ಬಗ್ಗೆ ಬಹಳ ಹೇಳುವ ಅವಶ್ಯಕತೆ ಇರುವುದಿಲ್ಲ.

ಜಗಜ್ಯೋತಿ ಬಸವೇಶ್ವರರು ಅಮೋಘ ಕಾರ್ಯ (ಸೇವೆ) ಮಾಡಿರುತ್ತಾರೆ. ಅವರನ್ನು ಕುರಿತು ಶ್ರೀ ಮಾನ್ "ಶ್ರೀನಿವಾಸ ಮೂರ್ತಿಗಳು" (ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದವರು) ಒಂದು ಕೃತಿರತ್ನವನ್ನು ರಚಿಸಿದ್ದಾರೆ ಇವರ ಪ್ರಕಾರ ಒಂದು ನಿಲುಮೆ ಈ ರೀತಿ ಇರುತ್ತದೆ.

"ಬಸವಣ್ಣನವರು ವೀರಶೈವರಿಗೆ ಸಂಬಂಧಿಸಿದವರಲ್ಲ (ಲಿಂಗವಂತರಿಗಲ್ಲ)''
"ಕನ್ನಡ ನಾಡಿಗೆ ಸಂಬಂಧಪಟ್ಟವರಲ್ಲ"
"ಹಿಂದುಸ್ಥಾನಕ್ಕೆ ಸೇರಿದವರಲ್ಲ ಅರ್ಥಾತ್ ಸಮಗ್ರ ವಿಶ್ವಕ್ಕೆ ಸೇರಿದ ಅಗ್ರಗಣ್ಯರು"
ಭಕ್ತಿಭಂಡಾರಿಯವರು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರು

(ಉದಾ) ೧) ಜಾತಿ ವ್ಯವಸ್ಥೆ ನಿರ್ಮೂಲನೆ, (ಜಾತಿಯ ಉಚ್ಚಾಟನೆ)
೨) ಸಮಾಜದ ಸೇವೆ, (ಅಸಮಾನ್ಯತೆ ಹೋಗಲಾಡಿಸಲು ಯತ್ನ)
೩) (ಅನುಭಾವ, ದಾಸೋಹ, ಭಾವನೆಗಳನ್ನು ನೇರವೇರಿಸಿದವರು)

ಈ ಮಹಾನ್ ವ್ಯಕ್ತಿಗಳು ಕಾರ್ಲ್‌ಮಾರ್ಕ್ಸ್ (೨೦೦ ವರ್ಷ ಲೆನಿನ್ ೧೯೨೨) ರ ವರೆಗೆ ಸಮಾಜವಾದಿಗಳಿಂದ ಬಗೆ ಹರಿಯುದ ಆರ್ಥಿಕ ಪರಿಸ್ಥಿತಿಯನ್ನು (ಅಣ್ಣ) ಗತಿಸಿದ ೮೫೦ ವರ್ಷಗಳ ಹಿಂದೆ ಕಾಯಕಗಳ ಮೂಲಕ ನಿವಾರಣೆ ಮಾಡಿದವರು. ಆದುದರಿಂದಲೆ ಸರ್ **"ಜೇಮ್ಸ್ ಕ್ಯಾಂಬಲ್"** ಎನ್ನುವ ಆಂಗ್ಲ ಪಂಡಿತನು ತಮ್ಮದೊಂದು ಲೇಖನದಲ್ಲಿ ಈ ಕೆಳಗಿನ ವಿಷಯುವನ್ನು ಪ್ರಸ್ತಾಪಿಸಿದ್ದಾರೆ. "ಆಧುನಿಕ ಕಾಲದ ಸಮಾಜ ಸುಧಾರಕರು, ಬಸವಣ್ಣನವರಿಗಿಂತ ಒಂದು ಇಂಚು ಕೂಡ ಮುಂದೆ ಚಲಿಸಿಲ್ಲ. ಆದರೆ ಅವರ ಕತ್ತಿಯನ್ನು ತೀಡುತ್ತಲಿದ್ದಾರೆ" ಎಂದು ವಿಚಾರಪೂರಿತ ಮಾತನ್ನು ಪ್ರಕಟಿಸಿರುವರು. ಪುನಃ ಪಟ್ಟಣದಲ್ಲಿ ("The down Fall of Hindu India") ಎನ್ನುವ ಇಂಗ್ಲಿಷ್ ಗ್ರಂಥದಲ್ಲಿ ಹಾಗೂ ಇನ್ನೊಂದು ಗ್ರಂಥ ಹಿಂದೀ ಭಾಷೆ (**"ಹಿಂದೂ ಭಾರತ್ ಕೆ ಅಂತ್"**) ಇದರ **ಅರ್ಥ "ಭಾರತದಲ್ಲಿ ಹಿಂದೂಗಳ ಅವನತಿ"** ಈ ಎರಡು ಗ್ರಂಥಗಳಲ್ಲಿ ಬಸವಣ್ಣನವರ ಬಗ್ಗೆ ಬರೆಯುತ್ತ, ಬಸವಣ್ಣನವರು ಕಾಯಕಗಳನ್ನು ಪ್ರಸಾರ ಮಾಡಿದ ದಿವ್ಯ ವ್ಯಕ್ತಿಗಳು, ಬುದ್ಧ, ಮಹಾವೀರರಿಗಿಂತ ಪ್ರಸಿದ್ಧರಾದವರು. ಈ ಬಗೆಗೆ ವೀರಶೈವರಲ್ಲಿ ಸುಪ್ರಸಿದ್ಧ ಕವಿಗಳಾಗಿದ್ದ **"ಷಡಕ್ಷರಿ"** ಕವಿಗಳು ಹೇಳಿದ ವಿಷಯು ನೋಡಣ. ಉಭಯ ಭಾಷಾ ವಿಶಾರದವರು, ಧನಗುರು ಹಿರೆಯುಮಠದ ಪಟ್ಟದ ಸ್ವಾಮಿಗಳು ಆ ಗ್ರಂಥಗಳನ್ನು ಕನ್ನಡ ಮತ್ತು ಸಂಸ್ಕೃತದಲ್ಲಿ ರಚಿಸಿ, ತಮ್ಮ ಬೌದ್ಧಿಕ ಪ್ರೌಢಿಮೆಯನ್ನು ಪ್ರದರ್ಶನ ಮಾಡಿಕೊಂಡ ಷಡಕ್ಷರಿ ಕವಿಗಳು **"ವೃಷಭೇಂದ್ರ ವಿಜಯು"** ಮಹಾಚಂಪೂಕಾವ್ಯದ ಕೊನೆಯ ಅಧ್ಯಾಯದಲ್ಲಿ ಗ್ರಂಥ ರಚನೆಗೆ ಮಂಗಳ ಹಾಡುತ್ತ, (**"ಸಮರ್ಪಿಸಿದಂ ತತ್ಕೃಪೆಯಿಂದ ಷಡಕ್ಷರ ಶಿವಾಚಾರ್ಯ ಮಹಾಭಕ್ತಿಯಿಂ"**) ಎಂದು ಗ್ರಂಥಕ್ಕೆ ವಿರಾಮ ಕೊಡುತ್ತ, ಇಂಥ ಶಿವಾಚಾರ್ಯರು ಬಸವೇಶ್ವರರ ಬಗ್ಗೆ, (ವೃಷಭೇಂದ್ರ) ವಿಜಯ ಸಂಧಿ-೪೨ ಶ್ಲೋಕ ೫೬)

"ಗುರುರೂಪಂ, ಲಿಂಗರೂಪಂ, ಪರತರ ಚರರೂಪಂ.
ಪ್ರಸಾದ ಸ್ವರೂಪಂ, ಹರ, ಪ್ರಾರಂಭ ಸ್ವರೂಪಂ, ಭಸಿತ.
ಲಸಿತ ಸ್ವರೂಪಂ, ರುದ್ರಾಕ್ಷ ಸ್ವರೂಪಂ, ವರ ಷಡ್ವರ್ಣ

ಸ್ವರೂಪಂ ಪರಮ ಶಿವಾ ಮಯಾನದಿ, ಭಕ್ತಸ್ವರೂಪಂ,
ಪರ ಚಿಚ್ಛಕ್ತಿ ಸ್ವರೂಪಂ! ಬಸವನ ಸದೃಶಾನಂದ, ಸತ್ಯಸ್ವರೂಪಂ.

ಶ್ರೀ ಬಸವಣ್ಣನವರು ಅಷ್ಟಾವರ್ಣ ಸ್ವರೂಪರೆಂದು ಷಡಕ್ಷರ ಕವಿಗಳು ಸುಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ. ಮಂತ್ರವು ಅಷ್ಟಾವರ್ಣಗಳಲ್ಲಿ ಒಂದು ಅದರ ವಿಷಯ ಹೇಳುವ ಕಾಲಕ್ಕೆ, (**"ವರಷಡ್ವರ್ಣ ಸ್ವರೂಪಂ"**) ಎಂದು ಹೇಳಿದ್ದಾರೆ. ಷಡ್ವರ್ಣಗಳಿಂದ ಕೂಡಿರುವದು. ಷಡಕ್ಷರ ಮಂತ್ರವು, ಈ ಶ್ಲೋಕವನ್ನು (ಮಾತನ್ನು) ಕವಿಗಳು ಹೇಳಿರುತ್ತಾರೆ. ಇದೇ ಗ್ರಂಥದ ಮತ್ತೊಂದು ಕಡೆಗೆ—

"ನೀನೆ ಗುರುಂ, ನೀನೆ ಲಿಂಗಂ, ನೀನೆ ಚರಂ, ನೀನೆ ಮಾತೆ, ನೀನೆ ಪಿತಾಂ, ಕೇಳ್ ನೀನೆ ಗತಿ, ನೀನೆ ಮತಿ, ನೀನೆ ಪತಿ" ಎಂದು ಹೇಳಿದ್ದಾರೆ. ಇನ್ನೊಂದು ಕಡೆಗೆ– **"ಅವಂ ಬಸವಕ್ಷರಂ, ಬಾವಂ, – ವಿಂಗೆ ನುಡಿವವನ ವದನವೆ ಸದನಂ"** ಎಂತಲೂ ಹೇಳಿದ್ದಾರೆ. ಹೀಗೆ ಬಸವಣ್ಣನವರನ್ನು ಅನೇಕರು ವರ್ಣಿಸಿದ್ದಾರೆ. ಈ ವಿಷಯ ಪ್ರಸ್ತಾಪಿಸುವುದಕ್ಕೆ ಕಾರಣವೇನೆಂದರೆ, ಪ್ರಭುದೇವರ ಶಿಷ್ಯರಾದ ಇಂತವರೇ ಮಹಾಪುರುಷರಾಗಿರುವಾಗ, ಬಸವಣ್ಣನವರ ಗುರುಗಳಾದ ಅಲ್ಲಮಪ್ರಭುದೇವರು ಎಂಥವರಿರಬಹುದೆಂದು, ವಿಶ್ಲೇಷಿಸುವುದು ಅನಗತ್ಯ. ಈ ವಿಷಯವನ್ನು ವಿಸ್ತಾರವಾಗಿ ಬರೆದ ಕಾರಣ ಒಂದೇ ಸಮಾಜದವರು ಪರಸ್ಪರ, ಮಹಾಪುರುಷರನ್ನು ನಿಂದಿಸುವುದು ಅತ್ಯಂತ ಮಹಾಪಾಪದ ಕೆಲಸ, ಪ್ರಭು ದೇವರ ಬಗ್ಗೆ ಶ್ರೀಗಳು ಬರೆದ ಲೇಖನಗಳು.

೧) **ಒಂದು ವಿವೇಚನೆ ಅಲ್ಲಮಪ್ರಭು ಜೀವನ ಸಾಧನೆ:** ಒಂದು ವಿವೇಚನೆಯಲ್ಲಿ ಚಾಮರಸ ಕವಿ ಪ್ರಭುದೇವರ ಬಗ್ಗೆ (ಪ್ರಭುಲಿಂಗಲೀಲೆ) ಯನ್ನು ಬಹಳ ಸುಂದರವಾಗಿ, ಸೊಗಸಾಗಿ, ಸರಳವಾಗಿ, ನೈಜ ತತ್ವವನ್ನು ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ಈ ಕೃತಿಯು **"ಕನ್ನಡ, ತೆಲಗು, ತಮಿಳು, ಮರಾಠಿ"** ಭಾಷೆಗಳಲ್ಲಿ ಮುದ್ರಿಸಲಾಗಿದೆ. ಸನ್ನಿಧಿಯವರು ಚನ್ನಾಗಿ ವರ್ಣಿಸಿದ್ದಾರೆ. ಅದರೋದಿಗೆ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ವಿವರಿಸಿದ್ದಾರೆ. ಇದು ಶ್ರೀಗಳ ಆಳವಾದ **"ಅಧ್ಯಯನ"** ಹಾಗೂ **"ಅಧ್ಯಾಪನ"** ಕಾಣಬಹುದು. ಪ್ರಭುದೇವರು ಅನುಭವ ಮಂಟಪದ ಪ್ರಮುಖರು ಹಾಗೂ ಅಧ್ಯಕ್ಷರಾಗಿದ್ದರು, ಅಲ್ಲದೆ ೩೦೦ ಜನ ಶಿವ ಶರಣ ಶರಣೆಯರಿಗೆ ಮಾರ್ಗದರ್ಶಕರಾಗಿ ನೇತೃತ್ವವಹಿಸಿದರು. ಇಂಥ ಅನುಪಮವಾದ ಲೇಖನ ವನ್ನು ಶ್ರೀಗಳು ಸಮರ್ಪಕ ಮತ್ತು ಸಮಂಜಸವಾಗಿ ಹೊಂದಾಣಿಕೆ ಮಾಡಲು ಶ್ರೀಗಳ ಪ್ರಯತ್ನ ಹಾಗೂ ಜಾಣ್ಮೆಯೊಂದಿಗೆ ಸಫಲತೆಯನ್ನು ಪಡೆದುಕೊಂಡಿದೆ.

೨) **ಅಲ್ಲಮ ಪ್ರಭುದೇವರ ಬೆಡಗಿನ ವಚನಗಳ ಒಂದು ವಿಶ್ಲೇಷಣೆ:** ಈ ಲೇಖನವು ೨೬ ಪುಟಗಳಷ್ಟು ಇವೆ. ಇದು ಸುಮಧುರ ಹಾಗೂ ಆಕರ್ಷಕವಾದ ಬೆಡಗಿನ ವಚನಗಳನ್ನು ಸೊಗಸಾಗಿ ಸುಂದರವಾಗಿ, ಸುಲಲಿತವಾದ ಮಾತುಗಳಿಂದ ಅಭಿವ್ಯಕ್ತಪಡಿಸಿದ್ದಾರೆ. ಪ್ರಭುದೇವರ ಬೆಡಗಿನ ವಚನಗಳನ್ನು ವಿವರಿಸಬೇಕಾದರೆ

ಆಳವಾದ ಅಧ್ಯಯನ, ನಿರಂತರ ಅಭ್ಯಾಸ ಹಾಗೂ ಪರಿಪೂರ್ಣವಾದ ಜ್ಞಾನ, ಅತ್ಯಂತ ಪ್ರಮುಖವಾದ ಅವಶ್ಯಕತೆ ಇರುತ್ತದೆ. ಸನ್ನಿಧಿಯವರು ಈ ಬೆಡಗಿನ ವಚನಗಳನ್ನು ಅಭ್ಯಸಿಸಿ ಸ್ಪಷ್ಟಪಡಿಸಿದ್ದಾರೆ. ಅಸಮರ್ಪಕವಾದ ಹಾಗೂ ಅಸಂಗತವಾದ ವಿಷಯಗಳು ಇವರ ಲೇಖನದಲ್ಲಿ ಕಾಣಬರುವುದಿಲ್ಲ. ಈ ವಿಶಾಲವಾದ ಲೇಖನದಲ್ಲಿ, ಶ್ರೀಗಳವರು ಮೈಲಾರ ಬಸವಲಿಂಗ ಶರಣರ ತ್ರಿಪದಿಗಳನ್ನು ಲೇಖನಕ್ಕೆ ಸೇರಿಸಿರುವುದು, ಉಪಯುಕ್ತ ವಾಗಿದೆ. ಈ ಕೃತಿಗಿಂತ ಪೂರ್ವದಲ್ಲಿ ಸನ್ನಿಧಿಯವರು (ಮೈಲಾರ ಬಸವಲಿಂಗ ಶರಣರ ತ್ರಿಪದಿಯನ್ನು ಗ್ರಂಥ(ದಲ್ಲಿ)ವಾಗಿ ಪ್ರಕಟಿಸಿದ್ದಾರೆ.) ಒಟ್ಟಿನಲ್ಲಿ ಪ್ರಭುಗಳ ಬೆಡಗಿನ ವಚನಗಳು ಸಾರ್ವತ್ರಿಕ, ಸಾರ್ವಕಾಲಿಕ ಸತ್ಯವನ್ನೇ ಬಿಂಬಿಸುತ್ತವೆ.

ಶ್ರೀಗಳವರು ಅನೇಕ ಗ್ರಂಥಗಳನ್ನು ಸಂಗ್ರಹಿಸಿ ತಾವೇ ಪ್ರಕಟಿಸಿರುತ್ತಾರೆ. ಶ್ರೀ ಮಠದ ಗ್ರಂಥ ಮಾಲಿಕೆ ಬೃಹತ್ ಪ್ರಮಾಣದಲ್ಲಿದೆ ಈ ಗ್ರಂಥ ಮಾಲಿಕೆ ಮಠಕ್ಕೆ ಗೌರವ ಮತ್ತು ಪ್ರತಿಷ್ಠೆಯನ್ನು ತಂದು ಕೊಟ್ಟಿದೆ. ಈ ಕೃತಿರತ್ನ (**"ಜಂಗಮ ಪುಂಗವ ಅಲ್ಲಮಪ್ರಭುದೇವರು"**) ಇದು ಸನ್ನಿಧಿಯವರ ೬೮ನೆಯ ಕೃತಿಯಾಗಿದೆ. ಇದು ಅಸಾಧಾರಣ ಕಾರ್ಯವಾಗಿದೆ, ಗ್ರಂಥ ಪ್ರಕಟನೆ ಜಗದ್ಗುರುಗಳ ಮಠಕ್ಕೆ ಭೂಷಣ ಪ್ರಾಯವಾದದ್ದು. ಶ್ರೀಗಳವರ ಆಧುನಿಕ ಕಾಲದ ಓರ್ವ ವಿದ್ವತ್‌ಪೂರ್ಣ ಹಾಗೂ ಜಿಜ್ಞಾಸೆ ಅಪೂರ್ವವಾದದ್ದು. ಅವರ ಪ್ರಯತ್ನ ಸಾಧನೆ ಅಮೋಘವಾದದ್ದು. ಈ ಗ್ರಂಥಮಾಲೆಯು ಸನ್ನಿಧಿಯವರ ನೇತೃತ್ವದಲ್ಲಿ ೧೦೧ ಆಗಿ ವೀರಶೈವರ ೧೦೧ ತತ್ವಕ್ಕೆ, ಸಮನ್ವಯವಾಗಿ ಈ ದಿಸೆಯಲ್ಲಿ ಅದು ಪ್ರಗತಿಯನ್ನು ಪಡೆದು ಯಶಸ್ವಿಯಾಗುತ್ತದೆಂದು ಆಶಿಸುತ್ತೇನೆ. ಗ್ರಂಥ ಪ್ರಕಾಶನ ಕಾರ್ಯ ಉಳಿದ ಮಠಗಳಿಗೂ, ಮಠಾಧೀಶರಿಗೂ, ಒಂದು ಮಾರ್ಗದರ್ಶಿಕವಾಗುವದೆಂಬ ಆತ್ಮಪೂರ್ವಕ ಭರವಸೆ ನನ್ನದಾಗಿದೆ ಎಂದು ಹಾರೈಸುತ್ತೇನೆ.

ಶಿವಂ-ಭೂಯಾತ

ಭಾಗ ಮೂರು

ಅನುಭಾವಿಯ ಶಿವಬದುಕು

ಅನುಕರಣೀಯ ರಜತಮಹೋತ್ಸವ

—ಶ್ರೀ ಮ. ನಿ. ಪ್ರ. ಜಗದ್ಗುರು ಶಿವಶಾಂತವೀರ ಮಹಾಸ್ವಾಮಿಗಳು,
ಸಂಸ್ಥಾನ ಗವಿಮಠ, ಕೊಪ್ಪಳ

ಧಾರ್ಮಿಕ ರಾಜಕೀಯ, ಶೈಕ್ಷಣಿಕ, ಔದ್ಯೋಗಿಕ ಹೀಗೆ ಅನೇಕ ಕ್ಷೇತ್ರಗಳಲ್ಲಿಯ ಸಂಘ–ಸಂಸ್ಥೆಗಳ ಹಾಗೂ ಮಹಾಪುರುಷರ ಹುಟ್ಟು ಅಥವಾ ಅಧಿಕಾರ ವಹಿಸಿದ ಅವಧಿಯು ೨೫ ವರ್ಷಗಳಾಗಲು ರಜತ ಮಹೋತ್ಸವವನ್ನೂ, ೫೦ ವರ್ಷಗಳಾಗಲು ಸುವರ್ಣಮಹೋತ್ಸವವನ್ನೂ, ೬೦ ವರ್ಷಗಳಾಗಲು ಷಷ್ಟ್ಯಬ್ದಿ ಸಮಾರಂಭವನ್ನೂ, ೭೫ ವರ್ಷಗಳಾಗಲು ವಜ್ರಮಹೋತ್ಸವವನ್ನೂ, ೧೦೦ ವರ್ಷಗಳಾಗಲು ಶತಮಾನೋತ್ಸವ ವನ್ನು ಆಚರಿಸುವ ಸಾಂಪ್ರದಾಯವು ರೂಢಿಗೊಂಡಿರುವುದು ಸರ್ವರಿಗೂ ವಿದಿತ ವಾದುದೇ ಸರಿ. ಸಾಂಪ್ರದಾಯಕ್ಕನುಗುಣವಾಗಿ ಜಗದ್ಗುರು ಮೃಡಗಿರಿ ಶ್ರೀ ಅನ್ನದಾನೀಶ್ವರ ಮಹಾಸಂಸ್ಥಾನದ ದಶಮಪೀಠಾಧೀಶರಾದ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾ ಶಿವಯೋಗಿಗಳವರು ಪೀಠಾರೋಹಣ ಮಾಡಿದ ೨೫ ವರ್ಷಗಳ ಈ ಅವಧಿಯಲ್ಲಿ ಆಚರಿಸುವ ಈ ರಜತಮಹೋತ್ಸವವು ವಿನೂತನವಾದುದೂ, ಅಸದೃಶವಾದುದೂ, ಸಾರ್ಥಕವಾದುದೂ, ಸರ್ವಾಂಗ ಸುಂದರವಾದುದೂ, ಪುಣ್ಯತಮವಾದುದೂ ಸಕಲರ ಮೆಚ್ಚುಗೆಗೆ ಪಾತ್ರವಾದುದೂ, ಅನುಕರಣೀಯವಾದುದೂ ಎಂದು ಹೇಳಬಹುದು. ಯೋಜನಾಬದ್ಧವಾಗಿ ಹಮ್ಮಿಕೊಂಡು ಆಚರಿಸುತ್ತಿರುವ ಈ ರಜತಮಹೋತ್ಸವದ ಸಕಲ ಕಾರ್ಯಕಲಾಪಗಳನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕನಗೈದ ಸಹೃದಯಿ ಗಳಾದ ಮಹನೀಯರು, ಮೆಚ್ಚದಿರರು–ಆಕ್ಷೇಪಿಸುವವರೂ ಇದ್ದಾರೆ ಎಂದರೆ,

ಪಳಿಯಲ್ಬಲಂ ನೆಗಳ।
ಲ್ಬಳನೇಂ ಬಲ್ಲನೆ ನವೀನಕಾವ್ಯಮನಿಳೆಯೋಳ್।
ತೊಳಗುವ ರವಿಯಂ ಮಸಳಿಪ।
ಜಳಧರ ಮದರಂತೆ ಜಂಗಮನೇಂ ಬೆಳಗುಮೆ॥

ಜಗತ್ತನ್ನೇ ಬೆಳಗುವ ರವಿಯ ಪ್ರಕಾಶವನ್ನು ಕುಂದಿಸುವ ಮೇಘವು ಸೂರ್ಯನಂತೆ ಜಗತ್ತನ್ನು ಬೆಳಗಲಾರದು. ಹೇಗೂ ಹಾಗೆ ದುರ್ಜನರು ಸತ್ಕಾವ್ಯವನ್ನು ಸಜ್ಜನರ

ನಡತೆಯನ್ನು ಆಕ್ಷೇಪಿಸುವರೇ ಹೊರತು ಮಹಾತ್ಮರಂತೆ ಜಗದುದ್ಧಾರಗೈಯ್ಯರು ಎಂಬ ಷಡಕ್ಷರ ಮಹಾಕವಿಯ ಉತ್ತರವೇ ಸಾಕು. ಅಸ್ತು.

ಪೀಠದ ಘನತೆ ಗೌರವಗಳನ್ನು ಕಾಪಾಡಿಕೊಂಡು ಬರುವಲ್ಲಿಯೂ, ಶ್ರೀಮಠದ ಆಶ್ರಯದಲ್ಲಿ ನಡೆದುಬಂದ ವಿದ್ಯಾಮಂದಿರಗಳ ಕಟ್ಟಡಾದಿ ಸುವ್ಯವಸ್ಥೆಗೈಯ್ಯುವಲ್ಲಿಯೂ ಹಾಗೂ ಅಭಿವೃದ್ಧಿ ವಿಸ್ತಾರಪಡಿಸುವಲ್ಲಿಯೂ ಬಂದ ಅನೇಕ ಎಡರುತೊಡರುಗಳಿಗೆ ಎದೆಗುಂದದ ಧೈರ್ಯವನ್ನೂ, ಹಸಿದುಬಂದ ದೀನದಲಿತರಿಗೆ, ಅತಿಥಿ ಅಭ್ಯಾಗತರಿಗೆ, ದಾಸೋಹ ಮುಖಾಂತರ-ವಿದ್ಯಾರ್ಥಿಗಳಿಗೆ ಪ್ರಸಾದ ನಿಲಯಗಳ ಮುಖಾಂತರ ಜಾತ್ರಾ ಮಹೋತ್ಸವಾದಿ ಪ್ರಸಂಗಗಳಲ್ಲಿ ಸಮಸ್ತ ಸದ್ಭಕ್ತರಿಗೆ ಭೂರಿ ಅನ್ನದಾನಗೈಯುವ ಕಲಾವಿದರನ್ನು ಪಂಡಿತೋತ್ತಮರನ್ನು, ರಾಜಕಾರಣಿಗಳಾದ ದೇಶಭಕ್ತರನ್ನು-ಉದಾರಿ ಗಳನ್ನೂ-ಸಾಹಿತಿಗಳನ್ನೂ ಗುರುತಿಸಿ ಸನ್ಮಾನಿಸುವ, ಶ್ರೀಮಠಕ್ಕೆ ಆಗಮಿಸಿದ ವಯೋವೃದ್ಧರೂ ಜ್ಞಾನವೃದ್ಧರಾದ ಗುರುವಿರತರನು ಸಾಧುಸಂತರನ್ನು ಗೌರವಿಸುವ, ಶ್ರೀಮಠದಿಂದ ಪ್ರತಿವರುಷ ಉಚಿತ ಸಾಮೂಹಿಕ ವಿವಾಹ ದೀಕ್ಷಾ-ಲಿಂಗಧಾರಣ, ಅಂಗವಿಕಲರಿಗೆ, ಒಡವರಿಗೆ ವಸ್ತ್ರದಾನಾದಿ ಪುಣ್ಯತಮ ಸತ್ಕರ್ಮಗಳನ್ನು ಗೈವ ಔದಾರ್ಯತೆಯನ್ನೂ, ತ್ರಿಕಾಲ ಪೂಜಾ ಹಾಗೂ ಶ್ರೀಮಠದ ದಿನನಿತ್ಯ ಕಾರ್ಯಕಲಾಪ ಗಳಲ್ಲಿ ಅನುಷ್ಠಾನ ಕಾಲದಲ್ಲಿಯೂ ಸಮಯ ಸಾಧಿಸಿ ಶ್ರದ್ಧೆಯಿಂದ ಧರ್ಮಗ್ರಂಥಗಳ ಸೂಕ್ಷ್ಮಾತಿಸೂಕ್ಷ್ಮ ಅವಲೋಕನಗೈಯ್ದು ನಿಶ್ಚಿತ ಜ್ಞಾನ ಪಡೆದು ಪ್ರವಚನ ಹಾಗೂ ಗ್ರಂಥಗಳ ಮುಖಾಂತರ ಧರ್ಮಾಂಧರೂ, ಧರ್ಮವಿಮುಖರೂ, ಧರ್ಮಾವಹೇಳನ ಗೈಯುವ ಜನಗಳಿಗೆ ಸರಿಯಾದ ಧರ್ಮಪ್ರಜ್ಞೆ ಮೂಡಿಸುವ ಜಾಣ್ಮೆಯನ್ನೂ, ಪಂಡಿತರು ತಮ್ಮದೇ ಆದ ವಿಚಾರಸರಣಿಯಿಂದ ಪೂರ್ವಪ್ರಮಾಣ ಗ್ರಂಥಗಳ ನೈಜತೆಯ ಮರೆಮಾಚಿ ಅಪಾರ್ಥಗೈದಲ್ಲಿ ಸಿಪ್ಪುರವಾಗಿ ಖಂಡಿಸಿ ಉತ್ತರಿಸುವ ವೈದುಷ್ಯವನ್ನೂ, ಪಂಡಿತೋತ್ತಮರು ಬರೆದ ಗ್ರಂಥಗಳ ಮತ್ತು ತಾವೇ ಸ್ವತಃ ರಚಿಸಿದ (ಬರೆದ) ಸುಮಾರು ೩೫ ಗ್ರಂಥಗಳ ಒಟ್ಟಿನಲ್ಲಿ ೧೦೧ ಗ್ರಂಥಗಳ ಪ್ರಕಾಶನಪಡಿಸುವಲ್ಲಿ ಶ್ರೀಗಳ ಸಾಹಿತ್ಯ ಪ್ರೇಮವನ್ನು ಶಾಖಾಮಠಗಳ ಹಾಗೂ ಮೂಲ ಪೀಠದ ಜೀರ್ಣೋದ್ಧಾರ ಕಲ್ಯಾಣಮಂಟಪ ಮಹದ್ವಾರ ಇತ್ಯಾದಿ ಅಭಿವೃದ್ಧಿಪರ ಕಾರ್ಯಗಳಲ್ಲಿ ಕರ್ತವ್ಯದಕ್ಷತೆಯನ್ನು ಶ್ರೀ ಚನ್ನಬಸವಣ್ಣ, ಶ್ರೀ ಪ್ರಭುದೇವರು, ಶ್ರೀ ಅಕ್ಕಮಹಾದೇವಿ, ಶ್ರೀ ಸಿದ್ಧರಾಮೇಶ್ವರ, ಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳ ವಿಚಾರ ಸಂಕೀರ್ಣಗಳನ್ನು ಏರ್ಪಡಿಸಿ ವಿಮರ್ಶಾತ್ಮಕ ಲೇಖನಗಳ ಸಂಕಲನ ಗ್ರಂಥಗಳನ್ನು ಪ್ರಕಾಶಪಡಿಸುವ ಮುಖಾಂತರ ಸಮಾಜ ಬಾಂಧವ ರಿಗೆ ಶಿವಶರಣ-ಶಿವಶರಣೆಯರ, ಮಹಾನುಭಾವರ ಸಮಗ್ರಜೀವನ-ಅವರ ಸಾಧನೆ, ಅವರ ತತ್ವ, ಅವರ ಕೊಡುಗೆ ಇತ್ಯಾದಿಗಳ ಸರಿಯಾದ ಪರಿಜ್ಞಾನ ಹಾಗೂ ಅಭಿಮಾನ ಉಂಟಾಗುವಂತೆ ಮಾಡಿದ ಸಾಹಸವನ್ನು ಯಾರು ತಾನೆ ಮೆಚ್ಚಲಿಕ್ಕಿಲ್ಲ. ಇದರಿಂದ ಈ ರಜತ ಮಹೋತ್ಸವವು ಅನುಕರಣೀಯವೆನ್ನುವಲ್ಲಿ ತಥ್ಯವಿದೆ.

ಸುಮಾರು ಮುವತ್ತಕ್ಕೂ ಮಿಕ್ಕಿ ಚಿಕ್ಕ ಪ್ರಟ್ಟ ಗ್ರಾಮ-ನಗರ ಪಟ್ಟಣಗಳಲ್ಲಿ ಹೀಗೆ ಬೇರೆ ಬೇರೆ ಕಡೆಗಳಲ್ಲಿ ನಡೆದ ರಜತ ಮಹೋತ್ಸವಗಳಲ್ಲಿ ಉತ್ಸವಾದಿ ಆಡಂಬರಗಳಿಗೆ ಹೆಚ್ಚಿನ ಆದ್ಯತೆಯನ್ನೀಯದೆ, ಜನಮನದ ಕಾಳಿಕೆಯನ್ನು ಪರಿಹರಿಸುವ ಸುಖ-ಶಾಂತಿ ಯುತ ಇಹ-ಪರಬಾಳು ಬಟ್ಟೆಯ ಸಾಧನಗಳಾದ-ಧರ್ಮ-ನೀತಿ, ಆಚಾರ, ಕಾಯಕ ತತ್ಪರತೆ, ದಾನ, ದೈವಭಕ್ತಿ, ಆರೋಗ್ಯ ಸಂರಕ್ಷಣೆ ಬ್ರಹ್ಮಚರ್ಯ, ಸ್ತ್ರೀ ಪುರುಷರ ಕರ್ತವ್ಯಪ್ರಜ್ಞೆ ಮೂಡಿಸುವ ಸಕಲ ಸಮಾಜ ಬಾಂಧವರಲ್ಲಿ ಪರಸ್ಪರ ಸೌಹಾರ್ದತೆ ಉಂಟಾಗುವ ಇತ್ಯಾದಿ ತನು-ಮನ-ಭಾವಗಳ ಶುದ್ಧೀಕರಣ ಗೈಯ್ಯುವ ಆಶೀರ್ವಚನ ವಿತ್ತ ಜಗದುದ್ಧಾರಕ-ಲೀಲೆಯನ್ನು ಹೀಗೆ ಒಂದೇ ತಲೆಮಾರಿನುದ್ದಕ್ಕೂ ಸಾಧಿಸಲಾಗದ ಅನೇಕ ಸಾಧನೆಗಳನ್ನು ಕೇವಲ ೨೫ ವರ್ಷಗಳಲ್ಲಿ ಸಾಧಿಸಿದ ಶ್ರೀಗಳ ಅಸಾಧಾರಣ ಶಕ್ತಿ ಸಾಮರ್ಥ್ಯಗಳನ್ನು ಕಂಡು ಧರ್ಮಾಭಿಮಾನಿಗಳೂ-ಪೀಠಾಭಿಮಾನಿಗಳೂ ಆದ ಶ್ರೀಮಠದ ಸದ್ಭಕ್ತರೂ-ಶ್ರೀಮಠದ ಆಶ್ರಮದಲ್ಲಿ ನಡೆಯುವ ವಿದ್ಯಾಸಂಸ್ಥೆಗಳ ಕಾರ್ಯಕಾರಿ ಮಂಡಳಿಯವರೂ, ಅಧ್ಯಾಪಕವೃಂದದವರೂ, ವಿದ್ಯಾರ್ಥಿಗಳೂ ಶ್ರೀಗಳ ಅಪ್ಪಣೆಯ ನಾಂತು-ಅನುಕರಣೀಯ ರಜತ ಮಹೋತ್ಸವವನ್ನು ಆಚರಿಸುತ್ತಿರುವದು ಸಮುಚಿತವಾದು ದಲ್ಲವೆ? ಕರ್ತವ್ಯಪರವೂ ಸಮುಚಿತವೂ ಆಗಿದೆ.

ಇಂತಹ ಪೂಜ್ಯರನ್ನು ಪಡೆದ ನಾಡೂ, ಭಕ್ತರೂ ಧನ್ಯರು. ಶ್ರೀ ಗವಿಸಿದ್ಧನೂ ಹಾಗೂ ಕರ್ತೃ ಶ್ರೀ ಅನ್ನದಾನೀಶ್ವರನೂ ಇತೋಪ್ಯತಿಶಯವಾಗಿ ಪೂಜ್ಯರ ಸುವರ್ಣ ಮಹೋತ್ಸವವನ್ನು ಆಚರಿಸುವ ಸೌಭಾಗ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

ಇತಿ ಮಂಗಲಂ

ಶಿವ ನೆನಹು

—ಪೂಜ್ಯ ಡಾ. ಶರಣಬಸವಪ್ಪ ಅಪ್ಪ
ಮಹಾದಾಸೋಹ ಪೀಠಾಧಿಪತಿಗಳು ಶರಣಬಸವೇಶ್ವರ
ಸಂಸ್ಥಾನ, ಕಲಬುರ್ಗಿ ಹಾಗೂ ಅಧ್ಯಕ್ಷರು.
ಅಖಿಲಭಾರತ ವೀರಶೈವ ಮಹಾಸಭೆ, ಬೆಂಗಳೂರು.

ಕಾಲವು ನಿರಂತರ ಚಲನಶೀಲವಾದುದು. ಅದರೊಂದಿಗೆ ಹೆಜ್ಜೆಹಾಕಿ, ಆ ವೇಗದಲ್ಲಿ ತನ್ನ ತಲೆಯುಮೇಲೆ ಹೊತ್ತು ಬದುಕಿನ ಮಣಿಹವನ್ನು ಅತ್ಯಂತ ಸಾರ್ಥಕವಾಗಿ ಪೂರೈಸಿ, ಆ ಮೂಲಕ ಸಕಲ ಜೀವರ ಹಿತವಮಾಡಿ ಬದುಕಿದವನೇ ಕಾಲಪುರುಷ. ಅಂತಾಗದೆ ಸಾವಿರ ವರ್ಷ ಬದುಕಿದರೂ ಯಾವ ಪ್ರಯೋಜನವೂ ಇಲ್ಲ. "ಕೂಡಲ ಸಂಗನ ಶರಣರಲ್ಲಿ ಲೇಸೆನಿಸಿಕೊಂಡು ಒಂದುದಿನ ಬದುಕಿದರೂ ಸಾಕು. ಅದು ಲೇಸಿನ ಬದುಕು; ಶಿವಬದುಕು" ಎಂದಿರುವ ಬಸವಣ್ಣನವರ ಮಾತು ಇಲ್ಲಿ ಅರ್ಥಪೂರ್ಣವೆನಿಸುತ್ತದೆ. ಈ ಅರ್ಥಪೂರ್ಣ ಮಾತಿಗೆ ಪ್ರತ್ಯಕ್ಷದರ್ಶಿಯಾಗಿ ಬದುಕುತ್ತಿರುವ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ ಬದುಕು ನಿಜವಾಗಿಯೂ ಜಂಗಮನ ಬದುಕಾಗಿದೆ. ಅವರ ಬದುಕಿನ ಒಟ್ಟು ಐವತ್ತೊಂದು ವರ್ಷಗಳಲ್ಲಿ, ಇಪ್ಪತ್ತೈದು ವರ್ಷಗಳ ಸೇವೆ ಮುಂಡರಗಿಯ ಅನ್ನದಾನೀಶ್ವರ ಮಠಕ್ಕೆ ಜಗದ್ಗುರುಗಳಾಗಿ ಶ್ಲಾಘನೀಯವೆನ್ನುವಂತೆ ಸಲ್ಲಿಸಿರುವರು; ಸಲ್ಲಿಸುತ್ತಲಿರುವರು.

ಈಗ ಅವರ ಶೂನ್ಯ ಸಿಂಹಾಸನಾರೋಹಣ ರಜತಮಹೋತ್ಸವ. ಬಾಹ್ಯ ದೃಷ್ಟಿಯಿಂದ ನೋಡಲು ಈ 'ಶೂನ್ಯಸಿಂಹಾಸನ'ವು ಶ್ರೀಮಠದ ಪೀಠವೆಂದಾದರೂ, ಇದರ ಅಂತರಾರ್ಥವು ಶಿವನ ಹೃದಯ ಪೀಠವೇ ಆಗಿದೆ:

"ಅಂಗದ ಬಲದಲ್ಲಿ ಬ್ರಹ್ಮಸ್ಥಾನ,
ಎಡದಲ್ಲಿ ನಾರಾಯಣನ ಸ್ಥಾನ ಒಲ್ಲೆನಯ್ಯಾ,
ಕೊರಳು ಗರಳದ ಸ್ಥಾನ, ಬಾಯಿ ಅಪ್ಪುವಿನ ಸ್ಥಾನ
ನಾಸಿಕ ವಾಯುವಿನ ಸ್ಥಾನ, ಕಣ್ಗಳು ಅಗ್ನಿಯಸ್ಥಾನ,
ಜಡೆಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ,
ಹಿಂದು ಸೂರ್ಯನ ಸ್ಥಾನ, ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನ,
ಗುಹ್ಯ ಕಾಮನ ಸ್ಥಾನ,
ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗ ಸ್ಥಾನ,
ದೇಹ ರುಂಡ ಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ,

ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ,
ಹೃದಯು ಮಧ್ಯದ ಅಂತರಾಳದ
ಏಕ ಪೀಠದ ಸಿಂಹಾಸನವ ತೆರಪಕೊಡು
ಕೂಡಲಸಂಗಮದೇವಾ"

ಬಸವಣ್ಣನವರ ಈ ವಚನದಂತೆ; ಜಗದ್ಗುರುಗಳ ಶೂನ್ಯ ಸಿಂಹಾಸನಾರೋಹಣವು ಶಿವನ ಹೃದಯು ಸಿಂಹಾಸನಾರೋಹಣವೇ ಆಗಿದೆ. ಅವರ ಶೂನ್ಯ ಸಿಂಹಾಸನಾರೋಹಣದ ರಜತ ಮಹೋತ್ಸವ ಕಾರ್ಯಕ್ರಮವನ್ನು ಈ ಭಕ್ತಕೋಟಿ ಆಚರಿಸುತ್ತಿರುವದು, ಅವರು ಮಾಡಿದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಪ್ರಾಮಾಣಿಕ 'ಸೇವೆಯನ್ನು', ಸಾಧನೆಯನ್ನೂ ಗೌರವಿಸುವಂತಿದೆ. ಇದು ಪರವೋಚ್ಚ ಸಂಸ್ಕೃತಿಯ ಸಂಕೇತವಾಗಿದೆ.

ಮೂಲತಃ ಧರ್ಮ ಕ್ಷೇತ್ರದ ಜಗದ್ಗುರುಗಳಾಗಿರುವ ಶ್ರೀ ಅನ್ನದಾನೀಶ್ವರರು ತಮ್ಮ ಶ್ರೀಮಠದ ಘನಾತಿಶಯದ ಮುಖಾಂತರ ಮುಂಡರಗಿಯನ್ನು ಕರ್ನಾಟಕ ನಕಾಶೆಯಲ್ಲಿ ಥಟ್ಟನೆ ಗುರುತಿಸುವಂತೆ ಮಾಡಿದ್ದಾರೆ. ಶ್ರೀಮಠದ ಪ್ರಭೆ ನಾಡಿನುದ್ದಗಲಕ್ಕೂ ಹಬ್ಬಿ ಹರಡುವಂತೆ ಕಾರ್ಯವೆಸಗುತ್ತಿದ್ದಾರೆ. ಆ ಭಾಗದಲ್ಲಿ ಹಲವಾರು ಧಾರ್ಮಿಕವಾದ ಕಾರ್ಯಕ್ರಮಗಳನ್ನು ಆಗಾಗ ಹಮ್ಮಿಕೊಳ್ಳುವುದರ ಮೂಲಕವಾಗಿ ಮತ್ತು ಆ ಪ್ರದೇಶದಲ್ಲಿ ಜರುಗುವ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಮಾರ್ಗದರ್ಶನ ಮಾಡುವುದರ ಮುಖಾಂತರ ಅಧ್ಯಾತ್ಮದ ಹಸಿವುಳ್ಳ ಭಕ್ತರ ಅಧ್ಯಾತ್ಮದ ಹಸಿವನ್ನು ಹಿಂಗಿಸುತ್ತಿರುವರು.

ಶ್ರೀಮಠದಲ್ಲಿ ಪ್ರತಿವರುಷವೂ ಜರುಗಿಸುವ ಹಿಂದಿನ ಜಗದ್ಗುರುಗಳ ಪುಣ್ಯತಿಥಿ ಹಾಗೂ ರಥೋತ್ಸವ ಕಾರ್ಯಕ್ರಮ ಮಠದಲ್ಲಿ ಇಂತಹ ಸಂದರ್ಭದಲ್ಲಿ ಜರುಗಿಸುವ ಅಯ್ಯಾಚಾರ-ದೀಕ್ಷೆ ಕಾರ್ಯಕ್ರಮ, ಶ್ರಾವಣಮಾಸದಲ್ಲಿಯಲ್ಲದೆ, ಶ್ರೀಮಠದಲ್ಲಿ ಪ್ರತಿ ಶುಕ್ರವಾರ ಜರುಗುವ ಶಿವಾನುಭಾವಗೋಷ್ಠಿ, ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯ ಮೂಲಕ ಅಲ್ಲಲ್ಲಿ ಜರುಗಿಸುವ ಶಿವಶರಣರ ಬಗೆಗಿನ ಉಪನ್ಯಾಸಗಳು, ಈ ಮುಂತಾದ ಕಾರ್ಯಕ್ರಮಗಳು ಧರ್ಮಜಾಗ್ರತಿ ಮತ್ತು ಪ್ರಸಾರ ಕಾರ್ಯದಲ್ಲಿ ಬಹು ಮಹತ್ವದ ಪಾತ್ರವಹಿಸುವಂತೆ ಸ್ವಾಮಿಗಳವರು ಕೈಕೊಂಡಿರುವರು.

ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯ ಮೂಲಕವಾಗಿ ಇಲ್ಲಿಯವರೆಗೆ ಜರುಗಿದ ಉಳವಿಯಲ್ಲಿನ ಚೆನ್ನಬಸವಣ್ಣನವರ ಬಗೆಗಿನ ಸಮಗ್ರ ವಿಚಾರ ಸಂಕಿರಣ, ಬನವಾಸಿಯಲ್ಲಿ ಅಲ್ಲಮಪ್ರಭುವಿನ ಬಗಗಿನ ವಿಚಾರ ಸಂಕಿರಣ ಶಿಕಾರಿಪುರದಲ್ಲಿನ ಅಕ್ಕ ಮಹಾದೇವಿಯ ಬಗೆಗಿನ ಸಮಗ್ರ ವಿಚಾರ ಸಂಕಿರಣ, ಸೊನ್ನಲಿಗೆಯಲ್ಲಿ ಶಿವಯೋಗಿ ಸಿದ್ಧರಾಮರ ಬಗೆಗಿನ ವಿಚಾರ ಸಂಕಿರಣ ಕಾರ್ಯಕ್ರಮಗಳು ಶಿವಶರಣ ಬದುಕನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡುವಲ್ಲಿ ಮತ್ತು ಹೊಸ ಅಂಶಗಳತ್ತ ಬೆಳಕು ಚೆಲ್ಲುವಲ್ಲಿ, ಆ ಮುಖಾಂತರ ಶಿವಶರಣರ ಒಟ್ಟು ಸಾಧನೆಯನ್ನು ನಾಡಿನ ಜನಕ್ಕೆ ತಿಳಿಸುವಲ್ಲಿ ಮೆಚ್ಚುಗೆಯ ಕಾರ್ಯಮಾಡಿರುವುದು ಆಯಾ ಪ್ರದೇಶದ ಜನಾಂಗವು ಮರೆಯು

ವಂತಿಲ್ಲ. ಮುಂಡರಗಿ ಜಗದ್ಗುರುಗಳ ಶ್ರೀಮಠಕ್ಕೆ ಒಟ್ಟು ೨೦ ಶಾಖಾ ಮಠಗಳಿವೆ. ಅವುಗಳ ಉದ್ಧಾರ ಮತ್ತು ಅಲ್ಲಲ್ಲಿ ನಡೆಯಿಸುವ ಧರ್ಮಜಾಗ್ರತಿಯ ಕಾರ್ಯಕ್ರಮಗಳು ಆಧ್ಯಾತ್ಮ ಜಾಗ್ರತಿಯ ಜ್ಯೋತಿಯನ್ನು ಸರ್ವವ್ಯಾಪಿಗೊಳಿಸುವಲ್ಲಿ ಸಹಕಾರಿಯಾಗಿವೆ. "ಮೂರ್ಹೊತ್ತು ನೆನೆಯುವವನ ಪಾದವ ತೋರಯ್ಯಾ" ಎಂದು ಶಿವಶರಣರು ತಿಳಿಸಿ ತ್ರಿಕಾಲ ಪೂಜೆಯ ಮಹತ್ವ ಚಿತ್ತರಿಸಿದಂತೆ ಜಗದ್ಗುರುಗಳ ತ್ರಿಕಾಲ ಪೂಜೆಯ ನೇಮವು ತಪ್ಪದ ನೇಮವಾಗಿದೆ. ತಮ್ಮ ತ್ರಿಕಾಲ ಪೂಜೆ, ಹಲವಾರು ಪವಿತ್ರ ಸ್ಥಳಗಳಲ್ಲಿ ಕೈಕೊಂಡಿ ರುವ ಅನುಷ್ಠಾನ ಶಿವಯೋಗ ಸಾಧನೆಯಲ್ಲಿ ಪಡೆದುಕೊಂಡಿರುವ ಶಿವಸಿದ್ಧಿಯ ಬಲವನ್ನು ಜಗದ್ಗುರುಗಳು ಸಮಾಜದ–ಧರ್ಮದ ಶ್ರೇಯಸ್ಸಿಗಾಗಿ ವಿನಿಯೋಗಿಸುತ್ತಿರುವರು. ಈ ಬದುಕಿನ ಶ್ರೀಗಳ ನಡೆಯೇ ಧರ್ಮ ಜಾಗ್ರತಿ–ಪ್ರಸಾರಕ್ಕೆ ಬಲವಾಗಿ ನಿಂತಿದೆ.

ನಿಜ ಧರ್ಮವನ್ನು ಸಮಾಜ ಉದ್ಧಾರದ ಮಾಧ್ಯಮವಾಗಿ ಸ್ವೀಕರಿಸಿದ ಜಗದ್ಗುರು ಗಳ ಇಂದಿನ ಸಮಾಜಕ್ಕೆ ಬೇಕಾದ ಅವಶ್ಯಕತೆಗಳನ್ನು ಮನದಂದು ಕಾರ್ಯಪ್ರವೃತ್ತ ರಾಗಿದ್ದಾರೆ. ಬಡಬಗ್ಗರಿಗೆ ಅನ್ನದಾಸೋಹ; ವೈದ್ಯಕೀಯ ಸೇವೆಯ ಪೂರೈಕೆ, ಸಾಮೂಹಿಕ ವಿವಾಹ ಕಾರ್ಯಕ್ರಮ, ಕೃಷಿಕರಿಗೆ ಪ್ರಯೋಜನಕಾರಿಯಾದ ಕೃಷಿಮೇಳ ಗಳನ್ನು ನಡೆಸಿರುವುದು, ಸಹಾಯ ಬಯಸಿಬಂದ ಸಾಮಾಜಿಕ ಸಂಘ ಸಂಸ್ಥೆ–ಮಠಮಾನ್ಯ ವ್ಯಕ್ತಿಗಳಿಗೆ ಉದಾರ ಕೈಯಿಂದ ಸಹಾಯ ನೀಡುತ್ತಿರುವುದು ಇವೆಲ್ಲ ಜಗದ್ಗುರುಗಳ ಸಾಮಾಜಿಕ ಉದ್ಧಾರದ ಪ್ರಯತ್ನಗಳಾಗಿವೆ. ಅಖಿಲಭಾರತ ವೀರಶೈವ ಮಹಾಸಭೆಗೂ ಜಗದ್ಗುರುಗಳ ಉದಾರ ಆಶ್ರಯವಿದೆ.

ಶೈಕ್ಷಣಿಕವಾಗಿ ಹಿಂದುಳಿದ ಮುಂಡರಗಿಯ ಪ್ರದೇಶದಲ್ಲಿ ಶಿಕ್ಷಣದ ದೀಪವನ್ನು ಹೊತ್ತಿಸಿ; ಅಲ್ಲಿ ಸುಸಂಸ್ಕೃತಿಯ ಬೆಳಕನ್ನು ಬೆಳಗಿಸಿದ ಶ್ರೇಯಸ್ಸು ಮುಂಡರಗಿ ಜಗದ್ಗುರು ಅನ್ನದಾನೀಶ್ವರರ ಮಠಕ್ಕೆ ಸಲ್ಲುತ್ತದೆ. ಜಗದ್ಗುರು ಅನ್ನದಾನೀಶ್ವರ ಸ್ವಾಮಿಗಳು ಇಂದು ಶ್ರೀಮಠದ ಆಶ್ರಯದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳ ಸಂಚಾಲಕರಾಗಿ, ಅವುಗಳ ಸೂತ್ರಧಾರಕರಾಗಿ, ಮಾರ್ಗದರ್ಶಕರಾಗಿ ನಿಂತಿರುವರು. ಕ್ರಿ. ಶ. ೧೯೨೫ರಲ್ಲಿ ಸ್ಥಾಪನೆಗೊಂಡ ಜಗದ್ಗುರು ಅನ್ನದಾನೀಶ್ವರ ವಿದ್ಯಾಸಂಸ್ಥೆಯ ಸಸಿ ಇಂದು ೧೩ ಶಾಖೆ ಗಳನ್ನು ಹೊಂದಿ ವಿಶಾಲವಾಗಿ ಬೆಳೆದಿದೆ; ಬೆಳೆಯುತ್ತಲಿದೆ. "ಶಿಕ್ಷಣ ದರ್ಶನವೆಂದರೆ ಸಂಪೂರ್ಣ ದಾಸೋಹಂಭಾವ ಅರುಹಿನಿಂದೊಡಗೂಡಿದ ಈ ದಾಸೋಹಭಾವ ಜ್ಞಾನದ ಹಸಿವನ್ನು ಹಿಂಗಿಸಿಕೊಳ್ಳಲು ಸರ್ವರನ್ನು ಸಮರ್ಥರನ್ನಾಗಿಸುತ್ತದೆ. ವಿದ್ಯಾರ್ಥಿಗಳು ಪರಮಾತ್ಮನ ಆತ್ಮ ಸ್ವರೂಪರೆಂದು ಬಗೆದು, ಬಡವ–ಬಲ್ಲಿದ, ಮೇಲು–ಕೀಳು, ಬುದ್ಧಿವಂತ–ಬುದ್ಧಿಹೀನ ಎಂದು ಪರಿಗಣಿಸದೆ, ಶಿಕ್ಷಕರು ವಿದ್ಯಾರ್ಥಿಗಳಲ್ಲಿರುವ ಆತ್ಮಕ್ಕೆ ಜ್ಞಾನ ಪುಷ್ಪವನ್ನು ಅರ್ಪಿಸಿ, ಪ್ರಸನ್ನಚಿತ್ತವನ್ನು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡುವುದೇ ಶಿಕ್ಷಣ ದಾಸೋಹ ದರ್ಶನದ ವ್ಯವಸ್ಥೆಯಾಗಿರುತ್ತದೆ. ಕಲಿಯುವ–ಕಲಿಸುವ ಕಾರ್ಯ ಕೇವಲ ತನಗಾಗಿ ಮಾತ್ರವಾದರೆ ಉಪಜೀವನವಾಗುವುದು. ಇದರಲ್ಲಿ

ಪರಹಿತ ಕಂಡಲ್ಲಿ ಒಳ್ಳೆಯ ಸಂಸ್ಕೃತಿ ಜೀವನವಾಗುವುದು. ಕಲಿಯುವುದು, ಕಲಿಸುವದು ತನಗಾಗಿ ಅಷ್ಟೇ ಅಲ್ಲವೆ, ಪರಹಿತ ಮಾಡುವಲ್ಲಿ ಪರಮಾತ್ಮನನ್ನು ಕಾಣುವದೇ ಕಾಯಕ ದಾಸೋಹ ಶಿಕ್ಷಣ ತತ್ವಜ್ಞಾನ" ಈ ಶಿಕ್ಷಣ ತತ್ವಜ್ಞಾನವೇ ಜಗದ್ಗುರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಯ ತಳಹದಿಯಾಗಿದೆ.

ಬಹುಸಂಖ್ಯಾತ ಮಠದ ಸ್ವಾಮಿಗಳು ಬೇರೆಯವರಿಂದ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿರುವುದನ್ನು ಕಾಣುತ್ತೇವೆ. ಆದರೆ ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ಸ್ವತಃ ಗ್ರಂಥಕರ್ತರಾಗಿರುವದರೊಟ್ಟಿಗೆ, ಬೇರೆಯವರಿಂದಲೂ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುತ್ತಿರುವದು ವಿಶೇಷವಾಗಿದೆ. ಜಗದ್ಗುರುಗಳು ಇಲ್ಲಿಯವರೆಗಿನ ಅವಧಿಯಲ್ಲಿ ಒಟ್ಟು ೩೬ ಗ್ರಂಥಗಳನ್ನು ಕನ್ನಡ ಸಾಹಿತ್ಯದೇವಿಯ ಸಿರಿಮುಡಿಗೆ ಸಮರ್ಪಿಸಿದ್ದಾರೆ. ವೀರಶೈವ ದಾರ್ಶನಿಕ ಸಿದ್ಧಾಂತ, ಮಾನವಧರ್ಮ, ವಚನಸಂಪದ, ವೀರಶೈವ ತತ್ವಜ್ಞಾನ, ಚಿರಂತನ ಚಿಂತನ, ಆರೈದು ಮೂರು ಭಾಗಗಳು, ಮುಕ್ತಿವಧು, ಶಿವಯೋಗ, ಚಿನ್ಮಯ ಚೇತನ ಅವುಗಳಲ್ಲಿ ಪ್ರಮುಖವೆನ್ನಿಸುವ ಗ್ರಂಥಗಳಾಗಿವೆ.

"ಮನ ಕೆರಳಿಸುವ ಕೃತಿಯು ಮುಟ್ಟಿ,
ಕೈತೊಳೆದುಕೊಳ್ಳಲುಬೇಕಯ್ಯಾ,
ಮನವರಳಿಸುವ ಕೃತಿಯು ಕಂಡು
ಕೈತೊಳೆದು ಮುಟ್ಟಬೇಕಯ್ಯಾ
ಮೃಡಗಿರಿ ಅನ್ನದಾನೇಶ್ವರ"

ಎನ್ನುವ ಅವರ ಒಂದು ವಚನಕ್ಕೆ ಬರೆದ ವ್ಯಾಖ್ಯಾನದಂತಿದೆ. ಅವರ ಗ್ರಂಥರಾಶಿ. ಮುಂಡರಗಿ ಅನ್ನದಾನೀಶ್ವರ ಪ್ರಕಾಶನ ಸಂಸ್ಥೆಯಿಂದ ಬೇರೆ ಬೇರೆ ವಿದ್ವಾಂಸರ ಸುಮಾರು ೯೦ ಕೃತಿಗಳನ್ನು ಈವರೆಗೆ ಪ್ರಕಟಿಸಿ, ಅಧ್ಯಾತ್ಮ ಸಾಹಿತ್ಯ ಸಂಸ್ಕೃತಿಯ ಬಗೆಗಿನ ಅಪಾರ ಜ್ಞಾನವನ್ನು ಜನತೆಗೆ ಜಗದ್ಗುರುಗಳು ಕೊಡಮಾಡುತ್ತಲಿರುವರು.

ಅಧ್ಯಾತ್ಮ ಚಿಂತಕರಾಗಿ, ಜನರನ್ನು ತಮ್ಮ ಸುಜ್ಞಾನದ ತೀರ್ಥದಿಂದ ಪಾವನಗೊಳಿಸಬಲ್ಲ ಜಗದ್ಗುರುಗಳಾಗಿ ಶಿಕ್ಷಣ ಪ್ರೇಮಿಗಳಾಗಿ, ಸಂಸ್ಕೃತಿಯ ಪ್ರಸಾರಕರಾಗಿ, ಸಾಹಿತ್ಯಲೋಕದ ಶಿವಸಾಹಿತ್ಯ ಕೃಷಿಕರಾಗಿ, ವೀರಶೈವ ಸಮಾಜ ಪುರುಷನಿಗೆ ಬಹುಮುಖವಾಗಿ ತಮ್ಮ ಸೇವೆಯನ್ನು ಅರ್ಪಿಸುತ್ತಿರುವ ಜಗದ್ಗುರು ಅನ್ನದಾನೇಶ್ವರ ಮಹಾಸ್ವಾಮಿಗಳು ಇಂದು ರಜತಮಹೋತ್ಸವದ ಉತ್ಸವದಲ್ಲಿ ಪಾದಾರ್ಪಣೆಗೈದಂತೆ, ಮುಂದೊಂದು ದಿನ ವಜ್ರಮಹೋತ್ಸವದ ಮಂಗಳದ ಗಳಿಗೆಗೆ ಪಾದಾರ್ಪಣ ಗೈಯ್ಯುವಂತಾಗಲಿ, ಅವರ ಶ್ರೀಮಠವು ವೀರಶೈವ ಸಂಸ್ಕೃತಿಯ ಮುಖ್ಯ ಕೇಂದ್ರಗಳಲ್ಲೊಂದಾಗಲೆಂದು ಆತ್ಮಿಕವಾಗಿ ಹಾರೈಸುತ್ತೇವೆ.

ನಾಡಿನ ನಾಡಿಗಳ ಬಹುಮುಖದ ಚೇತನ ಶಕ್ತಿ

— ಶ್ರೀ ಶಿವಶರಣೆ ನೀಲಮ್ಮತಾಯಿ, ಅಸುಂಡಿ

ಭಾರತವು ಅಧ್ಯಾತ್ಮದ ಬೀಡಾಗಿದೆ. ಋಷಿಮುನಿಗಳ ಸಾಧು ಸಂತರ ಸಿದ್ಧ-ಸಾಧ್ಯರ ಶಿವಶರಣ-ಶಿವಶರಣೆಯರ ತಾಣವಾಗಿದೆ ಎಂಬುದನ್ನು ಕೇವಲ ಪೌರಾತ್ಯರು ಅಲ್ಲದೆ ಪಾಶ್ಚಾತ್ಯರೂ ಸಹ ಒಪ್ಪಿದ್ದಾರೆ. ಅಧ್ಯಾತ್ಮದ ದಿವ್ಯ ಪರಂಪರೆಯನ್ನು ಬೆಳೆಸಿ ಉಳಿಸುವಲ್ಲಿ ಈ ನಾಡಿನ ಸತ್ಪರಂಪರೆಯನ್ನು ಎತ್ತಿಹಿಡಿಯುವಲ್ಲಿ ಧರ್ಮದ್ರಷ್ಟಾರರು ಬಹು ದೊಡ್ಡ ಸಾಹಸ ಮಾಡಿದ್ದಾರೆ.

ಜನಜೀವನದಲ್ಲಿ ಅಂಧಶ್ರದ್ಧೆ ಮೂಢನಂಬಿಕೆ, ಶುಷ್ಕಾಚಾರ ಕಂದಾಚಾರ ಅಂಧಾನುಕರಣೆ ಈ ಮೊದಲಾದ ಅಂಧಕಾರ ಕವಿದಿರುವಾಗ, ಜ್ಯೋತಿಯಂತೆ ಬೆಳಗಿ ಜನಮನದಲ್ಲಿಯ ತಾಮಸ ಭಾವನೆಯನ್ನು ಕಳೆದು, ನಾಡಿನ ನಾಡಿಗಳಿಗೆ ದಿವ್ಯಶಕ್ತಿಯೊದಗಿಸಿದ್ದಾರೆ. ಈ ಮಹವ ಬೆಳಗಲು ಆಯಾ ಭಾಗದಲ್ಲಿ ಆಯಾಯ ಮಹಾತ್ಮರು ಜನ್ಮಿಸಿ ಬಂದು ಜನಜಾಗ್ರತಿ ಮಾಡಿದ್ದಾರೆ. ಹೀಗೆ ಉದ್ಧಾರ ಮಾಡಿದ ಜನಜಾಗ್ರತಿ ಮಾಡಿದ ಮಹಾನ್ ವ್ಯಕ್ತಿಗಳಲ್ಲಿ ಮೃಡಗಿರಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರೂ ಒಬ್ಬರು.

ಹರನ ಹೃದಯದ ಮಹಾಜ್ಯೋತಿಯೇ 'ಅನ್ನದಾನೀಶ' ಎಂಬ ಅಭಿದಾನದಿಂದ ಇಳೆಗವತರಿಸಿ ಜಂಗಮಲಿಂಗ ಸ್ವರೂಪಿಗಳಾದ ಪೂಜ್ಯರು ನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ ಶಿವಸಮಯಕ್ಕಡರಿರ್ದ ಕತ್ತಲೆಯನ್ನು ನಶಿಸಿ, ವೀರಶೈವ ಧರ್ಮದ ಮರ್ಮವನ್ನು ತಿಳುಹುವುದಕ್ಕಾಗಿ ಶಿವಾಚಾರ ಸದ್ಭಕ್ತಿಯನ್ನು ಸುಸ್ಥಿರಗೊಳಿಸುವದಕ್ಕಾಗಿ ಶಿವಶರಣರ ಪವಿತ್ರ ಕ್ಷೇತ್ರಗಳಾದ ಬನವಾಸಿ, ಉಡುತಡೆ, ಉಳವಿ ಕಲ್ಯಾಣಗಳಲ್ಲಿ ಆಯಾ ಶರಣ-ಶರಣೆಯರ ವಚನಗಳನ್ನು ಕುರಿತು ವಿಚಾರ ಸಂಕಿರಣಗಳನ್ನೇರ್ಪಡಿಸುವದರೊಂದಿಗೆ, ನಾಡಿನ ವಿದ್ವನ್ಮಣಿಗಳನ್ನು ಆಹ್ವಾನಿಸಿ ಭಕ್ತಕೋಟಿಗೆ ಜ್ಞಾನದಾಸೋಹವನ್ನೇರ್ಪಡಿಸುತ್ತ ಬಂದಿದ್ದಾರೆ.

ಪೂಜ್ಯ ಶ್ರೀಗಳವರು ಮಿತಭಾಷಿಗಳು "ಯುಕ್ತಆಹಾರವಿಹಾರಸ್ಯ" ಎಂಬ ಭಗವದ್ಗೀತೆಯ ಉಕ್ತಿಯಂತೆ, ಮಿತ ಆಹಾರ, ಮಿತ ವಿಹಾರವುಳ್ಳವರು ತಮ್ಮ ಅಮೂಲ್ಯವಾದ ಸಮಯವನ್ನು ಅಂತರ್ಮುಖ ಸಾಧನೆಗೆ ಮೀಸಲಾಗಿಟ್ಟು ಮೌನ ಅನುಷ್ಠಾನ ಆಚರಿಸುತ್ತಾ ಬಂದಿದ್ದಾರೆ. ನಿಶ್ಶಬ್ದದ ಮಧ್ಯದಲ್ಲಿ ಮೂಡಿಬಂದ ಬಹು ಬೆಲೆಯುಳ್ಳ ಅನುಭಾವವನ್ನು ಶಬ್ದರೂಪದಲ್ಲಿ ತುಂಬಿಟ್ಟು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

'ವೀರಶೈವ ದಾರ್ಶನಿಕ ಸಿದ್ಧಾಂತ' ಮಾನವ ಧರ್ಮ, ಚಿನ್ಮಯ, ಚೇತನ, 'ಶ್ರೀ ಜ. ಅನ್ನದಾನೇಶ್ವರ ಚರಿತ್ರೆ' ಈ ಮೊದಲಾದ ಅನೇಕ ಕೃತಿಗಳನ್ನು ನಾಡಿಗೆ ನೀಡಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಂತೂ ಪೂಜ್ಯರ ಸಾಹಸಮಯ ಸೇವೆ ಅನುಪಮವಾದದ್ದು. ಮೃಡಗಿರಿಯ ಪ್ರದೇಶ ಯಾವಾಗಲೂ ಬರಪೀಡಿತ. ಅಂತಹ ಬರಪೀಡಿತ ಪ್ರದೇಶದಲ್ಲಿ ಭಕ್ತಿಗೆ ಬರಗಾಲ ಬರದಂತೆ, ಭಕ್ತಿಯು ಎದೆಯಾಳದಲ್ಲಿ ಉಕ್ಕಿಹರಿಯುವಂತೆ ಮಾಡಿ ಶಿಕ್ಷಣ ಸಂಸ್ಥೆಯನ್ನು ಎತ್ತಿಕಟ್ಟಿದ್ದಾರೆ. ತಮ್ಮ ತಪೋಸಾಧನೆಯಿಂದಾಗಿ ಅಂತಃಶಕ್ತಿಯನ್ನು ಗಳಿಸಿಕೊಂಡು, ನಾಡಿಗೆ ಬೆಳಕಾಗಿದ್ದಾರೆ. ಪರಮವಿರಕ್ತಮೂರ್ತಿಗಳಾದ ಪೂಜ್ಯರು ಹೊರಗೆ ಸಾಭಾರಿಯೆನಿಸಿದ್ದರೂ ಒಳಗೆ ನಿರಾಭಾರಿಯಾಗಿದ್ದಾರೆ. ಶ್ರೀಮಠದ ಅಧಿಪತ್ಯ ವನ್ನು ಕರ್ತವ್ಯದ ದೃಷ್ಟಿಯಲ್ಲಿ ಪೂರೈಸುತ್ತಿದ್ದಾರೆ. ಅಂತೂ ಶ್ರೀಗಳವರು ಸಮಾಜದ ನಾಡಿನ ಸಚೇತನ ಸಂಪತ್ತೇ ಆಗಿರುವರು. ನಡೆ-ನುಡಿಗಳ ಮಧ್ಯ ಸಾಮರಸ್ಯದ ಕೊಂಡಿ ಕಳಚದ ಪೂಜ್ಯರ ಧವಳ ಚಾರಿತ್ರ್ಯ ಗಗನಗಾಮಿನಿಯಾಗಿದೆ. ವೈಯಕ್ತಿಕ ವ್ಯಕ್ತಿತ್ವದ ಪ್ರಭಾವದಿಂದಾಗಿ ಎಂತಹವರನ್ನೂ ತಮ್ಮತ್ತ ಆಕರ್ಷಿಸುವ ಬಲವಿದೆ. ಈ ಬಲ ತ್ಯಾಗ ಅಂತಃಸತ್ವವಿಲ್ಲದೆ ಬರದು. ಸ್ಥಾನ ಬಲದಿಂದ ದೊಡ್ಡವರೆನಿಸಿಕೊಂಡವರು ಅನೇಕ. ಆದರೆ ಆ ಸ್ಥಾನ ಬಲ ಸ್ವಂತ ಬಲವಾಗಲಾರದು.

ನೀರೊಳಿದ್ದು ಮೊಸಳೆ ಆನೆ ಹಿಡಿಯುತಿಹುದು।
ಹೊರಗೆ ಶ್ವಾನವದನೆ ಕಾಡುತಿಹುದು॥
ಬರೀ ಸ್ಥಾನಬಲ ಸ್ವಂತ ಬಲವದಲ್ಲ।
ವಿಶ್ವದಭಿರಾಮ ಕೇಳು ವೇಮ॥

ಎಂದು ಆಂಧ್ರ ಕವಿಯಾದ ಯೋಗಿ ವೇಮಣ್ಣ ಹೇಳಿದಂತೆ. ಸ್ಥಾನದಿಂದ ಮಹತ್ವ ಬರುವದು ಕೇವಲ ಲೌಕಿಕದಲ್ಲಿ ಮಾತ್ರ. ಕುಳಿತ ಕುರ್ಚಿಯಿಂದ ಅಧಿಕಾರಿಗಳು ಮಂತ್ರಿಗಳು ದೊಡ್ಡವರಾಗಿರುತ್ತಾರೆ. ಅಧಿಕಾರದ ಕುರ್ಚಿ ಕೈಬಿಟ್ಟುಹೋದಾಗ ಆ ಹಿರಿಯಣ್ಣ ನರಿಯಣ್ಣನಾಗುತ್ತಾನೆ. ಆದರೆ ಪಾರಮಾರ್ಥಿಕ ಕ್ಷೇತ್ರದಲ್ಲಿ ವ್ಯಕ್ತಿಯ ವ್ಯಕ್ತಿತ್ವದ ಸಾಧನೆಯಿಂದಾಗಿ ಆ ಸ್ಥಾನಕ್ಕೆ ಮಹತ್ವ ಬರುತ್ತದೆ. ಆ ದೃಷ್ಟಿಯಲ್ಲಿ ಪೂಜ್ಯಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನೇಶ್ವರ ಮಹಾಸ್ವಾಮಿಗಳವರ ಸ್ವಂತ ವ್ಯಕ್ತಿತ್ವದ ಬಲದಿಂದಾಗಿ ಮೃಡಗಿರಿಯ ಪೀಠಕ್ಕೆ ಹೆಚ್ಚಿಸುವ ಸತ್ವಶಕ್ತಿ ಬಂದಿದೆ. ಲೋಹ ಚುಂಬಕದಂತೆ ಪೂಜ್ಯರ ಸಾಧನೆಯ ಪ್ರಭೆ ಸುತ್ತಲೂ ನಾಡಿನುದ್ದಗಲಕ್ಕೂ ಪಸರಿಸಿದೆ. ಅವರ ಪಾದಸ್ಪರ್ಶ ದಿಂದ ಜಡಕ್ಕೆ ಜಂಗಮತ್ವ, ಶಿಲೆಗೆ ದೇವತ್ವ, ನೆಲಕ್ಕೆ ಪಾವಿತ್ರ್ಯತ್ವ ಪ್ರಾಪ್ತವಾಗಿದೆ.

ಪೂಜ್ಯ ಶ್ರೀಗಳವರ ಉಪದೇಶಾಮೃತ 'ತಾಯಿಯು ಮಗುವಿಗೆ ಕೈತುತ್ತು ಮಾಡಿ ಉಣಿಸುವಂತೆ ಶಾಂತವಾಗಿ ಹರಿಯುವ ಗಂಗಾಪ್ರವಾಹ, ಶಿವಾನುಭವ ಉಜ್ವಲ

ತತ್ತ್ವಗಳನ್ನೂ ವೀರಶೈವ ಸಿದ್ಧಾಂತದ ತಿರುಳನ್ನೂ, ಎಡಹುತ್ತ ಮುಗ್ಗರಿಸುವ ಸಮಾಜಕ್ಕೆ ಮೃತಪುರುಷನಿಗೆ ಸಂಜೀವಿನಿ ಧಾರೆಯೆರೆದಂತೆ, ಪ್ರತಿ ಶುಕ್ರವಾರ ಶ್ರೀಮಠದಲ್ಲಿ ಶಿವಾನುಭವ ಕಾರ್ಯಕ್ರಮವನ್ನೇರ್ಪಡಿಸಿ ಭಕ್ತರಿಗೆ ಬಾಳಿನ ಪ್ರಜ್ಞೆಯನ್ನು ಮೂಡಿಸಿ, ವಾನರ ಮಟ್ಟದಿಂದ ಮಾನವ ಮಟ್ಟವನ್ನೇರುವ, ಅಲ್ಲಿಂದ ಅತೀಮಾನವ ಮಟ್ಟವನ್ನೇರುವ, ಮುಂದೆ ಮಹಾಂತನಾಗುವ, ಮಹಾದೇವನ ಸ್ಥಲಕ್ಕೇರುವ, ಮಹಾಸಾಧನೆಯ ಪಥವನ್ನು ಬೋಧಿಸುತ್ತಿದ್ದಾರೆ. ವಿವೇಕದ ವಿಕಾಸ ಜನಜಾಗ್ರತಿಯನ್ನು ತಮ್ಮ ಉಪದೇಶದ ಮೂಲಕ ಮಾಡಿದ್ದಾರೆ. ಮಾಡುತ್ತಿದ್ದಾರೆ. ಟೊಳ್ಳು ಉಪದೇಶಕ್ಕೆ ಅವರಲ್ಲಿ ಸ್ಥಾನವಿಲ್ಲ. ಗಟ್ಟಿ ಬದುಕು ಅವರದು.

ಮೃಡಗಿರಿಯ ಪುಣ್ಯವೇ ಹಣ್ಣಾದಂತೆ ಪೂಜ್ಯಶ್ರೀ ಜಗದ್ಗುರುಗಳವರು ಶ್ರೀ ಪೀಠಕ್ಕೆ ಗುರುವಾಗಿ ಬಂದು ಇಪ್ಪತ್ತೈದು ವರ್ಷಗಳು ಗತಿಸುತ್ತಲಿವೆ. ಈ ಅವಧಿಯಲ್ಲಿ ಅವರು ಸಮಾಜಕ್ಕೆ ಮಾಡಿದ ಸೇವೆ ಹಲವು ಮುಖ. ಲೇಖನದ ವಿಸ್ತಾರ ಭಯದಿಂದ ವಿಸ್ತರಿಸುತ್ತಿಲ್ಲ. ಅನ್ನದಾನೀಶ್ವರ ಶ್ರೀಮಠದ ಶಾಖೆಗಳೂ ಅನೇಕ, ಅವುಗಳನ್ನೆಲ್ಲ ಜೀರ್ಣೋದ್ಧಾರ ಮಾಡಿಸಿ ಅಲ್ಲಿ ನಿತ್ಯ ಅನ್ನದಾಸೋಹ, ಭಜನೆ, ಶಿವಾನುಭವ ನಡೆಯುವಂತೆ ವ್ಯವಸ್ಥಿತಗೊಳಿಸಿದ್ದಾರೆ. ನನ್ನ ಪೂರ್ವಾಶ್ರಮ ಶಿಶ್ವಿನಹಳ್ಳಿ ಗ್ರಾಮ ಶ್ರೀಗುರು ಅನ್ನದಾನೀಶ್ವರನ ಶಾಖಾಮಠವನ್ನು ಹೊಂದಿದ್ದು ಅಲ್ಲಿ ಅನೇಕ ಸಲ ಪ್ರವಚನಗಳನ್ನು ನಡೆಸಿದ್ದುಂಟು. ಗುರು ಅನ್ನದಾನೀಶನ ಶಿಶುಮಗಳು ನಾನಾದ ಕಾರಣ ಶ್ರೀಪೀಠದ ವಿಷಯವಾಗಿ ನನಗೆ ತುಂಬಾ ಅಭಿಮಾನವಿದೆ. ಶ್ರೀಗಳವರ ರಜತಮಹೋತ್ಸವವು ಸುವರ್ಣ ಮಹೋತ್ಸವಕ್ಕೇರಿ, ನಂತರ ವಜ್ರಮಹೋತ್ಸವವ ಮುಟ್ಟಿ ಶತಮಾನೋತ್ಸವವನ್ನು ಆಚರಿಸುವಂತಾಗಲಿ ಎಂದು ಮೂಲಕರ್ತೃ ಅನ್ನದಾನೀಶ್ವರ ಶ್ರೀ ಗುರುವಿನಲ್ಲಿ ಪ್ರಾರ್ಥಿಸುವೆ.

ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದ ದಶಮಪೀಠಾಧಿಪತಿಗಳು

–ಪ್ರಾ|| ಶ್ರೀ ಬಿ. ಎಸ್. ಪಾಟೀಲ, ಮುಂಡರಗಿ

"ಶಿವಯೋಗಿಯು ಸುಳಿದ ಸುಳುಹು ಜಗತ್ಪಾವನ
ಮೆಟ್ಟಿದ ಧರೆಯಲ್ಲ ಪವಿತ್ರ
ನಿಮಿಷಾರ್ಧವಿದ್ದ ಸ್ಥಲವೆಲ್ಲ ಅವಿಮುಕ್ತಕ್ಷೇತ್ರ
ಹೊಕ್ಕ ಜಲವೆಲ್ಲ ಪುಣ್ಯತೀರ್ಥ
ಏರಿದ ಬೆಟ್ಟವೆಲ್ಲ ಶ್ರೀ ಪರ್ವತ
ಕೃಪೆಯಿಂದ ನೋಡಿದ ಜನರೆಲ್ಲ ಸಾಲೋಕ್ಯರು
ಒಡನೆ ಸಂಭಾಷಣೆಯ ಮಾಡಿದವರೆಲ್ಲ ಸದ್ಯೋನ್ಮುಕ್ತರು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ||"

ಎಂಬ ವಚನದಂತೆ, ಮುಂಡರಗಿಯು ಸಂಸ್ಥಾನಮಠದ ಶ್ರೀ ಜಗದ್ಗುರು ಪೀಠವನ್ನು ಈ ಪೂರ್ವದಲ್ಲಿ ಅಲಂಕರಿಸಿರುವ ಮಹಾಶಿವಯೋಗಿಗಳೆಲ್ಲ ಮಹಾಕರ್ತೃತ್ವಶಕ್ತಿಯುಳ್ಳವರು. ಅವರು ಮೆಟ್ಟಿದ ಧರೆ ಪವಿತ್ರವಾಗಿದೆ. ಸುಳಿದ ಸುಳುಹು ಜಗತ್ಪಾವನವಾಗಿದೆ. ಅವರ ಕೃಪಾದೃಷ್ಟಿಗೆ ಬಿದ್ದವರೆಲ್ಲ ಸಾಲೋಕ್ಯರಾಗಿದ್ದಾರೆ. ಬೇಡರ ಕಾಡನ್ನು ಭಕ್ತರ ಬೀಡನ್ನಾಗಿಸಿದ, ಈ ಮಹಾಮಹಿಮರು, ಪಾಪಿಗಳನ್ನು ಪುನೀತರನ್ನಾಗಿಸುತ್ತ, ಅಸಂಖ್ಯಾತ ಅಘಟಿತ ಘಟನೆಗಳಿಗೆ ಕಾರಣಿಕರಾಗಿದ್ದಾರೆ. ಇಂತಹ ಶಿವಯೋಗಿಗಳ ಮಹಾನ್ ಪರಂಪರೆಯನ್ನು ಹೊಂದಿರುವ, ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದ ಮೂಲ ಪುರುಷರ ಚರಿತ್ರೆ ಹನ್ನೆರಡನೆಯ ಶತಮಾನದ ಕಲ್ಯಾಣದ ಶಿವಶರಣರ ಬಳಗದಲ್ಲಿ ಮೊಳಕೆಯಾದುದು ಗೋಚರಿಸುತ್ತದೆ.

ಮೂಲ ಪುರುಷರು

ಹನ್ನೆರಡನೆಯ ಶತಮಾನದಲ್ಲಿ ಬಿಜ್ಜಳನ ಅಚಾತುರ್ಯದಿಂದ ಕೈಲಾಸದಂತಿದ್ದ ಕಲ್ಯಾಣ ಕ್ರಾಂತಿಯ ಬೀಡಾಗುತ್ತದೆ. ಈ ಸಂದರ್ಭದಲ್ಲಿ ಬಿಜ್ಜಳನ ಕೊಲೆಯೂ ನಡೆದು ಹೋಗುತ್ತದೆ. ಬಿಜ್ಜಳನ ಮಗ ಸೋಮಿದೇವ, ಅವಸರದಲ್ಲಿ ಅಧಿಕಾರ ಪಡೆದು, ಹಿಸುಣರ ಮಾತಿಗೆ ಕಿವಿಗೊಟ್ಟು, ಶರಣರ ಮೇಲೆ ಯುದ್ಧವನ್ನೇ ಸಾರುತ್ತಾನೆ. ಅಹಿಂಸಾವಾದಿಗಳಾದ ಶರಣರು, ಅನಿವಾರ್ಯವಾಗಿ ತಮ್ಮ ರಕ್ಷಣೆಗಾಗಿ, ಕೈಯಲ್ಲಿ ಕೈದುವನ್ನು

ಧರಿಸಿ, ಅರಸನ ಸೈನ್ಯದೊಡನೆ ಸೆಣೆಸುತ್ತ ಅವಿರಳಜ್ಞಾನಿ, ಕಿರುಹರೆಯದ ಚನ್ನಬಸವಣ್ಣನ ನೇತೃತ್ವದಲ್ಲಿ ಉಳುವಿಯ ಕಾಡುದಾರಿಯನ್ನು ಹಿಡಿಯುತ್ತದೆ ಹಾಗೂ ಹೀಗೂ ಹೋರಾಟ ಮಾಡುತ್ತ ಉಳುವಿಯ ದುರ್ಗಮ ಕಾಡನ್ನು ಪ್ರವೇಶಿಸಿ, ತಮ್ಮನ್ನು ಹಾಗೂ ತಮ್ಮ ಅಮೂಲ್ಯ ಆಸ್ತಿಯಾದ ವಚನಗಳ ಕಟ್ಟುಗಳನ್ನು ಉಳಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಚನ್ನಬಸವಣ್ಣನವರ ಸೇವೆಯಲ್ಲಿದ್ದ, ಯಲ್ಲಾಪುರದ ಯುವಕನೊಬ್ಬ ಅತ್ಯಂತ ತೇಜಸ್ವಿಯೂ, ಭಕ್ತಿ-ಜ್ಞಾನ-ವೈರಾಗ್ಯಶೀಲನೂ ಆಗಿ, ಶ್ರೀಗುರು ಚನ್ನಬಸವಣ್ಣ ನವರ ಸಂಪೂರ್ಣ ಕೃಪೆಗೆ ಪಾತ್ರನಾಗಿದ್ದನು. ಈ ಶಿಷ್ಯನ ಯೋಗ್ಯತೆಯನ್ನು ಚನ್ನಾಗಿ ಅರಿತಿದ್ದ, ಚನ್ನಬಸವಣ್ಣನವರು, ಆತನಿಂದ ಲೋಕೋದ್ಧಾರ ಕಾರ್ಯ ನಡೆಯುವು ದೆಂಬುದನ್ನು ಅರಿತುಕೊಂಡು, ಆತನಿಗೆ ನಿರಂಜನತ್ವವನ್ನು ಕರುಣಿಸಿ, ಪಂಚಮುದ್ರೆಗಳನ್ನು ಅನುಗ್ರಹಿಸಿ, ಕ್ರಿಯಾಘಟ್ಟಿಯನ್ನಿತ್ತು "ಇದು ಶರಣ ತತ್ವದ ಮಹಾಬೆಳಗು ಪರಶಿವನ ಚಿದ್ಬೆಳಗು ಸತ್ಕ್ರಿಯೆಗಳೆಲ್ಲ ಗಟ್ಟಿಗೊಂಡು ಸಮಾಜಕ್ಕೆ ಮಾರ್ಗದರ್ಶನ ಮಾಡಬಲ್ಲ ಮಹಾಶಕ್ತಿ ಇದು. ಇದುವೇ ನಿಮ್ಮ ದಿವ್ಯ ಸಂಪತ್ತು, ಇದುವೇ ಶಿವಯೋಗದ ಸಂಪತ್ತು, ಇದರಿಂದ ನೀವು ಜ್ಞಾನಿಯಾಗಿ ದಾನಿಯಾಗಿ ಬಾಳಿರಿ" ಎಂದು ಬೋಧಿಸಿ ಹರಸುತ್ತಾರೆ. ಮುಂದೆ ಕೆಲವೇ ದಿನಗಳಲ್ಲಿ ಚನ್ನಬಸವಣ್ಣನವರು ಬಯಲು ಬಯಲ ಬೆರೆಸಿದಂತೆ ಮಹಾ ಬಯಲಾದರು.

ಶ್ರೀಗುರು ಚನ್ನಬಸವೇಶ್ವರರ ಆಶೀರ್ವಾದವನ್ನು ಮಸ್ತಕದಲ್ಲಿ ಧರಿಸಿ, ಅವರಿತ್ತ ಕ್ರಿಯಾಘಟ್ಟಿಯನ್ನು ಹಸ್ತದಲ್ಲಿರಿಸಿಕೊಂಡ ಬಾಲಶಿವಯೋಗಿ, ಸಹ್ಯಾದ್ರಿ ಶಿಖರವನ್ನು ಏರಿಳಿಯುತ್ತ, ಆ ಸುಂದರ ಪ್ರಕೃತಿಯ ಒಡಲಲ್ಲಿ ಲಿಂಗಾಂಗ ಸಂಧಾನದಲ್ಲಿರಲು ಬಯಸುತ್ತಾ ಮುಂದುವರಿಯುತ್ತಾನೆ. ಮುಂಡಗೋಡ ತಾಲೂಕಿನ ಬಾಚಣಕಿ ಗುಹೆ, ಶಿವಯೋಗಿಯ ದೃಷ್ಟಿಗೆ ಬೀಳುತ್ತದೆ. ಅಲ್ಲಿಯ ವಾತಾವರಣ ಶಿವಯೋಗಕ್ಕೆ ಹೇಳಿ ಮಾಡಿಸಿದ ತಾಣವೆನಿಸುತ್ತದೆ. ಬಾಲಶಿವಯೋಗಿ ಆ ಗುಹೆಯಲ್ಲಿ ತಾನೇತಾನಾಗಿ ಅಂಗೈ ಯಲ್ಲಿ ಲಿಂಗವನ್ನಿಟ್ಟು-

"....ಲಿಂಗಕ್ಕೆ ನೋಟದೊಳೆಮಜ್ಜನಕೆರೆದು
ಅರಳ್ದ ನೇತ್ರದಪೂವಿನಿಂ ಪೂಜೆಯಂ ಮೆರೆದು.
ನರುಸುಯ್ಯ ಕಂಪಿಂದೆ ನವಧೂಪಮಂ ಕೊಟ್ಟು
ನೆರೆಮನದ ಬೆಳಗಿನಾರತಿಯೆತ್ತಿ ಪೊಡೆವಟ್ಟು.
ನಿಟ್ಟಿಯಿಂ ನೇಹಮುಮನಾರೋಗಿಸಲ್ ಕೊಟ್ಟು
ಕಟ್ಟಕ್ಕರಚಲಿತಾನಂದಮಂ ಮುಂದಿಟ್ಟು."

ಏಕಾಕಾರವಾಗಿ ಲಿಂಗಸುಖದಲ್ಲಿ ಒಂದಾಗಿದ್ದು, ತಾನೇ ಲಿಂಗಸ್ವರೂಪಿಯಾಗಿ ಕಂಗೊಳಿ ಸುತ್ತಾ, ಅದೆಷ್ಟೋ ಕಾಲ ಲಿಂಗಾಂಗ ಸಾಮರಸ್ಯ ಸುಖದಲ್ಲಿ ಕಳೆಯುತ್ತಾನೆ. ಕಾಲ ಗತಿಸು ತ್ತದೆ. ಕರ್ಮದ ಬಾಧೆ ಸುಳಿಯುವದಿಲ್ಲ. ಮಾಯೆಯ ಮರುಳಾಟ ಮೈದೋರುವುದಿಲ್ಲ

ಹೀಗೆ ಅನಂತಕಾಲ, ಲಿಂಗಾನುಸಂಧಾನದಲ್ಲಿ ಮೈಮರೆತ ಶಿವಯೋಗಿ, ಲೋಕ ಕಲ್ಯಾಣಾರ್ಥವಾಗಿ ಸಮಾಧಿ ಕ್ರಿಯೆಯಿಂದ ಜಾಗೃತಾವಸ್ಥೆಗೆ ಬರುತ್ತಾನೆ. ಈ ಶಿವಯೋಗಿ ಅನಂತಕಾಲ ತಪಗೈದ ತಾಣ ಬಾಚಣಕಿಗುಡ್ಡ ಅನ್ನದಾನಿಯ ನಾಮದಿಂದ ಸುಕ್ಷೇತ್ರವೆನಿಸುತ್ತದೆ. ತಪಸ್ಸಿನ ಸಿದ್ಧಿಯಿಂದ ಅಂತರಂಗದಲ್ಲಾದ ಅಲೌಕಿಕಾನಂದ ಮುಖದಲ್ಲಿ ಮೂರ್ತಗೊಳ್ಳುತ್ತದೆ. ಅವ್ಯಕ್ತ ತೇಜಸ್ಸಿನಿಂದ ಶಿವಯೋಗಿ ತೇಜೋಮೂರ್ತಿಯಾಗಿ, ತಾನೇ ಶಿವನಾಗಿ ಭಕ್ತೋದ್ಧಾರಕ್ಕಾಗಿ, ಶರಣ ಸಂದೇಶದ ಮಹಾಮಣಿಹವನ್ನು ಹೊತ್ತು ಮುನ್ನಡೆಯುತ್ತಾನೆ. ಪ್ರಥಮದಲ್ಲಿ ಬಾಚಣಿಕೆಯ ಭಕ್ತವೃಂದಕ್ಕೆ ದರ್ಶನವಿತ್ತು, ಭಕ್ತಿಮಾರ್ಗವನ್ನು ಶರಣ ಸಂದೇಶವನ್ನು ಬೋಧಿಸುತ್ತಾನೆ. ಪೂಜ್ಯ ಶಿವಯೋಗಿಯ ದರ್ಶನಾಶೀರ್ವಾದದಿಂದ ಪುನೀತಗೊಂಡ ಬಾಚಣಕಿ ಗ್ರಾಮದ ಜನತೆ, ಪೂಜ್ಯರ ದರ್ಶನದ ಕುರುಹಾಗಿ ಮಠವೊಂದನ್ನು ಕಟ್ಟಿಸುತ್ತಾರೆ.

ಚರಜಂಗಮನಾಗಿ ಮುಂದುವರಿಯುತ್ತ, ಶಿವಯೋಗಿ, ಯಲ್ಲಾಪೂರದ ಭಾಗಕ್ಕೆ ದಯಮಾಡಿಸುತ್ತಾರೆ. ಪ್ರಕೃತಿಯ ಸೊಬಗನ್ನು ಸವಿಯುತ್ತ ಧೀರ ನಿಲುವಿನಲ್ಲಿ ಮುನ್ನಡೆಯುತ್ತಿದ್ದಾಗ, ಕಾಡಿನ ಮಧ್ಯದಲ್ಲಿ ಅಳುವಿನ ಧ್ವನಿಯೊಂದನ್ನು ಆಲಿಸಿ, ಅತ್ತ ನಡೆದು. ಅಲ್ಲಿ ಸತ್ತುಬಿದ್ದಿದ್ದ ಹೋರಿಗೆ ಜೀವವನ್ನು ಕರುಣಿಸುತ್ತಾರೆ. ತನ್ನ ಅಚಾತುರ್ಯದಿಂದ ಮರಣ ಹೊಂದಿದ ಹೋರಿ ಶಿವಯೋಗಿಯ ಕೃಪಾಕಟಾಕ್ಷದಿಂದ ಮತ್ತೆ ಮರು ಜೀವ ತಳೆದುದು ಕಲ್ಲಪ್ಪನಿಗೆ ಆನಂದಾಶ್ಚರ್ಯಗಳು ಏಕಕಾಲಕ್ಕೆ ಆಗುತ್ತವೆ. ಈ ವಿಷಯುವನ್ನು ತನ್ನೊಡೆಯ ಶಂಕರಗೌಡನಿಗೆ ತಿಳಿಸಿದಾಗ, ಗೌಡ ಪೂಜ್ಯರ ಮಹಿಮೆಯನ್ನು ಅರಿತು ಅವರನ್ನು ಮನೆಗೆ ಆಹ್ವಾನಿಸಿ ಶಿವಯೋಗಿಯ ಪಾದಪೂಜೆ ಗೈಯುತ್ತಾನೆ. ನಿಮಿಷಾರ್ಧದಲ್ಲಿ ಶಿವಯೋಗಿಯ ಮಹಿಮೆ ಊರಿನಲ್ಲೆಲ್ಲ ಹಬ್ಬಿ, ಜನ ಹೆಣ್ಣು ಗಂಡೆನ್ನದೆ, ತಂಡೋಪತಂಡವಾಗಿ ಗೌಡನ ಮನೆಯ ಮುಂದೆ ನೆರೆಯುತ್ತದೆ. ಜನರ ನೆರವಿಯನ್ನು ಕಂಡ ಶಿವಯೋಗಿ ಎಲ್ಲರಿಗೂ ದರ್ಶನಾಶೀರ್ವಾದ ನೀಡಿ "ದಯವಿಲ್ಲದ ಧರ್ಮ ಅದೇವುದಯ್ಯ, ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, ದಯವೇ ಧರ್ಮದ ಮೂಲವಯ್ಯ" ಎಂದು ಪ್ರಾಣಿದಯೆ ಹಾಗೂ ಧರ್ಮದ ತಿರುಳನ್ನು ತಿಳಿಸಿ, ಪಶುಸಂಪತ್ತಿನ ಮಹತ್ವವನ್ನು ಅರುಹುತ್ತಾ "ದನದ ಮನೆ ಚನ್ನಾಗಿದ್ದರೆ ಅದು ಧನದ ಮನೆಯಾಗುತ್ತದೆ" ಎಂದು ಬೋಧಿಸುತ್ತಾರೆ. ಶಿವಯೋಗಿಯ ದರ್ಶನಾಶೀರ್ವಾದ ಹಾಗೂ ಪ್ರವಚನದಿಂದ ಯಲ್ಲಾಪೂರದ ಜನತೆ ಕೃತಾರ್ಥರಾಗುತ್ತಾರೆ. ಶಿವಯೋಗಿ ಮತ್ತೆ ಪ್ರಯಾಣಕ್ಕೆ ಸಿದ್ಧನಾಗುತ್ತಾನೆ. ಗೌಡನು ತನ್ನಲ್ಲಿದ್ದ ಹೋರಿಯನ್ನೇ ಶಿವಯೋಗಿಗಳಿಗೆ ದಾನರೂಪದಲ್ಲಿ ಅರ್ಪಿಸುತ್ತಾನೆ. ಶಿವಯೋಗಿಯ ಮಹಿಮೆಗೆ ಒಳಗಾದ ಕಲ್ಲಪ್ಪ, ತಾನೂ ಶಿವಯೋಗಿಗಳ ಸೇವೆಯಲ್ಲಿಯೇ ಇರಲು ಬಯಸಿ ಶಿವಯೋಗಿಗಳೊಂದಿಗೆ ಪ್ರಯಾಣ ಬೆಳೆಸುತ್ತಾನೆ.

"ಜಂಗಮಕ್ಕೆ ಮಾತಾಪಿತರಿಲ್ಲ
ಜಂಗಮಕ್ಕೆ ಜಾತಿಬಂಧುಗಳಿಲ್ಲ

ಜಂಗಮಕ್ಕೆ ನಾಮರೂಪುಗಳಿಲ್ಲ
ಜಂಗಮಕ್ಕೆ ಸೀಮೆಸಂಗಗಳಿಲ್ಲ
ಜಂಗಮಕ್ಕೆ ಮಲಮಾಯೆಗಳಿಲ್ಲ
ಜಂಗಮಕ್ಕೆ ಕುಲಗೋತ್ರಗಳಿಲ್ಲ ನೋಡಾ ಅಖಂಡೇಶ್ವರಾ"

ಎಂಬ ಷಣ್ಮುಖ ಶಿವಯೋಗಿಗಳ ವಚನದಂತೆ, ಬೇಕುಬೇಡೆಂಬ, ತನ್ನವರು ಪರರೆಂಬ ಭವದ ಬಂಧನವ ಹರಿದು ತಾನೇ ಶಿವನಾಗಿ, ಶಿವನೇ ತಾನಾಗಿ ಆರ್ತರನ್ನು ಸಂತೈಸುತ್ತ, ಗುಡ್ಡ-ಬೆಟ್ಟಗಳನ್ನು ಹತ್ತಿಳಿಯುತ್ತ, ಹಳ್ಳ-ಕೊಳ್ಳಗಳನ್ನು ದಾಂಟುತ್ತ ಮುಂದು ವರೆದು ಹಸುರಿನ ತಾಣವಾದ ಮಲೆನಾಡನ್ನು ಹಿಂದೆಹಾಕಿ, ಧಾರವಾಡ ಜಿಲ್ಲೆಯ ಬೈಲುಸೀಮೆಯ ಬ್ಯಾಡಿಗಿಗೆ ಆಗಮಿಸುತ್ತಾರೆ. ಬರಗಾಲದ ಬವಣೆಯಿಂದ ಬಳಲಿ ಬೆಂಡಾಗಿದ್ದ ನಾಡಿಗೆ ಶಿವಯೋಗಿಗಳು ವರ್ಷಧಾರೆಯ ಸುರಿಸಿ, ಸಕಲ ಚರಾಚರವನ್ನೆಲ್ಲ ಹರ್ಷಗೊಳಿಸಿ, ಮುಂದುವರೆದು, ಕೊಪ್ಪಗ್ರಾಮಕ್ಕೆ ಆಗಮಿಸುತ್ತಾರೆ. ಅಲ್ಲಿಯ ಜನ ಶಿವಯೋಗಿಗಳ ಆಗಮನದ ಹಿನ್ನೆಲೆಯಲ್ಲಿ ದಾಸೋಹವನ್ನು ಹಮ್ಮಿಕೊಳ್ಳುತ್ತಾರೆ. ಮಾಡಿದ ಅಡಿಗೆ ಕೊರತೆಯಾಗುವುದೆಂದು ತೋರಿದಾಗ, ಶಿವಯೋಗಿಗಳ ಕೃಪೆಯಿಂದ ಅದು ಅಕ್ಷಯವಾಗುತ್ತದೆ. ಅಂದಿನಿಂದ ಆ ಕೊಪ್ಪಗ್ರಾಮಕ್ಕೆ 'ಅನ್ನದಾನ ಕೊಪ್ಪ' ಎಂಬ ಹೆಸರು ಶಾಶ್ವತವಾಗುತ್ತದೆ. ಅನ್ನದಾನದ ಮಹಿಮೆಯನ್ನು ತೋರಿದ ಶಿವಯೋಗಿ, ಅನ್ನದಾನೀಶನೆಂದು ಖ್ಯಾತನಾಗುತ್ತಾನೆ.

ಭಕ್ತರನ್ನು ಹರಿಸುತ್ತ, ನೊಂದವರ ನೋವನ್ನು ನಿವಾರಿಸುತ್ತ, ಅನೇಕ ಲೀಲೆಗಳನ್ನು ಗೈಯ್ಯುತ್ತ, 'ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ' ಎಂಬಂತೆ ಸಂಚಾರ ಮಾಡುತ್ತ ತುಂಗಭದ್ರೆಯ ನದಿಯ ದಂಡೆಗುಂಟ ಚಲಿಸುತ್ತ, ಅಲ್ಲಲ್ಲಿ ಶಿವಯೋಗದಲ್ಲಿ ನಿರುತನಾಗುತ್ತ, ಮುಂದೆ ಬಳ್ಳಾರಿ ಜಿಲ್ಲೆಗೆ ಬರುತ್ತಾರೆ. ಮಾರ್ಗದಲ್ಲಿ ತುಂಗಭದ್ರಾ ನದಿಯ ದಂಡೆಯಮೇಲೆ ಇದ್ದ ವನದಲ್ಲಿ ಅನುಷ್ಠಾನಗೈದು ಆಧ್ಯಾತ್ಮವೆನಿಸುವ ಕನಸನ್ನು ಕಾಣುತ್ತಾರೆ. ಪೂಜ್ಯರ ಕನಸು ನೆನಸಾದಂತೆ ಮುಂದೆ ಹಾಲವರ್ತಿ ಶಿವಾನುಭವಚರವರ್ಯ ಚನ್ನವೀರರು ಆಸ್ಥಾನಕ್ಕೆ ಆಗಮಿಸಿ ಲಿಂಗನಾಯಕನಹಳ್ಳಿಯಲ್ಲಿ ಶಿವಾನುಭವ ತರಬೇತಿ ಕೇಂದ್ರವನ್ನಾಗಿ ಮಾಡುತ್ತಾರೆ. ಅಲ್ಲಿ ಅನೇಕ ಮಹಾನ್‌ವ್ಯಕ್ತಿಗಳು ರೂಪಗೊಳ್ಳುತ್ತಾರೆ.

ಹೀಗೆ ಪೂಜ್ಯ ಶಿವಯೋಗಿಗಳು ಮುಂದುವರೆದು ವಿಜಯನಗರವನ್ನು ಸಂದರ್ಶಿಸಿ ಸಂತೋಷಪಡುತ್ತಾರೆ. ವಿಜಯನಗರದ ಅರಸು ಪ್ರೌಢದೇವರಾಯನ ಆಶ್ರಯದಲ್ಲಿ ಶರಣ ಸಾಹಿತ್ಯದ ಪರಿಷ್ಕಾರ, ಸಂಪಾದನೆಯ ಕಾರ್ಯಗಳು ನಡೆದಿರುವುದನ್ನು ಕಂಡು, ನೆಮ್ಮದಿ ಹೊಂದುತ್ತಾರೆ. ಕೆಲವು ದಿವಸ ಹಂಪೆಯಲ್ಲಿ ಅನುಷ್ಠಾನಗೈಯ್ದು, ಮುಂದುವರೆ ಯುತ್ತಾ ಬುಕ್ಕರಾಯನಿಂದ ನೆಲೆಗೊಂಡ ಬುಕ್ಕಸಾಗರಕ್ಕೆ ಹೋಗುವ ಮಾರ್ಗದಲ್ಲಿ ಪ್ರಶಸ್ತವಾದ ಗವಿಯನ್ನು ಕಂಡು ಅಲ್ಲಿ ಅನುಷ್ಠಾನಗೈಯ್ದು, ಶ್ರೀಶೈಲಕ್ಕೆ ಹೊರಟ ಕಂಬಿ ಹೊತ್ತ ಪರಸಿಯವರಿಗೆ ಮೃಷ್ಟಾನ್ನಭೋಜನವಿತ್ತು ತಮ್ಮ ಮಹಿಮೆಯನ್ನು ಮೆರೆಸುತ್ತಾರೆ.

ಹೀಗೆ ಅನಂತ ಲೀಲೆಗಳನ್ನು ಮಾಡುತ್ತ ಕೋಪಣ ನಗರಕ್ಕೆ ಆಗಮಿಸಿ, ಅಲ್ಲಿ ಗವಿಮಠಾಧೀಶ್ವರರ ಆದರಾತಿಥ್ಯಗಳನ್ನು ಸ್ವೀಕರಿಸಿ, ಗೊಂಡಬಾಳದತ್ತ ಪ್ರಯಾಣಿಸುತ್ತಾರೆ. ಅಲ್ಲಿಂದ ಹಿರೇಸಿಂದೋಗಿ, ಕುಂತಲಪುರಗಳಲ್ಲಿ ಅನೇಕ ಸದ್ಭಕ್ತರನ್ನು ಹರಿಸಿ ಮುಂದುವರೆದು, ಲೊಕ್ಕಿಗುಂಡಿಗೆ ದಯಮಾಡಿಸುತ್ತಾರೆ. ಅಲ್ಲಿಯ ಭಕ್ತರನ್ನು ಉದ್ಧರಿಸಿ 'ಎಪ್ಪತ್ತು ಗಿರಿಗಳಲ್ಲಿ ಕಪ್ಪತ್ತಗಿರಿ ಮೇಲು' ಎಂಬ ಉಕ್ತಿಯನ್ನು ಕೇಳಿ, ಅತ್ತ ಮುಂದುವರಿಯುತ್ತಾರೆ. ಅಲ್ಲಿಯ ಅನೇಕ ಸಾಧು ಸಂತರಿಗೆ ಧರ್ಮೋಪದೇಶ ನೀಡಿ, ಮಲ್ಲಿಕಾರ್ಜುನನ ಗುಡಿಯ ಪಕ್ಕದ ಗವಿಯಲ್ಲಿ ಅನುಷ್ಠಾನಗೈಯುತ್ತಾರೆ.

ಸೇವಕ ಕಲ್ಲಪ್ಪನಿಂದ ಮುಂಡರಗಿಯ ಬೇಡರ ಪುಂಡತನದ ಬಗ್ಗೆ ಕೇಳಿ ಪೂಜ್ಯ ಅನ್ನದಾನ ಶಿವಯೋಗಿಗಳು ಅವರನ್ನು ಸನ್ಮಾರ್ಗಿಗಳನ್ನಾಗಿ ಮಾಡಲು ಇಚ್ಛಿಸಿ, ಅತ್ತ ಪಯಣಿಸುತ್ತ, ಭಕ್ತರ ಆಗ್ರಹದ ಮೇರೆಗೆ ಕೆಲಕಾಲ ಹಿರೇವಡ್ಡಟ್ಟಿಯಲ್ಲಿದ್ದು, ಮುಂದುವರೆದು ಮುಂಡರಗಿಯ ಭಾಗಕ್ಕೆ ದಯಮಾಡಿಸುತ್ತಾರೆ. ಕಂಟಲಿ ಎತ್ತನ್ನು ಏರಿ ಬರುವ ಶಿವಯೋಗಿಯನ್ನು ಕಂಡ ಬೇಡರು ಶಿವಯೋಗಿಯ ಮೇಲೇರಿ ಬಂದು ದೋಚಲು ಪ್ರಯತ್ನಿಸುತ್ತಾರೆ. ಶಿವಯೋಗಿಗಳು ಅವರಿಗೆ ಧರ್ಮ ಮಾರ್ಗವನ್ನು ತಿಳಿಸಿ, ಅವರ ಹಸಿದ ಒಡಲಿಗೆ ಬಿಸಿ ಅಂಬಲಿಯನ್ನು ಕರುಣಿಸುತ್ತಾರೆ. ಶಿವಯೋಗಿಯ ಈ ಪವಾಡವನ್ನು ಕಂಡು ಮುಗ್ಧರಾದ ಕಾಡಬೇಡರು, ಶಿವಯೋಗಿಗೆ ಶರಣಾಗಿ, ಅವರಿಂದ ತತ್ವ ಬೋಧನೆಯನ್ನು ಪಡೆದು ದುಷ್ಕೃತ್ಯಗಳನ್ನು ತ್ಯಜಿಸಿ ಸತ್ಪ್ರಜೆಗಳಾಗುತ್ತಾರೆ. ಅಲ್ಲದೆ ಅವರ ನಾಯಕ ಕನಕಪ್ಪನು ಅಲ್ಲಿಯೇ ಶಿವಯೋಗಿಗೆ ಒಂದು ಮಠವನ್ನು ಕಟ್ಟಿಸಿಕೊಟ್ಟು ಶಿವಯೋಗಿಗಳನ್ನು ಅಲ್ಲಿಯೇ ನಿಲ್ಲಿಸಿಕೊಳ್ಳುತ್ತಾನೆ.

ಅನೇಕ ದಿನಗಳವರೆಗೆ ಪೂಜ್ಯ ಅನ್ನದಾನ ಶಿವಯೋಗಿಗಳು ಕನಕಪ್ಪನ ಹಾಗೂ ಆತನ ಜನರ ಸೇವೆಯನ್ನು ಅನುಭವಿಸುತ್ತ, ಸುತ್ತುಮುತ್ತಲ ಭಕ್ತ ಜನರ ಸಂಕಷ್ಟಗಳನ್ನು ಪರಿಹರಿಸುತ್ತ ಅನ್ನದಾನಿ ಎಂಬ ಹೆಸರಿನಿಂದ ಪ್ರಖ್ಯಾತರಾಗುತ್ತಾರೆ. ಅನ್ನದಾನ ಶಿವಯೋಗಿಯ ಮಹಿಮೆಯಿಂದ ಮುಂಡರಗಿ ಸುಕ್ಷೇತ್ರವಾಗುತ್ತದೆ.

ಅನ್ನದಾನ ಶಿವಯೋಗಿಗಳು ಮುಂದೆ ಕೆಲವೇ ವರ್ಷಗಳಲ್ಲಿ ತಮ್ಮ ಮಠಕ್ಕೆ ಮಹಲಿಂಗಪುರದ ಪಂಚಾಕ್ಷರದೇವರಿಗೆ ಸಂಸ್ಕಾರ ನೀಡಿ, ಅನ್ನದಾನ ಸ್ವಾಮಿಗಳೆಂದು ನಾಮಕರಣಗೈದು ತಮ್ಮ ಗುರು ಚನ್ನಬಸವೇಶ್ವರರು ತಮಗೆ ಕರುಣಿಸಿದ್ದ ಕ್ರಿಯಾ ಘಟ್ಟಿಯನ್ನು ಪಂಚಾಕ್ಷರ ದೇವರಿಗೆ ನೀಡಿ, ಶಿವಭಕ್ತಿಯ ಶರಣ ಸಂದೇಶವನ್ನು ಪ್ರಸಾರ ಮಾಡಲು ಅಪ್ಪಣೆ ನೀಡಿ, ಮತ್ತೆ ತಮ್ಮ ಪಯಣವನ್ನು ಮುಂದುವರಿಸಿ, ಗದಗ ತಾಲೂಕಿನ ಮದಗಾನೂರಿಗೆ ಬಂದು, ಅಲ್ಲಿಯ ಹಳ್ಳಗಳ ಸಂಗಮದಲ್ಲಿ ಅನುಷ್ಠಾನಗೈಯುತ್ತಾರೆ. ಅನೇಕ ದುಃಖಿಗಳ ದುಃಖಗಳನ್ನು ದೂರಮಾಡುತ್ತಾರೆ. ಭಕ್ತ ಸಂಕುಲ ಪೂಜ್ಯರ ಮಹಿಮೆಯ ಹಿರಿಮೆಯನ್ನು ಕೇಳಿ ತಂಡೋಪತಂಡವಾಗಿ ಬಂದು,ದರ್ಶನಾಶೀರ್ವಾದಗಳನ್ನು

ಪಡೆದು ಪುನೀತರಾಗುತ್ತಾರೆ. ಈ ಸುದ್ದಿಯನ್ನು ಕೇಳಿ, ಕುಷ್ಠರೋಗದಿಂದ ಬಳಲುತ್ತಿದ್ದ ಅಣ್ಣಿಗೇರಿ ದೇಸಾಯರು ಶಿವಯೋಗಿಗಳ ದರ್ಶನ ಭಾಗ್ಯ ಪಡೆದು, ತನ್ನ ವ್ಯಾಧಿಯನ್ನು ಕಳೆದುಕೊಳ್ಳುತ್ತಾನೆ. ಪೂಜ್ಯರನ್ನು ತನ್ನ ಗ್ರಾಮಕ್ಕೆ ಬರಬೇಕೆಂದು ಬಿನ್ನವಿಸಿಕೊಳ್ಳುತ್ತಾನೆ. ಅದರಂತೆ ಪೂಜ್ಯರು ತನ್ನ ಗ್ರಾಮಕ್ಕೆ ಬಂದ ಸಂತೋಷದಲ್ಲಿ ಅನ್ನದಾನಗೈಯುತ್ತಾನೆ. ಸದ್ಭಕ್ತರ ಸದ್ಭಕ್ತಿಯು ಪ್ರಭಾವದಿಂದ, ಪೂಜ್ಯರ ಆಶೀರ್ವಾದ ದಿಂದ ಮಾಡಿದ ಅನ್ನಗಿರಿಯಂತೆ ಬೆಳೆಯುತ್ತದೆ. ಅಂದಿನಿಂದ ಆ ಊರು 'ಅನ್ನಗಿರಿ' ಎಂದು ಹೆಸರು ಪಡೆಯುತ್ತದೆ. ಹೀಗೆ ಹಲವು ಕಾಲ ಅಣ್ಣಿಗೇರಿಯಲ್ಲಿ ಭಕ್ತರ ಕಲ್ಯಾಣ ಮಾಡುತ್ತ ಲಿಂಗಾನಂದದಲ್ಲಿರುತ್ತ, ಅಲ್ಲಿಯೇ ಲಿಂಗದಲ್ಲೊಂದಾಗಿ ಬೆಳಗು ಮಹಾ ಬೆಳಗನ್ನು ಕೂಡಿ ಹೋಗುತ್ತದೆ. ಸದ್ಭಕ್ತ ಮಂಡಳಿ ತಾಯಿಯನ್ನು ಕಳೆದುಕೊಂಡ ಮಕ್ಕಳಂತೆ ದುಃಖಿತ ರಾಗುತ್ತಾರೆ. ಮುಂದೆ ಅಲ್ಲಿಯೇ ಸದ್ಭಕ್ತರೆಲ್ಲ ಸೇರಿ ಅವರ ಗದ್ದುಗೆಯನ್ನು ನಿರ್ಮಿಸುತ್ತಾರೆ.

ಎರಡನೆಯ ಪೀಠಾಧಿಪತಿಗಳು

ಶ್ರೀ ಗುರುವಿನ ಅಪ್ಪಣೆಯನ್ನು ಶಿರಸಾವಹಿಸಿ, ಅನ್ನದಾನೀಶ್ವರ ಮಠದ ಎರಡನೆಯ ಪೀಠಾಧಿಪತಿಗಳು ಮಠದಲ್ಲಿಯೇ ಅನೇಕ ವರ್ಷಗಳ ಕಾಲ ಅನುಷ್ಠಾನ ಗೈಯುತ್ತ, ಅನ್ನದಾನಗೈಯುತ್ತ ಭಕ್ತರ ಉದ್ಧಾರ ಮಾಡುತ್ತ ಇದ್ದು, ಮುಂದೆ ಇವರು ನಾಡಿನ ಅನೇಕ ಭಾಗಗಳಲ್ಲಿ ಸಂಚರಿಸುತ್ತ, ಭಕ್ತರ ಕಲ್ಯಾಣ ಮಾಡುತ್ತ, ಆರ್ತರನ್ನು ಸಂತೈಸುತ್ತ ಶಿವಶರಣರ ಸಂದೇಶಗಳನ್ನು ಬಿತ್ತರಿಸುತ್ತ ಜನರಲ್ಲಿ ಭಕ್ತಿಯನ್ನು ಬೆಳೆಸಿದರು. ನಂತರ ತಮ್ಮ ಸೇವೆಯಲ್ಲಿದ್ದ ತೇಜಸ್ವಿಯಾದ ಶಿವಯೋಗಿಯೊಬ್ಬನಿಗೆ ಸಂಸ್ಕಾರ ನೀಡಿ ತಮ್ಮ ಗುರುವಿನಿಂದ ತಮಗೆ ದೊರೆತ ಪವಿತ್ರ ಭಸ್ಮವನ್ನು ನೀಡಿ, ಶರಣ ಸಂದೇಶ ಪ್ರಚಾರಮಾಡಿ ಧರ್ಮೋದ್ಧಾರಕ್ಕೆ ಕಾರಣನಾಗೆಂದು ಹರಿಸಿ, ಮತ್ತೆ ಲೋಕ ಸಂಚಾರ ಕೈಕೊಂಡು, ಗದಗ ಅಣ್ಣಿಗೇರಿ ನವಲಗುಂದ ಮಾರ್ಗವಾಗಿ ಸಂಚರಿಸುತ್ತ ಅನೇಕ ಪವಾಡಗಳನ್ನು ಮಾಡುತ್ತ ಭಕ್ತರನ್ನು ಉದ್ಧರಿಸುತ್ತಾ ನರಗುಂದದ ಭಾಗಕ್ಕೆ ಬಂದು ಅಲ್ಲಿಯ ಶಿರೋಳ ಗ್ರಾಮದಲ್ಲಿ ಅನೇಕ ಲೀಲೆಗಳನ್ನು ಗೈದರು. ಅಲ್ಲಿಯ ಭರಮಗೌಡ ಪೂಜ್ಯರ ಕೃಪಾಶೀರ್ವಾದದಿಂದ ಪುತ್ರ ಸಂತಾನ ಪಡೆದುದಲ್ಲದೆ, ಆರ್ಥಿಕ ಅಭಿವೃದ್ಧಿ ಯನ್ನು ಹೊಂದಿದನು. ಹೀಗೆ ಪೂಜ್ಯರಿಂದ ಕೃತಾರ್ಥನಾದ ಭರಮಗೌಡ, ಪೂಜ್ಯಶ್ರೀ ಅನ್ನದಾನ ಶಿವಯೋಗಿಯ ಹೆಸರಿನಲ್ಲಿ ಭೂಮಿ ದಾನಗೈದು ತನ್ನ ಭಕ್ತಿ ಕಾಣಿಕೆಯನ್ನು ಪೂಜ್ಯರ ಪಾದಕ್ಕೆ ಅರ್ಪಿಸುತ್ತಾನೆ. ಹೀಗೆ ಭಕ್ತರ ಬಲವಂತಕ್ಕೆ ಪ್ರೀತ್ಯಾದರಗಳಿಗೆ ಮಾರು ಹೋದ ಪೂಜ್ಯರು, ಕೆಲಕಾಲ ಲಿಂಗಾನಂದದಲ್ಲಿದ್ದು ಕೊನೆಗೆ ಅಲ್ಲಿಯೇ ಲಿಂಗದಲ್ಲಿ ಒಂದಾಗುತ್ತಾರೆ. ಭಕ್ತ ಜನವೆಲ್ಲ ಆದರದಿಂದ ಅವರ ಗದ್ದಿಗೆಯನ್ನು ಕಟ್ಟಿಸಿ, ಮನದಲ್ಲಿ ಅವರನ್ನು ಪ್ರತಿನಿತ್ಯ ಜಪಿಸುತ್ತ, ಬಾಳಿನ ಮಾರ್ಗ ಕಂಡುಕೊಳ್ಳುತ್ತಾರೆ. ಇಂದಿಗೂ ಅಲ್ಲಿ

ಪೂಜ್ಯರ ಗದ್ದುಗೆ ನಿತ್ಯವೂ ಭಕ್ತಜನರಿಂದ ಪೂಜೆಗೊಳ್ಳುತ್ತಿದೆ. ಪ್ರತಿ ವರುಷವೂ ಅನ್ನದಾನೀಶ್ವರ ಯಾತ್ರೆ ನಡೆಯುತ್ತ ಬಂದಿದೆ.

ಮೂರನೆಯ ಪೀಠಾಧಿಪತಿಗಳು

ಮುಂಡರಗಿಯ ಶ್ರೀ ಅನ್ನದಾನೀಶ್ವರ ಸಂಸ್ಥಾನಮಠಕ್ಕೆ ಮೂರನೆಯವರಾಗಿ ಪೀಠವನ್ನೇರಿದ ಪೂಜ್ಯರೂ ಸಹ ಹಿಂದಿನವರಂತೆ ಮಹಾತಪಸ್ವಿಗಳೂ ಪಾವನಚರಿತರೂ ಪವಾಡ ಪುರುಷರೂ ಆಗಿ ಅನೇಕ ಲೀಲೆಗಳನ್ನು ಮಾಡಿ ಭಕ್ತಕೋಟಿಯನ್ನು ಉದ್ಧರಿಸಿದವರಾಗಿದ್ದಾರೆ. ತಮ್ಮ ಗುರುಗಳು ಬೋಧಿಸಿದ ಬೋಧನೆಯಂತೆ, ಕೆಲವು ವರ್ಷ ಮುಂಡರಗಿ ಮಠದಲ್ಲಿಯೇ ಇದ್ದುಕೊಂಡು ಭಕ್ತರನ್ನು. ದುಃಖಿಗಳನ್ನು, ಉದ್ಧರಿಸುತ್ತ ಶಿವಭಕ್ತಿಯ ತತ್ವಗಳನ್ನು ಬಿತ್ತರಿಸುತ್ತ ಧರ್ಮ ಜಾಗೃತಿಯ ಕಾರ್ಯವನ್ನು ಕೈಕೊಂಡರು. ಮುಂದೆ ಇವರು ತಮ್ಮ ಸ್ಥಾನಕ್ಕೆ ಅರ್ಹ ಶಿವಯೋಗಿಯೊಬ್ಬನನ್ನು ಆಯ್ಕೆಮಾಡಿ ಆತನಿಗೆ ಶಿವತತ್ವ, ಧರ್ಮತತ್ವಗಳನ್ನು ಬೋಧಿಸಿ ಲೋಕ ಸಂಚಾರ ಕೈಕೊಂಡರು. ಹೀಗೆ ಇವರು ಮುಂಡರಗಿ ಭಾಗದಿಂದ ಹೊರಟು, ತುಂಗಭದ್ರಾ ನದಿಯನ್ನು ಪಾರುಗೈದು, ಬಳ್ಳಾರಿ ಜಿಲ್ಲೆಯಲ್ಲಿ ಸಂಚರಿಸುತ್ತ, ಶಿವಾನುಭವ ತತ್ವಗಳನ್ನು ಬೋಧಿಸುತ್ತ, ಅಲ್ಲಲ್ಲಿ ಅನುಷ್ಠಾನಗೈಯುತ್ತ ಭವರೋಗಿಗಳಿಗೆ ಮುಕ್ತಿಮಾರ್ಗವನ್ನು ಕರುಣಿಸುತ್ತಾ, ಮರಿಯಮ್ಮನ ಹಳ್ಳಿಗೆ ಆಗಮಿಸುತ್ತಾರೆ. ಅಲ್ಲಿ ಅನೇಕ ದಿನಗಳವರೆಗೆ ಅನುಷ್ಠಾನ ಗೈಯುತ್ತಾರೆ. ಅವರ ತಪಃ ಪ್ರಭಾವದಿಂದ ಆ ಭಾಗದ ಅನೇಕರು ಪ್ರಭಾವಿತರಾಗಿ, ಪೂಜ್ಯರ ಕೃಪೆಗೆ ಪಾತ್ರರಾಗುತ್ತಾರೆ. ಹೀಗೆ ಭಕ್ತವೃಂದದ ಪ್ರೀತಿ ಆದರಗಳಿಂದ ಮನಸೋತ ಪೂಜ್ಯರು ಅಲ್ಲಿಯೇ ಇದ್ದು, ಭಕ್ತರ ಉದ್ಧಾರಗೈಯುತ್ತ ಲಿಂಗಾನುಸಂಧಾನದಲ್ಲಿದ್ದುಕೊಂಡು ಅಲ್ಲಿಯೇ ಲಿಂಗೈಕ್ಯರಾಗುತ್ತಾರೆ. ಅವರ ತಪಃಶಕ್ತಿಯಿಂದ ಇಂದು ಆ ಊರು ವಿದ್ಯಾಕೇಂದ್ರವಾಗಿದೆ. ಪೂಜ್ಯರ ಗದ್ದುಗೆ ಅಲ್ಲಿಯೇ ಇದ್ದು, ಇಂದು ಅದೊಂದು ಜಾಗೃತ ಸ್ಥಳವಾಗಿದೆ. ಇವರು ಗುರುವಿರಕ್ತರ ಸಮನ್ವಯವನ್ನು ಸಾಧಿಸಿದವರಾಗಿದ್ದರು. ಈ ಬಗ್ಗೆ ಉಜ್ಜಯನಿಯ ಪಂಚಪೀಠಾಧಿಪತಿಗಳು ಅಲ್ಲಿಯ ಜಮೀನು ಹಾಗೂ ಮಠದ ಬಗ್ಗೆ ಭಕ್ತರಿಗೆ ನಿರೂಪಿಸಿದ ಸಂದೇಶ ಶ್ರೀಮಠದಲ್ಲಿ ಈಗಲೂ ಇದ್ದು. ಗುರುವಿರಕ್ತರ ಸಮನ್ವಯ ಸಾಧನೆಯ ಒಂದು ದಾಖಲೆಯಾಗಿದೆ.

ನಾಲ್ಕನೆಯ ಪೀಠಾಧಿಪತಿಗಳು

ಮೃಡಗಿರಿ ಸಂಸ್ಥಾನಮಠದ ಪೀಠಾಧಿಪತಿಗಳೆಲ್ಲ ಒಂದೇ ನಾಮದಿಂದ ಬೆಳಗಿದ್ದಾರೆ. ಹಿಂದೆ ಆಗಿ ಹೋದ ಜಗದ್ಗುರುಗಳ ಪರಂಪರೆಯಲ್ಲಿ ಬಂದ ನಾಲ್ಕನೆಯ ಪೀಠಾಧ್ಯಕ್ಷರಾದ ಪೂಜ್ಯ ಅನ್ನದಾನ ಮಹಾಸ್ವಾಮಿಗಳೂ ಸಹ ಅನ್ನದಾಸೋಹಗೈಯುತ್ತ, ಭಕ್ತರನ್ನು ಉದ್ಧರಿಸುತ್ತ, ಲೀಲೆಗಳನ್ನು ತೋರುತ್ತ ಲೋಕಸಂಚಾರಗೈದರು. ಇವರು ಸಹ ಭಕ್ತೋದ್ಧಾರಕರಾಗಿದ್ದರು.ಇವರು ತಮ್ಮ ಮಠದಲ್ಲಿಯ ಶಿವಯೋಗಿಯೊಬ್ಬನಿಗೆ ಸಂಸ್ಕಾರ

ಕೊಟ್ಟು ಶಿವಶರಣರ ಸಂದೇಶದ ಪ್ರಸಾರ ಮಾಡಲು ಅಪ್ಪಣೆಗೈದು, ಲೋಕಸಂಚಾರ ಮಾಡುತ್ತ ಭಕ್ತರನ್ನು ಉದ್ಧರಿಸುತ್ತ, ಅಲ್ಲಲ್ಲಿ ಅನುಷ್ಠಾನಗೈಯುತ್ತಾ ಗದಗ ತಾಲೂಕಿನ ಶಾಗೋಟಿ ಗ್ರಾಮಕ್ಕೆ ಬಂದು, ಅಲ್ಲಿ ಅನೇಕ ವರ್ಷ ತಪಸ್ಸನ್ನು ಮಾಡಿ ಮತ್ತೆ ಲಕ್ಕುಂಡಿಗೆ ಬಂದು ಭಕ್ತರ ವಿನಂತಿಯಂತೆ ಅಲ್ಲಿಯೇ ಇದ್ದುಕೊಂಡು, ಅನುಷ್ಠಾನದಲ್ಲಿ ನಿರುತರಾಗಿ ಕೊನೆಗೆ ಅಲ್ಲಿಯೇ ಲಿಂಗೈಕ್ಯರಾದರು. ಅವರ ಗದ್ದುಗೆ ಅಲ್ಲಿಯೇ ಇದ್ದು, ಭಕ್ತರಿಂದ ಪೂಜೆಗೊಳ್ಳುತ್ತಿದೆ. ಈಗೀಗ ಬೀಳುಬಿದ್ದ ಆ ಮಠದ ಜೀರ್ಣೋದ್ಧಾರ ಕಾರ್ಯ, ಇಂದಿನ ಪೂಜ್ಯಶ್ರೀ ಜಗದ್ಗುರುಗಳವರ ಅಪ್ಪಣೆಯಂತೆ ಅಲ್ಲಿಯ ಸದ್ಭಕ್ತರಿಂದ ಬಹು ಉತ್ಸಾಹದಲ್ಲಿ ನಡೆದಿರುವುದು ಭಕ್ತಕುಲಕ್ಕೆ ಸಂತಸವನ್ನುಂಟುಮಾಡಿದೆ.

ಐದನೆಯ ಪೀಠಾಧಿಪತಿಗಳು (ಕ್ರಿ.ಶ. ೧೭೫೦–೧೮೧೫)

ಐದನೆಯುದವರಾಗಿ ಮುಂಡರಗಿಯ ಜಗದ್ಗುರು ಪೀಠಕ್ಕೆ ಬಂದ ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು ಮುಂಡರಗಿಯಲ್ಲಿಯೇ ಇದ್ದುಕೊಂಡು ಸದ್ಭಕ್ತರ ಉದ್ಧಾರ ಕೈಕೊಂಡರು. ಲಿಂಗಪೂಜಾನಿಷ್ಠರಾದ ಇವರು ಲೋಕಸಂಚಾರಕ್ಕೆ ಆಶಿಸದೇ ಮಠದಲ್ಲಿಯೇ ಇದ್ದುಕೊಂಡು ಅನುಷ್ಠಾನಗೈಯುತ್ತ ಜಾತಿಮತಗಳೆನ್ನದೆ ಬಡವಬಲ್ಲಿದರೆನ್ನದೆ, ತಮ್ಮನ್ನೆ ನಂಬಿ ಬಂದ ಭಕ್ತರ ಉದ್ಧಾರ ಮಾಡಿದರು. ಮಠದಲ್ಲಿ ಶಿವಾನುಭವಗೋಷ್ಠಿಗಳನ್ನು ನಡೆಸುತ್ತ ಭಕ್ತವೃಂದಕ್ಕೆ ಶಿವಶರಣರ ತತ್ವಗಳನ್ನು ತಿಳಿಸುವ ಕಾರ್ಯಮಾಡಿದರು. ಇವರು ಯೋಗ ಸಾಧಕರಾಗಿದ್ದರು. ತಮ್ಮ ಯೋಗದ ಮಹಿಮೆಯಿಂದ ಅವರು ಅನೇಕ ವರ್ಷಗಳ ಕಾಲ ಬದುಕಿದರು. ಆದ್ದರಿಂದ ಇವರನ್ನು ಮುದಿ ಅಂದಾನಸ್ವಾಮಿಗಳೆಂದೇ ಭಕ್ತರು ಗುರುತಿಸುತ್ತಿದ್ದರು. ಇವರು ಈಗಿನ ಹಳೆಮಠದಲ್ಲಿ (ಪೂರ್ವ ಅನ್ನದಾನ ಸ್ವಾಮಿಗಳ ಮಠ)ಯೇ ಲಿಂಗೈಕ್ಯರಾದರು. ಇವರ ಗದ್ದುಗೆ ಅಲ್ಲಿಯೇ ಇದ್ದು, ಅದು ಒಳ್ಳೆಯ ಜಾಗೃತ ಸ್ಥಾನವಾಗಿದೆ. ಈಗಲೂ ಅನೇಕ ಭಕ್ತರು ಶ್ರದ್ಧಾಭಕ್ತಿಯಿಂದ ಗದ್ದುಗೆಗೆ ನಡೆದುಕೊಂಡು, ತಮ್ಮ ಇಷ್ಟಾರ್ಥಗಳನ್ನು ಪಡೆದು ಸುಖ ಜೀವನ ನಡೆಸುತ್ತಿದ್ದಾರೆ.

ಆರನೆಯ ಪೀಠಾಧಿಪತಿಗಳು

ಮಣಕವಾಡದ ಶ್ರೀಗಳು (ಕ್ರಿ.ಶ. ೧೮೧೫–೧೮೫೩)

ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಪೀಠಕ್ಕೆ ಆರನೆಯುವರಾಗಿ ಪೀಠವನ್ನು ಅಲಂಕರಿಸಿದ ಮಹಾಸ್ವಾಮಿಗಳು ಮೂಲತಃ ಕಲ್ಲೂರಿನವರು. ಇವರು ಪರಮ ವೈರಾಗ್ಯಶೀಲರೂ ಪವಾಡ ಪುರುಷರೂ ಆಗಿದ್ದರು. ಬಾಲ್ಯದಲ್ಲಿಯೇ ಇವರು ಅನೇಕ ಲೀಲೆಗಳನ್ನು ತೋರಿದ್ದರಿಂದ ಇವರನ್ನು 'ಬಾಲಲೀಲಾ ಅನ್ನದಾನ ಸ್ವಾಮಿ' ಎಂದು ಕರೆಯುತ್ತಿದ್ದರು. ಇವರು ಲೀಲಾ ಮೂರ್ತಿಗಳಾಗಿದ್ದುದರಿಂದ, ಜನರ ಕಣ್ಣಿಗೆ ಹುಚ್ಚರಂತೆ ಕಾಣುತ್ತಿದ್ದರು. ಇವರ ನಡೆ ನುಡಿ ವಿಚಿತ್ರವಾಗಿದ್ದವು. ಆದ್ದರಿಂದ

ಇವರಿಗೆ "ಹುಚ್ಚ ಅಂದಾನ ಸ್ವಾಮಿ" ಎಂಬ ಅನ್ವರ್ಥಕ ನಾಮವೂ ಇತ್ತು. ಇವರ ಗುರುಗಳು ಲಿಂಗೈಕ್ಯರಾಗುವಾಗ ಇವರಿಗೆ ಅಧಿಕಾರವನ್ನು ಕರುಣಿಸಲು ಸಾಧ್ಯವಾಗದೇ ಹೋದುದರಿಂದ, ಮುಂದೆ ಡಂಬಳದ ತೋಂಟದಾರ್ಯ ಮಹಾಸ್ವಾಮಿಗಳು ಬಂದು ಅಧಿಕಾರ ಅನುಗ್ರಹ ಮಾಡಿದರು. ಶಿಷ್ಯನ ವೈರಾಗ್ಯದ ನೆಪದಿಂದ ತೋಂಟದ ಸ್ವಾಮಿಗಳು ಈ ಮಠವೂ ತಮ್ಮದೇ ಎಂದು ಬರೆಸಿಕೊಂಡರು. ಪರಮ ವೈರಾಗ್ಯ ಮೂರ್ತಿಗಳಾದ ಅನ್ನದಾನ ಸ್ವಾಮಿಗಳು "ನೀನೂ ಬೇಡ, ನೀನು ಬಯಸಿದ ಮಠವೂ ಬೇಡ" ಎಂದು ಸಂಚಾರ ಮೂರ್ತಿಗಳಾಗಿ ಮಠದಿಂದ ಹೊರಗೆ ನಡೆದೇ ಬಿಟ್ಟರು. ಹೀಗೆ ಸಂಚಾರ ಕೈಕೊಂಡ ಮಹಾಸ್ವಾಮಿಗಳು ಅಲ್ಲಲ್ಲಿ ಅನಂತ ಲೀಲೆಗಳನ್ನು ಮಾಡುತ್ತ, ಅರಿತವರಿಗೆ ಲೀಲಾ ಮೂರ್ತಿಯಾಗಿ, ಅರಿಯದವರಿಗೆ ಬರಿ ಹುಚ್ಚನಾಗಿ ಕಾಣಿಸುತ್ತ ದಿಗಂಬರರಾಗಿ ಬೆಣ್ಣಿಹಳ್ಳಕ್ಕೆ ಬಂದಾಗ, ಹಳ್ಳದಲ್ಲಿ ಬಟ್ಟೆ ತೊಳೆಯುತ್ತಿದ್ದ ಹಳ್ಳಿಯ ಗರತಿಯೊಬ್ಬಳು ಇವರ ಸ್ಥಿತಿಯನ್ನು ಕಂಡು ತನ್ನ ಹೊಸ ಸೀರೆಯನ್ನೇ ಹರಿದು, ಅವರ ಕೌಪೀನಕ್ಕೆ ಕೊಟ್ಟಳು. ಅದನ್ನೇ ಧರಿಸಿಕೊಂಡು ಅವರು ಮುಂದೆ ಮಣಕವಾಡಕ್ಕೆ ಬಂದರು. ತನ್ನ ಸೀರೆಯನ್ನು ಹರಿದುಕೊಟ್ಟ ಆ ಗೃಹಿಣಿ ಮನೆಗೆ ಹೋಗಿ ನೋಡಿದಾಗ ಆ ಹರಿದ ಸೀರೆ ಮೊದಲಿನಂತೆಯೇ ಇದ್ದುದನ್ನು ಗಮನಿಸಿ, ಆಶ್ಚರ್ಯ ಆನಂದದಿಂದ ಊರಿಗೆಲ್ಲ ಸಾರಿದಳು. ಮಣಕವಾಡದ ಜನ ಪೂಜ್ಯರನ್ನು ಭಯ ಭಕ್ತಿಯಿಂದ ಕಂಡಿತು. ಅಲ್ಲಿಯೇ ಒಂದು ಮಠವನ್ನು ಕಟ್ಟಿಸಿ, ಅವರನ್ನು ಅಲ್ಲಿಯೇ ನಿಲ್ಲಿಸಿಕೊಂಡರು. ಹೀಗೆ, ಪೂಜ್ಯ ಅನ್ನದಾನ ಶ್ರೀಗಳು ಮಣಕವಾಡದಲ್ಲಿ ಇದ್ದುಕೊಂಡು ಅನೇಕ ಲೀಲೆಗೈಯುತ್ತ, ಅಲ್ಲಿಯೇ ಲಿಂಗೈಕ್ಯರಾದರು. ಅವರ ಕೃಪೆ ಪಡೆದ ಅನೇಕ ಭಕ್ತರು ಇಂದಿಗೂ ಸುಖ ಸಮೃದ್ಧಿಯಿಂದ ಜೀವಿಸುತ್ತಿದ್ದಾರೆ. ಈಗ ಆ ಮಠ ಒಂದು ಜಾಗೃತ ಸ್ಥಾನವಾಗಿದ್ದು, ಪ್ರತಿ ವರ್ಷ ಶ್ರಾವಣದಲ್ಲಿ ಭಕ್ತಾದಿಗಳು ಅನ್ನದಾನಿಯ ಜಾತ್ರೆಯನ್ನು ವೈಭವದಿಂದ ಭಕ್ತಿಯಿಂದ ಆಚರಿಸುತ್ತಾರೆ.

ಏಳನೆಯ ಪೀಠಾಧಿಪತಿಗಳು

ಬಳ್ಳೊಳ್ಳಿ ಶ್ರೀಗಳು (ಕ್ರಿ. ಶ. ೧೮೪೯–೧೮೮೮)

ಹುಚ್ಚ ಅನ್ನದಾನ ಮಹಾಸ್ವಾಮಿಗಳು ಮಠವನ್ನು ತ್ಯಜಿಸಿ ಸಂಚಾರಕ್ಕೆ ಹೋದ ಮೇಲೆ ಮಠದಲ್ಲಿದ್ದ ಮರಿ ದೇವರು ಅನಾಥರಂತಾದರು. ಏಕೆಂದರೆ, ಗದಗಿನ ತೋಂಟದಾರ್ಯರು ಮುಂಡರಗಿ ಮಠ ತಮ್ಮದೆಂದೂ, ತಾವೇ ಅದಕ್ಕೆ ಹಕ್ಕುದಾರರೆಂದೂ ಕೋರ್ಟಿನಲ್ಲಿ ನ್ಯಾಯ ಹೂಡಿದ್ದರಿಂದ ಮರಿ ದೇವರು ಮಠವನ್ನು ತ್ಯಜಿಸಬೇಕಾದ ಪ್ರಸಂಗ ಬಂದಿತು. ಈ ಸಂದರ್ಭದಲ್ಲಿ ಮುಂಡರಗಿ ಭಾಗದ ಭಕ್ತರೆಲ್ಲ ಕೈಕಟ್ಟಿಕೊಂಡು ಕೂಡ್ರಲಿಲ್ಲ. ಅವರೆಲ್ಲ ಸೇರಿ, ಅನ್ನದಾನ ಮಠದ ಪರವಾಗಿ ನಿಂತು, ದಿ. ರಂಗರಾವ ನಾಡಗೌಡ್ರ ಅವರಿಂದ ಈಗಿರುವ ಮಠದ ನಿವೇಶನವನ್ನು ಪಡೆದು ಕ್ರಿ. ಶ. ೧೮೪೫ರಲ್ಲಿ ಹೊಸ

ಮಠವೊಂದನ್ನು ಕಟ್ಟಿಸಿ ಕೊಟ್ಟು, ಮರಿ ದೇವರಿಗೆ ಅನ್ನದಾನ ಮಹಾಸ್ವಾಮಿಗಳೆಂದು ಕರೆದು ಮುಂಡರಗಿ ಮಠದ ಪೀಠಕ್ಕೇರಿಸಿದರು.

ಮುಂಡರಗಿಯ ಸಂಸ್ಥಾನ ಮಠಕ್ಕೆ ಏಳನೆಯವರಾಗಿ ಪಟ್ಟಕ್ಕೆ ಬಂದ ಪೂಜ್ಯಶ್ರೀಗಳು ಮೂಲತಃ ಬಳ್ಳೊಳ್ಳಿಯವರ ಮನೆತನಕ್ಕೆ ಸಂಬಂಧಿಸಿದವರು. ಇವರು ಬಾಲ್ಯದಲ್ಲಿಯೇ ಸರ್ವಸಂಗ ಪರಿತ್ಯಾಗಿಗಳಾಗಿ ಶ್ರೀ ಅನ್ನದಾನ ಮಹಾಸ್ವಾಮಿಗಳವರಿಂದ ಜಂಗಮ ದೀಕ್ಷೆಯನ್ನು ಪಡೆದು, ಮಠದಲ್ಲಿಯೇ ಲಿಂಗಪೂಜಾನಿಷ್ಠರಾಗಿ, ಗುರುಗಳ ಸೇವಾ ಕಾರ್ಯದಲ್ಲಿದ್ದುಕೊಂಡು, ಶಿವಾನುಭವ ತತ್ವಗಳನ್ನು ತಿಳಿದುಕೊಂಡು, ನಿತ್ಯ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಂಡು, ಮಹಾಯೋಗಿ ಎನಿಸಿದ್ದರು.

ಇವರು ಉಗ್ರ ತಪಸ್ವಿಗಳೂ ಪವಾಡ ಪುರುಷರೂ ಆಗಿದ್ದರು. ಪರ ಧರ್ಮ ಸಹಿಷ್ಣುತೆ, ಸರ್ವ ಧರ್ಮಗಳ ಸಮನ್ವಯ ದೃಷ್ಟಿ, ಹೃದಯ ವೈಶಾಲ್ಯತೆಗಳು ಇವರ ಪ್ರಮುಖ ಗುಣಗಳಾಗಿದ್ದವು. ಈ ಗುಣಗಳಿಂದ ಪರ ಧರ್ಮದವರೂ ಪೂಜ್ಯಶ್ರೀಗಳವರ ಆಕರ್ಷಣೆಗೆ ಒಳಗಾದರು.

ಇವರು ಮುಂಡರಗಿಯ ವಿಠಲ ಮಂದಿರದ ನಿರ್ಮಾಣಕ್ಕೆ ಸಹಾಯ ಮಾಡಲು ಮಕ್ತುಂಪುರದ ೧೬ ಎಕರೆ ಜಮೀನನ್ನು ದಾನವಾಗಿ ನೀಡಿದರು. ಸ್ವಾತಂತ್ರ್ಯ ಪ್ರಿಯರಾದ ಇವರು ೧೮೫೭ರ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಪೂರ್ಣವಾಗಿ ತಮ್ಮ ಆಶೀರ್ವಾದ ನೀಡಿ, ಆಂಗ್ಲರ ವಿರುದ್ಧ ಬಂಡೆದ್ದ ಮುಂಡರಗಿ ಭೀಮರಾಯ ಹಾಗೂ ಹಮ್ಮಿಗಿ ಕೆಂಚನಗೌಡರಿಗೆ ಪ್ರೋತ್ಸಾಹ ನೀಡಿದರು. ಅಲ್ಲದೆ ಮುಂಡರಗಿ ಭೀಮರಾಯನಿಗೆ ಪೂಜ್ಯ ಅನ್ನದಾನ ಮಹಾಸ್ವಾಮಿಗಳು ಧರ್ಮ ಗುರುಗಳಾಗಿದ್ದರು. ಮುಂದೆ ಆ ಕಾಲದಲ್ಲಿ ಹಾಳಾದ ರಾಟಿಯ ಅರಮನೆಯ ಕಟ್ಟಿಗೆಗಳನ್ನು ಈಗಿನ ಹೊಸ ಮಠದ ಕಟ್ಟಡಕ್ಕಾಗಿ ಭೀಮರಾಯನ ವಂಶಸ್ಥರು ದಾನವಿತ್ತದ್ದು ಒಂದು ಐತಿಹಾಸಿಕ ನಿದರ್ಶನ. ಅಲ್ಲದೆ ಪೂಜ್ಯ ಜಗದ್ಗುರುಗಳು ಕಲಿಕೇರಿಯ ದೇಸಾಯರ ಮನೆತನದಲ್ಲಿ ಬೆಳೆದ ಅಂತಃಕಲಹವನ್ನು ದೂರ ಮಾಡಿ ಕಲಕೇರಿಯ ದೇಸಾಯರಿಗೆ ಪುತ್ರ ಸಂತಾನವನ್ನು ಕರುಣಿಸಿದರು. ಈ ಸಂದರ್ಭದಲ್ಲಿ ಕಲಕೇರಿಯ ದೇಸಾಯರು ಶ್ರೀಮಠಕ್ಕೆ ಭೂಮಿ ದಾನಗೈದ ದಾಖಲೆಗಳೂ ಇವೆ. ಪೂಜ್ಯ ಶ್ರೀಗಳು ಈ ಭಾಗದ ಜನತೆಯ ಕಷ್ಟ ಕಾರ್ಪಣ್ಯಗಳನ್ನು, ರೋಗ ರುಜನಾದಿಗಳನ್ನು ನಿವಾರಿಸಿ ಸಾಕ್ಷಾತ್ ಶಿವನೆನಿಸಿದ್ದರು. ಹೀಗೆ ಭಕ್ತ ಕಾರುಣ್ಯ ಮೂರ್ತಿಗಳೂ ಮಹಾ ತಪಸ್ವಿಗಳೂ ಆದ ಪೂಜ್ಯ ಜಗದ್ಗುರು ಅನ್ನದಾನ ಮಹಾಸ್ವಾಮಿಗಳು ತಮ್ಮ ಇಳಿ ವಯಸ್ಸಿನಲ್ಲಿ ಸದ್ಭಕ್ತರನ್ನೆಲ್ಲ ಕೂಡಿಸಿ ವಿಚಾರ ಮಾಡಿ, ಈಗಾಗಲೇ ಮಠದಲ್ಲಿ ಸೇವಾ ನಿರತನೂ, ಧರ್ಮ ನಿಷ್ಠನೂ, ಲಿಂಗಾನು ಸಂಧಾನಿಯೂ ಆದ ಸೊರಟೂರಿನ ಅನ್ನದಾನಿ ಮರಿದೇವರಿಗೆ ಅಧಿಕಾರ ಅನುಗ್ರಹ ಮಾಡಿ ಕ್ರಿ. ಶ. ೧೮೮೮ರಲ್ಲಿ ಲಿಂಗೈಕ್ಯರಾದರು. ಇವರ ಗದ್ದುಗೆ ಇಂದಿನ ಶ್ರೀಮಠದಲ್ಲಿಯೇ ಇದ್ದು, ಅದರ ಕಟ್ಟಡ ಕಾರ್ಯವನ್ನು ಕೊಪ್ಪಳದ ಗಣ್ಯ ವ್ಯಾಪಾರಸ್ಥರಾಗಿದ್ದ ಲಿಂ. ಶ್ರೀ ವೀರಭದ್ರಪ್ಪನವರು ಬಳ್ಳೊಳ್ಳಿ

ಅವರು ನಿರ್ವಹಿಸಿಕೊಂಡು ಭವ್ಯ ಕಟ್ಟಡವನ್ನು ನಿರ್ಮಿಸಿ ಕೃತಾರ್ಥರಾಗಿದ್ದಾರೆ.

ಎಂಟನೆಯ ಪೀಠಾಧಿಪತಿಗಳು

ಸೊರಟೂರ ಅಜ್ಜನವರು (ಕ್ರಿ. ಶ. ೧೮೮೮–೧೯೨೬)

ಪೂಜ್ಯ ಬಳ್ಳೊಳ್ಳಿ ಶ್ರೀಗಳಿಂದ (ಅನ್ನದಾನ ಮಹಾಸ್ವಾಮಿಗಳು) ಅಧಿಕಾರವನ್ನು ಪಡೆದ ಎಂಟನೆಯ ಜಗದ್ಗುರು ಅನ್ನದಾನ ಮಹಾಸ್ವಾಮಿಗಳನ್ನು ವಾಡಿಕೆಯಲ್ಲಿ ಸೊರಟೂರ ಶ್ರೀಗಳೆಂದೇ ಗುರುತಿಸಲಾಗುತ್ತದೆ. ಇವರು ಶ್ರೀ ಮಠದ ಪೀಠವನ್ನು ಅಲಂಕರಿಸಿದಾಗ ಅದು ಅವರ ಪಾಲಿಗೆ ಸುಖದ ಸುಪ್ಪತ್ತಿಗೆಯಾಗಿರಲಿಲ್ಲ. ಮುಳ್ಳಿನ ಹಾಸಿಗೆಯಾಗಿತ್ತು. ಪೂಜ್ಯ ಬಳ್ಳೊಳ್ಳಿ ಶ್ರೀಗಳ ಕಾಲದಲ್ಲಿ ಕೋರ್ಟ ಮೆಟ್ಟಿಲನ್ನು ಏರಿದ್ದ ಮಠದ ನ್ಯಾಯ ಈಗ ಮತ್ತಷ್ಟು ಉಲ್ಬಣಗೊಂಡಿತ್ತು. ಸದ್ಯದ ಅನ್ನದಾನೀಶ್ವರ ಹೊಸ ಮಠವೂ ತಮ್ಮದೇ ಎಂದು ತೋಂಟದ ಶ್ರೀಗಳು ವಾದಿಸತೊಡಗಿದರು. ಇಂತಹ ಸ್ಥಿತಿಯಲ್ಲೂ ಪೂಜ್ಯರು ಎದೆಗುಂದದೆ ತಮ್ಮ ತಪಃ ಶಕ್ತಿಯಿಂದ ಧೈರ್ಯವಾಗಿ ಬಂದ ಸಂಕಟಗಳನ್ನೆಲ್ಲ ಎದುರಿಸಿದರು.

ಇವರು ಕಿರಿಯ ವಯಸ್ಸಿನಲ್ಲಿಯೇ ತಪೋ ಬಲವನ್ನು ಬೆಳೆಸಿಕೊಂಡಿದ್ದರು. ಆಗಾಗ ಲಿಂ. ಹಾನಗಲ್ಲ ಕುಮಾರ ಶಿವಯೋಗಿಗಳಂಥವರನ್ನು ಕರೆಯಿಸಿಕೊಂಡು ಧಾರ್ಮಿಕ ಸಭೆಗಳನ್ನು ಏರ್ಪಡಿಸಿ ಧರ್ಮ ಜಾಗೃತಿ ಕಾರ್ಯವನ್ನು ನಡೆಸಿದರು. ಉಗ್ರ ತಪಸ್ವಿಗಳಾದ ಇವರು ಅನೇಕ ಪವಾಡಗಳನ್ನು ತಮ್ಮ ಜೀವಿತಾವಧಿಯಲ್ಲಿ ಮಾಡಿದ್ದಾರೆ. ತುಂಬಿ ಸೂಸಿ ಹರಿಯುವ ತುಂಗಭದ್ರೆಯನ್ನು ತಮ್ಮ ಕುದುರೆಯ ಮೇಲೆ ಕುಳಿತು ದಡದಲ್ಲಿ ನಿಂತ ಜನ ದಿಗ್ಭ್ರಾಂತರಾಗಿ ನೋಡು ನೋಡುತ್ತಿದ್ದಂತೆಯೇ ಈಚೆಯ ದಡವನ್ನು ಸೇರಿ, ಸುರಕ್ಷಿತವಾಗಿ ಬಂದದ್ದನ್ನು ಇಂದಿಗೂ ಇಲ್ಲಿಯ ಜನ ಮರೆತಿಲ್ಲ. ಇವರೂ ಸಹ ಸರ್ವ ಧರ್ಮ ಸಹಿಷ್ಣುಗಳಾಗಿದ್ದರು.

ಕ್ರಿ. ಶ. ೧೯೧೬ರಲ್ಲಿ ಮುಂಡರಗಿಗೆ ಬ್ರಹ್ಮಣ ಸಮಾಜದ ಗುರುಗಳು ಬಂದಾಗ ಒಂದೇ ಸವನೆ ಧಾರಾಕಾರವಾಗಿ ಸ್ವಾತಿಯ ಮಳೆ ಸುರಿಯತೊಡಗಿದಾಗ ಅವರ ಆರಾಧನೆಗೆ ಕಟ್ಟಿಗೆ ದೊರೆಯದ ಸಂದರ್ಭದಲ್ಲಿ, ಪೂಜ್ಯರು ತಮ್ಮ ಮಠದ ಇಮಾರತ್ತನ್ನೇ ಬಿಚ್ಚಿಸಿ ಬ್ರಹ್ಮಣ ಸಮಾಜದವರಿಗೆ ಕಟ್ಟಿಗೆಯನ್ನು ಒದಗಿಸಿದರು. ಅದರಂತೆ, ಇವರು ಬಹಳ ಉದಾರಿಗಳೂ ದಾನಿಗಳೂ ಕೂಡ ಆಗಿದ್ದರು ಮುಂಡರಗಿಯಲ್ಲಿ ವಿದ್ಯಾಭಿವೃದ್ಧಿಗಾಗಿ ಪ್ರಾಥಮಿಕ ಶಾಲೆಗೆ ಪೂಜ್ಯರು ತಮ್ಮ ಮಠದ ಪಕ್ಕದಲ್ಲಿದ್ದ ಒಂದು ಎಕರೆ ಭೂಮಿಯನ್ನು ದಾನ ಮಾಡಿದರು. ಹಾಗೆಯೇ ಸಾರ್ವಜನಿಕರ ಆರೋಗ್ಯ ವರ್ಧನೆಗಾಗಿ ಬೆಲೆ ಬಾಳುವ ಮಠದ ೩ ಎಕರೆ ನಿವೇಶನವನ್ನು ಕೊಟ್ಟುದುದಲ್ಲದೆ, ಜೊತೆಗೆ ಮೂರು ಸಾವಿರ ರೂಪಾಯಿಗಳನ್ನು ಸಹ ಆಶೀರ್ವಾದ ಮಾಡಿದರು. ಜಾರ್ಜ ಬಾದಷಹರು ಭಾರತಕ್ಕೆ ಬಂದಾಗ ಅದರ ಸ್ಮರಣೆಗಾಗಿ ಸಭೆ ಕರೆದು ಪೀಸ್ ಮೆಮೋರಿಯಲ್ ಹಾಲ್ ಕಟ್ಟಿಸಲು ಎರಡು ಸಾವಿರ

ರೂಪಾಯಿಗಳೊಂದಿಗೆ, ಸದ್ಯ ಮುಂಡರಗಿಯ ಟಿ.ಎಂ.ಸಿ. ಇರುವ ಸ್ಥಳವನ್ನು ದಾನ ಮಾಡಿದರು. ಹಾಗೆಯೇ ಪೋಲೀಸ ನಿವೇಶನಕ್ಕೆ ಮಠದ ಬೈಲು ಜಾಗೆಯನ್ನು ದಾನ ನೀಡಿದರು. ಅಲ್ಲದೆ ತಮ್ಮ ಜನ್ಮಸ್ಥಳವಾದ ಸೊರಟೂರಿನ ಕನ್ನಡ ಶಾಲೆಯ ಕಟ್ಟಡಕ್ಕಾಗಿ ಸ್ಥಳ ದಾನ ಮಾಡಿದರು. ಬಡವರ ಮದುವೆಗಳಿಗಾಗಿ ಸದಾ ಅವರ ವರದ ಹಸ್ತ ಸಿದ್ಧವಾಗಿಯೇ ಇರುತ್ತಿತ್ತು. ಡೊಂಬರವನ ಆಟವನ್ನು ನೋಡಿ, ಸಂತೋಷದಿಂದ ತಮ್ಮ ಮೈಮೇಲಿನ ಬೆಲೆಯುಳ್ಳ ಶಾಲನ್ನು ಆಶೀರ್ವದಿಸಿದರು. ಕುಕನೂರಿನಲ್ಲಿ ಭಜಂತ್ರಿಯವರು ಇಂಪಾಗಿ ಸಂಗೀತ ಕೇಳಿಸಿದ್ದರಿಂದ ಸಂತೋಷಗೊಂಡು, ಅವರಿಗೆ ಪ್ರೋತ್ಸಾಹಿಸಲು ಪಾಶ್ಚಾತ್ಯ ಮಾದರಿಯ ಬ್ಯಾಂಡ ಸೆಟ್‌ಗಳನ್ನು ತರಿಸಲು ಆಶೀರ್ವಾದ ಮಾಡಿದರು. ಬಡ ಜಂಗಮ ಮೂರ್ತಿಗಳು ಬಯಸಿದ ತಮ್ಮ ಡಮಣಿ ಗಾಡಿ ಹಾಗೂ ಬೆಳ್ಳಿಯ ಪೂಜಾ ಸಾಮಾನುಗಳನ್ನು ದಾನಗೈದರು. ಹೀಗೆ ಹೆಸರಿಗೆ ತಕ್ಕಂತೆ, ಅನ್ನದಾನದೊಂದಿಗೆ ಮಹಾ ದಾನಿಯಾಗಿ ಮೆರೆದರು. ಅವರಿಗೆ ದುಡ್ಡಿನ ಮೇಲಾಗಲಿ, ಸಂಪತ್ತಿನ ಮೇಲಾಗಲಿ ವ್ಯಾಮೋಹವಿರಲಿಲ್ಲ. ಹೀಗಾಗಿ ಮಠದಲ್ಲಿ ಯಾವ ಸಂಪತ್ತನ್ನು ಅವರು ಸಂಗ್ರಹಿಸಲಿಲ್ಲ. ಹಿಂದಿನವರಂತೆ ಅನ್ನ ದಾಸೋಹವಂತೂ ಸತತವಾಗಿ ಮುಂದುವರದೇ ಇತ್ತು.

ಹೀಗೆ ಲೀಲಾ ವಿನೋದಿಯಾಗಿ ಉದಾರ ಹೃದಯಿಗಳಾಗಿ ಪೂಜ್ಯರು ಅತ್ಯಂತ ಕೀರ್ತಿಶಾಲಿಗಳಾಗಿದ್ದರು. ಇವರ ಮುಪ್ಪಾವಸ್ಥೆಯಲ್ಲಿ ಮಠದ ವ್ಯಾಜ್ಯ ಮತ್ತಷ್ಟು ಉಲ್ಬಣಗೊಂಡಿತು. ಇಂತಹ ಸ್ಥಿತಿಯಲ್ಲಿ ಪೂಜ್ಯರು ಯಾವ ಉತ್ತರಾಧಿಕಾರಿಯನ್ನೂ ನೇಮಿಸದೆಯೇ ದಿನಾಂಕ ೨೬-೧-೧೯೨೬ ರಂದು ಲಿಂಗದೊಳಗಾದರು. ಇವರ ಗದ್ದುಗೆ ಈಗಿನ ಮಠದಲ್ಲಿಯೇ ಇದ್ದು, ಇವರ ಪುಣ್ಯತಿಥಿಯನ್ನು ಯಾತ್ರಾ ಮಹೋತ್ಸವವಾಗಿ ಇಂದಿಗೂ ಆಚರಿಸಲಾಗುತ್ತದೆ.

ಒಂಬತ್ತನೆಯ ಪೀಠಾಧಿಪತಿಗಳು

ವೆಂಕಟಾಪೂರ ಜಗದ್ಗುರುಗಳು (ಕ್ರಿ. ಶ. ೧೯೨೬-೧೯೬೭)

ಎಂಟನೆಯ ಪೀಠಾಧಿಪತಿಗಳಾದ ಪೂಜ್ಯ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು (ಸೊರಟೂರ ಶ್ರೀಗಳು) ತಮ್ಮ ಉತ್ತರಾಧಿಕಾರಿಗಳನ್ನು ನೇಮಿಸವೇ ಲಿಂಗೈಕ್ಯರಾದರು. ಇದೇ ಸುಸಮಯವೆಂದು ಶ್ರೀ ತೋಂಟದ ಸ್ವಾಮಿಗಳು, ಹೊಸ ಮಠವೂ ತಮ್ಮದೇ ಎಂದು ಹೇಳಿ, ಪೋಲೀಸ ಪಡೆಯೊಂದಿಗೆ ಬಂದು ಮಠಕ್ಕೆ ಬೀಗ ಮುದ್ರೆ ಹಾಕಿಸಿದರು. ಆ ಸಂದರ್ಭದಲ್ಲಿ ಮಠಕ್ಕೆ ಸ್ವಾಮಿಗಳಿಲ್ಲದಿದ್ದರೂ ಭಕ್ತರು ಮಾತ್ರ ಆಧ್ಯಾತ್ಮಿಕ ಸ್ವಾಮಿಯನ್ನು ಮನದಲ್ಲಿರಿಸಿಕೊಂಡು, ಖಾಲಿ ಇದ್ದ ಅನ್ನದಾನೀಶ್ವರನ ಪೀಠಕ್ಕೆ ಯೋಗ್ಯಸ್ವಾಮಿಗಳನ್ನು ಅರಿಸತೊಡಗಿದ್ದರು ಮಠ ವ್ಯಾಜ್ಯದಲ್ಲಿದ್ದುದರಿಂದ ಯಾವ ಶಿವಯೋಗಿಗಳೂ ಈ ಮಠಕ್ಕೆ ಸ್ವಾಮಿಗಳಾಗಿ ಬರಲು ಒಪ್ಪಲಿಲ್ಲ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಶ್ರೀಮಠದ ಕಾರಭಾರಿಯಾಗಿದ್ದ ವೆಂಕಟಾಪೂರದ ವೀರಪ್ಪ ಸಿದ್ದಪ್ಪ ಅಂಗಡಿ ಎನ್ನುವವರು, ತಮ್ಮೂರಿನ ಮರಿದೇವರೊಬ್ಬರು ಬಾಗಿಲಕೋಟೆಯ

ಟೆಂಗಿನಮಠದಲ್ಲಿರುವ ವಿಷಯವನ್ನು ಮುಂಡರಗಿಯ ಪಂಚರಿಗೆ ತಿಳಿಸುತ್ತಾರೆ. ಪಂಚರಿಗೆ ಕಾರ್ಗತ್ತಲಲ್ಲಿ ಕೋಲ್ಮಿಂಚು ಮಿಂಚಿ ದಾರಿ ತೋರಿದಂತಾಯಿತು. ತಕ್ಷಣವೇ ಪಂಚರಲ್ಲಿ ಹಿರಿಯರಾದ ರಂಗಪ್ಪ ಇಲ್ಲೂರ, ಲಕ್ಷ್ಮಣರಾವ ನಾಡಗೌಡ್ರ, ಪುಟ್ಟಪ್ಪ ಶೀರಿ, ಮುದಿಬಸಪ್ಪ ಬಳ್ಳೊಳ್ಳಿ, ಬಸಪ್ಪ ಬಳ್ಳಾರಿ ಮುಂತಾದವರು ಅಂಗಡಿ ವೀರಪ್ಪನವರಿಗೆ ಆ ಮರಿದೇವರನ್ನು ಕರೆತರಲು ಬಾಗಿಲಕೋಟೆಗೆ ಕಳುಹಿಸಿದರು. ಇತ್ತ ಪಂಚರೆಲ್ಲ ಸೇರಿ ಪಟ್ಟಾಭಿಷೇಕದ ಸಿದ್ಧತೆಗೆ ತೊಡಗಿದರು. ಅಂಗಡಿ ವೀರಪ್ಪನವರು ಪಂಚರ ಮಾತಿನಂತೆ ಬಾಗಿಲಕೋಟೆಗೆ ಹೋಗಿ, ಪೂಜ್ಯ ರಾಚೋಟಿ ದೇವರನ್ನು (ನಾಗಭೂಷಣ) ದಿನಾಂಕ ೫-೬-೧೯೨೬ರಂದು ಮುಂಡರಗಿಯ ಶ್ರೀಮಠಕ್ಕೆ ಕರೆದು ತರುತ್ತಾರೆ. ದೃಢಕಾಯದ, ದೃಢನಿಲುವಿನ, ಉತ್ತರಾಧಿಕಾರಿಗಳು ತಮ್ಮ ಮಠಕ್ಕೆ ದೊರೆತದ್ದು ಪಂಚ ಕಮೀಟಿ ಯವರಿಗೆ ಎಲ್ಲಿಲ್ಲದ ಸಂತೋಷವಾಗುತ್ತದೆ. ಅಂತೂ ದಿನಾಂಕ ೬-೬-೧೯೨೬ ರಂದು ಶ್ರೀ ಮ.ನಿ.ಪ್ರ. ಮಲ್ಲನಕೇರಿಯ ಗುರುಲಿಂಗಸ್ವಾಮಿಗಳು ಹಾಗೂ ಶ್ರೀ ಮ.ನಿ.ಪ್ರ. ಜಗದ್ಗುರು ಮರಿಶಾಂತವೀರಮಹಾಸ್ವಾಮಿಗಳು ಗವಿಮಠ ಕೊಪ್ಪಳ ಅವರ ಸಮ್ಮುಖದಲ್ಲಿ ರಾಚೋಟಿದೇವರಿಗೆ ಅಧಿಕಾರ ಹಸ್ತಾಂತರವಾಗುತ್ತದೆ. ಅಂದಿನಿಂದ ಪೂಜ್ಯ ರಾಚೋಟಿ ದೇವರು ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನ ಮಹಾಸ್ವಾಮಿಗಳೆಂದು ನಾಮಕರಣ ಹೊಂದಿದರು.

ನಿರಂಜನ ಪಟ್ಟಾಭಿಷೇಕವೇನೋ ಆಯಿತು. ಮಠಕ್ಕೆ ಸ್ವಾಮಿಗಳು ಸಹ ದೊರೆತರು. ಆದರೆ ಮಠ ಮಾತ್ರ ಬರಿದಾಗಿತ್ತು. ಅಲ್ಲದೆ ತೋಂಟದಾರ್ಯ ಮಹಾಸ್ವಾಮಿ ಗಳಿಂದ ಮಠಕ್ಕೆ ಬೀಗ ಮುದ್ರೆಯೂ ಬಿದ್ದಿತ್ತು. ಇಂಥ ಸಂದರ್ಭದಲ್ಲಿಯೂ ಎದೆಗುಂದದೇ ಪೂಜ್ಯರು ತಮ್ಮ ದೃಢಸಂಕಲ್ಪದಿಂದ ಮಠದ ಕಾರ್ಯವನ್ನು ಮುನ್ನಡೆಸಿ ಕೊಂಡು ಬಂದರು. ಮುಂದೆ ೧೯೩೫ ರಲ್ಲಿ "ಮುಂಡರಗಿಯ ಮಠ ಸ್ವತಂತ್ರವಾದುದು ಅದರ ಮೇಲೆ ಗದಗಿನ ತೋಂಟದಾರ್ಯರ ಯಾವ ಹಕ್ಕೂ ಇಲ್ಲ" ಎಂದು ಕೋರ್ಟಿನಿಂದ ತೀರ್ಮಾನವಾಯಿತು. ಈ ಸಂದರ್ಭದಲ್ಲಿ ಮುಂಡರಗಿಯ ಪಂಚ ಕಮೀಟಿಯವರು ಹಾಗೂ ಸ್ವಾತಂತ್ರ್ಯಯೋಧ ಹಳ್ಳಿಕೇರಿ ಗುದ್ಲೆಪ್ಪನವರ ಅಣ್ಣಂದಿರಾದ ಮತ್ತು ಶ್ರೀಮಠದ ಮರಿದೇವರೂ ಆಗಿದ್ದ, ಅನ್ನದಾನ ಮರಿದೇವರು (ರಿತ್ತಿಮರಿದೇವರು) ಮಾಡಿದ ಸೇವೆ ಸ್ಮರಣೀಯವಾಗಿದೆ.

ನಿಷ್ಕಲ್ಮಷ ಹೃದಯದ ಶ್ರೀಗಳು ನೇರ ನಡೆ ನುಡಿಯುಳ್ಳವರಾಗಿದ್ದರು, ಉಗ್ರ ತಪಸ್ವಿಗಳೂ ಆಗಿದ್ದರು. ಅವರ ಕಂಚಿನ ಕಂಠದಿಂದ ಬರುವ ಒಂದೊಂದು ಮಾತೂ, ತುಬಾಕಿಯ ಗುಂಡಿನಂತೆ ಸಿಡಿಯುತ್ತಿದ್ದವು. ಮಾತು ಸ್ವಲ್ಪ, ಆದರೆ ಅರ್ಥಗರ್ಭಿತ ವಾಗಿರುತ್ತಿದ್ದವು. ಅವರ ನುಡಿ ಮುತ್ತುಗಳನ್ನು ಆಯ್ದು ಇಂದಿನ ಜಗದ್ಗುರುಗಳು 'ನುಡಿಲಿಂಗ' ಎಂಬ ಕಿರುಹೊತ್ತಿಗೆಯನ್ನು ಶ್ರೀ ಮಹಲಿಂಗ ಯಾಳಗಿ ಎಂಬವರಿಂದ ಬರೆಸಿದ್ದಾರೆ. ಅಲ್ಲದೆ ಪೂಜ್ಯರ ಹೆಸರಿನಲ್ಲಿ ಮಹಾಪುರಾಣವನ್ನೂ ಲಿಂ. ಕರಿವೀರಪ್ಪ

ಅಂಗಡಿ ಎಂಬ ಕವಿಗಳಿಂದ ಬರೆಯಿಸಿದ್ದಾರೆ. ಅಲ್ಲದೆ ತಾವೇ ಸ್ವತಃ "ಮೃಡಗಿರಿಯ ಮಹಾಪುರುಷ" ಎಂಬ ಹೆಸರಿನಲ್ಲಿ ಪೂಜ್ಯರ ಜೀವನ ಸಾಧನೆಯನ್ನು ಕುರಿತು ಒಂದು ಕಿರುಹೊತ್ತಿಗೆಯನ್ನು ರಚಿಸಿ ಕೃತಾರ್ಥರಾಗಿದ್ದಾರೆ.

ಇವರು ವಾಕ್ ಸಿದ್ಧಿಯನ್ನು ಪಡೆದವರಾಗಿದ್ದರು. ಅವರಾಡಿದ ಮಾತು ಎಂದೂ ಹುಸಿಯಾಗುತ್ತಿರಲಿಲ್ಲ. ಈ ಬಗ್ಗೆ ಜನಮನದಲ್ಲಿ ಇಂದಿಗೂ ಅವರು ಮಾಡಿದ ಪವಾಡಗಳು ಹಸಿಯಾಗಿವೆ. ಅವರಿಂದ ಜೀವದಾನ ಪಡೆದ, ರೋಗಗಳನ್ನು ನಿವಾರಿಸಿಕೊಂಡ, ಸಂಪತ್ ಅಭಿವೃದ್ಧಿಯನ್ನು ಹೊಂದಿದ ಹಾಗೂ ಶಾಪಗ್ರಸ್ತರಾದ, ಅನೇಕ ಜನ ಇಂದಿಗೂ ನಮ್ಮ ಕಣ್ಣೆದುರಿನಲ್ಲಿ ಜೀವಂತವಾಗಿದ್ದಾರೆ.

ಪೂಜ್ಯ ಮಹಾಸ್ವಾಮಿಗಳವರು, ಯೋಗಾಸನಗಳ ಅಭ್ಯಾಸದಿಂದ ಸದೃಢವಾದ ವಜ್ರದೇಹಿಯಾಗಿದ್ದರು. ದಿನಾಲೂ ಬೆಳಗಿನ ಜಾವ ೪-೬ ಮೈಲು ವಾಯು ಸೇವನೆಗಾಗಿ ಹೋಗುತ್ತಿದ್ದರು. ಅವರು ನಡೆಯ ತೊಡಗಿದರೆ, ಅವರ ಹಿಂದೆ ಇದ್ದ ಶಿಷ್ಯರು, ಓಡಬೇಕಾಗುತ್ತಿತ್ತು. ಕುದುರೆ ಏರುವುದು ಅವರ ಹವ್ಯಾಸವಾಗಿತ್ತು. ಮಕ್ಕಳನ್ನು ಮತ್ತು ಭಕ್ತರನ್ನು ಕಂಡರೆ, ಅವರಿಗೆ ಅಪರಮಿತ ಪ್ರೀತಿ, ಅವರು ಮಕ್ಕಳೊಡನೆ ಮಕ್ಕಳಾಗುತ್ತಿದ್ದರು. ಅನ್ನದಾನ ಮಾಡುವಲ್ಲಿ ಅವರು ತೋರುತ್ತಿದ್ದ ಕಳಕಳಿ, ಮೆಚ್ಚುವಂತಿತ್ತು. ಎಷ್ಟೋ ಸಾರೆ ತಾವೇ ನಿಂತು, ತಮ್ಮ ಕೈಯಿಂದಲೇ ಪ್ರಸಾದ ನೀಡಿ ಒತ್ತಾಯದಿಂದ ಭಕ್ತರನ್ನು ಊಟ ಮಾಡಿಸುತ್ತಿದ್ದರು. ಅವರದು ಮಾತೃ ಹೃದಯವಾಗಿತ್ತು.

ಅವರು ವಿದ್ಯಾ ಪ್ರೇಮಿಗಳಾಗಿದ್ದರು. ಇಲ್ಲಿಯ ಜಗದ್ಗುರು ಅನ್ನದಾನೀಶ್ವರ ಪ್ರೌಢಶಾಲೆಗೆ ಮಠದ ಆಸ್ತಿಯನ್ನೇ ಮಾರಾಟ ಮಾಡಿ ೩೩೦೦೦ ರೂಪಾಯಿಗಳನ್ನು ದಾನಮಾಡಿ ತಮ್ಮ ವಿದ್ಯಾ ಪ್ರೇಮವನ್ನು ವ್ಯಕ್ತಪಡಿಸಿ ವಿದ್ಯಾಭಿವೃದ್ಧಿಗೆ ಸಹಾಯ ಮಾಡಿದರು. ಅನ್ನದಾನೀಶ್ವರ ಉಚಿತ ಪ್ರಸಾದ ನಿಲಯಕ್ಕೆ ಹದಿನೈದು ಸಾವಿರ ರೂಪಾಯಿಗಳನ್ನು ದಾನಮಾಡಿ, ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗೆ ಅನುಕೂಲಮಾಡಿದರು. ಅಲ್ಲದೆ ಹೊಳೆಆಲೂರಿನ ಕಲ್ಮೇಶ್ವರ ಪ್ರೌಢಶಾಲೆಗೆ ಹುನುಗುಂದ ತಾಲೂಕಿನ ಹೇರೂರ ಗ್ರಾಮದ ೧೧ ಎಕರೆ ಜಮೀನನ್ನು ದಾನ ಮಾಡಿದರು. ಲಕ್ಕುಂಡಿ ಗ್ರಾಮದ ಸಿ.ಎಂ.ಸಿ. ದವಾಖಾನೆ ಹಾಗೂ ಪಂಚಾಯತ್ ಆಫೀಸುಗಳಿಗಾಗಿ ಊರ ಮಧ್ಯದ ಬೆಲೆಯುಳ್ಳ ಸ್ಥಳದಾನ ಮಾಡಿದರು. ಹುಬ್ಬಳ್ಳಿಯ ಭೂಮರಡ್ಡಿ ಇಂಜನಿಯರಿಂಗ ಕಾಲೇಜಿಗೆ ಒಂದು ಸಾವಿರ, ಹೊಸರಿತ್ತಿ ಗಾಂಧೀ ಆಶ್ರಮಕ್ಕೆ ಎಂಟುನೂರು, ವಿಜಾಪುರದ ಕುರುಡರ ಸಂಘಕ್ಕೆ ಐದುನೂರು, ಮುಂಡರಗಿಯಲ್ಲಿ ಪ್ರಕಟವಾಗುತ್ತಿದ್ದ ಮೃಡವಾಣಿ ಪತ್ರಿಕೆಗೆ ಒಂದು ಸಾವಿರ ಹೀಗೆ ಅದೆಷ್ಟೋ ಸಂಘ ಸಂಸ್ಥೆಗಳಿಗೆ ಅಪಾರ ದಾನ ಮಾಡಿದರು. ರಜಾಕಾರರ ಹಾವಳಿಯಲ್ಲಿ ನಿರಾಶ್ರಿತರಿಗೆ ಭೂಗತರಾದ ರಾಷ್ಟ್ರ ಭಕ್ತರಿಗೆ ಪ್ರಸಾದ ವಿತರಣೆ ಮಾಡಿದ್ದಲ್ಲದೆ, ರಕ್ಷಣೆಯನ್ನೂ ನೀಡಿ, ತಮ್ಮ ರಾಷ್ಟ್ರ ಪ್ರೇಮವನ್ನು ಪ್ರದರ್ಶಿಸಿದರು.

ಒಕ್ಕಲುತನಕ್ಕೆ ಅವರು ಹೆಚ್ಚು ಆದ್ಯತೆ ಕೊಟ್ಟಿದ್ದರು. ದನ ಕರುಗಳನ್ನು ಮಕ್ಕಳೋಪಾದಿಯಲ್ಲಿ ಪ್ರೀತಿಸುತ್ತಿದ್ದರು. ಮಠದ ಪಶು ಸಂಪತ್ತನ್ನು ಕೈಯಿಂದ ಮೇಯಿಸಿ ಸಂತೋಷಪಡುತ್ತಿದ್ದರು. ಹೀಗೆ ಅನೇಕ ಪವಾಡಗಳನ್ನು ಮೆರೆದು, ಸಂಘ ಸಂಸ್ಥೆಗಳನ್ನು ಭಕ್ತರನ್ನು ಉದ್ಧರಿಸುತ್ತ ಯಾವ ವ್ಯಾಧಿ, ಉಪದ್ರವಗಳಿಗೆ ಒಳಗಾಗದೇ ಲಿಂಗೈಕ್ಯದ ಮುನ್ಸೂಚನೆ ನೀಡುತ್ತ ಮಾತನಾಡುತ್ತಲೇ ದಿನಾಂಕ ೨೪-೪-೧೯೬೭ ರಂದು ಲಿಂಗ ದೊಳಗಾದರು.

ದಶವು ಪೀಠಾಧಿಪತಿಗಳು

ಶ್ರೀ ಮ.ನಿ.ಪ್ರ.ಜ. ಅನ್ನದಾನೀಶ್ವರ ಮಹಾಸ್ವಾಮಿಗಳವರು (ಕ್ರಿ.ಶ. ೧೯೬೯)

ಪೂಜ್ಯ ವೆಂಕಟಾಪುರದ ಶ್ರೀಗಳವರು ಕ್ರಿ. ಶ. ೧೯೬೨ ರಲ್ಲಿಯೇ ತಮ್ಮ ಉತ್ತರಾಧಿ ಕಾರಿಯನ್ನು ಆಯ್ಕೆ ಮಾಡಿದ್ದರು. ಆದರೆ ಅಧಿಕಾರ ಅನುಗ್ರಹವನ್ನು ಮಾತ್ರ ಮಾಡಿರಲಿಲ್ಲ. ಅಷ್ಟರಲ್ಲಿಯೇ ಪೂಜ್ಯ ವೆಂಕಟಾಪುರದ ಶ್ರೀಗಳು ಲಿಂಗೈಕ್ಯರಾದುದರಿಂದ ಅಧಿಕಾರ ಅನುಗ್ರಹ ಕಾರ್ಯ ಹಾಗೆಯೇ ನಿಂತಿತ್ತು. ಮುಂದೆ ದಿನಾಂಕ ೩೧-೧-೧೯೬೯ ನೆಯ ಶುಕ್ರವಾರ "ನಭೂತೋನಭವಿಷ್ಯತಿ" ಎನ್ನುವಂತೆ, ಮುಂಡರಗಿ ತಾಲೂಕಿನ ಎಲ್ಲ ಸದ್ಭಕ್ತ ಸಂದಣಿ ಸೇರಿ ಪಟ್ಟಾಭಿಷೇಕ ಮಹೋತ್ಸವನ್ನು ಬಹು ವಿಜೃಂಭಣೆಯಿಂದ ಆಚರಿಸಿದರು. ಈ ಸಂದರ್ಭದಲ್ಲಿ ಮಠದ ಸದ್ಭಕ್ತರಾದ ಕೊಪ್ಪಳದ ಶ್ರೀ ಅಗಡಿ ಸಂಗಣ್ಣನವರು, ಶ್ರೀ ಕುಬೇರಪ್ಪನವರು ಕಡಗದ, ಸವದತ್ತಿಯ ಶ್ರೀ ಶಿವಯೋಗೆಪ್ಪ ನವರು ತುಪ್ಪದ ಮೊದಲಾದವರು ಸಲ್ಲಿಸಿದ ಸೇವೆ ಸ್ಮರಣೀಯವಾಗಿದೆ.

ಪರಮ ಪೂಜ್ಯ ಶ್ರೀ ಮ.ನಿ.ಪ್ರ. ಚನ್ನವೀರ ಮಹಾಸ್ವಾಮಿಗಳು ಲಿಂಗನಾಯಕನಹಳ್ಳಿ ಅವರಿಂದ ಅಧಿಕಾರ ಅನುಗ್ರಹಿಸಲ್ಪಟ್ಟ ಪೂಜ್ಯ ಶ್ರೀ ಚಂದ್ರಶೇಖರ ದೇಶಿಕರು ಮುಂಡರಗಿಯ ಸಂಸ್ಥಾನಮಠದ ಜಗದ್ಗುರು ಪೀಠವನ್ನೇರಿ ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳಾದರು. ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳ ಗರಡಿಯಲ್ಲಿ ತಯ್ಯಾರಾದ ಶ್ರೀ ಪೂಜ್ಯ ಸದಾಶಿವ ಮಹಾಸ್ವಾಮಿಗಳವರ ಅಂತಃಕರಣದ ಶಿಶುವಾದ ಪೂಜ್ಯ ಶ್ರೀ ಚಂದ್ರಶೇಖರದೇವರು. ಮಠದ ಸುಧಾರಣೆ ಹಾಗೂ ಸಮಾಜೋದ್ಧಾರದ ಹೆಬ್ಬಯಕೆಯನ್ನು ಹೊತ್ತುಕೊಂಡೇ ಮುಂಡರಗಿ ಮಠಕ್ಕೆ ದಯಮಾಡಿಸಿದ್ದರು. ಮಠಕ್ಕೆ ಮರಿಗಳಾಗಿದ್ದರೂ ಜ್ಞಾನ ಸಂ ಏದನೆಯ ದಾಹಮಾತ್ರ ಕಡಮೆಯಾಗಿರಲಿಲ್ಲ. ಅಂತೆಯೇ ಗುರುಗಳ ಆಶೀರ್ವಾದ ಪಡೆದು ಕಾಶಿಗೆ ಹೋಗಿ ಸಂಸ್ಕೃತ ಹಾಗೂ ಹಿಂದಿಯಲ್ಲಿ ಅಪಾರವಾದ ಜ್ಞಾನವನ್ನು ಸಂಪಾದಿಸಿಕೊಂಡು ಮಠಕ್ಕೆ ಮರಳಿದರು. ೧೯೬೭ ರಲ್ಲಿ ತಮ್ಮ ಗುರುಗಳನ್ನು ಕಳೆದುಕೊಂಡು ಅವರು ತಬ್ಬಲಿ ಗಳಾದರು. ಆದರೂ ಧೈರ್ಯಗುಂದದೆ, ಗುರುಗಳಲ್ಲಿ ಅಚಲ ನಂಬಿಕೆಯಿಟ್ಟು ಮಠದ ಮುನ್ನಡೆಗೆ ಕಾರ್ಯತತ್ಪರರಾದರು.

ದಶಮ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ಪಟ್ಟವನ್ನು ಅಲಂಕರಿಸಿದ ಕೂಡಲೇ ತಮ್ಮ ಗುರುಗಳಂತೆಯೇ ಮೊದಲು ಒಕ್ಕಲುತನಕ್ಕೆ ಆದ್ಯತೆ ಕೊಟ್ಟರು. ಮುಂಡರಗಿ ಹಾಗೂ ಹಿರೇವಡ್ಡಟ್ಟಿಯಲ್ಲಿದ್ದ ಜಮೀನುಗಳ ದುರಸ್ತಿ ಕಾರ್ಯ ಕೈಕೊಂಡು ವೈಜ್ಞಾನಿಕ ಮಾದರಿಯಲ್ಲಿ ಬೇಸಾಯವನ್ನು ಪ್ರಾರಂಭಿಸಿದರು. ಇವರು ಪ್ರಾರಂಭಿಸಿದ ಬೇಸಾಯ ಪದ್ಧತಿ ಈ ಭಾಗದ ರೈತರಿಗೆ ಆದರ್ಶ ಪ್ರಾಯವಾಯಿತು. ನಾಗರಹಳ್ಳಿ ಹಾಗೂ ಹಿರೇವಡ್ಡಟ್ಟಿಯಲ್ಲಿಯ ಜಮೀನುಗಳಲ್ಲಿ ನೀರಾವರಿಯೂ ಪ್ರಾರಂಭವಾಯಿತು. ಹೀಗೆ ಮಠದ ಭೂಮಿಗಳನ್ನು ಸಾಗುವಳಿಗೊಳಿಸಿ ರೈತರಿಗೆ ಮಾದರಿಯಾದರು.

ಪೂಜ್ಯರು ಪಟ್ಟಾಭಿಷಿಕ್ತರಾದಾಗ, ಸಂಸ್ಥೆಯಿಂದ ಕೇವಲ ಒಂದು ಹೈಸ್ಕೂಲ ಮಾತ್ರ ನಡೆಯುತಿತ್ತು. ಪೂಜ್ಯರು ಪಟ್ಟಕ್ಕೆ ಬಂದ ವರ್ಷವೇ ಮುಂಡರಗಿಯಲ್ಲಿ ಬಾಲಕಿಯರಿಗಾಗಿಯೇ ಒಂದು ಪ್ರೌಢಶಾಲೆಯನ್ನು ತೆರೆದು ಈ ಭಾಗದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ವ್ಯಾಪಕತೆಯನ್ನು ಒದಗಿಸಿದರು. ಮರುವರ್ಷವೇ ಇಲ್ಲಿಯ ಜ. ಅ. ಪ್ರೌಢಶಾಲೆಯನ್ನು ಉನ್ನತ ದರ್ಜೆಗೆ ಏರಿಸಿ ಅಲ್ಲಿ ೧೧ ಹಾಗೂ ೧೨ನೇ ಈಯತ್ತೆಯ ವರ್ಗಗಳು ನಡೆಯುವಂತೆ ಮಾಡಿದರು. ಮುಂದೆ ಇದೇ ಜೂನಿಯರ ಕಾಲೇಜ ಆಗಿ ೧೯೭೨ರಲ್ಲಿ ಪರಿವರ್ತನೆಗೊಂಡಿತು. ನಂತರ ಪದವಿ ಕಾಲೇಜು ಮತ್ತು ತಾಂತ್ರಿಕ ಕಾಲೇಜು ಅಲ್ಲದೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಸುಮಾರು ೯ ಪ್ರೌಢ ಶಾಲೆಗಳನ್ನು ತೆರೆದು ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣಕ್ಕೆ ಕಾರಣರಾದರು. ಜೊತೆಗೆ ಕೊಪ್ಪಳ ಮುಂಡರಗಿ ಯಲಬುರ್ಗಾ ಬಿಜಾಪೂರ ತಾಲೂಕುಗಳಲ್ಲಿ ಸುಮಾರು ೮ ಹಾಸ್ಟೇಲಗಳನ್ನು ತೆರೆದು ಬಡ ವಿದ್ಯಾರ್ಥಿಗಳಿಗೆ ನೆರವಾದರು.

ಪರಮಪೂಜ್ಯರು ತ್ರಿಭಾಷಾಪಂಡಿತರು, ಅಲ್ಲದೆ ಅವರು ಶ್ರೇಷ್ಠಸಾಹಿತಿಗಳು. ಈಗಾಗಲೇ ಅವರಿಂದ ೩೦ಕ್ಕೂ ಹೆಚ್ಚು ಅಮೂಲ್ಯ ಗ್ರಂಥಗಳು ಹೊರಬಂದು ನಾಡಿನ ಸಾಹಿತಿಗಳನ್ನು ಪಂಡಿತರನ್ನು ಮೆಚ್ಚಿಸಿವೆ. ಜೊತೆಗೆ 'ಶ್ರೀ ಅನ್ನದಾನೀಶ್ವರ ಗ್ರಂಥಮಾಲೆ' ಎಂಬ ಪ್ರಕಟನೆಯನ್ನು ಪ್ರಾರಂಭಿಸಿ ಆ ಮೂಲಕ ನಾಡಿನ ಶ್ರೇಷ್ಠ ಸಾಹಿತಿಗಳ ಅತ್ಯುತ್ತಮ ಕೃತಿಗಳನ್ನು ಪ್ರಕಟಿಸಿ ಪ್ರಚಾರ ಪಡಿಸಿದ್ದಾರೆ. ಸದರ ಗ್ರಂಥಮಾಲೆಯಿಂದ ಈಗಾಗಲೇ ೧೦೦ ಗ್ರಂಥಗಳು ಹೊರ ಬಂದಿರುವುದು ಹೆಮ್ಮೆಯ ವಿಷಯವಾಗಿದೆ. ಇದರ ಜೊತೆಗೆ ಪ್ರತಿವರ್ಷವೂ ಒಬ್ಬೊಬ್ಬ ಶರಣರ ಬಗ್ಗೆ ವಿಚಾರ ಸಂಕಿರಣಗಳನ್ನೂ ಏರ್ಪಡಿಸಿ ನಂತರ ಪಂಡಿತರು ಮಂಡಿಸಿದ ಉಪನ್ಯಾಸಗಳನ್ನು ಸಂಪಾದಿಸಿ ಬೃಹತ್ ಗ್ರಂಥಗಳನ್ನು ಹೊರ ತರುವ ಕಾರ್ಯವೂ ಈಗ ಐದುವರ್ಷಗಳಿಂದ ನಡೆದು ಬಂದಿದೆ.

ಇವುಗಳ ಜೊತೆಗೆ ಧಾರ್ಮಿಕ ಸಾಮಾಜಿಕ ಕಾರ್ಯಗಳಾದ, ಸಾಮೂಹಿಕ ಮದುವೆ, ಶಾಲಾಕಾಲೇಜಿನ ಕಟ್ಟಡಗಳು, ಹಳೆಯ ಶಾಖಾಮಠಗಳ ಜೀರ್ಣೋದ್ಧಾರ, ಕಲ್ಯಾಣ ಮಂಟಪಗಳು ದ್ವಾರಬಾಗಿಲು, ಶಿವಾನುಭವ ಗೋಷ್ಠಿಗಳು ಪುರಾಣ ಪ್ರವಚನಗಳು

ಆರೋಗ್ಯ ಶಿಬಿರಗಳು ದಾಸೋಹ, ಉಚಿತ ವೈದ್ಯಕೀಯ ಸೇವೆಗಳ ಮಧ್ಯದಲ್ಲೂ ತ್ರಿಕಾಲ ಲಿಂಗಾರ್ಚನೆ ನಡೆಯುತ್ತಿದೆ. ಭಕ್ತರ ಉದ್ಧಾರಕ್ಕಾಗಿ ಎಡಬಿಡದ ಪ್ರಯಾಣ ಹೀಗೆ ಅವರ ಕಾರ್ಯಕ್ಷೇತ್ರ ಬಹುವಿಶಾಲವಾದದ್ದು, ಹಗಲಿರುಳೆನ್ನದೇ ಬೇಸರವರಿಯದೇ ನಿದ್ರಾಹಾರಗಳನ್ನು ಲಕ್ಷಿಸದೇ ಅವಿರತವಾಗಿ ಅವರ ದುಡಿಮೆ ಸದಾಕಾಲ ಸಾಗಿಯೇ ಇದೆ. ಈ ಇಪ್ಪತ್ತೈದು ವರ್ಷಗಳಲ್ಲಿ ಅವರು ಮಾಡಿರುವ ಘನವಾದ ಕಾರ್ಯಗಳನ್ನು ಕಂಡರೆ ಎಂಥವನಿಗೂ ಆಚ್ಚರಿಯಾಗುತ್ತದೆ. ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ನೂರಾರು ವರ್ಷಗಳ ಕಾಲ ಶ್ರಮಿಸಿದರೂ ಸಾಧಿಸಲಾರದಂಥ ಸಾಧನೆ ಪೂಜ್ಯರದಾಗಿದೆಯುಂದರೆ ಆ ಮಾತು ಅತಿಶಯೋಕ್ತಿಯಲ್ಲ. ಅವರ ಕಾರ್ಯ ಬಾಹುಳ್ಯ, ಮಾಡಿದ ಕೆಲಸಗಳನ್ನು ಕಂಡರೆ ಮೇಲಿನ ಮಾತಿಗೆ ನಿದರ್ಶನವಾದೀತು.

ಇಂದು ಪೂಜ್ಯರು ಮುಂಡರಗಿ ಮಠಕ್ಕೆ ಪೀಠಾಧ್ಯಕ್ಷರಾಗಿ ಇಪ್ಪತ್ತೈದು ಸಂವತ್ಸರಗಳನ್ನು ಕಂಡಿದ್ದಾರೆ. ಈ ಇಪ್ಪತ್ತೈದು ವರ್ಷಗಳ ಅವರ ಸಾಧನೆಯನ್ನು ಕಂಡ ಭಕ್ತಜನ ಅವರ ಪಟ್ಟಾಭಿಷೇಕದ ನೆನಹಿನಲ್ಲಿ ರಜತೋತ್ಸವವನ್ನು ಆಚರಿಸಲು ಸಿದ್ಧರಾಗಿ, ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಅವುಗಳಲ್ಲಿ ಅವರನ್ನು ಕುರಿತು ಹೊರ ಬರಲಿರುವ ಬೃಹತ್ ಅಭಿನಂದನಾಗ್ರಂಥವೂ ಒಂದು. ಸದರಗ್ರಂಥದಲ್ಲಿ ಪ್ರಕಟನೆಗಾಗಿ ಈ ಲೇಖನವನ್ನು ಬರೆಯುವ ಸುಯೋಗವು ನನಗೆ ದೊರಕಿದ್ದು ನನ್ನ ಪೂರ್ವಜನ್ಮದ ಸುಕೃತದ ಫಲವೆಂದು ಭಾವಿಸಿ ಈ ಲೇಖನಕ್ಕೆ ಮಂಗಳಗೈಯುತ್ತೇನೆ.

ಶ್ರೀ ಜಗದ್ಗುರು ಅನ್ನದಾನೀಶ್ವರರ ಅಂತರಂಗ

— **ಶ್ರೀ ಮ. ನಿ. ಪ್ರ. ನಿರುಪಾಧಿಸ್ವಾಮಿಗಳು,** ಮರೆಗುದ್ದಿ

ಕರ್ನಾಟಕದಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಪ್ರಸಿದ್ಧರಾದ ಪೂಜ್ಯರಲ್ಲಿ ಮುಂಡರಗಿ ಶ್ರೀ ಮ. ನಿ. ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ಸಾಧಿಸಿದ ಮಹತ್ಸಾಧನೆ ಪ್ರತ್ಯಕ್ಷ, ವಚನಸಾಹಿತ್ಯದಲ್ಲಿ ಅವರದು ವಿಶಿಷ್ಟಸ್ಥಾನ. ವೈಚಾರಿಕ ಅಧ್ಯಯನದಲ್ಲಿಯೂ ಒಂದು ಹೆಜ್ಜೆ ಮುಂದೆ ಪ್ರಾಸಂಗಿಕ ಸಮಸ್ಯೆಗಳಿಗೆ ಸ್ಪಂದಿಸುವ ಪ್ರಕ್ರಿಯತೆ, ಬಿಡದ ಪ್ರಸಾದತೆಗಳು, ಅನುಭವದ ಅಂತರಾಳದ ಅಂದ ಪ್ರತಿ ಪಂಕ್ತಿಯಲ್ಲಿಯೂ ಎದ್ದು ಕಾಣಬಹುದು.

ಅವರ ಹಲವಾರು ಲೇಖನಗಳಲ್ಲಿ–'ಶಿವಶರಣರ ದೃಷ್ಟಿಯಲ್ಲಿ ವೀರಶೈವರ ಪ್ರಾಚೀನತೆ' ಎಂಬ ಲೇಖನ ದಿ. ೨೬-೬-೧೯೫೪ ರಂದು ಸಂಯುಕ್ತ ಕರ್ನಾಟಕದಲ್ಲಿ ಪ್ರಕಟಗೊಂಡು ಹಲವರಿಗೆ ಹರ್ಷತಂದರೆ ಕೆಲವರಿಗೆ ಕಹಿ ಕುಡಿದಂತಾಗಿತ್ತು. ಕೆಲರಿಂದ ದುರಾಗ್ರಹದ ಸಾಲುಗಳು ಮೂಡಿಬಂದರೂ ಅದಕ್ಕೆ ತಕ್ಕ ಪ್ರಮಾಣವಿಡಿದು ಬರೆದ ವಿಶೇಷ ಲೇಖನ ೧೯೫೪ರ ಅಕ್ಟೋಬರ 'ಲಿಂಗನುಡಿ' ಸಂಚಿಕೆಯಲ್ಲಿ 'ಜಗಮನಿಂದೆ ಬೇಡ', ಎಂಬ ಲೇಖನ ಮೆಚ್ಚಿಕೊಳ್ಳುವಂತಿದ್ದಿತು. ಜುಲೈ ೧೯೫೪ರ 'ಪರಂಜ್ಯೋತಿ'ಯಲ್ಲಿಯ "ಬಸವಣ್ಣನವರು ಇಷ್ಟಲಿಂಗ ಜನಕರೆ?" ಎಂಬ ಲೇಖನ ಅಧ್ಯಯನಪೂರ್ಣ ಹಾಗೂ ವಿಚಾರಪೂರ್ಣ.

ಶ್ರೀ ಸನ್ನಿಧಿಯವರ ವೈಚಾರಿಕ ಲೇಖನಗಳನ್ನೊಳಗೊಂಡ ಆರೈದು ೧, ೨, ೩ ರಲ್ಲಿ ಸಾಹಿತ್ಯಪ್ರಿಯರು ಮತ್ತು ಧರ್ಮಜಿಜ್ಞಾಸುಗಳು ಯಥಾರ್ಥಲಾಭ ಪಡೆಯಬಹುದು. ಹಿಂದೆ ಚನ್ನಬಸವಣ್ಣನವರ ಬಗೆಗೆ ಅನವಶ್ಯಕ ಸಮಸ್ಯೆಗಳಿಗೆ ಸಮರ್ಥರೀತಿಯಲ್ಲಿ ಪ್ರತಿಪಾದಿಸಿದ ಶ್ರೇಯಸ್ಸು ಶ್ರೀಗಳದು.

ವೀರಶೈವ ಸಿದ್ಧಾಂತವನ್ನು ತಾತ್ವಿಕವಾಗಿ ಪ್ರತಿಪಾದನ ಮಾಡುವ ಕ್ರಮ ಡಾ. ಜ. ಚ. ನಿ.ಯವರ ಬಳಿಕ ಶ್ರೀ ಸನ್ನಿಧಿಯವರ ಸದ್ವೈಚಾರಿಕತೆಯನ್ನು ಸ್ಮರಿಸದೆ ಇರಲಾರೆ. ಇವರ ಲೇಖನಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗದೆ ಇರವು. ಶ್ರೀ ನಿಜಗುಣ ಶಿವಯೋಗಿಗಳ ಗ್ರಂಥಗಳಿಗೆ ವಿಶೇಷಾರ್ಥ ಬರೆದು ಹುಬ್ಬಳ್ಳಿಯ ಶ್ರೀ ಶ್ರೋ. ಬ್ರ. ನಿ. ಶಿವಪುತ್ರ ಸ್ವಾಮಿಗಳು ಮಹದುಪಕಾರ ಮಾಡಿದರೆ; ಮೈಲಾರ ಬಸವಲಿಂಗರ ಗುರುಕರುಣ ತ್ರಿವಿಧಿಯಲ್ಲಿ 'ವೀರಶೈವ ದಾರ್ಶನಿಕ ಸಿದ್ಧಾಂತ'ವನ್ನು

ತಾತ್ವಿಕವಾಗಿ ಪ್ರತಿಪಾದನ ಮಾಡುವ ಪೂಜ್ಯರ ಕೊಡುಗೆಯನ್ನು ಪ್ರತಿಯೊಬ್ಬ ವೀರಶೈವನು ಅಪ್ಪದೆ, ಒಪ್ಪದೇ ಇರಲಾರ.

ಸನ್ನಿಧಿಯವರ ಸದ್ಬೋಧ ಅರವಿಂದರ ಸಮ, ಸಮಾಜದ ಲೋಪದೋಷಗಳ ಅನುವಿನಿಂದ ಅರಿಸುವ ರೀತಿ ನವನೀತದೊಳಗಿನ ದಾರವ ಸೆಳೆದಂತೆ, ಹಲವಾರು ಪಾಠ ಗಳನ್ನು ಅವರಿಂದ ಕಲಿತಿದ್ದೇನೆ, ನನ್ನ ಬರವಣಿಗೆಗೆ ಅವರ ಮಾರ್ಗದರ್ಶನ ಕ್ಷೀರಕ್ಕೆ ಮಧುರ ಬೆರಸಿದಂತಾಗಿದೆ. ಬೆಡಗು-ಬಿನ್ನಾಣವಿರದ ಅವರ ಸಹಜ ಜೀವನ ಪ್ರತಿಯೊಬ್ಬ ಮಠಾಧಿಪತಿಗೆ ಅನುಕರಣೀಯ. ಶಿವಯೋಗಮಂದಿರ ಧಾರ್ಮಿಕ ವಿದ್ಯಾಸಂಸ್ಥೆಯ ಬಗೆಗೆ ಅವರಲ್ಲಿರುವ ಲಕ್ಷ್ಯ ಅಪ್ರತಿಮ. ಸರಳದೃಷ್ಟಿ, ಸರಳಸ್ವರಸೃಷ್ಟಿ, ವಿರಳಮಾತು, ಕರುಣೆಯು ಕರುಳಿನ ಕರೆ. ಜನ್ಮಶತದಿಂದ ಬಂದ ಅವರ ಸಂಪತ್ತು. ವೀರಶೈವ ಸನಾತನತ್ವದ ಬಗೆಗೆ, ಜಂಗಮದ ಅವಹೇಳನ ಬಂದರೆ ಸರಿಯಾಗಿ ಬುದ್ಧಿ ಹೇಳುವ ನಿರಂಜನ ಜಂಗಮರು.

ಶ್ರೀ ರುದ್ರದ ಬಗೆಗೆ ಟೀಕೆ ಟಿಪ್ಪಣೆಗಳು ಕೇಳಿ ಬಂದಾಗ, ಶರಣರ ವಚನಗಳ ಪ್ರಮಾಣವನ್ನೇ ನಿರೂಪಿಸಿ ಅದರ ಮೇಲೆ 'ಶ್ರೀ ರುದ್ರ ಹಾಗೂ ಇಷ್ಟ ಲಿಂಗಾರ್ಚನೆ' ಎಂಬ ಚಿಕ್ಕ ಲೇಖನ ಬರೆದು ಪುನಃ ಒಂದು ಪುಸ್ತಕವನ್ನೇ ಪ್ರಕಟಿಸಿದರು.

ಶ್ರೀ ಸನ್ನಿಧಿಯವರ ವಿಶೇಷ ಆಕರ್ಷಣವೆಂದರೆ ನಿರಾಡಂಬರ ನಿಯತಿ. ಅವರು ಬಯಸದಿದ್ದರೂ ಅವರ ಬಳಿಗೆ ಸನ್ಮಾನ ಸಮಾರಂಭಗಳು ನಡೆದವು. ಏನೆಲ್ಲವೂ ಕ್ಷಣಿಕ ವೆನ್ನುತ ಮತ್ತೆ ಅದೇ ರಾಜಮಹಾರಾಜರ ವೈಭವ ಬಯಸುವ ಭಾವಿಗಳಂತೆ ಇವರಲ್ಲ. ರಜತಮಹೋತ್ಸವದ ನೆನಹಿನಲ್ಲಿ ಸರಳವಾದ ತಾತ್ವಿಕ ಸಮಾರಂಭಗಳು ನಡೆದುದು ಪ್ರತ್ಯಕ್ಷ. ಅಂತಹ ಹದಿನೆಂಟನೆಯ ರಜತೋತ್ಸವ ಹಾಗೂ ವಿಚಾರ ಸಂಕಿರಣ ಮರೆಗುದ್ದಿಯ ಶ್ರೀಮಠದಲ್ಲಿ ಹಮ್ಮಿಕೊಂಡಿದ್ದು ವಿದಿತ. ಅಳೆಯದ ಅಂತರಾಳ ಅವರದು.

ಕೂಡಲಸಂಗನ ಶರಣರನುಭಾವ ಭವದುಃಖಿಗಳಿಗೆ ವೇದ್ಯವಾಗದು; (ಬ. ವ. ೮೫೯) ಎಂಬಂತೆ ತತ್ವದಲ್ಲಿ ಶ್ರದ್ಧೆಯಿರದವಗೆ ಶೋಭಿಸದು. "ಶರಣ ಜನರ ಸದುಹೃದಯ ದೊಳು ಪರಿಶೋಭಿಸುತ್ತಿಹುದು ನಿನ್ನ ಪಾದ" ನಿಜಗುಣರ ವಾಕ್ಯದಂತೆ ಸನ್ನಿಧಿಯವರ ಹೃದಯದಲ್ಲಿ ಚಿನ್ನಿಧಿಯೇ ಶೋಭಿಸುತ್ತದೆ. "ಹೆಪ್ಪನೆರೆದ ಹಾಲು ಕೆಟ್ಟು ತುಪ್ಪ ಒಪ್ಪಂತೆ ಇಪ್ಪರು ಕೂಡಲಸಂಗಮದೇವಾ ನಿಮ್ಮ ಶರಣರು" (ಬ. ವ. ೮೬೮) ಎಂಬಂತೆ ಸನ್ನಿಧಿ ಯವರ ನಿಲವು "ಕೂಡಲಸಂಗನ ಶರಣರ ಕಾಯವೇ ಕೈಲಾಸ" (ಬ. ವ. ೮೭೨) ಎಂಬಂತೆ ಅವರು ಪಾದವಿಟ್ಟ ನೆಲದಲ್ಲ ಶಿವಾನುಭವ ಚಿಂತನದ ಬಳ್ಳಿ ಚಲ್ಲುವರಿದು ಶರಣರನ್ನು ಹರುಷಗೊಳಿಸಿದೆ. ಅವರ ಜೊತೆ ಸಂಭಾಷಣೆಯಲ್ಲಿ ತೆರಹಿಲ್ಲದ ಸುಖ ತೆರಹಿಲ್ಲದ ಸುವಿಚಾರದ ಸಂಗಮ ಲಭ್ಯ. ಅಂತರಂಗದಲ್ಲಿ ಏನಿದೆಯೋ ಅದನ್ನೇ ನುಡಿಯುವ ನಡೆ, ಇಂಥ ಪರಮ ಜಂಗಮರ ರಜತಮಹೋತ್ಸವದ ಬೃಹತ್ ಕಾರ್ಯಕ್ರಮಗಳು ನಡೆದದ್ದು ಅವರ ನೈಜ ನಿಲುವಿನ ಕುರುಹು ಎನ್ನಲು ಬಾಧೆಯೇನಿದೆ? ಅವರು ಸಾಧಿಸಿದ ಬಗ್ಗೆ

ನಿರೂಪಿಸಿದಷ್ಟೂ ಕಡಿಮೆಯೇ ಸೈ. ಶ್ರೀ ಸನ್ನಿಧಿಗೆ ಹೃತ್ಪೂರ್ವಕ ಅಭಿನಂದನೆ. ಇದೆ ವಚನ ವಂದನ.

ನಮ್ಮೆಲ್ಲರ ದೇಹ ಒಂದಾದರೇನು?
ನಿರಂಜನ ಜಂಗಮನ ನೇಹ ಭವಿಗಿಂತ ಭಿನ್ನ;
ಜೀವಿಗಳ ಹೃದಯ ಬಡಬಡಿಕೆಯು ಬೇಗೆಗೆ
ತಂಪನೆರಚುವ ಜಂಗಮ,
ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಅನ್ನದಾನೀಶ
ನಿನ್ನ ದೃಷ್ಟಿಯಲ್ಲಿ ಪಾವನರಾದವರ ಒಡಂಬಡಿಕೆ,
ಸದ್ವಚನ ವಿಭೂಷಣದಲ್ಲಿ
ಶಿವಾನುಭವ ಚಂದನದಲ್ಲಿ
ನಿರುಪಮಾಗಸದ ಸ್ಥಿತಿಗೆ ಬಾಗಿತ್ತು ಶಿರ
ಜಂಗಮನಡಿ ಬಂದವರಿಗೆಲ್ಲ ಪ್ರಜ್ಞಾನವೆಂಬವರ
ನಿನಗಭಿವಂದನ, ವಚನ ವಂದನ ನಿರುಪಾಧೀಶ.

(ವಚನ ವಂದನದಿಂದ)

ಬೆಳೆವ ಸಿರಿ ಮೊಳಕೆಯಲ್ಲಿ

—ಡಾ|| ಎಸ್. ಎಂ. ಹಿರೇಮಠ, ಗುಲ್ಬರ್ಗಾ

ಪೀಠಿಕೆ

ಲಾಂಛನದಾರಿಗಳೇ ಬೆಳೆಯುತ್ತಿರುವ ಇಂದಿನ ಕಲುಷಿತ ಪರಿಸ್ಥಿತಿಯಲ್ಲಿ ಅದನ್ನು ತಿಳಿಯಾಗಿಸುವಲ್ಲಿ ಹತ್ತು ಹಲವು ಮುಖಗಳಿಂದ ಪ್ರಯತ್ನಶೀಲರಾಗಿರುವ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ಅಪರೂಪದ ಶಕ್ತಿಗಳು. ಇಂಥವರ ಇರುವಿಕೆಯಿಂದ ಅರುವಿನ ಕ್ಷೇತ್ರವು ವಿಸ್ತರಿಸುತ್ತಿದೆ. ಆಧ್ಯಾತ್ಮದ ಕ್ಷೇತ್ರಕ್ಕೆ ಶೋಭೆ ಬರುತ್ತಿದೆ. ಒಟ್ಟು ಗುರುವೃಂದದ ಪರಂಪರೆಗೆ ಘನತೆ ಸಂಪ್ರಾಪ್ತವಾಗುತ್ತದೆ. ಜಗವನ್ನು ಉಳಿಸಲೆಂದು; ಅದನ್ನು ಊರ್ಧ್ವಮುಖವಾಗಿ ಬೆಳೆಸಲೆಂದು, ಜಗದ ಜಂಜಡವ ತೊಡೆಯಲೆಂದೇ 'ಜಗದ್ಗುರು'ವಿನ ಸಲಕ್ಷಣಗಳನ್ನು ಜನ್ಮಿಸುವಾಗಲೇ ಹೊಂದಿ ಹುಟ್ಟಿದ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳದು ತಪದ ಬದುಕು; ಶಿವ ಜಪದ ಬದುಕು. ಅವರ ಒಟ್ಟು ಆಯುರ್ಮಾನದ ಐವತ್ತೊಂದು ವಸಂತಗಳಲ್ಲಿ ಎರಡು ಪ್ರಮುಖ ರಂಗಗಳನ್ನು ಗುರುತಿಸಲು ಸಾಧ್ಯವಿದೆ. ಆರಂಭದ ಇಪ್ಪತ್ತಾರು ವಸಂತಗಳು ತಪದ ಬದುಕು ತಪಿಸಿದರೆ, ಪೀಠಾಧಿಪತಿಗಳಾಗಿ, ಜಗದ್ಗುರುಗಳ ಜಗದ್ವ್ಯಾಪಿಯಾದ ಗುರುತರ ಹೊಣೆಯನ್ನು ಹೊತ್ತುಕೊಂಡು ಅವ್ಯಾಹತವಾಗಿ ತಪಿಸಿದ ಅವರ ಅನಂತರದ ಇಪ್ಪತ್ತೈದು ಸಂವತ್ಸರಗಳ ಅವಧಿ ಶಿವಜಪದ ಅವಧಿಯಾಗಿದೆ. ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಮಠವು ಅತ್ಯಂತ ಉಜ್ವಲವಾದ ಪ್ರಾಚೀನ ಪರಂಪರೆಯ ಬುನಾದಿಯ ಮೇಲೆ ನಿಂತಿರುವ ಶ್ರೀಮಠ ಅದರ ಹಿಂದಿನ ಜಗದ್ಗುರುಗಳು ನಿರಂಜನ ಪೀಠದ ಜಂಗಮದ ಘನಾತಿಶಯವನ್ನು ಕಾತಿಟ್ಟುಕೊಂಡು ಬಂದಿರುವವರೊಟ್ಟಿಗೆ, ಬೆಳೆಸುವಲ್ಲಿಯೂ ತಮ್ಮ ತಪದ ಭಾಗವನ್ನು ಸಮರ್ಥಿಸದೆ ಇಲ್ಲ. ಅಂತಹ ಪರಂಪರೆಯನ್ನು ಮುಂದಿನ ದಿನಗಳಲ್ಲಿ ಅನುಚಾನವಾಗಿ ನಡೆಸಿಕೊಂಡು ಹೋಗಲು ಸಮರ್ಥರಾದ ಜಗದ್ಗುರುಗಳೇ ಬೇಕಾಗದ ಸಂದರ್ಭದಲ್ಲಿ, ಆ ಪದವಿಗಾಗಿಯೇ ಸಾಧನೆಯ ಸಿದ್ಧಿಯನ್ನು ಸಮನಿಸಿಕೊಂಡ ಸದ್ಯದ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ಅಂದು ಸಮಾಜಕ್ಕೆ ಅತ್ಯಂತ ಅರ್ಹ ವ್ಯಕ್ತಿಗಳಾಗಿ ಕಂಡುದು ಸಹಜ. ಜಗದ್ಗುರು ಪೀಠಕ್ಕೆ ಸನ್ಮಾನವನ್ನೂ, ಸಂಕೀರ್ತನವನ್ನೂ ಸಂಪಾದಿಸುವಂತೆ ಮಾಡಿದ ಜಗದ್ಗುರು ಅನ್ನದಾನೇಶ್ವರ ಮಹಾಸ್ವಾಮಿಗಳ ಮಹತ್ಕಾರ್ಯಗಳು ಪವಾಡಗಳಂತೆ ಕಾಣುತ್ತಿವೆ. ಪೀಠಾರೋಹಣಗೊಂಡು ಬಂದ ಈವರೆಗಿನ ಇಪ್ಪತ್ತೈದು ವರ್ಷಗಳಲ್ಲಿ ಜಗದ್ಗುರುಗಳು ಮಾಡಿರುವ ಧಾರ್ಮಿಕ ಸಾಮಾಜಿಕ-ಶೈಕ್ಷಣಿಕ-ಸಾಹಿತ್ಯಿಕ-

ಸಾಂಸ್ಕೃತಿಕ ಕಾರ್ಯಗಳು ಅನ್ಯರಿಂದ ಎಪ್ಪತ್ತೈದು ವರ್ಷಗಳಲ್ಲಿಯೂ ಪೂರೈಸಲಸದಳವಾಗಿ ಕಾಣುವಂತಿವೆ. ಇದು ಪವಾಡವಲ್ಲದೆ ಮತ್ತೇನು? ಇದು ಪವಾಡ ಮಾಡುವದಕ್ಕಿಂತಲೂ ಅತ್ಯಂತ ಕಠಿಣವಾದ ಕೆಲಸ. ಇಂತಹ ಕಾರ್ಯಗಳಲ್ಲಿಯೇ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡು, ಜಗದ್ಗುರು ಎಂಬ ತಿಲಮಾತ್ರವೂ ಹಮ್ಮು-ಬಿಮ್ಮು ಇಲ್ಲದೆ ಅತ್ಯಂತ ಸರಳವಾಗಿ ಸಕಲರೊಡನೆ ಕೂಡಿ, ಸಕಲರಿಗೂ ದರ್ಶನ ಭಾಗ್ಯ ನೀಡುತ್ತಿರುವ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ನಮ್ಮ ನಾಡನ್ನು, ನಮ್ಮ ಸಮಾಜವನ್ನು ಬೆಳಗಬಲ್ಲ ದೇದೀಪ್ಯಮಾನವಾದ ನಿರಂಜನ ಜಂಗಮದ ನಂದದ ಪ್ರಭೆ.

ಪೀಠಾಪುರದಲ್ಲಿ ಜಂಗಮಾಧಿಕ್ಯದ ಸಿರಿ

ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ಪೀಠಾಪುರದಲ್ಲಿ ಜನ್ಮಿಸುವದಕ್ಕಿಂತಲೂ ಮೊದಲಿಗೆ ಈ ಊರಿಗೆ ಇದ್ದ ಪ್ರಸಿದ್ಧಿ ಯಾವುದು? ಅದೊಂದು ಅಜ್ಞಾತ ಗ್ರಾಮವಾಗಿತ್ತು; ಯಾರಿಗೂ ಅರಿಯದ ಗ್ರಾಮವಾಗಿತ್ತು. ಆದರೆ ಅದು ಹಾಗೆಯೇ ಉಳಿಯುವಂತಾಗಲಿಲ್ಲ. ವಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಈ ಚಿಕ್ಕ ಗ್ರಾಮವು ಇಡಿ ಲೋಕದ ಬದುಕನ್ನು ಚೊಕ್ಕಗೊಳಿಸುವ 'ವಿಶ್ವಗುರು' ಶಕ್ತಿಯನ್ನು ಕ್ರಿ. ಶ. ೧೯೪೩ರ ವರ್ಷದಲ್ಲಿ ಪಡೆದು ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿತು. ಅಲ್ಲಿನ ಸತ್ಪರಂಪರೆಯ ಹಿರೇಮಠ ಮನೆತನದ ವೀರಭದ್ರಯ್ಯ-ಬಸವಮ್ಮ ದಂಪತಿಗಳ ಪುಣ್ಯದ ಮಡಿಲು ಈ ಜಂಗಮಾಧಿಕ್ಯದ ಸಿರಿಯನ್ನು ಬೆಳೆಯಿಸುವ ಹದವಾದ ನೆಲವಾಯಿತು, ನೆಲೆಯಾಯಿತು. ಜನ್ಮಿಸಿದ ಶಿಶುವಿಗೆ "ಮಹಾಲಿಂಗ" ಎಂಬ ಹೆಸರು ಅಂಕಿತವೂ ಆಯಿತು. ಅನ್ವರ್ಥಕವಾಗಿಯೂ ಬೆಳೆಯಿತು. ಪೀಠಾಪುರ ತಾಯಿಯ ತವರು ಮನೆಯೂರು ಸಾಸನೂರು, ಮಹಾಲಿಂಗನ ಜನುಮದಿಂದ ಪುಲತಗೊಂಡಿತು. ಬಾಲಕ ಮಹಾಲಿಂಗ ಬೆಳೆದುದು ಸಕಲರ ಹೃದಯದಲ್ಲಿನ ಮಹಾಲಿಂಗವಾಗಿ. ಈ ಮಹಾಲಿಂಗದ ನಿಲುವಿನಲ್ಲಿ ಹಿರೇಮಠ ಮನೆತನದಲ್ಲಿ ಆಗಿಹೋದ ಮಹಾತಪಸ್ವಿ ಮಹಾಲಿಂಗ ಸ್ವಾಮಿಗಳ ಓಜಸ್ಸು, ಅಜ್ಜ-ತಂದೆಯರ ಸಾಹಿತ್ಯ ಶಾಸ್ತ್ರದ ತೇಜಸ್ಸುಗಳು ಸ್ಫುಟಗೊಂಡು ಕಾಣುವಂತಾದವು. ಈ ಸತ್ವವನ್ನು ಉನ್ನತೋನ್ನತವಾಗಿಸಲೆಂದು "ಮನೆಯೆ ಮೊದಲು ಪಾಠಶಾಲೆ"ಯಾಗಿಸಿದ ತಂದೆ ವೀರಭದ್ರಯ್ಯನವರು ತಾವೇ ಮಗ ಮಹಾಲಿಂಗನಿಗೆ ಗುರುವಾಗಿ ನಿಂತು, ಆರಂಭದ ವಿದ್ಯಾಭ್ಯಾಸಕ್ಕೆ ಅನುಗೊಳಿಸಿದರು. ಬೆಳೆಯುವ ಈ ಸಸಿಯು ಮುಂದೆ ಎಂಥ ಹೆಮ್ಮರವಾಗಿ ಬೆಳೆಯುವುದೆಂಬುದನ್ನು ತಂದೆಯ ಕರಳು ಖಚಿತವಾಗಿಯೇ ತಿಳಿದುಕೊಂಡಿತ್ತು; ಯಾರೂ ಅರಿಯದ ಮುನ್ನವೇ. ಅದಕ್ಕೆ ಅವರ ಜ್ಯೋತಿಷ್ಯದ ಪರಿಣತಿಯೂ ಸಹಾಯಕವಾಗಿತ್ತು. ಮಹಾಲಿಂಗನ ಭವಿಷ್ಯವನ್ನು ತಿಳಿದ ತಂದೆಯ ಮನಸ್ಸು ಒಂದೊಂದು ಸಲ ದ್ವಂದ್ವ ಭಾವದಲ್ಲಿ ತೊಳಲಾಡುತ್ತಿತ್ತು. "ಹುಟ್ಟಿದ ಈ ಮಗು ನಮ್ಮ ಸಂಸಾರದ ಸ್ವತ್ತಾಗದೆ ತಂದೆ-ತಾಯಿ-ಬಂಧು ಬಳಗದವರ ಮೋಹಮಮಕಾರಕ್ಕೆ ಒಳಗಾಗದೇ ನಮ್ಮಿಂದ ಒಂದು ದಿನ ದೂರವಾಗಿ ಹೋಗುತ್ತದಲ್ಲ" ಎನ್ನುವ ಸ್ವಾರ್ಥದ ಆ ಭಾವ,

ಇನ್ನೊಂದೆಡೆಯಲ್ಲಿ "ಹುಟ್ಟಿದ ಈ ಮಗನು ಒಂದು ಕುಟುಂಬದಲ್ಲಿರುವ ನಾಲ್ಕೈದು ವ್ಯಕ್ತಿಗಳ ಉದ್ಧಾರ ಮಾಡುವದಕ್ಕಿಂತಲೂ ಸಮಾಜದಲ್ಲಿರುವ ಸಕಲರ ಉದ್ಧಾರ ಮಾಡುವದು ಶ್ರೇಷ್ಠವಾದುದು. ಸನ್ಯಾಸಿಯಾಗಿ ಇಡಿ ಸಮಾಜದ ಸ್ವತ್ತಾಗಿ, ಸಮಾಜ ವನ್ನುದ್ಧರಿಸುವ ಆ ಮಹಾಶಕ್ತಿಯೇ ಇಂದು ನಮಗೆ ಮಗುವಾಗಿ ಜನಿಸಿದೆಯಲ್ಲ" ಎನ್ನುವ ಆನಂದದ ಅನುಭವ.

ಬಾಲ್ಯದ ಮರೆಯಲ್ಲಿ ಮಹಾಲಿಂಗ

ಬಾಲಕ ಮಹಾಲಿಂಗನಲ್ಲಿ ಯಾವುದೋ ಶಿವಶಕ್ತಿ ಹುದುಗಿಕೊಂಡಿದೆಯೆಂಬುದು ಎಂಥ ಅಜ್ಞರಿಗೂ ಅರ್ಥವಾಗುತ್ತಿತ್ತು. ಕೆಲವರು ಈ ಮಾತನ್ನು ಸ್ಪಷ್ಟವಾಗಿಯೇ ನುಡಿದು ಬಿಡುತ್ತಿದ್ದರು. ಇವಾವುಗಳಿಗೂ ಸ್ಪಂದಿಸದಂತೆ ನಿರ್ಲಿಪ್ತವಾಗಿರುತ್ತಿತ್ತು ಮಹಾಲಿಂಗನ ಇರುವು. ಮಿತಭಾಷಿ ಉಳಿದೆಲ್ಲ ಸಂದರ್ಭಗಳಲ್ಲಿ ಮಹಾಮೌನಿ. ಬೇರೆ ಯವರು ಒಂದೆರಡು ಒಳ್ಳೆಯ ನುಡಿಗಳನ್ನಾಡಿದರೆ ಕೇಳುವನು. ಅದಕ್ಕೆ ಪ್ರತಿಯಾಗಿ ಆಯ್ದಿಟ್ಟಂತೆ ಒಂದೋ ಎರಡೋ ನುಡಿಗಳನ್ನಾಡುವನು. ಆಡಿದ ಆ ನುಡಿಗಳು ಕೇಳುಗರಿಗೆ ಶಿವಲಿಂಗದ ನುಡಿಗಳಾಗಿ ಕೇಳುತ್ತಿದ್ದವು. ಯಾರಿಗೂ ಮನನೋಯುವಂತೆ ಮಾತನಾಡಿ ದವನಲ್ಲ; ಯಾರಾದರೂ ನಸುಕಟುವಾಗಿ ಮಾತಾಡಿದರೆ ಅದಕ್ಕೆ ಎದುರು ನುಡಿ ಎಂದೂ ನುಡಿಯಲಿಲ್ಲ. ಅದಕ್ಕೆ ಪ್ರತಿಯಾಗಿ ಮೌನವಾಗಿದ್ದು, ದಳದಳನೆ ಕಣ್ಣೀರು ಸುರಿಸು ತ್ತಿದ್ದನು. ಮಹಾಲಿಂಗ ಅಜ್ಞರ, ಮೂಢರ ಮೌಢ್ಯಕ್ಕೆ ಮರುಗಿದಂತೆ. ಮೃದು ಮನಸ್ಸು; ಮೆದು ಹೃದಯ; ಸದಾಶಿವನ ಸ್ತುತಿ ಸದಾ ಆತ್ಮದಲ್ಲಿ, ಏಕಾಂತವಾಗಿದ್ದುಕೊಂಡು ಏನಾದರೂ ಓದುವದು, ಬರೆಯುವದು, ಪೂಜೆಯಲ್ಲಿ ತೊಡಗುವದು ಇಲ್ಲವೇ ಧ್ಯಾನಾಸಕ್ತ ನಾಗಿ ಕುಳಿತುಕೊಳ್ಳುವುದು–ಈ ಕ್ರಿಯೆಗಳಿಗೆಲ್ಲ ಅವನ ಒಟ್ಟು ದಿನವು ಮೀಸಲು. ಈ ತೆರನಾದ ನಡೆಯನ್ನು ಗಮನಿಸಿದ ಕೆಲವರು ಈ ಬಾಲಕನನ್ನು "ಪುಕ್ಕಲುತನದ ಸ್ವಭಾವದವನು" ಎಂದು ಕರೆಯುತ್ತಿದ್ದರು. ಪಾಪ ಅವರಿಗೇನು ಗೊತ್ತು ಸಮಾಜದ ಪುಕಲುತನವನ್ನು ಬಿಡಿಸಲೆಂದು ಬಂದಿರುವ ಆಧ್ಯಾತ್ಮದ ಕೃಷಿಯ ಒಕ್ಕಲಿಗನು ಇವನೆಂಬುದು. ಹೀಗೆ ಬಾಲ್ಯದಲ್ಲಿಯೇ ವಿರಕ್ತಿ–ಶಿವಭಕ್ತಿಯಲ್ಲಿ ಆಸಕ್ತಿ ಜನಸೇವೆಯಲ್ಲಿ ಅನುರಕ್ತಿಯಾದಿ ಗುಣಗಳು ದಳಬಿಚ್ಚಿ ಅರಳಿದಂತೆ; ಅದರೊಟ್ಟಿಗೆಯೇ ಮಹಾಲಿಂಗದ ಸಾಧನೆ ಅಂಕುರಾರ್ಪಣಗೊಳ್ಳತೊಡಗಿತು.

ಭವ ಪ್ರವಾಹದಿಂದ ಪಾರುಮಾಡಲು ಬಂದವನು ಪ್ರವಾಹದಿಂದ ಪಾರಾದ

ಆಗ ಬಾಲಕ ಮಹಾಲಿಂಗನಿಗೆ ಏಳೆಂಟು ವರ್ಷ, ಅಮವಾಸ್ಯೆಯ ದಿನವದು. ತಾಯಿ ಬಸವಾಂಬೆಯೊಂದಿಗೆ ಗದ್ದುಗೆಯ ಹೊಲಕ್ಕೆ ಕಾಯಿ ಒಡೆಯಲೆಂದು ಬಾಲಕ ಮಹಾಲಿಂಗನೂ ಹಾತೊರೆದು ಹೋದನು. ಹಿಂದಿನ ದಿನ ಧಾರಾಕಾರವಾಗಿ ಬಿದ್ದ ಮಳೆ ಯಿಂದ ಹಳ್ಳ–ಕೆರೆ, ತೆಗ್ಗು–ತೆವರುಗಳು ತುಂಬಿಕೊಂಡು ಹರಿಯುತ್ತಿದ್ದವು. ಕಾಯಿ ಒಡೆದು ಮನೆಗೆ ಮರಳುತ್ತಿರುವ ಸಂದರ್ಭದಲ್ಲಿ ಬಿರುಸಿನ ಮಳೆ ಬಡಿಯತೊಡಗಿತು.

ನೀರುತುಂಬಿದ ಒಡ್ಡಿನ ಮೇಲೆ ಬಾಲಕ ಮಹಾಲಿಂಗನು ಮಳೆಯಿಂದ ತಪ್ಪಿಸಿಕೊಳ್ಳಲೆಂದು ಗಿಡದ ಆಸರೆ ಪಡೆಯಲು ಓಡತೊಡಗಿದನು. ಒಡ್ಡಿನ ಮೇಲೆ ಓಡುತ್ತಿರುವಾಗಲೇ ಅದು ಒಡೆಯಿತು. ತುಂಬಿ ನಿಂತ ನೀರು ಬಾಲಕ ಮಹಾಲಿಂಗನನ್ನು ಬಾಚಿತಬ್ಬಿಕೊಂಡು ಮುನ್ನಡೆದಂತಾಯಿತು. ಆ ಭೀಕರ ದೃಶ್ಯವನ್ನು ಕಂಡ ತಾಯಿಯ ಒಡಲು ಒಡೆದಂತಾಯಿತು. "ಅಯ್ಯೋ ಹರಿದು ಹೋಗುತ್ತಿರುವ ನನ್ನ ಮಗ ಮಹಾಲಿಂಗನನ್ನು ಯಾರಾದರೂ ಪ್ರವಾಹದಿಂದ ಪಾರುಮಾಡಲು ಬನ್ನಿರಿ" ಎಂದು ತಾಯಿಯ ಕರುಳು ಚೀರ್ರನೆ ಚೀರಿತು. ಮರುಕ್ಷಣವಲ್ಲಿಯೇ ಮಹಾಲಿಂಗ ಪ್ರವಾಹದ ಬದಿಯಲ್ಲಿದ್ದ ಹೆಬ್ಬಂಡೆ ಯೊಂದರ ಮೇಲೆ ನಿಂತು "ಸುರಕ್ಷಿತವಾಗಿ ಬರುವದಕ್ಕೆ ತಾಯಿಯನ್ನು ಕರೆಯುತ್ತಿದ್ದಾನೆ" ತಾಯಿಗೆ ಆಶ್ಚರ್ಯವೇ ಆಶ್ಚರ್ಯ!! ಪರಮಾಶ್ಚರ್ಯ!! ಜಗದ ಜೀವರುಗಳನ್ನು ಭವಪ್ರವಾಹದಿಂದ ಪಾರುಮಾಡಲು ಬಂದಿರುವ ಈ ಮಹಾಲಿಂಗನು ನೀರಿನ ಪ್ರವಾಹದಿಂದ ಪಾರಾಗಿ ಬಂದುದೊಂದು ಸಾಮಾನ್ಯರ ಕಣ್ಣಿಗೆ ಪವಾಡವಾದರೂ, ಅದು ಅವನಿಗೆ ಸಹಜ ಮಾಟವೇ ಆಗಿದೆ. ಬೆಳೆವ ಬಾಲ ವ್ಯಕ್ತಿತ್ವದಲ್ಲಿ ಕಂಡ ಆ ಪವಾಡದ ವ್ಯಕ್ತಿತ್ವ ಇಂದು ಅಳಲಿದವರನ್ನು ಉದ್ಧರಿಸುವ ಸಾಧನವಾಗಿ ನಿಂತಿದೆ. ಬೆಂಗಳೂರಿನ ಶ್ರೀ ಬಿ. ಸಿ. ಗುಜ್ಜರವರ ಮಗಳ ವ್ಯಾಧಿಯನ್ನು ನಿವಾರಿಸಿದ್ದು, ರಾಯಬಾಗ ಗ್ರಾಮದ ಭಕ್ತನೊಬ್ಬನ ಮಲರೋಗ ಪರಿಹರಿಸಿದ್ದು, ಮುಂಡರಗಿಯ ನಿವಾಸಿ ಹತ್ತಿ ಸಿದ್ದಪ್ಪನ ಹೃದಯರೋಗ ಬಿಡಿಸಿದ್ದು, ಹಿಟ್ನಾಳ ಗ್ರಾಮದ ಭಕ್ತೆ ಮರಿಯಮ್ಮಳ ಕರುಳು ರೋಗದಿಂದ ಗುಣ ಪಡಿಸಿದ್ದು, ಹಡಗಲಿಯ ಚನ್ನಪ್ಪ ಗೌಡನೆಂಬ ಭಕ್ತನನ್ನು ಉದರ ಶೂಲೆಯಿಂದ ಮುಕ್ತ ಗೊಳಿಸಿದ್ದು, ಬಳ್ಳಾರಿ ಜಿಲ್ಲೆಯ ಮಾಗಳದ ಹಡಪದ ರುದ್ರಪ್ಪನಿಗಾದ ಕಿವಿಯಲ್ಲಿನ ಕ್ಯಾನ್ಸರ್ ರೋಗವನ್ನು ನಿವಾರಿಸಿದ್ದು ಮುಂತಾದ ಪವಾಡಗಳು ಜನಜನಿತವಾಗಿವೆ. ಪವಾಡದ ಸತ್ಯತೆಯನ್ನು ಜಗದ್ಗುರುಗಳ ಸನ್ನಿಧಿಯಲ್ಲಿ ಭಕ್ತ ಹೃದಯಗಳು ಇವತ್ತಿಗೂ ಮನಗಾಣಬಹುದಾಗಿದೆ. ಆದರೂ ಅವರೆಂದೂ ತಮ್ಮನ್ನು ಪವಾಡ ಪುರುಷರೆಂದು ಹೇಳಿ ಕೊಂಡಿಲ್ಲ; ಹೇಳುವುದೂ ಇಲ್ಲ. ಮಾಟ-ಮಂತ್ರ-ತಂತ್ರಗಳ ಗೊಡವೇ ಜಗದ್ಗುರು ಗಳಿಂದ ನರ್ಮದೆಯಷ್ಟು ದೂರ. ಭಕ್ತಿಯಿಂದ ಹಂಬಲಿಸಿ ಬರುವ ಭಾವುಕ ಭಕ್ತರನ್ನು ಅವರು ಅತ್ಯಂತ ಪ್ರೀತಿಯಿಂದ ಬರಮಾಡಿಕೊಳ್ಳುತ್ತಾರೆ. ಅವರು ತೋರುವ ನಿರ್ವಂಚಿತ ವಾದ ಪರಿಶುದ್ಧ ಪ್ರೀತಿ ಪ್ರೇಮವೇ ಬರುವ ಭಕ್ತರುಗಳ ಆದಿ-ವ್ಯಾಧಿಗಳಲ್ಲಿ ಅರ್ಧವನ್ನು ನಿವಾರಿಸುತ್ತದೆನ್ನಬಹುದು. ಬರುವ ಭಕ್ತರಿಗೆ ಜಗದ್ಗುರುಗಳು ನೀಡುವದಾದರೂ ಏನು? ತಮ್ಮ ಶಿವಮನದ, ಸತ್‌ಸಂಕಲ್ಪ ಮನದ ಸಂಕೇತದಂತಿರುವ ಕಲ್ಲು ಸಕ್ಕರೆ ಹಾಗೂ ಭಸ್ಮ, ಪಾದೋದಕ. ಇನ್ನೂ ಭಕ್ತರು ತಮ್ಮ ದೈನಂದಿನ ಬದುಕಿನ ಕೆಲವು ಸಮಸ್ಯೆಗಳನ್ನು ತೆಗೆದುಕೊಂಡು ಬಂದು; ತೋಡಿಕೊಂಡು, ಅವುಗಳನ್ನು ನಿವಾರಿಸುವಂತೆ ಪ್ರಾರ್ಥಿಸಿ ಕೊಂಡಾಗ ಜಗದ್ಗುರುಗಳು ಭವರೋಗ ವೈದ್ಯನಂತೆ ಕಾಣುತ್ತಾರೆ. ಅಂಥ ಭಕ್ತರಿಗೆ ಅವರು ತಮ್ಮ ಅಪ್ಪಾವರಣ ನಿಷ್ಠೆಯ ಫಲವನ್ನೇ ನೀಡುವಂತೆ, ಭಸ್ಮವನ್ನಿತ್ತು

ಪೂಸಿಕೊಳ್ಳಲು ಹೇಳುತ್ತಾರೆ. ಲಿಂಗವಿಲ್ಲದವರಿಗೆ ಲಿಂಗವನ್ನು ಧರಿಸಿಕೊಳ್ಳಲು ತಿಳಿಸುತ್ತಾರೆ. ರುದ್ರಾಕ್ಷಿಧಾರಿಯಾಗಿ ಗುರು-ಲಿಂಗ- ಜಂಗಮರಲ್ಲಿ ಭಕ್ತಿ ಇರಿಸಿ ನಡೆಯುವಂತೆ ಅರುಹುತ್ತಾರೆ. ಜಂಗಮಾರಾಧನೆ ಆರೋಗಣೆಯ ಮೂಲಕ 'ಅನ್ನದಾಸೋಹ' ಮಾಡುವಂತೆ ಹರಸುತ್ತಾರೆ. ತೀರ್ಥ ಪ್ರಸಾದಗಳನ್ನು ನೀಡಿ, ಎಡಬಿಡದೆ ಸೇವಿಸುವಂತೆ ಅಪ್ಪಣೆ ಕೊಡಿಸುತ್ತಾರೆ. ಜಗದ್ಗುರುಗಳು ಹೇಳಿರುವಂತೆ ನಡೆದುಕೊಂಡು ಬದುಕಿನಲ್ಲಿ ಸುಖ-ಸೌಖ್ಯಗಳನ್ನು ಹೊಂದಿದ ಭಕ್ತರುಗಳಿಗೆ ಲೆಕ್ಕವಿಲ್ಲ. ಅಂದು ಬಾಲಕ ಮಹಾಲಿಂಗ ನೀರಿನ ಪ್ರವಾಹದಿಂದ ಪಾರಾಗಲು ಯಾವ ಮಹಾಲಿಂಗ ಶಕ್ತಿ ಆಧಾರವಾಗಿತ್ತು. ಅದೇ ಮಹಾಲಿಂಗ ಶಕ್ತಿಯೇ ಜಗದ್ಗುರು ಅನ್ನದಾನೀಶ್ವರರ ಸನ್ನಿಧಿಯಲ್ಲಿ ಜರಗುವ ಏನೆಲ್ಲ ಪವಾಡಗಳಿಗೆ ಸಾಧಾರ ಭೂತವಾಗಿದೆ.

ಅನ್ನದಾನಿ-ಇಂದಿನದಲ್ಲ; ಅಂದಿನದು

"ಅನ್ನದಾನಿ" ಎಂದರೆ ಇನ್ನೊಂದು ಅರ್ಥದಲ್ಲಿ 'ದಾಸೋಹ' ಎಂದೇ ಅರ್ಥ. ಜಗದ್ಗುರುಗಳ ನೇತೃತ್ವದಲ್ಲಿ 'ದಾಸೋಹ'ದ ಕಾರ್ಯವು ಬಹುಮುಖಗಳನ್ನೂ ಪಡೆದು ಕೊಂಡಿದೆ. ಮಠಕ್ಕೆ ಯಾವ ವರ್ಗದವರೇ ಬರಲಿ; ಅವರು ಯಾವ ಪಂಥ ಪಂಗಡದವರೇ ಇರಲಿ, ಶ್ರೀಮಠದ ಪ್ರಸಾದ ನಿಲಯದ ಬಾಗಿಲು ಅವರಿಗಾಗಿ ಮುಕ್ತವಾಗಿ ತೆರೆದಿರು ತ್ತದೆ. ಮಠದ ಪ್ರಸಾದ ನಿಲಯವಲ್ಲದೇ ಮುಂಡರಗಿಯಲ್ಲಿಯೇ ಬಡವಿದ್ಯಾರ್ಥಿಗಳಿಗಾಗಿ ಮೂರು ಪ್ರಸಾದ ನಿಲಯಗಳು ಕಾರ್ಯನಿರ್ವಹಿಸುತ್ತಿರುವದನ್ನು ಕಾಣಬಹುದಾಗಿದೆ. ಬೆಣಕಲ್, ಕುಕನೂರು, ಗೊಂಡಬಾಳ, ಬನ್ನಿಕೊಪ್ಪ, ಗದಗ, ಬೊಮ್ಮನಹಳ್ಳಿ (ಬಿಜಾಪುರ ಜಿಲ್ಲೆ) ಈ ಸ್ಥಳಗಳಲ್ಲಿಯೂ ಜಗದ್ಗುರುಗಳು ಉಚಿತವಾದ ಪ್ರಸಾದ ನಿಲಯಗಳನ್ನು ಸ್ಥಾಪಿಸಿ, ಅನ್ನದಾಸೋಹ ಕಾರ್ಯವು ಅವ್ಯಾಹತವಾಗಿಸಿರುವರು. ಅನ್ನದಾಸೋಹದ ಕಾರ್ಯವು ಮಹಾಲಿಂಗ ಅನ್ನದಾನೀಶ್ವರರಾದ ಮೇಲೆಯೇ ರೂಪಿತಗೊಂಡುದೇನಲ್ಲ. ಅನ್ನದಾನೀಶ್ವರರಾಗುವದಕ್ಕಿಂತ ಪೂರ್ವದಲ್ಲಿಯೇ ಶೈಶವ ಸ್ಥಿತಿಯಲ್ಲಿಯೇ ಈ ಗುಣವು ಆಚರಿತವಾಗುತ್ತಿದ್ದಿತು. ಬಾಲಕ ಮಹಾಲಿಂಗನಿಗೆ ಆಕಳು-ಎತ್ತು ಮುಂತಾದ ಪಶುಗಳ ಮೇಲೆ ಎಲ್ಲಿಲ್ಲದ ಪ್ರೀತಿ. ತಾನುಣ್ಣುವ ಮೊದಲು ಅವುಗಳಿಗೆ ಹುಲ್ಲು ತಿನ್ನಿಸಿ ಉಣ್ಣು ತ್ತಿದ್ದನು. ಮನೆಯಲ್ಲಿದ್ದ ಅಕ್ಕಿ-ಜೋಳ-ಬೆಳೆಯಾದಿ ಧಾನ್ಯಗಳನ್ನು ತಂದು ಅಂಗಳದಲ್ಲಿ ಚಲ್ಲಿ, ಪಕ್ಷಿಗಳು ತಿಂದು ತಣಿಯುವದನ್ನು ಕಂಡು ಆನಂದಪಡುತ್ತಿದ್ದನು. ತಾಯಿಯೊಡನೆ ಹಾಲು ಕರೆಯಲೆಂದು ಹೋದ ಸಂದರ್ಭದಲ್ಲಿ "ಎಲ್ಲ ಹಾಲು ಹಿಂಡಿಕೊಳ್ಳಬೇಡ ಪಾಪ, ಆ ಕರುವು ಬಡವಾಗುತ್ತಿದೆ. ಅದಕ್ಕೆ ಸರಿಯಾಗಿ ಹೊಟ್ಟೆ ತುಂಬುತ್ತಿಲ್ಲ. ಅದಕ್ಕೆ ಸಾಕಷ್ಟು ಹಾಲು ಬಿಟ್ಟು ಬಿಡು. ಸ್ವಲ್ಪ ಮಾತ್ರ ಹಿಂಡಿಕೊಳ್ಳು" ಎಂದು ತಾಯಿಯನ್ನು ಒತ್ತಾಯಿಸುತ್ತಿದ್ದನು. ಬಡವರು, ಭಿಕ್ಷುಕರು ಯಾರಾದರೂ ಬಂದರೆ ತನ್ನ ಎದುರಿಗೆ ಇದ್ದುದನ್ನು, ಕಂಡುದನ್ನು, ಕೇಳಿದ್ದನ್ನು ಹಿಂದೆ ಮುಂದೆ ನೋಡದೆ ಕೊಟ್ಟುಬಿಡುತ್ತಿದ್ದನು. ಸದಾಚಾರ ನಿಷ್ಠರಾದ ತಂದೆ-ತಾಯಿ-ಅಜ್ಜಿಯಾದಿ ಮನೆಯವರು ಮಹಾಲಿಂಗನ ಮಹಾ ಮನಸ್ಸನ್ನೂ ಅದರಲ್ಲಿ ತುಂಬಿರುವ ಔದಾರ್ಯದ ಉನ್ನತಿಕೆಯನ್ನೂ ಕಂಡು ಹಿರಿಹಿರಿ

ಹಿಗ್ಗುತ್ತಿದ್ದರು. ಸಾತ್ವಿಕ ಮನದ ಅಜ್ಜಿ ಸಾತೀರಪ್ಪೆಗೆ ಈ ಮೊಮ್ಮಗನೆಂದರೆ ಪಂಚಪ್ರಾಣ. "ನಮ್ಮ ಮನೆತನದಲ್ಲಿ ಹಿಂದೆ ಆಗಿ ಹೋದ ಮಹಾಪುರುಷರಾದ ಮಹಾತಂಗ ಸ್ವಾಮಿಗಳೇ ಈ ಮಹಾಲಿಂಗನಾಗಿ ಅವತರಿಸಿ ಬಂದಿರುವರೆಂದು" ಮನೆಗೆ ಬಂದವರ ಮುಂದೆಲ್ಲ ಹೇಳುತ್ತಿದ್ದಳು. ಅಂದಿನ ಆ ಬಾಲ್ಯದ ಔದಾರ್ಯದ ಗುಣವೇ ಮಹಾಲಿಂಗನನ್ನು ಅನ್ನದಾನೀಶ್ವರ ಜಗದ್ಗುರುವಾಗಿಸಿದೆ. ಮಹಾದಾನಿಯಾದ ಸಮರ್ಥ ವ್ಯಕ್ತಿಯನ್ನೇ ಅನ್ನದಾನೇಶ್ವರರ ಜಗದ್ಗುರು ಪೀಠಕ್ಕೆ ಅಧಿಕಾರಿಯೆಂದು ಆರಿಸಿದ್ದು; ಮೂಲಪುರುಷರಾದ ಅನ್ನದಾನೀಶ್ವರರ ಸತ್ಸಂಕಲ್ಪವಲ್ಲದೇ ಬೇರೇನೂ ಅಲ್ಲ. ಮಹಾಲಿಂಗನಲ್ಲಿ ಮಾಡಿದ ಅಂದಿನ 'ಅನ್ನದಾನಿ' ಜಗದ್ಗುರುಗಳಲ್ಲಿ ಇಂದು ವಿಜೃಂಭಿಸಿದ್ದಾನೆ. ಲೋಕೋಪಕಾರಕ ಪುರುಷನಾಗಿದ್ದಾನೆ. ಸಕಲರ ದಯಾಪಾರಿ ಜಗಪಾಲಕನೆನಿಸಿದ್ದಾನೆ.

ಶಿಕ್ಷಣದ ಪುಷ್ಪದಲ್ಲಿ ಸುಸಂಸ್ಕೃತಿಯ ಸೌಗಂಧ

ಹಿರಿಯ ಮಠದ ಸತ್ಸಂಪ್ರದಾಯದ ಪರಿಸರದಿಂದಲೇ ಮಹಾಲಿಂಗನಿಗೆ ಆಧ್ಯಾತ್ಮಿಕ-ಲೌಕಿಕ ಶಿಕ್ಷಣಗಳೆರಡೂ ದೊರಕುವಂತಾದವು. ತಂದೆ-ತಾಯಿಗಳೊಂದಿಗೆ ಬೆಳಗಿನ ಜಾವದಲ್ಲಿಯೇ ಎದ್ದು, ಪ್ರಾತರ್ವಿಧಿಗಳನ್ನು ಪೂರೈಸಿಕೊಂಡು ಪೂಜೆ ಮಾಡಿಕೊಳ್ಳುತ್ತಿದ್ದನು. ಆ ಸಂದರ್ಭದಲ್ಲಿ ಮಗು ಮೈಗೆಲ್ಲ ವಿಭೂತಿಯನ್ನು ಯಥೇಷ್ಟವಾಗಿ ಪೂಸಿಕೊಂಡು ಆನಂದಿಸುತ್ತಿದ್ದನು. ಆಗ ಆ ಬಾಲಕನ ತೇಜವು ಶಿವನ ಮೈಬೆಳಗೆ ಹೊತ್ತು ನಿಂತಂತೆ ಕಾಣುತ್ತಿತ್ತು. ದಿನಗಳೆದಂತೆ ಆತ್ಮದಲ್ಲಿ ಆಧ್ಯಾತ್ಮದ ಹಂಬಲವು ವೇಗಹೊಂದಿ ಬೆಳೆಯ ತೊಡಗಿತು. ಅದಕ್ಕೆ ಪೂರಕವಾಗಿ ಎಂಬಂತೆ ತಂದೆ ವೀರಭದ್ರಯ್ಯನವರು ಮಹಾಪುರುಷರ ಶಿವಶರಣರ ಜೀವನ ಚರಿತ್ರೆ, ವಚನಗಳನ್ನು ಹೇಳಿಕೊಡುತ್ತಿದ್ದರು. ವೈದಿಕ ಜ್ಯೋತಿಷ್ಯಾದಿಶಾಸ್ತ್ರ ಜ್ಞಾನವನ್ನು ನೀಡುತ್ತಿದ್ದರು. ಹೀಗೆಯೇ ಪೀಠಾಪುರದಲ್ಲಿ ಪ್ರಾಥಮಿಕ ಶಿಕ್ಷಣವು ಮುಗಿದು ಮುಂದಿನ ಶಿಕ್ಷಣವು ಮುನ್ನಡೆಯಿತು. ಕಲಕೇರಿಯಲ್ಲಿ ಕ್ರಿ. ಶ. ೧೯೫೬ರ ಹೊತ್ತಿಗೆ ಮುಲ್ಕಿ ಪರೀಕ್ಷೆ ಮುಗಿಯಿತು. ಕಲಿಯುತ್ತಲೇ ಗಳಿಸುವದು, ಗಳಿಸಿದುದನ್ನು ತನ್ನ ಶಿಕ್ಷಣದ ಖರ್ಚಿನೊಂದಿಗೆ, ಅನ್ಯರಿಗೂ ಸಹಾಯ ನೀಡುವದು. ಈ ಕಾಯಕ ದಾಸೋಹ ಸಂಸ್ಕೃತಿ ವಿದ್ಯಾರ್ಥಿದೆಸೆಯಿಂದಲೇ ಮಹಾಲಿಂಗ ಅಳವಡಿಸಿಕೊಂಡನು. ನೂಲುವದು-ನೇಯ್ಗೆ ಕೆಲಸ ಕಲಿತು ಬಿಡುವಿನ ವೇಳೆಯಲ್ಲಿ ಆ ಕಾಯಕದಿಂದ ಒಂದಿಷ್ಟು ಹಣ ಸಂಪಾದಿಸುವಂತಾಯಿತು. ಸಹಪಾಠಿಗಳಲ್ಲಿ ಮುಂದೆ ಮುಂದೆ, ಗಣಿತ-ವಿಜ್ಞಾನ ಭಾಷೆಗಳಲ್ಲಿ ಯಾರಿಗೂ ಹಿಂದೆ ಬೀಳದ ಗತಿ, ಭಾಷಣ-ಲೇಖನ ರಚನೆಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರಥಮ ಸ್ಥಾನದ ಗಳಿಕೆ, ಹೀಗೆ ವಿದ್ಯಾರ್ಥಿ ಬದುಕಿನ ನಿಜವಾದ ಸಾಧನೆಯಿಂದ 'ಮಹಾಲಿಂಗಯ್ಯ' ಶಾಲೆಯ ಶಿಕ್ಷಕರಿಗೆಲ್ಲ ಮೆಚ್ಚಾದನು. ಎಲ್ಲರ ಬಾಯಲ್ಲೂ ಬೆಲ್ಲದ ಅಚ್ಚಾದನು. ನಾರು ಹುಣ್ಣಿನ ಭಯಂಕರ ನೋವಿನಲ್ಲೂ ಮುಲ್ಕಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನೇ ಗಿಟ್ಟಿಸುವ ಛಲ ಹೊಂದಿದ ಈ ವಿದ್ಯಾರ್ಥಿಗೆ ಅದು ಅಸಾಧ್ಯದ ಮಾತೇನೂ ಆಗಲಿಲ್ಲ. ಆಗ ಶಾಲೆಯ ಶಿಕ್ಷಕರಿಗೆ ಮನೆಯ ಹಿರಿಯರಿಗಾದ

ಆನಂದ-ಆಶ್ಚರ್ಯಗಳು ಅಷ್ಟಿಷ್ಟಲ್ಲ. ಅವರು "ಸ್ವಾಮಿ ವಿವೇಕಾನಂದರು ಮೂರು ದಿನ ಇರುವಾಗಲೆ ಇತಿಹಾಸವನ್ನು ಓದಿಕೊಂಡು ಪರೀಕ್ಷೆಯಲ್ಲಿ ಪ್ರಪ್ರಥಮ ತೇರ್ಗಡೆಯಾದ ರೆಂದು ಓದಿದ ನೆನಪು. ಅದರಂತೆ ನಮ್ಮ ಮಹಾಲಿಂಗಯ್ಯ ನಾರುಹುಣ್ಣಿನ ಅಸಹ್ಯವಾದ ನೋವನ್ನು ಅನುಭವಿಸುತ್ತಲೇ ಪರೀಕ್ಷೆಯನ್ನು ಎದುರಿಸಿ ಪ್ರಥಮ ಸ್ಥಾನದಲ್ಲಿ ಪಾಸಾ ದುದು, ಆ ವಿವೇಕಾನಂದರ ಬದುಕಿನ ಘಟನೆ ನೆನಪಿಸುವಂತಿದೆ. ನಿಜವಾಗಿಯೂ ಇವನು ಮಹಾಧೀಮಂತ, ಅಪೂರ್ವ ಜ್ಞಾಪಕ ಶಕ್ತಿ ಜ್ಞಾನ-ಶಕ್ತಿಯುಳ್ಳವನು ಮತ್ತು ಚತುರ-ಚುರುಕುಮತಿಯ ವಿದ್ಯಾರ್ಥಿ. ಇಂತಹ ವಿದ್ಯಾರ್ಥಿಯಿಂದ ಎಲ್ಲರಿಗೂ ಕೀರ್ತಿ ಬಂದಂತಾಯಿತು" ಎಂದು ಉದ್ಗಾರ ತೆಗೆದರು

ಎನ್ನ ಮದುವೆಯ ಚಿಂತೆ ನಿಮಗ್ಯಾಕ?

ಬಾಲ್ಯ ವಿವಾಹಗಳು ಇನ್ನೂ ಜರಗುತ್ತಿದ್ದ ಅಂದಿನ ದಿನಗಳಲ್ಲಿ ವಿದ್ಯಾರ್ಥಿ ಮಹಾಲಿಂಗಯ್ಯನ ಮದುವೆ, ಅಣ್ಣನಾದ ಶಾಂತವೀರಯ್ಯನ ಮದುವೆಯಲ್ಲಿ ಮಾಡಿ ಮುಗಿಸಬೇಕೆಂಬ ಯೋಚನೆ ಹಿರಿಯರು ಮಾಡಿಕೊಂಡರು. ಇದು ಅಜ್ಜಿ ಸಾತೀರವ್ವೆಗಂತೂ ಅತ್ಯಾನಂದವನ್ನುಂಟು ಮಾಡಿತು. ಇಬ್ಬರೂ ಮೊಮ್ಮಕ್ಕಳ ತಲೆಯ ಮೇಲೆ ಅಕ್ಕಿ ಕಾಳು ಹಾಕಿ ಪ್ರಾಣ ಬಿಡಬೇಕೆಂಬುದು ಆ ಅಜ್ಜಿಯ ಆಶೆಯಾಗಿತ್ತು. ತಾಯಿಯ ಈ ಆಶೆಯನ್ನು ಪೂರೈಸಲು ಮಗ ವೀರಭದ್ರಯ್ಯನವರು ಬದ್ಧರಾಗಿಯೇ ಇದ್ದರು. ಈ ಸುದ್ದಿ ಮಹಾಲಿಂಗಯ್ಯನಿಗೆ ತಿಳಿಯಲು ಬಹಳ ಕಾಲ ಬೇಕಾಗಲಿಲ್ಲ. ಮದುವೆಯ ಒಪ್ಪಿಗೆ ಕೇಳಲು ಮನೆಯ ಹಿರಿಯರೆಲ್ಲರೂ ಮಹಾಲಿಂಗಯ್ಯನ ಸುತ್ತಲೂ ಸೇರಿಕೊಂಡಾಗ ಕಾಳ ಸಂಸಾರದ ಸರ್ಪವೇ ತನ್ನನ್ನು ಬಲವಾಗಿ ಬಿಗಿದಂತೆನಿಸಿತು. ಕಣ್ಣು ಮುಚ್ಚಿ ಮೌನವಾಗಿ ಕುಳಿತನು. ಎಷ್ಟು ಮಾತಾಡಿಸಿದರೂ ಮಾತನಾಡಲಿಲ್ಲ. ಮದುವೆಯ ಬಗೆಗೆ ಯಾವ ಪ್ರತಿಕ್ರಿಯೆಯೂ ಬರಲಿಲ್ಲ, ಅವನ ವಿಷಯದಲ್ಲಿ "ಮೌನಂ ಸಮ್ಮತಿ ಲಕ್ಷಣಂ'' ಎಂದು ಹೇಳುವಂತೆಯೂ ಇರಲಿಲ್ಲ. ಆಗ ಮನೆಯ ಹಿರಿಯರಿಗೆ ಏನು ಮಾಡಬೇಕೆಂಬುದು ತಿಳಿಯಲಿಲ್ಲ. ಅಜ್ಜಿ ಸಾತೀರವ್ವಯನ್ನೇ ಮುಂದು ಮಾಡಿದರು. ಅಜ್ಜಿಯು ಮಹಾಲಿಂಗಯ್ಯನ ತಲೆಯನ್ನು ನೇವರಿಸುತ್ತ "ಮಗೂ ನನ್ನ ವಯಸ್ಸು ತೀರುತ್ತ ಬರುತ್ತದೆ. ನನ್ನ ಕಣ್ಣು ಕಾಣುವಾಗಲೇ ನಿನ್ನ ಮದುವೆಯೊಂದನ್ನು ಕಾಣಬೇಕೆಂಬ ಹಂಬಲವು ನನಗೆ. ಈ ಹಂಬಲ ಈಡೇರಿಸ ಲಾರೆಯಾ?" ಎಂದು ಕೇಳಿದಳು. ಮಹಾಲಿಂಗನು ಕಣ್ಣು ತೆರೆಯಲಿಲ್ಲ; ಆದರೆ ''ಏನೋ ನುಡಿಯುತ್ತಾನೆ'' ಎಂಬಂತೆ ತುಟಿಗಳು ಅದರ ತೊಡಗಿದವು. ಏನೋ ಹೇಳಬಹುದೆಂದು ಎಲ್ಲರೂ ಆತುರದಿಂದ ಕಾದುಕೊಂಡರು. ಮಹಾಲಿಂಗನ ಮುಖದಿಂದ ಕಡಕೋಳ ಮಡಿವಾಳರ ಅರ್ಥಗರ್ಭಿತ ತತ್ವಪದದ ಈ ಸಾಲುಗಳು ಹೊರಬಿದ್ದವು.

"ಎನ್ನ ಮದುವೆಯ ಚಿಂತೆ ನಿಮಗ್ಯಾಕ?
ಎನ್ನ ಅಂಗಕ್ಕೆ ಲಿಂಗವ ಕಟ್ಟಿದ ಬಳಿಕ
ಎನ್ನ ಮದುವೆಯ ಚಿಂತೆ ನಿಮಗ್ಯಾಕ?"

ಇದರ ಅರ್ಥ ತಿಳಿದುಕೊಳ್ಳಲು ಹಿರಿಯರಿಗೆ ಬಹುಕಾಲ ಬೇಕಾಗಲಿಲ್ಲ. ಮಹಾಲಿಂಗನ ಮದುವೆ ವಿಚಾರವು ಅಲ್ಲಿಗೆ ಬಿಟ್ಟು ಅವನ ಅಣ್ಣ ಶಾಂತವೀರಯ್ಯನ ಮದುವೆ ಮಾಡಿ ಮುಗಿಸಿದರು.

ಶಿವಶಕ್ತಿಯು ಸಂಚಲನ ಶಿವಯೋಗ ಮಂದಿರಕ್ಕೆ

ಮದುವೆ ತೊರೆದ ಮಹಾಲಿಂಗಯ್ಯನ ಪ್ರತಿಕ್ರಿಯೆ ಪರೋಕ್ಷವಾಗಿ 'ನಿರಂಜನ ಜಂಗಮ' ಸಾಧನೆಯನ್ನು ಪ್ರತಿಪಾದಿಸಿತು. ಸ್ವತಃ ಜ್ಯೋತಿಷಿಗಳಾಗಿದ್ದ ವೀರಭದ್ರಯ್ಯನವರಿಗೆ ಮಗನ ಜಾತಕದ ವಿವರ ಸತ್ಯವಾಗಿ ಕಾಣುವಂತಾಯಿತು. ಮಹಾಲಿಂಗಯ್ಯನು ಹುಟ್ಟಿದಾಗ ಪೀಠಾಪುರದ ಜೋಯಿಸರೊಬ್ಬರು "ನಿಮ್ಮ ಮಗನು ಮುಂದೆ ಮಹಾ ವಿರಕ್ತನಾಗಿ ಜಗವನ್ನು ಉದ್ಧರಿಸುತ್ತಾನೆಂದು" ಹೇಳಿದ ಮಾತು ಮತ್ತೆ ಮತ್ತೆ ಕಿವಿಯಲ್ಲಿ ಪ್ರತಿಧ್ವನಿಸುವಂತಾಯಿತು. ಶಿವನ ಸಂಕಲ್ಪದಂತಾಗಲಿಯೆಂದು ನಿರ್ಧರಿಸಿದ ವೀರಭದ್ರಯ್ಯನವರು ಶಿವಶಕ್ತಿಯ ರೂಪದಂತಿರುವ ತಮ್ಮ ಈ ಮಗನನ್ನು ಶಿವ ಪರಿಸರದ ಸಾನ್ನಿಧ್ಯಕ್ಕೆ ಹೊಂದಿಸಲು ವಿಚಾರ ಮಾಡಿದರು. "ಮಹಾಲಿಂಗಯ್ಯನ ಶಿವಯೋಗದ ವ್ಯಕ್ತಿತ್ವ ಅರಳಿ ಸುಗಂಧ ಸೂಸುವ ತಾಣನಾವುದೆಂದು" ವೀರಭದ್ರಯ್ಯನವರ ಮನಸ್ಸು ಹುಡುಕ ತೊಡಗಿತು. ಆಗ ಅವರಿಗೆ ನೆನಪು ಬಂದುದು ಶಿವಯೋಗ ಮಂದಿರದ ಶಿವ ಪರಿಸರದ ನೆನಹು. ಅಂದು ಅಲ್ಲಿ ಮಹಾಸ್ವಾಮಿಗಳಾಗಿ, ಅಲ್ಲಿನ ವಟುಗಳಿಗೆ ಮಾರ್ಗದರ್ಶಕರಾಗಿದ್ದವರು ಸದಾಶಿವಸ್ವಾಮಿಗಳು. ಸದಾಶಿವನ ಅರ್ಚನೆ, ಸಂಕೀರ್ತನೆ, ಧ್ಯಾನ–ಮನನದಲ್ಲಿ ತೊಡಗಿರುತಿದ್ದ ಆ ಸ್ವಾಮಿಗಳಿಗೆ "ಸದಾಶಿವ"ನೆಂಬ ಹೆಸರು ಔಚಿತ್ಯ ಪೂರ್ಣವಾಗಿ ಒಪ್ಪುತ್ತಿತ್ತು. ತಾವು ಸದಾಶಿವನಾಗುವದರೊಟ್ಟಿಗೆ ಅಲ್ಲಿನ ಪ್ರತಿಯೊಬ್ಬ ವಟುವಿಗೂ ಆ ಸಾಧನೆಯಲ್ಲಿ ತೊಡಗಿಸಲು ಶಿವಸಂಸ್ಕೃತಿಯ ಸಂಸ್ಕಾರ ಅನುಗ್ರಹಿಸುತ್ತಿದ್ದರು. ಇಂತಹ ಅನುಗ್ರಹಕ್ಕೆ ಪಾತ್ರವಾಗುವ ಮಂಗಳದ ಗಳಿಗೆ ಒದಗಲು ಮಹಾಲಿಂಗಯ್ಯನಿಗೆ, ಸದಾಶಿವ ಸ್ವಾಮಿಗಳ ಸಾನ್ನಿಧ್ಯದಲ್ಲಿ ಶಿವಯೋಗ ಮಂದಿರದ ಶಿವ ಪರಿಸರದ ನಡುವೆ ಮಹಾಲಿಂಗಯ್ಯನಿಗೆ ಬಹಿರಂಗದೊಂದಿಗೆ ಅಂತರಂಗದ ಸಿದ್ಧಿಯನ್ನು ಸಂಪಾದಿಸಿಕೊಳ್ಳಲು ಅತ್ಯಂತ ಪ್ರಶಸ್ತವಾದ ಪವಿತ್ರ ತಾಣವಾಗಿ ಕಂಡಿತು. ಆಗ ಮಹಾಲಿಂಗಯ್ಯನಿಗೆ ಉಂಟಾದ ಆನಂದವು ಅಂತರದ ಆಕಾಶವು ಅಂಗೈ ತಳಕ್ಕೆ ಬಂದಪ್ಪಾಗಿತ್ತು.

ಚಂದ್ರಶೇಖರ ದೇವರ ಚಂದದ ಪ್ರಭೆ

ಶಿವಯೋಗ ಮಂದಿರದಲ್ಲಿ ಮಹಾಲಿಂಗಯ್ಯನಿಗೆ ಕಂಡುದು ಚಂದ್ರನ ಬೆಳಗು; ಚಂದ್ರಶೇಖರನಾಗುವ ಬೆಳಗು. ಆ ಬೆಳಗನ್ನು ಒಳಗೊಳ್ಳಲು ಮಾಡಲೇಬೇಕಾದ ಸಾಧನೆಯೂ ಸರಳವಾಗಿರಲಿಲ್ಲ. ಆದರೂ ಅದನ್ನು ಮಹಾಲಿಂಗಯ್ಯ ಸರಳವಾಗಿಸಿ ಕೊಂಡನು. ಸಹಪಾಠಿಗಳೊಂದಿಗೆ, ಅವರಿಗಿಂತ ನಸು ಮುಂಚಿತವಾಗಿಯೇ ಬೆಳಗಿನ ಜಾವದಲ್ಲಿ ಏಳುವದು, ಪ್ರಾತರ್ವಿಧಿಗಳನ್ನು ಪೂರೈಸಿಕೊಂಡು ಪ್ರಾರ್ಥನೆ ಮಾಡುವದು,

ನಂತರ ಯೋಗಭ್ಯಾಸದ ಸಾಧನೆ, ನಸುವಿಶ್ರಾಂತಿ, ನಂತರ ಹಿಂದಿನ ದಿನದ ಪಾಠಗಳನ್ನು ಕುರಿತು ಚಿಂತನೆ. ಪರಿಶೀಲನಾರ್ಹವಾದ ಸದ್ಗ್ರಂಥಗಳ ಅಧ್ಯಯನ. ಸ್ನಾನ–ಇಷ್ಟ ಲಿಂಗಾರ್ಚನೆ, ಹೀಗೆ ಒಂದರ ನಂತರ ಇನ್ನೊಂದರಂತೆ ನಿರಂತರ ಕ್ರಿಯೆಗಳಿಗೆ ತೊಡಗಿಸಿ ಕೊಳ್ಳುವದು ಕ್ರಿಯಾಶೀಲರಾಗಿದ್ದ ಮಹಾಲಿಂಗನಿಗೆ ಕಷ್ಟದ ಕಾರ್ಯವೆನಿಸಲೇ ಇಲ್ಲ. ಬಂದ ಒಂದೆರಡು ದಿನಗಳಲ್ಲಿಯೇ ಒಂದು ದಿನ ಮಲಾಪಹಾರಿ ನದಿಗೆ ಸ್ನಾನಕ್ಕೆ ಹೋದಾಗ ತನ್ನ ಪೂರ್ವಾಶ್ರಮದಲ್ಲಿ ತೊಡುತ್ತಿದ್ದ ಬಟ್ಟೆಗಳನ್ನು ನೀರಲ್ಲಿ ಹರಿಬಿಟ್ಟನು. ತನ್ಮೂಲಕ ಪೂರ್ವಾಶ್ರಮದ ತಂದೆ–ತಾಯಿ, ಅಣ್ಣ–ತಮ್ಮ, ಅಕ್ಕ–ತಂಗಿ, ಬಂಧು–ಬಾಂಧವರೆಂಬ ಮೋಹ ಮಮಕಾರದ ಬಟ್ಟೆಯನ್ನೂ ಹರಿಯಬಿಟ್ಟನು. ಅಪ್ಪಟ ಸನ್ಯಾಸತ್ವದ, ವೀರವಿರತಿಯ ವಸ್ತ್ರಗಳನ್ನು ಧರಿಸಿ ಶಿವನ ಮಂದಿರವನ್ನು ಪ್ರವೇಶಗೈದನು. ಆ ವೇಷ ದಲ್ಲಿದ್ದ ಮಹಾಲಿಂಗನನ್ನು ಕಂಡ ಸದಾಶಿವ ಸ್ವಾಮಿಗಳವರ ಮನಸ್ಸು ಹಿರಿಹಿರಿ ಹಿಗ್ಗಿತು. ಆ ಆನಂದಾತಿಶಯದ ನಿಬ್ಬೆರಗಿನಲ್ಲಿಯೇ ಸದಾಶಿವ ಸ್ವಾಮಿಗಳು ಮಹಾಲಿಂಗಯ್ಯನನ್ನು "ಚಂದ್ರಶೇಖರ" ಎಂದು ಸಂಬೋಧಿಸಿ ಕರೆದರು. ಕಲಬುರ್ಗಿಯ ಕೆಂಚಬಸವ ಪಟ್ಟದ್ದೇವರಿಂದ ಶಿವದೀಕ್ಷಾ ಸಂಸ್ಕಾರವು ಸಮನಿಸಿತು. ಸದಾಶಿವ ಸ್ವಾಮಿಗಳೇ ಚಂದ್ರಶೇಖರರಿಗೆ ಸಂಸ್ಕೃತ–ಸಾಹಿತ್ಯ–ವ್ಯಾಕರಣ–ಛಂದಸ್ಸು ಮುಂತಾದ ವಿಷಯಗಳನ್ನು ಅಧ್ಯಯನ ಮಾಡಿಸಲು ನಿಂತರು. ಈ ಅಧ್ಯಯನ–ಅಧ್ಯಾಪನ ಕಾರ್ಯದಲ್ಲಿ ಚಂದ್ರಶೇಖರರಿಗೆ ಇನ್ನೂ ಹಲವು ಪಂಡಿತ ಶರಣ ಜೀವರ ನೆರವು ದೊರಕಿತು. ಪಂ. ಗಲಗಲಿ ಗುರುಸಿದ್ಧ ಶಾಸ್ತ್ರಿಗಳು, ಕೂಡಲಗಿಯ ಸಿದ್ಧಲಿಂಗದೇವರು, ಪಂ. ಜಗದೀಶ ಶಾಸ್ತ್ರಿಗಳು, ಹೊಸಮಠದ ಶ್ರೀ ಶಿವಬಸವಸ್ವಾಮಿಗಳು, ಇಟಗಿಯ ಚನ್ನಬಸವಶಾಸ್ತ್ರಿ ಗಳು, ಅವರಲ್ಲಿ ಕೆಲವರು. ಅವಿಗತ ಅಧ್ಯಯನದ ಫಲವಾಗಿ ಚಂದ್ರಶೇಖರ ದೇವರಿಗೆ ಹಲವಾರು ಪದವಿಗಳು ಬಂದು ಕೂಡಿಗವು. ಕ್ರಿ.ಶ. ೧೯೫೮ರಲ್ಲಿ ಹುಬ್ಬಳ್ಳಿ ಕೇಂದ್ರದಿಂದ ಸಂಸ್ಕೃತದಲ್ಲಿ ತೇರ್ಗಡೆಗೊಂಡ ಕಲಕತ್ತೆಯ ಆದ್ಯ ಪರೀಕ್ಷೆ, ೧೯೫೯ರಲ್ಲಿ ತೇರ್ಗಡೆ ಯಾದ ಕಾವ್ಯ ಮಾಧ್ಯಮ, ೧೯೬೦ರಲ್ಲಿ ಬಂಗಾಳದ ವಂಗೀಯ ಶಿಕ್ಷಾ ಪರಿಷತ್ತಿನಿಂದ ತೇರ್ಗಡೆಯಾದ ವ್ಯಾಕರಣ ಪರೀಕ್ಷೆ, ೧೯೬೧ರಲ್ಲಿ ಪೂನಾ ಪರೀಕ್ಷಾ ಕೇಂದ್ರದಿಂದ ಉತ್ತೀರ್ಣವಾದ 'ಕಾವ್ಯತೀರ್ಥ' ಪದವಿ ಇವು ಕೆಲವು ಪ್ರಮುಖವಾಗಿ ಹೆಸರಿಸಬಹು ದಾಗಿದೆ. ಹೀಗಾಗಿ ಚಂದ್ರಶೇಖರರಿಗೆ ಕನ್ನಡದಷ್ಟೇ ಸಂಸ್ಕೃತ ಹಿಂದಿ ಭಾಷೆಗಳಲ್ಲಿ ಪ್ರಾವೀಣ್ಯತೆ ಪ್ರಾಪ್ತವಾಯಿತು. ಅಲ್ಲಿನ ಸಾಹಿತ್ಯ ಶಾಸ್ತ್ರಗಳ ಸಾರವು ಕರಗತವಾಯಿತು. ಈ ತಗ್ಗದ ಅಧ್ಯಯನದ ಆಸಕ್ತಿ ಚಂದ್ರಶೇಖರರನ್ನು ಕಾಶಿಗೆ ಪ್ರಯಾಣ ಬೆಳೆಸುವಂತೆ ಪ್ರೇರಣೆ ನೀಡಿತು. ಅದಕ್ಕೆ ಪ್ರೋತ್ಸಾಹ ನೀಡಿ ಸಹಾಯ ನೀಡಿದರು. ತಾಳಿಕೋಟಿಯ ಪಟ್ಟದ ದೇವರು. ಕಾಶಿಗೆ ಹೋಗುವ ಸಂದರ್ಭದಲ್ಲಿಯೇ ಚಂದ್ರಶೇಖರರ ಚಂದದ ಪ್ರಭೆ ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳಿಗೆ ಸೋಕಿತು. ಆ ಪ್ರಭೆಯಿಂದ ಆಕರ್ಷಿತರಾದ ಜಗದ್ಗುರುಗಳು ತಮ್ಮ ಶ್ರೀಮಠಕ್ಕೆ ಚಂದ್ರಶೇಖರರನ್ನು

ಮರಿದೇವರನ್ನಾಗಿ ಮಾಡಿಕೊಳ್ಳುವ ನಿರ್ಧಾರ ಮಾಡಿಕೊಂಡರು. ಈ ನಿರ್ಧಾರಕ್ಕೆ ಶಿವಯೋಗ ಮಂದಿರದ ಸದಾಶಿವ ಸ್ವಾಮಿಗಳವರ ಒಪ್ಪಿಗೆ ದೊರೆಯಿತು. ಆಗ ಚಂದ್ರಶೇಖರರಿಗೆ ಹದಿನೆಂಟರ ವಯಸ್ಸು, ತಮ್ಮ ಮಠಕ್ಕೆ ಹೊಸದಾಗಿ ಬಂದ ಈ ಮರಿದೇವರನ್ನು ಹಿರೇವಡ್ಡಟ್ಟಿಯ ಭಕ್ತರು ವೈಭವದಿಂದ ಮೆರವಣಿಗೆ ಮಾಡಿದರು. "ಮಹಾಲಿಂಗನು ತನ್ನ ಹದಿನೆಂಟರ ಹರೆಯಕ್ಕೆ ಮಹಾಜಗದ್ಗುರುಗಳ ಪೀಠ ಏರಿ ಛತ್ರ ಚಾಮರಗಳಿಂದ ಮೆರವಣಿಗೆಗೊಳ್ಳುವ ಮಹಾಮಹಿಮನಾಗುತ್ತಾನೆಂಬ" ಮಗನ ಜಾತಕದ ಭವಿಷ್ಯವನ್ನು ತಂದೆ ವೀರಭದ್ರಯ್ಯನವರು ಅಂದು ಕಣ್ಣಾರೆ ಕಾಣುವಂತಾಯಿತು.

ವಿಶ್ವೇಶ್ವರನ ಸನ್ನಿಧಿಯಲ್ಲಿ ಚಂದ್ರಶೇಖರ ದೇವರ ಸಾಧನೆ

ಚಂದ್ರಶೇಖರ ದೇವರು ಮೃಡಗಿರಿಯ ಮರಿದೇವರಾದ ಮೇಲಂತೂ ಕಾಶಿಯ ಪಯಣದ ಬಗೆಗೆ ಇನ್ನೂ ಹೆಚ್ಚಾಗಿ ವಿಚಾರ ಮಾಡುವಂತಾಯಿತು. ಅವರ ಅಂತರ್ಮನಸ್ಸು 'ಮಹಾಜ್ಞಾನ' ಸಾಧನೆಗೆ ತೊಡಗೆಂದು ಹೇಳುತ್ತಿತ್ತು. ಹೀಗಾಗಿ ಜಗದ್ಗುರು ಪೀಠಕ್ಕೆ ಸಿಕ್ಕುವ ಬಾಹ್ಯ ವೈಭವಾದಿಗಳ ಬಗೆಗೆ ಚಂದ್ರಶೇಖರದೇವರು ಆಗಿನ ಮಟ್ಟಿಗೆ ನಿರ್ಲಿಪ್ತ ಭಾವನೆಯನ್ನೇ ತಾಳಿದರು. ಅಡ್ಡ ಪಲ್ಲಕ್ಕಿಯಲ್ಲಿ ಮೆರೆಯುತ್ತ, ಭಕ್ತರುಗಳ ಮನೆಯಲ್ಲಿ ಮೃಷ್ಟಾನ್ನ ಹೊಡೆಯುತ್ತ, ಸಾವಿರಾರು ಜನರಿಗೆ ತಮ್ಮ ಪಾದಗಳ ಮೇಲೆ ಬೀಳಿಸಿ ಕೊಳ್ಳುತ್ತ "ಶ್ರೀಪಾದಗಳೆನಿಸಿಕೊಂಡು" ಅಂದು ಚಂದ್ರಶೇಖರದೇವರು ಆರಾಮಾಗಿ ಇರಬಹುದಾಗಿತ್ತು. ಆದರೆ ಅವರ ಶಿವಮನಸ್ಸು ಜಗದ್ಗುರುವಿನ ಬಾಹ್ಯ ವೈಭವಕ್ಕೆ ಮಾರುಹೋಗಲಿಲ್ಲ. ಜಗದ್ಗುರುತ್ವದ ಅಂತರಂಗದ ಸಾಧನೆಯೆಡೆಗೆ ಅದು ಹೆಚ್ಚಾಗಿ ಒಲಿಯಿತು. ತಮ್ಮ ಬಯಕೆಯನ್ನು ಒಂದು ದಿನ ತಮ್ಮ ಗುರುಗಳಾದ ಜಗದ್ಗುರು ಅನ್ನದಾನಸ್ವಾಮಿಗಳೆದುರು ಇರಿಸಿ; ಅಪ್ಪಣೆ ಕೇಳಿದರು. ಆಗ ಹಿರಿಯ ಜಗದ್ಗುರುಗಳು ಅತ್ಯಂತ ಆನಂದದಿಂದ ಆ ಬಯಕೆಯನ್ನು ಒಪ್ಪಿಕೊಂಡು ಅನುಗ್ರಹಿಸಿದರು. ಈ ಹೊತ್ತಿನಲ್ಲಿ ಚಂದ್ರಶೇಖರದೇವರು ಶ್ರೀಮಠದಲ್ಲಿ ಮೂಲೆಗುಂಪಾಗಿದ್ದ ತಾಡೋಲೆಯ ಅನ್ನದಾನೀಶ್ವರ ಚರಿತ್ರೆಯನ್ನು ಪರಿಷ್ಕರಿಸುತ್ತಿದ್ದರು. ಅದನ್ನು ಪೂರ್ಣಗೊಳಿಸಿ; ಸನ್ನಿಧಿಗೆ ಅರ್ಪಿಸಿ ಕಾಶಿ ಪಯಣಕ್ಕೆ ಅಣಿಯಾದರು. ಕ್ರಿ.ಶ. ೧೪-೧೧-೧೯೬೭ರಲ್ಲಿ ಚಂದ್ರಶೇಖರರು ವಿಶ್ವೇಶ್ವರನ ಸಾನ್ನಿಧ್ಯವಾದ ಕಾಶಿಗೆ ತೆರಳಿದರು.

ಒಟ್ಟು ಮೂರುವರೆ ವರ್ಷಗಳ ಕಾಶಿಯ ವಾಸ್ತವ್ಯದಲ್ಲಿ ಚಂದ್ರಶೇಖರದೇವರು ಮೂವತ್ತು ವರ್ಷಗಳಲ್ಲಿಯೂ ಸಾಧಿಸದ ಮಹಾಜ್ಞಾನವನ್ನು ಸಂಪಾದಿಸಿಕೊಂಡು "ನಿರಂಜನ ಜಂಗಮ ಪುಂಗವ"ರೆನಿಸಿದರು. ಬನಾರಸಿನಲ್ಲಿ ಅವರು ವಾಸವಾಗಿದ್ದ ಕೋಣೆ ಸರಸ್ವತಿಯ ಸದನವೇ ಆಗಿತ್ತು. ಎಲ್ಲಿ ನೋಡಿದಲ್ಲಿ ಪೆಟ್ಟಿಗೆಗಳಲ್ಲಿ ತುಂಬಿ ಓರಣ ವಾಗಿರಿಸಿದ ಅಮೂಲ್ಯವಾದ ಗ್ರಂಥಗಳು, ಪರಸ್ಥಳದ ಪರಿಸರದಲ್ಲಿಯೂ ಅವರು ತಮ್ಮ ಧಾರ್ಮಿಕ ಆಚರಣೆಗೆ ಸ್ವಲ್ಪವೂ ವ್ಯತ್ಯಯ ತಂದುಕೊಂಡವರಲ್ಲ. ಅಂತಹ ಬೃಹತ್

ಪಟ್ಟಣದಲ್ಲೂ ಬಿಲ್ವಪತ್ರಿಗಳನ್ನು ಹುಡುಕಿ ತಂದು, ಲಿಂಗಾರ್ಚನೆ ಮಾಡುತ್ತಿದ್ದರು. ಸ್ವಯಂ ಪಾಕು ಮಾಡಿಕೊಂಡು ಪ್ರಸಾದ ಪಡೆಯುತ್ತಿದ್ದರು.

ಜುಲೈ ೧೦ ೧೯೬೩ ರಂದು ಚಂದ್ರಶೇಖರದೇವರು ಬನಾರಸ್ ಹಿಂದೂ ವಿಶ್ವ ವಿದ್ಯಾಲಯವನ್ನು ಪ್ರವೇಶಗೈದರು. ಅಲ್ಲಿ ಅಂದು ಪ್ರಕಾಂಡ ಪಂಡಿತರೆನಿಸಿದ್ದ ಪಂ. ರಾಮಚಂದ್ರಶಾಸ್ತ್ರಿ, ಪಂ. ಮೂಲ ಶಂಕರವ್ಯಾಸರಂತಹ ಪ್ರಾಚಾರ್ಯ-ಪ್ರಾಧ್ಯಾಪಕರು ಗಳ ಸಾನ್ನಿಧ್ಯದಲ್ಲಿ ಸಂಸ್ಕೃತ ಭಾಷೆಯಲ್ಲಿ "ವೇದಾಂತಶಾಸ್ತ್ರಿ" ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಮುಗಿಸಿದರು. ಪಂ. ದೀನಾನಾಥ ಝಾ, ಪಂ. ರತಿನಾಥ ಝಾ ಮುಂತಾದ ವಿದ್ವಾಂಸರ ಕಣ್ಣರಿಕೆಯಲ್ಲಿ ಅಲಹಾಬಾದ ವಿಶ್ವವಿದ್ಯಾಲಯದಿಂದ ಹಿಂದಿ ಭಾಷೆಯಲ್ಲಿ ಅಧ್ಯಯನ ಕೈಗೊಂಡು "ಸಾಹಿತ್ಯ ವಿಶಾರದ", "ಸಾಹಿತ್ಯರತ್ನ" ಪದವಿಗಳನ್ನು ಪಡೆದು ಕೊಂಡರು. ಕಾಶೀ ನಾಗರೀ ಪ್ರಚಾರಿಣಿ ಸಭೆಯವರು ಚಂದ್ರಶೇಖರ ಪ್ರತಿಭೆ–ಪಾಂಡಿತ್ಯ ಗಳನ್ನು ಗುರುತಿಸಿ, ವಿದ್ಯಾರ್ಥಿವೇತನ ನೀಡಿ ಗೌರವಿಸಿದರು.

ಬಿಡುವಿಲ್ಲದ ಅಧ್ಯಯನದಲ್ಲೂ ಎಡೆಮಾಡಿಕೊಂಡು ಚಂದ್ರಶೇಖರದೇವರು ಬನಾರಸ ಮತ್ತು ಅದರ ಸುತ್ತಲಿನ ಸ್ಥಳಗಳಲ್ಲಿ ಹಲವಾರು ಧಾರ್ಮಿಕ–ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡರು; ಭಾಗವಹಿಸಿದವರು. ಉತ್ತರ ಭಾರತದ ಮಹಾ ಮಹಾ ವಿದ್ವಾಂಸರಿಂದ "ಚಿಂತನಶೀಲ", "ಧರ್ಮ ಜಿಜ್ಞಾಸು", "ಉತ್ತಮ ಲೇಖಕ", "ಆದರ್ಶಸಾಧಕ" ಎಂಬಿತ್ಯಾದಿ ಬಿರುದುಗಳನ್ನು ಪಡೆದುದು ಚಂದ್ರಶೇಖರ ದೇವರ ಪ್ರಕಾಂಡ ಪಾಂಡಿತ್ಯ ಪ್ರತಿಭೆಯ ಸಾಧಕ ಬದುಕಿಗೆ ಸಾಕ್ಷಿ ಎನಿಸುತ್ತಿದೆ. ಕ್ರಿ.ಶ. ೧೯೬೭ರಲ್ಲಿ ಮುಂಡರಗಿಗೆ ಬಂದಿಳಿದ ದೇವರು ಮಹಾಜ್ಞಾನದ ವಾರಧಿಯಾಗಿ ಕಂಡರು. ಅವರ ಹಿಂದೆಯೇ ಬನಾರಸ್ಸಿನಲ್ಲಿ ಸಂಗ್ರಹಿಸಿದ್ದ ಕ್ವಿಂಟಲ್ ಗಟ್ಟಲೇ ಪುಸ್ತಕ ರಾಶಿ ರೇಲ್ವೆ ಪಾರ್ಸಲ್ಲಿನಿಂದ ಬಂದು ಮುಂಡರಗಿ ತಲುಪಿದವು.

ಶೂನ್ಯ ಸಿಂಹಾಸನಾರೋಹಣ

ಮುಂಡರಗಿಗೆ ಬಂದ ಚಂದ್ರಶೇಖರದೇವರು ಶ್ರೀ ಮಠಕ್ಕೆ ಹೊಸ ಹೊಸ ದಿಗಂತ ಗಳನ್ನು ತೆರೆಯುವ ದಿಸೆಯಲ್ಲಿ ಯೋಜನೆಗಳನ್ನು ಹಾಕಿಕೊಂಡು, ಶ್ರೀಮಠದ ನೂತನ ಶಿಲ್ಪಿಯಾಗಿ ಕಾರ್ಯಪ್ರವೃತ್ತರಾದರು.

ದಿನಾಂಕ ೨೪–೪–೧೯೬೭ರ ದಿನ ಹಿರಿಯ ಗುರುಗಳಾದ ಜಗದ್ಗುರು ಅನ್ನದಾನೀಶ್ವರರು ಆಕಸ್ಮಿಕವಾಗಿ ಲಿಂಗದಲ್ಲಿ ಬೆರೆದರು. ಈವರೆಗೆ ಕೈಹಿಡಿದು ನಡೆಸುತ್ತಿದ್ದ ಮಹಾಗುರು ಶಕ್ತಿ ಒಮ್ಮಿಲೇ ಲಿಂಗರೂಪವಾದುದೊಂದು ಚಂದ್ರಶೇಖರದೇವರಿಗೆ ಸತ್ವ ಪರೀಕ್ಷೆಯ ಪ್ರಸಂಗವಾಗಿಯೇ ಕಂಡಿತು. ದಿನಾಂಕ ೧೨–೫–೧೯೬೭ ರಂದು ಚಿನ್ಮಯಾನು ಗ್ರಹ ಪಡೆದು ಚಂದ್ರಶೇಖರರು ದೇಶಿಕರಾದರು. ಮುಂದೆ ಶೂನ್ಯ ಸಿಂಹಾಸನಾರೋಹಣ ಮಾಡಿ ಜಗದ್ಗುರು ಪದವಿ ಹೊಂದಬೇಕು. ಕೆಲವು ಕುಹಕಿ–ಕುಟಿಲಿಗಳು ಆ ಮಾರ್ಗವನ್ನು ಅಷ್ಟು ಸರಳವಾಗಿಸಲಿಲ್ಲ. ಅಲ್ಲೆಲ್ಲ ತಮ್ಮ ಸ್ವಾರ್ಥದ ಮುಳ್ಳುಗಳನ್ನು ತಂದು ಹರವಿ

ದರು ಧೃತಿಗೆಡದ ನಿರಂಜನ ಜಂಗಮ ಚಂದ್ರಶೇಖರ ದೇಶಿಕರು ಒಂದುದೆಲ್ಲವನ್ನು ನುಂಗಿಕೊಂಡು, ಸಮತೆಯಿಂದ, ಸಹನೆಯಿಂದ ತಮ್ಮ ಅಚಲ ಗುರುತ್ವದ ಹೆಜ್ಜೆಯನ್ನಿರಿಸಿ ನಡೆದರು. ಆ ನಡೆಯ ಎದುರು ಕೆಲವು ಕಾಲದಲ್ಲಿಯೇ ದುಷ್ಟಶಕ್ತಿಗಳ ಕುತಂತ್ರದ ಕಾರ್ಮೋಡ ಕರಗುವಂತಾಯಿತು. ಆಗಿನ ಕಾಲವನ್ನು ಚಂದ್ರಶೇಖರ ದೇಶಿಕರು ಅನುಷ್ಠಾನ, ಪ್ರಸಾದ ನಿಲಯಗಳ ಸ್ಥಾಪನೆ; ಮಠದ ಶ್ರೇಯೋಭಿವೃದ್ಧಿ ಕಾರ್ಯಗಳಲ್ಲಿಯೇ ವಿನಿಯೋಗಿಸಿದರು. ಜಗದ್ಗುರು ಪೀಠದ ಪರೋಕ್ಷ ಚೇತನ ಜಗದ್ಗುರು ಶಕ್ತಿ ಚಂದ್ರಶೇಖರ ದೇಶಿಕರನ್ನು ತನಗೆಬೇಕೆಂದು ಅಪ್ಪಿಕೊಂಡು; ಒಪ್ಪಿಕೊಂಡ ಕಾಲವು ಎಂದೇ ಖಚಿತವಾಗಿತ್ತು. ಹೀಗಿದ್ದಾಗ ಯಾರು ತಾನೇ ಏನು ಮಾಡಿಯಾರು? ೩೧–೧-೧೯೬೮ರ ಶುಕ್ರವಾರದಂದು ಆ ಮಂಗಳದ ಮಹಾ ಗಳಿಗೆ ಒದಗಿಯೇ ಬಂದಿತು. ಸೊರಟೂರ ಅಜ್ಜನ ಪುಣ್ಯಾರಾಧನೆಯ ಶುಭಗಳಿಗೆಯಲ್ಲಿ ಲಿಂಗನಾಯಕನ ಹಳ್ಳಿಯ ಪೂಜ್ಯ ಶ್ರೀ ಚನ್ನವೀರ ಮಹಾಸ್ವಾಮಿಗಳವರ ನೇತೃತ್ವದಲ್ಲಿ ನಿರಾಭಾರಿ ಚರ ಪಟ್ಟಾಭಿಷೇಕವು ಬಹು ವೈಭವದಿಂದ ನೆರವೇರಿತು. ಶ್ರೀ ಚಂದ್ರಶೇಖರ ದೇಶಿಕರು ಶೂನ್ಯ ಸಿಂಹಾಸನಾರೋಹಣಗೈದು ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳಾದರು. ಇಂದಿಗೆ ಆ ಮಂಗಳದ ಗಳಿಗಿಗೆ ಇಪ್ಪತ್ತೈದು ವರ್ಷಗಳು ತುಂಬುತ್ತಲಿವೆ.

ಸಮಾರೋಪ

ಐದು ದಶಕಗಳಾಚೆ ಶಿವಸಿರಿಯಂತೆ ಜನ್ಮಿಸಿದ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ ಇಂದಿನ ಒಟ್ಟು ಬದುಕಿನಲ್ಲಿ ಅಂದಿನ ಶಿವಸಿರಿಯ ಮೊಳಕೆ ಹೆಮ್ಮರವಾಗಿ ಬೆಳೆದು ನಿಂತು ಸಮಾಜದ ಸಕಲರಿಗೆ ಅಮೃತದ ಶಿವಫಲಗಳನ್ನು ನೀಡುತ್ತಲಿದೆ. ಶೂನ್ಯ ಸಿಂಹಾಸನಾರೋಹಣ ಗೈದು ಇಪ್ಪತ್ತೈದು ಸಂವತ್ಸರಗಳನ್ನು ಪೂರೈಸುತ್ತಲಿರುವ ಜಗದ್ಗುರುಗಳ ಈ ರಜತಮಹೋತ್ಸವದ ಆಚರಣೆಯು ಕೇವಲ ಆಚರಣೆಗಾಗಿ ಮಾಡುವ ಆಚರಣೆಯಾಗಿಲ್ಲ. ಜಗದ್ಗುರುಗಳವರು ತಮ್ಮ ಶ್ರೀಮಠವನ್ನು ಧಾರ್ಮಿಕವಾಗಿ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕವಾಗಿ ಬೆಳೆಯಿಸಿದ ಮಹಾಸಾಧನೆಗೆ ಸಮಾಜದ ಭಕ್ತ ಜನ ಬಂಧುಗಳು ಭಕ್ತಿಹೃದಯದಿಂದ ಸಲ್ಲಿಸುವ ಮಾನ–ಸನ್ಮಾನವಾಗಿದೆ. ನಾಡಿನ ಜನತೆಗೊಂದು ಶುಭೋದಯ ಪ್ರಸಂಗವಿದು. ಈ ಶಿವಸಂದರ್ಭದಲ್ಲಿ ನಾವು–ನೀವುಗಳು ಭಾಗಿಗಳಾಗಿ, ಜಗದ್ಗುರುಗಳ ಶಿವಸನ್ನಿಧಿಗೆ ಶರಣು ಸಮರ್ಪಣೆಗೈದು ಪುನೀತರಾಗೋಣ; ಕೃತಕೃತ್ಯರಾಗೋಣ.

ಮೃಡಗಿರಿಯ ಮಹಾಚೇತನ

—ಡಾ॥ ಚ. ಮ. ಚುರ್ಚಿಹಾಳಮಠ, ಮುಂಡರಗಿ

ವರುಷ ಐವತ್ತೊಂದು ತುಂಬುತ್ತ ಬರಲು
ಪರುಷಮಯ ದೈವೀಜೀವನವ ತಾವು ಪಡೆದಿರಲು
ಚಿಂತನ ಚೇತನ ತಾನಾಗಿ, ಭಕ್ತರ ಬದುಕಿಗೆ ಬೆಳಕಾಗಿರಲು
ತಮ್ಮಡಿಗಳಿಗೆ ಪೊಡಮಡುವೆ ಮೃಡಗಿರಿ ಅನ್ನದಾನಿಯೇ ಕೃಪೆಯಾಗು

—ಸಿ. ಸಿ. ಪ್ರಭುಗೌಡರ

ವಿಶ್ವಧರ್ಮವೆನಿಸಿದ ಪ್ರಾಚೀನ ವೀರಶೈವ ಧರ್ಮದ ಮೂಲಭೂತ ತತ್ತ್ವಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳಿಂದಲೇ ಮಾನವ ಮೋಕ್ಷಕಾಣಲು ಸುಲಭ ಮಾರ್ಗ ಎಂಬುದನ್ನು ಅರಿತು, ಅನುಸರಿಸಿ ಮಹಾತ್ಮರಾದ ಜಗಜ್ಯೋತಿ ಬಸವಣ್ಣನವರ ಸೋದರಳಿಯಂದಿರೂ ಷಟ್‌ಸ್ಥಲ ಚಕ್ರವರ್ತಿ, ಪೂಜ್ಯ ಚನ್ನಬಸವಣ್ಣನವರ ಕೃಪಾಶೀರ್ವಾದದಿಂದ ಸ್ಥಾಪಿತಗೊಂಡದ್ದು ಮೃಡಗಿರಿಯ ಅನ್ನದಾನಿಯ ಪೀಠ, ಅನೇಕ ಕಾಲ ಕಾಲನ ಗರ್ಭದಲ್ಲಿ ಅಂತರ್ಯಾಮಿಯಾಗಿ ಎಲೆಯ ಮರೆಯ ಕಾಯಿಯಂತೆ ಧರ್ಮೋದ್ಧಾರ ಕಾರ್ಯಗೈದು ಮುಂದೆ ಹತ್ತನೇ ಪೀಠಾಧಿಪತಿಗಳಾದ ಇಂದಿನ ಸನ್ನಿಧಿಯವರು ಜನಿಸಿದಾಗಲೇ ಮಹಾಲಿಂಗರಾಗಿ, ಸಿದ್ಧಿಪಡೆಯಲು ಚಂದ್ರಶೇಖರರೆನಿಸಿ, ಈ ಪೀಠಕ್ಕೆ ಅನ್ನದಾನಿಯಾಗಿ ಬರುವಲ್ಲಿ ಪೂಜ್ಯ ಹಾನಗಲ್ಲ ಶ್ರೀ ಸದಾಶಿವ ಮಹಾಸ್ವಾಮಿಗಳ ತುಂಬುಹೃದಯದ ಪರಿಪಕ್ವ ಸೂಚನೆ ಹಾಗೂ ನವಮ ಪೀಠಾಧೀಶರಾದ ವೆಂಕಟಾಪುರ ಶ್ರೀಗಳು ಆನಂದದಿಂದ ಎಲ್ಲ ಭಕ್ತರನ್ನು ಬರಮಾಡಿಕೊಂಡು ಈ ದೇವರೇ ಈ ಪೀಠಕ್ಕೆ ಉತ್ತರಾಧಿಕಾರಿಗಳಾಗಬೇಕೆಂದು ಅಪ್ಪಣೆ ಕೊಡಿಸಿದಾಗ ಇದ್ದವರಲ್ಲಿ ನಾನೂ ಒಬ್ಬ ಅದನ್ನು ಪಾಲಿಸುವಲ್ಲಿ ಅನೇಕ ಎಡರು ತೊಡರುಗಳು ಬಂದರೂ ಧೃತಿಗೆಡದೆ ೩೧-೧-೪೯ಕ್ಕೆ ಒಮ್ಮತದಿಂದ ಪೀಠಾರೋಹಣ ನೆರವೇರಿದ್ದು ನಮ್ಮೆಲ್ಲರಿಗೆ ಸಂತಸ ತಂದಿತು. ಅಗ್ನಿಪರೀಕ್ಷೆಯಲ್ಲಿ ಪಾಸಾದವರು ಪೂಜ್ಯರು ಮಾತ್ರ.

ಅಂದಿನಿಂದ ಇಂದಿನವರೆಗೆ ಈ ಭಾಗದ ಸರ್ವತೋಮುಖ ಅಭಿವೃದ್ಧಿಗಾಗಿ ಧಾರ್ಮಿಕ, ಸಾಹಿತ್ಯಿಕ, ಅಭಿಯಾಂತ್ರಿಕ, ವೈಜ್ಞಾನಿಕ, ವ್ಯಾವಹಾರಿಕ, ಗಣಾಚಾರಿಕ ಈ ಷಟ್‌ಸೂತ್ರಗಳನ್ನು ಕರಗತಮಾಡಿಕೊಂಡು ಒಂದು ಪರಿಪೂರ್ಣ ಶಕ್ತಿಯಾಗಿದ್ದಾರೆ. ಬರಗಾಲದಿಂದ ಜರ್ಜರಿತವಾಗಿದ್ದರೂ ಈ ಮೃಡಗಿರಿ ನಾಡಿನಲ್ಲಿ ಸಮಾಜಸೇವಾಸಕ್ತರೂ ವಿದ್ಯಾಭಿಮಾನಿಗಳೂ ಆದ ಯಜಮಾನ ವೀರಭದ್ರಪ್ಪನವರು ಕೊಪ್ಪಳ ಇವರು ಹಿಂದಿನ

ಪೂಜ್ಯ ಜಗದ್ಗುರುಗಳ ಆಶೀರ್ವಾದದಿಂದ ಸ್ಥಾಪಿಸಿ ಬೆಳೆಸಿದ ವಿದ್ಯಾದಾನ, ಅನ್ನದಾನ ಸಂಸ್ಥೆಗಳನ್ನು ಇಂದಿನ ಸನ್ನಿಧಿಯವರು ಕೈಗೆತ್ತಿಕೊಂಡಮೇಲೆ ಅವುಗಳು ಹೆಮ್ಮರಗಳಾಗಿ ನಾಡಿನ ನಾನಾ ಭಾಗಗಳಲ್ಲಿ ಫಲಕೊಡುವಂತೆ ಮಾಡಿದ್ದಾರೆ; ವಿಶಾಲ ಮನೋಭಾವನೆಯು ಕೀರ್ತಿ ಇವರದಾಗಿವೆ. ಇವರ ಈ ಕಾರ್ಯದಲ್ಲಿ ಭಕ್ತರ ಅಭಿಮಾನ ಭಕ್ತಿ ಶ್ರದ್ಧೆಗಳು ರೂಪುಗೊಂಡು ದಾನ–ಸೇವೆಗಳ ಮೂಲಕ ಹೊರಹೊಮ್ಮಿದ್ದನ್ನು ಮರೆಯಲಾದೀತೆ? ಅಂಥವರಲ್ಲಿ ಮುಂಡರಗಿಯ ಮಹಾಬಳೇಶ್ವರಪ್ಪ ಡಂಬಳ, ಯಜಮಾನ ಕಲ್ಲಪ್ಪನವರು ಬೆಲ್ಲದ, ಹಿರೇವಡ್ಡಟ್ಟಿಯ ಕುರುತ್ತೆಪ್ಪ ನಂದಿಕೋಲ ಹಾಗೂ ಹುಬ್ಬಳ್ಳಿ ಶಿವಪ್ಪನವರು ಜಿಗಳೂರ ಇವರು ಅಗ್ರಗಣ್ಯರೆನ್ನಬಹುದು. ಈ ಕಾರ್ಯದಲ್ಲಿ ಸೇವಾಸಕ್ತರಾದ ಶ್ರೀಮಂತ ವಾಸಪ್ಪನವರು ಇಲ್ಲೂರ, ಶ್ರೀಮಂತ ಶಿವಪ್ಪನವರು ಭೂಮರಡ್ಡಿ ಶ್ರೀ ವೀರಭದ್ರಪ್ಪನವರು ಲಿಂಬಿಕಾಯಿ, ಶ್ರೀ ರಾಮಚಂದ್ರಪ್ಪನವರು ಹೆಗಡಾಳ, ಶ್ರೀ ಮುದುಕನಗೌಡ್ರು, ಪಾಟೀಲ, ಶ್ರೀ ಅಡಿವೆಯ್ಯ ಹಮ್ಮಿಗೀಮಠ, ಅಂದಾನಪ್ಪ ತ್ಯಾಮಾನವರ ಮುಂತಾದವರು ನನ್ನೊಂದಿಗೆ ಇದ್ದರೆಂಬ ಹೆಮ್ಮೆ. ಇವರ ಸೇವೆಯೂ ಅಮೋಘ.

ದಶಮ ಪೀಠಾಧೀಶರಾದ ಪೂಜ್ಯರು, ಅಚಲವಾದ ತಪಸ್ಸು, ಪ್ರಯತ್ನ, ಅಧ್ಯಯನ ಶೀಲತೆ, ಧರ್ಮರಕ್ಷಣೆ, ಸಾಹಿತ್ಯರಚನೆ, ವಿದ್ಯಾದಾನಗಳ ಮೂಲಕ ಮಾಡುವ ಕಾರ್ಯದಲ್ಲಿ ಧೃತಿಗೆಡದೆ ಹಿಡಿದ ಕಾರ್ಯಗಳನ್ನು ಬಿಡದೆ ತಮ್ಮ ಅಮೋಘ ವ್ಯಕ್ತಿತ್ವದ ಬೆಳಕನ್ನು ನಮ್ಮ ಬದುಕಿಗಾಗಿ ಬೀರುತ್ತಿದ್ದಾರೆ ಮತ್ತು ವಿದ್ವತ್‌ಪೂರ್ಣ ಸಂಶೋಧನಾತ್ಮಕ ಸಾಹಿತ್ಯದ ಮೂಲಕ ಅಸ್ಥಿರತೆಯಲ್ಲಿರುವ ವೀರಶೈವ ಸಾಹಿತ್ಯಕ್ಕೆ ವೇದ, ಉಪನಿಷತ್, ಆಗಮ ಆಧಾರಿತ ಸೈದ್ಧಾಂತಿಕ ತಳಹದಿಯ ಮೇಲೆ ವಿಶೇಷ ಕೊಡುಗೆಯನ್ನೀಯುತಿದ್ದಾರೆ. ವೀರಶೈವ ಪ್ರಾಚೀನತೆಯನ್ನು ಪ್ರತಿಪಾದಿಸಿದ್ದಾರೆ. ಮಹಾಸ್ವಾಮಿಗಳಲ್ಲಿ ರುದ್ರ-ಭದ್ರರ ಹೆಸರುಗಳನ್ನು ಸ್ಥಿರಪಡಿಸಿ ನೈಷ್ಠಿಕ, ಅತ್ಯಾಶ್ರಮೀ, ಮಹಾವ್ರತೀ ಮೊದಲಾದವುಗಳು ವೀರಶೈವದ ಪರ್ಯಾಯ ಪದಗಳೆಂದು ಹೇಳುವ ಅಧಿಕಾರವಾಣಿಯಿದೆ. ರುದ್ರಾಭಿಷೇಕವು ವೀರಶೈವರಿಗೆ ವ್ಯತಿರಿಕ್ತವಲ್ಲ. ಅದು ಅನಾದಿಕಾಲದಿಂದ ಬಂದುದು, ಇದನ್ನು ಅವಶ್ಯ ವೆಂದು ಪ್ರತಿಪಾದಿಸುವಲ್ಲಿ ಇವರೇ ಅಗ್ರಗಣ್ಯರೆಂದು ಹೇಳಲು ಮೃಡಗಿರಿ ನಾಡಿಗೊಂದು ಹೆಮ್ಮೆಯ ಮಾತು.

ಪೂಜ್ಯ ಸನ್ನಿಧಿಯವರು ೩೫ಕ್ಕೂ ಹೆಚ್ಚು ಧಾರ್ಮಿಕ ಗ್ರಂಥಗಳನ್ನು ಸ್ವತಃ ರಚಿಸಿ ೧೦೦ರಷ್ಟು ಗ್ರಂಥಗಳನ್ನು ಪ್ರಕಟಿಸಿ ವಿಶ್ವವಿದ್ಯಾಲಯವೆನಿಸಿದ್ದಾರೆ. ಶರಣರ ಬಗೆಗೆ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸಿ ಖ್ಯಾತಿಪಡೆದಿದ್ದಾರೆ.

ಜನತೆಯ ಅನುಕೂಲತೆಗಾಗಿ ಸಿಂಗಟಾಲೂರ ಶ್ರೀ ವೀರಭದ್ರೇಶ್ವರ ಕ್ಷೇತ್ರದಲ್ಲಿ ಅಪಾರ ಶ್ರಮವಹಿಸಿ (ಶಿವಾನುಭವ) ಕಲ್ಯಾಣಮಂಟಪವನ್ನು ನಿರ್ಮಿಸಿದರಲ್ಲದೆ; ತಮ್ಮ ಪೀಠಾರೋಹಣ ರಜತೋತ್ಸವದ ಸವಿನೆನಹಿಗಾಗಿ ಮುಂಡರಗಿಯಲ್ಲಿ ಬೃಹತ್

ಕಲ್ಯಾಣಮಂಟಪವನ್ನು ನಿರ್ಮಾಣ ಮಾಡಿದ್ದು, ಪೂಜ್ಯರ ಮಹತ್ ಸಾಧನೆಯನ್ನ ಬೇಕು. ರಜತಮಹೋತ್ಸವವನ್ನು ಎಲ್ಲರೂ ಆಚರಿಸಿದಂತೆ ಆಚರಿಸದೆ ೨೫ ಗ್ರಾಮಗಳಿಗಿಂತ ಹೆಚ್ಚಾಗಿ ಧರ್ಮಪ್ರಚಾರವನ್ನು ಜಾತ್ಯಾತೀತವಾಗಿ, ಧರ್ಮೋತ್ತೇಜಕ ಸಭೆಗಳ ಮೂಲಕ ಕೈಕೊಂಡರು. ದೀನದಲಿತರಿಗೆ ವಸ್ತ್ರದಾನಗೈದರು. ಆಯಾ ಧರ್ಮಸಭೆಗಳಲ್ಲಿ ವಿದ್ವತ್ಪೂರ್ಣ ಉಪನ್ಯಾಸಗಳನ್ನು ಧರ್ಮಾಚರಣೆಯ ತರಬೇತಿ ಶಿಕ್ಷಣವನ್ನು ಪ್ರಾತ್ಯಕ್ಷಿಕೆಯಾಗಿ ನೀಡಿದ್ದನ್ನು ನೋಡಿದರೆ ಪೂಜ್ಯರು '**ಚಲಿಸುವ ಅನುಭವಮಂಟಪ**'ವೆಂದೇ ದೃಢವಾಗಿ ಹೇಳಬಹುದು.

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಲು ಅಡ್ಡಿಯಿಲ್ಲ. ಅದೊಂದು ಹೆಮ್ಮೆ. ಮೃಡಗಿರಿಯ ಶ್ರೀ ಜಗದ್ಗುರು ಅನ್ನದಾನಿಯ ಪೀಠ ಮೊದಲಿನಿಂದಲೂ ಸಾಮರಸ್ಯದ ಶ್ರೀಮಂತಪೀಠ, ಇಲ್ಲಿ ಗುರು-ವಿರಕ್ತರೆಂಬ ತಾರತಮ್ಯ ಸುಳಿಯದು. ಜಾತಿ ಮತ ಪಂಥಗಳ ಭೇದ ಭಾವವರಿಯದು. ಅನುಭಾವದಿಂದ ನಡೆದ ಅನೇಕ ಘಟನೆಗಳನ್ನು ಉದಾಹರಿಸಬಹುದು.

೧) ಹಾರೋಗೇರಿಯ ನನ್ನ ಆತ್ಮೀಯ ಸ್ನೇಹಿತರೂ, ಸದ್ಭಕ್ತರೂ ಆದ ಗಡ್ಡಪ್ಪ ಜವಿ ಇವರು ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯರನ್ನು ತಮ್ಮ ಮನೆಗೆ ಬರಮಾಡಿಕೊಂಡಾಗ ನಾನೂ ಅವರ ದರ್ಶನಕ್ಕೆ ಹೋಗಿದ್ದೆ. ಶ್ರೀಶೈಲಸನ್ನಿಧಿಯು ನನ್ನೆದುರಿಗೆ-'ನಾನು ಮುಂಡರಗಿ ಅನ್ನದಾನ ಮಹಾಸ್ವಾಮಿಗಳನ್ನು (ವೆಂಕಟಾಪೂರ ಅಜ್ಜಾವರು) ಕಾಣಬೇಕೆನ್ನುವ ಇಚ್ಛೆ' ಎಂದರು. ಆದನ್ನೇ ನಾನು ಮಹಾಸ್ವಾಮಿಗಳಿಗೆ ತಿಳಿಸಿದೆ. ಎರಡು ಮಾತಿಲ್ಲದೆ ನಿರಾಡಂಬರ ವ್ಯಕ್ತಿಗಳಾದ ೯ನೇ ಶ್ರೀಗಳು-'೩ ಘಂಟೆಗೆ ಹೊರಡುವೆ ಬಾ' ಎಂದರು. ಅಪ್ಪಣೆಯಂತೆ ಜೊತೆ ಹೊರಟೆನು. ಅಲ್ಲಿ ಉಭಯ ಮಹಾಸ್ವಾಮಿಗಳ ಭೇದಭಾವವಿಲ್ಲದ ಆತ್ಮೀಯ ಮಿಲನ, ಯೋಗಕ್ಷೇಮಗಳ ಬಗ್ಗೆ ಅವರೀರ್ವರ ಪ್ರೀತಿವಾತ್ಸಲ್ಯ ಗೌರವಯುತ ಮಾತುಗಳು ನಮಗೆಲ್ಲ ವಿಸ್ಮಯಗೊಳಿಸಿದವು. ಆ ಆನಂದ ಹಾಗೂ ಅಭಿಮಾನ ಇನ್ನೂ ಹಸಿಯಾಗಿಯೇ ಉಳಿದಿದೆ.

೨) ಇಂದಿನ ಮಹಾಸನ್ನಿಧಿಯ ಹಾಗೂ ಶ್ರೀ ಜ.ರಂಭಾಪುರ ಪೀಠಾಧೀಶ್ವರ ಗಂಗಾಧರ ಶಿವಾಚಾರ್ಯರ ಸಂದರ್ಶನ ಗದುಗಿನ ಬೇಲೇರಿಯವರ ಮಿಲ್ಲಿನಲ್ಲಿ ಆಗಿತ್ತು.

೩) ರಂಭಾಪುರಿ ಸನ್ನಿಧಿಯವರು ಮುಕ್ತಿಮಂದಿರದಲ್ಲಿ ಲಿಂಗೈಕ್ಯರಾದಾಗ ಅಲ್ಲಿ ಧಾವಿಸಿದವರಲ್ಲಿ ಇವರೂ ಆಗಿದ್ದರು.

೪) ಗದುಗಿನ ಮುಧೋಳ ಲಿಂಗಪ್ಪನವರ ಮನೆಯಲ್ಲಿ ಕಾಶಿಯ ಜಗದ್ಗುರು ಗಳನ್ನು ಕಂಡು ಸಾಮಾಜಿಕವಾಗಿ ಚಿಂತನೆಗೈದುದು ಮಹತ್ವಪೂರ್ಣ ಘಟನೆ ಉಭಯತರೂ ಗೌರವದಿಂದ ಕಂಡ ಸಂಗತಿ ಭಕ್ತರಿಗೆ ಹೆಮ್ಮೆ ತಂದಿತು.

೫) ಗದುಗಿನ ಹುಬ್ಬಳ್ಳಿಯವರ ಮಠದಲ್ಲಿ ಅರ್ಥಾತ್ ಶ್ರೀಮಠದ ಶಾಖಾ ಮಠದಲ್ಲಿ ರೇಣುಕರ ಜಯಂತಿ ಆಚರಿಸಿದ್ದು.

೬) ಮುಂಡರಗಿ ಮಠದಲ್ಲಿ ಶ್ರಾವಣ ಮಾಸದ ನಿಮಿತ್ತ ೧೯೯೩ರಲ್ಲಿ ಜಗದ್ಗುರು ಶ್ರೀ ರೇಣುಕ ವಿಜಯ ಪುರಾಣವನ್ನು ಹಚ್ಚಿಸಿದ್ದು ಕರ್ನಾಟಕ ವಿರಕ್ತ ಮಠಗಳ ಇತಿಹಾಸದಲ್ಲಿಯೇ ಅಪೂರ್ವ ಸಂಗತಿ.

೭) ಇದೇ ೧೯೯೪ರಲ್ಲಿ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ ಮಠದಲ್ಲಿ ನಡೆಸಬೇಕಾದಾಗ ಅವಶ್ಯ ಆಗಬಹುದೆಂದು ಅಪ್ಪಣೆ ಮಾಡಿಸಿದ್ದು.

೮) ರಂಭಾಪುರಿ ಜಗದ್ಗುರುಗಳು ಶ್ರೀಮಠಕ್ಕೆ ಆಗಮಿಸಲು ಇಚ್ಛೆ ವ್ಯಕ್ತಪಡಿಸಿವರೆ ಗೌರವದಿಂದ ಬರಮಾಡಿಕೊಳ್ಳಲು ಸಿದ್ಧತೆ ಮಾಡಿದ್ದು. ಆ ಶ್ರೀಗಳು ಶ್ರೀಮಠಕ್ಕೆ ತಡವಾಗಿ ಆಗಮಿಸಿದ್ದು. ಇವೆಲ್ಲ ಸಂಗತಿಗಳು ಗುರುವಿರಕ್ತರ ಸಾಮರಸ್ಯಕ್ಕೆ ಕಾರಣವಾಗಿವೆ. ಸ್ವಾರ್ಥಿಗಳು, ತಮ್ಮತನವನ್ನು ಅರಿಯದ ದುರಭಿಮಾನಿಗಳು ಈ ಸಾಮರಸ್ಯಕ್ಕೆ ಕೊಡಲಿಪೆಟ್ಟು ಹಾಕುತ್ತಿದ್ದಾರೆ. ಇದು ನಿಲ್ಲಬೇಕು. ಪೀಠಾಧಿಪತಿಗಳೆಲ್ಲರೂ ಒಂದಾಗಬೇಕು. ಛಿದ್ರವಾಗಿ ಶಕ್ತಿ ಕಳೆದುಕೊಳ್ಳುತ್ತಿರುವ ವೀರಶೈವ ಧರ್ಮೋದ್ಧಾರವಾಗಲೆಂಬ ಮಹೋದ್ದೇಶ ಹೊಂದಿದ ಮೃಡಗಿರಿ ಅನ್ನದಾನೀಶ್ವರ ಪೀಠದ ಮಹಾಸ್ವಾಮಿಗಳ ರಜತೋತ್ಸವ ಸಂದರ್ಭದಲ್ಲಿ ಪರಮಪೂಜ್ಯರಿಗೆ ಇನ್ನೂ ಹೆಚ್ಚಿನ ಆಯುರಾರೋಗ್ಯ ಕ್ರಿಯಾಶಕ್ತಿಯನ್ನು ನೀಡಲೆಂದು ಜಗದೀಶನಲ್ಲಿ ಪ್ರಾರ್ಥಿಸುವೆ.

ಆರೈದ ಅನುಭಾವಿ

—ಮಹಾಂತೇಶ ಬೆಳವಟಗಿ

ಆರಿಸಿಕೋ ಆರಿಸಿಕೋ ಆರೈದು ಆರಿಸಿಕೋ
ಆರೈಯದೇ ಗುರಿ ದೊರಕುವದೆಂತು?
ಗುರಿ ಇಲ್ಲದೇ ಬಿಟ್ಟ ಬಾಣ ಸಾರ್ಥಕವೇ?
ದಾರಿಯು ನಡೆದಲ್ಲದೇ ಊರ ಸೇರುವದೆಂತು?
ಮಾರಹರ ಮೃಡಗಿರಿ ಅನ್ನದಾನಿಯ
ಮುಟ್ಟುವ ದಾರಿಯನಾರಿಸಿಕೋ.

'ಆರಯ್' ಎಂಬ ಪದ 'ವಿಚಾರಿಸು' 'ಹುಡುಕು' 'ನೆಲೆತಿಳಿ' 'ಯೋಚಿಸು, ಚಿಂತಿಸು' ವಿಮರ್ಶಿಸು, ಕಾಪಾಡು, ಎಂಬ ಅರ್ಥಗಳನ್ನು ನೀಡುತ್ತದೆ. ಜೀವನದಲ್ಲಿ ಯೋಚನೆ, ವಿಚಾರಗಳು ಬಹುಮುಖ್ಯ. 'ವಿಚಾರಗಳು ಜಗತ್ತನ್ನು ಆಳುತ್ತವೆ.' **Thoughts rule the world** ಎಂಬ ದಾರ್ಶನಿಕನ ಮಾತು ಸತ್ಯವಿದೆ. ಜೀವನದಲ್ಲಿ ವಿಚಾರಗಳೇ ಬಹುಮುಖ್ಯ. ಗುರಿ ಇಲ್ಲದೇ ಬಿಟ್ಟ ಬಾಣ ವ್ಯರ್ಥವಾಗುವಂತೆ. ಗುರಿ ಇರದವನ ಬಾಳು ಹಾಳು. ಮುಂದಿನ ಊರನ್ನು ಮುಟ್ಟಲು ದಾರಿ ನಡೆವುದು ಹೇಗೆ ಮುಖ್ಯವೋ ಹಾಗೇ ಗುರಿಯನ್ನು ಅರಿಯುವ ಸಾಧನೆಯೂ ಅವಶ್ಯವಾಗಿ ಬೇಕು.೧

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಮೆಟ್ಟಿ ನಿಂತು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಗಳೆಂಬ ಷಟ್‌ಸ್ಥಲಗಳನ್ನು ತನ್ನಲ್ಲಿ ಅಳವಡಿಸಿಕೊಂಡು, ಪಂಚ ಪರುಷಗಳಾದ ಹಸ್ತ ಪರುಷ, ದೃಷ್ಟಿಪರುಷ, ವಾಕ್ಪರುಷ, ಮನಃ ಪರುಷ, ಭಾವಪರುಷಗಳನ್ನು ಸಾಧಿಸಿದವನೇ ಆರೈದ ಅನುಭಾವಿ. "ಮನಸ್ಸು ಬಹಿರ್ಮುಖಗೊಂಡರೆ ಮಾಯಾಪ್ರಪಂಚ, ಮನಸ್ಸು ಅಂತರ್ ಮುಖಗೊಂಡಾರೆ ಅವಿರಳ ಜ್ಞಾನಿ" ಎಂದಿರುವರು ಚನ್ನಬಸವಣ್ಣನವರು. ಮನಸ್ಸು ಅಂತರ್ ಮುಖಗೊಂಡಾಗ ಹೃದಯದಲ್ಲಿ ಒಂದು ಅನಿರ್ವಚನೀಯವಾದ ಭಾವವು ಮೂಡುತ್ತದೆ, ಹೃದಯದ ಈ ಭಾವವನು ಹೊಂದುವವನೇ ಅನುಭಾವಿ. ಅನುಭಾವಿಯಲ್ಲಿಯ ಅನುಭಾವವೊಂದು 'ಅರುವಿನ ಪೀಠ'. ಅಂತರಂಗದಲ್ಲಿಯೇ ವಿಕಾಸಗೊಂಡಿರುವ ಕಣ್ಣಿಗೆ ಕಾಣದ ಮಹಾನುಭಾವ ಪೀಠವದು. ಅನುಭಾವಿಯ ಅನುಭಾವ ಕೇವಲ ಆತ್ಮಜ್ಞಾನದ ಮಟ್ಟಕ್ಕೆ ನಿಲ್ಲದೇ ಅದು ಲಿಂಗದಲ್ಲಿ ಲೀನಗೊಂಡು ತಾನೇ ಲಿಂಗವಾಗುವವರೆಗೂ ವ್ಯಾಪಿಸಿಕೊಂಡಿರುವದು.

ಅಂಗ, ಲಿಂಗದ ಹೊಲಬನರಿದವನೇ ಅನುಭಾವಿ. ಭಕ್ತಿ-ವಿರಕ್ತಿ ತಿಳಿಸಿಕೊಡುವ

ಜ್ಞಾನಿಯೇ ಅನುಭಾವಿ. ಕಾರಣ ಇಂಥ ಅನುಭಾವಿಯು ಅನುಭಾವದಿಂದ ಹುಟ್ಟಿತ್ತು ಲಿಂಗ, ಅನುಭಾವದಿಂದ ಹುಟ್ಟಿತ್ತು ಜಂಗಮ, ಅನುಭಾವದಿಂದ ಹುಟ್ಟಿತ್ತು ಪ್ರಸಾದ ಎಂದು ಅಲ್ಲಮಪ್ರಭುಗಳು ತಿಳಿಸುತ್ತಾರೆ.

ವಚನ ರಚನೆಯ ಅನುಭಾವವ ಬಲ್ಲವನು ಅನುಭಾವಿ, ವಚನವೆಂದರೆ ಆತ್ಮ ತೃಪ್ತಿಯನರಿಯುವದು. ರಚನೆಯೆಂದರೆ ಸ್ಥಾವರ ಜಂಗಮದಲ್ಲಿ ದಯವಾಗಿರುವದು. ಅನುಭಾವವೆಂದರೆ ಅರಿಷಡ್‌ವರ್ಗಗಳ ಇಚ್ಛೆಗೆ ಒಳಗಾಗದಿರುವದು ಎಂದು ಸಿದ್ಧರಾಮ ತಿಳಿಸುತ್ತಾನೆ. "ವೇದಶಾಸ್ತ್ರ ಆಗಮಗಳನು ಬಲ್ಲೆನೆಂದು ನುಡಿವಾತನು ಅನುಭಾವಿಯೇ? ಅಲ್ಲ. ಅವು ಬ್ರಹ್ಮನೆಂಜಲು ಸತ್ವ ರಜತಮಗಳನು ಒತ್ತಿ ನಿಂದಲ್ಲಿ ಸಹಜ ನೆಲೆಗೊಂಬುದು. ಇದನ್ನು ತಿಳಿಯದೇ ವಿದ್ಯಾಭ್ಯಾಸವ ಬಲ್ಲೆನೆಂದು ನುಡಿವಾತನು ಅನುಭಾವಿಯೇ? ಅಲ್ಲ ಆತನು ಎದುರಿಗಿರುವವರನ್ನು ನಂಬಿಸಿ ಹೊಟ್ಟೆ ಹೊರೆಯುವವನು ಎಂದು ಚನ್ನಬಸವಣ್ಣ ತಿಳಿಸಿದರೆ 'ಅನುಭಾವಿಗಳು' ನೀರ ಮೇಲಣ ತೆಪ್ಪದಂತೆ, ಸಮುದ್ರದೊಳಗಣ ಬೆಂಗುಂಡಿ ನಂತೆ ಇರಬಲ್ಲಡೆ ಅನುಭಾವಿಗಳೆಂಬೆನು ಎಂದು ತಿಳಿಸುವ ಅಮುಗೆ ರಾಯಮ್ಮ, ವಚನ ಗಳನ್ನು ಓದಿ ಕೇಳಿ ಕಂಡ ಠಾಪಿನಲ್ಲಿ ಬಂಡುಗಲೆವ ಜಗಭಂಡರನ್ನು ಆತ್ಮ ತೇಜಕ್ಕೆ ತಿರುಗುವ ವೇಷಧಾರಿಗಳನ್ನು ಕಂಡು ಅನುಭಾವಿಗಳೆಂದರೆ ಅಘೋರ ನರಕ ತಪ್ಪದು ಎಂದು ಅವಳು ಹೇಳುವಳು.೨ ಹೀಗೆ ಪಂಚಾಚಾರ, ಅಷ್ಟಾವರಣಗಳನ್ನು ಅರಿತು ಆಚರಿಸುವವನೇ ಆರೈದ ಅನುಭಾವಿ.

ಅರಿವು ಜ್ಞಾನದ ಬಲ, ಅರಿವು ಸಜ್ಜನಿಕೆಯ ಸಹವಾಸದ ಫಲ, ಅರಿವು ಬಾಹ್ಯದಲ್ಲಿ ಇಷ್ಟಲಿಂಗ, ಅಂತರಂಗದಲ್ಲಿ ಪ್ರಾಣಲಿಂಗ, ಅರಿವು ಭಾವದಲ್ಲಿ ಆತ್ಮಲಿಂಗ ಎಂದು ತಿಳಿಸುವ ಸಿದ್ಧರಾಮ, ಅರುಹು ಬೇಕು ಆಚರಣೆಯಲ್ಲಿ ಮರಹು ಬೇಕು ವಿಷಯಂಗಳಲಿ ಎಂದೂ ಹೇಳುವನು. ಅರಿವೆಂಬ ಗುರುವಿನಿಂದ ಇಷ್ಟಲಿಂಗ ಸಾಹಿತ್ಯ, ಅನುಭಾವವೆಂಬ ಲಿಂಗದಿಂದ ಪ್ರಾಣಲಿಂಗ ಸಾಹಿತ್ಯ, ಆನಂದವೆಂಬ ಜಂಗಮದಿಂದ ತೃಪ್ತಿಲಿಂಗ ಸಾಹಿತ್ಯ, ಅರಿವಿನಿಂದ ಅನುಭಾವ, ಅನುಭಾವದಿಂದ ಅರಿವು, ಆನಂದಕ್ಕೆ ಅರಿವೇ ಸಾಧನವೆಂದು ತಿಳಿಸುವ ಚನ್ನಬಸವಣ್ಣ ಅರಿವನ್ನು ಆಚರಣೆಗೆ ತರುವವನೇ ಆರೈದ ಅನುಭಾವಿ ಎಂದು ತಿಳಿಸುವರು.

ಈ ಎಲ್ಲ ತತ್ವಗಳ ಹಾಗೂ ಅನುಭಾವಿಗಳ ಸಂದೇಶವನ್ನು ಮೈಗೂಡಿಸಿಕೊಂಡು ವೀರಶೈವ ಧರ್ಮದ ಸಾರವೇ ಇಂದಿನ ಶ್ರೀ ಜಗದ್ಗುರು ಮಹಾಸನ್ನಿಧಿಯವರಾಗಿದ್ದಾರೆ. ಮಹಾತಪಸ್ವಿ, ಶಿವಯೋಗ ಸಾಧಕ, ನಿರಂಜನ ಜಂಗಮ ಶ್ರೇಷ್ಠರಾಗಿ ಜನೋದ್ಧಾರ ಸಾಧನೆಯಲ್ಲಿ ತೊಡಗಿರುವ ಪೂಜ್ಯ ಶ್ರೀಗಳ ಜೀವನ ಶಿವಮಯವಾಗಿದೆ. ಅವರ ಸಾನ್ನಿಧ್ಯವು ಶಿವಸಾನ್ನಿಧ್ಯಕ್ಕಿಂತಲೂ ಶ್ರೇಷ್ಠವಾಗಿದೆ. ನಿರಂಜನ ಜಂಗಮರಾಗಿ, ವಿರಕ್ತ ಬದುಕಿಗೊಂದು ಮಹಾವ್ಯಾಖ್ಯಾನವಾಗಿ ನಮ್ಮ ನಿಮ್ಮ ನಡುವೆ ಇಂದು ಒಟ್ಟು ಸಮಾಜದ ಉದ್ಧಾರಕ ಶಕ್ತಿಯಂತೆ, ಆಡ್ಡಾಡುವ ಆತ್ಮಶ್ರೀಯಾಗಿ ಇಂದಿನ ಪೂಜ್ಯರು ಬೆಳಗುತ್ತಿದ್ದಾರೆ.

ಕನ್ನಡ ವೀರಶೈವ ಸಾಹಿತ್ಯಕ್ಕೆ ಅನೇಕ ಕೃತಿಗಳನ್ನು ನೀಡಿ ಅದನ್ನು ಶ್ರೀಮಂತಗೊಳಿಸಿದ್ದಾರೆ. "ಆರೈದು ಭಾಗ-೧ ಭಾಗ-೨, ಭಾಗ-೩ ಹಾಗೂ ಭಾಗ-೪" ಎಂಬ ನಾಲ್ಕು ಕೃತಿಗಳ ಮೂಲಕ ನಡೆ ನುಡಿ ಒಂದಾದ ಆರೈದ ಅನುಭಾವಿಗಳ ಬಾಳ ಬಟ್ಟೆಯನ್ನು ಸಮಾಜಕ್ಕೆ ತೋರುವದರೊಂದಿಗೆ, ವೀರಶೈವ ಧರ್ಮದ ಒಳಹೊರವನ್ನು ತಮ್ಮ ಅನುಭಾವದ ಮೂಲಕ ತಿಳಿಸಿ ಆರೈದ ಅನುಭಾವಿಗಳಾಗಿದ್ದಾರೆ.

"ಆರೈದು ಭಾಗ-೧"ರಲ್ಲಿ ಹನ್ನೊಂದು ಮಹಾಪುರುಷ, ಶರಣ ಸಾಧಕರ ಜೀವನ ಚರಿತ್ರೆಯನ್ನು ಚಿತ್ರಿಸಿದ್ದಾರೆ. ಅವರಲ್ಲಿ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು, ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳು, ಹಾಲಕರೆ ಶ್ರೀ ಗುರು ಅನ್ನದಾನ ಮಹಾಸ್ವಾಮಿಗಳು. ಗಾನಯೋಗಿ ಪಂಚಾಕ್ಷರ ಗವಾಯಿಗಳು, ಜಂಗಮ ಭಕ್ತಿ ಸಂಪನ್ನ ನಿಡಸೋಸಿಯ ಶ್ರೀ ಜ. ನಿಜಲಿಂಗೇಶ್ವರ ಸ್ವಾಮಿಗಳು, ಹಾನಗಲ್ಲ ಶ್ರೀ ಸದಾಶಿವ ಮಹಾಸ್ವಾಮಿಗಳು, ಡಾ.ಜ.ಚ.ನಿ. ಧಾರವಾಡದ ಮಹಾಂತಪ್ಪಗಳು, ಶಿರ್ಶಿಯ ಶ್ರೀ ಗುರುಸಿದ್ಧ ಮಹಾಸ್ವಾಮಿಗಳು, ಗುಳೇದಗುಡ್ಡದ ಶ್ರೀ ನೀಲಕಂಠ ಮಹಾಸ್ವಾಮಿಗಳು ಹಾಗೂ ಇಳಕಲ್ಲಿನ ಶ್ರೀ ಮಹಾಂತ ಸ್ವಾಮಿಗಳ ಜೀವನ ದರ್ಶನಗಳಿವೆ.

ಶ್ರೀಕುಮಾರ ಮಹಾಸ್ವಾಮಿಗಳವರು ಯುಗಪುರುಷರು. "ಸಮಾಜ ಸಮಾಜ ಸಮಾಜ" ಎಂಬ ಮಂತ್ರವನ್ನು ಪಠಿಸಿ ಅನುಸಂಧಾನಗೈದವರು. ಅವರದೊಂದು ಅನನ್ಯ ಸಾಧಾರಣವಾದ ಬಾಳು, ಅತಿ ದೊಡ್ಡ ಬಾಳು, ಆ ಜನ್ಮವೂ ತಪ, ತತ್ವ, ಸೇವೆ, ಸಾಹಿತ್ಯ ಸಂಗ್ರಹ, ಸಂಸ್ಥೆಗಳ ಸ್ಥಾಪನೆ, ಪಾಠ ಪ್ರವಚನ ಮುಂತಾದ ವ್ರತಾಚಾರಗಳಲ್ಲಿಯೇ ಹೆಣಗಿ ಹೋದ ಹಿರಿಯ ಬಾಳು, ಹೆಗ್ಗುರಿಯ ಬಾಳು, ಅದನ್ನು ಅಳೆಯಲು ಅಳತೆಗೋಲಿಲ್ಲ ಎಂದು ಡಾ. ಜ.ಚ.ನಿ.ಯವರೇ ಪ್ರಶ್ನಿಸುತ್ತಾರೆ ಎಂದು ತಿಳಿಸುವ ಪೂಜ್ಯ ಶ್ರೀಗಳು, ತಾವು ಪಡೆದುಕೊಂಡ ಶಿವಯೋಗ ಸಿದ್ಧಿಯ ಬಲವನ್ನು ಧರ್ಮ ಪ್ರಸಾರದ ಮೂಲಕವಾಗಿ ಲೋಕೋದ್ಧಾರಕ್ಕಾಗಿ ಭಕ್ತೋದ್ಧಾರಕ್ಕಾಗಿ ಸವೆಸುತ್ತಿರುವರು. ಡಾ. ಜ.ಚ.ನಿ.ಯವರೇ ಪೂಜ್ಯ ಶ್ರೀಗಳ ಬದುಕನ್ನು ವಿಶ್ಲೇಷಿಸುತ್ತಾ "ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ಮಹಾ ಶಿವಾನುಭಾವಿಗಳು, ಶರಣ ವ್ಯಕ್ತಿತ್ವದ ನಿಜ ಸಿದ್ಧಿಯನ್ನು ಸಂಪಾದಿಸಿಕೊಂಡವರು. ಅವರೊಂದು ಅಡ್ಡಾಡುವ ಜ್ಞಾನನಿಧಿ, ಜಂಗಮ ತತ್ವದ ಸಾಕಾರಮೂರ್ತಿ, ಅವರ ಸುಳುಪಿನಲ್ಲಿ ಶಿವನ ಸಂಪರ್ಕ, ಅವರ ಹೊಳಹಿನಲ್ಲಿ ಶಿವದರ್ಶನವಿದೆ ಎಂದು ತಿಳಿಸುವರು.

ವೀರಶೈವ ಸಿದ್ಧಾಂತದಲ್ಲಿ ಜಂಗಮತತ್ವಕ್ಕೆ ಅತ್ಯುನ್ನತವಾದ ಸ್ಥಾನವಿದೆ. 'ಗುರುವಿನ ಗುರು ಜಂಗಮ' ಎಂದರು ಬಸವಾದಿ ಶರಣರು. ವೀರಶೈವರಿಗೆ ಪ್ರತ್ಯಕ್ಷ ಪರಶಿವನೇ ಜಂಗಮ. ಗುರು ಶಿಷ್ಯನ ಅಜ್ಞಾನಾಂಧಕಾರವನ್ನು ಕಳೆದು ಅರುಹಿನ ಕುರುಹೆನಿಸಿದ ಲಿಂಗವನ್ನು ಕರುಣಿಸುವನು. ಗುರು ಕರುಣಿಸಿದ ಲಿಂಗಪೂಜೆ ಜಂಗಮನ ಸತ್ಕೃಪೆಯಿಂದ

ಸಫಲಗೊಳ್ಳುವದು ಎಂದು ತಿಳಿಸುವ ಶ್ರೀಗಳು 'ಜಂಗಮ' ಶಬ್ದದ ಅರ್ಥವನ್ನೂ ವಿವರಿಸುತ್ತಾರೆ.

ಜನನ ಗಮನ-ಮರಣಗಳ ಮೀರಬಲ್ಲಾತನೇ ಜಂಗಮ
ವಸಂತ ಗಾಳಿಯಂತೆ ಭಕ್ತೋದ್ಧಾರ ಗೈಯುವನೇ ಜಂಗಮ
ಜ್ಞಾನಾನಂದ ಮೂರುತಿಯೇ ಜಂಗಮನೆಂದ
ನಮ್ಮ ಮೃಡಗಿರಿ ಅನ್ನದಾನೀಶ.

ಎಂದು ತಿಳಿಸಿ ಇಂಥಹ ಜಂಗಮ ಜ್ಯೋತಿಯೇ ಅಥಣಿಯ ಶ್ರೀ ಮುರುಘರಾಜೇಂದ್ರ ಶಿವಯೋಗಿಗಳಾಗಿದ್ದರು ಎಂದು ತಿಳಿಸುವಲ್ಲಿ ಜಂಗಮತತ್ವದ ತಿರುಳನ್ನೇ ಓದುಗರಿಗೆ ಉಣಬಡಿಸಿದ್ದಾರೆ. 'ಜ' ಎಂದರೆ ಜನನ ನಾಸ್ತಿಯಾಗಿ, 'ಗ' ಎಂದರೆ ಗಮನ ನಾಸ್ತಿಯಾಗಿ 'ಮ' ಎಂದರೆ ಮರಣ ನಾಸ್ತಿಯಾಗಿ ಇರುವವನೇ ಜಂಗಮ ಎಂದು ತಿಳಿಸಿ 'ಶಿವಯೋಗ'ದ ದರ್ಶನವನ್ನು ಶಿವಯೋಗ ಶಿಖಾಮಣಿಗಳಾದ ಶ್ರೀ ಸದಾಶಿವ ಸ್ವಾಮಿಗಳ ಜೀವನ ಚಿತ್ರಣದ ಮೂಲಕ ಮಾಡಿಸುತ್ತಾರೆ. ಶಿವಜ್ಞಾನ, ಶಿವಪೂಜೆ, ಶಿವವ್ರತ, ಶಿವಧ್ಯಾನ, ಶಿವಾಚಾರಗಳೆಂಬ ಐದಂಗಗಳು ಅವರಲ್ಲಿ ತುಂಬಿ ತುಳುಕುತ್ತಿದ್ದವು. "ಅರಿವಿಲ್ಲದವನಿಗೆ ಅರ್ಚನೆಯುಳವೆತಮು" ಎಂಬ ಶರಣವಾಣಿಯನ್ನು ಶ್ರೀ ಸದಾಶಿವ ಸ್ವಾಮಿಗಳು ಅರ್ಥೈಸಿ ಕೊಂಡಿದ್ದರು. ಅರಿವು ಆಚಾರಗಳ ಸಂಗಮವಾದ ಅವರದು ಸಹಜಾಚರಣೆ ಎಂದು ತಿಳಿಸಿ ಷಟ್‌ಸ್ಥಲ ತತ್ವವನ್ನೇ ಈ ಮೂಲಕ ಮಾಡಿಸುತ್ತಾರೆ.

ವೀರಶೈವ ಧರ್ಮದ ಮುಖ್ಯ ತತ್ವವೇ 'ಕಾಯಕ' ಈ ತತ್ವವನ್ನು ನಾದಯೋಗಿ ಪಂಡಿತ ಪಂಚಾಕ್ಷರ ಗವಾಯಿಗಳ ಮೂಲಕ ನೀಡಿದ್ದಾರೆ. ಮಾನವ ಜೀವನದ ಚರಮ ಪ್ರಯೋಜನವಾದ ಮೋಕ್ಷವನ್ನು, ಕೈವಲ್ಯವನ್ನು ಸಾಧಿಸುವದೇ ಪರಮ ಸಂಗೀತವು. ಇಂಥಹ ಸಂಗೀತದಿಂದ ಶಿವಯೋಗದ ಸಿದ್ಧಿಯನ್ನು ಪಂಡಿತ ಪಂಚಾಕ್ಷರ ಗವಾಯಿಗಳು ಸಾಧಿಸಿದ್ದರು. ಶ್ರಮವಿಲ್ಲದ ಸಹಾಯವನ್ನವರು ಸ್ವೀಕರಿಸುತ್ತಿರಲಿಲ್ಲ "ದುಡಿತವಿಲ್ಲದ ದುಡ್ಡು ಪಾಪಕ್ಕೆ ಸಮ" ಎಂಬ ಭಾವ ಅವರಲ್ಲಿ ಬೇರೂರಿತ್ತು. "ದುಡಿಮೆಯೇ ದೇಹದ ಚಲುವಿನ ಮೂಲ" ಎಂಬ ನುಡಿಯನ್ನು ಬೋಧಿಸಿ ಸಂಗೀತ ಸೇವೆಯ ಮೂಲಕ ಅಂಧಮಕ್ಕಳ ಬಾಳಿಗೆ ಜ್ಯೋತಿಯಾಗಿದ್ದ ಪಂಚಾಕ್ಷರ ಗವಾಯಿಗಳು ಅರೈದ ಅನುಭಾವಿಗಳು. ಕಾಯಕದ ಅರ್ಥವನ್ನು ಪೂಜ್ಯ ಶ್ರೀಗಳು ಹೀಗೆ ನೀಡುತ್ತಾರೆ.

ನಾನೆಂಬ ಬುದ್ಧಿಯಿಂ ಮಾಡುವ ಕಾರ್ಯ ಕರ್ಮವಾದರೆ
ನೀನೆಂಬ ಬುದ್ಧಿಯಿಂ ಮಾಡುವ ಕರ್ತವ್ಯ ಕಾಯಕವಯ್ಯಾ
ಮೃಡಗಿರಿ ಅನ್ನದಾನೀಶ —(ವಚನ ಸಂಪದ ೩೬೧)

ಈ ರೀತಿ ಕಾಯಕದಿಂದ ಲಿಂಗದರ್ಶನ, ಕಾಯಕದಿಂದ ಜಂಗಮದರ್ಶನ, ಕಾಯಕದಿಂದ ಪ್ರಸಾದ ಸಂಪತ್ತು, ಕಾಯಕದಿಂದಲೇ ಕೈಲಾಸ ಎಂಬ ಅಂಶವನ್ನು ಪೂಜ್ಯ ಶ್ರೀಗಳು ಇಲ್ಲಿ ವ್ಯಕ್ತ ಮಾಡಿದ್ದಾರೆ.

'ಹಳೇಧರ್ಮ ಸತ್ತಿಹುದು ಹೊಸ ಧರ್ಮ ಹುಟ್ಟಿಲ್ಲ' 'ಹಳೆ ಬೇರು ಹೊಸ ಚಿಗುರು ಆದುವೇ ಹೊಸ ಚೇತನ' ಎಂಬ ಡಿ.ವ್ಹಿ.ಜಿ.ಯವರ ವಾಣಿಯಂತೆ ಇಳಕಲ್ಲ ಮಹಾಂತ ಸ್ವಾಮಿಗಳು ಜಂಗಮನ ಜೋಳಿಗೆಗೆ 'ಮಹಾಂತ ಜೋಳಿಗೆ' ಎಂಬ ನಾಮವನ್ನಿಟ್ಟು ತನ್ಮೂಲಕ ಸಾಮಾಜಿಕ ಅವನತಿಯನ್ನು ತಡೆಗಟ್ಟಿ ಧರ್ಮಜಾಗೃತಿಯ ಕಾರ್ಯವನ್ನು ಕೈಕೊಂಡಿರುವದು ಶ್ಲಾಘನೀಯವಾಗಿದೆ ಎಂದು ತಿಳಿಸುವ ಪೂಜ್ಯ ಶ್ರೀಗಳು 'ಮಹಾತ್ಮರಂ ನನೆವುದೇ ಘನಮುಕ್ತಿಪದಂ' ಎಂಬಂತೆ ಅವರ ಸಂದೇಶ ಜನತೆಗೆ ದಾರಿದೀಪವಾಗಲಿ ಎಂದು ಹಾರೈಸಿದ್ದಾರೆ.

"ಆರೈದು ಭಾಗ ೨"ರಲ್ಲಿ ಶ್ರೀಗಳು ಆರೈದು ತಾತ್ವಿಕ, ವೈಚಾರಿಕ ಲೇಖನಗಳ ದರ್ಶನ ಮಾಡಿಸಿದ್ದಾರೆ. ವೀರಶೈವ ಧರ್ಮದ ಪ್ರಾಚೀನತೆಯಿಂದ ಹಿಡಿದು ಅದರಲ್ಲಿ ಬರುವ ಎಲ್ಲ ತತ್ವಗಳನ್ನೂ ಶ್ರೀಗಳು ದಾರ್ಶನಿಕರಾಗಿ, ಆರೈದ ಅನುಭಾವಿಯಾಗಿ ಇಲ್ಲಿ ವಿವರಿಸುತ್ತಾರೆ. ಮಾನವನಿಗೆ ಕೃಷಿ ಮಾಡಲು ಎರಡು ವಲಯುಗಳಿವೆ ಒಂದು ಲೌಕಿಕ ಕೃಷಿ ಹಾಗೂ ಇನ್ನೊಂದು ಆಧ್ಯಾತ್ಮಿಕ ಕೃಷಿ. ಜೀವನ ನಿರ್ವಹಣೆಯ ಪ್ರತಿಯೊಂದು ವೃತ್ತಿಗಳನ್ನು ಲೌಕಿಕ ಕೃಷಿಯೆಂದು ನಿರ್ದೇಶಿಸಿದರೆ, ಜೀವನ ನಿಃಶ್ರೇಯಸ್ ಸಿದ್ಧಿಯುನ್ನು ಸಾಧಿಸುವ ಸಾಧನೆಯನ್ನು ಆಧ್ಯಾತ್ಮಿಕ ಕೃಷಿ ಬೋಧಿಸುತ್ತದೆ.

ವೀರಶೈವ ಧರ್ಮವು ಆಧ್ಯಾತ್ಮಿಕ ಕೃಷಿಯನ್ನು ಬೋಧಿಸುವ ತತ್ವಸೂಚಕ ಧರ್ಮ ವಾಗಿದೆ. ಮಾನವರಲ್ಲಿಯ ಸಂಕುಚಿತ ಮನೋಭಾವನೆಯುನ್ನು ಹೋಗಲಾಡಿಸುವ ತಾತ್ವಿಕ ಸಿದ್ಧಾಂತ ಇದರಲ್ಲಿದೆ. ವೀರಶೈವರಿಗೆ ಇರುವ ಸಾಧನೆಯ ಮಾರ್ಗವೇ ಶಿವಯೋಗ ವಾಗಿದೆ. ಪೂಜ್ಯ ಶ್ರೀಗಳು ಇಲ್ಲಿ ಶಿವಯೋಗದ ಶ್ರೇಷ್ಠತೆಯನ್ನು ಹಾಗೂ ಅದನ್ನು ಸಾಧಿಸುವ ಪರಿಯನ್ನು ವಿವರಿಸುತ್ತಾರೆ. "ಶಿವಯೋಗದಲಿ ಶಿವಜ್ಞಾನ-ಶಿವಭಕ್ತಿ ಮೇಣ್ ಶಿವಧ್ಯಾನ ಶಿವವ್ರತಗಳೆಂಬೈದು ಅಂಗಗಳು ನೋಡಾ. ಶಿವಜ್ಞಾನದಿಂ ಶಿವಲಿಂಗದಲಿ ಶಿವಭಕ್ತಿ ಜನಿಸುವದು. ಶಿವಭಕ್ತಿಯಿಂ ಶಿವಧ್ಯನಮಾಡುತಿರೆ ಮಂತ್ರಮಯನಪ್ಪುವನು. ಸಕಲವನು ಶಿವನಿಗಾಗಿ ಮಾಳ್ಪುದೇ ಶಿವವ್ರತವು. ದೃಷ್ಟಿ ಮನ-ಭಾವಂಗಳನು ಲಿಂಗ ದಲ್ಲಿಟ್ಟು ಸಮರ್ಚಿಪುದೇ ಶಿವಾರ್ಚನೆಯು" ಎಂದು ತಿಳಿಸಿ ಇಂಥ ಶಿವಯೋಗಕ್ಕೆ ಗುರುಕೃಪೆ ಬೇಕು. ಇದು ಕಲಿಕೆಯಲ್ಲ, ಸ್ವಾನುಭಾವದ ಸ್ವಯಂ ಸಾಧನೆಯ ಸಿದ್ಧಿ ಎಂಬುದನ್ನು ಪೂಜ್ಯ ಶ್ರೀಗಳು ತಮ್ಮ ಸಾಧನೆ ಸಿದ್ಧಿಗಳ ಮೂಲಕ ವಿವರಿಸಿದ್ದಾರೆ. ಡಾ|| ಎಚ್. ತಿಪ್ಪೇರುದ್ರಸ್ವಾಮಿಯವರು ಪೂಜ್ಯರ ಶಿವಯೋಗದ ಬದುಕನ್ನು ನೀಡುತ್ತಾ "ಶ್ರೀ ಜ. ಅನ್ನದಾನೀಶ್ವರ ಮಹಾಸ್ವಾಮಿಗಳ ವ್ಯಕ್ತಿತ್ವವು ಬಹುಮುಖವಾದದ್ದು. ಧರ್ಮ, ಸಮಾಜ, ಸಂಸ್ಕೃತಿ, ಸಾಹಿತ್ಯಾದಿಗಳೇ ಆ ಮುಖಗಳು. ಯಾವ ಮುಖದ ದರ್ಶನ ಪಡೆದರೂ ಅಲ್ಲಿ ಶಿವದರ್ಶನ ಪಡೆದ ಶಿವಾನಂದವೇ ಉಂಟಾಗುತ್ತದೆ" ಎಂದು ತಿಳಿಸುತ್ತಾರೆ.

ಪೂಜ್ಯ ಶ್ರೀಗಳು ಇಲ್ಲಿ ವೀರಶೈವ ಧರ್ಮದ ಪ್ರಾಚೀನತೆಯ ಕುರಿತು ಖಚಿತವಾದ

ಅಭಿಪ್ರಾಯವನ್ನು ಪ್ರಮಾಣಗಳೊಂದಿಗೆ ನೀಡುತ್ತಾರೆ. "ವೀರಶೈವ ಮತ ಅನಾದಿ ಸಂಸಿದ್ಧ. ಅದರ ಉತ್ಪಾದಕ ಪರಶಿವನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ವೀರಶೈವರು ಆಪ್ತ ಪ್ರಮಾಣವೊಂದಿಗೆ ಅನುಭವ ಪ್ರಮಾಣವನ್ನೂ ಮುಖ್ಯವಾಗಿ ಮನ್ನಿಸುವದರಿಂದ ಅನುಭವಗಮ್ಯವಾದ ವೀರಶೈವ ಸನಾತತ್ವವನ್ನು, ಪರಶಿವನ ಉತ್ಪಾದಕತ್ವವನ್ನು ಸ್ವೀಕರಿಸುವುದೇ ಹೆಚ್ಚು ಸೂಕ್ತವೆನಿಸುತ್ತದೆ" ಎಂದು ತಿಳಿಸಿ ಇಂದು ಅನೇಕ ಪಂಡಿತರು, ಧರ್ಮಗುರುಗಳು ವೀರಶೈವ ಧರ್ಮದ ಸಂಸ್ಥಾಪಕರು ಯಾರು? ಎಂಬ ಪ್ರಶ್ನೆಯ ಗೊಂದಲಿನಲ್ಲಿ ಸಿಲುಕಿರುವಾಗ ಅವರಿಗೆ ಸರಿಯಾದ ಉತ್ತರವನ್ನಿಲ್ಲಿ ನೀಡಿದ್ದಾರೆ. ವೀರಶೈವ ಧರ್ಮವು ಕಾಯಕ ನಿಷ್ಠೆಯ ಮೇಲೆ ನಿಂತಿವೆ. ವೀರಶೈವ ಜನಾಂಗವಿಂದು ಕಾಯಕನಿಷ್ಠೆಯನ್ನರಿತು ಸತ್ವಶೀಲವಾದ ಯಾವುದೇ ಉದ್ಯೋಗವಾದರೂ ಸರಿ, ಅದರಲ್ಲಿ ತೊಡಗಬೇಕೆಂದು ತಿಳಿಸುತ್ತಾರೆ. ಈ ರೀತಿ ವೀರಶೈವ ಧರ್ಮದ ಸಂಪೂರ್ಣ ದರ್ಶನವನ್ನು ಇಲ್ಲಿ ನೀಡಿ ಆರೈದ ಅನುಭಾವಿಗಳಾಗಿದ್ದಾರೆ.

"ಆರೈದು ಭಾಗ ೩"ರಲ್ಲಿಯೂ ಹನ್ನೊಂದು ವಿಮರ್ಶಾತ್ಮಕ ಚಿಂತನೆಗಳಿವೆ. ಈ ಚಿಂತನೆಗಳ ಮೂಲಕ ಲೌಕಿಕ ಹಾಗೂ ಪಾರಮಾರ್ಥಗಳಲ್ಲಿ ಸಮನ್ವಯತೆಯನ್ನು ತರಲು ಪೂಜ್ಯರು ಪ್ರಯತ್ನಿಸಿದ್ದಾರೆ. ಕೃತಿಯಲ್ಲಿ ವೀರಶೈವ ಧರ್ಮದ ಮೂಲ ತತ್ವಗಳಾದ ಅಷ್ಟಾವರಣ, ಪಂಚಾಚಾರಗಳನ್ನು ಗುರುತಿಸಿದ್ದಾರೆ. ಜ್ಞಾನವು ಮಾನವನ ಜೀವನದ ಜೀವಾಳವಾಗಿದೆ. ಮಾನವ ಧರ್ಮದ ಅಡಿಗಲ್ಲು ಜ್ಞಾನವಾಗಿದೆ. ಲೌಕಿಕಜ್ಞಾನದಿಂದ ಮಾನವನಿಗೆ ವ್ಯಾವಹಾರಿಕ ಜ್ಞಾನ ಬಂದರೆ, ಪಾರಮಾರ್ಥಿಕ ಜ್ಞಾನ ಮಾನವ ಜನ್ಮದ ಸಾಫಲ್ಯಕ್ಕೆ ಕಾರಣವಾಗಿದೆ. ಸುಜ್ಞಾನದಿಂದ ಪಾರಮಾರ್ಥ ಸಿದ್ಧಿ ಬೆಳೆದರೆ ವಿಜ್ಞಾನದಿಂದ ಲೌಕಿಕ ಸಿದ್ಧಿಯಾಗುವದು. ಸುಜ್ಞಾನದಲ್ಲಿ ವಿರಾಮವಿದೆ. ಸುಜ್ಞಾನಿಯಾದವನು ಸಿರಿವಂತನಾಗುವನು, ಸಮಾಧಾನ ಹೊಂದುವನು. ಭೌತಿಕ ಜ್ಞಾನವೆಲ್ಲ ಲೌಕಿಕ ವ್ಯವಹಾರಕ್ಕಾಗಿ ಇರುವದು ಎಂದು ತಿಳಿಸಿ ಇಂಥ ಪಾರಮಾರ್ಥಿಕ ಜ್ಞಾನ ಪಡೆದ ಸವದತ್ತಿಯ ಅಭಿನವ ಕುಮಾರಸ್ವಾಮಿಗಳು ಹಾಗೂ ಆಧುನಿಕ ವಚನಕಾರರ ಪಂಕ್ತಿಯಲ್ಲಿ ಸೇರುವ ಜಮಖಂಡಿ ತಾಲೂಕಿನ ಮರೆಗುದ್ದಿಯ ಅಡವೀಶ್ವರ ಮಠದ ಶ್ರೀ ನಿರುಪಾಧಿ ಸ್ವಾಮಿಗಳು ಸೇರಿದ್ದಾರೆ ಎಂದೂ ತಿಳಿಸುತ್ತಾರೆ.

ಸರ್ವಜ್ಞ ಕವಿಯ ಸಂದೇಶವನ್ನು ವಿವರಿಸುತ್ತಾ "ಈತನ ತ್ರಿಪದಿಗಳಲ್ಲಿ ಪಾರಮಾರ್ಥದ ಪ್ರಕಾಶವಿದೆ, ಮುಕ್ತಿಯ ಮಾರ್ಗವಿದೆ, ಲೌಕಿಕ ನೀತಿ ಇದೆ. ಜಡವಾಗಿರುವ ಸಮಾಜವನ್ನು ಬಡಿದೆಬ್ಬಿಸಬಲ್ಲ ಚಾಟಿಯ ಚುರುಕಿದೆ. ಸಮಾಜ ಸರಿಯಾದ ಮಾರ್ಗದಲ್ಲಿ ಸಾಗಿ ಬದುಕನ್ನು ಹಸನಾಗಿಸಿಕೊಳ್ಳಲೆನ್ನುವ ಕಳಕಳಿ ಇದೆ" ಎಂದು ತಿಳಿಸುತ್ತಾರೆ. ಶ್ರೀ ಮಠದಿಂದ ಪ್ರಕಟಗೊಂಡ ಶ್ರೀ ರಾಜಗುರು ಗುರುಸ್ವಾಮಿ ಗವಾಯಿಗಳ 'ವಚನವಿಶ್ವ' ಕುರಿತು ಈ ವಚನವಿಶ್ವವು ಸತ್ವಪೂರ್ಣವಾಗಿದೆ. ಅರಿವಿನ ಆಗರವಾಗಿ ತಿಳಿವಿನ ತಿಳಗೊಳ

ದಲ್ಲಿ ಓದುಗರನ್ನು ಮೀಯಿಸಿ ಜನಮನವನ್ನು ಮಡಿ ಮಾಡುವ ಕಾರ್ಯ ಇಂಥ ವಚನಗಳ ಮೂಲಕ ನಡೆಯಲಿ ಎಂದು ಆಶೀರ್ವದಿಸಿದ್ದಾರೆ.

"ಆರೈದು ಭಾಗ ೪"ರಲ್ಲಿ ಆಧುನಿಕ ಅನುಭಾವಿಗಳ ಜೀವನದರ್ಶನ ಮಾಡಿಸಿದ್ದಾರೆ. ಇವರಲ್ಲಿ ರಾಮಕೃಷ್ಣ ಪರಮಹಂಸ, ಶಾರದಾದೇವಿ, ಸ್ವಾಮಿ ವಿವೇಕಾನಂದ, ಮಹಾತ್ಮಾ ಗಾಂಧೀಜಿ, ಜವಾಹರಲಾಲ ನೆಹರು, ಸರ್ ಸಿದ್ದಪ್ಪ ಕಂಬಳಿ, ವೀರೇಶ್ವರ ಶರಣರು ಮುಂತಾದವರ ಆದರ್ಶಗಳನ್ನು ಇಂದಿನ ಯುವ ಜನಾಂಗಕ್ಕೆ ಮನಮುಟ್ಟುವಂತೆ ವಿವರಿಸಿದ್ದಾರೆ. ಶ್ರೀ ರಾಮಕೃಷ್ಣ ಮತ್ತು ವಿವೇಕಾನಂದರು ಗಂಗಾ ಯಮುನಾ ನದಿಗಳಂತೆ ಬಹಿರಂಗವಾಗಿ ಹರಿಯುತ್ತಾ ಜಗಚ್ಚಕ್ಷುಗಳನ್ನು ಆಕರ್ಷಿಸುತ್ತಿದ್ದರೆ ಶ್ರೀಮಾತೆ ಶಾರದಾದೇವಿ ಗುಪ್ತಗಾಮಿನಿಯಾದ ಸರಸ್ವತಿ ನದಿಯಂತೆ. ಶ್ರೀ ಗುರುದೇವ ಮತ್ತು ಸ್ವಾಮೀಜಿಯವರ ಜೀವನ ಲೀಲೆಗೆ ತಮ್ಮ ಜೀವನವನ್ನು ಸಮರ್ಪಿಸಿ ಒಂದು ದಿವ್ಯತರವಾದ ತ್ರಿವೇಣಿ ಸಂಗಮವನ್ನು ನಿರ್ಮಿಸಿದ್ದಾರೆ. ಶ್ರೀ ರಾಮಕೃಷ್ಣ ಪರಮಹಂಸರ ಬದುಕು ಈಶ್ವರ ಪರವಾದ ವ್ಯಾಕುಲತೆ, ಸಾಧನೆ ಸಿದ್ಧಿಗಳಿಂದ ಕೂಡಿದ್ದರೆ ವಿವೇಕಾನಂದರ ಬದುಕು ಪರಮಹಂಸರ ಆಧ್ಯಾತ್ಮಿಕ ಬದುಕನ್ನು ಹೊತ್ತು ಜನಾಂಗ ಜನಾಂಗಗಳಿಗೂ, ದೇಶ ವಿದೇಶಗಳಿಗೂ ವಿತರಣೆ ಮಾಡಿ ಹಿಂದೂ ಧರ್ಮವನ್ನು ಪಾಶ್ಚಾತ್ಯ ನಾಡಿಗೂ ಪರಿಚಯಿಸಿ ಅವರನ್ನು ಧೀರ ಸನ್ಯಾಸಿಯನ್ನಾಗಿ ಮಾಡಿದೆ. ಸತ್ಯ, ಅಹಿಂಸೆಗಳ ಸಾಕಾರಮೂರ್ತಿ ಗಾಂಧೀಜಿಯವರಾದರೆ, ಆಧುನಿಕ ಭಾರತದ ಕನಸನ್ನು ಕಂಡವರು ಜವಾಹರಲಾಲ ನೆಹರೂ ಅವರು. ಅದರಂತೆ ಶುದ್ಧ ಚಾರಿತ್ರ ಹಾಗೂ ಪ್ರಾಮಾಣಿಕತೆಗೆ ಹೆಸರಾದವರು ಸರ್ ಕಂಬಳಿಯವರು.

ಈ ರೀತಿ ಪೂಜ್ಯ ಶ್ರೀಗಳು ಈ ಎಲ್ಲ ಗ್ರಂಥಗಳ ಮೂಲಕ ವಿಶ್ವಮಾನ್ಯ ನೀತಿ ಸಂಸ್ಥಾಪಕರಾಗಿದ್ದಾರೆ. ಮನುಕುಲದ ಸರ್ವಕಾಲಿಕ, ಸರ್ವದೇಶಗಳಿಗೆ ಬೇಕಾಗುವ ವೈಚಾರಿಕ ನೀತಿ ತತ್ವಗಳನ್ನು ಅವರು ಪ್ರತಿಪಾದಿಸಿದ್ದಾರೆ. ಅಷ್ಟಾವರಣಗಳೇ ಅಂಗ ಪಂಚಾಚಾರಗಳೇ ಪ್ರಾಣ, ಷಟ್‌ಸ್ಥಲಗಳು ಆತ್ಮ ಎಂಬುದನ್ನು ಗಮನಿಸಬೇಕು. ಪೂಜ್ಯ ಶ್ರೀಗಳಿಗೆ ಕೇವಲ ಜ್ಞಾನ, ಕೇವಲ ಕ್ರಿಯೆಯಲ್ಲಿ ನಂಬುಗೆ ಇಲ್ಲ. ಜ್ಞಾನ ಕ್ರಿಯೆಗೆ ಇಳಿದರೆ, ಮಾತು ಕೃತಿಗೆ ಬಂದರೆ, ಅದಕ್ಕೆ ಬೆಲೆ. ಜ್ಞಾನವಿಲ್ಲದ ಕ್ರಿಯೆಯೂ ಅಷ್ಟೇ ಅಪೂರ್ಣ. ಪೂಜ್ಯರು ಕೇವಲ ವಿಚಾರವಾದಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿಲ್ಲ. ಅವರು ತಮ್ಮ ಚಿಂತನೆಗೆ ಯಾವ ರಂಗವನ್ನೇ ಒಳಗುಮಾಡಿಕೊಂಡರೂ ಅದರಲ್ಲಿ ಕಾರ್ಯಾಚರಣೆಗೆ ಅವಕಾಶ ಕಲ್ಪಿಸಿದ್ದಾರೆ. ಆದ್ದರಿಂದ ಅವರದು ಕೇವಲ ಆಲೋಚನೆಯ ಕ್ರಿಯೆಯಲ್ಲ, ಅನುಷ್ಠಾನದ ಕ್ರಿಯೆಯೂ ಹೌದು ಕಾರಣ ಅವರು ಆರೈದ ಅನುಭಾವಿಗಳು.

ಇಪ್ಪತ್ತನೇ ಶತಮಾನದ ಮೇಧಾವಿ ಬರ್ಟ್ರಂಡ್ ರಸೆಲ್ಲ್ ಹೇಳುವಂತೆ **Man has become a cog in the wheel.** ಮನುಷ್ಯ ಒಂದು ಚುಕ್ಕೆಯಾಗಿದ್ದಾನೆ. ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡಿದ್ದಾನೆ. ಮಾನವೀಯ ಮೌಲ್ಯಗಳು ಮಣ್ಣುಪಾಲಾಗು

ತ್ತಿವೆ. ಧರ್ಮ ಪುಸ್ತಕದಲ್ಲಿ ಮಾತ್ರ ಉಳಿದಿದೆ. ಇದಕ್ಕೆಲ್ಲ ಮೂಲ ಕಾರಣ ಸ್ವಾರ್ಥ, ಅಜ್ಞಾನ ಮತ್ತು ಅಧಿಕಾರ ದಾಹ. ಯುವ ಜನತೆ ತಮ್ಮ ಬದುಕಿನ ಅರ್ಥವನ್ನೇ ಕಳೆದು ಕೊಳ್ಳುತ್ತಿದೆ. ಕಾರಣ ಪೂಜ್ಯರು ಇಲ್ಲಿ ಬೋಧಿಸುವ ಸ್ವಧರ್ಮನಿಷ್ಠೆ, ಪರಸ್ಪರ ಪ್ರೇಮ, ಕಾಯಕನಿಷ್ಠೆ, ಅಹಿಂಸೆ, ಸಹಬಾಳ್ವೆ ಮುಂತಾದವುಗಳನ್ನು ನಾವೆಲ್ಲ ಅಳವಡಿಸಿಕೊಳ್ಳ ಬೇಕಾಗಿದೆ. ಇಂಥ ನೀತಿಯಲ್ಲಿ ಸರ್ವರ ಹಿತವಡಗಿದೆ. ಕಲ್ಯಾಣವಿದೆ. ಜಾಗತಿಕ ಶಾಂತಿಯ ಕನಸಿದೆ.

ಆಧಾರ ಗ್ರಂಥಗಳು

೧. ಆರೈದು ಭಾಗ, ಭಾಗ ೨, ಭಾಗ ೩ ಲೇ: ಶ್ರೀ ಮ ನಿ.ಪ್ರ.ಜ. ಅನ್ನದಾನೀಶ್ವರ ಮಹಾಸ್ವಾಮಿಗಳು.

೨. ನಿರಂಜನ ಜಂಗಮ ಡಾ॥ ಎಸ್. ಎಂ. ಹಿರೇಮಠ.

೩ ವೀರಶೈವ ದಾರ್ಶನಿಕ ಸಿದ್ಧಾಂತ ಶ್ರೀ ಮ. ನಿ. ಪ್ರ. ಜ. ಅನ್ನದಾನೀಶ್ವರ ಮಹಾಸ್ವಾಮಿಗಳು.

ಅಡಿಟಿಪ್ಪಣಿಗಳು

೧) ಆರೈದು ಭಾಗ ೧, ಲೇ: ಶ್ರೀ ಮ. ನಿ. ಪ್ರ. ಜ. ಅನ್ನದಾನೀಶ್ವರ ಮಹಾಸ್ವಾಮಿಗಳು ಪು. iii.

೨) ವಚನ ವಿಶ್ವ ಸಂ. ಡಾ॥ ಎಸ್. ವಿದ್ಯಾಶಂಕರ ಪುಟ ೯–೧೦.

ಜ್ಞಾನ ದಾಸೋಹಿ ಮುಂಡರಗಿ ಜಗದ್ಗುರುಗಳು

—ಡಾ. ಬಸವರಾಜ ಜಗಜಂಪಿ, ಸವದತ್ತಿ

ಬೃಹನ್ಮಠವೊಂದರ ಪೀಠಾಧಿಪತಿಗಳಾಗಿದ್ದುಕೊಂಡು, ತಮ್ಮ ಸರಳ ಸಜ್ಜನಿಕೆಗಳ ಸೌಜನ್ಯಪೂರ್ಣ ನಡೆನುಡಿಗಳಿಂದ, ಸತತ ಅಧ್ಯಯನಶೀಲತೆಯಿಂದ, ಗಂಭೀರ ಬರವಣಿಗೆಯಿಂದ, ಏನೆಲ್ಲ ಕೆಲಸ ಕಾರ್ಯಗಳನ್ನು ಮಾಡುತ್ತ ಮಠಪೀಠಗಳ ಉಜ್ವಲ ಪರಂಪರೆಯನ್ನು ಮೆರೆಸುತ್ತಿರುವ ಶ್ರೀಮನ್ನಿರಂಜನ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ನಿಜಕ್ಕೂ ಅಭಿನಂದನಾರ್ಹರು. ಧಾರವಾಡ ಜಿಲ್ಲೆಯ ತುತ್ತತುದಿಯಲ್ಲಿರುವ ಮುಂಡರಗಿ ಎಂಬ ಚಿಕ್ಕ ಪಟ್ಟಣದ ಪ್ರತಿಷ್ಠಿತ ಮಠವೊಂದರ ಅಧಿಪತಿಗಳಾಗಿ ೨೫ ವರ್ಷಗಳ ಅವಧಿಯಲ್ಲಿ ನಾಡಿನಾದ್ಯಂತ ಧರ್ಮಜಾಗೃತಿಗೈದು, ನಾಡಿನಾಚೆಗೂ ನಡೆದಾಡಿ, ವೀರಶೈವಧರ್ಮಜ್ಯೋತಿಯನ್ನು ಜಾಜ್ವಲ್ಯಮಾನವಾಗಿ ಬೆಳಗುತ್ತಿರುವ ಜಗದ್ಗುರುಗಳು ಅತ್ಯಂತ ಸಮಯನಿಷ್ಠರು.

ಧರ್ಮ-ಶಿಕ್ಷಣ-ಸಾಹಿತ್ಯ-ಸಮಾಜ-ಮೊದಲಾದ ಕ್ಷೇತ್ರಗಳಲ್ಲಿ ತಮ್ಮನ್ನು ರಚನಾತ್ಮಕವಾಗಿ ತೊಡಗಿಸಿಕೊಂಡಿರುವ ಜಗದ್ಗುರುಗಳು, "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು" ಎಂಬ ರಾಘವಾಂಕನ ಮಾತಿನಂತೆ ಬಿಡುವಿಲ್ಲದೆ ದುಡಿಯುತ್ತಿದ್ದಾರೆ. ಅವರು ಮಠದಿಂದ ಘಟವನ್ನು ಬೆಳೆಸಿದವರಲ್ಲ; ಘಟದಿಂದ ಮಠವನ್ನು ಬೆಳೆಸಿದವರು. ಅನುಭವ ಹಾಗೂ ಅನುಭಾವಗಳ ಸುಂದರ ಸಮನ್ವಯದ ಘನವ್ಯಕ್ತಿತ್ವವನ್ನು ಹೊಂದಿರುವ ಜಾಗೃತಪ್ರಜ್ಞೆಯ ಅಪರೂಪದ ಜಗದ್ಗುರುಗಳವರು. ಶರಣ ಸಾಹಿತ್ಯ ಸಂಸ್ಕೃತಿಗಳ ಅವಿರಳ ಪರಿಮಳವನ್ನು ಬೀರುತ್ತ, ಸಮಾಜದಲ್ಲಿ ಧರ್ಮಪ್ರಜ್ಞೆಯನ್ನು ಮೂಡಿಸುತ್ತಿದ್ದಾರೆ.

ಜಗದ್ಗುರು ಪೀಠದ ಘನತೆಯನ್ನು ತುಂಬ ಎಚ್ಚರಿಕೆಯಿಂದ ರಕ್ಷಿಸಿಕೊಂಡು ಬಂದಿರುವ ಅವರು, ಅನಗತ್ಯ ಆಡಂಬರವನ್ನಾಗಲಿ- ಠೀವಿಯನ್ನಾಗಲಿ ಎಂದೂ ತೋರಿದವರಲ್ಲ. ಪರಮಸಂಯಮಿಗಳಾದ ಅವರ ನಡೆನುಡಿಗಳಲ್ಲಿ ಉಕ್ಕಿಬರುವ ಆವೇಶವಿಲ್ಲ; ಆರ್ಭಟವಿಲ್ಲ. ಘೋರ್ಗರೆತವಿಲ್ಲ. ಪ್ರಶಾಂತ ಮುಖಮುದ್ರೆಯಿಂದ ಅವರು ನೀಡುವ ಆಶೀರ್ವಚನ ಕೂಡ ಅಷ್ಟೇ ಸರಳ ಹಾಗೂ ಸತ್ವಪೂರ್ಣ. ಅವರ ಆಶೀರ್ವಾಣಿ ತಿಳಿಯಲು ಸುಲಭವಾದರೂ ಮರೆಯಲು ಸುಲಭವಲ್ಲ. ಮಾತೃಹೃದಯದ ಅವರು ವಾತ್ಸಲ್ಯಭರಿತರು. ಒಮ್ಮೆ ಪರಿಚಯವಾದರೆ ಆಯ್ತು; ಅವರೆಂದೂ ಮರೆಯುಲಾರರು.

ಅದು ಶ್ರಾವಣಮಾಸದ ಒಂದು ದಿನ. ಸವದತ್ತಿಯ ಗುರುಲಿಂಗಜಂಗಮ-ಪ್ರೇಮಿ

ಗಳಾದ ಶ್ರೀಮಂತ ಶಿವಯೋಗಪ್ಪಣ್ಣ ಹಾಗೂ ಸೌ. ಗೌರಮ್ಮ ತುಪ್ಪದ ದಂಪತಿಗಳು ನನ್ನನ್ನು ತಮ್ಮ ಮನೆಗೆ ಕರೆಸಿಕೊಂಡರು. ಆಗರ್ಭ ಶ್ರೀಮಂತರಾದರೂ ಸರಳಸಜ್ಜನಿಕೆ ಗಳ ಸದ್ಗೃಹಸ್ಥರಾದ ಶ್ರೀ ತುಪ್ಪದ ಅವರಲ್ಲಿಗೆ ಸನ್ಮಾನ್ಯ ಎಸ್. ಎಸ್. ಪಾಟೀಲ ಪಡಕಿ ಯವರೊಂದಿಗೆ ಹೋದೆ. ಅದೇ ಆಗ ಲಿಂಗಪೂಜೆಯನ್ನು ಪೂರೈಸಿ ಬಂದು ವಿಶಾಲ ವಾದ ಹಜಾರದ ಸರಳ ಪೀಠದಲ್ಲಿ ವಿರಾಜಮಾನರಾಗಿದ್ದ ಮುಂಡರಗಿಯ ಪೂಜ್ಯ ಜಗದ್ಗುರುಗಳಿಗೆ ಶ್ರೀ ತುಪ್ಪದ ಅವರು ನನ್ನನ್ನು ಪರಿಚಯಿಸಿದರು. ನಮಸ್ಕರಿಸಿ ಎದ್ದ ನನ್ನ ಕೈಗೆ ಜಗದ್ಗುರುಗಳು 'ಆಧುನಿಕ ಕನ್ನಡ ಸಾಹಿತ್ಯ ಸಮೀಕ್ಷೆ' ಎಂಬ ಕೃತಿಯನ್ನಿತ್ತು ಆಶೀರ್ವದಿಸಿದರು. ಜಗದ್ಗುರುಗಳ ಹಿತಮಿತ ಮೃದುವಚನಗಳು ನನ್ನ ಮೇಲೆ ತುಂಬ ಪ್ರಭಾವ ಬೀರಿದವು. ನಮ್ಮೆಲ್ಲರ ಪ್ರಸಾದವಾದೊಡನೆ ಜಗದ್ಗುರುಗಳು ಮುಂಡರಗಿಗೆ ದಯಮಾಡಿಸಿದರು.

ಆಯ್ತು! ಅಂದು ನನಗಾದ ಜಗದ್ಗುರುಗಳವರ ಪರಿಚಯ, ಮುಂದೆ ಹತ್ತಾರು ಸಂದರ್ಭಗಳಲ್ಲಿ ನಡೆದ ಭೆಟ್ಟಿಯ ಕಾರಣ ಆತ್ಮೀಯವಾಯಿತು. ಜಗದ್ಗುರುಗಳು ಹಮ್ಮಿ ಕೊಂಡ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸದವಕಾಶ ನನಗೆ ಪ್ರಾಪ್ತವಾಯ್ತು. ಆ ಸೌಭಾಗ್ಯವನ್ನು ಒದಗಿಸಿಕೊಟ್ಟ ಶ್ರೀ ತುಪ್ಪದ ದಂಪತಿಗಳನ್ನು ಕೃತಜ್ಞತೆಯಿಂದ ನೆನೆಯದಿರಲಾರೆ.

ಉಜ್ವಲ ಪ್ರತಿಭಾವಂತರಾದ ಜಗದ್ಗುರುಗಳಲ್ಲಿ ವಿದ್ಯೆಬುದ್ಧಿಗಳ ವಿದ್ಯುದಾಲಿಂಗನ ವನ್ನು ಕಾಣಬಹುದು. ಅನ್ನದಾಸೋಹವನ್ನು ನಡೆಸಿ 'ಅನ್ನದಾನೀಶ'ರೆಂಬ ಅಭಿದಾನ ವನ್ನು ಅನ್ವರ್ಥಕವಾಗಿ ಸಾರ್ಥಕಗೊಳಿಸಿದಂತೆ ಅವರು ಸಾಹಿತ್ಯಕ ಆಧ್ಯಾತ್ಮಿಕ ಕೃತಿಗಳನ್ನು ರಚಿಸಿ ಜ್ಞಾನದಾಸೋಹಿಗಳೆನಿಸಿದ್ದಾರೆ. ಚೆನ್ನಬಸವಣ್ಣನವರಂತೆ ಅವರು ಷಟ್‌ಸ್ಥಲ ಜ್ಞಾನ ಪಾರಂಗತರು. ವೀರಶೈವ ದಾರ್ಶನಿಕ ಹಾಗೂ ವೈಚಾರಿಕ ಗ್ರಂಥಗಳನ್ನು ಕೊಡುಗೆ ಯಾಗಿ ನೀಡಿರುವ ಅವರನ್ನು ಒಂದರ್ಥದಲ್ಲಿ 'ಸಾಹಿತ್ಯ ಶಿವಯೋಗಿ'ಗಳೆನ್ನಬೇಕು.

ಗಾತ್ರ ಹಾಗೂ ಸತ್ವದಲ್ಲಿ ಮಹತ್ವವನ್ನು ಪಡೆದಿರುವ 'ವೀರಶೈವ ದಾರ್ಶನಿಕ ಸಿದ್ಧಾಂತ' ಹಾಗೂ ಮಾನವಧರ್ಮ, ವಚನವಲ್ಲರಿ, ಆರೈದು–ಇವೇ ಮೊದಲಾದ ಪ್ರಬುದ್ಧ ಕೃತಿಗಳನ್ನಿತ್ತು ಜಗದ್ಗುರುಗಳು ಕನ್ನಡ ಸಾಹಿತ್ಯ ಕಣಜವನ್ನು ಶ್ರೀಮಂತಗೊಳಿಸಿ ದ್ದಾರೆ. ಅವರ ಕೃತಿಗಳು ವೀರಶೈವ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯೆನಿಸಿವೆ; ಪಂಡಿತವಲಯದಲ್ಲಿ ಅಪಾರವಾದ ಮೆಚ್ಚುಗೆಗೂ ಪಾತ್ರವಾಗಿವೆ.

ಸೂತ್ರಬದ್ಧ ಹಾಗೂ ಸತ್ವಪೂರ್ಣ ವಚನಗಳನ್ನು ರಚಿಸಿದ ಶ್ರೀ ಎಸ್.ಷಿ. ರಂಗಣ್ಣ, ಡಾ. ಜ.ಚ.ನಿ., ಡಾ. ಸಿದ್ಧಯ್ಯ ಪುರಾಣಿಕ, ಮಹಾದೇವ ಬಣಕಾರ, ಮೂಜಗಂ, ಡಾ. ಸಂಗಮೇಶ ಹಂಡಿಗಿ ಮೊದಲಾದ ಆಧುನಿಕ ವಚನಕಾರರಲ್ಲಿ ಜಗದ್ಗುರು ಅನ್ನದಾನ ಮಹಾಸ್ವಾಮಿಗಳಿಗೆ ತಮ್ಮದೇ ಆದ ವೈಶಿಷ್ಟ್ಯಪೂರ್ಣ ಸ್ಥಾನವಿದೆ. ಸತತ ಸಾಧನೆ ಹಾಗೂ ಗಂಭೀರ ಚಿಂತನೆಯಿಂದ ಕೂಡಿದ ಸ್ವಾಧ್ಯಾಯದ ಫಲವಾಗಿ ವೀರಶೈವ ಧರ್ಮತತ್ವ

ಗಳನ್ನು ಅರ್ಥಪೂರ್ಣವಾಗಿ ಅಳವಡಿಸಿಕೊಂಡು ರಚಿಸಿರುವ ಅವರ ವಚನಗಳು ತುಂಬ ಸರಳ ಹಾಗೂ ಪರಿಣಾಮಕಾರಿ. ಗಹನ ತತ್ವಗಳನ್ನು ಸರಳ ಸುಂದರ ದೃಷ್ಟಾಂತಗಳಿಂದ ಕೂಡಿದ ಚಿತ್ತಾಕರ್ಷಕ ಶೈಲಿಯಲ್ಲಿ ನಿರೂಪಿಸುವ ಜಗದ್ಗುರುಗಳವರ ವಚನ ರಚನಾ ಶೈಲಿಯ ಕೌಶಲ ಮೆಚ್ಚುವಂತಿದೆ.

ಯಾವಾಗಲೂ ಒಂದಿಲ್ಲೊಂದು ವಿಧಾಯಕ ಕಾರ್ಯಗಳಲ್ಲಿ ತಮ್ಮನ್ನು ಕ್ರಿಯಾಶೀಲ ವಾಗಿ ತೊಡಗಿಸಿಕೊಂಡಿರುವ ಅವರು, ತಮ್ಮ ಪ್ರೀತಿಯ ಬರವಣಿಗೆಯ ಕಾಯಕಕ್ಕೆ ಏನಾದರೂ ಅಡ್ಡಿಯುಂಟಾದಾಗ ನಿರ್ದಿಷ್ಟ ಅವಧಿಗೆ ಅನುಷ್ಠಾನ ಕೈಕೊಳ್ಳುತ್ತಾರೆ. ಅನುಷ್ಠಾನದ ಅವಧಿ ಹೊಸದೊಂದು ಕೃತಿಯ ಹುಟ್ಟಿಗೆ ಕಾರಣವಾಗುತ್ತದೆ.

ಈ ಇಳೆಗೆ ಇಳಿತಂದು ಐವತ್ತು ವರ್ಷಗಳನ್ನು ಸಾಹಿತ್ಯ ಕೃಷಿಗೈಯುತ್ತ, ಜಗದ್ಗುರು ಪೀಠವನ್ನೇರಿ ಇಪ್ಪತ್ತೈದು ವರ್ಷಗಳನ್ನು ಧರ್ಮಜಾಗೃತಿ ಮಾಡುತ್ತ ಸಾರ್ಥಕವಾಗಿ ಸಂಪನ್ನಗೊಳಿಸಿ ಚಿನ್ನ ಹಾಗೂ ಬೆಳ್ಳಿ ಹಬ್ಬಗಳನ್ನು ಏಕಕಾಲಕ್ಕೆ ಆಚರಿಸುತ್ತಿರುವ ಜಗದ್ಗುರು ಅನ್ನದಾನೀಶರ ಜೀವನದ ಪರ್ವಕಾಲವಿದು.

ಜಗದ್ಗುರು ಪೀಠಾರೋಹಣದ ರಜತೋತ್ಸವವನ್ನು ರಚನಾತ್ಮಕವಾಗಿ ಆಚರಿಸುವ ಮಹತ್ವಾಕಾಂಕ್ಷೆ ಹೊಂದಿದ್ದ ಅವರು, ರಜತೋತ್ಸವದ ನೆಪದಲ್ಲಿ ಸಮಾಜಕ್ಕೆ ಉಪಯುಕ್ತವಾಗಬಲ್ಲ ವಿಚಾರ ಸಂಕಿರಣಗಳನ್ನೇರ್ಪಡಿಸಿ, ಉದಯೋನ್ಮುಖ ಉಪನ್ಯಾಸಕರನ್ನು ಪ್ರೋತ್ಸಾಹಿಸುತ್ತ ಯುವ ಲೇಖಕರನ್ನು ಬೆಳಕಿಗೆ ತರುವುದರ ಮೂಲಕ ಬೆಳೆಸುತ್ತಿರುವುದು ಅವರ ಉದಾತ್ತಗುಣಕ್ಕೆ ಸಾಕ್ಷಿಯಾಗಿದೆ.

ಸವದತ್ತಿ ತಾಲೂಕಿನ ಮುನವಳ್ಳಿ, ಶಿವಯೋಗಮಂದಿರದ ಸಮೀಪದ ನಂದಿಕೇಶ್ವರ ಹಾಗೂ ಮಹಾರಾಷ್ಟ್ರದ ಸೊಲ್ಲಾಪುರಗಳಲ್ಲಿ ಜರುಗಿದ ವಿಚಾರ ಸಂಕಿರಣಗಳಲ್ಲಿ ಜಗದ್ಗುರುಗಳ ಅಪ್ಪಣೆಯ ಮೇರೆಗೆ ಸಕ್ರಿಯವಾಗಿ ಪಾಲ್ಗೊಂಡ ನನಗೆ, ರಜತೋತ್ಸವದ ಸಮಾರಂಭಗಳು ಅರ್ಥಪೂರ್ಣವಾಗಿ ಜರುಗುತ್ತಿರುವುದನ್ನು ಪ್ರತ್ಯಕ್ಷವಾಗಿ ಕಂಡು ಸಂತೋಷವಾಯ್ತು. ಅಂತೆಯೇ ಜಗದ್ಗುರುಗಳವರ ಪೀಠಾರೋಹಣದ ರಜತೋತ್ಸವ ವನ್ನು ಕಂಡ ನಾವು, ಸುವರ್ಣಮಹೋತ್ಸವವನ್ನು ಕಾಣುವಂತಾಗಲೆಂದು ಭಕ್ತಿಯಿಂದ ಆಶಿಸುತ್ತೇನೆ.

ಧರ್ಮ ಚಿಂತಕ

—**ಪ್ರೊ. ಸಿ. ವಿ. ಕೆರಿಮನಿ,** ಲಕ್ಷ್ಮೇಶ್ವರ

ಶ್ರೀ ಮನ್ನಿರಂಜನ ಪ್ರಣವ ಸ್ವರೂಪ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು, ಸಂಸ್ಥಾನಮಠ ಮುಂಡರಗಿ ಅವರು 'ಸಕಲರಿಗೆ ಲೇಸಾಗಲಿ' ಎಂಬ ನುಡಿಮುತ್ತ್ರ, ಕಾರ್ಯತತ್ಪರತೆಯ ಮಂತ್ರವನ್ನೇ ಮಾಡಿಕೊಂಡು ಈ ಭುವಿಗೆ ಅವತರಿಸಿ ಬಂದವರು. ತಮ್ಮ ಜೀವನದ ಉಸಿರನ್ನೇ ಧರ್ಮ ಚಿಂತನೆಗಾಗಿ ಮುಡಿಪಾಗಿಟ್ಟು ಶ್ರೀಮಠಕ್ಕೆ ಬಂದನಂತರ ಮುಂಡರಗಿ ಎಂದಕೂಡಲೇ ಹೊರಗಿನವರಿಗೆ ನೆನಪಾಗುವದು ಶ್ರೀಗಳು ಹಾಗೂ ಅವರ ಕ್ರಿಯಾಶೀಲ ಗುಣಗಳು ಕರ್ನಾಟಕದಲ್ಲಿ ಬಸವಾದಿ ಪ್ರಮಥರ ಕಾಲದಿಂದಲೂ ವೀರಶೈವ ಧರ್ಮ ಅತ್ಯಂತ ಮುಂಚೂಣಿಯಲ್ಲಿ ಹೆಸರು ವಾಸಿಯಾದುದು. ಅದಕ್ಕೂ ಪೂರ್ವದಲ್ಲಿ ಶ್ರೀ ಜಗದಾದಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಕಾಲದಿಂದಲೂ ಇದ್ದುದು, ವೀರಶೈವಾಗಮಗಳಿಂದ ತಿಳಿದು ಬರುವದು. ಧರ್ಮದ ಬೆಳಕು ನಿರಂತರವಾಗಿ ಜನತೆಯಲ್ಲಿದ್ದ ಕತ್ತಲೆಯನ್ನು ಕಳೆಯುತ್ತ ಬೆಳಕಿನತ್ತ ಕೊಂಡೊಯ್ಯುತ್ತ ಬಂದಿದೆ. ಇಪ್ಪತ್ತನೆಯ ಶತಮಾನದ ಪ್ರಾರಂಭ ದಿನಗಳಲ್ಲಿ ಕಾರಣಿಕ ಯುಗ ಪುರುಷ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು ಉತ್ತರ ಕರ್ನಾಟಕದಲ್ಲಿ ವೀರಶೈವ ಧರ್ಮ ಕ್ರಾಂತಿಯನ್ನೇ ಮಾಡಿದರು. ಸಂಘಟನೆಯಲ್ಲಿ, ಬುದ್ಧಿಯಲ್ಲಿ, ಜ್ಞಾನದಲ್ಲಿ, ಪೂಜೆಯಲ್ಲಿ, ಸಮಾಜ ಸೇವೆ ಮಾಡುವ ತೀವ್ರ ಕಳಕಳಿಯಲ್ಲಿ ಅಗಾಧ ಶಕ್ತಿಯನ್ನು ಪಡೆದ ಶ್ರೀಕುಮಾರ ಸ್ವಾಮಿಗಳು ಶರಣತತ್ವವನ್ನು ಪುನಶ್ಚೇತನಗೊಳಿಸಲು ಹರಿದು ಹಂಚಿಹೋದ ವೀರಶೈವ ಸಮಾಜವನ್ನು ಒಂದುಗೂಡಿಸಲು ಪ್ರಥಮದಲ್ಲಿ ಮಾಡಿದ ಕೆಲಸ 'ಅಖಿಲ ಭಾರತ ವೀರಶೈವ ಮಹಾಸಭೆ' ಸ್ಥಾಪಿಸಿ ತನ್ಮೂಲಕ ಧರ್ಮಕಾರ್ಯಗಳು ನಿರಂತರ ನಡೆಯುವಂತೆ ಮಾಡಿದರು. ಜಂಗಮರಿಗೆ, ಧರ್ಮಾಸಕ್ತರಿಗೆ ಧಾರ್ಮಿಕ ಶಿಕ್ಷಣ ನೀಡಲು 'ಶಿವಯೋಗ ಮಂದಿರ' ಸ್ಥಾಪಿಸಿದರು. ಶರಣರ ವಿಶೇಷ ಕೊಡುಗೆಯಾದ 'ಇಷ್ಟಲಿಂಗ ಪೂಜೆ'ಯ ಸಂಸ್ಕೃತಿಯನ್ನು ಜನಮನದಲ್ಲಿ ಉಳಿಯುವಂತೆ ಮಾಡಿದರು. ವೀರಶೈವ ಗ್ರಂಥಗಳ ಪ್ರಕಟನೆ, ಶರಣರ ವಚನಗಳ ಸಂಗ್ರಹ, ವಿದ್ವಾಂಸರಿಗೆ ಪ್ರೋತ್ಸಾಹವನ್ನು ನೀಡಿದವರೂ ಶ್ರೀಕುಮಾರಸ್ವಾಮಿಗಳೆ. ಅವರು ಧರ್ಮಸಂಸ್ಕೃತಿ ಪ್ರಸಾರಕ್ಕಾಗಿ ಊರೂರಿಗೆ ಅಲೆದು ನೂರಾರು ಮಠಮಾನ್ಯಗಳನ್ನು ಉದ್ಧಾರ ಮಾಡಿದರು. ಕೆಲ ವೀರಶೈವ ಮಠಗಳು ತಾತ್ಕಾಲಿಕ ರವಿಗೆ ಮುಸುಕಿದ ಮೋಡದಂತಾಗಿದ್ದವು. ಅಂಥವುಗಳಿಗೆ ಚಾಲನೆ ನೀಡಿದರು. ಹಾನಗಲ್ಲ ಶ್ರೀಗಳ ಮಾರ್ಗದರ್ಶನದಲ್ಲಿ ಮುಂಡರಗಿ, ಹುಬ್ಬಳ್ಳಿ ಗದಗ, ಇಳಕಲ್ಲ,

ಹಾವೇರಿ ಹೀಗೆ ಇನ್ನು ಅನೇಕ ಮಠ-ಮಾನ್ಯಗಳ ಪೂಜ್ಯರು ಶ್ರೀಗಳ ವಾಣಿಗೆ ಮನ್ನಣೆ ಕೊಟ್ಟು ಅವರು ಕೈಕೊಂಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಪಾಲುಗೊಂಡರು. ಪ್ರಸ್ತುತ ವಾಗಿ ಮುಂಡರಗಿ ಮಹಾಸ್ವಾಮಿಗಳ ಧರ್ಮಚಿಂತನೆ ಬಗೆಗೆ ವಿವೇಚಿಸುವಾ.

ಹಾಸಗಲ್ಲ ಶ್ರೀಗಳ ಶುಭಾಶೀರ್ವಾದ ಹಾಗೂ ಅವರ ಪ್ರಸಾದವಾಣಿಯಂತೆ ಚಾಚೂ ತಪ್ಪದಂತೆ-ಧರ್ಮದ ಇಂಥಹ ಸಂದಿಗ್ಧ ವಾತಾವರಣದಲ್ಲೂ, ವೈಜ್ಞಾನಿಕವಾಗಿ ಮುನ್ನಡೆದರೂ ಮಾನವತೆಯ ಅರಿವಿನ ಕೊರತೆಯ ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ಈ ಕಾಲದಲ್ಲಿ ಧರ್ಮ ಚಿಂತಕರಾಗಿದ್ದಾರೆ. ಮುಂಡರಗಿ ಶ್ರೀಗಳು ತಮ್ಮ ತ್ರಿಕಾಲ ಪೂಜೆ ಎಡಬಿಡದ ಗ್ರಂಥ ಬರವಣಿಗೆ, ಪ್ರಕಾಶನ, ಶೈಕ್ಷಣಿಕ-ಸಂಸ್ಥೆಗಳ ಸ್ಥಾಪನೆ, ಕಲ್ಯಾಣಮಂಟಪಗಳು, ಶಾಖಾಮಠಗಳ ಪುನರುಜ್ಜೀವನ ಕನ್ನಡ ನಾಡಿನಲ್ಲೆಲ್ಲಾ ಪಸರಿಸಿರುವ ಭಕ್ತರ ಕೋರಿಕೆ ಪೂರೈಸಲು ನಿರಂತರ ಪ್ರವಾಸ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ-ಸಾಹಿತ್ಯಿಕ ಸಭೆ-ಸಮಾರಂಭಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿಕೆ ಸಮಾಜ ಕ್ಕಾಗಿ ಹಗಲಿರುಳು ದುಡಿಯುವದರಲ್ಲೇ ಸಂತೋಷವನ್ನು ಕಂಡುಕೊಳ್ಳುತ್ತಿರುವ ನಮ್ಮ ನಿಮ್ಮೆಲ್ಲರೆದುರಿಗೆ ಇರುವ ಜೀವಂತ ಮಾನವತೆಯೇ ಮೈವೆತ್ತ ಇಂದಿನ ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳ ಧರ್ಮಚಿಂತನೆಯನ್ನು ಕೆಲವೇ ಮಾತುಗಳಲ್ಲಿ ಹಿಡಿದಿಡಬೇಕೆಂದು ನಡೆಸಿರುವ ನನ್ನ ಈ ಪ್ರಯತ್ನ ಎಷ್ಟರಮಟ್ಟಿಗೆ ಸಾಫಲ್ಯವನ್ನು ತಂದುಕೊಡುತ್ತೋ ಆ ಶ್ರೀ ಅನ್ನದಾನೇಶನೇ ಬಲ್ಲ. ಪೂಜ್ಯರ ಧರ್ಮ ಚಿಂತನೆಯನ್ನು ಅರಿತ ಧಾರವಾಡದ ಶ್ರೀ ಮುರುಘಾಮಠ ಶ್ರೀಗಳು ಇವರಿಗೆ "ಧರ್ಮಭಾಸ್ಕರ" ಪದವಿ ನೀಡಿ ಗೌರವಿಸಿದೆ. ಸಂಸ್ಕೃತ ವಿದ್ವತ್ ಪರಿಷತ್ತಿನಿಂದಲೂ ಶ್ರೀಗಳಿಗೆ ಪುರಸ್ಕಾರ ಸಂದಿದೆ. ಅನೇಕ ಮಠಮಾನ್ಯಗಳವರು ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ ಸಂಘ ಸಂಸ್ಥೆಗಳವರು ಶ್ರೀಗಳನ್ನು ಬರಮಾಡಿಕೊಂಡು ಅವರ ಧಾರ್ಮಿಕ ಚಟುವಟಿಕೆಗಳನ್ನು ಮೆಚ್ಚಿ ಗೌರವಿಸಿದೆ. ಇವೆಲ್ಲವುಗಳನ್ನು ನೋಡಿದಾಗ ಶ್ರೀಗಳ ಧರ್ಮಚಿಂತನೆ ಎಷ್ಟೊಂದು ಆಳವಾಗಿದೆಂಬುದನ್ನು ಅವರು ಬರೆದ 'ಮಾನವ ಧರ್ಮ' ಹಾಗೂ ಆರೈದು ಭಾಗ ಒಂದು ಎರಡು ಮೂರು ಹಾಗೂ ಅವರೇ ಬರೆದ ಅನೇಕ ಇತರ ಧಾರ್ಮಿಕ ಕೃತಿಗಳು ಹಾಗೂ ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆಯಿಂದ ಸುಮಾರು ತೊಂಬತ್ತು ಕೃತಿಗಳಿಗೂ ಮಿಕ್ಕಿ ಪ್ರಕಾಶನಗೊಂಡ ಕೃತಿಗಳು ಧಾರ್ಮಿಕ ಚಿಂತನೆಯನ್ನೇ ಒಳಗೊಂಡಿವೆ. ಅವುಗಳಲ್ಲಿ ಬಂದಿರುವ ಅವರ ಧರ್ಮಚಿಂತನೆಯ ಬಗೆಗೆ ಕೆಲವು ವಿಚಾರಗಳನ್ನು ಮಾತ್ರ ಇಲ್ಲಿ ವಿವರಿಸುವೆ.

ಶ್ರೀಗಳ ಸ್ವವಿಚಾರದಲ್ಲಿ 'ಮಾನವ ಧರ್ಮ'ವು ಸಕಲ ಮಾನವರಿಗೆ ಒಳಪಡುವದು. ಧರ್ಮ ಅನ್ನುವದು ಹೇಳುವುದಲ್ಲ; ಕೃತಿಯೊಳಗೆ ವ್ಯಕ್ತವಾಗಬೇಕು. ಕೆಲವರು ಧರ್ಮ ಕುರಿತಂತೆ ಅನೇಕ ವಿಚಾರಗಳನ್ನು ಮಾತನಾಡುತ್ತಾರೆ. ಅವರಿಗೆ ಬರೆಯುವ ಕಲೆಯಿರುವದಿಲ್ಲ. ಕೆಲವರು ಏಕಾಂತದಲ್ಲಿ ಕುಳಿತು ಬರೆಯುತ್ತಾರೆ ಮಾತನಾಡಲು ಬರುವದಿಲ್ಲ. ಇನ್ನು

ಕೆಲವರು ಮಾತನಾಡಲೂ ಬರುತ್ತದೆ ಬರೆಯಲೂ ಬರುತ್ತೆ. ಆದರೆ ಕೃತಿಯೊಳಗೆ ನುಡಿದಂತೆ ನಡೆಯಲಾರರೆಂದು ಹೇಳುತ್ತಾರೆ. ಪ್ರತಿಯೊಬ್ಬನಲ್ಲೂ ಸ್ವಧರ್ಮ ನಿಷ್ಠೆಬೇಕು. ಪರಧರ್ಮ ಸಹಿಷ್ಣುತೆ ಬೇಕು. ಇಂದು ವೀರಶೈವದ ಪ್ರಾಚೀನತೆ ಸ್ಥಾಪನೆ ಕುರಿತಂತೆ-ಹಲವಾರು ವಿದ್ವಾಂಸರು ಧರ್ಮಾಭಿಮಾನಿಗಳು ಅದರಲ್ಲೂ ಗುರು ವರ್ಗದ ಭಕ್ತರು ಶ್ರೀ ಆದಿ ರೇಣುಕಾಚಾರ್ಯರಿಂದ ಸ್ಥಾಪಿತವಾಗಿದೆಯೆಂದು ವಾದಿಸಿದರೆ ಮತ್ತೆ ಕೆಲ ವಿರಕ್ತ ಸಂಪ್ರದಾಯವಾದಿಗಳು ಶ್ರೀ ಭಕ್ತಿಭಂಡಾರಿ ಬಸವಣ್ಣನವರಿಂದಲೇ ಸ್ಥಾಪಿತವಾಗಿದೆಯೆಂದು ವಾದಿಸುತ್ತಾರೆ. ಇವರೆಲ್ಲ ಹಲವಾರು ಅನುಕೂಲಕರ ದೃಷ್ಟಾಂತ ಐತಿಹ್ಯಗಳ ಮೂಲಕ ಖಚಿತಪಡಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಶ್ರೀಗಳು ಪರಶಿವ ತತ್ವದಿಂದ ವೀರಶೈವ ಧರ್ಮದ ಉತ್ಪಾದನೆಯಾಗಿದೆಯೆಂದು ಹೇಳುತ್ತಾರೆ, ಅದೂ ಸಾಧಾರವಾಗಿ ವಿವರಿಸಿದ್ದಾರೆ. ಅವರೇ ಬರೆದ 'ಮಾನವ ಧರ್ಮ' ಗ್ರಂಥದಲ್ಲಿ—

ಧರ್ಮ ಏವ ಹತೋಹಂತಿ
ಧರ್ಮೋ ರಕ್ಷತಿ-ರಕ್ಷಿತಃ ಮನಸ್ಮೃತಿ

(ಧರ್ಮವನ್ನು ತಿರಸ್ಕರಿಸುವವನನ್ನು ಧರ್ಮವು ನಾಶ ಮಾಡದೆ ಬಿಡದು ಧರ್ಮವನ್ನು ಕಾಪಾಡುವವರು ಧರ್ಮ ಅವರನ್ನು ಕಾಪಾಡುವುದು).

ಮಾನವನು ಧರ್ಮವನ್ನು ತ್ಯಜಿಸಿ ಕೇವಲ ಸ್ವೇಚ್ಛಾಚಾರಿಯಾಗಿ ವರ್ತಿಸಿದರೆ, ಅನಾಚಾರಿಯಾದರೆ, ಭ್ರಷ್ಟಾಚಾರಿಯಾದರೆ ಮನುಷ್ಯತ್ವವನ್ನು ಮರೆತು ಪಶು ಸಮಾನನಾಗುವನು.

ಭಾರತೀಯ ಸಂಸ್ಕೃತಿಯ ಜೀವಾಳ ಧರ್ಮವೆನಿಸಿದೆ. ಧರ್ಮವು ಎಲ್ಲದರ ಮೂಲವೆಂಬುದನ್ನು ಸಕಲರೂ ಅರಿಯಬೇಕು. ಧರ್ಮವಿಲ್ಲದ ಅರ್ಥ-ಕಾಮಗಳು ವ್ಯರ್ಥವಾಗುವವು. ಅದಕ್ಕಾಗಿ ಪರಮ ಪುರುಷಾರ್ಥವಾದ ಮೋಕ್ಷವನ್ನು ಹೊಂದಲು ಪ್ರತಿಯೊಬ್ಬ ಪುರುಷನಿಗೆ ಧರ್ಮದ ಅವಶ್ಯಕತೆ- ಅತ್ಯಧಿಕವಾಗಿದೆ ಎಂದು ಧರ್ಮದ ಅರ್ಥವನ್ನು ಸರಳ ಭಾಷೆಯಲ್ಲಿ ಭಕ್ತರಿಗೆ ತಿಳಿಯಹೇಳಿದವರು ಶ್ರೀಗಳೇ.

ನ್ಯಾಯ, ಸದಾಚಾರ, ನಿರ್ಮಲವೃತ್ತಿ, ಸುಸ್ವಭಾವ ಸ್ವಾರ್ಥತ್ಯಾಗ, ನಿಷ್ಕಪಟತನ, 'ಈಶ್ವರಭಕ್ತಿ', 'ಇವೇ' ಮುಂತಾದ 'ಸದ್ಗುಣಗಳು' ಯಾವುದರಲ್ಲಿ ಪರಿಪೂರ್ಣ ತುಂಬಿಕೊಂಡಿರುವವೋ ಅದು ಧರ್ಮ, ಲೌಕಿಕ-ಪಾರಮಾರ್ಥಿಕ ಶ್ರೇಯಸ್ಸಾಧನೆಯೇ ಧರ್ಮ. ಅದುವೇ ಪರಿಪೂರ್ಣ ಧರ್ಮವೆಂದೆನಿಸುವುದು. ಜೈನ, ಬೌದ್ಧ, ಶೀಖ, ರಜಪೂತ ಕ್ರಿಸ್ತ, ಮುಸಲ್ಮಾನ, ಶೈವ, ವೈಷ್ಣವ ಹಾಗೂ ವೀರಶೈವ ಮತಗಳು ನಮ್ಮ ದೇಶದಲ್ಲಿವೆ. ಧಾರ್ಮಿಕ-ದೃಷ್ಟಿಯಲ್ಲಿ ಯಾವ ಮತವೂ ಹೆಚ್ಚಿಲ್ಲ. ಯಾವದೂ ಚಿಕ್ಕದಲ್ಲ. ತಮ್ಮ ಧರ್ಮದಲ್ಲಿ ನಿಷ್ಠಾವಂತರಾಗಬೇಕು. ಪರಧರ್ಮ ತೆಗಳಬಾರದು. "ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆ-" ಇದು ಮಾನವಧರ್ಮವೆಂದೆನಿಸುವುದು.

ಮಾಲೆಯಲ್ಲಿ ಪುಷ್ಪಗಳು ಭಿನ್ನ ಭಿನ್ನವಾಗಿದ್ದರೂ ಮಾಲೆಯ ಸೂತ್ರ ಒಂದಾಗಿರು

ವಂತೆ ಧರ್ಮದ ಸೂತ್ರವೂ ಒಂದೇ. ಅದುವೆ ಮಾನವ ಧರ್ಮ. ಮನುಸ್ಮೃತಿಯಲ್ಲಿ ಬಂದ—

"ಧೃತಿಃ ಕ್ಷಮಾ ಧಮೋಽಸ್ತೇಯಂ
ಶೌಚಮಿಂದ್ರಿಯ ನಿಗ್ರಹಃ|
ಧೀರ್ವಿದ್ಯಾ ಸತ್ಯಮ ಕ್ರೋಧೋ
ದಶಕಂ ಧರ್ಮ ಲಕ್ಷಣಮ್||"

ಧೈರ್ಯ, ಸಹನಶೀಲತೆ, ಬಹಿರಿಂದ್ರಿಯ ನಿಗ್ರಹಃ ಕಳವು ಮಾಡದೇ ಇರುವದು, ಮಾನಸಿಕ ಪಾವಿತ್ರತೆ ಮನೋನಿಗ್ರಹ, ಧರ್ಮ ವಿಷಯಕವಾದ ಬುದ್ಧಿ ಅಧ್ಯಾತ್ಮಿಕ–ಜ್ಞಾನ, ಯಥಾರ್ಥ ಭಾಷಣ, ಸಿಟ್ಟು ಇಲ್ಲದಿರುವದು, ಈ ಹತ್ತು ಗುಣಗಳು ಮಾನವತೆಯ ಸಮಾನತೆಯನ್ನು ಸಾರುತ್ತವೆ. ಇವು ವಿಶ್ವಮಾನವ ಧರ್ಮದ ಸೋಪಾನಗಳು ಇವನ್ನು ಅರಿತು ಜೀವನದಲ್ಲಿ ಅಳವಡಿಸಿಕೊಂಡು ಆಚರಿಸಿದರೆ ಸುಖಶಾಂತಿಗಳು ಸಿಕ್ಕುವಲ್ಲಿ ಯಾವ ಸಂಶಯವಿಲ್ಲ

ಮಹಾವಿಜ್ಞಾನಿ, ಐನಸ್ಟೀನನು.... "ಧರ್ಮವಲ್ಲದ– ವಿಜ್ಞಾನ ಕುರುಡು, ವಿಜ್ಞಾನ ವಿಲ್ಲದ ಧರ್ಮಕುಂಟು" ವಿಜ್ಞಾನ ಬುದ್ಧಿಯ ಪ್ರಖರತೆಯನ್ನು ಬೆಳಗಿಸಿದರೆ ಧರ್ಮವು ಮನಸ್ಸಿಗೆ ವೈಶಾಲ್ಯತೆಯನ್ನು ಶಾಂತಿಯನ್ನು ಕೊಡಬಲ್ಲದು. ಶಿವರಾಮ ಕಾರಂತರು–"ತನ್ನ ಸುತ್ತಲಿನವರ ಸುಖವೇ ಜೀವನ ಧರ್ಮ, ಸುತ್ತಲಿನವರೆಲ್ಲರೂ ಸುಖಿಗಳಾಗುವಂತೆ ಬದುಕುವದೇ ಮಾನವಧರ್ಮ" ಎಂಬ ನುಡಿ ಸತ್ಯವಾಗಿದೆ.

ವೀರಶೈವರ ಗುರಿ ಶಿವಯೋಗವೆಂಬುದನ್ನು ನಿರೂಪಿಸಿದ ಶ್ರೀಗಳು ವೀರಶೈವ ಮತದ ಉತ್ಪಾದಕ– ಪರಶಿವನೆಂದು ಮನ್ನಿಸುವಲ್ಲಿ ಸಾಮಾಜಿಕ– ಸ್ವಾಸ್ಥ್ಯ ಸಮೃದ್ಧ ವಾಗಬಲ್ಲವೆಂಬುದನ್ನು ಪ್ರಾಮಾಣಿಕವಾಗಿ ವಿವೇಚಿಸಲಾಗಿದೆ. ಧರ್ಮಾಚರಣೆಗೆ ಅತಿರೇಕ–ಹಾಗೂ ಅತ್ಯಭಿಮಾನಕ್ಕಿಂತ– ವಿವೇಚನಾಶೀಲ, ಸುಬುದ್ಧಿ ಅತ್ಯವಶ್ಯಕ ಎಂಬ ಧರ್ಮಚಿಂತನೆಯ ವಿಚಾರಗಳು ಚೆನ್ನಾಗಿ ಮೂಡಿಬಂದಿವೆ.

ಆರೈದು ಭಾಗ ಧಿರಲ್ಲಿ ವೀರಶೈವ ಸಿದ್ಧಾಂತದ ವೈಚಾರಿಕ ತತ್ವದ ವಿವೇಚನೆಯು ಇಲ್ಲಿ ಬಂದಿರುವ ಹನ್ನೊಂದು ಲೇಖನಗಳ ವಸ್ತುವಾಗಿದೆ. ವೀರಶೈವ ತತ್ವವು ಹುಟ್ಟಿನಿಂದ ಬರುವದಲ್ಲ. ಅದು ಪ್ರಾಪ್ತವಾಗುವದು ಸಂಸ್ಕಾರದಿಂದ. ಇಂತಹ ವೀರಶೈವ ಮತೋತ್ಪಾದಕನ ವಿಷಯದಲ್ಲಿ ಸವಿಸ್ತಾರವಾಗಿ ಚಿಂತನ ಮಂಥನ ಮಾಡಿ ವೀರಶೈವ ಮತದ ಮೂಲ ಜನಕ– ಪರಶಿವ ಎಂದು ಸಾರಿರುವದು ವೀರಶೈವ ಧರ್ಮದ ಚಿಂತನೆಗೆ ತೊಡಗಿರುವವರಿಗೆ ಹೊಸದೊಂದು ದಾರಿ ತೋರಿದ್ದಾರೆ.

ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳವರ ಚಿಂತನಶೀಲ ಬರವಣಿಗೆ ಆಶೀರ್ವಚನ ಹಾಗೂ ಅವರು ಕೈಕೊಂಡ ಕೈಕೊಳ್ಳುತ್ತಿರುವ ಧಾರ್ಮಿಕ–ಕಾರ್ಯಕ್ರಮಗಳು ಪ್ರಶಂಸನೀಯವಾಗಿವೆ. ಗ್ರಾಮೀಣ ಮುಗ್ಧಭಕ್ತರಿದ್ದೆಡೆಗೆ ಸ್ವತಃ ಪೂಜ್ಯರೇ ದಯಮಾಡಿಸಿ

ಅವರಿಗೆ ಉತ್ತಮ ಮಾರ್ಗದರ್ಶನ ನೀಡುತ್ತಿರುವದನ್ನು ಅವರ ಸಮೀಪದಿಂದ ಬಲ್ಲವರೆಲ್ಲರು ಬಲ್ಲರು. ದೀನದಲಿತರ ಬಡಜನತೆಯ ಗುಡಿಸಲಿನಲ್ಲೂ ತಮ್ಮ ಸರಳ ಸಹಜ, ಮಂದಸ್ಮಿತ- ಮಾತುಗಳಿಂದ ಕೃತಿಗಳಿಂದ ಶರಣರವಾಣಿಯಂತೆ ನಡೆನುಡಿ ಒಂದಾಗಿ ಚಂದಾಗಿ ಎಲ್ಲರ ಕಣ್ಮಣಿಗಳಾಗಿ, ಧರ್ಮಚಿಂತಕರು, ಹಿತಚಿಂತಕರೆನಿಸಿರುವದು ಕೋಟಿಗೊಬ್ಬ ಶರಣರ ಸಾಲಿನಲ್ಲಿ ಬರುವಂಥವರು ಶ್ರೀಗಳು.

ಅವರವರ ಭಕ್ತಿಗೆ ಅವರವರ ಭಾವಕ್ಕೆ
ಅವರವರ ತೆರನಾಗಿ ಇರುತಿಹನು ಶಿವಯೋಗಿ
ಇರದೊಂದು ಕನ್ನಡಿಯು ನೂರಾರು ಜನ ಹಿಡಿಯೆ
ಸರಳಾಗಿ ಅವರವರ ರೂಪು ಕಾಣುವಂತೆ
ಹರಿಯು ಭಕ್ತರಿಗೆ ಹರಿಹರನ ಭಕ್ತರಿಗೆ ಹರ
ನರರೇನು ಭಾವಿಸುವರದರಂತೆ ತೋರುವನು

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು—ಕೈವಲ್ಯ ದರ್ಪಣ

ಈ ನುಡಿಯಂತೆ ಶ್ರೀಗಳ ವ್ಯಕ್ತಿತ್ವ ನಮ್ಮಗಳ ಎದುರಿಗೆ ಜೀವಂತ ನಿದರ್ಶನವಾಗಿದೆ.

ವೀರಶೈವ ಅನುಭಾವಿ-ಜಗದ್ಗುರುಶ್ರೀ

—ಪ್ರೊ॥ ವ್ಹಿ. ಜಿ. ಮರೀಹಾಳ, ಧಾರವಾಡ

ಶಿವಸ್ವರೂಪವನರಿದು, ಶಿವನೊಡನಾಡಿ, ಶಿವನೊಡನುಂಡು,
ಶಿವಾಕಾರವಾದ ಶಿವಭಕ್ತನು-
ದೇವ-ದಾನವ-ಮಾನವಾದಿಗಳಲ್ಲಿರ್ದಡೇನು?

—ಚೆನ್ನಬಸವಣ್ಣ

ಪೂಜ್ಯ ಜಗದ್ಗುರುಗಳು ಅನ್ನದಾನೇಶ್ವರ ಮಠದ ಸಿಂಹಾಸನವನ್ನೇರಿ ೨೫ ವರ್ಷ ಮುಗಿದಿವೆ. ಈ ಕಾಲುಶತಕದ ಸಿಂಹಾವಲೋಕನ ಈಗ ನಡೆಯಬೇಕು; ಈ ಅಮೃತ ಘಳಿಗೆಗಳ ಸಂಸ್ಮರಣೆ ಭೂಮವಾಗಿ ನಡೆಯಬೇಕು; ಅದು ಅಸದೃಶವಾಗಿ ನಿಲ್ಲಬೇಕು.

ಕರ್ನಾಟಕದ ೩೫೦೦ ಮಠಗಳಂತೆ ಈ ಮಠವಾಗಿರುತ್ತಿದ್ದರೆ, ಈ ಲೇಖನ ಅಗತ್ಯವಿರಲಿಲ್ಲವೇನೊ....? ಈ ದಾರಿಯಲ್ಲಿ ಪೂಜ್ಯರು ನಡೆದುಬಂದ ದಾರಿ ಬಂಗಾರದ ಅಕ್ಷರಗಳಿಂದ ಬರೆಯಲ್ಪಡಬೇಕು; ಬರೆಯುತ್ತಿದ್ದೇವೆ.

ಇಷ್ಟೊಂದು ಚಿಕ್ಕ ವಯಸ್ಸಿನಲ್ಲಿ ಅವರುಗಳ ಪರಿಶ್ರಮವೇನು? ಸಾಧನೆಗಳು ಯಾವವು? ಸಿದ್ಧಿಗಳೇನು?

ಅವರು ಚತುರ್ವಿಧ ದಾಸೋಹಿಗಳಾಗಿ ಬೆಳೆದದ್ದು ನಮ್ಮ ಪುಣ್ಯ. ಅವರು ಅನ್ನದಾಸೋಹಿಗಳು; ಅವರು ಜ್ಞಾನದಾಸೋಹಿಗಳು; ಅವರು ವಿದ್ಯಾದಾಸೋಹಿಗಳು; ಅವರು, ಅನುಗ್ರಹ ದಾಸೋಹಿಗಳೂ ಅಲ್ಲವೇ?

ಸಂತತ ಒಂದು ವರ್ಷಕ್ಕೂ ಮಿಕ್ಕಿ ಜ್ಞಾನದಾಸೋಹ ನಡೆದ ಪ್ರದೇಶಗಳು ಹಲವು: ಅದು ಶ್ರೀಕ್ಷೇತ್ರ ಉಳಿವೆಯಿಂದ ಪ್ರಾರಂಭವಾಯಿತು; ಬನವಾಸಿಗೆ ಪಡಿಲೊಡೆಯಿತು, ಉಡುತಡಿ, ಸೊಲ್ಲಾಪುರಗಳವರೆಗೂ ಮುಂದರಿದಿದೆ. ಚನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮದೇವರುಗಳ ಬಗ್ಗೆ ಸಾದ್ಯಾಂತ ಸಂಶೋಧನೆ ನಡೆಯಿತು. ವಿದ್ವಾಂಸರು, ನೂರಾರು ಜನ ಈ ಸಮ್ಮೇಳನಗಳಲ್ಲಿ ಭಾಗವಹಿಸಿ ತಮ್ಮ ತಮ್ಮ ಅಭ್ಯಾಸ ಗಳನ್ನು ಸಾದರಪಡಿಸಿದರು. ಅವೆಲ್ಲ ಈಗ ಗ್ರಂಥಗಳ ರೂಪದಲ್ಲಿ ನಮ್ಮೆದುರಿಗಿವೆ. ಅದಕ್ಕೆಲ್ಲ ಲಕ್ಷಾಂತರ ಹಣ ಸದ್ವಿನಿಯೋಗವಾಯಿತು; ಶ್ರಮ ಸಾರ್ಥಕವಾಗಿದೆ. ಈ ನೂರಾರು ಜನ ವಿದ್ವಾಂಸರನ್ನು ಗುರುತಿಸಿ ಅವರಿಗೆ ಹೊಣೆಯನ್ನು ಹೊರಿಸಿ, ಅವರಿಂದ ಅನೇಕ ಮೌಲಿಕ ಲೇಖನಗಳನ್ನು ತಯಾರಿಸಿ ಪ್ರಕಟಿಸಿದ್ದು, ಅನುಪಮವೆಂದೇ ಹೇಳಬೇಕು.

ಈ ಸನ್ನಾಹದಲ್ಲಿ ಬಹ್ವಂಶ ತರುಣರು-ತರುಣಿಯರು, ಎಲೆಮರೆಯಲ್ಲಿದ್ದವರು, ಹೊರ ಬಂದುದನ್ನು ಗುರುಗಳು ಕಂಡು ಸಂತಸಪಟ್ಟಿದ್ದಾರೆ.

ಈ ನಿಟ್ಟಿನಲ್ಲಿ ವಿಚಾರ ಮಾಡುವಾಗ, ಸ್ವತಃ ಗುರುಗಳ ಸಿದ್ಧಹಸ್ತದಿಂದ ಪ್ರಕಟಿತ ಕೃತಿಗಳು ನೂರಾರು. ತಮ್ಮದೇ ಆದ ಗ್ರಂಥಾಲಯದಲ್ಲಿ ಅವರು ಕುಳಿತು, ಚಿಂತಿಸಿ, ವೀರಶೈವ ಸಾಹಿತ್ಯದ ಸೃಜನತೆಗೆ ಕಾರಣವಾದರು. ನಾಡಿನ ಜನತೆಯ ಮುಮುಕ್ಷು ಬೇಡಿಕೆಗೆ ಪಕ್ಕಾಗುವ ವೀರಶೈವ-ಸಾಹಿತ್ಯ ಅವರಿಂದ ಹೇರಳವಾಗಿ ನಿರ್ಮಾಣವಾಗಿದೆ. ಆಗುತ್ತಲಿದೆ; ಅವರ ಚಿಂತನೆ ಬಗ್ಗಡವಾಗಿಲ್ಲ. ಈ ಮಂಥನದ ಫಲಶ್ರುತಿಯಂತೆ, ಪ್ರತಿಸ್ಪಂದನದಂತೆ, ಓತಪ್ರೋತವಾಗಿ ಸಾಹಿತ್ಯ ಹೊರಹೊಮ್ಮಿದೆ. ಅದು ಈ ನಾಡಿನ ಚಿರಾಸ್ತಿ.

ಅವರ ಸೃಜನಶೀಲತೆಗೆ ಕಳಸವಿಟ್ಟಂತೆ. ಅವರು ಬರೆದ ವಿಮರ್ಶೆ,- 'ಗುರುಕರುಣ ತ್ರಿವಿಧಿಗೆ' (ಮೈಲಾರ ಬಸವಲಿಂಗ ಶರಣರ ಕೃತಿ) ಬರೆದದ್ದು— ನಮ್ಮ ಅನೂಚಾನವಾಗಿ, ಪುಂಖಾನುಪುಂಖವಾಗಿ, ಬರುತ್ತಿರುವ ವೀರಶೈವ ಸಾಹಿತ್ಯದಲ್ಲಿ ಮೇರುಕೃತಿಯೆಂದೇ ಬರೆಯಬೇಕು. ಒಂದು ವಿಶ್ವವಿದ್ಯಾಲಯವು ಈ ಗ್ರಂಥವನ್ನು ಪರಾಮರ್ಶಿಸಿ ಆ ಗ್ರಂಥಕ್ಕೆ ಡಾಕ್ಟರೇಟ್ ಕೊಡಬಹುದಾದ ಹಿರಿಮೆ ಆ ಗ್ರಂಥಕ್ಕಿದೆ.

ಷಟ್‌ಸ್ಥಲಜ್ಞಾನಿ ಚನ್ನಬಸವಣ್ಣನವರ ಮೇಲಂತೂ ಅವರಿಗೆ ಅಪಾರ ಪ್ರೇಮ-ಭಕ್ತಿ-ವಿಶ್ವಾಸ. ತಾವು ಕೈಕೊಳ್ಳುವ ಯಾವ ಸತ್ಕಾರ್ಯದ ಪ್ರಾರಂಭ ಅದು ಶ್ರೀ ಚನ್ನಬಸವಣ್ಣನವರ ಮುಂದೆಯೇನೇ ನಡೆದರೆ ಅವರಿಗೆ ಸಂತಸ. ಈ ನಡೆವಳಿಕೆಗೆ ದಿವ್ಯ ಹಿನ್ನೆಲೆಯೂ ಉಂಟು. ಚನ್ನಬಸವಣ್ಣನವರ ಶಿಷ್ಯರಾಗಿ ಕರ್ತೃ ಅನ್ನದಾನೇಶ್ವರರು, ಅವರ ಅಮೃತಹಸ್ತಗಳಿಂದ ದೊಡ್ಡದಾದ ವಿಭೂತಿ ಗಟ್ಟಿಯನ್ನು ಪಡೆದವರು. ಈ 'ಗಟ್ಟಿ'ಯು ಇಂದಿಗೂ ಶ್ರೀಮಠದಲ್ಲಿದೆ. ಅದನ್ನು ಸಂಸ್ಥಾಪಿಸಿಕೊಂಡು ಅನ್ನದಾನೇಶ್ವರರು ಉಳವಿ ನಾಡಿನಲ್ಲಿ ಅಡ್ಡಾಡಿದ್ದೂ, ಭಕ್ತರನ್ನು ಉದ್ಧರಿಸಿದ್ದೂ, ಮಲೆನಾಡಿನ ಅನೇಕ ಪ್ರದೇಶಗಳಲ್ಲಿ ಈಗ ಮಠಗಳಿರುವುದಕ್ಕೆ ಕಾರಣವಾವಾಗಿವೆ; ಅದು ಇತಿಹಾಸ.

ರಾಯಚೂರು-ಧಾರವಾಡ ಜಿಲ್ಲೆಗಳ ಹಿಂದುಳಿದ ಪ್ರದೇಶಗಳಲ್ಲಿ ಶ್ರೀಗಳು ವಾಸಿಸಿದ್ದಾರೆ. ಜನತೆಯೊಂದಿಗೆ, ಜನತೆಯ ಮಧ್ಯದಲ್ಲಿಯೇ ವಾಸಿಸಿದ್ದಾರೆ; ಅವರ ಆಶೋತ್ತರಗಳಿಗೆ ಪ್ರತಿಸ್ಪಂದಿಸಿದ್ದಾರೆ; ಅಲ್ಲಿ ಧರ್ಮ ಉಳಿದಿದೆ. ಆ ಮಾರ್ಗವಾಗಿ ಸಂಸ್ಕೃತಿ ಉಳಿಯಿತು.

ಅವರು ಸಂಘಟಿಸಿರುವ ವಾರದ ಶಿವಾನುಭವ ಗೋಷ್ಠಿಗಳು, ವಾರ್ಷಿಕ ಅಧಿವೇಶನಗಳು, ವಿದ್ವತ್‌ಸಭೆಗಳು, ಅಂತೆಯೇ ಇನ್ನೂ ಅನೇಕಾನೇಕ ಸೃಜನಾತ್ಮಕ ಪ್ರಯತ್ನಗಳು ಶ್ರೀಮಠದ ಕೀರ್ತಿಯನ್ನು ಹೆಚ್ಚಿಸಿವೆ. ವೀರಶೈವ ಶಿವಾನುಭವ-ಅಧ್ಯಯನ ಶಿಬಿರಗಳು ಈ ಮಾಲಿಕೆಯಲ್ಲಿ ಹೊಸ ಮನ್ವಂತರಕ್ಕೆ ಕಾರಣವಾದವು. ರಾಜ್ಯದ ಅನೇಕ ಕಡೆಗೆ ಈ ಶಿಬಿರಗಳು ನಡೆದಿವೆ; ನಡೆಯುತ್ತಲೂ ಇವೆ. ಅದು ಶಿರ್ಶಿಯಲ್ಲಿ ಆದೀತು,

ಸೊಲ್ಲಾಪುರದಲ್ಲಿ ಆದೀತು, ಮುನವಳ್ಳಿಯಲ್ಲಿಯೂ ಆದೀತು. ಮರೆಗುದ್ದಿಯಲ್ಲಿಯೂ ಆದೀತು.

ಇಂತಹ ಶಿಬಿರಗಳು ಬೇರೆಯವರಿಂದಲೂ ಸಂಘಟಿಸಲ್ಪಟ್ಟಾಗ, ಅಲ್ಲಿ ಬೋಧಕರಾಗಿ ದುಡಿಯಲು ಅವರು ಹಿಂಜರಿದಿಲ್ಲ. ಉಳಿವೆ, ಬೆಳಗಾಂವಿ, ಚಿಕ್ಕೋಡಿ, ಮುನವಳ್ಳಿ, ಇತ್ಯಾದಿ ಅನೇಕ ಪ್ರದೇಶಗಳಲ್ಲಿ ಸಂಘಟಿಸಲ್ಪಟ್ಟ ಈ ವೀರಶೈವ ಶಿಬಿರಗಳಲ್ಲಿ ಅವರು ಬೋಧಕರಾಗಿ, ಷಟ್‌ಸ್ಥಲ ವಿಜ್ಞಾನವನ್ನು ಮನಂಬುಗುವಂತೆ ಬೋಧಿಸುತ್ತಾರೆ. ಆ ದಿಸೆಯಲ್ಲಿ ಅವರು ಯಾವ ವರ್ಗ ಶಿಕ್ಷಕನಿಗೂ ಕಡಿಮೆಯಿಲ್ಲ. ಗಹನ ವಿಷಯಗಳನ್ನು ಸುಲಲಿತವಾಗಿ ಕಲಿಸುವ ಕಲೆ ಅವರಿಗೆ ಕರಗತ.

ಸ್ವತಃ ವೀರಶೈವದ ಅಭ್ಯಾಸಿಗಳಾಗಿ, ಅವರು ಬಹುದೂರ ಬಂದವರು. ಶಿವಯೋಗವನ್ನು ಅನುಷ್ಠಾನಿಸಿ, ಕೃತಕೃತ್ಯರಾದವರಾಗಿದ್ದಾರೆ. ಅರ್ಚನ-ಅರ್ಪಣ-ಅನುಭಾವಗಳು ನಮ್ಮ ವೀರಶೈವರ ಬದುಕು. ಈ ಸನ್ನಿಷ್ಠೆಗೆ ಅವರು ಇನ್ನೊಂದು ಹೆಸರಾದರು. ಬಸವಾದಿ ಪ್ರಮಥರ ಮಾರ್ಗದಲ್ಲಿ ಯಾರಾದರೂ ಇದ್ದಾರೆಯೇ ಎಂದು ಪಾಶ್ಚಿಮಾತ್ಯ ವೀರಶೈವರು ಕೇಳಿದಾಗ—ಇಂತಹ ಗುರುಗಳು ನಮ್ಮೆದುರಿಗೆ ಅಚಲವಾಗಿ ನಿಲ್ಲುತ್ತಾರೆ! ಜಾಗತಿಕ ವೀರಶೈವವು ಅವರಿಂದ ಇನ್ನೂ ಹೆಚ್ಚಿನದನ್ನು ಪಡೆಯಲು ಬಯಸುವಲ್ಲಿ-ಸಾರ್ಥಕ್ಯ ನಿಂತುಕೊಂಡಿದೆ!

ದಿವ್ಯ ಚೈತನ್ಯ ಮೂರುತಿ

—ರಾಜಶೇಖರ ಮಡಕಿ, ಸೋಲಾಪೂರ

ಶ್ರೀಮನ್ನಿರಂಜನ ಪ್ರಣವಸ್ವರೂಪ ಜಗದ್ಗುರು ಶ್ರೀ ಅನ್ನದಾನೇಶ್ವರ ಮುಂಡರಗಿ ಸಂಸ್ಥಾನಮಠದ ಸ್ವಾಮಿಗಳು ನಡೆಸಿದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನೋಡಿ ಸಮಾಧಾನವಾಗುತ್ತದೆ. ಆಧ್ಯಾತ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅವರಿಂದ ನಡೆದ ವಿಧಾಯಕ ಕಾರ್ಯ ಅತಿ ಮೌಲಿಕವಾದದ್ದು. ಅವರ ಹೆಸರನ್ನು ನಾನು ಕೇಳುತ್ತಿದ್ದೆ. ಆದರೆ ಕಳೆದ ವರ್ಷ ಅವರ ದರ್ಶನ ಪಡೆಯುವ ಭಾಗ್ಯ ಮತ್ತು ಅವರು ವಿವಿಧ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ನಡೆಸುತ್ತಿದ್ದ ಕಾರ್ಯ ಪ್ರತ್ಯಕ್ಷ ನೋಡಲು ಸಿಕ್ಕಿತು.

ಸಂಶೋಧನದ ಹೆಸರಿನಲ್ಲಿ ಇತ್ತೀಚೆಗೆ ಕೆಲವರು ಹುರುಳಿಲ್ಲದ ವಿವಾದವನ್ನು ಶರಣರ ಜೀವನದ ಬಗ್ಗೆ ಸಮಾಜದಲ್ಲಿ ಹುಟ್ಟಿಸುತ್ತಿರುವದು ತುಂಬಾ ವಿಷಾದಕರ. ಇಂಥ ಸಂದೇಹ ಹಾಗೂ ಸಂಶಯಗಳನ್ನು ಹೊಡೆದು ಹಾಕುವ ಉದ್ದೇಶದಿಂದ ಶ್ರೀ ಅನ್ನದಾನೇಶ್ವರ ಮಹಾಸನ್ನಿಧಿಯವರು ೧೯೯೦ರಲ್ಲಿ ಉಪನ್ಯಾಸಮಾಲೆಯನ್ನು ಸ್ಥಾಪಿಸಿ ಪ್ರತಿವರ್ಷ ವಿಶ್ವಗುರು ಬಸವಣ್ಣನವರ ಉತ್ಕ್ರಾಂತಿಯಲ್ಲಿ ಭಾಗಿಗಳಾದ ಒಬ್ಬೊಬ್ಬ ಶಿವಶರಣರ ಜೀವನ ತತ್ವಜ್ಞಾನದ ಬಗ್ಗೆ ಸಂಕೀರ್ಣವನ್ನು ಏರ್ಪಡಿಸುವ ಉದ್ದೇಶ ಇಟ್ಟುಕೊಳ್ಳುವ ಸತ್‌ಸಂಕಲ್ಪ ಮಾಡಿಕೊಂಡಿರುವದು ಇದು ಅವರು ಸಮಾಜದ ಮುಂದೆ ಅವರಿಟ್ಟ ಒಂದು ಆದರ್ಶ.

ನಾಡಿನ ಹೆಸರಾಂತ ಸಾಹಿತಿಗಳನ್ನು ಶರಣಜೀವನವನ್ನು ಆಳವಾಗಿ ಅಧ್ಯಯನ ಮಾಡಿದ ಪಂಡಿತರನ್ನು ಇಂತಹ ವಿಚಾರ ಸಂಕೀರ್ಣಗಳಲ್ಲಿ ಸಹಭಾಗಿಗಳಾಗಲು ಆಮಂತ್ರಿಸಿ, ಅಲ್ಲಿ ನಡೆದ ಮಂಥನದಿಂದ ಸತ್ಯ-ಸಂಗತಿಗಳು ಹೊರಹೊಮ್ಮುವವು. ಅಂತಹ ವಿಚಾರಗಳನ್ನೊಳಗೊಂಡ ಹೊತ್ತಿಗೆಗಳನ್ನು ಪ್ರಕಟಿಸಿ ಸಮಾಜಕ್ಕೆ ದಾರಿದೀಪವನ್ನೊದಗಿಸುತ್ತಿರುವ ಶ್ರೀ ಅನ್ನದಾನೀಶ್ವರರು ಧನ್ಯರು!

೧೯೯೦ರಲ್ಲಿ ಶ್ರೀಕ್ಷೇತ್ರ ಉಳವಿಯಲ್ಲಿ ಚಿನ್ಮಯ ಜ್ಞಾನಿ ಶ್ರೀ ಚನ್ನಬಸವಣ್ಣನವರ ಬಗ್ಗೆ, ೧೯೯೧ರಲ್ಲಿ ಬನವಾಸಿ ಸುಕ್ಷೇತ್ರದಲ್ಲಿ ಜಂಗಮಪುಂಗವ ಶ್ರೀ ಅಲ್ಲಮಪ್ರಭುದೇವರ ಮತ್ತು ೧೯೯೨ರಲ್ಲಿ ವೀರವಿರಾಗಿಣಿ ಶ್ರೀ ಅಕ್ಕಮಹಾದೇವಿ ಜೀವನದ ಬಗ್ಗೆ ವಿಚಾರ ಸಂಕೀರ್ಣವನ್ನು ಏರ್ಪಡಿಸಿ, ಅಂಥಲ್ಲಿ ನಡೆದ ಚರ್ಚೆಗಳನ್ನೊಳಗೊಂಡ ಉತ್ಕೃಷ್ಟ ಗ್ರಂಥಗಳನ್ನು ಪ್ರಕಟಿಸಿ, ಮುಂಡರಗಿ ಪೂಜ್ಯರು ಸಮಾಜಕ್ಕೆ ಬಹುದೊಡ್ಡ ಕೊಡುಗೆಯನ್ನಿತ್ತಿರುವದು ಹೆಮ್ಮೆಯ ವಿಷಯ.

ಹೋದ ವರ್ಷ ಜೂನ ತಿಂಗಳದಲ್ಲಿ ಆತ್ಮೀಯ ಗೆಳೆಯ, ಪ್ರಾ. ಶಂಕರಗೌಡ ಬಿರಾದಾರರು ನನ್ನಲ್ಲಿಗೆ ಬಂದು, 'ಶ್ರೀ ಮುಂಡರಗಿ ಅನ್ನದಾನೀಶ್ವರರು ಈ ಸಲ ಶ್ರೀ ಸಿದ್ಧರಾಮರ ಜೀವನ ವಿಚಾರ ಸಂಕೀರ್ಣವನ್ನು ನಿಮ್ಮಲ್ಲಿಯೇ ಏರ್ಪಡಿಸುವ ನಿರ್ಧಾರ ಮಾಡಿರುವರು. ಇದಕ್ಕಾಗಿ ನಿಮ್ಮ ಸಹಕಾರದ ಅತ್ಯಗತ್ಯವಿದೆ' ಎಂದು ತಮ್ಮ ವಿಚಾರವನ್ನು ವ್ಯಕ್ತ ಮಾಡುವದೆ ತಡ, 'ನಮ್ಮ ಬಸವ ಸೆಂಟರಿನ ಕಾರ್ಯಕರ್ತರು ಇಂಥ ಕಾರ್ಯಕ್ಕಾಗಿ ದುಡಿಯಲು ಸದಾಸಿದ್ಧರು' ಎಂದು ಹೇಳಿ ಈ ಉಪಕ್ರಮಕ್ಕೆ ನನ್ನ ಒಪ್ಪಿಗೆ ಯನ್ನು ನೀಡಿದ ನಂತರ ೧೫-೬-೯೩ ರಂದು ಶ್ರೀಗಳಿಂದ ಈ ಬಗ್ಗೆ ವಿವರವಾದ ಪತ್ರ ಬಂದಿತು. ಇಂತಹ ಮಹತ್ಕಾರ್ಯಗಳನ್ನು ಕೈಕೊಳ್ಳಬೇಕಾದರೆ ಕೇವಲ ಪತ್ರ ವ್ಯವಹಾರ ಸಾಲದು. ಪೂಜ್ಯರೊಡನೆ ಚರ್ಚೆ ಮಾಡುವದು ಅಗತ್ಯವೆಂದು ಭಾವಿಸಿ ದಿ. ೪-೧೦-೯೩ ರಂದು ನನ್ನ ಸಹಕಾರಿಗಳಲ್ಲೊಬ್ಬರಾದ ಶರಣ ಅಪ್ಪಾರಾವ ಖಟ್ಟಿ ಗುರೂಜಿಯವ ರೊಡನೆ ಮುಂಡರಗಿಗೆ ಹೋದೆವು. ಆಗ ಶ್ರೀ ಅನ್ನದಾನೀಶ್ವರರು ತೋಟಕ್ಕೆ ಹೋಗಿ ದ್ದರು. ಸಾಯಂಕಾಲ ಮಠಕ್ಕೆ ಮರಳಿದಾಗ ನಮಗೆ ಅವರ ದರ್ಶನ ಲಭಿಸಿತ್ತು. ಅವರು ಹಿಂದಿರುಗಿ ಬರುವವರೆಗೂ ಅವರಿಂದ ನಡೆದ ಹಾಗೂ ನಡೆಯುತ್ತಿರುವ ಕಾರ್ಯಗಳ ಮಾಹಿತಿ ಪಡೆಯಲಾಯಿತು. ಪೂಜ್ಯರು ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಮಠದ ಸ್ಥಿತಿ ಸಾಧಾರಣವಾಗಿತ್ತು. ಆರ್ಥಿಕ ಸ್ಥಿತಿ ಸಹ ಸಮಾಧಾನಕರವಾಗಿರಲಿಲ್ಲ. ಇವರು ಪಟ್ಟಕ್ಕೆ ಬಂದ ನಂತರ ಮಠದಲ್ಲಿದ್ದ ಪುಣ್ಯಪುರುಷರ ಸಮಾಧಿಗಳ ಹಾಗೂ ಕಟ್ಟಡದ ಜೀರ್ಣೋದ್ಧಾರದ ಕಾರ್ಯವನ್ನು ಕೈಕೊಂಡರು. ನಂತರ ಜಮೀನುಗಳ ಸುಧಾರಣೆ ಕೆಲಸಕ್ಕೆ ಕೈಹಾಕಿ ಇದರ ಜೊತೆ ಶಾಲಾಕಾಲೇಜುಗಳ ಸಾಮಾಜಿಕ ಸುಧಾರಣೆಯ ಕಾರ್ಯ ಪ್ರಾರಂಭಿಸಿ ಖ್ಯಾತಿ ಪಡೆದಿರುವರೆಂದು ಮುಂಡರಗಿಯ ಹಿರಿಯರಿಂದ ತಿಳಿದುಬಂದಿತ್ತು.

ಅವರು ನಮ್ಮನ್ನು ಅತಿ ಪ್ರೀತಿ ವಿಶ್ವಾಸ ಮತ್ತು ಆತ್ಮೀಯತೆಯಿಂದ ಬರಮಾಡಿ ಕೊಂಡು ದರ್ಶನಾಶೀರ್ವಾದ ಇತ್ತರು. ಅವರಲ್ಲಿರುವ ಸರಳತೆ, ಸುಜನತೆಯ ಘನತೆ ಯನ್ನು ಪ್ರಪ್ರಥಮ ಭೆಟ್ಟಿಯಲ್ಲಿ ಕಂಡು ನಾನು ತುಂಬಾ ಪ್ರಭಾವಿತನಾದೆ. ಸೊಲ್ಲಾಪುರ ದಲ್ಲಿ ನಡೆಯಬೇಕಾಗಿರುವ ವಿಚಾರ ಸಂಕೀರ್ಣ ಬಗ್ಗೆ ವಿವರವಾಗಿ ಚರ್ಚೆ ಮಾಡಲಾ ಯಿತು. ೧೯೮೧ ರಿಂದ ನಮ್ಮಲ್ಲಿಯ ಬಸವ ಸೆಂಟರ ಸಂಸ್ಥೆಯು ಶರಣರ, ಬಸವಾದಿ ಪ್ರಮಥರ ಜೀವನ ಮತ್ತು ತತ್ವಜ್ಞಾನವನ್ನು ಮಹಾರಾಷ್ಟ್ರದಲ್ಲಿ ಪ್ರಚಾರ ಕಾರ್ಯ ಮಾಡುತ್ತಿರುವದು, ಅವರ ಸಂಸ್ಥೆಯ ಆರ್ಥಿಕ ಸ್ಥಿತಿ ಸುಭದ್ರವಾಗಿಲ್ಲವೆಂದು ಶ್ರೀಗಳಿಗೆ ನಿವೇದಿಸಲಾಗಿ 'ನಿಮ್ಮಿಂದ ಏನೇನು ಸಾಧ್ಯವಿದೆಯೋ ಅದನ್ನು ಮಾಡಿರಿ' ಎಂದು ಸಂತೋಷದಿಂದ ಅಪ್ಪಣೆ ಮಾಡಿದರು.

೧೯೯೩ ಡಿಸೆಂಬರ ೨೫, ೨೬ ಮತ್ತು ೨೭ ರಂದು ಶ್ರೀ ಶಿವಯೋಗಿ ಸಿದ್ಧರಾಮರ ಭೂ ಕೈಲಾಸವೆನಿಸಿದ ಸೊನ್ನಲಾಪುರ ನಗರದಲ್ಲಿ ಮುಂಡರಗಿ ಶ್ರೀ ಅನ್ನದಾನೇಶ್ವರ ಉಪನ್ಯಾಸ ಮಾಲೆಯ ಅಂಗವಾಗಿ ನಾಲ್ಕನೆಯ ಸಂಕೀರ್ಣದಲ್ಲಿ ಶಿವಯೋಗ ಚಕ್ರವರ್ತಿ

ಶ್ರೀ ಸಿದ್ಧರಾಮರ ವಿಚಾರಗಳ ಮೂರುದಿನಗಳಲ್ಲಿ ಆರು ಗೋಷ್ಠಿಗಳು ಬಸವ ಸೆಂಟರಿನ ನೆರಳಲ್ಲಿ ಬಹು ಯಶಸ್ವಿಯಾಗಿ ಜರುಗಿದವು. ಪ್ರಾರಂಭದಲ್ಲಿ ಅಮಿನಗಡದ ಶ್ರೀ ಪ್ರಭುರಾಜೇಂದ್ರ ಮಹಾಸ್ವಾಮಿಗಳವರಿಂದ ಷಟ್‌ಸ್ಥಲ ಧ್ವಜವನ್ನು ಹಾರಿಸಲಾಯಿತು. ಈ ಗೋಷ್ಠಿಗಳಲ್ಲಿ ಹೆಸರಾಂತ ಸಾಹಿತಿಗಳಾದ ಡಾ. ಸಂಗಮೇಶ ಪಂಡಗಿ, ಪ್ರಾ· ಪೋಲಿಸಪಾಟೀಲ, ಪ್ರೊ. ಫ್ಹ. ಜಿ. ಮಾರಿಪಾಳ ಡಾ. ಸೌ. ಸುವರ್ಣಾ ಹೆಗಡೆ, ಡಾ. ಮಾಣಿಕರಾವ ಧನಶ್ರೀ ಮುಂತಾದವರನ್ನು ಶ್ರೀ ಸಿದ್ಧರಾಮರ ವ್ಯಕ್ತಿತ್ವದ ವಿವಿಧ ವಿಷಯಗಳ ಮೇಲೆ ತಮ್ಮ ವಿಚಾರದ ಬೆಳಕನ್ನು ಹಾಕಿದರು. ಸಮಾರೋಪ ಸಮಾರಂಭದ ನೇತೃತ್ವವನ್ನು ಶ್ರೀ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಸುತ್ತೂರಮಠ ಮೈಸೂರ ಇವರು ವಹಿಸಿದ್ದರು. ಈ ಅಮೋಘವಾದ ಸಮಾರಂಭದಲ್ಲಿ ನಂದಗಾಂವ ವಿರಕ್ತಮಠದ ಶ್ರೀ ರಾಜಶೇಖರ ಸ್ವಾಮಿಗಳು ಶ್ರೀ ಮುಂಡರಗಿ ಜಗದ್ಗುರುಗಳಿಂದ ನಡೆಯುತ್ತಿರುವ ಮಹತ್ಕಾರ್ಯದ ಬಗ್ಗೆ ಶ್ರೀಗಳನ್ನು ಅಭಿನಂದಿಸಿ, ಅವರಿಗೆ ಸನ್ಮಾನ ಪತ್ರವನ್ನು ಆದರಪೂರ್ವಕವಾಗಿ ಸಲ್ಲಿಸಿದರು.

ಶ್ರೀ ಶಿವಲಿಂಗ ಮಹಾಸ್ವಾಮಿಗಳು ಒಣ್ಣದಮಠ ಸಿರ್ಸಿ, ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಸರ್ಪಭೂಷಣಮಠ ಬೆಂಗಳೂರು, ಗುದಲಿಶ ಶ್ರೀಗಳು ಹೊಸರಿತ್ತಿ, ಭಾತಂಭ್ರಾ ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ಬೀದರ ಮುಂತಾದವರು ತಮ್ಮ ಪ್ರಭಾವಿ ಶೈಲಿಯಲ್ಲಿ ವಿಚಾರಗಳನ್ನು ಮಂಡಿಸಿದರು. ಬಸವಾದಿ ಪ್ರಮಥರ ಜೀವನದ ಬಗ್ಗೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಛತ್ರದಲ್ಲಿ ಆಳವಾಗಿ ಅಧ್ಯಯನ ಮಾಡಿ ಪಾಂಡಿತ್ಯವನ್ನು ಪಡೆದ ಶ್ರೀ ಅನ್ನದಾನೀಶ್ವರರು ಅಮೋಘವಾದ ಅನುಪಮವಾದ ಗ್ರಂಥಗಳನ್ನು ರಚಿಸಿ ಕೀರ್ತಿ ಪಡೆದಿರುವರು "ಮಾನವ ಧರ್ಮ" ಎಂಬ ಗ್ರಂಥವನ್ನು ನನಗೆ ಓದಲು ಅವಕಾಶ ದೊರೆಯಿತು. ನಮ್ಮಲ್ಲಿಯ ಶರಣ ಬಿ. ಎಸ್. ಜಮಾದಾರರು ಶ್ರೀಗಳಿಂದ ರಚಿತವಾದ ಕನ್ನಡದಲ್ಲಿರುವ ಈ ಗ್ರಂಥವನ್ನು ಮರಾಠಿಯಲ್ಲಿ ಅನುವಾದ ಮಾಡಲಾಗಿದ್ದ ಪುಸ್ತಕ ಈ ಸಮಾರಂಭದಲ್ಲಿ ಬಿಡುಗಡೆ ಹೊಂದಿತು.

ಇದೇ ರೀತಿ ಶ್ರೀ ಗುರು ಸಿದ್ಧರಾಜಯೋಗೀಂದ್ರ ಗುರುಕರ ಸಂಜಾತೆ ಶರಣೆ ಗಿರಿಜಾದೇವಿ ಕಸ್ತೂರ ಇವರು ಅನುಭಾವ ಪೂರ್ಣ ಚರ್ಚೆರೂಪದಲ್ಲಿ ಬರೆದ "ಇಷ್ಟಲಿಂಗ ವ್ರತ" ಎಂಬ ಕನ್ನಡ ನಾಟಕವನ್ನು ನನ್ನ ಧರ್ಮಪತ್ನಿ ಕವಿಯಿನ್ನೀ ಸೌ. ಶಶಿಕಲಾ ಮಡಕಿಯವರು ಮರಾಠಿಯಲ್ಲಿ ಅನುವಾದಿಸಿದ ಪುಸ್ತಕ ಪ್ರಕಾಶನ ಹೊಂದಿತು. ಈ ರೀತಿ ಮರುದಿನ ನಡೆದ ಸಂಭ್ರಮದ ಸಮಾರಂಭಕ್ಕೆ ಮಾರ್ಗದರ್ಶನ ನೀಡಲು ಆಗಮಿಸಿದ ಪೂಜ್ಯ ಮಠಾಧೀಶರ, ಚರ್ಚೆಯಲ್ಲಿ ಭಾಗವಹಿಸಲು ಬಂದ ವಿದ್ವಜ್ಜನರ ಭೋಜನ ಮತ್ತು ನಿವಾಸದ ವ್ಯವಸ್ಥೆ ಹಾಗೂ ಸಭಾಸಮಾರಂಭದ ಪ್ರಚಾರ ಮತ್ತು ಏರ್ಪಾಟದ ಸಿದ್ಧತೆ, ಬಸವ ಸೆಂಟರ ಸಂಸ್ಥೆಯಿಂದ ಮಾಡಲಾಯಿತು. ಆದರೆ ಶ್ರೀ ಸಂಸ್ಥಾನ ಮಠದಿಂದ ಏರ್ಪಡಿಸಿದ ಈ ಉಪನ್ಯಾಸ ಮಾಲೆಯಲ್ಲಿ ಭಾಗವಹಿಸಲು ಆಗಮಿಸಿದ ಮಠಾಧೀಶರನ್ನು

ಪಂಡಿತರನ್ನು ಬರಮಾಡಿಕೊಳ್ಳಲು ಪ್ರವಾಸ ಸಂಭಾವನೆ ಖರ್ಚನ್ನು, ಗೌರವ ಧನವನ್ನು ಹಾಗೂ ಗ್ರಂಥ ಪ್ರಕಾಶಗೆ ಖರ್ಚನ್ನು ನೀಡಿದ ಮುಂಡರಗಿ ಶ್ರೀಗಳು ನಿಜವಾಗಿಯೂ ಧನ್ಯರು. ಅವರಿಗೆ ಸಮಾಜವು ಯಾವತ್ತೂ ಹೊಣೆಯಾಗಿದೆ. ಸಾಂಪತ್ತಿಕ ಮತ್ತು ಆರ್ಥಿಕ ಸುಸ್ಥಿತಿಯಲ್ಲಿರುವ ಅನೇಕ ಮಠಗಳು ನೋಡಲು ಸಿಗುತ್ತವೆ. ಆದರ ಅಲ್ಲಿರುವ ಮಠಾಧೀಶರು ತಮ್ಮ ವ್ಯಕ್ತಿಗತ ವೈಭವದ ಪ್ರದರ್ಶನದಲ್ಲಿಯೇ ಮಗ್ನರಾಗಿರುವರು.

ಪಾಂಡಿತ್ಯ, ಕರ್ತೃತ್ವಶಕ್ತಿ, ಶುದ್ಧಾಚರಣೆ. ಈ ಮೂರು ಗುಣಗಳನ್ನುಳ್ಳ ದಿವ್ಯ ಜ್ಯೋತಿ ಶ್ರೀ ಅನ್ನದಾನೀಶ್ವರರು ಪೀಠಾರೋಹಣ ಮಾಡಿ ೨೫ ವರ್ಷಗಳಾಗುತ್ತಿವೆ. ರಜತಮಹೋತ್ಸವದ ನಿಮಿತ್ಯವಾಗಿ ಶ್ರೀಗಳ ಬಗ್ಗೆ ತಮ್ಮ ಭಕ್ತಿ ಶ್ರದ್ಧೆಗಳನ್ನು ವ್ಯಕ್ತಪಡಿಸಿ, ಅವರಿಗೆ ಕೃತಜ್ಞತೆಯನ್ನು ಸಲ್ಲಿಸಲು ಗೌರವ ಗ್ರಂಥವನ್ನು ಹೊರತರಲು ಸಂಯೋಜಕರು ಸತ್‌ಸಂಕಲ್ಪ ಮಾಡಿದ್ದು ತುಂಬಾ ಸ್ತುತ್ಯವಾಗಿವೆ. ಈ ಸಂದರ್ಭದಲ್ಲಿ ನನಗೂ ನನ್ನ ವಿಚಾರಗಳ-ಶ್ರದ್ಧಾಂಜಲಿಯನ್ನು ಅವರ ಶ್ರೀ ಚರಣಕ್ಕೆ ಅರ್ಪಿಸಲು ಅವಕಾಶ ಸಿಕ್ಕಿದ್ದು ಮಹತ್‌ಭಾಗ್ಯ!

ಬಸವಾದಿ ಪ್ರಮಥರ ದಾರಿಯಲ್ಲಿ ನಡೆದ ಈ ಮಹಾಜ್ಯೋತಿಗೆ ತುಂಬು ಆಯುರಾರೋಗ್ಯ ಆ ಪರಶಿವನು ದಯಪಾಲಿಸಲಿ ಮತ್ತು ಪೂಜ್ಯ ಶ್ರೀಗಳು ಕೈಕೊಂಡ ಕಾರ್ಯಕ್ಕೆ ಯಶ ದೊರೆಯಲೆಂದು ಹಾರೈಸುವೆ.

ಸಮಾಜಸೇವಾಸಕ್ತ ಶ್ರೀಗಳವರು

—ಪ್ರೊ. ಸಿ. ಸಿ. ಪ್ರಭುಗೌಡರ

"Service to a man is the service to the God" ಎನ್ನುವಂತೆ ಮನುಷ್ಯನ ಬದುಕಿಗೆ ಬೆಲೆ ಬರಬೇಕಾದರೆ, ದೇವರ ಪ್ರೀತಿಗೆ ಪಾತ್ರನಾಗಿರಬೇಕಾದರೆ ಮನುಷ್ಯ ಮನುಷ್ಯನಿಗಾಗಿ ದುಡಿಯಲೇಬೇಕು. ತಾನು ತನಗಾಗಿ ಎನ್ನದಲೇ ತಾನು ಪರರಿಗಾಗಿ ಎಂಬ ನಿಸ್ವಾರ್ಥ ಭಾವನೆಯು ಮಾನವನನ್ನು ದೇವಮಾನವನನ್ನಾಗಿ ಮಾಡುವದು. ಆದರೆ ಇಂದಿನ ಈ ದಿನಗಳಲ್ಲಿ ಇಂಥಹ ನಿಸ್ವಾರ್ಥ ಭಾವನೆಯು ಬಹುಶಃ ಮನುಷ್ಯನ ಅಂತರಾಳದಿಂದ ದೂರವಾಗಿದೆ ಎಂದೇ ಹೇಳದೇ ವಿಧಿಯಿಲ್ಲ.

> "Have I not the reason to lament
> what man has made of man....?"

ಎಂಬ ಆಂಗ್ಲ ಕವಿಯ ಅಳಲು ಇಂದಿನ ಈ ಮಾನವ ಜನಾಂಗದ ಸ್ವಾರ್ಥತೆಯ ಮೇಲೆ ಹಿಡಿದ ಕನ್ನಡಿಯಾಗಿದೆ. ಇಂದಿನ ಮಾನವನ ಬದುಕು ಕೇವಲ ಸ್ವಾರ್ಥಕ್ಕಾಗಿ ಮಾತ್ರ ಸೀಮಿತವಾಗಿದೆ. ಇಂಥವರಿಂದಲೇ ಬಹುವಾಗಿ ತುಂಬಿದ ಈ ಸಮಾಜ ಇದ್ದೂ ಸತ್ತ ಹಾಗೆಯೇ ಸರಿ. ಇದನ್ನೇ ಆಂಗ್ಲ ಕವಿ:

> "Breathes there the man with Soul So dead,
> Who never to himself hath said,
> This is my own society and all are my-
> own people."

ಯಾವನು ಈ ಸಮಾಜ ನನ್ನದು, ಇಲ್ಲಿರುವವರೆಲ್ಲರೂ ನನ್ನವರು, ನಾನು ಈ ಸಮಾಜದ ಸೇವೆಗಾಗಿ ಬಂದವನು ಎಂದು ತಿಳಿಯುವದಿಲ್ಲವೋ ಅಂಥವನು ಇದ್ದೂ ಸತ್ತಂತೆ.

ಆದರೆ, ಕಾಲಚಕ್ರದ ಕೊನೆ ಮೊದಲಂತೆ ಕಲಿ–ಪುರುಷನ ಹಗಲಿರುಳಿನಂತೆ ಭಾರತಾಂಬೆಯ ಭಾಗ್ಯೋದಯದಿಂದ ಆಗಾಗ ಯುಗ ಯುಗಾಂತರದಿಂದಲೂ ಯುಗ ಪುರುಷರೂ, ಮಹಾತಪಸ್ವಿಗಳೂ ಭಾರತಾಂಬೆಯ ಪುಣ್ಯ ಗರ್ಭದಿಂದ ಉದಿಸಿ ಲೋಕವ ನಾಕಕ್ಕೆ ಹಿರಿದೆನ್ನುವಂತೆ ತೊಳಗಿ ಬೆಳಗಿ ಕೀರ್ತಿ ಜ್ಯೋತಿಗಳಾಗಿದ್ದಾರೆ, ಆಗುತ್ತಲಿದ್ದಾರೆ. ಖಣಿಯಿಂದ ರತ್ನ, ಮೃಗದಿಂದ ಕಸ್ತೂರಿ, ಪುಷ್ಪದಿಂದ ಪರಿಮಳ ಹೊರಹೊಮ್ಮುವಂತೆ ಮಹಾತ್ಮರ ಉದಯವಾಗುತ್ತದೆ.

"ಶಿವನೆ ಶಿವಾರ್ಚನೈಕರತನಾಗಿರಲೋಸುಗ ಮಾತ್ಮಾಲೋಕದಿಂ
ದವತರಿಸಿ ಸ್ವಕೀಯ ಘನಲೀಲೆಯಾಳೊಯ್ಯನೇಮಾನಷೀಯಮ
ಪ್ಪ ವಿಮಳವೇಷಮಂ ಧರಿಸಿ ಸರ್ವಜಗದ್ಧಿತ ದಿವ್ಯ ಚೇಷ್ಟೆಯಿಂ-
ತವೆಪರಿ ರಂಜಿಪಂ ಪರಮಭಕ್ತಮಯ ಸ್ಥಲದೋಳ್ ಶಿವಾಧವಾ"

ಎಂಬಂತೆ ನಮ್ಮ ಪವಿತ್ರ ಭೂಮಿಯಾದ ಈ ಕರ್ನಾಟಕದಲ್ಲಿ ಮೇಲಿಂದಮೇಲೆ ಧರ್ಮೋದ್ಧಾರಕ್ಕಾಗಿ ಶಿವನೇ ಶಿವಯೋಗಿಗಳ ರೂಪದಿಂದವತರಿಸಿ, ಲಿಂಗಪೂಜೆ, ಅನುಷ್ಠಾನ, ಸತ್‌ಚಾರಿತ್ರ್ಯದಿಂದ ಭಕ್ತೋದ್ಧಾರಣಮಾಡಿ ಸದ್ಭಕ್ತರ ಹೃನ್ನಿಲಯದಲ್ಲಿ ಸದಾ ವಾಸಿಸಿ ಮಾರ್ಗದರ್ಶನ ಗೈಯುತ್ತಿರುವ ಮಹಾಮಹಿಮರಲ್ಲಿ ಮೃಡಗಿರಿಯ ದಶಮ ಪೀಠಾಧಿಪತಿಗಳಾದ ಶ್ರೀಮನ್ನಿರಂಜನ ಪ್ರಣವಸ್ವರೂಪಿ ಜಗದ್ಗುರು ಅನ್ನದಾನೀಶ್ವರ ಮಹಾಪೂಜ್ಯರು.

ನಮ್ಮ ಸೌಭಾಗ್ಯದ ಸಿರಿಯಾಗಿ, ಸಂತೋಷದ ಸಾಗರವಾಗಿ, ಸತ್ಯ ಹಾಗೂ ಸತ್ವಪೂರ್ಣ ಸ್ವಾಮಿಗಳಾಗಿ, ನಿತ್ಯ ತಪಸ್ವಿಗಳಾಗಿ, ಚಿದ್‌ವಿಭೂತಿಗಳಾಗಿ ಭಕ್ತರನ್ನುದ್ಧರಿಸಲು ಅವತರಿಸಿ ಬಂದ ಶಿವಯೋಗಿರೂಪದ ಶಿವನೇ ಮೃಡಗಿರಿಯ ದಶಮಪೀಠಾಧಿಪತಿಗಳಾದ ಜಗದ್ಗುರು ಅನ್ನದಾನ ಮಹಾಸನ್ನಿಧಿಗಳವರು.

ಧರ್ಮ ದಾಸೋಹ, ಜ್ಞಾನ ದಾಸೋಹ, ಪ್ರಸಾದ ದಾಸೋಹ ಶ್ರೀಮಠದ ಸತ್‌ಸಂಪ್ರದಾಯ. ಇವುಗಳನ್ನು ಅನುದಿನವೂ ನಡೆಸಿಕೊಂಡು ಬಂದ ಜಗದ್ಗುರುಗಳಿಗೆ ಇದುವೇ ಶಿವಧರ್ಮ. ಈ ನಾಡಿನ ಜನರ ಸೌಭಾಗ್ಯಕ್ಕಾಗಿ ನಿತ್ಯ ತಪವನ್ನಾಚರಿಸಿ ಆ ಪುಣ್ಯದ ಫಲವನ್ನು ಸಮಸ್ತ ನಾಡಿನ ಜನತೆಗೆ ನೀಡುತ್ತಿರುವ ಸದ್ಯದ ಶ್ರೀಗಳವರ ಕೃಪೆ ಹಿರಿದಾದುದು.

ಪರೋಪಕಾರಾಯ ಫಲಂತಿ ವೃಕ್ಷಾಃ,
ಪರೋಪಕಾರಾಯ ವಹಂತಿ ನದ್ಯಃ,
ಪರೋಪಕಾರಾಯ ವಹಂತಿ ಗಾವಃ,
ಪರೋಪಕಾರಾರ್ಥಂ ಇದಂ ಶರೀರಂ.

ಮಹಾತ್ಮರು, ಶರಣರು, ಸಂತರು ಭೂಲೋಕದಲ್ಲಿ ಅವತರಿಸಿ ಬರುವದು ಕೇವಲ ಪತಿತೋದ್ಧಾರಕ್ಕಾಗಿ, ಲೋಕಕಲ್ಯಾಣಕ್ಕಾಗಿ ಇಂಥಹ ಪವಿತ್ರ ಕಾಯಕವನ್ನು ಮಾಡುವ ಮೂಲಕ ಸಮಾಜದ ಸರ್ವತೋಮುಖ ಏಳಿಗೆಗಾಗಿ ಜನಿಸಿ ಬಂದ ಜಂಗಮ ಪುಂಗವರು ಮುಂಡರಗಿಯ ಮಹಾಸ್ವಾಮಿಗಳವರು. ಒಂದು ಹಿರಿದಾದ ಸಂಸ್ಥಾನಮಠದ ಜಗದ್ಗುರು ಪೀಠವನ್ನು ಅಲಂಕರಿಸಿ ಮಠವನ್ನೇ ಹಿಡಿದುಕೊಂಡು ಕೂಡ್ರುವದರ ಬದಲಾಗಿ ಜೀವನದ ವಿವಿಧ ಕ್ಷೇತ್ರಗಳಲ್ಲಿ ಪೂಜನೀಯವಾದ, ಪವಿತ್ರವಾದ ಕಾಯಕ ಗೈಯಲು ತಮ್ಮನ್ನು ತಾವು ಅರ್ಪಿಸಿಕೊಂಡವರು. ತಮ್ಮ ಪರುಷ ಹಸ್ತವನ್ನು ಚಾಚದೇ ಇರುವ ಕ್ಷೇತ್ರವೇ ಇಲ್ಲ. ದಣಿವರಿಯದ ದುಡಿಮೆ ಪೂಜ್ಯರದು.

ಈ ನಾಡಿನ ಅನೇಕ ಹಳ್ಳಿಗಳಿಗೆ ದಯಮಾಡಿಸುತ್ತಿರುವ ಪೂಜ್ಯ ಶ್ರೀಗಳವರು ಅಲ್ಲಿಯ ಕೆಲ ಜನರ ಮಲಿನವಾದ ಮನಸ್ಸುಗಳನ್ನು ತಮ್ಮ ದಿವ್ಯದರ್ಶನ ಹಾಗೂ ಪ್ರಸಾದವಾಣಿಗಳಿಂದ ತಿದ್ದಿ ಅವರಲ್ಲಿಯ ದಾನವ ಗುಣಗಳನ್ನು ದೂರೀಕರಿಸಿ ಮಾನವೀಯ ಗುಣಗಳನ್ನು ಅವರ ಹೃದಯ ಭೂಮಿಕೆಯಲ್ಲಿ ಬಿತ್ತಿ ಸಹಬದುಕಿಗೆ ಸುಖೀ ಜೀವನಕ್ಕೆ ಅನುವು ನೀಡುತ್ತಿರುವದು ಒಂದು ಪವಾಡ ಸದೃಶ ಕಾರ್ಯವೆಂದೇ ಹೇಳ ಬೇಕು. ಇದಕ್ಕೆ ಉದಾಹರಣೆಯಾಗಿ 'ಬೀಡನಾಳ' ಎಂಬುದು ಈ ತಾಲೂಕಿನಲ್ಲಿರುವ ಚಿಕ್ಕಹಳ್ಳಿ. ಅಲ್ಲಿಯ ಕೊಂಬಳಿ ಬಸಪ್ಪನೆಂಬುವರು ಅಜ್ಞಾನ ಹಾಗೂ ಅಹಂಕಾರದಿಂದ ಇಡೀ ಹಳ್ಳಿಯ ಜನರ ಬದುಕಿನಲ್ಲಿಯೇ ಬಿರುಗಾಳಿಯಂತೆ ಆರ್ಭಟಿಸುತ್ತಾ ಬಂದೂಕು ಧಾರಿಯಾಗಿ ಅಮಾಯಕರ ಹತ್ಯೆಗೆ ಸಿದ್ಧನಾಗಿದ್ದ ಸಮಯದಲ್ಲಿ ಹೇಗೋ ಪೂಜ್ಯ ಜಗದ್ಗುರುಗಳವರಿಗೆ ಈ ವಿಷಯ ತಿಳಿದ ತಕ್ಷಣವೇ ಬೀಡನಾಳ ಗ್ರಾಮಕ್ಕೆ ದಯಮಾಡಿಸಿ, ಬಸಪ್ಪನವರ ಕೋಪವನ್ನು ತಮ್ಮ ಹಿತವಚನಗಳ ಮೂಲಕ ಶಮನಮಾಡಿ ಇಡೀ ಊರೇ ನಿಟ್ಟುಸಿರು ಬಿಡುವಂತೆ ಮಾಡಿದರು. ಬಸಪ್ಪನು ಅತ್ಯಂತ ಸಾತ್ವಿಕ ಹಾಗೂ ಶಾಂತಮೂರ್ತಿ ಯಾದ.

"ಭಕ್ತಿಯ ಬಲ್ಲವರು ನಚ್ಚಿ ಮೆಚ್ಚಿ
ಮನವನೊಚ್ಚುತಗೊಡುವರು...."

ಹಾಗೆಯೇ ಶ್ರೀಮಠದ ಹಾಗೂ ಪೂಜ್ಯರ ಪರಮ ಭಕ್ತರಾದ ಕೊಂಬಳಿ ಬಸಪ್ಪನವರು, ಜಗದ್ಗುರುಗಳವರ ಹಿತವಚನವನ್ನು ಮಹಾ ಪ್ರಸಾದವೆಂಬ ಭಾವನೆಯಿಂದ ಸ್ವೀಕರಿಸಿ ತನ್ನನ್ನು ತಾನು ತಿದ್ದಿಕೊಂಡು ಮುಂದೊದಗಲಿದ್ದ ಅನಾಹುತದಿಂದ ದೂರಾದನು.

ಅಜ್ಞಾನದಿಂದ ಮಾನವತೆಯೇ ಅಳಿದು ಹೋಗುತ್ತಿರುವ ಈ ಸಂಕೀರ್ಣ ಸಮಯ ದಲ್ಲಿ ಸುಜ್ಞಾನದ ಪ್ರಭೆಯನ್ನು ಬೆಳಗಿಸುತ್ತಿರುವ ಶ್ರೀಗಳವರು ಎಲೆಯಮರೆಯ ಕಾಯಿ ಯಂತೆ ಶರಣ ಸಂಸ್ಕೃತಿಯ ಪರಿಮಳ ಸುತ್ತಲೂ ಬೀರುವಂತೆ ಜನಮನವನ್ನು ಸಂಸ್ಕರಿಸು ವತ್ತ ಪ್ರತಿ ಶುಕ್ರವಾರ 'ಶಿವಾನುಭವ' ಕಾರ್ಯಕ್ರಮಗಳನ್ನು ಅವ್ಯಾಹತವಾಗಿ ಅನೇಕ ವರ್ಷಗಳಿಂದ ನಡೆಯಿಸಿಕೊಂಡು ಬರುತ್ತಿದ್ದಾರೆ. ಪ್ರಸಿದ್ಧ ಪ್ರವಚನಕಾರರನ್ನು, ಕೀರ್ತನ ಕಾರರನ್ನು, ವಿದ್ವಾಂಸರನ್ನು ಬರಮಾಡಿಕೊಂಡು ಅವರ ಮುಖಾಂತರ ವೀರಶೈವ ಧರ್ಮದ ತತ್ವಗಳನ್ನು ಜನರಿಗೆ ತಿಳಿಸುತ್ತಾ ಜನರಲ್ಲಿ ಧರ್ಮ ಪ್ರಜ್ಞೆ ಮೂಡಿಸುತ್ತಿದ್ದಾರೆ. ಶ್ರೀಮಠದ ಪರಂಪರೆಯಲ್ಲಿಯೇ ಬೆಳೆಯುತ್ತಿರುವ ಶಾಖಾಮಠಗಳಿರುವ ಹಿರೇವಡ್ಡಟ್ಟಿ, ಕುಕನೂರ, ಲಕ್ಕುಂಡಿ ಮುಂತಾದವುಗಳಲ್ಲಿಯೂ ಕೂಡ ಶಿವಾನುಭವ ಹಾಗೂ ಅನೇಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿವೆ.

'ಶಿವದೀಕ್ಷೆ' ಹಾಗೂ 'ಅಯ್ಯಾಚಾರ' ವಟುಗಳಿಗೆ ಮಾಡಿಸುವದು ಶ್ರೇಷ್ಠ ಸಂಸ್ಕಾರ. ದೀಕ್ಷಾಧಾರಿಯು ಷಡ್ವರ್ಗ ಸಪ್ತವ್ಯಸನಾದಿಗಳನ್ನು ತೊರೆದು ಇಷ್ಟಲಿಂಗವಲ್ಲದೇ

ಅನ್ಯದೇವರನ್ನು ಉಪಾಸಿಸಬಾರದು ಎಂಬ ನೀತಿ ನಿಯಮಗಳನ್ನು ತಿಳಿಸಿಕೊಡುವ ಈ ಮಹಾನ್ ಕಾರ್ಯವನ್ನು ಶ್ರೀಮಠದಿಂದ ಅನೇಕ ನೂರು ವಟುಗಳಿಗೆ ಮಾಡಿಸಿದ್ದಾರೆ.

ವಸ್ತುನಿಷ್ಠವಾಗಿ ಮುಂಡರಗಿ ಬರಗಾಲವೆಂಬ ಬಿರುಗಾಳಿಗೆ ಸಿಕ್ಕು ಸದಾ ಆರ್ಥಿಕವಾಗಿ ಸಂಪೂರ್ಣ ದುರ್ಬಲಗೊಂಡ ನಾಡು. ಇಂಥಹ ಪರಿಸ್ಥಿತಿಯಲ್ಲಿ ಸಾಮಾನ್ಯ ಹಾಗೂ ಬಡಜನತೆಯ ಮಕ್ಕಳು ವಿವಾಹವಾಗುವದು ಅತೀವ ಕಷ್ಟಕರವಾಗಿದೆ. ಇಂಥಹ ಭೀಕರ ಪರಿಸ್ಥಿತಿಯಲ್ಲಿ ಬೆಂಡಾದ ಬಡಜನತೆಯ ಭಾವನೆಗಳಿಗೆ ಜಗದ್ಗುರುಗಳವರು ಸ್ಪಂದಿಸಿ ಪ್ರಾಂಜ್ವಲಮನಸ್ಸಿನಿಂದ,

"ಬಡವರಿಗೆ ಬಗ್ಗರಿಗೆ ಜೀವ ಝುರಿಯಾಗಿ ನಿಂತ, ಕಾಯಕದಿ ಕೈಲಾಸಕಂಡ" ಶಿಷ್ಯರ ಸೇವೆಯಲ್ಲಿ ಶಿವನನ್ನೇ ಕಾಣುತ್ತಿರುವ ಪೂಜ್ಯ ಜಗದ್ಗುರು ಮಹಾಸನ್ನಿಧಿಗಳವರು ಸಾಮೂಹಿಕ ವಿವಾಹದಂತಹ ಕಾರ್ಯಕ್ರಮಗಳನ್ನು ಜಾತ್ರಾಮಹೋತ್ಸವದ ಸಂದರ್ಭದಲ್ಲಿ ಹಮ್ಮಿಕೊಂಡು ಅಂತಹ ಬಡಜನತೆಯ 'ದೀನ ಬಂಧು'ಗಳಾಗಿ ನಮ್ಮೆಲ್ಲರ ಮಧ್ಯೆ ಪ್ರಜ್ವಲಿಸುತ್ತಿದ್ದಾರೆ. ೧೯೮೪ ರಿಂದ ಪ್ರತಿವರುಷ ಅನೇಕ ಜೋಡಿಗಳ ಸಾಮೂಹಿಕ ವಿವಾಹಗಳನ್ನು ನಡೆಸುತ್ತಿರುವದು ಎಲ್ಲರಿಗೂ ಹೆಮ್ಮೆತರುವ ವಿಷಯವಾಗಿದೆ.

ಮೃಡಗಿರಿಯ ಶ್ರೀಮಠವು ಇಂದು ಸೇವಾಕಾರ್ಯ, ಸತ್ಕಾರ್ಯ, ಶಿಕ್ಷಣಾಭಿವೃದ್ಧಿ, ಸಮಾಜಸೇವೆ, ಸಾಂಸ್ಕೃತಿಕ, ಸಾಹಿತ್ಯಿಕ ಚಟುವಟಿಕೆಗಳಿಂದ ನಿಜವಾದ ಅರ್ಥದಲ್ಲಿ ಇದು ಮೃಡನ ಮಠವೇ ಆಗಿದೆ. ಸುಮಾರು ಐದುನೂರು ವರ್ಷಗಳ ಪೂರ್ವದಲ್ಲಿ ಪ್ರಾರಂಭವಾದ ಶ್ರೀಮಠ ಇಂದು ಜ್ಞಾನಜ್ಯೋತಿಯಾಗಿ ಬೆಳಗುತ್ತಿರುವದು ಮೃಡಗಿರಿಯ ಈ ನಾಡಿನ ಸೌಭಾಗ್ಯವೆಂದೇ ಹೇಳಬೇಕು.

ಇಂದಿನ ಜಗದ್ಗುರುಗಳವರು ಹಿಂದಿನವರಂತೆ ಬರಿದೆ ಜಪ, ತಪ, ನೇಮ, ನಿಯಮಗಳನ್ನು ಪಾಲಿಸುತ್ತ ಅನ್ನದಾಸೋಹದಲ್ಲಿ ಆಸಕ್ತರಾಗಿ ಉಳಿಯದೇ ಜ್ಞಾನದಾಸೋಹದ ಕಡೆಗೂ ತಮ್ಮ ಕೃಪಾದೃಷ್ಟಿಯನ್ನು ಹರಿಸುತ್ತಿರುವದು ಎಲ್ಲರ ಸುದೈವ. ಹಿಂದಿನ ಈ ಮಠದ ಯಾವ ಪೀಠಾಧಿಪತಿಗಳೂ ಮಾಡದಷ್ಟು ಮಹತ್ ಸಾಧನೆಯನ್ನು ಸದ್ಯದ ಪೂಜ್ಯರು ಸಾಧಿಸಿದ್ದಾರೆ. ಐವತ್ತು ಸಂವತ್ಸರಗಳನ್ನು ದಾಟಿದ ಪೂಜ್ಯರು ಸಿದ್ಧಪುರುಷರಾಗಿದ್ದಾರೆ, ಜ್ಞಾನದಾಹಿಗಳಾಗಿದ್ದಾರೆ. ಅಷ್ಟೇ ಅಲ್ಲ, ವಿರಕ್ತಮಠದ ಪೀಠವನ್ನು ಅಲಂಕರಿಸಿ ಅದರ ಪರಂಪರೆಯಂತೆ ಯೋಗಿಗಳಾಗಿ, ತ್ಯಾಗಿಗಳಾಗಿ ಹಾಗೂ ವೀರವಿರಾಗಿಗಳಾಗಿ, ಇಂಥಹ ಪದಗಳಿಗೆ ಮೌಲ್ಯವನ್ನು ತಂದುಕೊಟ್ಟ ಮಹಾನುಭಾವಿಗಳು.

ಪ್ರತಿವರ್ಷ ಶ್ರೀಮಠದಲ್ಲಿ ನಡೆಯುವ ಜಾತ್ರಾಮಹೋತ್ಸವ ಇನ್ನಿತರ ಪ್ರದೇಶಗಳಲ್ಲಿ ನಡೆಯುವ ಸಾಮಾನ್ಯ ಹಾಗೂ ಮೋಜಿನ ಜಾತ್ರೆಗಳಂತೆ ಅಲ್ಲ. ಇಲ್ಲಿ ನಡೆಯುವ ಜಾತ್ರಾಮಹೋತ್ಸವ ವೈಶಿಷ್ಟ್ಯಪೂರ್ಣವೂ, ಅರ್ಥಪೂರ್ಣವೂ ಹಾಗೂ ರಚನಾತ್ಮಕವಾದುದು. ಇದೊಂದು ಧರ್ಮ, ಸಂಸ್ಕೃತಿ, ಕಲೆ, ಸಂಗೀತ, ಸಾಹಿತ್ಯಗಳ ಸಂಗಮವಾಗಿ ನಡೆಯುತ್ತ ಆದರ್ಶಪೂರ್ಣವಾಗಿದೆ.

ಈ ಭಾಗದ ರೈತರಿಗೆ ಕೃಷಿಜ್ಞಾನ ನೀಡುವ ನಿಟ್ಟಿನಲ್ಲಿ ಕೃಷಿ ವಸ್ತು ಪ್ರದರ್ಶನ ಹಾಗೂ ಪಶುಸಂಗೋಪನೆಯ ಬಗೆಗೆ ತಿಳುವಳಿಕೆಯನ್ನು ನೀಡಲು ತಜ್ಞರಿಂದ ಕೃಷಿಕರಿಗೆ ಮಾರ್ಗದರ್ಶನ ಮಾಡಲಾಗುತ್ತಿದೆ. ಅಲ್ಲದೇ ದನಗಳ ಪ್ರದರ್ಶನವನ್ನು ಏರ್ಪಡಿಸಿ ಉತ್ತಮ ತಳಿಗಳಿಗೆ ಬಹುಮಾನಗಳನ್ನು ಶ್ರೀಮಠದಿಂದ ಕೊಡಲಾಗುತ್ತಿದೆ.

'Sound mind in a Sound body' 'ಆರೋಗ್ಯವೇ ಭಾಗ್ಯ' ಎಂಬುದನ್ನು ದೃಢೀಕರಿಸಲು ಪೂಜ್ಯ ಜಗದ್ಗುರುಗಳವರು ಜಾತ್ರಾ ಮಹೋತ್ಸವದಲ್ಲಿ ವಿಶೇಷ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವದರ ಮೂಲಕ ಹಾಗೂ ಶ್ರೀಮಠದಲ್ಲಿ ಪ್ರತಿವಾರಕ್ಕೊಮ್ಮೆ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ ಹಾಗೂ ಉಪಚಾರದ ವ್ಯವಸ್ಥೆ ಮಾಡಿ ಭಕ್ತಸಮೂಹದ ಆರೋಗ್ಯದ ಕಾಳಜಿ ವಹಿಸುತ್ತಿರುವದು ಪೂಜ್ಯರ ವಿಶೇಷ ಗುಣವಾಗಿದೆ.

'ಅನ್ನದಾನ' ಹಾಗೂ 'ಜ್ಞಾನದಾನ' ಶ್ರೀಮಠದ ಸತ್‌ಸಂಪ್ರದಾಯ. ಈ ನಾಡಿನ ಜನ ಧರ್ಮವನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಂಡು ಧರ್ಮವಂತರಾಗಿ ನಡೆಯಲಿ ಎಂಬ ಉತ್ಕಟ ಅಭಿಲಾಷೆಯಿಂದ ನಾಡಿನ ನಾನಾಭಾಗಗಳಿಂದ ಪಂಡಿತರನ್ನು, ವಿದ್ವಾಂಸರನ್ನು, ಪ್ರವಚನಕಾರರನ್ನು ಕೀರ್ತನಕಾರರನ್ನು ಜೊತೆ ಜೊತೆಯಾಗಿ ಸಂಗೀತಕಾರರನ್ನು ಕರೆಸಿಕೊಂಡು ಉಪನ್ಯಾಸ, ಕೀರ್ತನ, ಸಂಗೀತ ಕಾರ್ಯಕ್ರಮಗಳನ್ನು ನಡೆಸುವದು ಪೂಜ್ಯ ಶ್ರೀಗಳವರಿಗೆ ಒಂದು ಸತ್-ಸಂಪ್ರದಾಯವೇ ಆಗಿಹೋಗಿದೆ.

ಸಮಾಜಕ್ಕೆ ತಮ್ಮದೇ ಆದ ವಿಶಿಷ್ಟ ಸೇವೆಯನ್ನು ನೀಡುವದರ ಮೂಲಕ ಸಮಾಜದ ಪ್ರಗತಿಗೆ ತಮ್ಮನ್ನು ತಾವೇ ಅರ್ಪಿಸಿಕೊಂಡ ಮಹನೀಯರನ್ನು ಗುರುತಿಸಿ ಅಂಥವರನ್ನು ಸನ್ಮಾನಿಸಿ ಹುರಿದುಂಬಿಸುತ್ತಿರುವ ಪೂಜ್ಯರು ವಿಶೇಷರಲ್ಲಿ ವಿಶೇಷರಾಗಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಅಮೂಲ್ಯವಾದ ಸೇವೆಗೈದ ಡಾ. ತಿಪ್ಪೇರುದ್ರಸ್ವಾಮಿ, ಡಾ.ಹಾ.ಮಾ.ನಾಯಕ, ಡಾ. ಸಿದ್ದಯ್ಯ ಪುರಾಣಿಕ, ಪ್ರೊ. ವೃಷಭೇಂದ್ರಸ್ವಾಮಿ, ಡಾ. ಬಿ. ಸಿ. ಜವಳಿ, ಪ್ರೊ. ದೇವೇಂದ್ರಕುಮಾರ ಹಕಾರಿ, ಡಾ. ಬಿ. ವ್ಹಿ. ಮಲ್ಲಾಪೂರ, ಪ್ರೊ. ಎಸ್. ಎಸ್. ಭೂಸನೂರಮಠ, ಡಾ. ಎಂ. ಎಸ್. ಲಠ್ಠೆ, ಶ್ರೀ ಬಿ. ಕೆ. ಹೊಸಮಠ, ಡಾ. ಎಂ. ಚಿದಾನಂದಮೂರ್ತಿ, ಡಾ. ಪಂಚಾಕ್ಷರಿ ಹಿರೇಮಠ, ಡಾ. ಸಂಗಮೇಶ ಹಂಡಗಿ, ಶ್ರೀಮತಿ ಶಾಂತಾದೇವಿ ಮಾಳವಾಡ, ಶ್ರೀಮತಿ ಶಶಿಕಲಾ ಮಡಕಿ, ಪ್ರೊ. ಮಹಾಲಿಂಗ ಯಾಳಗಿ ಹೀಗೆ ಇನ್ನೂ ಅನೇಕರನ್ನು ಗೌರವಿಸಿದ ಕೀರ್ತಿ ಪೂಜ್ಯ ಶ್ರೀಗಳವರಿಗೆ ಸಲ್ಲುತ್ತದೆ. ನಿಜವಾಗಲೂ ಇದು ಶ್ರೀಗಳವರ ಸೃಜನಶೀಲತೆಯ ಸಂಕೇತವೇ ಸರಿ.

"ಮಾನವ ಜನ್ಮ ಬಹುದೊಡ್ಡದು,
ಬಹುಪುಣ್ಯ ಫಲದಿ ಬಂದಿಹುದು ನೋಡಯ್ಯ,
ಹಾನಿಮಾಡಿಕೊಳ್ಳದೇ ಮನಸಿನಾರಿಯು ಭಜಿಸಿ,
ಮೃಡಗಿರೀಶನ ಪಾದವ ಹೊಂದಿರಯ್ಯ"

ಎಂಬ ಹಿತವಚನವನ್ನಿತ್ತು ರಾಜಕೀಯ ಕ್ಷೇತ್ರದಲ್ಲಿ ದುಡಿಯುತ್ತಿರುವ ವ್ಯಕ್ತಿಗಳು

ಪ್ರಾಮಾಣಿಕವಾಗಿ ಪ್ರಜಾಸತ್ತೆಯ ಸೇವೆಯನ್ನು ಮಾಡಲಿ ಎಂಬ ಭಾವನೆಯಿಂದ ಸದಾ ಅವರನ್ನು ಹರಸಿ ಆಶೀರ್ವಾದಗೈಯ್ಯುತ್ತಿರುವ ಶ್ರೀಗಳು ಅನೇಕ ರಾಜಕೀಯ ವ್ಯಕ್ತಿಗಳನ್ನೂ ಸಹ ಸನ್ಮಾನಿಸಿರುವರು. ಸನ್ಮಾನಿಸಲ್ಪಟ್ಟ ವ್ಯಕ್ತಿಗಳೆಂದರೆ ಸನ್ಮಾನ್ಯ ಶ್ರೀ ವೀರೇಂದ್ರ ಪಾಟೀಲ, ದಿ. ಆರ್. ಗುಂಡುರಾವ್, ಎಂ. ಪಿ. ಪ್ರಕಾಶ, ಜಿ. ಬಿ. ಶಂಕರರಾವ್, ಎಂ. ಕೆ. ಕುಲಕರ್ಣಿ, ಗೂಳಪ್ಪ ಉಪನಾಳ, ಗೋಪಿನಾಥ ಸಾಂಡ್ರಾ, ವ್ಹಿ. ಬಿ. ಭಾವಿ, ಡಾ|| ಸಿ. ಎಂ. ಚುರ್ಚಿಹಾಳಮಠ, ಮಲ್ಲಿಕಾರ್ಜುನ ದಿವಟರ, ಡಾ|| ಪಾಟೀಲ ಪುಟ್ಟಪ್ಪ, ಕೆ. ಎಚ್. ಕುರಡಗಿ ಮುಂತಾದವರು. ಅಲ್ಲದೇ ಅನೇಕ ಸಂಗೀತಗಾರರನ್ನು, ಕಲಾಕಾರರನ್ನು, ಪ್ರಶಸ್ತಿವಿಜೇತ ಆದರ್ಶ ಶಿಕ್ಷಕರನ್ನು ಶ್ರೀ ಮಠಕ್ಕೆ ಕರೆಸಿಕೊಂಡು ಸನ್ಮಾನಿಸಿ ಆಶೀರ್ವದಿಸುತ್ತಿರುವದು ಶ್ರೀಗಳವರ ಮಾತೃಹೃದಯಕ್ಕೆ ಹಿಡಿದ ಕನ್ನಡಿಯಾಗಿದೆ.

> "ಸುಜ್ಞಾನ ಸಿಧಿಯಾಗಿ, ಶಿವಸಾಮ್ರಾಜ್ಯಕ್ಕಾಶಿಸದೇ,
> ನಂಬಿದವರಿಗೆ ಇಂಬುಕೊಡುವ ವರಶಂಭುವೆನಿಸಿ,
> ಸಕಲರ ಪಾವನಗೊಳಿಸುವ ಮಹಾನುಭಾವನೇ
> ಪರಮ ಜಂಗಮವೆಂದ ನಮ್ಮ ಮೃಡಗಿರಿಯ ಅನ್ನದಾನೀಶ"

ಇಂಥಹ ಪರಮಶ್ರೇಷ್ಠನಾದ ಜಂಗಮನೇ ಸಾಕ್ಷಾತ್ ಶಿವನೆಂದು ಅರಿತು ಹಾಗೂ ಈ ಜಂಗಮ ಪುಂಗವರು ನಾಡಿನ ವಿವಿಧ ಭಾಗಗಳಲ್ಲಿ ನೆಲೆಸಿ, ಸಂಚರಿಸಿ ಧರ್ಮಜ್ಯೋತಿಯನ್ನು, ಜ್ಞಾನಜ್ಯೋತಿಯನ್ನು ಬೆಳಗಿಸುತ್ತ ಭಕ್ತರೋದ್ಧಾರದ ಪರಮ ಪವಿತ್ರವಾದ ಕಾರ್ಯಗಳಲ್ಲಿ ಶಿವನನ್ನೇ ಕಂಡುಕೊಳ್ಳುತ್ತಿರುವ ಅನೇಕ ಜಗದ್ಗುರುಗಳನ್ನು, ಮಠಾಧೀಶರನ್ನು, ಸ್ವಾಮಿಗಳನ್ನು ಶ್ರೀ ಮಠಕ್ಕೆ ಬರಮಾಡಿಕೊಂಡು ತಾವುಗಳು ಜಗದ್ಗುರು ಪೀಠಸ್ಥರಾದರೂ ಅಂಥವರನ್ನು ಸತ್ಕರಿಸುತ್ತಿರುವದು ಅತ್ಯಂತ ಆನಂದ ಹಾಗೂ ಅಭಿಮಾನದ ವಿಷಯ. ಇದೂ ಅಲ್ಲದೇ, ಅನೇಕ ಜಂಗಮಮೂರ್ತಿಗಳ ಅಡ್ಡಪಲ್ಲಕ್ಕಿ ಮಹೋತ್ಸವ ಮಾಡಿಸುವದು ಪೂಜ್ಯರು ಜಂಗಮಪ್ರೇಮಿಗಳಾಗಿದ್ದಾರೆಂಬುದಕ್ಕೆ ಜೀವಂತಸಾಕ್ಷಿ. ಶ್ರೀ ಮಠದಿಂದ ಸನ್ಮಾನಿಸಲ್ಪಟ್ಟ ಪೂಜ್ಯರಲ್ಲಿ ಮೂರುಸಾವಿರಮಠದ ಜಗದ್ಗುರು ಗಂಗಾಧರ ಮಹಾಸ್ವಾಮಿಗಳವರು, ಕೊಪ್ಪಳದ ಜಗದ್ಗುರು ಶಿವಶಾಂತವೀರ ಮಹಾಸ್ವಾಮಿಗಳವರು, ಮೂಡಿಯ ಮ. ನಿ. ಪ್ರ. ಚನ್ನವೀರ ಮಹಾಸ್ವಾಮಿಗಳವರು, ಹಿರೇಮಲ್ಲನಕೇರಿಯ ಪೂಜ್ಯರು, ಬೆಳಗಾಂವಿಯ ನಾಗನೂರ ಮಠದ ಶ್ರೀಗಳವರು, ಲಿಂಗನಾಯಕನಹಳ್ಳಿಯ ಮ.ನಿ.ಪ್ರ.ಚನ್ನವೀರ ಮಹಾಸ್ವಾಮಿಗಳವರು, ಜಡೆಯ ಪೂಜ್ಯ ಶ್ರೀಗಳವರು, ಹಾವೇರಿಯ ಮ.ನಿ.ಪ್ರ.ಶಿವಲಿಂಗ ಮಹಾಸ್ವಾಮಿಗಳು, ಲಿಂ. ಹಾನಗಲ್ಲ ಶ್ರೀ ಸದಾಶಿವ ಮಹಾಪೂಜ್ಯರು, ಅಲ್ಲದೇ ಪೂಜ್ಯರು ಗುರು–ವಿರಕ್ತ ಭೇದವಿಲ್ಲದೇ ಗುಗ್ಗೀಹಳ್ಳಿ, ಹೆಡಗಾಪೂರ, ಕಲಬುರ್ಗಿಯ ಪಟ್ಟದದೇವರುಗಳನ್ನು ಸತ್ಕರಿಸಿ ತಮ್ಮಲ್ಲಿರುವ ಸಮಾನತೆಯ ಭಾವ ಹಾಗೂ ಹೃದಯ ವೈಶಾಲ್ಯತೆಯನ್ನು ತೋರಿಸಿ ಆದರ್ಶ ಪಂಕ್ತಿಯನ್ನು ಹಾಕಿದ್ದಾರೆ.

"ಬಡವ ಬಲ್ಲಿದರೆಂಬ ಭೇದವಿಲ್ಲ ರವಿಕಿರಣಕೆ,
ಕಾಗೆ ಕೋಗಿಲೆಯೆಂಬ ಭೇದವಿಲ್ಲ ಮಾಮರಕೆ,
ಸೂಳೆ ಗರತಿಯೆಂಬ ಭೇದವಿಲ್ಲ ಸರೋವರಕೆ,
ಕಾರ್ಯಾಕಾರ್ಯವೆಂಬ ಭೇದವಿಲ್ಲ ಜ್ಯೋತಿಗೆ,
ಮಾನವರಲಿ ಮೇಲು ಕೀಳೆಂಬ ಭೇದವಿಲ್ಲ
ಮೃಡಗಿರಿಯ ಅನ್ನದಾನೀಶನಿಗೆ"

ಎಂಬುದನ್ನು ಚಾಚೂತಪ್ಪದೇ ಪಾಲಿಸಿಕೊಂಡು ಬರುತ್ತಿರುವ ಪೂಜ್ಯ ಶ್ರೀಗಳವರು, ಮುಂಡರಗಿಯ ಪಕ್ಕದ ಚಿಕ್ಕ ಗ್ರಾಮವಾದ ಮುರಲಾಪುರದ ಬಡ ಹರಿಜನ ವಿದ್ಯಾರ್ಥಿಯ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಧನಸಹಾಯ ಮಾಡಿದುದು ಶ್ರೀಗಳವರ ಹಿರಿಮೆಗೆ ಮತ್ತೊಂದು ಕೀರ್ತಿಯ ಗರಿ. ಮುಂಡರಗಿಯ ಶ್ರೀ ಮಠದಲ್ಲಿ ತಾವುಗಳು ಪೀಠಾಧಿಪತಿಗಳಾದಂದಿನಿಂದ ಇಂದಿನವರೆಗೆ ಹಾಗೂ ಮುಂದೆಂದೂ ಅನೇಕ ಬಡ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿ, ಅನ್ನ ನೀಡಿ, ಅಧ್ಯಯನಕ್ಕೆ ಅನುಕೂಲ ಮಾಡಿಕೊಡುತ್ತಿರುವದು ಜಗದ್ಗುರುಗಳವರು ಬಡ ವಿದ್ಯಾರ್ಥಿಗಳಿಗೆ ತೋರುತ್ತಿರುವ ವಿಶಿಷ್ಟ ಕಾಳಜಿ ಹಾಗೂ ಕಳಕಳಿಯನ್ನು ಸೂಚಿಸುತ್ತದೆ.

ಅನ್ನದಾನ, ಜ್ಞಾನದಾನ, ಧನದಾನ ಹಾಗೂ ವಸ್ತ್ರದಾನಗಳನ್ನು ಗೈಯುವ ಸದ್ಗುಣಗಳ ಸಂಗಮವೇ ಪೂಜ್ಯ ಜಗದ್ಗುರು ಮಹಾಸನ್ನಿಧಾನಗಳವರು ಇಲ್ಲಿಯ ಮ. ಶಿ. ಡಂಬಳ ಕನ್ಯಾ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿಯರಿಗೆ ಹಾಗೂ ಇನ್ನಿತರ ಒಟ್ಟು ೫೦೦ ಬಡ ಸ್ತ್ರೀ-ಪುರುಷರಿಗೆ ವಸ್ತ್ರದಾನ ಮಾಡಿದ್ದಾರೆ. ಅಲ್ಲದೇ ಗದುಗಿನ ಪಂಚಾಕ್ಷರಿ ಸಂಗೀತ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ಅಂಥ ಸುಮಾರು ೭೦ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಸ್ತ್ರದಾನ ಗೈದಿದ್ದಾರೆ ಮತ್ತು ಶಿವಕ್ಷೇತ್ರವಾದ ಶ್ರೀ ಶಿವಯೋಗಮಂದಿರದಲ್ಲಿ ಅಧ್ಯಯನ ಮಾಡುತ್ತಿರುವ ವಟು ಬಳಗಕ್ಕೂ ಸಹ ವಸ್ತ್ರದಾನ ಮಾಡಿದ್ದು ಪೂಜ್ಯರ ಹೃದಯ ಶ್ರೀಮಂತಿಕೆಯನ್ನು ತೋರಿಸುತ್ತದೆ. ಅಲ್ಲದೇ ಇನ್ನಿತರರಿಗೆ ಆದರ್ಶವೂ ಅನುಕರಣೀಯರೂ ಆಗಿದ್ದಾರೆ.

ಈ ಭಾಗದ ಜನತೆ ಶಾಶ್ವತವಾದ ಬರಗಾಲದ ಬವಣೆಗೆ ಸಿಕ್ಕು ತತ್ತರಿಸುತ್ತಿರುವ ಈ ಸಂದರ್ಭದಲ್ಲಿ ಸಾಮಾನ್ಯ ಹಾಗೂ ಬಡಜನತೆಗೆ ಮದುವೆಯನ್ನು ಮನೆಯಲ್ಲಿಯೇ ಹಮ್ಮಿಕೊಳ್ಳುವದು ಭಾರವಾದ ಕಾರ್ಯವಾದದ್ದನ್ನು ಅರಿತ ಪೂಜ್ಯ ಜಗದ್ಗುರುಗಳವರು, ಇಲ್ಲಿಯ ಭಕ್ತಸಮುದಾಯದ ಆರ್ಥಿಕ ಹೊರೆಯನ್ನು ಇಳಿಸುವ ಉದ್ದೇಶದಿಂದ ಮುಂಡರಗಿಯಲ್ಲಿ ಸುಮಾರು ೨೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಶ್ರೀ ಮಠದ ಆವರಣದಲ್ಲಿ ಭವ್ಯ ಕಲ್ಯಾಣಮಂಟಪ ತಲೆ ಎತ್ತುತ್ತಿದೆ. ಅಲ್ಲದೇ ಈ ತಾಲೂಕಿನ ಶ್ರೀಕ್ಷೇತ್ರ ಶಿಂಗಟಾಲೂರಿನಲ್ಲಿ ಸುಮಾರು ೬-೮ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಲ್ಯಾಣಮಂಟಪವನ್ನು ಈಗ್ಗೆ ಕೆಲ

ವರ್ಷಗಳ ಹಿಂದೆಯೇ ಕಟ್ಟಿಸಿದ್ದು ಪರಮಪೂಜ್ಯರ ಕೀರ್ತಿ ಕಳಸಕ್ಕೆ ಮತ್ತೊಂದು ಗರಿ ಇಟ್ಟಂತಾಗಿದೆ.

ಮುರಲಾಪುರ, ಮುಂಡರಗಿಯ ಪಕ್ಕದಲ್ಲಿರುವ ಒಂದು ಚಿಕ್ಕ ಹಳ್ಳಿ. ಈ ಹಳ್ಳಿಯ ಜನರೆಲ್ಲ ಶ್ರೀ ಮಠದ ಹಾಗೂ ಪೂಜ್ಯರ ಸದ್ಭಕ್ತರು. ಇಲ್ಲಿಯ ಜನರಿಗೆ ನೀರಿನ ತೊಂದರೆ ಸದಾ ಕಾಡುತ್ತಿತ್ತು. ಇದನ್ನರಿತ ಮಹಾಸ್ವಾಮಿಗಳವರು ಕೆರೆಯನ್ನು ಕಟ್ಟಿಸಲು ಜಾಗೆಯನ್ನು ಕೊಡಿಸಿ ಧನಸಹಾಯ ಮಾಡಿದ ಹಿರಿಮೆ ಶ್ರೀಗಳವರಿಗೆ ಸಲ್ಲುತ್ತದೆ. ಹಾಗೆಯೇ ಇಲ್ಲಿಯ ಮಕ್ಕಳಿಗೆ ಶಾಲೆಯ ಕಟ್ಟಡದ ಕೊರತೆ ಕಂಡುಬಂದಾಗ ಪೂಜ್ಯ ಶ್ರೀಗಳೇ ಮುಂದಾಗಿ ಶಾಲೆಯ ಕಟ್ಟಡಕ್ಕಾಗಿ ಧನಸಹಾಯಮಾಡಿ ಎಲ್ಲ ರೀತಿಯ ನೆರವನ್ನು ನೀಡಿರುವದನ್ನು ನನಗೆ ಇಲ್ಲಿ ಉಲ್ಲೇಖಿಸಲು ಅತೀವ ಆನಂದ ಹಾಗೂ ಅಭಿಮಾನ ವೆನಿಸುತ್ತಿದೆ.

ಜಗದ್ಗುರುಗಳವರು ತಮ್ಮ ಪೀಠಾರೋಹಣದ ರಜತೋತ್ಸವದ ಸಂದರ್ಭ ದಲ್ಲಿ ಶಿರಹಟ್ಟಿ ತಾಲೂಕಿನ ಬೆಳ್ಳಟ್ಟಿ ಗ್ರಾಮದಲ್ಲಿ ಆರೋಗ್ಯ ತಪಾಸಣಾ ಶಿಬಿರ ವನ್ನು ಏರ್ಪಡಿಸಿ ೨೭ ವೈದ್ಯರನ್ನು ಕರೆಸಿಕೊಂಡು ಸುಮಾರು ೨೫೦೦ ಜನರ ಆರೋಗ್ಯ ತಪಾಸಣೆ ಮಾಡಿದುದು ಒಂದು ಹೆಗ್ಗಳಿಕೆಯೇ ಸರಿ. ಮುಂಡರಗಿಯಲ್ಲಿಯೂ ಸಹ "ಆಯ್-ಕ್ಯಾಂಪ"ನ್ನು ಏರ್ಪಡಿಸಿ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಗಳಿಗೆ ಉಚಿತವಾಗಿ ಊಟ ಹಾಗೂ ಕನ್ನಡಕಗಳನ್ನು ನೀಡಿ ಬಡಜನರ ಬಂಧುಗಳಾಗಿ ಅವರನ್ನು ಹರಸುತ್ತಿರು ವದು ಶ್ರೀಗಳು ಗೈಯುತ್ತಿರುವ ಸಮಾಜಸೇವೆಯ ಮೈಲುಗಲ್ಲೆಂದೇ ನಾನು ಭಾವಿಸಿದ್ದೇನೆ.

ಹುಬ್ಬಳ್ಳಿಯ ಕ್ಯಾನ್ಸರ ಆಸ್ಪತ್ರೆಗೆ ನಿತ್ಯ ದಾಸೋಹಕ್ಕಾಗಿ ಸಹಾಯ ಮಾಡಿದುದು ಶ್ಲಾಘ್ಯನೀಯವಾದುದು. ಕರ್ನಾಟಕ ವಿಶ್ವವಿದ್ಯಾಲಯದ ಬಸವಪೀಠದಲ್ಲಿ ಅಭ್ಯಾಸಗೈದು ಹೆಚ್ಚು ಅಂಕಗಳನ್ನು ಪಡೆದವರಿಗೆ ಬಂಗಾರದ ಪದಕವನ್ನು ದಯಪಾಲಿಸುತ್ತಿರುವದು ಹೆಮ್ಮೆಯ ವಿಷಯ. ಮುಂಡರಗಿ ಹಾಗೂ ಇನ್ನಿತರ ಶಾಲೆ-ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಲ್ಲಿ ಗರಿಷ್ಠ ಅಂಕಗಳನ್ನು ಪಡೆದವರಿಗೆ ಧನದ ರೂಪದಲ್ಲಿ ಹಾಗೂ ಗ್ರಂಥರೂಪದಲ್ಲಿ ಬಹುಮಾನಗಳನ್ನು ನೀಡಿ ವಿದ್ಯಾರ್ಥಿ ಬಳಗವನ್ನು ಪ್ರೋತ್ಸಾ ಹಿಸುತ್ತಿರುವದು ಶ್ರೀಗಳು ವಿದ್ಯಾರ್ಥಿಗಳ ಮೇಲಿರುವ ಪ್ರೀತಿ, ವಾತ್ಸಲ್ಯವನ್ನು ತೋರಿಸುತ್ತದೆ.

ಇವೆಲ್ಲವುಗಳ ಮಧ್ಯದಲ್ಲಿಯೂ ಜೀರ್ಣಾವಸ್ಥೆಯಲ್ಲಿದ್ದ ಅನೇಕ ಮಠಗಳ ಜೀರ್ಣೋದ್ಧಾರಗಳನ್ನು ಮಾಡಿದ ಶ್ರೀಗಳವರ ಕಾರ್ಯಕ್ಷೇತ್ರದ ವ್ಯಾಪ್ತಿ ಹಿರಿದಾದುದು. ಬಡಮಕ್ಕಳಿಗೆ ಅನುಕೂಲವಾಗಲೆಂದು ಮುಂಡರಗಿಯಲ್ಲಿ ಒಂದು ಜನರಲ್ ಹಾಸ್ಟೇಲ್‌ನ್ನು ನಡೆಸುತ್ತಿರುವರು. ಪೂಜ್ಯರ ಪವಿತ್ರ ಜೋಳಿಗೆಯೇ ಈ ಪ್ರಸಾದನಿಲಯಕ್ಕೆ ಆಧಾರ. ಹಾಗೆಯೇ ಪರಿಶಿಷ್ಟಜಾತಿ ಹಾಗೂ ಪಂಗಡದವರಿಗಾಗಿ ಒಂದು ಬಿ. ಸಿ. ಹಾಸ್ಟೇಲನ್ನೂ ಸಹ ನಡೆಸುತ್ತಿದ್ದಾರೆ. ಅಲ್ಲದೇ ನಮ್ಮ ಸಂಸ್ಥೆಯಿಂದ ನಡೆಯುತ್ತಿರುವ ಪ್ರೌಢಶಾಲೆ

ಗಳಿರುವ ಊರುಗಳಾದ ಗೊಂಡಬಾಳ, ಹಿರೇವಡ್ಡಟ್ಟಿ, ಬನ್ನಿಕೊಪ್ಪ, ಕುಕನೂರಗಳಲ್ಲಿ ಅಲ್ಲಿಯ ಬಡರೈತ ಹಾಗೂ ಕೂಲಿಕಾರ ಮಕ್ಕಳಿಗೆ ಅನುಕೂಲವಾಗಲೆಂದು ಪ್ರಸಾದ ನಿಲಯಗಳನ್ನು ನಡೆಸುತ್ತ ಬಡ ವಿದ್ಯಾರ್ಥಿಗಳ ಪಾಲಿಗೆ ಸಾಕ್ಷಾತ್-ದೇವಸ್ವರೂಪ ರಾಗಿದ್ದಾರೆ.

ಕುಕನೂರಿನಲ್ಲಿ ಗುದ್ನೆಪ್ಪನಗುಡಿ, ಸೋಮಪುರದಲ್ಲಿ ಶರಣಬಸವೇಶ್ವರ ದೇವಸ್ಥಾನ, ರಾಜೂರಿನಲ್ಲಿ ಶರಣಬಸವೇಶ್ವರ ದೇವಸ್ಥಾನ ಕಟ್ಟಿಸಲು ಜನರನ್ನು ಪ್ರೋತ್ಸಾಹಿಸಿ ಧನಸಹಾಯ ಮಾಡಿರುವದು ಆ ಗ್ರಾಮಗಳ ಭಕ್ತಜನಕ್ಕೆಲ್ಲ ಪೂಜ್ಯರು ಪ್ರಾತಃಸ್ಮರಣೀಯ ರಾಗಿದ್ದಾರೆ. ಇದಲ್ಲದೇ ಮುಂಡರಗಿಯ ನಗರೇಶ್ವರ ದೇವಸ್ಥಾನಕ್ಕೂ ಮತ್ತು ಕೊಪ್ಪಳದ ಗೌರಿಶಂಕರ ದೇವಸ್ಥಾನಕ್ಕೂ ಧನಸಹಾಯ ಮಾಡಿರುವದು ಕೀರ್ತಿಪ್ರಧಾನವಾದುದು.

ಜಗದ್ಗುರು ಅನ್ನದಾನೀಶ್ವರ ವಿದ್ಯಾಸಮಿತಿಯಿಂದ ಒಂದು ಮಹಾವಿದ್ಯಾಲಯ, ಎರಡು ಪದವಿಪೂರ್ವ ಮಹಾವಿದ್ಯಾಲಯ, ಎಂಟು ಪ್ರೌಢಶಾಲೆಗಳು, ಒಂದು ಪಾಲಿಟೆಕ್ನಿಕಲ್ ಕಾಲೇಜ, ಒಂದು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ ಹಾಗೂ ಒಂದು ಸಂಸ್ಕೃತ ಪಾಠಶಾಲೆ ಹೀಗೆ ಅನೇಕ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವ ಪೂಜ್ಯರ ಕ್ರಿಯಾಶೀಲತೆ ಒಂದು ಪವಾಡ ಸದೃಶವಾದುದು. ಒಟ್ಟಾರೆ, ಜಗದ್ಗುರು ಮಹಾಸನ್ನಿಧಿಗಳವರದೊಂದು ದೊಡ್ಡ ಸಂಸಾರ. ಅವರೊಬ್ಬ ಮೇಧಾವಿಗಳು, ನಿಷ್ಕಲಂಕ ಚಾರಿತ್ರರೂ, ವೈರಾಗ್ಯ ಸಂಪನ್ನರೂ, ಭಕ್ತವತ್ಸಲರೂ ಹಾಗೂ ಲೋಕೋದ್ಧಾರಕರು.

ತ್ರಿಭಾಷಾ ಪಂಡಿತರಾದ ಪೂಜ್ಯರು ಈ ನಾಡಿನ ಜೀವನಾಡಿಯಾಗಿದ್ದಾರೆ. ಸುಮಾರು ೪೦ಕ್ಕೂ ಹೆಚ್ಚು ಗ್ರಂಥಗಳನ್ನು ಸ್ವತಃ ರಚಿಸಿ ಸಾರಸ್ವತ ಲೋಕಕ್ಕೆ ಅರ್ಪಿಸಿರುವದು ನಮಗೆಲ್ಲ ಹೆಮ್ಮೆಯ ವಿಷಯ. ಜಗದ್ಗುರುಗಳವರ ವ್ಯಕ್ತಿತ್ವ ಬಹುಮುಖವಾದುದು. ಅಸಾಧಾರಣ ಜ್ಞಾಪಕಶಕ್ತಿ, ಅನುಪಮ ಧಾರ್ಮಿಕ ತೇಜಸ್ಸು, ಪ್ರತಿಭಾನ್ವಿತ ವ್ಯಕ್ತಿತ್ವದಿಂದ ದಿವ್ಯಜ್ಯೋತಿಯಾಗಿ, ಪರಂಜ್ಯೋತಿಯಾಗಿ ನಮ್ಮೆಲ್ಲರ ಮಧ್ಯ ಕಂಗೊಳಿಸುತ್ತಿದ್ದಾರೆ. ಇನ್ನೂ ಪೂಜ್ಯರಿಂದ ಸಮಾಜಕ್ಕೆ ಬಹುವಾದ ಕೊಡುಗೆ ಬರುವಂತಾಗಲಿ, ಆ ದಿಶೆಯಲ್ಲಿ ಅವರಿಗೆ ಹೆಚ್ಚಿನ ಆಯುರಾರೋಗ್ಯ ಭಾಗ್ಯಗಳನ್ನು ಆ ಕರ್ತೃ ಜಗದ್ಗುರು ಅನ್ನದಾನೀಶನು ನೀಡಲಿ ಎಂದು ಅವನಡಿಗಳಲ್ಲಿ ಸದಾ ತಪಗೈಯ್ಯುವೆನು.

ನಾ ಕಂಡ ಕರುಣಾನಿಧಿ

—ಶ್ರೀಮತಿ ಗಿರಿಜಾದೇವಿ ನಂಜುಂಡಪ್ಪ ಕೆಸ್ತೂರ, ಕೆಸ್ತೂರ

ಜಗವ ತುಂಬಿದ ಲಿಂಗ। ಅಗಜೆ ಮೆಚ್ಚಿದ ಲಿಂಗ
ಅಜಹರಿ ಸುರರು। ಪೂಜಿಸಿದ ಮಹಾಲಿಂಗ
ಗುರುಕೃಪೆ ಬಲದಿಂದ। ಶಿಷ್ಯನ ಅಂಗೈಗೆ
ಆಗಮಿಸಿದುದೇ ಇಷ್ಟಲಿಂಗವೆಂದ
ನಮ್ಮ ವೃಡಗಿರಿಯ ಅನ್ನದಾನೀಶ॥

ಅದೊಂದು ಮಂಗಲಮಯ ಸುಪ್ರಭಾತ ಸಮಯ, ಎನ್ನ ಪರಮಾರಾಧ್ಯಗುರು ಶ್ರೀ ಮ. ನಿ. ಪ್ರ. ಶ್ರೀ ಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಶಿವಯೋಗಿಗಳ ಶ್ರೀಪಾದ ಪೂಜೆ ನಡೆದಿತ್ತು. ಪೂಜ್ಯ ಗುರುಗಳ ಉತ್ತರಾಧಿಕಾರಿಗಳೆನಿಸಿದ್ದ ಶಿಶ್ವಿಯ ಶ್ರೀ ಶಿವಲಿಂಗ ಸ್ವಾಮಿಗಳು ಈ ವಚನವನ್ನು ಬಹು ಇಂಪಾಗಿ ಹಾಡಿದರು. ಅದನಾಲಿಸಿದಾಗ ನನಗಾದ ಆನಂದ ಅಷ್ಟಿಷ್ಟಲ್ಲ. ಆ ವಚನ ರಚನೆಯಾರದೆಂದು ಕೇಳಿ ತಿಳಿಯುವ ತವಕ ಬಹಳವಾಯ್ತು. ಅರ್ಚನ, ಅರ್ಪಣ, ಅನುಭವದ ನಂತರ, ಶ್ರೀಗಳವರಲ್ಲಿ ಆ ಬಗ್ಗೆ ವಿಚಾರಿಸಿ, ಅದನ್ನು ಬರೆದುಕೊಡುವಂತೆ ಅಪೇಕ್ಷಿಸಿದೆ. ಶ್ರೀಗಳು 'ವಚನವಲ್ಲರಿ' ಎಂಬ ಗ್ರಂಥವನ್ನೇ ಕೊಟ್ಟು, ಅದನ್ನು ನೀವೇ ಇಟ್ಟುಕೊಳ್ಳಿರೆಂದರು. ಬಿಡುವಿನ ವೇಳೆಯಲ್ಲಿ ಕುಳಿತು ಪುಸ್ತಕವನ್ನು ತೆರೆದೆ. ಒಂದಾದ ಮೇಲೊಂದರಂತೆ ಓದಿದಷ್ಟೂ ಆನಂದದಿಂದ ಮನಸ್ಸು ಮಂತ್ರಮುಗ್ಧವಾಯ್ತು. ಪೂರ್ತಿ ಮುಗಿಸಿದ ನಂತರವೇ ಬಾಹ್ಯದ ಅರಿವಾದದ್ದು. 'ಅಷ್ಟಾವರಣ', 'ಪಂಚಾಚಾರ', 'ಷಟ್‌ಸ್ಥಲ'ದ ವೀರಶೈವ ತತ್ವಸಿದ್ಧಾಂತವೇ ಪುಟ್ಟ ಪುಸ್ತಿಕೆಯಲ್ಲಿ ಅಡಕವಾಗಿರುವುದ ಕಂಡು, ಅಂಗೈಯಲ್ಲಿಯ ಲಿಂಗದೇವನನ್ನೇ ಕಂಡಂತಾಗಿ, "ಈ ಲಿಂಗದೊಡಲೊಳಗೆ ಮೂಲೋಕವಡಗಿಪುದು" ಎಂದು ನನಗರಿವಿಲ್ಲದೆಯೇ ಮಂತ್ರೋಚ್ಚಾರದಂತೆ ನುಡಿ ಹೊರಹೊಮ್ಮಿತು. ಅಂದಿನಿಂದಲೇ ಆ ಮಹಾಲಿಂಗಮೂರ್ತಿಯ ಶ್ರೀಪಾದ ದರ್ಶನಾಕಾಂಕ್ಷೆ ಬಹಳವಾಯ್ತು. ಆದರೆ, ಗ್ರಂಥದಲ್ಲಿ 'ಜಗದ್ಗುರು' ಅನ್ನದಾನೀಶ್ವರರು ಎಂದಿರುವುದನ್ನು ನೋಡಿದಾಗ ಮನ ಮುದುಡಿ, ಓ, ಅದು ಶ್ರೀಗಿರಿ! ನಾವಾದರೋ ಅವರ ಪದತಳದಲ್ಲಿರುವ ನೊರಜುಗಲ್ಲುಗಳು, ಬಡ ಭಕ್ತರಿಗೆ ಎಟುಕದ ಮಾತು ಎನಿಸಿ, ಆಸೆ ಆಸೆಯಾಗಿಯೇ ಉಳಿಯಿತು. ಆದರೂ, ಆಗಾಗ್ಗೆ ಕಂಗಳಲ್ಲಿ ಆ ನಿಜ ಜಂಗಮ ಲಿಂಗದ ಶ್ರೀಪಾದಂಗಳು ತುಂಬಿ ಬರುತ್ತಿದ್ದು, ಏನಾದರಾಗಲಿ ಒಮ್ಮೆ ಆ ಶಿವಯೋಗಿ ತಂದೆಯ ಶ್ರೀಪಾದದರ್ಶನ, ಪಾದೋದಕ

ಪ್ರಸಾದಗಳನ್ನು ಪಡೆಯಲೇಬೇಕೆಂಬ ಹಂಬಲ ಬಹಳವಾದರೂ, "ಎತ್ತಣ ಮಾಮರ! ಎತ್ತಣ ಕೋಗಿಲೆ! ಎಂಬಂತೆ, ವೃಡಗಿರಿ ಎಲ್ಲಿ? ಕೆಸ್ತೂರೆಲ್ಲಿ? ಹೀಗಾಗಿ ಹಂಬಲ ಅಂತರಾಳದಲ್ಲೇ ಉಳಿಯಿತು. ಆಸಿತರಲ್ಲಿ "ಕಣ್ಣೆಂಬುದು ಅವಗಿಲ್ಲಂತೆ, ಕಣ್ಣಾಗೆ ಕಣ್ಣಾಗಿಪನಂತೆ, ಕಣ್ಣ ತೆರೆದು ತನ್ನರಸುವ ಜನರಿಗೆ ಬಣ್ಣ ಬಣ್ಣವಾಗಿಪನಂತೆ" ಎಂಬಂತೆ ಒಂದು ಪ್ರಸಂಗವೊದಗಿತು. ಅದೆಂದರ,

ನಮ್ಮ ಸಮಾಜದಲ್ಲಿ ಲಿಂಗವಂತರೆನಿಸಿ, ಅಂಗದ ಮೇಲೆ ಲಿಂಗಧಾರಣವಿಲ್ಲದೆ ಬಹುದೇವೋಪಾಸಕರಾಗಿ ಆಚರಿಸುತ್ತಿರುವ ಆಚರಣೆಗಳನ್ನು ಕಂಡಾಗ ಆದ ಅನಿಸಿಕೆಗಳನ್ನು "ಇಷ್ಟಲಿಂಗ ವ್ರತ" ಎಂಬ ನಾಮಾಂಕಿತದಲ್ಲಿ ಬರೆದು, ಅದನ್ನು ಪರಿಶೀಲಿಸಲು ಶಿರ್ಸಿಯ ನಮ್ಮ ಪೂಜ್ಯ ಸದ್ಗುರುಗಳ ಶ್ರೀಪಾದಕ್ಕೆ ಅರ್ಪಿಸಲು, ಶ್ರೀ ಶಿವಲಿಂಗ ಶ್ರೀಗಳಲ್ಲಿಗೆ ಕಳುಹಿಸಿದ್ದೆ. ಹಂದಿಗನೂರಿನ ಶ್ರೀಮಠದ ಶ್ರಾವಣದ ಕಾರ್ಯಕ್ರಮ ನಿಮಿತ್ತವಾಗಿ ಅಲ್ಲಿಗೆ ಆಗಮಿಸಿದ್ದ ಜಗದ್ಗುರು ಅನ್ನದಾನ ಮಹಾ ಶಿವಯೋಗಿಗಳು ಅದನ್ನು ನೋಡಿ ಆನಂದಪಟ್ಟು ನಮ್ಮ ಸಮಾಜಕ್ಕಿಂದು ಇಂತಹ ಪುಸ್ತಕಗಳು ಅವಶ್ಯಬೇಕಾಗಿವೆ. ಆದ್ದರಿಂದ ಇದನ್ನು ನಾವೇ ಒಯ್ದು ನಮ್ಮ ಮಠದಿಂದಲೇ ಪ್ರಿಂಟ್ ಮಾಡಿಸುತ್ತೇವೆಂದು ಜೊತೆಯಲ್ಲೇ ಒಯ್ದರೆಂದು, ನಮ್ಮ 'ಅನುಭವಮಂಟಪ'ದ ಕಾರ್ಯಕ್ರಮಕ್ಕೆ ದಯ ಮಾಡಿಸಿದ್ದಾಗ್ಗೆ ತಿಳಿಸಿದರು. ಆದ ಕೇಳಿ ಮೂಕವಿಸ್ಮಿತಳಾದೆ. ಶ್ರೀಪಾದದರ್ಶನ ಒಮ್ಮೆಯೂ ನಮಗಾಗಿಲ್ಲ. ಸನ್ನಿಧಿಗೂ ನಮ್ಮ ಪರಿಚಯವಿಲ್ಲ ಏನಿದೀ ದೇವ ದೇವ ಮಹಾದೇವನ ಲೀಲೆ! ಎಂದು ಕಂಗಳು ತುಂಬಿ ಬಂದುವು. ನಿಜಕ್ಕೂ 'ಭಕ್ತದೇಹಿಕ ದೇವ'. ಈ ಅನ್ಯೋನ್ಯ ಸಂಬಂಧ ಇಂದು ನಿನ್ನೆಯದಲ್ಲ; ಅನಾದಿಯಿಂದ ಬಂದುದು ಎಂಬುದರ ಅರಿವಾಗಿ, ಶಿವಯೋಗಿ ಭಕ್ತಪ್ರೇಮಿ, ಭಕ್ತವತ್ಸಲ, ಭಕ್ತ ಬಾಂಧವ ಎಂಬುದರ ಪ್ರತ್ಯಕ್ಷ ಸತ್ಯತೆ ಗೋಚರವಾಗಿ ಎಣೆಯಿಲ್ಲದಾನಂದವಾಯ್ತು. ಆಗಲೇ ನಮ್ಮ ಬಹುದಿನಗಳ ಹೆಬ್ಬಯಕೆಯನ್ನು ಶಿವಲಿಂಗ ಶ್ರೀಗಳ ಶ್ರೀಪಾದಂಗಳಲ್ಲಿ ನಿವೇದಿಸಿಕೊಂಡಾಗ, ಅವರೆಂದರು, ಅವರು ಜಗದ್ಗುರುಗಳೇ ಅಹುದು. ಆದರೆ, ನೀವು ತಿಳಿದಂಥಾ ಜಗದ್ಗುರು ಗಳಲ್ಲ ಎಲ್ಲದರಲ್ಲಿಯೂ ತುಂಬು ಸರಳ ಸ್ವಭಾವದ ನಿರಾಡಂಬರದ ಮೂರ್ತಿಗಳು. ಅವರಲ್ಲಿ ಅಪಾರ ಪಾಂಡಿತ್ಯ, ಅಪಾರ ಜ್ಞಾನ ಶಿವತತ್ವದನುಭವಪೂರ್ಣ ಕರತಲಾಮಲಕ ವಾಗಿದ್ದರೂ ಬಡಭಕ್ತ ಶಿಶುಗಳ ತೊದಲ್ನುಡಿಗೂ ಅಷ್ಟೇ ಮಹತ್ವ ಕೊಡುವ ಕೃಪಾನಿಧಿಗಳು. ಸನ್ನಿಧಿಯ ಬಗ್ಗೆ ಎಷ್ಟು ಹೇಳಿದರೂ ಸಾಲದು ಪ್ರತ್ಯಕ್ಷ ನೋಡಿಯೇ ಕಾಣಬೇಕು. ಜಗದ್ಗುರುವೆನಿಸಿದ್ದರೂ ಬಡವನ ಹುಲ್ಲು ಜೋಪಡಿಯಲ್ಲೂ ಅಷ್ಟೇ ಆನಂದದಿಂದ ಲಿಂಗಾರ್ಚನೆಗೈವ ಕರುಣಾಮೂರ್ತಿಗಳವರು. ನಿಮ್ಮ ಪರವಾಗಿ ನಾನೇ ಬಿನ್ನವಿಸುವೆ ನೀವೇ ಪ್ರತ್ಯಕ್ಷ ನೋಡುವಿರಂತೆ ಚಿಂತಿಸದಿರಿ ಎಂದು ಅಭಯಾಶೀರ್ವಾದ ವಿತ್ತರು. ಅಂತೆಯೇ ಆ ಮಂಗಲದ ಸುದಿನ ಒಂದೇ ಬಂತು. ನಮ್ಮ 'ಅನುಭವಮಂಟಪ'ದ ಹನ್ನೆರಡನೇ ವಾರ್ಷಿಕೋತ್ಸವಕ್ಕೆ ಅಲ್ಲಮಪ್ರಭು ಕಲ್ಯಾಣದ ಬಸವಣ್ಣನ

ಅನುಭವಮಂಟಪಕ್ಕೆ ಆಗಮಿಸಿದಂತೆ ಕಸ್ತೂರಿಗೆ ಶ್ರೀಪಾದಂಗಳನ್ನು ಬಿಜಯಂಗೈಸಿ, ಎಮ್ಮಗಳಿಗೆ ಪಾದೋದಕ ಪ್ರಸಾದಗಳನ್ನು ಅನುಗ್ರಹಿಸಿ ಕೃತಾರ್ಥರನ್ನಾಗಿಸಿದರು. ಅಂದು ನಮಗಾದ ಆನಂದಕ್ಕೆ ಪಾರವೇ ಇಲ್ಲ. ಅಂದಿನ ಸಮಾರಂಭದ ಅಧ್ಯಕ್ಷ ಪೀಠ ವನ್ನಲಂಕರಿಸಿ ಆಶೀರ್ವಚನ ನೀಡಿದಾಗಿನ ಅವರ ಒಂದು ಅಮೃತ ಸಮವಾದ ಪ್ರಸಾದ ವಾಣಿ ಇಂದಿಗೂ ನಮ್ಮಗಳ ಮನಃಪಟಲದಲ್ಲಿ ಅಚ್ಚಳಿಯದೆ ಉಳಿದು ನಿತ್ಯನೂತನವಾಗಿ ಉಳಿದು ಸದಾ ನಮ್ಮನ್ನು ಎಚ್ಚರದಲ್ಲಿರಿಸಿದೆ. ಅದೆಂದರೆ, "ಸಂತ ಕಬೀರದಾಸರು ಒಮ್ಮೆ ತಮ್ಮ ಒಬ್ಬ ಶಿಷ್ಯನೊಂದಿಗೆ ಚರಿಸುತ್ತಿದ್ದಾಗ, ಒಂದು ಮನೆಯಂಗಳದಲ್ಲಿ ಒಬ್ಬ ಹೆಣ್ಣುಮಗಳು 'ರಾಗಿ' ಬೀಸುತ್ತಿರುವುದನ್ನು ನೋಡಿ ಅತ್ತರಂತೆ. ಹಿಂದೆಯೇ ಸ್ವಲ್ಪ ಹೊತ್ತಿನಲ್ಲೇ ಜೋರಾಗಿ ನಕ್ಕರಂತೆ, ಅದನ್ನು ನೋಡಿದ ಶಿಷ್ಯ ಹೀಗೇಕೆ ಮಾಡಿದಿರೆಂದು ಕೇಳಿದಾಗ ಹೇಳಿದರಂತೆ, ಈ ರಾಗಿಯಂತೆ ಜೀವರು ಭವದಲ್ಲಿ ಹುಟ್ಟಿ, ಶಿವಜ್ಞಾನವಿಲ್ಲದೆ ಕಾಲ, ಕಾಮ, ಮಾಯೆ, ಇವರ ಬಲೆಯಲ್ಲಿ ಸಿಕ್ಕಿ ರಾಗಿಯ ಹಿಟ್ಟಿನಂತಾಗುತ್ತಿದ್ದಾರೆ. ತಾನಾರೆಂಬುದನರಿತ ಜ್ಞಾನಿಗಳು, ಗೂಟವನ್ನಾಶ್ರಯಿಸಿ ಉಳಿದ ಕಾಳಿನಂತೆ, ದೇವನನ್ನಾಶ್ರಯಿಸಿ ಬಾಳನ್ನು ಸಾರ್ಥಕಗೊಳಿಸಿಕೊಳ್ಳುತ್ತಾರೆ. ಅದ ನೆನೆದು ಹಾಗೆ ಮಾಡಿದೆ ಎಂದರಂತೆ. ಆ ಪ್ರಸಾದವಾಣಿ ಹನ್ನೆರಡು ವರ್ಷಗಳುರುಳಿದರೂ ಇದೀಗ ಆಲಿಸಿದಂತಿದೆ. ಅರಿದಲ್ಲಿ ಮಹಾತ್ಮರ ನುಡಿ, ಮರೆಹಿನ ಮಾನವರನ್ನು ಕತ್ತಲೆಯಿಂದ ಬೆಳಕಿನೆಡೆಗೆ ಒಯ್ಯುತ್ತದೆಂಬುದರ ಸತ್ಯ ಸಾಕ್ಷಾತ್ಕಾರವಿದೆ ಎಂಬುದರ ಅರಿವಾಯ್ತು. ಪೂಜ್ಯ ಪಾದರಿಲ್ಲಿಗೆ ದಯಮಾಡಿಸಿದ್ದಾಗ್ಗೆ, ಈ ಕಂದರಲ್ಲಿ ಕರುಣೆದೋರಿ, ಅವರ ಅಮೂಲ್ಯ ಸಾಹಿತ್ಯ ನಿಧಿಯನ್ನೇ ಉಚಿತವಾಗಿ ನೀಡಿದ ನಿಜ ಜ್ಞಾನಾನ್ನದಾನಿಗಳು; ಇವರ ಕೃತಿಗಳಂತೂ ಒಂದಕ್ಕಿಂತ ಒಂದು ಮೇರು ಸದೃಶದಂತೆ ಅಪೂರ್ವ ಕೃತಿಗಳಾಗಿವೆ. ಅದರಲ್ಲೂ "ವೀರಶೈವ ದಾರ್ಶನಿಕ ಸಿದ್ಧಾಂತ"ವಂತೂ ಗೌರೀಶಂಕರ ಶಿಖರದಂತೆ ಕಂಗೊಳಿಸಿದೆ. ಓದುಗರೆಲ್ಲರಿಗೂ ಅದರಲ್ಲಿ ತಲ್ಲೀನರಾದಾಗ, ಆವ ಜನ್ಮದ ಸುಕೃತ ಫಲವೋ ನಾವು ಕಂಡೆವು. 'ವೀರಶೈವ ದಾರ್ಶನಿಕ ಸಿದ್ಧಾಂತ'ವ ಎಮ್ಮಂತೆ ಪುಣ್ಯ ಪಡೆದವರುಂಟೆ? ನಮ್ಮಂಥ ಭಾಗ್ಯಶಾಲಿಗಳುಂಟೆ? ಎನಿಸದಿರಲಾರದು. ಪೂಜ್ಯ ಶಿವಲಿಂಗ ಶ್ರೀಗಳು ತಿಳಿಸಿದಂತೆ ಸನ್ನಿಧಿಯ ಬಗ್ಗೆ ಎಷ್ಟು ನೆನೆದರೂ ಕಡಿಮೆಯೇ; ದರ್ಶಿಸಿಯೇ ಕಾಣಬೇಕು. ನಮ್ಮ ಆರಾಧ್ಯ ಸದ್ಗುರು, ಶ್ರೀ, ಶ್ರೀ, ಗುರುಸಿದ್ಧ ಮಹಾ ಶಿವಯೋಗಿಗಳಿಗಂತೂ, ಮೃಡಗಿರಿಯ ಅನ್ನದಾನ ಮಹಾ ಶಿವಯೋಗಿಗಳೆಂದರೆ ಅಪಾರ ಪ್ರೇಮ! ಶ್ರೀ ಮಠದಲ್ಲಿ ಏನೇ ಸಮಾರಂಭದುತ್ಸವಗಳು ನಡೆದರೂ, ಅನ್ನದಾನ ಶಿವಯೋಗಿಗಳ ಪಾದ ಪೂಜೆಯೇ ನಡೆಯಬೇಕು. ತಾವು ತುಂಬು ಹಿರಿಯರಾದರೂ ಅನ್ನದಾನೀಶನನ್ನೆ ಗದ್ದುಗೆಯಲ್ಲಿ ಮೂರ್ತಗೊಳಿಸಬೇಕು, ಪಾದೋದಕ ಪ್ರಸಾದ ಪಡೆದುಕೊಳ್ಳುವಲ್ಲಿ ಅದೆಷ್ಟೊ ಆನಂದ ತುಂದಿಲರಾಗುತ್ತಿದ್ದರೆಂದರೆ, ಆ ದೃಶ್ಯವ ನೋಡಿದ ಕಂಗಳ ಪುಣ್ಯವೇ ಪುಣ್ಯ. ಆ ಸ್ಮರಣೆ ಕಂಗಳಲ್ಲಿ ಆನಂದದ ಹನಿಗಳನ್ನು ತುಂಬಿ ತುಳುಕಿಸುತ್ತೆ, ಅವರಿಬ್ಬರಲ್ಲಿ ಒಬ್ಬರಗಿಂತ

ಒಬ್ಬರಲ್ಲಿ ಇದ್ದ ಕಿಂಕರತೆಯ ಸಂಭಾಷಣೆ, ಒಬ್ಬರ ಮೇಲೆ ಒಬ್ಬರಿಗಿದ್ದ ಭಕ್ತಿಯ ಪರಾಕಾಷ್ಠತೆಯ ಚಿದ್‌ಬೆಳಗು, ಅಲ್ಲಮಹಾಪ್ರಭು ಹಾಗೂ ಜ್ಞಾನನಿಧಿ ಚೆನ್ನಬಸವೇಶ್ವರರ ಭಕ್ತಿ ಕಿಂಕರತೆಯ ಪ್ರಶ್ನೋತ್ತರ ನಿರೂಪಣೆಗಳನ್ನು ಪ್ರತ್ಯಕ್ಷ ದರ್ಶಿಸಿ ಆಲಿಸಿದಷ್ಟು ಆನಂದ, ಆ ದೃಶ್ಯವನ್ನು ಕಂಡೇ ನಾವು ಪೂಜ್ಯ ಗುರುಸಿದ್ಧ ಮಹಾಶಿವಯೋಗಿಗಳನ್ನು 'ಅಲ್ಲಮಪ್ರಭು'ವೆಂತಲೂ, ಅನ್ನದಾನ ಶಿವಯೋಗಿಗಳನ್ನು 'ಚೆನ್ನಬಸವೇಶ್ವರ'ಕ್ಕಿಂತಲೂ ಗುರುತಿಸಿದ್ದೇವೆ. ಜಗಹಿತಾರ್ಥವಾಗಿ ಅವರೇ ಬೇರೊಂದು ನಾಮ ರೂಪು ಧರಿಸಿ ನಮಗೆ ಗೋಚರಿಸಿದ್ದಾರೆಂದೇ ಎಮ್ಮಾತ್ಮ ಎಚ್ಚರಿಸಿದೆ. ಬಸವೇಶ, ಚೆನ್ನಬಸವೇಶ, ಅಲ್ಲಮಪ್ರಭು ಮುಂತಾದ ಶರಣರೆಲ್ಲ ಈಗ್ಗೆ ಹನ್ನೆರಡನೆಯ ಶತಮಾನದಲ್ಲಿ ಇದ್ದರು ಎಂದೇ ಹೇಳುತ್ತಾರೆ. ಶಿವಾತ್ಮ ಮಹಾಚೇತನ ಇದ್ದು ಹೋಗುವಂತಹುದಲ್ಲ. ಅನಾದಿಯಿಂದಲೂ ಎಂದೆಂದಿಗೂ ಇದ್ದೇ ಇರುವುದು. ಲೀಲಾ ಮಾತ್ರವಾಗಿ ಜಗಹಿತಾರ್ಥವಾಗಿ ಅನಂತ ರೂಪು ಧರಿಸಿ ಚಿರಂತನವಾಗಿರುವುದು. ಭಕ್ತಿ ಭಂಡಾರಿ ಬಸವೇಶನ ಸಂದೇಶ, ಸಪ್ತ ಶೀಲಗಳನ್ನು ಮೈಗೂಡಿಸಿಕೊಂಡು ಗುರು ಲಿಂಗ ಜಂಗಮದಲ್ಲಿ ಭಕ್ತಿ, ಆಚಾರದಲ್ಲಿ ನಿಷ್ಠೆ, ಗಟ್ಟಿಗೊಂಡವರಿಗೆ ಅದರ ಸಾಕ್ಷಾತ್ಕಾರ ಆಗೇ ಆಗುವುದು. ಇಂದು ಮಾನವ ಕುಲಕ್ಕೆ ಹೆಚ್ಚು ಭಾಗ ಮರೆವಿನ ಕತ್ತಲಾವರಿಸಿರುವುದರಿಂದ ಅರಿವು ಮರೆಯಾಗಿದೆ, ಅದಕ್ಕೆಂದೇ ಅಲ್ಲಮಪ್ರಭುಗಳು

"ಆಯಿತ್ತೆ ಉದಯಮಾನ ಹೋಯಿತ್ತೆ ಅಸ್ತಮಾನ;
ಅಳಿದುವಲ್ಲಾ ನೀರಲಾದ ನಿರ್ಮಿತಂಗಳೆಲ್ಲಾ!
ಕತ್ತಲೆ ಕವಿಯಿತ್ತು ಮೂರು ಲೋಕದೊಳಗೆ
ಇದರಚ್ಚುಗವೇನು ಹೇಳಾ ಗುಹೇಶ್ವರ"

ಎಂದು ಅಪ್ಪಣೆ ಕೊಡಿಸಿರುವುದು. ಅದಕ್ಕೆಂದೇ, ಅನಂತ ರೂಪು ಧರಿಸಿ ಜಂಗಮ ಲಿಂಗ ಸಂಚಾರ, ಎಂದೆಂದಿಗೂ ಇದ್ದೇ ಇರುವುದು. ಈ ಒಂದು ಕಾಯಕ ನಿರ್ವಹಿಸಲು ಕಾಯಗೊಂಡು ಈ ಲೋಕ ರಂಜನೆಗೆ ಸಿಲುಕದ ನಿರಂಜನನೆನಿಸಿದ್ದಾನೆ. ಅಂತೆಯೇ, ನಿರಂಜನ ನಿಶ್ಚಿಂತ, ನಿರ್ಮಲ, ನಿರಾಭಾರಿ, ನಿಃಸ್ಸೀಮ, ಕ್ರಿಯಾಜ್ಞಾನ, ಗುಣಶೀಲ, ವೈರಾಗ್ಯಸಂಪನ್ನ, ತತ್ವಬೋಧಕ, ಭಕ್ತೋದ್ಧಾರಕ, ಜಗತ್ ಪಾವನಮೂರ್ತಿ ಎನಿದಿರುವುದು, ಈ ಗುಣಗಳ ಸಾಕಾರವೇ ಇಂದಿನ ನಮ್ಮ ಮೃಡಗಿರಿಯ ಜಗದ್ಗುರು ಅನ್ನದಾನ ಶಿವಯೋಗಿಗಳು, ಸನ್ನಿಧಿಯ ಬಗ್ಗೆ ಬರೆಯುವುದೆಂದರೆ, ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ ರಜತದಂತೆ ಕಂಗೊಳಿಸಿ ಬೆಳಗುವ ಅನಂತ ಹೊಳಹು!! ಅಮೋಘವಾದ ದಿವ್ಯ ಸಾಹಿತ್ಯವ ಜಗದಗಲ ಹರಡಿ, ಶಿವತತ್ವದ ಭವ್ಯತೆಯ ಮುಗಿಲಗಲ ಬೆಳಗಿಸುತ ಪ್ರಭು ಅಲ್ಲಮನ ಶೂನ್ಯ ಪೀಠದಲಿ ಪ್ರಜ್ವಲಿಸುತಿರುವ ನಿರಂಜನ ಲಿಂಗ ಚಿಜ್ಯೋತಿಯ ಪಾದ ಶಿಶುವಾನು

ಶ್ರೀಪಾದ ಸ್ತೋತ್ರದೊಂದಿಗೆ ವಿರಮಿಸುವೆನಿನ್ನು।
ಪಾಪ ಕರ್ಮವನೆಸಗಿ ತಿಳಿಯದೆ।
ತಾಪ ಪಡುತಿಹ ಮಂದ ಮತಿಗಳ।
ಪಾಪ ತಾಪಂಗಳನು ಹರಿಸುತೆ ಜ್ಞಾನಸುಧೆಯೆರೆದು॥
ಪಾಪಿಗಳನುದ್ಧರಿಸು।
ಪರಶಿವ ರೂಪ।
ಗುರುಕುಲದೀಪ ವಿಶ್ವವ್ಯಾಪಕನೆ ಪ್ರತ್ಯಕ್ಷ ಶ್ರೀಗುರು ಚೆನ್ನಬಸವೇಶ॥
ಕಾರುಣ್ಯ ನಿಧಿಯೇ ಅನ್ನದಾನೀಶ॥

ಶೈಕ್ಷಣಿಕ ಸೇವಕರು

—**ಪ್ರೊ. ಎಸ್. ಬಿ. ಕರಿಭರಮಗೌಡರ,** ಮುಂಡರಗಿ

ಮಾನವ ಜನಾಂಗ ಬದುಕಿ ಬಾಳಿ ನಿರಂತರವಾಗಿ ಮುಂದುವರೆಯಬೇಕಾದರೆ ಗಾಳಿ, ನೀರುಗಳ ಅವಶ್ಯಕತೆ ಎಷ್ಟು ಪ್ರಾಮುಖ್ಯವೋ ಅಷ್ಟೇ ಶಿಕ್ಷಣವೂ ಕೂಡ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಅಂತೆಯೇ ಪ್ರತಿಯೊಂದು ರಾಷ್ಟ್ರದಲ್ಲಿಯೂ ಶಿಕ್ಷಣಕ್ಕೆ ಅಗ್ರಸ್ಥಾನವನ್ನು ಕೊಡಲಾಗಿದೆ. ಒಂದು ರಾಷ್ಟ್ರ ಸರ್ವ ಕ್ಷೇತ್ರಗಳಲ್ಲಿ ಪ್ರಬಲ ವಾಗಬೇಕಾದರೆ ಆ ರಾಷ್ಟ್ರದಲ್ಲಿಯ ಪ್ರಜೆಗಳ ಅಜ್ಞಾನವನ್ನು ನಿವಾರಿಸಿ ಪ್ರತಿಯೊಬ್ಬರನ್ನು ಸುಶಿಕ್ಷಿತರನ್ನಾಗಿ ಮಾಡಬೇಕು. ಸಮಾಜದಲ್ಲಿಯ ಉತ್ತಮ ಸಂಪ್ರದಾಯ, ಶಿಸ್ತು, ಶಿಕ್ಷಣ ಸಂಸ್ಕೃತಿಗಳನ್ನು ಇಂದಿನ ಮತ್ತು ಮುಂದಿನ ಪೀಳಿಗೆಗೆ ಕಲಿಸಿಕೊಡುವಲ್ಲಿ ವಿದ್ಯೆ ಅತಿ ಪ್ರಧಾನ ಸಾಧನವಾಗಿದೆ. ಸಮಾಜದ ಹಿಂದಿನ ಹಾಗೂ ಇಂದಿನ ಯಾವ ರೂಢಿ–ಪದ್ಧತಿಗಳನ್ನಾದಗೂ ಬಿಡಬಹುದು, ಆದರೆ ವಿದ್ಯಾಭ್ಯಾಸ ಪದ್ಧತಿಯನ್ನು ಮಾತ್ರ ಬಿಡುವಂತಿಲ್ಲ. ವಿದ್ಯಾದಾನ ನಿರಂತರವಾಗಿ ಮುಂದುವರೆಯುತ್ತಲೇ ಇರುವದು. ವಿದ್ಯೆ ಜೀವನದ ಅಂತರಾಳವನ್ನು ಪ್ರವೇಶಿಸಿ ನಿತ್ಯ ಆಚರಣೆಗೆ ಅಗತ್ಯವಾದ ಸಿದ್ಧಾಂತಗಳನ್ನು ಕಲಿಸುತ್ತದೆ. ಯಾವುದೇ ವ್ಯಕ್ತಿಯಾದರೂ ಸಮಾಜ ಸೇವೆಯ ಪ್ರಾರಂಭಾವಸ್ಥೆಯಲ್ಲಿ ನಿರ್ದಿಷ್ಟವಾದ ಶಿಕ್ಷಣವನ್ನು ಪಡೆದಿರಲೇಬೇಕು. ಅಂದಾಗ ಮಾತ್ರ ಆತನ ಸೇವೆ ಸಾರ್ಥಕ, ಸಮಾಜದ ಅಭಿವೃದ್ಧಿಗೆ ಜನರ ಮನಸ್ಸನ್ನು ಹದಗೊಳಿಸುವುದೇ ವಿದ್ಯಾಭ್ಯಾಸದ ಮುಖ್ಯ ಗುರಿ.

ಶಿಕ್ಷಣದ ಈ ಉನ್ನತ ಉದ್ದೇಶಗಳನ್ನು ಅರಿತುಕೊಂಡು ಕನ್ನಡ ನಾಡಿನಲ್ಲಿ ಆಗಿ ಹೋದ ಕೆಲವು ಅರಸೊತ್ತಿಗೆಗಳು ಶಿಕ್ಷಣ ಕ್ಷೇತ್ರಕ್ಕೆ ಹಿರಿದಾದ ಕಾಣಿಕೆಯನ್ನು ನೀಡುತ್ತ ಬಂದಿವೆ. ಗ್ರಾಮದಲ್ಲಿಯ ಅಗ್ರಹಾರಗಳು, ಬ್ರಹ್ಮಪುರಿಗಳು, ಗುಡಿ–ಗುಂಡಾರ ಮತ್ತು ಮಠ–ಮಾನ್ಯಗಳು ಲೋಕ ಶಿಕ್ಷಣದ ಗುರುತರ ಜವಾಬ್ದಾರಿಯನ್ನು ಹೊತ್ತು ಶೈಕ್ಷಣಿಕ ರಂಗದಲ್ಲಿ ತಮ್ಮ ಅನುಪಮ ಕಾಣಿಕೆಯನ್ನು ನೀಡಿವೆ. ಕರ್ನಾಟಕದಲ್ಲಿ ವೀರಶೈವ ಮಠಗಳು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿರುವಷ್ಟು ಸೇವೆಯನ್ನು ಬಹುಶಃ ಇನ್ನಾವ ಸಂಘ–ಸಂಸ್ಥೆಗಳೂ ಸಲ್ಲಿಸಿಲ್ಲವೆಂದೇ ಹೇಳಬೇಕು. ಇಂದು ಕರ್ನಾಟಕವನ್ನು ಗಮನದಲ್ಲಿರಿಸಿಕೊಂಡು ನೋಡಿದರೆ ಹಲವಾರು ವೀರಶೈವ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಪ್ರಚಾರ ಕಾರ್ಯದಲ್ಲಿ ತೊಡಗಿರುವದು ವೀರಶೈವ ಸಮಾಜಕ್ಕೆ ಹೆಮ್ಮೆಯ ಸಂಗತಿ. ನಾಡಿನುದ್ದಗಲಕ್ಕೂ ಹಲವಾರು ಮಠ ಮಾನ್ಯಗಳು–ಪೀಠಗಳು ವೀರಶೈವ ಜನಾಂಗದ ನೆಲೆಯಲ್ಲಿ ನಿಂತು

ವಿಶ್ವಜನಾಂಗವನ್ನು ಕೂಡಿಸುವ ಶಿಕ್ಷಣ ದೀಕ್ಷೆಯನ್ನು ನೀಡುತ್ತಲಿವೆ. ಕರ್ನಾಟಕದ ಬಹುಭಾಗದಲ್ಲಿ ವ್ಯಾಪಿಸಿರುವ ಶಿಕ್ಷಣ ಸಂಸ್ಥೆಗಳು ವೀರಶೈವ ಸಮಾಜದಿಂದ ನಡೆಸಲ್ಪಡುತ್ತಿರುವ ಶಿಕ್ಷಣ ಸಂಸ್ಥೆಗಳೇ ಆಗಿವೆ.

ಒಂದು ಕಾಲದಲ್ಲಿ ಶಿಕ್ಷಣ ಕಲಿಯುವದು-ಕಲಿಸುವದು ಕೇವಲ ಬ್ರಾಹ್ಮಣ ವರ್ಗದವರ ಸೊತ್ತಾಗಿತ್ತು. ಪ್ರಾಚೀನ ಕಾಲದಲ್ಲಿ ಬ್ರಾಹ್ಮಣ ಗುರುಗಳಿಂದ ನಡೆಸಲ್ಪಡುತ್ತಿದ್ದಂತ ಶಿಕ್ಷಣ ಸಂಸ್ಥೆಗಳಲ್ಲಿ ಅಗ್ರಹಾರ, ಘಟಿಕಾ ಸ್ಥಳಗಳು ಪ್ರಾಮುಖ್ಯತೆ ಪಡೆದುಕೊಂಡಿದ್ದುವು. ಇಂತಲ್ಲಿ ಬ್ರಾಹ್ಮಣ ಮಕ್ಕಳಿಗೆ ಇಲ್ಲವೇ ಅರಸು ಮಕ್ಕಳಿಗೆ ಮಾತ್ರ ಪ್ರವೇಶವಿತ್ತು. ಉಳಿದವರು ವರ್ಣಾಶ್ರಮ ಪದ್ಧತಿಯ ಶೂದ್ರರಂತೆ-ಶಿಕ್ಷಣದಿಂದ ವಂಚಿತರಾಗಿ ಕೃಷಿ ಕಾರ್ಯದಲ್ಲಿ ತೊಡಗಬೇಕಾದ ದುಶ್ಚಟಯಿತ್ತು. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದ ವೀರಶೈವ ಮಠದ ಸ್ವಾಮಿಗಳವರಲ್ಲಿ 'ಸಾಲಿಮಠ'ದವರೆಂಬ ಒಂದು ಪರಂಪರೆ ತಲೆಯೆತ್ತಿ ನಿಂತಿತು. ಸಾಲಿಮಠಗಳಲ್ಲಿ ವೀರಶೈವ ಸ್ವಾಮಿಗಳು ಅಥವಾ ಗೃಹಸ್ಥರಾದ ಅಯ್ನಗಳು ಸ್ವತಃ ತಾವೇ ಗುರುಗಳಾಗಿ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದ್ದರು. ಜಾತಿ-ಮತ-ಪಂಥಗಳೆನ್ನದೇ ಇಂಥ ಮಠಗಳಲ್ಲಿ ಸರ್ವರಿಗೂ ಪ್ರವೇಶಾವಕಾಶವಿತ್ತು. ಕಾಲಕ್ರಮದಲ್ಲಿ ಆರ್ಥಿಕ ಸುವ್ಯವಸ್ಥೆಯುಳ್ಳವರು ಒಂದೊಂದು ಸಂಸ್ಥೆಯನ್ನು ಕಟ್ಟಿಕೊಂಡು ಶಿಕ್ಷಣ ಭಿಕ್ಷೆಯನ್ನು ಕೊಡಲು ಪ್ರಾರಂಭಿಸಿದರು. ಹೀಗಾಗಿ ಮಠದ ಅಂಗಳದಿಂದ ವಿದ್ಯಾಸಂಸ್ಥೆಗಳ ಹರವು ವೀರಶೈವ ಸಂಘ-ಸಂಸ್ಥೆಗಳಿಗೂ ವ್ಯಾಪಿಸಿತು. ಇಂತ ಕಾಲದಲ್ಲಿ ಬೆಳೆದು ನಿಂತ ವೀರಶೈವ ಶಿಕ್ಷಣ ಸಂಸ್ಥೆಗಳಷ್ಟು ಸ್ತುತ್ಯ ಕಾರ್ಯವನ್ನು ಇನ್ನಾವುದೇ ಸಂಘ-ಸಂಸ್ಥೆಗಳು ಮಾಡದೇ ಇರುವದು ವಾಸ್ತವಿಕ ಸತ್ಯ. ಇಂಥ ಒಂದು ಪ್ರಯತ್ನದ ಪರಂಪರೆಯಲ್ಲಿಯೇ ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿಯನ್ನು ಪರಿಗಣಿಸಬೇಕಾಗುತ್ತದೆ.

ಸಾಂಸ್ಕೃತಿಕ ಹಾಗೂ ಆರ್ಥಿಕ ರಂಗಗಳಲ್ಲಿ ಹಿಂದುಳಿದ ಮುಂಡರಗಿ ತಾಲೂಕು ಅಂದು ಶೈಕ್ಷಣಿಕ ಕ್ಷೇತ್ರದಲ್ಲಿಯೂ ತೀರ ಹಿಂದೆ ಬಿದ್ದಿತ್ತು. ಕ್ರಿ.ಶ. ೧೯೨೪ರಲ್ಲಿ ಒಂದು ಉರ್ದು ಶಾಲೆ, ಒಂದು ಕನ್ಯಾ ಶಾಲೆ ಮತ್ತೆರಡು ಗಂಡು ಮಕ್ಕಳ ಶಾಲೆಗಳು ಮಾತ್ರ ಇದ್ದವು, ಡಿ. ಎಲ್. ಬಿ. ಖಾಸಗಿ ಸಂಸ್ಥೆಯವರು ಇವುಗಳನ್ನು ನಡೆಸುತ್ತಿದ್ದರು. ಮುಂಡರಗಿಯ ಈ ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಗಮನಕ್ಕೆ ತಂದುಕೊಂಡ ಹಿಂದಿನ ಜಗದ್ಗುರುಗಳವರ ಕೃಪಾಶೀರ್ವಾದ ಹಾಗೂ ಊರ ಹಿರಿಯರ ಸಹಕಾರದಿಂದ ಮೃಡಗಿರಿ ವಿದ್ಯಾಸಮಿತಿ ಅಂಕುರಿಸಿತು. ಆಗಿನ ಪೂಜ್ಯರು ಆಶೀರ್ವಾದ ಮಾಡಿ ವಿದ್ಯಾಸಂಸ್ಥೆಯು ಬೆಳೆಯುವ ದಿಶೆಯಲ್ಲಿ ಉದಾರ ಕೊಡುಗೆಯನ್ನು ನೀಡಿದರು. ೧೯೨೫ರಲ್ಲಿ ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾಸಂಸ್ಥೆ ತನ್ನ ಸ್ವರೂಪವನ್ನು ಧರಿಸಿ ತಲೆಯೆತ್ತಿ ನಿಂತಿತು.

ಪ್ರಾಥಮಿಕ ಶಾಲೆಯಿಂದ ಪ್ರಾರಂಭವಾದ ಈ ಸಂಸ್ಥೆ ಕಾಲಕ್ರಮೇಣ ಬೆಳೆದು ೧೯೪೮ರ ಹೊತ್ತಿಗೆ ಮಾಧ್ಯಮಿಕ ಹಂತವನ್ನು ತಲುಪಿತು. ನವಮ ಪೀಠಾಧೀಶರು

ತನು–ಮನ–ಧನಗಳಿಂದ ವಿದ್ಯಾಸಂಸ್ಥೆಗೆ ಸೇವೆಸಲ್ಲಿಸಿ ಈ ಸಂಸ್ಥೆಯು ಮೊಳಕೆ ಚಿಗುರೊಡೆದು ಕೊನರುವಂತೆ ಮಾಡಿದರು. "ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ" ಎಂಬ ಮಾತನ್ನೆ ಮಂತ್ರವಾಗಿಸಿಕೊಂಡು ಶೈಕ್ಷಣಿಕ ದೀಕ್ಷೆ ನೀಡುವ ಮೂಲಕ ಜನಮನದ ಕತ್ತಲೆಯನ್ನು ಕಳೆಯಲು ಯತ್ನಿಸಿದರು. ಆ ಕಾಲದಲ್ಲಿ ಜನರಲ್ಲಿ ಅಜ್ಞಾನವೇ ಆವರಿಸಿತ್ತು. ಜನರಲ್ಲಿ ಶಿಕ್ಷಣವಿರಲಿಲ್ಲ ಕಲಿಯಲು ಅವಕಾಶಗಳೂ ಇರಲಿಲ್ಲ. ಸಂದರ್ಭದ ಅರಿವುಳ್ಳವರಾಗಿ ಯುಗ ಪ್ರಜ್ಞಾವಂತರಾದ ಹಿಂದಿನ ಜಗದ್ಗುರುಗಳು ಮಠದ ದಾಸೋಹಕ್ಕೆ ಸಂಸ್ಕಾರ ನೀಡಿದರು. ಅನ್ನ ನೀಡುವದು ಪುಣ್ಯದ ಕೆಲಸವೇನೋ ನಿಜ.

"ಅನ್ನದಾನಂ ಪರಂ ದಾನಂ ವಿದ್ಯಾದಾನ ಮತಃ ಪರಂ।
ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂಚ ವಿದ್ಯಯಾ॥"

ಸರ್ವದಾನಗಳಲ್ಲಿ ಅನ್ನದಾನವೇ ಶ್ರೇಷ್ಠವಾದುದಾದರೂ, ಅದಕ್ಕಿಂತ ಶ್ರೇಷ್ಠವಾದುದು ವಿದ್ಯಾದಾನ, ಹೊಟ್ಟೆಗೆ ಅನ್ನವನ್ನಿಕ್ಕುವದರಿಂದ ಆ ಸಮಯಕ್ಕೆ ಮಾತ್ರ ತೃಪ್ತಿಯಾಗುವದು. ಆದರೆ ವಿದ್ಯಾದಾನದಿಂದ ಜೀವನಪರ್ಯಂತ ತೃಪ್ತಿಪಡೆಯಬಹುದೆಂಬುದನ್ನು ಮಹಾಸ್ವಾಮಿಗಳವರು ಬಡ ವಿದ್ಯಾರ್ಥಿಗಳಿಗೆ ಪ್ರಸಾದ ನಿಲಯವನ್ನು ಪ್ರಾರಂಭಿಸುವ ಮೂಲಕ ಶೈಕ್ಷಣಿಕ ಪ್ರಗತಿಗೆ ಯತ್ನಿಸಿದರು.

ಕಲ್ಲಿಗೆ ಕಾಮಧೇನು, ನೀರಿಗೆ ನಿಧಾನ. ಅನ್ನಕ್ಕೆ ಅಭಾವ ಎಂಬ ನಾಣ್ಣುಡಿಗೆ ಹೆಸರಾದ ಮುಂಡರಗಿಯಲ್ಲಿ ಅನ್ನದಾನ ಮಹಾಸ್ವಾಮಿಗಳವರ ಕೃಪೆಯಿಂದ ೫೦–೬೦ ವಿದ್ಯಾರ್ಥಿಗಳು ನಿತ್ಯ ಪ್ರಸಾದ ಸ್ವೀಕರಿಸುತ್ತ ಜ್ಞಾನಾರ್ಜನೆಗೆ ಸಿದ್ಧರಾದರು. ಲೌಕಿಕ ಶಿಕ್ಷಣ ಶಾಲೆಯಲ್ಲಿ ಲಭಿಸಿದರೆ, ಪೂಜ್ಯರ ಸನ್ನಿಧಿಯಲ್ಲಿ ಬಹುಮುಖ ಪ್ರತಿಭೆಯನ್ನು ಸಾಧಿಸುವ ಅವಕಾಶವೂ ದೊರೆಯಿತು. ಪೂಜ್ಯರ ಅಪ್ಪಣೆಯಂತೆ ವಿದ್ಯಾರ್ಥಿಗಳಿಗೆ ಯೋಗಾಸನ, ಶರಣರ ವಚನ ಗಾಯನ ಸ್ಪರ್ಧೆ, ಭಾಷಣಗಳು, ಸೇವಾಕೈಂಕರ್ಯ ಇತ್ಯಾದಿ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ನೀಡುತ್ತಿದ್ದರು. ಆಗಿನ ಕಾಲದಲ್ಲಿ ಶಿಕ್ಷಣ ಹೊಂದಿದ ಅನೇಕರು ಇಂದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿ ಶ್ರೀಮಠದ ಪರಮ ಭಕ್ತರಾಗಿರುವರು. ಹೀಗೆ ನವಮ ಪೀಠಾಧೀಶರು ಮಾನವ ಬದುಕನ್ನು ರೂಪಿಸುವ ಶಿಕ್ಷಣದ ಅವಶ್ಯಕತೆಯನ್ನು ಮನಗಂಡವರಾಗಿದ್ದರು.

ಈಗಿನ ದಶಮ ಪೀಠಾಧಿಪತಿಗಳಾದ ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ಆಧ್ಯಾತ್ಮ ಸಾಧಕರಾಗಿದ್ದುದರ ಜೊತೆಗೆ ಮಹಾವಿದ್ವಾಂಸರೂ, ತ್ರಿಭಾಷಾ ಪಂಡಿತರೂ, ವಾಙ್ಮಯ ಕೃಷಿಕರೂ ಆಗಿದ್ದುದರಿಂದ ಇವರಿಗೆ ಶಿಕ್ಷಣದ ಮಹತ್ವ ಮತ್ತು ಅದರ ಪ್ರಸಾರದ ಅವಶ್ಯಕತೆಯು ಮತ್ತಷ್ಟು ಸ್ಫುಟವಾಗಿ ಗೋಚರವಾಯಿತು. ಇಂದಿನ ಸಮಾಜಕ್ಕೆ ಆಧ್ಯಾತ್ಮ ಶಿಕ್ಷಣದೊಂದಿಗೆ ಆಧುನಿಕ ಶಿಕ್ಷಣವೂ ಬೇಕೆಂದು ಪರಿಭಾವಿಸಿದರು. ಶಿಕ್ಷಣವು ಮನುಷ್ಯನಿಗೆ ಮನುಷ್ಯತ್ವವನ್ನು ದಯಪಾಲಿಸುವ ದಿವ್ಯ ಸಂಜೀವಿನಿ. ಅದು ಅಮೃತ; ಈ ಸತ್ಯವನ್ನು ಮನಗಂಡಿರುವ ಈಗಿನ ಶ್ರೀಗಳವರು ಶಿಕ್ಷಣ ಸಂಸ್ಥೆ

ಯನ್ನು ಬೆಳೆಸುವಲ್ಲಿ ಹೆಚ್ಚಿನ ಗಮನ ಹರಿಸುತ್ತಿರುವರು. ಪೂಜ್ಯರ ಈ ಶಿಕ್ಷಣ ಸಂಸ್ಥೆಗಳು ಲಕ್ಷಾನುಲಕ್ಷ ಜ್ಞಾನಜ್ಯೋತಿಗಳನ್ನು ದೇಶದುದ್ದಕ್ಕೂ ಬೆಳಗಲೆಂದು ಹಾರೈಸಿಕೊಂಡು ನಿಂತಿರುವವು. ಹಿಂದಿನ ಜಗದ್ಗುರುಗಳವರ ಆಶೀರ್ವಾದ ಮತ್ತು ಇಂದಿನ ಜಗದ್ಗುರು ಗಳವರ ಕರ್ತೃತ್ವ ಶಕ್ತಿಯನ್ನು ಬೆನ್ನಲುಬಾಗಿ ಹೊಂದಿರುವ ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾಸಮಿತಿಯು ಇಂದು ಹಲವಾರು ಶಾಖೆಗಳನ್ನು ಹೊಂದಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಲಿರುವದು. ಶೈಕ್ಷಣಿಕ ರಂಗದಲ್ಲಿ ಅವರು ಗೈದ ಸಾಧನೆಯಿಂದ ಮಹಾಸನ್ನಿಧಿಯವರ ವ್ಯಕ್ತಿತ್ವ ನಾಡಿನಲ್ಲಿಂದು ಜ್ಞಾನ ಮೇರುವಾಗಿ ಮೆರೆಯುತ್ತಿದೆ ಹಾಗೂ ಭಕ್ತಿ ಗಂಗೆಯಾಗಿ ಹರಿಯುತ್ತಿದೆ. ಸಮಿತಿಯ ಅಧ್ಯಕ್ಷರಾದ ಕಾಲಕ್ಕೆ ಈ ತಾಲೂಕಿನಲ್ಲಿ ಒಂದೇ ಒಂದು ಪ್ರೌಢಶಾಲೆಯಿತ್ತು.

'ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು ಆನುಗೊಂಬನಿತು ಕಾಯಕದಲ್ಲಿ ನಿರತನಾಗಿರಬೇಕು' ಎಂಬ ಅನುಭಾವಿಗಳ ಮಾತಿನಂತೆ ಈಗಿನ ಮಹಾ ಸನ್ನಿಧಿಯವರು ನಾಡಿನ ಮೂಲೆ ಮೂಲೆಗೂ ಸಂಚರಿಸಿ ಧರ್ಮೋಪದೇಶವನ್ನು ಮಾಡುವದರ ಸಂಗಡ, ಶಿಕ್ಷಣಾಭಿಮಾನಿಗಳಾಗಿ ಹಲವಾರು ಶಾಲೆ-ಕಾಲೇಜುಗಳನ್ನು ತೆರೆದರು. ಸ್ತ್ರೀಯರಿಗೆ ಪರಿಪೂರ್ಣ ಶಿಕ್ಷಣದ ಆವಶ್ಯಕತೆಯನ್ನು ಕುರಿತು ಪರಿಭಾವಿಸಿ ಜಗದ್ಗುರು ಅನ್ನದಾನೀಶ್ವರ ಪ್ರೌಢಶಾಲೆಯಿಂದ ವಿದ್ಯಾರ್ಥಿನಿಯರನ್ನು ಪ್ರತ್ಯೇಕಿಸಿ ೧೯೬೯ರಲ್ಲಿ ಎಂ.ಎಸ್. ಡಂಬಳ ಕನ್ಯಾ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ದಿ. ಮಹಾಬಲೇಶ್ವರಪ್ಪನವರು ಡಂಬಳ ಇವರ ತ್ಯಾಗದ ಪ್ರತೀಕವಾಗಿ ಅಂಕುರಿಸಿದ ಕನ್ಯಾ ಪ್ರೌಢಶಾಲೆ ಇಂದು ಉದಿತೋದಿತವಾಗಿ ಬೆಳೆದು ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಲಿದ್ದು ೧೯೯೪ ಮಾರ್ಚ ತಿಂಗಳಲ್ಲಿ ಪ್ರೌಢಶಾಲೆಯು ರಜತಮಹೋತ್ಸವವನ್ನು ಆಚರಿಸಿದ್ದನ್ನು ನಾವಿಲ್ಲಿ ಸ್ಮರಿಸಬಹುದು. ಮುಂಡರಗಿ ತಾಲೂಕಿಗೆ ಪ್ರೌಢ ಶಿಕ್ಷಣದ ಕೊರತೆಯನ್ನು ಮನಗಂಡು ೧೯೭೦ರಲ್ಲಿ ಮಹಾಸನ್ನಿಧಿಯವರು ಜಗದ್ಗುರು ಅನ್ನದಾನೀಶ್ವರ ಪದವಿಪೂರ್ವ ಮಹಾವಿದ್ಯಾಲಯು ವನ್ನು ಪ್ರಾರಂಭಿಸಿದರು. ವಿದ್ಯಾರ್ಥಿಗಳ ಭವಿಷ್ಯವನ್ನು ಸುಗಮಗೊಳಿಸುವಲ್ಲಿ ಈ ಕಿರಿಯ ಮಹಾವಿದ್ಯಾಲಯವು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಮೇಲುಗೈ ಸಾಧಿಸಿ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಕಲಾ, ವಾಣಿಜ್ಯ ಮತ್ತು ಶಿಕ್ಷಣ ವಿಭಾಗಗಳನ್ನು ಮಹಾವಿದ್ಯಾಲಯು ಹೊಂದಿರುವದರ ಸಂಗಡ, ವಿದ್ಯಾರ್ಥಿಗಳಲ್ಲಿಯ ವೈಜ್ಞಾನಿಕ ಮನೋಭಾವನೆ ಪ್ರಚೋದನೆ ನೀಡುವ ದ್ಯೋತಕವಾಗಿ ಮಹಾದಾನಿ ಲಿಂಗಪ್ಪನವರು ಹಿರೇಮನಿ ಇವರ ಕೊಡುಗೆಯ ದ್ಯೋತಕವಾಗಿ ವಿಜ್ಞಾನ ವಿಭಾಗವನ್ನೂ ಪ್ರಾರಂಭಿಸಿದ್ದು, ಬಹುಸಂಖ್ಯಾತ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ ಲಿರುವರು. ಇದರ ಸಂಗಡವೇ ಮುಂಡರಗಿ ಭಾಗದ ಬಹುಪಾಲು ರೈತರು ರೇಷ್ಮೆ ಕೃಷಿಯನ್ನು ಕೈಗೊಂಡಿದ್ದನ್ನು ಮನಗಂಡು ರೇಷ್ಮೆ ಕೃಷಿ ಕುರಿತು ವೃತ್ತಿಪರ ಶಿಕ್ಷಣವನ್ನು

ವಿದ್ಯಾರ್ಥಿಗಳಿಗೆ ನೀಡುವ ಮೂಲಕ ರೇಷ್ಮೆ ಕೃಷಿಯ ನೂತನ ವಿಧಾನಕ್ಕೆ ಪ್ರಚೋದನೆ ನೀಡುತ್ತಲಿರುವರು.

ಇಷ್ಟಾದರೂ ಜಗದ್ಗುರುಗಳವರ ಶೈಕ್ಷಣಿಕ ರಂಗದಲ್ಲಿ ಸೇವೆಗೈದ ಸಂಕಲ್ಪ ಬೆಳೆಯುತ್ತಲೇ ಹೋಗುತ್ತದೆ. ಕಿರಿಯ ಮಹಾವಿದ್ಯಾಲಯದಿಂದ ಹೊರಬಂದ ವಿದ್ಯಾರ್ಥಿಗಳು ಆರ್ಥಿಕ ಮುಗ್ಗಟ್ಟಿನ ಕಾರಣ ನೆರೆಯ ಪಟ್ಟಣಗಳಿಗೆ ಹೋಗಿ ವಿದ್ಯಾಭ್ಯಾಸ ಮುಂದುವರಿಸಲಾಗದೇ ಬಳಲುತ್ತಿರುವದನ್ನು ಮನಗಂಡು ೧೯೮೦ರಲ್ಲಿ ಕಲಾ ಹಾಗೂ ವಾಣಿಜ್ಯ ವಿಭಾಗಗಳನ್ನು ಹೊಂದಿದ ಪದವಿ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ಮುಂಡರಗಿಯ ಶ್ರೇಷ್ಠ ವರ್ತಕರಾಗಿದ್ದ ಮಹಾದಾನಿ ಲಿಂ. ಕಲ್ಲಪ್ಪನವರು ಬೆಲ್ಲದ ಇವರ ತ್ಯಾಗದ ಪ್ರತೀಕವಾಗಿ, ಶ್ರೀ ಮಹಾಸನ್ನಿಧಿಯವರ ಕೃಪಾಶೀರ್ವಾದದ ದ್ಯೋತಕವಾಗಿ ಉದಯಿಸಿದ ಪದವಿ ಮಹಾವಿದ್ಯಾಲಯವು ಶೈಕ್ಷಣಿಕ ರಂಗದಲ್ಲಿ ಮುಂಡರಗಿಯ ಮುನ್ನಡೆಗೆ ಮತ್ತಷ್ಟು ಬಲವನ್ನು ತಂದುಕೊಟ್ಟಿತು. ಮುಂಡರಗಿ ತಾಲೂಕಿನ ಬಹುಜನ ಬಡವಿದ್ಯಾರ್ಥಿಗಳಿಗೆ ಪದವಿ ಪಡೆಯುವದು ಕನಸಿನ ಮಾತಾದಾಗ, ಪದವಿ ಮಹಾವಿದ್ಯಾಲಯ ಒದಯಿಸಿ ಅಂತ ವಿದ್ಯಾರ್ಥಿಗಳ ಕನಸನ್ನು ನನಸಾಗಿಸಿತು. ದೂರದ ಗದಗ ಶಹರಕ್ಕೆ ಹೋಗಿ ಅಧ್ಯಯನ ಮಾಡಲಸಾಧ್ಯವಾದ ಬಡ ವಿದ್ಯಾರ್ಥಿಗಳ ಪಾಲಿಗೆ ಈ ಮಹಾವಿದ್ಯಾಲಯವು ಉದಯಿಸಿ ಮಹದುಪಕಾರ ಮಾಡಿತು. 'ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು' ಎಂದು ಅನುಭಾವಿಗಳ ಮಾತನ್ನು ಅನುಷ್ಠಾನಕ್ಕೆ ತಂದು ಇಂತ ಅವಿಸ್ಮರಣೀಯ ಉಪಕಾರ ಸಲ್ಲಿಸಿದ ಲಿಂ. ಕಲ್ಲಪ್ಪಜ್ಜನವರ ತ್ಯಾಗ ಉಳ್ಳದವರು ಅನುಕರಿಸುವಂತಹರು. ನಿಜವಾಗಿಯೂ ಅವರ ತ್ಯಾಗ ಅಜರಾಮರವಾದದು. ಪೂಜ್ಯ ಜಗದ್ಗುರುಗಳವರ ಕೃಪಾಶಿರ್ವಾದದಿಂದ, ಆಢಳಿತ ಮಂಡಳಿಯವರ ಕಾಳಜಿಯಿಂದ, ಹಾಗೂ ಪ್ರಾಚಾರ್ಯರಾದ ಶ್ರೀ ಎ. ಬಿ. ಹಿರೇಮಠರ ದಕ್ಷ ಆಡಳತೆಯಿಂದ ನಾಡಿನ ಕೆಲವೇ ಉತ್ತಮ ಮಹಾವಿದ್ಯಾಲಯಗಳಲ್ಲಿ ಒಂದಾಗಿ, ವಿದ್ಯಾರ್ಥಿಗಳ ಆದರ್ಶ ವ್ಯಕ್ತಿತ್ವಕ್ಕೆ ಪೂರಕವಾದ ಹಲವು ಹನ್ನೊಂದು ಚಟುವಟಿಕೆಗಳನ್ನು ಏರ್ಪಡಿಸುತ್ತ ಕ. ರಾ. ಬೆಲ್ಲದ ಪದವಿ ಮಹಾವಿದ್ಯಾಲಯ ಇಂದು ನಾಡಿನ ಸರ್ವಜನತೆಯ ಗಮನ ಸೆಳೆದಿದೆ.

ಹಿರೇವಡ್ಡಟ್ಟಿ, ಮುಂಡರಗಿ ತಾಲೂಕಿನ ದೊಡ್ಡ ಗ್ರಾಮವಾಗಿದ್ದು, ಅಲ್ಲಿಯ ವಿದ್ಯಾರ್ಥಿಗಳಿಗೆ ಪ್ರೌಢಶಾಲೆಯ ಅವಶ್ಯಕತೆಯನ್ನು ಕಂಡುಕೊಂಡು ೧೯೮೦ರಲ್ಲಿ ಮಹಾಸನ್ನಿಧಿಯವರು ಒಂದು ಶಾಲೆಯನ್ನು ಪ್ರಾರಂಭಿಸಿದರು. ಆ ಗ್ರಾಮದ ಶಿವಣ್ಣನವರು ನಂದಿಕೋಲವರು ಶಾಲಾ ಕಟ್ಟಡದ ನಿರ್ಮಾಣಕ್ಕೆ ಅವಿರತವಾಗಿ ಶ್ರಮಿಸಿದ್ದು ಅವಿಸ್ಮರಣೀಯ. ತ್ರಿಭಾಷಾಪಂಡಿತರಾದ ಜಗದ್ಗುರುಗಳವರು ಸಂಸ್ಕೃತ ಸಾಹಿತ್ಯದಲ್ಲಿ ಅಗಾಧ ಪಾಂಡಿತ್ಯವನ್ನು ಹೊಂದಿದ್ದು, ಈಗ ಅವರ ಸನ್ನಿಧಿಯಲ್ಲಿ ಒಂದು ಸಂಸ್ಕೃತ ಪಾಠಶಾಲೆ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಲಿದೆ. ಇದರ ಸಂಗಡ ಆಂಗ್ಲಮಾಧ್ಯಮದ ಪೂರ್ಣ ಪ್ರಾಥಮಿಕ ಶಾಲೆ ಶಿಕ್ಷಣ ನೀಡುವಲ್ಲಿ ಅತಿ ಜನಪ್ರಿಯತೆ

ಯನ್ನು ಹೊಂದಿದ್ದು, ಇತ್ತೀಚೆಗೆ ಕನ್ನಡ ಮಾಧ್ಯಮದಲ್ಲಿಯೂ ಪ್ರಾಥಮಿಕ ಶಿಕ್ಷಣ ನೀಡುವ ಕೆಲಸ ಪ್ರಾರಂಭಗೊಂಡಿದ್ದು ಪ್ರತ್ಯೇಕ ವಿಭಾಗವಾಗಿ ಅದು ಇಂದು ಬೆಳೆಯುತ್ತಲಿದೆ.

ಶ್ರೀ ಮಹಾಸನ್ನಿಧಿಯವರ ಕೃಪಾಶಿರ್ವಾದದಿಂದ ಇಂದು ವಿದ್ಯಾಸಮಿತಿಯು ಹಲವಾರು ಶಾಖೆಗಳನ್ನು ಹೊಂದಿ ಮುಂಡರಗಿ ತಾಲೂಕಿನ ಹೊರಭಾಗದಲ್ಲಿಯೂ ತನ್ನ ಕೀರ್ತಿ ಧ್ವಜವನ್ನು ಎತ್ತಿ ಹಿಡಿದಿದೆ. ೧೯೮೨ ರಲ್ಲಿ ನವಲಗುಂದ ತಾಲೂಕಿನ ಆರಟ್ಟಿ ತಡಹಾಳದಲ್ಲಿ ಒಂದು ಪ್ರೌಢಶಾಲೆ ಪ್ರಾರಂಭಿಸಿ ಗ್ರಾಮದ ಹಾಗೂ ಸುತ್ತ-ಮುತ್ತಲಿನ ಜನರಿಗೆ ಮಹದುಪಕಾರ ಮಾಡಿದರು. ೧೯೮೨ರಲ್ಲಿ ಶಿರಹಟ್ಟಿ ತಾಲೂಕಿನ ಬನ್ನಿಕೊಪ್ಪ ಗ್ರಾಮದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸುವದರ ಸಂಗಡ ಗ್ರಾಮದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನೀಡಬೇಕೆಂಬ ಮಹದಾಶೆಯಿಂದ ೧೯೬೩ರಲ್ಲಿ ಪದವಿಪೂರ್ವ ಮಹಾ ವಿದ್ಯಾಲಯವನ್ನು ಪ್ರಾರಂಭಿಸಿದರು. ೧೯೮೩ರಲ್ಲಿ ಕೊಪ್ಪಳ ತಾಲೂಕಿನ ಗೊಂಡಬಾಳ ಗ್ರಾಮದಲ್ಲಿ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿ, ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಪ್ರಸಾದ ವ್ಯವಸ್ಥೆಯನ್ನು ಮುನ್ನಡೆಸಿಕೊಂಡು ಬಂದಿರುವರು. ೧೯೮೪ ರಲ್ಲಿ ಗದಗ ತಾಲೂಕಿನ ನರಸಾಪೂರದಲ್ಲಿಯೂ ಹಾಗೂ ೧೯೮೯ರಲ್ಲಿ ಬಿಜಾಪೂರ ಜಿಲ್ಲೆಯ ಬಮ್ಮನಹಳ್ಳಿ ಗ್ರಾಮದಲ್ಲಿಯೂ ಪ್ರಾರಂಭಗೊಂಡ ಪ್ರೌಢಶಾಲೆಗಳು ಇಂದು ಸಮರ್ಥ ರೀತಿಯಿಂದ ಕಾರ್ಯನಿರ್ವಹಿಸುತ್ತಲಿವೆ. ಇವೆಲ್ಲವುಗಳ ಸಂಗಡ ಇಂದಿನ ಯುವ ವಿದ್ಯಾರ್ಥಿಗಳಿಗೆ ತಾಂತ್ರಿಕ ಜ್ಞಾನದ ಅಗತ್ಯವನ್ನು ಮನಗಂಡು ಪೂಜ್ಯ ಮಹಾಸನ್ನಿಧಿಯವರು ೧೯೮೬ರಲ್ಲಿಯೇ ಪ್ರಾರಂಭಗೊಂಡ ಉತ್ತರ ಕನ್ನಡ ಜಿಲ್ಲೆಯ ಡಾಂಡೇಲಿಯ ಶ್ರೀ ಉಳವಿ ಚನ್ನಬಸವೇಶ್ವರ ಪಾಲಿಟೆಕ್ನಿಕ್ ಕಾಲೇಜನ್ನು ತಮ್ಮ ವಶಕ್ಕೆ ಪಡೆದುಕೊಂಡು, ಅದರ ಪ್ರಗತಿಗಾಗಿ ಸಾಕಷ್ಟು ಹಣವನ್ನು ವ್ಯಯ ಮಾಡಿರುವರು. ಇಂದು ಈ ಮಹಾವಿದ್ಯಾಲಯ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಅತ್ಯಂತ ಪ್ರತಿಷ್ಠಿತ ತಾಂತ್ರಿಕ ವಿದ್ಯಾಲಯವೆಂದು ಗುರುತಿಸಲ್ಪಟ್ಟಿದೆ. ಇಂದು ಈ ತಾಂತ್ರಿಕ ಮಹಾವಿದ್ಯಾಲಯ ಆ ಪ್ರದೇಶದಲ್ಲಿ ವಿಶಿಷ್ಠ ಹಿರಿಮೆಯನ್ನು ಹೊಂದಿರುವದಕ್ಕೆ ಪರಮಪೂಜ್ಯ ಜಗದ್ಗುರುಗಳವರ ಕರ್ತೃತ್ವಶಕ್ತಿಯೇ ಕಾರಣವೆಂದು ಹೇಳಬಹುದು.

'ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಬೀಸುವ ಗಾಳಿ ನಿಮ್ಮ ದಾನ'

ಎಂಬ ವಚನೋಕ್ತಿಯನ್ನು ತಮ್ಮ ನಿತ್ಯ ಜೀವನದಲ್ಲಿ ರೂಢಿಸಿಕೊಂಡ ಜಗದ್ಗುರುಗಳವರು, 'ಶಿವನು ಕೊಟ್ಟುದು ಶಿವನಿಗೆ ಸಲ್ಲುತ್ತದೆ' ಎಂಬ ಸಮರ್ಪಣಾ ಭಾವದಿಂದ ಸಮಾಜದ ಜೀವರುಗಳ ಬದುಕಿನ ಕಲ್ಯಾಣಕ್ಕೆ ಏನೆಲ್ಲವನ್ನೂ ಕೊಡುಗೈಯಿಂದ ನೀಡುವ ನೇಮಗಾರರಂತೆ ಕಂಡು ಬರುವರು. ವಿದ್ಯಾಸಂಸ್ಥೆಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಜ್ಞಾನದಾನಗೈವ ಅನುಕೂಲ ಒದಗಿಸುವದರ ಸಂಗಡ; ಅನ್ನದಾನವನ್ನು

ನೀಡುತ್ತ ಬಂದಿರುವರು. ಮುಂಡರಗಿಯಲ್ಲಿಯೇ ಎರಡು ಪ್ರಸಾದ ನಿಲಯಗಳು, ಬೆಣಕಲ್, ಕುಕನೂರ, ಗೊಂಡಬಾಳ, ಗದಗ ಹಾಗೂ ಬಮ್ಮನಹಳ್ಳಿ ಇವೇ ಮುಂತಾದ ಸ್ಥಳಗಳಲ್ಲಿ ಒಂದೊಂದು ಉಚಿತ ಪ್ರಸಾದ ನಿಲಯಗಳು ಶ್ರೀಗಳವರ ದಾಸೋಹಂಭಾವ ದಿಂದಲೇ ನಡೆಯುತ್ತಲಿವೆ. ಎಂತಹ ಬರಗಾಲದ ಬವಣೆಯಲ್ಲಿಯೂ ಈ ಪ್ರಸಾದ ನಿಲಯಗಳಲ್ಲಿ ಪ್ರಸಾದ ವಿತರಣೆಯ ಕಾರ್ಯ ನಿಲ್ಲದೇ ನಿರಾತಂಕವಾಗಿ ನಡೆಯುತ್ತಲಿದೆ. 'ಧರ್ಮದಲ್ಲಿಲ್ಲ ಸಂಕೋಚಕರ್ಮವೆನ್ನುವ ಶ್ರೀ ಜಗದ್ಗುರುಗಳವರು ಧರ್ಮದ ಮರ್ಮ ವನ್ನು ಸಮಾಜಕ್ಕೆ ತಿಳಿಸಲೋಸುಗ ಹಾಗೂ ವಿಶ್ವಮಾನವ ತತ್ವವನ್ನು ಬೋಧಿಸ ಲೋಸುಗ ಸಮಾಜದ ಎಲ್ಲ ವರ್ಗಗಳ ವಿದ್ಯಾರ್ಥಿಗಳಿಗೂ ಪ್ರಸಾದ ಸ್ವೀಕರಿಸಲು ಅವಕಾಶ ಕಲ್ಪಿಸಿಕೊಟ್ಟಿರುವರು. ತಮ್ಮ ಶಿಕ್ಷಣ ಪೂರೈಸಲು ಪ್ರಸಾದ ನಿಲಯವನ್ನೇ ನಂಬಿಕೊಂಡು ಬದುಕುತ್ತಿರುವ ಬಹುಸಂಖ್ಯಾತ ಬಡವಿದ್ಯಾರ್ಥಿಗಳಿಗೆ ಪೂಜ್ಯರ ಉಪಕಾರ ಅವಿಸ್ಮರಣೀಯವಾದುದು. ಮುಂಡರಗಿಯ ಪ್ರಸಾದ ನಿಲಯ ನಿರಂತರವಾಗಿ ನಡೆಯು ಲೆಂದು ಶ್ರೀಮಠದಿಂದ ತೊಂಭತ್ತೈದು ಎಕರೆ ಜಮೀನನ್ನು ದಾನಗೈದಿರುವರು. ವರುಣ ದೇವನ ಕೋಪಕ್ಕೆ ತುತ್ತಾಗಿ ಈ ಪ್ರದೇಶ ಬರಗಾಲಕ್ಕೆ ತುತ್ತಾದಾಗಲೂ ಭಕ್ತರಿಂದ ಬಂದ ಧನ-ಧಾನ್ಯವನ್ನು ಪ್ರಸಾದ ನಿಲಯಕ್ಕೆ ನೀಡಿ ನಿರಂತರ-ಅನ್ನದಾನಗೈಯ್ಯುತ್ತ ಲಿರುವರು.

ಒಟ್ಟಿನಲ್ಲಿ ಮುಂಡರಗಿ ಸಂಸ್ಥಾನಮಠದ ಶೂನ್ಯಸಿಂಹಾಸನದ ಈಗಿನ ಅಧಿಪತಿ ಗಳಾದ ಶ್ರೀ ಮ. ನಿ. ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ಶಿಕ್ಷಣ ಪ್ರೇಮಿಗಳಾಗಿ, ಶಿಕ್ಷಣಾಭಿಮಾನಿಗಳಾಗಿ ಈ ನಾಡಿನ ಶೈಕ್ಷಣಿಕ ಪ್ರಗತಿಗಾಗಿ ಅಹೋರಾತ್ರಿ ಶ್ರಮಿಸುತ್ತಲಿರುವರು. ನಾಡಿನ ಸರ್ವರಿಗೂ ಶಿಕ್ಷಣ ದೀಕ್ಷೆಯನ್ನು ನೀಡಲು ಯತ್ನಿಸುತ್ತಿರುವ ಜಗದ್ಗುರುಗಳವರ ಶ್ರಮ ನಿಜವಾಗಿಯೂ ಅವಿಸ್ಮರಣೀಯವಾದುದು.

ಶ್ರೀ ಸನ್ನಿಧಿಯ ವಾಸ್ತುಶಿಲ್ಪ

—ಶ್ರೀ ಹೇಮಂತ ಪೂಜಾರ, ಮುಂಡರಗಿ

ಮನುಷ್ಯನ ಹೃದಯದಲ್ಲಿ ಹುಟ್ಟುವ ಉನ್ನತವಾದ ಮತ್ತು ರಮ್ಯವಾದ ವಿಕಾಸಗಳನ್ನು ಹಲವು ಬಗೆಯಾಗಿ ಪ್ರಕಟಿಸಬಹುದು. ಅವುಗಳನ್ನು ಮಾತಿನಲ್ಲಿ ರೂಪಗೊಳಿಸಿ ಗದ್ಯ ರೂಪದಲ್ಲಾಗಲಿ ಪದ್ಯ ರೂಪದಲ್ಲಾಗಲಿ ಅವುಗಳನ್ನು ಕವಿಗಳು ಬರೆದಿಟ್ಟು ತಮ್ಮ ಹೃದಯಾಂತರಾಳದಿಂದ ಉಂಟಾದ ಕಲ್ಪನೆಯನ್ನು ಭಾವಗಳನ್ನು ತೋರ್ಪಡಿಸುವರು. ಇದೇ ರೀತಿ ಚಿತ್ರಕಾರರು ರೇಖೆ ಮತ್ತು ವರ್ಣಗಳಿಂದ ಕೂಡಿದ ಚಿತ್ರಗಳಲ್ಲಿಯೂ, ಶಿಲ್ಪಿಗಳು ಆ ತಮ್ಮ ಕಲ್ಪನೆಗಳನ್ನು ಶಿಲೆಯಲ್ಲಿ ಕೆತ್ತಿ ಒಂದು ಆಕಾರ ರೂಪದಲ್ಲಾಗಲಿ, ಮಣ್ಣು, ಲೋಹ, ಮೊದಲಾದ ಪದಾರ್ಥಗಳಲ್ಲಿಯೂ ತಮ್ಮ ಚಿಂತನದ ಕಲ್ಪನೆಯನ್ನು ರಂಜಿಸಿದ ಭಾವಗಳನ್ನು ತೋರ್ಪಡಿಸುವರು. ಕವಿ ಮತ್ತು ಕಲಾವಿದರು ಒಂದೇ ಮನೋಧರ್ಮ ಉಳ್ಳವರಾಗಿ ತಮ್ಮ ಭಾವನೆಗಳನ್ನು ಕವಿತೆಗಳ ಮೂಲಕ ಮತ್ತು ಶಿಲೆಯ ಕೆತ್ತನೆಯ ಮೂಲಕ ಸೂಚಿಸುವರು. ಒಂದೊಂದು ಭಾಷೆಗೆ ಅದರದರ ಗುಣಾವಗುಣಗಳೂ ಕಟ್ಟುನಿಟ್ಟುಗಳೂ ಇರುವಂತೆ, ಒಂದೊಂದು ಕಲೆಗೂ ಅದರದರ ಸ್ವಾಭಾವಿಕ ವೈಶಿಷ್ಟ್ಯಗಳೂ, ಅಂಗೀಕೃತ ಸಮಯಗಳೂ ಉಂಟು. ಇಂಥ ಕಲೆಗಳಲ್ಲಿ ಅಂಗೀಕೃತ ಕಟ್ಟಡಗಳ ಮೂಲಕ ರಸಭಾವಾಧಿಗಳನ್ನು ಸೂಚಿಸುವುದೂ ಬಹು ದಿನ ಬಾಳತಕ್ಕದ್ದೂ, ಕಷ್ಟಸಾಧ್ಯವಾದುದು, ವಾಸ್ತುಶಿಲ್ಪ.

ಆಯಾ ಭಾಷೆಯ ಕಾವ್ಯಗಳಂತೆ ಆಯಾ ದೇಶದ ಉತ್ತಮವಾದ ಕಟ್ಟಡಗಳು ದೇಶ, ಕಾಲ, ಪದಾರ್ಥ ಮೊದಲಾದ ಸನ್ನಿವೇಶಗಳಿಗೆ ಅನುಗುಣವಾಗಿರುತ್ತವೆ. ಅನೇಕ ಜನಾಂಗಗಳು ವಾಸ್ತುಶಿಲ್ಪದಲ್ಲೂ ಉತ್ಕೃಷ್ಟವಾದ ಕೆಲಸವನ್ನು ಮಾಡಿ ಹೆಸರುಗೊಂಡಿರುವರು.

ಭಾರತ ದೇಶದಲ್ಲಿ ಪ್ರಾಚೀನ ಕಾಲದಿಂದ ವಾಸ್ತುಶಿಲ್ಪ ಬೆಳೆದುಬಂದ (ದಾರಿಯನ್ನು) ರೀತಿಯನ್ನು ಒಂದು ವಿಶಿಷ್ಟವಾಗಿಯೂ, ಆಶ್ಚರ್ಯವಾಗಿಯೂ, ಕಾಣುತ್ತದೆ.

ಪುರಾತನ ಋಷಿ ಮುನಿಗಳು ಯಜ್ಞಯಾಗಾದಿಗಳನ್ನು ಮಾಡುವುದಕ್ಕಾಗಿ ಯಜ್ಞ ವೇದಿಕೆಗಳನ್ನು, ಯೋಗಶಾಲೆಗಳನ್ನು ಕಟ್ಟುತ್ತಿದ್ದರು. ಇವುಗಳೇ ಭರತಖಂಡದ ವಾಸ್ತುಶಿಲ್ಪಕ್ಕೆ ಮೂಲವೆಂದೂ ಇವುಗಳ ನಿರ್ಮಾಣವು ನಿರೂಪಿಸುವ "ಶಿಲ್ಪ ಸೂತ್ರಗಳೇ" ಪ್ರಥಮ ಶಿಲ್ಪಶಾಸ್ತ್ರವೆಂದೂ ಕೆಲವು ವಿದ್ವಾಂಸರು ಪರಿಗಣಿಸುತ್ತಾರೆ.

ಮೊದಲು ವೇದಿಕೆಗಳನ್ನು, ಶಾಲೆಗಳನ್ನು ಜೊಂಡು, ಜೇಡಿಮಣ್ಣಿನಿಂದಲೂ ಕೆಲವು

ಕಾಲಾನಂತರ ಮರಮುಟ್ಟುಗಳಿಂದಲೂ ಕಟ್ಟುತ್ತಿದ್ದರು. ಇವುಗಳು ಶಾಶ್ವತವಾಗಿ ನಿಲ್ಲಬೇಕಾದುವೆಂದು ಬಗೆದು ಬಂಡೆಗಲ್ಲಿ ಕೊರೆಯತೊಡಗಿದರು. ಅದೂ ಅಲ್ಲದೇ ತಪಸ್ವಿಗಳು ಚಿತ್ರಸ್ಥೈರ್ಯವನ್ನೂ ಸಂಯಮವನ್ನೂ ಪಡೆಯುವುದಕ್ಕೋಸ್ಕರ ನಿರ್ಜನವಾದ ಪ್ರದೇಶಗಳಿಗೆ ಹೋಗಿ ವಾಸಿಸಲು ಇಷ್ಟಪಟ್ಟರು. ಅವರ ವಸತಿಗಾಗಿ ಮತ್ತು ದೇವಾಲಯಕ್ಕಾಗಿ ನಿರ್ಜನ ಪ್ರದೇಶದಲ್ಲಿ ಗುಡ್ಡಗಳನ್ನು ಕೊರೆದು ಆಶ್ರಯಗಳನ್ನು ಮಾಡತೊಡಗಿದರು. ಇದರ ಬೆಳವಣಿಗೆಯನ್ನು ನೋಡುತ್ತಾ ಹೋದರೆ ವಾಸ್ತುಶಿಲ್ಪವು ವಾತಾವರಣಕ್ಕೆ ತಕ್ಕಂತೆ, ಉಪಯೋಗಿಸುವ ವಸ್ತುಗಳಿಗೆ ತಕ್ಕಂತೆ, ಮನುಷ್ಯನ ಆಯಾ ಕಾಲದ ಬುದ್ಧಿಮಟ್ಟಕ್ಕೆ ತಕ್ಕಂತೆ, ಅನೇಕ ಮಾರ್ಪಾಟುಗಳನ್ನು ಹೊಂದಿ ವಾಸ್ತುಶಿಲ್ಪವು ಒಂದು ಉನ್ನತ ಮಟ್ಟಕ್ಕೆ ಏರಿದೆ ಎಂದು ಹೇಳಿದರೆ ತಪ್ಪಾಗಲಾರದು.

ಇದೆಲ್ಲ ಪ್ರಗತಿಯನ್ನು ನೋಡಿದಾಗ ಭರತ ಖಂಡದ ವಾಸ್ತುಶಿಲ್ಪಕ್ಕೆ ಆದಿಯಿಂದ ಒಂದು ಹಿನ್ನೆಲೆ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಹೀಗೆ ಭಾರತದಲ್ಲಿ ಬೆಳೆದು ಬಂದ ಕುಶಲೋದ್ಯಮ ಕಲೆಗಳು ಅನೇಕವಾಗಿರುವವು. ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ನೆಲೆಗೊಂಡಿರುವ ಶಿಲ್ಪ, ಚಿತ್ರಕಲೆ ಮೊದಲಾದ ಕಲೆಗಳು ಈ ದೇಶದಲ್ಲಿ ಕಲಾ ಸೃಷ್ಟಿಯ ಕೌಶಲ್ಯವು ಜನರಲ್ಲಿ ಎಷ್ಟರ ಮಟ್ಟಿಗೆ ವ್ಯಾಪಿಸುತ್ತದೆ ಎಂಬುದನ್ನು (ಸಮರ್ಥಿಸುವುದಲ್ಲದೆ) ನಿರ್ಧರಿಸುತ್ತದಲ್ಲದೆ, ಆಧುನಿಕ ಕಲಾ ತಜ್ಞರು ಕೂಡ ನಮ್ಮ ಪೂರ್ವಜರ ಕಲೆಗಳನ್ನು ಮೆಚ್ಚಿಕೊಂಡು ಅವುಗಳ ರಕ್ಷಣೆಗೆ ಪ್ರಯತ್ನಿಸುತ್ತಿದ್ದಾರೆ.

ಒಂದು ಜನಾಂಗದ ಸಂಸ್ಕೃತಿಯ ಮಟ್ಟವನ್ನು ಅದರ ಬೆಳವಣಿಗೆಯನ್ನು ತಿಳಿಯಬೇಕಾದರೆ ಅಲ್ಲಿ ಬೆಳೆದು ಬಂದ ಹಲವು ಬಗೆಯ ಕಲೆಗಳನ್ನು ಪರಾಮರ್ಶಿಸಬೇಕಾಗುತ್ತದೆ. ಮಾನವ ನಿತ್ಯ ಜೀವನದಲ್ಲಿ ಅನುಭವಿಸುವ ಸುಖ, ಸಂತೃಪ್ತಿ, ಆನಂದಗಳೇ ಕಲೆಗೆ ಮೂಲ. ಶಾಂತಿ, ಸಮೃದ್ಧಿಗಳು ಕಲೆಯನ್ನು ಬೆಳೆಸಿಕೊಂಡು ಬರುವ ಮುಖ್ಯ ಅಂಶಗಳು.

ವಾಸ್ತು ಶಿಲ್ಪದಂಥ ಕಲೆಗಳು ಪ್ರಾಕೃತಿಕ ಸನ್ನಿವೇಶಗಳನ್ನು ಅವಲಂಬಿಸಬೇಕಾದುದು ಸ್ವಾಭಾವಿಕ.

ರಾಜಕೀಯ ಭದ್ರತೆ ಕಲೆಯ ಬೆಳವಣಿಗೆಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತದೆ. ಕದಂಬ, ಗಂಗ, ನೊಳಂಬ, ಚಾಲುಕ್ಯ, ಹೊಯ್ಸಳ, ವಿಜಯನಗರಗಳಂಥ ಪ್ರಸಿದ್ಧ ರಾಜ ಮನೆತನಗಳು ಸುಭದ್ರವಾದ ಸಾಮ್ರಾಜ್ಯವನ್ನು ಕಟ್ಟಿ ಕಲೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದರಿಂದ ತಾವು ಗಳಿಸಿದ ಅಪಾರ ಐಶ್ವರ್ಯವನ್ನು ದೇವಾಲಯ, ಬಸದಿ, ಮೊದಲಾದವುಗಳನ್ನು ಕಟ್ಟುವುದಕ್ಕಾಗಿ ವಿನಿಯೋಗಿಸಿರುವದರಿಂದ ವಿವಿಧ ಶೈಲಿಯ ಕಲೆಗಳ ಬೆಳವಣಿಗೆ ಸಾಧ್ಯವಾಯಿತು.

ಕರ್ನಾಟಕ ವಾಸ್ತುಕಲೆ ಭಾರತೀಯ ವಾಸ್ತುಕಲೆಯ ಒಂದು ಭಾಗವೇ ಆಗಿದ್ದರೂ, ಇದಕ್ಕೆ ವಿಶೇಷವಾದ ಒಂದು ಮಹತ್ವವಿದೆ. ಭಾರತದಲ್ಲಿ ಉಳಿದ ಕಡೆ ಕಾಣದಷ್ಟು

ವೈವಿಧ್ಯಮಯ ವಾಸ್ತುಶಿಲ್ಪಗಳು ಕರ್ನಾಟಕದಲ್ಲಿ ಗೋಚರಿಸುತ್ತವೆ.

ಧಾರವಾಡ ಜಿಲ್ಲೆಯ ಮುಂಡರಗಿ ತಾಲೂಕಿನ ಸ್ಥಳೀಯ ಶ್ರೀ ಜಗದ್ಗುರು ಅನ್ನದಾನೇಶ್ವರ ಮಠವು ಅನೇಕ ವಿದ್ಯಾ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಾ ಇರುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ ನಿಲಯಗಳನ್ನು ನಿರ್ವಹಿಸುತ್ತಾ ಅನ್ನದಾನ ಮತ್ತು ವಿದ್ಯಾದಾನಗಳನ್ನು ಮಾಡುತ್ತಾ ಇದೆ. ಇದರ ಜೊತೆಗೆ ಅನೇಕ ಸಾಹಿತ್ಯ ಸೌಧವನ್ನು ನಿರ್ಮಿಸುತ್ತಿರುವಂತೆ ವಾಸ್ತುಶಿಲ್ಪವನ್ನು ರಚಿಸುವುದರಲ್ಲಿ ಹೆಸರನ್ನು ಪಡೆದಿದೆ.

ಮಠಗಳನ್ನು ಎಲ್ಲಾ ವಿದ್ಯಾ ಸಂಸ್ಥೆಗಳನ್ನು ಮತ್ತು ಧಾರ್ಮಿಕ ಕಾರ್ಯಕಲಾಪ ಗಳನ್ನು ನಡೆಸಲು ಎಲ್ಲಾ ಕಡೆ ಸ್ವಂತ ಹೊಸ ಕಟ್ಟಡಗಳನ್ನು ಮತ್ತು ಅನೇಕ ನವೀಕರಣ ಗೊಳಿಸಿದ ಕಟ್ಟಡಗಳನ್ನು ಒಳಗೊಂಡಿದೆ.

ಶ್ರೀ ಮಠದ ಹಾಗೂ ವಿದ್ಯಾ ಸಂಸ್ಥೆಯ ಅನೇಕ ಕಟ್ಟಡಗಳು ಇಂದಿನ ಪೂಜ್ಯರು ಅಧಿಕಾರ ವಹಿಸಿಕೊಂಡಂದಿನಿಂದಲೇ ಪ್ರತಿ ವರ್ಷ ನಿರ್ಮಾಣ ಹಂತದಲ್ಲಿವೆ. ಪೂಜ್ಯರು ಕಟ್ಟಡಗಳನ್ನು ಸ್ವತಃ ತಾವೇ ನಕ್ಷೆಯನ್ನು ತಯಾರಿಸಿ ಅದರ ನಿರ್ಮಾಣ ಕಾರ್ಯದಲ್ಲಿ ಕೆಲಸಗಾರರಿಗೆ ಸ್ವತಃ ತಾವೇ ಮಾರ್ಗದರ್ಶನ ಮಾಡುವ ಶ್ರಮ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಈ ಕಟ್ಟಡಗಳು ಆರ್ಥಿಕ ರೀತಿಯಿಂದ ನೋಡಿದರೆ ಬಹಳ ಕಡಿಮೆ ಖರ್ಚಿನಲ್ಲಿ ನಿರ್ಮಾಣ ಹೊಂದಿ ಕಟ್ಟಡದ ಪೂರ್ಣ ಉಪಯೋಗವಾಗುವಲ್ಲಿ ಸಮರ್ಥನೆಯನ್ನು ಹೊಂದಿವೆ.

ಮಠಗಳ ವಾಸ್ತುಶಿಲ್ಪವನ್ನು ನೋಡುತ್ತಿದ್ದಂತೆ, ವಾಸ್ತುಶಿಲ್ಪ ಮತ್ತು ಧಾರ್ಮಿಕ ವಿಷಯಕ್ಕೆ ಸಂಬಂಧ ಇರುವದು ಮನಗಾಣುತ್ತದೆ. ಈ ಕಟ್ಟಡಗಳ ನಿರ್ಮಾಣ ಕಾರ್ಯ ದಲ್ಲಿ ಯಾವ ಶಿಲ್ಪಿಯ ಕಲೆ ಮತ್ತು ಚಾತುರ್ಯ ಇದೆ ಎಂದು ಉದ್ಗಾರವೆತ್ತುವಂತೆ, ಇಂದಿನ ಶ್ರೀಗಳು ವಾಸ್ತುಶಿಲ್ಪ ನಿರ್ಮಾಣದಲ್ಲಿ ತಮ್ಮ ಹೆಸರನ್ನು ಸ್ಥಾಯಿಗೊಳಿಸಿದ್ದಾರೆ.

ಮುಂಡರಗಿಯ ಶ್ರೀ ಮಠದ ಪ್ರವೇಶದಲ್ಲಿ ಬೃಹತ್ತಾದ ಮಹಾ ದ್ವಾರವು ಕಲ್ಲಿನಲ್ಲಿ ಕಮಾನುಗಳಿಂದ ಕೂಡಿದ್ದು, ಮೇಲ್ಗಡೆ ಗೋಪುರವು ಶ್ರೀಗಳ ಶಿಲ್ಪಕಲೆಯಲ್ಲಿಯ ಚಾತುರ್ಯದಿಂದ ಮೇಲ್ಮಾಳಿಗೆಯಲ್ಲಿಯೇ ಕಂಬಗಳನ್ನು ಆಸರೆಯಾಗಿ ಹೊಂದಿ ಸುಂದರ ವಾದ ಕಟ್ಟಡವು ನೋಡುವ ಭಕ್ತರನ್ನು ಚಕಿತಗೊಳಿಸುತ್ತದೆ.

ಶ್ರೀ ಮಠದ ಗದ್ದುಗೆಯ ಪ್ರವೇಶದಲ್ಲಿ ಸುಂದರವಾದ ಎಂಟು ಕಮಾನುಗಳು ಕಂಗೊಳಿಸಿ ವೀರಶೈವ ಧರ್ಮದ ದ್ಯೋತಕವಾದ ಅಷ್ಟ ಸಿದ್ಧಿಗಳನ್ನು ಅಷ್ಟ ಭೋಗ ಗಳನ್ನು ಅಷ್ಟೈಶ್ವರ್ಯಗಳನ್ನು ಕೊಡಬಲ್ಲ ಅಷ್ಟಾವರಣವೇ ಅಂಗವಾಗಬೇಕೆಂದು ಕೈ ಮಾಡಿ ಕರೆಯುತ್ತಿವೆ.

ಈ ಎಂಟು ಕಮಾನಗಳ ಮಧ್ಯದಲ್ಲಿ ಐದು ಸಂಧಿಗಳು ಕೂಡಿಕೊಂಡಿವೆ. ಗುರುಲಿಂಗ ಜಂಗಮರೆಂಬ ಪೂಜ್ಯರ ದ್ಯೋತಕವಾಗಿ ಮೂರು ಕಮಾನಗಳು ಕಂಡರೆ, ಉಳಿದ ಮೂರು

ವಿಭೂತಿ ರುದ್ರಾಕ್ಷಿ–ಮಂತ್ರಗಳೆಂಬ ತ್ರಿವಿಧ ಸಾಧನಗಳನ್ನು ಸೂಚಿಸುತ್ತವೆ. ಇವುಗಳನ್ನು ಅಳವಡಿಸಿಕೊಳ್ಳುವದರಿಂದ ಪಾದೋದಕ ಪ್ರಸಾದವೆಂಬ ಫಲವನ್ನು ಪಡೆಯಬಲ್ಲೆನೆಂಬ ಸೂಚನೆಯನ್ನು ಎರಡೂ ಕಮಾನಗಳು ತಿಳಿಸುತ್ತವೆ. ಅಷ್ಟವರ್ಣಾಂಗಿಯಾಗಿ ಪಂಚಾಚಾರ ಪ್ರಾಣಿಯಾಗಿ ಭಕ್ತಿ ಜ್ಞಾನ ವೈರಾಗ್ಯಗಳೆಂಬ ಮೂರು ಮೆಟ್ಟಲನ್ನು ಹತ್ತಿದರೆ ಮೂರಂಗ ಗಳ ಎರಡು ಗದ್ದುಗೆಗಳು ಷಟಸ್ಥಲವನ್ನು ಭೋದಿಸುತ್ತಿವೆ.

ಗದ್ದುಗೆಯ ಕಟ್ಟಡ ಒಂದು ವಿಶಿಷ್ಟತೆಯನ್ನು ಹೊಂದಿದೆ. ಆದಿಕಾಲದಲ್ಲಿ ಋಷಿ ಗಳು ಗವಿಗಳಲ್ಲಿ ತಪಸ್ಸನ್ನು ಆಚರಿಸುತ್ತಿದ್ದರು. ಅದಕ್ಕೆ ತಕ್ಕ ಸ್ಥಳಗಳನ್ನು ಅಡವಿಗಳಲ್ಲಿ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಆರಿಸಿಕೊಳ್ಳುತ್ತಿದ್ದರು. ಗವಿಗಳನ್ನು ಆಗಿನ ಕಾಲದಲ್ಲಿ ಅನೇಕ ರಾಜ–ಮಹಾರಾಜರು ಅಧಿಪತಿಗಳು ಕಲ್ಲಿನಲ್ಲಿ ಕೊರೆದು ಅವುಗಳನ್ನು ನಿರ್ಮಾಣ ಮಾಡುತ್ತಿದ್ದರು. ಆದರೆ ಜಗದ್ಗುರುಗಳ ತಪಸ್ಸಿನ ಸಾಧನೆಗೆ ಅನುಕೂಲವಾಗುವಂತೆ ಇದನ್ನು ನಿರ್ಮಾಣ ಮಾಡಿದ್ದಾರೆ. ಕಟ್ಟಡದಲ್ಲಿ ವಿಶಾಲವಾದ ಸ್ಥಳವನ್ನು ಒದಗಿಸಿ ಗದ್ದುಗೆಯ ದರ್ಶನಕ್ಕೆ, ಸಭೆಗೆ ಅನುಕೂಲವಾಗುವಂತೆ ಕಲ್ಲಿನ ಪೂರ್ಣ ಕಟ್ಟಡ, ಮಧ್ಯದಲ್ಲಿ ಯಾವದೇ ಆಧಾರ ಸ್ಥಂಭವಿಲ್ಲದೆ ಇರುವುದರಿಂದ ಇದರ ನಿರ್ಮಾಣದಲ್ಲಿ ಶ್ರೀಗಳ ಕಲೆ ಮತ್ತು ಚಾತುರ್ಯ ಎಲ್ಲರನ್ನೂ ದಿಗ್‌ಭ್ರಮೆಗೊಳಿಸುತ್ತದೆ.

ಈ ಗದ್ದುಗೆಯ ಪೂರ್ಣ ಕಟ್ಟಡವು ಬ್ರಹ್ಮಾಂಡದಲ್ಲಿ ಪಾತಾಳ ಲೋಕ–ಭೂಲೋಕ–ಸ್ವರ್ಗ ಲೋಕಗಳು ಇವೆ ಎಂದು ಹೇಳುವ ಹಾಗೆ ಇಲ್ಲಿ ಪಾತಾಳದಂತೆ ಗವಿ ಇದೆ, ಭೂಲೋಕದಂತೆ ಎಲ್ಲರಿಗೂ ದರ್ಶನ ಕೊಡುವ ಗದ್ದುಗೆಗಳಿವೆ. ನಂತರ ಮೇಲಿನ ಗೋಪುರ ಸ್ವರ್ಗದ ಕಲ್ಪನೆಯನ್ನು ಕೊಡುತ್ತದೆ. ಇವು ಮೂರರಲ್ಲಿಯೂ ತತ್ವ ತುಂಬಿದೆ. ಗವಿಯು ಅಷ್ಟಾವರಣವೆಂಬ ಎಂಟು ಮೆಟ್ಟಲುಗಳನ್ನು ಇಳಿಯಲು ನವಲಿಂಗ ಸಕೀಲವೆಂಬ ಒಂಭತ್ತು ಅಂಕಣದ ಗವಿಯು ಕಾಣುತ್ತದೆ. ಇಲ್ಲಿಯೂ ಆರು ಕಮಾನಗಳಿವೆ. ಮಧ್ಯದ ಅಂಕಣದಲ್ಲಿ ಅಷ್ಟದಳದ ಕಮಲ ಕಲ್ಲಿನಲ್ಲಿ ಕೆತ್ತಿದೆ, ಚಿದ್ಗವಿ ಯೊಳಗೆ ನೆಲೆಸಿದ ಪರಮಾತ್ಮನಂತೆ ಜಗದ್ಗುರುಗಳ ದರ್ಶನ ಸಿಕ್ಕುವದು.

ಮೇಲೆ ಗೋಪುರದ ನಿರ್ಮಾಣವು ತಾಂತ್ರಿಕತೆ ದೃಷ್ಟಿಯಲ್ಲಿ ನೋಡಿದರೆ ಎಲ್ಲರನ್ನೂ ಚಕಿತಗೊಳಿಸುವಂತಿದೆ. ಆದರೆ ಕಟ್ಟಡ ನಿರ್ಮಾಣದಲ್ಲಿ ವಾಸ್ತುಶಿಲ್ಪಿಯ ಜಾಣತನವು ಎರಡು ದೃಷ್ಟಿಯಲ್ಲಿ ತೋರ್ಪಡಿಸುತ್ತಿವೆ. ತಾಂತ್ರಿಕವಾಗಿ ಹಾಗೂ ವೀರಶೈವ ಧರ್ಮದ ತತ್ವಗಳನ್ನು ಎತ್ತಿ ತೋರಿಸುತ್ತಿದೆ. ಮಧ್ಯದಲ್ಲಿರುವ ೬೪ ಕಂಬಗಳು, ೬೪ ಕಲೆಗಳನ್ನು ಹಾಗೂ ೬೪ ಶೀಲಗಳನ್ನು ಸೂಚಿಸುತ್ತಿವೆ. ಕಲಾ–ಶೀಲ ಸಂಪನ್ನರಾದ ಶರಣರು ಅಷ್ಟಾವರಣಗಳನ್ನು ಬಿಡಬಾರದೆಂಬ ಎಂಟು ನಂದಿಗಳು ತೋರುತ್ತಿವೆ. ಜೀವನದಲ್ಲಿ ಪಂಚಾಚಾರ ಪ್ರಾಣಮಯವಾಗಬೇಕೆಂದು ಐವ್ವೈದು ಕಲಶಗಳ ಗುಂಪು ನಾಲ್ಕು ದಿಕ್ಕಿಗೆ ಕಾಣುತ್ತಿವೆ. ಎಲ್ಲಾ ತತ್ವಗಳು ಯಾವದೇ ದಿಕ್ಕನಿಂದ ನೋಡಿದರೂ ಬರುವ ಭಕ್ತರಿಗೆ ದೂರದಿಂದಲೇ ದರ್ಶನವನ್ನು ಕೊಡುತ್ತಿವೆ. ಇದರಿಂದ ಇದರ ನಿರ್ಮಾಣ ಕಾರ್ಯದಲ್ಲಿ

ಶ್ರೀಗಳ ದೂರ ದೃಷ್ಟಿ ಎಷ್ಟಿದೆ ಎಂದು ನಮ್ಮೆಲ್ಲರನ್ನು ಚಕಿತಗೊಳಿಸುತ್ತದೆ. ಜೀವಾತ್ಮನ ಮೂರು ಶರೀರಗಳು ಮೂರು ದೀಕ್ಷೆಗಳನ್ನು ಹೊಂದಿ, ಮೂರು ಲಿಂಗಗಳನ್ನು ಪಡೆಯ ಬೇಕೆಂಬ ತ್ರಿಪುಟಿಯನ್ನು ಮೂರು ಕಲಶಗಳ ಗುಂಪು ತಿಳಿಸಿಕೊಡುತ್ತಿದೆ. ಎರಡಬಲದ ೬ ಕಮಾನುಗಳು ಸಣ್ಣ ಗೋಪುರಗಳು ಷಟಸ್ಥಲವನ್ನು ತಿಳಿಸುತ್ತಿವೆ. ಗೋಪುರದ ಮಧ್ಯದಲ್ಲಿ ನಾಲ್ಕು ಮೂಲೆಯ ಕಲಶಗಳು ಗುರು, ಲಿಂಗ-ಜಂಗಮ ಪ್ರಾಸಾದಗಳೆಂಬ ಸಾರಾಯ ಸಂಪತ್ತುಗಳನ್ನು ತಿಳಿಸುತ್ತಿವೆ. ದೊಡ್ಡ ಕಳಸವು ಮಹಾಲಿಂಗದಲ್ಲಿ ಎಲ್ಲಾ ತತ್ವಗಳು ತುಂಬಿಕೊಂಡಿವೆಂದು ಎತ್ತಿ ಸಾರುತ್ತಿದೆ.

ಈ ರೀತಿ ಶ್ರೀಗಳವರು ಬಹಳ ಕಷ್ಟಪಟ್ಟು ಎಷ್ಟೆ ಎಡರು-ತೊಡರು ಬಂದರೂ ಶ್ರೀ ಮಠದ ಗುರುಮಠ, ಪೂಜಾ ಮಂದಿರ, ದರ್ಶನ ಮಂಟಪ, ಈಶ್ವರ ಮಂದಿರ, ಪೂಜ್ಯರ ಕರ್ತೃ ಗದ್ದುಗೆ ಅನೇಕ ಪಾಠ ಶಾಲೆಗಳನ್ನು ಪ್ರಸಾದ ನಿಲಯಗಳನ್ನು ಸುಂದರ ವಾಗಿ ನಿರ್ಮಾಣ ಮಾಡಿಸಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಮುಂಡರಗಿಯಲ್ಲಿ ಕೈಕೊಂಡ ಇಮಾರತಿಗಳ ಪಟ್ಟಿಯನ್ನು ಮಾಡುತ್ತಾ ಹೋದರೆ ಇವುಗಳ ನಿರ್ಮಾಣಕ್ಕೆ ಧನ ಸಂಗ್ರಹ ಹೇಗಾಯಿತೆಂಬುದು ಆಶ್ಚರ್ಯಕರ ಸಂಗತಿಯೇ ಆಗಿದೆ.

ಇವೆಲ್ಲದರ ಜೊತೆಗೆ ಇಲ್ಲಿಯವರೆಗೆ ನಿರ್ಮಾಣಗೊಂಡ ಕಟ್ಟಡಗಳನ್ನು ಸದ್ಭಕ್ತರ ಗಮನಕ್ಕೆ ಇಲ್ಲಿ ಉಲ್ಲೇಖಿಸುವುದು ಅವಶ್ಯ ಎಂದು ಭಾವಿಸಿದ್ದೇನೆ.

೧. ಗುರುಗಳ ಸಮಾಧಿ ಮಂದಿರ-೧೯೬೮.

೨. ಶಿವಯೋಗ ನಿಲಯ (ಪೂಜಾ ಮಂದಿರ)-೧೯೬೯.

೩. ಗುರುಗಳ ಗದ್ದುಗೆಯ ಗೋಪುರ (೩೬ ಕಲಶಗಳುಳ್ಳದ್ದು)-೧೯೭೦.

೪. ಶ್ರೀ ಜಗದ್ಗುರು ಅನ್ನದಾನೇಶ್ವರ ಜನರಲ್ ಹಾಸ್ಟೇಲಿನ ೨೫ ಖೋಲಿಗಳನ್ನು ಹೆಚ್ಚಿಸಿದ್ದು-೧೯೭೧.

೫. ಶಿವಯೋಗ ನಿಲಯದ ಮೇಲೆ ಅತಿಥಿ ಗೃಹ ಹಾಗೂ ಚಿಕ್ಕ ಮಹಾದ್ವಾರ ಮಂಟಪ-೧೯೭೨.

೬. ಈಶ್ವರ ದೇವಾಲಯ ಮುಂಭಾಗದ ಶಿವಾನುಭವ ಮಂಟಪ-೧೯೭೩.

೭. ಶಿಂಗಟಾಲೂರಲ್ಲಿ ಶಿವಾನುಭವ ಮಂಟಪ ೧೯೭೦ರಿಂದ ೧೯೮೦ರ ವರೆಗೆ.

೮. ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಕೃತ ಪಾಠ ಶಾಲೆ ಹಾಗೂ ಛತ್ರ ನಿಲಯ-೧೯೭೪-೭೫.

೯. ಗದಗ ತಾಲೂಕ ಮದಗಾನೂರಲ್ಲಿ ಮೂಲ ಕರ್ತೃಗಳು ಅನುಷ್ಠಾನಗೈದ ಶಿವಯೋಗಾನುಷ್ಠಾನ ಮಂದಿರ-೧೯೭೯.

೧೦. ಜ. ಅ. ವಿದ್ಯಾವರ್ಧಕ ಸಂಘದ ೩ ಮನೆಗಳು (ಸಂಘದ ಆರ್ಥಿಕ ಭದ್ರತೆಗಾಗಿ)-೧೯೭೭.

೧೧. ಜ. ಅ. ವಿದ್ಯಾ ಸಮಿತಿಯ ಎಂ. ಎಸ್. ಡಂಬಳ ಕನ್ಯಾ ಪ್ರೌಢಶಾಲೆ ಮುಂಡರಗಿ-೭೦-೭೮.
೧೨. ಹಿರೇವಡ್ಡಟ್ಟಿ ಮಠದ ಮಹಾದ್ವಾರ ಮತ್ತು ಗೋಡಾವುನದ ನಿರ್ಮಾಣ-೧೯೭೯.
೧೩. ಯಲಬುರ್ಗಾ ತಾಲೂಕ ಕುಕನೂರ ಮಠದ ಜೀರ್ಣೋದ್ಧಾರ-೧೯೭೫-೭೮.
೧೪. ಕುಕನೂರ ಮಠದ ಮಹಾದ್ವಾರ ಮತ್ತು ೬ ಖೋಲಿಗಳು-೧೯೮೦.
೧೫. ಕೊಪ್ಪಳ ತಾಲೂಕ ಗೊಂಡಬಾಳ ಶಾಖಾ ಮಠದ ನಿರ್ಮಾಣ-೧೯೮೧.
೧೬. ಉಪ್ಪಿನ ಬೆಟಗೇರಿ ಪ್ರಸಾದ ನಿಲಯ ಕಟ್ಟಡ-೧೯೭೫-೮೦.
೧೭. ಜ. ಅ. ವಿದ್ಯಾ ಸಮಿತಿಯ ಸಭಾಭವನ-೧೯೮೨-೮೩.
೧೮. ಶ್ರೀ ಮಠದಲ್ಲಿ ಗೋಶಾಲಾ ಹಾಗೂ ಗೋಡಾವುನ-೧೯೮೩.
೧೯. ಶಿವಯೋಗಮಂದಿರ ಕುಮಾರೇಶ್ವರ ಪ್ರಾಚ್ಯ ವಿದ್ಯಾ ಪ್ರಸಾರಕ ಪ್ರೌಢಶಾಲಾ ಕಟ್ಟಡ-(೧೦ ಲಕ್ಷ ರೂ.) ೧೯೮೩-೮೬.
೨೦. ರಾಣೆಬೆನ್ನೂರ ತಾಲೂಕ ಜೋಯಿಸರ ಹರಳಹಳ್ಳಿಯಲ್ಲಿ ಶ್ರೀ ಕುಮಾರೇಶ್ವರ ಶಿವಯೋಗಿಗಳ ಜನ್ಮಸ್ಥಳ ಸ್ಮಾರಕ ಮಂಟಪ-೧೯೮೩-೯೦.
೨೧. ಶ್ರೀ ಮಠದ ಮಹಾದ್ವಾರ-೧೯೮೪-೯೦.
೨೨. ಕ. ಕೆ. ನಂದಿಕೋಲ ಹೈಸ್ಕೂಲ ಹಿರೇವಡ್ಡಟ್ಟಿ-೧೯೮೩-೮೭.
೨೩. ಜ. ಅ. ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲಾ-೧೯೯೧.
೨೪. ಜ. ಅ. ಪ್ರೌಢ ಶಾಲೆ ಬನ್ನಿಕೊಪ್ಪ (ಶಿರಹಟ್ಟಿ ತಾಲೂಕ)-೧೯೮೪-೯೧.
೨೫. ಜ. ಅ. ಪ್ರೌಢ ಶಾಲೆ ತಡಹಾಳ (ನವಲಗುಂದ ತಾಲೂಕ)-೧೯೮೪-೯೧.
೨೬. ಜ. ಅ. ಪ್ರೌಢ ಶಾಲೆ ಗೊಂಡಬಾಳ (ಕೊಪ್ಪಳ ತಾಲೂಕ)-೧೯೮೯-೯೨.
೨೭. ನವಲಗುಂದ ತಾಲೂಕ ಶಿಶ್ವಿನಹಳ್ಳಿ ಮಠದ ಜೀರ್ಣೋದ್ಧಾರ-೧೯೮೮-೯೩.
೨೮. ಕೆ. ಆರ್. ಬಿ. ಕಾಲೇಜ ಬಿ. ಸಿ. ಹಾಸ್ಟೆಲ್-೧೯೮೮.
೨೯. ಜ. ಅ. ವಿದ್ಯಾ ಸಮಿತಿ ಪ್ರೌಢಶಾಲೆ ನರಸಾಪೂರ (ಗದಗ)-೧೯೭೮.
೩೦. ಮಹಾಲಿಂಗಪ್ಪ ಹಿರೇಮನಿ ವಿಜ್ಞಾನ ಕಿರಿಯ ಕಾಲೇಜ-೧೯೮೪.
೩೧. ಹಿರೇವಡ್ಡಟ್ಟಿಯಲ್ಲಿ ಅಕ್ಕನ ಶಿವಾನುಭವ ಮಂಟಪ-೧೯೮೫.
೩೨. ಹಿರೇವಡ್ಡಟ್ಟಿಯಲ್ಲಿ ಬ್ಯಾಂಕಿನ ಕಟ್ಟಡ ಖೋಲಿಗಳು-೧೯೮೬.
೩೩. ವೆಂಕಟಾಪೂರದಲ್ಲಿ ಗುರುಗಳ ಜನ್ಮಶತಮಾನೋತ್ಸವ ಮಂದಿರ-೧೯೯೦-೯೩.
೩೪. ಜಗದ್ಗುರು ಅನ್ನದಾನೇಶ್ವರ ಕಲ್ಯಾಣ ಕೇಂದ್ರ-೧೯೯೦-೯೫, ಸುಮಾರು ೧೫ ಲಕ್ಷ ರೂ.
೩೫. ಆಂಗ್ಲ ಮಾಧ್ಯಮ ಶಾಲೆಗಾಗಿ ಛತ್ರ ನಿಲಯದ ಮೇಲೆ-೧೯೯೦.
೩೬. ಎಂ ಎಸ್. ಡಂಬಳ ಪ್ರೌಢಶಾಲೆಯ ೨ನೇ ಹಂತದ ಕಟ್ಟಡ-೧೯೮೮-೯೪.
೩೭. ಶರಣೆ ಬಸವಾಂಬೆ ವೀರಭದ್ರಯ್ಯ ರಾಜಗುರು ಪ್ರೌಢಶಾಲೆ ಬೊಮ್ಮನಹಳ್ಳಿ (ವಿಜಾಪೂರ ತಾಲೂಕ)-೧೯೯೨.

೩೮. ಯಲಬುರ್ಗಾ ತಾಲೂಕ ಬೆಣಕಲ್ಲ ಗ್ರಾಮದ ಮಠದ ಜೀರ್ಣೋದ್ಧಾರ.
೩೯. ನರಸಾಪೂರದಲ್ಲಿ ಶಿವಯೋಗಾಶ್ರಮ (ನಿರ್ಮಾಣ ಹಂತ)-೧೯೯೪.
೪೦. ಲಕ್ಕುಂಡಿಯಲ್ಲಿ ಶಾಖಾಮಠದ ನಿರ್ಮಾಣ ಪ್ರಾರಂಭ-೧೯೯೪.
೪೧. ದಾಂಡೇಲಿಯ ಉಳವಿ ಚನ್ನಬಸವೇಶ್ವರ ಪಾಲಿಟೆಕ್ನಿಕ್ ಸಂಸ್ಥೆಯ ವರ್ಕ್‌ಶಾಪ್ ಬಿಲ್ಡಿಂಗ್ ೧೯೯೧-೯೨.

ಹೀಗೆ ಹತ್ತು ಹಲವು ಇಮಾರತಿಗಳನ್ನು ನಿರ್ಮಾಣ ಮಾಡಿಸುವಲ್ಲಿ ಅತ್ಯಂತ ಶ್ರಮಿಸಿರುವರು. ಬರಗಾಲ ನಾಡಿನಲ್ಲಿ ಈ ಎಲ್ಲಾ ಕಟ್ಟಡ ನಿರ್ಮಾಣ ನಡೆದಿರುವದು ಪೂಜ್ಯರ ಪವಾಡವೇ ಎನ್ನಬಹುದು. ಶ್ರೀಗಳು ಈ ಎಲ್ಲಕ್ಕಿಂತ ಕಟ್ಟುವ ಜನರೊಂದಿಗೆ ಕಲ್ಲು ಮಣ್ಣು ಹೊತ್ತು 'ಶ್ರೀ ಮಠದ ಶಿಲ್ಪಿಗಳೆಂದು' ಜನರ ಮನದಲ್ಲಿ ನಿಂತಿರುವರು.

ಇವಲ್ಲದೆ ಅನೇಕ ಮಂದಿರಗಳಿಗೆ ದೇಣಿಗೆಯಿತ್ತು ಅವುಗಳ ಶ್ರೇಯೋಭಿವೃದ್ಧಿಗೆ ಮಾರ್ಗದರ್ಶನ ಮಾಡಿರುವರು. ಮೃಡಗಿರಿಯ ಶ್ರೀ ಮಠದ ಕರ್ಮಯೋಗಿಯಾಗಿ ಕಂಗೊಳಿಸಿದರು. ಸಾಹಿತ್ಯ ಯೋಗಿಗಳಾಗಿ, ಶಿವಯೋಗಿಗಳಾದವರು ಶ್ರೀ ಜಗದ್ಗುರು ಅನ್ನದಾನ ಮಹಾಸ್ವಾಮಿಗಳವರು.

ಆಧಾರ ಗ್ರಂಥಗಳು:

೧) ನಿರಂಜನ ಪ್ರಭೆ
೨) ನಿರಂಜನ ಜಂಗಮ

ಪೂಜ್ಯ ಜಗದ್ಗುರುಗಳನ್ನು ನಾನು ಕಂಡಂತೆ

—ಶ್ರೀ ಷ. ಬ್ರ. ಗುರುಶಾಂತ ಶಿವಾಚಾರ್ಯರು ಗವಿಮಠ,
ಬೊಮ್ಮನಹಳ್ಳಿ

ನಮ್ಮ ಕರ್ನಾಟಕ ಪ್ರದೇಶದಲ್ಲಿ ಗಣನೆಗೆ ಮೂರಿ ಮಠಗಳುಂಟು. ಅದರಲ್ಲಿ ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠವೂ ಒಂದಾಗಿದೆ. ಮಠಾಧಿಪತಿಗಳಿಂದ ಸಮಾಜಕ್ಕೆ ಏನು ಒಳ್ಳೇದು ಆಗಬೇಕೋ ಅದನ್ನು ಇಂದಿನ ಪೀಠದ ಶ್ರೀಮನ್ನಿರಂಜನ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ಕಾಯ-ವಾಕ್-ಮನಸ್ಸು ಈ ತ್ರಿಕರಣಗಳಿಂದ ಸಮಾಜದ ಸರ್ವಾಂಗೀಣೋನ್ನತಿಗಾಗಿ ಶ್ರಮಿಸುತ್ತಿದ್ದಾರೆ.

"ಮನಸಿ ವಚಸಿ ಕಾಯೇ ಪುಣ್ಯ ಪೀಯೂಷಪೂರ್ಣಾಃ
ತ್ರಿಭುವನಮುಪಕಾರ ಶ್ರೇಣೀಭೀ ಪ್ರೀಣಯಂತಃ।
ಪರಗುಣ ಪರಮಾಣೂನ್ಪರ್ವತೀ ಕೃತ್ಯನಿತ್ಯಂ
ನಿಜ ಹೃದಿ ವಿಕಸಂತಃ ಸಂತಿ ಸಂತಃ ಕಿಯಂತಃ॥"

ಎಂಬ ಭರ್ತೃಹರಿಯ ಉಕ್ತಿಯಂತೆ ತ್ರಿಕರಣ ಶುದ್ಧಾತ್ಮರಾಗಿ ಸಂತಸಗೊಳ್ಳುವ ಸತ್ಪುರುಷರು ಸಿಗುವದು ವಿರಳವಾಗಿದೆ. ಜಗದ್ಗುರು ಮಹಾಸನ್ನಿಧಿಯವರು ತಾವು ಮುಂಡರಗಿಯ ಜಗದ್ಗುರು ಪೀಠವನ್ನು ಅಲಂಕಾರಮಾಡಿ ಇಪ್ಪತ್ತೈದು ವರ್ಷಗಳು ಮುಗಿಯುವ ಸಂದರ್ಭದಲ್ಲಿ ಈ ಅವಧಿ ಒಳಗೆ ಜಗದ್ಗುರುಗಳವರು ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕ ರಂಗದಲ್ಲಿ ಅಪಾರವಾದ ಕಾರ್ಯ ಸಾಧಿಸಿದ್ದು ಸರ್ವರೂ ಕಣ್ಣಾರೆ ಕಂಡಿದ್ದಾರೆ. ಎಲ್ಲದಕ್ಕೂ ಪ್ರಾಮುಖ್ಯವಾದದ್ದು ಆತ್ಮಬಲ. ಇದು ಸಾಧ್ಯವಾಗದೆ ವಿನಾ ಯಾವುದನ್ನು ಸಾಧಿಸಲು ಅಸಾಧ್ಯ. ಅಂತೆ ಮಹಾಸನ್ನಿಧಿಯವರು ಲಿಂಗಪೂಜೆಗೆ ಮೊದಲು ಪ್ರಾಧಾನ್ಯತೆ ಕೊಟ್ಟು ನಂತರ ಅಧ್ಯಯನ, ಸಮಾಜಕಾರ್ಯ ಹೀಗೆ ಹಲವಾರು ಸಮಾಜದ ಹಿತದೃಷ್ಟಿಯಲ್ಲಿ ಜನಕಲ್ಯಾಣವನ್ನು ಮಾಡುತ್ತಿರುವದು ಶ್ಲಾಘ್ಯನೀಯರು. ಸನ್ನಿಧಿಯರು ತಾವು ಬ್ರಾಹ್ಮಿ ಮುಹೂರ್ತದಲ್ಲಿ ಎದ್ದು ದಿನದ ೧೮-೨೦ ಗಂಟೆಗಳವರೆಗೂ ಎಡಬಿಡದೆ ಕ್ರಮವಾಗಿ ಸಮಯವನ್ನು ಹಂಚಿಕೊಂಡು ಯಾವ ವೇಳೆಯಲ್ಲಿ ಏನು? ಅನ್ನುವದನ್ನು (ಪೂಜಾ, ಅಧ್ಯಯನ, ಯೋಗಭ್ಯಾಸ, ಸಮಾಜದ ಹಿತಚಿಂತನೆ) ಮೊದಲಾದವುಗಳು ಆಚರಣೆಯಲ್ಲಿ ಬರುತ್ತಲಿವೆ. ಸನ್ನಿಧಿಯವರು ವ್ಯರ್ಥವಾಗಿ ಸಮಯ

ವನ್ನು ಎಂದೂ ಕಳೆದವರಲ್ಲ. "ಕ್ಷಣತ್ಯಾಗೇಕುತೋವಿದ್ಯಾ? ಕಣಃತ್ಯಾಗೆ ಕುತೊಧನಂ?" ಎನ್ನುವ ಅರ್ಥವನ್ನು ಪೂಜ್ಯರಲ್ಲಿ ಕಾಣುತ್ತೇವೆ. ಯಾವುದೆ ವಿಷಯ ಬರೆ ಬಾಯಿಯಿಂದ ಹೇಳುವವರು ಉಂಟು. ಆದರೆ, ಸನ್ನಿಧಿಯವರು ವಿಷಯವನ್ನು ಮನನಮಾಡಿ ಅದನ್ನು ಆಚರಣೆಗೆ ತಂದು ನಂತರ ಹೇಳುವರು. ಪೂಜೆಮಾಡುವವದರಲ್ಲಿ ಪ್ರಸಾದ ತೆಗೆದು ಕೊಳ್ಳುವದರಲ್ಲಿ, ಮಲಗುವಲ್ಲಿ, ಕೂಡ್ರುವಲ್ಲಿ, ಎಲ್ಲದರಲ್ಲಿ ಒಂದು ವಿಶೇಷವಾದ ರೂಪ ವನ್ನು ಅದರ ಹಿಂದಿನ ತತ್ವವನ್ನು ಸಂಪೂರ್ಣ ಅರ್ಥೈಸಿಕೊಂಡವರಲ್ಲಿ ಸನ್ನಿಧಿಯವರು ಮೊದಲಿಗರು. "ವೈಶಮ್ಯಾಪಿಪ್ರಾಪ್ತಾಧೈರ್ಯಧನಾ? ಸಾಧವಾಃ ಸಚ್ಛಿರವ್ರತಂ ಗೋಪಾಯಂತಿ" ಎಂಬಂತೆ ಈ ಲೌಕಿಕ ಜೀವನದ ನಶ್ವರತೆಗೆ ಎಂದೂ ಹೆದರದೆ ತಮ್ಮದೆ ಆದ ಘನವಾದ ನಿಲುವಿನಲ್ಲಿ (ಲಿಂಗಾನಂದಲ್ಲಿದ್ದು) ತಾವೇ ತಾವಾಗಿದ್ದಾರೆ. ಈ ಅವಸ್ಥೆ ಎಲ್ಲರಿಗೆ ಒರುವದಿಲ್ಲ. ಕೋಟಿಗೊಬ್ಬ ಶರಣರು ಅನ್ನುವಂತೆ ಮಹಾತ್ಮರ ಸಂಖ್ಯಾವಿರಳ. ಚನ್ನಬಸವಣ್ಣ ಅಂದರೆ ಯಾರು ಅನ್ನುವಂತ ಪರಿಸ್ಥಿತಿಯಲ್ಲಿ ಆ ಮಹಾನುಭಾವರ ವಿಚಾರ ಏನು ಎಂಥಾದ್ದು, ಆತ ಯಾವ ಮೆಟ್ಟಿಲಕ್ಕೇರಿದ್ದರು ಅನ್ನುವದು ಅವರ ಬಗ್ಗೆ ಸಂಪೂರ್ಣ ಅಧ್ಯಯನಮಾಡಿ ಅವರ ವಚನ ಸಾಹಿತ್ಯದಿಂದ ತತ್ವದ ಹಿನ್ನೆಲೆಯನ್ನು ಧರ್ಮದ ಐತಿಹಾಸವನ್ನು ಕಂಡು ವಿಚಾರ ಸಂಕೀರ್ಣಮಾಡಿ ಸರ್ವರಿಗೂ ಆ ವಿಚಾರ ತಿಳಿಸಿದ್ದು, ವೀರಶೈವ ಧರ್ಮ ಇದು ಪುರಾತನದ್ದು, ಇದಕ್ಕೆ ಒಳ್ಳೆ ತಿಳುವಳಿಕೆ ಕೊಟ್ಟು ಸಾಮಾನ್ಯರ ಮಟ್ಟಕ್ಕೂ ತಿಳಿಯುವಂತೆ ಮಾಡಿದ ಲೇಖನಗಳು ನೋಡಿದಾಗ ಧರ್ಮದ ಹಿನ್ನಲೆಯ ಪಾವಿತ್ರ್ಯತೆಯನ್ನು ಸನ್ನಿಧಿಯವರಲ್ಲಿ ಎದ್ದುಕಾಣುವದು. ಅನೇಕ ಸುವಿಚಾರಗಳೊಳಗೊಂಡ ಧರ್ಮದ ದೊಡ್ಡ ಹಾಗೂ ಸಣ್ಣ ಪುಟ್ಟ ಗ್ರಂಥಗಳನ್ನು ಸರಳವಾದ ಶೈಲಿಯಲ್ಲಿ ಸಾಮಾನ್ಯರಿಗೂ ಗೊತ್ತಾಗುವ ಭಾಷ್ಯದಲ್ಲಿ ಅದೆಷ್ಟು ಪುಸ್ತಕಗಳು ರಚನೆಗೊಂಡದ್ದು ಅದರ ಸದುಪಯೋಗ ಸಮಾಜಕ್ಕೆ ಆಗುತ್ತಿರುವದು. ತಾವು ಸ್ವತಃ ವಿದ್ಯಾವಂತರಾಗಿ ವಿದ್ಯಾಪ್ರಸಾರ ಮಾಡುತ್ತಿರುವದು ಎಲ್ಲರಿಗೆ ವಿದಿತವಾದದ್ದು. ತಮ್ಮ ವಿದ್ಯಾಸಂಸ್ಥೆಯಿಂದ ಬೇರೆ ಬೇರೆ ಕಡೆಗೆ ಅದರ ಅಂಗಸಂಸ್ಥೆಗಳು ಸ್ಥಾಪಿಸಿ ತದ್ವಾರಾ ವಿದ್ಯಾಪ್ರಸಾರ ಕಾರ್ಯ ಗಣನೀಯವಾದದ್ದು. ಇಂದು ಸಮಾಜ ಎದುರಿಸುತ್ತಿರುವ ಹಲವಾರು ದುರಂತಗಳು ನಿವಾರಣೆ ಆಗಬೇಕಾದರೆ ವಿದ್ಯೆಯಿಂದ ಸಾಧ್ಯವೆಂದು ಹೇಳ ಬಹುದು, ಅಂತಹ ಮಹತ್ತರ ಕಾರ್ಯ ಸಂಸ್ಥೆ ಸುಸಜ್ಜಿತ ರೀತಿಯಲ್ಲಿ ಕಾರ್ಯೋನ್ಮುಖ ವಾದದ್ದು ಸ್ತುತ್ಯವಾಗಿದೆ. ಮಠದ ಭವ್ಯ ಪರಂಪರೆಯನ್ನು ಸನ್ನಿಧಿಯವರು ವಿಶೇಷ ರೀತಿಯಲ್ಲಿ ಸಮಾಜಕ್ಕೆ ಅದರ ಅರ್ಥವನ್ನು ಬೋಧಿಸುತ್ತಿರುವದು ಭಕ್ತರ ಒಂದು ಭಾಗ್ಯವೆಂದೇ ಹೇಳಬಹುದು. ಸನ್ನಿಧಿಯವರ ಬಗ್ಗೆ ಎಷ್ಟು ಬರೆದರೂ ಸಾಲದು. ೨೫ನೇ ವರ್ಷದ ಪೀಠಾರೋಹಣದ ಸಮಯದಲ್ಲಿ ಸನ್ನಿಧಿಯವರು ನೂರಾರು ಕಾರ್ಯ ಕ್ರಮಗಳು ಹಮ್ಮಿಕೊಂಡು ಒಂದು ವಿಶೇಷ ರೀತಿಯಿಂದ ಈ ಕಾರ್ಯಕ್ರಮ ಆಗಬೇಕು. ತನ್ಮೂಲಕ ಸಮಾಜಕ್ಕೆ ಲೇಸಾಗಬೇಕೆಂಬ ಹಂಬಲ ಸನ್ನಿಧಿಯವರದಾಗಿದೆ. ಇದರ

ಸದುಪಯೋಗ ಸಮಾಜವು ಪಡೆದುಕೊಂಡರೆ ಇದಕ್ಕಿಂತ ಹೆಚ್ಚಿನ ಪದವಿ ಇನ್ನೊಂದಿಲ್ಲ ವೆಂದು ಹೇಳಿದರೆ ತಪ್ಪಾಗದು. ಮಹಾತ್ಮರ ಬಗ್ಗೆ ಆಚರಿಸುವ ಯಾವದೇ ಸಮಾರಂಭ ಗಳು ಅವು ಅವರಿಗಾಗಿ ಅಲ್ಲ, ಅವು ನಮ್ಮ ಜೀವನದ ದಾರಿಗೆ ದೀಪದಂತೆ ಎಂದು ತಿಳಿಯಬೇಕು. "ವಿದ್ವಾನ್ ಸರ್ವತ್ರ ಪೂಜ್ಯತೇ" ಈ ಸಮಾರಂಭ ಒಂದು ತತ್ವವೇ ಮೂರ್ತಿವೆತ್ತ ಮಹಾ ವಿದಾಚ್ ಜಂಗಮಕ್ಕೆ ಮಾಡಬೇಕಾದ ಉಪಕಾರ ಸ್ಮರಣೆ ನಮ್ಮ ದಾಗಿದೆ. ಇಂಥಾ ಹಲವಾರು ಸಮಾರಂಭಗಳು ಜರುಗಲಿ ಸನ್ನಿಧಿಯ ಒಂದು ಕೃಪೆ ಸರ್ವರಿಗೂ ಆಗಲೆಂದು ಪ್ರಾರ್ಥನೆ.

ನಾ ಕಂಡ ದಿವ್ಯ ಚೇತನ

—ಶ್ರೀಮತಿ ರಾಜರಾಜೇಶ್ವರಿ ರಾ. ಬಳ್ಳಾರಿ, ಗದಗ

ದಿ. ೭-೧೧-೯೪ ರಂದು ಮುಂಡರಗಿಯ ಶ್ರೀಗಳು ಮನೆಗೆ ದಯಮಾಡಿಸಿದಾಗ ನೀವು ಒಂದು ಲೇಖನವನ್ನು ಬರೆದು ಕೊಡ್ರಿ ಎಂದಾಗ ಆಶ್ಚರ್ಯದಿಂದ ಬಹಳಷ್ಟು ಸಂತೋಷವಾಯಿತು. ಶ್ರೀಗಳ ಕೃಪಾಕಟಾಕ್ಷ ಹಾಗೂ ಅವರ ಒಂದು ಪ್ರೇರಣೆಯಿಂದ ಸಾಹಿತಿಯೂ ಅಲ್ಲದ, ಸಾಕಷ್ಟು ಶಬ್ದ ಭಾಂಡಾರದ ಕೊರತೆಯಿದ್ದರೂ ಕೂಡ ನಾನೂ ಏಕೆ ನನ್ನದೇ ಆದ ಭಾಷೆಯಲ್ಲಿ, ಶೈಲಿಯಲ್ಲಿ ಶ್ರೀಗಳವರ ಬಗೆಗೆ ಅವರ ಆಶೀರ್ವಾದದಿಂದ ಇಲ್ಲಿಯವರೆಗೂ ಸಂತೋಷದಿಂದ, ಸಮಾಧಾನದಿಂದ ಜೀವನ ಸಾಗಿಸಿದ ನಾನು ಖಂಡಿತವಾಗಿಯೂ ಕಣ್ಣಿಗೆ ಕಾಣುವ ಎಲ್ಲ ದೃಶ್ಯಗಳನ್ನು, ಪವಾಡಗಳನ್ನು, ಕಿವಿಯಿಂದ ಕೇಳಿದ ಅವರ ಸಾಧನೆಗಳನ್ನು ಮನಸ್ಸಿನಲ್ಲಿ ಮಾಡುವ ಎಲ್ಲ ಭಾವನೆಗಳನ್ನು ಶಬ್ದಗಳ ಮೂಲಕ ಬರೆದು ತಿಳಿಸಲು ಅಸಮರ್ಥಳಾದರೂ ಪ್ರಯತ್ನಪಟ್ಟು ಸ್ವಲ್ಪನ್ನಾದರೂ ಬರೆದು ಕೊಡಬೇಕು ಎನ್ನುವ ಆಸೆಯಿಂದ ಬರೆಯುತ್ತಿರುವೆನು.

ನಾನು ಹುಟ್ಟಿದ್ದೇ ಒಂದು ಪವಾಡವೆಂದರೆ ಬಹಳ ಜನಕ್ಕೆ ಆಶ್ಚರ್ಯವೇನೊ! ನೆನೆಸಿಕೊಂಡರೆ ನನಗೆ ಆಶ್ಚರ್ಯವಾಗುವದು. ಅದು ಹೇಗೆಂದರೆ ನನ್ನ ಪೂಜ್ಯ ತಂದೆ ತಾಯಿಯವರ ಮದುವೆಯಾಗಿ ೧೨ ವರ್ಷಗಳೂ ಸಂದಿದ್ದರೂ ಅವರಿಗೆ ಮಕ್ಕಳ ಯೋಗವಾಗಿರಲಿಲ್ಲ. ತೋರಿಸದ ಡಾಕ್ಟರುಗಳಿಲ್ಲ ಎಲ್ಲ ಚಿಕಿತ್ಸೆಗಳು ಮುಗಿದು ನಿಷ್ಫಲವಾಗಿ ಇನ್ನು ತಮಗೆ ಮಕ್ಕಳ ಭಾಗ್ಯವಿಲ್ಲವೆಂದು ನಿರಾಶರಾದಾಗ ಮುಂಡರಗಿಯ ಹಿಂದಿನ ಶ್ರೀಗಳವರು ಸವದತ್ತಿಯ ನನ್ನ ತಾಯಿಯ ಮನೆಗೆ ದಯಮಾಡಿಸಿದರು. ನನ್ನ ತಂದೆ ತಾಯಿಗಳಗಳವರ ನಿಷ್ಠೆ, ಭಕ್ತಿ ಹಾಗೂ ಸೇವೆಯಿಂದ ಸಂತೃಪ್ತರಾದ ಆ ಮಹಾನುಭಾವರು ಈ ಮನೆಯಲ್ಲಿ ಖಂಡಿತವಾಗಿಯೂ ತೊಟ್ಟಿಲು ತೂಗುತ್ತದೆ ಎಂದು ಆಶೀರ್ವದಿಸಿದರು. ಅವರ ಆಶೀರ್ವಾದದ ಫಲವೇ ನಾನು. ಅಂತಹ ಮಹಾತ್ಮರ ಆಶೀರ್ವಾದದಿಂದ ಸುಸಂಸ್ಕೃತ ದಂಪತಿಗಳ ಉದರದಲ್ಲಿ ಜನಿಸಿದ ನಾನು ಧನ್ಯ. ವೈದ್ಯ ವಿಜ್ಞಾನಕ್ಕೂ ನಿಲುಕದ ಒಂದು ಪವಾಡವಾಯಿತೆಂದರೂ ಅಡ್ಡಿಯಿಲ್ಲ. ಇಂತಹ ಅನೇಕ ಘಟನೆಗಳು ಮಹಾತ್ಮರ ಆಶೀರ್ವಾದದಿಂದ ನಮ್ಮ ಜೀವನದಲ್ಲಿ ನಡೆಯುತ್ತಲೇ ಇರುತ್ತವೆ. ಅರಿವಿಗೆ ಬಂದಾಗ ಆಶ್ಚರ್ಯವೆನಿಸುವದು.

ಪೂಜ್ಯ ಶ್ರೀಗಳವರ ಆಶೀರ್ವಾದದಿಂದ ಹುಟ್ಟಿದ ನಾನು, ನನ್ನ ನಂತರ ಇಬ್ಬರು ತಂಗಿಯರು, ಮುಂಡರಗಿಯ ಶ್ರೀಗಳವರ ಹೆಸರನ್ನೇ ಇಟ್ಟುಕೊಂಡಂತಹ ಒಬ್ಬನೇ ಒಬ್ಬ

ತಮ್ಮ ಅನ್ನದಾನೀಶಸು ಬೆಳಿತಾ ಬೆಳಿತಾ ದೇವರೆಂಬರೇ ಮುಂಡರಗಿಯ ಶ್ರೀಗಳು ಮಾತ್ರ ಏನೇ ಕಷ್ಟ, ಸುಖ ಬಂದರೂ ಪರಿಹಾರ ಅವರ ಆಶೀರ್ವಾದದಿಂದ ಮಾತ್ರ ಸಾಧ್ಯ ಅನ್ನುವ ಹಾಗೆ ನನ್ನ ತಂದೆ, ತಾಯಿ ಮನಸ್ಸಿನಾಳದುದ್ದಕ್ಕೂ ಬೇರುಬಿಟ್ಟು ಬೆಳಸಿ ಹೆಮ್ಮರವಾಗಿ ಅದನ್ನು ಪೋಷಿಸಿದರು. ಹೀಗಾಗಿ ನಾವು ಅವರ ಕೃಪಾಶೀರ್ವಾದ ದಿಂದಲೇ ಎಲ್ಲರೂ ಉತ್ತಮವಾದ ಜೀವನವನ್ನು ಸಾಗಿಸುತ್ತಿರುವೆವು. ನಾವು ಚಿಕ್ಕವರಿರು ವಾಗ ನಮ್ಮ ತಿ| ಅಜ್ಜನವರು "ಬಸವ ನಿಮ್ಮಯ ಮಹಿಮೆ ಉಸುರಲೆನ್ನಳವಲ್ಲ ಪಶುಪತಿಯು ತಾ ಬಲ್ಲ ಸಿದ್ಧಲಿಂಗ" ಎಂದು ಕಂಚಿನ ಕಂಠದಿಂದ ಹಾಡುವ ಅವರ ಬಸವ ನಾಮದೊಂದಿಗೆ ನಮಗೆಲ್ಲ ಬೆಳಗಾಗುತ್ತಿತ್ತು. ಎಷ್ಟೋ ಸಲ ನನಗನಿಸುವದು ಈ ವಚನ ಗಳನ್ನು ಸುಶ್ರಾವ್ಯವಾಗಿ ಹಾಡುವದಕ್ಕಿಂತ ಕಂಚಿನ ಕಂಠದಿಂದ ಘಟ್ಟಿಸಿ ಹಾಡಿದರೇನೇ ಮನಸ್ಸಿನಲ್ಲಿ ಆಳವಾಗಿ ಬೇರೂರುವದೇನೋ ಅಂತ ನಮಗೆ ಈಗಲೂ ಕೂಡಾ ಬೆಳಗಾಯಿ ತೆಂದರೆ ಆ ನನ್ನ ಅಜ್ಜನ ಧ್ವನಿ ಇನ್ನೂ ಕಿವಿಯಲ್ಲಿ ಗುಂಯ್ಯಗುಡುವದನ್ನು ನಾನೆಂದೂ ಮರೆಯಲು ಸಾಧ್ಯವು ಇಲ್ಲ.

ನಾವೆಲ್ಲರೂ ಚಿಕ್ಕವರಿದ್ದಾಗ ಇಂದಿನ ಪೂಜ್ಯರು ಸವದತ್ತಿಯ ನಮ್ಮ ಮನೆಗೆ ಮೇಲಿಂದ ಮೇಲೆ ಬರುತ್ತಿದ್ದರು. ಆಗೆಲ್ಲ ನಮಗೆ ಮನೆಗೆ ಶ್ರೀಗಳು ಬರುತ್ತಾರೆಂದರೆ ಏನೋ ಒಂದು ಸಂಭ್ರಮ, ಮನೆಯಲ್ಲಿ ಹಬ್ಬದ ವಾತಾವರಣ. ದೇವರೇ ಪ್ರತ್ಯಕ್ಷ ವಾದಷ್ಟು ಸಂತಸ. ಇನ್ನೂ ಏನೇನೋ ಅನಿಸಿಕೆಗಳು. ಭಯಮಿಶ್ರಿತ ಭಕ್ತಿ, ಪ್ರೀತ್ಯಾದಾರಗಳಿಂದ ತುಂಬಿದ ವಾತಾವರಣ. ಬೆಳಿತಾ ಬೆಳಿತಾ ನಾನು ಅವರ ಪವಾಡ ಗಳನ್ನು ಶಿಕ್ಷಣರಂಗದಲ್ಲಿ ಶ್ರಮಿಸಿದ ರೀತಿ ಅವರು ರಚಿಸಿದಂತಹ ಪ್ರಕಟಿಸಿದಂತಹ ಮೇರು ಕೃತಿಗಳನ್ನು ಓದಿದಾಗ, ಕೇಳಿದಾಗ ನೋಡಿದಾಗ ಮೈಯು ರೋಮ ರೋಮವು ನೆಟ್ಟ ಗಾಗುವದು ಆ ದಿವ್ಯ ಚೈತನ್ಯ ಮೂರ್ತಿಗೆ ಎಷ್ಟು ತಲೆಬಾಗಿ ನಮಿಸಿದರೂ ಕಮ್ಮಿಯೇ.

ಬಸವಣ್ಣನವರು ೧೨ನೆಯ ಶತಮಾನದಲ್ಲಿ ಮಾಡಿದ ಕ್ರಾಂತಿ ಎಂತಹ ಸಾಮಾನ್ಯ ಮನುಷ್ಯರಿಗೂ ಕೂಡಾ ಮನಮುಟ್ಟುವಂತೆ ಅರ್ಥವಾಗುವ ರೀತಿಯಲ್ಲಿ ರಚಿಸಿದ ವಚನ ಗಳು ಎಂತವರ ತನು, ಮನ, ಹೃದಯಗಳನ್ನಾದರೂ ಸೂರೆಗೊಂಡಾವು. ನಮ್ಮ ಈಗಿನ ಜನಾಂಗಕ್ಕೂ ಅಥವಾ ಸಮಾಜಕ್ಕೂ, ಬಸವಣ್ಣನವರಿಗೂ ೮ ಶತಮಾನಗಳ ಅಂತರ. ಗುರುಗಳ ಅನುಕರಣೆ, ಮಾರ್ಗದರ್ಶನವಿಲ್ಲದೇ ಇದ್ದಿದ್ದರೆ ಬಸವಣ್ಣನವರ ವಚನಗಳು ಬೆಳಕಿಗೆ ಬರುತ್ತಿರಲಿಲ್ಲವೇನೋ, ಗುರುಗಳು ಅವರ ವಚನಗಳನ್ನು ಬಿಡಿಸಿ, ವಿಂಗಡಿಸಿ, ಅರ್ಥೈಸಿ ಹೇಳಿದರೇನೇ ಆದಕ್ಕೊಂದು ಅರ್ಥ. ಅದೇ ರೀತಿಯಾಗಿ ಮುಂಡರಗಿಯ ಶ್ರೀಗಳೂ ಕೂಡಾ ಬಸವಣ್ಣನವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಬಗೆ ಯನ್ನು ವಚನದ ಮೂಲಕ ವಿಂಗಡಿಸಿ ಹೇಳಿದಾಗ ಅದನ್ನು ತಿಳಿದುಕೊಂಡು ನಮ್ಮ ಜೀವನದಲ್ಲಿ ಅಳಡಿಸಿಕೊಂಡು ಜೀವನದುದ್ದಕ್ಕೂ ಅದೇ ರೀತಿಯಾಗಿ ನಡೆದು ಕೊಂಡರೆ ಸಾರ್ಥಕವಾದೀತು.

ತ್ರಿವಿಧ ದಾಸೋಹ ಮೂರ್ತಿಗಳಾದ ಶ್ರೀ ಜಗದ್ಗುರು ಅನ್ನದಾನ ಮಹಾಸ್ವಾಮಿಗಳವರದು ಮಾತೃ ಹೃದಯ. ತಾಯಿಯ ಹತ್ತಿರ ಹೃದಯದಾಳದ ಮಾತುಗಳನ್ನು ಹೇಳಿದಂತೆಯೇ ಪೂಜ್ಯರ ಮುಂದೂ ಹೇಳಿಕೊಳ್ಳುವಂತಹುದು. ಹೆಣ್ಣು ಮಕ್ಕಳೆಂದರೆ ಮಾತೃ ಸಮಾನ ಎನ್ನುವ ಹೃದಯವಂತಿಕೆ ಅವರದು. ಶ್ರೀಗಳವರ ಪಟ್ಟಾಭಿಷೇಕದ ರಜತ ಮಹೋತ್ಸವದ ಅಂಗವಾಗಿ ಲಕ್ಕುಂಡಿಯಲ್ಲಿ ಏರ್ಪಡಿಸಿದ ಮಹಿಳಾ ಗೋಷ್ಠಿಯಲ್ಲಿ ನನ್ನನ್ನು ಕೂಡಾ ಮುಖ್ಯ ಅತಿಥಿಯನ್ನಾಗಿ ಕರೆದದ್ದನ್ನು ಅವರ ಆಶೀರ್ವಾದವೆಂದೇ ಪರಿಗಣಿಸುವೆನು. ಮಹಿಳೆಯರಿಗೂ ಅವಕಾಶ ಕೊಡಬೇಕು ಎಂದೇ ಏರ್ಪಡಿಸಿದ್ದ ಆ ಮಹಿಳಾಗೋಷ್ಠಿ ಒಂದು ಅದ್ಭುತ ಸಮಾರಂಭವೇ ಸರಿ.

ತಪೋನಿಷ್ಠರೂ, ಪೂಜಾನಿಷ್ಠರೂ ಆದ ಶ್ರೀಗಳ ಹತ್ತಿರ ನಮ್ಮ ಕಷ್ಟ, ಸುಖಗಳನ್ನು ಏನಾದರೂ ತೋಡಿಕೊಳ್ಳಬೇಕೆಂದಾಗ ನಮಗಿಂತ ಮೊದಲೇ ಅವರು ನಮ್ಮ ಮನಸ್ಸನ್ನರಿತು ಆಶೀರ್ವದಿಸುವರು. ಶ್ರೀಗಳು ಲಕ್ಕುಂಡಿಯಲ್ಲಿ ಜರುಗಿದ ರಜತ ಮಹೋತ್ಸವ ಸಮಾರಂಭದ ತಮ್ಮ ಆಶೀರ್ವಚನದಲ್ಲಿ ಅವರು ಹೇಳಿದ್ದನ್ನು ನಾನೆಂದಿಗೂ ಮರೆಯುವದಿಲ್ಲ. ಶ್ರೀಗಳು ಹೇಳಿದ್ದೆಂದರೆ ನಾವು ಸ್ವಾಮಿಗಳು ವರ ಕೊಡುವ ಸ್ವಾಮಿಗಳೂ ಅಲ್ಲ, ಶಾಪಕೊಡುವ ಸ್ವಾಮಿಗಳೂ ಅಲ್ಲ. ನೀವು ನಮ್ಮನ್ನು ವರ ಕೊಡಿರೆಂದು ಪೀಡಿಸದೇ ಸ್ವಾಮಿಯ ಕೃಪೆಗೆ ಪಾತ್ರರಾಗಿ ನಮ್ಮನ್ನು ಸಂತೋಷಗೊಳಿಸಿದರೆ ನಿಮ್ಮ ಇಷ್ಟ ಸಿದ್ಧಿಯಾಗುವದು. ನಮಗೆ ಅಸಮಾಧಾನ ಮಾಡಿ ನಮ್ಮ ಮನನೋಯಿಸಿ ನಿಮ್ಮ ಕೆಲಸಕ್ಕೆ ಧಕ್ಕೆ ತಂದುಕೊಳ್ಳಬೇಡಿರಿ ಎಂದು ಹೇಳಿದ ವಾಕ್ಯ ಎಷ್ಟೊಂದು ಅರ್ಥಪೂರ್ಣ.

ಪೂಜ್ಯ ಶ್ರೀಗಳವರ ಹೆಸರನ್ನೇ ಇಟ್ಟುಕೊಂಡಂತಹ ನನ್ನ ತಮ್ಮನ ಹೆಸರನ್ನು ನನ್ನ ತಂದೆಯಾಗಲಿ, ತಾಯಿಯಾಗಲಿ ಬರಿ ನೆಲದ ಮೇಲೆ ಅಂದರೆ ಅಡ್ಡಾಡುವ ಜಾಗದಲ್ಲಿ ಎಂದೂ ಕೂಡ್ರಗೊಡುತ್ತಿರಲಿಲ್ಲ. ಆಗೆಲ್ಲ ನಾವು ಚಿಕ್ಕವರು. ಅವರು ಹಾಗೆಂದಾಗ ಆಶ್ಚರ್ಯವಾಗುತ್ತಿತ್ತು. ಅಜ್ಜಾರ ಹೆಸರನ್ನು ಇಟ್ಟುಕೊಂಡ ಅವನ ಹೆಸರನ್ನು ಹಾಗೆಲ್ಲ ಬರೆಯಬಾರದೆಂದು ಹೇಳುತ್ತಿದ್ದರು ಎಂತಹ ಭಯ, ಭಕ್ತಿ ಆ ಹೆಸರಿನಲ್ಲಿಯೂ ಕೂಡಾ

ನೆನೆದವರ ಮನದಲ್ಲಿ ಅನ್ನುವ ಹಾಗೆ ಒಮ್ಮೆ ನಾನು ನನ್ನ ತಂದೆಗೆ ರಾತ್ರಿ ಕನಸಿನಲ್ಲಿ ಮುಂಡರಗಿಯ ಅಜ್ಜಾರು ಬಂದಿದ್ದರು"ಎಂದು ಹೇಳುತ್ತಲಿದ್ದೆ ಇನ್ನೂ ನನ್ನ ಮಾತು ಪೂರ್ತಿಯಾಗಿರಲಿಲ್ಲ;ಅಜ್ಜಾರು ಮನೆಗೆ ದಯಮಾಡಿಸಿದ್ದರು. ಇಂತಹ ಅನೇಕ ಸನ್ನಿವೇಶಗಳು ನಾವು ಮನಸ್ಸಿನಲ್ಲಿ ಅಂದುಕೊಂಡಂತೆ ಜರುಗುತ್ತಲೇ ಇರುತ್ತವೆ ಮೇಲಿನದೊಂದು ನಿದರ್ಶನವಷ್ಟೇ.

ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸಾಕಷ್ಟು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಟ್ಟಂಥ ಶ್ರೀಗಳವರ ಶಿಕ್ಷಣದ ಬಗೆಗಿದ್ದ ಒಲವನ್ನು ಎತ್ತಿ ತೋರಿಸುವಂತಹುದು.

ಇನ್ನು ಅವರು ರಚಿಸಿದ, ಪ್ರಕಟಿಸಿದ ಮೇರು ಗ್ರಂಥಗಳಾದ ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯ ಪ್ರಥಮ ಸಂಕೀರಣ ಪ್ರಥಮ ಪುಷ್ಪ "ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು." ಉಳವಿಯ ಸುಕ್ಷೇತ್ರದಲ್ಲಿ ಸಮಗ್ರ ವಿಚಾರ ಸಂಕೀರಣ

ನಡೆಯಿತು. ಅದೇ ರೀತಿಯಾಗಿ ದ್ವಿತೀಯ ಪುಷ್ಪ ಜಂಗಮಪುಂಗವ ಶ್ರೀ ಅಲ್ಲಮಪ್ರಭು ದೇವರು" ಬನವಾಸಿಯ ಸುಕ್ಷೇತ್ರದಲ್ಲಿ ಸಮಗ್ರ ವಿಚಾರ ಸಂಕಿರಣ ನಡೆಯಿತು. ಮಹಾನ್ ಮಹಾನ್ ವಿದ್ವಾಂಸರಿಂದ ಬರೆದಂತಹ ಕೃತಿಗಳನ್ನು ವಿಮರ್ಶೆ ಮಾಡುವಷ್ಟು ಶಕ್ತಿ ನನಗಿಲ್ಲ. ಆ ಸಾಹಿತ್ಯವೂ ನನ್ನಲ್ಲಿಲ್ಲ. ಕೇವಲ ಪ್ರಕಟಿಸಿದಂತಹ ಆ ಮಹಾನ್ ಕೃತಿಗಳನ್ನು ಓದಿ ಅರ್ಥೈಸಿಕೊಂಡರೆಷ್ಟೋ ಸಮಾಧಾನ, ಆನಂದವಾದೀತು. ಅಂತಹ ಅಮೋಘ ಕೃತಿಗಳನ್ನು ರಚಿಸಿದ, ಪ್ರಕಟಿಸಿದಂತಹ ಹಿರಿಮೆ ಮುಂಡರಗಿಯ ಶ್ರೀ ಮಠದ ಪೂಜ್ಯರದು. ಆರೈದು ಒಂದನೇ ಭಾಗ, ಎರಡನೇಯ ಭಾಗ ತತ್ವದರ್ಶನ, ವಚನಸಂಪದ, ಶ್ರೀ ಮಠದ ೯ನೇಯ ಪೀಠಾಧೀಶರಾದ ಜಗದ್ಗುರು ಅನ್ನದಾನೇಶ್ವರ ಮಹಾಸ್ವಾಮಿಗಳವರ ಜೀವನ ಚರಿತ್ರೆ, ಅದರಲ್ಲಿ ಬರುವ ಅವರ ಪವಾಡಗಳನ್ನು ಓದಿದಾಗಲಂತೂ ಮೈಯ ರೋಮ ರೋಮವು ನೆಟ್ಟಗಾಗುವದು. ನನ್ನ ದೃಷ್ಟಿಯಲ್ಲಿ ಅಂತವರ ಕೃಪಾಶೀರ್ವಾದಕ್ಕೆ ಪಾತ್ರ ರಾಗದಿದ್ದವರೇ ದುರ್ದೈವಿಗಳು, ದುರದೃಷ್ಟಶಾಲಿಗಳು. ಶಿಕ್ಷಣ ರಂಗದಲ್ಲಿ ಶ್ರೀಗಳು ಮಾಡಿದಂತಹ ಸಾಧನೆಯನ್ನು ಬಣ್ಣಿಸುವದು ನನ್ನ ಊಹೆಗೂ ನಿಲುಕದ ವಿಷಯ.

ಇಂದಿನ ಜನಾಂಗವಂತೂ ಸಾಕಷ್ಟು ವೈಜ್ಞಾನಿಕವಾಗಿ, ಶೈಕ್ಷಣಿಕವಾಗಿ, ಭೌತಿಕವಾಗಿ, ವೈದ್ಯಕೀಯವಾಗಿ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತನ್ನ ಸಾಧನೆಯನ್ನು ಸಾಧಿಸಿದ್ದರೂ ಕೂಡಾ ಸಮಾಧಾನ ಮತ್ತು ಆತ್ಮ ತೃಪ್ತಿಯನ್ನು ಕಳೆದುಕೊಂಡಿದೆ. ಮಾನಸಿಕವಾಗಿ ಅಸ್ವಸ್ಥನಾಗುತ್ತಲಿರುವರು. ಇದನ್ನೆಲ್ಲ ನೋಡಿದಾಗ ಸಿದ್ಧಯ್ಯ ಪುರಾಣಿಕರೇ ಬರೆದಂಥ ಒಂದು ಕೃತಿ ನೆನಪಿಗೆ ಬರುವದು ಏನೆಂದರೇ

ವಿದ್ಯೆಬಂತು, ಬುದ್ಧಿಹೋಯ್ತು
ಬುದ್ಧಿ ಬಂತು, ಶ್ರದ್ಧೆ ಹೋಯ್ತು
ಶ್ರದ್ಧೆ ಬಂತು, ವಿವೇಚನೆ ಹೋಯ್ತು
ವಿಜ್ಞಾನ ಬಂತು, ಸಮಾಧಾನ ಹೋಯ್ತು
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ ಹೋಯ್ತು
ಭೋಧನೆ ಬಂತು, ಸಾಧನೆ ಹೊಯ್ತು
ಜಾತಿ ಬಂತು, ಪ್ರೀತಿ ಹೋಯ್ತು
ಸ್ವಾತಂತ್ರ್ಯ ಬಂತು, ಸೌಜನ್ಯ ಹೋಯ್ತು
ಸಿದ್ಧಯ್ಯ ಪುರಾಣಿಕ ಬಂದ, ಸ್ವತಂತ್ರ ಧೀರ ಸಿದ್ಧೇಶ್ವರ ಹೋದ.

ಹಾಗೆಯೇ ಇವತ್ತಿನ ದಿವಸಗಳಲ್ಲಿ ನಮಗೆ ಎಲ್ಲ ರೀತಿಯ ಸಕಲ ಸೌಲಭ್ಯಗಳಿದ್ದರೂ ಮಾನಸಿಕ ಶಾಂತಿ ಇಲ್ಲದಂತಾಗಿದೆ. ಗುರುಹಿರಿಯರಲ್ಲಿ ಭಕ್ತಿಯ, ಪೂಜ್ಯ ಭಾವನೆ ಕಡಿಮೆ ಯಾಗತೊಡಗಿದೆ. ಇವೆಲ್ಲವನ್ನು ಮತ್ತೇ ಮರಳಿ ಪಡೆದು ಶಾಂತಿಯುತವಾದ ಜೀವನ ಆರಂಭಿಸಬೇಕೆಂದರೆ, ಒಬ್ಬ ಗುರುವಿನ ಮಾರ್ಗದರ್ಶನ ಅತ್ಯವಶ್ಯಕವಾಗಿ ಬೇಕಾಗಿದೆ. ಇದಕ್ಕೆ ನಿದರ್ಶನವೆಂದರೆ ಮುಂಡರಗಿಯ ಶ್ರೀಗಳು. ಪೂಜ್ಯ ಶ್ರೀಗಳವರಿಗೆ ನಾವು

ಕೊಡುವದಕ್ಕಿಂತ ಪಡೆದುಕೊಳ್ಳುವದೇ ಬಹಳ. ಇಂದಿನ ಜನಾಂಗವು ಸಮಾಜದಲ್ಲಿ ಸಮಾಧಾನದಿಂದ, ಶಾಂತಿಯಿಂದ ಜೀವನ ಸಾಗಿಸಬೇಕೆಂದರೆ ಮುಂಡರಗಿಯ ಶ್ರೀಗಳಂತವರು ಕ್ರಾಂತಿ ಮಾಡಿದಾಗಲೇ ಸಾಧ್ಯ ಎಂದು ಹೇಳಿ ಶ್ರೀಗಳವರ ಕೃಪಾಕಟಾಕ್ಷ, ಆಶೀರ್ವಾದ ನಮ್ಮ ನಿಮ್ಮೆಲ್ಲರ ಮೇಲೆ ಚಿರಂತರವಾಗಿ ಇರಲಿ ಎಂದ ಆ ದಿವ್ಯ ಚೈತನ್ಯಮೂರ್ತಿಯ ಅಡಿದಾವರೆಗಳಲ್ಲಿ ನನ್ನ ಶಿ. ಸಾ. ಪ್ರಣಾಮಗಳನ್ನು ಸಲ್ಲಿಸಿ ಅವರ ಬಗೆಗೆ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಈ ಒಂದು ಅವಕಾಶವನ್ನು ಕೊಟ್ಟಂತಹ ಶ್ರೀಗಳವರ ಪಾದಗಳಿಗೆ ನನ್ನ ನಮಸ್ಕಾರಗಳನ್ನು ಸಲ್ಲಿಸುವೆ.

ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸಮಾಲೆ
ಒಂದು ವಿವೇಚನೆ

—**ಪ್ರೊ. ಆರ್. ಎಲ್. ಪೋಲಿಸಪಾಟೀಲ,** ಮುಂಡರಗಿ

ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ಮೃಡಗಿರಿಯ ಶ್ರೀ ಮಠದ ಅಧಿಕಾರವನ್ನು ವಹಿಸಿಕೊಂಡ ಮೇಲೆ ಮುಂಡರಗಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಪರಿಶ್ರಮಿಸಿದ್ದಾರೆ. ಮಹಾಸನ್ನಿಧಿಯವರು ಪೀಠಾರೋಹಣ ಮಾಡಿ ಈಗ ೨೫ ವಸಂತಗಳು ಪೂರ್ಣಗೊಳ್ಳಲಿವೆ. ಈ ಅವಧಿಯಲ್ಲಿ ಜಗದ್ಗುರುಗಳು ಧಾರ್ಮಿಕವಾಗಿ, ಸಾಹಿತ್ಯಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸಲ್ಲಿಸಿದ ಸೇವೆ ಅಪೋಘವಾದುದು; ಅವರ್ಣನೀಯವಾದುದು. ಅವರ ಸತತ ಪರಿಶ್ರಮದ ಕಾರ್ಯವೈಖರಿಯನ್ನು ಗಮನಿಸಿದಾಗ, ಅನೇಕ ತಲೆಮಾರುಗಳಲ್ಲಿ ಆಗಬೇಕಾದ ಕೆಲಸಗಳನ್ನು ಶ್ರೀಗಳು ಮಾಡಿ ಮುಗಿಸಿದ್ದಾರೆಂದು ಹೇಳಿದರೆ, ಅವರ ಬಗ್ಗೆ ಬಹಳ ಹೇಳಿದಂತಾಗುವದಿಲ್ಲ. ಅವರು ಕರ್ಮಯೋಗಿಯಾಗಿ ಕೈಕೊಂಡಿರುವ ಪುಣ್ಯಮಯ ಕಾರ್ಯಗಳು ಆದರ್ಶ ಹಾಗೂ ಅನುಕರಣೀಯವಾಗಿವೆ.

ವರ್ಣರಂಜಿತ ಅಪರೂಪದ ಪಾವನಮಯ ಬಹುಮುಖ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿರುವ ಪರಮ ಪೂಜ್ಯರು ಯೋಜನಾ ಪ್ರವೀಣರೂ ಆಗಿದ್ದಾರೆ. ದಿನಾಂಕ ೩೧-೧-೧೯೭೯ರಂದು ಅಧಿಕಾರ ಗ್ರಹಣ ಮಾಡಿದ ಮೇಲೆ ನೂರಾರು ಎಡರು-ತೊಡರುಗಳನ್ನು ಅಣ್ಣ ಬಸವಣ್ಣನವರ ವಾಣಿಯಂತೆ

> "ನಾಳೆ ಬಪ್ಪುದು ನಮಗಿಂದೇ ಬರಲಿ
> ಇಂದು ಬಪ್ಪುದು ನಮಗೀಗಲೇ ಬರಲಿ
> ಇದಕಾರಂಜುವರು? ಇದಕಾರಳುಕುವರು?...."

ಎಂದು ಸಮರ್ಥವಾಗಿ ಅವುಗಳನ್ನು ಎದುರಿಸಿದರು. ಇಂತಹ ಪರಿಸ್ಥಿತಿಯಲ್ಲಿಯೂ ಅನೇಕ ಯೋಜನೆಗಳನ್ನು ರೂಪಿಸಿಕೊಂಡು ಅವುಗಳನ್ನು ಅರ್ಥಪೂರ್ಣವಾದ ರೀತಿಯಲ್ಲಿ ಪೂರ್ಣಗೊಳಿಸಿದ್ದಾರೆ. ಈಗಲೂ ಇನ್ನೂ ಅನೇಕ ಯೋಜನೆಗಳನ್ನು ಯೋಜಿಸಿಕೊಂಡು, ಅವುಗಳನ್ನು ಕಾರ್ಯಗತ ಮಾಡುವಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿರುವದು ಅವರ ಕರ್ತವ್ಯ ದಕ್ಷತೆಗೆ ಕನ್ನಡಿ ಹಿಡಿದಂತಾಗಿದೆ.

ಮಹಾಸ್ವಾಮಿಗಳು ಕೈಗೊಂಡಿರುವ ನೂರೆಂಟು ಅರ್ಥಪೂರ್ಣ ಯೋಜನೆಗಳಲ್ಲಿ ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸಮಾಲೆಯೂ ಒಂದು. ಈ ಉಪನ್ಯಾಸ

ಮಾಲೆಯ ಹುಟ್ಟಿಗೆ ಒಂದು ಬಲವಾದ ಹಿನ್ನೆಲೆಯಿದೆ. "ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು" ಕೃತಿಯಲ್ಲಿ ಪೂಜ್ಯರು ಅದನ್ನು ಸ್ಪಷ್ಟಪಡಿಸಿದ್ದಾರೆ. "ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ಪೂರ್ಣ ವೃತ್ತಾಂತ ಕುರಿತು ಊಹಾಪೋಹ, ಸಂದೇಹ, ಸಂಶಯ, ಕುತರ್ಕಗಳಿಗೆ ಪೂರ್ಣವಿರಾಮ ದೊರೆಯುವಂತಾಗಲೆಂದು ಮೃಡಗಿರಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಿಂದ ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯನ್ನು ೧೯೯೦ರಲ್ಲಿ ಸ್ಥಾಪಿಸಿ, ತನ್ಮೂಲಕ ವಿಚಾರ ಸಂಕಿರಣವನ್ನು ಏರ್ಪಡಿಸಿ ವಿಚಾರ ಮಂಥನದಲ್ಲಿ ಮಹಾಜ್ಞಾನಿಯ ನಿಚ್ಚಳ ಬದುಕನ್ನು ತಾತ್ವಿಕತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ಮಹಾಕಾರ್ಯವನ್ನು ಕೈಗೊಳ್ಳಲಾಯಿತು. ಈ ಹಿನ್ನೆಲೆಯಲ್ಲಿ ಜನ್ಮತಾಳಿದ ಉಪನ್ಯಾಸ ಮಾಲೆಯಿಂದ ಪ್ರತಿವರ್ಷವೂ ಒಬ್ಬೊಬ್ಬ ಶಿವಶರಣರ ಬಗೆಗೆ ಸಮಗ್ರ ವಿಚಾರ ಸಂಕಿರಣಗಳನ್ನು ಏರ್ಪಡಿಸಬೇಕೆಂಬ ನಿರ್ಧಾರವನ್ನು ಕೈಕೊಂಡು ಈಗಾಗಲೆ ಅಂತಹ ಐದು ವಿಚಾರ ಸಂಕಿರಣಗಳನ್ನು ಮಹಾಸನ್ನಿಧಿಯವರು ಬಹಳ ವಿಶಿಷ್ಟವಾದ ರೀತಿಯಲ್ಲಿ ಸಮರ್ಥವಾದ ರೀತಿಯಲ್ಲಿ ಮಾಡಿ ಮುಗಿಸಿದ್ದಾರೆ. ಅವುಗಳು ಕೆಳಗಿನಂತಿವೆ.

೧. ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು (೧೯೯೦–ಉಳಿವಿ)
೨. ಜಂಗಮ ಪುಂಗವ ಅಲ್ಲಮ ಪ್ರಭುದೇವರು (೧೯೯೧–ಬನವಾಸಿ)
೩. ವೈರಾಗ್ಯನಿಧಿ ಅಕ್ಕಮಹಾದೇವಿಯವರು (೧೯೯೨–ಉಡುತಡಿ)
೪. ಕಾರಣಿಕ ಯುಗಪುರುಷ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು (೧೯೯೩–ನಂದಿಕೇಶ್ವರ)
೫. ಶಿವಯೋಗಿ ಸಿದ್ಧರಾಮದೇವರು (೧೯೯೩–ಸೊಲ್ಲಾಪೂರ)

ಇಂತಹ ಪವಿತ್ರ ವಿಚಾರ ಸಂಕಿರಣಗಳನ್ನು ಜರುಗಿಸುವವರ ಮೂಲಕ ಶ್ರೀಗಳು ಶರಣ ಸಾಹಿತ್ಯ ಲೋಕಕ್ಕೆ ಮಹದುಪಕಾರವನ್ನೇ ಮಾಡಿದ್ದಾರೆಂದು ಹೇಳಬೇಕು. ಈ ವಿಚಾರ ಸಂಕಿರಣಗಳು ಸಂಪನ್ನಗೊಳ್ಳುವ ಉದ್ದೇಶ ಹಾಗೂ ಅನಿವಾರ್ಯತೆಯನ್ನು ಕುರಿತು ಜಗದ್ಗುರುಗಳು "ಜಂಗಮ ಪುಂಗವ ಅಲ್ಲಮ ಪ್ರಭುದೇವರ ಕೃತಿಯಲ್ಲಿ ಮನನೀಯವಾಗಿ ತಿಳಿಯಪಡಿಸಿದ್ದಾರೆ. "ಬಸವಾದಿ ಪ್ರಮಥರ ಜೀವನ, ಸಾಧನೆ, ಸಾಹಿತ್ಯ ಸಿದ್ಧಿಗಳ ಯಥಾರ್ಥತೆಯನ್ನು ಅರಿತುಕೊಳ್ಳದೆ ಸಂಶೋಧನೆಯ ಹೆಸರಿನಲ್ಲಿ ಪ್ರಕಟವಾಗುತ್ತಿರುವ ಸಂದೇಹ–ಸಂಶಯಗಳನ್ನು ಪರಿಹರಿಸುವ ಮಹೋದ್ದೇಶಕ್ಕಾಗಿ ವಿಚಾರ ಸಂಕಿರಣಗಳು ಅನಿವಾರ್ಯವೆಂದು" ಅಭಿಪ್ರಾಯಪಟ್ಟಿದ್ದಾರೆ. ಇದರ ಜೊತೆಗೆ ಇನ್ನೊಂದು ಬಲವಾದ ಕಾರಣವೆಂದರೆ, ಶರಣ ತತ್ವಗಳು ೮೦೦ ವರ್ಷಗಳಷ್ಟು ಹಳೆಯ ಕಾಲದವುಗಳಾಗಿದ್ದರೂ, "ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಸವೇ ಕಡೆಗೀಲು"–ಎಂಬಂತೆ ಭಾವಿಸಿ, ಶರಣ ತತ್ವಗಳನ್ನು ಆಚರಿಸಿ ಭಕ್ತಕೋಟಿ ಪಾವನವಾಯವಾಗಲೆಂದು ಜಗದ್ಗುರುಗಳು

ಮನದಂದು, ಅವುಗಳನ್ನು ನಾಡಿನ ಜನರ ಮನೆಯ ಬಾಗಿಲಿಗೆ ತಲುಪಿಸಲು ವಿಚಾರ ಸಂಕಿರಣಗಳು ಸೂಕ್ತ ಮಾಧ್ಯಮವೆಂದು ನಿರ್ಧರಿಸಿದಂತೆ ತೋರುತ್ತಿದೆ.

ಇಂತಹ ಘನವಾದ ಕೈಂಕರ್ಯವನ್ನು ಕೈಗೆತ್ತಿಕೊಂಡ ಜಗದ್ಗುರುಗಳು ವಿಚಾರ ಸಂಕಿರಣಗಳನಷ್ಟೇ ಸಂಪನ್ನಗೊಳಿಸದೆ, ಮಾಡಿದ ಕಾರ್ಯ ಶಾಶ್ವತವಾಗಿ ಉಳಿಯಲೆಂದು ಆಶಿಸಿ, ವಿಚಾರ ಸಂಕಿರಣದಲ್ಲಿ ವಿದ್ವಾಂಸರಿಂದ ಮಂಡಿಸಲ್ಪಟ್ಟ ಪ್ರಬಂಧಗಳನ್ನು ಶ್ರಮ ಪಟ್ಟು ತಾವೇ ಸ್ವತಃ ಸಂಗ್ರಹಿಸಿ ಈಗಾಗಲೇ ಮೂರು ಕೃತಿಗಳನ್ನು ಪ್ರಕಟಪಡಿಸಿದ್ದಾರೆ. ಶರಣ ಸಾಹಿತ್ಯವನ್ನು ಅಭ್ಯಾಸ ಮಾಡುವವರಿಗೆ ಜಗದ್ಗುರುಗಳಿಂದ ಸಂಪಾದಿಸಲ್ಪಟ್ಟ ಈ ಕೃತಿಗಳು ತುಂಬಾ ಉಪಯುಕ್ತವಾಗಿವೆಯಲ್ಲದೆ, ಶರಣರ ಜೀವನವನ್ನು ಕುರಿತು ಪಂಡಿತ ವರ್ಗದಲ್ಲಿ ತಲೆದೋರಿದ ಸಂದೇಹಗಳನ್ನು ಸಂಪೂರ್ಣವಾಗಿ ಪರಿಹರಿಸಿವೆಯೆಂದೇ ಹೇಳಬೇಕು. ಸನ್ನಿಧಿಯವರ ಈ ಪುಣ್ಯಮಯ ಕಾರ್ಯವನ್ನು ಗಮನಿಸಿದ ಪಂಡಿತರು ಜಗದ್ಗುರುಗಳನ್ನು ಚಲಿಸುವ ವಿಶ್ವಕೋಶವೆಂದೂ, ನಡೆದಾಡುವ ವಿಶ್ವವಿದ್ಯಾಲಯವೆಂದು ಬಣ್ಣಿಸಿದ್ದರಲ್ಲಿ ಅತಿಶಯೋಕ್ತಿಯಿಲ್ಲ.

ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯ ಆಶ್ರಯದಲ್ಲಿ "ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣ"ನವರನ್ನು ಕುರಿತು ಮೊದಲನೆಯ ವಿಚಾರ ಸಂಕಿರಣವನ್ನು ೧೯೯೦ರಲ್ಲಿ ಪವಿತ್ರ ಕ್ಷೇತ್ರವಾದ ಉಳವಿಯಲ್ಲಿ ಸಂಯೋಜಿಸಲಾಗಿತ್ತು. ವಿಚಾರ ಸಂಕಿರಣವು ನವ್ಹಂಬರ ತಿಂಗಳು ೧೧, ೧೨, ೧೩ ರಂದು ಸತತವಾಗಿ ಮೂರು ದಿನಗಳ ವರೆಗೆ ಜರುಗಿತು. ವಿಚಾರ ಸಂಕಿರಣದಲ್ಲಿ ನಾಡಿನ ಒಟ್ಟು ೨೨ ಜನ ವಿದ್ವಾಂಸರು ಭಾಗವಹಿಸಿ, ತಮಗೆ ಕೊಟ್ಟ ವಿಷಯವನ್ನು ಕುರಿತು ಸಂಶೋಧನಾತ್ಮಕ ಹಾಗೂ ಪಾಂಡಿತ್ಯ ಪೂರ್ಣವಾದ ಪ್ರಬಂಧಗಳನ್ನು ಮಂಡಿಸಿದರು. ಸ್ವತಃ ಜಗದ್ಗುರುಗಳು ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟ ಲೇಖನಗಳನ್ನು ಪರಿಷ್ಕರಿಸಿ "ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು" ಕೃತಿಯನ್ನು ಹೊರತಂದಿರುವರು. ಜಗದ್ಗುರುಗಳು ಈ ಕೃತಿ ಸಂಪಾದನೆಯಲ್ಲಿ ಪರಾಮರ್ಶಕರಾಗಿ ಲೇಖಕರಾಗಿ, ಸಂಪಾದಕರಾಗಿ ಮೂರು ಹಂತಗಳಲ್ಲಿ ಕೆಲಸ ಮಾಡಿರುವದು ಅವರ ಪ್ರತಿಭೆಗೆ ಸಾಕ್ಷಿಯಾಗಿದೆ.

ಆಗಿನ ಸಂದರ್ಭದಲ್ಲಿ ತುಂಬಾ ವಾದಗ್ರಸ್ಥವಾದ ಚನ್ನಬಸವಣ್ಣನವರ ಜೀವನದ ಮೇಲೆ ಪ್ರಸ್ತುತ ವಿಚಾರ ಸಂಕಿರಣ ಒಂದು ಹೊಸ ಬೆಳಕನ್ನು ಚೆಲ್ಲಿತೆಂದೇ ಹೇಳಬೇಕು. ಅದರಲ್ಲಿಯೂ ಚನ್ನಬಸವಣ್ಣನವರ ತಂದೆ-ತಾಯಿಗಳ ವಿಚಾರದಲ್ಲಿ ತಲೆ ಎತ್ತಿದ ಅನೇಕ ಸಂದೇಹಗಳಿಗೆ ಸಮರ್ಪಕ ಉತ್ತರವನ್ನು ನೀಡಿತು. ಈ ವಿಚಾರ ಸಂಕಿರಣವನ್ನು ಹಾಗೂ ಜಗದ್ಗುರುಗಳಿಂದ ಸಂಪಾದಿಸಲ್ಪಟ್ಟ ಕೃತಿಯನ್ನು ಕುರಿತು ಶರಣ ಸಾಹಿತ್ಯ ಪ್ರೇಮಿಗಳು ಮುಕ್ತ ಕಂಠದಿಂದ ಹೊಗಳಿದ್ದಾರೆ.

ಖ್ಯಾತ ವಿಮರ್ಶಕರಲ್ಲಿ ಒಬ್ಬರಾದ ದ. ಲ. ಕೆರೂರವರು ನಮ್ಮನಾಡಿನ ಜನಪ್ರಿಯ ಪತ್ರಿಕೆಯಾದ ಸಂಯುಕ್ತ ಕರ್ನಾಟಕದಲ್ಲಿ "ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ

ವಿಚಾರ ಸಂಕಿರಣವನ್ನು ಕುರಿತು" ಚನ್ನಬಸವಣ್ಣನವರನ್ನು ಅರಿತುಕೊಳ್ಳಬೇಕೆನ್ನುವವರಿಗೆ ಇದೊಂದು ಸಮೀಚೀನ ಭೋಜನವೇ ಸೈ....ಈ ವಿಚಾರ ಸಂಕಿರಣ ಜನಕ್ಕೆ ಒಂದು ಉದ್‌ಗ್ರಂಥ ಒದಗಿಸಿದ್ದು ಪ್ರಶಂಸನೀಯ. ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರರ ಪ್ರಯತ್ನ ಪರಿಶ್ರಮಗಳ ಫಲವಾಗಿ ಈ ಗ್ರಂಥವು....ಅರಳಿರುವದು ನಾಡಿನ ಸೌಭಾಗ್ಯ. ಶ್ರೀ ಜಗದ್ಗುರುಗಳ ಶ್ರಮದ ಸಾರ್ಥಕ್ಯ. ಇದೊಂದು ಆಕರ ಗ್ರಂಥವಾಗಬಲ್ಲುದು" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಶರಣ ಸಾಹಿತಿ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು "ಚನ್ನಬಸವಣ್ಣನವರನ್ನು ಕುರಿತ ವಿಚಾರ ಸಂಕಿರಣ ತುಂಬಾ ಅಚ್ಚುಕಟ್ಟಾಗಿದ್ದು, ಹೊಸಬರಿಗೆ ಅವಕಾಶವನ್ನು ಕಲ್ಪಿಸುವ ಮೂಲಕ ಸೂಕ್ತ ಮಾರ್ಗದರ್ಶನ ನೀಡಿ ಅವರ ಬೆಳವಣಿಗೆಗೆ ಕಾರಣವಾದ ತಮ್ಮ ಪ್ರಯತ್ನ ಸ್ತುತ್ಯವಾದುದು. ಇನ್ನೂ ಇಂತಹ ಅನೇಕ ವಿಚಾರ ಸಂಕಿರಣಗಳನ್ನು ನಡೆಸಲು ತಾವು ಸಂಕಲ್ಪಿಸಿದ್ದೀರಿ. ಅದರಿಂದ ಶರಣ ತತ್ವಗಳು ಜನಮನವನ್ನು ಮುಟ್ಟಿ, ಜನಜೀವನ ಹಸನಾಗುವಂತಾಗಲಿ" ಎಂದು ಶ್ಲಾಘಿಸಿದ್ದಾರೆ.

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿಯವರು "ಚನ್ನಬಸವಣ್ಣನವರ ದಿವ್ಯ ವಿಚಾರಗಳ ಕುರಿತು ತುಂಬಾ ಶ್ರಮವಹಿಸಿ ಮಾಡಿದ ಈ ಕಾರ್ಯ, ತಮ್ಮ ಶಿಷ್ಯ ಸಮುದಾಯ ಕೈಗೂಡಿಸಿದ ಈ ಮಣಿಹ, ಸಾವಿರಾರು ಭಕ್ತರ ಹೃದಯದಲ್ಲಿ ಜ್ಞಾನ ದೀಪಗಳ ಕಾರ್ತಿಕೋತ್ಸವವನ್ನು ನೆರವೇರಿಸುವ ಒಂದು ಸುವರ್ಣಕಾಲವಾಗಿದೆ." ಎಂದು ಕೊಂಡಾಡಿದ್ದಾರೆ.

ಡಾ. ವೀರಣ್ಣ ರಾಜೂರವರು "ಉಳಿವಿ ಸುಕ್ಷೇತ್ರದಲ್ಲಿ ಚನ್ನಬಸವಣ್ಣನವರನ್ನು ಕುರಿತು ನಡೆದ ವಿಚಾರ ಸಂಕಿರಣ ತುಂಬಾ ಅರ್ಥಪೂರ್ಣವಾದುದು. ದಿವ್ಯ ಚೇತನದ ಪ್ರಶಾಂತ ವಾತಾವರಣದಲ್ಲಿ ಕಳೆದ ಆ ಅಮೃತಘಳಿಗೆ ಮರೆಯದಂತಹದು. ಈ ಯೋಜನೆಯ ಸಂಕಲ್ಪಮಾಡಿ ಅನುಷ್ಠಾನಕ್ಕೆ ಬರುವಂತೆ ಮಾರ್ಗದರ್ಶನ ನೀಡಿದ ಪೂಜ್ಯ ಜಗದ್ಗುರುಗಳ ಶ್ರಮ ಸಾರ್ಥಕ"ವೆಂದು ಬಣ್ಣಿಸಿದ್ದಾರೆ. ಹೀಗೆ ನಾಡಿನ ಇನ್ನು ಅನೇಕ ಗಣ್ಯರಾದ ಪ್ರೊ. ವ್ಹಿ. ಜಿ. ಮಾರಿಹಾಳ, ಡಾ. ಎಂ. ಎಂ. ಮುಳಗುಂದ, ಡಾ. ಎಸ್.ಎಂ. ಹಿರೇಮಠ, ಡಾ. ಎನ್.ವಿ. ಧೂಳಖೇಡ, ಶ್ರೀಮತಿ ಸರ್ವಮಂಗಳಮ್ಮ ಬೆಂಗಳೂರು ಮುಂತಾದವರು ಮುಕ್ತಕಂಠದಿಂದ ಈ ವಿಚಾರ ಸಂಕಿರಣವನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಈ ವಿಚಾರ ಸಂಕಿರಣ ಚನ್ನಬಸವಣ್ಣನವರ ಸಮಗ್ರ ಜೀವನವನ್ನು ಪರಿಚಯಿಸಿಕೊಡುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದೆಯೆಂದು ಹೇಳಬಹುದು.

೧೯೯೦ರಲ್ಲಿ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯನ್ನು ಆರಂಭ ಮಾಡಿದ ಜಗದ್ಗುರುಗಳು ಸುಮ್ಮನೇ ಕೂಡಲಿಲ್ಲ. ೧೯೯೧ ಎರಡನೆಯ ವಿಚಾರ ಸಂಕಿರಣವನ್ನು ಬನವಾಸಿಯಲ್ಲಿ ಅಕ್ಟೋಬರ ತಿಂಗಳು ೨೭, ೨೮, ೨೯ ರಂದು ಮೂರು ದಿನಗಳ ಕಾಲ ನಿರಂಜನ ಜಂಗಮ ಪುಂಗವರಾದ ಅಲ್ಲಮ ಪ್ರಭುದೇವರ ಸಮಗ್ರ

ಜೀವನವನ್ನು ಕುರಿತು ಏರ್ಪಡಿಸಿದರು. ಈ ವಿಚಾರ ಸಂಕಿರಣದಲ್ಲಿ ನಾಡಿನ ಹಲವಾರು ವಿದ್ವಾಂಸರು–ಗುರುಗಳು ಭಾಗವಹಿಸಿ ತಮ್ಮ ಪಾಂಡಿತ್ಯ ಪೂರ್ಣವಾದ ಪ್ರಬಂಧ ಮಂಡಿಸಿದರು.

ವಿದ್ವಾಂಸರಿಂದ ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟ ಪ್ರಬಂಧಗಳನ್ನು ಸಂಗ್ರಹಿಸುವದರ ಜೊತೆಗೆ, ಜಗದ್ಗುರುಗಳು ಸ್ವತಃ ಎರಡು ಉತ್ತಮವಾದ ಲೇಖನಗಳನ್ನು ಬರೆದು, ಕೃತಿಗೆ ವಿಶೇಷ ಮೆರುಗನ್ನು ತಂದುಕೊಟ್ಟಿದ್ದಾರೆ. ಅವರ ಎರಡು ಲೇಖನಗಳಲ್ಲಿ "ಅಲ್ಲಮ ಪ್ರಭುದೇವರ ಜೀವನ ಹಾಗೂ ಸಾಧನೆ: ಒಂದು ವಿವೇಚನೆ" ಈ ಲೇಖನವು ಅಪ್ಪಟ ಸಂಶೋಧನಾತ್ಮಕವಾದ ಲೇಖನವಾಗಿದ್ದು, ಪ್ರಭುವಿನ ಜೀವನದ ಮೇಲೆ ಹೊಸ ಬೆಳಕನ್ನು ಬೀರುತ್ತಿದ. ಈ ಹೊಸ ಬೆಳಕಿನಲ್ಲಿ ಶ್ರೀಗಳವರು ಪ್ರಭುವಿನ ಬದುಕಿನ ಅದೆಷ್ಟೋ ಸಂಧಿಗ್ಧತೆಗಳನ್ನು ಬಿಡಿಸಿರುವರು ಮತ್ತು ಅವುಗಳಿಗೆ ಸಪ್ರಮಾಣವಾದ ಪರಿಹಾರಗಳನ್ನು ಸೂಚಿಸಿರುವರು. ೨೬ ಪುಟಗಳ ಸುದೀರ್ಘವಾದ ಲೇಖನದಲ್ಲಿ ನಾಡಿನ ಹಲವಾರು ವಿದ್ವಾಂಸರು ರಚಿಸಿದ ಕೃತಿಗಳು, ಪ್ರಭುದೇವರ ವಚನಗಳು, ಪ್ರಭುದೇವರ ಬಗೆಗೆ ಸಮಕಾಲೀನ ಶರಣರು ನುಡಿದಿರುವ ವಚನಗಳು, ಇತರ ಕಾವ್ಯ–ಪುರಾಣ ಸಂಪಾದನೆಗಳು ಇವೆಲ್ಲವುಗಳ ಆಧಾರವನ್ನು ಪಡೆದುಕೊಂಡು, ಅವುಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿ, ಅವುಗಳಲ್ಲಿರುವ ಔಚಿತ್ಯ–ಅನೌಚಿತ್ಯಗಳನ್ನು ಕಂಡರಿಸಿ, ಪ್ರಭುದೇವರ ಬದುಕನ್ನು ರೂಪಿಸಿರುವರು. ಅದರಲ್ಲಿ ನಿಚ್ಚಳವಾಗಿ ನಿರಂಜನ ಜಂಗಮ ಮೂರ್ತಿಯ ದರ್ಶನ ಮಾಡಿಸಿರುವರು. ಈ ಹೊಳಹಿನ ಮೇಲೆಯೇ ಒಂದು ಪಿಎಚ್.ಡಿ. ಗ್ರಂಥ ಬರೆಯುವಷ್ಟರ ಮಟ್ಟಿಗೆ ಜಗದ್ಗುರುಗಳು ವಿಷಯದ ಸೂಕ್ಷ್ಮಾಸೂಕ್ಷ್ಮತೆಗಳನ್ನು ಬಿಡಿಸಿ ಮಾರ್ಗದರ್ಶನ ಮಾಡಿರುವರು.

ಇನ್ನೊಂದು ಅವರ ಲೇಖನ ಪ್ರಭುದೇವರ ಬೆಡಗಿನ ವಚನಗಳನ್ನು ಕುರಿತದ್ದು, ಬೆಡಗಿನ ಭಾಷೆಯಲ್ಲಿ ಮಾತಾಡುವವರಲ್ಲಿಯೇ ಪ್ರಭುದೇವರಿಗೆ ಅಗ್ರಸ್ಥಾನವೆನ್ನಬೇಕು. ಅವರ ಬೆಡಗಿನ ವಚನಗಳು ಆಧ್ಯಾತ್ಮದ ಬೆಡಗನ್ನು ಎಲ್ಲ ಸಾಧಕರಿಗೆ ಮಾತ್ರ ತಿಳಿಯುವಂಥವುಗಳಾಗಿವೆ. ಪಂಡಿತರು ಏನೆಲ್ಲಾ ತಿಣಕಿದರೂ ಅದು ಕುರಿಯು ಕಬ್ಬಿನ ಮೇಲಿನ ಸೊಪ್ಪೆಯನ್ನು ಮಾತ್ರ ಮೇದಂತಾಗುತ್ತದೆ. ಕಬ್ಬಿನ ನಿಜವಾದ ರಸವು ಸವಿಯುವದಕ್ಕೆ ಮದ್ದಾನೆಗೆ ಮಾತ್ರ ಸಾಧ್ಯವಾಗುವಂತೆ ಪ್ರಭುದೇವರ ಬೆಡಗಿನ ವಚನಗಳ ಜಂಗಮತ್ವದ ಬೆಡಗನ್ನು ಅರಿಯುವದಕ್ಕೆ ಅವರ ಸಮರಾದ ನಿರಂಜನ ಜಂಗಮರೇ ಆಗಬೇಕೆನಿಸುತ್ತದೆ. ಜಗದ್ಗುರುಗಳು ಪ್ರಭುಗಳ ಬೆಡಗಿನ ವಚನಗಳನ್ನು ಈ ಲೇಖನದಲ್ಲಿ ನಮಗೆಲ್ಲಾ ದರ್ಶನ ಮಾಡಿಕೊಟ್ಟು ತಮ್ಮ 'ಪ್ರಭು' ಶಕ್ತಿಯನ್ನು ತೋರಿಸಿಕೊಟ್ಟಿದ್ದಾರೆನ್ನಬೇಕು.

ಒಟ್ಟಿನಲ್ಲಿ ಈ ವಿಚಾರ ಸಂಕಿರಣದಿಂದ ಹಾಗೂ ಜಗದ್ಗುರುಗಳ ಕೃಪೆಯಿಂದ ಹೊರಹೊಮ್ಮಲ್ಪಟ್ಟ ಈ ಕೃತಿಯು ಪ್ರಭುದೇವರ ಬದುಕಿನ ಸಮಗ್ರತೆಯನ್ನು ತಿಳಿದು

ಕೊಳ್ಳುವಲ್ಲಿ ಬಹುಮಹತ್ವದ ಕೃತಿಯಾಗಿದೆ. ಈ ನಿಟ್ಟಿನಲ್ಲಿ ಇದು ಗುರುತರವಾದ ಪ್ರಯತ್ನವಾಗಿದೆ.

೧೯೯೨ನೆಯ ವರ್ಷದಲ್ಲಿ ಶಿಕಾರಿಪುರದಲ್ಲಿ ವೀರ–ವಿರಾಗಿಣಿ ಅಕ್ಕಮಹಾದೇವಿಯ ಬಗೆಗೆ ನಡೆದ ಸಮಗ್ರ ವಿಚಾರ ಸಂಕಿರಣ ನಡೆಸಲಾಯಿತು. ವಿಚಾರ ಸಂಕಿರಣದಲ್ಲಿ ಬಹಳ ಜನ ವಿದ್ವಾಂಸರು ಭಾಗವಹಿಸಿ, ಮೌಲಿಕ ಪ್ರಬಂಧಗಳನ್ನು ಸಾದರಪಡಿಸಿದರು. ಪಂಡಿತರಿಂದ ಮಂಡಿಸಲ್ಪಟ್ಟ ಪ್ರಬಂಧಗಳನ್ನು ಜಗದ್ಗುರುಗಳು ಸಂಗ್ರಹಿಸಿ "ವೀರ ವಿರಾಗಿಣಿ ಅಕ್ಕಮಹಾದೇವಿ" ಎಂಬ ಬೆಲೆ ಬಾಳುವ ಕೃತಿಯೊಂದನ್ನು ಹೊರತಂದಿದ್ದಾರೆ. ಇಲ್ಲಿನ ಲೇಖನಗಳು ಅತ್ಯಂತ ಪಾಂಡಿತ್ಯಪೂರ್ಣವಾಗಿರುವದರ ಜೊತೆಗೆ ಅವುಗಳು ಸಂಶೋಧಕ ಸಾಹಿತಿಗಳಾಗಿರುವ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳ ಪರಿಶೀಲನೆಗೆ ಒಳಗಾಗಿ ತಮ್ಮ ಎಲ್ಲ ಕಾಣಿಕೆಯನ್ನು ಕಳೆದುಕೊಂಡು ಪರಿಶುದ್ಧವಾಗಿವೆ. ಸ್ವತಃ ಸಂಪಾದನಕಾರರಾಗಿ ನಿಂತಿರುವ ಜಗದ್ಗುರುಗಳು ಅತ್ಯಂತ ಜಾಗ್ರತೆಯಿಂದ ಪ್ರತಿಯೊಂದು ಲೇಖನದ ಸಾಲುಗಳನ್ನು ಓದಿನೋಡಿ, ಅಲ್ಲಿನ ಲೋಪದೋಷಗಳನ್ನು ತಿದ್ದಿ ತೀಡಿ ಸರ್ವಾಂಗ ಸುಂದರವಾಗಿ ಕೃತಿ ಹೊರಬರುವಂತೆ ಶ್ರಮಿಸಿದ್ದಾರೆ. ಮಹಾ ಸನ್ನಿಧಿಯವರ ಚಿಕಿತ್ಸಕ ಬುದ್ದಿಯಿಂದ ರೂಪಗೊಂಡಿರುವ ಈ ಕೃತಿ ಅಧ್ಯಯನಶೀಲರಿಗೆ, ಸಂಶೋಧಕರಿಗೆ ಮಾರ್ಗದರ್ಶಿಯಾಗುವಲ್ಲಿ ಯಾವ ಸಂಶಯವೂ ಇಲ್ಲವೆಂದು ಹೇಳ ಬಹುದು.

೧೯೯೩ರಲ್ಲಿ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸ ಮಾಲೆಯು, ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ ಶೂನ್ಯ ಪೀಠಾರೋಹಣದ ಸವಿನೆನಪಿನಲ್ಲಿ ಕಾರಣಿಕ ಯುಗಪುರುಷ ಶ್ರೀ ಕುಮಾರ ಮಹಾ ಶಿವಯೋಗಿಗಳ ಸಮಗ್ರ ವಿಚಾರ ಸಂಕಿರಣವನ್ನು ನವ್ಹಂಬರ ೨೦,೨೧,೨೨ ನೆಯ ತಾರೀಖಿನಂದು ಬಿಜಾಪೂರ ಜಿಲ್ಲೆಯ ನಂದಿಕೇಶ್ವರದಲ್ಲಿ ಏರ್ಪಡಿಸಿತು. ಇಂತಹ ಶಿವಯೋಗಿಗಳನ್ನು ಕುರಿತು ವಿಚಾರ ಮಂಥನವೊಂದನ್ನು ಏರ್ಪಡಿಸುವದರ ಮೂಲಕ ಜಗದ್ಗುರು ಮಹಾಸನ್ನಿಧಿಯವರು ತಮ್ಮ ರಜತೋತ್ಸವವನ್ನು ಅರ್ಥಪೂರ್ಣಗೊಳಿಸಿದ್ದಾರೆ; ಆದರ್ಶಗೊಳಿಸಿದ್ದಾರೆ.

ಸಮಾಜಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿರುವ, ಸಂಸ್ಕೃತಿ ಸಂವರ್ಧನೆಗಾಗಿ ಧನವ ಸೂರೆಗೈದ, ಶಿವಯೋಗಕ್ಕಾಗಿ ಮನವ ಮುಡುಪಿಟ್ಟು, ಭಕ್ತಿಯಲ್ಲಿ ಬಸವಣ್ಣ, ಜ್ಞಾನದಲ್ಲಿ ಚನ್ನಬಸವಣ್ಣ, ವಿರತಿಯಲ್ಲಿ ಅಲ್ಲಮಪ್ರಭು, ಶಿವಯೋಗದಲ್ಲಿ ಸಿದ್ಧರಾಮ, ಐಕ್ಯದಲ್ಲಿ ಅಜಗಣ್ಣನೆನಿಸಿದವರು ಕಾರಣಿಕ ಯುಗಪುರುಷ ಹಾನಗಲ್ಲ ಶ್ರೀ ಕುಮಾರ ಮಹಾಶಿವಯೋಗಿಗಳು.

ಬಡಕುಟುಂಬದಲ್ಲಿ ಜನಿಸಿ ಬಾಲ್ಯದಲ್ಲಿಯೇ ದಯಾಳುವೆನಿಸಿ, ಶ್ರಮದಿಂದ ಶಿಕ್ಷಣ ಪಡೆದು, ಸಾಧನೆಯಿಂದ ಸಿದ್ಧಿಯ ಸಾಧಿಸಿದ ಸಾಧಕ ಹಾಲಯ್ಯನವರು ಮಠಾಧಿಕಾರ

ಬಯಸದಿದ್ದರೂ ತಾನಾಗಿ ಅರಸುತ್ತ ಬಂದ ಸ್ಥಾನಗಳ್ಳ ವಿರಕ್ತ ಮಠದ ಸ್ವಾಮಿಗಳಾದರು. ಮಠದ ಉಪಯೋಗಕ್ಕಾಗಿ ಸಂಗ್ರಹಿಸಿದ ಧನ-ಧಾನ್ಯವನ್ನು ಬರಗಾಲ ಪೀಡಿತರಿಗೆ, ರೋಗಿಗಳಿಗೆ ವಿನಿಯೋಗಿಸಿ ಮಹಾ ತ್ಯಾಗಿಗಳಾದರು. ಪಾಠಶಾಲೆಗಳನ್ನು ನಿರ್ಮಿಸಿ ಸಂಸ್ಕೃತಿಯ ಸಂರಕ್ಷಕರಾದರು. ಹರಿದು ಹಂಚಿಹೋದ ವೀರಶೈವ ಸಮಾಜವನ್ನು ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸಂಸ್ಥಾಪಿಸುವ ಮೂಲಕ ಒಂದುಗೂಡಿಸಿ ಚೈತನ್ಯ ಶೀಲಗೊಳಿಸಿದರು. ಶ್ರೀ ಮದ್ವೀರಶೈವ ಶಿವಯೋಗ ಮಂದಿರವನ್ನು ರಚಿಸಿ ಮಠಾಧಿಕಾರಿ ಗಳಾಗಲಿರುವ ವಟುಗಳಿಗೆ ಶಿಕ್ಷಣ ನೀಡಿ, ತನ್ಮೂಲಕ ಧರ್ಮವನ್ನು ಜಾಗ್ರತ ಮಾಡಿದರು.

ಪರಮ ಪೂಜ್ಯರ ವಿದ್ಯಾದಾಹ, ಪ್ರಯತ್ನಶೀಲ ಪ್ರವೃತ್ತಿ, ಶಿವಾನುಭವದ ಹಸಿವು, ಎಡರುಗಳನ್ನು ಎದುರಿಸುವ ಎದೆಗಾರಿಕೆ, ತೊಡಕಿನ ಸಮಸ್ಯೆಗಳನ್ನು ಬಿಡಿಸುವ ಸಾಹಸ, ಜನಮನವನ್ನು ಸನ್ಮಾರ್ಗದತ್ತ ಸೆಳೆಯುವ ಶಕ್ತಿ, ವಿಶಾಲದೃಷ್ಟಿ, ನಿರಹಂಕಾರಭಾವ, ಸಂಗೀತಾದಿ ಕಲೆಗಳ ಪೋಷಕಗುಣ, ಶರಣ ಸಾಹಿತ್ಯದ ಸಂವರ್ಧನಶೀಲತೆ, ವೀರ ವೈರಾಗ್ಯ ಮೊದಲಾದ ಸದ್ಗುಣ ಸಂಪನ್ನರೆನಿಸಿದ ಶ್ರೀ ಕುಮಾರ ಮಹಾಶಿವಯೋಗಿ ಗಳನ್ನು ಇಂದು ಅರಿಯುವದು ಅವಶ್ಯವಾಗಿದೆ.

ಮಹಾಸ್ವಾಮಿಗಳ ಕೃಪಾ ಛತ್ರದಲ್ಲಿ ಬೆಳಗಿದ ಮುಂಡರಗಿ ಜಗದ್ಗುರುಗಳು ಪರಮ ಗುರುಗಳನ್ನು ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಿ ತಮ್ಮ ರಜತೋತ್ಸವಕ್ಕೆ ಕಳೆಯೇರಿಸಿಕೊಂಡಿದ್ದಾರೆ. ಈ ಅರ್ಥಪೂರ್ಣ ವಿಚಾರ ಸಂಕಿರಣದಲ್ಲಿ ನಾಡಿನ ಅನೇಕ ಅನುಭಾವಿಗಳು ಭಾಗವಹಿಸಿ, ಶ್ರೀ ಕುಮಾರ ಮಹಾಶಿವಯೋಗಿಗಳ ಶಿವಮಯ ವ್ಯಕ್ತಿತ್ವದ ವಿವಿಧ ಮುಖಗಳನ್ನು ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ.

ಶಿವಯೋಗ ಸಾಹಿತಿಗಳಾದ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟ ಪ್ರಬಂಧಗಳನ್ನು ಸಂಗ್ರಹಿಸಿ, ಶ್ರೀ ಕುಮಾರ ಶಿವಯೋಗಿಗಳನ್ನು ಕುರಿತು ಕೃತಿಯೊಂದನ್ನು ಹೊರತರುವ ಸದಿಚ್ಛೆಯನ್ನು ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಪೂಜ್ಯರು ತಾವೇ ಶ್ರಮವಹಿಸಿ ಮೂರು ಮಹತ್ವಪೂರ್ಣ ಲೇಖನಗಳನ್ನು ರಚಿಸಿದ್ದಾರೆ. ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಪಂಡಿತರು ಇದುವರೆಗೆ ತಮ್ಮ ಲೇಖನಗಳನ್ನು ಪೂರೈಸದೇ ಹೋಗಿರುವದರಿಂದ ಕೃತಿಯನ್ನು ಹೊರತರಲು ಸಾಧ್ಯವಾಗಿಲ್ಲ ವೆಂದು ತಿಳಿಸುವದು ಅನಿವಾರ್ಯವಾಗಿದೆ. ಒಟ್ಟಾರೆ ಈ ವಿಚಾರ ಸಂಕಿರಣ ಶಿವಯೋಗಿಗಳ ಬದುಕು ಹಾಗೂ ಸಾಧನೆಯನ್ನು ತಿಳಿಸಿಕೊಡುವಲ್ಲಿ ಒಂದು ಮಹತ್ವಪೂರ್ಣ ಹೆಜ್ಜೆಯಾಗಿದೆ.

೧೯೯೩ ಡಿಸೆಂಬರ ೨೫, ೨೬, ೨೭ ರಂದು ಸೊಲ್ಲಾಪೂರದಲ್ಲಿ ಶಿವಶರಣರಿಂದ ಗೌರವಾನ್ವಿತನಾದ ಶಿವಯೋಗಿ ಸಿದ್ಧರಾಮದೇವರನ್ನು ಕುರಿತು ಆತನ ಅನಂತ ಮುಖ ಗಳನ್ನು ಪರಿಚಯಿಸುವ ವಿಚಾರ ಸಂಕಿರಣವೊಂದು ನಡೆಯಿತು. ಇದು ಕೂಡಾ ಪೂಜ್ಯರ ರಜತೋತ್ಸವದ ಸವಿನೆನಪಿನಲ್ಲಿ ನಡೆದಿರುವದು ಗಮನಾರ್ಹವಾಗಿದೆ. ಒಂದು ರೀತಿಯಲ್ಲಿ ಪೂಜ್ಯ ಜಗದ್ಗುರು ಅನ್ನದಾನೀಶ್ವರರು ತಮ್ಮ ರಜತೋತ್ಸವದ ನೆಪದಲ್ಲಿ ಈ ನಾಡನ್ನು

ಬೆಳಗಿದ ಶರಣರ ಜೀವನವನ್ನು ಪರಿಚಯಿಸುತ್ತಿರುವದು ವಿಶಿಷ್ಟವಾಗಿದೆಯೆಂದೇ ಹೇಳಬೇಕು. ಶರಣ ಸಾಹಿತ್ಯ ಯಾರೊಬ್ಬರ ಸೊತ್ತಲ್ಲ ಅದು ವಿಶ್ವಮಾನ್ಯವಾದುದು. ಮಾನವ ಸಂಸ್ಕೃತಿಗೆ ಸಂಬಂಧಿಸಿದ್ದು.

"ಆರೇನೆಂದರೂ ಓರಂತಿಪ್ಪುದು ಸಮತೆ ..."

ಎಂದು ಸಮಾನತೆಯ ಹೊಸ ಸೂತ್ರವನ್ನು ಸಾರಿದ, ಸಕಲ ಜೀವಿಗಳ ಲೇಸಬಯಸುವ ಈ ಮಹಾಶರಣನ ಚಿಂತನೆ ಅರಿತು ಆಚರಿಸುವ ದೃಷ್ಟಿಯಿಂದ ಆತನ ಕಾರ್ಯಕ್ಷೇತ್ರದಲ್ಲಿ ಈ ವಿಚಾರ ಸಂಕಿರಣ ನಡೆಯುತ್ತಿರುವದು ವೈಶಿಷ್ಟ್ಯವಾಗಿದೆ.

ಹೊರನಾಡಿನಲ್ಲಿ ವಿಚಾರ ಸಂಕಿರಣವೊಂದನ್ನು ಜರುಗಿಸುವದರ ಮೂಲಕ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸಮಾಲೆ ಅಂತರ್ ರಾಜ್ಯ ಖ್ಯಾತಿಯನ್ನು ಪಡೆಯಿತೆಂದೇ ಹೇಳಬೇಕು. ಈ ವಿಚಾರ ಸಂಕಿರಣದಲ್ಲಿ ೨೦ಕ್ಕಿಂತ ಹೆಚ್ಚು ಜನ ಪಂಡಿತೋತ್ತಮರು ಭಾಗವಹಿಸಿ, ಶಿವಯೋಗಿ ಸಿದ್ಧರಾಮದೇವರ ಜೀವನ-ಸಾಧನೆ ಕುರಿತು ಮಹತ್ತರವಾದ ಪ್ರಬಂಧಗಳನ್ನು ಮಂಡಿಸಿದರು. ವಿಚಾರ ಸಂಕಿರಣದಲ್ಲಿ ಮಂಡಿಸಲ್ಪಟ್ಟ ಪ್ರಬಂಧಗಳನ್ನು ಸಂಗ್ರಹಿಸಿ, ಶಿವಯೋಗಿ ಸಿದ್ಧರಾಮರನ್ನು ಕುರಿತು ಕೃತಿಯೊಂದನ್ನು ಹೊರ ತರುವ ಪ್ರಯತ್ನ ನಡೆದಿದೆ. ಗಡಿನಾಡು ಹಾಗೂ ಹೊರನಾಡಿನ ಕನ್ನಡಿಗರಿಗೆ ಈ ವಿಚಾರ ಸಂಕಿರಣ ಒಂದು ವಿಶೇಷ ಶಕ್ತಿಯನ್ನು ತಂದು ಕೊಟ್ಟಿದೆ. ಅನೇಕ ಗಡಿನಾಡ ಕನ್ನಡಿಗರು ಈ ವಿಚಾರ ಸಂಕಿರಣವನ್ನು ಕೃಪೆಗೈದ ಜಗದ್ಗುರುಗಳನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಮಹಾಸನ್ನಿಧಿಯವರು ಈ ಉಪನ್ಯಾಸ ಮಾಲೆಯಿಂದ ಇನ್ನು ಅನೇಕ ಮಹತ್ವದ ವಿಚಾರ ಸಂಕಿರಣಗಳನ್ನು ಜರುಗಿಸುವ ಮಹೋದ್ದೇಶವನ್ನು ಹೊಂದಿದ್ದಾರೆ.

ಜಗದ್ಗುರು ಅನ್ನದಾನೀಶ್ವರ ಉಪನ್ಯಾಸಮಾಲೆಯ ವೈಶಿಷ್ಟ್ಯವೆಂದರೆ, ಕೇವಲ ಕೀರ್ತಿ ವಾರ್ತೆಗಾಗಿ ವಿಚಾರ ಸಂಕಿರಣಗಳನ್ನು ನಡೆಸದೆ, ಜನರ ಬದುಕು ಹಸನಾಗಲೆಂದು ಇವುಗಳನ್ನು ನಡೆಸುತ್ತಿದೆ. ಇನ್ನೊಂದು ಗಮನಾರ್ಹ ವೈಶಿಷ್ಟ್ಯವೆಂದರೆ, ಉಪನ್ಯಾಸ ಮಾಲೆಯಿಂದ ಜರುಗಿದ ವಿಚಾರ ಸಂಕಿರಣದಲ್ಲಿಯ ಪ್ರಬಂಧಗಳನ್ನು ಸಂಗ್ರಹಿಸಿ ಕೃತಿಗಳನ್ನು ಹೊರ ತರುತ್ತಿರುವದು; ಈಗಾಗಲೇ ಮೂರು ಕೃತಿಗಳನ್ನು ಹೊರತರಲಾಗಿದೆ. ಇನ್ನೆರಡು ಕೃತಿಗಳು ಇಷ್ಟರಲ್ಲಿಯೇ ಸಹೃದಯ ವಾಚಕರ ಸಿರಿಮುಡಿಗೆ ಏರಲಿವೆ. ಈಗಾಗಲೇ ಐದು ಜನ ಶಿವಶರಣರನ್ನು ಕುರಿತು ವಿಚಾರ ಸಂಕಿರಣವನ್ನು ಅವರ ಕರ್ಮ ಭೂಮಿಯಲ್ಲಿಯೇ ನಡೆಸಿ, ಅಲ್ಲಿಯ ಭಕ್ತಕೋಟಿಗೆ ತಮ್ಮ ನಾಡಿನ ಶಿವಶರಣರ ತತ್ವಗಳನ್ನು ಕುರಿತು ಚಿಂತಿಸಿ, ಅವುಗಳ ಮಾರ್ಗದರ್ಶನದಲ್ಲಿ ನಡೆಯುವಂತೆ ಮಾಡಿರುವದು ವಿಚಾರ ಸಂಕಿರಣಕ್ಕೆ ವಿಶೇಷ ಬೆಲೆಯನ್ನು ತಂದು ಕೊಟ್ಟಂತಾಗಿದೆ. ಹೀಗೆ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸಮಾಲೆ ವೈಶಿಷ್ಟ್ಯಪೂರ್ಣವಾದ ವಿಚಾರ ಸಂಕಿರಣಗಳನ್ನು ನಡೆಸಿ, ಈ ನಾಡಿಗೆ ಒಂದು ಖ್ಯಾತಿಯನ್ನು ತಂದಿದೆ.

ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆ ಒಂದು ನೋಟ

—**ಎಸ್. ಎಂ. ಹೊಸಮಠ,** ಮುಂಡರಗಿ

ಪ್ರಕಟಣೆಯನ್ನು ಪದು ಮರೆಯಾಗಿರುವದನ್ನು ಬೆಳಕಿಗೆ ತರುವದು. ಧರ್ಮಶಾಸ್ತ್ರದಲ್ಲಿ ದೈವಿಕವಾಗಿ ಅಥವಾ ಅಪೌರುಷವಾಗಿ ಮನುಷ್ಯನಿಗೆ ವ್ಯಕ್ತವಾಗುವ ಜ್ಞಾನವನ್ನು ಈ ಹೆಸರಿನಿಂದ (ರೆವೆಲೇಷನ್) ಕರೆಯಲಾಗಿದೆ. ಪ್ರಕಟಣಾ ಕಾರ್ಯವು ಒಂಬತ್ತನೆ ಶತಮಾನದಲ್ಲಿ ಚೀನಾ ದೇಶದಲ್ಲಿ ಅಚ್ಚುಗಳಿಂದ ಮುದ್ರಿತಗೊಳ್ಳತೊಡಗಿತು.

ಭಾರತದಲ್ಲಿ ಹಸ್ತ ಪ್ರತಿಗಳನ್ನು ಪ್ರತಿಮಾಡುವದು ಹಾಗೂ ಹಸ್ತ ಪ್ರತಿಗಳ ಸಂರಕ್ಷಣೆಯ ಮೂಲಕ ಗ್ರಂಥ ಜ್ಞಾನ ಪ್ರಸಾರವು ಹಿಂದಿನಿಂದಲೂ ಅವ್ಯಾಹತವಾಗಿ ನಡೆದು ಬಂದಿದೆ. ಐದುಸಾವಿರ ವರ್ಷಗಳ ಹಿಂದಿನ ಮೊಹೆಂಜೋದಾರೋದಾ ಮುದ್ರಿಕೆಗಳು ಇದನ್ನು ಸೂಚಿಸುತ್ತವೆ. ಗ್ರಂಥದಾನದ ಕಲ್ಪನೆಯು ಮಹತ್ವದ್ದು. ಆದರೆ ಮುದ್ರಣದ ತಂತ್ರ ಭಾರತದಲ್ಲಿ ಬೆಳೆದದ್ದು ತಡವಾಗಿಯೇ ೧೫೫೬ರಲ್ಲಿ ಸಪ್ಟಂಬರ್ ೬ನೇ ದಿನ ಮುದ್ರಣ ಕಲೆ ಭಾರತಕ್ಕೆ ಕಾಲಿಟ್ಟಿತು. ಧರ್ಮ ಪ್ರಸಾರದಲ್ಲಿ ಮುದ್ರಣ ಮತ್ತು ಪ್ರಕಾಶನದ ಮಹತ್ವವನ್ನು ಅರಿತ ಪಾಶ್ಚಾತ್ಯ ಮಿಶನರಿಗಳು ಸ್ಥಳೀಯ ಭಾಷೆಯ ಮುದ್ರಣ ಕಲೆಯನ್ನು ಬೆಳೆಸಿದವು.

೧೮೦೬ರಲ್ಲಿ ಬಳ್ಳಾರಿಗೆಅ ಚ್ಚುಕೂಟ ಬಂದ ನಂತರ ಕರ್ನಾಟಕದಲ್ಲಿಯೂ ಕನ್ನಡ ಪುಸ್ತಕಗಳ ಪ್ರಕಟಣಾ ಕಾರ್ಯ ಪ್ರಾರಂಭವಾಯಿತು. ಇಲ್ಲಿಯ ಶಿವಲಿಂಗ ಶೆಟ್ಟರು ಕೊನೇರಿ ಶೆಟ್ರು ಪುಸ್ತಕ ಪ್ರಕಾಶನದ ಹಾಗೂ ಮಾರಾಟದಲ್ಲಿ ಹೆಸರಾದರು. ಗದಿಗೆಯ್ಯ ಹುಚ್ಚಯ್ಯ ಹೊನ್ನಾಪೂರಮಠ ಅವರು ಚಂದ್ರೋದಯ ಪ್ರೆಸ್ ಸ್ಥಾಪಿಸಿ ಮೊದಲು ಕಲ್ಲಚ್ಚಿನಲ್ಲಿ ನಂತರ ಬಿಡಿಮೊಳೆಗಳಲ್ಲಿ ಮುದ್ರಣ ಮುಂದುವರೆಯಿತು. ಮೊದಲನೆಯ ಹಂತದಲ್ಲಿ ಮಿಷನರಿಗಳು ಕೆಲಸ ಮಾಡಿದರೆ ಎರಡನೆಯ ಹಂತದಲ್ಲಿ ಖಾಸಗಿ ಪ್ರಯತ್ನಗಳು ಮತ್ತು ಸರಕಾರದ ವಿದ್ಯಾ ಇಲಾಖೆಯ ಪ್ರಕಟನೆಗಳು ಮುಖ್ಯವಾದವು. ಮೂರನೆಯ ಹಂತದ ಗ್ರಂಥ ಪ್ರಕಾಶನ ಬೆಳವಣಿಗೆಯೇ ವಿವಿಧ ಗ್ರಂಥ ಮಾಲೆಗಳು.

ವೀರಶೈವ ಸಂಸ್ಕೃತಿಯ ಕೇಂದ್ರಗಳಾದ ಕನ್ನಡ ನಾಡಿನ ಮಠ ಮಾನ್ಯಗಳು ನಾಡಿಗೆ ಕಾಲಕ್ಕನುಗುಣವಾದ ಕೊಡುಗೆಗಳನ್ನು ನೀಡುತ್ತ ಬಂದಿವೆ. ಸಂಸ್ಕೃತಿಯ ಪರಿಪೋಷಣೆಯೊಂದಿಗೆ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಹಾಗೂ ಶೈಕ್ಷಣಿಕ ಕಾರ್ಯಗಳು ನಿರಂತರ ಶ್ರೀಮಠಗಳಿಂದ ನಡೆಯುತ್ತಿವೆ.

ಧರ್ಮ ಪ್ರಸಾರ, ತ್ರಿಕಾಲ ತ್ರಿವಿಧ ದಾಸೋಹ ಜ್ಞಾನ ಪ್ರಸಾರ ಕಲೆ ಹಾಗೂ ಸಾಹಿತ್ಯ ಪುರಸ್ಕಾರವನ್ನು ನೀಡುತ್ತಿರುವ ಸತ್ಕೀರ್ತಿ ಕಲಶಗಳ ಹೆಸರಾಂತ ಉತ್ತರ ಕರ್ನಾಟಕದ ಮಠಗಳಲ್ಲಿ ಧಾರವಾಡದ ಮುರುಘಾಮಠ, ಹುಬ್ಬಳ್ಳಿಯ ಮೂರುಸಾವಿರಮಠ, ಡಂಬಳದ ತೋಂಟದಾರ್ಯ ಮಠ ಹಾಗೂ ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಠಗಳು ಪ್ರಮುಖವಾಗಿವೆ. ಮೊದಲಿನ ಈ ಮೂರು ಮಠಗಳಿಗೆ ಸಶಕ್ತ ಆರ್ಥಿಕ ಭದ್ರತೆ ಇರುವದರಿಂದ ಕನ್ನಡ ಹಾಗೂ ಧಾರ್ಮಿಕ ಸಾಹಿತ್ಯ ಪ್ರಕಾಶನಕ್ಕೆ ಅಪಾರ ಹಣ ಖರ್ಚು ಮಾಡಿ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿವೆ. ಆದರೆ ಮುಂಡರಗಿಯು ಯಾವಾಗಲೂ ಬರಗಾಲದ ಛಾಯೆಯಲ್ಲಿಯೇ ಬದುಕುತ್ತಿದೆ. ಇಂಥ ಸ್ಥಿತಿಯಲ್ಲಿ ಮುಂಡರಗಿಯ ಶ್ರೀಮಠದಿಂದ ದೊಡ್ಡ ಮೊತ್ತದ ಸಾಹಿತ್ಯ ಪ್ರಕಾಶಗೊಂಡಿರುವದಕ್ಕೆ ಇಂದಿನ ಸಾಹಿತಿಗಳಾದ ಪರಮ ಪೂಜ್ಯರ ಸತತ ಕ್ರಿಯಾಶೀಲತೆಯೇ ಪ್ರಮುಖ ಕಾರಣ.

ಅವಿರಳ ಜ್ಞಾನಿ ಚನ್ನಬಸವಣ್ಣನವರ ಸದಿಚ್ಛೆಯಂತೆ ವೃಡಗಿರಿ ಶ್ರೀಮಠದ ಮೂಲಪುರುಷರು ಗುರುವಿನಿಂದ ಕ್ರಿಯಾ ಭಸ್ಮವನ್ನು ಪಡೆದು ತಪಸ್ಸನ್ನಾಚರಿಸುತ್ತ ಶರಣ ಸಾಹಿತ್ಯ ಪ್ರಸಾರ ಕೈಗೊಂಡವರು. ಬಳಲಿದವರ ಬಳಲಿಕೆಯನ್ನು ಕಳೆದ ಈ ಪುಣ್ಯ ಪುರುಷರ ಸತ್ ಪರಂಪರೆಯಲ್ಲಿ ಶ್ರೀಮಠಕ್ಕೆ ಬಂದ ಎಲ್ಲಾ ಪೂಜ್ಯರು ಲಿಂಗಾನುಷ್ಠಪರರೂ, ಶಿವಯೋಗಿಗಳು ಹಾಗೂ ಜ್ಞಾನಾನ್ನದಾನಿಗಳಾಗಿರುವರು. ಇಂದಿನ ಜಗದ್ಗುರುಗಳವರು ತಪಸ್ವಿಗಳು, ಧರ್ಮ ದ್ರಷ್ಟಾರರು, ಕಾಯಕಶೀಲರು ಹಾಗೂ ಉದ್ದಾಮ ಸಾಹಿತಿಗಳು, ವಚನಕಾರರು ಆಗಿರುವದರಿಂದ ಶ್ರೀಮಠದ ಕೀರ್ತಿ ದಶ ದಿಕ್ಕುಗಳಿಗೆ ಪಸರಿಸಿದೆ. ಶ್ರೀ ಸನ್ನಿಧಿಯವರು ಕೈಗೆತ್ತಿಕೊಂಡ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಗಳಲ್ಲಿ ಸಾಹಿತ್ಯ ಪ್ರಸಾರ ಹಾಗೂ ಉದಯೋನ್ಮುಖ ಕವಿ ಸಾಹಿತಿಗಳಿಗೆ ಪ್ರೋತ್ಸಾಹ ನೀಡಿದ್ದು ಪ್ರಮುಖವಾಗಿದೆ. ಸ್ವತಃ ಸಾಹಿತಿ, ಕವಿ, ವಚನಕಾರರು ಹಾಗೂ ಶ್ರೇಷ್ಠ ಸಂಪಾದಕರಾದ ಶ್ರೀಗಳವರು ತಮ್ಮ ಶ್ರೀ ಲೇಖನಿಯಿಂದ ೩೦ಕ್ಕೂ ಹೆಚ್ಚು ಕೃತಿ ರತ್ನಗಳನ್ನು ಕನ್ನಡ ಧಾರ್ಮಿಕ ಸಾರಸ್ವತ ಲೋಕಕ್ಕೆ ನೀಡಿರುವರು.

ಶ್ರೀಮಠದ ಉತ್ತರಾಧಿಕಾರಿಗಳಾಗಿರುವಾಗಲೇ ಶ್ರೀಗಳು ದಿನಾಂಕ ೧-೮-೧೯೬೬ ರಂದು "ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆ"ಯನ್ನು ಸ್ಥಾಪಿಸಿರುವದು ಅವರ ದೂರದೃಷ್ಟಿಯ ಪ್ರತೀಕವಾಗಿದೆ. ಕಾರಣಿಕ ಯುಗಪುರುಷ ಹಾನಗಲ್ಲ ಕುಮಾರ ಮಹಾಸ್ವಾಮಿಗಳವರ ಉತ್ತರಾಧಿಕಾರಿಗಳಾಗಿದ್ದ ಶ್ರೀ ಮ. ನಿ. ಪ್ರ. ಸದಾಶಿವ ಮಹಾಸ್ವಾಮಿಗಳವರು ಈ ಗ್ರಂಥಮಾಲೆಯ ಸ್ಥಾಪನೆಯ ಸಂದರ್ಭದ ಪ್ರಥಮ ಪುಷ್ಪವು ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾ ಶಿವಯೋಗಿಗಳವರ (ಸೊರಟೂರ) ಅಷ್ಟೋತ್ತರ ಶತನಾಮಾವಳಿಯ ಪ್ರಕಟಣೆಯನ್ನು ಅರಿತು ತಮ್ಮ ಆಶೀರ್ವಚನದಲ್ಲಿ ಶ್ರೀಗಳು "ಗತಿಸಿ ಹೋಗುತ್ತಿರುವ ಕನ್ನಡ ಸಾಹಿತ್ಯವು ಪುನರುಜ್ಜೀವನಗೊಳಿಸಬೇಕೆಂಬ

ದಿವ್ಯ ಧ್ಯೇಯವನ್ನಿಟ್ಟುಕೊಂಡು ವೃಡಗಿರಿ ಸಂಸ್ಥಾನ ಮಠದಲ್ಲಿ ಪೂಜ್ಯರಾದ ಅನ್ನದಾನೀಶ್ವರನ ಅನುಗ್ರಹದಿಂದ ಮತ್ತು ಮಠದ ಉತ್ತರಾಧಿಕಾರಿಗಳಾದ ಶ್ರೀ ಚಂದ್ರಶೇಖರ ದೇವರ ಸಂಪಾದಕತ್ವದಲ್ಲಿ ಅನ್ನದಾನೀಶ್ವರ ಗ್ರಂಥಮಾಲೆಯು" ಪ್ರಕಟವಾಗುವದು ಅತ್ಯಂತ ಆನಂದದ ವಿಷಯವು ಎಂದು ಹಾರೈಸಿದಂತೆ ಇಂದು ಈ ಮಾಲೆಯು ಹೆಮ್ಮರವಾಗಿ ಬೆಳೆದು ಗ್ರಂಥ ಪ್ರಕಟನಾ ಶತಮಾನೋತ್ಸವವನ್ನು ಆಚರಿಸುತ್ತಿದೆ.

ಈ ಗ್ರಂಥಮಾಲೆಯಿಂದ ವೀರಶೈವ ಸಾಹಿತ್ಯ ಕೃತಿಗಳು, ಶರಣ ಸಾಹಿತ್ಯ ಕೃತಿಗಳು, ಅಪ್ರಕಟಿತ ಶರಣರ ವಚನಗಳು, ಸಂಶೋಧನ ಕೃತಿಗಳು, ಸಮಗ್ರ ವಿಚಾರ ಸಂಕಿರಣದ ಸಂಪಾದಿತ ಕೃತಿಗಳು, ಶರಣರ ನಾಟಕಗಳು, ಪ್ರವಾಸ ಸಾಹಿತ್ಯ ಕೃತಿಗಳು, ಚರಿತ್ರೆ, ಪುರಾಣ, ಸ್ತುತಿ, ಸುಪ್ರಭಾತ, ಪದ್ಯಗಳು ಮುಂತಾದ ಮೌಲಿಕ ಕೃತಿಗಳು ಪ್ರಕಟ ಗೊಂಡಿವೆ.

ಇತರ ಧರ್ಮಗಳಿಗೆ ಇರುವಂತೆ ವೀರಶೈವ ಧರ್ಮಕ್ಕೆ ಅಧಿಕೃತ ಗ್ರಂಥ ಇಲ್ಲ ಎನ್ನುವ ಕೊರಗು ಇದೆ. ಆದರೆ ವೀರಶೈವ ಧರ್ಮವು ತತ್ವ ಹಾಗೂ ಆಚಾರಶೀಲ ಧರ್ಮ. ಕಾರಣ ಇದಕ್ಕೆ ಪ್ರಾಚೀನದಿಂದ ಒಂದೇ ಅಧಿಕೃತ ಗ್ರಂಥ ಎಂದು ಪರಿಗಣಿಸಲು ಬಾರದು. ಜಗದ್ಗುರು ಮಹಾ ಸನ್ನಿಧಿಯವರು ಪೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಗೆ ಭಾಷೆಯನ್ನು ಬರೆದ **"ವೀರಶೈವ ದಾರ್ಶನಿಕ ಸಿದ್ಧಾಂತವು"** ಪ್ರಸ್ತುತ ಈ ಬೇಡಿಕೆಗೆ ಪೂರ್ಣವಿರಾಮ ನೀಡಬಲ್ಲುದು. ಗ್ರಂಥಮಾಲೆಯ ಉದ್ಗ್ರಂಥವಾದ ಈ ಕೃತಿ ವೀರಶೈವ ಸಾಹಿತ್ಯದ ಶ್ರೇಷ್ಠ ಗ್ರಂಥ. ಇದು ವೀರಶೈವ ಸಾಹಿತ್ಯ ಸಂಸ್ಕೃತಿಯನ್ನು ಅರುಹುವ ಕೈ ದೀವಿಗೆಯಾಗಿದೆ. ಲಿಂಗಾನುಷ್ಠಾನದೊಂದಿಗೆ ಬರೆದ ಈ ಹೆಬ್ಬೊತ್ತಿಗೆಯು ಶ್ರೀ ಸನ್ನಿಧಿಯವರ ಪಾಂಡಿತ್ಯ ಪ್ರಕಾಶನದ ವಿಶಿಷ್ಟ ಗ್ರಂಥ. ಇದನ್ನು ಮೆಚ್ಚಿಕೊಂಡ ವಿದ್ವಾಂಸರು ಮೆಚ್ಚುಗೆಯ ನುಡಿಗಳನ್ನು ನುಡಿದಿದ್ದಾರೆ. ಶಿವಯೋಗಮಂದಿರದ ಸಂಚಾಲಕರಾಗಿದ್ದ ಲಿಂ. ಸದಾಶಿವ ಮಹಾಸ್ವಾಮಿಗಳವರು "ಇದು ವೀರಶೈವ ಸಾಹಿತ್ಯ ಸಂಸ್ಕೃತಿಯ ಕೊಡುಗೆ" ಎಂದಿರುವರು. ಧಾರವಾಡದ ಮುರುಘಾಮಠದ ಲಿಂ. ಮಹಾಂತಪ್ಪಗಳವರು ತಮ್ಮ ಮಸ್ತಕದ ಮೇಲೆ ಇಟ್ಟುಕೊಂಡು ಕುಣಿದಾಡಿ "ಶ್ರೀ ಸನ್ನಿಧಿಯವರು ಬರೆದ ಈ ಕೃತಿಗೆ ವಿಶ್ವವಿದ್ಯಾಲಯಗಳು ಅವರಿಗೆ ಡಾಕ್ಟರೇಟ್ ಪದವಿಯನ್ನು ನೀಡಲು ತುಂಬಾ ಯೋಗ್ಯವಾಗಿದೆ" ಎಂದು ಹೃದಯಾರೆ ಹರಸಿದ್ದಾರೆ. ಸಾಹಿತಿ ಹಾಗೂ ವಿದ್ವಾಂಸರಾದ ಡಾ. ತಿಪ್ಪೇರುದ್ರ ಸ್ವಾಮಿಯವರು ದಾರ್ಶನಿಕ ಸಿದ್ಧಾಂತ ಎಂಬ ಹೆಸರನ್ನು ಸಾರ್ಥಕಪಡಿಸಿಕೊಂಡಿದೆ ಎಂದರೆ ಡಾ. ಬಿ. ವ್ಹಿ. ಮಲ್ಲಾಪೂರವರು ಈ ಕೃತಿ ಕನ್ನಡ ತತ್ವ ಸಾಹಿತ್ಯಕ್ಕೆ ನಿಶ್ಚಿತವಾಗಿಯೂ ಒಂದು ಅಮೂಲ್ಯ ಕೊಡುಗೆ ಎಂದಿದ್ದಾರೆ.

ಪೂಜ್ಯರು ೧೯೭೪ರಲ್ಲಿ ಬರೆದ ವೈಚಾರಿಕ ಪ್ರಬಂಧವಾದ 'ಮಾನವ ಧರ್ಮ'

ಕೃತಿಯು ಈಗ ನಾಲ್ಕನೇ ಆವೃತ್ತಿಗೆ ಅಣಿಯಾಗುತ್ತಿರುವದು ಕೃತಿಯ ಮೌಲ್ಯವನ್ನು ಎತ್ತಿ ತೋರಿಸದಿರಲಾರದು. ಈ ಕೃತಿಯನ್ನು ಕುರಿತು ವಿಮರ್ಶಕರಾದ ಡಾ. ಕೆ. ಕೃಷ್ಣಮೂರ್ತಿಯವರ ವಿಮರ್ಶೆಯು ಧರ್ಮ ಜಾಗೃತಿ ಜೀವನದ ಜೀವನಾಡಿ ಯೆಂದು ಬಲ್ಲವರು ಧರ್ಮ ಪ್ರಚಾರ ತಮ್ಮ ಪ್ರಥಮ ಕರ್ತವ್ಯವೆಂದು ಭಾವಿಸುವವರೂ ಆದ ಶ್ರೀ ಪಾದಂಗಳವರು ತುಂಬಾ ವಿಶಾಲವಾದ ಭೂಿಕೆಯ ಮೇಲೆ 'ಧರ್ಮ' ಎಂದರೆ ಏನು? ಅದರ ಅಂಗೋಪಾಂಗಗಳು ಅಥವಾ ಹೆಗ್ಗುರುತುಗಳು ಯಾವವು? ಸಕಲ ಜೀವಾತ್ಮರಿಗೂ ಲೇಸನ್ನು ಬಯಸುವ ವಿಶ್ವ ಧರ್ಮ ತನ್ನಂತೆ ಪರರನ್ನು ಕಾಣುವ ಪ್ರವೃತ್ತಿ ಯನ್ನು ಬೆಳೆಸುವ ಮಾನವ ಧರ್ಮ ಇವೆರಡರ ಸಾಕಾರ ಸಂಗಮವೇ ಶರಣ ಧರ್ಮ ಎಂಬ ಮುಖ್ಯ ಸೂತ್ರಕ್ಕೆ ಮಾನವ ಧರ್ಮ ಶಾಸ್ತ್ರದ ವೈಚಾರಿಕ ವಿವೇಚನೆ ಹೇಗೆ ಭಾಷೆವಾಗಿದೆ ಎಂಬುದನ್ನು ಇಲ್ಲಿ ಸತ್ವಪೂರ್ಣವಾಗಿಯೂ ಸಪ್ರಮಾಣವಾಗಿಯೂ ಎತ್ತಿ ತೋರಿಸಲಾಗಿದೆ.

ಒಳ್ಳೆಯ ನೀತಿಯನ್ನು ಲೋಕ ಕಲ್ಯಾಣಕ್ಕಾಗಿ ಹಿಡಿಯಬೇಕಾದ ಮಾರ್ಗವನ್ನು ಬೆಳೆಸಿಕೊಳ್ಳಬೇಕಾದ ಗುಣಗಳನ್ನು ಉತ್ತಮ ರೀತಿಯಿಂದ ಬಿಂಬಿಸಿ ತೋರಿಸುವ ಈ ವೈಚಾರಿಕ ಪ್ರಬಂಧ ವಾಚಕರ ಜೀವನವನ್ನು ಬೆಳಗಿಸುವ ಜ್ಯೋತಿಯಾಗಬಲ್ಲುದು. ಗಹನವಾದ ಧರ್ಮ ವಿವೇಚನೆ ಸುಗಮವಾದ ಭಾಷೆಯಲ್ಲಿ ವಿವಾದಾಸ್ಪದವಾಗದಂತೆ ಮೂಡಿ ಬಂದಿರುವದು ವೈಶಿಷ್ಟ್ಯ ಎಂಬ ಇವರ ವಿಮರ್ಶೆಯನ್ನು ಕೃತಿಯು ಸಾರ್ಥಕ ಪಡಿಸಿಕೊಂಡಿದೆ.

ಶಿವಶರಣರ ಜೀವನ, ಸಾಧನೆ, ಸಿದ್ಧಿಗಳ ವೈಚಾರಿಕ ವಿಚಾರ ಸಂಕಿರಣಗಳ ಕೃತಿಗಳಾದ ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು, ಜಂಗಮ ಪುಂಗವ ಅಲ್ಲಮಪ್ರಭು ದೇವರು ವೀರವಿರಾಗಿಣಿ ಅಕ್ಕಮಹಾದೇವಿಯವರು ಶಿವಯೋಗಿ ಸಿದ್ಧರಾಮದೇವರು ಹಾಗೂ ಹಾನಗಲ್ಲ ಕುಮಾರ ಮಹಾ ಶಿವಯೋಗಿಗಳವರು ಇವು ಶ್ರೀ ಸನ್ನಿಧಿಯವರ ಶ್ರೇಷ್ಠ ಸಂಪಾದಿತ ಪ್ರಮುಖ ಕೃತಿಗಳು. ಪ್ರತಿಯೊಂದು ಸಂಪಾದಿತ ಕೃತಿಯಲ್ಲಿ ಸನ್ನಿಧಿಯವರ ಉತ್ತಮ ವಿಚಾರಧಾರೆ ಹರಿದು ಬಂದಿವೆ. ಈ ಎಲ್ಲ ಕೃತಿಗಳು ಸುಂದರವಾಗಿ ಪ್ರಕಾಶನಗೊಂಡಿವೆ.

ಡಾ. ಬಿ. ಕೆ. ಹೊಸಮಠವರ ಸಂಶೋಧನ ಪ್ರಬಂಧವಾದ ಸರ್ವಜ್ಞನ ಕೃತಿ ಹಾಗೂ ಉದಯೋನ್ಮುಖ ಲೇಖಕರ ಕೃತಿಗಳಾದ ಡಾ. ಎಸ್. ಎಂ. ಹಿರೇಮಠರ ಸಂಶೋಧನ ಕೃತಿಯಾದ ಅನುಭವಮಂಟಪದ ದರ್ಶನ ಮತ್ತು ನಿರಂಜನ ಜಂಗಮ. ಜಿಲ್ಲಾ ನ್ಯಾಯಾಧೀಶರಾದ ಶ್ರೀ ಬಿ. ಎಸ್. ಪಾಟೀಲ ವೀರಶೈವ ದರ್ಶನಸಾರ ಜಿ. ಆರ್. ಮಹಾದೇವಯ್ಯನವರು ವೀರಶೈವ ವಾಗ್ಗೇಯಕಾರರು ಷಣ್ಮುಖಯ್ಯ ಅಕ್ಕೂರಮಠರ ವಚನ ಸಾಹಿತ್ಯ ವಿವೇಚನೆ ಯೋಗೀಶ ಯಡ್ರಾವಿಯವರ ಕೈವಲ್ಯ ಪದ್ಧತಿ ಒಂದು ವಿವೇಚನೆ ಡಾ. ವಿ. ಎಸ್. ಕಂಬಿಯವರ ಆಗಮ ಪ್ರಣೀತ ಎರಡು ಶೈವಗಳ

ತೌಲನಿಕ ಪರಿಚಯ ಪ್ರೊ. ಭೂಸನೂರಮಠಯವರು ಸಂಪಾದಿಸಿದ ಅಪ್ರಕಟಿತ ಶಿವಶರಣರ ವಚನಗಳು ಡಾ. ಜ. ಚ. ನಿ.ಯವರ ಅಲ್ಲಮ ಶಬ್ದ ಬ್ರಹ್ಮ ಹೀಗೆ ಪುರಾಣ ಸುಪ್ರಭಾತ ನಾಮಾವಳಿ, ಸ್ತುತಿ ಮುಂತಾದ ವಿದ್ವತ್‌ಪೂರ್ಣ ಕೃತಿಗಳು ಪ್ರಕಟಗೊಂಡು ಸಾಹಿತ್ಯ ಲೋಕಕ್ಕೆ ಒಂದು ವಿಶಿಷ್ಟ ಕೊಡುಗೆಯನ್ನು ನೀಡಿದ ಕೀರ್ತಿ ಈ ಗ್ರಂಥಮಾಲೆಗಿದೆ.

ಶ್ರೀ ಜಗದ್ಗುರು ಮಹಾ ಸನ್ನಿಧಿಯವರ ಸತತ ಕಾರ್ಯಶೀಲತೆಯ ಫಲವೇ ಈ ಗ್ರಂಥಮಾಲೆಯ ಮಹತ್ವದ ಪ್ರಕಾಶನಗಳು. ಸನ್ನಿಧಿಯವರ ಈ ಮಹತ್ವದ ಕಾರ್ಯ ಶಕ್ತಿಗೆ ಭಕ್ತರು ತಮ್ಮ ಶಕ್ತ್ಯಾನುಸಾರ ಸಾಹಿತ್ಯ ಪ್ರಕಾಶನಕ್ಕೆ ತಮ್ಮ ಸೇವೆ ಸಲ್ಲಿಸಿರುವ, ಅವರ ಸೇವೆಯು ಸ್ಮರಣೀಯವಾಗಿದೆ.

ಈ ಗ್ರಂಥಮಾಲೆಯಿಂದ ಪ್ರಕಟವಾದ ಎಲ್ಲ ಕೃತಿಗಳ ಹೆಸರು ಲೇಖಕರು ಹಾಗೂ ಪ್ರಕಾಶನಕ್ಕೆ ಸಹಾಯ ಸಲ್ಲಿಸಿದವರ ವಿವರವನ್ನು ಈ ಮುಂದೆ ಕೊಡಲಾಗಿದೆ.

ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆಯ ಪ್ರಕಟಣೆಗಳು

೧) ಶ್ರೀ ಜ. ಅ. ಅಷ್ಟೋತ್ತರ ಶತನಾಮಾವಳಿ–ಲೇ: ಶ್ರೀ ರು ಬ. ತೆಗ್ಗಿನಮನಿ, ಸಾ|| ಹೆಬ್ಬಾಳ, ಶ್ರೀಮಠದಿಂದ ೧೯೬೬. ೨) ಶರಣ ಸಂದೇಶ–ಲೇ: ಶ್ರೀ ಎನ್.ಎಫ್. ಪಾಟೀಲ, ಸಾ|| ಬಾಚನಗುಡ್ಡ, ಶ್ರೀ ದೇವೇಂದ್ರಪ್ಪ ಸಾ|| ತಳಕಲ್ಲ, ೧೯೬೭. ೩) ಮೃ. ಶ್ರೀ ಜ. ಅ. ಸುಪ್ರಭಾತಂ–ಲೇ: ಶ್ರೀ ಬಿ. ಸಿ. ಹಿರೇಮಠ ಸಾ|| ಹಾವೇರಿ, ಶ್ರೀಮಠದಿಂದ ೩೧–೧–೧೯೬೯. ೪) ಸ್ತುತಿ ಮಂಗಲ ಕುಸುಮಾಂಜಲಿ–ಲೇ: ಸಂ. ಶ್ರೀ ಸನ್ನಿಧಿಯವರಿಂದ (ದ್ವಿ. ಮುದ್ರಣ), ಶ್ರೀಮಠದಿಂದ ಪ್ರ. ಮು. ೧೯೭೨. ದ್ವಿ. ಮುದ್ರಣ ೧೯೯೧. ೫) ಶ್ರೀ ಚನ್ನವೀರೇಶ ಸುಪ್ರಭಾತವು – ಲೇ: ಬಸವೇಶ್ವರ ಶಿವಪ್ಪ ತುಪ್ಪದ ಸಾ|| ಗದಗ, ಶ್ರೀ ವೀರಭದ್ರಪ್ಪ ಗು. ಲಿಂಬಿಕಾಯಿ, ಮುಂಡರಗಿ, ೨೫–೧–೧೯೭೨. ೬) ಪಕ್ಷಿನೋಟ–ಲೇ: ಮಹಾಲಿಂಗ ಯಾಳಗಿ, ಶ್ರೀಮಠದಿಂದ, ೧೯೯೨. ೭) ಭಾವಸೌರಭ–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀಮತಿ ನೀಲಮ್ಮ ಬಿಸನಳ್ಳಿ, ಪ್ರ. ಮು. ೧೭–೪–೧೯೭೩ ದ್ವಿ. ಮು. ೧೯೮೯. ೮) ಕರ್ತೃ ಶ್ರೀ ಜ. ಮಹಾಶಿವಯೋಗಿಯ ಅಷ್ಟೋತ್ತರ ಶತನಾಮಾವಳಿ–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀ ಫಕೀರಪ್ಪ ಹವಳದ, ಮುಂಡರಗಿ, ೧೯೭೫. ೯) ಶಿವಯೋಗ–ಲೇಖಕರು: ಶ್ರೀ ಅನ್ನದಾನೀಶ್ವರ ವಿರಕ್ತಮಠ, ಧಾರವಾಡ, ಶ್ರೀ ವೀರಭದ್ರಪ್ಪನವರ ಬಳ್ಳೊಳ್ಳಿ; ಕೊಪ್ಪಳ, ೧೩–೨–೧೯೭೬. ೧೦) ನುಡಿಲಿಂಗ–ಲೇ: ಶ್ರೀ ಮಹಾಲಿಂಗ ಯಾಳಗಿ, ಅಕ್ಕೂರ ಬಂಧುಗಳು, ಬೆಳ್ಳಟ್ಟಿ, ಪ್ರ. ಮು. ೨. ೧೯೭೭, ದ್ವಿ. ಮು. ೧೭–೪–೧೯೯೨. ೧೧) ಮೃ. ಶ್ರೀ ಜ. ಅನ್ನದಾನೀಶ್ವರ ಸುಪ್ರಭಾತಂ–ಲೇ: ಶ್ರೀ ಗುರುಸ್ವಾಮಿ ಕಲಕೇರಿ, ಶ್ರೀ ಬಸವೇಶ್ವರ ತುಪ್ಪದ, ಅಂದಾನಪ್ಪ ಮ. ತಿಪ್ಪವ್ವನವರ; ಹಿಟ್ನಾಳ, ೪–೪–೧೯೭೭.

೧೨) ಶ್ರೀ ಜಗದ್ಗುರು ಅನ್ನದಾನೀಶ್ವರ ಲೀಲಾಮೃತ (ಪುರಾಣ)–ಲೇ: ಶರಣ ಕವಿ ಕರಿವೀರಪ್ಪ ಬ. ಅಂಗಡಿ, ಸಾ|| ಗದಗ, ದಾನಿಗಳ ಯಾದಿ ಅಚ್ಚಾಗಿದೆ, ೧೯೭೮. ೧೩) ಲೀಲಾಮೃತದ ಭಾವ ಪರಿಮಳ–ಲೇ: ಶ್ರೀ ಎನ್. ಎಫ್. ಪಾಟೀಲ, ಬಾಚನಗುಡ್ಡ ದಾನಿಗಳ ಯಾದಿ ಅಚ್ಚಾಗಿದೆ, ೧೯೭೮. ೧೪) ವಚನ ವಲ್ಲರಿ–ಲೇ: ಶ್ರೀ ಸನ್ನಿಧಿಯವರಿಂದ ಶ್ರೀ ಕಲ್ಲಪ್ಪ ಹಾಗೂ ಸೌ.ಗೌರಮ್ಮ ಬೆಲ್ಲದ, ಸಾ|| ಮುಂಡರಗಿ, ಪ್ರ.ಮು. ೧೯೭೮, ದ್ವಿ. ಮು. ೧೯೭೯. ೧೫) ವಚನ ಸಂಚಯ–ಲೇ: ಲಿಂ.ಜಗದ್ಗುರುಗಳು(ವೆಂಕಟಾಪೂರ) ಶ್ರೀ ಮುರಿಗೆಪ್ಪನವರ ಮರ್ತೂರ; ಹಾವೇರಿ, ೫–೨–೧೯೭೯. ೧೬) ಮಾನವ ಧರ್ಮ–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀ ಫಕೀರಪ್ಪನವರ ಅಕ್ಕೂರ, ಬೆಳ್ಳಟ್ಟಿ, ಪ್ರ.ಮು. ೧೯೭೯, ದ್ವಿ.ಮು. ೧೯೮೧, ತೃ.ಮು. ೧೯೯೦. ೧೭) ಅಲ್ಲಮಶಬ್ದಬ್ರಹ್ಮ ಲೇ: ಡಾ|| ಜ ಚ. ನಿ. ಗೂಳೂರು, ಶ್ರೀ ಚನ್ನಪ್ಪನವರ ಡಂಬಳ; ಮುಂಡರಗಿ, ೧೯೭೯. ೧೮) ಯೋಗಾಸನಗಳು–ಲೇ: ಶ್ರೀ ಮ.ಗ.ಚ. ಸದಾಶಿವಶಿವಾಚಾರ್ಯ ಸ್ವಾಮಿಗಳು, ಸುಖರಾಯಪಟ್ಟಣ; ಗಿರಿಯಾಪೂರ, ಶ್ರೀಮಠದಿಂದ, ಪ್ರ. ಮು. ೧೯೭೮. ದ್ವಿ. ಮುದ್ರಣ ೧೯೯೩. ೧೯) ಹಾಸಗಲ್ಲ ಕುಮಾರೇಶ್ವರನ ಸುಪ್ರಭಾತವು–ಲೇ: ಗುರುಸ್ವಾಮಿ ಕಲಕೇರಿ, ಗದಗ, ಶ್ರೀ ಶರಣಪ್ಪ ನಿಂಗಪ್ಪ ಬೆಟಗೇರಿ, ಮುಲ್ಲಾಪೂರ, ೨೬–೨–೧೯೭೯. ೨೦) ಶ್ರೀ ಜ. ಅ. ತ್ರಿವಿಧ ಸ್ತೋತ್ರಶತಕಂ–ಲೇ: ಶ್ರೀ ಕೆ. ಎಂ. ಜ್ಞಾನಯೋಗೀಶ್ವರ, ಬೆಳದಡಿ, ಶ್ರೀ ಶಂಕರಗೌಡ ಬಿ. ಮಾಲೀಪಾಟೀಲ, ಹಿಟ್ನಾಳ, ೧೯೮೦. ೨೧) ಅಕ್ಕನ ಐತಿಹಾಸಿಕ ಜೀವನ ದರ್ಶನ–ಲೇ: ಶ್ರೀ ಟಿ. ಎಸ್. ಕೊಟಗಿ, ಗದಗ, ಶ್ರೀಮಠದಿಂದ, ೧೯೮೦. ೨೨) ಪ್ರಸಾದಿ ಸದ್ಭಾವಿ ಚನ್ನಬಸವಣ್ಣನವರು–ಲೇ: ಸಂ. ಶ್ರೀ ಸನ್ನಿಧಿಯವರು, ಶರಣೆ ವೀರಮ್ಮ ಬಬ್ಲಿ, ಕವಲೂರ, ೧೩–೨–೧೯೮೧. ೨೩) ಮಾನವ ಧರ್ಮ (ಹಿಂದಿ ಅನುವಾದ)–ಲೇ: ಅ. ಶ್ರೀ ಸನ್ನಿಧಿಯವರು, ಶ್ರೀ ಎಸ್. ಬಿ. ದಂಡಿಗಿ, ಬೆಳಗಾಂವ, ೧೯೮೨. ೨೪) ಲಿಂಗನಾಯಕನಹಳ್ಳಿ ಚನ್ನವೀರ ಮಹಾಸ್ವಾಮಿಗಳು–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀ ವಿ. ಆರ್. ಮುಂಡಾಸದ, ಬಳ್ಳಾರಿ, ೧೫–೨–೧೯೮೧. ೨೫) ಮೈಲಾರ ಬಸವಲಿಂಗ ಶರಣರ ಗುರುಕರುಣ ತ್ರಿವಿಧಿಯಲ್ಲಿ ವೀರಶೈವ ದಾ. ಸಿದ್ಧಾಂತ–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀ ಕೊಟ್ರಪ್ಪ ಚ. ಆಕ್ಕೂರ ಮತ್ತು ಸಹೋದರರು, ಡಾ|| ಆರ್. ಎಂ. ಪಾಟೀಲ, ನಿಡಗುಂದಿ, ಶ್ರೀ ವೀರಣ್ಣ ಮುಷ್ಟಿ, ಗಂಗಾವತಿ, ಪ್ರ.ಮು.೧೯೮೧, ದ್ವಿ.ಮು.೧೯೮೯. ೨೬) ನಿರಂಜನ ಪ್ರಭೆ (ಸ್ಮರಣ ಸಂಚಿಕೆ)–ಲೇ: ಸಂ. ಮಂಡಳಿ, ಶ್ರೀಮಠದಿಂದ, ೧೭–೨–೧೯೮೧. ೨೭) ನವಲಗುಂದದ ಗವಿಮಠದ ಪುಣ್ಯಮೂರ್ತಿ–ಲೇ: ಶ್ರೀ ಎಸ್. ಎಸ್. ಭೂಸರಡ್ಡಿ ಶ್ರೀಮಠದಿಂದ, ೧೯೮೨. ೨೮) ಶರಣಸತಿ ಲಿಂಗಪತಿ–ಭಾವದ ವಚನಗಳು–ಲೇ: ಸುಶಿಲಮ್ಮ ಪವಾಡಶೆಟ್ಟರ, ಗದಗ, ಲೇಖಕಿಯರದು, ೧೯೮೩. ೨೯) ಭಾಗ್ಯವಂತ ಕಂಬಳಿಯವರು–ಲೇ: ಸಂ. ಎನ್. ಬಿ. ಆಸುಂಡಿ, ಶ್ರೀಮಠದಿಂದ, ೧೯೮೪.

೩೦) ಸರ್ವಜ್ಞ-ಲೇ: ಡಾ|| ಬಿ. ಕೆ. ಹೊಸಮಠ, ಶ್ರೀಮಠದಿಂದ, ೨೬-೧-೧೯೮೩. ೩೧) ಜಂಗಮ ಜ್ಯೋತಿ(ನಾಟಕ)-ಲೇ: ಶ್ರೀ ಸನ್ನಿಧಿಯವರಿಂದ, ಶ್ರೀ ಮಲ್ಲನಗೌಡ್ರ ಮೂಲಿಮನಿ, ತಳಕಲ್ಲ, ೨೭-೧-೧೯೮೩. ೩೨) ನುಡಿ-ಮಿಡಿ-ಲೇ: ಶ್ರೀ ಸಂಗಮೇಶ ಹಂಡಗಿ, ಶ್ರೀಮಠದಿಂದ, ೧೯೮೫. ೩೩) ಇಷ್ಟಲಿಂಗ ವ್ರತ-ಲೇ: ಶರಣೆ ಗಿರಿಜಾದೇವಿ ನಂಜುಂಡಪ್ಪ, ಕೆಸ್ತೂರ ಜಿ. ತುಮಕೂರ, ಶಿರಸಿ ಮಠದ ಪೂಜ್ಯರು, ಶ್ರೀಮಠದಿಂದ, ಪ್ರ. ಮು. ೧೯೮೫, ದ್ವಿ. ಮು. ೧೯೯೨. ೩೪) ಮುಕ್ತಿಮಧು-ಲೇ: ಶ್ರೀ ಸನ್ನಿಧಿಯವರು, ಶ್ರೀ ಬಿ. ಸಿ. ಗುಜ್ಜರ, ಬೆಂಗಳೂರು, ಶ್ರೀ ಸಿದ್ದಪ್ಪ ಹತ್ತಿ, ಮುಂಡರಗಿ, ಪ್ರ. ಮು. ೧೯೮೬, ದ್ವಿ. ಮು. ೧೯೯೦. ೩೫) ಶಿವಯೋಗಮಂದಿರ ಸಂಸ್ಥೆಯ ಕೈಪಿಡಿ-ಲೇ: ಶ್ರೀ ಸನ್ನಿಧಿಯವರು, ಶ್ರೀಮಠದಿಂದ, ೧೦-೩-೧೯೮೬. ೩೬) ಆಧುನಿಕ ಕನ್ನಡ ಸಾ. ಸಮೀಕ್ಷೆ-ಲೇ: ಸಂ. ಪ್ರಾ. ಎ. ಬಿ. ಹಿರೇಮಠ, ಶ್ರೀಮಠದಿಂದ, ೩೧-೧-೧೯೮೮. ೩೭) ರುದ್ರಾಕ್ಷಿ-ಲೇ: ಪ್ರೊ. ಶಂಕರಗೌಡ ಬಿರಾದಾರ, ಅಕ್ಕಲಕೋಟ ಶ್ರೀ ವೀರಭದ್ರಪ್ಪ ಗು. ಅಳಗುಂಡಗಿ, ಹುಬ್ಬಳ್ಳಿ, ಪ್ರ. ಮು. ೧೯೮೭, ದ್ವಿ. ಮು. ೧೯೯೨ ೩೮) ಹಾಲತೊರೆ-ಲೇ: ಮಹಾಲಿಂಗ ಯಾಳಗಿ, ಶ್ರೀ ನಿಂಗಪ್ಪನವರ ಉಡಕೇರಿ, ಬೆಟಸೂರ, ಸವದತ್ತಿ, ೧೯೮೭. ೩೯) ಗುರು ಕರುಣ ತ್ರಿವಿಧಿಯ ತಿರುಳು-ಲೇ: ಶ್ರೀ ಸನ್ನಿಧಿಯವರು, ಶ್ರೀ ಬಸಯ್ಯನವರು ಬೆಳವಟಗಿಮಠ, ಮುಂಡರಗಿ, ೧೯೮೭. ೪೦) ವಚನ ಸಂಪದ-ಲೇ: ಶ್ರೀ ಸನ್ನಿಧಿಯವರು, ಶ್ರೀಮತಿ ವಿಜಯಾದೇವಿ ಕೋ. ಕೆ. ಆರ್. ಪರಂಜ್ಯೋತಿ, ಬೆಂಗಳೂರು, ೧೯೮೭. ೪೧) ಶ್ರೀ ಜ. ಅನ್ನದಾನೀಶ್ವರ ಶಿವಯೋಗಿಗಳವರ ನಾಮಾವಳಿ ಸಂಗ್ರಹ-ಲೇ: ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸನ್ನಿಧಿಯವರು, ಎಂ. ಬಿ. ಬೆಳವಟಗಿ, ಮುಂಡರಗಿ, ೧೯೮೭. ೪೨) ಇಷ್ಟಲಿಂಗಾರ್ಚನೆ ಹಾಗೂ ಶ್ರೀ ರುದ್ರ-ಲೇ: ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸನ್ನಿಧಿಯವರು, ಲಿಂ. ಶಿವನಗೌಡರು ಪಾಟೀಲ. ಹನಸಿ, ೬-೧೦-೧೯೮೮. ೪೩) ಮೃಡಗಿರಿ ಶ್ರೀ ಜಗದ್ಗುರು ಅನ್ನದಾನೀಶ್ವರ ಶತಕಂ-ಲೇ: ಶ್ರೀ ರಾಮಣ್ಣ ದೊ. ಬ್ಯಾಟಿ, ಗದಗ-ಬೆಟಗೇರಿ, ಶ್ರೀಮಠದಿಂದ, ೧೭-೨-೧೯೮೯. ೪೪) ಶ್ರೀ ಗುರು ಕರುಣೆ-ಲೇ: ಶ್ರೀಮತಿ ಎಚ್. ಎಸ್. ಅಕ್ಕಮಹಾದೇವಿ ಮುಂಡರಗಿ, ಶ್ರೀಮಠದಿಂದ, ೧೯೮೯. ೪೫) ವಚನ ವಿಶ್ವ-ಲೇ: ಶ್ರೀ ರಾಜಗುರು ಗುರುಸ್ವಾಮಿ, ಕಲಕೇರಿ, ಶ್ರೀಮಠದಿಂದ, ೧೯-೨-೧೯೮೯. ೪೬) ಹರ್ಡೇಕರ ಮಂಜಪ್ಪನವರು-ಲೇ: ಸಂ. ಪ್ರಾ. ಎ. ಬಿ. ಹಿರೇಮಠ; ಮುಂಡರಗಿ, ಶ್ರೀಮಠದಿಂದ, ೧೯೮೯. ೪೭) ಮೋದಾರ ಕೇತಯ್ಯನ ವಚನಗಳು-ಲೇ: ಸಂ. ಪ್ರೊ. ಎಸ್. ಎಸ್. ಭೂಸರಡ್ಡಿ, ಧಾರವಾಡ, ಶ್ರೀಮಠದಿಂದ, ೧೯೮೯. ೪೮) ನಿನ್ನೊಲುಮೆ-ಲೇ: ಬಸವಕಂದ (ವೀರಯ್ಯ ಗು. ಮಠದ), ಶರಣಪ್ಪನವರು ಕೆಂಪಗೌಡ್ರ, ಗದಗ, ೧೯೯೦. ೪೯) ಶ್ರೀ ಚನ್ನಬಸವಣ್ಣನವರ ವಚನಗಳು-ಲೇ: ಸಂ. ಶ್ರೀ ಸನ್ನಿಧಿಯವರಿಂದ, ಶ್ರೀ ಚನ್ನಬಸವನಗೌಡರು ಪಾಟೀಲ,

ಹೂವಿನಹಡಗಲಿ, ೧೯೯೦. ೫೦) ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರ ತತ್ವ ಪ್ರತಿಪಾದಕ ವಚನಗಳು–ಲೇ: ಸಂ. ಶ್ರೀ ಸನ್ನಿಧಿಯವರಿಂದ, ಡಾ॥ ಅನ್ನಪೂರ್ಣಮ್ಮ ಶೆಟ್ಟರ, ಬೆಂಗಳೂರು, ೧೯೯೦. ೫೧) ಅನುಭಾವ ಮಂಟಪ ದರ್ಶನ–ಲೇ: ಡಾ॥ ಎಸ್. ಎಂ. ಹಿರೇಮಠ; ಗುಲಬರ್ಗ, ಶ್ರೀಮಠದಿಂದ, ೧೯೯೦. ೫೨) ಶಿವಾನುಭವ ಚರವರ್ಯ ಲಿಂಗನಾಯಕನ ಹಳ್ಳಿಯ ಶ್ರೀ ಚನ್ನವೀರ ವಿಲಾಸ–ಲೇ: ಶ್ರೀ ಮ. ನಿ. ಪ್ರ. ಗುರುಪಾದಿ ಸ್ವಾಮಿಗಳು ಅಡವಿಸಿದ್ಧೇಶ್ವರಮಠ, ಮರೆಗುದ್ದಿ, ಶ್ರೀಮಠದಿಂದ, ೧೯೯೧. ೫೩) ಕುಂಬಾರ ಗುಂಡಯ್ಯ–ಲೇ: ಪ್ರೊ. ಎಸ್. ಎಸ್. ಭೂಸರಡ್ಡಿ, ಪ್ರೊ. ಸುಲೋಚನಾ ಮಟ್ಟಿ, ಶ್ರೀಮಠದಿಂದ, ೧೯೯೧. ೫೪) ಶ್ರೀ ರಿತ್ತಿ ಅನ್ನದಾನ ಮರಿದೇವರು–ಲೇ: ಶ್ರೀ ವಿರುಪಾಕ್ಷಪ್ಪ ಹಳ್ಳಿಕೇರಿ, ಹೊಸರಿತ್ತಿಯ ಹಳ್ಳಿಕೇರಿ ಬಂಧುಗಳು, ೨೮–೫–೧೯೯೧. ೫೫) ಮೃ. ಶ್ರೀ ಜಗದ್ಗುರು ಅನ್ನದಾನೀಶ್ವರ ಗೀತ ತರಂಗಿಣಿ–ಲೇ: ಶ್ರೀ ಕೆ. ಎಂ. ಜ್ಞಾನಯೋಗೀಶ್ವರ ಶಾಸ್ತ್ರಿಗಳು, ಬೆಳದಡಿ, ಶ್ರೀಮಠದಿಂದ, ೧೯೯೧. ೫೬) ವೀರಶೈವ ತತ್ವಜ್ಞಾನ–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀಮಠದಿಂದ, ೧೯೯೧ ೫೭) ಜಂಗಮ ಪುಂಗವ ಅಲ್ಲಮಪ್ರಭುದೇವರ ನೂರೆಂಟು ವಚನಗಳು (ಭಾವ ವಿವರಣೆ)–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀ ವೀರಪ್ಪ ಅಂದಾನಪ್ಪ ಜೋಳದ, ಕುಕನೂರ, ೧೯೯೧. ೫೮) ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು (ಸಮಗ್ರ ವಿಚಾರ ಸಂಕಿರಣ ಕೃತಿ)–ಲೇ: ಸಂ. ಶ್ರೀ ಸನ್ನಿಧಿಯವರಿಂದ, ಶ್ರೀ ಮಠ ಹಾಗೂ ದಾನಿಗಳು, ೧೯೯೧. ೫೯) ಕನ್ನಡಿ ಕಾಯಕದ ಅಮ್ಮಿದೇವನ ವಚನಗಳು–ಲೇ: ಪ್ರೊ. ಎಸ್. ಎಸ್. ಭೂಸರಡ್ಡಿ, ಶ್ರೀ ಮಠದಿಂದ, ೧೬–೨–೧೯೯೨. ೬೦) ಹಂತಿಯ ಹೊಸ ಪದಗಳು–ಲೇ: ಹು. ರಾ. ಕುರ್ತಕೋಟಿ, ಶ್ರೀಮಠದಿಂದ, ೧೯೯೨. ೬೧) ಆರೈದು–ಭಾಗ–ಒಂದು (೧೧ ಜನ ವಿಭೂತಿ ಪುರುಷರ ದರ್ಶನ)–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀಮಠದಿಂದ, ೧೯೯೨. ೬೨) ಹಡಪದ ರೇಚರಸರ ವಚನಗಳು–ಲೇ: ಪ್ರೊ. ಎಸ್. ಎಸ್. ಭೂಸರಡ್ಡಿ, ಶ್ರೀಮಠದಿಂದ, ೧೯೯೨. ೬೩) ಕಾರಣಿಕ ಯುಗ ಪುರುಷ ಹಾನಗಲ್ಲ ಕುಮಾರ ಮಹಾಸ್ವಾಮಿಗಳು–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀಮಠದಿಂದ. ೬೪) ಆರೈದು–ಭಾಗ–ಎರಡು (ತತ್ವ ದರ್ಶನ)–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀಮಠದಿಂದ, ೧೯೯೨. ೬೫) ವೈರಾಗ್ಯ ನಿಧಿ ಶ್ರೀ ಅಕ್ಕಮಹಾದೇವಿಯವರ ಯೋಗಾಂಗ ತ್ರಿವಿಧಿ ವ್ಯಾಖ್ಯಾನ–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀ ಶೇಖರಪ್ಪ, ಫಕೀರಪ್ಪ ಹತ್ತಿಕಾಳ. ಲಕ್ಷ್ಮೇಶ್ವರ, ೧೯೯೨. ೬೬) ಪಡುವಣ ಪಯಣ–ಲೇ: ಶ್ರೀಮತಿ ನಿಂಗಮ್ಮ ಕಟ್ಟಿ, ಹುಬ್ಬಳ್ಳಿ, ಶ್ರೀಮಠದಿಂದ, ೧೯೯೩. ೬೭) ನಗೆಮಾರಿ ತಂದೆಗಳ ವಚನಗಳು–ಲೇ: ಪ್ರೊ. ಎಸ್. ಎಸ್. ಭೂಸರಡ್ಡಿ, ಶ್ರೀಮಠದಿಂದ, ೧೯೯೩. ೬೮) ಜಂಗಮ ಪುಂಗವ ಅಲ್ಲಮ ಪ್ರಭುದೇವರು (ಸಮಗ್ರ ವಿಚಾರ ಸಂಕಿರಣ)–ಲೇ: ಸಂ. ಶ್ರೀ ಸನ್ನಿಧಿಯವರಿಂದ, ಶ್ರೀಮಠದಿಂದ

ಹಾಗೂ ದಾನಿಗಳು, ೧೯೭೨. ೧೯) ವೀರಶೈವ ಧುರೀಣ ನಂದಿಮಠದ ರೇವಣಸಿದ್ಧಯ್ಯನವರು–ಲೇ: ಡಾ. ವಿ. ಶಿವಾನಂದ, ವಾರಣಾಸಿ, ಶ್ರೀಮಠದಿಂದ, ೧೯೭೩. ೨೦) ಶಿವಯೋಗ–ಲೇ: ಶ್ರೀ ಸನ್ನಿಧಿಯವರಿಂದ, ಲಿಂ. ಶಾಂತವೀರಯ್ಯ ಹಿರೇಮಠ, ಮುರ್ಲಾಪೂರ (ಇವರ ಮಕ್ಕಳು), ೬–೪–೧೯೭೩. ೨೧) ಮೃಡಗಿರಿ ಶ್ರೀ ಜಗದ್ಗುರು ಅನ್ನದಾನೀಶ್ವರ ವಚನಗಳು–ಲೇ: ಶ್ರೀ ಜಗದ್ಗುರು ಮಹಾಸನ್ನಿಧಿಯವರು, ಶ್ರೀ ಜ. ಅ. ಅಕ್ಕಮಹಾದೇವಿಯ ಬಳಗ, ಸಂಸ್ಥಾನಮಠ ಮುಂಡರಗಿ, ೧೯೭೩. ೨೨) ಮೃಡಗಿರಿ ಶ್ರೀ ಜಗದ್ಗುರು ಅನ್ನದಾನೀಶ್ವರ ಉತ್ಸಾಹ ರಗಳೆ–ಲೇ: ಎಚ್. ಈಶ್ವರ, ಎಚ್. ಈಶ್ವರ, ೧೯೭೩. ೨೩) ಶಿವಶರಣರ ಎರಡು ನಾಟಕಗಳು–ಲೇ: ಡಾ. ವ್ಹಿ. ಜಿ. ಪೂಜಾರ, ಗುಲಬುರ್ಗಾ, ಶ್ರೀ ಎಸ್. ಎ. ಹಿರೇಮಠ, ಗುತ್ತಲ, ೧೯೭೩. ೨೪) ಹಸನು ಬದುಕಿಗೆ ಹಾದಿ–ಲೇ: ಪ್ರೊ. ಶಂಕರಗೌಡ ಬಿರಾದಾರ, ಅಕ್ಕಲಕೋಟೆ, ಶ್ರೀಮಠದಿಂದ, ೧೯೭೩. ೨೫) ಚಿನ್ಮಯ ಚೇತನ–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀಮಠದಿಂದ, ೧೯೭೩. ೨೬) ವಚನ ಮಾಣಿಕ್ಯ ಕೋಶ–ಲೇ: ಸಂ. ಉಷಾಕಿರಣ, ಬೆಂಗಳೂರು, ಶ್ರೀಮಠದಿಂದ, ೧೯೭೩. ೨೭) ಇಚ್ಛಾ ಸಂತಾನ–ಲೇ: ಸಂ. ಬಸವಕುಮಾರ ಮುಳಗುಂದಮಠ, ಶಿಗ್ಗಿ, ಶ್ರೀ ಸಿ. ಕೆ. ಹಿರೇಮಠ; ಬನ್ನಿಕೊಪ್ಪ, ೧೯೭೩. ೨೮) ವೀರಶೈವ ವಾಗ್ಗೇಯಕಾರರು–ಲೇ: ಟಿ. ಆರ್. ಮಹಾದೇವಯ್ಯ, ಬೆಂಗಳೂರು, ಶ್ರೀಮಠದಿಂದ, ೧೯೭೩. ೨೯) ವಚನಸಾಹಿತ್ಯ ವಿವೇಚನೆ–ಲೇ: ಷಣ್ಮುಖಯ್ಯ ಅಕ್ಕೂರಮಠ, ಬೆಂಗಳೂರು, ಶ್ರೀಮಠದಿಂದ, ೧೯೭೩. ೩೦) ಆರೈದು–ಭಾಗ–ಮೂರು, (೧೧ ವಿಮರ್ಶಾತ್ಮಕ ಚಿಂತನಗಳು)–ಲೇ: ಶ್ರೀಸನ್ನಿಧಿಯವರಿಂದ, ಶ್ರೀಮಠದಿಂದ, ೧೯೭೩. ೩೧) ಮಾನವ ಧರ್ಮ (ಹಿಂದಿ)–ಲೇ: ಅ. ಬಿ. ಎ. ಜಮಾದಾರ, ಸೊಲ್ಲಾಪೂರ, ಶ್ರೀಮಠದಿಂದ, ೧೯೭೩. ೩೨) ಇಷ್ಟಲಿಂಗ ವ್ರತ (ಹಿಂದಿ)–ಲೇ: ಅ. ಶ್ರೀಮತಿ ಶಶಿಕಲಾ ರಾಜಶೇಖರ ಮಡಿಕಿ ಸೊಲ್ಲಾಪೂರ, ಶ್ರೀಮಠದಿಂದ, ೧೯೭೩. ೩೩) ವೀರ ವಿರಾಗಿಣಿ ಅಕ್ಕಮಹಾದೇವಿಯವರು (ಸಮಗ್ರ ವಿಚಾರ ಸಂಕಿರಣ ಕೃತಿ) - ಲೇ: ಸಂ. ಶ್ರೀ ಸನ್ನಿಧಿಯವರಿಂದ, ಶ್ರೀಮಠ ಹಾಗೂ ದಾನಿಗಳು, ೧೯೭೩. ೩೪) ಶ್ರೀಮನ್ನ ನಿಜಗುಣರು ಹಾಗೂ ವೀರಶೈವ ಸಿದ್ಧಾಂತ–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀಮಠ ಹಾಗೂ ದಾನಿಗಳು, ೧೯೭೩. ೩೫) ಶರಣ ಬಸವರ ಪವಾಡಗಳು ಸ್ವರೂಪ ಸಾಂಕೇತಿಕತೆ–ಲೇ: ಡಾ. ಎಸ್. ಎಂ. ಹಿರೇಮಠ, ಗುಲಬುರ್ಗಾ, ಅಂದಾನಪ್ಪ, ಅ. ಪವಾಡಶೆಟ್ಟರ, ಖಾನಾಪೂರ, ೧೯೭೪. ೩೬) ಆಗಮ ಪ್ರಣೀತ ಎರಡು ಶೈವಗಳ ತೌಲನಿಕ ಪರಿಚಯ–ಲೇ: ಡಾ. ವಿ. ಎಸ್. ಕಂಬಿ, ಧಾರವಾಡ, ಶ್ರೀಮಠದಿಂದ, ೧೯೭೪. ೩೭) ಮೃಡಗಿರಿ ಮಹಾಪುರುಷ–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀ ಫಕೀರಪ್ಪ, ಚ. ಕುಬಸದ, ಶಿಗ್ಗಿ, ೧೯೭೪. ೩೮) ಪಂ. ಕಲ್ಲಿನಾಥ ಶಾಸ್ತ್ರಿಗಳು ಪುರಾಣಿಕ, ದ್ಯಾಂಪೂರ–ಲೇ: ಡಾ. ಎಂ. ಜಿ. ಶಾಸ್ತ್ರೀಮಠ, ಧಾರವಾಡ, ಶ್ರೀಮಠದಿಂದ, ೧೯೭-

೮೯) ಕೈವಲ್ಯ ಪದ್ಧತಿ ಒಂದು ವಿವೇಚನೆ–ಲೇ: ಶ್ರೀ ಯೋಗಿಶ ಯಡ್ರಾವಿ, ಧಾರವಾಡ, ಪ್ರೊ. ವಿ. ಕೆ. ಕೋಳೂರ, ಮುಂಡರಗಿ, ೧೯೯೪. ೯೦) ನಿರಂಜನ ಜಂಗಮ–ಲೇ: ಡಾ. ಎಸ್. ಎಂ. ಹಿರೇಮಠ, ಗುಲಬುರ್ಗಾ, ಶಂಕರಪ್ಪನವರು ಯರಾಶಿ, ಯರೇಬನ್ನಿಕೊಪ್ಪ, ೧೯೯೪. ೯೧) ವಚನ ಅಧ್ಯಯನ–ಲೇ: ಡಾ. ವೀರಣ್ಣ ರಾಜೂರ, ಧಾರವಾಡ, ಶ್ರೀಮಠದಿಂದ, ೧೯೯೪. ೯೨) ಚಿರಂತನ–ಲೇ: ಡಾ. ಕೋತಿನ, ಶ್ರೀಮಠದಿಂದ, ೧೯೯೪. ೯೩) ಆರೈದು–ಭಾಗ–ನಾಲ್ಕು–ಲೇ: ಶ್ರೀ ಸನ್ನಿಧಿಯವರಿಂದ, ಶ್ರೀಮಠದಿಂದ, ೧೯೯೪. ೯೪) ಹಾನಗಲ್ಲ ಕುಮಾರ ಮಹಾಸ್ವಾಮಿಗಳು (ವಿಚಾರ ಸಂಕಿರಣ ಕೃತಿ)–ಲೇ: ಸಂ. ಸನ್ನಿಧಿಯವರಿಂದ, ಶ್ರೀಮಠದಿಂದ, ೧೯೯೪ ೯೫) ವೀರಶೈವ ದರ್ಶನ ಸಾರ–ಲೇ: ಶ್ರೀ ಬಿ. ಎಸ್. ಪಾಟೀಲ, ಜಿಲ್ಲಾ ನ್ಯಾಯಾಧೀಶರು ಬೆಳಗಾಂವ, ಶ್ರೀಮಠದಿಂದ, ೧೯೯೪. ೯೬) ಶಿವಯೋಗಿ ಸಿದ್ಧರಾಮ ದೇವರು, (ವಿಚಾರ ಸಂಕಿರಣ ಕೃತಿ)–ಲೇ: ಸಂ. ಶ್ರೀ ಸನ್ನಿಧಿಯವರಿಂದ, ಶ್ರೀಮಠದಿಂದ ಹಾಗೂ ದಾನಿಗಳು, ೧೯೯೪. ೯೭) ಚಿರಂತನ ಚಿಂತನ–ಲೇ: ಸಂ. ಶ್ರೀ ಸನ್ನಿಧಿಯವರಿಂದ, ಶ್ರೀಮಠದಿಂದ. ೧೯೯೪. ೯೮) ಮಣಕವಾಡ ಮಾಣಿಕ್ಯ–ಲೇ: ಶ್ರೀ ಕೆ. ಎಂ. ಜ್ಞಾನಯೋಗಿ, ಬೆಳದಡಿ, ಶ್ರೀಮಠದಿಂದ, ೧೯೯೪. ೯೯) ಕರ್ತೃ ಶ್ರೀ ಜಗದ್ಗುರು ಅನ್ನದಾನೀಶ್ವರ ಪುರಾಣ–ಲೇ: ಡಾ. ಪಂ. ಪುಟ್ಟರಾಜ ಗವಾಯಿಗಳವರು ವೀರೇಶ್ವರ ಪುಣ್ಯಾಶ್ರಮ, ಗದಗ, ಶ್ರೀಮಠದಿಂದ, ೧೯೯೪. ೧೦೦) ಚಿದಮೃತದ ಚಿತ್‌ಕುಂಭ–ಲೇ: ಶ್ರೀ ಜಗದ್ಗುರು ಮಹಾಸನ್ನಿಧಿಯವರಿಂದ, ಶ್ರೀಮಠದಿಂದ ಹಾಗೂ ದಾನಿಗಳು, ೧೯೯೪. ೧೦೧) ಅನುಭಾವಿ–ಲೇ: ಸಂಪಾದಕ ಮಂಡಳಿ, ೧೯೯೫.

ಶ್ರೀ ಸನ್ನಿಧಿಯವರ ಯೋಜನೆಗಳು

—**ಪ್ರೊ. ಎಂ. ಜಿ. ಗಚ್ಚಣ್ಣವರ,** ಮುಂಡರಗಿ

ಯೋಜನೆ ಎಂದರೆ ಆರ್ಥಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ಪ್ರಗತಿ ಸಾಧಿಸುವದು. ಯೋಜನೆಯ ಮುಖ್ಯಗುರಿ ಸ್ಥಳೀಯವಾಗಿ ದೊರೆಯುವ ಸಂಪನ್ಮೂಲಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಂಡು ಸಾಮಾಜಿಕ ಆರ್ಥಿಕ ಪರಿವರ್ತನೆಯೊಂದಿಗೆ ಜನ ಜೀವನ ಮಟ್ಟವನ್ನು ಸುಧಾರಿಸುವದಾಗಿದೆ. ಜೊತೆಗೆ ಸಂಪದ್ಭರಿತ ಹಾಗೂ ವೈವಿಧ್ಯಮಯ ಜೀವನಕ್ಕೆ ಹೊಸ ಹೊಸ ಅವಕಾಶಗಳು ದೊರೆಯುವಂತೆ ಮಾಡುವದಾಗಿದೆ. ಆರೋಗ್ಯ ಕರವಾದ ಆರ್ಥಿಕ ಯೋಜನೆಯನ್ನು ರೂಪಿಸಬೇಕಾದರೆ ಕೆಲವು ನಿಯಮಗಳನ್ನು ಗಮನದಲ್ಲಿಡುವದು ಅತ್ಯವಶ್ಯ.

೧. ಸರಳತೆ

೨. ಮುನ್ನೋಟ

೩. ಸೂಕ್ತ ಉಪಯೋಗ

೪. ಪರಿಸ್ಥಿತಿಗನುಸಾರವಾಗಿ ಬದಲಾವಣೆ ಹೊಂದುವಿಕೆ

೫. ಅನಿರೀಕ್ಷಿತ ಪ್ರಸಂಗಗಳ ಸಂಭಾವ್ಯತೆ ಹಾಗೂ ಅದನ್ನು ಎದುರಿಸುವ ಕ್ರಮಗಳು.

೬. ನಗದು ಸ್ಥಿತಿ

೭. ಮಿತವ್ಯಯ

ಪರಮಪೂಜ್ಯ ಶ್ರೀಗಳವರು ನಿರೂಪಿಸಿದ ಪ್ರತಿಯೊಂದು ಯೋಜನೆಯು ಮೇಲ್ಕಾಣಿಸಿದ ನಿಯಮಗಳಿಗನುಸಾರವಾಗಿ ನಿರ್ಮಿತವಾಗಿರುವದರಿಂದ ಕೈಕೊಂಡ ಎಲ್ಲ ಕೆಲಸಗಳು ನಿರಂತರವಾಗಿ, ನಿಯಮಿತವಾಗಿ ನಡೆಯುತ್ತಿದ್ದು ಮುಂಡರಗಿಯನ್ನು ಮೃಡಗಿರಿ ಯನ್ನಾಗಿಸಿ ಮಾನವ ಜನಾಂಗದ ಉದ್ಧಾರಗೈಯುತ್ತಿದ್ದಾರೆ.

ಶ್ರೀ ಜಗದ್ಗುರುಗಳವರ ಕರ್ತೃತ್ವಶಕ್ತಿ ಅಪಾರವಾದುದು. ಎಲ್ಲ ರೀತಿಯಿಂದಲೂ ಹಿಂದುಳಿದ ಮುಂಡರಗಿ ಭಾಗವು ಇಂದು ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕ ವಾಗಿ ಮತ್ತು ಸಾಹಿತ್ಯಕವಾಗಿ, ಮುನ್ನಡೆ ಸಾಧಿಸಿದ್ದಕ್ಕೆ ಪೂಜ್ಯ ಸನ್ನಿಧಿಯವರ ಯೋಜನೆ ಗಳು ಮತ್ತು ಅವುಗಳನ್ನು ಸಾಧಿಸುವ ಛಲವೇ ಕಾರಣ.

ಪೂಜ್ಯರು ಕೈಕೊಂಡ ಕೆಲವು ಯೋಜನೆಗಳನ್ನು ಕೆಳಗಿನಂತೆ ವಿವರಿಸಬಹುದಾಗಿದೆ.

೧. ಗ್ರಂಥ ಮಾಲೆಯ ಪ್ರಾರಂಭ

೧೯೬೬ರಲ್ಲಿ ಪೂಜ್ಯರು ಉತ್ತರಾಧಿಕಾರಿಗಳಾಗಿರುವಾಗಲೇ ಗ್ರಂಥಮಾಲೆಯನ್ನು ಪ್ರಾರಂಭಿಸಿದರು. ತಮ್ಮ ಪರಮ ಗುರು ಶ್ರೀ ಕುಮಾರಶಿವಯೋಗಿಗಳವರ ಶತಮಾನೋತ್ಸವದ ಸಂದರ್ಭದಲ್ಲಿ ಸಾಹಿತ್ಯ ಪ್ರೇಮಿಗಳಾದ ಚಂದ್ರಶೇಖರ ದೇವರು ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆಯನ್ನು ಮತ್ತು ಶ್ರೀಗುರು ಕುಮಾರೇಶ್ವರ ಗ್ರಂಥಾಲಯವನ್ನು ಪ್ರಾರಂಭಿಸಿದರು.

ಅಜ್ಞಾನವೆಂಬ ಕತ್ತಲೆಯನ್ನು ನಿವಾರಿಸಿ ಜ್ಞಾನವೆಂಬ ಬೆಳಕನ್ನು ಹರಡಿ, ಸಂಸ್ಕೃತಿಯ ಸಿಹಿ ನೀರನ್ನು ಸಾಧಕರಿಗೆ ಧಾರೆಯೆರೆಯುತ್ತಿರುವ ಶ್ರೀಗಳು ಜ್ಞಾನ ಭಂಡಾರವೇ ಸ್ಥಿರವಾದದ್ದು, ವ್ಯಕ್ತಿಯಲ್ಲಡಗಿದ ಸುಪ್ತ ಚೇತನವನ್ನು ಎಚ್ಚರಿಸುವದರ ಜೊತೆಗೆ ನಾಗರಿಕತನ ಉಳಿದು ಬೆಳೆಯುವಂತೆ ಮಾಡಲು ಜನರು ಪೌರರೂ, ವಿವೇಕಿಗಳೂ ಜಾಣರೂ ಆಗಿ ಪರಿಣಾಮಕಾರಿ ಪಾತ್ರ ವಹಿಸಲು ಶಿಕ್ಷಣವೇ ಮೂಲವೆಂದು ಅರಿತ ಪೂಜ್ಯರು, ನಿರಂತರವಾಗಿ ಗ್ರಂಥ ಪ್ರಕಾಶನ ನಡೆಯಬೇಕೆಂಬ ಆಶೆಯಿಂದ ೧೯೬೬ ರಿಂದಲೇ ನಿಧಿ ಕೂಡಿಡುತ್ತಾ ಬಂದಿದ್ದು ಹನಿ ಹನಿ ಕೂಡಿದರೆ ಹಳ್ಳ ತೆನೆ ತೆನೆ ಕೂಡಿದರೆ ರಾಶಿ ಎಂಬಂತೆ ಇಂದು ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳಷ್ಟು ನಿಧಿ ಸಂಗ್ರಹಿಸಿದ್ದು ಕನ್ನಡ ನಾಡಿನ ಪ್ರಸಿದ್ಧ ವಿದ್ವಾಂಸರಿಂದ ವಿದ್ವತ್‌ಪೂರ್ಣವಾಗಿರುವ ಗ್ರಂಥಗಳನ್ನು ಬರೆಸಿ ಪ್ರಕಟ ಮಾಡಿರುವದು ಶ್ಲಾಘನೀಯವಾದದ್ದು. ಈ ಬರಗಾಲ ಪಿಡಿತ ಪ್ರದೇಶದಲ್ಲಿ ಗ್ರಂಥ ಪ್ರಕಾಶನ ಕಾರ್ಯವನ್ನು ವ್ಯವಸ್ಥಿತವಾಗಿ ಯೋಜನಾ ಬದ್ಧವಾಗಿ ನಡೆಯುವಂತೆ ಮಾಡಿದ್ದಾರೆ. ಅದರ ಪ್ರತಿಫಲವಾಗಿ ಇಂದು ನೂರಕ್ಕೂ ಹೆಚ್ಚು ಗ್ರಂಥಗಳು ಈ ಗ್ರಂಥ ಮಾಲೆಯಿಂದ ಪ್ರಕಟಗೊಂಡಿವೆ.

೨. ಕರ್ತೃಗದ್ದುಗೆಯ ನಿತ್ಯರುದ್ರಾಭಿಷೇಕ ಯೋಜನೆ

೧೯೬೭ ರಲ್ಲಿ ನವಮ ಜಗದ್ಗುರುಗಳವರು ಲಿಂಗೈಕ್ಯರಾದ ತರುವಾಯ ಅವರ ಗದ್ದುಗೆಯ ನಿರ್ಮಾಣವನ್ನು ಅನೇಕ ಅಡೆತಡೆಗಳ ಮಧ್ಯದಲ್ಲಿ ತಮ್ಮ ಪರಿಶ್ರಮದಿಂದ ತಪಶ್ಶಕ್ತಿಯಿಂದ ಹೊಡೆದು ಹಾಕಿ ನಿರ್ಮಿಸಿದರು. ಭೂ ಹಿಡುವಳಿಯ ಕಾಯಿದೆಯಿಂದ ಸುಮಾರು ೪೦೦ ಎಕರೆ ಜಮೀನುಗಳನ್ನು ಕಳೆದುಕೊಂಡ ಶ್ರೀಮಠವು ಆರ್ಥಿಕ ತೊಂದರೆಗೊಳಗಾಗಿ ಕರ್ತೃವಿನ ಪೂಜಾದಿ ಧಾರ್ಮಿಕ ಕಾರ್ಯಗಳನ್ನು ನಡೆಸಲು ತೊಂದರೆಯಾಯಿತು. ಬಡತನದ ಬವಣೆಯಿಂದ ನಲಗುತ್ತಿರುವ ಈ ನಾಡಿನ ಭಕ್ತರಿಗೆ ಹೆಚ್ಚು ಭಾರವಾಗದಂತೆ ಯೋಜನೆಯೊಂದನ್ನು ಗೊತ್ತುಪಡಿಸಿದ್ದು. ಉಳಿದ ಕಡೆಗಳಲ್ಲಿ ಮಾಡಿದಂತೆ ಸಾವಿರಾರು ರೂಪಾಯಿಗಳ ರುದ್ರಾಭಿಷೇಕ ನಿಧಿಯನ್ನು ಮಾಡದೆ, ಕೇವಲ ಪೂಜೆಯ ಖರ್ಚಿಗೆ ಬೇಕಾಗುವಷ್ಟು ಹಣ ಮಾತ್ರ ಬರುವಂತೆ ಪೂಜ್ಯ ಶ್ರೀಗಳು ಕೇವಲ ರೂಪಾಯಿ ೨೫೦/- ಸ್ಥಿರ ನಿಧಿ ಗೊತ್ತುಪಡಿಸಿದ್ದಾರೆ. ಸ್ಥಿರ ನಿಧಿಯನ್ನು ಇಟ್ಟ ಭಕ್ತರ ಹೆಸರಿನಲ್ಲಿ ಒಂದು ದಿನ ಶ್ರೀ ಶಿವಯೋಗಿಯ ಗದ್ದುಗೆಯ ರುದ್ರಾಭಿಷೇಕ ಮಾಡಿ ಅವರಿಗೆ

ಪ್ರಸಾದ ತಲುಪುವಂತೆ ಮಾಡಿದ್ದಾರೆ. ಈ ಯೋಜನೆ ಕೈಕೊಂಡಿದ್ದು ಬಹಳ ಸ್ತುತ್ಯ. ಕಾರಣ ಸದ್ಭಕ್ತರ ಸಮಾಗಮವು ಸದಾ ಉಳಿಯಲೆಂದು, ಶ್ರೀಸಾಮಾನ್ಯನಿಗೂ ಪೂಜ್ಯರ ಕೃಪಾಶೀರ್ವಾದ ಹಾಗೂ ಪ್ರಸಾದ ಸಿಗಲೆಂಬ ಹೆಬ್ಬಯಕೆಯಿಂದ ಹಾಕಿದ ಈ ಯೋಜನೆ ಯಲ್ಲಿ ಈಗಾಗಲೇ ೪೦೦ ಕ್ಕಿಂತ ಹೆಚ್ಚು ಜನರು ಕಾಣಿಕೆ ಸಲ್ಲಿಸಿದ್ದು ಗದ್ದುಗೆಯ ಪೂಜೆ, ಧಾರ್ಮಿಕ ಕಾರ್ಯ ನಿತ್ಯ ನಡೆಯುವಂತೆ ಮಾಡಿದ್ದಾರೆ.

೩. ಪ್ರಸಾದ ನಿಲಯಗಳು

ಅನ್ನದಾನಕ್ಕಿಂತ ಇನ್ನು ದಾನವುಂಟೆ? ಅನ್ನದಾನದ ಉದ್ದೇಶ ಜ್ಞಾನ ನೀಡ ಲೆಂಬುದು ಎಂದು ಸರ್ವಜ್ಞ ಕವಿಯು ಹೇಳುವಂತೆ ಶ್ರೀಗಳವರ ಮಠದ ಪರಂಪರೆಯು ಅನ್ನದಾನವನ್ನು ಮಾಡುತ್ತ ಜಗದಲ್ಲಿ ಅನ್ನದಾನಿಯೆಂದು ಹೆಸರು ಗಳಿಸಿದ್ದಾರೆ. ಬರಗಾಲ ಪೀಡಿತ ಪ್ರದೇಶದಲ್ಲಿ ನಿರಂತರವಾಗಿ ಪ್ರಸಾದ ನಿಲಯವನ್ನು ನಡೆಸುವದು ಕಷ್ಟ ಸಾಧ್ಯ. ಪೂಜ್ಯರ ಯೋಜನೆಯ ಫಲವಾಗಿ ಇಂದು ಶ್ರೀಮಠದಿಂದ ನಡೆಯುವ ಎಲ್ಲ ಪ್ರಸಾದ. ನಿಲಯಗಳು ಯಾವುವೆ ಅಡೆತಡೆಗಳಿಲ್ಲದೆ ನಿರಂತರವಾಗಿ ನಿರಾತಂಕವಾಗಿ ನಡೆಯುತ್ತಿವೆ. ಇದಕ್ಕಾಗಿ ಪೂಜ್ಯರು ಶ್ರೀಮಠದ ಸುಮಾರು ೯೫ ಎಕರೆ ಜಮೀನನ್ನು ದಾನವಾಗಿ ಮುಂಡರಗಿಯ ಪ್ರಸಾದ ನಿಲಯಕ್ಕೆ ಕೊಟ್ಟಿದ್ದು ಅದರಲ್ಲಿ ಕೆಲವು ಜಮೀನುಗಳನ್ನು ಮಾರಿ ಬಂದ ನಿಧಿಯನ್ನು ಕೂಡಿಟ್ಟಿದ್ದಾರೆ. ಆ ನಿಧಿಯ ಮೂಲಕ ಅನ್ನದಾನದ ಕಾರ್ಯವನ್ನು ಮುಂಡರಗಿ, ಕೂಕನೂರು, ಬೆಟಗೇರಿ ಗೊಂಡಬಾಳ, ಬೊಮ್ಮನಹಳ್ಳಿ, ವಿಜಾಪೂರ ಮತ್ತು ಗದಗದಲ್ಲಿ ನಡೆಸುತ್ತಿದ್ದಾರೆ. ಪ್ರಸಾದ ನಿಲಯಗಳಿಗಾಗಿ ಸ್ಥಾಪಿತವಾದ ಈ ನಿಧಿಯು ಈಗ ಸುಮಾರು ಎರಡೂವರೆ ಲಕ್ಷಕ್ಕಿಂತ ಹೆಚ್ಚಾಗಿದೆ.

೪. ಶಿವಾನುಭವ ಕಾರ್ಯಕ್ರಮ ಯೋಜನೆ

"ಮರೆದೊಡೆ ಮಾನವ ಅರಿದೊಡೆ ಶರಣ"ಎಂಬ ಉಕ್ತಿಯನ್ನು ಅರಿತ ಶ್ರೀಗಳವರು ಅರಿವಿನ ಜ್ಯೋತಿಯನ್ನು ಮಾನವರಲ್ಲಿ ಬೆಳಗುವದಕ್ಕಾಗಿ ಶರಣ ಮಾರ್ಗದಲ್ಲಿಯ ಅನುಭವ ಅವಶ್ಯವೆಂದು ಅರಿತು ೧೯೭೫ ರಿಂದ ನಿರಂತರವಾಗಿ ಪ್ರತಿ ಶುಕ್ರವಾರ ಶಿವಾನುಭವ ಕಾರ್ಯಕ್ರಮ ಸಾಂಗವಾಗುತ್ತಾ ಬಂದಿದ್ದು, ಈಗ ಸಾವಿರಕ್ಕಿಂತಲೂ ಹೆಚ್ಚು ಶಿವಾನುಭವ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿವೆ. ನಾಡಿನ ಅನುಭವಿ ವಿದ್ವಾಂಸರನ್ನು ಕರೆಯಿಸಿ ಉಪನ್ಯಾಸ ಏರ್ಪಡಿಸುತ್ತಿರುವ ಈ ಕಾರ್ಯಕ್ಕೆ ಯಾವ ಅಡೆತಡೆಗಳು ಬರ ದಿರಲೆಂಬ ಸದಾಶಯದಿಂದ ಶ್ರೀ ಜಗದ್ಗುರು ಅನ್ನದಾನೀಶ್ವರ ಶಿವಾನುಭವ ಸಮಿತಿಯನ್ನು ಸ್ಥಾಪಿಸಿ, ಪ್ರತಿವಾರವೂ ಶಿವಾನುಭವ ನಡೆಸುತ್ತಲೇ ಶಿವಾನುಭವ ನಿಧಿಯನ್ನು ಸ್ಥಾಪಿಸಿದ್ದು ಮಹತ್ವದ ಸಾಧನೆ. ಭಕ್ತಿ ಸೇವೆ ಮಾಡುವವರ ಕೊರತೆಯಲ್ಲೂ ಈಗಾಗಲೇ ಸುಮಾರು ೧೨೦೦೦ ರೂಪಾಯಿಗಳಿಗಿಂತ ಹೆಚ್ಚು ನಿಧಿ ಸಂಗ್ರಹಿಸಿದ್ದು ಈ ಅರಿವಿನ ಕಾರ್ಯ ಯಶಸ್ವಿಯಾಗಿ ನಡೆದಿದೆ.

೫. ಅಕ್ಕನ ಬಳಗದ ಪುನರುಜ್ಜೀವನ

ಶ್ರೀಮಠದಲ್ಲಿ ಸುಮಾರು ವರ್ಷಗಳಿಂದ ಅಕ್ಕನ ಬಳಗ ಸಣ್ಣ ಪ್ರಮಾಣದ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ಕೆಲವು ಸಲ ಹಣಕಾಸಿನ ತೊಂದರೆಯಿಂದಾಗಿ ತನ್ನ ಕಾರ್ಯಕ್ರಮಗಳನ್ನು ನಡೆಸುವಲ್ಲಿ ಅಕ್ಕನ ಬಳಗ ವಿಫಲವಾದದ್ದು ಉಂಟು. ಇದನ್ನು ಗಮನಿಸಿದ ಪೂಜ್ಯ ಶ್ರೀಗಳು ಅಕ್ಕನ ಬಳಗ ತನ್ನ ಕಾರ್ಯವನ್ನು ಯಾವ ತೊಂದರೆಯು ಇಲ್ಲದಂತೆ ನಡೆಸಲು ಬೇಕಾಗುವ ಹಣಕಾಸಿನ ತೊಂದರೆ ನಿವಾರಿಸಿಕೊಳ್ಳಲು ಯೋಜನೆಯೊಂದನ್ನು ಹಾಕಿಕೊಟ್ಟು ಮಾರ್ಗದರ್ಶನ ಮಾಡಿದ್ದಾರೆ. ಇದರ ಫಲವಾಗಿ ಇಂದು ಅಕ್ಕನ ಬಳಗ ಸುಮಾರು ಇಪ್ಪತ್ತೈದು ಸಾವಿರ ರೂಪಾಯಿಗಳ ಸ್ಥಿರ ನಿಧಿ ಹೊಂದಿದ್ದು, ತನ್ನ ಕಾರ್ಯಕ್ರಮಗಳನ್ನು ಬಹು ವಿಜೃಂಭಣೆಯಿಂದ ನಡೆಸುತ್ತಿದೆ.

೬. ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿಯ ಪಾರಿತೋಷಕ ನಿಧಿ ಸ್ಥಾಪನೆ

ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿಯಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಪೋಷಿಸಲು ಹಾಗೂ ಉತ್ತೇಜಿಸಲು ಶಿಕ್ಷಣ ಪ್ರೇಮಿಗಳಾದ ಪೂಜ್ಯ ಶ್ರೀ ಸನ್ನಿಧಿಯವರು ಪಾರಿತೋಷಕ ನಿಧಿಯನ್ನು ಸ್ಥಾಪಿಸಿದ್ದು, ಅನೇಕ ದಾನಿಗಳು, ಶಿಕ್ಷಣ ಪ್ರೇಮಿಗಳು ಸಂತೋಷದಿಂದ ಈ ನಿಧಿಗೆ ತಮ್ಮ ಕಾಣಿಕೆಯನ್ನು ಅರ್ಪಿಸಿದ್ದಾರೆ. ಅವರುಗಳ ವಿವರ ಈ ಕೆಳಗಿನಂತಿದೆ.

ದಾನಿಗಳ ಹೆಸರು	ರೂಪಾಯಿ	ಉದ್ದೇಶ
೧. ಶ್ರೀ ಮಠದಿಂದ	೫೦೦೦-೦೦	ಲಿಂ. ಶ್ರೀ ಮ. ನಿ. ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ ಸ್ಮರಣಾರ್ಥ ವಿದ್ಯಾರ್ಥಿಗಳಿಗೆ ಪಾರಿತೋಷಕ
೨. ಹಿರೇಮಲ್ಲನಕೇರಿ ಶ್ರೀಗಳಿಂದ	೫೦೦೦-೦೦	ಶ್ರೀ ಹಿರೇಮಲ್ಲನಕೇರಿ ಶ್ರೀಗಳವರ ಪಾರಿತೋಷಕ ನಿಧಿ
೩. ಮುಂಡರಗಿಯ ನಾಗರಿಕರಿಂದ	೨೦೦೦-೦೦	ಲಿಂ. ಶ್ರೀಮತಿ ಬಸವಾಂಬೆ ವೀರಭದ್ರಯ್ಯ ರಾಜಗುರು ಸಾ॥ಗುಣಕಿ ಇವರ ಸ್ಮರಣಾರ್ಥ ಪಾರಿತೋಷಕ
೪. ಶ್ರೀ ಸಿ ವ್ಹಿ. ಇಲ್ಲೂರ	೨೫೦೦-೦೦	ದಿವಂಗತ ಶ್ರೀ ವ್ಹಿ. ಎಚ್. ಇಲ್ಲೂರ ಇವರ ಸ್ಮರಣಾರ್ಥ ಪಾರಿತೋಷಕ
೫. ಶ್ರೀ ಎ. ಆರ್. ತಾವರಗೇರಿ	೨೦೦೦-೦೦	ದಿ. ಶ್ರೀ ಆರ್. ಎಚ್. ತಾವರಗೇರಿ ಇವರ ಸ್ಮರಣಾರ್ಥ

	ದಾನಿಗಳ ಹೆಸರು	ರೂಪಾಯಿ	ಉದ್ದೇಶ
೬.	ಶ್ರೀ ಗಿರಿರಾಜ ಭಾವಿಮನಿ	೧೦೦೦-೦೦	ದಿ|| ಶ್ರೀಮತಿ ಬೈಲಮ್ಮ ಶಂಕರಪ್ಪ ಭಾವಿಮನಿ ಇವರ ಸ್ಮರಣಾರ್ಥ
೭.	ಶ್ರೀ ಜ.ಅ.ವಿದ್ಯಾಸಮಿತಿ ಹಾಗೂ ಶ್ರೀ ಕೆ. ಎಸ್. ಪಾಟೀಲ ವಕೀಲರು ಗದಗ	೫೦೦-೦೦	ಎಂ. ಎಸ್. ಡಂಬಳ ಬಾಲಕಿಯರ ಪ್ರೌಢಶಾಲೆ ವಿದ್ಯಾರ್ಥಿನಿಯರಿಗಾಗಿ ಕಿತ್ತೂರ ಚನ್ನಮ್ಮ ಪಾರಿತೋಷಕ
೮.	ಶ್ರೀ ಜ. ಅ. ಹಾಯಸ್ಕೂಲ ಮುಂಡರಗಿ ವಿದ್ಯಾರ್ಥಿಗಳಿಂದ	೨೦೦೦-೦೦	ದಿ|| ಶ್ರೀ ಮದ್ದಾನಯ್ಯ ಸಾವಕಾರ ಸಾ|| ಮುಂಡರಗಿ ಇವರ ಸ್ಮರಣಾರ್ಥ ಪಾರಿತೋಷಕ
೯.	ಶ್ರೀ ಪಿ. ಸಿ. ಕರವೀರಮಠ ಸಾ|| ಹುಬ್ಬಳ್ಳಿ	೧೦೦೦-೦೦	ದಿ|| ಶ್ರೀ ಸಿ. ಎಸ್. ಕರವೀರಮಠ ಇವರ ಸ್ಮರಣಾರ್ಥ ರಾಜ್ಯಶಾಸ್ತ್ರ ವಿಷಯದಲ್ಲಿ ಹೆಚ್ಚಿಗೆ ಅಂಕ ಪಡೆದ ವಿದ್ಯಾರ್ಥಿಗೆ ಪಾರಿತೋಷಕ
೧೦.	ಶ್ರೀಮತಿ ನೀಲಮ್ಮನವರು ಬಿಸನಳ್ಳಿ ಸಾ|| ಹಿರೇವಡ್ಡಟ್ಟಿ	೧೦೦೦-೦೦	ವಿದ್ಯಾಥಿಗಳಿಗೆ ಬಹುಮಾನ
೧೧.	ಶ್ರೀಮತಿ ಪಾರ್ವತೆಮ್ಮ ಕೋಂ ಅಂದಾನಯ್ಯ ಹುಬಳಿಮಠ ಸಾ|| ಗದಗ	೧೦೦೦-೦೦	ಶ್ರೀ ಅನ್ನದಾನಯ್ಯ ಮಹಾಂತಯ್ಯ ಹುಬಳಿಮಠ ಇವರ ಸ್ಮರಣಾರ್ಥ ಪಾರಿತೋಷಕ
೧೨.	ಶ್ರೀ ಬಿ. ಸಿ. ಪುರದ ವಕೀಲರು	೫೦೦-೦೦	ಶ್ರೀಮತಿ ಗಂಗಮ್ಮ ಚನ್ನಬಸಪ್ಪ ಪುರದ ಸಾ|| ಬನ್ನಿಕೊಪ್ಪ ಇವರ ಇವರ ಸ್ಮರಣಾರ್ಥ ಪಾರಿತೋಷಕ

ಒಟ್ಟು ಇಪ್ಪತ್ತೈದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಸ್ಥಿರ ನಿಧಿಯನ್ನಾಗಿ ಬ್ಯಾಂಕಿನಲ್ಲಿಡಲಾಗಿದ್ದು, ಅದರಿಂದ ಬಂದ ಹಣವನ್ನು ವಿದ್ಯಾ ಸಮಿತಿಯ ಹೈಸ್ಕೂಲು, ಕಿರಿಯ ಮಹಾವಿದ್ಯಾಲಯ ಹಿರಿಯ ಮಹಾ ವಿದ್ಯಾಲಯಗಳಲ್ಲಿ ಹೆಚ್ಚು ಅಂಕ ಪಡೆದ ಪ್ರತಿಭಾವಂತರಿಗೆ ಬಹುಮಾನ ನೀಡುತ್ತಾ ಬಂದಿದ್ದಾರೆ. ಪೂಜ್ಯರ ಎಲ್ಲ ಯೋಜನೆಗಳು ಶಾಶ್ವತವಾಗಿದ್ದು ನಿರಂತರವಾಗಿ ನಡೆಯುವಂತೆ ಮಾಡಿದವುಗಳಾಗಿವೆ.

೭. ಬಡವಿದ್ಯಾರ್ಥಿಗಳಿಗೆ ಸಹಾಯಧನ ನಿಧಿ

ಉನ್ನತ ವ್ಯಾಸಂಗಕ್ಕೆ ಹೋಗುವ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಶ್ರೀಮಠದಿಂದ ಆರ್ಥಿಕ ಸಹಾಯ ಮಾಡುತ್ತ ಬಂದಿದ್ದು ಅದಕ್ಕಾಗಿ ರೂ. ೫೦,೦೦೦ ಸ್ಥಿರನಿಧಿಯನ್ನು ಸ್ಥಾಪಿಸಿದ್ದು ಈ ಕಾರ್ಯ ನಿರಂತರವಾಗಿ ನಡೆಯಲೆಂಬ ಹೆಬ್ಬಯಕೆ ಪೂಜ್ಯ ಶ್ರೀಗಳವರದಾಗಿದೆ.

ಜಾತಿ, ಮತ, ಪಂಥಗಳನ್ನು ಪರಿಗಣಿಸದೆ, ಬಯಸಿಬಂದ ಎಲ್ಲ ಜಾತಿಯ ಬಡ ವಿದ್ಯಾರ್ಥಿಗಳಿಗೆ ಹಣಕಾಸಿನ ಸಹಾಯ ಮಾಡುತ್ತಾ ಬಂದಿದ್ದು, ಸಾಕಷ್ಟು ಹಿಂದುಳಿದ ಜನಾಂಗದ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದು ತಮ್ಮ ಬಾಳನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ.

೮. ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸಮಾಲೆಯ ಸ್ಥಾಪನೆ

ಶ್ರೀಗಳವರು ಧರ್ಮತತ್ವ ಪ್ರಚಾರದ ಅಂಗವಾಗಿ ಪ್ರತಿ ವರ್ಷ ಶರಣರ ಸಮಗ್ರ ಜೀವನದರ್ಶನ ಮಾಡಿಸುವ ವಿಚಾರ-ಸಂಕಿರಣವನ್ನು ೧೯೯೦ರಿಂದ ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸಮಾಲೆಯ ಮುಖಾಂತರ ಮಾಡುತ್ತಾ ಬಂದಿದ್ದಾರೆ.

೧೯೯೦ರಲ್ಲಿ ಚಕ್ರವರ್ತಿ ಚೆನ್ನಬಸವಣ್ಣನವರನ್ನು ಕುರಿತು ಸಮಗ್ರವಾಗಿ ಮೂರು ದಿನಗಳ ವಿಚಾರ ಸಂಕಿರಣವನ್ನು ಅಭೂತಪೂರ್ವವಾಗಿ ಸುಕ್ಷೇತ್ರ ಉಳವಿಯಲ್ಲಿ ನಡೆಸಿದರು. ೧೯೯೧ರಲ್ಲಿ ಬನವಾಸಿಯಲ್ಲಿ ಜಂಗಮ-ಪುಂಗವ ಅಲ್ಲಮಪ್ರಭು ದೇವರನ್ನು ಕುರಿತು ಎರಡನೇ ವಿಚಾರ-ಸಂಕಿರಣ, ೧೯೯೨ರಲ್ಲಿ ಉಡತಡಿಯಲ್ಲಿ ವೈರಾಗ್ಯನಿಧಿ ಅಕ್ಕಮಹಾದೇವಿಯನ್ನು ಕುರಿತು ವಿಚಾರ ಸಂಕಿರಣ ೧೯೯೩ರಲ್ಲಿ ನಂದಿಕೇಶ್ವರದಲ್ಲಿ ಕಾರಣಿಕ ಯುಗಪುರುಷ ಹಾನಗಲ್ ಶ್ರೀ ಕುಮಾರ ಶಿವಯೋಗಿಗಳನ್ನು ಕುರಿತು ಹಾಗೂ ಸೊಲ್ಲಾಪುರದಲ್ಲಿ ಶಿವಯೋಗಿ ಸಿದ್ಧರಾಮ ದೇವರನ್ನು ಕುರಿತು ಎರಡು ವಿಚಾರ ಸಂಕಿರಣಗಳನ್ನು ನಡೆಸಿದ್ದಾರೆ. ಇದರ ಜೊತೆಗೆ ಪ್ರತಿವಿಚಾರ ಸಂಕಿರಣ ದಲ್ಲಿ ವಿದ್ವಾಂಸರು ಮಂಡಿಸಿದ ಉಪನ್ಯಾಸಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಿ ಶರಣರ ಸಾರ ಸಂದೇಶಗಳನ್ನು ಸರ್ವರಿಗೂ ಹಂಚುತ್ತ ಬಂದಿರುವರು. ಈ ಕಾರ್ಯ ನಿರಂತರ ವಾಗಿ ನಡೆಯುವಂತೆ ಮಾಡಲು ಪೂಜ್ಯ ಶ್ರೀಗಳು ನಿಧಿಯೊಂದನ್ನು ಸ್ಥಾಪಿಸಿದ್ದು ಭಕ್ತರು ಪೂಜ್ಯರಿಗೆ ಕೊಡಮಾಡಿದ ಕಾಣಿಕೆಗಳನ್ನು ಈ ನಿಧಿಗೆ ನೀಡುತ್ತಿದ್ದು ಈಗಾಗಲೇ ಒಂದು ಲಕ್ಷಕ್ಕಿಂತ ಹೆಚ್ಚು ನಿಧಿ ಕೂಡಿದೆ. ಪೂಜ್ಯರ ದೂರದೃಷ್ಟಿಯ ಈ ಯೋಜನೆ ನಿಜವಾಗಲೂ ಎಂಥವರನ್ನೂ ಮೋಡಿ ಮಾಡದೇ ಇರದು.

೯. ಯಾತ್ರಾ ಮಹೋತ್ಸವ ನಿಧಿ ಸ್ಥಾಪನೆ

ಬರಗಾಲದ ತವರುಮನೆಯಾದ ಈ ಪ್ರದೇಶದಲ್ಲಿ ಪೂಜ್ಯ ಶ್ರೀ ಶಿವಯೋಗಿಗಳ ರಥೋತ್ಸವವು ಸಾಕಷ್ಟು ತೊಂದರೆಗಳ ಮಧ್ಯದಲ್ಲಿ ನಡೆಯುತ್ತಿತ್ತು. ಕೆಲವು ಸಲ ಬರಗಾಲದ ಪರಿಸ್ಥಿತಿಯಿಂದ ಈ ಕಾರ್ಯಕ್ರಮ ಸಂಕ್ಷಿಪ್ತವಾಗಿ ನಡೆದದ್ದುಂಟು. ಪೂಜ್ಯಶ್ರೀಗಳು ಅಧಿಕಾರಕ್ಕೆ ಬಂದನಂತರ ಶಿವಯೋಗಿಗಳ ಯಾತ್ರಾ ಮಹೋತ್ಸವ ನಿರಂತರವಾಗಿ ನಡೆಯುವಂತೆ ಯೋಜನೆಯೊಂದನ್ನು ಕೈಕೊಂಡಿದ್ದು ಈಗಾಗಲೇ ರೂ. ೫೦,೦೦೦/-ನಿಧಿ ಕೂಡಿದ್ದು ಇದನ್ನು ಯಾತ್ರಾ ಮಹೋತ್ಸವಕ್ಕಾಗಿಯೇ ಕಾಯ್ದಿರಿಸಲಾಗಿದೆ. ಭಕ್ತರಿಗೆ ಭಾರವಾಗದಂತೆ ಅವರ ಬಯಕೆಗಳ ಈಡೇರಿಕೆಗಾಗಿ ಈ ಕಾರ್ಯಕ್ರಮ ನಡೆಸುತ್ತಿದ್ದಾರೆ.

೧೦. ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾಸಮಿತಿಯ ನೌಕರರ ಕಲ್ಯಾಣ ನಿಧಿ

ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾಸಮಿತಿಯಲ್ಲಿ ದುಡಿಯುತ್ತಿರುವ ನೌಕರರ ಕಲ್ಯಾಣಕ್ಕಾಗಿ, ಮಕ್ಕಳ ಶಿಕ್ಷಣ, ಅನಾರೋಗ್ಯದ ಉಪಚಾರಕ್ಕಾಗಿ ಯೋಜನೆಯೊಂದನ್ನು ಪೂಜ್ಯರು ಹಾಕಿಕೊಂಡಿದ್ದು ಒಂದು ಲಕ್ಷ ಹಣವನ್ನು ಸ್ಥಿರನಿಧಿಯನ್ನಾಗಿಟ್ಟಿದ್ದು ತೊಂದರೆಯೊಳಗಿರುವ ಸಂಸ್ಥೆಯ ಎಲ್ಲ ನೌಕರರಿಗೆ ಧನಸಹಾಯ ಮಾಡಿ ನೌಕರರ ಅಭಿವೃದ್ಧಿ ಬಯಸುವ ಪೂಜ್ಯರ ಈ ಯೋಜನೆ ಶ್ಲಾಘನೀಯವಾಗಿದೆ.

೧೧. ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾಸಮಿತಿ ಶಿಕ್ಷಣ ನಿಧಿ

ಪೂಜ್ಯರು ಹಾಕಿದ ಯೋಜನೆಗಳ ಫಲವಾಗಿ ಇಂದು ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾಸಂಸ್ಥೆಯು ಹೆಮ್ಮರವಾಗಿ ಬೆಳೆದಿದೆ. ನಾಲ್ಕು ಲಕ್ಷಕ್ಕಿಂತಲೂ ಹೆಚ್ಚು ನಿಧಿಯನ್ನು ಸ್ಥಿರ ಶಿಕ್ಷಣ ನಿಧಿಯನ್ನಾಗಿ ಇಟ್ಟದ್ದು ಇದರಿಂದ ಬಂದ ಹಣದಲ್ಲಿ ಅನುದಾನ ರಹಿತ ಶಾಲೆಗಳಿಗೆ ಬೇಕಾಗುವ ಎಲ್ಲ ಸಲಕರಣೆಗಳನ್ನು ಕೊಳ್ಳಲು ಸಹಾಯ ಮಾಡುತ್ತಿದ್ದಾರೆ. ಎಲ್ಲ ಶಿಕ್ಷಣ ಸಂಸ್ಥೆಗಳು ಸ್ವತಂತ್ರ ಕಟ್ಟಡಗಳನ್ನು ಹೊಂದಿದ್ದು ಸುಸಜ್ಜಿತವಾಗಿವೆ. ಸಮಾಜಕ್ಕೆ ಬೇಕಾಗುವ ಶಿಕ್ಷಣವನ್ನು ವ್ಯವಸ್ಥಿತವಾಗಿ ಯಾವ ತೊಂದರೆಯೂ ಇಲ್ಲದೆ ಇಂದು ಈ ಶಿಕ್ಷಣ ಸಂಸ್ಥೆಗಳು ನೀಡುತ್ತಿವೆ.

೧೨. ಸಿಂಗಟಾಲೂರ ಶಿವಾನುಭವ ಕಲ್ಯಾಣಮಂಟಪ, ಸಾಮೂಹಿಕ ವಿವಾಹಯೋಜನೆ, ಮತ್ತು ಮುಂಡರಗಿಯಲ್ಲಿ ಕಲ್ಯಾಣಮಂಟಪದ ಕಟ್ಟಡ

ಪೂಜ್ಯ ಶ್ರೀಗಳು ಸಮಾಜದ ಕಲ್ಯಾಣಕ್ಕಾಗಿ ದೀನದಲಿತರ ಅಭಿವೃದ್ಧಿಗಾಗಿ, ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದು ಅವುಗಳಲ್ಲಿ ಸಿಂಗಟಾಲೂರಿನಲ್ಲಿ ಕಲ್ಯಾಣಮಂಟಪ ಕಟ್ಟಿಸಿದ್ದು, ೧೯೮೨ರ ವೇಳೆಯಲ್ಲಿಯೇ ಎರಡು ಲಕ್ಷಕ್ಕಿಂತ ಹೆಚ್ಚು ಹಣವನ್ನು ವ್ಯಯ ಮಾಡಿ ಹಗಲಿರುಳೆನ್ನದೇ ಪ್ರಯತ್ನಪಟ್ಟು ಗುಡ್ಡವನ್ನು ಕೊರೆದು ಸಮಮಾಡಿ, ಸಮಾಜದ ಜನರ ಕಲ್ಯಾಣಕ್ಕಾಗಿ ಈ ಕಲ್ಯಾಣಮಂಟಪವನ್ನು ಕಟ್ಟಿಸಿದರು. ಇಂದು ಸರಕಾರಿ ಹೈಸ್ಕೂಲು ತನ್ನ ವರ್ಗಗಳನ್ನು ಇದರಲ್ಲಿ ನಡೆಸುತ್ತಿದ್ದು ಆಗಾಗ ವಿವಾಹಗಳು ಜರುಗುತ್ತಲಿವೆ.

ಬಡಜನರ ಕಲ್ಯಾಣಕ್ಕಾಗಿ ಸಾಮೂಹಿಕ ವಿವಾಹ ಯೋಜನೆಯೊಂದನ್ನು ಹಾಕಿಕೊಂಡದ್ದು ಪ್ರತಿ ವರ್ಷ ಯಾತ್ರಾ ಮಹೋತ್ಸವದ ಸಂದರ್ಭದಲ್ಲಿ ಹಾಗೂ ಪೂಜ್ಯರ ರಜತಮಹೋತ್ಸವದ ಕಾರ್ಯಕ್ರಮಗಳಲ್ಲಿ ನೂರಾರು ಬಡಜನರ ವಿವಾಹ ನೆರವೇರಿಸಿ ಆಶೀರ್ವದಿಸಿದ್ದಾರೆ.

ಮುಂಡರಗಿ ನಗರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಮತ್ತು ವಿವಾಹ ಸಮಾರಂಭಗಳಿಗಾಗಿ ವ್ಯವಸ್ಥಿತವಾದ ಸ್ಥಳವಿಲ್ಲದ್ದನ್ನು ಅರಿತ ಶ್ರೀಗಳು ಸುಮಾರು

೧೫ ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಕಲ್ಯಾಣಮಂಟಪವನ್ನು ಕಟ್ಟಿಸಲು ಪ್ರಾರಂಭಿಸಿದ್ದು ಕಟ್ಟಡ ಭರದಿಂದ ಸಾಗಿದೆ. ಬರಗಾಲ ಪ್ರದೇಶವಾದ ಇಲ್ಲಿ ಇಂಥ ಕಾರ್ಯಮಾಡುವದು ಪವಾಡವೇ ಸರಿ. ಪೂಜ್ಯರ ಯೋಜನೆ ಹಾಗೂ ತಪಶ್ಶಕ್ತಿಯಿಂದ ಕಟ್ಟಡ ಮುಕ್ತಾಯದ ಹಂತಕ್ಕೆ ಬಂದಿದ್ದು, ಭಕ್ತರ ಉದಾರ ಸಹಾಯ ಸಹಕಾರದ ಅವಶ್ಯಕತೆ ಇದೆ.

೧೩. ಮಾತೃ ಸಂಸ್ಥೆ ಶಿವಯೋಗ ಮಂದಿರದಲ್ಲಿ ಶ್ರೀ ಕುಮಾರೇಶ್ವರ ಸಂಸ್ಕೃತ ವಿದ್ಯಾಪೀಠಕ್ಕೆ ವಿದ್ಯಾನಿಧಿ

ತಮಗೆ ವಿದ್ಯೆ ನೀಡಿ ತಮ್ಮ ಸರ್ವತೋಮುಖ ಪ್ರಗತಿಗೆ ಆಶ್ರಯಕೊಟ್ಟ ಮಾತೃ ಸಂಸ್ಥೆಯಾದ ಶಿವಯೋಗ ಮಂದಿರದಲ್ಲಿ ಸ್ಥಾಪಿತವಾಗಿರುವ ಶ್ರೀ ಕುಮಾರೇಶ್ವರ ಸಂಸ್ಕೃತ ವಿದ್ಯಾಪೀಠದ ಬೆಳವಣಿಗೆಗೆ ಪೂಜ್ಯ ಶ್ರೀಗಳು ಯೋಜನೆಯೊಂದನ್ನು ಕೈಕೊಂಡಿದ್ದು ಅದಕ್ಕಾಗಿ ಈಗಾಗಲೇ ಒಂದೂವರೆ ಲಕ್ಷ ರೂಪಾಯಿಗಳ ನಿಧಿ ಕೂಡಿಸಿದ್ದಾರೆ. ಸಂಸ್ಕೃತ ಅಧ್ಯಯನ ನಿರಂತರವಾಗಿ ಹೆಚ್ಚಿನ ಪ್ರಮಾಣದಲ್ಲಿ ನಡೆಯಲೆಂಬ ಹೆಬ್ಬಯಕೆಯಿಂದ ಈ ಯೋಜನೆಯನ್ನು ಶ್ರೀಗಳು ನಿರೂಪಿಸಿದ್ದಾರೆ.

೧೪. ಬಡಜನರ ವಸತಿ ಸೌಕರ್ಯಕ್ಕೆ ಸಹಾಯ

ಮುಂಡರಗಿ ನಗರ ಮಧ್ಯದಲ್ಲಿರುವ ವಾಣಿಜ್ಯ ಕ್ಷೇತ್ರಕ್ಕೆ ಅತ್ಯುಪಯುಕ್ತ ಸ್ಥಳವನ್ನು ಪೂಜ್ಯ ಶ್ರೀಗಳು ಅದರಲ್ಲಿ ವಾಸವಾಗಿರುವ ಅತೀ ಕಡುಬಡವರಿಗೆ ಸೋವಿ ದರದಲ್ಲಿ ಬಿಟ್ಟುಕೊಟ್ಟು ದೀನದಲಿತರ ಉದ್ಧಾರಕ್ಕೆ ಕಾರಣರಾಗಿದ್ದಾರೆ. ಪ್ರತಿ ಫೂಟಿಗೆ ನೂರು ರೂಪಾಯಿಗಳಿಗಿಂತಲೂ ಹೆಚ್ಚಿನ ಕಿಮ್ಮತ್ತಿನ ಎರಡೂವರೆ ಎಕರೆ ಜಮೀನನ್ನು ಕೇವಲ ಒಂದು ರೂಪಾಯಿ ಇಪ್ಪತ್ತು ಪೈಸೆಗೆ ಫೂಟಿನಂತೆ ಕೊಟ್ಟಿದ್ದಾರೆ. ಪೂಜ್ಯ ಶ್ರೀಗಳು ಭಕ್ತರ ಮೇಲೆ ಇಟ್ಟ ಪ್ರೀತಿ ವಿಶ್ವಾಸಗಳ ದ್ಯೋತಕವಿದಾಗಿದೆ. ಕೊಡುವಾತ ಭಕ್ತ, ಪಡೆಯುವಾತ ಭಕ್ತ. ಸಮಾಜದ ಉದ್ಧಾರವೇ ನಮ್ಮ ಕರ್ತವ್ಯವೆನ್ನುವ ನೀತಿ ಪಾಲಿಸುತ್ತಿರುವದಕ್ಕೆ ಇದೊಂದು ನಿದರ್ಶನ.

೧೫. ಶ್ರೀಮಠದಿಂದ ವೈದ್ಯಕೀಯ ವ್ಯವಸ್ಥೆ

ಬಡಜನರ ಹಿತಕ್ಕಾಗಿ ಉಚಿತ ವೈದ್ಯಕೀಯ ಸೌಲಭ್ಯದ ವ್ಯವಸ್ಥೆ ಮಾಡಲಾಗಿದೆ. ಇಂದು ಶ್ರೀಮಠದಲ್ಲಿ ಆಯುರ್ವೇದಿಕ್ ಆಸ್ಪತ್ರೆ ಸ್ಥಾಪಿತವಾಗಿದ್ದು, ಬಡಜನರಿಗೆ ಉಚಿತವಾಗಿ ವೈದ್ಯಕೀಯ ಸೌಲಭ್ಯ ಒದಗಿಸಲಾಗುತ್ತದೆ. ಇದಕ್ಕಾಗಿ ಪೂಜ್ಯಶ್ರೀಗಳು ೬೦,೦೦೦ ರೂಪಾಯಿಗಳ ಸ್ಥಿರ ನಿಧಿಯನ್ನು ಸ್ಥಾಪಿಸಿದ್ದಾರೆ. ಶ್ರೀಗಳು ಸಮಾಜದ ಎಲ್ಲ ವರ್ಗದ ಜನರಿಗೆ ಆಪತ್ಕಾಲದಲ್ಲಿ ಉದಾರ ದಾನವನ್ನು ಮಾಡಿ ಹರಸಿ ಹಾರೈಸುವ ದಿವ್ಯಕಾರ್ಯವನ್ನು ಶ್ರೀಗಳು ಮಾಡುತ್ತಿದ್ದಾರೆ.

೧೬. ನಿರುದ್ಯೋಗಿ ಯುವಕರಿಗೆ ಸಹಾಯ ಯೋಜನೆ

ನಿರುದ್ಯೋಗಿ ಯುವಜನಾಂಗ ದೇಶದ ಪ್ರಗತಿಗೆ ಕಂಟಕಪ್ರಾಯರಾಗುತ್ತಿರುವದನ್ನು ಮನಗಂಡ ಶ್ರೀಗಳು ಯುವಶಕ್ತಿಯನ್ನು ದೇಶದ ಆರ್ಥಿಕ ಪ್ರಗತಿಗೆ ಉಪಯೋಗಿಸಿ ಕೊಳ್ಳಲು ಯೋಜನೆಯೊಂದನ್ನು ಮಾಡಿದ್ದು, ನಿರುದ್ಯೋಗಿ ಯುವಜನಾಂಗಕ್ಕೆ ಆರ್ಥಿಕ ಸಹಾಯ ನೀಡಿ ಸ್ವಯಂ ಉದ್ಯೋಗಿಗಳಾಗಿ ಸ್ವಾವಲಂಬನಾ ಜೀವನ ನಡೆಸಲು ಸಹಕರಿಸಿ ಮಾರ್ಗದರ್ಶನ ನೀಡುತ್ತಿದ್ದಾರೆ. ಈಗಾಗಲೇ ಬಹಳಷ್ಟು ಯುವಕರು ಇದರ ಲಾಭ ಪಡೆದಿದ್ದಾರೆ.

೧೭. ಶ್ರೀಮಠ ಹಾಗೂ ಅದರ ಶಾಖಾಮಠಗಳ ಜೀರ್ಣೋದ್ಧಾರ ಯೋಜನೆ

ಪೂಜ್ಯ ಶ್ರೀಗಳು ಮಠದ ಅಧಿಕಾರ ವಹಿಸಿಕೊಂಡ ನಂತರ ಶ್ರೀ ಶಿವಯೋಗಿಗಳ ಗದ್ದುಗೆ ನಿರ್ಮಾಣ, ಮಹಾಮಠದ ಗೋಪುರ ನಿರ್ಮಾಣ, ಶಿವಯೋಗ ನಿಲಯದ ನಿರ್ಮಾಣ, ಮಹಾಮಠದ ಮಹಾದ್ವಾರದ ನಿರ್ಮಾಣ, ಕುಕನೂರು, ಬೆಟಗೇರಿ, ಗೊಂಡಬಾಳ, ಬೆಣಕಲ್ಲು, ಹಿರೇವಡ್ಡಟ್ಟಿ, ಸೊರಟೂರು, ಮದಗನೂರು, ಮರಿಯಮ್ಮನಹಳ್ಳಿ ವೆಂಕಟಾಪೂರ, ಲಕ್ಕುಂಡಿ, ಸೋಮಾಪೂರ, ರಾಜೂರ, ಗದಗ ಹೀಗೆ ಇಲ್ಲಿಯವರೆಗೆ ಸುಮಾರು ಕೋಟಿರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ವ್ಯಯಮಾಡಿ, ಜೀರ್ಣೋದ್ಧಾರ ಕಾರ್ಯವನ್ನು ಮಾಡಿದ್ದಾರೆ. ಪೂಜ್ಯರು ನಿರಂತರವಾಗಿ ಶ್ರೀಮಠದ ಕಾರ್ಯಪ್ರಗತಿಯಲ್ಲಿ ನಡೆಯುವಂತೆ ಮಾಡಲು ಹಾಕಿಕೊಂಡ ಯೋಜನೆಗಳು ಹಲವು ಹನ್ನೆರಡು. ಭಕ್ತರ ಮನವೊಲಿಸಿ ಹಿಡಿದ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದ ಕೀರ್ತಿ ಪೂಜ್ಯರಿಗಿದೆ.

ಪ್ರತಿಯೊಂದು ಕಟ್ಟಡದ ನಿರ್ಮಾಣದಲ್ಲಿ ಪೂಜ್ಯರು ತಮ್ಮದೇ ಆದ ಯೋಜನೆಯನ್ನು ಸಿದ್ಧಪಡಿಸಿ ಅದರ ಯಶಸ್ಸಿಗಾಗಿ ಪ್ರಯತ್ನ ಮಾಡುತ್ತಿರುವ ಛಲದಂಕಮಲ್ಲರಾದ ಪೂಜ್ಯರು, ಇಂದಿನ ಯುವ ಪೀಳಿಗೆಗೆ ಆದರ್ಶಪ್ರಾಯರು ಮತ್ತು ಉತ್ತಮ ಮಾರ್ಗದರ್ಶಕರು.

ಸತ್ಯಶರಣರ ನುಡಿ ಸುಳ್ಳಾಗದು

ಇದೊಂದು ಅನುಭವಿಸಿದ ಸತ್ಯಸಂಗತಿ

—**ಶ್ರೀಮತಿ ಎಚ್. ಎಸ್. ಅಕ್ಕಮಹಾದೇವಿ,** ಬೆಲ್ಲದ

ಶ್ರೀ ಜಗದ್ಗುರು ಅನ್ನದಾನೀಶ್ವರರ ಪರಂಪರೆ ಭಿನ್ನವಾಗಿದೆ. ಎಲ್ಲ ಶ್ರೀಗಳು ಬಲ್ಲಿದರಾಗಿ ಶಿವಯೋಗಿಗಳೆನಿಸಿದ್ದಾರೆ. ಎಂಟನೆ ಪೀಠಾಧಿಪತಿಗಳಾದ ಸೊರಟೂರ ಅಜ್ಜನವರಂತೂ ಮೃಡಗಿರಿಯ ಬೆಳವಣಿಗೆಗೆ ಕಾರಣಪುರುಷರು. ಕನ್ನಡ ಶಾಲೆ, ಸರಕಾರಿ ದವಾಖಾನೆ, ನಗರಸಭೆ, ಪೋಲೀಸರ ಮನೆಗಳಿಗೆ ಸ್ಥಳದಾನ ಮಾಡಿದ ಮಹಾಂತರು. ಒಂಭತ್ತನೆಯ ಪೀಠಾಧಿಪತಿಗಳಾದ ವೆಂಕಟಾಪೂರ ಅಜ್ಜನವರು, ಇವರಿಂದ ಮುಂಡರಗಿಯಲ್ಲಿ ಶಿಕ್ಷಣ ಪ್ರಸಾರವಾಯಿತು. ಹೈಸ್ಕೂಲ ಬೋರ್ಡಿಂಗಗಳು ಪ್ರಾರಂಭವಾದವು. ಈ ಮಹಾತ್ಮರಿಂದ ನಮ್ಮ ಮನೆತನವು ಉದ್ಧಾರವಾಯಿತು.

ಇಂದಿನ ಹತ್ತನೆಯ ಪೀಠದ ಮಹಾಸ್ವಾಮಿಗಳಿಂದಂತೂ ಮುಂಡರಗಿಯ ಇತಿಹಾಸವೇ ಬದಲಾಗಿದೆಯೆಂದರೆ ತಪ್ಪಿಲ್ಲ. ಮಹಾಪೀಠವನ್ನು ನವೀಕರಿಸುವಲ್ಲಿ ನನ್ನಪ್ಪನ ಶ್ರಮ ಹೇಳತೀರದು. ಗುರುಗಳ ಗದ್ದುಗೆ ಕಟ್ಟಿಸಿ ಮೇಲೆ ಗೋಪುರಕ್ಕೆ ಬಂಗಾರದ ಕಳಸವನ್ನಿಟ್ಟ ಮಹಾಮಹಿಮರನ್ನು ಅದೆಷ್ಟು ನೆನೆದರೂ ಸಾಲದು, ಕೇವಲ ಮಠವನ್ನಷ್ಟೇ ಕಟ್ಟಲಿಲ್ಲ. ಬಡಮಕ್ಕಳಿಗೆ ಅನ್ನದಾನ ಮಾಡಿ ವಿದ್ಯಾದಾನ ಮಾಡುತ್ತಿರುವುದು ಹೆಮ್ಮೆಯ ಮಾತು. ನನ್ನ ಹೆತ್ತ ತಂದೆ ಹಾಗೂ ಎನ್ನ ಅಣ್ಣನಿಗೆ ಅಪ್ಪಣೆ ಮಾಡಿ ತಂದೆಯವರ ಹೆಸರಿನ ಮಹಾವಿದ್ಯಾಲಯ ಸ್ಥಾಪಿಸಿದವರು. ಇಷ್ಟೇ ಅಲ್ಲದೆ ಧಾರವಾಡ ಜಿಲ್ಲೆಯಲ್ಲಿ ಶಿಕ್ಷಣವನ್ನು ಪ್ರಸಾರ ಮಾಡಿದ್ದಲ್ಲದೆ ರಾಯಚೂರ, ಕಾರವಾರ, ವಿಜಾಪೂರ ಜಿಲ್ಲೆಗಳಲ್ಲಿಯೂ ವಿದ್ಯಾಮಂದಿರಗಳನ್ನು ಕಟ್ಟಿದ ಶ್ರೇಯಸ್ಸು ಹತ್ತನೆಯ ಪೀಠದ ದೊರೆಗಳದು. ಅದರ ಜೊತೆ ಜೊತೆಯಲ್ಲಿ ಸ್ವತಃ ಕವಿಗಳಾಗಿ ಸಾಹಿತಿಗಳಾಗಿ ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿ ಪ್ರಕಟ ಮಾಡಿರುವುದು ಮಹಾಸಾಹಸ, ಶಿಕ್ಷಣ ಪ್ರೇಮಿಗಳಾಗಿರುವಂತೆ ಭಕ್ತಪ್ರೇಮಿಗಳೂ ಆಗಿದ್ದಾರೆ. ಈಗ ಆರು ವರುಷದ ಪ್ರಸಂಗ. ಮಗಳು ಮಹಾದೇವಿ ಅನುಭವಿಸಿದ ಇದೊಂದು ಸತ್ಯ ಸಂಗತಿಯಾದ ನನ್ನಪ್ಪನ ಮಹಿಮೆಯನ್ನು ಹೇಳಲೇಬೇಕು.

ಮಗಳ ಭಾಗ್ಯವನ್ನು ಬೆಳಗಿಸಿದ ಘಟನೆ. ಎನ್ನ ಪತಿಗೆ ಬಿ. ಪಿ. ಮಧುಮೋಹ, ಹೃದಯರೋಗದ ತೊಂದರೆಯಾಗಿತ್ತು. ಹುಬ್ಬಳ್ಳಿಯಲ್ಲಿ ಹಾರ್ಟ ಸ್ಪೆಶಲಿಷ್ಟ

ಡಾ|| ಪಾಟೀಲರಲ್ಲಿ ಆರು ತಿಂಗಳ ಕಾಲ ತೋರಿಸಲಾಗಿ ಕೊನೆಗೆ ಅವರು ಹಾರ್ಟ್ ಬಹಳ ವೀಕ ಇದೆ. ಮದ್ರಾಸಿಗೆ ಹೋಗಿ ಟೆಸ್ಟ ಮಾಡಿಸಿರಿ ಎಂದು ಹೇಳಿ ಮದ್ರಾಸಿನಲ್ಲಿರುವ ಡಾಕ್ಟರರ ಅಡ್ರೆಸ್ ಕೊಟ್ಟು ತಾವು ನೋಡಿದ ಎಲ್ಲ ರಿಪೋರ್ಟಗಳನ್ನೆಲ್ಲಾ ಕೊಟ್ಟು ಇವರಿಗೆ (ನನ್ನ ಪತಿಗೆ) ಬಹಳ ತ್ರಾಸ ಇದೆ. ತಾವು ಮದ್ರಾಸಿಗೆ ಹೋಗಿ ಟೆಸ್ಟ ಮಾಡಿಸಿ ತಡಮಾಡಬೇಡಿರೆಂದು ಹೇಳಿ ಅವಸರದಿ ಬಸ್ಸು ಹತ್ತಬಾರದು, ರಿಕ್ಷಾದೊಳು ಹೋಗ ಬಾರದು. ಸಂತೋಷದ ಹಾಗೂ ಗಾಬರಿ ವಿಷಯಗಳನ್ನು ತಿಳಿಸಬಾರದು. ಎಂದು ಹೇಳಿ ಕಳಿ ದರು. ಎನಗಂತೂ ಏನೂ ತಿಳಿಯದಾಯಿತು. ಹುಬ್ಬಳ್ಳಿಯಿಂದ ಬಂದ ಮರುದಿನ ಎಂದಿನಂತೆ ಬೆಳಿಗ್ಗೆ ಶ್ರೀಮಠಕ್ಕೆ ಹೋದಾಗ ಮಹಾತ್ಮರು ಪೂಜಾ ತೀರಿಸಿಕೊಂಡು ಹೊರಗೆ ದಯಮಾಡಿಸಲು ಮಗಳಿಗೆ ಮಹಾಪಾದ ದರ್ಶನವಾಯಿತು. ನಮಸ್ಕರಿಸಲು– 'ಆರಾಮ ಇದ್ದೀರಾ!' ಎಂದು ಶ್ರೀವಾಣಿ ನುಡಿಯಲು ನನಗೆ ದುಃಖದಿಂದ ಮಾತು ಮೌನವಾಯಿತು 'ಯಾಕಮ್ಮಾ ಕಣ್ಣೀರು' ಎಂದು ನನ್ನಪ್ಪನ ಅಂತಃಕರುಣೆಯ ನುಡಿಕೇಳಿ– ನಂತರ ಇವರಿಗೆ ಹಾರ್ಟಿನ ಸಂಬಂಧವಾಗಿ ಮದ್ರಾಸಿಗೆ ಹೋಗಿ ಟೆಸ್ಟ ಮಾಡಿಸಲು ಹುಬ್ಬಳ್ಳಿ ಡಾಕ್ಟರ ಹೇಳಿದ್ದಾರೆ. ಎನ್ನಲು ಮಹಾತ್ಮರು ಕೃಪಾದೃಷ್ಟಿಯಿಂದದಿ– ಮದ್ರಾಸಿಗೆ ಹೋಗುವದು ಬೇಡಮ್ಮಾ, ಇಲ್ಲೆ ಆರಾಮ ಆಗ್ತೈತಿ, ಬೆಳಿಗ್ಗೆ ದಂಪತಿಗಳಿಬ್ಬರೂ ಪೂಜಾಕ ಬರ್ರಿ! ಎಂದಪ್ಪಣೆ ಮಾಡಿದರು.

ಶ್ರೀ ಮಠಕ್ಕೆ ಹೋಗಲು ಸಹ ಐದಾರು ಸಲ ನಿಂದ್ರುವ ಪರಿಸ್ಥಿತಿ ಇವರಿಗಿತ್ತು. ಶ್ರೀ ಮಠಕ್ಕೆ ಹೋಗಿಬಂದರೆ ಮದ್ರಾಸನ್ನು ಕಂಡು ಬಂದಷ್ಟೆ ತ್ರಾಸಾಗುತ್ತಿತ್ತು. ಅಷ್ಟೊಂದು ತ್ರಾಸಿರುವುದು ಕಂಡು ಹುಬ್ಬಳ್ಳಿ ಡಾಕ್ಟರ ಮದ್ರಾಸಿಗೆ ಹೋಗಲು ತಡಮಾಡಬೇಡಿರೆಂದು ಹೇಳಿದವರು ಲೌಕಿಕ ವೈದ್ಯರು ಇಲ್ಲಿ ನೋಡಿದರೆ ನನ್ನ ಪ್ರಭು ಮಹಾಮಹಿಮರು, ಮದ್ರಾಸಿಗೆ ಹೋಗುವದು ಬೇಡಾ ಎಂದಪ್ಪಣೆ ಇತ್ತರು. ಇವರು ಭವರೋಗ ವೈದ್ಯರು ಶ್ರೀಸದ್ಗುರುವಿನ ಅಪ್ಪಣೆ ಶಿರದಲ್ಲಿ ಹೊತ್ತು ಮಹಾಪಾದವನ್ನು ನಂಬಿ ಮರುದಿನ ಬೆಳಿಗ್ಗೆ ಪತಿಯೊಡನೆ ಶ್ರೀಮಠಕ್ಕೆ ಬಂದು ಅಪ್ಪನ ದರ್ಶನ ಪಡೆದು ದಂಪತಿಗಳಿಬ್ಬರೂ ರುದ್ರಾಭಿಷೇಕ ಮಾಡಿಸಿಕೊಂಡು ನಂತರ ಮಹಾತ್ಮರು ಪಾದೋದಕ ಮತ್ತು ಭಸ್ಮವನ್ನು ಕೃಪಾದೃಷ್ಟಿಯಿಂದ ಆಶೀರ್ವದಿಸಿ ಅಂತಃಕರುಣೆಯ ಪ್ರಸಾದವನ್ನು ಕರುಣಿಸಿದರು.

ಅಂದಿನಿಂದ ಮೂರು ತಿಂಗಳವರೆಗೂ ಮಹಾದೇವನ ಪರೀಕ್ಷೆಯೂ ಮಗಳಿಗೆ ಅಷ್ಟಿಷ್ಟಲ್ಲ. ಹೇಳತೀರದು, ಕಣ್ಣೀರ ಕಾಲುವೆ ಹರಿಯಿತು. ಅಷ್ಟಾದ್ರು ಮಹಾತ್ಮರ ಅಪ್ಪಣೆ ಆಗದೆ, ಮದ್ರಾಸಿಗೆ ಹೋಗುವದು ಬೇಡವೆಂದು, ಇವರಿಗಿರುವ ತ್ರಾಸು ನೋಡಿ, ತ್ರಾಸೆಂದ್ರ ಮನೆಯ ಪಾವಟಿಗೆ ಹತ್ತಲು ಕೂಡಾ ಆಗದ ಸ್ಥಿತಿಯಿತ್ತು. ಈ ಪರಿಸ್ಥಿತಿಯನ್ನು ಕಂಡು ಬಂಧು–ಬಳಗದವರೆಲ್ಲ ಬಂದು ಮಾತನಾಡಿಸಿ 'ಏಕೆ ಮದ್ರಾಸಿಗೆ ಹೋಗಿಲ್ಲ' ಎಂದು ಕೇಳುವುದಾಯಿತು. ಶರಣರ ಮಹಿಮೆಯನ್ನು ಅರಿಯಲು ಅಸಾಧ್ಯ, ಆದರೆ ಎಂಥ ಕಠಿಣ ಪ್ರಸಂಗವನ್ನು ತಂದು ಪರಶಿವನ ಪರೀಕ್ಷೆಯೂ ಆಯಿತು. ಎಲ್ಲರೂ ಕೇಳುವುದರಿಂದ

ಮನವು ತಾಳದೆ ತಾಯಿಯನ್ನು ಕೇಳಿದೆನು. ಅವರು–'ಏನಮ್ಮಾ! ಈ ಅಜ್ಜಾರ ಅಪ್ಪಣೆ ಆಗಿದೆ ಎಲ್ಲಾ ಅಜ್ಜಯ್ಯನ ಕೃಪಾಶೀರ್ವಾದ' ಎಂದು ಮಗಳಿಗೆ ಸಮಾಧಾನ ಹೇಳಿದರು. ಮತ್ತೆ ಇವರನ್ನು ಸಹ ಮದ್ರಾಸಿಗೆ ಹೋಗಲು ಕೇಳಿ ಆಯಿತು. ಇವರು ಕೂಡಾ–'ಬೇಡಾ ಅಜ್ಜಾರ ಅಪ್ಪಣೆ ಆಗಿಲ್ಲ ನಾನು ಹೋಗುವುದಿಲ್ಲ' ಎಂದು ಗಟ್ಟಿ ಮನದಿ ಹೇಳಿದರು. ಮೃಡಗಿರೀಶ ನನ್ನಪ್ಪನ ಶ್ರೀವಾಣಿಯನ್ನು ದೃಢವಾಗಿ ನಂಬಿದರು. 'ನಂಬಿ ಕರೆದೊಡೆ ಓ ಎನ್ನನೆ ಶಿವನು!'

ಪರಶಿವನಾದ ಶ್ರೀ ಸದ್ಗುರುನಾಥನ ಪರೀಕ್ಷೆ ಎಂದರೆ ಕರಗಸದಂತೆ ಹೋಗುತ್ತ ಬರುತ್ತ ಕೊರೆದಾಯಿತು. ತಿಕ್ಕಿ ತೇದಾಯಿತು ತನುವನಲ್ಲಾಡಿಸಿಯೂ ಆಯಿತು. ಮಗಳ ಮನವು ತತ್ತರಿಸಿತು. 'ನನ್ನಪ್ಪನ ಶ್ರೀ ಮಹಾಪಾದವೇ ಮಗಳಿಗೆ ಗತಿ' ಎಂದಾಗ ಮಹಾಗುರುವಿನ ಕರುಣೆಯಾಯಿತು. ಒಂದು ಪಾವಟಿಗೆ ಹತ್ತಲು ಕೂಡಾ ಇವರಿಗೆ ತ್ರಾಸಿರುವ ಸಂದಿಗ್ಧ ಸಮಯದಲ್ಲಿ ಶ್ರೀ ಸದ್ಗುರುನಾಥನ ಲೀಲೆ ಅಗಾಧವಾದುದು. ಅಚ್ಚರಿಗೊಳ್ಳುವಂಥಾದ್ದು. ವಿಜಾಪೂರ ಜಿಲ್ಲೆಯ ಗುಣಕಿಯೊಳು ಮಹಾತ್ಮರನ್ನು ಹೆತ್ತ ತಾಯಿ ಅಮ್ಮಾರ ಲಿಂಗೈಕ್ಯ ಪುಣ್ಯಸ್ಮರಣೆಗೆ ಆರಾಧನೆಗೆ ಬರಲು ಅಪ್ಪಣೆ ಮಾಡಿದರು.

ಲಾರಿಯಲ್ಲಿ ಊರಿನ ಭಕ್ತರು ಹೊರಟರು. ಅಪ್ಪಣೆಯಂತೆ ದಂಪತಿಗಳು ನಮ್ಮ ಅತ್ತಿಗೆಯವರು ಹೊರಟೆವು. ಬನಶಂಕರಿ, ಬದಾಮಿ, ಶಿವಯೋಗಮಂದಿರ, ಪಟ್ಟದಕಲ್ಲು, ಐಹೊಳೆ, ಕೂಡಲಸಂಗಮನಾಥನ ದರ್ಶನವಾಯಿತು. ಎತ್ತರದ ಲಾರಿಯಲ್ಲಿ ಪತ್ತಿ ಇಳಿದು ಇವರು ಎಲ್ಲೆಡೆ ನೋಡಿ ಆಯಿತು. ೨–೩ ದಿನ ನಿದ್ರೆಯಿಲ್ಲದೆ ಪ್ರವಾಸವಾಯಿತು. ಬೊಮ್ಮನಹಳ್ಳಿಯ ಗವಿಮಠದಲ್ಲಿಯೂ ಗುರುವಿನ ಪರೀಕ್ಷೆ ಅಪ್ಪನ ಪೂಜೆಗಾಗಿ ಎತ್ತರದ ಪಾವಟಿಗೆಗಳನ್ನು ಇಳಿದು ಹತ್ತಿಯಾಯಿತು.

ಮಹಾಮಾತೆಯ ಸಮಾಧಿ ದರ್ಶನ ಪಡೆದು ಶರಣರ ವಚನೋಪದೇಶವನಾಲಿಸಿ ಶ್ರೀ ಸ್ವಾಮಿಯ ಸನ್ನಿಧಿಯಲ್ಲಿ ಪಾದೋದಕ ಪ್ರಸಾದ ಸೇವಿಸಿ ಮಾತೆಯ ಆರಾಧನೆಯ ಹೋಳಿಗೆ, ಗೋದಿಹುಗ್ಗಿಯ ಮಹಾಪ್ರಸಾದವನ್ನು ಸ್ವೀಕರಿಸಿ, ಮಹಾಮಹಿಮರನ್ನು ಹೆತ್ತ ಮಾತೆಯನ್ನು ಮನದಿ ಸ್ಮರಿಸಿ ಧನ್ಯತೆಯನ್ನು ಪಡೆದವು. ಗುಣಕಿಯಲ್ಲಿ ಪೂಜ್ಯರ ಅಡ್ಡಪಲ್ಲಕ್ಕಿ ಉತ್ಸವವನ್ನು ನೋಡಿಕೊಂಡು ನನ್ನಪ್ಪನ ಆಶೀರ್ವಾದ ಪಡೆದುಕೊಂಡು ಮರಳಿ ಬರುವಾಗ ಸಜ್ಜಲಗುಡ್ಡ, ಕಂಬಳಿಹಾಳ, ಕುಕನೂರ ಕ್ಷೇತ್ರದರ್ಶನ ಪಡೆದು ಮೃಡಗಿರಿಗೆ ಬಂದು ಕರ್ತೃ ಅನ್ನದಾನೀಶನ ಗದ್ದುಗೆ ದರ್ಶನ ಪಡೆದಾಯಿತು. ಸತ್ಯಶರಣರ ನುಡಿ ಮಗಳಿಗೆ ಅನುಭವವಾಯಿತು. ನೀನೊಲಿದರೆ ಸಕಲ ಪಡಿಪದಾರ್ಥ ಇದರಲ್ಲಿಪ್ಪುದು. ನಂಬಿಗೆಯೇ ಸಾಂಬನೊಲಿವುದಕೆ ಸಾಧನ. ಒಂದು ಪಾವಟಿಗೆ ಹತ್ತಲಾರದ ಇವರಿಗೆ (ಪತಿಗೆ) ಮೂರು ದಿನ ಸತತ ಶ್ರಮದೊಂದಿಗೆ ಶ್ರೀಗುರು ಕರುಣೆಯಾಯಿತು.

ಶ್ರೀ ಸದ್ಗುರುನಾಥನು ಭವರೋಗ ವೈದ್ಯನಲ್ಲವೆ! ಮದ್ರಾಸಿನಲ್ಲಿರುವ ಹಾರ್ವಿಸ ಟೆಸ್ಟ್ ಮಶಿನ್ ಶ್ರೀ ಮಹಾಪಾದದಲ್ಲಿದ್ದು ಅಷ್ಟೊಂದು ಕ್ಷೇತ್ರಗಳ ದರ್ಶನ ಮಾಡಿಸಿ ಎನ್ನ ಪತಿಯ ರೋಗ ನಿವಾರಣೆಗೈದು ಮಗಳು ಮಹಾದೇವಿಗೆ ಮಂಗಲ ಕರುಣಿಸಿದ ನನ್ನಪ್ಪನ ಘನಮಹಿಮೆಯನ್ನು ನೆನೆದರೆ ರೋಮಾಂಚನವಾಗುವುದನ್ನು ಸದಾ ಸ್ಮರಿಸಿದರೂ ಸಾಲದು. ಶ್ರೀ ಸದ್ಗುರುನಾಥನ ಮಹಾಪಾದಕ್ಕೆ ಮಗಳು ಮಹಾದೇವಿ ನಮೋ ನಮಃ ಎಂಬೆನು. ಶ್ರೀ ಚರಣಕಮಲಗಳಿಗೆ ದಂಪತಿಗಳೀರ್ವರ ಪ್ರಣಾಮಗಳು.

ಶ್ರೀ ಸನ್ನಿಧಿಯವರ ಸಾಮಾಜಿಕ ಸಮಾರಂಭಗಳು

—ಪ್ರೊ. ವಿ. ಕೆ. ಕೋಳೂರ ಹಿರೇಮಠ, ಮುಂಡರಗಿ

ಸಮಾಜ ಅನುಕರಣಶೀಲವಾದುದು. ಮಹಾನುಭಾವಿಗಳು ಅನುಸರಿಸುವುದನ್ನೇ ಸಾಮಾನ್ಯ ಜನತೆ ಅನುಸರಿಸುತ್ತದೆ. ಸಾತ್ವಿಕ ವ್ಯಕ್ತಿಗಳು ಜನ ಸಾಮಾನ್ಯರ ಬದುಕನ್ನು ಬೆಳಗಿಸುವಲ್ಲಿ ಶ್ರಮಿಸುತ್ತಾ ಬಂದಿದ್ದಾರೆ. ಭಾರತ ದೇಶ ಧರ್ಮಭೂಮಿ. ಕರ್ತವ್ಯನಿಷ್ಠ ವಾದ ಧರ್ಮ ಪ್ರಜೆಯು ಕುಂಠಿತವಾದಾಗ ಸಂತರು ಮಹಾಂತರು ಉದಯಿಸಿ ಧರ್ಮ-ಗ್ಲಾನಿಯನ್ನು ಹೊಡೆದೋಡಿಸಿ ಧರ್ಮವನ್ನು ಸ್ಥಿರಗೊಳಿಸುತ್ತಾ ಬಂದ ಪರಂಪರೆ ಪ್ರಾಚೀನವಾದುದು. ಕರ್ನಾಟಕದಲ್ಲಿ ಜನಿಸಿದ ಮಹಾತ್ಮರ ಸಂಖ್ಯೆ ದೊಡ್ಡದು. ಈ ದಿಶೆಯಲ್ಲಿ ಮೃಡಗಿರಿ ನಾಡಿನ ಜನತೆಗೆ ದಾರಿದೀಪವಾಗಿ ಬೆಳೆದು ಬಂದ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ ಪರಂಪರೆ ಭವ್ಯವಾದುದು. ಇಂದಿನ ಪೂಜ್ಯರು ಹತ್ತನೆಯವರು.

ಸಮಾಜೋದ್ಧಾರವೇ ನಾಡೋದ್ಧಾರವೆಂದು ತಿಳಿದ ಇಂದಿನ ಶ್ರೀಗಳವರು ಈ ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆಯು ಮುಂಡರಗಿ ಸಾಮಾಜಿಕ ಚರಿತ್ರೆ ಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿರಿಸಬೇಕಾದ ಹಾಗೂ ಮರೆಯದಿರುವ ಮಹಾಮಣಿಹವಿದಾಗಿದೆ.

ಪರಮಪೂಜ್ಯರ ವ್ಯಕ್ತಿತ್ವವನ್ನು ಕೇವಲ ಧಾರ್ಮಿಕ ದೃಷ್ಟಿಯಿಂದ ನೋಡಿದರೆ ಸಾಲದು. ಸಮಾಜಶಾಸ್ತ್ರೀಯ ದೃಷ್ಟಿಯಿಂದ ನೋಡುವುದಾದರೆ, ಶ್ರೀ ಸನ್ನಿಧಿಯವರು ಸಮಾಜ ಚಿಂತಕರೂ, ಸುಧಾರಕರೂ, ಹಾಗೂ ಸಮಾಜೋದ್ಧಾರಕರೂ ಆಗಿದ್ದಾರೆ. ಸಮಾಜ ಚಿಂತಕರಾಗಿರುವ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ ಕಾರ್ಯಗಳು ಸಾಮಾಜಿಕ ಮುಖವಾಗಿ ಮತ್ತು ಅದರ ಸರ್ವತೋಮುಖ ಅಭಿವೃದ್ಧಿಗಾಗಿ ನಡೆಯುತ್ತಿರು ವದನ್ನು ಗಮನಿಸಬಹುದಾಗಿದೆ. ಇಂದಿನ ಸಮಾಜವು ಸಮಸ್ಯಾತ್ಮಕವಾಗಿದ್ದು, ಸಮಾಜಿಕರ ಜೀವನವು ಅವರ ದುರ್ನಡತೆಯಿಂದ ಬದಲಾವಣೆ ಹೊಂದಿ ಹಲವಾರು ಸಮಸ್ಯೆಗಳ ನೆಲೆವೀಡಾಗಿದೆ. ಸಮಾಜ ಚಿಂತಕರಾದ ಮಹಾಸ್ವಾಮಿಗಳವರು ಸಮಾಜೋದ್ಧಾರಕ್ಕಾಗಿ ಸಾಮಾಜಿಕ ಸಮಸ್ಯೆಗಳ ಹಿನ್ನೆಲೆಯಲ್ಲಿ ಅವುಗಳ ಪರಿಹಾರಾರ್ಥವಾಗಿ ಕೈಕೊಂಡಿರುವ ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನಿಲ್ಲಿ ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಪೂಜ್ಯರು ವರುಷದುದ್ದಕ್ಕೂ ಅಂಥ ಕಾರ್ಯಗಳಲ್ಲಿ ತೊಡಗಿರುತ್ತಾರೆ.

ಯುಗಾದಿಯು ಭಾರತೀಯ ಜೀವನದಲ್ಲಿ ಮಹತ್ವದ ಹಬ್ಬವಾಗಿದೆ. ಈ ಹಬ್ಬದಲ್ಲಿ ಭಾರತೀಯರ ಸಂಸ್ಕೃತಿಯಿದೆ. ಯುಗಾದಿಯ ದಿನ ಬೇವು-ಬೆಲ್ಲಗಳನ್ನು ಕೂಡಿಸಿ ಮೆಲ್ಲುವದು ಸಾಮ್ಯಯೋಗದ ಹೆಗ್ಗುರುತು. ಇವೆರಡರಲ್ಲಿ ಒಳಿತು-ಕೆಡಕುಗಳ, ಶೀತೋಷ್ಣ ಗಳ, ಸಿಹಿ-ಕಹಿಗಳ, ಸುಖ-ದುಃಖಗಳ ಸಾಮ್ಯವಿದೆ. ಸಂಸಾರದಲ್ಲಿ ಬರುವ ಸಿಹಿ-ಕಹಿ ಪ್ರಸಂಗಗಳೇ ಸಾಂಕೇತಿಕಾರ್ಥದಲ್ಲಿ ಬೇವು ಬೆಲ್ಲ. ಇವುಗಳ ಮಿಶ್ರಣವನ್ನು ಸಂತೋಷದಿಂದ ತಿಂದು ತೃಪ್ತಿಪಡುವದು ಸಂಸಾರದಲ್ಲಿರುವ ನೋವು-ನಲಿವುಗಳನ್ನು ಸಹಿಸಬೇಕೆಂಬುದು ಯುಗಾದಿಯ ಸಂದೇಶವಾಗಿದೆನ್ನುವದನ್ನೂ ಶ್ರೀ ಸನ್ನಿಧಿಯವರು ಈ ಹಬ್ಬದ ಬಗೆಗೆ ಹೊಂದಿದ ಅಭಿಮತವಾಗಿದೆ. ಹೀಗೆ ಪೂಜ್ಯರು ನಮ್ಮ ಹಬ್ಬ ಹರಿದಿನಗಳ ಆಚರಣೆ ಯನ್ನು ಕುರಿತು ವೈಚಾರಿಕ ವೈಜ್ಞಾನಿಕ ದೃಷ್ಟಿಯನ್ನು ಹೊಂದಿದವರಾಗಿದ್ದಾರೆ. ಶ್ರೀಮಠದ ಪರಂಪರೆಯಂತೆ ಪ್ರತಿವರುಷ ಯುಗಾದಿಯ ಪ್ರತಿಪದೆಯಂದು ಹಾಗೂ ಫಾಲ್ಗುಣ ಮಾಸದಲ್ಲಿ ಸಮಾಜೋ-ಧಾರ್ಮಿಕ ಅಭಿವೃದ್ಧಿಗಾಗಿ ಸೊರಟೂರ ಅಜ್ಜನವರು ಜನಿಸಿದ ಗದಗ ತಾಲೂಕ ಸೊರಟೂರಿನ ಶಾಖಾಮಠದಲ್ಲಿ ಹಲವಾರು ವೈವಿಧ್ಯಮಯ ಕಾರ್ಯ ಗಳಾದ ಉಪನ್ಯಾಸ, ಪುರಾಣ-ಪ್ರವಚನ ಮುಂತಾದವುಗಳು ಸಾಮಾಜಿಕ ಮುಖವಾಗಿ ಜರಗುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ. ಪ್ರತಿವರ್ಷ ೮೦ ರಿಂದ ನೂರರ ವರೆಗೆ ಸಾಮೂಹಿಕ ವಿವಾಹ ಜರುಗಿಸಿ ಜನತೆಯ ಆರ್ಥಿಕ ಭದ್ರತೆಗೆ ಕಾರಣರಾಗಿದ್ದಾರೆ.

ಯಲಬುರ್ಗಾ ತಾಲೂಕಿನ ಬೆಣಕಲ್ಲ ಗ್ರಾಮದ ಶಾಖಾಮಠವನ್ನು ಪೂಜ್ಯ ಸನ್ನಿಧಿಯವರು ಜೀರ್ಣೋದ್ಧಾರ ಮಾಡಿದ್ದಾರಲ್ಲದೆ ಪ್ರತಿವರ್ಷ ಚೈತ್ರ ಶುದ್ಧ ನವಮಿ ಹಾಗೂ ದಶಮಿಗಳಂದು ಸಮಾಜದ ಜನರಲ್ಲಿ ಧಾರ್ಮಿಕ ಪ್ರಜ್ಞೆಯನ್ನುಂಟು ಮಾಡಲು ಶ್ರೀಮಠದಲ್ಲಿ ಪುರಾಣ-ಪ್ರವಚನ ನಡೆಯುವಂತೆ ಮಾಡಿದ್ದಾರಲ್ಲದೆ ಅನೇಕ ವರ್ಷಗಳಿಂದ ನಡೆದುಕೊಂಡು ಬಂದ ಉಚ್ಚೈಯನ್ನು (ಉತ್ಸವ) ನಡೆಸುವುದರ ಜೊತೆಗೆ ಗ್ರಾಮಸ್ಥರ ಸಹಾಯದಿಂದ ರಥೋತ್ಸವವನ್ನು ನಡೆಸುವಂತೆ ಹರಸಿದ್ದನ್ನು ಸ್ಮರಿಸಬಹುದಾಗಿದೆ.

ಪೂಜ್ಯ ಸನ್ನಿಧಿಯವರು ತಮ್ಮ ಹಿಂದಿನ ಶ್ರೀಗುರುಗಳಾದ ವೆಂಕಟಾಪೂರ ಅಜ್ಜನವರ ಬಗೆಗೆ ತಮ್ಮಲ್ಲಿರುವ ಭಕ್ತಿ ಹಾಗೂ ಗೌರವದ ದ್ಯೋತಕವಾಗಿ ಚೈತ್ರಮಾಸದ ದವನದ ಹುಣ್ಣಿಮೆಯಂದು ಅದರ ಪುಣ್ಯ ತಿಥಿಯನ್ನು ಆಚರಿಸುವ ಸತ್‌ಸಂಪ್ರದಾಯ ವನ್ನು ಮುನ್ನಡೆಸಿಕೊಂಡು ಬಂದು ತನ್ಮೂಲಕ ಸಮಾಜಿಕರ ಕಲ್ಯಾಣಾರ್ಥವಾಗಿ ಹಲವಾರು ವಿಧಾಯಕ ಕಾರ್ಯಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಪ್ರಸಾದ ವಿತರಣೆಯನ್ನು ಮಾಡಿ ಸಮಾಜದ ಬಡ ಬಗ್ಗರ ಹಸಿವೊಡಲನ್ನು ಹಿಂಗಿಸಿ ಆನಂದಗೊಳಿಸುತ್ತಾ ಬಂದಿರುವದು ಶ್ರೀಮಠದ ವಿಶಿಷ್ಟ ಸಂಪ್ರದಾಯವಾಗಿದೆ.

ಗೃಹಸ್ಥ ಜೀವನದಲ್ಲಿ, ಸಾಮಾಜಿಕ ಜೀವನದಲ್ಲಿ ಸತಿ-ಪತಿಗಳು ಸಮಾನ ಧರ್ಮಿ ಗಳಾಗಿರಬೇಕು. ನಡೆಯಲ್ಲಿ, ನುಡಿಯಲ್ಲಿ, ಆಚಾರ-ವಿಚಾರಗಳಲ್ಲಿ ಸಹಧರ್ಮಿಗಳಾಗಿರ ಬೇಕು. ಸಮರಸ ಭಾವಿಗಳಾಗಿರಬೇಕು. ಒಬ್ಬರು ಭಕ್ತರಾಗಿ ಇನ್ನೊಬ್ಬರು ಭವಿಗಳಾ

ಗಿದ್ದರೆ, ಭಕ್ತತ್ವ ಉಳಿಯುದು ಹಾಗೂ ಸಾಮಾಜಿಕ ಸಹಜೀವನ ನಡೆಯುದು. "ಹೆಣ್ಣು ಅಬಲೆಯಲ್ಲ, ಮಾಯೆಯಲ್ಲ, ಆತ್ಮಶಕ್ತಿಯ ಬಲದಿಂದ ಆಧ್ಯಾತ್ಮ ಶಕ್ತಿ ಸಂಪನ್ನತೆಯಿಂದ ಸಬಲೆಯಾಗಬಲ್ಲಳೆಂಬುದನ್ನು ಹಾಗೂ ಆಚಾರ ಬಲದಿಂದ, ವಿಚಾರ ಸ್ವಾತಂತ್ರ್ಯದಿಂದ ಆತ್ಮೋನ್ನತಿಯನ್ನು ಸಾಧಿಸಬಲ್ಲಳು" ಎಂಬುವದನ್ನು ದೃಢೀಕರಿಸಲು ಶ್ರೀ ಮಠದಲ್ಲಿ "ಅಕ್ಕನ ಜಯಂತಿ"ಯನ್ನು ಆಚರಿಸುವುದರ ಮೂಲಕ ಮಹಿಳೆಯರಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಜಾಗ್ರತೆಯನ್ನುಂಟು ಮಾಡುವ ಶ್ರೀ ಸನ್ನಿಧಿಯವರ ಸೇವೆಯು ನಿಜಕ್ಕೂ ಪ್ರಶಂಸನೀಯ. ಹೀಗೆ ಮಹಿಳೆಯರಿಗೆ ಸಮಾಜದಲ್ಲಿ ಸಮಾನ ಸ್ಥಾನ ಹಾಗೂ ವಿಚಾರ ಸ್ವಾತಂತ್ರ್ಯ ನೀಡಿ ಗೌರವಿಸುವ ಶ್ರೀಗಳವರ ರೀತಿ ಭಾರತೀಯ ಸಂಸ್ಕೃತಿಯನ್ನು ನಿಜವಾದ ಅರ್ಥದಲ್ಲಿ ಉಳಿಸಿ, ಬೆಳೆಸಿಕೊಂಡು ಬಂದಿರುವದನ್ನು ಸ್ಪಷ್ಟಪಡಿಸುತ್ತದೆ ಮತ್ತು ಪೂಜ್ಯರು ಮಹಿಳೆಯರಿಗಾಗಿ ಪ್ರೌಢಶಾಲೆಯನ್ನು ತೆಗೆದಿರುವುದೂ ಸ್ತುತ್ಯ.

ವಿಶ್ವಚರಿತ್ರೆಯಲ್ಲಿ ಮಾನವತೆಯನ್ನು ಉನ್ನತ ಸ್ಥಾನದೆಡೆಗೆ ಸಾಗಿಸುವ ಅನೇಕ ಆಂದೋಲನಗಳು ನಡೆದಿವೆ. ಇಂತಹ ಆಂದೋಲನಗಳು ಜನ ಜಾಗ್ರತಿ ಮಾಡುವುದಲ್ಲದೆ ಹೊಸ ಮೌಲ್ಯಗಳನ್ನು ಸೃಷ್ಟಿಸುವವು. ಉಪನಿಷತ್ ಕಾಲದ ಕ್ರಾಂತಿ, ಬೌದ್ಧರ ಧರ್ಮಪ್ರಚಾರ, ಗ್ರೀಸ್ ದೇಶದಲ್ಲಿ ಪ್ಲೇಟೋ ಅರಿಸ್ಟಾಟಲ್ ಮೊದಲಾದವರು ತಂದ ವೈಚಾರಿಕ ಕ್ರಾಂತಿ ಫ್ರಾನ್ಸ ದೇಶದಲ್ಲಿ ರೊಸೊ ವಾಲ್ಟೇರ ಮೊದಲಾದವರು ಮಥಿಸಿದ ಕ್ರಾಂತಿಗಳು ಆಯಾ ಕಾಲದ ಸಾಮಾಜಿಕ ಹಾಗೂ ರಾಜಕೀಯ ಕ್ರಾಂತಿಯನ್ನುಂಟು ಮಾಡಿದವು. ಇಂತಹ ಕ್ರಾಂತಿಗಳ ಸಾಲಿನಲ್ಲಿ ೧೨ನೆಯ ಶತಮಾನದಲ್ಲಿ ಕಲ್ಯಾಣ ಕ್ರಾಂತಿಗೆ ಕಾರಣ ಪುರುಷರಾದ ಅಣ್ಣ ಬಸವಣ್ಣನವರ ವ್ಯಕ್ತಿತ್ವವು ಹಿಮಾಲಯದಂತೆ ಗಗನಚುಂಬಿ ಯಾಗಿದೆಯಲ್ಲದೆ, ಅವರು ಸಾಂಸ್ಕೃತಿಕ ಹಾಗೂ ಸಾಮಾಜಿಕ ಇತಿಹಾಸದಲ್ಲಿ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. "ಸಾಮಾಜಿಕ ಸಮಾನತೆ", "ಕಾಯಕವೇ ಕೈಲಾಸ", "ವಿಶ್ವ ಬಂಧುತ್ವ", "ಸ್ತ್ರೀಯರ ಧಾರ್ಮಿಕ ಸ್ವಾತಂತ್ರ್ಯ" ಮುಂತಾದ ತತ್ವಗಳನ್ನು ಲೋಕಕ್ಕೆ ಸಾರಿ ಆದರ್ಶ ನವ ಸಮಾಜವನ್ನು ಕಟ್ಟಬಯಸಿದವರು ಬಸವಣ್ಣನವರು. ಇಂತಹ ಮಹಾತ್ಮರ ಸನ್ಮಾರ್ಗದಲ್ಲಿ ಶ್ರೀಮಠದ ಇಂದಿನ ಪೂಜ್ಯರು ನಾಡಿನ ಸಕಲ ಜೀವಾತ್ಮರ ಲೇಸನ್ನು ಬಯಸಿ, ವೈಶಾಖ ಶುದ್ಧ ತದಗಿಯೆಂದು ಶ್ರೀ ಮಠದಲ್ಲಿ ಹಾಗೂ ಶಾಖಾಮಠಗಳಲ್ಲಿ "ಬಸವ ಜಯಂತಿ"ಯ ನಿಮಿತ್ಯವಾಗಿ ಹಲವಾರು ಸಮಾಜ ಸುಧಾರಣೆಯ ಕಾರ್ಯಕಲಾಪಗಳನ್ನು ಹಾಕಿಕೊಂಡು ಸಮಾಜದ ಓರೆ-ಕೋರೆಗಳನ್ನು ತಿದ್ದಿ ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬಂದಿದ್ದಾರೆ.

ಮುಂಡರಗಿಯಲ್ಲಿ ಶ್ರೀಮಠದ ಜಾತ್ರಾಮಹೋತ್ಸವವು ಮೊದಲು ವೈಶಾಖ ಶುದ್ಧ ದಶಮಿಯೆಂದು ನಡೆಯುತ್ತಿತ್ತು. ಆದರೆ ಮುಂಡರಗಿ ತಾಲೂಕು ಯಾವಾಗಲೂ ಬರಗಾಲಕ್ಕೆ ಹೆಸರಾಗಿದ್ದರಿಂದ, ತಾಲೂಕಿನ ಸಮಸ್ತ ಜನತೆಯು ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿತ್ತು. ಹೀಗಾಗಿ ಒಮ್ಮೊಮ್ಮೆ ಶ್ರೀಮಠದ ಜಾತ್ರಾಮಹೋತ್ಸವವನ್ನು

ನಿಲ್ಲಿಸುವ ಪರಿಸ್ಥಿತಿಯು ಬರುತ್ತಿತ್ತು. ಆದ್ದರಿಂದ ಶ್ರೀಮಠದ ಯಾತ್ರಾಮಹೋತ್ಸವವನ್ನು ೯ನೆಯ ಪೀಠಾಧೀಶರಾದ ವೆಂಕಟಾಪೂರ ಶ್ರೀಗಳವರು ಮಾಘಮಾಸದಲ್ಲಿ ತಮ್ಮ ಗುರುಗಳ ಪುಣ್ಯತಿಥಿಯಂದು ನಡೆಸಲು ಪ್ರಾರಂಭಿಸಿದರು.

ಇಂದಿನ ಪೂಜ್ಯ ಸನ್ನಿಧಿಯವರು ಪೀಠಾಧಿಕಾರಿಗಳಾಗಿ ಶೂನ್ಯ ಸಿಂಹಾಸನಾರೋಹಣ ಮಾಡಿದ ಮೇಲೆ ಮುಂಡರಗಿಯ ನಾಡನ್ನು ಪಾವನಗೊಳಿಸಿದ ಮೂಲ ಕರ್ತೃ ಶ್ರೀ ಜಗದ್ಗುರು ಅನ್ನದಾನೀಶ್ವರ ಶಿವಯೋಗಿಗಳು ಅನುಷ್ಠಾನ ಗೈದ ಪವಿತ್ರ ಕ್ಷೇತ್ರವಾದ ಗದಗ ತಾಲೂಕಿನ ಮದಗಾನೂರ ಗ್ರಾಮದಲ್ಲಿ ಪೂಜ್ಯರ ಯೋಗ ಮಂದಿರವನ್ನು ನಿರ್ಮಾಣ ಮಾಡಿದರಲ್ಲದೆ, ವೈಶಾಖ ಶುದ್ಧ ದಶಮಿಯಂದು ಜಾತ್ರೆಯನ್ನು ಪ್ರಾರಂಭಿಸಿದರು. ಸ್ವಾಮಿಯ ಜಾತ್ರೆಯನ್ನು ನೆರವೇರಿಸಲು ಶ್ರೀಗಳವರು ಚಿಕ್ಕ ರಥವೊಂದನ್ನು ಮಾಡಿಸಿಕೊಟ್ಟು ಕಳೆದ ಇಪ್ಪತ್ತು ವರ್ಷಗಳಿಂದಲೂ ರಥೋತ್ಸವ ನಡೆಯುವಂತೆ ಮಾಡಿದ್ದಾರೆ. ಇಂದಿಗೂ ಆ ಕ್ಷೇತ್ರವು ನಂಬಿದ ಭಕ್ತರಿಗೆ ಇಂಬುಗೊಡುವ ಹಾಗೂ ಅನೇಕರ ಇಷ್ಟಾರ್ಥಗಳು ಸಿದ್ಧಿಸುವ ಸುಕ್ಷೇತ್ರವಾಗಿ ಪರಿಣಮಿಸಿದೆ.

ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠವು ನಾಡಿನ ನಾನಾ ಕಡೆಗಳಲ್ಲಿ ಹಲವಾರು ಶಾಖಾಮಠಗಳನ್ನು ಹೊಂದಿರುವದು. ಹಿರೇವಡ್ಡಟ್ಟಿ, ಕುಕನೂರ, ಗೊಂಡಬಾಳ, ಬೆಟಗೇರಿ, ಮದಗಾನೂರ, ಶಿಶುವಿನಹಳ್ಳಿ, ಬಾಚಣಕಿ, ಬೆಣಕಲ್ಲ ಈ ಗ್ರಾಮಗಳಲ್ಲಿನ ಶಾಖಾಮಠಗಳು ಜೀರ್ಣವಾಗಿ ಹೋಗಿ ಅವಶೇಷವಾಗಿ ಉಳಿದುಕೊಂಡಿದ್ದವು. ಶ್ರೀ ಸನ್ನಿಧಿಯವರು ಲಕ್ಷಗಟ್ಟಲೇ ಹಣವನ್ನು ಖರ್ಚುಮಾಡಿ ಅವುಗಳ ಜೀರ್ಣೋದ್ಧಾರ ಗೈದು, ಅವುಗಳು ಧಾರ್ಮಿಕ ಪವಿತ್ರ ಕ್ಷೇತ್ರವಾಗಿ ಉಳಿಯುವಂತೆ ಮಾಡಿದ್ದಾರೆ. ಮೂಲ ಮಠದಲ್ಲಿ ನಡೆಯುವಂತಹ ಧಾರ್ಮಿಕ, ಸಾಂಸ್ಕೃತಿಕ, ಕಾರ್ಯಗಳಾದ ಶಿವಾನುಭವ, ಪುರಾಣ-ಪ್ರವಚನ, ಪ್ರಸಾದ ವಿತರಣೆ ಮುಂತಾದವುಗಳನ್ನು ಮೇಲ್ಕಾಣಿಸಿದ ಈ ಎಲ್ಲಾ ಶಾಖಾಮಠಗಳಲ್ಲಿ ಹಮ್ಮಿಕೊಳ್ಳುತ್ತಾ ಭಕ್ತರ ಗೌರವಕ್ಕೆ ಪಾತ್ರರಾಗಿದ್ದಾರೆ.

ಭಾರತೀಯರಿಗೆ ಶ್ರಾವಣ ಮಾಸವು ಒಂದು ಪವಿತ್ರ ಪರ್ವ. ಶ್ರಾವಣ ಮಾಸದಲ್ಲಿಯಂತೂ ಪೂಜ್ಯರು ಶ್ರೀಮಠದಲ್ಲಿ ಹಾಗೂ ಶಾಖಾಮಠಗಳಲ್ಲಿ ವಿಶೇಷವಾಗಿ ಧರ್ಮ ಹಾಗೂ ಸಂಸ್ಕೃತಿಯ ಏಳಿಗೆಗಾಗಿ ಹಲವಾರು ಉಪನ್ಯಾಸ ಪುರಾಣ-ಪ್ರವಚನ ಮಾಡಿಸ್ತುತ್ತಾರೆ. ಶ್ರಾವಣ ಕೊನೆಯ ಸೋಮವಾರ ಮುಂಡರಗಿಯ ಕೋಟೆಮಠದಲ್ಲಿ ಭಜನಾ ಮಂಡಳಿಯಿಂದ ರಥೋತ್ಸವ, ಪ್ರಸಾದ ವಿತರಣೆ ಮುಂತಾದ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ್ದಾರೆ.

ವಿಜಯ ದಶಮಿಯು ಭಾರತದ ಎಲ್ಲಾ ಭಾಗಗಳಲ್ಲಿ ಕಂಡುಬರುವ ಸಂಪ್ರದಾಯವಾಗಿದೆ. ಅರಮನೆಯಿಂದ ಹುಲ್ಮನೆಯವರೆಗೆ ಎಲ್ಲರೂ ಉತ್ಸಾಹದಿಂದ ಆಚರಿಸುವ ಹಬ್ಬವಾಗಿದೆ. ಕನ್ನಡಿಗರು ಇದಕ್ಕೆ ಬನ್ನಿಯ ಹಬ್ಬವೆಂದು ಕರೆದರೆ ದೇಶದ ಉಳಿದ

ಭಾಗಗಳಲ್ಲಿ ಇದನ್ನು ವಿಜಯದಶಮಿ ಎಂದು ಕರೆಯುತ್ತಾರೆ. ಈ ಹಬ್ಬವು ಸಾಮಾಜಿಕ ಮಹತ್ವವನ್ನು ಪಡೆದಿದೆ. ಇಂದಿನ ಭಾರತೀಯ ಹಿಂದೂ ಸಮಾಜದಲ್ಲಿ ಅನೇಕ ಜಾತಿ-ಉಪಜಾತಿಗಳು ಕಂಡುಬರುತ್ತವೆ. "ಮೇಲು-ಕೀಳು", "ಶ್ರೇಷ್ಠ-ಕನಿಷ್ಠ", 'ಪವಿತ್ರ-ಅಪವಿತ್ರ', "ಸ್ಪೃಶ್ಯ-ಅಸ್ಪೃಶ್ಯ" ಎಂಬ ಭಾವನೆಗಳು ಪ್ರತಿಯೊಂದು ಜಾತಿ ವ್ಯವಸ್ಥೆಯಲ್ಲಿ ತೀವ್ರವಾಗಿ ಬೆಳೆದು ಸಾಮಾಜಿಕ ಸ್ವಾಸ್ಥ್ಯವನ್ನು ಕದಡಿದ ಈಗಿನ ಸಂದರ್ಭದಲ್ಲಿ, ದೇವರು ಹಾಗೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಕೋಮು ಗಲಭೆಗಳ ಸಂದರ್ಭದಲ್ಲಿ ವಿಜಯದಶಮಿಯು ಸಮಾಜಿಕರಲ್ಲಿ ದ್ವೇಷ, ಮತ್ಸರ, ಅಸೂಯೆ, ವೈರತ್ವ ಭಾವನೆಯನ್ನು ಮರೆಯಿಸಿ, ಸಹಕಾರ, ಸಹಬಾಳ್ವೆ, ಸಾಮರಸ್ಯ, ಭಾವನೆಯನ್ನು ಕುದುರಿಸಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬರುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆಂದು ಹೇಳಬೇಕು.

"ಶಿವನು ನಿರ್ಮಿಸಿದನು ಮಾನವರನು
ಮಾನವನು ರಚಿಸಿಹನು ಜಾತಿ ಮತಗಳನು
ಜಾತಿ-ಮತಗಳೆಷ್ಟಾದರೇನು; ನೀತಿಯೊಂದಲ್ಲವೆ?
ನೀತಿ ನಿಯಮದಿ ನಿಲ್ಲೆ ಮಹಾಮಾನವರೆಂದ
ನಮ್ಮ ಮೃಡಗಿರಿ ಅನ್ನದಾನೀಶ್ವರ"

—ವಚನ ಸಂಪದ

ಇದು ಕೇವಲ ವಚನ ರಚನೆಯ ದೃಷ್ಟಿಯಿಂದ ಹೇಳಿದ ವಿಷಯವಲ್ಲ. ಶ್ರೀಮಠದಿಂದ ನಡೆಯುವ ಧಾರ್ಮಿಕ ಸಾಂಸ್ಕೃತಿಕ ಸಾಮಾಜಿಕ ಕಾರ್ಯಗಳಲ್ಲಿ ನಾವು ಪ್ರತ್ಯೇಕವಾಗಿ ಇದನ್ನು ಕಾಣಬಹುದಾಗಿದೆ. ಶ್ರೀಮಠದ ಸದ್ಭಕ್ತರಲ್ಲಿ ಸಮಾಜದ ಎಲ್ಲಾ ಜಾತಿ ಮತ-ಪಂಥ-ಪಂಗಡದ ಜನರಿದ್ದಾರೆ. ಎಲ್ಲರೂ ಒಂದೇ ಭಾವನೆಯಿಂದ ಶ್ರೀ ಸನ್ನಿಧಿಯವರಲ್ಲಿ ಸದ್ಭಕ್ತಿಯನ್ನು ಹೊಂದಿದವರಾಗಿದ್ದಾರೆ. ವಿಜಯದಶಮಿಯ ದಿನದಂದು ಶ್ರೀಮಠದಲ್ಲಿ ವಿಶೇಷ ಪೂಜೆ ನೆರವೇರುತ್ತದೆ. ಅಂದು ಸಂಜೆಯಲ್ಲಿ ಶ್ರೀಮಠಕ್ಕೆ ಪೂಜ್ಯರ ದರ್ಶನಾರ್ಥವಾಗಿ ಸಮಾಜದ ಎಲ್ಲಾ ಜನರು ಬರುತ್ತಾರೆ. ಶ್ರೀಮಠಕ್ಕೆ ಆಗಮಿಸುವ ಸರ್ವ ಜನಾಂಗದ ಸದ್ಭಕ್ತರಿಗೆ ಪೂಜ್ಯರು ಭೇದ-ಭಾವವಿಲ್ಲದೆ, ಸರ್ವರಿಗೂ ಲೇಸನೇ ಬಯಸುವ ಅಣ್ಣನವರ ಮಾತನ್ನು ಪುಸ್ತಕದಲ್ಲಿರಿಸಿಕೊಂಡು ಸಮಾಜ ಕಲ್ಯಾಣಾರ್ಥವಾಗಿ ಆಶೀರ್ವಾದಗೈಯುತ್ತಾ ಬಂದಿರುವದು ಪ್ರಶಂಸನೀಯವಾಗಿದೆ.

"ಅಸತೋ ಮಾ ಸದ್ಗಮಯ,
ತಮಸೋ ಮಾ ಜ್ಯೋತಿರ್ಗಮಯ,
ಮೃತ್ಯೋರ್ಮಾ ಅಮೃತಂಗಮಯ"

ಎನ್ನುವ ವೇದ ಉಕ್ತಿಯಂತೆ, ಸಮಾಜದಲ್ಲಿ ಕಂಡು ಬರುವ ಅಜ್ಞಾನವನ್ನು, ಅಸತ್ಯವನ್ನು ಕೇಡುಗಳನ್ನು ಸಾಮಾಜಿಕ ಹಿತದೃಷ್ಟಿಯಿಂದ ನಿವಾರಿಸುವದು ಅವಶ್ಯವಾಗಿದೆ.

ಇವುಗಳೊಂದಿಗೆ ಸಮಾಜ ಹಾಗೂ ಸಮಾಜಿಕರು ಎಂದಿಗೂ ಒಳ್ಳೆಯ ಜೀವನವನ್ನು ಹೊಂದಲಾರರು. ಮಾನವರ ಜೀವನ ಸಾರ್ಥಕವಾಗಬೇಕಾದರೆ ದೇವ (ಜ್ಞಾನ) ನೊಲಿಮೆಯಿಂದ ಸಾಧ್ಯ. ಸಾಯುದ ಮುನ್ನ ಸ್ವಯವನರಿದಡೆ ದೇವನೊಲಿಮೆ ಸಾಧ್ಯ ವಾಗುತ್ತದೆ. ಸತ್ತ ಮೇಲೆ ಸಿಗಬಹುದಾದ ಸ್ವರ್ಗ ಸುಖದ ಜೀವವಿಮೆಯನ್ನು ಶಿವ ಶರಣರು ಎಂದೂ ನಂಬಲಿಲ್ಲ. ಸಾಧ್ಯವಾದರೇ ಕುಳಿತಲ್ಲಿಯೇ ಕೈಲಾಸ ಕಟ್ಟುವಂತ ಪ್ರಯತ್ನ ಮಾಡಬೇಕೆಂದರು. ಈ ದಿಶೆಯಲ್ಲಿ ಪೂಜ್ಯ ಸನ್ನಿಧಿಯವರು ಸಮಾಜದಲ್ಲಿಯ ಅಜ್ಞಾನವನ್ನು ಹೊಡೆದು ಹಾಕಲು, ಪಾಮರರನ್ನು ಪಂಡಿತರನ್ನಾಗಿಸಲು, ಸಾವಿನಿಂದ ಅಮರತ್ವದೆಡೆಗೆ ಕೊಂಡೊಯ್ಯಲು ಪ್ರತಿ ವರ್ಷ ಕಾರ್ತಿಕ ಬಹುಳ ಅಮವಾಸ್ಯೆಯೆಂದು ಸಾಂಕೇತಿಕಾರ್ಥದಲ್ಲಿ ದೀಪೋತ್ಸವವನ್ನು ನೆರವೇರಿಸುತ್ತಾ ಬಂದಿರುವರು. ಈ ದೀಪೋತ್ಸವವು, ಸಾಮಾನ್ಯವಾಗಿ ನೋಡುಗರಿಗೆ (ಸಾಮಾನ್ಯರಿಗೆ) ಮೋಜಾಗಿ– (ಮನೋರಂಜನೆಯಾಗಿ) ಕಂಡರೂ, ನಿಜವಾದ ಅರ್ಥದಲ್ಲಿ ಸಮಾಜದ ಜನರ ಅಂತರಾಳ ದಲ್ಲಿಯ ಕತ್ತಲೆಯನ್ನು, ಕಳೆಯಲು ಬೀರುವ ಜ್ಞಾನ ಜ್ಯೋತಿಯಾಗಿದೆ. ಶ್ರೀಮಠದ ಜ್ಞಾನ ದೀಪೋತ್ಸವದ ಕಾರ್ಯದಲ್ಲಿ ಸಮಸ್ತ ಸದ್ಭಕ್ತರು ಪಾಲ್ಗೊಂಡು ಸ್ವಾಮಿಯ ಸೇವೆಗೈದು ಪಾವನರಾಗುತ್ತಾರೆ.

ಪೂಜ್ಯ ಸನ್ನಿಧಿಯವರು ಶ್ರೀಮಠದ ಪೀಠಾಧಿಕಾರಿಗಳಾಗಿ ಶೂನ್ಯ ಪೀಠಾರೋಹಣವ ಮಾಡಿ ಇಂದಿಗೆ ಕಾಲು ಶತಮಾನ ಗತಿಸಿತು. ಇದರ ಅಂಗವಾಗಿ ಪೂಜ್ಯ ಸನ್ನಿಧಿಯವರು ಪೀಠಾರೋಹಣದ ರಜತೋತ್ಸವವನ್ನು ಕೇವಲ ಮುಂಡರಗಿಯ ಶ್ರೀ ಮಠದಲ್ಲಿಯೇ ಆಚರಿಸದೇ ನಾಡಿನ ಉದ್ದಗಲಕ್ಕೂ ಸಂಚರಿಸಿ, ಅಲ್ಲಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಸಾಮಾಜಿಕ ಸಭೆ–ಸಮ್ಮೇಳನಗಳನ್ನು ಏರ್ಪಡಿಸಿ ನಾಡಿನ ಹಾಗೂ ಜನತೆಯ ಏಳಿಗೆಗಾಗಿ ಚಲಿಸುವ ಲಿಂಗವಾಗಿ, ಜನಮನದ ಕತ್ತಲೆಯನ್ನು ಕಳೆಯುವ ಪರಂಜ್ಯೋತಿಯಾಗಿ, ದಿವ್ಯ ಸಂದೇಶವನ್ನು ಬೀರುತ್ತಾ ಬಂದಿದ್ದಾರೆ.

ಈ ಹಿಂದೆ ಯಾವ ಮಠಾಧೀಶರು ಮಾಡದ ಮಹತ್ವದ ಕಾರ್ಯವನ್ನು ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠದ ದಶಮ ಪೀಠಾಧೀಶರು ಕೈಗೆತ್ತಿಕೊಂಡು ಸಾಧಿಸಿಕೊಂಡು ಬಂದವರಾಗಿದ್ದಾರೆ. ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸಮಾಲೆಯ ವತಿಯಿಂದ ನಾಡಿನ ಉದ್ದಗಲಕ್ಕೂ ಶಿವಶರಣರ ಧರ್ಮ ಜಿಜ್ಞಾಸುಗಳನ್ನು ಕುರಿತು ಸಮಗ್ರ ವಿಚಾರ ಸಂಕಿರಣ ಕಾರ್ಯಕ್ರಮ ಹಮ್ಮಿಕೊಂಡ ಶ್ರೇಯಸ್ಸು ಪ್ರಪ್ರಥಮವಾಗಿ ಪೂಜ್ಯ ಸನ್ನಿಧಿಯವರಿಗೆ ಸಲ್ಲುತ್ತದೆ. ವಿಚಾರ ಸಂಕಿರಣ ಗಳು ಜರುಗಿ ಆಯಾ ಪ್ರದೇಶದ ಜನತೆಗೆ ಆ ಶಕ್ತಿಗಳ ಬದುಕಿನ ಸಾರ ಸಂದೇಶಗಳು ಸಂದಾಯಗೊಂಡಿವೆ. ಈ ಎಲ್ಲ ವಿಚಾರ ಸಂಕಿರಣಗಳಲ್ಲಿ ನಾಡಿನ ಹಲವಾರು ವಿದ್ವಾಂಸರು ಪಾಲ್ಗೊಂಡು ತಮ್ಮ ಅಮೂಲ್ಯ ಪ್ರಬಂಧಗಳನ್ನು ಸಾದರಪಡಿಸಿದ ಉಪನ್ಯಾಸಗಳನ್ನು

ಸಂಗ್ರಹಿಸಿ ಅನೇಕ ಗ್ರಂಥಗಳನ್ನು ಪ್ರಕಟಿಸಿದ ಶ್ರೇಯಸ್ಸು ಪೂಜ್ಯ ಸನ್ನಿಧಿಯವರಿಗೆ ಸಲ್ಲುತ್ತದೆ.

"ವೃಕ್ಷವಾಸಿಯಾಗಿರ್ದು ಭಿಕ್ಷಾ ಪರಿಣಾಮಿಯಾದರೇನು?
ಉಟ್ಟುದವಳಿದು ಬತ್ತಲೆಯಾದರೇನು?
ಕಾಲಕರ್ಮ ರಹಿತರಾದರೇನು? ಕೂಡಲ ಚೆನ್ನ ಸಂಗನ
ಅನುಭಾವವನರಿಯದವರು ಏಸು ಕಾಲವಿದ್ದರೇನು?
ವ್ಯರ್ಥ ಕಾಣಿರೋ" ಚೆನ್ನಬಸವಣ್ಣ.

"ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ
ಸತ್ಯದ ಬಲದಿಂಬ ಅಸತ್ಯದ ಕೇಡು ನೋಡಯ್ಯ
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯ
ಕೂಡಲಸಂಗನ ಶರಣ ಅನುಭಾವದಿಂದ ಎನ್ನ ಭವದ ಕೇಡು ನೋಡಯ್ಯ"
ಬಸವಣ್ಣನವರು.

ಈ ವಚನಗಳಿಂದ ಶಿವಾನುಭವದ ಹಿರಿಮೆಯನ್ನು ನಾವು ಚೆನ್ನಾಗಿ ಗುರುತಿಸಬಹುದಾಗಿದೆ. ಮಾನವನ ಜೀವನಕ್ಕೆ ಅನುಭಾವ ಅವಶ್ಯವಾಗಿದೆ. ಪೂಜ್ಯ ಸನ್ನಿಧಿಯವರು ಶಿವಶರಣರು ತೋರಿದ ಮಾರ್ಗದಲ್ಲಿ ಜೀವನದ ಅಮರ ಸಂದೇಶವನ್ನು ಸಾರಲು ಶ್ರೀ ಮಠದಲ್ಲಿ ಶಿವಾನುಭವ ಸಮಿತಿಯನ್ನು ಸ್ಥಾಪಿಸಿದ್ದಾರೆ. ಅದರ ಮೂಲಕ ನಾಡಿನ ಜನರಲ್ಲಿ ಧಾರ್ಮಿಕ ಹಾಗೂ ಅಧ್ಯಾತ್ಮಿಕ ಜಾಗೃತಿಯನ್ನುಂಟು ಮಾಡಲು ಪ್ರತಿ ಶುಕ್ರವಾರ ಶಿವಾನುಭವ ಗೋಷ್ಠಿಯನ್ನು ನಡೆಸಲಾಗುತ್ತದೆ. ಈಗಾಗಲೇ ೧೦೧೧ಕ್ಕೂ ಹೆಚ್ಚು ಶಿವಾನುಭವ ಗೋಷ್ಠಿಗಳು ಅರ್ಥಪೂರ್ಣವಾಗಿ ಹಾಗೂ ವ್ಯವಸ್ಥಿತವಾಗಿ ನಡೆದಿರುತ್ತಾ ಬಂದಿವೆ. ನಿಜವಾದ ಅರ್ಥದಲ್ಲಿ ಈ ನಾಡಿನ ಜನರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿ, ಧಾರ್ಮಿಕ ಭಾವನೆಯನ್ನು ಪ್ರಚೋದಿಸಿದ ಬಹುಪಾಲು ಶ್ರೇಯಸ್ಸು ಶ್ರೀ ಸನ್ನಿಧಿಯವರಿಗೆ ಸಲ್ಲಬೇಕು.

ಇಂದಿನ ಪೂಜ್ಯ ಸನ್ನಿಧಿಯವರು ಈ ಮಹಾಪೀಠದ ಗುರು ಪರಂಪರೆಯಲ್ಲಿ ಆಗಿ ಹೋದ ಗುರು ಪುಂಗವರಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ, ಕಾಲ ಧರ್ಮಕ್ಕೆ ಅನುಗುಣವಾಗುವಂತೆ, ಭಾರತೀಯರ ಧಾರ್ಮಿಕ-ಸಾಂಸ್ಕೃತಿಕ ಆಚರಣೆಗಳನ್ನು ಕುರಿತು ವಿನೂತನ ದೃಷ್ಟಿಯನ್ನು ಹೊಂದಿದವರಾಗಿದ್ದಾರೆ. ಪ್ರತಿ ವರುಷವೂ ಮಾಘ ಬಹುಳ ಶುದ್ಧ ೧೨ ರಂದು ಲಿಂ. ಎಂಟನೆಯ ಜಗದ್ಗುರುಗಳ ಪುಣ್ಯಾರಾಧನೆಯ ಅಂಗವಾಗಿ ಯಾತ್ರಾ ಮಹೋತ್ಸವವನ್ನು ನಡೆಸುತ್ತಾ ಬಂದಿದ್ದಾರೆ, ಶ್ರೀ ಮಠದ ಈ ಯಾತ್ರಾ ಮಹೋತ್ಸವವನ್ನು ನಾವು ಕೇವಲ ಸಾಂಪ್ರದಾಯಿಕ ಹಾಗೂ ಧಾರ್ಮಿಕ ದೃಷ್ಟಿಯಿಂದ

ನೋಡಿದರೆ ಸಾಲದು. ಯಾತ್ರಾ ಮಹೋತ್ಸವದ ಅರ್ಥ ಹಾಗೂ ವ್ಯಾಪ್ತಿಯು ಸಮಾಜ ವಿಜ್ಞಾನ ದೃಷ್ಟಿಯಲ್ಲಿ ವಿಶಿಷ್ಟವಾಗಿದೆನ್ನಬಹುದು. ಯಾತ್ರಾ ಮಹೋತ್ಸವಗಳು ಇಂದು ಸಾಮಾಜಿಕ ಮಹತ್ವವನ್ನು ಪಡೆಯುಹತ್ತಿವೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಜಾತ್ರೆ ಯೆಂದರೆ ಹಿಂದಿನಂತೆ ಕೇವಲ ಬಣ್ಣ ಬಣ್ಣಗಳಿಂದ ಕೂಡಿದ ರಥವನ್ನು ಎಳೆಯುವ ದಾಗಲಿ, ಹಣ್ಣು ಕಾಯಿಗಳನ್ನು ರಥಕ್ಕೆ ಕಳಸಕ್ಕೆ ಎಸೆಯುವ ಜೂಜಾಟವಾಗಲಿ, ಬೆಂಡು ಬೆತ್ತಾಸಗಳನ್ನು ತಿಂದು ಮೋಜು ಮಾಡುವದಾಗಲಿ ಅಲ್ಲ. ರಥೋತ್ಸವವು ಧಾರ್ಮಿಕ ಆಚರಣೆಯ ಸಂಕೇತವಾಗಿದ್ದರೂ, ಸಮಾಜದ ಎಲ್ಲಾ ಜನರು ಜಾತಿ-ಮತ-ಪಂಥ-ಪಂಗಡಗಳ, ಹೆಣ್ಣು-ಗಂಡುಗಳ ಭೇದವಿಲ್ಲದೆ ಕಾಯಾ, ವಾಚಾ, ಮನಸ್ಸಾ ಪರಿಶುದ್ಧತೆ ಯಿಂದ ಕೈಗೆ ಕೈ ಕೂಡಿಸಿ ಎಳೆದಾಗ ರಥವು ನಿಧಾನವಾಗಿ ಮುನ್ನಡೆಯುವದು, ಸಮಾಜಿಕರು ತಮ್ಮ ತಮ್ಮ ಜೀವನದಲ್ಲಿ ಹುಚ್ಚು ಆವೇಶಕ್ಕೆ ಆಸ್ಪದ ಕೊಡದೆ, ಪ್ರತಿ ಯೊಂದಕ್ಕೂ ಸಾರಾಸಾರ ವಿಚಾರಿಸಿ ನಿರ್ಣಯ ತೆಗೆದುಕೊಂಡು ನಿತ್ಯ ಕಾರ್ಯಕಲಾಪ ಗಳನ್ನು ನಿಧಾನವಾಗಿ ಸಾಗಿಸುವುದರ ಸಂಕೇಂತವಾಗಿದೆಯಲ್ಲದೆ ಇಂತಹ ಪವಿತ್ರ ಕಾರ್ಯಗಳಲ್ಲಿ ಜಾತಿ-ಮತ-ಪಂಥವನ್ನದೇ ಎಲ್ಲರೂ ಸಮಭಾವ, ಸಾಮರಸ್ಯದಿಂದ ಕೂಡಿ ಮಾಡುವದು, ಒಳ್ಳೆಯ ಕಾರ್ಯಗಳನ್ನು ಯಾವಾಗಲೂ ಸಮಾಜದ ಎಲ್ಲ ಜನರು ಕೂಡಿ ಮಾಡಿದಾಗ ಆ ಕಾರ್ಯವು ಫಲಕಾರಿಯಾಗಿರುತ್ತದೆ ಎಂಬ ಭಾವನೆಯ ದ್ಯೋತಕವೂ ಆಗಿದೆ. **Unity in diversity** ಎನ್ನುವಂತೆ ಸಮಾಜದ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸುವದು ಯಾತ್ರಾ ಮಹೋತ್ಸವದ ಉದ್ದೇಶವಾಗಿದೆ.

"ಎಲ್ಲರಲ್ಲಿರುವುದು ಒಂದೇ ಧರ್ಮ
ಧರ್ಮದಲ್ಲಿಲ್ಲ ಸಂಕೋಚ ಕರ್ಮ
ಧರ್ಮದ ಮರ್ಮವನು ಅರಿಯೆಂದ
ನಮ್ಮ ಮೃಡಗಿರಿ ಅನ್ನದಾನೀಶ"

ಶ್ರೀ ಸನ್ನಿಧಿಯವರ ಈ ಸಂದೇಶವು ಯಾತ್ರಾ ಮಹೋತ್ಸವದ ಸಾರ್ಥಕತೆಯನ್ನು ಒತ್ತಿ ಹೇಳುತ್ತದೆ.

ಶ್ರೀಮಠದ ಯಾತ್ರಾ ಮಹೋತ್ಸವವು ತನ್ನದೇ ಆದ ವೈಶಿಷ್ಟ್ಯತೆಗಳಿಂದ ಕೂಡಿ ರುವದು, ಈ ಸಂದರ್ಭದಲ್ಲಿ ಶ್ರೀಮಠಕ್ಕೆ ಆಗಮಿಸುವ ಸರ್ವ ಭಕ್ತರ ಅಂತರಂಗದ ಅಜ್ಞಾನವನ್ನು ಕಳಿಯಲು ನಾಡಿನ ನಾನಾ ಭಾಗಗಳ ಹರಗುರು ಚರಮೂರ್ತಿಗಳಿಂದಲೂ, ವಿದ್ವಾಂಸರಿಂದಲೂ, ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಧಾರ್ಮಿಕ ಪರವಾದ ಹಲವಾರು ಪ್ರವಚನಗಳನ್ನು ಆಲಿಸುವುದರ ಮೂಲಕ ಸಮಸ್ತ ಭಕ್ತರು ತಮ್ಮ ಜ್ಞಾನದ ಹಸಿವನ್ನು ಹಿಂಗಿಸಿಕೊಂಡರೆ, ಶಿವನ ಸೊಮ್ಮು ಶಿವನಿಗೆ ಅರ್ಪಿಸುವೆನೆಂಬ ಸರ್ವ ಸಮರ್ಪಣ ಭಾವದಿಂದ ಶ್ರೀಗಳು ಈ ಸಂದರ್ಭದಲ್ಲಿ ಶ್ರೀಮಠಕ್ಕೆ ದರ್ಶನಾರ್ಥಿಗಳಾಗಿ ಬರುವ ಎಲ್ಲ ಭಕ್ತರಿಗೆ ಶ್ರೀಮಠದ ದಾಸೋಹ ನಿಲಯದಿಂದ ಹಸಿದೊಡಲುಗಳನ್ನು ಹಿಂಗಿಸಿ ಆನಂದಗೊಳಿಸಲಾಗುತ್ತದೆ. ಹೀಗೆ ಅನ್ನ ದಾಸೋಹವು

ಶ್ರೀ ಸನ್ನಿಧಿಯವರು ಕೈಕೊಂಡಿರುವ ಹಲವಾರು ಸಾಮಾಜಿಕ ಕಾರ್ಯಗಳಲ್ಲಿ ಒಂದಾಗಿದೆ.

ಯಾತ್ರಾ ಮಹೋತ್ಸವದ ಕಾಲಕ್ಕೆ ವಿವಿಧ ಕಲಾ ಪರಿಣಿತರನ್ನು, ಸಂಗೀತ ಗಾರರನ್ನು ಆಹ್ವಾನಿಸಿ ತನ್ಮೂಲಕ ಅವರ ಆ ಜ್ಞಾನವನ್ನು ಸರ್ವ ಭಕ್ತರು ಅಳವಡಿಸಿ ಕೊಳ್ಳುವ ಸದಾವಕಾಶವನ್ನು ತಮ್ಮದಾಗಿಸಿಕೊಳ್ಳುತ್ತಿರುವದು ಒಂದು ಕಡೆಗೆ, ಲಿಂಗದೀಕ್ಷೆ ಕಾರ್ಯವು ವೀರಶೈವ ಧರ್ಮ ಪ್ರಸಾರದ ಪ್ರಮುಖ ಮಾರ್ಗವಾಗಿದ್ದರಿಂದ ಶ್ರೀಮಠದ ಯಾತ್ರಾ ಮಹೋತ್ಸವ ಕಾಲಕ್ಕೆ ಪ್ರತಿ ವರ್ಷವೂ ಭಕ್ತ ಜಂಗಮರಿಗೆ ಉಚಿತ ಲಿಂಗದೀಕ್ಷೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾ ಬಂದಿರುವುದು ಇನ್ನೊಂದು ಕಡೆಗೆ ನಮ್ಮ ಸಮಾಜದಲ್ಲಿ ಬಡತನದಲ್ಲಿ ಬದುಕುವ ಜನರಿಗೆ ಕೊರತೆಯಿಲ್ಲ.

> "ಹೊಟ್ಟೆಗಾಗಿ ಹೋರಾಟ, ಬಟ್ಟೆಗಾಗಿ ಏರಾಟ
> ....
> ....
> ಈ ಜಂಜಾಟವಿದ್ದರೂ ಬದುಕಿ ಬಾಳಬೇಕೆಂದ
> ನಮ್ಮ ಮೃಡಗಿರಿ ಅನ್ನದಾನೀಶ"

ಬಡತನಕ್ಕೆ ಯಾವಾಗಲೂ ಆಹಾರ, ಬಟ್ಟೆ, ವಸತಿಯ ಚಿಂತೆ, ಬದುಕಿನ ಸಾಧನೆಯ ಬಗ್ಗೆ ಚಿಂತಿಸುವ ವ್ಯವಧಾನ ಇರುವದಾದರೂ ಅವರಿಗೆ ಯಾವಾಗ? ಆದ್ದರಿಂದ ಬಡ ಜನರ ಬಗೆಗೆ ಚಿಂತಿಸುವ ಹಾಗೂ ಅವರ ಬದುಕಿನಲ್ಲಿ ಬೆಳಕನ್ನು ತರುವದು ತಮ್ಮ ಹೊಣೆಯೆಂದು ಭಾವಿಸಿ ಪರಮಪೂಜ್ಯರು ಮುಂಡರಗಿ ಹಾಗೂ ಸುತ್ತ ಮುತ್ತಲಿನ ಗ್ರಾಮದ ನೂರಾರು ಬಡ ಕುಟುಂಬಗಳ ಸಹಾಯಾರ್ಥವಾಗಿ ಅನ್ನದಾನ, ವಸ್ತ್ರದಾನ ಹಾಗೂ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದಾರೆ.

ನಮ್ಮ ದೇಶವು ಕೃಷಿ ಪ್ರಧಾನವಾದ ದೇಶವಾಗಿದ್ದರಿಂದ ರೈತರಿಂದಲೇ ಈ ದೇಶದ ಆರ್ಥಿಕ ಪ್ರಗತಿ ಸಾಧ್ಯವೆಂದು ತಿಳಿದ ಶ್ರೀಗಳವರು ರೈತರ ಸ್ಥಿತಿಗತಿಯನ್ನು ಸುಧಾರಿಸು ವದು ಅತ್ಯವಶ್ಯಕವಾಗಿದೆ ಎಂದು ಹೇಳುತ್ತಿರುವದು ವಾಸ್ತವಿಕ ಸಂಗತಿಯಾಗಿದೆ. ಯಾತ್ರಾ ಮಹೋತ್ಸವ ಕಾಲಕ್ಕೆ ಗ್ರಾಮದ ಸುತ್ತಮುತ್ತಲಿನ ಜನರಿಗೆಲ್ಲ ಉಪಯೋಗ ವಾಗಲೆಂದು ಕೃಷಿ ಮೇಳಗಳನ್ನು, ಕೃಷಿ ಪ್ರದರ್ಶನಗಳನ್ನು, ಪ್ರಾತ್ಯಕ್ಷಿಕಗಳನ್ನು ತಜ್ಞರಿಂದ ಹಾಗೂ ಅನುಭವಿಕ ರೈತರಿಂದ ನಡೆಸಲಾಗುತ್ತದೆ. ಆ ಮೂಲಕ ನಮ್ಮ ರೈತ ಸಮು ದಾಯಕ್ಕೆ ವೈಜ್ಞಾನಿಕ ಸುಧಾರಿತ ಕೃಷಿ ಪದ್ಧತಿಯನ್ನು ತಿಳಿಸಿಕೊಡುತ್ತಿರುವ ಶ್ರೇಯಸ್ಸು ಶ್ರೀಮಠಕ್ಕೆ ಸಲ್ಲುತ್ತದೆ.

ಇದಲ್ಲದೆ ನಾಡಿನ ಜನರ ಆರೋಗ್ಯದ ಕಡೆಗೆ ಶ್ರೀ ಸನ್ನಿಧಿಯವರು ಗಮನ ವಹಿಸು ತ್ತಿರುವದು ಗಮನಾರ್ಹವಾಗಿದೆ. ಯಾತ್ರಾ ಮಹೋತ್ಸವ ಕಾಲದಲ್ಲಿ ಪೂಜ್ಯರು ಆರೋಗ್ಯ ಭಾಗ್ಯದ ಮೇಳಗಳನ್ನು ಏರ್ಪಡಿಸುತ್ತಾ ಬಂದಿದ್ದಾರೆ. ತನ್ಮೂಲಕ ನಾಡಿನ ಹಾಗೂ ಹೊರನಾಡಿನ ಖ್ಯಾತ ವೈದ್ಯರಿಂದ ನಡೆಸಿದ ಆರೋಗ್ಯ ತಪಾಸಣೆ, ಔಷಧೋಪಚಾರ,

ಆರೋಗ್ಯದ ಬಗೆಗೆ ಉಪನ್ಯಾಸಗಳು, ಕಣ್ಣಿನ ಶಸ್ತ್ರಚಿಕಿತ್ಸೆ ಇವುಗಳಲ್ಲದೆ ಗ್ರಾಮೀಣ ಬಡಜನರ ದನಕರುಗಳಿಗೆ ಉಚಿತ ರೋಗ ತಪಾಸಣೆ ಹಾಗೂ ಚಿಕಿತ್ಸೆ ಕಾರ್ಯಕ್ರಮಗಳು ಈ ಭಾಗದ ಜನರಿಗೆ ಹೆಚ್ಚು ಪ್ರಯೋಜನೆಯನ್ನು ನೀಡಿವೆ ಎಂದು ಹೇಳಬಹುದು.

ಹೀಗೆ ಇಂದಿನ ಶ್ರೀಮಠದ ದಶಮ ಪೀಠಾಧೀಶರಾದ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರು ತಮ್ಮ ತನು-ಮನ-ಧನಗಳಿಂದ, ನಾಡಿನ ಏಳಿಗೆಗಾಗಿ ಮತ್ತು ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ನಡೆಸುತ್ತಾ ಬಂದಿರುವ ಈ ವಿನೂತನ ಯಾತ್ರಾ ಮಹೋತ್ಸವವು, ಅದರ ನಿಜವಾದ ಅರ್ಥದಲ್ಲಿ ಚಲಿಸುವ ಜನತಾ ವಿಶ್ವವಿದ್ಯಾಲಯವಾಗಿದೆ ಎಂದು ಹೇಳಬಹುದು. ಈ ಜನತಾ ವಿಶ್ವವಿದ್ಯಾಲಯವಾದ ಯಾತ್ರಾ ಮಹೋತ್ಸವ ಕಾಲದಲ್ಲಿ ಶ್ರೀ ಸನ್ನಿಧಿಯವರು ಕೈಕೊಂಡಿರುವ ಹಲವಾರು ಸಮಾಜೋಪಯೋಗಿ ಕಾರ್ಯಗಳು ಪ್ರಮುಖವಾಗಿ ಸಾಮಾಜಿಕವಾದವುಗಳಾಗಿವೆ. ತೀರಾ ಹಿಂದುಳಿದ ಪ್ರದೇಶವಾಗಿದ್ದ ಮುಂಡರಗಿ ತಾಲೂಕನ್ನು ಇಂದು ಎಲ್ಲಾ ರೀತಿಯಿಂದಲೂ ಒಂದು ಒಳ್ಳೆಯ ಪ್ರದೇಶವನ್ನಾಗಿ ಮಾಡಿದ ಶ್ರೇಯಸ್ಸು ಶ್ರೀಮಠದ ಇಂದಿನ ಶ್ರೀ ಜಗದ್ಗುರುಗಳಿಗೆ ಸಲ್ಲುತ್ತದೆ.

ಶ್ರೀಗಳವರ ಬದುಕಿನ ಕೊಡುಗೆಗಳೆಲ್ಲವೂ ಸಮಾಜಕ್ಕೆ ಸಲ್ಲಿಸಿದ ದಾಸೋಹದ ಕೊಡುಗೆಗಳೇ ಆಗಿವೆ. ಈ ನಾಡಿನ ಉದ್ದಗಲಕ್ಕೂ ಸಂಚರಿಸಿ, ಶ್ರೀಗಳವರು ಏನೆಲ್ಲ ಸಾಮಾಜಿಕ ಮುಖವಾಗಿ ಸೇವೆಯನ್ನು ಗೈದಿದ್ದರೂ, ಪೂಜ್ಯರಲ್ಲಿ ಮಾಡಿದೆನೆಂಬ ಭಾವನೆಯಿಲ್ಲ. "ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ" ಎಂಬುದು ಅವರ ನಡೆಯಲ್ಲಿ ಸದಾ ಜಾಗ್ರತವಾಗಿರುವುದನ್ನು ನಾವಿಂದು ಕಾಣಬಹುದಾಗಿದೆ. ಶ್ರೀ ಸನ್ನಿಧಿಯವರು ದಿನಕರನಂತೆ ದಣಿವರಿಯದ ವ್ಯಕ್ತಿಯಾಗದೆ ಮಹಾಶಕ್ತಿಯಾಗಿದ್ದಾರೆಂದು ಹೇಳುವದು ಕೇವಲ ಹೊಗಳಿಕೆಯ ಮಾತಲ್ಲ, ಅದು ವಾಸ್ತವಿಕ ಸತ್ಯ ಸಂಗತಿಯಾಗಿದೆ. ಸಮಾಜದ ಸರ್ವ ಕ್ಷೇತ್ರಗಳಲ್ಲಿ ಹಲವಾರು ಜನೋಪಯೋಗಿಯಾಗುವಂತಹ ಸಮಾರಂಭಗಳನ್ನು ನಡೆಸಿದ್ದು, ನಡೆಸುತ್ತಿರುವದು ನಿಜಕ್ಕೂ ಸ್ಮರಣೀಯ ಹಾಗೂ ಮಾದರಿಯಾಗಿದೆ ಎಂದು ಹೇಳುತ್ತಾ ಪೂಜ್ಯ ಸನ್ನಿಧಿಯವರ ಪವಿತ್ರ ಪಾದಾರವಿಂದಗಳಲ್ಲಿ ನನ್ನ ಭಕ್ತಿ ಪೂರ್ವಕ ಅನಂತ ಅನಂತ ನಮನಗಳೊಂದಿಗೆ ಈ ಅಲ್ಪ ಸೇವೆಯನ್ನು ಸಲ್ಲಿಸುವೆ.

ನಾ ಕಂಡ ಜಗದ್ಗುರುಗಳು

—ವ್ಹಿ. ಜಿ. ಮಠಪತಿ (ಬಸವಕಂದ) ಸೊರಟೂರು

ಪ್ರಾರ್ಥನೆ· ಕರುಣಾಳು ಮಹಾಮಹಿಮಾ ಓ ಅನ್ನದಾನೀಶ।
ಕರುಣಿಸಿ ಕಾಪಾಡು ವೃಡಗಿರಿಯ ವಾಸ ||ಪ||

ರಜತ ಮಹೋತ್ಸವವು ತಂದೀತು ಸಂತೋಷ।
ಭಕ್ತರುದ್ಧಾರವೇ ನಿನ್ನ ಘನ ಉದ್ದೇಶ।
ಜ್ಞಾನ ನಿಧಿಯೇ ನೀನು ಆಗಿರುವಿ ಸರ್ವೇಶ।
ಸಿದ್ಧಿಪುರುಷನಾಗಿ ಮೆರೆಯುವಿ ಸಿದ್ಧೇಶ ||೧||

ಮೇರು ಕೃತಿ ಸಾಹಿತ್ಯ ರಚಿಸಿದ ಮಾಲಿಂಗೇಶ।
ನೀನು ಪಾದವನಿಟ್ಟ ನೆಲವೆಲ್ಲ ಕೈಲಾಸ।
ನನ್ನ ಸಾವಿರ ನಮನ ಓ ಅನ್ನದಾನೀಶ।
ಬಸವ ಕಂದನು ಭಜಿಸಿ ಆಯಿತು ಭವನಾಶ ||೨||

ಮನುಷ್ಯ ಎಲ್ಲ ಪ್ರಾಣಿಗಳಿಗಿಂತ ಅತೀ ಶ್ರೇಷ್ಠನೆಂದು ಪರಿಗಣಿಸಲ್ಪಟ್ಟಿದ್ದಾನೆ. ಯಾಕಂದರೆ ಸೃಷ್ಟಿಕರ್ತನಾದ ಪರಮಾತ್ಮನು ಮನುಷ್ಯನಿಗೆ ಎಲ್ಲ ಜೀವಿಗಳಿಗಿಂತ ಹೆಚ್ಚಿನ ಅಂದರೆ ಬುದ್ಧಿ, ಜ್ಞಾನ, ತಿಳಿವಳಿಕೆಯನ್ನು ಕೊಟ್ಟಿದ್ದಾನೆ. ಅದುವೇ ಪರಮಾತ್ಮನ ಬಹು ದೊಡ್ಡ ಕೊಡುಗೆ.

ಮಾನವ ತನ್ನ ಜ್ಞಾನದ ಬಲದಿಂದ ಅಂತ್ಯದ ಗುರಿಯನ್ನು ಕಂಡುಹಿಡಿಯುವಲ್ಲಿ ಯಶಸ್ವಿಯಾದ. ಅದುವೇ "ಮುಕ್ತಿ" ಅಥವಾ ಮೋಕ್ಷ. ಈ ಸನ್ಮಾರ್ಗವೇ ಧರ್ಮವಾಗಿ ಪರಿಣಮಿಸಿತು. ನಮ್ಮ ದೇಶದಲ್ಲಿ ಇಂಥ ಹಲವಾರು ಧರ್ಮಗಳಿವೆ. (ಅವುಗಳೀಗ ಜಾತಿಯಾಗಿಬಿಟ್ಟಿವೆ). ಅಂಥ ಹಲವಾರು ಧರ್ಮಗಳಲ್ಲಿ ವೀರಶೈವ ಧರ್ಮ ವಿಶಾಲ ಧರ್ಮವಾಗಿ ಸಕಲ ಮಾನವ ಕುಲಕೋಟಿಯ ಲೇಸ ಬಯಸುತ್ತದೆ.

ವೀರಶೈವ ಪರಂಪರೆಯಲ್ಲಿ ಗುರುವಿರಕ್ತರು ಸಮಾಜದ ಧರ್ಮೋನ್ನತಿಗಾಗಿ ಹೋರಾಡುತ್ತ ಬಂದಿದ್ದಾರೆ. ಮಹಾನ್ ಮಾನವತಾವಾದಿ ಜಗಜ್ಯೋತಿ ಬಸವಣ್ಣನವರ ಕಲ್ಯಾಣ ಕ್ರಾಂತಿಯ ನಂತರ ಷಟಸ್ಥಲ ಜ್ಞಾನಿ ಚನ್ನಬಸವಣ್ಣನವರು ಉಳವಿಯ ಕಡೆ ಹೊರಟಾಗ ಅವರ ಹಿಂದೆ ಶರಣರ ಗುಂಪೇ ಇತ್ತು. ಅವರಲ್ಲಿ ಒಬ್ಬ ಶಿವಯೋಗಿಯನ್ನು ಚನ್ನಬಸವಣ್ಣನವರು ಅಪ್ಪಣೆ ಕೊಟ್ಟರು. ನೀವು ಕಪ್ಪತ್ತಗುಡ್ಡದಲ್ಲಿ ಅನುಷ್ಠಾನ ಮಾಡಿ ನಾಡಿನ ಉದ್ಧಾರ ಮಾಡಿರೆಂದು ಹೇಳಿದ ಪ್ರಕಾರ, ಶಿವಯೋಗಿಗಳು ಕಪ್ಪತ್ತಗುಡ್ಡದಲ್ಲಿ

ಅನುಷ್ಠಾನ ಮಾಡುತ್ತಾ ಇರಲು ಒಂದು ದಿನ ಬೇಡರ ಗುಂಪು ಶಿವಯೋಗಿಯನ್ನು ಕಂಡು, ಸುಲಿಗೆ ಮಾಡಲು ಪ್ರಯತ್ನಿಸಿದರು. ಆಗ ಶಿವಯೋಗಿಗಳು ನನ್ನ ಹತ್ತಿರ ಏನೂ ಇಲ್ಲ. ನಿಮಗೇನು ಬೇಕು ಹೇಳಿರಿ ಕೊಡುವೆನೆಂದು ತಿಳಿವಳಿಕೆ ಹೇಳಿದರು. ಆಗ ಆ ಬೇಡರು ನಮಗೆ ಹಸಿವಾಗಿದೆ, ಅನ್ನ ಬೇಕೆಂದಾಗ ಶ್ರೀಗಳು ತಮ್ಮ ಪರುಷ ಬಟ್ಟಲದಿಂದ ಬೇಡಿದವರಿಗೆ ಬೇಡಿದ್ದನ್ನು ನೀಡಿ ತೃಪ್ತಿಪಡಿಸಿದರು. ಬೇಡಿದವರಿಗೆ ಬೇಡಿದ್ದನ್ನು ನೀಡಿ ತೃಪ್ತಿಪಡಿಸಿದ ಈ ಶಿವಯೋಗಿಗಳು ಸಾಮಾನ್ಯರಲ್ಲ ಎಂದು ಬಗೆದು, ಮುಂಡರಗಿಗೆ ಕರೆನೊಯ್ದು ಶ್ರೀಗಳ ಆಶೀರ್ವಾದದಿಂದ ಬೇಡರ ಗುಂಪು ಸಚ್ಚಾರಿತ್ರವಂತರಾಗಿ ಶಿವಯೋಗಿಗೆ ಭವ್ಯ ಮಠ ಕಟ್ಟಿಸಿ ಅನ್ನ ಕೊಟ್ಟ ಶಿವಯೋಗಿಗೆ "ಅನ್ನದಾನೀಶ" ಎಂದು ನಮಿಸಿ ಅನ್ನದಾನೀಶನ ಮಠವೆಂದು ಕರೆಯಹತ್ತಿದರು. ಅಂದಿನಿಂದ ಬೆಳೆದುಬಂದ ಶ್ರೀಮಠವು ಈ ನಾಡಿನ ಚಿದ್‌ಬೆಳಕಾಗಿ ಸಮಾಜದ ಸರ್ವೋನ್ನತಿಗಾಗಿ ಶ್ರಮಿಸುತ್ತಿದೆ.

ಅಂದಿನಿಂದ ಇಂದಿನವರೆಗೆ ಶ್ರೀಮಠಕ್ಕೆ ಹತ್ತು (೧೦) ಪೀಠಾಧಿಪತಿಗಳಾಗಿದ್ದಾರೆ. ಆಗಿಹೋದ ಎಲ್ಲಾ ಶಿವಯೋಗಿ ಪುಂಗವರು ಸಮಾಜದ ನಾಡಿನ ಉದ್ಧಾರಕ್ಕಾಗಿ, ತಮ್ಮನ್ನೇ ತಾವು ಸಮರ್ಪಿಸಿಕೊಂಡಿದ್ದಾರೆ. ಅವರೆಲ್ಲರಿಗಿಂತ ಹೆಚ್ಚಾಗಿ ಇಂದಿನ ಅಂದರೆ ಹತ್ತನೆಯ ಪೀಠಾಧಿಕಾರಿಗಳು "ಆಡು ಮುಟ್ಟದ ಸೊಪ್ಪಿಲ್ಲ" ಎಂದಂತೆ, ಶ್ರೀಗಳು, ಪರಮಪೂಜ್ಯರು, ಕಾಶಿ ಪಂಡಿತರು, ಅನುಷ್ಠಾನ ಸಂಪನ್ನರು, ಲಿಂಗಲೀಲಾಲೋಲರು, ತ್ರಿವಿಧ ದಾಸೋಹ ಮೂರ್ತಿಗಳು, ಅಪಾರ ಶಿಕ್ಷಣ ಪ್ರೇಮಿಗಳು. ಸಾಹಿತ್ಯ ಸಾಗರರು, ರಚನಾತ್ಮಕ ಕಾರ್ಯದಲ್ಲಿ ನಿಸ್ಸೀಮರು. ಪೂಜ್ಯರು ರಚಿಸಿದ ಮೇರುಕೃತಿ "ವೀರಶೈವ ದಾರ್ಶನಿಕ ಸಿದ್ಧಾಂತ"ಕ್ಕೆ ಸರಿಸಾಟಿಯಾದ ಗ್ರಂಥ ಬೇರೊಂದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ಪೂಜ್ಯ ಶ್ರೀಗಳವರು ೧೯೬೯ರಂದು ಶ್ರೀಮಠದ ಅಧಿಪತಿಯಾದರು. ಆಗ ನೋಡಿದ ಮಠಕ್ಕೂ ಈಗ ನೋಡುವ ಮಠಕ್ಕೂ ಹೇಗಿದೆ ಎಂಬುದು ನೋಡಿದವರಿಗೇ ಗೊತ್ತು. ಘಟದಿಂದ ಮಠ ಬೆಳಗಬೇಕೆ ಹೊರತು ಮಠದಿಂದ ಘಟ ಬೆಳಗಬಾರದು ಎಂದು ಪೂಜ್ಯರು ಅಪ್ಪಣೆ ಕೊಡಿಸಿದಂತೆ ಸಮಾಜಕ್ಕೆ ಅಪಾರ ಕೊಡುಗೆ ಕೊಟ್ಟಿದ್ದಾರೆ. ಪೂರ್ವ ಪ್ರಾಥಮಿಕ ಶಾಲೆಯಿಂದ ಉಚ್ಚ ಶಿಕ್ಷಣದವರೆಗೆ ಬಹಳಷ್ಟು ಶಿಕ್ಷಣ ಸಂಸ್ಥೆಗಳನ್ನು ನಡೆಸಿ ಜ್ಞಾನ ದಾಸೋಹ ಮಾಡುತ್ತಾರೆ. ಧರ್ಮ ಜಾಗ್ರತಿಗಾಗಿ ಅಲ್ಲಲ್ಲಿ ಹಲವಾರು ಶಾಖಾ ಮಠಗಳನ್ನು ಕಟ್ಟಿಸಿದ್ದಾರೆ. ಅಂಥ ಮಠಗಳಲ್ಲಿ ನಮ್ಮೂರು ಅಂದರೆ ಸೊರಟೂರ ಮಠವೂ ಒಂದು. ಅಭಿಮಾನದಿಂದ ಹೇಳಬಯಸುತ್ತೇನೆ.

ಸೊರಟೂರಿಗೂ ಶ್ರೀಮಠಕ್ಕೂ ಶತಮಾನದ ನಂಟು. ಯಾಕಂದರೆ ಎಂಟನೆಯ ಪೀಠಾಧಿಪತಿಗಳು ಮಹಾತಪಸ್ವಿಗಳು, ಪವಾಡಪುರುಷರು, ಮಹಾತ್ಯಾಗಿಗಳು. ಅವರು ಎಂಥವರು ಎಂಬುದಕ್ಕೆ ಮುಂಡರಗಿಯಲ್ಲಿ ಏನಾದರೂ ಸಮಸ್ಯೆಗಳು, ವ್ಯಾಜ್ಯಗಳು, ಸಂಕಷ್ಟಗಳು ಬಂದರೆ ಸೊರಟೂರಜ್ಜನ ಗದ್ದುಗೆಗೆ ನಡೆದುಕೊಂಡರೆ ಪರಿಹಾರವಾಗುವವು

ಎಂದು ಈಗಲೂ ಜನ ಭಯಭಕ್ತಿಯಿಂದ ನಡೆದುಕೊಳ್ಳುವದು ಜನಜನಿತವಾಗಿದೆ. ಆದ್ದರಿಂದ ಜನ್ಮಸ್ಥಳವಾದ ಸೊರಟೂರ ಭಕ್ತರನ್ನು ಜಾಗ್ರತ ಮಾಡಿ ಸುಮಾರು ಎರಡುಲಕ್ಷ ರೂಪಾಯಿ ಬೆಲೆಬಾಳುವ ಭವ್ಯ ಮಠ ಕಟ್ಟಿಸಿದ ಕೀರ್ತಿ ಇಂದಿನ ಶ್ರೀಗಳಿಗೆ ಸಲ್ಲುತ್ತದೆ. ಸದರ ಮಠದಲ್ಲಿ ಧರ್ಮದಾಸೋಹ ಅನ್ನದಾಸೋಹ ನಡೆಯಲು ಕಾರಣಕರ್ತರಾಗಿದ್ದಾರೆ.

ಪ್ರತಿವರ್ಷ ಸೊರಟೂರ ಮಠದಲ್ಲಿ ಬರಗಾಲ ಬಂಟ ಮಹಾ ದಾಸೋಹಿ ಶ್ರೀ ಶರಣಬಸವೇಶ್ವರರ ಪುರಾಣದೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳು ಅವ್ಯಾಹತವಾಗಿ ಬಂದಿವೆ. ಅಲ್ಲದೆ ಪುರಾಣ ಮಂಗಲ ಸಮಯದಲ್ಲಿ ನೂರಾರು ಉಚಿತ ವಿವಾಹ ಮಾಡುವದಲ್ಲದೆ ಹತ್ತಿಪ್ಪತ್ತು ಸಾವಿರ ಜನರಿಗೆ ಅನ್ನದಾಸೋಹ ಶ್ರೀಗಳ ಅಮೃತಹಸ್ತದಿಂದ ಎಂದೂ ಕೊರತೆಯಾಗಿಲ್ಲ. ಇದನ್ನು ನಾಡಿನ ಜನತೆ ಅರಿಯದಿರರು. ಆ ಸಮಯದಲ್ಲಿ ಗ್ರಾಮದ ಬಡವ ಬಲ್ಲಿದನೆನ್ನದೆ ಜಾತಿಮತಗಳನ್ನೆಣಿಸದೆ ಗಂಡು, ಹೆಣ್ಣು ಎಂಬ ಅಭೇದದಿಂದ ಮಾಡುವ ಸೇವೆ ಅಪೂರ್ವವಾದದ್ದು. ಇದೆಲ್ಲ ಶ್ರೀಗಳ ಪ್ರಭಾವವೆಂದರೆ ತಪ್ಪಾಗಲಾರದು.

ಪರಮಪೂಜ್ಯ ಶ್ರೀಗಳ ದರ್ಶನದಿಂದ ಪಾವನನಾದ ನನಗೆ ಆರಾಧ್ಯದೈವವಾಗಿದ್ದಾರೆ. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬಂತೆ ಅವರಲ್ಲಿಯೇ ನಾನು ದೇವತ್ವವನ್ನು ಕಂಡಿದ್ದೇನೆ. ಪೂಜ್ಯರ ದರ್ಶನದಿಂದ ನನ್ನ ಬದುಕು ಬಂಗಾರವಾಗಿದೆ, ಬಾಳು ಹಸನಾಗಿದೆ. ಮಾನವೀಯತೆಯನ್ನು ತುಂಬಿ ನನ್ನನ್ನು ಪುನೀತನನ್ನಾಗಿ ಮಾಡಿದ್ದಾರೆ. ಶ್ರೀಗಳೇ ನನಗೆ ಶ್ರೀರಕ್ಷೆ. ಕುರುಡರಿಗೆ ಕಣ್ಣು ಕೊಟ್ಟಂತೆ, ನನಗೆ ಸಾಹಿತ್ಯಾಸಕ್ತಿಯನ್ನು ಹುಟ್ಟಿಸಿ ಪ್ರೋತ್ಸಾಹಿಸಿ ಕರುಣಿಸಿ-ಕೃಪೆಗೈದು ಸಾಹಿತ್ಯ ಸೇವಕನನ್ನಾಗಿ ಮಾಡಿ "ನಿನ್ನೊಲುಮೆ" ಕವನ ಸಂಕಲನವನ್ನು ತಮ್ಮ ಗ್ರಂಥಮಾಲೆಯ ೪೮ನೆಯ ಕುಸುಮವಾಗಿ ತ್ರಿವಿಧ ದಾಸೋಹ ಮೂರ್ತಿ ಲಿಂಗೈಕ್ಯ ಮಹಾಂತಪ್ಪನವರ ಅಮೃತಹಸ್ತದಿಂದ ಬಿಡುಗಡೆ ಮಾಡಿಸಿದ್ದಾರೆ.

ಶ್ರೀಗಳವರ ಆಶೀರ್ವಾದದಿಂಗ ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಗುರುಲಿಂಗ, ಜಂಗಮರ ಸೇವೆ ಮಾಡಿ ತೃಪ್ತಿಪಡೆಯುವದು, ಅವರಿಂದ ಆಶೀರ್ವಾದ ಪಡೆಯುವದು ನನ್ನ ಭಾಗ್ಯ. ಈ ವರ್ಷವೂ ಶ್ರೀಗಳು ಒಂದು ದಿನ ಗೊತ್ತುಪಡಿಸಿ ಸಂಜೆ ಪೂಜೆ ನಿಮ್ಮದು ಎಂದು ಅಪ್ಪಣೆ ಕೊಡಿಸಿದರು. ಅಂದರೆ ಮುಂಜಾನೆ, ಮಧ್ಯಾಹ್ನ ಪೂಜೆ, ಶಿರಹಟ್ಟಿ ಭಕ್ತರು ಎಂದೂ ತಿಳಿದು ಬಂತು. ಅದರಂತೆ ಸಂಜೆಯ ಪೂಜೆಗೆ ವ್ಯವಸ್ಥೆ ಮಾಡಲು ಅಣಿಯಾದಾಗ ಇದ್ದಕ್ಕಿದ್ದಂತೆ ನನ್ನ ನಾಲ್ಕುತಿಂಗಳು ಮೊಮ್ಮಗ ಸಣ್ಣ ಮಕ್ಕಳ ರೋಗದ ಬಾಧೆಯಿಂದ ಈಗೋ ಇನ್ನೊಂದು ತಾಸಿಗೋ ಅನ್ನುತ್ತಿರುವಾಗ ಗ್ರಾಮದ ವೈದ್ಯರು ಗದುಗಿಗೆ ಹೋಗಿರೆಂದು ಹೇಳಿಬಿಟ್ಟರು. "ನೀನೊಲಿದರೆ ಕೊರಡು ಕೊನರುವದು ಎಂಬಂತೆ" ಗುರುವಿನ ಪಾದೋದಕ ತಂದು ನನ್ನ ಪರೀಕ್ಷೆಯನ್ನು ನಾನೇ ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದೆ. ಆಗ ಸಮಯ ಮುಂಜಾನೆ ಹತ್ತುಗಂಟೆ. ಶ್ರೀಗಳು ಶಿರಹಟ್ಟಿಯಲ್ಲಿರುವ

ರೆಂಬ ಖಾತ್ರಿಯಿಂದ ಪಾದೋದಕ ತರಲು ಶ್ರೀಗಳಿದ್ದಲ್ಲಿಗೆ ಕಳುಹಿಸಿರುವಾಗ ಶ್ರೀಗಳು ನಡುದಾರಿಯಲ್ಲಿ ದರ್ಶನಕೊಟ್ಟು ನನ್ನ ಚಿ.ಗೆ ನಿಮ್ಮ ಮನೆಯ ಪೂಜೆ ಮಧ್ಯಾಹ್ನವೇ ಇದೆ, ಎಂದು ನನ್ನ ಮಗನೊಂದಿಗೆ ಮನೆಗೆ ದಯಮಾಡಿಸಿದಾಗ ಸಖೇದಾಶ್ಚರ್ಯವಾಯಿತು.

ಏನು ಬುದ್ಧಿ? ಸಂಜೆ ಪೂಜೆ ನಿಮ್ಮ ಮನೆಯಲ್ಲಿ ಎಂದು ಅಪ್ಪಣೆ ಕೊಡಿಸಿದ್ದಿರಿ. ಈಗಿಂದೀಗಲೇ ಎಂದು ಗದ್ಗದ ಕಂಠದಿಂದ ಕೈಮುಗಿದಾಗ ಪೂಜ್ಯಶ್ರೀಗಳು ಅನ್ನದಾನಿಯ ಇಚ್ಛೆಯಾಯಿತು. ಬಂದೆ ಮಾಸ್ತರರೇ? ಎಂದು ಮಗುವಿಗೆ ಗುರು ಪಾದೋದಕ ಕೊಡಲು ನಗುಮೊಗದಿಂದ ಮಗು ನಿರೋಗಿಯಾಯಿತು. ಇದಕ್ಕಿಂತ ಹೆಚ್ಚಿನ ಪವಾಡ ಇನ್ನೇನು ಬೇಕು ಹೇಗಿದೆ ಗುರು ಪಾದೋದಕದ ಮಹಿಮೆ. ಇಂಥ ಅನೇಕ ಪವಾಡಗಳನ್ನು ನಾನು ನನ್ನ ಜೀವನದಲ್ಲಿ ಕಂಡಿದ್ದೇನೆ.

ಇಂಥ ಹತ್ತು ಹಲವಾರು ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ, ಸಾಹಿತ್ಯಿಕ ಗೋಷ್ಠಿ ಯನ್ನು ಏರ್ಪಡಿಸಿ ಜನ ಕಲ್ಯಾಣಕ್ಕಾಗಿ ತಮ್ಮನ್ನೇ ತಾವು ಸಮರ್ಪಿಸಿಕೊಳ್ಳುವ ಶ್ರೀಗಳ ರಜತಮಹೋತ್ಸವವು ಭರದಿಂದ ಸಾಗಿದೆ. ರಜತಮಹೋತ್ಸವದೊಂದಿಗೆ ಶ್ರೀಗಳವರು ಶತಾಯುಷಿಯಾಗಿ ಸಕಲೆಲ್ಲರ ಬಾಳಿನ ಬೆಳಕಾಗಬೇಕೆಂದು ನನ್ನ ಸಾವಿರ ನಮನಗಳನ್ನು ಪೂಜ್ಯರ ಪಾದಕ್ಕೆ ಸಮರ್ಪಿಸಿ, ಬರಹ ಬಹಳವಾದೀತೆಂಬ ಭಯದಿಂದ ಲೇಖನಿಗೆ ಮಂಗಲ ಹಾಡುತ್ತೇನೆ.



ಉಳವಿ ಶ್ರೀ ಚೆನ್ನಬಸವಣ್ಣನವರ ದೇವಸ್ಥಾನದ ಆವರಣದಲ್ಲಿ



ದಕ್ಷಿಣ ಭಾರತ
ಪ್ರವಾಸ –
ರಾಮೇಶ್ವರ
ಮಂದಿರದಲ್ಲಿ



ಕನ್ಯಾಕುಮಾರಿಯ
ವಿವೇಕಾನಂದ ರಾಕ್
ಮುಂಭಾಗದಲ್ಲಿ



ಊಟಿಯಲ್ಲಿ ಶ್ರೀಗಳು

ನಾಡಿನ ಪೂಜ್ಯರೊಂದಿಗೆ ಶ್ರೀಸನ್ನಿಧಿಯವರು



ಉಡುಪಿಯ
ಶ್ರೀ ಪೇಜಾವರ
ಶ್ರೀಗಳೊಂದಿಗೆ



ಶಿರಹಟ್ಟಿಯ
ಶ್ರೀ ಜಗದ್ಗುರು
ಫಕೀರಸ್ವಾಮಿಗಳೊಂದಿಗೆ



ಬೆಂಗಳೂರಿನ ಜಂಗಮ ಮಠದಲ್ಲಿ ಮಹಾಸ್ವಾಮಿಗಳವರು



ಮಾಜಿ ಮುಖ್ಯಮಂತ್ರಿ ಶ್ರೀ ಗುಂಡುರಾಯರೊಂದಿಗೆ



ಹುಬ್ಬಳ್ಳಿಯ 'ಛೇಂಬರ್ ಆಫ್ ಕಾಮರ್ಸ್'ದಲ್ಲಿ



ಮುಂಡರಗಿ – 'ದಿ ವೈಶ್ಯ ಬ್ಯಾಂಕ್' ಉದ್ಘಾಟನೆಯ ಸಮಾರಂಭದಲ್ಲಿ



ಶ್ರೀಮಠದ
ಜಾತ್ರಾ ಮಹೋತ್ಸವದ
'ಸಾಮೂಹಿಕ ವಿವಾಹ'
ಕಾರ್ಯಕ್ರಮದಲ್ಲಿ
ವಧು–ವರರಿಗೆ
ಆಶೀರ್ವಾದ



ಧರ್ಮಸ್ಥಳದ
ಶ್ರೀ ವೀರೇಂದ್ರ ಹೆಗ್ಗಡೆ
ಹಾಗೂ ಹುಬ್ಬಳ್ಳಿಯ
ಮೂರುಸಾವಿರ ಮಠದ
ಶ್ರೀಗಳೊಂದಿಗೆ
ವಿದ್ಯಾಸಂಸ್ಥೆಯ
ಕಾರ್ಯಕ್ರಮದಲ್ಲಿ




ಶ್ರೀಮಠದ 'ಪವಿತ್ರ ವನ'ದ ಉದ್ಘಾಟನೆಯಲ್ಲಿ




ಹುಬ್ಬಳ್ಳಿಯ
ಪೂಜ್ಯರಿಂದ
ಶ್ರೀಗಳಿಗೆ ಸತ್ಕಾರ



ಸವದತ್ತಿಯ ಬೆಳ್ಳುಬ್ಬಿ
ಮಹಾವಿದ್ಯಾಲಯದಲ್ಲಿ
ಪೂಜ್ಯರಿಗೆ
ಶ್ರೀ ಎಸ್.ಎಸ್.ತುಪ್ಪದ
ಅವರಿಂದ ಭಕ್ತಿ
ಸಮರ್ಪಣೆ




ಚಿತ್ರದುರ್ಗದ ಪೂಜ್ಯರಿಂದ ಶ್ರೀಗಳಿಗೆ ಸತ್ಕಾರ



ಕೆರೂರಿನ ವಿರಕ್ತಮಠದಲ್ಲಿ ಶ್ರೀ ಸನ್ನಿಧಿಯವರಿಗೆ ರಜತೋತ್ಸವ ಕೊಡುಗೆ

ನಾಡಿನ ಪೂಜ್ಯರಿಗೆ ಶ್ರೀಮಠದಿಂದ ಗೌರವ



ಬೆಂಗಳೂರಿನ ಜಂಗಮ ಮಠದ ಶ್ರೀಗಳಿಗೆ ಉಳವಿ ಸುಕ್ಷೇತ್ರದಲ್ಲಿ ಗೌರವ



ಎಮ್.ಎಸ್. ಡಂಬಳ ಬಾಲಕಿಯರ ಪ್ರೌಢಶಾಲೆಯ ರಜತೋತ್ಸವ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳಿಗೆ ಸತ್ಕಾರ



ಹಿರಿಯ ಪೂಜ್ಯರಾದ ಬೆಳಗಾವಿ–ನಾಗನೂರು ಮಠ ಹಾಗೂ ಶಿರ್ಶಿಯ ಪೂಜ್ಯರುಗಳಿಗೆ ಸತ್ಕಾರ



ಧಾರವಾಡದ ಪೂಜ್ಯ ಮಹಾಂತಪ್ಪಗಳಿಗೆ ಸತ್ಕಾರ



ಕರ್ನಾಟಕ ರಾಜ್ಯದ ಸಹಕಾರಿ ಸಚಿವರಾದ ಶ್ರೀ ಎಸ್. ಎಸ್. ಪಾಟೀಲರಿಗೆ ಸತ್ಕಾರ



ಡಾ. ಎಚ್. ತಿಪ್ಪೇರುದ್ರ ಸ್ವಾಮಿಗಳಿಗೆ ಸತ್ಕಾರ

ರಜತ ಮಹೋತ್ಸವ

—**ಡಾ|| ಪಂ. ಪುಟ್ಟರಾಜಕವಿ ಗವಾಯಿಗಳು,** ಗದಗ

ಮೃಡಗಿರಿಯೊಡೆಯನ ರಜತ ಮಹೋತ್ಸವ
ಸಡಗರವೀಯಲಿ ಈ ಜಗ ಜನಕೆ ||ಪ||

||೧||

ಅನ್ನದಾನಿ ಜ್ಞಾನಾನ್ನದಾನಿ ವಿದ್ಯಾನ್ನದಾನಿಯ ಮಹೋತ್ಸವ
ತೋರಲಿ ಸನ್ನುತ ಲೋಕ ವಿಖ್ಯಾತ ವಿಶ್ವಪ್ರಶಸ್ತ ಸ್ವರ್ಣೋತ್ಸವ।
ಮನ್ನಣೆಯೀಯಲಿ ಕೀರ್ತಿಯು ಬೆಳಸಲಿ ಸಂತತ ಸಿದ್ಧಿಯ ಮಹೋತ್ಸವ
ಧರ್ಮದ ನೀತಿಯು ವರ್ತನ ಶುದ್ಧಿಯ ಕರುಣಿಸಲಿ ಈ ರಜತ ಮಹೋತ್ಸವ

||೨||

ಶರಣ ಸಾಹಿತ್ಯ–ತತ್ತ್ವಸಾಹಿತ್ಯಕೀಯಲಿ ಸತ್ವವಯೀ ಮಹೋತ್ಸವ
ಸಂಗೀತ–ನಾಟ್ಯ–ಕೀರ್ತನ–ಪುರಾಣ ಕಲೆಗಳ ಬೆಳೆಸಲೀ ಮಹೋತ್ಸವ
ಮಳೆ ಬೆಳೆ ಸಮೃದ್ಧಿ ವಿದ್ಯಾಭಿವೃದ್ಧಿ ಕರುಣಿಸಲಿ ವಸ ಮಹೋತ್ಸವ
ರಾಟಿ–ಮೇಟಿ ಕೈ ಕಸಬುಗಳ ಮಾಟ ವ್ಯವಸ್ಥೃತಿ ಹೆಚ್ಚಿಸಲಿ ಮಹೋತ್ಸವ

||೩||

ಮೃಡಗಿರಿ ಜಗದ್ಗುರೂತ್ತಮ ನಿತ್ಯವಮಗೀಯಲಿ ಸಂತಸವೀ ಮಹೋತ್ಸವ
ನಂಬಿದ ಭಕ್ತರ ಯುಕ್ತವಿರಕ್ತರ ಶಕ್ತರ ಕಾಯಲಿ ರಜತ ಮಹೋತ್ಸವ
ಮುಗ್ಧ ವಿದಗ್ಧರ ಬುದ್ಧ ವಿಶುದ್ಧರ ಪೊರೆಯಲಿ ಸಂತತವೀ ಮಹೋತ್ಸವ
ದೀನ ದಲಿತರನಾಥ ವಿಕಲಾಂಗ ಜನತೆಯ ರಕ್ಷಿಸಲೀ ಮಹೋತ್ಸವ||
ಮೃಡಗಿರಿಯೊಡೆಯನ ರಜತ ಮಹೋತ್ಸವ

ಶ್ರೀಗುರು ಅನ್ನದಾನೀಶ್ವರ

—ಪಂ ಚ. ಸೋ ಹಿರೇಮಠ, ಶಿವಯೋಗಮಂದಿರ

ರಾಗ: ಮಿಶ್ರ ಭೀಮಪಲಾಸ ತಾಳ: ಕೇರವಾ

ಧಿರಾ!ss ಗುರು ಅನ್ನದಾನೇಶ್ವರಾ
ತೋರಾsss ಪರಮೇಶ್ವರಾ।....।
ಬಾರಾ ಚಿರಮುಕ್ತಿ ರತ್ನಾಕರ। ॥ಪ॥

ಮನ ನಿನ್ನದಾದ ಬಳಿಕsss।
ಎನಗುಂಟೆ ಇನ್ನೂ ಭವss॥
ತನು-ಮನ-ಧನ-ನಿನಗರ್ಪಣ।
ಚಿನುಮಯ ಪ್ರಭುವಿನ ಧ್ಯಾನ॥
ಎನಗಿದೇ ಘನ ಜೀವನಾ।
ನೀನೆನ್ನ ಪ್ರಾಣೇಶನೈ ॥೧॥

ಶಿವಯೋಗಾನಂದದಿಂದsss
ಭವರೋಗ ತವೆ ಜಯಿಸಿದೈ॥
ಅವಗುಣವಳಿ। ಶಿವಗುಣ ಖನಿ।
ಶಿವ-ಶಿವ ಶಿವ ಮನು ಪ್ರಾಣಿ॥
ಶಿವ ಮತೋದ್ಧಾರಣಾಗ್ರಣಿ।
ಶಿವಭಕ್ತ ಚಿಂತಾಮಣಿ ॥೨॥

ಅನ್ನಜ್ಞಾನಾದಿ ದಾನಿ।
ನಿನ್ನೆಂದೂ ನಾ ಮರೆಯೆನೈsss॥
ಹರುಷದ ಧುನಿ। ಪರತರನುನಿ।
ಹರಗುರು ಚರ ಸುಯಿಧಾನಿ॥
ಸ್ಥಿರ ಚರಾತ್ಮಕ ಪಾಲನsss।
ಪೊರೆ ಚೆನ್ನ ಬಸವೇಶನsss ॥೩॥

ಯಾರಿವರು? ನಡೆದಾಡುವ ದೇವರು

—ಜ್ಞಾನಯೋಗೀಶ್ವರ ಶಾಸ್ತ್ರಿ, ಬೆಳದಡಿ

ಯಾರಿವರು ಕಲಿಯುಗದಿ ನಡೆದಾಡುವ ದೇವರು?।
ಬೇರಲ್ಲ! ಮೃಡಗಿರಿಯಃ ಅನ್ನದಾನೀಶ ಪ್ರಭು ||ಪ||

ಜಗದ್ಗುರು ಪೂಜ್ಯರು||
ಲಿಂಗ ಜಂಗಮರೂಪ ದಳೆದು ಬಂದ ಕಾಂತಿ।
ಕಂಗಳೊಳು ಸೂಸುತಿದೆ ಸದಾಸಮತೆ ಶಾಂತಿ।
ಮುಖ ಪದ್ಮ ಅರಳಿದಂತೆ ನಗೆಯು ಮಂದಹಾಸ।
ಸಕಲ ಜೀವರಾಶಿಗೆಲ್ಲ ಕೊಡುವದಮಳ ತೋಷ।
ಪರಮಯೋಗಿ ಧರಿಸಿದ ಕಾಷಾಯು ವಸನ।
ಮರೆಸುವದು ನೆರೆನಂಬಿ ಬಂದವರ ವ್ಯಸನ ||೧||

ಇಂತಪ್ಪ ಭೂಮಹಿತರು ಯಾರಿರವರು?
ನುಡಿವ ನುಡಿಲಿಂಗವಾಣಿ ಶಿವತತ್ವಪೂರ್ಣ।
ನಡೆಯೆಲ್ಲ ಪರಿಶುದ್ಧ ಮನ ಚೊಕ್ಕ ಚಿನ್ನ।
ಅಡಿಯಿಟ್ಟ ನೆಲ ಪುಣ್ಯ ತಾಣ ಪರಮ ಪಾವನ।
ದುಡಿವ ಕೃಷಿಕರೆಂದೊಡನೆ ಸುಗ್ಗಿ, ಹಿಗ್ಗು ತನನ।
ಒಡೆಯನೆಂದು ನಂಬಿದವ ಬಾಳು, ನಂದನವನ।
ಮೃಡಗಿರೀಶನೊಪ್ಪಿನಿಂದ ಕಾಡುನಾಡು ಹೂ-ಬನ ||೨||

ಇಂಥ ಭೂಮಹಿತರು ಯಾರಿವರು?
ಕಾರಣಿಕರು ಮೃಡಗಿರಿಯ ದಶಮಪೀಠದೊಡೆಯರು।
"ವೀರಶೈವ ದಾರ್ಶನಿಕ ಸಿದ್ಧಾಂತ"ವ ರಚಿಸಿದವರು।
ಆರೈದು, ಮುಕ್ತಿಮಧು, "ಮಾನವಧರ್ಮ"
ಶ್ರೀರುದ್ರ, ತಿರುಳ, "ವಚನ ಸಂಪದ"
ಪಾರಮಾರ್ಥ ವಚನ ವಲ್ಲರಿಯನು ಹಬ್ಬಿಸಿ।
ಸಾರತತ್ವ ಭರಿತ ಕೃತಿಯ ವಿರಚಿಸಿದವರು ||೩||

ಗುರುಚರ ಸಾರ್ವಭೌಮರು ಯಾರಿವರು?
ನೂರೊಂದು ಜಂಗಮರ ಪಾದ ಪೂಜೆ ಜೊತೆಗೆ।

ನೂರಾರು ಗ್ರಂಥ ಪ್ರಕಟನೆ ಜ್ಞಾನ ಸಿರಿ ಕ್ಷಿತಿಗೆ।
ಮಾರಾರಿ "ಅನ್ನದಾನಿ" ರಜತೋತ್ಸವ ಮಿತಿಗೆ।
ದಾರಿದೀಪ ಶಿವಯೋಗಿ ವಿರತ ಕುಲ ತತಿಗೆ।
ನೂರು ವತ್ಸರಗಳಿಂತು ಜಾರಿ ವಸುಮತಿಗೆ।
ತೋರಲಾನಂದವನು ಮಾನವ ಕುಲದುನ್ನತಿಗೆ ||೪||

ಇಂತಪ್ಪ ಭೂಮಹಿತರು ಯಾರಿವರು?
ಶೂನ್ಯಪೀಠಕೊಪ್ಪಿ ಪ್ರಭುದೇವರಂತಿಪ್ಪರು।
ಅನ್ನದಾನೀಶ ನಾಮದಿಂದ ಬೆಳಗುತಿರ್ಪರು।
ಪುಣ್ಯಮೇರು ಮುಂಡರಗಿ ವೃಡಗಿರಿ ಗೈದಿಹರು।
ಜನ್ಮ ಜನ್ಮಾಂತರದ ಭವರುಜೆಯ ಕಳೆವರು।
ಮುನ್ನ ಚರಣದಾಸ ಭೃಂಗ ಕರುಣೆ ಕಂದನೆನಿಸಿದ।
ಜ್ಞಾನಯೋಗಿ ಹೃದಯಪೀಠವೇರಿದಮಳ ಪೂಜ್ಯರು ||೫||
ಯಾರಿವರು ನಡೆದಾಡುವ ನಿಜ ದೇವರು||

ಮೃಡಗಿರಿ ಶ್ರೀ ಅಭಿನವ ಅನ್ನದಾನಿ

—ಹ. ಲಿಂ. ಹೂಗಾರ

ಓ ಮೃಡಗಿರಿ ಅಭಿನವ ಅನ್ನದಾನಿ
ತಮ್ಮ ಹೃದಯುದಿ ತುಂಬಿ ತುಳುಕುತಿದೆ
ಉಕ್ಕಿ ಚೆಲ್ಲುತಿದೆ ಕರುಣಾಮೃತ
ಸಕಲರಿಗೆ ಲೇಸನೆ ಬಯುಸುವ ಕರುಣಾಮೃತ

ರೋಗ ರುಜಿನದಿ ಬಳಲುವ ಭಕ್ತರ
ದುಃಖ ದುಮ್ಮಾನಗಳಿಂ ನರಳುವ ಭಕ್ತರ
ಸಂಸಾರ ವಿಪದಲಿ ಮುಳುಗೇಳುವ ಭಕ್ತರ
ಕಷ್ಟಗಳನು ನೀ ಪರಿಹರಿಸುವಿ

ಓ, ಭಕ್ತವತ್ಸಲ! ಭಕ್ತಾಭಿಮಾನಿ ಅನ್ನದಾನಿ
ತಮ್ಮ ಪರುಷಹಸ್ತ ಮುಟ್ಟಿದ ಪ್ರಸಾದ
ರೋಗವನು ನಿವಾರಿಸುತಿದೆ
ಕಷ್ಟಗಳನು ಕಳೆಯುತಿದೆ

ಮೃತ್ಯುವಿನ ಬಾಯೊಳು ಸಿಕ್ಕ
ಭಕ್ತ ಕೋಟಿಗೆ ತಮ್ಮ ಕೃಪಾಹಸ್ತ ಹರಸುತಿದೆ
ಮರಣವ ತಪ್ಪಿಸಿ ಗುರುಪುತ್ರನೆನಿಸುತಿದೆ
ಅನ್ನದಾನಿ ಲೀಲೆ ತೋರುತ ಜಗದಲಿ ಮೆರೆವೆ

ಓ, ಪೀರಾಪುರದ ಪರಂಜ್ಯೋತಿ
ನೀನೆ ಪರಶಿವ ಮೂರುತಿ
ಧರೆಗಿಳಿದು ಬಂದ ಶಿವಲಿಂಗ ಮೂರುತಿ
ನಾದ, ಬಿಂದು ಕಳಾ ಮೂರುತಿ

ನಾಡಿನೊಳು ಮಿಗಿಲಾದ ತಮ್ಮ ಗ್ರಂಥಕೃತಿ
"ವೀರಶೈವ ದಾರ್ಶನಿಕ ಸಿದ್ಧಾಂತ ಕೃತಿ"
ಅದು ತಮ್ಮ ತಪಸ್ಸಾಧನೆಯ ಸಿದ್ಧಿಮತಿ
ಅದು ಹೆಚ್ಚಿಸಿದೆ ನಾಡು ನಾಡಿನಲಿ ತಮ್ಮಯ ಕೀರ್ತಿ

ಓ ದಯಾನಿಧಿ, ಕಾರುಣ್ಯನಿಧಿ, ಜ್ಞಾನನಿಧಿ
ಭಕ್ತರ ಭಾಗ್ಯನಿಧಿ ಗುರು ಅನ್ನದಾನಿ
ಕಲ್ಪಿತರ ಕಾಮಧೇನು ಕಲ್ಪತರು ನೀನು
ನುಡಿಲಿಂಗ ನಡೆದಾಡುವ ಲಿಂಗ ನೀನು

ಅನ್ನದಾನಿ ನೀನು ಸಿಟ್ಟನ್ನು ಸುಟ್ಟ ವಿಭೂತಿ
ಶಾಂತಿಯನ್ನೇ ಹಾಸಿಕೊಂಡಿರುವಿ
ಶಾಂತಿಯನ್ನೇ ಹೊದ್ದುಕೊಂಡಿರುವಿ
ಶಾಂತಿಸಾಗರನಾಗಿ ಜಗದಲಿ ಶೋಭಿಸುವಿ

ಮೃಡಗಿರಿ [ಮುಂಡರಗಿ]ಯ ಶ್ರೀ ಮ. ನಿ. ಪ್ರ. ಜಗದ್ಗುರು ಅನ್ನದಾನೀಶ್ವರ
ಮಹಾಸ್ವಾಮಿಗಳ ಪೀಠಾರೋಹಣ ರಜತ ಮಹೋತ್ಸವದ ಸವಿನೆನಪಿನ

ಚಿತ್ರಕಾವ್ಯ ಕಾಣಿಕೆ

—**"ಆಶುಕವಿ" ಶ್ರೀ ಕುಮಾರದೇವರು** ಅಂತೂರಬೆಂತೂರ

[**ವಿ. ಸೂ.:** ಈ ಚಿತ್ರಕಾವ್ಯದಲ್ಲಿ ಪ್ರತಿಯೊಂದು ಶ್ಲೋಕದ ಮೊದಲನೆಯ ಅಕ್ಷರವನ್ನು ಕ್ರಮವಾಗಿ ಓದಿದಾಗ "ಮೃಡಗಿರಿ ಒಡೆಯನ" ಎಂಬುದಾಗಿ ಹಾಗೂ ಪ್ರತಿಯೊಂದು ಶ್ಲೋಕದ ಕೊನೆಯ ಅಕ್ಷರವನ್ನು ಕ್ರಮವಾಗಿ ಓದಿದಾಗ "ರಜತಮಹೋತ್ಸವವು" ಎಂಬುದಾಗಿ ಶೋಭಿಸುತ್ತದೆ.]

॥ ಕುಸುಮ ಷಟ್ಪದಿ ॥

ಮೃಡಗಿರಿಯ ಪುರವಾಸ
ಮೃಡ "ಅನ್ನದಾನೀಶ"
ನಡೆ–ನುಡಿಯಲೊಂದ ಪರಮ ಈಶ।
ಪೊಡವಿಯೊಳು ಭವಶರಧಿ
ದಡ ಸೇರಿಸುವ ಗುರುವೆ
ದೃಢ ಭಕ್ತ ನಿಜ ಮನದ ಅಂಬಿಗಾ**ರ**॥

ಡವಡವೆನ್ನುವ ಮನಕೆ
ಶಿವ ಶಾಂತಿ ಸುಖವಿತ್ತು
ಭುವನದಲಿ ನ್ಯಾಯನೀತಿಯ ತಿಳಿಸಿದ।
ಅವನೀಶ ನೀನಾಗಿ
ಶಿವಯೋಗಿ ಶಿವನಾದೆ
ಭವರೋಗ ಕಳೆವ ರವಿ ಕೋಟಿ ತೇ**ಜ**॥

ಗಿರಿ ಹಳ್ಳ ಗವಿಗಳಲಿ
ಚರಿಸುತಲಿ ಭಯವಿರದೆ
ಹರ ನೀನೆ ತಪಗೈದ ಜಗದ ಸುಖಕೆ।
ಪರಿ ಪರಿಯ ತಾಪವನು
ಪರಿಹರಿಸಿ ಪೊರೆಯುತಲಿ
ಧರೆ ಬೆಳಗಿ ನಡೆವಂಥ ಪರಮಚರಿ**ತ**॥

ರಿಪಿರಿಪಿಯ ಕಪಿಜನಕೆ
ತಪಶಕ್ತಿ ಬಲದಿಂದ
ಉಪದೇಶ ನೀನಿತ್ತು ತಿದ್ದಿ ಪೊರೆದೆ।
ಅಪವಾದ ಹೊಗಳಿಕೆಯ
ತಪಬಲದಿ ಸಮಗಂಡು
ಉಪಗಾರ ಮಾಡಿರುವ ಪರಜಂಗವು॥

ಒಪ್ಪಿ ನಡೆಯುತ ನಿತ್ಯ
ಅಪ್ಪ ಸುಕುಮಾರನಲಿ
ತಪ್ಪಿಸದೆ ಪೂಜೆ ಶಿವ ಮಂದಿರದಲಿ।
ಬಪ್ಪರಗಿ ಬಯಸದಲೆ
ಅಪ್ಪ "ಮೃಡಗಿರಿ" ಪೀಠ
ಕೊಪ್ಪಿ ಶಿಕ್ಷಣ ಸಂಸ್ಥೆ ರಚಿಸಿದೆ ಅಹೋ॥

ಡೆವ್‌ಡೆಮೆನ್ನು ಢಮರ
ತಮಟೆ ಭಜನೆಯ ನಾದ
ವಿಮಲ ಮಾನಸ ತುಂಬಿ ಸಂತೋಷವ।
ಅಮಿತ ಪ್ರಮಥರ ಗಣದಿ
ನಮಿತ ನೀ ಶೋಭಿಸುವೆ
ಸುಮತಿ ನೀಡುತ ಬಿಡಿಸದೆ ಬೀಭತ್ಸ॥

ಯಜ್ಞ ಮಾಡುವ ನಿತ್ಯ
ಅಜ್ಞಾನ ಕಳೆಯುತಲಿ
ಸುಜ್ಞಾನ ಸಿರಿ ಬೆಳಕು ನೀ ತೋರಿದೆ।
ವಿಜ್ಞಾನವೀ ಜನಕೆ
ಪ್ರಜ್ಞಾನ ತಿಳಿಸುತಲಿ
ತಜ್ಞ ನೀನಾದೆ ಭವ ವೈದ್ಯದೇವ॥

"ನಂದಿಕೇಶ್ವರ" ಪುರದ
ಚಂದವಾಗಿಹ ಭಕ್ತ
ವೃಂದದವರೆಲ್ಲರೂ ನಿಜ ಹರುಷದಿ।
ತಂದೆ ನೀನೆನ್ನುತಲಿ
ಇಂದು ರಜತೋತ್ಸವವ
ಒಂದಾಗಿ ಮಾಡಿಹರು ಬಲು ಚಂದವು॥

ಫಲಶೃತಿ (ಕಂದಪದ್ಯಂ)

ಗುರು "ಅನ್ನದಾನಿ"ಯ ಪರಮ
ಚರಿತೆಯು ನಿಜಮನದಿ ಓದಿ ಪಠಿಸಲು ನಿರುತಂ।
ಧರೆ ಜನಕನು ದಿನ ಹರುಷದಿ
ಪರತರ ಸುಖಶಾಂತಿ ಕೊಡುವ "ಅಂತೂರೇಶಂ"।।

ಲಿಂಗ ಪೂಜೆ ನೋಡ ಬನ್ನಿರಿ
ಅನ್ನದಾನೀಶನ ಪಾದ ಪೂಜೆ ಮಾಡ ಬನ್ನಿರಿ

—**ಕುಂ. ಸೌ. ಗಂಗಮ್ಮ ವೀ. ಹಿರೇಮಠ,** ಮುಂಡರಗಿ

ಕರಕಮಲದಲ್ಲಿರುವ ಇಷ್ಟಲಿಂಗಯ್ಯನಿಗೆ
ಪನ್ನೀರನೆರೆದು ಪಂಚಾಮೃತವ ಸಮರ್ಪಿಸಿ
ಭಸ್ಮಗಂಧಾಕ್ಷತೆಗಳಿಂದ ಪತ್ರಿಪುಷ್ಪಗಳಿಂದ
ಧೂಪ ದೀಪ ನೈವೇದ್ಯಗಳಿಂದ ಷೋಡಶೋಪಚಾರದಿಂದ
ಶರಣ ಶರಣೆಯರೆಲ್ಲ ಸಂಭ್ರಮದಿಂದಲಿ
ಲಿಂಗಪೂಜೆ ನೋಡ ಬನ್ನಿರಿ

ದುಂಡ ಮಲ್ಲಿಗಿ ಮರುಗ ಸೇವಂತೀಗಿ
ಪರಿ ಪರಿಯ ಪುಷ್ಪಗಳಿಂದ ಪರಿಮಳ ದ್ರವ್ಯಗಳಿಂದ
ಧೂಪವ ಬೀಸುತ್ತ ದೀಪವ ಬೆಳಗುತ್ತ
ಪಾಪ ಸಂಹರನಿಗೆ ತುಪ್ಪದ ಆರತಿ ಕಪ್ಪುರದಾರತಿ
ಓಂಕಾರ ಪ್ರಣವದಲಿ ಝೇಂಕಾರ ನಾದದಲಿ
ಲಿಂಗ ಪೂಜೆ ನೋಡಬನ್ನಿರಿ

ತನುವ ಸಮರ್ಪಿಸಿ ಮನವ ಸಮರ್ಪಿಸಿ
ಧನವ ಸಮರ್ಪಿಸಿ ಏಕ ಚಿತ್ತದಲಿ
ಲಿಂಗವ ಪೂಜಿಸಿ ಲಿಂಗವೇ ತಾನಾಗಿ
ಲಿಂಗಾಂಗ ಸಮರಸದ ಸವಿಯನುಂಡ
ಮೃಡಗಿರಿಯ ಶಿವಯೋಗಿಯ
ಲಿಂಗ ಪೂಜೆ ನೋಡಬನ್ನಿರಿ

ಲಿಂಗ ಪೂಜೆಯು ಬೆಳಕು ಮೂರು ಲೋಕಕೆ ತಲುಪಿ
ಮುಕ್ಕಣ್ಣ ಶಿವತಾನು ಧರೆಗಿಳಿದು ಬಂದಿಹನು
ಮೃಡಗಿರಿ ಮಠದಲ್ಲಿ ಬಂದ ಭಕ್ತರಿಗೆ ಇಷ್ಟಾರ್ಥ ನೀಡುವನು
ಶಿರವ ಬಾಗಿಸಿ ಕರಗಳ ಜೋಡಿಸಿ ಸೆರಗೊಡ್ಡಿ ವರಗಳ ಬೇಡೋಣ
ಗುರು ಪಾದಬಲ್ಲಿ ಮುಕ್ತಿ ಪಡೆಯೋಣ
ಲಿಂಗ ಪೂಜೆ ನೋಡ ಬನ್ನಿರಿ

ಸನ್ನಿಧಿಯ ಕೊಡುಗೆ

—ಶ್ರೀ ನಿರುಪಾಧಿ ಸ್ವಾಮಿಗಳು ಅಡವಿಸಿದ್ಧೇಶ್ವರಮಠ, ಮರೇಗುದ್ದಿ

ನಿನ್ನ ನಲ್ಮೆಯ ಕೊಡುಗೆ–ದಾರ್ಶನಿಕ ಸಿದ್ಧಾಂತ
ಶರಣರನುಭವದಡಿಗೆ ಉಣಿಸಿತ್ತು।
ನಿತ್ಯ ಜೀವನದೊಳಗೆ ಎಡೆಬಿಡದ ಸತ್ಯಾರ್ಥ
ಸ್ತುತ್ಯವೆನಿಸುವ ಹಾಗೆ ತಣಿಸಿತ್ತು ॥೧॥

ವಚನವೆಂದರೆ ವಚೋ ನ ವಚನವಲ್ಲರಿಸಿರಿಯು
ಶುಚಿರುಚಿರ ಭರಿಸಿತ್ತು ನಿತ್ಯದಲಿ
ರಚನೆಯೊಳು ರುಚಿಭರಿಸಿ ಅನುಭವಾಮೃತ ಸುರಿಸಿ
ಅಚಲ ದೃಷ್ಟಿಯಗಲಿಸಿ ಉಳಿಸಿತ್ತು ॥೨॥

ಶ್ರೀ ಪುರಾತನ ತ್ರಿವಿಧಿ ಭಾವ ಸೌರಭ ಸರಣಿ
ತಾಪಾದಿಗಳ ಮರೆಸಿ ಜೀವಿಗಳ
ಮಾಪನೆಗೆ ಬಾರದ ಸಂಸ್ಕೃತಿಯ ಸಂಬಂಧ
ಪಾಪಿ ಹೃದಯವ ಪಕ್ವಗೊಳಿಸಿತ್ತು ॥೩॥

ಆರೈದು ನೋಡುವುದು ಆರೈದು ಮಾಡುವುದು
ಆರೈದು ನುಡಿಯುವುದೆ ಶರಣ ಪರಿ
ಆರೈದು ಆಡುದಕೆ ಆರೈದು ಕೊಡುದಕೆ
ಆರೈದು ಗಲಿಸಿತ್ತು ಸತ್ಯ ಸಿರಿ ॥೪॥

ನೀನಾವ ಗೌರವವ ಬಯಸದಿರ್ದಡೆಯು
ತಾನೆ ತಾನಾಗಿ ಮುದ ಬಂದರೇನು
ನೀನು ನಿನ್ನಂತಿದ್ದ ವೃತ್ತಿಯನು ಭವಮುದ್ದೆ
ಕಾಣೆ ಮತ್ತೆಲ್ಲಿಯೂ ಅಂತಿದ್ದ ॥೫॥

ಹೊನ್ನು ಮಣ್ಣಾದಿಯ ಕೊಡುಗೆ ಕೊಡುಗೆಯೆಂತಹುದು
ಧನ್ಯಮಾಡವು ಎನಿತು ಮಾನವರ
ನಿನ್ನ ಕರುಣೆಯು ಸಕಲ ಜೀವಿಗಳ ಸರಳ ಸಂ–
ಪನ್ನ ಮಾಳ್ಪವು ಸಹಜ ನಿತ್ಯವಿದು ॥೬॥

ನಿನ್ನ ಬರಹದ ಕೊಡುಗೆ ಅಂತರಾತ್ಮದ ಉಡುಗೆ
ಚನ್ನದಿಂ ರಕ್ಷಿಪುದು ಸಕಲರನು
ಅನ್ಯರ ಪಹರಿಸದಾ ಚನ್ನ ಚಿನ್ಮಯ ಶಕ್ತಿ
ಚನ್ನ ನಿರುಪಾಧೀಶನ ಬೆರಸಿತ್ತು ॥೭॥

ದಶಮಪೀಠಾಧಿಪತಿ

—ಅಂದಾನೆಪ್ಪ ವಿಭೂತಿ

ಶಿರಬಾಗಿ ನಮಿಸುವೆನು
ನಿನ್ನ ಪಾದ ಸನ್ನಿಧಿಗೆ
ತೆರೆದಿರುವೆ ಹೃದಯುವನು
ನಿನ್ನ ಪಾದ ಕಮಲಗಳಿಗೆ

ಅನ್ನದಾನಿಯೇ ನಿನ್ನ
ಹೊರಳಿ ನೋಡುತಲಿರಲು
ಉರುಳಿದವು ಕಾಲು
ಶತಮಾನಗಳು
ಅರಳಿಹವು ಹೂವಾಗಿ
ಶತಮಾನ ಕಾರ್ಯಗಳು
ಬೆರಗಾಗಿಹರು ಜನವೆಲ್ಲ
ಸಾಧನೆಯ ಕಾಣುತಲಿ

ಬೇಡವಾಯಿತು ನಿನಗೆ
ಸಂಸಾರ ಸೆರೆಮನೆಯು
ನೀ ತೊರೆದೆ ಹಡೆದವರ
ಕನಸಿನರಮನೆಯುನ್ನು
ತೊರೆದು ಹೊರ ಬಂದೆ
ಮದುವೆ ಮಂದಿರವನ್ನು
ಕೈ ಮಾಡಿ ಕರೆಯಿತು
ಶಿವಯೋಗದರಮನೆಯು

ಮಹಲಿಂಗ ಮೇಲಾಗಿ
ಚಂದ್ರಶೇಖರನಾದೆ
ಆಧ್ಯಾತ್ಮ ಪಾಠದಲಿ
ನೀ ಲೀನವಾದೆ
ಗುರುವಿನಂತರಂಗಕೆ
ಪ್ರೀತಿ-ಪಾತ್ರನು ಆದೆ
ಕಾವಿ ಲಾಂಛನದೀ
ನೀ ಚಂದ್ರಶೇಖರದೇವರಾದೆ

ಶಿವಯೋಗ ಮಂದಿರದಿ
ಅಭ್ಯಾಸ ಮುಗಿದಿರಲು
ಮೃಡಗಿರಿಯ ಮಹಾಮಹಿಮ
ಗುರು ಅನ್ನದಾನಿಯು
ಅರಸುತ್ತ ಬಂದಿಹರು
ಉತ್ತರಾಧಿಕಾರಿಯನು
ಹಿಡಿಸಿಹರು ಮನಸಿಗೆ
ಚಂದ್ರಶೇಖರ ದೇವರು

ಅನ್ನದಾನಿಯೇ ನೀನೇ
ಮೃಡಗಿರಿಯ ಅಧಿಪತಿ
ನೀನಾದೆ ಮಠಕೆ
ದಶಮ ಪೀಠಾಧಿಪತಿ
ಆಡಳಿತ ಸೂತ್ರಗಳಿಗೆಲ್ಲ
ನೀನೇ ದಳಪತಿ
ಅಂತರಂಗ ಬಹಿರಂಗಕ್ಕೆಲ್ಲ
ನೀನೇ ಸೇನಾಪತಿ

ಅನ್ನದಾನದ ಜೊತೆಗೆ
ವಿದ್ಯೆ ದಾನವ ಮಾಡಿ
ಮಠದಿಂದ ಘಟವಲ್ಲ
ಘಟದಿಂದ ಮಠ
ಎಂಬುದನು ದಿಟ
ಮಾಡಿ ತೋರಿಸಿದೆ
ಈ ಕಾಲು
ಶತಮಾನದಲಿ

ಮೆರವಣಿಗೆ ಮನಸಿಲ್ಲ
ಬರವಣಿಗೆ ನಿಂತಿಲ್ಲ
ಬಂದಿಹವು ಬರಹಗಳು
ಪುಸ್ತಕದ ರೂಪದಲಿ

'ವಚನ ಸಂಪದ'ವೊಂದು
ತೆರೆದ ಹೃದಯದ
ತೆರದಿ ಓದುಗರ ಮನ
ತಲುಪಿ ಮಿಡಿಯುತಿಹುದು

ಪ್ರತ್ಯೇಕ ನಿನ್ನ ಸ್ಥಾನ
ಸಾಹಿತ್ಯ ಲೋಕದಲಿ
ಶ್ರೇಷ್ಠತೆಯ ಪಡೆದಿಹುದು
ನೂರಾರು ಬರಹಗಳು
ಪಾಂಡಿತ್ಯ ಒಪ್ಪಿಹರು
ಪಂಡಿತರು, ಪಾಮರರು
ಬರಹಗಳ ಶ್ರೇಷ್ಠತೆಗೆ
ವೀರಶೈವ ದಾರ್ಶನಿಕ ಸಿದ್ಧಾಂತವೇ ಸಾಕ್ಷಿ.

ಅನ್ನದಾನೀಶ

—ಹು. ರಾ. ಕುರ್ತಕೋಟಿ

ಮಾತು ಮಾಣಿಕವಾಗಿ ನಿನ್ನಯ।
ಖ್ಯಾತ ವಾಣಿಯು ಕೇಳಿ ಭಕ್ತರು।
ಪ್ರೀತಿಯಿಂದಲಿ ಧನವ ಕೊಡುವರು। ಅನ್ನದಾನೀಶ ॥೧॥

ನನ್ನ ನಾಡಿನ ಎಲ್ಲ ಮಕ್ಕಳ।
ನನ್ನಿಯಿಂದಲಿ ಜೋಕೆ ಮಾಡುತ।
ಭಿನ್ನವಿಲ್ಲದೆ "ವಿದ್ಯೆ" ಕೊಡಿಸುವಿ। ಅನ್ನದಾನೀಶ ॥೨॥

ಜಾತಿಭೇದವನಳಿದು ನಿತ್ಯದಿ।
ನೀತಿ ಮಾರ್ಗವ ಹಿಡಿದು ಜಗದೊಳು।
ಪ್ರೀತಿಯಿಂದಲಿ ನಡೆವ ಮಹಿಮನು। ಅನ್ನದಾನೀಶ ॥೩॥

ಚೆನ್ನಬಸವನ ಕರುಣದಿಂದಲಿ।
ಅನ್ನವದು ತಾ ಪೆಚ್ಚುತಿಹುದೈ।
ಸನ್ನುತಾಂಗನೆ ಸಲಹುನಮ್ಮನು। ಅನ್ನದಾನೀಶ ॥೪॥

ವರದ ಶ್ರೀ ಗುರು ಚೆನ್ನಬಸವನ।
ಪರಮ ಪಾವನ ವರವ ಪಡೆದಿಹೆ।
ಪುರವು ಮೃಡಗಿರಿಯೊಳಗೆ ಮೆರೆಯುವ। ಅನ್ನದಾನೀಶ ॥೫॥

ಮಂಗಲ

—**ಡಾ|| ಪುಟ್ಟರಾಜಕವಿ ಗವಾಯಿಗಳು,** ಗದಗ

ಜಯ ಜಯ ಮೃಡಗಿರಿ ಅನ್ನದಾನೀಶ|
ಜಯ ಜಯ ಜಗದ್ಗುರು ಸುಗುಣಕೋಶ ||ಪ||

ಜಯ ಜಯ ಚಿದ್ರವಿ ಜಗತ್ಪ್ರಕಾಶ|
ಜಯ ಜಯ ಪ್ರಮಥ ಗುಣ ವಿಕಾಸ
ಜಯ ಜಯ ಪರತರ ಶಿವ ಸಂಕಾಶ
ಜಯ ಜಯ ಜಿತಕಾಲ ಕಾಮಪಾಶ ||೧||

ಜಯ ಜಯ ಶಿವಭಕುತ ಭವವಿನಾಶ
ಜಯ ಜಯ ಹೃತ ಬಹುಜನ ದುಷ್ಕ್ಲೇಶ|
ಜಯ ಜಯ ಸಜ್ಜನ ಹೃದಯಾದೀಶ
ಜಯ ಜಯ ವಿನಷ್ಟ ದುರ್ಗುಣ ಲೇಶ ||೨||

ಜಯ ಜಯ ಭಾಕ್ತಿಕ ಜನ ಭಕ್ತಿವಶ
ಜಯ ಜಯ ಜನಹಿತಕಾರಣ ಸದಾಶ
ಜಯ ಜಯ ಹತಮಾನಸಿಕ ದುರಾಶ
ಜಯ ಜಯ ಶಾಂಭವಯೋಗ ಮಯಾಶ ||೩||

ಅನುಬಂಧಗಳು

ಅನುಬಂಧ ೧

ಬೆಳ್ಳಿ ಬಿಟ್ಟ ಬಳ್ಳಿ

—ಪ್ರಾ|| ಎ. ಬಿ. ಹಿರೇಮಠ, ಮುಂಡರಗಿ

ಮುಂಡರಗಿಯ ಮೃಡಸ್ವರೂಪಿ, ಜಗದ್ವಂದ್ಯ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು ಶೂನ್ಯ ಸಿಂಹಾಸನಾರೂಢರಾಗಿ ೨೫ ಸಂವತ್ಸರಗಳು ಮುಗಿದಿವೆ. ಈ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಪೂಜ್ಯರು ಸಲ್ಲಿಸಿದ ಬಹುಮುಖ ಸೇವೆಯ ಪ್ರತೀಕವಾಗಿ ವೈಶಿಷ್ಟ್ಯಪೂರ್ಣವಾಗಿ ರಜತೋತ್ಸವ ವರ್ಷಾಚರಣೆ ನಡೆಯಿತು. ೧೯೯೫ನೇ ಫೆಬ್ರುವರಿ ೫ರಿಂದ ೧೪ರ ವರೆಗೆ ವಿಶೇಷ ಸಮಾರಂಭ ಏರ್ಪಡಿಸಲಾಗುತ್ತಿರುವ ಸುಪ್ರಸಂಗದಲ್ಲಿ ರಜತೋತ್ಸವ ನಡೆದುಬಂದ ದಾರಿಯ ಸಿಂಹಾವಲೋಕನ ಮಾಡಿದಾಗ ಶ್ರೀ ಸನ್ನಿಧಿಯವರ ರಜತೋತ್ಸವ ಸಂಯೋಜನೆ ಸೂಕ್ತ ಹಾಗೂ ಸಮರ್ಪಕವಾಗಿ ನಿರ್ವಹಿಸಲ್ಪಟ್ಟಿದ್ದು ಗೋಚರವಾಗುತ್ತದೆ.

ಆಡಂಬರ, ವೈಭವ, ದುಂದುವೆಚ್ಚಗಳಿಗೆ ವಿರೋಧಿಯಾದ ಜಗದ್ಗುರುಗಳು ರಜತೋತ್ಸವದ ಪ್ರತೀಕವಾಗಿ ಧರ್ಮದ ಪ್ರಚಾರವನ್ನು ವಿನೂತನ ರೀತಿಯಲ್ಲಿ ಮಾಡುವ ದಕ್ಕಾಗಿ ೨೫ ಬೇರೆ ಬೇರೆ ಊರುಗಳಲ್ಲಿ ಕಾರ್ಯಕ್ರಮಗಳನ್ನು ಸರಳ ಹಾಗೂ ಮಿತವ್ಯಯ ದಿಂದ ಮಾಡಲು ಹೊಂದಿದ ಸಂಕಲ್ಪ ಸಾಕಾರಗೊಂಡಿದೆ. ರಜತಮಹೋತ್ಸವದ ನೆವದಲ್ಲಿ ನಾಡಿನ ನಾನಾ ಭಾಗಗಳಿಗೆ ತಾವೇ ಹೋಗಿ ಸಮಾರಂಭ ಏರ್ಪಡಿಸಿ ಧರ್ಮ, ಸಾಹಿತ್ಯ, ಸಂಸ್ಕೃತಿಗಳನ್ನು ಸಂವರ್ಧಿಸಿದ್ದಾರೆ. ನಡೆದಾಡುವ ವಿಶ್ವವಿದ್ಯಾಲಯದ ಮಾದರಿಯಲ್ಲಿ ಕಾರ್ಯನಿರ್ವಹಿಸುವದಕ್ಕಾಗಿ ರಜತೋತ್ಸವವನ್ನು ಸಮರ್ಪಕವಾಗಿ ಸದುಪಯೋಗ ಪಡಿಸಿಕೊಂಡಿದ್ದಾರೆ.

ಮುಂಡರಗಿ ಪೀಠದ ಮೂಲಪುರುಷರಿಗೆ ಆಶೀರ್ವಾದದ ಅಭಯಹಸ್ತ ನೀಡಿ ಶರಣ ಧರ್ಮದ ಪ್ರಚಾರ, ಪ್ರಸಾರಕ್ಕೆ ನಿಯೋಜಿಸಿದ ಪರಮಗುರು ಚನ್ನಬಸವಣ್ಣನ ಕ್ಷೇತ್ರ ದಿಂದಲೇ ರಜತೋತ್ಸವ ಪ್ರಾರಂಭಗೊಳ್ಳಬೇಕೆಂಬ ಪೂಜ್ಯರ ಸತ್‌ಸಂಕಲ್ಪದಂತೆ ೨೨-೪-೧೯೯೪ರಂದು ಉಳವಿ ಕ್ಷೇತ್ರದಲ್ಲಿ ಉದ್ಘಾಟನೆಗೊಂಡಿತು. ಅದೇ ಸಂದರ್ಭದಲ್ಲಿ ಚನ್ನಬಸವಣ್ಣನವರಿಂದ ಕ್ರಿಯಾಭಸ್ಮದ ಆಶೀರ್ವಾದ ಪಡೆದು ಶರಣ ಧರ್ಮದ ಪ್ರಚಾರ ಕಾರ್ಯ ನಿರ್ವಹಿಸುತ್ತ ನಾಡಿನ ಉದ್ದಗಲಕ್ಕೂ ಪ್ರವಾಸ ಕೈಕೊಂಡು ಮುಂಡರಗಿಗೆ ಬಂದು ಮಠ ಸ್ಥಾಪಿಸಿದ ಮೂಲಪುರುಷರ ಅಷ್ಟಶತಮಾನೋತ್ಸವ ನಡೆಸಲಾಯಿತಲ್ಲದೇ

ಮೂಲ ಪುರುಷರನ್ನು ಕುರಿತು ಪೂಜ್ಯರು ರಚಿಸಿದ "ಚಿನ್ಮಯ ಚೇತನ" ಬಿಡುಗಡೆ ಮಾಡಲಾಯಿತು.

ಮೂಲ ಪುರುಷರು ಅನುಷ್ಠಾನಗೈದ ಮುಂಡಗೋಡ ತಾಲೂಕಿನ ಬಾಚಣಿಕೆ ಗ್ರಾಮದ ಶಾಖಾಮಠದಲ್ಲಿ ಅದೇ ತಿಂಗಳು ೨೫ರಿಂದ ೨೮ರ ವರೆಗೆ ನಡೆದ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ರಜತೋತ್ಸವದ ಎರಡನೇ ಕಾರ್ಯಕ್ರಮ ನಡೆಸಲಾಯಿತು. 'ಶ್ರೀ ಜಗದ್ಗುರು ಅನ್ನದಾನೀಶ್ವರ ವಚನಗಳು' ಗ್ರಂಥ ಬಿಡುಗಡೆಗೊಂಡ ಆ ಸಂದರ್ಭದಲ್ಲಿ ಸಾಮೂಹಿಕ ವಿವಾಹ ಏರ್ಪಡಿಸಿ ಶಿರ್ಸಿಯ ಬಣ್ಣದ ಮಠದ ಮಹಾಸ್ವಾಮಿಗಳ ಸನ್ಮಾನ ನಡೆಸಲಾಯಿತು. ೭-೬-೧೯೯೩ರಂದು ಗದುಗಿನ ವೀರಶೈವ ಪುಣ್ಯಾಶ್ರಮದಲ್ಲಿ ಏರ್ಪಡಿಸ ಲಾಗಿದ್ದ ಮೂರನೇ ಕಾರ್ಯಕ್ರಮದಂಗವಾಗಿ ಆಶ್ರಮದಲ್ಲಿ ಸಂಗೀತಾಭ್ಯಾಸ ನಡೆಸುತ್ತಿರುವ ಕುರುಡ ವಿದ್ಯಾರ್ಥಿಗಳಿಗೆ ಪ್ರಸಾದ ಹಾಗೂ ಬಟ್ಟೆ ನೀಡುವ ಜೊತೆಗೆ ಸರ್ವಶ್ರೀ ಶಿವಶರಣಪ್ಪ, ಶಿವರಾಜ, ನಾಗರಾಜ, ಉಜ್ಜನಪ್ಪ ಮತ್ತು ಶಿವಮೂರ್ತೆಪ್ಪ ಈ ಐದು ಜನ ಗವಾಯಿಗಳಲ್ಲದೇ ಪುಣ್ಯಾಶ್ರಮದ ವ್ಯವಸ್ಥಾಪಕ ಶ್ರೀ ಹಿಡ್ಕಿಮಠರವರನ್ನು ಸತ್ಕರಿಸಲಾಯಿತು. ಆ ಸಂದರ್ಭದ ಸವಿನೆನಪಿಗಾಗಿ 'ನಂದೀಮಠ ರೇವಣಸಿದ್ಧಯ್ಯನವರು' ಗ್ರಂಥ ಬಿಡುಗಡೆ ಮಾಡಲಾಯಿತು.

ನಾಲ್ಕನೆಯ ಕಾರ್ಯಕ್ರಮ ಹಳ್ಳಿಗುಡಿಯಲ್ಲಿ ೧೯೯೩ರ ಜುಲೈ ೩, ೪ ಹಾಗೂ ೫ ರಂದು ಜರುಗಿತು. ಒಂಬತ್ತನೇ ಪೀಠಾಧಿಪತಿಗಳಾದ ವೆಂಕಟಾಪುರ ಪೂಜ್ಯರ ಶತಮಾನೋತ್ಸವದೊಂದಿಗೆ ಕೊಪ್ಪಳ ಗವಿಮಠದ ಜಗದ್ಗುರು ಶ್ರೀ ಶಿವಶಾಂತವೀರ ಮಹಾಸ್ವಾಮಿಗಳನ್ನು, ರೋಣ ಗುಲಗಂಜಿಮಠದ ಗುರುಪಾದ ದೇವರನ್ನು, ಅಸುಂಡಿ ನೀಲಮ್ಮನವರನ್ನು ಸನ್ಮಾನಿಸಲಾಯಿತಲ್ಲದೇ, ಗದುಗಿನ ಶ್ರೀ ಎಸ್. ಎನ್. ಪಾಟೀಲರನ್ನು ಹಾಗೂ ಶ್ರೀ ಸಿ. ಎನ್. ಪಾಟೀಲರನ್ನು ಸತ್ಕರಿಸಲಾಯಿತು. ಕಾರ್ಯಕ್ರಮದ ಸವಿನೆನಪಿ ಗಾಗಿ 'ಹಸನು ಬದುಕಿಗೆ ಹಾದಿ' ಗ್ರಂಥ ಬಿಡುಗಡೆ ಮಾಡಲಾಯಿತು. ಐದನೆಯ ಕಾರ್ಯಕ್ರಮ ೧೧-೭-೧೯೯೩ರಿಂದ ೧೭-೭-೯೩ರ ವರೆಗೆ ಮುನವಳ್ಳಿಯಲ್ಲಿ ನೆರವೇರಿತು. ವೀರಶೈವ ಧರ್ಮ ಸಂವರ್ಧನ ಶಿಬಿರವಾಗಿ ನಡೆಸಲ್ಪಟ್ಟ ಆ ಕಾರ್ಯಕ್ರಮದಲ್ಲಿ ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳನ್ನಲ್ಲದೇ ಏಳು ಜನ ಸದ್ಭಕ್ತರನ್ನು ಸತ್ಕರಿಸಲಾಯಿತು ಹಾಗೂ 'ಯೋಗಾಸನ' ಗ್ರಂಥ ಬಿಡುಗಡೆ ಮಾಡಲಾಯಿತು.

ಲಕ್ಕುಂಡಿಯಲ್ಲಿ ಶ್ರಾವಣಮಾಸದ ಅಂಗವಾಗಿ ನಡೆದ ಶ್ರೀಮಠದ ಒಂಬತ್ತನೇ ಪೀಠಾಧಿಪತಿಗಳ ಪುರಾಣ ಮಂಗಲೋತ್ಸವ ಸಂದರ್ಭದಲ್ಲಿ ೧೯೯೩ನೇ ಅಗಸ್ಟ ೨೧ ಹಾಗೂ ೨೨ರಂದು ಧರ್ಮ ಸಂವರ್ಧನ, ಮಹಿಳಾ ಗೋಷ್ಠಿ ಏರ್ಪಡಿಸುವದರ ಮೂಲಕ ರಜತೋತ್ಸವದ ಆರನೆಯ ಕಾರ್ಯಕ್ರಮ ನಡೆಸಲಾಯಿತು. ಪುರಾಣಕಾರ ಶ್ರೀ ಕೊಟ್ರಯ್ಯ ಶಾಸ್ತ್ರಿಯವರನ್ನು ಪುರಾಣ ಪಠಣಕಾರರನ್ನು ಸನ್ಮಾನಿಸಲಾದ ಈ ಸಮಾರಂಭದಲ್ಲಿ ಆ ಊರಿನ ಭಕ್ತರು ೪೦ ತೊಲಿ ಬೆಳ್ಳಿಯನ್ನು ಪೂಜ್ಯರಿಗೆ ಕಾಣಿಕೆಯಾಗಿ ಅರ್ಪಿಸಿದರು.

ಏಳನೆಯ ಕಾರ್ಯಕ್ರಮ ಡೋಣಿಯಲ್ಲಿ ೧೫-೯-೯೩ ರಂದು ಮಾಸಿಕ ಶಿವಾನುಭವದಂಗವಾಗಿ ನಡೆದು ನಂದಿವೇರಿ ಮಠದ ಶ್ರೀಗಳು ಕ್ರಿಯಾಬಟ್ಟಲನ್ನು ಕಾಣಿಕೆ ನೀಡಿದ್ದಲ್ಲದೇ ಶಾಲು ಹೊದಿಸಿ ಪೂಜ್ಯರನ್ನು ಸನ್ಮಾನಿಸಿದರು.

೧೯೯೩ರ ಅಕ್ಟೋಬರ್ ೩ ಮತ್ತು ೪ರಂದು ಶಿರಹಟ್ಟಿ ತಾಲೂಕ ಬೆಳ್ಳಟ್ಟಿ ಗ್ರಾಮದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಜಯಂತಿಯ ಸ್ಮರಣೆಗಾಗಿ ಆರೋಗ್ಯ ಸಂವರ್ಧನ ಶಿಬಿರವನ್ನು ಏರ್ಪಡಿಸಲಾಗಿತ್ತು. ಮುಂಡರಗಿ, ಗದಗ ಹಾಗೂ ಹುಬ್ಬಳ್ಳಿಯ ಸುಪ್ರಸಿದ್ಧ ೨೭ ಜನ ಆರೋಗ್ಯ ತಜ್ಞರಿಂದ ನಡೆದ ಈ ಶಿಬಿರದಲ್ಲಿ ಗ್ರಾಮದ ಹಾಗೂ ಸುತ್ತಲಿನ ಅನೇಕ ಹಳ್ಳಿಗಳ ಜನರು ಬಹುಸಂಖ್ಯೆ(೩ ಸಾವಿರ)ಯಲ್ಲಿ ಕೂಡಿ ಆರೋಗ್ಯ ಶಿಬಿರದ ಪ್ರಯೋಜನ ಪಡೆದರು. ಆರೋಗ್ಯವೇ ಭಾಗ್ಯವೆಂದರಿತ ಪೂಜ್ಯರು ಈ ಜನಪರ ಕಾರ್ಯಕ್ರಮಕ್ಕೆ ಅಪಾರ ಹಣ ವ್ಯಯ ಮಾಡಿರುವರು. ಇದೇ ಸಂದರ್ಭದಲ್ಲಿ ಸಂತತಿ ನಿಯಂತ್ರಣದ ದ್ಯೋತಕವಾದ 'ಇಚ್ಛಾ ಸಂತಾನ' ಎಂಬ ಪುಸ್ತಕ ಪ್ರಕಟಣೆಯಾಯಿತು. ಡಾ॥ ಬಿ. ಆರ್. ಇನಾಮದಾರ, ಶ್ರೀ ಬಸವಕುಮಾರ, ಶ್ರೀ ಕೆ. ಎಚ್. ಬೇಲೂರ ಹಾಗೂ ಡಾ॥ ಸಜ್ಜನ ಮುಂತಾದವರಿಗೆ ಸನ್ಮಾನ ಮಾಡಲಾಯಿತು. ಮಹಾಸನ್ನಿಧಿಯವರಿಂದ ವಸ್ತ್ರದಾನ ಮತ್ತು ಗ್ರಂಥದಾನ ಕಾರ್ಯಕ್ರಮ ಜರುಗಿತು.

೧೯೯೩ ಅಕ್ಟೋಬರ್ ೫ರಿಂದ ೧೦ನೇ ತಾರೀಖಿನ ವರೆಗೆ ಶಿರ್ಸಿಯಲ್ಲಿ ಧಾರ್ಮಿಕ ಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಶರಣ ಧರ್ಮತತ್ವ ಕುರಿತು ಅನುಭಾವಿಗಳಿಂದ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸುವದರೊಂದಿಗೆ ಶಿವಶರಣರನ್ನು ಕುರಿತು ಬರೆದ ಎರಡು ನಾಟಕಗಳು ಇದೇ ಸಂದರ್ಭದಲ್ಲಿ ಓದುಗರ ಕೈಸೇರಿದವು. ಸಮರ್ಪಣಾ ಭಾವದಿಂದ ಸಮಾಜಕ್ಕೆ ಸೇವೆ ಸಲ್ಲಿಸಿದ ಡಾ॥ ಶಂಕರಗೌಡ ಮೇಗೂರ, ಶ್ರೀ ಹೊಳಿಯಪ್ಪ, ಡಾ॥ ಎನ್. ಆರ್. ನಾಯಕ ಮುಂತಾದವರನ್ನು ಸತ್ಕರಿಸಲಾಯಿತು. ಇದೇ ಸಂದರ್ಭದಲ್ಲಿ ಶಿರ್ಸಿ ಶ್ರೀಗಳವರಿಂದ ಮಹಾಸನ್ನಿಧಿಯವರಿಗೆ ಗಂಧದ ಪೆಟ್ಟಿಗೆ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ೨೯-೧೦-೯೩ರಿಂದ ೩೧-೧೦-೯೩ರ ವರೆಗೆ ಕರ್ನಾಟಕದ ರಾಜಧಾನಿ ಬೆಂಗಳೂರಿನ ಗುರುವಣ್ಣದೇವರ ಮಠದ ಪರವಾಗಿ ಮಹಾಂತ ಪ್ರಾರ್ಥನಾ ಮಂದಿರದಲ್ಲಿ ಶ್ರೀ ಸನ್ನಿಧಿಯವರ ಸಮಗ್ರ ಸಾಹಿತ್ಯ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಕನ್ನಡ ಅನುಭಾವ ಸಾಹಿತ್ಯಕ್ಕೆ ಸನ್ನಿಧಿಯವರಿಂದ ಸಂದಾಯವಾದ ವಿವಿಧ ಗ್ರಂಥಗಳನ್ನು ಕುರಿತು ನಾಡಿನ ಹಿರಿಯ ಸಾಹಿತಿಗಳಾದ ಡಾ॥ ಎಂ. ಚಿದಾನಂದಮೂರ್ತಿ, ಬಿ. ವಿರೂಪಾಕ್ಷಪ್ಪ, ವಿದ್ಯಾಶಂಕರ, ಟಿ. ಆರ್. ಮಹಾದೇವಯ್ಯ, ಕಸ್ತೂರಿಶಂಕರ, ಅಕ್ಕೂರಮಠ ಇನ್ನೂ ಅನೇಕ ಮೇಧಾವಿಗಳು ಉಪನ್ಯಾಸ ನೀಡಿದರು. ಸಮಾರಂಭದಲ್ಲಿ ಇಪ್ಪತ್ತು ಜನ ಸಾಹಿತಿಗಳನ್ನು ಸನ್ಮಾನಿಸಲಾಯಿತು ಹಾಗೂ ಸನ್ನಿಧಿಯ ಸಾಹಿತ್ಯಿಕ ವಿಚಾರ ಸಂಕಿರಣ-೧, 'ವಚನ ಮಾಣಿಕ್ಯ ಕೋಶ' ವೀರಶೈವ ವಾಗ್ಗೇಯಕಾರರು ಮತ್ತು 'ವಚನ ಸಾಹಿತ್ಯ ವಿವೇಚನೆ' ಎಂಬ ಗ್ರಂಥಗಳು ಸಮಾರಂಭದಲ್ಲಿ ಬೆಳಕು ಕಂಡವು. ಮೂರುಸಾವಿರ ರೂಪಾಯಿಗಳಿಗೂ ಹೆಚ್ಚು ಗ್ರಂಥಗಳ ದೇಣಿಗೆ

ನೀಡಲಾಯ್ತು. ಮಹಾಸನ್ನಿಧಿಯವರ ಪ್ರತಿಭೆ ಮತ್ತು ಪಾಂಡಿತ್ಯದ ದ್ಯೋತಕವಾಗಿ ಮೂಡಿಬಂದ ಅವರ ಸಾಹಿತ್ಯ ರಾಶಿಯನ್ನು ರಾಜಧಾನಿಯ ಬಹುಸಂಖ್ಯಾತ ಮುಮುಕ್ಷು ಗಳಿಗೆ ಪರಿಚಯಿಸಿ ಕೊಡುವ ದಿಶೆಯಲ್ಲಿ ಕಾರ್ಯಕ್ರಮ ವೈಶಿಷ್ಟ್ಯಪೂರ್ಣವಾಗಿ ಜರುಗಿತು. ಈ ಸಮಾರಂಭದ ಎಲ್ಲ ವೆಚ್ಚವನ್ನು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರೇ ವಹಿಸಿ ಕೊಂಡದ್ದು ಅಭಿನಂದನೀಯ.

ದಿನಾಂಕ ೯ರಿಂದ ೧೧-೧೦-೯೩ರ ವರೆಗೆ ಕೊಪ್ಪಳ ತಾಲೂಕ ಮುಲ್ಲಾಪುರ ಗ್ರಾಮದಲ್ಲಿ ದೇವಿ ಪುರಾಣ ಮಂಗಲದೊಂದಿಗೆ ಬಹು ವಿಜೃಂಭಣೆಯಿಂದ ಧರ್ಮ ಸಭೆ ಯನ್ನು ನಡೆಸಲಾಯಿತು. ರಜತೋತ್ಸವದ ೧೧ನೇ ಕಾರ್ಯಕ್ರಮದಲ್ಲಿ ಶಿವಾನುಭವ, ಶರಣ ತತ್ವಗಳು ಹಾಗೂ ಧರ್ಮ-ಸಂಸ್ಕೃತಿಯ ಹಿರಿಮೆಯನ್ನು ಕುರಿತು ಅನುಭಾವಿಗಳಿಂದ ಹಾಗೂ ಸಾಹಿತ್ಯ ಶ್ರೇಷ್ಠರಿಂದ ಉಪನ್ಯಾಸಗಳು ಜರುಗಿದವು. ಇದೇ ಸಂದರ್ಭದಲ್ಲಿ ಭಕ್ತರಾದ ಶ್ರೀ ವಿರೂಪಾಕ್ಷಗೌಡ್ರ ಹಾಗೂ ಶ್ರೀ ಕೊಟ್ರಯ್ಯನವರಿಗೆ ಸನ್ಮಾನ ಏರ್ಪಡಿ ಸುವದರೊಂದಿಗೆ ಗ್ರಾಮದ ಸ್ತ್ರೀ-ಪುರುಷರಿಗೆ ವಸ್ತ್ರದಾನವೀಯಲಾಯಿತು.

ರಜತ ಮಹೋತ್ಸವದ ದ್ವಾದಶ ಕಾರ್ಯಕ್ರಮ ನಂದಿಕೇಶ್ವರದಲ್ಲಿ ಜರುಗಿತು. ೨೦-೧೧-೯೩ರಿಂದ ೨೩-೧೧-೯೩ರ ವರೆಗೆ ನಡೆದ ಈ ಕಾರ್ಯಕ್ರಮದಲ್ಲಿ ಕಾರಣಿಕ ಯುಗಪುರುಷ ಶ್ರೀ ಕುಮಾರ ಮಹಾಶಿವಯೋಗಿಗಳ ಕುರಿತು ಸಮಗ್ರ ವಿಚಾರ ಸಂಕಿರಣ ನಡೆಯಿತು. ಕುಮಾರ ಮಹಾಶಿವಯೋಗಿಗಳ ಮಹಾವ್ಯಕ್ತಿತ್ವದ ಸಾಧನೆ ಮತ್ತು ಸಿದ್ಧಿಯನ್ನು ಜನಮನಸಕ್ಕೆ ಮುಟ್ಟಿಸುವಲ್ಲಿ ಈ ಕಾರ್ಯಕ್ರಮ ವೈಶಿಷ್ಟ್ಯಪೂರ್ಣವಾಗಿ ಜರುಗಿತು. ಬಹುಸಂಖ್ಯಾತ ಪಂಡಿತರು, ಪೂಜ್ಯ ಶ್ರೀಗಳು ಹಾಗೂ ಮೇಧಾವಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದು, ಇದೇ ಸಂದರ್ಭದಲ್ಲಿ ಮಹಾಸನ್ನಿಧಿಯವರಿಂದ ರಚಿಸಲ್ಪಟ್ಟ ಆರೈದು ಭಾಗ-೩ ಎಂಬ ಗ್ರಂಥ ಬಿಡುಗಡೆಯಾಯಿತು. ಶಿವಯೋಗ ಮಂದಿರದ ವಟು ಸಾಧಕರಿಗೆ ಮತ್ತು ಕೆಲಸಗಾರರಿಗೆಲ್ಲ ವಸ್ತ್ರದಾನ ಮಾಡಲಾಯಿತು.

ಶ್ರೀಮಠದ ಪರಮ ಭಕ್ತರಾದ ಮುಂಡರಗಿಯ ಶರಣ ಈಶ್ವರಪ್ಪ ಹಾರೋಗೇರಿ ಇವರ ನಿವಾಸದಲ್ಲಿ ೧೩ನೇ ಕಾರ್ಯಕ್ರಮ ದಿನಾಂಕ ೨-೧೨-೯೩ರಂದು ಸಾಂಗವಾಯಿತು. ಈಶ್ವರಪ್ಪನವರು ಶ್ರೀ ಜಗದ್ಗುರು ಅನ್ನದಾನೀಶನ ಪರಮಭಕ್ತರು, ಗುರು-ಲಿಂಗ-ಜಂಗಮ ಪ್ರೇಮಿಗಳು, ದಾಸೋಹಂಭಾವಿಗಳು, ರಜತಮಹೋತ್ಸವದ ಹೆಸರಿನಲ್ಲಿ ವ್ಯಕ್ತಿಗತ ಸಮಾರಂಭ ಏರ್ಪಡಿಸುವದರೊಂದಿಗೆ ೫ ಜನ ಸ್ವಾಮಿಗಳಿಗೆ ಸನ್ಮಾನ ಮಾಡಿದರು ಮತ್ತು ಇದೇ ಸಂದರ್ಭದಲ್ಲಿ ಸನ್ನಿಧಿಯವರ ಕುರಿತು 'ಉತ್ಸಾಹ ರಗಳೆ' ಎಂಬ ಗ್ರಂಥವನ್ನು ಬಿಡುಗಡೆ ಮಾಡಲಾಯಿತು.

೧೯೯೩ರ ಡಿಸೆಂಬರ್ ೩ ಮತ್ತು ೪ರಂದು ಬದಾಮಿ ತಾಲೂಕಿನ ಕೆರೂರ ವಿರಕ್ತ ಮಠದಲ್ಲಿ ಬೆಳ್ಳಿ ಹಬ್ಬದ ಹದಿನಾಲ್ಕನೆಯ ಕಾರ್ಯಕ್ರಮವು 'ಮಹಾಸನ್ನಿಧಿಯ ಸಮಗ್ರ ಸಾಹಿತ್ಯ'ವೆಂಬ ವಿಷಯ ಕುರಿತು ಜರುಗಿತು. ಪೂಜ್ಯರ ವೀರಶೈವ ದಾರ್ಶನಿಕ ಸಿದ್ಧಾಂತ,

ಮಾನವ ಧರ್ಮ ಹಾಗೂ ಸನ್ನಿಧಿಯವರ ಸ್ವರಚಿತ ವಚನಗಳ ಕುರಿತು ಎರಡು ದಿನಗಳ ಉಪನ್ಯಾಸ ನಡೆಸಲಾಯಿತು. ಗ್ರಾಮದ ಸಮಸ್ತ ಜನರು ಅದ್ದೂರಿಯಿಂದ ಕಾರ್ಯಕ್ರಮ ಏರ್ಪಡಿಸಿ ಪೂಜ್ಯರ ಸಾಹಿತ್ಯ ಸುಧೆಯನ್ನು ಸ್ವೀಕರಿಸುವದರೊಂದಿಗೆ ಮಹಾಸನ್ನಿಧಿಯವರಿಗೆ ಬಿನ್ನವತ್ತಳೆ ಹಾಗೂ ಬೆಳ್ಳಿತಂಬಿಗೆಯನ್ನು ನೀಡಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು. ೧೯-೧೨-೯೩ ರಿಂದ ೨೧-೧೨-೯೩ರ ವರೆಗೆ ಲಿಂಗನಾಯಕನಹಳ್ಳಿ ಮಠದಲ್ಲಿ ಶಿವಾನುಭವ ಚಿಂತನ ಗೋಷ್ಠಿ ಹಾಗೂ ಜ್ಞಾನ ದೀಪೋತ್ಸವ ಸಮಾರಂಭ ಜರುಗಿತು. ಸನ್ಮಾನದ ಆಡಂಬರವಿಲ್ಲದೇ ಹೋದರೂ ಶಿವಾನುಭವದ ಸಿಹಿ ಗ್ರಾಮದ ಜನತೆಯಲ್ಲಿ ಭಕ್ತಿಯ ಉತ್ಸಾಹವನ್ನು ಹುಟ್ಟಿಸುವ ನೈಜ ಶಿವತತ್ವ ಚಿಂತನೆಯ ಕಾರ್ಯಕ್ರಮ ಚನ್ನಾಗಿತ್ತು ಅನೇಕ ಜನ ಪೂಜ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಯಶಸ್ವಿಯಾಯಿತು.

ರಜತೋತ್ಸವದ ೧೬ನೇ ಕಾರ್ಯಕ್ರಮ ಕರ್ಮಯೋಗಿ ಸಿದ್ಧರಾಮರ ಆಡುಂಬೊಲ ವಾದ ಸೊನ್ನಲಿಗೆಯಲ್ಲಿ ದಿನಾಂಕ ೨೫ ರಿಂದ ೨೬-೧೨-೯೩ರ ವರೆಗೆ ಜರುಗಿತು. ನಾಡಿನ ಮೇಧಾವಿಗಳಿಂದ ಶಿವಯೋಗಿ ಸಿದ್ಧರಾಮರ ಸಾಧನೆಯ ವಿವಿಧ ಮಜಲುಗಳನ್ನು ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಶರಣ ಸಿದ್ಧರಾಮರ ತತ್ವಗಳನ್ನು ಕುರಿತು ನ್ಯಾಯ-ನಿಷ್ಠುರ ವಿಚಾರಗಳನ್ನು ಮಂಡಿಸಿ, ಸಾಧಕರಿಗೆ ಮಾರ್ಗದರ್ಶನ ಮಾಡುವಲ್ಲಿ ಕಾರ್ಯಕ್ರಮ ತುಂಬ ಯಶಸ್ವಿಯಾಯಿತು. ಪಂಡಿತರಿಂದ ಮಂಡಿತವಾದ ಪ್ರಬಂಧಗಳನ್ನು ಗ್ರಂಥ ರೂಪದಲ್ಲಿ ಹೊರತರುವ ಪೂಜ್ಯರ ಸಂಕಲ್ಪವೂ ಯಶಸ್ವಿಯಾಗಿದೆ. ಇದೇ ಸಂದರ್ಭದಲ್ಲಿ ಅಮ್ಮೀನಗಡ ಶ್ರೀಗಳು, ಶ್ರೀ ಬಿ. ಎ. ಜಮಾದಾರ, ಶ್ರೀಮತಿ ಶಶಿಕಲಾ ಮಡಕಿ ಹಾಗೂ ಡಾ. ಭಗವಾನದಾಸ ತಿವಾರಿ ಮುಂತಾದ ಸಾಹಿತಿ ಹಾಗೂ ಭಕ್ತರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯ್ತು. ಸುತ್ತೂರ ಮಠದ ಜಗದ್ಗುರುಗಳು ಸಮಾರೋಪ ಮಾಡಿದರು. ಬೆಂಗಳೂರಿಂದ ಹಿಡಿದು ಅಲ್ಲಿಯವರೆಗಿನ ಶ್ರೀಗಳು ಸಮ್ಮಿಲಿತರಾಗಿದ್ದರು.

ಜನೇವರಿ ೧೧, ೧೨-೧೯೪ಳ ಈ ಎರಡು ದಿನಗಳವರೆಗೆ ಗದಗ ತಾಲೂಕಿನ ಕುರ್ತಕೋಟಿಯಲ್ಲಿ ಧರ್ಮ ಜಾಗ್ರತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ವೀರಶೈವ ಧರ್ಮ ಕಲ್ಪನೆ, ಶರಣತತ್ವ ಚಿಂತನೆ ಇವೇ ಮುಂತಾದ ಅನುಭಾವಿಕ ವಿಷಯಗಳ ಕುರಿತು ಶಿವಾನುಭವ ಗೋಷ್ಠಿಯನ್ನು ನಡೆಸಿಕೊಡುವದರೊಂದಿಗೆ, ದಿಗಂಬರ ಶಾಸ್ತ್ರಿ ಹಾಗೂ ಜಯಶಂಕರಯ್ಯ ಗವಾಯಿಗಳನ್ನು ಸನ್ಮಾನಿಸಲಾಯ್ತು. ಸಮಾರಂಭದ ಅಂಗವಾಗಿ ವಸ್ತ್ರದಾನ ಮತ್ತು ಗ್ರಂಥದಾನ ಕಾರ್ಯಗಳು ಸಾಂಗವಾದವು. ಗ್ರಾಮದ ಜನತೆಯ ಭಕ್ತಿ ಕುಸುಮ ವಿಕಸಿಸುವ ದಿಶೆಯಲ್ಲಿ ಸಮಾರಂಭ ಸಹಕಾರಿಯಾಯಿತು.

ರಜತೋತ್ಸವದ ೧೮ನೇ ಕಾರ್ಯಕ್ರಮ ದಿನಾಂಕ ೨೦-೧-೯೪ ಹಾಗೂ ೨೧-೧-೯೪ ರಂದು ಜಮಖಂಡಿ ತಾಲೂಕಿನ ಮರೆಗುದ್ದಿಯ ಶ್ರೀ ಅಡವಿಸಿದ್ಧೇಶ್ವರ ಮಠದಲ್ಲಿ ಜರುಗಿತು. ಎರಡು ದಿನಗಳವರೆಗೆ ನಡೆದ ಈ ಧಾರ್ಮಿಕ-ವಿಚಾರ ಸಂಕಿರಣದಲ್ಲಿ ಗ್ರಾಮದ ಬಹುಸಂಖ್ಯಾತ ಭಕ್ತರು ಪಾಲ್ಗೊಂಡು ಸಮಾರಂಭದ ಸದುಪಯೋಗವನ್ನು ಪಡೆದು

ಕೊಂಡರು. ಕಾರ್ಯಕ್ರಮದ ಅಂಗವಾಗಿ ಗಣ್ಯರಿಗೆ ಸನ್ಮಾನ ಹಾಗೂ ಗ್ರಂಥದಾನ ನಡೆದವು.

೧೯ನೇ ಕಾರ್ಯಕ್ರಮ ಹಾವೇರಿ ತಾಲೂಕಿನ ಹೊಸರಿತ್ತಿ ಗ್ರಾಮದ ಗುದ್ಲೀಶ್ವರ ಮಠದ ಜಾತ್ರೆಯ ಅಂಗವಾಗಿ ಜರುಗಿತು. ಯಾತ್ರಾಮಹೋತ್ಸವದಲ್ಲಿ ಧರ್ಮಜಾಗ್ರತಿ ಕಾರ್ಯಕ್ರಮ ಮತ್ತು ಜ್ಞಾನ ದೀಪೋತ್ಸವ ಏರ್ಪಡಿಸುವದರೊಂದಿಗೆ ಶರಣ ತತ್ವಗಳ ಕುರಿತು ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಯಲಬುರ್ಗಾ ತಾಲೂಕಿನ ರಾಜೂರ ಗ್ರಾಮದಲ್ಲಿ ಮೃಡಗಿರಿ ಜಗದ್ಗುರು ಅನ್ನದಾನೀಶ್ವರ ಮಠದ ನವಮ ಪೀಠಾಧಿಪತಿಗಳ ಜನ್ಮ ಶತಮಾನೋತ್ಸವ ಶರಣಬಸವೇಶ್ವರ ಜಾತ್ರೆಯ ಅಂಗವಾಗಿ ೧೭-೨-೯೪ ರಂದು ಶಿವಾನುಭವ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ದೇವಸ್ಥಾನ ನಿರ್ಮಾಣಕ್ಕಾಗಿ ಸನ್ನಿಧಿಯವರು ಅಪಾರ ಧನಸಹಾಯ ನೀಡಿದ ಸ್ಮರಣೆಗಾಗಿ ಪುರಜನರು ಅದ್ದೂರಿಯಿಂದ ರಜತೋತ್ಸವ ಕಾರ್ಯಕ್ರಮವನ್ನು ಆಚರಿಸಿದರು. ಸಮಾರಂಭದಲ್ಲಿ ಶ್ರೀಮಠದ ಒಂಬತ್ತನೇ ಜಗದ್ಗುರುಗಳ ಜೀವನ-ಸಿದ್ಧಿ ಹಾಗೂ ಸನ್ನಿಧಿಯವರ ಜೀವನ ಸಾಧನೆ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಸಮಾರಂಭದ ಅಂಗವಾಗಿ ಗಣ್ಯವ್ಯಕ್ತಿಗಳಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು.

೧-೩-೧೯೯೪ ರಂದು ರಜತೋತ್ಸವದ ೨೦ನೇ ಕಾರ್ಯಕ್ರಮ ಹೂವಿನಹಡಗಲಿ ಗವಿಸಿದ್ಧೇಶ್ವರ ಸಂಸ್ಥಾನ ಶಾಖಾ ಮಠದಲ್ಲಿ ಧರ್ಮ ಜಾಗ್ರತಿ ಕಾರ್ಯಕ್ರಮದ ರೂಪದಲ್ಲಿ ಜರುಗಿತು. ದಾಸೋಹ-ಕಾಯಕ ಮುಂತಾದ ಶರಣ ತತ್ವಗಳ ಕುರಿತು ಉಪನ್ಯಾಸ ಜರುಗುವದರೊಂದಿಗೆ ಯೋಗಾಸನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣೆ ಇವೇ ಮುಂತಾದ ವಿಧಾಯಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ತಾಲೂಕಿನ ಬಹುಸಂಖ್ಯಾತ ಜನರು ಕಾರ್ಯಕ್ರಮದ ಲಾಭ ಪಡೆದ ಈ ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು. ವಸ್ತ್ರದಾನ ಜರುಗಿತು. ದಿನಾಂಕ ೧೪-೩-೯೪ ರಂದು ಹಿರೇಕೆರೂರ ತಾಲೂಕಿನ ನೇಶ್ವಿ ಗ್ರಾಮದಲ್ಲಿ ಪುರಾಣ ಮಂಗಲದ ಅಂಗವಾಗಿ ರಜತೋತ್ಸವದ ೨೧ನೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಅಂದು ಧರ್ಮೋತ್ತೇಜಕ ಸಭೆ ಜರುಗಿಸಿ ವೀರಶೈವ ಧರ್ಮದ ಮರ್ಮ, ಸಾಧನೆ-ಸಿದ್ಧಿ ಇವೇ ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು. ದಿನಾಂಕ ೧೬ ಹಾಗೂ ೧೭-೩-೯೪ ರಂದು ಮುಂಡರಗಿಯ ಎಂ. ಎಸ್. ಡಂಬಳ ಕನ್ಯಾ ಪ್ರೌಢಶಾಲೆಯ ರಜತಮಹೋತ್ಸವದ ಸಂದರ್ಭದಲ್ಲಿ ಪೂಜ್ಯರ ಪೀಠಾರೋಹಣದ ರಜತೋತ್ಸವದ ನಿಮಿತ್ಯ ಜಗದ್ಗುರುಗಳವರನ್ನು ಗೌರವಿಸಲಾಯಿತು. ಅವರ ಸಂಕಲ್ಪದಂತೆ ನೌಕರಿಯಲ್ಲಿರುವ ಪ್ರತಿಭಾವಂತ ಹಳೆ ವಿದ್ಯಾರ್ಥಿನಿಯರನ್ನು ಸನ್ಮಾನಿಸಿ ೨೫ ಜನ ಬಡ ವಿದ್ಯಾರ್ಥಿನಿಯರಿಗೆ ವಸ್ತ್ರದಾನ ನೀಡಲಾಯಿತು.

ರಜತೋತ್ಸವದ ೨೩ನೇ ಕಾರ್ಯಕ್ರಮವು ಮುಂಡರಗಿ ತಾಲೂಕಿನ ವೆಂಕಟಾಪುರದಲ್ಲಿ ಜರುಗಿತು. ಆ ಸಂದರ್ಭದಲ್ಲಿ ಶ್ರೀಮಠದ ಒಂಬತ್ತನೇ ಪೀಠಾಧೀಶರ ಜನ್ಮ

ಶತಮಾನೋತ್ಸವ ನಿಮಿತ್ಯ ಸ್ಮಾರಕ ಮಂದಿರವನ್ನು ರಚಿಸಿ ಧಾರ್ಮಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಒಂಬತ್ತನೇ ಜಗದ್ಗುರುಗಳವರ ಜೀವನ-ಸಾಧನೆಯನ್ನು ಹಾಗೂ ಮಹಾಸನ್ನಿಧಿಯವರ ಕರ್ತೃತ್ವಶಕ್ತಿಯನ್ನು ಕುರಿತು ಉಪನ್ಯಾಸ ಕಾರ್ಯಕ್ರಮ, ಶಿವಾನುಭವ ಗೋಷ್ಠಿ, ವಿಧಾಯಕ ಕಾರ್ಯಕ್ರಮದ ಅಂಗವಾಗಿ ಉಚಿತ ಪಶು ಚಿಕಿತ್ಸೆ ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ಸನ್ನಿಧಿಯವರಿಂದ ವಿರಚಿತ ಪೂಜ್ಯರ ಸಮಗ್ರ ವ್ಯಕ್ತಿತ್ವವನ್ನು ಬಿತ್ತರಿಸುವ 'ಮೃಡಗಿರಿಯ ಮಹಾಪುರುಷ' ಚರಿತ್ರೆ ಬಿಡುಗಡೆಗೊಂಡಿತು.

ಶ್ರೀಮಠದ ಒಂಬತ್ತನೇ ಜಗದ್ಗುರುಗಳವರ ಪುರಾಣ ಮಂಗಲದ ಅಂಗವಾಗಿ ಸನ್ನಿಧಿಯವರ ರಜತೋತ್ಸವವು ೭-೯-೯೪ ರಂದು ಕೊಪ್ಪಳ ಪ್ಯಾಟಿ ಈಶ್ವರ ಗುಡಿಯಲ್ಲಿ ಸ್ಥಳೀಯ ಅಕ್ಕನ ಬಳಗದವರ ನೆರವಿನೊಂದಿಗೆ ಜರುಗಿತು. ಪೂರ್ಣ ಕುಂಭದ ಮೆರವಣಿಗೆಯೊಂದಿಗೆ ಪೂಜ್ಯರನ್ನು ಆಹ್ವಾನಿಸಿ ಧರ್ಮೋತ್ತೇಜಕ ಸಭೆಯನ್ನು ಏರ್ಪಡಿಸಲಾಗಿತ್ತು. ಪೂಜ್ಯರ ಜೀವನಾದರ್ಶ, ಸಾಧನೆ-ಸಿದ್ಧಿ ಕುರಿತು ಉಪನ್ಯಾಸ, ಶರಣ ತತ್ವಗಳ ಕುರಿತು ಚಿಂತನ ಮಂಥನ ಜರುಗಿದವು. ಸಮಾರಂಭದ ಅಂಗವಾಗಿ ಮಾನ-ಸನ್ಮಾನ ಜರುಗಿ, ಮಹಾಸನ್ನಿಧಿಯವರಿಗೆ ಭಕ್ತವೃಂದ ೨೫೦೧ ರೂ.ಗಳನ್ನು ಭಕ್ತಿ ಕಾಣಿಕೆಯಾಗಿ ಅರ್ಪಿಸಿದರು. ಕೊಪ್ಪಳ ಜಗದ್ಗುರುಗಳಿಂದ ಶಾಲು ಹೊದಿಸಿ ಆನಂದಿಸಿದರು.

ಐತಿಹಾಸಿಕ ನಗರ ಕುಕನೂರಿನಲ್ಲಿ ದಿ. ೧೧,೧೨-೯-೯೪ ರಂದು ರಜತೋತ್ಸವವು ವೈಶಿಷ್ಟ್ಯಪೂರ್ಣವಾಗಿ ಜರುಗಿತು. ಮುಂಡರಗಿ ಹಾಗೂ ಕೊಪ್ಪಳ ಉಭಯ ಜಗದ್ಗುರುಗಳನ್ನು ವಾದ್ಯ ವೈಭವದಿಂದ ಭಕ್ತರು ಸ್ವಾಗತಿಸಿ ಪೂಜ್ಯರ ಜನ್ಮ ಸುವರ್ಣಮಹೋತ್ಸವವನ್ನು ಆಚರಿಸುವ ನಿಮಿತ್ತದಲ್ಲಿ 'ನಿರಂಜನ ಜಂಗಮ' ಹಾಗೂ ಡಾ|| ಸಿದ್ಧಯ್ಯ ಪುರಾಣಿಕರ ತಂದೆಯವರಾದ 'ಕಲ್ಲಿನಾಥ ಶಾಸ್ತ್ರಿಗಳು' ಎರಡು ಕೃತಿಗಳ ಬಿಡುಗಡೆಯಾಯಿತು. ಪೂಜ್ಯದ್ವಯರಿಗೆ ೫೧/೫೧ ತೊಲಿಯ ಬೆಳ್ಳಿಯ ಪೂಜಾ ಸಾಮಾನು ಬೆತ್ತ ಪಾದುಕೆಗಳನ್ನು ಸಮರ್ಪಿಸಿ ಭಕ್ತರು ಕೃತಕೃತ್ಯರಾದರು. ೨೫ ಜನ ಬಡವರಿಗೆ ವಸ್ತ್ರದಾನ, ಸನ್ಮಾನ ವಗೈರೆ ನಡೆದು ಬಂದ ಭಕ್ತರಿಗೆ ಪ್ರಸಾದ ವಿತರಣೆಯಾಯಿತು. ಈ ಸಂದರ್ಭದಲ್ಲಿ ಬಸವ ಸಮಿತಿಯ ರಜತೋತ್ಸವವು ಸಾಂಗವಾಯಿತು.

ದಿನಾಂಕ ೧೩-೯-೯೪ ರಂದು ಸವದತ್ತಿ ಸ್ವಾದಿಮಠದಲ್ಲಿ ನಂತರ ೨೮-೯-೯೫ ರಂದು ಬೆಳ್ಳುಬ್ಬಿ ಕಾಲೇಜಿನಲ್ಲಿ (ವಿ. ಎಸ್. ಬೆಳ್ಳುಬ್ಬಿಯವರ ೯೭ನೇ ಜನ್ಮದಿನೋತ್ಸವದ ಸ್ಮರಣೆಗಾಗಿ) ಮಹಾಸನ್ನಿಧಿಯವರ ರಜತೋತ್ಸವ ಕಾರ್ಯಕ್ರಮ ಜರುಗಿತು. ಅದೇ ಸಂದರ್ಭದಲ್ಲಿ ಮಹಾದಾನಿ ಶಿವಯೋಗಪ್ಪ ತುಪ್ಪದರವರನ್ನು ಸನ್ಮಾನಿಸುವದರೊಂದಿಗೆ, ಇನ್ನೂ ಅನೇಕ ಪ್ರತಿಭಾನ್ವಿತರಿಗೆ ಪೂಜ್ಯರು ಪುರಸ್ಕಾರ ನೀಡಿದರು.

ಇದಲ್ಲದೇ ಹಿಟ್ನಾಳ, ಹುಲಗಿ, ಹಳ್ಳಿಕೇರಿ, ಬಳಗಾನೂರ, ಹಾಳಕೇರಿ ಮುಂತಾದ ಸ್ಥಳಗಳಲ್ಲಿ ಸಾಮೂಹಿಕ ವಿವಾಹ, ಉಚಿತ ನೇತ್ರ ಚಿಕಿತ್ಸೆ, ಧರ್ಮ ಸಭೆಗಳು ಜರುಗಿವೆ. ಹೀಗೆ ಸುಮಾರು ೩೦ ಕ್ಕೂ ಹೆಚ್ಚು ಕಡೆಗೆ ರಜತೋತ್ಸವ ಕಾರ್ಯಕ್ರಮಗಳು

ಸಾಂಗವಾಗಿ ಅನೇಕ ಮಠಾಧೀಶರನ್ನು, ಸಾಹಿತಿಗಳನ್ನು, ಗಣ್ಯರನ್ನು, ಗೌರವಿಸುವದ ರೊಂದಿಗೆ, ಸುಮಾರು ೪೦೦ ಜನ ಬಡವರಿಗೆ ವಸ್ತ್ರದಾನ ಮಾಡಲಾಯ್ತು. ಸುಮಾರು ೧೦ ಸಾವಿರ ರೂ.ಗಳ ಗ್ರಂಥದಾನ ನಡೆಯಿತು. ೨೦ ಕ್ಕಿಂತಲೂ ಹೆಚ್ಚು ಗ್ರಂಥಗಳು ಪ್ರಕಟಣೆಯಾದವು. ನೂರಾರು ಸಾಮೂಹಿಕ ವಿವಾಹಗಳನ್ನು ಜರುಗಿಸಲಾಯಿತು. ಬೇಡಿಸಿಕೊಳ್ಳದ ಭಕ್ತರಿಗೆ ಬೇಡದ ಜಂಗಮರಾಗಿ ಸಮಾಜಕ್ಕೆ ಸಮರ್ಪಣಾಭಾವದಿಂದ ಸೇವೆ ಸಲ್ಲಿಸಿದ ಪೂಜ್ಯರು ಅಭಿನಂದನಾರ್ಹರು. ಈ ರಜತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುತ್ತಲಿರುವ ಇಂದಿನ ಪೂಜ್ಯ ಸನ್ನಿಧಿಯವರು ಶ್ರೀ ಪೀಠದ ೮೦೦ ವರ್ಷಗಳ ಇತಿಹಾಸದಲ್ಲಿ ಮರೆಯದ ಮೈಲುಗಲ್ಲು ಮಾತ್ರವಲ್ಲ ಮುಂಡರಗಿ ಇತಿಹಾಸದಲ್ಲಿ ಸುವರ್ಣಯುಗದ ಹೆಬ್ಬಾಗಿಲು ಎಂದು ಹೇಳಿದರೆ ಅತಿಶಯೋಕ್ತಿಯಾಗದು.

ಅನುಬಂಧ ೨

ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದ ಶಾಖಾಮಠಗಳು

—**ಎನ್. ಎಫ್. ಅಕ್ಕೂರ,** ಮುಂಡರಗಿ

ಮೃಡಗಿರಿ ಅನ್ನದಾನೀಶನಿರವ ಕೇಳಿರಯ್ಯಾ
ಅವಿರಳ ಮಹಾಜ್ಞಾನಿ ಚನ್ನಬಸವೇಶನ ಬಳಿವಿಡಿದು ಬಂದ ಮಹಾಪುರುಷನಯ್ಯಾ
ಪರಮಗುರುವಿನಿಂದ ಚಿದ್‌ಭಸಿತವ ಪಡೆದ ವಿಭೂತಿ ಪುರುಷನಯ್ಯಾ
ಷಟ್‌ಸ್ಥಲ ಸಿದ್ಧಾಂತವ ಜನಮನಕೆ ಬೀರಲು ತಪಗೈದ ಮಹಾತತ್ವಜ್ಞಾನಿಯಯ್ಯಾ
ನಾಡಜನತೆಯ ಮೂಢತನವ ಕಳೆದು ಮೃಡನಸ್ವರೂಪ ತಿಳಿಸಿದ ಮೃಡಗಿರಿಯೊಡೆಯನಯ್ಯಾ
ಕಾಡಬೇಡರಿಗೆ ಜ್ಞಾನಾನ್ನಗಳ ದಾನಗೈದ ಮೃಡಗಿರಿ ಜಗದ್ಗುರು ಅನ್ನದಾನೀಶನಿವನಯ್ಯಾ

ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠವು ಪುರಾತನವಾದುದು. ಷಟ್‌ಸ್ಥಲ ಚಕ್ರವರ್ತಿ ಅವಿರಳಜ್ಞಾನಿ ಚನ್ನಬಸವಣ್ಣನವರಿಂದ ಸುಜ್ಞಾನ-ಸತ್ಕ್ರಿಯೆಗಳ ಚಿದ್‌ಬೆಳಗಾದ ಕ್ರಿಯಾಘುಟ್ಟಿಯನ್ನು ಆಶೀರ್ವಾದ ಪಡೆದ ಬಾಲಯೋಗಿಗಳೇ ಮೃಡಗಿರಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠದ ಮೂಲಸ್ತಂಭರು. ಮಹಾಗುರುವಿನ ಅಪ್ಪಣೆಯಂತೆ ಶಿವಶರಣರ ತತ್ವವನ್ನು ಪ್ರಸಾರಗೈಯಲು ಮೊದಲು ಮುಂಡಗೋಡ ತಾಲೂಕಿನ ಬಾಚಣಕಿ ಗವಿಯಲ್ಲಿ ಅನುಷ್ಠಾನಗೈಯುತ್ತಾರೆ. ಸಿದ್ಧಶಿವಯೋಗಿಯಾಗಿ ನಾಡ ಸಂಚರಿಸಿ ಲೀಲೆಗೈಯುತ್ತ ಭಕ್ತರನ್ನು, ಜೀವಜಂತುಗಳನ್ನು ಉದ್ಧರಿಸುತ್ತ ಕಪೋತಗಿರಿಗೆ ಆಗಮಿಸುತ್ತಾರೆ. ಕೆಲಕಾಲ ಅನುಷ್ಠಾನಮಾಡಿ ಮುಂಡರಗಿ ಬೇಡರನ್ನು ಉದ್ಧರಿಸುತ್ತಾರೆ. ನಾಗರಿಕರನ್ನಾಗಿಸಿ ಕಾಯಕ ಕೈಕೊಳ್ಳುತ್ತಾರೆ. ಕನಕನಾಯಕನಿಗೆ ಆಶೀರ್ವದಿಸುತ್ತಾರೆ. ಮುಂದೆ ಅನ್ನದಗಿರಿಯನ್ನಾಗಿಸಿ ಅಲ್ಲೆ ಅಣ್ಣಿಗೇರಿಯಲ್ಲಿ ಲಿಂಗೈಕ್ಯರಾಗುತ್ತಾರೆ. ಅವರು ಒಲಿದು ಪಾವನಗೊಳಿಸಿದ ಸ್ಥಾನಗಳು ಕುರುಹುಗಳಾಗಿವೆ. ಅನೇಕ ಶಾಖಾಮಠಗಳಾಗಿವೆ. ಗದುಗಿನ ತೋಂಟದಾರ್ಯರ ಸುದೀರ್ಘ ನ್ಯಾಯದಿಂದಾಗಿ ಅನೇಕ ಮಠಗಳು ಹಸ್ತಾಂತರಗೊಂಡು ಹಾಗೂ ಇತ್ತೀಚಿಗೆ ಭೂಹಿಡುವಳಿ ಕಾಯ್ದೆಯಂತೆ ರೈತರ ವಶಕ್ಕೆ ಹೋಗಿ ಉಳಿದ ಶಾಖಾಮಠಗಳು, ಆಸ್ತಿಗಳು ಕೆಳಗಿನಂತಿವೆ. ಮೊದಲು ಶ್ರೀಮಠದ ಪಟ್ಟವಲ್ಲರಿಯನ್ನು ಅವಲೋಕಿಸುವಾ. ಈ ಪೀಠದ ಪರಂಪರೆಯಲ್ಲಿ ಎಲ್ಲ ಪೂಜ್ಯರು ಶ್ರೀ ಜಗದ್ಗುರು ಅನ್ನದಾನ ಮಹಾಸ್ವಾಮಿಗಳೆಂದೇ ಅನ್ವರ್ಥಕ

ನಾಮ ಹೊಂದಿರುವರು. ಅವರು ಜನ್ಮವೆತ್ತಿದ ಅಥವಾ ಲಿಂಗೈಕ್ಯರಾದ ಸ್ಥಲದ ಮೇಲಿಂದ ವಿಭಿನ್ನವಾಗಿ ಗುರುತಿಸಬೇಕಾಗುತ್ತದೆ.

೧. ಶ್ರೀ ಜಗದ್ಗುರು ಅನ್ನದಾನ ಮಹಾಶಿವಯೋಗಿಗಳು, ಮೂಲಕರ್ತೃಗಳು ಲಿಂಗೈಕ್ಯರಾದ ಸ್ಥಳ ಅಣ್ಣಿಗೇರಿ (ಅನ್ನದಗಿರಿ, ಇವರು ೩೦೦ ವರುಷ ಬಾಳಿದವರು. ಕ್ರಿ. ಶ. ೧೧೬ ರಿಂದ) ಈ ಮಠ ಹಸ್ತಾಂತರಗೊಂಡಿದೆ.

೨. ಶ್ರೀ ಅನ್ನದಾನ ಸ್ವಾಮಿಗಳು, ಲಿಂ. ನರಗುಂದ ತಾಲೂಕ ಶಿರೋಳಮಠ (ಇದೂ ಅಷ್ಟೇ).

೩. ಶ್ರೀ ಅನ್ನದಾನ ಸ್ವಾಮಿಗಳು, ಲಿಂ. ಬಳ್ಳಾರಿ ಜಿಲ್ಲೆ ಮರಿಯಮ್ಮನಹಳ್ಳಿ.

೪. ಶ್ರೀ ಅನ್ನದಾನ ಸ್ವಾಮಿಗಳು, ಲಿಂ. ಗದಗ ತಾಲೂಕ ಶ್ಯಾಗೋಟಿಯಲ್ಲಿ ಅನುಷ್ಠಾನ ಮಾಡಿ ಲಕ್ಕುಂಡಿಯಲ್ಲಿ ಲಿಂಗೈಕ್ಯರಾದುದು.

೫. ಶ್ರೀ ಮುದಿಅನ್ನದಾನ ಸ್ವಾಮಿಗಳು ೧೭೫೦–೧೮೧೫ ಲಿಂ. ಮುಂಡರಗಿ ಹಳೇಮಠದಲ್ಲಿ ಗದ್ದುಗೆ. ಇದು ಹಸ್ತಾಂತರಗೊಂಡಿದೆ.

೬. ಶ್ರೀ ಲೀಲಾಪುರುಷ ಹುಚ್ಚನ್ನದಾನ ಮಹಾಸ್ವಾಮಿಗಳು ೧೮೧೫–೧೮೫೩ ಲಿಂ. ನವಿಲುಗುಂದ ತಾಲೂಕ ಮಣಕವಾಡ ಗ್ರಾಮ.

೭. ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನ ಮಹಾಸ್ವಾಮಿಗಳು ೧೮೪೯–೧೮೮೮ ಲಿಂ. ಶ್ರೀ ಮಠದಲ್ಲಿ (ಬಳ್ಳೊಳ್ಳಿ ಅಜ್ಜನವರು ಇವರ ಕಾಲಕ್ಕೆ ಈಗಿನ ಮಠದ ಅಸ್ತಿತ್ವ).

೮. ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನ ಮಹಾಸ್ವಾಮಿಗಳು ೧೮೮೮–೧೯೨೬, ಲಿಂ. ಶ್ರೀ ಮಠದಲ್ಲಿ (ಗೋಪುರ ಗದ್ದುಗೆ), ಸೊರಟೂರ ಅಜ್ಜನವರು.

೯. ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನ ಮಹಾಸ್ವಾಮಿಗಳು ೧೯೨೬–೧೯೬೭, ಲಿಂಗೈಕ್ಯ ಶ್ರೀ ಮಠ, ವೆಂಕಟಾಪೂರ ಅಜ್ಜನವರು.

೧೦. ಶ್ರೀ ಮ.ನಿ.ಪ್ರ. ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಜನನ ೪–೫–೧೯೪೩, ಪಟ್ಟಾಧಿಕಾರ ೩೧–೧–೧೯೬೯.

ಹಿಂದಿನ ಪರಮಪೂಜ್ಯ ಮಹಾಸ್ವಾಮಿಗಳವರು ತಪಸ್ವಿಗಳಾಗಿ ದಾಸೋಹಂಭಾವಿಗಳಾಗಿ ಶ್ರೀ ಮಠದ ಘನತೆ ಗೌರವಗಳನ್ನು ರಕ್ಷಿಸುತ್ತ ಬಂದಿದ್ದಾರೆ. ವೈರಾಗ್ಯಮೂರ್ತಿಗಳಾಗಿ ತ್ಯಾಗ ಮಾಡುತ್ತಲೇ ಬಂದಿದ್ದಾರೆ. ಹಿಂದಿನ ದಾಖಲೆಗಳಿಂದ ಅಪಾರ ಆಸ್ತಿಗಳು, ಶಾಖಾಮಠಗಳು ಇದ್ದುದು ತಿಳಿಯುತ್ತದೆ. ಕಾರಣಾಂತರಗಳಿಂದ ಕಳೆದುಳಿದ ಮಠ ಮತ್ತು ಶಾಖಾಮಠಗಳು:

ಧಾರವಾಡ ಜಿಲ್ಲಾ ಮುಂಡರಗಿ ತಾಲೂಕಿನಲ್ಲಿ

೧) ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ (ಪ್ರಸ್ತುತವಾದುದು) ೨) ಕೋಟೆಯಲ್ಲಿಯ ಹುಚ್ಚನ್ನದಾನಿಯ ಮಠ (ಮೂಲಮಠ) ೩) ಹಿರೇವಡ್ಡಟ್ಟಿ

೪) ವೆಂಕಟಾಪೂರ ೫) ಸಿಂಗಟಾಲೂರ ಕಲ್ಯಾಣಮಂಟಪ ೬) ಬೀಡನಾಳ, ವಿರುಪಾಪೂರ, ಶಿರೋಳ, ಡಂಬಳ, ಬ್ಯಾಲವಾಡಗಿಗಳಲ್ಲಿ ಜಮೀನು ಮಾತ್ರ.

ಗದಗ ತಾಲೂಕಿನಲ್ಲಿ

೧) ಹುಬ್ಬಳ್ಳಿ ಚೌಕಿಮಠ, ಗದಗ ೨) ಲಕ್ಕುಂಡಿ ೩) ಮುಳಗುಂದ ೪) ಮದಗಾನೂರ ೫) ಶ್ಯಾಗೋಟಿ ೬) ನರಸಾಪೂರದ ಶಿವಯೋಗಾಶ್ರಮ ೭) ಹರ್ತಿ ೮) ಚಿಕ್ಕಹಂದಿಗೋಳ ೯) ಸೊರಟೂರ ೧೦) ಹಿರೇಹಂದಿಗೋಳ.

ನವಿಲುಗುಂದ ತಾಲೂಕಿನಲ್ಲಿ

೧) ಶಿಶ್ವಿನಹಳ್ಳಿ ೨) ಮಣಕವಾಡ.

ರಾಯಚೂರ ಜಿಲ್ಲಾ ಕೊಪ್ಪಳ ತಾಲೂಕಿನಲ್ಲಿ

೧) ಗೊಂಡಬಾಳ ೨) ಉಪ್ಪಿನಬೆಟಗೇರಿ ೩) ಅಬ್ಬಿಗೇರಿ ೪) ಕಂಪಸಾಗರ, ಹುಲಿಗಿ, ಕವಲೂರಗಳಲ್ಲಿ ಜಮೀನು ಮಾತ್ರ.

ಯಲಬುರ್ಗಾ ತಾಲೂಕಿನಲ್ಲಿ

೧) ಕುಕನೂರ ೨) ಬೆಣಕಲ್ಲ ೩) ತಳಕಲ್ಲ.

ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕಿನಲ್ಲಿ

೧) ಮರಿಯಮ್ಮನಹಳ್ಳಿ.

ಹೂವಿನಹಡಗಲಿ ತಾಲೂಕಿನಲ್ಲಿ

೧) ಅಲ್ಲಿಪುರ (ರಾಜನಾಳ) ಅನ್ನದಾನಸ್ವಾಮಿ ಮಠ.

ಕಾರವಾರ ಜಿಲ್ಲಾ ಮುಂಡಗೋಡ ತಾಲೂಕಿನಲ್ಲಿ

೧) ಬಾಚಣಕಿ ಅನ್ನದಾನೀಶ್ವರ ಮಠ ೨) ಬಾಡ.

ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದ ಆಶ್ರಯದಲ್ಲಿ ನಡೆಯುವ ವಿದ್ಯಾಸಂಸ್ಥೆಗಳು

ಶ್ರೀ ಜಗದ್ಗುರು ಅನ್ನದಾನೀಶ್ವರ ವಿದ್ಯಾಸಮಿತಿ ಮುಂಡರಗಿ ಇದರ ಅಂಗಸಂಸ್ಥೆಗಳು.

೧. ಕ. ರಾ. ಬೆಲ್ಲದ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಮುಂಡರಗಿ
೨. ಜಗದ್ಗುರು ಅನ್ನದಾನೀಶ್ವರ ಕಲಾ, ವಾಣಿಜ್ಯ, ಶಿಕ್ಷಣ ಮತ್ತು ಮ. ಹಿ. ವಿಜ್ಞಾನ ಸಂಯುಕ್ತ ಕಿರಿಯ ಮಹಾವಿದ್ಯಾಲಯ, ಮುಂಡರಗಿ
೩. ಜ. ಅ. ಕಿರಿಯ ಮಹಾವಿದ್ಯಾಲಯದ ವೃತ್ತಿ ಶಿಕ್ಷಣ ವಿದ್ಯಾಲಯ,
೪. ಎಂ. ಎಸ್. ಡಂಬಳ ಕನ್ನಡ ಪ್ರೌಢ ಶಾಲೆ, ಮುಂಡರಗಿ
೫. ಜ. ಅ. ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ, ಬನ್ನಿಕೊಪ್ಪ ತಾ.ಶಿರಹಟ್ಟಿ

೬. ಶ್ರೀ ಉಳವಿ ಚನ್ನಬಸವೇಶ್ವರ ಪಾಲಿಟೆಕ್ನಿಕ್, ದಾಂಡೇಲಿ ಜಿ. ಕಾರವಾರ
೭. ಜ. ಅ. ಪ್ರೌಢ ಶಾಲೆ ಆರಹಟ್ಟಿ-ತಡಹಾಳ ತಾ-ನವಿಲುಗುಂದ.
೮. ಜ. ಅ. ಪ್ರೌಢ ಶಾಲೆ. ಗೊಂಡಬಾಳ ತಾ. ಕೊಪ್ಪಳ
೯. ಜ. ಅ. ವಿದ್ಯಾಸಮಿತಿ ಪ್ರೌಢ ಶಾಲೆ, ನರಸಾಪೂರ ತಾ. ಗದಗ
೧೦. ಶರಣೆ ಬಸಮ್ಮಾಂಬೆ ವೀರಭದ್ರಯ್ಯ ರಾಜಗುರು ಪ್ರೌಢ ಶಾಲೆ, ಬೊಮ್ಮನಹಳ್ಳಿ ತಾ. ವಿಜಾಪೂರ
೧೧. ಜ. ಅ. ವಿದ್ಯಾಸಮಿತಿ ಪ್ರೌಢ ಶಾಲೆ, ವೆಂಕಟಾಪೂರ ತಾ. ಮುಂಡರಗಿ
೧೨. ಜ. ಅ. ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ, ಮುಂಡರಗಿ
೧೩. ಜ. ಅ. ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ, ಮುಂಡರಗಿ
೧೪. ಜ. ಅ. ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ, ಉಪ್ಪಿನಬೆಟಗೇರಿ
೧೫. ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಕೃತ ಪಾಠಶಾಲೆ, ಮುಂಡರಗಿ
೧೬. ಶ್ರೀ ಜಗದ್ಗುರು ಅನ್ನದಾನೀಶ್ವರ ಗ್ರಂಥಮಾಲೆ, ಮುಂಡರಗಿ
೧೭. ಶ್ರೀ ಜಗದ್ಗುರು ಅನ್ನದಾನೀಶ್ವರ ಉಪನ್ಯಾಸಮಾಲೆ, ಮುಂಡರಗಿ
೧೮. ಶ್ರೀಗುರು ಕುಮಾರೇಶ್ವರ ಗ್ರಂಥಾಲಯ, ಮುಂಡರಗಿ.

ಅನುಬಂಧ ೩

ಮಹಾದಾನಿ

—ಶ್ರೀಮತಿ ಚೇತನಾ ಶಂಕರ, ಮುಂಡರಗಿ

ಈವಂಗೆ ದೇವಂಗೆ ಆವುದಂತರವಯ್ಯ
ದೇವನು ಜಗಕೆ ಕೊಡುವನು, ಕೈಯಾರೆ
ಈವನೇ ದೇವ ಸರ್ವಜ್ಞ

ಸರ್ವಧರ್ಮೀಯರಿಗೆ ಸಮಾನವಾದ ಅವಕಾಶವನ್ನು ಹಾಗೂ ಸದ್ಬೋಧೆ ಮಾಡುತ್ತ ನಾಡಿನ ಸ್ವಾಸ್ಥ್ಯವನ್ನು ಕಾಪಾಡುತ್ತಿರುವ ವೀರಶೈವ ಮಠಾಧಿಪತಿಗಳು ಜಗಕ್ಕೆ ನೀಡಿದ ಕೊಡುಗೆ ಅಮೋಘವಾದದ್ದು. ಜೀವನಕ್ಕೆ ಒಂದರ್ಥವಿದೆ ಅದನ್ನು ಸಫಲಗೊಳಿಸಿಕೊಳ್ಳಬೇಕಾದರೆ ಜೀವನ ಮೌಲ್ಯಗಳಿಗೆ ಆದ್ಯತೆಯನ್ನು ನೀಡಬೇಕು ಎಂಬುದನ್ನು ಮನವರಿಕೆಮಾಡಿ ಮಾನ್ಯರನ್ನು ಹಾಗೂ ಜನಸಾಮಾನ್ಯರನ್ನು ಈ ದಿಶೆಯಲ್ಲಿ ಕರೆದೊಯ್ಯುವದು ಸಮಾಜದ ಉನ್ನತಿಯನ್ನು ಕಾಪಾಡಿದ ಮಹಾಪುರುಷರ ಉಪದೇಶ, ಕಾಯಕಶೀಲ, ತ್ಯಾಗಗಳು ಅನುಕರಣೀಯ.

ನಾಡಿನ ಘನವೆತ್ತ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದ ಮಹಾಪುರುಷರೆಲ್ಲರೂ ನಿತ್ಯ-ಅನ್ನ, ಜ್ಞಾನ ದಾಸೋಹದೊಂದಿಗೆ ಸರ್ವರಿಗೂ ಉಪಯುಕ್ತವಾಗುವ ಕಾರ್ಯಾದಿಗಳಿಗೆ "ಬೇಡುವಾತ ಜಂಗಮನಲ್ಲ, ಬೇಡಿಸಿಕೊಂಬುವಾತ ಭಕ್ತನಲ್ಲ" ಎಂಬ ಶರಣರ ವಚನದಂತೆ ಬೇಡಿಸಿಕೊಳ್ಳದ ಭಕ್ತ ನೀಡಿದ ಭಕ್ತಿಯನ್ನು ಸಮಾಜದ ಪ್ರಗತಿಗಾಗಿ ನಾಡಿನ ಉದ್ಧಾರಕ್ಕಾಗಿ ಸ್ವೀಕರಿಸಿ ಶ್ರೀಮಠದಿಂದ ನೀಡಿದ ದಾನಗಳು ಅಗಣಿತ. ಶ್ರೀಮಠದ ಸತ್‌ಪರಂಪರೆಯೇ ದಾನ. ದಾನವು ಭೂಲೋಕದ ಮಹಾ ಆದರ್ಶ. ಸಮಾಜ, ನಾಡು ನಿಂತಿರುವುದೇ ಈ ದಾನ ಗುಣದಿಂದ. ದಾನದಿಂದಲೇ ಭೋಗಜೀವಿಗ ಶಿವನಾಗುವ ಯೋಗ ಸಾಧ್ಯವಾಗುವದು. ಕೈಯಾರೆ ನೀಡುವವನೇ ದೇವನೆಂದು, ಅನ್ನವನ್ನು ನೀಡುವದು ಸನ್ನಿಯನ್ನು ನುಡಿಯುವದು ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಎನ್ನುವ ಜ್ಞಾನಿ ಸರ್ವಜ್ಞನ ಮಾತಿನಂತೆ ಸನ್ನಿಯಿಂದ ಅನ್ನ, ಜ್ಞಾನ, ನೀಡಿದ, ನೀಡುತ್ತಿರುವ ಅನ್ನದಾನೀಶನು ನೆಲಸಿದ ಈ ನೆಲವೇ ಕೈಲಾಸವಾಗಿದೆ.

ಕಾಡಬೇಡರನ್ನು ನಾಡಿಗರನ್ನಾಗಿ ಮಾಡಿದ ಮೂಲ ಪುರುಷರಿಂದ ಬಂದ ಶ್ರೀಪೀಠದ ಪರಮ ಪೂಜ್ಯರೆಲ್ಲರು ದಾನದ ಮಹಿಮೆಯನ್ನೇ ಮೆರೆದಿದ್ದಾರೆ. ಸ್ವಾತಂತ್ರ್ಯ

ಯೋಧರಿಗೆ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡಿ ನಾಡ ರಕ್ಷಣೆಗಾಗಿ ಪ್ರಾಣತೆತ್ತ ಮುಂಡರಗಿ ಭೀಮರಾಯನ ಗುರುಗಳಾದ ಶ್ರೀಪೀಠದ ಏಳನೇ ಅಧಿಪತಿಗಳು (ಬಳ್ಳೊಳ್ಳಿ) ಕಲಕೇರಿ ದೇಸಾಯರಲ್ಲಿಯ ಆಂತರಿಕ ಕಲಹವನ್ನು ಬಗೆಹರಿಸಿ ಪುತ್ರ ಸಂತಾನವನ್ನು ಕರುಣಿಸಿದ ಪುತ್ರ ದಾನಿಗಳು. ಇಲ್ಲಿಯ ವಿಠ್ಠಲ ದೇವರ ಪೂಜಾದಿ ವಿನಿಯೋಗಕ್ಕಾಗಿ ಮಕ್ತುಂಪುರದ ಶ್ರೀಮಠದ ಹದಿನಾರು ಎಕರೆ ಭೂಮಿಯನ್ನು ದಾನಗೈದ ಭೂದಾನಿಗಳು ಇವರು.

೧೮೮೮ರಲ್ಲಿ ಶ್ರೀಪೀಠದ ಶೂನ್ಯ ಸಿಂಹಾಸನಾರೋಹಣಗೈದ ಎಂಟನೆಯ (ಸೊರಟೂರ) ಜಗದ್ಗುರುಗಳವರ ದಾನಗಳಂತೂ ಅಪಾರ. ಇಂದಿನ ಮುಂಡರಗಿಯ ನಗರಸಭೆ ಹಾಗೂ ಬಯಲು, ಜಾರ್ಜಬಾದಶಹರು ಭಾರತಕ್ಕೆ ಆಗಮಿಸಿದ ಸ್ಮರಣೆಯ ಕಟ್ಟಡದ ಜಾಗೆ, ಆರಕ್ಷಕರ ವಸತಿ(ಮನೆ) ಕಟ್ಟಡಗಳ ಜಾಗೆ, ಹಿರಿಯ ಕನ್ನಡ ಗಂಡು ಮಕ್ಕಳ ಪ್ರಾಥಮಿಕ ಶಾಲೆ ಹಾಗೂ ನಗರ ಆರೋಗ್ಯ ಕೇಂದ್ರದ ವಿಶಾಲ ಜಾಗೆಗಳೆಲ್ಲವುಗಳಿಗೆ ಸುಮಾರು ೩-೪ ಎಕರೆ ಜಮೀನು ಹಾಗೂ ಸೂಕ್ತ ಕಟ್ಟಡಗಳಿಗೆ ಧನವನ್ನು ದಾನ ಮಾಡಿರುವರು. ಪೂಜ್ಯರ ಜನ್ಮಸ್ಥಳವಾದ ಸೊರಟೂರಿನ ಹಿರಿಯ ಕನ್ನಡ ಗಂಡು ಮಕ್ಕಳ ಪ್ರಾಥಮಿಕ ಶಾಲೆಯ ಸ್ಥಳ ದಾನವು ಪೂಜ್ಯರದ್ದೆ. ಪರಮತ ಸಹಿಷ್ಣುಗಳಾದ ಶ್ರೀ ಸನ್ನಿಧಿಯವರು ಯಾರದೇ ಯಾವ ಬೇಡಿಕೆಯನ್ನೂ ನಿರಾಕರಿಸಿದವರಲ್ಲ.

೧೯ನೇ ಶತಮಾನದಲ್ಲಿ ನಳನಾಮ ಸಂವತ್ಸರದಲ್ಲಿ ಸ್ವಾತಿಮಳೆ ಹತ್ತಿ ಜನಜೀವನ ಅಸ್ತವ್ಯಸ್ತಗೊಂಡಿತು. ಈ ಸಮಯದಲ್ಲಿ ಊರಿನ ಬ್ರಾಹ್ಮಣ ಸಮಾಜದವರು ತಮ್ಮ ಗುರುಗಳನ್ನು ಆರಾಧನೆಗಾಗಿ ಆಹ್ವಾನಿಸಿದ್ದರು. ಆದರೆ ಅಡಗಿಯನ್ನೆ ಮಾಡಲು ಒಣ ಕಟ್ಟಿಗೆ ಇಲ್ಲದಂತಾಗಿತ್ತು. ಈ ಕೊರತೆಯನ್ನು ಅವರು ಪೂಜ್ಯರಲ್ಲಿ ಬಿನ್ನವಿಸಿಕೊಂಡಾಗ ಅವರಿಗೆ ಶ್ರೀಮಠದ ಒಂದು ಭಾಗವನ್ನು ಕೆಡವಿ ಆರಾಧನೆಗೆ ತೊಲೆಕಂಬಗಳನ್ನೆ ದಯಪಾಲಿಸಿದ ಮಹಾನುಭಾವರು.

ಇದರಂತೆ ನವಮಾಧಿಪತಿಗಳ (ವೆಂಕಟಾಪುರ ಸನ್ನಿಧಿಯವರ) ದಾನಗಳೂ ಅಸಂಖ್ಯ. ಮುಂಡರಗಿ ತಾಲೂಕಿನಲ್ಲಿಯ ಪ್ರೌಢ ಶಿಕ್ಷಣದ ಕೊರತೆಯನ್ನು ನೀಗಿಸಲು ಶ್ರೀಮಠದ ಜಮೀನುಗಳನ್ನೇ ಮಾರಿ ಜ. ಅ. ಪ್ರೌಢ ಶಾಲೆಗೆ ಮೂವತ್ಮೂರು ಸಾವಿರ ರೂಪಾಯಿಗಳನ್ನು ದಾನ ಮಾಡಿರುವರು. ಹೊಳೆಆಲೂರಿನ ಕಲ್ಮೇಶ್ವರ ಪ್ರೌಢ ಶಾಲೆಗೂ, ಹುನಗುಂದ ತಾಲೂಕಿನ ಹೆರೂರ ಗ್ರಾಮದ ಹನ್ನೊಂದು ಎಕರೆ ಜಮೀನನ್ನು ಹಾಗೂ ಲಕ್ಕುಂಡಿ ಗ್ರಾಮ ಪಂಚಾಯಿತಿಗೆ ಜಾಗೆಯನ್ನು ದಯಪಾಲಿಸಿದವರು. ಅನ್ನದಾನಿಗಳಾದ ಪೂಜ್ಯರು ಮುಂಡರಗಿ ಶ್ರೀ ಜ. ಅ. ಸಾರ್ವಜನಿಕ ಪ್ರಸಾದ ನಿಲಯಕ್ಕೂ ಹದಿನೈದು ಸಾವಿರ ರೂಪಾಯಿಗಳನ್ನು ಆಶೀರ್ವದಿಸಿರುವರು ಹಾಗೇ ಅನೇಕ ಬಡವಿದ್ಯಾರ್ಥಿಗಳಿಗೆ, ಬೇಡಿಬಂದವರಿಗೆ ಬೇಡಿದ್ದನ್ನು ದಯಪಾಲಿಸಿದ ಮಹಾಮಹಿಮಾನ್ವಿತರು.

ಈ ಸತ್‌ಪರಂಪರೆಯಲ್ಲಿ ಬಂದ ಪರಮಪೂಜ್ಯರು ತಮ್ಮ ಪೀಠಾರೋಹಣದ ಇಪ್ಪತ್ತೈದು ವರ್ಷಗಳಲ್ಲಿ ಹತ್ತು ತಲೆಮಾರಿನವರಿಂದಲೂ ಸಾಧಿಸಲಾರದಷ್ಟು ವೈವಿಧ್ಯ ಮಯವಾದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ ಹಾಗೂ ಸಂಸ್ಕೃತಿ ಅನೇಕ ಕಾರ್ಯಗಳನ್ನು ಗೈದಿರುವರು. ಲಿಂಗಾನುಷ್ಠಾನಪರರೂ, ಕಾಯಕಶೀಲರು, ಸಾಹಿತಿಗಳು ಆದ ಇಂದಿನ ಪರಮಪೂಜ್ಯರು ನಿತ್ಯ ಅನ್ನದಾನ ಜ್ಞಾನ ದಾನ ಮಾಡುತ್ತಿರುವ ತ್ರಿವಿಧ ದಾಸೋಹಂಭಾವಿಗಳು, ಬರಗಾಲ ಪ್ರದೇಶವಾದ ಇಲ್ಲಿ ಶ್ರೀಮಠಕ್ಕೆ ಹೆಚ್ಚಿನ ಆದಾಯವಿರ ದಿದ್ದರೂ ಶ್ರೀ ಸನ್ನಿಧಿಯವರು ಆಶೀರ್ವದಿಸಿದ ದಾನಗಳು ಅಪರಿಮಿತ. ನಾಡಿನ ಸೂಕ್ತ ಕಾರ್ಯಗಳಿಗೆ ಸೂಕ್ತವಾದ ದಾನವನ್ನೆ ಮಾಡಿದ್ದಾರೆ. ಪಾದದಲ್ಲಿ ಬೇಡಿ ಬಂದ ಭಕ್ತ ನೆಂದೂ ಬರಿಗೈಯಲ್ಲಿ ಮರಳಿಲ್ಲ, ಅವನ ಸಂಕಷ್ಟಕ್ಕೆ ಸಮರ್ಪಕ ಪರಿಹಾರದ ಆಶೀರ್ವಾದ ವನ್ನೆ ಪಡೆದಿರುವನು. ಇಂಥವುಗಳಿಗೆ ನಮ್ಮ ಮಾವನವರ ಉದಾಹರಣೆಯನ್ನೆ ಕೊಟ್ಟರೆ ಸಾಕು. ಇವರು ತಮ್ಮ ದೊಡ್ಡ ಸಂಸಾರದ ಭಾರದಲ್ಲಿ ಮಕ್ಕಳ ಭವಿಷ್ಯವಾದರೂ ಗುರುಕೃಪೆಯಿಂದ ಉಜ್ವಲವಾಗಲೆಂದು ಆಶಿಸಿ ನನ್ನ ಪತಿಯನ್ನು ಬಾಲ್ಯದಲ್ಲಿ ಅವರ ಪಾದಕ್ಕೆ ಸಲ್ಲಿಸಿದರು. ಈಗ ಅವರ ಕೃಪೆಯಿಂದ ಅವರ ಹಾಗೂ ಅವರ ಮನೆತನವೇ ಪಾವನವಾಗಿದೆ. ಹೀಗೆ ಹಲವಾರು ವಿದ್ಯಾರ್ಥಿಗಳ ಜೀವನ ಕಲ್ಯಾಣವಾಗಿದೆ.

ಪೂಜ್ಯರು ದಯಪಾಲಿಸಿದ ದಾನಗಳೆಲ್ಲವನ್ನು ವಿದಿತಪಡಿಸುತ್ತ ಹೋದರೆ ಈ ಲೇಖನವೇ ಸಾಲದು. ಆದರಲ್ಲಿ ಕೆಲವೊಂದನ್ನು ಮಾತ್ರ ಗಮನಿಸಬಹುದಾಗಿದೆ. ಲಿಂಗೈಕ್ಯ ಜಗದ್ಗುರುಗಳವರು ನಿರಂತರವಾಗಿ ನಡೆಸಿಕೊಂಡು ಬಂದ ಜ. ಅನ್ನದಾನೀಶ್ವರ ವಿದ್ಯಾವರ್ಧಕ ಸಂಘದ ಪ್ರಸಾದ ನಿಲಯದಲ್ಲಿ ಪ್ರತಿವರ್ಷ ಎರಡುನೂರಾ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಸಾದವನ್ನು ಸ್ವೀಕರಿಸುತ್ತಾರೆ. ಭಕ್ತರು ಪ್ರಸಾದ ನಿಲಯಕ್ಕೆ ಉದಾರವಾಗಿ ಅಲ್ಪ ಪ್ರಮಾಣದಲ್ಲಿ ದವಸ ಧಾನ್ಯಗಳನ್ನು ಪಾದಕ್ಕೆ ಸಲ್ಲಿಸುತ್ತಾ ಬಂದಿದ್ದಾರೆ. ಆದರೆ ಈಗ ರೈತರಲ್ಲಿ ಸಮರ್ಪಣಾಭಾವ ಹಾಗೂ ತ್ಯಾಗ ಗುಣಗಳು ಕಡಿಮೆಯಾಗಹತ್ತಿವೆ. ಇದನ್ನರಿತ ಸನ್ನಿಧಿಯವರು ಪರಮ ಪೂಜ್ಯರ ಸಂಕಲ್ಪಕ್ಕೆ ಚ್ಯುತಿ ಬರಕೂಡದೆಂದು ವಿದ್ಯಾರ್ಥಿಗಳಿಗೆ ಅನ್ನದಾಸೋಹ ನಿರಂತರ ನಡೆಯುತ್ತಿರಲೆಂದು ಶ್ರೀಮಠದ ತೊಂಬತ್ತು(೯೦) ಎಕರೆ ಭೂಮಿಯನ್ನು ಈ ಸಂಘಕ್ಕೆ ದಾನಮಾಡಿ ಹಾಗೂ ಹಣವನ್ನು ಠೇವಣಿಯಾಗಿ ಇರಿಸಿ ಪ್ರಸಾದ ನಿಲಯಕ್ಕೆ ಒಂದು ಕಾಯಕಲ್ಪವನ್ನು ದಯಪಾಲಿಸಿರುವರು. ಮುಂಡರಗಿ ತಾಲೂಕಿನಲ್ಲಿ ೧೯೭೦ರ ವರೆಗೆ ತಮ್ಮ ಸಂಸ್ಥೆಯ ಪ್ರೌಢ ಶಾಲೆಯೊಂದೇ ಇತ್ತು. ವಿದ್ಯಾರ್ಥಿಗಳಿಗೆ ಆಗುತ್ತಿರುವ ಮುಂದಿನ ಶಿಕ್ಷಣದ ಕೊರತೆಯನ್ನು ನೀಗಿಸಲು ಸಂಸ್ಥೆಯಿಂದ ಕಿರಿಯ ಮಹಾವಿದ್ಯಾಲಯ ಸಂಸ್ಥಾಪಿಸಿ ಆದಕ್ಕೆ ಐವತ್ತುಸಾವಿರ ರೂಪಾಯಿಗಳನ್ನು ದಾನ ಮಾಡಿರುವರು. ಇದರಂತೆ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ಸಂಸ್ಥಾಪಿಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಪಾರಿತೋಷಕವನ್ನು ನೀಡಲು ಐದುಸಾವಿರ ರೂಪಾಯಿಗಳನ್ನು ಠೇವಣಿಯಾಗಿ

ಇರಿಸಿರುವರು. ಶಿಕ್ಷಣಪ್ರೇಮಿಗಳಾದ ಪೂಜ್ಯರು ತಮ್ಮ ಶಾಲೆಯ ಕರ್ತವ್ಯಗಳಿಗೆ ಬಹು ಪ್ರಾಮುಖ್ಯತೆಯನ್ನು ನೀಡುವರು. ಹಾಗೆಯೇ ಸ್ಮರಣೀಯರನ್ನು ಸಂಸ್ಥೆಗಳನ್ನು ಎಂದೂ ಮರೆಯುವದಿಲ್ಲ. ಅವುಗಳಿಗೆ ತಮ್ಮಿಂದ ಆದ ಕೊಡುಗೆಯನ್ನು ಕೊಡುವರು. ತಾವು ಬಾಲ್ಯದಲ್ಲಿ ಅಧ್ಯಯನ ಮಾಡಿದ ಮಾತೃ ಸಂಸ್ಥೆಯಾದ ಶಿವಯೋಗಮಂದಿರದ ಮೇಲೆ ತುಂಬಾ ಅಭಿಮಾನ ಇದರ ಏಳ್ಗೆಗಾಗಿ ಸದಾ ಪ್ರಯತ್ನಿಸುತ್ತಾರೆ. ಅಲ್ಲಿಗೆ ದಯಮಾಡಿಸಿದಾಗಲೊಮ್ಮೆ ಏನಾದರೊಂದು ನೂತನ ಕಾರ್ಯಗಳನ್ನೇ ಕೈಗೊಂಡು ಬರುವರು. ಈ ಸಂಸ್ಥೆಯ ಕುಮಾರೇಶ್ವರ ಪ್ರಾಚ್ಯ ವಿದ್ಯಾಪ್ರಸಾರಕ ಸಮಿತಿಯ ಪ್ರೌಢ ಶಾಲೆಯ ಅಧ್ಯಕ್ಷರಾದ ಇವರು, ಶಾಲೆಗೆ ಮಹಾವಿದ್ಯಾಲಯದಂತೆ ಗೋಚರಿಸುವ ಭವ್ಯ ಹಾಗೂ ಬಹು ಸುಂದರವಾದ ಕಟ್ಟಡವನ್ನು ಬೆಟ್ಟದ ಮೇಲೆ ಕಟ್ಟಿ ಕಟ್ಟಡದಲ್ಲಿ ಪ್ರವೇಶಿಸುವವರಿಗೆ ಸ್ವತಃ ಎಮರು ನಿಂತು ಕಾರ್ಯನಿರ್ವಹಿಸಿ ತಮ್ಮ ಐವತ್ತುಸಾವಿರ ರೂಪಾಯಿಗಳನ್ನು ಖರ್ಚು ಮಾಡುವದರ ಜೊತೆಗೆ ಈ ಭವ್ಯ ಕಟ್ಟಡಕ್ಕಾಗಿ ಶ್ರಮ ವಹಿಸಿರುವರು. ಬೆಟ್ಟದ ಮೇಲೆ ಕಾಣುವ ಈ ಪ್ರೌಢ ಶಾಲೆ ಶಿವಯೋಗಮಂದಿರದ ಬಹು ಆಕರ್ಷಣೀಯ ವಿದ್ಯಾಮಂದಿರವಾಗಿದೆ.

ಶಿವಯೋಗಮಂದಿರದ ಭಾವಿ ಸ್ವಾಮಿಗಳವರ ಅಂದರೆ ಸಾಧಕರ ವಸತಿ ಹಾಗೂ ಪೂಜಾದಿಗಳಿಗಾಗಿ ನಿರ್ಮಿಸಿದ ಮೇಲ್ಮಠದ ನಿರ್ಮಾಣಕ್ಕೆ ಐದುಸಾವಿರದಾ ಐದುನೂರಾ ಐವತ್ತೈದು ರೂಪಾಯಿಗಳನ್ನು, ಕುಮಾರೇಶ್ವರ ಸಂಸ್ಕೃತ ವಿದ್ಯಾಪೀಠದ ವಿದ್ಯಾನಿಧಿಗೆ ಐದುಸಾವಿರದಾ ಐದುನೂರು ಮತ್ತು ಕುಮಾರೇಶ್ವರ ಪೂಜಾನಿಧಿಗೆ ಹದಿನೈದುನೂರಾ ಒಂದು ರೂಪಾಯಿಗಳನ್ನು ನೀಡಿರುವರು. ಕಾರಣಿಕ ಯುಗಪುರುಷ ಕುಮಾರ ಶಿವಯೋಗಿ ಜನಿಸಿದ ಊರಾದ ರಾಣೇಬೆನ್ನೂರ ತಾಲೂಕಿನ ಜೋಯಿಸರಹರಳಹಳ್ಳಿಯಲ್ಲಿ ಪೂಜ್ಯರ ಒಂದು ಸ್ಮಾರಕ ಕಟ್ಟಡ ಇರಲೆಂದು ಸಂಕಲ್ಪಿಸಿದಂತೆ ಕುಮಾರೇಶನ ಕೃಪೆಗೆ ಪಾತ್ರರಾದ ನಾಡಿನ ಅನೇಕ ಪೂಜ್ಯರುಗಳ ಸಹಾಯ ಸಹಕಾರದಿಂದ ಹಾಗೂ ಸದ್ಭಕ್ತರಿಂದ ದೇಣಿಗೆಯನ್ನು ಸಂಗ್ರಹಿಸಿ, ತಾವು ಹದಿನಾರುನೂರಾ ಒಂದು ರೂಪಾಯಿಗಳನ್ನು ನೀಡಿ ಸುಂದರ ಸ್ಮಾರಕ ಮಂದಿರವನ್ನು ನಿರ್ಮಿಸಿ ಉದ್ಘಾಟನೆಗೊಳಿಸಿರುವರು.

ಅಖಿಲ ಭಾರತ ವೀರಶೈವ ಮಹಾಸಭೆಯ ಅಭ್ಯುದಯವನ್ನು ಬಯಸುವ ಶ್ರೀ ಸನ್ನಿಧಿಯವರು ಅದಕ್ಕೆ ಐದುಸಾವಿರದಒಂದು ರೂಪಾಯಿಗಳನ್ನು ನೀಡಿದ ಮಹಾ ಪೋಷಕರು. ಅಲ್ಲದೆ ಬೆಳಗಾವಿಯಲ್ಲಿ ೧೯೮೨ರಲ್ಲಿ ಜರುಗಿದ ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿ ಮಹಾಸಭೆಯ ಸ್ಥಿರನಿಧಿಗಾಗಿ ಐದುಸಾವಿರದಾಒಂದು ರೂಪಾಯಿಗಳನ್ನು ನೀಡಿರುವರು. ಇದರಂತೆ ಕರ್ನಾಟಕ ವಿಶ್ವವಿದ್ಯಾನಿಲಯದ ಬಸವೇಶ್ವರ ಅಧ್ಯಯನ ಪೀಠದಲ್ಲಿ ಬಸವಾಧ್ಯಯನಗೈಯುವ (ಶರಣ ಸಾಹಿತ್ಯ) ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸುವರ್ಣ ಪದಕ ನೀಡಿ ಪುರಸ್ಕರಿಸಲು ಐದುಸಾವಿರದಾ ಐದುನೂರಾ ಒಂದು ರೂಪಾಯಿಗಳನ್ನು ಠೇವಣಿಯಾಗಿ ಇರಿಸಿರುವರು.

ಸಾಹಿತಿಗಳಾದ ಪೂಜ್ಯರು ವೀರಶೈವ ಹಾಗೂ ಕನ್ನಡ ಸಾಹಿತ್ಯ ಪ್ರಕಾಶನ ಮತ್ತು ಪ್ರಚಾರಕ್ಕೆ ಮಹತ್ವವನ್ನು ನೀಡಿದ್ದಾರೆ. ಶ್ರೀಮಠದ ಪ್ರಕಾಶನದಿಂದ ನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಾಶನಗೊಳಿಸಿದ್ದಾರೆ. ಲೌಕಿಕ ಆಶೆ-ಆಕಾಂಕ್ಷೆಗಳಲ್ಲಿ ಬಳಲುವ ಇಂದಿನ ಮಾನವ ಇಂಥ ಧಾರ್ಮಿಕ ಸಾಹಿತ್ಯವನ್ನು ಕೊಂಡು ಓದುವದು ದೂರದ ಮಾತಾಗಿದೆ. ಕಾರಣ ಪೂಜ್ಯರು ತಾವು ಸಂಚಾರ ಕೈಗೊಂಡಲ್ಲಿ ಹಾಗೂ ಶ್ರೀಮಠದಲ್ಲಿ ದರ್ಶನಾರ್ಥವಾಗಿ ಬಂದ ಭಕ್ತರಿಗೆ ಗ್ರಂಥಗಳನ್ನು ಆಶೀರ್ವದಿಸುತ್ತಾರೆ ಮತ್ತು ಚಲಿಸುವ ಮಹಾವಿದ್ಯಾಲಯದಂತಿರುವ ಅನ್ನದಾನೀಶ್ವರ ಉಪನ್ಯಾಸಮಾಲೆಯ ಕಾರ್ಯಕ್ರಮಗಳಲ್ಲಿ ಆಗಮಿಸಿದ ವಿದ್ವಾಂಸರಿಗೆ, ಕವಿಗಳಿಗೆ, ಸಾಹಿತಿಗಳಿಗೆ, ವಿಮರ್ಶಕರಿಗೆ ಹಾಗೂ ಭಕ್ತಾದಿಗಳಿಗೆ ಲಕ್ಷಕ್ಕೂ ಮೀರಿದ ಬೆಲೆಯ ಶ್ರೀಮಠದ ಪ್ರಕಾಶನದ ಪುಸ್ತಕಗಳನ್ನು ದಾನಮಾಡಿದ್ದಾರೆ. ಶಾಲಾ-ಕಾಲೇಜುಗಳ ಗ್ರಂಥಾಲಯಗಳಿಗೂ ಪುಸ್ತಕಗಳನ್ನು ನೀಡಿರುವರು.

ಅನೇಕ ವಿಧಾಯಕ ಕಾರ್ಯಗಳಿಗೆ ದಾನ ಮಾಡಿದಂತೆ ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲೂಕಿನ ರಾಜೂರ ಗ್ರಾಮದಲ್ಲಿ ನಿರ್ಮಿಸಿದ ಶ್ರೀ ಶರಣಬಸವೇಶ್ವರ ಶಿಲಾಮಂಟಪಕ್ಕೆ ಸದ್ಭಕ್ತರಿಂದ ಇಪ್ಪತ್ತೈದುಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ಕೊಡುವುದರೊಂದಿಗೆ ತಾವು ಕೂಡಾ ಒಂದುಸಾವಿರದಾಒಂದು ರೂಪಾಯಿಗಳನ್ನು ಆಶೀರ್ವದಿಸಿರುವರು. ಸೋಂಪುರದ ಶರಣಬಸವೇಶ್ವರ ದೇವಸ್ಥಾನಕ್ಕೂ ಹಣ ಹಾಗೂ ಹತ್ತುಚೀಲ ಸಿಮೆಂಟನ್ನು ಕಳಿಸಿರುವರು. ಕೊಪ್ಪಳದ ಗೌರಿಶಂಕರ ದೇವಾಲಯಕ್ಕೆ ಒಂದುಸಾವಿರದಾಒಂದು ರೂಪಾಯಿ, ಐಗಳಕೇರಿ ಶರಣಬಸವೇಶ್ವರ ದೇವಸ್ಥಾನಕ್ಕೆ ಐದುನೂರಾಒಂದು ರೂಪಾಯಿಗಳನ್ನು ಆಶೀರ್ವದಿಸಿದ್ದಾರೆ.

ಶ್ರೀಮಠದ ಉತ್ತರ ಭಾಗದಲ್ಲಿ ವಾಸಿಸುವ ದೀನದಲಿತರಿಗೂ ಶ್ರೀಮಠದ ಬಹು ಬೆಲೆಬಾಳುವ ಜಾಗೆಯನ್ನು ಅತೀ ಕಡಿಮೆ ಬೆಲೆಗೆ (೧–೨೫ ಪೈಸೆಗೆ ಒಂದು ಚೌರಸ ಫೂಟಿನಂತೆ) ಕೊಟ್ಟು ಜಾಗೆಯನ್ನು ಅವರವರ ಹೆಸರಿನಲ್ಲಿ ನೋಂದಾಯಿಸಿ ಕೊಟ್ಟ ಆಶ್ರಯದಾತರು.

ಪೀಠಾರೋಹಣದ ರಜತಮಹೋತ್ಸವವನ್ನು ಆಚರಿಸುವ ಈ ಶುಭ ಸಂದರ್ಭದಲ್ಲಿ ಈ ಧರ್ಮಸಂಸ್ಕೃತಿ ಕಾರ್ಯಕ್ರಮಗಳಿಗೆ ಉತ್ತೇಜನ ಕೊಟ್ಟು ಸಂಸ್ಕೃತಿಯನ್ನು ಸಂವರ್ಧಿಸುವ ಈ ಕಾರ್ಯಕ್ರಮಗಳಲ್ಲಿ ಯಾರನ್ನೂ ಕಡೆಗಣಿಸದೇ ಸರ್ವರಿಗೂ ಸೂಕ್ತವಾದ ಮಾನ ಸನ್ಮಾನಗಳನ್ನು ಮಾಡುತ್ತಿದ್ದಾರೆ. ನಾಡ ಸೇವೆ, ಸಮಾಜ ಸೇವೆ, ಸಾಹಿತ್ಯ ಸೇವೆ, ಸಂಗೀತ ಸೇವೆ, ಧಾರ್ಮಿಕ ಸೇವೆ, ಶೈಕ್ಷಣಿಕ ಸೇವೆ, ಹೀಗೆ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಸನ್ಮಾನಿಸುತ್ತಿರುವಂತೆ ೫೦೦ಕ್ಕೂ ಮಿಕ್ಕಿ ಬಡ ಸ್ತ್ರೀ–ಪುರುಷರಿಗೂ ವಸ್ತ್ರದಾನವನ್ನು ಮಾಡಿರುವರು. ಇದರಂತೆ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಎಪ್ಪತ್ತೈದು ಅಂಧ ವಿದ್ಯಾರ್ಥಿಗಳಿಗೂ ವಸ್ತ್ರದಾನ ಮಾಡಿರುವರು. ಶ್ರೀಮಠದ ಗೋಶಾಲೆಯಿಂದ

ಅನೇಕ ಭಕ್ತರು ಗೋವುಗಳನ್ನು ದಾನವಾಗಿ ಪಡೆದಿರುವರು. ಸೊರಟೂರಿನ ಸರಕಾರಿ ಪ್ರೌಢ ಶಾಲೆಗೆ ಭೂಮಿಯನ್ನು ದಾನವಾಗಿ ಪಡೆಯಲು ಪೂಜ್ಯರ ಪರಿಶ್ರಮವೇ ಕಾರಣ. ಹೀಗೆ ಹತ್ತು ಹಲವು ದಾನಗಳು ಪೂಜ್ಯರಿಂದ ನಡೆದಿರುತ್ತವೆ.

ಕಾಯಕ ಯೋಗಿಗಳಾದ ಪರಮ ಪೂಜ್ಯರು ಅನ್ನ, ಜ್ಞಾನ, ವಸ್ತ್ರ, ಸಾಹಿತ್ಯ, ಗೋವು, ಭೂಮಿ ಹಾಗೂ ಧನ ಹೀಗೆ ಹತ್ತು ಹಲವು ದಾನಮಾಡಿದ ಶ್ರೀಸನ್ನಿಧಿಯವರು ಮಹಾದಾನಿಗಳಲ್ಲದೆ ಮತ್ತೇನು?

ಲೇಖಕರ ವಿಳಾಸಗಳು

೧. ಡಾ|| ವ್ಹಿ. ಜಿ. ಪೂಜಾರ, ಪ್ರವಾಚಕರು, ಕನ್ನಡ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೨. ಶ್ರೀ ಮಹಾಂತೇಶ ಬೆಳವಟಗಿ, ಆಶೀರ್ವಾದ, ಅಂಬಾಭವಾನಿ ನಗರ, ಮುಂಡರಗಿ-೫೮೨ ೧೧೮.

೩. ಡಾ|| ಬಸವರಾಜ ಜಗಜಂಪಿ, ಕನ್ನಡ ಉಪನ್ಯಾಸಕರು, ಬೆಳ್ಳುಬ್ಬಿ ಮಹಾವಿದ್ಯಾಲಯ, ಸವದತ್ತಿ.

೪. ಡಾ|| ಎಸ್. ಎಸ್. ಕೋತೀನ, ಕನ್ನಡ ಅಧ್ಯಯನಪೀಠ, ಕ.ವಿ.ವಿ. ಧಾರವಾಡ.

೫. ಶ್ರೀಮತಿ ಗುರುದೇವಿ ಹುಲೆಪ್ಪನವರಮಠ, ಆಂಗ್ಲಭಾಷಾ ಪ್ರಾಧ್ಯಾಪಕರು, ಬೆಳ್ಳುಬ್ಬಿ ಮಹಾವಿದ್ಯಾಲಯ, ಸವದತ್ತಿ.

೬. ಶ್ರೀ ಆರ್. ಎಲ್. ಪೋಲೀಸಪಾಟೀಲ, "ಉಷಾಕಿರಣ" ಅಂಬಾಭವಾನಿ ನಗರ, ಮುಂಡರಗಿ-೫೮೨ ೧೧೮.

೭. ವಿದ್ವಾನ್ ಜಿ. ವ್ಹಿ. ಶಿವಸ್ವಾಮಿ, ನಂ. ೨೩೦೬ "ಜ್ಞಾನಸದನ" ಮೂರನೆಯ 'ಬಿ' ಮುಖ್ಯರಸ್ತೆ, ವಿಜಯನಗರ ೨ನೇ ಹಂತ, ಬೆಂಗಳೂರು-೪೦.

೮. ಡಾ|| ಎಚ್. ತಿಪ್ಪೇರುದ್ರಸ್ವಾಮಿ, ೨೨೫ ಪ್ರಭುದೇವ ನಿಲಯ, ೧೨ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು-೯.

೯. ಶ್ರೀ ಬಸವರಾಜ ಯಡ್ರಾವಿ, ಶಾಂತೇಶ್ವರ ಹೈಸ್ಕೂಲ, ಅಮೀನಭಾವಿ-೫೮೧ ೨೦೧ ಜಿ. ಧಾರವಾಡ.

೧೦. ಶ್ರೀ ಶಂಭುಲಿಂಗ ಶಾಸ್ತ್ರಿಗಳು, ದರೂರ ತಾ. ಅಥಣಿ, ಜಿ. ಬೆಳಗಾಂವ.

೧೧. ಪಂ. ಷಣ್ಮುಖಯ್ಯಾ ಅಕ್ಕೂರಮಠ, ನಂ. ೬೭ "ದೇವಗಂಗೋತ್ರಿ" ಶಂಕರಮಠ ರಸ್ತೆ, ಬೆಂಗಳೂರು-೫೬೦ ೦೦೪.

೧೨. ಪೂಜ್ಯ ಸಿದ್ಧರಾಮೇಶ್ವರ ಶರಣರು, ಬೆಲ್ದಾಳ ಶಿವಯೋಗಾಶ್ರಮ, ಕಾಟಾ (ಬಿ) ತಾ. ಔರಾದ ಜಿ. ಬೀದರ.

೧೩. ಡಾ|| ಎಸ್. ಎಂ. ಹಿರೇಮಠ, "ಕಲಾತಪಸ್ವಿ" ಮನೆ ನಂ. ೪-೩೭೯, ಮಕ್ತುಂಪುರ, ಗುಲ್ಬರ್ಗಾ.

೧೪. ಶ್ರೀ ಹಿ. ಚೀ. ಶಾಂತವೀರಯ್ಯಾ, "ಶ್ರೀ ಪ್ರಸಾದ" ಮನುವನ, ವಿಜಯನಗರ, ಬೆಂಗಳೂರು-೫೬೦ ೦೪೦.

೧೫. ಶ್ರೀ ಬಿ. ಸಿ. ವೀರಪ್ಪ, ನಂ. ೯, ಕಾಳಪ್ಪ ಕಾಂಪೌಂಡ ೨ನೇ ಕ್ರಾಸ್, ಅಗ್ರಹಾರ ದಾಸರಹಳ್ಳಿ, ಬೆಂಗಳೂರು-೫೬೦ ೦೭೯.

೧೬. ಡಾ|| ದೇವೇಂದ್ರಕುಮಾರ ಹಕಾರಿ, "ಕರುಣಾಂಜಲಿ"
ಶ್ರೀನಗರ, ಸಪ್ತಾಪೂರ ಕ್ರಾಸ್, ಧಾರವಾಡ-೩.
೧೭. ಶ್ರೀ ಕೆ. ಬಿ. ಬಾಳೀಕಾಯಿ, ಅಧ್ಯಾಪಕರು, ಮಾಡೆಲ್ ಹೈಸ್ಕೂಲ, ಗದಗ.
೧೮. ಡಾ|| ಮಲ್ಲಿಕಾರ್ಜುನ ಲಠ್ಠೆ, ಪ್ರಸಾರಾಂಗ,
ಗುಲ್ಬುರ್ಗಾ ವಿಶ್ವವಿದ್ಯಾಲಯ, ಗುಲ್ಬುರ್ಗಾ.
೧೯. ಡಾ|| ಸಂಗಮೇಶ ಸವದತ್ತಿಮಠ, "ಚಿನ್ಮಯ" ಸರಸ್ವತಿಪುರ.
ವಿ. ವಿ. ಅಂಚೆ, ಗುಲ್ಬುರ್ಗಾ-೫೮೫ ೧೦೬.
೨೦. ಪಂ. ಕೆ. ಪಿ. ಶಿವಲಿಂಗಯ್ಯಾ, ನಂ. ೪೨೫, ಎಚ್. ಹೊಸಪಳ್ಳಿ,
ವಿಜಯನಗರ, ಬೆಂಗಳೂರು-೪೦.
೨೧. ಡಾ|| ಮಲ್ಲಿಕಾರ್ಜುನ ಸಿಂದಗಿ, ಜೆ. ಜಿ. ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ.
೨೨. ಶ್ರೀ ಶಿವಯೋಗಿ
೨೩. ಶ್ರೀ ಯೋಗೀಶ ಯಡ್ರಾವಿ, "ಶಾಂತಿಯೋಗ" ಶಿವಗಿರಿ, ಧಾರವಾಡ-೫೮೦ ೦೦೭
೨೪. ಶ್ರೀಮತಿ ಡಾ. ಡಿ. ಮಂಗಳಾ ಪ್ರಿಯದರ್ಶಿನಿ, ನಂ. ೧೭೫, "ಶ್ರೀಮಾತಾ",
೨೪ನೇ ಅಡ್ಡರಸ್ತೆ, ೬ನೇ ಬ್ಲಾಕ್, ಜಯನಗರ, ಬೆಂಗಳೂರು-೫೬೦ ೦೫೨.
೨೫. ಪ್ರೊ. ಆರ್. ರಾಚಪ್ಪ, ಮುಖ್ಯಸ್ಥರು, ಕನ್ನಡ ವಿಭಾಗ,
ರೇಣುಕಾಚಾರ್ಯ ಕಾಲೇಜ, ಆನಂದರಾವ್ ಸರ್ಕಲ್, ಬೆಂಗಳೂರು-೯.
೨೬. ಶ್ರೀ ಎನ್. ಬಸವರಾಧ್ಯ, ನಂ. ೭೪೩, ೩ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-೧೦.
೨೭. ಶ್ರೀ ಪಿ. ಎಸ್. ಹಿರೇಮಠ,
ಟ್ಯಾಗೋರ ಮೆಮೋರಿಯಲ್ ಹೈಸ್ಕೂಲ, ರಾಯಚೂರ.
೨೮. ಶ್ರೀ ಅಂದಾನಪ್ಪ ವಿಭೂತಿ ಸಾ|| ಬೆಳ್ಳಟ್ಟಿ, ತಾ. ಶಿರಹಟ್ಟಿ, ಜಿ. ಧಾರವಾಡ.
೨೯. ಡಾ|| ಪಿ. ವಿ. ನಾರಾಯಣ, "ತಂಗಾಳಿ" ೩೦, ಆರ್. ಬಿ. ಐ. ಕಾಲೋನಿ,
ಜಯನಗರ, ೩ನೇ ಬ್ಲಾಕ್ (ಪೂರ್ವ) ಬೆಂಗಳೂರು-೫೬೦ ೦೧೧.
೩೦. ಶ್ರೀಮತಿ ಶಾಂತಾದೇವಿ ಸ. ಮಾಳವಾಡ, "ಪ್ರಶಾಂತ"
ಕಲ್ಯಾಣನಗರ, ಧಾರವಾಡ-೭.
೩೧. ಪ್ರೊ. ವ್ಹಿ. ಜಿ. ಮಾರಿಹಾಳ, "ಶ್ರೀ ಚನ್ನಬಸವ ಕೃಪಾ" ವಿದ್ಯಾಗಿರಿ, ಧಾರವಾಡ.
೩೨. ಶ್ರೀಮತಿ ಅಕ್ಕಮಹಾದೇವಿ ವ್ಹಿ. ಹಿರೇಮಠ, ಸಮಾಜಶಾಸ್ತ್ರ ಉಪನ್ಯಾಸಕರು,
ಮಹಿಳಾ ಮಹಾವಿದ್ಯಾಲಯ, ಗದಗ.
೩೩. ಶ್ರೀ ಶಶಿಧರಸ್ವಾಮಿ ವಸ್ತ್ರದ, ಹಾತ್ಲಗೇರಿನಾಕಾ, ಮಸಾರಿ, ಗದಗ.
೩೪. ಶ್ರೀ ದ. ಲ. ಕೆರೂರು, ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ.
೩೫. ವ್ಯಾಕರಣತೀರ್ಥ ಪಂ. ಚಂದ್ರಶೇಖರ ಶಾಸ್ತ್ರಿಗಳು, ಮಾಗಳ
ತಾ. ಹೂವಿನಹಡಗಲಿ ಜಿ. ಬಳ್ಳಾರಿ.

೩೬. ಶ್ರೀ ಮ.ನಿ.ಪ್ರ. ಜಗದ್ಗುರು ಶಿವಶಾಂತವೀರ ಮಹಾಸ್ವಾಮಿಗಳು,
ಸಂಸ್ಥಾನ ಗವಿಮಠ, ಕೊಪ್ಪಳ.

೩೭. ಡಾ|| ಶರಣಬಸಪ್ಪ ಅಪ್ಪಾ, ಮಹಾದಾಸೋಹ ಪೀಠಾಧಿಪತಿಗಳು,
ಶರಣಬಸವೇಶ್ವರ ಸಂಸ್ಥಾನ, ಗುಲ್ಬುರ್ಗಾ.

೩೮. ಪ್ರಾ. ಬಿ. ಎಸ್. ಪಾಟೀಲ, ಜ.ಅ.ಪ ಪೂ. ಮಹಾವಿದ್ಯಾಲಯ, ಮುಂಡರಗಿ.

೩೯. ಶ್ರೀ ಮ.ನಿ.ಪ್ರ. ನಿರುಪಾಧಿಸ್ವಾಮಿಗಳು, ಮರೇಗುದ್ದಿ.

೪೦. ಡಾ|| ಸಿ. ಎಂ. ಚುರ್ಚಿಹಾಳಮಠ, ಮಾಜಿ ಶಾಸಕರು, ಮುಂಡರಗಿ.

೪೧. ಶ್ರೀ ಸಿ. ವಿ. ಕೆರಿಮನಿ, ಕನ್ನಡ ವಿಭಾಗ, ಮುನ್ಸಿಪಲ್ ಕಾಲೇಜ, ಲಕ್ಷ್ಮೇಶ್ವರ.

೪೨. ಶ್ರೀ ರಾಜಶೇಖರ ಮಡಕಿ, ರಾಜಕಲಾ ಮಡಕಿ ಕಾರ್ನರ್,
ಸೊಲ್ಲಾಪುರ–೪೧೩ ೦೦೨.

೪೩. ಶ್ರೀ ಸಿ. ಸಿ. ಪ್ರಭುಗೌಡರ, ಆಂಗ್ಲಭಾಷಾ ಉಪನ್ಯಾಸಕರು,
ಜ. ಅ. ಪ. ಪೂ. ಮಹಾವಿದ್ಯಾಲಯ, ಮುಂಡರಗಿ.

೪೪. ಶ್ರೀಮತಿ ಗಿರಿಜಾದೇವಿ ಕೆಸ್ತೂರ, ಪೋ. ಮು. ಕೆಸ್ತೂರ ತಾ. ತುಮಕೂರ.

೪೫. ಶ್ರೀ ಎಸ್. ಬಿ. ಕರಿಭರಮಗೌಡ್ರ, ಕನ್ನಡ ವಿಭಾಗ,
ಕೆ. ಆರ್. ಬೆಲ್ಲದ ಕಾಲೇಜ, ಮುಂಡರಗಿ.

೪೬. ಶ್ರೀ ಹೇಮಂತ ಪೂಜಾರ, ಇಂಜನೀಯರ, ಮುಂಡರಗಿ.

೪೭. ಷ. ಬ್ರ. ಗುರುಶಾಂತ ಶಿವಾಚಾರ್ಯರು, ಗವಿಮಠ, ಬೊಮ್ಮನಹಳ್ಳಿ.

೪೮. ಶ್ರೀಮತಿ ರಾಜರಾಜೇಶ್ವರಿ ರಾ. ಬಳ್ಳಾರಿ, ಗದಗ.

೪೯. ಶ್ರೀ ಎಸ್. ಎಂ. ಹೊಸಮಠ, ಜ. ಅ. ಪ್ರೌಢಶಾಲೆ, ಮುಂಡರಗಿ.

೫೦. ಶ್ರೀ ಎಂ. ಜಿ. ಗಚ್ಚಣ್ಣವರ, ವಾಣಿಜ್ಯ ವಿಭಾಗ,
ಕೆ. ಆರ್. ಬೆಲ್ಲದ ಕಾಲೇಜ, ಮುಂಡರಗಿ.

೫೧. ಶ್ರೀಮತಿ ಎಚ್. ಎಸ್. ಅಕ್ಕಮಹಾದೇವಿ (ಬೆಲ್ಲದ) ಸಾ|| ಮುಂಡರಗಿ.

೫೨. ಶ್ರೀ ವ್ಹಿ. ಕೆ. ಕೊಳೂರು, ಸಮಾಜಶಾಸ್ತ್ರ ವಿಭಾಗ,
ಕೆ. ಆರ್. ಬೆಲ್ಲದ ಕಾಲೇಜ, ಮುಂಡರಗಿ.

೫೩. ಶ್ರೀ ವ್ಹಿ. ಜಿ. ಮಠಪತಿ (ಬಸವಕಂದ), ಸೊರಟೂರು ತಾ. ಶಿರಹಟ್ಟಿ.

೫೪. ಡಾ|| ಪಂಡಿತ ಪುಟ್ಟರಾಜ ಗವಾಯಿಗಳು, ವೀರೇಶ್ವರ ಪುಣ್ಯಾಶ್ರಮ, ಗದಗ.

೫೫. ಪಂ. ಚ. ಸೋ. ಹಿರೇಮಠ, ಪ್ರಾಧ್ಯಾಪಕರು,
ಶ್ರೀ ಕು. ಸಂ. ವಿದ್ಯಾಪೀಠ, ಶಿವಯೋಗಮಂದಿರ.

೫೬. ವೇ|| ಕೆ. ಎಂ. ಜ್ಞಾನಯೋಗಿ ಶಾಸ್ತ್ರಿಗಳು, ಬೆಳದಡಿ.


೫೭. ಶ್ರೀ ಹ. ಲಿಂ. ಹೂಗಾರ, ನಿವೃತ್ತ ಶಿಕ್ಷಕರು, ಮುಂಡರಗಿ.

೫೮. ಶ್ರೀ ಕುಮಾರದೇವರು, ಅಂತೂರಬೆಂತೂರ.

೫೯. ಕುಂ. ಸೌ. ಗಂಗಮ್ಮ ಪ್ಹಿ. ಹಿರೇಮಠ, ಮುಂಡರಗಿ.
೬೦. ಶ್ರೀ ನಿರುಪಾಧಿಸ್ವಾಮಿಗಳು, ಅಡವಿಸಿದ್ಧೇಶ್ವರಮಠ, ಮರೆಗುದ್ದಿ.
೬೧ ಶ್ರೀ ಹ. ರಾ. ಕುರ್ತಕೋಟಿ, ನಿವೃತ್ತ ಶಿಕ್ಷಕರು, ಕುರ್ತಕೋಟಿ
೬೨. ಪ್ರಾ. ಎ. ಬಿ. ಹಿರೇಮಠ, ಕಾರ್ಯದರ್ಶಿಗಳು, ಉತ್ಸವ ಸಮಿತಿ, ಮುಂಡರಗಿ.
೬೩. ಶ್ರೀ ಎನ್. ಎಫ್. ಅಕ್ಕೂರ, ಶ್ರೀ ಜ. ಅನ್ನದಾನೀಶ್ವರ ಕಿರಿಯ ಮಹಾವಿದ್ಯಾಲಯ, ಮುಂಡರಗಿ.
೬೪. ಶ್ರೀಮತಿ ಚೇತನಾ ಶಂಕರ, 'ಅನ್ನದಾನೀಶ್ವರ ನಗರ', ಮುಂಡರಗಿ.

ರಕ್ಷಾಪುಟ ಮತ್ತು ಭಾವಚಿತ್ರಗಳ
ಮುದ್ರಣ : ವಿಕ್ರಮ ಕಂಪ್ಯೂಟರ್ಸ್,
ಕೆ. ಸಿ. ರಸ್ತೆ, ಗದಗ – ೫೮೨ ೧೦೧

ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ,
ಮುಂಡರಗಿ



ಮಹಾದ್ವಾರ